
ಮಹಿಳಾ ಸಾಹಿತ್ಯ ಸಂಪುಟ

ಮನುಷ್ಯ ಜಾತಿ
ತಾನೊಂದೆ ವಲಂ

ಮಹಿಳಾ ಸಾಹಿತ್ಯ ಸಂಪುಟ-ಕಥೆ

JNANA001609



# ಕಥೆ

ಪ್ರಧಾನ ಸಂಪಾದಕರು
**ನಾಡೋಜ ಡಾ. ಮನು ಬಳಿಗಾರ್**

ಸಂಪಾದಕರು
**ಡಾ. ಪದ್ಮಿನಿ ನಾಗರಾಜು**

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.

# ಮಹಿಳಾ ಸಾಹಿತ್ಯ ಸಂಪುಟ

# ಕಥೆ


ಪ್ರಧಾನ ಸಂಪಾದಕರು

**ನಾಡೋಜ ಡಾ. ಮನು ಬಳಿಗಾರ್**

ಮಾಲಿಕೆಯ ಸಂಪಾದಕರು

**ಡಾ. ಮಲ್ಲಿಕಾ ಘಂಟಿ**

ಸಂಪಾದಕರು

**ಡಾ. ಪದ್ಮನಿ ನಾಗರಾಜು**



**ಕನ್ನಡ ಸಾಹಿತ್ಯ ಪರಿಷತ್ತು**

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು ೫೬೦೦೧೮.

MAHILA SAHITYA SAMPUTA - KATHE- Chief Editor Nadoja Dr. Manu Baligar, Editor: Dr. Padmini Nagaraju Published by: Kannada Sahitya Parishattu, Pampa Mahakavi Road, Chamarajapete, Bengaluru - 560018 Pages : lvi + 422 Price: Rs.320-00: 2020

ಪ್ರಥಮ ಮುದ್ರಣ : ೨೦೨೦

ಪ್ರತಿಗಳು : ೫೦೦

ಬೆಲೆ : ಮುನ್ನೂರ ಇಪ್ಪತ್ತು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

**ಪ್ರಕಟಣಾ ಸಮಿತಿ**

## ನಾಡೋಜ ಡಾ. ಮನು ಬಳಿಗಾರ್

ಅಧ್ಯಕ್ಷರು

| | | |
|---|---|---|
| ಸಮ್ಮೇಳನಾಧ್ಯಕ್ಷರು | - | ಡಾ. ಎಚ್.ಎಸ್. ವೆಂಕಟೇಶಮೂರ್ತಿ |
| | | ೮೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ |
| ಸಂಚಾಲಕರು, ಪ್ರಕಟಣಾ ವಿಭಾಗ | - | ಡಾ. ಪದ್ಮರಾಜ ದಂಡಾವತಿ |

ಸದಸ್ಯರು

| | |
|---|---|
| ಶ್ರೀ ಜರಗನಹಳ್ಳಿ ಶಿವಶಂಕರ್ | ಶ್ರೀ ಎ.ಆರ್. ಉಜ್ಜನಪ್ಪ |
| ಡಾ. ಮೂಡ್ನಾಕೂಡು ಚಿನ್ನಸ್ವಾಮಿ | ಶ್ರೀ ಸಂಜಯ ಅಡಿಗ |
| ಪ್ರೊ. ಧರಣೇಂದ್ರ ಕುರಕುರಿ | ಶ್ರೀ ಪಾರಂಪಳ್ಳಿ ನರಸಿಂಹ ಐತಾಳ್ |
| ಶ್ರೀ ರಂಜಾನ್ ದರ್ಗಾ | ಗೌರವ ಕಾರ್ಯದರ್ಶಿಗಳು |
| ಡಾ. ಬಿ.ಕೆ. ರವಿ | ಡಾ. ರಾಜಶೇಖರ ಹತಗುಂದಿ |
| ಡಾ. ತಮಿಳ್ ಸೆಲ್ವಿ | ಶ್ರೀ ಕೆ. ರಾಜಕುಮಾರ್ |

ಡಾ. ದೊಡ್ಡಮಲ್ಲಯ್ಯ ಗೌರವ ಕೋಶಾಧ್ಯಕ್ಷರು

ಡಾ. ಎಚ್.ಎಲ್. ಪುಷ್ಪ ಶ್ರೀ ಪಿ. ಮಲ್ಲಿಕಾರ್ಜುನಪ್ಪ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮುಖಪುಟ ಕಲಾವಿನ್ಯಾಸ : ಚಂದ್ರಕಾಂತ ಪಟ್ಟಣ

**ಮುದ್ರಣ : ಬಿ.ಎಂ.ಶ್ರೀ, ಆಫ್‌ಸೆಟ್ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು**

## ಅಧ್ಯಕ್ಷರ ನುಡಿ

ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತು ಈಗ ೧೦೫ ವರ್ಷಗಳನ್ನು ಪೂರೈಸಿ ೧೦೬ನೇ ವರ್ಷದಲ್ಲಿ ಕಾಲಿರಿಸಿದೆ. ನಾಡು, ನುಡಿ, ನೆಲ, ಜಲ ಮತ್ತು ಸಾಹಿತ್ಯ ಹಾಗೂ ಸಂಸ್ಕೃತಿ ಕುರಿತು ಏನೇ ವಿಚಾರ ಇದ್ದರೂ ಪರಿಷತ್ತು ತನ್ನ ಧ್ವನಿ ಎತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಹೆಸರಿನ ಆದಿಯಲ್ಲಿ ಕನ್ನಡ ಇರುವುದು ಅರ್ಥಪೂರ್ಣವೂ, ಸಾರ್ಥಕವೂ ಆಗಿದೆ. ಅಂದಿನ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯ ಫಲವಾಗಿ ಕನ್ನಡ ಸಾಹಿತ್ಯ ಪರಿಷತ್ತು ಅಸ್ತಿತ್ವಕ್ಕೆ ಬಂತು. ಆಗ ಅದಕ್ಕೆ ಇದ್ದ ಹೆಸರು ಕರ್ಣಾಟಕ ಸಾಹಿತ್ಯ ಪರಿಷತ್ತು ಎಂದು. ನಂತರ ಅದು ಕನ್ನಡ ಸಾಹಿತ್ಯ ಪರಿಷತ್ತು ಎಂದು ಈಗಿನ ಹೆಸರು ಪಡೆಯಿತು. ಪರಿಷತ್ತಿನ ಹುಟ್ಟಿಗೆ ಆಗಿನ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯ ಅವರೂ ಕಾರಣಕರ್ತರಾಗಿದ್ದರು ಎಂಬುದನ್ನೂ ಇಲ್ಲಿ ಉಲ್ಲೇಖಿಸ ಬೇಕು. ಪರಿಷತ್ತು ಇದುವರೆಗೆ ೮೫ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸಿದೆ ಮತ್ತು ಪರಿಷತ್ತಿಗೆ ನಾನು ೨೫ನೇ ಅಧ್ಯಕ್ಷನಾಗಿ ಚುನಾಯಿತನಾಗಿದ್ದೇನೆ. ಪರಿಷತ್ತು ಇದುವರೆಗೆ ೧,೨೫ ಕೃತಿಗಳನ್ನು ಪ್ರಕಟಿಸಿದ್ದು ಅದರಲ್ಲಿ ಕೆಲವು ಕೃತಿಗಳು ಹಲವು ಮುದ್ರಣಗಳನ್ನು ಕಂಡಿವೆ. ಶಬ್ದಕೋಶಗಳ ರಚನೆಯಲ್ಲಿ, ಹಳಗನ್ನಡ ಕಾವ್ಯಗಳ ಗದ್ಯಾನುವಾದ ಪ್ರಕಟಣೆಯಲ್ಲಿ ಪರಿಷತ್ತಿನದು ಮುಂಚೂಣಿ ಕೆಲಸ.

ಕನ್ನಡದ ಆದಿ ಕವಿ ಪಂಪನ "ಮನುಷ್ಯ ಜಾತಿ ತಾನೊಂದೆ ವಲಂ" ಎಂಬ ಮಾತನ್ನು ತನ್ನ ಘೋಷ ವಾಕ್ಯವಾಗಿ ಒಪ್ಪಿಕೊಂಡಿರುವ ಕನ್ನಡ ಸಾಹಿತ್ಯ ಪರಿಷತ್ತು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನೂ ಚಾಚೂ ತಪ್ಪದೆ ಪಾಲಿಸಿಕೊಂಡು ಬಂದಿದೆ.

ನಾನು ಕನ್ನಡಿಗರ ಅಗಾಧ ಪ್ರೀತಿ ಮತ್ತು ಅವಿಚ್ಛಿನ್ನ ವಿಶ್ವಾಸದ ಫಲವಾಗಿ ದಾಖಲೆ ಗೆಲುವಿನೊಡನೆ ಅಧ್ಯಕ್ಷ ಸ್ಥಾನದಲ್ಲಿ ಕುಳಿತ ದಿನದಿಂದ ಇದುವರೆಗೆ ಪ್ರತಿಭಾ ನ್ಯಾಯ, ಸಾಮಾಜಿಕ ನ್ಯಾಯ, ಪ್ರಾದೇಶಿಕ ಸಮಾನತೆ ಮತ್ತು ಗುಣಗ್ರಾಹಿತ್ವಗಳನ್ನು ಒಂದು ವ್ರತದಂತೆ ಪಾಲಿಸಿಕೊಂಡು ಬಂದಿದ್ದೇನೆ. ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಚಟುವಟಿಕೆಗಳಲ್ಲಿ ಸಮಸ್ತರನ್ನು ಒಳಗೊಳ್ಳುವ ಕೆಲಸ ಮಾಡಿದ್ದೇನೆ. ದುರ್ಬಲ ವರ್ಗಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಗುವಂತೆ ನೋಡಿಕೊಂಡಿದ್ದೇನೆ. ಪರಿಷತ್ತಿನ ಹಳೆಯ ನಿಯಮಾವಳಿಗೆ ತಿದ್ದುಪಡಿ ತಂದ ನಂತರ ಪರಿಷತ್ತಿನ ತಾಲ್ಲೂಕು, ಜಿಲ್ಲೆ ಮತ್ತು ಕೇಂದ್ರ ಘಟಕಗಳಲ್ಲಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಮಹಿಳೆಯರಿಗೆ ಸಿಕ್ಕ ಹೆಚ್ಚಿನ ಪ್ರಾತಿನಿಧ್ಯ ಐತಿಹಾಸಿಕವಾದುದು. ಏಕೆಂದರೆ ಅಷ್ಟು ಜನರಿಗೆ ಹಿಂದೆ ಎಂದೂ ಈ ಪ್ರಮಾಣದಲ್ಲಿ

ಪ್ರಾತಿನಿಧ್ಯ ಸಿಕ್ಕಿರಲಿಲ್ಲ. ಇದುವರೆಗೆ ಪರಿಷತ್ತಿನ ಪದಾಧಿಕಾರಿ ವರ್ಗದಲ್ಲಿ, ಕಾರ್ಯಕಾರಿಣಿಯಲ್ಲಿ ಅಲಕ್ಷಿತವಾಗಿದ್ದ ಸಮುದಾಯಕ್ಕೆ ಸೂಕ್ತ ಸ್ಥಾನಮಾನವನ್ನು ಈ ಅವಧಿಯಲ್ಲಿಯೇ ದೊರಕಿಸಿದ್ದು ನನಗೆ ಅಪಾರ ಸಂತೋಷವನ್ನೂ ಸಮಾಧಾನವನ್ನೂ ತಂದು ಕೊಟ್ಟಿದೆ.

ಪ್ರಸ್ತುತ ಕಾರ್ಯಕಾರಿ ಸಮಿತಿ ಅವಧಿಯಲ್ಲಿ ಇದುವರೆಗೆ ನಾಲ್ಕು ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳು ನಡೆದಿದ್ದು ಅದರಲ್ಲಿ ಸಾಮಾಜಿಕ ನ್ಯಾಯ ಮತ್ತು ಪ್ರತಿಭಾ ಪಕ್ಷಪಾತಗಳೆರಡನ್ನೂ ಕಾಯ್ದುಕೊಳ್ಳಲಾಗಿದೆ ಎಂಬುದನ್ನು ಕನ್ನಡದ ಪ್ರಾಜ್ಞ ಜನರು ಗಮನಿಸಿದ್ದಾರೆ. ಅದೇ ರೀತಿ ಪರಿಷತ್ತಿನ ಆಶ್ರಯದಲ್ಲಿ ನೀಡಲಾಗುವ, ನಾಡಿನ ಅತ್ಯಂತ ಪ್ರತಿಷ್ಠಿತವಾದ ನೃಪತುಂಗ ಪ್ರಶಸ್ತಿ ಕೊಡುವ ವಿಚಾರದಲ್ಲಿಯೂ ಇದೇ ಮಾನದಂಡವನ್ನು ಅನುಸರಿಸಲಾಗಿದೆ. ಈ ಅವಧಿಯಲ್ಲಿಯೇ ಮತ್ತು ಇದೇ ಮೊದಲ ಸಲ ಪರಿಶಿಷ್ಟ ಜಾತಿಯ ಖ್ಯಾತ ಕವಿ ಡಾ. ಸಿದ್ಧಲಿಂಗಯ್ಯ ಈ ಪ್ರಶಸ್ತಿ ಸಂದುದನ್ನು ಇಲ್ಲಿ ಸ್ಮರಿಸಲು ಬಯಸುವೆ. ಇದನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದಕ್ಕೆ ಕಾರಣ ಇದೆ. ಏಕೆಂದರೆ, ಇದೆಲ್ಲ ಕೇವಲ ಸಾಂಕೇತಿಕವಲ್ಲ. ಇದಕ್ಕೆ ಪೂರಕವಾಗಿಯೇ ಈ ಅವಧಿಯಲ್ಲಿಯೇ ದಲಿತ ಸಾಹಿತ್ಯ ಸಂಪುಟಗಳ ಸರಣಿಯಲ್ಲಿ ಪ್ರಥಮ ಬಾರಿಗೆ ಈಗಾಗಲೇ ಆರು ಸಂಪುಟಗಳು ಪ್ರಕಟವಾಗಿವೆ. ಏಳನೆಯ ಸಂಪುಟ ಅಚ್ಚಿನಲ್ಲಿ ಇದೆ. ಈ ಸಂಪುಟದ ಸಂಚಾಲಕರಾಗಿ ಕನ್ನಡದ ಹಿರಿಯ ವಿದ್ವಾಂಸ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಕಾರ್ಯ ನಿರ್ವಹಿಸಿದ್ದಾರೆ. ಈ ಸಂಪುಟಗಳ ಸಂಪಾದಕರಾಗಿ ಕನ್ನಡದ ಹೆಸರಾಂತ ದಲಿತ ಲೇಖಕರು ಕಾರ್ಯ ನಿರ್ವಹಿಸಿದರು. ಇನ್ನೂ ಮೂರು ಸಂಪುಟಗಳನ್ನು ತರಲು ಪರಿಷತ್ತು ಒಪ್ಪಿಕೊಂಡು ಅದಕ್ಕೆ ಸಂಪಾದಕರನ್ನೂ ನೇಮಿಸಲಾಗಿತ್ತು. ಆದರೆ, ಅವರ ಅನಾಸಕ್ತಿಯ ಕಾರಣವಾಗಿ ಆ ಕೆಲಸ ಮುಂದುವರಿಯಲಿಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಲು ಬಯಸುವೆ.

ದಲಿತ ಸಂಪುಟಗಳನ್ನು ಪ್ರಕಟಿಸುವುದಕ್ಕೆ ಮಾತ್ರ ನನ್ನ ಬದ್ಧತೆ ನಿಲ್ಲಲಿಲ್ಲ. ಕಳೆದ ವರ್ಷ ಅಂದರೆ, ೨೦೧೯ ರ ಆಗಸ್ಟ್‌ನಲ್ಲಿ ಕೋಲಾರದಲ್ಲಿ ಅಖಿಲ ಕರ್ನಾಟಕ ದಲಿತ ಸಾಹಿತ್ಯ ಸಮ್ಮೇಳನವನ್ನೂ ಪ್ರಸಿದ್ಧ ದಲಿತ ಲೇಖಕ ಡಾ.ಎಲ್.ಹನುಮಂತಯ್ಯ ಅವರ ಅಧ್ಯಕ್ಷತೆಯಲ್ಲಿ ಸಂಘಟಿಸಲಾಗಿತ್ತು. ಎರಡು ದಿನಗಳ ಆ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನಡೆಯಿತು. ಆ ಮಟ್ಟದ ಮತ್ತು ಆ ಬಗೆಯ ಸಾಹಿತ್ಯ ಸಮ್ಮೇಳನವೊಂದನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಅದೇ ಮೊದಲು ಏರ್ಪಡಿಸಲಾಗಿತ್ತು ಎಂಬುದನ್ನು ಇಲ್ಲಿ ಪ್ರಸ್ತಾಪಿಸಲು ಬಯಸುವೆ. ಈ ಸಮ್ಮೇಳನದಲ್ಲಿ ಎಲ್ಲ ಗೋಷ್ಠಿಗಳಲ್ಲಿ ದಲಿತರು ಮಾತ್ರ ಇರುವಂತೆ ನಿಗಾ ವಹಿಸಲಾಗಿತ್ತು. ಅವರು ಏನು ಹೇಳುತ್ತಾರೆ ಎಂಬುದನ್ನು ಉಳಿದ ಎಲ್ಲ ಸಮುದಾಯಗಳ ಜನರು ಕೆಳಗೆ ಕುಳಿತು ಕೇಳಿಸಿಕೊಂಡುದು ಅರ್ಥಪೂರ್ಣವಾಗಿತ್ತು. ಇದು ಕೂಡ ಸಾಂಕೇತಿಕವಾದುದು ಆಗಿರಲಿಲ್ಲ. ಇದನ್ನು ಕೂಡ ಬುದ್ಧಿಪೂರ್ವಕವಾಗಿಯೇ ಮಾಡಲಾಗಿತ್ತು. ಈ ಎರಡೂ ಪ್ರಯತ್ನಗಳನ್ನು, ಅಂಚಿನಲ್ಲಿ ಇರುವ ಒಂದು ಸಮುದಾಯವನ್ನು ಕೇಂದ್ರಕ್ಕೆ ತರುವ ದಿಸೆಯಲ್ಲಿನ ದಿಟ್ಟ ಹೆಜ್ಜೆಗಳು ಎಂದು ಯಾರಾದರೂ ಗುರುತಿಸುತ್ತಾರೆ ಎಂದು ಭಾವಿಸಿದ್ದೇನೆ.

ದಲಿತ ಸಾಹಿತ್ಯ ಸಂಪುಟಗಳಂತೂ ಕನ್ನಡ ಸಾಹಿತ್ಯದಲ್ಲಿ ಚಿರಕಾಲ ಉಳಿಯುವ ಸಂಪುಟಗಳು ಆಗಿದ್ದು ಇದನ್ನು ಒಂದು ವಿಶ್ವವಿದ್ಯಾಲಯ ಮಾಡಬೇಕಾದ ಕೆಲಸ ಎಂದು ಅನೇಕ ವಿದ್ವಾಂಸರು ನನ್ನ ಮುಂದೆ ಹೇಳಿದರು. ಇದು ನಾವು ಮಾಡಿದ ಕೆಲಸದ ಉಪಯುಕ್ತತೆಯನ್ನೂ ಸಾರ್ಥಕತೆಯನ್ನೂ ಸಾಬೀತು ಮಾಡುತ್ತದೆ. ಇಂಥದು ಮಾತ್ರ ಇತಿಹಾಸದಲ್ಲಿ ಉಳಿಯುತ್ತದೆ.

ಇದೀಗ ಮಹಿಳಾ ಸಂಪುಟಗಳ ವಿಚಾರವನ್ನು ಪ್ರಸ್ತಾಪಿಸಲು ಬಯಸುತ್ತೇನೆ. ಕನ್ನಡದಲ್ಲಿ ಲೇಖಕಿಯರ ಸಾಧನೆ ಸಣ್ಣದೇನೂ ಇಲ್ಲ. ಆದರೆ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಮಗೆ ಸಿಗಬೇಕಾದ ಸ್ಥಾನ ಸಿಕ್ಕಿಲ್ಲ ಎಂಬ ಅಸಮಾಧಾನ, ಆಕ್ರೋಶ ಅವರಲ್ಲಿ ಇದೆ. ಕನ್ನಡದ ವಿಮರ್ಶೆಯೂ ತಮಗೆ ನ್ಯಾಯ ಕೊಟ್ಟಿಲ್ಲ ಎಂಬ ದೂರು ಅವರದು. ಇದು, ನಮ್ಮ ಸಾಮಾಜಿಕ ಸಂರಚನೆಯಲ್ಲಿಯೇ ಇರುವ ಸಮಸ್ಯೆ ಎಂದು ಯಾರಿಗಾದರೂ ಅರ್ಥವಾಗುತ್ತದೆ. ಅದು ಸಾಹಿತ್ಯ ಮುಂತಾದ ಕ್ಷೇತ್ರಗಳಿಗೂ ವಿಸ್ತರಿಸಿದೆ.

ದೇಶದ ಮತ್ತು ನಾಡಿನ ಜನಸಂಖ್ಯೆಯಲ್ಲಿ ಅರ್ಧದಷ್ಟು ಇರುವ ಮಹಿಳಾ ಸಮುದಾಯ ಕೂಡ ಅಂಚಿನಿಂದ ಕೇಂದ್ರದ ಕಡೆ ಚಲಿಸುವ ಹೋರಾಟವನ್ನು ಸತತವಾಗಿ ನಡೆಸಿಕೊಂಡು ಬಂದಿದೆ. ಅದು ರಾಜಕೀಯ ಕ್ಷೇತ್ರವೇ ಇರಲಿ, ಸಾಮಾಜಿಕ ಕ್ಷೇತ್ರವೇ ಇರಲಿ ಅಥವಾ ಸಾಹಿತ್ಯ ಕ್ಷೇತ್ರವೇ ಇರಲಿ ಅಲ್ಲಿ ಸಮಾನತೆಗಾಗಿ ಮಹಿಳೆಯ ಹೋರಾಟ ನಿರಂತರವಾಗಿ ನಡೆದುಕೊಂಡು ಬಂದಿದೆ. ನಾನು ಅಧ್ಯಕ್ಷನಾಗಿ ಚುನಾಯಿತನಾದ ನಂತರ ಈ ಸಮುದಾಯಕ್ಕೂ ಅವರಿಗೆ ನ್ಯಾಯವಾಗಿ ಸಿಗಬೇಕಾದ ಸ್ಥಾನ ದೊರಕಿಸಲು ನಿರಂತರವಾಗಿ ಪ್ರಯತ್ನ ಮಾಡಿದ್ದೇನೆ. ಇದು ಕೂಡ ಸಾಂಕೇತಿಕವಾದುದು ಅಲ್ಲ ಎಂದು ಇಲ್ಲಿ ಸ್ಪಷ್ಟಪಡಿಸಲು ಬಯಸುವೆ.

ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಹೇಗೆ ದಲಿತರಿಗಾಗಿ ಒಂದು ಸಮ್ಮೇಳನ ನಡೆದಿರಲಿಲ್ಲವೋ ಹಾಗೆಯೇ ಮಹಿಳೆಯರಿಗಾಗಿ ಒಂದು ಸಮ್ಮೇಳನವೂ ನಡೆದಿರಲಿಲ್ಲ. ಪರಿಷತ್ತಿನ ಶತಮಾನೋತ್ಸವದ ಅಂಗವಾಗಿ ಮಹಿಳಾ ಸಮಾವೇಶ ನಡೆದಿತ್ತು. ಸಮಾವೇಶಕ್ಕೂ ಸಮ್ಮೇಳನಕ್ಕೂ ವ್ಯತ್ಯಾಸ ಇದೆ. ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಹಾಗೆಯೇ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಹೆಸರಾಂತ ಲೇಖಕಿ ಡಾ.ಸುಧಾ ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರಿನಲ್ಲಿ ಏರ್ಪಡಿಸಲಾಗಿತ್ತು. ಈ ಸಮ್ಮೇಳನವು ದಲಿತ ಸಮ್ಮೇಳನಕ್ಕಿಂತ ಮುಂಚೆಯೇ ೨೦೦೯ರ ಮಾರ್ಚ್‌ನಲ್ಲಿ ನಡೆಯಿತು. ಅದು ಕೂಡ ಅತ್ಯಂತ ಯಶಸ್ವಿ ಸಮ್ಮೇಳನ ಎಂದು ಹೆಸರು ಮಾಡಿತು.

ಮಹಿಳೆಯರಿಗೆ ಸಿಗಬೇಕಾದ ಸ್ಥಾನಮಾನಗಳನ್ನು ಕೊಡುವ ಪರಿಷತ್ತಿನ ಮತ್ತು ನನ್ನ ಬದ್ಧತೆಯ ಮುಂದುವರಿಕೆಯಾಗಿ ಇದೀಗ ಮಹಿಳಾ ಸಾಹಿತ್ಯ ಸಂಪುಟಗಳು ನಿಮ್ಮ ಕೈಯಲ್ಲಿ ಇವೆ. ಕನ್ನಡದ ಪ್ರಸಿದ್ಧ ಚಿಂತಕಿ, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿಯಾದ ಸೋದರಿ ಡಾ.ಮಲ್ಲಿಕಾ ಘಂಟಿಯವರು ಮಹಿಳಾ

ಸಾಹಿತ್ಯ ಸಂಪುಟಗಳ ಹೊಳಹನ್ನು ನನ್ನ ಮುಂದೆ ಇಡುತ್ತಿದ್ದಂತೇ ಒಂದು ಕ್ಷಣವೂ ತಡಮಾಡದೇ ಆಗಬಹುದು ಎಂದು ನಿರ್ಣಯಿಸಿ ಕಥೆ, ವಿಮರ್ಶೆ, ಸ್ತ್ರೀವಾದಿ ಚಿಂತನೆ, ಕಾವ್ಯ,



ಅಂಕಣ, ಲಲಿತ ಪ್ರಬಂಧ, ಜಾನಪದ ಮತ್ತು ಸಂಕೀರ್ಣ ಸಂಪುಟಗಳನ್ನು ಹೊರತರಲು ಯೋಜನೆ ರೂಪಿಸಿದೆವು. ನಾನು ಎಲ್ಲ ಸಂಪುಟಗಳ ಪ್ರಧಾನ ಸಂಪಾದಕನಾಗಿ ಇರುವುದು, ಡಾ.ಮಲ್ಲಿಕಾ ಅವರು ಮಾಲಿಕೆ ಸಂಪಾದಕರಾಗಿ ಇರುವುದು ಮತ್ತು ಪ್ರತಿ ಸಂಪುಟಕ್ಕೂ ಒಬ್ಬೊಬ್ಬರು ಸಂಪಾದಕರನ್ನು ನೇಮಿಸುವುದು ಎಂದು ತೀರ್ಮಾನಿಸಿದೆವು. ಅದೇ ರೀತಿ ಸಂಪುಟಗಳ ಸಂಪಾದಕರಾಗಿ ಡಾ. ಪದ್ಮಿನಿ ನಾಗರಾಜು, ಡಾ. ಎಂ. ಎಸ್. ಆಶಾದೇವಿ, ಡಾ. ಮಲ್ಲಿಕಾ ಘಂಟಿ, ಡಾ. ಪಿ. ಚಂದ್ರಿಕಾ, ಪ್ರತಿಭಾ ನಂದಕುಮಾರ್, ಡಾ. ತಮಿಳ್ ಸೆಲ್ವಿ ಮತ್ತು ಬಾ. ಹ. ರಮಾಕುಮಾರಿ ಹಾಗೂ ಡಾ. ಎನ್. ಲಕ್ಷ್ಮಿ ಅವರು ಕ್ರಮವಾಗಿ ಆಯಾ ಸಂಪುಟಗಳ ಸಂಪಾದಕರಾಗಿ ಕಾರ್ಯ ನಿರ್ವಹಿಸಲು ಒಪ್ಪಿಕೊಂಡರು.

ಈ ಎಲ್ಲ ಸಂಪಾದಕರು ಪುರುಷರನ್ನು ಮೀರಿಸುವ ಹಾಗೆ ಅತ್ಯಂತ ಕಡಿಮೆ ಕಾಲದಲ್ಲಿ ತಮ್ಮ ಸಂಪುಟಗಳನ್ನು ಸಿದ್ಧಪಡಿಸಿ ಅಧ್ಯಯನ ಪೂರ್ಣವಾದ ಪ್ರಸ್ತಾವನೆಗಳನ್ನೂ ಬರೆದು ಕೊಟ್ಟಿದ್ದಾರೆ. ಈ ಕೆಲಸ ಇಲ್ಲಿಗೇ ಮುಗಿಯಿತು ಎಂದು ನಾನು ಭಾವಿಸಿಲ್ಲ. ಇವೆಲ್ಲ ಒಳ್ಳೆಯ ಆರಂಭಗಳು ಎಂಬ ಭಾವನೆ ನನ್ನದು. ಕೆಲಸ ಮಾಡುವ ಕರ್ತೃತ್ವ ಶಕ್ತಿ ಇರುವವರಿಗೆ ಆಕಾಶವೇ ಮಿತಿಯಾಗಿರುತ್ತದೆ. ಮತ್ತು ಇಂಥ ಕೆಲಸಗಳು ಮುಂದುವರಿಯುತ್ತಲೇ ಇರಬೇಕು ಎಂಬುದರ ಒಂದು ಸೂಚನೆಯಾಗಿ ಹಾಗೂ ಇಂಥ ಕೆಲಸಗಳಿಗೆ ಒಂದು ಒಳ್ಳೆಯ ಆರಂಭವನ್ನು ಒದಗಿಸಬೇಕು ಎಂದು ಈ ಸಂಪುಟಗಳನ್ನು ರೂಪಿಸಲಾಗಿದೆ. ಇಲ್ಲಿ ನಾವು ಸಂಪಾದಿಸಿರುವ ಒಂದೊಂದು ಸಂಪುಟವನ್ನೇ ಹಲವು ಸಂಪುಟಗಳಾಗಿ ರೂಪಿಸಲು ಅವಕಾಶ ಇದೆ ಎಂಬುದೂ ನಮ್ಮ ಗಮನದಲ್ಲಿ ಇದೆ.

ಗಾರ್ಗಿ ಅತ್ಯಂತ ಪ್ರಖರ ವಿಚಾರವಾದಿ, ಪ್ರಶ್ನೆ ಕೇಳುವ ತನ್ನ ಹಕ್ಕನ್ನು ಪ್ರಾಣವನ್ನು ಪಣಕ್ಕೆ ಇಟ್ಟು ಉಳಿಸಿಕೊಂಡವಳು. ಗಾರ್ಗಿ ಮತ್ತು ಯಾಜ್ಞವಲ್ಕರ ಸಂವಾದಕ್ಕೆ ಮತ್ತು ಚರ್ಚೆಗೆ ನಮ್ಮ ಉಪನಿಷತ್ತುಗಳಲ್ಲಿ ಅನೇಕ ಸಾಕ್ಷಿಗಳು ಇವೆ. ನಮ್ಮದು ಒಂದು ಕಾಲದಲ್ಲಿ ಮಾತೃಪ್ರಧಾನ ಸಂಸ್ಕೃತಿ. ಇದು ಪಿತೃಪ್ರಧಾನ ಸಂಸ್ಕೃತಿಯಾಗಿ ಪರಿವರ್ತನೆಯಾಗುವುದರ ಜೊತೆಗೆ ಸ್ತ್ರೀ ಕುಲ ಅಂಚಿಗೆ ಸರಿಯಿತು. ಈ ಹಿನ್ನಡೆ ಅವರಿಗೆ ಎಲ್ಲ ಕ್ಷೇತ್ರದಲ್ಲಿಯೂ ಆಯಿತು. ಇದನ್ನು ಒಂದು ಹಿನ್ನಡೆ ಎಂದು ಅವರು ಭಾವಿಸದೇ ಒಂದು ಸವಾಲು ಎಂದು ಸ್ವೀಕರಿಸಿ, ಒಂದು ಪಂಥಾಹ್ವಾನ ಎಂದು ಸ್ವೀಕರಿಸಿ ತಮಗೆ ಸಲ್ಲಬೇಕಾದ ಸ್ಥಾನಕ್ಕಾಗಿ ಮಹಿಳೆಯು ಬರೀ ಭಾರತದಲ್ಲಿ ಮಾತ್ರವಲ್ಲ ಜಾಗತಿಕವಾಗಿಯೂ ತನ್ನ ಪ್ರಯತ್ನ ನಡೆಸಿದ್ದಾಳೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ೧೯ನೇ ಶತಮಾನದ ಆದಿಯಲ್ಲಿಯೇ "ಅರ್ಧ ಜನಸಂಖ್ಯೆಗೆ ಸಿಗಬೇಕಾದ ನ್ಯಾಯಕ್ಕಾಗಿ' ಧ್ವನಿ ಎತ್ತಿದ ಅನೇಕ ನಿದರ್ಶನಗಳು ನಮಗೆ ಸಿಗುತ್ತವೆ. ಆದಾಗ್ಯೂ, ಮಹಿಳಾ ಸಾಹಿತ್ಯ ಎನ್ನುವುದು ಅಡುಗೆ ಮನೆಯ ಸಾಹಿತ್ಯ ಎಂಬ ಮೂದಲಿಕೆಗೆ ಒಳಗಾಯಿತು. ವಾಸ್ತವದಲ್ಲಿ ಮಹಿಳೆಯರ ಸಾಹಿತ್ಯ ಅಡುಗೆ ಮನೆ ಸಾಹಿತ್ಯವಾಗಿರದೇ ಅದು ಪುರುಷ ಸಾಹಿತ್ಯಕ್ಕೆ ಎಲ್ಲ ರೀತಿಯಲ್ಲಿಯೂ ಸಮಾನವಾಗಿರುವುದನ್ನು ಯಾವ ಪಕ್ಷಪಾತವಿಲ್ಲದೇ ನೋಡುವ ಕಣ್ಣಿಗೆ ಕಾಣಿಸುತ್ತದೆ.



ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಮಹಿಳೆಯರು ಪಾಲುಗೊಂಡುದು ಮತ್ತು ಆಯಾ ಪ್ರಕಾರಗಳಲ್ಲಿ ಸಮರ್ಥವಾಗಿ ಅವರು ಅಭಿವ್ಯಕ್ತಿಸಿದ್ದುದು ಕನ್ನಡ ಸಾಹಿತ್ಯ ಚರಿತ್ರೆಯ ಉದ್ದಕ್ಕೂ ಕಾಣಿಸುತ್ತದೆ. ಅಲ್ಲಿ ಹಲವು ಮೇರು ಪ್ರತಿಭೆಗಳು ಮೂಡಿ ಬಂದಿರುವುದೂ ಗಮನಾರ್ಹ. ಈ ಸಾಧನೆಯನ್ನು ಅವರು ಮಾಡಿದ್ದು ಅನೇಕ ಅಡ್ಡಿ ಆತಂಕಗಳ ನಡುವೆ ಎಂಬುದನ್ನು ಇಲ್ಲಿ ಪ್ರಸ್ತಾಪಿಸಲೇಬೇಕು.

ಮೊದಲೇ ಇಲ್ಲಿ ಪ್ರಸ್ತಾಪಿಸಿದ ಹಾಗೆ ೧೯ನೇ ಶತಮಾನದ ಆದಿಯಲ್ಲಿಯೇ ಲೇಖಕಿಯರ ಧ್ವನಿ ಕೇಳಿ ಬಂದರೂ ಅವರ ಸಾಹಿತ್ಯಕ್ಕೆ ೧೯೮೦ರ ದಶಕದ ವರೆಗೆ ಸಿಗಬೇಕಾದ ಮನ್ನಣೆ ಸಿಗಲಿಲ್ಲ. ಬಹುಶಃ ಅದೇ ಕಾರಣಕ್ಕಾಗಿ "ಸ್ತ್ರೀವಾದಿ ಚಿಂತನೆ" ಎಂಬ ಹೊಸ ಆಲೋಚನಾ ಕ್ರಮ ಹುಟ್ಟಿಕೊಂಡಿತು. ಮಹಿಳಾ ಸಾಹಿತ್ಯವನ್ನು ಅದರ ನಿಜಾರ್ಥದಲ್ಲಿ ಗುರುತಿಸುವ ಹಾಗೂ ಅವರ ಸಾಹಿತ್ಯಕ್ಕೆ ಒಂದು ಸ್ಥಾನ ನಿರ್ದೇಶನ ಮಾಡುವ ಕೆಲಸವನ್ನು ಈ ಸ್ತ್ರೀವಾದಿ ಚಿಂತನೆ ಮೊದಲ ಬಾರಿಗೆ ರೂಪಿಸಿತು. ಈ ಚಿಂತನೆಯ ಮುಖ್ಯ ಉದ್ದೇಶವೇ ಮಹಿಳಾ ಸಾಹಿತ್ಯ ಕುರಿತ ಹಳೆಯ ವಿನ್ಯಾಸವನ್ನು ಬದಲಿಸುವುದು ಹಾಗೂ ಹೊಸ ಮೀಮಾಂಸೆಯನ್ನು ನಿರ್ಮಿಸುವುದು ಆಗಿತ್ತು. ಇದು ಒಂದು ರೀತಿಯಲ್ಲಿ ಮಹಿಳಾ ಸಾಹಿತ್ಯದ ಅವಲೋಕನಕ್ಕೆ ಹೊಸ ಪರಿಭಾಷೆಯನ್ನು ನಿರ್ಮಿಸಿತು. ಹೆಚ್ಚ ಕಡಿಮೆ ಅದೇ ಸಮಯದಲ್ಲಿ ಕನ್ನಡದಲ್ಲಿ ಬಂಡಾಯ ಸಾಹಿತ್ಯ ಚಳವಳಿಯೂ ಆರಂಭವಾಯಿತು. ೧೯೭೯ ರಲ್ಲಿ ಬೆಂಗಳೂರಿನಲ್ಲಿ ಮೊದಲ ಬಂಡಾಯ ಸಾಹಿತ್ಯ ಸಮ್ಮೇಳನ ನಡೆದಿತ್ತು. ಅಲ್ಲಿ ಮತ್ತು ತದನಂತರ ಬಂಡಾಯ ಸಾಹಿತ್ಯ ಕೂಡ ಕನ್ನಡ ವಿಮರ್ಶೆಗೆ ಹೊಸ ಪರಿಭಾಷೆಯ ಅಗತ್ಯವಿದೆ ಎಂದು ಪ್ರತಿಪಾದಿಸಿತು, ಆಗ್ರಹಿಸಿತು. "ನಮ್ಮ ಸಾಹಿತ್ಯವನ್ನು ನಿಕಷಕ್ಕೆ ಒಡ್ಡಲು ನಿಮಗೆ ಬೇರೆ ದೃಷ್ಟಿಕೋನ ಬೇಕು" ಎಂದು ಬಂಡಾಯ ಮತ್ತು ದಲಿತ ಲೇಖಕರು ಆಗ್ರಹಿಸಿದರು. ಮಹಿಳಾ ಲೇಖಕಿಯರು ಕೂಡ ಇದನ್ನೇ ಪ್ರತಿಪಾದಿಸಿದರು. ಮತ್ತು ಅವರು ಈ ಕೆಲಸವನ್ನು ಪುರುಷರು ಮಾಡಿಯಾರು ಎಂದು ಕಾಯುತ್ತ ಕುಳಿತುಕೊಳ್ಳದೇ ತಾವೇ ಮೇಲ್ಪಂಕ್ತಿ ಹಾಕಿದರು. ದಲಿತ ಮತ್ತು ಬಂಡಾಯ ಲೇಖಕರ ಹಾಗೆಯೇ, "ನಮ್ಮ ಬರವಣಿಗೆಯನ್ನು ನೋಡಬೇಕಾದ ಕ್ರಮ ಇದು" ಎಂದು ಅವರು ಹೇಳಿಕೊಡಲು ಯತ್ನಿಸಿದರು. ಅದರಲ್ಲಿ ಅವರು ಸಫಲರೂ ಆದರು. ಆ ನೂತನ ಚಿಂತನ ಕ್ರಮ, ದೃಢತೆ, ತಮ್ಮನ್ನು ತಾವು ಮುಖ್ಯ ವೇದಿಕೆಯ ಮೇಲೆ ತಂದುಕೊಳ್ಳಲು

ಅವರು ಹೇಗೆ ಹೆಣಗಿದರು ಎಂಬುದಕ್ಕೆ ಈ ಎಲ್ಲ ಸಂಪುಟಗಳು ಕನ್ನಡಿ ಹಿಡಿಯುವಂತೆ ಇವೆ. ಅದನ್ನೆಲ್ಲ ಒಂದು ಬೃಹತ್ ವೇದಿಕೆ ಮೇಲೆ ಬಿಂಬಿಸುವ ಕೆಲಸವನ್ನು ಪರಿಷತ್ತು ಈಗ ಮಾಡಿದೆ. ಆಧುನಿಕ ಕನ್ನಡದ ಮಹಿಳೆಯ ಎಲ್ಲ ಪ್ರಮುಖ ಪ್ರಕಾರಗಳ ಪ್ರಾತಿನಿಧಿಕ ಬರವಣಿಗೆಯನ್ನು ಇಲ್ಲಿ ಸಂಕಲಿಸಿ ಕೊಡಲು ಒಂದು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಇದು ಒಂದು ಅನನ್ಯ ಪ್ರಯತ್ನ. ಏಕೆಂದರೆ ಇದನ್ನು ಬೇರೆಲ್ಲೂ ಇದುವರೆಗೆ ಮಾಡಲಿಲ್ಲ. ಮಾಡಬೇಕು ಎಂದು ಯಾರಿಗೂ ಅನಿಸಲಿಲ್ಲ.

ನಮ್ಮ ಕನ್ನಡದ ಲೇಖಕಿಯರು ಹೇಗೆ ಯೋಚಿಸಿದರು. ಅವರ ಅನುಭವ ಲೋಕ ಹೇಗೆ ಇತ್ತು, ಅದು ಏನನ್ನು ಪರಿಶೋಧಿಸಲು ಪ್ರಯತ್ನ ಮಾಡಿತು. ಅಲ್ಲಿ



ಹೆಣ್ಣಿನ ಆಳದ ತಲ್ಲಣಗಳು, ಸಂತೋಷಗಳು, ದುಃಖಗಳು, ಸುಖಗಳು ಹೇಗೆ ಮೊಗ ಪಡೆದುವು ಎಂಬುದನ್ನು ಈ ಸಂಪುಟಗಳು ಕನ್ನಡಿಗರ ಮುಂದೆ ತೆರೆದು ಇಡುತ್ತವೆ. ಹೆಣ್ಣು ಮತ್ತು ಗಂಡಿನ ಸಂವೇದನೆಯ ನಡುವೆ ಇರುವ ಭಿನ್ನತೆಗಳನ್ನು ಹಿಡಿದು ಇಡಲು ಈ ಸಂಪುಟಗಳು ಯಶಸ್ವಿಯಾಗುತ್ತವೆ ಎಂದು ನಾನು ಭಾವಿಸಿದ್ದೇನೆ. ಕನ್ನಡದ ಓದುಗರು ಈ ಸಂಪುಟಗಳನ್ನು ಪ್ರೀತಿಯಿಂದ ಎದೆಗೆ ಅವಚಿಕೊಳ್ಳುತ್ತಾರೆ ಎಂಬ ನಂಬಿಕೆ ನನ್ನದು. ಮತ್ತು ಸ್ತ್ರೀ ಸಾಹಿತ್ಯ ಕುರಿತ ಉನ್ನತ ಅಧ್ಯಯನಕ್ಕೆ ಈ ಸಂಪುಟಗಳು ಆಕರಗಳು ಆಗುತ್ತವೆ ಎಂದೂ ನಾನು ಪ್ರಬಲವಾಗಿ ನಂಬಿದ್ದೇನೆ. ಇಂಥ ಕೆಲಸವನ್ನು ನಮ್ಮ ಅವಧಿಯಲ್ಲಿ ಮಾಡಿ ಪೂರೈಸುತ್ತಿರುವುದಕ್ಕೆ ನನ್ನ ಮನಸ್ಸಿನಲ್ಲಿ ಸಾರ್ಥಕ ಭಾವನೆ ಮೂಡಿದೆ.

ಈ ಎಲ್ಲ ಸಂಪುಟಗಳ ಎಲ್ಲ ಸಂಪಾದಕಿಯರಿಗೆ ಮತ್ತು ಮಾಲಿಕೆಯ ಸಂಪಾದಕರಾದ ಡಾ.ಮಲ್ಲಿಕಾ ಘಂಟಿಯವರಿಗೆ ನನ್ನ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳನ್ನು ಅಂದವಾಗಿ ಹೊರಗೆ ತರಲು ಮತ್ತು ಸಂಪಾದಕರ ಜೊತೆಗೆ ಸಂಯೋಜಕನ ಕೆಲಸ ಮಾಡಲು ಪರಿಷತ್ತಿನ ಪ್ರಕಟಣೆಯ ವಿಭಾಗದ ರಾಜ್ಯ ಸಂಚಾಲಕರಾದ ಡಾ. ಪದ್ಮರಾಜ ದಂಡಾವತಿಯರು ಬಹುವಾಗಿ ಶ್ರಮಿಸಿದ್ದಾರೆ. ಅವರ ಜೊತೆಗೆ ಪ್ರಕಟಣಾ ವಿಭಾಗದ ಬಿ.ಎಂ.ನಾಗರತ್ನ ಅವರೂ ಕೈ ಜೋಡಿಸಿದ್ದಾರೆ. ಪರಿಷತ್ತಿನ ಬಿ.ಎಂ.ಶ್ರೀ ಅಚ್ಚುಕೂಟದ ಸಿಬ್ಬಂದಿ ಎಂದಿನಂತೆ ಹಗಲೂ ರಾತ್ರಿ ದುಡಿದು ಈ ಸಂಪುಟಗಳನ್ನು ಸಕಾಲದಲ್ಲಿ ಮುದ್ರಿಸಿ ಕೊಟ್ಟಿದ್ದಾರೆ. ಈ ಸಂತೋಷದ ಗಳಿಗೆಯಲ್ಲಿ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ನಾಡೋಜ ಡಾ.ಮನು ಬಳಿಗಾರ್**

ಅಧ್ಯಕ್ಷರು

## ಮಾಲಿಕೆಯ ಸಂಪಾದಕರ ನುಡಿ

"ಕಲ್ಲಕಾಲಲಿ ತುಳಿದು ಕೋಮಲಾಂಗಿಯ ಮಾಡಿದರು...." ಎಂಬ ಈ ಸಾಲು ಮಹಿಳಾ ಬದುಕಿಗೆ ಅನ್ವಯಿಸಿಕೊಂಡು ಹೇಳುವುದರ ಹಿಂದೆ ಮನುಕುಲ ಚರಿತೆಯ ಏಳು ಬೀಳಿನ ಅಗಣಿತ ಹಾದಿಗಳ ಪಯಣವಿದೆ. ಈ ಹಾದಿಗಳ ಅನ್ವೇಷಣೆಯೆಂದರೆ ಗಂಡು ರಾಜಕಾರಣದ ಮೋಸದ ಕಣ್ಣಕಟ್ಟಿನ ಆಟದ ತಂತ್ರಗಳನ್ನು ಬಯಲುಗೊಳಿಸುವುದೇ ಆಗಿದೆ. ಮಾನವ ಚರಿತ್ರೆಯನ್ನು ಅರಿಯುವುದೆಂದರೆ ಸಮಾಜವನ್ನು ಅರ್ಥೈಸಿಕೊಳ್ಳುವಿಕೆಯೆಂದೆ ಭಾವಿಸಲಾಗಿದೆ. ಈ ಅರ್ಥೈಸಿಕೊಳ್ಳುವಿಕೆಯು ಪುರುಷರೂಪಿತ, ದ್ವೇಷಪೂರಿತ ವ್ಯಾಖ್ಯಾನಗಳ ಹಿಂದೆ ಬಹುದೊಡ್ಡ ಶಕ್ತಿಯಾಗಿ ವರ್ಣಾಧಾರಿತವಾದ ರಾಜಕಾರಣವಿದೆ. ವೇದ, ಉಪನಿಷತ್ತು, ಸ್ಮೃತಿ, ಅರ್ಥಶಾಸ್ತ್ರ, ಪುರಾಣಾದಿಯಾಗಿ ಶಾಸ್ತ್ರ, ಧರ್ಮಕಾವ್ಯ ಕಾರಣಗಳು ವರ್ಣಾಧಾರಿತ ಪುರುಷಹಿತಾಸಕ್ತಿ ರಾಜಕಾರಣವನ್ನು ಸಕ್ರಿಯಗೊಳಿಸುವಾಗ ಸ್ತ್ರೀಯನ್ನು ಗುರಿಯಾಗಿಸಿಕೊಂಡದ್ದರ ಹಿಂದೆ ಏನಿತ್ತು ಎಂಬುದೆ ನಮ್ಮೆದುರಿನ ಬಹುದೊಡ್ಡ ಪ್ರಶ್ನೆ, ಈ ಪ್ರಶ್ನೆಗಳನ್ನು ಅಂದಂದಿನ ಕಾಲದ ಸಮಾಜದೊಳಗಿದ್ದ ಅನೇಕ ಮಹಾತ್ಮರು ಹಾಕಿಕೊಂಡಿರುವರು. ಆದರೆ ಯಾವ ಕಾಲದಲ್ಲಿಯೂ ನ್ಯಾಯಸಮ್ಮತವಾದ ಉತ್ತರಗಳನ್ನು ಕಂಡುಕೊಳ್ಳಲು ಆಗಿಲ್ಲ ಎಂಬುದನ್ನು ಚರಿತ್ರೆಯ ಓದು ನಮ್ಮರಿವಿಗೆ ತಂದಿದೆ. ಹೀಗಾಗಿಯೆ ನಾವು ಮತ್ತೇ ಇಂದು ವರ್ತಮಾನದಲ್ಲಿ ನಿಂತು ಹಿಂಚಲನೆಯಿಂದ ಬೆನ್ನ ಹಿಂದಿನ ಕತ್ತಲಿನಲ್ಲಿ ಹುಗಿದು ಹೋಗಿರುವ ಅವಳ ಹೆಜ್ಜೆಗಳ ಆಕಾರಗಳನ್ನು ಹುಡುಕುವ ಮತ್ತೆ ಭವಿಷತ್ತಿನ ಹೆಜ್ಜೆಗಳಿಗೆ ಸುಗಮ ಹಾದಿ ನಿರ್ಮಿಸುವ ಇರಾದೆ ಈ ಶತಮಾನದ ಮಹಿಳೆಯರ ಜಾಗೃತ ಪ್ರಜ್ಞೆಯ ಭಾಗವೆಂದೆ ಭಾವಿಸಿರುವೆ.

**ಕಿಂಡಿಯಲ್ಲಿ ಕಂಡ ಜಗತ್ತು :** ವೇದ, ಉಪನಿಷತ್ತುಕಾಲೀನ ಸಮಾಜದಲ್ಲಿ ಮಹಿಳೆಯರಿಗೆ ಗೌರವದ ಸ್ಥಾನವಿತ್ತೆಂದು ಸನಾತನಿಗಳು ಅರ್ಧಸತ್ಯಗಳನ್ನು ಪೂರ್ಣ ಸತ್ಯಗಳಾಗಿ ಸುವುದಕ್ಕಾಗಿ ಎಷ್ಟೊಂದು ಹೆಣಗಾಡಿದರು ಎಂಬುದಕ್ಕೆ ಸಾಕ್ಷಿ ಪುರಾವೆಗಳ ಮೊರೆ ಹೋಗುವ ಅಗತ್ಯವಿಲ್ಲ. ಹೊರ ಆಕ್ರಮಣಿಗರು ಮತ್ತು ಒಳ ಮೂಲವಾಸಿಗಳ ಸಂಘರ್ಷ, ಸೌಹಾರ್ದ, ಸಮನ್ವಯತೆಗಳಿಂದ ರೂಪುಗೊಂಡ ಸಮಾಜದಲ್ಲಿ ಹೆಣ್ಣಿನ ಹುಟ್ಟಿನ ಬಗ್ಗೆ ಏಕಾಭಿಪ್ರಾಯಗಳಿಲ್ಲವೆಂಬುದನ್ನು ವೇದಗಳಲ್ಲಿರುವ ಕೆಲವು ಋಕ್ಕಗಳಲ್ಲಿ ಕಾಣಬಹುದು. ಋಗ್ವೆದ ಮತ್ತು ಅಥರ್ವಣ ವೇದಗಳಲ್ಲಿ ಹೆಣ್ಣಿನ ಸಾಮಾಜಿಕ ಸ್ಥಾನಮಾನಗಳ ಕುರಿತಂತೆ ಪ್ರಸ್ತಾಪಿಸಲಾಗಿದೆ. ಋಗ್ವದದಲ್ಲಿ ಗಂಡು ಮಗುವಿನ ಬಗ್ಗೆ ಸಮಾಜದಲ್ಲಿ ಬೇಡಿಕೆಯಿತ್ತು ಎಂದು ಹೇಳಿದರೆ ಅಥರ್ವಣ ವೇದದ ಋಕ್ಕೊಂದರಲ್ಲಿ ಮಗ ಹುಟ್ಟಲೆಂದು ಪ್ರಾರ್ಥನೆಗೈಯುತ್ತಿದ್ದರು ಎಂಬುದರ ಉಲ್ಲೇಖವಿದೆ.

"ಗಂಡು ಮಗುವನ್ನು ಪಡೆಯುವುದಕ್ಕಾಗಿ ವೇದಗಳು ಒಂದು ವಿಶೇಷ ಆಚರಣೆಯನ್ನು ಗೊತ್ತುಪಡಿಸಿವೆ. ಅದನ್ನು 'ಪುಂಸವನ' ಸಂಸ್ಕಾರ ಎಂದು ಕರೆಯುತ್ತಾರೆ. ಇದು

ಮೂರು ತಿಂಗಳ ಗರ್ಭಿಣಿ ಇದ್ದಾಗ ಮಾಡುವ ಒಂದು ಸಂಸ್ಕಾರ" . "ಪ್ರಜಾಪತಿಯೆ, ನೀನು ಈ ಗರ್ಭವನ್ನು ಸೃಷ್ಟಿಸಿದ್ದೀಯೆ. ಈ ಗರ್ಭದಿಂದ ಗಂಡು ಸಂತಾನ ಜನಿಸಲಿ. ಹೆಣ್ಣು ಸಂತಾನ ಇನ್ನೆಲ್ಲಿಯಾದರೂ ಆಗಲಿ" , "ಪ್ರಜಾಪತಿಯೆ ಹುಟ್ಟುವ ಗಂಡು ಮಗುವನ್ನು ಕಾಪಾಡು. ಅವನನ್ನು ಮಹಿಳೆಯನ್ನಾಗಿ ಮಾಡಬೇಡ" [ಬಿ.ವಿ. ವೀರಭದ್ರಪ್ಪ: ವಿಚಾರ ಸಾಹಿತ್ಯ-ವೇದಗಳಲ್ಲಿಯ ಮಹಿಳೆಯರು] ಎಂಬುದರಲ್ಲಿ ಗಂಡಿನ ಪ್ರಧಾನತೆಯನ್ನು ಸಮಾಜ ಎತ್ತಿಹಿಡಿದು ಹೆಣ್ಣಿನ ಕುರಿತಂತೆ ಸಮಾಜದಲ್ಲಿ ನಕಾರಾತ್ಮಕ ಧೋರಣೆಯಿತ್ತು ಎಂಬುದು ತಿಳಿಯುತ್ತದೆ. ಈ ಶಾಸ್ತ್ರೋಕ್ತ, ವೇದೋಕ್ತ ಸಂಗತಿಗಳು ಕಾಲಾನಂತರದಲ್ಲಿ ಎಲ್ಲ ವರ್ಣಗಳಲ್ಲಿಯು ಈ ನಂಬಿಕೆಗಳು ಆಚರಣೆಗೆ ಬರುವುದಕ್ಕೆ ಉದಾರವಾಗಿ ಶ್ರಮಿಸಿವೆ. ಇಂದಿಗೂ ಚೊಚ್ಚಲು ಗರ್ಭಿಣಿಯರಿಗೆ ಹಳ್ಳಿಗಳಲ್ಲಿ ಅಂಬಲಿಗಡಿಗೆ ಪೂಜೆಮಾಡಿಸುವುದರ ಮೂಲಕ ಸ್ತ್ರೀವಿರೋಧಿ ಧೋರಣೆ ಚಾಲ್ತಿಯಲ್ಲಿರಿಸಿರುವುದನ್ನು ಗಮನಿಸಬಹುದು. ಇದೇ ಆಶಯವನ್ನು ನಮ್ಮ ಜನಪದ ಮಹಿಳೆಯರು ಹಂಬಲಿಸಿರುವುದನ್ನು ಗಮನಿಸುವಾಗ ಲಿಂಗರಾಜಕಾರಣ ವರ್ಣಜಿಗಿತವನ್ನು ಕಾಲದೊಂದಿಗೆ ಹೊಸೆದಿತ್ತು. ಶೂದ್ರ ಮಹಿಳೆಯರು ತಮ್ಮನ್ನು ಬೇಟೆಯಾಡಲು ಬಳಸಿದ್ದ ಹತ್ಯಾರಗಳನ್ನೇ ತನ್ನೊಡಲಿನಲ್ಲಿ ಮತ್ತು ಮಡಿಲಿನಲ್ಲಿಟ್ಟುಕೊಳ್ಳುವುದರ ಹಿಂದೆ ವೈದಿಕ ಹಿತಗಳ ಸಾಮಾಜಿಕ ಒತ್ತಡಗಳಿವೆ.

ಬೇಟೆ ಸಂಸ್ಕೃತಿಯಿಂದ ಕೃಷಿ ಸಂಸ್ಕೃತಿಯೆಡೆಗಿನ ಸಾಗುದಾರಿಯಲ್ಲಿ ಸ್ತ್ರೀ ತನ್ನ ಚರಿತ್ರೆಯ ಕೊಂಡಿಯನ್ನು ಕಳಚಿಕೊಂಡದ್ದಕ್ಕೆ ಕಾರಣಗಳು ಸಿಗುತ್ತವೆ. ನೇಗಿಲಿನ ಆವಿಷ್ಕಾರ, ಬೆಂಕಿಯ ಬಳಕೆ ಹೆಣ್ಣಿನ ಕೈಯಲ್ಲಿಯ ಕಟ್ಟುವಿಕೆಯ ಆಯುಧಗಳನ್ನು ಗಂಡಸು ವಶಪಡಿಸಿಕೊಂಡದ್ದರ ಹಿಂದೆ ಬಹುದೊಡ್ಡ ಚರಿತ್ರೆಯಿದೆ. ಇದನ್ನು ಕುಟುಂಬ, ಖಾಸಗಿ, ಆಸ್ತಿಯ ಉಗಮದೊಂದಿಗೆ ಕಾಣಬಹುದು. ಅಲೆಮಾರಿ ಸಮುದಾಯಗಳು ಕಾದಾಟದಲ್ಲಿಯೇ ಬದುಕುತ್ತಿದ್ದ ಕಾರಣ ಕಾದಾಟಕ್ಕೆ ಗಂಡಿನ ಅಗತ್ಯತೆ ಕಾಣಿಸಿಕೊಂಡಿರಬಹುದು ಎಂದು ಸುಲಭವಾಗಿ ಚರಿತ್ರೆಕಾರರು ಹೇಳಿದ್ದನ್ನು ಗಂಡು ಬೇಡಿಕೆಯನ್ನು ಸಮರ್ಥಿಸುವುದಕ್ಕೆ ಧಾರಾಳವಾಗಿ ಬಳಸಿಕೊಳ್ಳಲಾಗಿದೆ. ಹೀಗೆ ಭಾವಿಸುವುದರ ಮೂಲಕ ಹೆಣ್ಣಿನ ದೈಹಿಕ ಶಕ್ತಿಯನ್ನು ನಿರಾಕರಿಸಲಾಗಿದೆ. ಆಕೆಯ ಶಕ್ತಿಯನ್ನು ಕರ್ತವ್ಯದ ಕಕ್ಷೆಯಲ್ಲಿ ಕಟ್ಟಿಹಾಕಿ ಹಲವು ಪಾತ್ರಗಳ ನಿರ್ವಹಣೆಯನ್ನು ಹೊರಿಸಲಾಗಿದೆ. ಈ ಪಾತ್ರಗಳ ಕುರಿತಂತೆ ಋಗ್ವದದಲ್ಲಿ ಮಾಹಿತಿಗಳು ದೊರೆಯುತ್ತವೆ. ಗಂಡಸಿನ ಅಧೀನದಲ್ಲಿರುವ ಹೆಣ್ಣೊಬ್ಬಳು ನಿಷ್ಠೆಯಿಂದ ಮೂರು ಪಾತ್ರಗಳನ್ನು ಆದ್ಯ ಕರ್ತವ್ಯಗಳೆಂದೂ ಕಡ್ಡಾಯವಾಗಿ ಮಾಡಬೇಕು ಎಂಬುದರ ಹಿಂದೆ ಕುಟುಂಬದ ಪರಿಕಲ್ಪನೆ ಗಟ್ಟಿಗೊಂಡಿರುವುದು ಕಾಣಿಸುತ್ತದೆ. "ಗಂಡನನ್ನು ಪ್ರೀತಿಸುವವಳನ್ನು ಜಯಳೆಂದು ಅಧೀನಕ್ಕೊಳಪಡಿಸಿಕೊಂಡ ಗಂಡನ ಮಕ್ಕಳ ತಾಯಿಯನ್ನು 'ಜಾನಿ'ಯಂದು, ಗಂಡನ ಆಚರಣೆಗಳಲ್ಲಿ ಅವನ ಆಜ್ಞೆಯಂತೆ ಭಾಗಿಯಾದವಳನ್ನು 'ಪತ್ನಿ' ಎಂದು ಕರೆಯುವುದರ ಮೂಲಕ ಪುರುಷಾಧಿಪತ್ಯ ಮುನ್ನೆಲೆಗೆ ಬರತೊಡಗಿದೆ. ರಾಜರು ಮತ್ತು ಬಲಿಷ್ಠ (ಧಾರ್ಮಿಕವಾಗಿ, ಆರ್ಥಿಕವಾಗಿ) ಗಂಡಸರು ಬಹುಪತ್ನಿತ್ವ ಪದ್ಧತಿಯನ್ನು ರೂಢಿಯಲ್ಲಿ ತಂದಿದ್ದರು. ಇದಕ್ಕೆ ವಿರುದ್ಧವಾಗಿ ಕೌತುಕಮಯ ಸಂಗತಿಗಳು ಋಗ್ವದದಲ್ಲಿ ಉಲ್ಲೇಖಿತವಾಗಿವೆ. ಈ ಸಂಗತಿಗಳು ಪ್ರಧಾನತೆಯನ್ನು ಎತ್ತಿ ಹಿಡಿಯುವುದಕ್ಕೆ

ಬಳಕೆಗೊಳ್ಳುವುದಕ್ಕೆ ಉಲ್ಲೇಖಿತವಾದವುಗಳಲ್ಲ. ಇಷ್ಟೊತ್ತಿಗಾಗಲೇ ವರ್ಣವ್ಯವಸ್ಥೆ ಹೆಣ್ಣನ್ನು ಲೈಂಗಿಕ ಶುದ್ಧಾಶುದ್ಧಿಯ ಪ್ರಮೇಯದಲ್ಲಿ ದಾಖಲಿಸಿತ್ತು. ಬಹುಪತಿತ್ವದ ಬಗ್ಗೆ ಕೂಡ ಋಗ್ವದದಲ್ಲಿ ಉಲ್ಲೇಖವಿದೆ." ಒಬ್ಬ ಹೆಂಗಸು ಮೊದಲು ಹತ್ತು ಮಂದಿ ಬ್ರಾಹ್ಮಣರಲ್ಲದ ಗಂಡಂದಿರನ್ನು ಹೊಂದಿರಲಿ, ಒಬ್ಬ ಪುರೋಹಿತ ಅವಳ ಕೈ ಹಿಡಿದರೆ ಅವನೊಬ್ಬನೇ ಅವಳ ಗಂಡನಾಗುತ್ತಾನೆ. ಬ್ರಾಹ್ಮಣರು ಮಾತ್ರ ಅವಳ ಗಂಡ ರಾಜನೂ ಅಲ್ಲ, ವೈಶ್ಯನೂ ಅಲ್ಲ ಎಂದು ಒಂದು ಋಕ್ಕು ಹೇಳುತ್ತದೆ. [ಕನ್ನಡ ಕಾವ್ಯಕಂಡ ಹೆಣ್ಣು, ಸಿ.ವೀರಣ್ಣ ಇದು ವರ್ಣವ್ಯವಸ್ಥೆಯಲ್ಲಿ ಬ್ರಾಹ್ಮಣ್ಯದ ಹಿಡಿತ ಗಟ್ಟಿಗೊಳ್ಳುತ್ತಿರುವುದನ್ನು ಅದೇ ಸಂದರ್ಭದಲ್ಲಿ ಹೆಣ್ಣಿಗೆ ಲೈಂಗಿಕ ಸ್ವಾತಂತ್ರದ (ಬಹುಪತಿತ್ವದ) ಅವಕಾಶವನ್ನು ಕಿತ್ತುಕೊಂಡದ್ದನ್ನು ಬಿಂಬಿಸುತ್ತದೆ. ಋಗ್ವದದ ಕಾಲಕ್ಕಾಗಲೇ ಸೀ ಬದುಕಿನ ಅಥಃಪತನ ಪ್ರಾರಂಭವಾಗಿತ್ತು. ಹೆಣ್ಣಿನ ವಿಷಯದಲ್ಲಿ ವೇದಕಾಲೀನ ಸಮಾಜ ಉದಾರವಾಗಿರಲಿಲ್ಲ. ವೆಂಬುದನ್ನು ಹಲವಾರು ಋಕ್ಕುಗಳಲ್ಲಿ ಸ್ತ್ರೀ ಸಂಬಂಧಿ ಹೇಳಿಕೆಗಳಿರುವುದರ ಮೂಲಕ ನೋಡಬಹುದು. ಹೆಣ್ಣಿನ ಬುದ್ಧಿಯನ್ನು ಅಳೆಯಲು ಸಾಧ್ಯವಿಲ್ಲ.. ಹೆಣ್ಣಿನ ಪ್ರೇಮ ಯಾವಾಗಲೂ ಚಂಚಲ' "ಹೆಣ್ಣಿನ ಹೃದಯ ಕಿರುಬನ ಹೃದಯದಂತಿಹದು" ಎಂಬ ಹೇಳಿಕೆಗಳಿಂದ ಸ್ತ್ರೀಯನ್ನು ಅಪಮಾನಿಸಲಾಗಿದೆ.

ಅತ್ಯಂತ ಕಟ್ಟುನಿಟ್ಟಿನ ನಿಯಮಗಳನ್ನು ವೇದಕಾಲೀನ ಸಮಾಜ ಮಹಿಳೆಯರಿಗೆ ವಿಧಿಸಿತ್ತು. ಕೆಲವು ಪ್ರಸಂಗಗಳಲ್ಲಿ ಧಾರಾಳವಾಗಿ ನಡೆದುಕೊಂಡದ್ದರ ಕುರಿತು ಉಲ್ಲೇಖಗಳಿವೆ. ಹೆಣ್ಣಿಗೆ ವಿದ್ಯೆ ನೀಡುವ ವಿಚಾರದಲ್ಲಿ ಒಂದಿಷ್ಟು ಧಾರಾಳತೆಯನ್ನು ಪ್ರದರ್ಶಿಸಿದೆ. ಅದು ವರ್ಣವ್ಯವಸ್ಥೆಯನ್ನು ಮುಂದಿಟ್ಟುಕೊಂಡೆ ಎನ್ನುವುದನ್ನು ಗಮನಿಸಬೇಕು. ವೇದಗಳ ಕಾಲದಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯರ ಮಧ್ಯೆ ವಿವಾಹಗಳು ನಡೆದಿರುವ ಉಲ್ಲೇಖಗಳಿವೆ. ಹೀಗಾಗಿ ಈ ಎರಡೂ ವರ್ಣಗಳಿಗೆ ವಿದ್ಯೆಯೆ ಪ್ರಧಾನವಾದ ಸಂಪತ್ತಾದ ಕಾರಣ ಅದನ್ನು ಕುಟುಂಬ ಮೂಲದ ಹೆಣ್ಣು ಮಕ್ಕಳಿಗೂ ಹಂಚಿದ್ದರ ಹಿಂದೆ ಸಾರ್ವತ್ರಿಕ ಹಿತವಿರಲಿಲ್ಲ. ಪುತ್ರನಿಲ್ಲದ ಮನೆಯಲ್ಲಿ ಪುತ್ರಿಯರು 'ಪುತ್ರಿಕಳಾಗಿ ಮಗನ ಕರ್ತವ್ಯಗಳನ್ನು ನಿರ್ವಹಿಸಿರುವರು. ಕ್ಷತ್ರಿಯಳಾದ ಘೋಷಾ ಋಗ್ವೆದದ ಅನೇಕ ಋಕ್ಕೂಗಳನ್ನು ರಚಿಸಿದಳೆಂಬ ಖ್ಯಾತಿಯಿದೆ. "ಲೋಪಾ ಮುದ್ರಾ, ಮಮತಾ, ಉಪಾಲಾ, ಸೂರ್ಯ, ಇಂದ್ರಾಣಿ, ಶಚೀ, ಸರ್ಸರಾಜ್ಞೆ ಮತ್ತು ವಿಶ್ವಾವರ" [ಕನ್ನಡ ಕಾವ್ಯಕಂಡ ಹೆಣ್ಣು, ಸಿ.ವೀರಣ್ಣ] ಇವರೆಲ್ಲರೂ ಋಕ್ಕುಗಳ ಕರ್ತೃಗಳೆಂದು ಹೇಳಲಾಗಿದೆ. ವಿಶ್ವಾವರಳಂತೂ ಅಗ್ನಿಯನ್ನು ಕುರಿತು ಋಕ್ಕುಗಳನ್ನು ರಚಿಸಿದ್ದಲ್ಲದೆ ಯಜ್ಞದಲ್ಲಿ ಋತ್ವಿಕನ ಕಾರ್ಯವನ್ನು ನೆರವೇರಿಸಿದಳೆಂದು ಹೇಳಲಾಗಿದೆ.

ವೇದಗಳ ಕಾಲದಲ್ಲಿಯೇ ಕುಟುಂಬ, ಖಾಸಗಿ ಆಸ್ತಿಯ ಪರಿಕಲ್ಪನೆಗಳು ಗಟ್ಟಿಗೊಂಡು ಸ್ತ್ರೀಮೂಲೀಯತೆಯನ್ನು ನಿರ್ನಾಮ ಮಾಡುವ ಎಲ್ಲ ಯೋಜನೆಗಳು ಸಿದ್ಧಗೊಂಡಂತಿದೆ. ಗಂಡು ಮಗುವನ್ನು ಪಡೆಯುವುದಕ್ಕಾಗಿಯೇ ಹಲವಾರು ಆಚರಣೆಗಳು ಕಾಣಿಸಿಕೊಂಡಿವೆ. ಹುಣ್ಣಿಮೆ ಅಮಾವಾಸ್ಯೆಯ ದಿನ ಯಜ್ಞಯಾಗಾದಿಗಳನ್ನು ವಿಶೇಷವಾದ ರೀತಿಯಲ್ಲಿ ಆಚರಿಸುತ್ತ ದೇವರಿಗೆ ಗಂಡುಮಗುವನ್ನು ನೀಡು ಎಂದು

ಬೇಡಿಕೊಳ್ಳುವ ಆಚರಣೆಗಳು ಸಿಗುತ್ತವೆ. ಐತರೇಯ ಬ್ರಾಹ್ಮಣದಲ್ಲಿ ರಾಜ ಹರಿಶ್ಚಂದ್ರನ ಕಥೆ ಬರುತ್ತದೆ. ಅವನಿಗೆ ನೂರು ಜನ ಹೆಂಡತಿಯರಿದ್ದರೂ ಒಂದೂ ಗಂಡು ಮಗುವಿರಲಿಲ್ಲ. ಅವನ ಆಸ್ಥಾನದ



ಬ್ರಾಹ್ಮಣ ವಿದ್ವಾಂಸರು ಪುತ್ರನ ಪ್ರಾಮುಖ್ಯತೆಯನ್ನು ಅವರಿಗೆ ಹೀಗೆ ವಿವರಿಸಿ ಹೇಳುತ್ತಾರೆ. "ತಂದೆಯ ಋಣ ಮಗನ ಮೇಲಿರುತ್ತದೆ. ತಂದೆಯೂ ಮಗನ ಮುಖ ನೋಡಿದ ಕೂಡಲೇ ಅಮರತ್ವವನ್ನು ಪಡೆದು ಋಣಮುಕ್ತನಾಗುತ್ತಾನೆ.... ಮಗನು ಮುಕ್ತಿಯ ನಾವೆ, ಅತ್ಯುನ್ನತ ಸ್ವರ್ಗದ ಬೆಳಕು. ಹೆಂಡತಿಯು ಜೊತೆಗಾತಿ. ಆದರೆ ಮಗಳು ನೋವಿನ ಶೂಲೆ" [ಬಿ.ವಿ. ವೀರಭದ್ರಪ್ಪ: ವಿಚಾರ ಸಾಹಿತ್ಯ-ವೇದಗಳಲ್ಲಿಯ ಮಹಿಳೆಯರು] ಎಂದು ಉಪದೇಶಿಸುವುದರ ಮೂಲಕ ಹೆಣ್ಣಿನ ಹುಟ್ಟಿನ ಬಗ್ಗೆ ಭಯವನ್ನು ಬಿತ್ತಲಾಯಿತು. ರಾಜನನ್ನು ನಿಯಂತ್ರಿಸುತ್ತಿರುವ ಈ ಪುರೋಹಿತಶಾಹಿ ವರ್ಗದಿಂದಲೇ ಮಹಿಳಾ ಸ್ವಾತಂತ್ರ್ಯದ ಹರಣ ಮತ್ತು ಅವಳ ಅಸ್ತಿತ್ವದ ನಿರಾಕರಣೆಯಾದಂತಿದೆ. ಯಾಕೆ ಈ ಪುರೋಹಿತ ವರ್ಗವು ಹೆಣ್ಣಿಗೆ ಇಂತಹ ಶಿಕ್ಷೆಗಳನ್ನು ನೀಡಿರಬೇಕು ಎಂಬುದನ್ನು ನೋಡುವುದಾದರೆ ಮಾತೃಮೂಲ ಸಂಸ್ಕೃತಿಯ ನಾಯಕತ್ವದಲ್ಲಿದ್ದ ನಿಸರ್ಗಜ್ಞಾನ, ಅವರ ದೈಹಿಕ ಸಾಮರ್ಥ್ಯವನ್ನು ಎದುರಿಸುವ ಶಕ್ತಿ ಸಾಲದ ಪುರೋಹಿತಶಾಹಿ ವರ್ಗವು ಕಾಲಕ್ರಮೇಣ ತಂತ್ರ ಪ್ರಧಾನವಾದ ಪುರುಷಯುಕ್ತಿಯನ್ನು ಬಲಗೊಳಿಸುತ್ತಾ ಸ್ತ್ರೀಮೂಲಿಯ ಬಲಿಷ್ಠ ಗಂಡಸರನ್ನು ನಾಯಕರನ್ನಾಗಿಸಿ ಅವರನ್ನು ವಿಶೇಷವಾಗಿ ನಿಯಂತ್ರಿಸುತ್ತ ಮಾತೃ ಮೂಲ ಸಮುದಾಯಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಹೂಡಿದ ಬಹುದೊಡ್ಡ ಸಂಚು ಮಾನವ ಚರಿತ್ರೆಯಲ್ಲಡಗಿದೆ. ಈ ಸಂಚಿನ ಮೊದಲ ಬಲಿಪಶು ಹೆಣ್ಣು ಎಂಬುದನ್ನು ಕಾಲ ಅರಗಿಸಿಕೊಂಡ ಬಹುದೊಡ್ಡ ಪ್ರಮಾದವಿದು.

ಈ ವೇದಕಾಲೀನ ಸಮಾಜ ಹೆಣ್ಣನ್ನು ಅತ್ಯಂತ ಹೀನಾಯವಾಗಿ ಕಂಡಿದೆ. ಶೂದ್ರರು, ನಾಯಿಗಳು ಮತ್ತು ಕಾಗೆಗಳ ಗುಂಪಿಗೆ ಮಹಿಳೆಯರು ಸೇರುತ್ತಾರೆ ಎಂದು ಹೇಳುವುದರ ಮೂಲಕ ಸ್ತ್ರೀ ಸಮುದಾಯವನ್ನು ಮನುಷ್ಯ ಸಮಾಜದಿಂದ ಹೊರಗಿಟ್ಟಿದೆ. ಬಹುಪತ್ನಿತ್ವವನ್ನು ಮತ್ತು ಪ್ರಭುತ್ವವನ್ನು ಒಪ್ಪಿಕೊಂಡಿರುವ ಈ ಯುಗದಲ್ಲಿ ಮಹಿಳೆಯರನ್ನು ಪ್ರಾಣಿಗಳೊಂದಿಗೆ ಅದರಲ್ಲೂ ಕುದುರೆಗಳೊಂದಿಗೆ ಲೈಂಗಿಕ ಕ್ರಿಯೆಗೆ ಒತ್ತಾಯಿಸಿರುವ ಉಲ್ಲೇಖಗಳಿವೆ. ಕುದುರೆಯನ್ನು ಯಾಕೆ ಆಯ್ಕೆ ಮಾಡಿಕೊಂಡರೆಂದರೆ ಅದರ ಶಕ್ತಿ, ಗಮ್ಯತೆಯ ಕಾರಣದಿಂದ. ರಾಜರಿಗೆ ಬಲಿಷ್ಠ ಗಂಡು ಸಂತಾನದ ಅಗತ್ಯವಿತ್ತು. ಈ ಕಾರಣಕ್ಕಾಗಿ ರಾಣಿಯರನ್ನು ಕುದುರೆಯೊಂದಿಗೆ ಲೈಂಗಿಕ ಕ್ರಿಯೆಗೆ ಒತ್ತಾಯಿಸುವುದಷ್ಟೆ ಅಲ್ಲ ಸ್ವತಃ ಹಿರಿಯ ರಾಣಿಯರು ಕುದುರೆಯ ಮಗ್ಗುಲಲ್ಲಿ ಮಲಗಿ ಬಲಿಷ್ಠಗಂಡು ಮಗುವನ್ನು ನೀಡು ಎಂದು ಪ್ರಾರ್ಥಿಸುತ್ತಿದ್ದರು ಎಂಬ ಪ್ರಸಂಗಗಳನ್ನು ವೇದಕಾಲದಲ್ಲಿ ಗಮನಿಸಬಹುದಾಗಿದೆ. ಹೆಂಡತಿ ತನ್ನ ಸೇವೆ ಮಾಡಲು ಮತ್ತು ತನ್ನ ವಾರಸುದಾರನನ್ನು ಹೆತ್ತುಕೊಡಲು ದೇವರು ಕೊಟ್ಟಿರುವ ಹೆಣ್ಣು. ಅವಳು ತನ್ನ 'ಪೋಷ್ಯ'ಳು ಅಂದರೆ ಆಶ್ರಿತಳು ಎಂದು ಹೇಳಲಾಗಿದೆ. ಬಹುಪತ್ನಿತ್ವವನ್ನು ಒಪ್ಪಿದ ವೇದಕಾಲೀನ ಸಮಾಜದಲ್ಲಿ

ಪಟ್ಟದ ರಾಣಿಗಿದ್ದ ಸ್ಥಾನಮಾನಗಳು ಉಳಿದ ಸ್ತ್ರೀಯರಿಗೆ ಇರಲಿಲ್ಲವೆಂಬುದನ್ನು ಗಮನಿಸಬೇಕು. ಪಟ್ಟದ ರಾಣಿಗೆ ಉಳಿದೆಲ್ಲ ರಾಣಿಯರು ಅಧೀನರಾಗಿಯೆ ಇರಬೇಕಾಗಿತ್ತು. ಪಟ್ಟದರಸಿಯ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ಮಾತ್ರ ರಾಜ್ಯಪಟ್ಟ ದೊರೆಯುತ್ತಿತ್ತು. ಹೀಗಾಗಿಯೇ ಪಟ್ಟದರಸಿಯರು ಪುತ್ರ ಸಂತಾನಕ್ಕಾಗಿ ಕುದುರೆಯೊಂದಿಗೆ ಮಲಗಲು ಮುಂದಾಗುತ್ತಿದ್ದರು. ಇದನ್ನು ಒಂದಿಷ್ಟು ಸೂಕ್ಷ್ಮವಾಗಿ ಗಮನಿಸಿದರೆ



ವರ್ಣವ್ಯವಸ್ಥೆಯ ಶ್ರೇಣೀಕೃತತೆ ಹೇಗೆ ಕೆಲಸ ಮಾಡಿದೆ ಎಂಬುದು ಅರ್ಥವಾಗುತ್ತದೆ. ಯುದ್ಧವೆಂಬುದು ಸಮುದಾಯ-ಸಮುದಾಯಗಳ ಮಧ್ಯೆ ನಡೆಯುತ್ತಿರುವ ಹೊತ್ತಿನಲ್ಲಿ ಸೋತ ಸಮುದಾಯದ ರಾಜರು, ರಾಣಿಯರು, ಗುಲಾಮರು ಸೇವಕರಾದಿಯಾಗಿ ಸಮಸ್ತವು ಗೆದ್ದವರಿಗೆ ದಕ್ಕುತ್ತಿತ್ತು. ಗೆದ್ದ ರಾಜನ ಪಟ್ಟದರಸಿಯರ ಜೊತೆಗೆ ಸೋತ ರಾಜನ ರಾಣಿಯರು ಸೇವಕರಾಗಿ ಅರಸಿಯರಾಗಿ ಅರಮನೆಯಲ್ಲಿರುತ್ತಿದ್ದರು. ಇಂತಹ ಸಂದರ್ಭದಲ್ಲಿ ಪಟ್ಟದರಸಿಯರಿಗೆ ಗಂಡು ಸಂತಾನವಿಲ್ಲದಿದ್ದರೆ ಅದು ರಾಜನ ದೋಷವಾಗಿ ಕಾಣಿಸದೆ ಅದನ್ನು ಮರೆಮಾಚುವ ಸಲುವಾಗಿ ಕುದುರೆ, ನಿಯೋಗದಂತಹ ಪದ್ಧತಿಗಳು ಆಪತ್‌ಧರ್ಮವಾಗಿ ಕಾಣಿಸಿಕೊಂಡಿವೆ. ಈ ನಿಯೋಗಕ್ಕೆ ಸಿದ್ಧಗೊಂಡ ಗಂಡಸರೆಲ್ಲರು ಬ್ರಾಹ್ಮಣ ಪಂಡಿತರೆ ಆಗಿರುತ್ತಿದ್ದರು. ಮಹಾಭಾರತವನ್ನು ನೆನಪಿಸಿಕೊಂಡರೆ ಇದು ಅರ್ಥವಾಗುತ್ತದೆ. ಬೀಜ ಮತ್ತು ಕ್ಷೇತ್ರದ ಪರಿಕಲ್ಪನೆಯ ಮೂಲಕ ಸ್ತ್ರೀ ಸಮುದಾಯವನ್ನು ಶ್ರೇಣೀಕರಣದಲ್ಲಿ ಹಂಚಲಾಯಿತು. ಈ ಹಂಚಿಕೆಯನ್ನು ಸಮರ್ಥಿಸಿಕೊಳ್ಳಲು ಹೆಣ್ಣಿಗೆ ಹೆಣ್ಣನ್ನೆ ಶತ್ರುವಾಗಿಸಿದರು.

ಸ್ಮೃತಿಗಳನ್ನು ಧರ್ಮಶಾಸ್ತ್ರಗಳೆಂದು ಕರೆಯಲಾಗಿದೆ. ಈ ಶಾಸ್ತ್ರಗಳು ಸಮಾಜವನ್ನು ನಿಯಂತ್ರಿಸುವ ಅಂಕುಶಗಳಂತೆ ಕಾರ್ಯಮಾಡಿವೆ. ವೇದಗಳ ಕಾಲದಲ್ಲಿ ಪುರುಷನ ಖಾಸಗಿ ಆಸ್ತಿಯಾಗಿ ಕುಟುಂಬ ಸೇರಿದ್ದ ಹೆಣ್ಣು ಚರಾಸ್ತಿಯಂತೆ ಬಳಕೆಗೊಂಡಿರುವುದನ್ನು ಕಾಣಬಹುದು. ಬಹುಪತಿತ್ವ ಮತ್ತು ಬಹುಪತ್ನಿತ್ವ ಈ ಎರಡರಲ್ಲಿಯೂ ಹೆಣ್ಣಿನ ಅಸ್ತಿತ್ವವನ್ನು ನಿರಾಕರಿಸಲಾಗಿದೆ. ಈ ಹಂತದಲ್ಲಿ ಮಹಿಳೆಯರನ್ನು ಚರಾಸ್ತಿಯನ್ನಾಗಿಸಲಾಗಿದೆ. ಇವುಗಳ ಮಧ್ಯ ಇರುವ ವ್ಯತ್ಯಾಸವೆಂದರೆ ಅನೇಕ ಪುರುಷರು ಒಂದು ಹೆಣ್ಣನ್ನು ಹೊಂದಿದ್ದರೆ ಇನ್ನೊಂದರಲ್ಲಿ ಒಬ್ಬ ಪುರುಷ ಅನೇಕ ಹೆಣ್ಣುಗಳ ಒಡೆಯನಾಗುವ ಸವಲತ್ತನ್ನು ಪಡೆದಿದ್ದ. ಸಂಪತ್ತು, ಪುಸ್ತಕ ಮತ್ತು ಸ್ತ್ರೀಯರನ್ನು ನೋಡಿಕೊಳ್ಳಲು ಬೇರೊಬ್ಬರನ್ನು ಬಿಡಬಾರದು, ಬೇರೆಯವರ ಕೈಗೆ ಕೊಡಬಾರದೆಂದು ಹೇಳಲಾಗಿದೆ. ಅದನ್ನು ಇಂದು ಪಠ್ಯದಲ್ಲಿ ಶಾಸ್ತೋಕ್ತವಾಗಿ ಉಳಿಸಿ ಗ್ರಂಥ ಸಂಪಾದನೆಯ ಸಂದರ್ಭದಲ್ಲಿ ಗ್ರಂಥಗಳನ್ನು ಹೇಗೆ ರಕ್ಷಿಸಬೇಕು ಎಂಬುದನ್ನು ಹೇಳುವಾಗ "ಪುಸ್ತಕಂ ವನಿತಂ, ವಿತ್ತಂ ಪರಹಸ್ತಂ ಗತಂ ಗತಾ...." ಗ್ರಂಥವನ್ನು ಅನ್ಯರ ಕೈಗಿತ್ತರೆ ಅದು ಮರಳುವಾಗ ಹರಿಯುವ ಭಯಕಾಡಿದೆ. ಹಾಗೆನೇ ಹಣವನ್ನು ಬೇರೆಯವರಿಗೆ ನೀಡಿದರೆ ಅದು ಇದ್ದರೂಪದಲ್ಲಿ ಮರಳಲಾರದು. ಹಾಗೆನೇ ಹೆಣ್ಣನ್ನು ಇನ್ನೊಬ್ಬರಿಗೆ ನೀಡಿದರೆ ಅವಳು ಭ್ರಷ್ಟಳಾಗಿ ಬರುತ್ತಾಳೆ ಎನ್ನುವುದರ ಹಿಂದೆ

ಯಜಮಾನನಿಗೆ ಹೆಣ್ಣಿನ ದೇಹದ ಮೇಲಿನ ಹಕ್ಕು ಕಳೆದುಕೊಳ್ಳುವ ಲೈಂಗಿಕ ಭಯದಿಂದ ಹೆಣ್ಣನ್ನು ಕಾಯುವಂತೆ ಮಾಡಿದ ಗಂಡಸಿನ ಮನಸ್ಥಿತಿಗೆ ಶಾಸ್ತ್ರಗ್ರಂಥಗಳೇ ಕಾರಣ. ಹೆಣ್ಣಿನ ಬಗ್ಗೆ ಎಷ್ಟೊಂದು ನಕಾರಾತ್ಮಕ ಧೋರಣೆಯಿತ್ತು ಎನ್ನುವುದನ್ನು ಸ್ಥಿತಿಗಳ ಕಾಲದಲ್ಲಿ ಕಾಣಬಹುದು.

ಸ್ಮೃತಿಗಳು ಹೆಣ್ಣು ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲವೆನ್ನುತ್ತವೆ. ಆಕೆಯನ್ನು ಅನ್ಯಾಶ್ರಯದಲ್ಲಿರಿಸುವಾಗ ಮನು ಹೇಳಿದ ಮಾತುಗಳಿಗೆ ಇಂದಿಗೂ ಮರಣವಿಲ್ಲ. ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ, ಮುಪ್ಪಿನಲ್ಲಿ ಮಗನ ಆಶ್ರಯವನ್ನು ಹೆಣ್ಣಿಗೆ ಸೂಚಿಸುವುದರ ಹಿಂದೆ ಹೆಣ್ಣನ್ನು ಪುರುಷ ಪ್ರಧಾನ ಚೌಕಟ್ಟಿನಲ್ಲಿ ತುರುಕುವುದೇ ಆಗಿತ್ತು. ಮುಂದುವರಿದು ಆಕೆಯನ್ನು ನಿಯಂತ್ರಿಸುವುದಕ್ಕಾಗಿಯೇ ಕೌಟುಂಬಿಕ



ಜವಾಬ್ದಾರಿಯನ್ನು ವಿವಾಹದ ಮೂಲಕ ಹೇರುವ ಹೊತ್ತಿನಲ್ಲಿ ಮನು ಮದುವೆಯ ವಯಸ್ಸನ್ನು ಸ್ತ್ರೀಪುರುಷರಿಗೆ ನಿಗದಿಗೊಳಿಸುತ್ತಾನೆ. ತಂದೆಯಾದವನು ತನ್ನ ಎಂಟು ವರ್ಷದ 'ಗೌರಿ'ಯನ್ನು ಮದುವೆ ಮಾಡಿಕೊಟ್ಟರೆ ಸ್ವರ್ಗ, ಒಂಬತ್ತು ವರ್ಷದ 'ರೋಹಿಣಿ'ಯನ್ನು ಕೊಟ್ಟರೆ ವೈಕುಂಠ, ಹತ್ತು ವರ್ಷದ 'ಕನ್ಯ'ಕಳನ್ನು ಕೊಟ್ಟರೆ ಬ್ರಹ್ಮಲೋಕ, ಹನ್ನೆರಡು ವರ್ಷದ 'ವೃಷಾಲಿ'ಯನ್ನು ಕೊಟ್ಟರೆ ಗೌರವ ಎಂದು ಹೇಳಲಾಗಿದೆ. ಇದೆ ಹೊತ್ತಿನಲ್ಲಿ ವಸಿಷ್ಠ “ಹೆಣ್ಣು ಮಗುವಿಗೆ ಅದು ಬೆತ್ತಲೆಯಾಗಿ ಓಡಾಡುತ್ತಿರುವಾಗಲೇ ಮದುವೆ ಮಾಡಬೇಕೆಂದು ಹೇಳುತ್ತಾನೆ."[ಬಿ.ವಿ. ವೀರಭದ್ರಪ್ಪ: ವಿಚಾರ ಸಾಹಿತ್ಯ- ವೇದಗಳಲ್ಲಿಯ ಮಹಿಳೆಯರು] ಈ ವಿಷಯದಲ್ಲಿ ಎಲ್ಲ ಧರ್ಮಶಾಸ್ತ್ರಗಳು ಸಮ್ಮತಿಸಿವೆ. ಹೆಣ್ಣನ್ನು ಬಾಲ್ಯದಿಂದಲೇ ನಿಯಂತ್ರಿಸುವ ಗಂಡಸಿನ ಉದ್ದೇಶದ ಹಿಂದೆ ಹೆಣ್ಣಿನ ದೈಹಿಕ ಮತ್ತು ಬೌದ್ಧಿಕ ಶಕ್ತಿಯ ಭಯಕಾಡಿದೆ. ಊಳಿಗಮಾನ್ಯ ಪದ್ಧತಿಯು 'ಮನುಸಂಹಿತೆಯನ್ನು' ಸಾಮಾಜಿಕ ಶಾಸನೋಪಾದಿಯಲ್ಲಿ ಗಟ್ಟಿಗೊಳಿಸಿದ ಕಾಲ ಮಹಿಳೆಯರಿಗೆ ಅತ್ಯಂತ ಗ್ರಹಣಕಾಲವಾಗಿದೆ. ಮನುವಿನ ಪ್ರಕಾರ “ಬಾಲಯಾವಾಯುವತ್ಯಾವಾ ವೃದ್ಧಯಾ ವ್ಯಾಪಿ ಯೋಷಿತಾ! ನಸ್ವಾತಂತ್ರಣ ಕರ್ತವ್ಯಂಕಿಂಬೆತ್ಕಾರ್ಯ ಕೃಷ್ಟಷಿ” ಅಂದರೆ ಹುಡುಗಿ, ಯುವತಿ, ಮುದುಕಿ ಮನೆಯಲ್ಲಿ ತನ್ನ ಯಜಮಾನನನ್ನು ಕೇಳದೆ ಸ್ವತಂತ್ರವಾಗಿ ಯಾವ ಕೆಲಸವನ್ನು ಮಾಡಕೂಡದು. ಈ ಮಾತು ಪುರುಷ ಪ್ರಧಾನ ಸಂಸ್ಕೃತಿಯ ಮೌಲ್ಯವಾಗಿಯೆ ಅಂಗೀಕರಿಸಲ್ಪಟ್ಟಿತು. ಮುಂದುವರೆದು ಬಾಲ್ಯವಿವಾಹಕ್ಕೆ ಒಳಗಾಗುವ ಹುಡುಗಿಯರು ಗಂಡನ ಮರಣಾನಂತರ ಹೇಗೆ ಬದುಕಬೇಕು ಎಂಬುದನ್ನು ಕಠಿಣ ನಿಯಮಗಳ ಮೂಲಕ ಆಚರಣೆಯಲ್ಲಿಟ್ಟಿದ್ದರು. ಸತಿ ಪದ್ಧತಿಯ ಬಗ್ಗೆ ಇಲ್ಲಿಯವರೆಗೂ ನಮಗಿದ್ದ ತಿಳುವಳಿಕೆಯನ್ನು ಬದಲಿಸಿ ಕೊಳ್ಳುವಂತಹ ಹಲವಾರು ಸಂಗತಿಗಳು ಸ್ಮೃತಿಗಳಲ್ಲಿ ಕಾಣಿಸುತ್ತವೆ. ವರ್ಣಾಶ್ರಮ ಧರ್ಮಕ್ಕೆ ಒಳಪಟ್ಟಿದ್ದ ವೇದ ಮತ್ತು ಸ್ಮೃತಿಗಳ ಕಾಲದಲ್ಲಿ ಎಲ್ಲ ಮಹಿಳೆ ಮತ್ತು ಎಲ್ಲ ಪುರುಷರಿಗೆ ಏಕರೂಪಿ ಕಾನೂನು

ಕಟ್ಟಳೆಗಳಿರಲಿಲ್ಲ. ಕ್ಷತ್ರಿಯ ಮತ್ತು ಬ್ರಾಹ್ಮಣ ಕುಲಗಳ ಶುದ್ಧಿಗಾಗಿ ಹುಟ್ಟಿಕೊಂಡ ಕಾನೂನುಗಳು ಶೂದ್ರ ಪುರುಷನನ್ನು ಮತ್ತು ಬ್ರಾಹ್ಮಣ ಕ್ಷತ್ರಿಯ ಮಹಿಳೆಯರನ್ನು ಗುರಿಯಾಗಿಸಿಕೊಂಡಿದ್ದವು ಎಂಬುದನ್ನು ಅಂಗೀರಸನ ಹೇಳಿಕೆಯಲ್ಲಿ ಗೋಚರಿಸುತ್ತದೆ. "ಬ್ರಹ್ಮನ ಆಜ್ಞೆಯಂತೆ ಬ್ರಾಹ್ಮಣ ಹೆಂಗಸು ಸತ್ತ ಗಂಡನನ್ನು ಹಿಂಬಾಲಿಸಬಾರದು. ಬ್ರಾಹ್ಮಣ ಜಾತಿಯ ಹೆಣ್ಣು ಸತ್ತ ಗಂಡನೊಡನೆ (ಸತಿ) ಆತ್ಮಹತ್ಯೆ ಮಾಡಿಕೊಳ್ಳುವುದರಿಂದ ಅವಳಾಗಲಿ ಅವಳ ಗಂಡನಾಗಲೀ ಸ್ವರ್ಗಕ್ಕೆ ಹೋಗುವುದಿಲ್ಲ" [ಡಾ. ಸಿ. ವೀರಣ್ಣ : ಕನ್ನಡ ಕಾವ್ಯ ಕಂಡ ಹೆಣ್ಣು] ಎಂದು ಅಂಗೀರಸ ಹೇಳುವುದರ ಹಿಂದೆ ಬ್ರಾಹ್ಮಣ ಮಹಿಳೆಯರ ಬಗ್ಗೆ ಮೃದು ಧೋರಣೆಯನ್ನು ಸ್ಮೃತಿಗಳು ಹೊಂದಿದ್ದವು ಎಂಬುದನ್ನು ಗಮನಿಸಬಹುದು. ಮುಂದುವರಿದು ಇವೆ ಸ್ಪತಿಗಳು ಬೇರೆ ಬೇರೆ ಕ್ಷತ್ರಿಯ, ವೈಶ್ಯ ವರ್ಣದ ಹೆಣ್ಣು ಮಕ್ಕಳು ಸತಿ ಹೋಗುವುದನ್ನು ಕಡ್ಡಾಯಗೊಳಿಸಿವೆ. ಈ ವರ್ಣದ ಹೆಣ್ಣುಗಳು ಸತಿಹೋಗುವುದರ ಮೂಲಕ ಪತಿಗೆ ಸ್ವರ್ಗದ ಬಾಗಿಲನ್ನು ತೆರೆಯಲಾಗುತ್ತದೆ ಎಂದು ನಂಬಿಸಲಾಗಿದೆ.

ವಿವಾಹದ ಮೂಲಕ ಕುಟುಂಬದ ಚೌಕಟ್ಟು ಭದ್ರಗೊಳ್ಳುತ್ತಿರುವ ಸಂದರ್ಭದಲ್ಲಿ ಬೇರೆ ಬೇರೆ ವರ್ಣಗಳಿಗೆ ಸೇರಿದ ಹೆಣ್ಣು ಮಕ್ಕಳು ಅನುಸರಿಸಬೇಕಾದ ನಿಯಮಗಳನ್ನು



ಮನು ಸ್ಪಷ್ಟವಾಗಿ ಹೇಳಿರುವನು. "ಒಂದೇ ವರ್ಣದವರನ್ನು ವಿವಾಹವಾಗುವಾಗ ಪರಸ್ಪರ ಕೈಗಳನ್ನು ಸೇರಿಸಬೇಕು. ಕ್ಷತ್ರಿಯ ಕನ್ಯೆ ಬ್ರಾಹ್ಮಣನನ್ನು ವರಿಸುವಾಗ ಬಾಣ ಹಿಡಿಯಬೇಕು. ಉತ್ತಮ ಕುಲದವನನ್ನು ವರಿಸುವ ವೈಶ್ಯ ಕನ್ಯೆ ಕೈಯಲ್ಲಿ ಚಾಟಿ ಹಿಡಿಯಬೇಕು. ಶೂದ್ರ ಕನ್ಯೆ ಗಂಡಿನ ವಸ್ತ್ರದ ತುದಿ ಹಿಡಿಯಬೇಕು" ಇದು ವರ್ಣ ವ್ಯವಸ್ಥೆಯನ್ನು ಸ್ತ್ರೀಯರ ಮೂಲಕ ಸ್ಥಿರೀಕರಿಸುವ ಕೆಲಸವನ್ನು ಮಾಡಿದೆ. ಶೂದ್ರ ಪುರುಷ ಉಳಿದ ವರ್ಣಗಳ ಸ್ತ್ರೀಯರನ್ನು ನೋಡುವಂತೆಯೇ ಇರಲಿಲ್ಲ. ನೋಡಿದವರನ್ನು, ಚಾಪೆಯಲ್ಲಿ ಸುತ್ತಿ ಸುಡಬೇಕು ಎಂಬ ಭೀಕರ ನಿಯಮಗಳು ಸಮಾಜದಲ್ಲಿ ರೂಢಿಯಲ್ಲಿದ್ದವು. ಬ್ರಾಹ್ಮಣ ಪುರುಷ ಶೂದ್ರ ಹೆಣ್ಣನ್ನು ಮದುವೆಯಾದರೆ ಸತ್ತ ನಂತರ ನರಕಕ್ಕೆ ಹೋಗುತ್ತಾನೆ ಎನ್ನುವುದರ ಮೂಲಕ ವರ್ಣಸಂಕರಕ್ಕೆ ಸಂಬಂಧಿಸಿ ಶಾಸ್ತ್ರಾಧಿಗಳ ಸಮ್ಮತಿಯಿರಲಿಲ್ಲವೆನ್ನುವುದನ್ನು ಒತ್ತಿ ಹೇಳಲಾಗಿದೆ. ಸ್ತ್ರೀಯರಿಗೆ ಮತ್ತು ಶೂದ್ರರಿಗೆ ಮೇಲ್ಮುಖ ಚಲನೆಗೆ ಅವಕಾಶವಿರಲಿಲ್ಲ, ಹೆಣ್ಣಿನ ನಡೆನುಡಿಗಳನ್ನು ಸ್ಮೃತಿಗಳು ಹೀಗೆ ಸೂತ್ರಿಕರಿಸುತ್ತವೆ. 'ಎಳೆಯ ವಯಸ್ಸಿನಲ್ಲಿ ಹೆಣ್ಣು ಪರದೆಯ ಹಿಂದೆ ಇರಬೇಕು. ಗಂಡನ ಅಪ್ಪಣೆಯಿಲ್ಲದೆ ಅವಳು ಹೊರಗೆ ಹೋಗಬಾರದು. ಹೊರಗೆ ಹೋಗಲೇಬೇಕಾದಾಗ ಅವಳು ಸರಿಯಾಗಿ ಬಟ್ಟೆಗಳನ್ನು ಧರಿಸಬೇಕು, ಬಟ್ಟೆ ಹೇಗೆ ಧರಿಸಬೇಕೆಂದರೆ ದೇಹದ ಯಾವ ಭಾಗವೂ ಕಾಣದಂತೆ ಎಚ್ಚರಿಕೆಯಿಂದ ಮುಚ್ಚಿಕೊಂಡಿರಬೇಕು. ಜೋರಾಗಿ ನಡೆಯಬಾರದು, ವ್ಯಾಪಾರಿ ಮತ್ತು ವೃದ್ಧ ವೈದ್ಯ ಇವರನ್ನು ಬಿಟ್ಟು ಬೇರೆಯವರೊಂದಿಗೆ ಮಾತನಾಡಬಾರದು. ನಡೆಯುವಾಗ ಹಾದಿಯಲ್ಲಿ ನಗಬಾರದು ಮತ್ತು ಅನ್ಯರೊಂದಿಗೆ

ಮಾತನಾಡಬಾರದು' ಎಂದು ಹೇಳಿದ್ದು, ಕುಲೀನ ಸ್ತ್ರೀಯರಿಗೆ ಮಾತ್ರವೆಂಬುದನ್ನು ಗಮನಿಸಬೇಕು. ಯಾಕೆ ಕುಲೀನ ಸ್ತ್ರೀಯರಿಗೆ ಈ ನಿಯಮಗಳನ್ನು ಮಾಡಿರಬೇಕು? ವ್ಯಾಪಾರಿ ಮತ್ತು ವೃದ್ಧವೈದ್ಯರನ್ನು ಹೊರತುಪಡಿಸಿ, ಬೇರೆ ಗಂಡಸರೊಂದಿಗೆ ಮಾತನಾಡಬಾರದು ಎಂಬುದರ ಹಿಂದೆ ವರ್ಣಸಂಕಟದ ಭಯ ಮತ್ತು ಹೆಣ್ಣಿನ ದೇಹದ ಮೇಲಿನ ಸ್ವಾಧೀನತೆ ಕುಲಶುದ್ಧಿಯನ್ನು ಗಟ್ಟಿಗೊಳಿಸುವುದಕ್ಕಾಗಿ ಇಂತಹ ಕಟ್ಟಳೆಗಳನ್ನು ಹಾಕಿದಂತಿದೆ. ಗಂಡಿನ ದಾಸ್ಯತ್ವಕ್ಕೆ ಹೆಣ್ಣನ್ನು ನೂಕುವಾಗ ಧರ್ಮಶಾಸ್ತ್ರಗಳು ಶ್ರಮವಹಿಸಿರುವುದರ ಹಿಂದೆ ಏನಿತ್ತು ಎಂಬುದೇ ನಮ್ಮ ಹುಡುಕಾಟದ ಬಹುಮುಖ್ಯ ಸಂಗತಿ, ದೇವದಾಸಿಯರು ದೇವರು ಧರ್ಮದ ಹೆಸರಿನಲ್ಲಿ ರಾಜಪ್ರಭುತ್ವ, ಧರ್ಮ ಪ್ರಭುತ್ವದ ಉಪಭೋಗಕ್ಕಾಗಿ ಕವಲೊಡೆದ ಸ್ತ್ರೀ ಸಮುದಾಯಕ್ಕೆ ಈ ಶೃಂಗಾರ ಪ್ರಧಾನವಾದ ವಿದ್ಯೆಗಳನ್ನು ಕಲಿಯುವ ಅವಕಾಶವನ್ನು ನೀಡಿತ್ತು. ಕುಟುಂಬ ಚೌಕಟ್ಟಿನಲ್ಲಿ ಬಂಧಿಸಲ್ಪಟ್ಟ ಮಹಿಳೆಯರು ತಮ್ಮ ಲೈಂಗಿಕ ಸ್ವಾತಂತ್ರ್ಯವನ್ನು ಕಿತ್ತುಕೊಂಡ ಸಮಾಜವೇ ಇನ್ನೊಂದು ಸಮುದಾಯಗಳ ಸ್ತ್ರೀಯರಿಗೆ ಕುಟುಂಬವನ್ನು ನಿರಾಕರಿಸಿ ಲೈಂಗಿಕ ಸ್ವಾತಂತ್ರ್ಯ ನೀಡಿತ್ತು. ಸಾಮಾಜಿಕ ಗೌರವದಿಂದ ವಂಚಿತರನ್ನಾಗಿಸಿದ ಈ ಸಮುದಾಯದ ಸ್ತ್ರೀಯರು ಹೀನಕುಲವೆಂದು ಕರೆಯಲ್ಪಟ್ಟ ಕುಲದಿಂದ ಬಂದವರಾಗಿದ್ದರು. ಈ ಕುಲಗಳಲ್ಲಿ ಹೆಣ್ಣು ಸಂತತಿಗೆ ಬೇಡಿಕೆಯಿತ್ತು. ಕುಲಕಸುಬನ್ನು ಮುಂದುವರೆಸಿಕೊಂಡು ಹೋಗುವ ವಾರಸುದಾರಿಕೆ ಹೆಣ್ಣುಮಗುವಿಗಿತ್ತು.

ಧರ್ಮಶಾಸ್ತ್ರಗಳ ರಕ್ಷಣೆಗಾಗಿ ಹುಟ್ಟಿದಂತಿರುವ ಕೌಟಿಲ್ಯನ ಅರ್ಥಶಾಸ್ತ್ರ ರಾಜಕೀಯ ಕಾರಣಗಳಿಂದ ಇನ್ನಷ್ಟು ಸ್ತ್ರೀ ಶೋಷಣೆಗೆ ಹೊಸ ಬಗೆಯ ಹಾದಿಗಳನ್ನು ತೆರೆಯಿತು.



ಗೃಹಿಣಿ-ಗಣಿಕೆಯರೆಂದು ಸಮುದಾಯದ ಮಧ್ಯದಲ್ಲಿ ಗೋಡೆ ಕಟ್ಟುವುದರ ಮೂಲಕ ಸ್ತ್ರೀ ಸಮುದಾಯವನ್ನು ಒಡೆದು ನಿರಂತರವಾಗಿ ಪರಸ್ಪರ ಸಾಂಸ್ಕೃತಿಕವಾಗಿ ಕದನಕ್ಕಿಳಸುವಂತೆ ಮಾಡಿದೆ. ಧರ್ಮಶಾಸ್ತ್ರಗಳು ವಾಸ್ತವವಾಗಿ ಹೆಣ್ಣಿಗೆ ಮಾಡಬಾರದೆಂದು ನಿಷೇಧಿಸಿದ ವಿಷಯಗಳನ್ನು ಅರ್ಥಶಾಸ್ತ್ರ ಮಾಡಲು ಪ್ರಚೋದಿಸಿತು. ಕೇವಲ ನಿಯಮಗಳ ರೂಪದಲ್ಲಿದ್ದ ವೇದ, ಸ್ಮೃತಿಕಾರರ ಮಾತುಗಳಿಗೆ ಕಾನೂನು, ದಂಡ, ಶಿಕ್ಷೆಯೆಂಬವುಗಳನ್ನು ಆಡಳಿತದ ಭಾಗವಾಗಿಸಿದ ಅರ್ಥಶಾಸ್ತ್ರ ಹೆಣ್ಣಿಗೆ ಸಂಪೂರ್ಣ ದಿಗ್ಬಂಧನವನ್ನು ಹಾಕಿತು. ಹೆಣ್ಣಿನ ಸ್ತ್ರೀಧನ, ಆಸ್ತಿ ಹಕ್ಕುಗಳ ಮೇಲೆ ರಾಜಾಧಿಕಾರವನ್ನು ಹೇರಿತು. ಗಣಿಕಾ ಸ್ತ್ರೀಯರು ರಾಜಾದಾಯ ಕೊಡಬೇಕು ಎನ್ನುವುದರ ಮೂಲಕ ವೇಶ್ಯಾವೃತ್ತಿಯನ್ನು ಸೇವಾ ತೆರಿಗೆಯ ವಲಯಕ್ಕೆ ತರುವುದರ ಮೂಲಕ ರಾಜನ ಸ್ವತ್ತಾಗಿಯೆ ಈ ವೇಶ್ಯೆಯರು ಇರಬೇಕು. ರಾಜ ಹೇಳಿದವನಿಗೆ ವೇಶ್ಯ ತನ್ನ ದೇಹವನ್ನು ಒಪ್ಪಿಸದಿದ್ದರೆ ಅವಳು ಸಾರ್ವಜನಿಕವಾಗಿ ಶೂದ್ರನ ಕೈಯಿಂದ ಚಡಿ ಏಟು ತಿನ್ನುವುದನ್ನು ಕಾನೂನಾಗಿಸಿದ. ಪ್ರತಿ ತಿಂಗಳು ಪ್ರತಿಯೊಬ್ಬ ವೇಶ್ಯ ತನ್ನ ಎರಡು ದಿನದ ಸಂಪಾದನೆಯನ್ನು ರಾಜನಿಗೆ ಕೊಡಬೇಕು ಎಂದು ಕಾನೂನು ಜಾರಿಗೊಳಿಸುವಾಗ ಕೌಟಿಲ್ಯನಿಗೆ ವೇಶ್ಯಾವೃತ್ತಿ ನೈತಿಕ

ಪ್ರಶ್ನೆಯಾಗಿ ಕಾಡಿದಂತಿಲ್ಲ. ಹೆಣ್ಣಿನ ಎಲ್ಲ ರೀತಿಯ ಒಡೆತನವನ್ನು ಗಂಡಸಿಗೆ ವಹಿಸುವುದರ ಮೂಲಕ ಹೆಣ್ಣನ್ನು ಅಬಲಾಸ್ಥಾನಕ್ಕೆ ನೂಕಿದ. ದೇವರ ಸೇವೆಗೆಂದ ಮಹಿಳಾ ಸಮುದಾಯವೊಂದನ್ನು ಹುಟ್ಟುಹಾಕುವುದರ ಮೂಲಕ ಪುರುಷ ಕೌಟುಂಬಿಕ ಚೌಕಟ್ಟಿನಾಚೆಗೂ ಲೈಂಗಿಕ ಉಪಭೋಗದ ಉಪಕರಣವೊಂದನ್ನು ಎಗ್ಗಿಲ್ಲದೆ ನಿರ್ಮಿಸಿದ್ದ.

ಧರ್ಮ ಶಾಸ್ತ್ರಗಳಿಂದ ವೈದಿಕ ಯುಗದಲ್ಲಿ ಬಂಧಿಸಲ್ಪಟ್ಟ ಮಹಿಳೆಯ ಬದುಕಿಗೆ ಸಂಬಂಧಿಸಿ ನಂತರ ಬಂದ ಧರ್ಮಗಳು ಉದಾರವಾಗಿ ನಡೆದುಕೊಂಡಂತೆ ಹೊರಮೈಯಲ್ಲಿ ಕಾಣಿಸಿದರೂ ಒಳಮೈಯಲ್ಲಿಯ ಗಾಯದ ಉರಿ ಹಾಗೆಯೆ ಉಳಿದಿತ್ತು. ಸ್ತ್ರೀ ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲವೆಂದು ಸಾರುತ್ತ ಬಂದಿದ್ದ ಹಿಂದೂ ಧರ್ಮಕ್ಕೆ ಪ್ರತಿರೋಧ ಒಡ್ಡುತ್ತ ಬಂದ ಯಾವ ಧರ್ಮಗಳು ಮಹಿಳೆಯರನ್ನು ಬಂಧನದಿಂದ ಸಂಪೂರ್ಣವಾಗಿ ಮುಕ್ತಗೊಳಿಸುವ ಸಾಹಸಕ್ಕೆ ಕೈಹಾಕಲಿಲ್ಲ. ಹಿಂದೂ ಧರ್ಮದ ತಾತ್ವಿಕತೆಯನ್ನು ಪ್ರಬಲವಾಗಿ ವಿರೋಧಿಸುತ್ತ ಹೊಸ ಸಮಾಜದ ಸಾಧ್ಯತೆಗಳನ್ನು ತೋರಿಸಿದ ಬೌದ್ಧಧರ್ಮ ಹೆಣ್ಣಿನ ವಿಷಯದಲ್ಲಿ ಅಷ್ಟೊಂದು ಮುಕ್ತತೆಯನ್ನು, ಉದಾರತೆಯನ್ನು ತೋರಿಸಲಿಲ್ಲ. ಧರ್ಮ ಪ್ರಸಾರಕ್ಕೆ ಹುಟ್ಟಿಕೊಂಡ ಸಂಘದಲ್ಲಿ ಸ್ತ್ರೀಯರನ್ನು ಸೇರಿಸಿಕೊಳ್ಳುವ ವಿಚಾರದಲ್ಲಿ ಬುದ್ಧ ಪೂರ್ಣ ಮನಸ್ಸಿನಿಂದ ಒಪ್ಪಿಗೆ ನೀಡಿದಂತಿಲ್ಲ. 'ಸುಲ್ಲವಗ್ಗ'ದಲ್ಲಿ ಬುದ್ಧ ಆನಂದನಿಗೆ ಹೇಳಿರುವ ಈ ಮಾತುಗಳಲ್ಲಿ 'ಕುಟುಂಬ' ಬಹುವಾಗಿ ಕಾಡಿದಂತಿದೆ. ಆನಂದ "ಸ್ವೀ ಗೃಹಕೃತ್ಯಜೀವನದಿಂದ ಮುಕ್ತಳಾಗದೆ ಇದ್ದಿದ್ದರೆ, ನನ್ನ ಧರ್ಮದಡಿಯಲ್ಲಿ ಗೃಹವಿಲ್ಲದವಳಾಗದೆ ಇದ್ದಿದ್ದರೆ, ಧರ್ಮ ಬಹಳ ಕಾಲ ಬದುಕುತ್ತಿತ್ತು. ಕೊನೆಯ ಪಕ್ಷ ಸಾವಿರ ವರ್ಷಗಳಷ್ಟು ಇರುತ್ತಿತ್ತು. ಆದರೆ ಹೆಣ್ಣು ಗೃಹಕೃತ್ಯಗಳನ್ನು ತೊರೆದಿರುವುದರಿಂದ ಅದು ಹೆಚ್ಚೆಂದರೆ ಐನೂರು ವರ್ಷ ಬಾಳೀತು" ಹೆಣ್ಣು ಧರ್ಮ ಸ್ವೀಕಾರ ಮಾಡಿದ್ದರಿಂದ ಧರ್ಮದ ಆಯುಷ್ಯ ಕಡಿಮೆಯಾಗುತ್ತದೆಂಬ ಅಳುಕು ಬುದ್ಧನಿಗಿತ್ತು. ಈ ಅಳುಕಿಗೆ ಕುಟುಂಬದ ಜವಾಬ್ದಾರಿ ಮತ್ತು ಹೆಣ್ಣಿನ ಸಂತಾನೋತ್ಪತ್ತಿ ಕಾರಣವಾಗಿರಬೇಕೆಂದು ಭಾವಿಸಬಹುದು. ಕುಟುಂಬದ ಸಂಪೂರ್ಣ ಹೊಣೆಗಾರಿಕೆಯನ್ನು ಹೆಣ್ಣಿಗೆ



ಹೊರಿಸಲಾಗಿತ್ತು. ಇದರಿಂದ ಮಹಿಳೆ ಬಿಡುಗಡೆಗೊಳ್ಳುವುದೆಂದರೆ ಕುಟುಂಬದ ಚೌಕಟ್ಟು ಮುರಿದಂತೆ ಎಂಬುದು ಬುದ್ಧನಿಗೆ ಅರ್ಥವಾಗಿತ್ತು. ಸಂಸಾರವನ್ನು ಬಂಧನವೆಂದು ಗಂಡಿಗೆ ಹೇಳಿದಂತೆ ಹೆಣ್ಣಿಗೆ ಹೇಳಿಲ್ಲ. ಸಂಸಾರ ಗಂಡಿಗೆ ಬಂಧನವಾದರೆ ಹೆಣ್ಣಿಗೆ ಕರ್ತವ್ಯ ಮತ್ತು ಕಡ್ಡಾಯವಾಗಿ ಪಾಲಿಸಬೇಕಾದ ಮೌಲ್ಯವೆಂದು ಒಪ್ಪಿಸಲಾಗಿದೆ. ಹೀಗಾಗಿಯೆ ಬುದ್ಧನಂತವರಿಗೂ ಸ್ತ್ರೀಯರನ್ನು ಹೊರತುಪಡಿಸಿ ಕುಟುಂಬವನ್ನು ಸರಿಭಾವಿಸಲು ಸಾಧ್ಯವಾದಂತಿಲ್ಲ.

ಧರ್ಮಮಾರ್ಗದಲ್ಲಿ ನಡೆಯಲು ಬಯಸುವ ಗಂಡಸಿಗೆ ಸ್ತ್ರೀ ಬಹುದೊಡ್ಡ ಬಂಡೆಯಾಗಿ ಎಲ್ಲ ಧರ್ಮಗಳಿಗೂ ಕಾಣಿಸಿರುವಳು. ಸ್ತ್ರೀ ಕುರಿತಹಾಗೆ ಬುದ್ಧನಂತಹವರಿಗೂ ಭಯ ಕಾಡಿದೆ. ಶಿಷ್ಯನಾದ ಆನಂದ ಹೆಣ್ಣಿನೊಂದಿಗೆ ಹೇಗೆ ನಡೆದುಕೊಳ್ಳಬೇಕು ಎಂದು ಕೇಳಿದ್ದಕ್ಕೆ ಬುದ್ಧ "ಸ್ತ್ರೀಯರನ್ನು ನೋಡಲೇಬಾರದು, ನೋಡಲೇಬೇಕಾಗಿ ಬಂದರೆ

ಅವರೊಂದಿಗೆ ಮಾತನಾಡಬಾರದು, ಅದೂ ಅನಿವಾರ್ಯವಾದರೆ ತುಂಬಾ ಎಚ್ಚರದಿಂದಿರಬೇಕು" ಎಂದು ಹೇಳುವಲ್ಲಿ ಬುದ್ಧಗುರುದೇವನಿಗಿದ್ದ ಒತ್ತಡಗಳೇನು ಎಂಬುದು ಕಾಲವೇ ಹುಡುಕಬೇಕಾದ ಸಂಗತಿ. ಹೆಣ್ಣಿನ ಬಗ್ಗೆ ಇದ್ದ ದೇಹ ಮೂಲದ ಭಯ ಬುದ್ಧನಂತವರಿಗೂ ಕಾಡಿರಬಹುದೆ? ಪುರುಷನ ಮನಸಿನ ಚಂಚಲತೆಯನ್ನು ಒಪ್ಪಿಕೊಳ್ಳದ ಸಮಾಜ ಸ್ತ್ರೀಯರನ್ನು ದೂಷಿಸುತ್ತಿರುವುದನ್ನು ಗಮನಿಸಬಹುದು. ಸ್ತ್ರೀಯಿಲ್ಲದೆ ಕುಟುಂಬವನ್ನು ಕಲ್ಪಿಸಿಕೊಳ್ಳುವುದೆ ಅಸಾಧ್ಯದ ಸಂಗತಿಯಾಗಿ ಎಲ್ಲ ಕಾಲದ ಸಮಾಜ ಧರ್ಮಗಳಿಗೆ ಕಾಡಿರುವುದರಿಂದ ಹೆಣ್ಣನ್ನು ಕುಟುಂಬಕ್ಕೆ ಸೀಮಿತಗೊಳಿಸುತ್ತಲೆ ಗಂಡಿಗೆ ಕುಟುಂಬದೊಂದಿಗೆ ಅದರ ಜವಾಬ್ದಾರಿ ಇಲ್ಲದೆಯೂ ಬದುಕುವ ಮಾರ್ಗಗಳನ್ನು ಸಮಾಜ ಧರ್ಮಗಳು ಮುಕ್ತವಾಗಿಯೆ ತೆರೆದಿವೆ. ಹೆಣ್ಣಿಗೆ ಮಾತ್ರ ಯಾವುದೆ ಆಯ್ಕೆಗಳನ್ನು ನಿರಾಕರಿಸಿ "ಗೃಹಿಣಿ ಗೃಹಮುಚ್ಚತೆ ಸ್ವರ್ಗದಪಿಗರಿಯಸಿ" ಎನ್ನಲಾಗಿದೆ. ಈ ಸೂತ್ರದಿಂದಲೇ ಹೆಣ್ಣಿನ ಚರಿತ್ರೆಗೆ ಉರುಳು ಬಿಗಿಯಲಾಗಿದೆ.

ಕುಟುಂಬ ಧರ್ಮವನ್ನು ಬುದ್ಧ ಮಹಿಳೆಯರು ಮಾತ್ರ ಪಾಲಿಸಲು ಸಾಧ್ಯವೆಂದು ಭಾವಿಸಿದ ಕಾರಣ ಲಗ್ನವಾಗಲಿರುವ ಮಹಿಳೆಯರಿಗೆ ಉಪದೇಶ ನೀಡುತ್ತಾನೆ. "ನಾರಿಯರೆ ನೀವು ಗಂಡನ ಮನೆಯಲ್ಲಿ ಬೇಗನೆ ಏಳಿರಿ, ಎಲ್ಲರೂ ಮಲಗಿದ ನಂತರ ಮಲಗಿರಿ. ಸಂತೋಷದಿಂದ ಮನೆಗೆಲಸ ಮಾಡಿರಿ. ಮನೆಯನ್ನು ಓರಣವಾಗಿರಿಸಿರಿ, ಮೃಧುಭಾಷಿಣಿಯರಾಗಿರಿ. ಈ ನಡವಳಿಕೆಯನ್ನು ಮದುವೆಯಾಗುವ ಪೂರ್ವದಲ್ಲಿ ನೀವು ಗಳಿಸಿಕೊಳ್ಳಿರಿ. ನೀವು ಗಂಡನ ಮನೆಯಲ್ಲಿ ಎಲ್ಲರ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳಿರಿ, ಅವರವರಿಗೆ ಅನುಕೂಲವಾದ ಊಟವನ್ನು ಬಡಿಸಿರಿ. ನೀವು ಗಂಡನ ಸಂಪತ್ತನ್ನು ಸರಿಯಾಗಿ ಕಾಯ್ದುಕೊಳ್ಳಿರಿ. ನೀವು ಹಾಗೆ ಮಾಡಿದರೆ ಸತ್ತನಂತರ ಅಪ್ಸರೆಯಾಗುತ್ತಿರಿ[ಪುನರುದ್ಧರಣೆ: ಹೊನ್ನಮ್ಮನ ಹದಿಬದೆಯ ಧರ್ಮ, ಡಾ. ಮಧುವೆಂಕಾರೆಡ್ಡಿ, ಪ-೩೫]. ಈ ಮಾತುಗಳನ್ನು ನೋಡಿದರೆ ವೈದಿಕ ನೆಲೆಯ ಹೆಣ್ಣಿನ ಸ್ಥಾನವನ್ನು ಬುದ್ಧ ಒಪ್ಪಿಕೊಂಡ ಹಾಗೆ ತೋರುತ್ತದೆ. ಹೀಗಿರುವ ಬುದ್ಧ ಆಮ್ರಪಾಲಿಯಂಥವಳೊಂದಿಗೆ ನಡೆದುಕೊಂಡದನ್ನು ಸ್ತ್ರೀ ಭಿಕ್ಕುಗಳ ಒಂದು ಪ್ರತ್ಯೇಕ ಗುಂಪೇ ಬೌದ್ಧಧರ್ಮದಲ್ಲಿತ್ತು ಎಂಬುದು ಕೂಡಾ ಹೇಗೆ ಪರಿಭಾವಿಸಬೇಕು ಎಂಬುದು

ಪ್ರಶ್ನೆಯಾಗಿ ಕಾಡುತ್ತಿದೆ. ಸ್ತ್ರೀ ಭಿಕ್ಕುಗಳಿಗೆ ಕೆಲವು ಕಠಿಣ ನಿಯಮಗಳ ಪಾಲನೆಯನ್ನು ಬೋಧಿಸಲಾಗಿತ್ತು. ಒಬ್ಬ ಭಿಕ್ಕುನಿ ನೂರು ವರ್ಷ ಮುಕ್ತಿಗಾಗಿ ಬೇಡಿ ಕಾಲಕಳೆದಿದ್ದರೂ ಆಗ ತಾನೇ ಸನ್ಯಾಸ ಸ್ವೀಕರಿಸುವ ಭಿಕ್ಕುವಿಗೆ ಅವಳು ಎದ್ದು ನಿಂತು ನಮಸ್ಕರಿಸಿ ಎಲ್ಲ ಗೌರವಗಳನ್ನು ತೋರಬೇಕು. ಭಿಕ್ಕು ಆದವಳು ಯಾವುದೇ ಕಾರಣಕ್ಕೆ ಭಿಕ್ಕುವನ್ನು ಅವಮಾನಿಸಬಾರದು ಅಥವಾ ನಿಂದಿಸಬಾರದು. ಅವಳು ಅಧಿಕಾರಯುತವಾಗಿ ಭಿಕ್ಕುಣಿಯರಿಗೆ ವಂದಿಸುವುದನ್ನು ನಿಲ್ಲಿಸಬೇಕು. ಆದರೆ ಭಿಕ್ಕುಣಿಯರು ಭಿಕ್ಕುಗಳಿಗೆ ವಂದಿಸುವುದನ್ನು ಮರೆಯಬಾರದು' ಎಂದು ಹೇಳುವಲ್ಲಿ ಹೆಣ್ಣಿನ ಆತ್ಮಗೌರವವನ್ನು ನಿರಾಕರಿಸಲಾಗಿದೆ. ಪುರುಷಲಿಂಗಿಯಾಗಿ ಹುಟ್ಟುವುದೇ ಶ್ರೇಷ್ಠವೆಂಬ ವೈದಿಕ ಹಿತಾಸಕ್ತಿಯನ್ನು ಬುದ್ಧನಂತವರು ಬೆಂಬಲಿಸಿದ ಹಾಗಿದೆ. ಹೆಣ್ಣಿನ ಅನುಭವ, ವಯಸ್ಸು, ಜ್ಞಾನ, ಶಕ್ತಿ ಯಾವುದು ಪರಿಗಣಿಸಲ್ಪಡುವ ಸಂಗತಿಗಳೇ ಅಲ್ಲವೆನ್ನುವ ಧೋರಣೆ ಎಲ್ಲ ಕಾಲದಲ್ಲಿಯೂ ಸಾಮಾಜೀಕರಣಗೊಂಡಂತಿದೆ.

ಎಂತಹ ಮಹಿಳೆಯರು ಬುದ್ಧನ ಕಾಲದಲ್ಲಿ ಸಂಘಕ್ಕೆ ಸೇರಿದ್ದು ಎನ್ನುವುದನ್ನು ಗಮನಿಸುವುದಾದರೆ, ಕೌಟುಂಬಿಕ ಸುಭದ್ರ ಚೌಕಟ್ಟಿನಲ್ಲಿ ಬಂದಿಸಲ್ಪಟ್ಟವರಲ್ಲದವರು. ಬಡತನದ ಬೇಗೆಯಲ್ಲಿ ಬೆಂದು ಬದುಕು ಬರ್ಬರವೆಂದು ಭಾವಿಸಿದ ಮಹಿಳೆಯರು, ಒಂಟಿತನದ ಭಯವನ್ನು ನೀಗಿಕೊಳ್ಳುವ ಹಂಬಲದ ಮಹಿಳೆಯರು, ಕೌಟುಂಬಿಕ ಹಿಂಸೆ, ರೋಗರುಜಿನಗಳಿಂದ ಬಳಲುತ್ತಿದ್ದ ಮಹಿಳೆಯರು ಬೌದ್ಧ ಭಿಕ್ಕುಣಿಯರಾಗಿ ನೆಮ್ಮದಿ ಕಾಣುವ ಕಾರಣದಿಂದ ಸಂಘ ಸೇರಿರುವರು. ಗಂಡನನ್ನು ಕಳೆದುಕೊಂಡು ವಿಧವೆಯರಾಗಿ ಸಾಮಾಜಿಕ ಅಪಮಾನಗಳಿಂದ ಬಿಡುಗಡೆ ಹೊಂದಲು ಮತ್ತು ರಕ್ಷಣೆ ಪಡೆಯಲು, ಮಕ್ಕಳಿಲ್ಲದೆ ಕುಟುಂಬದ ಆಶ್ರಯತಪ್ಪಿ ಅನಾಥ ಪ್ರಜ್ಞೆಯಿಂದ ಬಳಲುತ್ತಿದ್ದ ಮಹಿಳೆಯರಿಗೆ ಸಂಘ ಪರ್ಯಾಯ ಬದುಕನ್ನು ಕಲ್ಪಿಸಬಹುದು ಎಂಬ ನಿರೀಕ್ಷೆಯಿಂದ ಬಂದ ಮಹಿಳೆಯರ ಬಹುದೊಡ್ಡ ಗುಂಪೇ ಬುದ್ಧನ ಸಂಘದಲ್ಲಿ ಭಿಕ್ಕುಣಿಯರಾಗಿ ಧರ್ಮಪ್ರಚಾರದ ಕಾರ್ಯದಲ್ಲಿ ತೊಡಗಿಕೊಂಡಿರುವರು. ಇಂತಹ ನೆಲೆಯಿಂದ ಬಂದ ಮಹಿಳೆಯರು ಎಳೆಯ ವಯಸ್ಸಿನ ಗಂಡು ಭಿಕ್ಕುಗಳನ್ನು ವಿಚಲಿತರನ್ನಾಗಿಸಬಹುದು ಎಂಬ ಭಯದ ಕಾರಣದಿಂದ ಕಠಿಣ ನಿಯಮಗಳನ್ನು ಮಹಿಳಾ ಭಿಕ್ಕುಣಿಯರಿಗೆ ಹಾಕಿದಂತಿದೆ. ಇದರ ಮಧ್ಯದಲ್ಲಿಯೂ ಮಹಿಳೆಯರು ಬಿಡುಗಡೆಗೊಂಡು ಬೌದ್ಧ ಧರ್ಮವನ್ನು ಸ್ವೀಕರಿಸಿದ್ದರ ಕುರಿತು ಅನೇಕ ಉಲ್ಲೇಖಗಳಿವೆ. ಥೇರೀಗಾಥಾದಲ್ಲಿ ಮುತ್ತಾಳ ಕುರಿತಂತಿರುವ ಉಲ್ಲೇಖವೊಂದು ಹೀಗಿದೆ : "ಕೋಸಲದ ಒಬ್ಬ ಬಡಬ್ರಾಹ್ಮಣ ಚಿಕ್ಕವಯಸ್ಸಿನಲ್ಲಿಯೇ ಮಗಳು 'ಮುತ್ತಾಳ'ನ್ನು ಗೂನು ಬೆನ್ನಿನ ಮುದುಕನೊಬ್ಬನಿಗೆ ಧಾರೆ ಎರೆದಿದ್ದ. ಈ ಮದುವೆಯನ್ನು ನಿರಾಕರಿಸಿ ಕುಟುಂಬ, ಗಂಡನನ್ನು ತ್ಯಜಿಸಿ ಬೌದ್ಧ ಧರ್ಮ ಸ್ವೀಕರಿಸಿದೆ ಎಂದು ಒಂದು ಗಾಥಾದಲ್ಲಿ ಹೇಳಿರುವಳು" .

**"ಆಹಾ, ಕಡೆಗೂ ನಾನು ಮುಕ್ತಳು, ಅದೆಷ್ಟು ಅದ್ಭುತ ಸ್ವಾತಂತ್ರ್ಯ!**

**ಮೂರು ವಾವಸ್ತುಗಳಿಂದ ನಾನು ಮುಕ್ತಳು;**

**ಬೀಸುವ ಕಲ್ಲು, ಒನಕೆ ಮತ್ತು ಗೂನು ಬೆನ್ನಿನ ಗಂಡ**

**ಯಾವುದೂ ಈಗಿಲ್ಲ. ಆದರಷ್ಟೇ ಅಲ್ಲ;**

**ನಾನು ಮರುಹುಟ್ಟು ಮತ್ತು ಸಾವಿನಿಂದಲೂ ಮುಕ್ತಳು,**



ನನ್ನನ್ನು ಜಗ್ಗಿ ಎಳೆಯುತ್ತಿದ್ದ ಎಲ್ಲವನ್ನೂ ದೂರ ಬೀಸಾಡಿದ್ದೇನೆ" [ಲೋಕಾಯತ: ಅನುವಾದ, ಜಿ.ರಾಮಕೃಷ್ಣ, ಪು.೩೨೮] ಹುಟ್ಟಿನಾರಭ್ಯ ಬಂಧನದಲ್ಲಿದ್ದ ಹೆಣ್ಣುಜೀವ ಬಿಡುಗಡೆ ಹೊಂದಿದಾಗಿನ ಅನುಭೂತಿಯನ್ನು ಹೇಳಿಕೊಳ್ಳುವಾಗ ಬಂಧನದ ಪರಿಕರಗಳಲ್ಲಿ ನಿರ್ಜೀವ ವಸ್ತುಗಳಾದ ಬೀಸುವಕಲ್ಲು, ಒನಕೆಯ ಜೊತೆಗೆ ಗೂನು ಬೆನ್ನಿನ ಗಂಡನನ್ನು ಸಮೀಕರಿಸಿದ್ದು ಚಿಂತನೆಗೆ ತೊಡಗಿಸುತ್ತದೆ. ಇಲ್ಲಿಯವರೆಗೂ ವಸ್ತುವಿನ ಜೊತೆಗೆ ಹೆಣ್ಣನ್ನು ನಿಲ್ಲಿಸಿದ್ದನ್ನು ನೋಡಿದ್ದೇವೆ. ಆದರೆ ಇಲ್ಲಿ ಮುತ್ತಾ ಯಾವ ವ್ಯವಸ್ಥೆ ಯಾವ ವ್ಯಾಖ್ಯಾನವನ್ನು ಹೆಣ್ಣಿನ ಕುರಿತು ಮಾಡಿಕೊಂಡು ಬಂದಿತ್ತೋ ಅದೇ ಮಾದರಿಯ ಆಯುಧದ ಮೂಲಕವೆ ಸಮಾಜವನ್ನು ಎದುರಿಸಿ ಹೊರಬಂದು ತನ್ನ ಆಯ್ಕೆಯ ಹಕ್ಕನ್ನು ಬದುಕಿನ ಹಕ್ಕೆಂದು ಹೇಳುತ್ತಾಳೆ. ಬೀಸುವ ಕಲ್ಲು, ಒನಕೆ, ಗೂನು ಬೆನ್ನಿನಿಂದ ಬಿಡುಗಡೆ ಹೊಂದುವುದೆಂದರೆ ಕುಟುಂಬ ಚೌಕಟ್ಟನ್ನು ಮೀರಿ ಬರುವುದೆ ಆಗಿದೆ. ಒನಕೆ, ಬೀಸುವ ಕಲ್ಲುಗಳ ಕೇವಲ ಸಂಕೇತಗಳೂ ಅಲ್ಲ, ವಸ್ತುಗಳು ಅಲ್ಲ. ಪುರುಷಪ್ರಧಾನ ಸಮಾಜದ ಕುಟುಂಬದಲ್ಲಿ ಒನಕೆಯಿಂದ ಪದಾರ್ಥಗಳನ್ನು ಕುಟ್ಟಿದಂತೆ ಬೀಸುಕಲ್ಲಿನಿಂದ ಧಾನ್ಯಗಳನ್ನು ನುರಿಸಿದಂತೆ ಹೆಣ್ಣು ಜೀವನವನ್ನು ಹಿಂಸಿಸಲಾಗುತ್ತಿತ್ತು. ಇದರೊಂದಿಗೆ ಗೂನು ಬೆನ್ನಿನ ಗಂಡನು ಸೇರಿಕೊಂಡಿದ್ದ ಇಂತಹ ಹಿಂಸೆಯಿಂದ ಬಿಡುಗಡೆ ಹೊಂದುವುದೆಂದರೆ 'ಮರುಹುಟ್ಟು ಪಡೆದ ಹಾಗೆನೇ ಸಾವಿನಿಂದಲೂ ಮುಕ್ತಳು ಎಂದು ಚೇತೋಹಾರಿಯಾಗಿ ಮಾತನಾಡುತ್ತಾಳೆ. ಕೌಟುಂಬಿಕ ಹಿಂಸೆಯಿಂದಾಗಿ ನಿತ್ಯ ಸಾಯುವ ಕ್ರಿಯೆಯಿಂದ ಬಿಡುಗಡೆ ಹೊಂದುವುದರ ಮೂಲಕ ಗಾಳಿ ಬೆಳಕಿನ ಹೊರಲೋಕದಲ್ಲಿ ತನ್ನ ಅಸ್ಮಿತೆಯನ್ನು ದಾಖಲಿಸುತ್ತಲೇ ಒಳಲೋಕ ಜಗ್ಗಿ ಎಳೆಯುತ್ತಿದ್ದವುಗಳನ್ನೆಲ್ಲ ಕಿತ್ತು ಬಿಸಾಡುವುದೆಂದರೆ ವಿಸ್ಮೃತಿಗೆ ಒಳಗಾಗದೆ ಮುಕ್ತ ಮುಕ್ತಳಾದ ಎನ್ನುತ್ತಾಳೆ. ಕೌಟುಂಬಿಕ ಹಿಂಸೆಯಿಂದ ಬಿಡುಗಡೆ ಹೊಂದಿ ಸಂಘ ಸೇರಿ ಭಿಕ್ಕುನಿಯರಾಗಿ ಬದುಕಲೆಂದು ಬಂದವರಿಗೆ ಬುದ್ಧಗುರು ಪರ್ಯಾಯವನ್ನು, ಹಲವು ಗೆರೆಗಳನ್ನು ಎಳೆಯುವುದರ ಮೂಲಕ ತೋರಿಸಿದ. ಈ ಕಾಲದಲ್ಲಿ ಒಂದು ಸಂಗತಿಯೆಂದರೆ ಸತಿ ಸಹಗಮನಕ್ಕೊಳಗಾಗುವುದರ ಕುರಿತು ವಿರೋಧಗಳಿರುವುದನ್ನು ಗಮನಿಸಬೇಕು. ಹೀಗಾಗಿಯೇ ವಿಧವೆಯರೆ ಭಿಕ್ಕುನಿಯರಾಗುತ್ತಿದ್ದರು. ಹೆಣ್ಣಿಲ್ಲದೆ ಕುಟುಂಬವನ್ನು ಕಲ್ಪಿಸಿಕೊಳ್ಳುವುದು ಬುದ್ಧನಂತಹವರಿಗೂ ಸಾಧ್ಯವಾದಂತಿಲ್ಲ. ವಾರಸುದಾರಿಕೆಯ ಪಾವಿತ್ರತೆಯ ಪ್ರಶ್ನೆಗಳು ಕಾಡಿರಬಹುದು.

ಅದೇ ರೀತಿ ಜೈನಧರ್ಮವು ಮಹಿಳೆಯ ಬದುಕಿನಲ್ಲಿ ಮಹತ್ತರ ಬದಲಾವಣೆಗೆ ಕಾರಣವಾಗಬಹುದಾದ್ದೇನನ್ನು ಹೇಳಲಿಲ್ಲ. ಧಾರ್ಮಿಕವಾಗಿ ಮಹಿಳೆಯರಿಗೆ ಮೋಕ್ಷದ ಬಾಗಿಲನ್ನು ತೆರೆದವರು

ಶ್ವೇತಾಂಬರರು, ಸ್ತ್ರೀಯರೂ ಸನ್ಯಾಸಿನಿ(ಕಂತಿ)ಯರಾಗಿ ಧರ್ಮ ಪ್ರಚಾರಕರಾಗುವ ಅವಕಾಶವಿತ್ತು. ಕಂತಿಯಾಗಿ ಧರ್ಮಕಾರ್ಯದಲ್ಲಿ ತೊಡಗಬಯಸುವ ಮಹಿಳೆಯರು ಯಾರ ಅಪ್ಪಣೆಗಾಗಿ ಕಾಯಬೇಕಾಗಿರಲಿಲ್ಲವೆಂಬುದೊಂದೇ ಈ ಧರ್ಮ ಮಹಿಳೆಯರಿಗಾಗಿ ಮಾಡಿದ ಮಹದುಪಕಾರ. ಬೌದ್ಧ ಭಿಕ್ಕುನಿಯರಿಗಿದ್ದ ನಿಯಮಗಳೇ ಜೈನ ಧರ್ಮದ ಕಂತಿಯರಾದವರಿಗೂ ಇದ್ದವು. ಗಂಡಸರಿಗೆ ಮಾತ್ರ ಮೋಕ್ಷದ ಮಾರ್ಗ ತೆರೆದಿದೆ. ಹೆಣ್ಣು ಮೋಕ್ಷ ಬಯಸುವಂತಿರಲಿಲ್ಲ. ಹೆಣ್ಣು ಭವದಿಂದ ಬಿಡುಗಡೆ ಹೊಂದಿ ಮೋಕ್ಷ ಹೊಂದಬೇಕಾದರೆ ಗಂಡು ಜೀವವಾಗಿಯೇ ಹುಟ್ಟಿರಬೇಕು ಎಂಬುದರ



ಮೂಲಕ ಮಹಿಳೆಯರಿಗೆ ಧಾರ್ಮಿಕ ಸಮಾನತೆಯ ನ್ಯಾಯವನ್ನು ನಿರಾಕರಿಸಲಾಗಿದೆ. ಇಂತಹ ಲಿಂಗವಿರೋಧಿ ತಾತ್ವಿಕ ನೆಲೆಯ ಧರ್ಮಗಳಿಂದ ಹೆಣ್ಣಿನ ಬಿಡುಗಡೆ ಸಾಧ್ಯವಾಗದು. ಕುಲೀನ ಮಹಿಳೆಯರು ಗಂಡ ಸತ್ತ ಮೇಲೆ ಸತಿ' ಹೋಗುವುದಕ್ಕಿಂತಲೂ ಧಾರ್ಮಿಕ ಕಾರ್ಯದಲ್ಲಿ ಪುರುಷ ಪ್ರಧಾನ ಮೌಲ್ಯಗಳನ್ನು ಎತ್ತಿಹಿಡಿದು, ಬದುಕಿನ ಸಾರ್ಥಕತೆಯನ್ನು ಪಡೆದುಕೊಳ್ಳಬೇಕೆಂದು ಉದಾರವಾಗಿ ಹೇಳಿದೆ. ವಾರಸುದಾರಿಕೆಯ ಶುದ್ಧತೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿಯನ್ನು ಹೊತ್ತುಕೊಂಡೆ ಈ ಕಾಲದಲ್ಲಿ ಮಹಿಳೆಯರು ತಮ್ಮ ಕರ್ತವ್ಯವನ್ನು ನಿರ್ವಹಿಸಿರುವರು. ಅಂತಹ ಮಹಿಳೆಯರು ಚರಿತ್ರೆಯಲ್ಲಿ ದಾಖಲಾಗಿರುವರು. ಅತ್ತಿಮಬ್ಬೆಯಂತಹ ಮಹಿಳೆಯರನ್ನು ಮುಂದಿಟ್ಟುಕೊಂಡು ಜೈನಧರ್ಮದ ಉದಾರತೆಯನ್ನು ಅಳೆಯುವಾಗ ಚರಿತ್ರೆಯ ಗ್ರಹಿಕೆ ಇರಬೇಕಾಗುತ್ತದೆ.

ಕರ್ನಾಟಕದ ಧಾರ್ಮಿಕ ಚರಿತ್ರೆಯಲ್ಲಿ ಅತ್ಯಂತ ಸಂಚಲವನ್ನುಂಟು ಮಾಡಿದ ವೀರಶೈವ ಧರ್ಮ ಮಹಿಳೆಯರನ್ನು ಸಮಾನವಾಗಿಯೆ ಕಾಣಲು ಪ್ರಯತ್ನಿಸಿತು. ಆದರೆ ಆ ಕಾಲದಲ್ಲಿ ಹೆಣ್ಣಿನ ಬಗ್ಗೆ ಔದಾರ್ಯವಿತ್ತೇ ವಿನಃ ಸಮಾನತೆಯ ಸಖ್ಯದ ಜಾಡಿರಲಿಲ್ಲ. ಅಲ್ಲಿಯು ವೈರುಧ್ಯಗಳಿರುವುದನ್ನು ಕಾಣಬಹುದು. 'ಶರಣಸತಿ ಲಿಂಗಪತಿ' ಎಂದು ಹೊರಟ ಶರಣರ ನಡಿಗೆ ಕುಟುಂಬದೊಳಗಿಂದ ಹೊರಟದ್ದಲ್ಲ. ಹೆಣ್ಣಾಗುವುದರಲ್ಲಿಯೇ ಶರತ್ವವಿದೆಯೆಂದವರು ಹೆಣ್ಣಾದವಳನ್ನು ಹಲವು ಪರೀಕ್ಷೆಗೆ ಒಳಪಡಿಸುತ್ತಾರೆ. ಆ ಕಾಲದ ಒತ್ತಡಗಳು ಅವರನ್ನು ಹಾಗೆ ನಿರ್ಬಂಧಿಸಿರಬಹುದು. ಹೆಣ್ಣನ್ನು ನಿರ್ಜೀವ ವಸ್ತುಗಳಾದ ಹೊನ್ನು, ಮಣ್ಣಿನೊಂದಿಗೆ ಸಮೀಕರಿಸಿದ್ದರಲ್ಲಿಯೇ ವೈದಿಕಹಿತ ಶರಣರ ಮೂಲಕವೂ ಜೀವಂತವಾಗಿದೆ. ಇದೆಲ್ಲದಕ್ಕೂ ಕಾರಣ ದೇಹಮೀಮಾಂಸೆಯ ಅಘನಿತ ಭಯ ಕಾಡಿದಂತಿದೆ. ಪುರೋಹಿತಶಾಹಿಯನ್ನು ಪ್ರಬಲವಾಗಿ ವಿರೋಧಿಸಿದ ವೀರಶೈವ ಧರ್ಮದ ನಿಜವಾದ ಶಕ್ತಿಯೆಂದರೆ ಕಾಯಕ ಜೀವಿಗಳು ಲಿಂಗ ತಾರತಮ್ಯತೆಯನ್ನು ಪ್ರಶ್ನಿಸುವ, ಪ್ರತಿಭಟಿಸುವ, ಪರ್ಯಾಯ ಬದುಕಿನ ಕಲ್ಪನೆ. ಶರಣ ಚಳುವಳಿಯಲ್ಲಿ ಕಾಣಬಹುದಾದ ಅತ್ಯಂತ ಆರೋಗ್ಯಕರ ಸಂಗತಿಯೆಂದರೆ ಸ್ತ್ರೀಯರಿಗೆ ಏನು ಬೇಕು, ಬೇಡ ಎಂಬುದನ್ನು ಸ್ತ್ರೀಯರೇ ಹೇಳಿರುವುದು. ಆಧ್ಯಾತ್ಮದ ಮೀಮಾಂಸೆ ಮತ್ತು ಲಿಂಗ ಸಮಾನತೆಯನ್ನು

ಎತ್ತಿಹಿಡಿಯಲೆಂದು ಜೇಡರ ದಾಸಿಮಯ್ಯನಂತಹ ಹಿರಿಯ ಶರಣರು ಮಾತನಾಡಿದ್ದನ್ನು ಪ್ರಶ್ನಿಸುವ, ಪರೀಕ್ಷಿಸುವ ಶಕ್ತಿ ಶರಣೆಯರಿಗಿತ್ತು ಎಂಬುದನ್ನು ಕಾಲ ಅಲಕ್ಷಿಸಿದೆ. ಜೇಡರ ದಾಸಿಮಯ್ಯನವರು ದೈಹಿಕ ಅಂಗರಚನೆಯನ್ನು ಮೀರಿ ಆಧ್ಯಾತ್ಮವನ್ನು ಪರಿಭಾವಿಸುವ ರೀತಿ ಹೀಗಿದೆ...

**"ಮೊಲೆಮುಡಿ ಬಂದಡೆ ಹೆಣ್ಣೆಂಬರು**

**ಗಡ್ಡ ಮೀಸೆ ಬಂದಡೆ ಗಂಡೆಂಬರು**

**ನಡುವೆ ಸುಳಿವ ಆತ್ಮನು**

**ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ ರಾಮನಾಥ" -**

ಆತ್ಮಕ್ಕೆ ಲಿಂಗ ಸೂತಕವಿಲ್ಲವೆಂದು ಒತ್ತಿ ಹೇಳುತ್ತಾರೆ. ಆದರೆ ಆತ್ಮ ಪರಮಾತ್ಮನ ಅರಿಯಲು ಬೇಕಾದ ಮೂಲ ಯಾವುದು ಎಂಬುದನ್ನು ಮರೆತು ಮಾತನಾಡುತ್ತಾರೆ. ಭವದ ಬದುಕಿನಲ್ಲಿಯೇ ಶರಣ ಹುಟ್ಟಿ ಇಹಪರಗಳನ್ನು ಗೆಲ್ಲಬೇಕಾದರೆ ಜ್ಞಾನ ಅರಿವಿನ



ಸಾಕ್ಷಾತ್ಕಾರವಾಗಬೇಕು ಎಂಬುದನ್ನು ಹೆಣ್ಣನ್ನು ಹೊರಗಿಟ್ಟು ಶರಣತತ್ವ ಮುನ್ನೆಲೆಗೆ ಬಂದಿತ್ತು. ಅದನ್ನು ಗೊಗ್ಗವ್ವ, ಕಾಳವ್ವ, ಅಂಬಿಗರ ಚೌಡಯ್ಯ ಪ್ರಶ್ನಿಸುತ್ತಾರೆ. ಮನುಷ್ಯನಲ್ಲಿ ಆತ್ಮದ ಅರಿವು ಮೂಡಬೇಕಾದರೆ ಜ್ಞಾನ ಬೇಕು ಎಂಬುದನ್ನು ಯಾವ ಕಾಲದ ಮಹಾತ್ಮರು ಪರಿಭಾವಿಸಿದಂತಿಲ್ಲ. ಅದನ್ನು ಮೊಟ್ಟ ಮೊದಲಿಗೆ ಗೊಗ್ಗವ್ವ ಜಗತ್ತು ಕೇಳುವ ಹಾಗೆ ಹೇಳಿದ ರೀತಿ ಹೀಗಿದೆ.

**"ಮೊಲೆ ಮುಡಿ ಬಂದಡೆ ಹೆಣ್ಣೆಂಬರು**

**ಮೀಸೆಕಾಸೆ ಬಂದಡೆ ಗಂಡೆಂಬರು**

**ಈ ಉಭಯದ ಜ್ಞಾನ**

**ಹೆಣ್ಣೋ ಗಂಡೋ ನಾಸ್ತಿನಾಥಾ"**

ಜೇಡರ ದಾಸಿಮಯ್ಯ ಯಾವ ಮಾನದಂಡದಿಂದ ಲಿಂಗ ನಿರಸನ ಕ್ರಿಯೆಗೆ ತೊಡಗಿದ್ದನೋ ಅದೇ ಮಾನದಂಡದಿಂದಲೇ ಹೆಣ್ಣಿನ ಹಕ್ಕೊತ್ತಾಯ ಏನನ್ನು ಬಯಸುತ್ತದೆ ಎಂಬುದನ್ನು ಹೇಳಿರುವಳು. ವೈದಿಕ ಧರ್ಮದ

ಬಹುದೊಡ್ಡ ಪಿತೂರಿಯೆ ಶೂದ್ರ ಮತ್ತು ಮಹಿಳೆಯರನ್ನು ಅಕ್ಷರ ಮತ್ತು ಜ್ಞಾನದಿಂದ ವಂಚಿತರನ್ನಾಗಿಸುವುದಾಗಿತ್ತು. ಈ ಪಿತೂರಿಯನ್ನು ವೈಚಾರಿಕ ಮತ್ತು ವಾಸ್ತವದ ನೆಲೆಯಲ್ಲಿ ಮೊಟ್ಟಮೊದಲಿಗೆ ಪ್ರಶ್ನಿಸುತ್ತಾಳೆ. ಯಾವುದೇ ಧರ್ಮಗಳಾಗಲಿ, ಧಾರ್ಮಿಕ ಮಹಾತ್ಮರಾಗಲಿ ಹೆಣ್ಣಿಗೆ ಬೇಕಿರುವುದೇನು ಎಂಬುದನ್ನು, ಹೆಣ್ಣನ್ನು ಹೊರಗಿಟ್ಟೆ ತೀರ್ಮಾನಿಸಿರುವರು. ಹೀಗಾಗಿಯೇ ಇಂದಿಗೂ ಮಹಿಳೆಯರು ಪುರುಷ ಪ್ರಧಾನ ಸಂಸ್ಕೃತಿಯ ವಾಹಕಗಳಾಗಿ ಬಳಕೆಯಾಗುತ್ತಿರುವರು. ಜ್ಞಾನ ವಲಯಗಳಿಂದಲೇ ಹೆಣ್ಣನ್ನು ಹೊರಗಿಟ್ಟು ಚರಿತ್ರೆ ಕಟ್ಟಿರುವುದರಿಂದ ಹೆಣ್ಣು ವ್ಯಕ್ತಿಯಾಗಿ ಕಾಣೆಯಾಗಿರುವಳು. ಅದೇ ಸಂದರ್ಭದಲ್ಲಿ ಶಕ್ತಿಸ್ವರೂಪಿಣಿಯಾಗಿ ಆರಾಧಿಸಲ್ಪಟ್ಟಿರುವಳು. ಹೆಣ್ಣಿನ ಹೆಣ್ಣನವನ್ನು ಆರಾಧಿಸಿ ಗೌರವಿಸಿದ ಪುರುಷ ವರ್ಗ ಹೆಣ್ಣಾಗುವುದು ಪುಣ್ಯದ ಕೆಲಸವೆಂದು ಸಾರುತ್ತಲೇ ಹೆಣ್ಣನ್ನು ವಿಸ್ಮೃತಿಗೆ ಒಳಗಾಗುವಂತೆ ಅಕ್ಷರ ವಿದ್ಯೆಯನ್ನು ದುಡಿಸಿಕೊಂಡಿದೆ. ಹನ್ನೆರಡನೆಯ ಶತಮಾನದಲ್ಲಿ ಶರಣರಿಗೆ ಸರಿದೊರೆಯಾಗಿ ವಿಚಾರ ವಿನಿಮಯಕ್ಕೆ ಮುಂದಾದ ವಚನಕಾರ್ತಿಯರ ಗ್ರಹಿಕೆಗಳು ಏಕಮುಖಿಯಾದವುಗಳಲ್ಲ. ಕುಟುಂಬ ಹೆಣ್ಣಿಗೆ ಸುರಕ್ಷಿತ ಚೌಕಟ್ಟೆಂದು ಭಾವಿಸಿದ ಸಮಾಜದೊಳಗೆ ಹೆಣ್ಣಿಗೆ ಕುಟುಂಬ ಸುರಕ್ಷಿತತೆಯನ್ನು ನೀಡಲಾರದು. ಅದೊಂದು ಯಾತನಾಮಯ ಶಿಬಿರವೆಂದು ಸ್ವತಃ ಕುಟುಂಬದೊಳಗಿದ್ದ ಶರಣೆಯರು ನಿರ್ಭಿಡೆಯಿಂದ ಮಾತನಾಡುವುದು ಆ ಕಾಲದ ಮಹಿಳೆಯರಿಗಿದ್ದ ಚಾರಿತ್ರಿಕ ಗ್ರಹಿಕೆಗೆ ಹಿಡಿದ ಕನ್ನಡಿ. ಅದೇ ನೆಲೆಯಲ್ಲಿ ಬಯಲಲ್ಲಿದ್ದ ವಚನಕಾರ್ತಿಯರು ತಮ್ಮ ಅನುಭವಗಳನ್ನು ನಿರ್ಭಿಡೆಯಿಂದ ಹೊರಹಾಕಿರುವುದು ಇಂದಿಗೂ ಕೂಡಾ ಅಗಾಧ ಸಂಗತಿಯೆ. ಜ್ಞಾನಮುಖಿಯಾಗಿ ಹೊರಟ ಹನ್ನೆರಡನೆಯ ಶತಮಾನದ ಮಹಿಳೆಯರ ನಡಿಗೆಯ ಹೆಜ್ಜೆಗಳು ಸ್ತ್ರೀ ಅಸ್ಮಿತೆಯ ಮಾರ್ಗ ನಿರ್ಮಿಸುವ ಮೊದಲೆ ಶರಣ ಚಳುವಳಿ ರಾಜಸತ್ತೆಯಿಂದ ಚದುರಿಹೋಗುವಂತಾಯಿತು. ಆರ್ಥಿಕ, ಸಾಮಾಜಿಕ ಸಮಾನತೆಯನ್ನು ಧಾರ್ಮಿಕ ಸಮಾನತೆಯ ಮೂಲಕ ಆಗುಮಾಡಿಕೊಳ್ಳುವ ಪ್ರಯತ್ನದಲ್ಲಿ ಶೂದ್ರ ಮತ್ತು ಮಹಿಳೆಯರನ್ನು ಗಂಭೀರವಾಗಿ ಬಸವಾದಿ ಶರಣರು ಪರಿಗಣಿಸಿದ್ದರು. ಹೀಗಾಗಿಯೆ ಹೆಣ್ಣಿನ ಗೃಹಕೃತ್ಯಕ್ಕೆ ಸಾಮಾಜಿಕ ಗೌರವವನ್ನು ಮತ್ತು ಆರ್ಥಿಕ ಮನ್ನಣೆಯನ್ನು ನೀಡುವ

ಪ್ರಯತ್ನವನ್ನು ಮಾಡಿದರು. ಇಂದಿಗೂ ದುಡಿಮೆಯೆಂದರೆ ಸಂಬಳದ ಮಾನದಂಡದಿಂದಲೇ ಗುರುತಿಸುವ ಪರಿಪಾಠವಿರುವುದರಿಂದ ದಿನವಿಡೀ ಮಹಿಳೆಯರು ಮನೆಯಲ್ಲಿ ದುಡಿಮೆಯಲ್ಲಿ ತೊಡಗಿಕೊಂಡರೂ ಅದನ್ನು ದೇಶದ ಉತ್ಪಾದನಾ ಲೆಕ್ಕದಲ್ಲಿ ಪರಿಗಣಿಸುತ್ತಿಲ್ಲ. ಹೆಣ್ಣಿನ ಕ್ರಿಯಾಶೀಲತೆಯನ್ನು, ದೈಹಿಕ ದುಡಿಮೆಯನ್ನು ಕೌಟುಂಬಿಕ ಏಳು-ಬೀಳಿಗೆ ತಗುಲುಹಾಕಲಾಗಿದೆ. ಅಕ್ಷರಸ್ಥ ಮತ್ತು ಮೇಲ್ವರ್ಗದ ಕುಲೀನ ಸ್ತ್ರೀಯರು 'ಹೌಸ್ ವೈಫ್' (ಗೃಹಿಣಿ) ಸಿಂಡ್ರೋಮ್‌ದಿಂದ ಇಂದಿಗೂ ಬಿಡುಗಡೆ ಹೊಂದಿಲ್ಲವೆಂಬುದು ಗಮನಿಸಬೇಕಾದ ಸಂಗತಿ.

ಧರ್ಮದ ಮೂಲಕ ನಡೆದ ಚರ್ಚೆಗಳಿಗಿಂತಲೂ ಭಿನ್ನವಾದ ಚರ್ಚೆಗಳು ನಮ್ಮ ಆಧುನಿಕ ಸಂದರ್ಭದಲ್ಲಿ ನಡೆದಿವೆ. ಇದಕ್ಕೆ ಕಾರಣ ನಮ್ಮ ಕಾಲದ ಸಾಮಾಜಿಕ- ರಾಜಕೀಯ ಬಿಕ್ಕಟ್ಟುಗಳು. ಇದು ಮಹಿಳೆಗೆ ಹೊಸ ದೃಷ್ಟಿಕೋನವನ್ನು ಕೊಟ್ಟಿರುವುದರಲ್ಲಿ ಯಾವ ಅನುಮಾನಗಳೂ ಇಲ್ಲ. ಈ ವಿಧಾನ ಮಹಿಳೆಯ ಮನೋಭೂಮಿಕೆಯನ್ನು ಅರಿತುಕೊಳ್ಳುವಲ್ಲಿ ಸಹಾಯಕವಾಗಿವೆ. ಜಾತಿ, ವರ್ಗ, ವರ್ಣಗಳ ಸಂಘರ್ಷಕ್ಕೆ ಒಳಗಾದ ಸಮಾಜ ಹೆಣ್ಣಿನ ವಿಷಯಕ್ಕೆ ಬಂದಾಗ ಸಮಾನ ಗುಂಪಾಗಿ ಕಾಣಿಸಿಕೊಂಡಿದೆ. ಯಾಕೆಂದರೆ ಈ ಮೂರೂ ಅಂಶಗಳು ಅಧಿಕಾರಕ್ಕಾಗಿ ಆಕ್ರಮಣಶೀಲತೆಯನ್ನೇ ಅವಲಂಬಿಸಿವೆ. ಅಂತಹ ಆಕ್ರಮಣಶೀಲತೆಯ ಪ್ರವೃತ್ತಿಯಿಂದ ದೂರವಿರುವ ಮಹಿಳೆ ತನ್ನ ಹಕ್ಕುಗಳಿಗಾಗಿ ನಿರಂತರ ಹೋರಾಟವನ್ನು ರೂಪಿಸುವುದು ಅಗತ್ಯವಿದೆ. ಅಂತಹ ಅಗತ್ಯತೆಯ ಚಾರಿತ್ರಿಕ ಅಂಶಗಳನ್ನು ಸಮಕಾಲೀನ ಸ್ತ್ರೀವಾದ ಮುಕ್ತವಾದ ಅಭಿಪ್ರಾಯಗಳನ್ನು ಮಂಡಿಸಿದೆ.

ನಾನು ಶ್ರೇಷ್ಠ ಎನ್ನುವ ಪುರುಷನ ವ್ಯಸನಕ್ಕೂ, ಮಹಿಳೆಯು ನಾನು ಸಮಾನಳು ಎನ್ನುವುದಕ್ಕೂ ಅಗಾಧ ವ್ಯತ್ಯಾಸವಿದೆ. ಶ್ರೇಷ್ಠ ಎನ್ನುವುದು ಒಂದು ಅಹಂಭಾವ. ಮುಂದುವರೆದಂತೆ ಅದೊಂದು ಅಕ್ರಮಶೀಲ ಪ್ರವೃತ್ತಿ. ಅದೇ ಮಹಿಳೆ ಇದನ್ನು ಪ್ರತಿಪಾದಿಸುತ್ತಿರುವ ನೆಲೆ ಅತ್ಯಂತ ಜೀವಪರವಾಗಿದೆ. ಶತಶತಮಾನಗಳಿಂದಲೂ ಅಧೀನತೆಯನ್ನು Feel ಮಾಡಿರುವ ಮಹಿಳೆ ಇಂದು ಕ್ರಿಯಾತ್ಮಕವಾಗಿ ಪ್ರಶ್ನಿಸುತ್ತಿರುವುದು, ತನ್ನ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಿರುವುದರ ಹಿಂದೆ ಪುರುಷನ ಹಿತಾಸಕ್ತಿಯೂ ಇದೆ. ಹೆಣ್ಣು ಎಂದಿಗೂ ಕುಟುಂಬವನ್ನು ನಿರಾಕರಿಸಿಲ್ಲ, ಮಾತೃತ್ವವನ್ನು ನಿರಾಕರಿಸಿಲ್ಲ, ಪರಶುರಾಮನಂತೆ ತಾಯಿಯನ್ನೋ, ತಂದೆಯನ್ನೂ ಹತ್ಯೆ ಮಾಡಿಲ್ಲ. ಆಕೆ ಏನಿದ್ದರೂ ಸಂಗೋಪನೆಯ ಶಕ್ತಿಯಾಗಿ ಕಾಣಿಸಿಕೊಂಡಿದ್ದಾಳೆ. ಆಕೆಯ ಸಮಾಜದ ಕಲ್ಪನೆಯಲ್ಲಿ ಧರ್ಮದ ಕಲ್ಪನೆಯಲ್ಲಿ ಪುರುಷನಿದ್ದಾನೆ. ಆತನ ಗೈರು ಹಾಜರಿಯನ್ನು ಯಾವ ಸ್ತ್ರೀವಾದವೂ ಪ್ರತಿಪಾದಿಸಿಲ್ಲ. ಅದೇ ಪುರುಷನ ದೃಷ್ಟಿಕೋನದಲ್ಲಿ ಮಹಿಳೆ ಸಮಾಜದ ಪ್ರತಿನಿಧಿಯಾಗಿ, ಕುಟುಂಬದ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುವುದಿಲ್ಲ. ಈ ದ್ವಂದ್ವವನ್ನು ಬಿಡಿಸಲು ಮಹಿಳೆಗೆ ತನ್ನದೇ ಆದ ತಾತ್ವಿಕತೆಯ ಅವಶ್ಯಕತೆ ಇದೆ. ಅದು ಚಳುವಳಿಯ ರೂಪದಲ್ಲಿರಬಹುದು ಇಲ್ಲವೆ ಹೋರಾಟದ ರೂಪದಲ್ಲಿರಬಹುದು ಅಥವಾ ಸಾಹಿತ್ಯದ ಮೂಲಕವಾಗಿರಬಹುದು. ಇಲ್ಲೆಲ್ಲಾ ಹೆಣ್ಣು ನಿರೀಕ್ಷಿಸುತ್ತಿರುವ ತನ್ನ ಪ್ರಾತಿನಿಧ್ಯವನ್ನು ಆದರೆ ಅದು ಅನಾಯಾಸವಾಗಿ ಸಿಗುವುದಿಲ್ಲ. ಯಾಕೆಂದರೆ ಅದು ಒಬ್ಬ ಪುರುಷನನ್ನು ಪರಿವರ್ತಿಸುವ ಪ್ರಕ್ರಿಯೆ ಅಲ್ಲ. ಇಡೀ ಸಮಾಜವನ್ನು ಬದಲಾಯಿಸುವ ಇರಾದೆ

ಇರುವುದರಿಂದ ಈ ಚಳುವಳಿಗೆ ಸ್ಪಷ್ಟವಾದ ತಾತ್ವಿಕ ನೆಲೆ ಬೇಕಾಗುತ್ತದೆ. ಅಂತಹ ಚಿಂತನೆಗಳು ವಿಭಿನ್ನ ಆಯಾಮಗಳಲ್ಲಿ ಅಭಿವ್ಯಕ್ತಿಗೊಂಡಿದೆ. ಅದರಲ್ಲಿಯೂ ಮುಖ್ಯವಾಗಿ ಸ್ತ್ರೀವಾದ ಸಿದ್ಧಾಂತದ ನೆಲೆ ಒಂದಾದರೆ, ಮತ್ತೊಂದು ಸಾಹಿತ್ಯದ ನೆಲೆಯಾಗಿದೆ. ಆದರೆ ಇವೆರಡೂ ಭಿನ್ನ ಚಿಂತನೆಗಳಲ್ಲ. ಪರಸ್ಪರ ಸಹಕರಿಸುತ್ತಿರುವ ಈ ಅಧ್ಯಯನದ ನೆಲೆಗಳು ಸ್ತ್ರೀವಾದಿ ಓದನ್ನು ರೂಪಿಸುತ್ತಿರುವುದು ಮಹತ್ವದ ಸಂಗತಿಯಾಗಿದೆ. ಹೀಗಾಗಿ ಇವೆರಡೂ ನೆಲೆಗಳು ಪ್ರಯತ್ನಿಸುತ್ತಿರುವುದು ಸ್ತ್ರೀ ಪುರುಷರಿಬ್ಬರೂ ಸಮಾನತೆಯನ್ನು ಸಾಧಿಸಬೇಕಾಗಿದೆ ಎಂಬುದನ್ನು ಈ ಹಿನ್ನೆಲೆಯಲ್ಲಿಯೇ ಸ್ತ್ರೀವಾದಿ ಚಿಂತನೆಗಳು ಮುಖ್ಯವಾಗಿ ನಾಲ್ಕು ನೆಲೆಗಳಲ್ಲಿ ನಡೆದಿವೆ ಎಂಬುದನ್ನು ಡಾ.ವೀಣಾ ಮುಜುಂದಾರ್ ಅವರು ವಿಶ್ಲೇಷಿಸುತ್ತಾರೆ.

೧) ವಾಸ್ತವವನ್ನು ಗ್ರಹಿಸಿ ಅರ್ಥ ಮಾಡಿಕೊಳ್ಳುವುದು ಎಂದರೆ ಈವರೆಗೆ ಸತ್ಯದ ಚಿತ್ರಣವೆಂದು ಗ್ರಹಿಕೆಯಾಗಿರುವುದರಲ್ಲಿ ಎಷ್ಟೊಂದು ಅಭ್ಯಾಸವಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಈ ಬಗೆಗೆ ಪುನರ್ವ್ಯಾಖ್ಯಾನ ಮಾಡಿಕೊಳ್ಳಬೇಕು. ಸತ್ಯ, ವಾಸ್ತವ ಎಂದು ಗ್ರಹಿಸಿದ್ದು ಪುರುಷ ದೃಷ್ಟಿಕೋನದ್ದಾಗಿದೆಯಲ್ಲವೇ ಎಂಬ ಅರಿವು.

೨) ಸಮಸ್ಯೆಯನ್ನು ಗುರುತಿಸುವಲ್ಲಿ ಆಗಿರುವ ಸ್ಥಿತ್ಯಂತರಗಳು ಹೀಗೆ ಗೌರವಾದರಗಳ ಸ್ಥಾನ ಇತ್ತು ಎಂದು ಈವರೆಗೆ ನಂಬಿಸುತ್ತಾ ಬರಲಾಗಿದೆ. ಇತ್ತೀಚೆಗಷ್ಟೇ ಸಮಸ್ಯೆಯೊಂದಿದೆ ಎಂಬುದನ್ನು ಗುರುತಿಸಿ ಒಪ್ಪಲಾಗಿದೆ. ಅಂದರೆ ರೋಗ ನಿದಾನ (diagnosis) ಜಾರಿಗೊಂಡಿದೆ.

೩) ಆಗಿಹೋದ ತಪ್ಪುಗಳನ್ನು ಮರೆಯಿಸುವ ಪ್ರಯತ್ನ ಸಾಗಿದೆ. ಈ ಪ್ರಯತ್ನ ಹೊಸದಲ್ಲ. ಸ್ತ್ರೀಯನ್ನು ಭ್ರಾಮಕ ನೆಲೆಯಲ್ಲಿಟ್ಟು ವಂಚಿಸಲಾಗುತ್ತಿದೆ. ಮಾತೃತ್ವ, ದೈವತ್ವಗಳ ಮಾತು; ವೇದ ಕಾಲದಲ್ಲಿ ಎಂತೆಂಥ ಸ್ತ್ರೀಯರ ಇರುವಿಕೆ ಸಾಧ್ಯವಿತ್ತು ಎಂಬ ನಿದರ್ಶನಗಳಿಂದ ಪ್ರಯೋಜನವಿಲ್ಲ. ಏಕೆಂದರೆ ಈ ನಿದರ್ಶನಗಳು ಕೇವಲ ಅಪವಾದಗಳು. ಒಬ್ಬ ಇಂದಿರಾಗಾಂಧಿಯನ್ನು ತೋರಿ ಸ್ತ್ರೀಗೆ ಮಹತ್ವದ ಸ್ಥಾನ ಕೊಡಲಾಗಿದೆ ಎಂದಂತೆ, ಬಹುತೇಕ ಸ್ತ್ರೀಯರ ಪಾಡೇನು ಎಂಬುದನ್ನು ಗಮನಿಸಬೇಕು.

೪) ಈವರೆಗೆ ನಡೆದು ಬಂದದ್ದನ್ನು ಪೂರ್ಣ reverse ಮಾಡಬೇಕೋ ಅಥವಾ ನಡೆಯುತ್ತಿರುವ ಕ್ರಮವನ್ನು ತಿದ್ದುಪಡಿ ಮಾಡಿ ಪ್ರಯೋಗಿಸಬೇಕೋ ಎಂಬ ಡೋಲಾಯಮಾನತೆ. ಇಲ್ಲೂ ಸಹ ಭ್ರಮೆಯ ಪ್ರಯೋಗವಿದೆ. ಅಭಿವೃದ್ಧಿ, ಪ್ರಗತಿ, ಸಮಾನತೆಗಳೆಂಬ ಮಾತನಾಡುತ್ತಾ ಜನತೆ, ಸಮುದಾಯ ಎಂಬ ಪದಗಳನ್ನು 'ಪುರುಷ ಎಂಬುದಕ್ಕೆ ಬದಲಾಗಿ ಬಳಸಿದಾಗ 'ಎಲ್ಲ ಸರಿಹೋಯಿತು' ಎಂಬ ಭಾವ ಬರುತ್ತದೆ. ಆ ವಾಸ್ತವದಲ್ಲಿ ಈ 'ಜನತೆ' 'ಸಮುದಾಯ'ದಲ್ಲಿ ಸ್ತ್ರೀ ಸೇರ್ಪಡೆಯಾಗುವುದಿಲ್ಲ. ಈ ಬಗೆಗೆ ಮೈ ಮರೆಯದೆ 'ಸ್ತ್ರೀ' ಸೇರುತ್ತಾಳೆ ಎಂಬ ಬಗ್ಗೆ ಸ್ಪಷ್ಟನೆ ಪಡೆಯಬೇಕು.

ಇಡೀ ಈ ಚಿಂತನೆಯಲ್ಲಿ ಸ್ತ್ರೀಗೆ ಬೇಕಾಗಿರುವುದೇನು ಎಂಬ ಬಗ್ಗೆ ಸ್ಪಷ್ಟವಾದ ಮಂಡನೆ ಇದೆ. ಸೀಗೆ ಬೇಕಾಗಿರುವುದು ಬೇರೆಯೇ ಆದ ವಿಶಿಷ್ಟ ಸ್ಥಾನಮಾನಗಳಲ್ಲ. ಸಮಾಜದ ಜವಾಬ್ದಾರಿಗಳನ್ನು ಹಂಚಿಕೊಳ್ಳುವಲ್ಲಿ ಈಗಿರುವ ವ್ಯವಸ್ಥೆಯ ಅಳವಡಿಕೆಯಲ್ಲಿ ಸ್ತ್ರೀಯ ಪಾಲು, ಜನತೆ, ಸಮುದಾಯ, ಸಮಾಜ ಎಂದಾಗ 'ಸ್ತ್ರೀ'ಯನ್ನೂ ಒಳಗೊಂಡಂತೆ



ಎಲ್ಲರೂ ಎಂಬಂತಹ ವ್ಯಾಖ್ಯಾನ" (ಎಚ್.ಎಸ್.ಶ್ರೀಮತಿ : ಸಮಕಾಲೀನ ಕನ್ನಡ ಸಾಹಿತ್ಯ : ಸ್ತ್ರೀವಾದಿ ಓದಿನ ಹಿನ್ನೆಲೆಯಲ್ಲಿ : ಪುಟ : ೧೧೭-೧೧೮)

ಎಲ್ಲರನ್ನೂ ಒಳಗೊಳ್ಳಬೇಕಾದ ನಮ್ಮ ಸಾಂಸ್ಕೃತಿಕ ಸಂಸ್ಥೆಗಳು ಮಾಡಿದ್ದಾದರೂ ಏನನ್ನು ? ಬೌದ್ಧಿಕ ವಲಯಕ್ಕೆ ಹೆಣ್ಣನ್ನು ದೂರಮಾಡಿ ಅನುಭವಲೋಕಕ್ಕೆ ಸೀಮಿತಗೊಳಿಸಿ, ಆಕೆಯನ್ನು 'ಅಡಿಗೆಮನೆ'ಗೆ ಸಂಕೇತವಾಗಿ ಬಳಸಿ, ಈ ಸಮಾಜ ತಲುಪಿದ್ದಾದರೂ ಎಲ್ಲಿ ? ಅಪೂರ್ಣವಾದ ಬದುಕನ್ನು ಪರಿಚಯಿಸಿದ ಇದುವರೆಗಿನ ಪುರುಷ ಚಿಂತನೆಗಳು ಪೂರ್ಣಗೊಳ್ಳಬೇಕಾದರೆ ಮಹಿಳಾ ಅನುಭವ ಲೋಕವನ್ನು ಆಗು ಮಾಡಿಕೊಳ್ಳಲೇಬೇಕು. ಅಂತಹ ಅಸಮಗ್ರ ಸಾಹಿತ್ಯವನ್ನು ಸಮಗ್ರಗೊಳಿಸುವ ಆಲೋಚನೆಯೂ ಸ್ತ್ರೀವಾದಕ್ಕಿದೆ. ಈ ಕಾರಣಕ್ಕಾಗಿ ಇದುವರೆಗಿನ ಶಾಸ್ತ್ರ, ಪುರಾಣ, ಕಾವ್ಯ, ಚರಿತ್ರೆಯಲ್ಲಿ ಮಹಿಳೆಯ ಆಕೃತಿಗಳನ್ನು ಸ್ತ್ರೀವಾದಿ ಚಿಂತನೆಯ ಮೂಲಕ ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗುತ್ತಿದೆ.

ಚರಿತ್ರೆಯುದ್ದಕ್ಕೂ ಗಂಡಾಳ್ವಿಕೆಯನ್ನು ಒಪ್ಪಿಕೊಂಡು ಬಂದ ಸಮಾಜದ ಮನಸ್ಥಿತಿಗೆ ಲಿಂಗಭೇದವಿಲ್ಲ. ಹೀಗಾಗಿಯೇ ನಮ್ಮ ಸಾಹಿತ್ಯಾದಿ ಕಲೆಗಳೆಲ್ಲವೂ ಗಂಡು ಮನಸ್ಥಿತಿಯ ಸ್ಥಿರೀಕರಣಕ್ಕೆ ಸಾಕಷ್ಟು ಶ್ರಮಿಸಿವೆ. ಈ ಚರಿತ್ರೆಯನ್ನು ನೆನಪಿಟ್ಟುಕೊಂಡು ಆಧುನಿಕ ಕಾಲದ ಮಹಿಳೆಯರು ತಮ್ಮ ಬಿಡುಗಡೆಯ ನಕ್ಷೆಯನ್ನು ಅಕ್ಷರದ ಮೂಲಕ ಬರೆಯಲು ಪ್ರಾರಂಭಿಸಿದರು. ಈ ಪ್ರಯತ್ನ ಸ್ವಾತಂತ್ರ ಪೂರ್ವದಿಂದ ಇಂದಿನವರೆಗೂ ವ್ಯಕ್ತಿ ನೆಲೆಯಿಂದ, ಸಂಘಟಿತ ನೆಲೆಯಲ್ಲಿ ನಡೆದಿರುವುದಕ್ಕೆ ಸಾಕ್ಷಿ ಪುರಾವೆಗಳಿವೆ. ಆದರೆ ಕಾಲ ದಾಖಲಿಸಿಕೊಳ್ಳುವ ಒತ್ತಾಸೆಯನ್ನು ಇಂದು ಸಾಹಿತ್ಯ ಪರಿಷತ್ತಿನ ಮೂಲಕ ಹೊರಹಾಕಿದೆ. ಹೀಗಾಗಿ ಮಹಿಳೆಯರು ತಮ್ಮ ಅನುಭವಗಳನ್ನು ತಮಗಿರುವ ಲೋಕ ಗ್ರಹಿಕೆಗಳನ್ನು ಸಾಹಿತ್ಯದ ವಿವಿಧ ಪ್ರಕಾರಗಳ ಮೂಲಕ ಹೊರಹಾಕುವ ಪ್ರಯತ್ನವನ್ನು ಗಂಭೀರವಾಗಿಯೆ ಮಾಡಿರುವರು.

ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವವನ್ನು ಆಚರಿಸಿಕೊಂಡು ಸಂಭ್ರಮಿಸಿದೆ. ಈ ಸಂಭ್ರಮಕ್ಕೆ ಮಹಿಳೆಯರು ಕಾರಣಿಭೂತರು ಎನ್ನುವುದರಲ್ಲಿ ಅನುಮಾನಗಳಿಲ್ಲ. ಕನ್ನಡಿಗರ ಹೆಮ್ಮೆಯ ಸಂಸ್ಥೆಯಾದ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮನು ಬಳಿಗಾರ ಅವರು ನಂಬಿರುವ ಸಾಮಾಜಿಕ ನ್ಯಾಯ, ಪ್ರತಿಭಾ ನ್ಯಾಯ, ಪ್ರಾದೇಶಿಕ ನ್ಯಾಯ, ಲಿಂಗ ಸಮಾನತೆಯ ನ್ಯಾಯವನ್ನು ಅನುಷ್ಠಾನಗೊಳಿಸಿರುವರು. ಅದರಂಗವಾಗಿ ಇಂದು (ಮಹಿಳಾ ಸಂಪುಟಗಳು) ಮಹಿಳಾ ಸಾಹಿತ್ಯದ ಎಂಟು ಸಂಪುಟಗಳು ಲೋಕದ ನ್ಯಾಯದ ತಕ್ಕಡಿಯನ್ನು ಸರಿದೂಗಿಸುವ ಇರಾದೆಯನ್ನು ಈಡೇರಿಸಿಕೊಳ್ಳುತ್ತಿದೆ. ಕಥೆ, ಕಾವ್ಯ, ಲಲಿತ ಪ್ರಬಂಧ, ಅಂಕಣ, ವಿಮರ್ಶೆ, ಸ್ತ್ರೀವಾದ, ಸಂಕೀರ್ಣ, ಜಾನಪದವೆಂಬ ಎಂಟು ಸಂಪುಟಗಳು ಮಹಿಳೆಯರು ವಿವಿಧ ಪ್ರಕಾರಗಳು ಮಾಡಿದ ಸಾಹಿತ್ಯ ಕೃಷಿಯ ಪ್ರಾತಿನಿಧಿಕ ಸಂಕಲನಗಳಾಗಿವೆ. ಸಾಹಿತ್ಯ ಚರಿತ್ರೆಯ ಒಂಟಿಕಾಲಿನ ನಡಿಗೆಗೆ ಜಂಟಿಕಾಲುಗಳ ಹೆಜ್ಜೆಗಳ ನಾದ ಮುಂದಿನ ತಲೆಮಾರು ಸಾಹಿತ್ಯ ಚರಿತ್ರೆ ಬರೆಯುವುದಕ್ಕೆ ಓದುವುದಕ್ಕೆ ಶೋಧಿಸುವುದಕ್ಕೆ ಬಹುದೊಡ್ಡ ಆಕರ ಸಾಮಗ್ರಿಗಳಾಗಬಲ್ಲವು.



ಪರಿಕಲ್ಪನಾತ್ಮಕ ಎಂಟು ಸಂಪುಟಗಳಲ್ಲಿ ಮಹಿಳೆಯರ ಅನುಭವಗಳು ಅಂತರ್ಗತವಾಗಿರುವ ವಿಷಯಗಳನ್ನು, ಅವುಗಳ ಆಶಯಗಳನ್ನು ದಾಖಲಿಸುವುದು ಕಾಲದ ಅಗತ್ಯವೆಂದು ಭಾವಿಸಿರುವೆ.

**ಕಾವ್ಯ ಸಂಪುಟ ಒಂದು :** 'ರಾಜಕಾರಣವೇ ಕಾವ್ಯಕಾರಣ' : ಪಿ.ಚಂದಿಕಾರವರು ಪ್ರಾತಿನಿಧಿಕ ಮಹಿಳಾ ಕಾವ್ಯದ ಸಂಪಾದನೆಯ ಪ್ರಾರಂಭದಲ್ಲಿಯೇ ಕವಿತೆಯೇ ಏಕೆ ? ಎಂದು ಪ್ರಶ್ನಿಸಿಕೊಳ್ಳುತ್ತಲೇ ಅದಕ್ಕೆ ಉತ್ತರಗಳನ್ನು ಹೆಣ್ಣಿನ ಒಳಲೋಕದಿಂದಲೇ ಹುಡುಕುವ ಪ್ರಯತ್ನ ಮಾಡಿರುವರು “ಕನ್ನಡ ಮಹಿಳಾ ಕಾವ್ಯದ ಮೊದಲ ಹಂತದಲ್ಲಿ ಅಕ್ಷರಜ್ಞಾನ, ಎರಡನೆಯ ಹಂತದಲ್ಲಿ ಅರಿವು ಮತ್ತು ಮೂರನೆಯ ಹಂತದಲ್ಲಿ ಆತ್ಮ ಪ್ರತ್ಯಯವನ್ನೊಳಗೊಂಡ ದೊಡ್ಡ ಪರಿವರ್ತನೆಯ ನೆಲೆಗಳನ್ನು ಕಾಣುತ್ತೇವೆ ಎಂದು ಕಾವ್ಯಲೋಕದ ಮಹಿಳಾ ಪ್ರವೇಶಿಕೆಗೆ ತಾತ್ವಿಕ ಚೌಕದ್ದೊಂದು ಇತ್ತು ಎಂಬುದನ್ನು ಮುಂದಿಟ್ಟುಕೊಂಡು ಅದರ ಮೂಲಕ ಕಾವ್ಯ ಕಾರಣಗಳನ್ನು ವಿಶ್ಲೇಷಿಸುತ್ತಾರೆ. ಮೊದಲ ತಲೆಮಾರಿನ ಕವಿಯಿತ್ರಿಯರಿಗೆ, ರಾಷ್ಟ್ರೀಯ ಚಳುವಳಿ, ಗಾಂಧಿ ಪ್ರಭಾವ ಮುಂತಾದ ಕಾರಣಗಳಿಗಾಗಿ ಆದರ್ಶ ಸಮಾಜದ ಹಂಬಲ ಮುಖ್ಯವಾಗಿತ್ತು. ತಿರುಮಲೆ ರಾಜಮ್ಮ, ಸರಸ್ವತಿಬಾಯಿ ರಾಜವಾಡೆಯಂಥವರು ಈ ಪಥದಲ್ಲಿ ನಡೆದರೆ ಬೆಳಗೆರೆ ಜಾನಕಮ್ಮ, ಕಾವೇರಮ್ಮನಂಥವರು ಹೆಣ್ಣಿನ ನೋವಿನ ಕಾರಣಗಳನ್ನು ಹುಡಕಲು ಹೊರಟರು.

ಆಧುನಿಕ ಓದಿನ ಪ್ರಭಾವಕ್ಕೊಳಗಾದ ನಂತರದ ತಲೆಮಾರು ಸಮಾಜವೆಂದರೆ ಕೇವಲ ಪುರುಷನೆಂಬುದನ್ನು ಪ್ರಶ್ನಿಸುವುದಕ್ಕೆ ಜಗತ್ತಿನಾದ್ಯಂತ ಪ್ರಾರಂಭವಾಗಿದ್ದ ವಿ ಮೆನ್ ಎನ್ನುವ ಚಳುವಳಿಯ ಇದರ

ಪ್ರಭಾವ ಚ.ಸರ್ವಮಂಗಳಾರಂಥವರ 'ಅವನು ಬಸವ'ದ ಮೂಲಕ ಪುರುಷ ಪ್ರಧಾನ ಸಾಂಸ್ಕೃತಿಕ ಮನಸ್ಸು, ಎಳೆದ ಗೆರೆಯನ್ನು ಅಳುಕಿಸದೆ ಅದರ ಸಮಾನಾಂತರವಾದ ಹಿರಿದಾದ ಗೆರೆ ಎಳೆಯುವುದರ ಮೂಲಕ ಕಾವ್ಯದ ಮಡಿವಂತಿಕೆಯ ಲೋಕದಲ್ಲೊಂದು ಕಲ್ಲು ಒಗೆದು ತರಂಗಗಳು ಏಳುವಂತೆ ಮಾಡಿದರು. ಇದರ ಮುಂದುವರಿಕೆಯಾಗಿ ಸ್ತ್ರೀವಾದವನ್ನು ಅರ್ಥೈಸಿಕೊಂಡು ಹೆಣ್ಣಿನ ಅಸ್ತಿತ್ವ, ಅನನ್ಯತೆಯ ಹುಡುಕಾಟಕ್ಕೆ ಒಂದು ತಲೆಮಾರೆ ಸೃಷ್ಟಿಯಾಯಿತು. ಮಹಿಳಾ ಕಾವ್ಯವೆಂಬುದು ಲೋಕಗ್ರಹಿಕೆಯ ಸಂಚಾರಕ್ಕೆ ಹೊರಟಿತು. ಇದೇ ಹೊತ್ತಿಗೆ ಕರ್ನಾಟಕದಲ್ಲಿ ಸಾಹಿತ್ಯಕ ಚಳುವಳಿಯೊಂದು ಮಹಿಳೆಯರ ಬರಹಕ್ಕೆ ಹಕ್ಕೊತ್ತಾಯಕ್ಕೆ ಒಂದು ವೇದಿಕೆಯನ್ನು ಕಲ್ಪಿಸಿತು. ದಲಿತ ಬಂಡಾಯ ಚಳುವಳಿಯ ಪ್ರಭಾವಕ್ಕೊಳಗಾಗಿ ಮಾತೆ ಆಡದ ಸಮುದಾಯಗಳ ಧ್ವನಿಯಾಗಿ ಅಕ್ಷರಗಳಿಗೆ ಪ್ರತಿಭಟನೆಯ ಅಸ್ತ್ರದ ನಿಗಿ ನಿಗಿ ಕಿಚ್ಚನ್ನು ಪರಿಚಯಿಸಿದರು. ಈ ಹೊತ್ತಿನಲ್ಲಿ ಅಕ್ಷರಲೋಕ ಬೆಚ್ಚಿ ಬೀಳಿಸುವಂತಹ ಸಾಮಾಜಿಕ ಸ್ಫೋಟಕಗಳು ಕಾಣಿಸಿಕೊಂಡವು. ಅಭಿಜಾತ ಸಾಹಿತ್ಯದ ಮಾದರಿಗಳನ್ನು ಮುರಿದು ಕಟ್ಟುವ ಕ್ರಿಯೆಗಳು ಅನುಭವದ ತಾಜಾತನದಿಂದ ಆದವು. ಹೀಗೆ ಮಾತನಾಡಿದ ಬರೆದ ಬಹುದೊಡ್ಡ ಗುಂಪು ಅಲಕ್ಷಿತಲೋಕದಿಂದ ಬಂದವರಾಗಿದ್ದರು. ಈ ಎಲ್ಲ ಸಾಹಿತ್ಯಕ, ಸಾಮಾಜಿಕ, ಲಿಂಗ ರಾಜಕಾರಣಗಳ ಗ್ರಹಿಕೆಗಳನ್ನಿಟ್ಟುಕೊಂಡು ಈ ಸಂಪುಟ ಮಹಿಳಾ ಕಾವ್ಯದ (ಪ್ರಾತಿನಿಧಿಕ) ಪರಿಕಲ್ಪನೆಯ ಹಿನ್ನೆಲೆಯಲ್ಲಿ ಕನ್ನಡ ಕಾವ್ಯದ ನಾಡಿಮಿಡಿತವನ್ನು ಹಿಡಿದಿಟ್ಟಿದೆ.



**ಕಥಾ ಸಂಪುಟ ಎರಡು : ಒಳಕುದಿಯ ಹೊರಹಾಕುವ ಜೀವಗಳ ಹಸಿಮಾತು :** ಹೆಣ್ಣಿನ ಒಡಲು ಕಥೆಗಳ ಕಡಲು ಎಂದು ಹೇಳಲಾಗಿದೆ. ಈ ಕಡಲಿನ ಆಳ ಅಗಲಗಳನ್ನು ಡಾ.ಪದ್ಮನಿ ನಾಗರಾಜು ಅವರು ಮಹಿಳೆಯರ ಪ್ರಾತಿನಿಧಿಕ ಕಥೆಗಳ ಮೂಲಕ ಅಳೆಯುವ ಪ್ರಯತ್ನವನ್ನು ಈ ಸಂಪುಟದಲ್ಲಿ ಮಾಡಿರುವರು. ಮಾನವ ಇತಿಹಾಸ 'ಮಹಿಳಾ ಇತಿಹಾಸವಲ್ಲ'ವೆಂಬ ಪ್ರಜ್ಞೆಯೊಂದಿಗೆ ಒಡಲಿನ ಕಥೆಗಳ ಕಡಲಿನಲ್ಲಿರುವ ಮುತ್ತುರತ್ನಗಳು ಕಪ್ಪೆ ಚಿಪ್ಪುಗಳನ್ನು ಒಟ್ಟಿಗೆ ಸಂಗ್ರಹಿಸಿರುವರು. “ಸ್ತ್ರೀ ಪರ ಸಾಹಿತ್ಯ ರಚಿಸಿದ ಆರ್.ಕಲ್ಯಾಣಮ್ಮ ಹಾಗೂ ನಂಜನಗೂಡು ತಿರುಮಲಾಂಬರವರನ್ನು ಆಧುನಿಕ ಕನ್ನಡ ಸಾಹಿತ್ಯದ ಮೊದಲ ಲೇಖಕಿಯರು ಎಂದು ಇವರಿಬ್ಬರನ್ನು ಗುರುತಿಸಲಾಗುತ್ತದೆ.” ಮೊದಲ ತಲೆಮಾರಿನ ಕಥೆಗಾರ್ತಿಯರಿಗೆ ಅಕ್ಷರಲೋಕದ ಹಿನ್ನೆಲೆಯಿತ್ತು, ಆದರ್ಶವೆಂದು ಹೇಳಿದ ಸಾಮಾಜಿಕ, ಕೌಟುಂಬಿಕ ಮಾದರಿಗಳಿದ್ದವು. ಇಂತಹ ಮಾದರಿಗಳನ್ನಿಟ್ಟುಕೊಂಡು ಮೊದಲ ತಲೆಮಾರಿನ ಕಥೆಗಾರ್ತಿಯರು ಕಥೆ ಬರೆದದ್ದು ಕೂಡಾ ಆ ಕಾಲದ ಮಡಿವಂತಿಕೆ ಸಮಾಜದಲ್ಲಿ ಸಾಹಸವೆಂದೆ ಭಾವಿಸಲಾಗಿತ್ತು “ಸೀಮಿತ ನೆಲೆಗಟ್ಟಿನಲ್ಲಿ ಮಹಿಳೆ ಪ್ರಾರಂಭದಲ್ಲಿ ಬರೆಯಲಾರಂಭಿಸಿದ ಅವಳ ಕೃತಿಗಳಿಗೆ ಆಯ್ದುಕೊಂಡ ವಸ್ತುಗಳು ಕೂಡಾ ಅವಳು ಕಂಡು ಕೇಳಿದ, ಅನುಭವಿಸಿದ ಘಟನೆಗಳನ್ನೇ ಆಧರಿಸಿದ್ದವಾಗಿದ್ದವು. ಅಂತಹ ಸಾಹಿತ್ಯದಲ್ಲಿ ಗಟ್ಟಿತನ ಕಂಡುಬರದಿದ್ದರೂ, ಬರೆದಳೆಂಬ ಹೆಮ್ಮೆಯ ಬದಲು “ಅಡಿಗೆಮನೆ ಸಾಹಿತ್ಯ” ಎಂದು ಅವಹೇಳನಕ್ಕೊಳಗಾದರೂ

ಮಹಿಳೆಯರು ಧೃತಿಗೆಡದೆ ಬರೆದೇ ಬರೆದರು. ಇಂದು ಅಂತಹ ಮಾತುಗಳನ್ನು ಧಿಕ್ಕರಿಸಿ ಸಮಾನವಾಗಿ ಬರೆದ ಮಹಿಳಾ ಸಾಹಿತ್ಯ (ಕಥೆ)ವನ್ನು ಕಡೆಗಣಿಸಲು ಸಾಧ್ಯವೇ ಇಲ್ಲ" ವೆಂದು ಹಲವು ಪ್ರಥಮಗಳನ್ನು ಕನ್ನಡ ಕಥಾಪರಂಪರೆಯಲ್ಲಿ ಮಹಿಳೆಯರು ಸಾಧಿಸಿರುವುದನ್ನು ಈ ಸಂಪುಟದಲ್ಲಿ ದಾಖಲಿಸಿರುವರು.

**ಲಲಿತ ಪ್ರಬಂಧ ಸಂಪುಟ ಮೂರು :** ಆತ್ಮದೊಂದಿಗಿನ ಆತ್ಮಸಂವಹನ : ಬರಹಗಾರರಲ್ಲಿ ಓದುಗರು ಇರುತ್ತಾರೆ. ಓದುಗರಲ್ಲಿ ಬರಹಗಾರರು ಇರಬೇಕಾಗಿಲ್ಲ. ಬರಹಗಾರರಲ್ಲಿರುವ ಓದುಗರ ನಡುವಿನ ಸಂಬಂಧಗಳು ಆತ್ಮದೊಂದಿಗಿನ ಆತ್ಮಸಂವಹನದಂತಿರುತ್ತದೆ ಎಂಬುದನ್ನು ಲಲಿತ ಪ್ರಬಂಧಗಳಲ್ಲಿ ಕಾಣಬಹುದು. ಸಾಹಿತ್ಯದಲ್ಲಿ ಗಂಭೀರತೆಗೆ ಮಾತ್ರ ಸ್ಥಾನವೆಂಬುದನ್ನು ಬದಿಗಿಟ್ಟು ಸಾಹಿತ್ಯವು ಮನುಷ್ಯಲೋಕದ ಕನ್ನಡಿಯೆಂದು ಭಾವಿಸುವುದಾದರೆ ಅಲ್ಲಿ ಉಲ್ಲಾಸ, ಉತ್ಸಾಹ, ಸರಸ, ವಿನೋದಗಳಿಗೆಲ್ಲವುಗಳಿಗೂ ಜಾಗವಿದೆ ಎಂಬುದನ್ನು ಬಿಂಬಿಸಲೆಂದೆ ಲಲಿತ ಪ್ರಬಂಧ'ಗಳ ಪ್ರಕಾರವೊಂದು ಹುಟ್ಟಿಕೊಂಡಿದೆ. "ವಿ.ಸೀ.ಯವರು ಭಾವಿಸಿದಂತೆ ಲಲಿತ ಪ್ರಬಂಧಗಳೆಂದರೆ 'ಮನಸ್ಸಿನ ಒಲವು, ಓಟ, ಆಕಾಂಕ್ಷೆಗಳನ್ನು ನೇಯುವ ಒಂದು ಕ್ರಮ" ಎನ್ನುತ್ತಾರೆ. 'ನೇಯುವ ಈ ಕ್ರಮ ಪ್ರಬಂಧಕಾರರ ಕಲೆಗಾರಿಕೆಯನ್ನು ತೋರಿಸುತ್ತದೆ. ಲಲಿತ ಪ್ರಬಂಧಗಳಲ್ಲಿ ವೈಚಾರಿಕತೆ ಇದೆ. ಕಾಲ್ಪನಿಕತೆಯೂ ಇದೆ. ಹಾಸ್ಯ ವಿಡಂಬನೆಗಳೂ ಇವೆ. ಇಂಥ ವಿಭಿನ್ನ ಎಳೆಗಳ ಕಲಾತ್ಮಕ ನೇಯ್ದೆಯುಳ್ಳ ಬರಹವೇ ಲಲಿತ ಪ್ರಬಂಧ" ಈ ಕಲಾತ್ಮಕ ನೇಯ್ದೆಯಲ್ಲಿ ಗಂಡಸಿಗೆ ಅಪರಿಚಿತವಾಗಿದ್ದ ಅದ್ಭುತಲೋಕವೊಂದರ ಪರಿಚಯವನ್ನು ಮಹಿಳೆಯರು ಮಾಡಿಸಿರುವರು. ಅದು ಮಹಿಳಾ ಲೋಕವೆಂದು ಕರೆಯಿಸಿಕೊಂಡ ಅಡಗಿಮನೆಯ ಒಳಗುಟ್ಟನ್ನು ಅದರ ಸೌಂದರ್ಯ ಸಾಧ್ಯತೆಗಳನ್ನು



ಅದರೊಂದಿಗಿದ್ದ ಅದರೊಂದಿಗಿನ ಅನುಭವಗಳನ್ನು ನವಿರಾಗಿ ಹೇಳಿ, ತಾವು ಹಗುರಾಗಿ ಓದುಗರ ಹೃದಯವನ್ನು ಭಾರಗೊಳಿಸುವ ಹಲವು ಕಹಿ ಸತ್ಯಗಳಿಗೆ ಅಕ್ಷರದ ನೆಯ್ದಿ ಕುಸುರಿತನದ ಎಲ್ಲ ಹಂತಗಳ ಮಾದರಿಗಳನ್ನು ಈ ಸಂಪುಟದಲ್ಲಿ ಕಾಣಬಹುದು.

**ವಿಮರ್ಶಾ ಸಂಪುಟ ನಾಲ್ಕು : "ಶಕ್ತರನ್ನು ಹತ್ತಿಕ್ಕಲು ಪ್ರಯತ್ನಿಸಲಾಗುತ್ತದೆಯೇ ಹೊರತು ಅಶಕ್ತರನ್ನಲ್ಲ" :** ಎನ್ನುವ ಕಾಲಾತೀತ ಸತ್ಯದ ಪುನರ್ ದರ್ಶನವನ್ನು ಡಾ.ಎಂ.ಎಸ್.ಆಶಾದೇವಿಯವರು ವಿಮರ್ಶಾ ಸಂಪುಟದ ಮೂಲಕ ಮಾಡಿರುವರು. "ಹೆಣ್ಣಿನ ಮಟ್ಟಿಗೆ ಹಲವು ಬಹಿಷ್ಕೃತ, ಅಸಾಧ್ಯ ಕ್ಷೇತ್ರಗಳಲ್ಲಿ ಒಂದಾಯಿತು" ಎಂದು ಸಂಪಾದಕರು ಸರಿಯಾಗಿಯೇ ವಿಮರ್ಶಾ ಕ್ಷೇತ್ರದ ಲಿಂಗರಾಜಕಾರಣವನ್ನು ಗುರುತಿಸಿರುವರು. ಮೊದಲ ತಲೆಮಾರಿನ ಲೇಖಕಿಯರು ತಮ್ಮ ಬರಹದ ಬಗ್ಗೆ ಪುರುಷ ವಿಮರ್ಶಕರು ಉದಾಸೀನತೆಯಿಂದ ಕಾಣುತ್ತಿರುವುದರ ಕುರಿತು ಸಹನೆಯಿಂದಲೇ ಮಾತನಾಡಿರುವರು. ಸಾಂಸ್ಕೃತಿಕ ಮತ್ತು ಸಾಹಿತ್ಯಕ ರಾಜಕಾರಣದ ಒಳ ಸುಳಿವುಗಳನ್ನು

ಗ್ರಹಿಸುವುದರಲ್ಲಿ ಮೊದಲ ತಲೆಮಾರಿನ ಲೇಖಕಿಯರು ಮುಂದಾಗಲಿಲ್ಲ. ದೂರದೃಷ್ಟಿಯ ಕೊರತೆಯಿಂದ ಹಿರಿಯ ತಲೆಮಾರಿನ ಲೇಖಕಿಯರು ಪುರುಷಲೋಕ ಬಯಸಿದ್ದೆಲ್ಲವನ್ನು ಬಿಟ್ಟುಕೊಟ್ಟು "ಇಟ್ಟಂತೆ ಇರುವೆ ಶಿವಾ" ಎನ್ನುವ ಹಾದಿಯಲ್ಲಿಯೇ ನಡೆದದ್ದು ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಬೇಕಾದವರಿಗೆ ಎದುರಾದ ಬಹುದೊಡ್ಡ ಬಿಕ್ಕಟ್ಟೆಂದು ಹೇಳಬಹುದು. ಕಲೆಯ ಕುರಿತ ಹಾಗೇ ಸ್ಥಾಪಿತ ವ್ಯಾಖ್ಯಾನಗಳನ್ನು ಮುರಿದು ಕಟ್ಟುವ ಕ್ರಿಯೆಗಳಿಗಿಂತಲೂ ಸಹನೆಯಿಂದ ಗೆಲ್ಲುವ ವಿಶ್ವಾಸದಿಂದಲೇ ಬರಹವನ್ನು ಪ್ರಾರಂಭದಲ್ಲಿ ಅಗಾಧವಾಗಿಯೇ ಪ್ರೀತಿಸಿದರು.

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ವಿಮರ್ಶೆ ಮತ್ತು ಮೀಮಾಂಸೆ ಪ್ರಧಾನವಾದ ಕಾರಣ ಸಾಂಸ್ಕೃತಿಕ ರಾಜಕಾರಣದ ಚುಕ್ಕಾಣಿ ಗಂಡಸಿನ ಕೈಯಲ್ಲಿಯೆ ಇತ್ತು. ಹೀಗಾಗಿ ಮಹಿಳೆಯರ ಕೃತಿ ಕುರಿತ ಹಾಗೆ ಅವಜ್ಞತೆ ಮತ್ತು ಅಸಡ್ಡೆಯಿಂದ ನೋಡಿದ್ದರ ಕುರಿತು ತಕರಾರುಗಳನ್ನು ಚಾರಿತ್ರಿಕ ನೆಲೆಯಲ್ಲಿ ವಿಮರ್ಶಕಿಯರು ಎತ್ತಿದ ಮೇಲೆಯೇ ಸಾಹಿತ್ಯ ರಾಜಕಾರಣ ಅರ್ಥವಾಯಿತು. ಹೀಗಾಗಿ ಸಿದ್ಧಮಾದರಿಯ ಅಳತೆಗೋಲಿನಿಂದ ಅಳೆಯುವುದರ ಕುರಿತು ಪರ್ಯಾಯ ಸ್ತ್ರೀ ವಿಮರ್ಶಾ ಪರಿಭಾಷೆಗಳ ಹುಡುಕಾಟಕ್ಕೆ ತೊಡಗಿದರು. ಹೀಗಾಗಿಯೇ ಪುರುಷನಿಷ್ಠ ಸಾಹಿತ್ಯ ವಿಮರ್ಶೆಯ ಮಾನದಂಡಗಳನ್ನು ಮೀರಿ ಸ್ತ್ರೀ ನಿಷ್ಠ ವಿಮರ್ಶಾ ಮಾನದಂಡಗಳನ್ನು ಹುಡುಕಿಕೊಂಡರು. ಬಹುಮುಖಿ ಉಭಯಲಿಂಗೆ ಆಶಯಗಳ ಪ್ರಾತಿನಿಧಿಕ ವಿಮರ್ಶೆಯ ಪರಿಭಾಷೆಗಳ ಪರಿಚಯವನ್ನು ಈ ಸಂಪುಟದಲ್ಲಿ ಕಾಣಬಹುದು.

**ಸ್ತ್ರೀವಾದಿ ಸಂಪುಟ ಐದು : ಉಭಯಲಿಂಗಿ ಜ್ಞಾನದ ಪರಿ ಇಂತು :** ಆರ್ಥಿಕ ಸಂರಚನೆಯಲ್ಲಿ ಹುದುಗಿರುವ ಸಾಮಾಜಿಕ, ಸಾಂಸ್ಕೃತಿಕ ನಮ್ಮ ಬದುಕಿನ ಸ್ವರೂಪವನ್ನು ನಿರ್ಧರಿಸುತ್ತದೆ. ಬಹುತ್ವವನ್ನು ಒಳಗೊಂಡಿರುವ ಮನುಷ್ಯನ ಸಾಮಾಜಿಕ ಸಾಂಸ್ಕೃತಿಕ ಬದುಕನ್ನು ಕಾಲ, ದೇಶಗಳು ನಿರ್ಧರಿಸುತ್ತವೆ ಎನ್ನುವ ಸಾಮಾಜಿಕ ವ್ಯಾಖ್ಯಾನ ನಾವು ಕಾಣುವ ಪ್ರಪಂಚವನ್ನು ಕುರಿತಾದದ್ದು. ಆಯಾಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳೆಲ್ಲವೂ ಪುರುಷಮಯಗೊಂಡಿರುವುದರಿಂದ ಉತ್ಪಾದಕ ನೆಲೆಯಲ್ಲಿ

ಮಹಿಳೆ ಕಾಣೆಯಾಗಿರುವಳು. ರೂಢಿಗತ ಮಹಿಳೆಯರ ಬದುಕಿನ ಸ್ಥಿತಿಗತಿಗಳನ್ನು ಸ್ತ್ರೀವಾದಿ ಪ್ರಜ್ಞೆಯ ಮೂಲಕ ಅಳೆಯಹೊರಟಿದ್ದರ ಹಿಂದೆ ಪಶ್ಚಿಮದಲ್ಲಿ ನಡೆದ ಮಹಿಳಾ ಚಳುವಳಿಯ ಒತ್ತಾಸೆಗಳಿವೆ. ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ನಲುಗಿಹೋದ ಹೆಣ್ಣು ಜೀವದ ಕಾರಕಾರಣಗಳನ್ನು ಹುಡುಕುವ ಪ್ರಯತ್ನ ಒಂದು ಕಡೆಯಾದರೆ ಇನ್ನೊಂದು ಕಡೆ ಸ್ತ್ರೀವಾದಿ ಪ್ರಜ್ಞೆಯ ನೆಲೆಯಲ್ಲಿ ಸ್ತ್ರೀ ಸಂಸ್ಕೃತಿಯ ಶೋಧದ ಪ್ರಯತ್ನಗಳು ಆಧುನಿಕ ಓದಿನ ಮುಖೇನ ಕಾಣಿಸಿಕೊಂಡಿತು. ಹೊರ ಮತ್ತು ಒಳಜಗತ್ತಿನ ಶಕ್ತಿ ಕೇಂದ್ರಗಳೆಂದು ಭಾವಿಸಿರುವ ಉತ್ಪಾದನಾ ನೆಲಯಲ್ಲಿ ಹೆಣ್ಣು ಗಂಡಿಗೆ ಸಮಾನತೆಯ ಹಕ್ಕೊತ್ತಾಯವನ್ನು ಸ್ತ್ರೀವಾದಿ ವಿಚಾರಧಾರೆ ಪ್ರತಿಪಾದಿಸಿತು. “ಸ್ತ್ರೀವಾದಿ ವಿಮರ್ಶೆಯು ಸಾಹಿತ್ಯದಲ್ಲಿ ಸ್ಥಾಪಿತವಾದ ಪುರುಷ ಶ್ರೇಷ್ಠತೆಯ ವಿರುದ್ಧ ತನ್ನ ಹೋರಾಟವನ್ನು ಹಲವು ರೀತಿಗಳಲ್ಲಿ ಮಾಡಬೇಕಾಗಿದೆ. ಈ ಹೋರಾಟಕ್ಕೆ ಬೀಳಿಸುವುದರಲ್ಲಷ್ಟೇ ಆಸಕ್ತಿಯಿಲ್ಲ. ಕಟ್ಟುವುದರಲ್ಲಿ ಕೂಡ. ರಚನಾತ್ಮಕವಾದ ತಮ್ಮ ಕರ್ತವ್ಯಗಳನ್ನು ಈ ವಿಮರ್ಶೆ ಮರೆಯುವಂತಿಲ್ಲ. ಆದ್ದರಿಂದ ಸ್ತ್ರೀವಾದಿ ನೆಲೆಯಿಂದ ಬರುವ ಸಾಹಿತ್ಯಕ್ಕೆ ಆದ್ಯ ಗಮನ ನೀಡುತ್ತವೆ” ಎಂದು ಡಾ.ವಿಜಯಾ ದಬ್ಬೆಯವರು ಸ್ತ್ರೀವಾದ ಕನ್ನಡ ಸಾಹಿತ್ಯ ಲೋಕವನ್ನು ಪ್ರವೇಶಿಸುವ ಹೊತ್ತಿನಲ್ಲಿ ಹೇಳಿರುವ ವಿಚಾರಗಳು ಮುಂದಿನ ದಿನಗಳಲ್ಲಿ ಮಹಿಳೆಯರ ಬರಹಕ್ಕೆ ತಾತ್ವಿಕ ಚೌಕಟ್ಟನ್ನು ನೀಡಿದವು. ಸ್ತ್ರೀವಾದಿ ಸೈದ್ಧಾಂತಿಕ ಚೌಕಟ್ಟು ಬಹುರೂಪದ್ದು. ವರ್ಗ ವರ್ಣಗಳಲ್ಲಿ ಹಂಚಿಹೋಗಿರುವ ಭಾರತದ ಮಹಿಳೆಯರ ಬದುಕಿನ ಅನ್ವೇಷಣೆ ಪಶ್ಚಿಮದ ಚೌಕಟ್ಟಿಗೆ ಒಗ್ಗುವುದರಲ್ಲಿ ಹಲವು ಅನುಮಾನಗಳನ್ನು ಹುಟ್ಟುಹಾಕಿದವು. ಪುರುಷ ದ್ವೇಷ ಮತ್ತು ಕೌಟುಂಬಿಕ ಬದುಕನ್ನು ಮುರಿಯುವ ಮನೆಮುರಿಕಿಯರೆಂದು ಭಾವಿಸುವ ಹಾಗೇ ಸ್ತ್ರೀವಾದದ ಸೈದ್ಧಾಂತಿಕತೆಯನ್ನು ಮೊದಮೊದಲು ಅನುಮಾನದಿಂದ ನೋಡಲಾಯಿತು. ಇದಕ್ಕೆ ಕಾರಣ ಶ್ರೇಣೀಕೃತ ನೆಲೆಯಿಂದ ಬಂದ ಮಹಿಳೆಯರ ಗ್ರಹಿಕೆಗಳಾಗಿದ್ದವು. ನಂತರದ ದಿನಗಳಲ್ಲಿ ಭಾರತದ ಚರಿತ್ರೆ ಮುಖೇನ ಸ್ತ್ರೀವಾದಿ ಸಿದ್ಧಾಂತವನ್ನು ಅರ್ಥೈಸಿಕೊಳ್ಳುವ ಪ್ರಯತ್ನಗಳು ಹಲವು ನೆಲೆಯಿಂದ ಬಂದ ಮಹಿಳೆಯರ ಮೂಲಕ ನಡೆದ ಕಾರಣ ಸ್ತ್ರೀವಾದ ವಿಶ್ವಾಸಾರ್ಹತೆಯನ್ನು ಸಮಾಜದಲ್ಲಿ ಗಳಿಸಲು ಸಾಧ್ಯವಾಯಿತು. ಈ ಸಾಧ್ಯತೆಗಳನ್ನು ಈ ಸಂಪುಟದ ಬರಹಗಳಲ್ಲಿ ಕಾಣಬಹುದು.

**ಅಂಕಣ ಬರಹ ಸಂಪುಟ ಆರು : ಮಾರುಕಟ್ಟೆಯೊಳಗೆ ಮಾನಸಿಯ ಮಾತುಗಳು:** ಕನ್ನಡ ಸಾಹಿತ್ಯದ ಪ್ರಕಾರಗಳಿಗೆ ಹೋಲಿಸಿದರೆ ಅಂಕಣ ಬರಹಗಳು ಇತ್ತೀಚಿನ ಬೆಳೆಯಾಗಿದೆ. ಇದು ಒಂದು ರೀತಿಯಲ್ಲಿ ವಿಮರ್ಶಕರ ಮತ್ತು ಗಂಭೀರ ಓದುಗರ ಅಲಕ್ಷಕ್ಕೆ ಇತ್ತೀಚಿನವರೆಗೂ ಒಳಗಾದ ಪ್ರಕಾರವಾಗಿತ್ತು. ಸಾಹಿತ್ಯಕ್ಕಿರುವ ಮಹತ್ವವನ್ನು ಅಂಕಣ ಬರಹಕ್ಕೆ ನೀಡದೆ ಹೋದ ಕಾರಣ ಸಾಹಿತಿಗಳು ಈ ಪ್ರಕಾರದ ಕೃಷಿಯಲ್ಲಿ ಹೆಚ್ಚು ತೊಡಗಿದಂತಿಲ್ಲ ಡಿ.ವಿ.ಜಿ., ಪಾ.ವೆಂ., ನಿರಂಜನರು, ಹಾ.ಮಾ.ನಾಯಕರಂತಹವರು ಇದನ್ನು ಗಂಭೀರವಾಗಿ ತೆಗೆದುಕೊಂಡ ಕಾರಣದಿಂದ ಸಾಹಿತ್ಯದ ಪ್ರಕಾರಗಳ ವ್ಯಾಪ್ತಿಗೆ ಇತ್ತೀಚೆಗೆ ಸೇರಿಸಲ್ಪಟ್ಟಿದೆ. ಸ್ವತಃ ಪತ್ರಿಕೆಯನ್ನು ಹುಟ್ಟುಹಾಕಿದ ಲಂಕೇಶ, ತೇಜಸ್ವಿ, ಚಂದ್ರಶೇಖರ ಪಾಟೀಲರಂಥವರು ಅಂಕಣ ಬರಹಗಳ ಮೂಲಕವೇ ಗುರುತಿಸಿಕೊಂಡಿದ್ದುಂಟು. ಸಮಕಾಲೀನ ಬಿಕ್ಕಟ್ಟುಗಳನ್ನು ಗಮನದಲ್ಲಿಟ್ಟುಕೊಂಡು ಬೆಳೆದ

ಈ ಪ್ರಕಾರ ಇಂದು ಎಲ್ಲರನ್ನು ಒಳಗೊಳ್ಳುತ್ತಿದೆ. ಕನ್ನಡದ ಮುಖ್ಯ ಬರಹಗಾರರು ಮತ್ತು ಯುವ ಬರಹಗಾರರು ಇಂದು ಪತ್ರಿಕೆಗಳಲ್ಲಿ, ಬ್ಲಾಗ್‌ಗಳಲ್ಲಿ, ಅಂಕಣಗಳನ್ನು ಬರೆಯುತ್ತಿರುವರು. ಅಂಕಣಗಳಿಲ್ಲದೆ ಪತ್ರಿಕೆಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಗದ ಹಾಗೆ ಇಂದು ಅಂಕಣ ಬರಹ ಮಾನ್ಯತೆಗೆ ಒಳಗಾಗಿದೆ.

ಅಂಕಣ ಬರಹಕ್ಕೆ ಸಮ್ಮಂದಿಸಿ ಹೇಳುವುದಾದರೆ, ಎರಡು ರೀತಿಯ ಅಂಕಣಕಾರರನ್ನು ಕಾಣುತ್ತೇವೆ. ಒಂದು ಸಾಹಿತಿಗಳು ಬರೆಯುವ ಅಂಕಣಗಳು ಮತ್ತು ಭಿನ್ನ ಭಿನ್ನ ಕ್ಷೇತ್ರದ ತಜ್ಞರು ಬರೆಯುವ ಅಂಕಣ, ಸಾಹಿತಿಗಳು ಬರೆಯುವ ಅಂಕಣಕ್ಕೂ ವಿಷಯ ಪರಿಣಿತರು ಬರೆಯುವ ಅಂಕಣಗಳ ಉದ್ದೇಶ, ವ್ಯಾಪ್ತಿ, ವಸ್ತುವಿಷಯಗಳ ನಿರೂಪಣೆಯಲ್ಲಿ ವ್ಯತ್ಯಾಸಗಳಿರುತ್ತವೆ. ಇದಕ್ಕೆ ಕಾರಣ ಬರಹಗಾರನ ಆಯ್ಕೆ, ಆಸಕ್ತಿ, ಎನ್ನಬಹುದು ಈ ಕಾರಣಕ್ಕಾಗಿಯೇ ಮಹಿಳಾ ಅಂಕಣಕಾರರು ಭಿನ್ನರಾಗುತ್ತಾರೆ.

ಪುರುಷ ಕೇಂದ್ರಿತ ಸಮಾಜವನ್ನು ಪುರುಷ ಮಾನದಂಡದಿಂದಲೇ ವಿಶ್ಲೇಷಣೆಗೆ ಒಳಪಡಿಸುತ್ತಾರೆ. ಅದೇ ಮಹಿಳೆಯರು ತಮ್ಮ ಅಸ್ಮಿತೆಗೆ ಉಂಟಾದ ಎಲ್ಲ ಬಿಕ್ಕಟ್ಟುಗಳನ್ನು ತಮ್ಮದೇ ಆದ ಅನುಭವ, ಭಾಷೆ, ರೂಪಕಗಳ ಮೂಲಕ ಅಭಿವ್ಯಕ್ತಪಡಿಸುತ್ತಾಳೆ. ಪುರುಷರ ಗ್ರಹಿಕೆಗೆ ನಿಲುಕದ ಬದುಕಿನ ಅಮೂರ್ತವಾದ ಹಲವಾರು ಸಂಗತಿಗಳನ್ನು, ಹಿತಾಸಕ್ತಿಗಳನ್ನು ಪ್ರಶ್ನಿಸುವ, ಪರಿವರ್ತಿಸುವ ರೀತಿಯ ಬರಹಗಳನ್ನು ಮಹಿಳೆಯರು ಅಂಕಣದ ರೂಪಿ ಬರಹಕ್ಕೆ ಒಗ್ಗಿಸಿಕೊಂಡಿರುವರು. ಕಳೆದ ಹತ್ತಿಪ್ಪತ್ತು ವರ್ಷಗಳಿಂದ ಕನ್ನಡ ಪತ್ರಿಕೆಗಳು ಮಹಿಳಾ ಅಂಕಣಕಾರರಿಗೆ ನೀಡಿರುವ ಪ್ರೋತ್ಸಾಹ ಆರೋಗ್ಯಕರ ಬೆಳವಣಿಗೆಯಾಗಿದೆ. ಪ್ರಮುಖ ಪತ್ರಿಕೆಗಳಲ್ಲಿ ಮಹಿಳಾ ಅಂಕಣಕಾರರು, ರಾಜಕೀಯ, ಸಾಮಾಜಿಕ ಸಮಸ್ಯೆಗಳು, ಆರೋಗ್ಯ, ನೈರ್ಮಲ್ಯ, ಸಾಹಿತ್ಯ, ಕಲೆ ಮುಂತಾದವುಗಳ ಕುರಿತು ಬರೆಯುತ್ತಿರುವುದು ಮತ್ತು ಓದುವ ವರ್ಗವನ್ನು ವಿಸ್ತರಿಸುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. ಹೀಗೆ ವಿಭಿನ್ನ ನೆಲೆಯಲ್ಲಿ ವಿಭಿನ್ನ ಪತ್ರಿಕೆ, ಕಾಲಗಳಲ್ಲಿ ಪ್ರಕಟಗೊಂಡ ಸ್ತ್ರೀ ದೃಷ್ಟಿಕೋನದ ಅಂಕಣ ಬರಹಗಳನ್ನು ಪ್ರಾತಿನಿಧಿಕವಾಗಿ ಈ ಸಂಪುಟದ ವ್ಯಾಪ್ತಿಗೆ ಒಳಪಡಿಸಲಾಗಿದೆ.

**ಸಂಕೀರ್ಣ ಸಂಪುಟ ಏಳು : ಬಯಲ ರೂಪಿನ ಬಣ್ಣದ ಬಿಂಬಗಳು :** ಸಂಕೀರ್ಣ ಎಂಬ ಪದ ಬಳಕೆ ನವ್ಯ ವಿಮರ್ಶಕರ ಮೂಲಕ ಸಾಹಿತ್ಯಲೋಕಕ್ಕೆ ಪರಿಚಯವಾದ ಹಾಗಿದೆ "ಯಾವುದೇ ವಿಷಯ-ವಸ್ತುಗಳನ್ನು ಏಕಮುಖಿಯಾಗಿ ಗ್ರಹಿಸದಿರುವಿಕೆಯನ್ನು ಸಂಕೀರ್ಣವೆಂದು ಭಾವಿಸಿದಂತಿದೆ. "ಸರಳವಲ್ಲ, ಜಟಿಲ ಮತ್ತು ಕಷ್ಟಕರವಾದದ್ದು ಎಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಬದುಕಿನ ಸಂಕೀರ್ಣತೆಗೆ ಕಾರಣವಾದ ಸಂಗತಿಗಳ ಮೇಲೆ ಕ್ಷ ಕಿರಣ ಬೀರುವ ಪ್ರಯತ್ನವನ್ನು ಆಯಾ ಕ್ಷೇತ್ರದಲ್ಲಿ ಮಾಡಲಾಗಿದೆ. ಯಾವುದೇ ಸಾಹಿತ್ಯ ಪ್ರಕಾರದಲ್ಲಿ ಸೇರ್ಪಡಿಸಲು ಸಾಧ್ಯವಾಗದ, ವಿಶಿಷ್ಟ ಬರಹಗಳನ್ನು ದಾಖಲೆಯ ಮತ್ತು ಓದುಗರನ್ನು ಗಮನದಲ್ಲಿಟ್ಟುಕೊಂಡು ಸಂಗ್ರಹಿಸಲು ಮುಂದಾದಾಗ ಅದಕ್ಕೊಂದು ಗುರುತು ಬೇಕಾಗಿತ್ತು. ಅದನ್ನು ಸಂಕೀರ್ಣವೆಂದು ಕರೆದು ಭಿನ್ನ ಭಿನ್ನ ಜ್ಞಾನಶಾಖೆಗಳ ಗ್ರಹಿಕೆಗಳನ್ನು ಒಂದೆಡೆ ತರುವ ಪ್ರಯತ್ನವನ್ನು ಪ್ರಾತಿನಿಧಿಕವಾಗಿ ಮಾಡಲಾಗಿದೆ.

ಹೆಣ್ಣು-ಗಂಡುಗಳನ್ನು ಒಳಗೊಂಡ ಹಾಗೇ ಸಮಾಜ ಏಕಕಾಲದಲ್ಲಿ ಹಲವು ಕಾಲಗಳ ಮೌಲ್ಯಗಳ ಕುರಿತು ಮಾತನಾಡುತ್ತಿರುತ್ತದೆ. ಸರಳವಲ್ಲದ ಬದುಕಿನ ಅನುಭವಗಳ ಅನಾವರಣ ಸಂಕೀರ್ಣ ನೆಲೆಯಲ್ಲಿಯೇ ಆಗುವುದು ಸಹಜ. ಒಂದು ವಸ್ತು ವಿಷಯ, ಕ್ಷೇತ್ರ, ಸಂಗತಿ, ಭಾವ, ಬಣ್ಣಗಳ ಕುರಿತು ಮಾತನಾಡುವ ಬರೆಯುವ ಕ್ರಿಯೆ ಮುಂದುವರಿದಂತೆ, ಬೆಳೆದಂತೆ ಹಲವು ನೆಲೆಯಲ್ಲಿ ಅದರ ಸಾಧ್ಯಾಸಾಧ್ಯತೆಗಳನ್ನು ತೆರೆದು ತೋರಿಸುತ್ತದೆ. ಅಂತಹ ಸಾಧ್ಯತೆಗಳು ಕೇವಲ ಪುರುಷರಿಗೆ ಸೀಮಿತಗೊಂಡಿಲ್ಲ. ಮಹಿಳೆಯರು ತಮಗೆ ದೊರೆತ ಅವಕಾಶಗಳ ಅನುಭವಗಳನ್ನು ದಾಖಲಿಸುವಾಗ, ಹಂಚಿಕೊಳ್ಳುವಾಗ ಅನೇಕ ಬಗೆ, ರೀತಿ, ಶೈಲಿ, ಭಾಷೆಯ ಬಳಕೆ, ಪ್ರಯೋಗಗಳು ಕನ್ನಡದ ಸಂದರ್ಭದಲ್ಲಾಗಿವೆ. ಆಧುನಿಕ ಓದಿನ ಕಾರಣದಿಂದ ಮಹಿಳೆಯರು ಹಲವು ಕ್ಷೇತ್ರಗಳಲ್ಲಿ ತಮ್ಮಿರುವಿಕೆಯನ್ನು ಸಾಬೀತುಪಡಿಸುವಾಗಿನ ಅನುಭವಗಳನ್ನು ಹಂಚಿಕೊಂಡ ಬರಹಗಳನ್ನು ಉಪೇಕ್ಷಿಸುವಂತಿಲ್ಲ. ಸಾಹಿತ್ಯ, ಸಂಗೀತ, ರಾಜಕೀಯ, ಧಾರ್ಮಿಕ, ಆರ್ಥಿಕ, ವಿಜ್ಞಾನ, ಮಾನವೀಕ, ರಂಗಭೂಮಿ, ಅಭಿನಯ, ಮಾಧ್ಯ, ಬಣ್ಣ, ಉದ್ಯಮ ಮುಂತಾದ ರಂಗಗಳಲ್ಲಿ ಪ್ರವೇಶಿಸಿರುವಳು. ಈ ಕ್ಷೇತ್ರಗಳ ಅನುಭವಗಳನ್ನು, ಅವುಗಳ ಪರಿಚಯಿಸುವ ವಿಕಾಸದ ಮಾದರಿಗಳನ್ನು ವಿಶಿಷ್ಟವಾಗಿ ಕಟ್ಟಿಕೊಟ್ಟಿರುವರು. ಓದುಗರ ಅಭಿರುಚಿಯನ್ನು ಮತ್ತು ಚಿಂತನಾಶೀಲತೆಯನ್ನು ಉದ್ದೀಪಿಸುವ ಮಹಿಳೆಯರ ಬರಹಗಳ ಒಟ್ಟುಗೂಡುವಿಕೆಯ ಕಾರಣ ಸಂಕೀರ್ಣ ಸಂಪುಟವೊಂದು ಸಿದ್ಧಗೊಂಡಿದೆ.

**ಜಾನಪದ ಸಂಪುಟ ಎಂಟು : ಹಾಡು ಹಾಡೆಂದರೆ ಏನೆಂದು ಹಾಡಲಿ... ಹಾಡಲ್ಲ ಅದು ನಮಪಾಡ :** ಜಾನಪದ ಸಾಹಿತ್ಯ ಸಂದರ್ಭದಲ್ಲಿ ಒಂದು ಜನಪ್ರಿಯವಾದ ವ್ಯಾಖ್ಯಾನವಿದೆ. ಅದೇನೆಂದರೆ "ಜನವಾಣಿ ಬೇರು; ಕವಿವಾಣಿ ಹೂ" ಎಂದು ಈ ಜನವಾಣಿಯ ಬೇರಿಗೆ ನೀರೆರೆದವರು ನೀರೆಯರು ಎಂಬುದನ್ನು ಕೂಡಾ ಚರಿತ್ರೆ ಮರೆಮಾಚಿದೆ. ಬ್ರಿಟೀಷರಾಗಮನದಿಂದ ಬೆಳಕು ಬೆಂಕಿ ಕೂಡಿಯೆ ಈ ನೆಲದಲ್ಲಿ ಹಲವು ಪಲ್ಲಟಗಳನ್ನುಂಟು ಮಾಡಿದ್ದವು. ಮೌಖಿಕ ಪರಂಪರೆಯಲ್ಲಿದ್ದ ಬದುಕಿನ ಶ್ರೀಮಂತ ದಾಖಲೆಗಳನ್ನು ಸಂಗ್ರಹಿಸುವ, ಸಂಪಾದಿಸುವ ಕೆಲಸಗಳನ್ನೆಲ್ಲ ಮೊದಲ ತಲೆಮಾರಿನ ಶಿಷ್ಟ ಸಾಹಿತಿಗಳು ಮಾಡಿದರು. ಕೈಗಾರೀಕರಣದಿಂದ ಉದ್ಭವಿಸಿದ ಬಿಕ್ಕಟ್ಟಿಗೆ ತಾಯ್ತನದಂತಿದ್ದ ಜಾನಪದ ಸಾಹಿತ್ಯ ಸಂಸ್ಕೃತಿಯಲ್ಲಿ ಪರಿಹಾರಗಳಿವೆ ಎಂದು ಶಿಷ್ಟಲೋಕ ಪರಿಭಾವಿಸಿತ್ತು. ಆದರೆ ತಾಯಿಯನ್ನೇ ಹೆಡೆಮುರಿಗಿ ಕಟ್ಟಿ ಕತ್ತಲಲ್ಲಿ ಕೂಡಿಹಾಕಿದ್ದನ್ನು ಮರೆತಿತ್ತು. ಹೆಣ್ಣಿನ ಚಾರಿತ್ರಿಕ ಸೋಲಿಗೆ ಕಾರಣಗಳನ್ನು ಅಕ್ಷರವಂಚಿತ ಮಹಿಳೆಯರು ಅನುಭಾವಾಧಾರದ ಮೇಲೆ ಮೌಖಿಕವಾಗಿ ದಾಖಲಿಸುವುದನ್ನು ಮರೆಯಲಿಲ್ಲ. ಹೆಣ್ಣಿನ ಯಾತನಾಮಯ ಬದುಕಿಗೆ ಕಾರಣಗಳನ್ನು ಸಾಮಾನ್ಯ ಹೆಣ್ಣು ಮಹಿಳೆಯೊಬ್ಬಳು ಗ್ರಹಿಸಿದ ರೀತಿ ವಿಸ್ಮಯಗೊಳಿಸುವಂತಿದೆ.

**"ಹೆಣ್ಣಿನ ಗೋಳಹತ್ತಿ ಬನ್ನಿಯ ಮರಬೆಂದೋ**

**ಅಲ್ಲಿ ಸನ್ಯಾಸಿ ಮಠ ಬೆಂದು ಹಾರವರ**

ಪಂಚಾಂಗ್ಲತ್ತಿ ಉರಿದಾವೋ” -

ಹೆಣ್ಣಿಗೆ ಅಕ್ಷರದ ಬಾಧ್ಯಸ್ಥಿಕೆಯಿಲ್ಲದಿದ್ದರು ಅರಿವಿನ ಬಾಯಾಗಿ ಮಾತನಾಡಿರುವರು. ಭೂಮಿ ಮೇಲಿನ ಅಸಂಖ್ಯಾತ ಹೆಣ್ಣುಜೀವಗಳ ಗೋಳಿಗೆ ಕಾರಣವನ್ನು ಗುರುತಿಸುವಲ್ಲಿ



ಅನುಭವವೊಂದೆ ಆಧಾರವೆಂಬುದನ್ನು ಗಂಭೀರವಾಗಿ ಪರಿಗಣಿಸುವಂತಹದ್ದು. ತಮ್ಮ ಇರುವಿಕೆಯ ಅರಿವು ಅನುಭವಕ್ಕೆ ಬಂದ ಮೇಲೆ ಪ್ರತಿಭಟಿಸುವ ಪ್ರಶ್ನಿಸುವ, ಅಸಹಾಯಕತೆ, ತೋರ್ಪಡಿಸುವ ಹಲವು ಮಾರ್ಗಗಳಲ್ಲಿ (ಪ್ರಕಾರಗಳಲ್ಲಿ) ದಾಖಲಿಸಿರುವರು. ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ದಿನಗಳಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಜಾನಪದಕ್ಕೆ ಬೇಡಿಕೆ ಬಂದಾಗ ವ್ಯಾಪಾರಕ್ಕೆ ಮುಂದಾದವರು ಗಂಡಸರೇ ಆಗಿದ್ದರು. ಇದರ ಮಧ್ಯದಲ್ಲಿಯು ಅಕ್ಷರಲೋಕಕ್ಕೆ ತೆರೆದುಕೊಂಡ ಮಹಿಳೆಯರು ಪೂರ್ವಿಕರ ಮೌಖಿಕ ಪರಂಪರೆಯಲ್ಲಿ ತಾವಿರುವುದನ್ನು ಅರಿತರು. ಅಕ್ಷರಲೋಕಕ್ಕೆ ತೆರೆದುಕೊಂಡ ಹೆಣ್ಣುಮಕ್ಕಳು ಜಾನಪದ ಬದುಕನ್ನು, ಸಂಸ್ಕೃತಿಯನ್ನು ಅರ್ಥೈಸಿಕೊಂಡಿರುವ ಬರಹವನ್ನು ಪ್ರಾತಿನಿಧಿಕವಾಗಿ ಸಂಗ್ರಹಿಸುವ ಹಂಬಲದಿಂದ ಮಹಿಳಾ ಜಾನಪದ ಸಂಪುಟ ಸಿದ್ಧಗೊಂಡಿದೆ. ಹೀಗೆ ಒಟ್ಟು ಎಂಟು ಸಂಪುಟಗಳು ಪರಿಷತ್ತಿನ ಹಿರಿಮೆಗೆ ಗರಿಯಂದೇ ಭಾವಿಸುವೆ.

ಕನ್ನಡ ಸಾಹಿತ್ಯ ಪರಿಷತ್ತು ದಲಿತ ಸಾಹಿತ್ಯ ಸಂಪುಟಗಳನ್ನು ಹೊರತರುವುದರ ಮೂಲಕ ಚಾರಿತ್ರಿಕ ಮೈಲುಗಲ್ಲೊಂದನ್ನು ಊರಿತ್ತು. ಈ ಹೊತ್ತಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮನು ಬಳಿಗಾರ ಅವರಿಗೆ ಮಹಿಳಾ ಸಾಹಿತ್ಯ ಸಂಪುಟಗಳನ್ನು ಹೊರತರುವ ಕುರಿತು ಪತ್ರವೊಂದನ್ನು ಬರೆದಾಗ ಅದಕ್ಕೆ ತಕ್ಷಣ ಸ್ಪಂದಿಸಿ ಕಾರ್ಯೋನ್ಮುಖರಾದರು. ಈ ಮಾಲಿಕೆಗಳ ಸಂಪಾದಕತ್ವದ ಜವಾಬ್ದಾರಿಯನ್ನು ನನಗೆ ವಹಿಸಿದರು ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಗಂಭೀರವಾದ ಕಾರ್ಯ ಮಾಡಿರುವ ಲೇಖಕಿಯರನ್ನು ಸಂಪರ್ಕಿಸಿ ಇಂತಹದೊಂದು ಮಹತ್ತರವಾದ ಕೆಲಸ ಮಾಡಿಕೊಡಲು ಸಭೆ ಕರೆದು ಎಂಟು ಸಂಪುಟಗಳ ಸಂಪಾದನಾ ಜವಾಬ್ದಾರಿಯನ್ನು ವಹಿಸಿದರು. ಕಾಲಬದ್ಧ ಯೋಜನೆಯೆಂದು ಪದೇ ಪದೇ ನೆನಪಿಸಿ ಕಡಿಮೆ ಅವಧಿಯಲ್ಲಿ ಗಂಭೀರವಾದ ಕೆಲಸವನ್ನು ನಮ್ಮಿಂದ ಮಾಡಿಸಿದ ತಾಯಿ ಹೃದಯದ ಡಾ.ಮನು ಬಳಿಗಾರ ಅವರಿಗೆ ಅನಂತ ಕೃತಜ್ಞತೆಗಳು.

ಪರಿಷತ್ತಿನ ಪ್ರಕಟಣೆಯ ಜವಾಬ್ದಾರಿಯನ್ನು ಹೊತ್ತಿರುವ ಹಿರಿಯರಾದ ಡಾ.ಪದ್ಮರಾಜ ದಂಡಾವತಿಯವರು ನಮ್ಮ ಆಮೆಗತಿಯ ನಡಿಗೆಯನ್ನು ತೀವ್ರಗೊಳಿಸುವಂತೆ ಉತ್ತೇಜಿಸಿ ನಮ್ಮಿಂದ ಇಂತಹದೊಂದು ಮಹತ್ವದ ಕೆಲಸ ಮಾಡಿಸಿರುವರು. ಅವರಿಗೆ ಕೃತಜ್ಞತೆಗಳನ್ನು ತಿಳಿಸುವುದು ನಮ್ಮ ಕರ್ತವ್ಯ. ಈ ಎಂಟು ಸಂಪುಟಗಳ ಜವಾಬ್ದಾರಿಯನ್ನು ಹೊತ್ತ ನನಗೆ ಹೆಗಲೆಣೆಯಾದ ಸಹೋದರಿ ಪಿ.ಚಂದ್ರಿಕಾ, ಡಾ.ಆಶಾದೇವಿ, ಡಾ.ಪದ್ಮನಿ

ನಾಗರಾಜು, ಪ್ರತಿಭಾ ನಂದಕುಮಾರ, ಡಾ.ಲಕ್ಷ್ಮಿದೇವಿ, ಡಾ.ತಮಿಳ್ ಸೆಲ್ವಿ ಮತ್ತು ಬಾ.ಹಾ.ರಮಾಕುಮಾರಿ, ಡಾ.ಗುರುದೇವಿ ಹುಲ್ಲೆಪ್ಪನವರ ಇವರಿಗೆಲ್ಲ ಕೃತಜ್ಞತೆಗಳನ್ನು ಹೇಳುವುದು ಔಪಚಾರಿಕವಲ್ಲ. ನಾಡಿನುದ್ದಕ್ಕೂ ಸಾಹಿತ್ಯ ಕೃಷಿಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿರುವ ಲೇಖಕಿಯರನ್ನು ಒಳಗೊಳ್ಳಬೇಕೆಂಬ ಹಂಬಲ ನಮ್ಮದಾಗಿದ್ದರೂ ಕಾಲಮಿತಿ ಮತ್ತು ಸಂಪರ್ಕಿಸುವ ಸಾಹಸದಲ್ಲಿ ಯಶಸ್ಸು ಕಾಣದೆ ಕೊನೆಗೆ ಪ್ರಾತಿನಿಧಿಕತನವನ್ನು ಮುಂದಿಟ್ಟುಕೊಂಡು ಈ ಮಹತ್ತರ ಯೋಜನೆಯನ್ನು ಪೂರೈಸಿದ ಸಂತೋಷ ನಮಗಿದೆ. ಇದು ಪ್ರಾರಂಭವಷ್ಟೇ ಮುಂದಿನ ದಿನಗಳಲ್ಲಿ ಇದರ ಮುಂದುವರಿಕೆಯಾದ ಗಮನಾರ್ಹವಾದದ್ದನ್ನು ಸಾಧಿಸುತ್ತೇವೆ ಎಂಬ ವಿಶ್ವಾಸ ಮೂಡಿಸಿದ



ಪರಿಷತ್ತಿಗೆ ಕೃತಜ್ಞತೆಗಳು. ಕಾರ್ಯದರ್ಶಿಯಾದ ರಾಜಶೇಖರ ಹತಗುಂದಿ, ಚೆನ್ನೇಗೌಡ ಅವರಿಗೂ ಮತ್ತು ಲೇಖನಗಳ ಸಂಗ್ರಹಿಸುವಲ್ಲಿ ಸಹಾಯ ಮಾಡಿದ ಡಾ.ವೆಂಕಟಗಿರಿ ದಳವಾಯಿ ಅವರಿಗೂ ಮತ್ತು ಸಕಾಲಕ್ಕೆ ಅಂದವಾಗಿ ಅಕ್ಷರ ಸಂಯೋಜನೆ ಮಾಡಿಕೊಟ್ಟ ಪ್ರೀತಿಯ ಹುಡುಗ ಕೊಟ್ರೇಶ್ ಕೊಟ್ಟೂರು, ನಾಗರತ್ನಾಳಿಗೂ ಹಾಗೂ ಪ್ರಕಟಣಾ ವಿಭಾಗದ ಎಲ್ಲರಿಗೂ ನೆನಕೆಗಳು.

ಕನ್ನಡ ಸಾಹಿತ್ಯ ಪರಿಷತ್ತು ಇಂತಹದೊಂದು ಚಾರಿತ್ರಿಕ ಕಾರ್ಯ ಮಾಡುತ್ತಿರುವ ಹೊತ್ತಿನಲ್ಲಿ ಪರಿಷತ್ತಿನ ಅಧ್ಯಕ್ಷರು ಅತ್ಯಂತ ಆಸಕ್ತಿ ಮತ್ತು ಎಚ್ಚರಿಕೆಯಿಂದ ಸಲಹೆ ಸೂಚನೆಗಳನ್ನು ನೀಡುವಾಗಲೆಲ್ಲ ಲೇಖಕಿಯರ ಅನುಮತಿಯನ್ನು ಕಡ್ಡಾಯವಾಗಿ ಪಡೆಯಲೇಬೇಕು ಎನ್ನುತ್ತಿದ್ದರು. ಜಗತ್ತನ್ನು ನೋಡಬೇಕು, ಜಗತ್ತು ನಮ್ಮನ್ನು ಗಮನಿಸಬೇಕು ಎನ್ನುವ ಉದಾರವಾದ ಮನೋಭಾವ ಲೇಖಕಿಯರಲ್ಲಿದೆ. ಕಡಿಮೆ ಅವಧಿಯಲ್ಲಿ ಬೃಹತ್ ಕೆಲಸಕ್ಕೆ ಕೈ ಹಾಕಿರುವುದರಿಂದ ಬಹುಪಾಲು ಲೇಖಕಿಯರನ್ನು ಸಂಚಾರಿ ವಾಣಿಯ ಮೂಲಕ ಸಂಪರ್ಕಿಸಿ ಅನುಮತಿ ಪಡೆದಿದ್ದೇವೆ. ಎಷ್ಟೋ ಜನ ಹಿರಿಯ ಜೀವಗಳು ನಮ್ಮೊಂದಿಗಿಲ್ಲ, ಅವರ ಬರಹವನ್ನು ಬಿಡುವಂತಿಲ್ಲ, ಅವರ ಸಂಬಂಧಿಕರನ್ನು ಸಂಪರ್ಕಿಸುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಲಾಗಿದೆ. ಎಷ್ಟೋ ಜನ ಲೇಖಕಿಯರ ಹಳೆಯ ವಿಳಾಸಗಳು, ಫೋನ್ ನಂಬರುಗಳು ಬದಲಾಗಿವೆ. ಹೀಗಾಗಿ ಆ ತೊಂದರೆಯನ್ನು ಅನುಭವಿಸುವುದು ಅನಿವಾರ್ಯವಾಗಿತ್ತು. ಎಲ್ಲ ಮಿತಿಗಳ ಮಧ್ಯದಲ್ಲಿ ಒಂದು ಚಾರಿತ್ರಿಕ ಕಾರ್ಯಮಾಡುತ್ತಿರುವುದರಿಂದ ನಮ್ಮೆಲ್ಲ ಲೇಖಕಿಯರು ಗೌರವದಿಂದ ಈ ಕೆಲಸವನ್ನು ಮನಸಾರೆ ಒಪ್ಪಿಕೊಳ್ಳುವರೆಂಬ ನಂಬಿಕೆ ನಮಗಿದೆ.

**-ಡಾ. ಮಲ್ಲಿಕಾ ಘಂಟಿ**

## ಪ್ರಸ್ತಾವನೆ

**ಒಳಕುದಿಯ ಹೊರಹಾಕುವ ಜೀವಗಳ ಹಸಿಮಾತು....**

ವಿಶ್ವಕಥಾ ಕೋಶದ ಮೊದಲ ಸಂಪುಟಕ್ಕೆ ಬರೆದ ಪ್ರಸ್ತಾವನೆಯಲ್ಲಿ ನಿರಂಜನರು, “ಕಾದಂಬರಿಕಾರರಾಗಿ ಮಾರ್ಪಟ್ಟ ನಮ್ಮ ಸಣ್ಣ ಕಥೆಗಾರರ ಸಂಖ್ಯೆ ದೊಡ್ಡದು. ಕನ್ನಡದಲ್ಲಿ ಸಣ್ಣಕಥೆಗೆ ಭದ್ರ ಬುನಾದಿ ಹಾಕಿದ ಶ್ರೀನಿವಾಸರೂ ಅಪವಾದವಲ್ಲ. ಒಳ್ಳೆಯ ಅನೇಕ ಕಥೆಗಾರರು ಕಾದಂಬರಿ ಲೋಕದಲ್ಲಿ ತಲ್ಲೀನರಾದರೂ, ಹೊಸ ಸಣ್ಣ ಕಥೆಗಾರರು ಮತ್ತೆ ಮತ್ತೆ ಒಳ್ಳೆಯ ಕೃತಿಗಳನ್ನು ರಚಿಸಿ, ವಾಚಕರ ಗಮನವನ್ನು ಸೆಳೆಯುತ್ತಲ್ಲೇ ಇದ್ದಾರೆ” ಎಂದು ಉಲ್ಲೇಖಿಸುತ್ತಾರೆ. ಕನ್ನಡದಲ್ಲಿ ಸಣ್ಣಕಥೆ ಒಂದು ವಿಶಿಷ್ಟ ರೂಪವಾಗಿ ಜನ್ಮ ತಾಳಿ ಸುಮಾರು ನೂರು ವರ್ಷಗಳ ಹಿಂದೆ ಹೊಸಗನ್ನಡದಲ್ಲಿ ಚಿಗುರೊಡೆದು ಈವರೆಗೂ ಅನೇಕ ಕತೆಗಾರರ ಸಣ್ಣ ಕಥೆಗಳು ಪ್ರಕಟವಾಗುತ್ತಲೇ ಇವೆ. ಆಯಾ ಕಾಲಘಟ್ಟದ ವಿಶೇಷಗಳನ್ನು ಮೈಗೂಡಿಸಿಕೊಂಡು ಸಾಂದರ್ಭಿಕವಾಗಿ ಹೊಸ ರೀತಿಯ ಮರುಹುಟ್ಟನ್ನು ಪಡೆದರೂ, ಕತೆಗಳು ಪರಿಣಾಮದ ದೃಷ್ಟಿಯಿಂದ ಬದಲಾಗಿಲ್ಲ ಎನ್ನುವುದನ್ನು ಗಮನಿಸಬೇಕಾಗಿದೆ.

ಡಾ.ಕರೀಗೌಡ ಬೀಚನಹಳ್ಳಿಯವರು ತಮ್ಮ 'ಶತಮಾನದ ಸಣ್ಣಕತೆಗಳು ಸಮೀಕ್ಷೆಯಲ್ಲಿ “ಆಧುನಿಕ ಕನ್ನಡ ಕಥಾ ಸಾಹಿತ್ಯವನ್ನು ಪ್ರಮುಖವಾಗಿ ಅದರ ಆಶಯ, ಧೋರಣೆ, ಸಂವೇದನೆ, ಗ್ರಹಿಕೆಗಳಿಗನುಗುಣವಾಗಿ ಮೂರು-ನಾಲ್ಕು ಘಟ್ಟಗಳಲ್ಲಿ ವಿಶ್ಲೇಷಿಸಬಹುದು” ಎಂದು ಹೇಳಿದ್ದಾರೆ. ವಿಮರ್ಶಕ ದಂಡಪ್ಪನವರು ತಮ್ಮ ಸಂಪಾದನಾ ಕೃತಿ “ನೀರೋಳಗಣ ಬೆಳಕು'ವಿನಲ್ಲಿ ಅಧ್ಯಯನದ ದೃಷ್ಟಿಯಿಂದ ನಾಲ್ಕು ವಿಭಾಗಗಳಾಗಿ ವಿಭಾಗಿಸಿದ್ದಾರೆ. ಇಲ್ಲಿ ಅವರು ಕೊಡುವ ಕಾರಣಗಳು ಏನೆಂದರೆ ಒಂದು ಕಾಲಘಟ್ಟದಲ್ಲಿ ಬರೆಯುತ್ತಿರುವವರು ಮತ್ತೊಂದು ಕಾಲಘಟ್ಟದಲ್ಲಿ ಆಯಾ ಯುಗಧರ್ಮಕ್ಕೆ ಅನುಗುಣವಾಗಿ ಬರೆಯುತ್ತಿದ್ದಾರೆ. ಆದರೂ ಸಹ ಒಂದೊಂದು ಕಾಲಘಟ್ಟಕ್ಕೆ ಕೆಲವು ಸಾಮಾನ್ಯ ಎನಿಸಬಹುದಾದ ಅಂಶಗಳನ್ನು ಗುರುತಿಸಲು ಸಾಧ್ಯವಿರುವುದರಿಂದಾಗಿ ಈ ಮೇಲ್ಕಂಡ ಘಟ್ಟಗಳಲ್ಲಿ ಗುರುತಿಸಿ ಅಧ್ಯಯನ ಮಾಡುವುದು ಉಪಯುಕ್ತ ವೆನಿಸಬಹುದು' ಎಂಬ ಮಾತುಗಳನ್ನು ಪರಿಗಣಿಸಬಹುದಾಗಿದೆ. ಎಪ್ಪತ್ತರ ದಶಕದಲ್ಲಿ ಬರೆಯುತ್ತಿರುವವರು ಇಪ್ಪತ್ತೊಂದನೆಯ ಶತಮಾನದಲ್ಲಿಯೂ ಸಕ್ರಿಯವಾಗಿ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವುದು ಗಮನಾರ್ಹ.

'ಹೊಸಗನ್ನಡ ಸಾಹಿತ್ಯ ಚರಿತ್ರೆ' ಕೃತಿಯಲ್ಲಿ ಎಲ್.ಎಸ್.ಶೇಷಗಿರಿರಾವ್ ಅವರು “ಆಧುನಿಕ ಕನ್ನಡ ಸಣ್ಣ ಕಥೆಯ ಚರಿತ್ರೆಯು, ಆಧುನಿಕ ಕನ್ನಡ ಕಾದಂಬರಿಯ ಚರಿತ್ರೆಯನ್ನೇ ಬಹುಮಟ್ಟಿಗೆ ಹೋಲುತ್ತದೆ. ಸಣ್ಣ ಕಥೆ ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಕನ್ನಡದಲ್ಲಿ ಮೂಡಿ ಬಂದಿದ್ದು, ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಎನ್ನಬೇಕು”

ಎನ್ನುವ ಅವರ ಅಭಿಪ್ರಾಯವೇನೋ ಸರಿಯೇ. ಆದರೆ ಭಾರತೀಯ ಸಂದರ್ಭದಲ್ಲಿ ಕಥಾಸಾಹಿತ್ಯಕ್ಕೆ ತನ್ನದೇ ಆದ ಪರಂಪರೆಯಿದೆ. ಪೂರ್ವದಲ್ಲಿ ಆಗಮ, ವೇದ, ಉಪನಿಷತ್ತು, ಪುರಾಣಗಳಲ್ಲಿ ಧರ್ಮ,ನೀತಿ-ನಿಯಮ ವಿವರಿಸಲು ಕಥೆಗಳನ್ನು ಸಮರ್ಥವಾಗಿ ಬಳಸಿಕೊಂಡಿರುವುದನ್ನು ಗಮನಿಸಬಹುದು. 'ಕನ್ನಡದಲ್ಲಿ ಮಹಿಳಾ ಕಥಾಸಾಹಿತ್ಯ' ಕೃತಿಯಲ್ಲಿ ಮಲ್ಲಿಕಾ ಘಂಟಿಯವರು "ಹೀಗೆ ವೇದ, ಆಗಮ, ಉಪನಿಷತ್ತುಗಳಲ್ಲಿ ಬರುವ ಕಥೆಗಳು ಒಂದು ರೀತಿಯಾದರೆ, ವೇದಗಳಿಗೆ ವ್ಯಾಖ್ಯಾನಗಳಂತಿರುವ ಪುರಾಣಗಳಲ್ಲಿ ಬರುವ ಕಥೆಗಳು ಇನ್ನೊಂದು ರೀತಿಯವು. ವೇದಗಳಲ್ಲಿರುವ ವಿಚಾರಗಳನ್ನು, ಗೂಢಾರ್ಥವನ್ನು ಸಾಮಾನ್ಯ ಜನರಿಗೆ ಸರಳೀಕರಿಸಿ ತಿಳಿಸುವ ಉದ್ದೇಶದಿಂದ ಪುರಾಣಗಳು ಹುಟ್ಟಿಕೊಂಡವು. ಪ್ರತಿಯೊಂದು ಸತ್ಯ ಸಂಗತಿಗಳನ್ನು ಮನದಟ್ಟಾಗಿ ಹೇಳಲು ಪುರಾಣ ಕರ್ತೃಗಳು ಕಥಾತಂತ್ರವನ್ನು ಬಳಸಿಕೊಂಡರು. ಕಥೆ ಉಪಕಥೆಗಳ ಸರಮಾಲೆಯನ್ನೇ ಜೋಡಿಸಿದರು. ಹೀಗಾಗಿ ಪುರಾಣಗಳು ಕಥೆಗಳ ಕಣಜವೆನಿಸಿದವು. ರಾಮಾಯಣ, ಮಹಾಭಾರತಗಳಲ್ಲಿಯೂ ಅನೇಕ ಕಥೆ, ಉಪಕಥೆಗಳು ಬರುತ್ತವೆ. ಗುಣಾಢ್ಯನಿಂದ ಪೈಶಾಚಿ ಭಾಷೆಯಲ್ಲಿ ರಚಿತವಾದ 'ಬೃಹತ್ಕಥೆ' ಪ್ರಾಚೀನ ಭಾರತದಲ್ಲಿ ಅತ್ಯಂತ ಪ್ರಸಿದ್ಧವಾದ ಕಥನ ಗ್ರಂಥವೆಂಬ ಖ್ಯಾತಿಯನ್ನು ಪಡೆದಿದೆ ಎಂದು ಅಭಿಪ್ರಾಯಿಸುತ್ತಾರೆ.

ಧರ್ಮ ಪ್ರಚಾರಕ್ಕೂ ಹಿಂದೂ, ಜೈನ, ಬೌದ್ಧ ಧರ್ಮಗಳು ಕಥೆಗಳನ್ನು ಸಮರ್ಥವಾಗಿ ದುಡಿಸಿಕೊಂಡಿವೆ. ಜಾನಪದ ಕಥೆಗಳ, ಅಜ್ಜಿ ಕಥೆಗಳ ಮಹಾ ಕಣಜ ಭಾರತೀಯ ನೆಲದ ಸೊಗಡು. 'ಕವಿರಾಜ ಮಾರ್ಗ'ದಲ್ಲಿ, ನಾಗವರ್ಮನ 'ಕಾವ್ಯಾವಲೋಕನ'ದಲ್ಲಿ ಗದ್ಯ ಕತೆಯ ಅಸ್ತಿತ್ವವನ್ನು ಗುರುತಿಸುತ್ತಾರೆ. ಕ್ರಿ.ಶ.ಸು.೯೫೦ರಲ್ಲಿ ಶಿವಕೋಟ್ಯಾಚಾರ್ಯರ ಗ್ರಂಥವಾದ 'ವಡ್ಡಾರಾಧನೆ' ಕನ್ನಡದ ಮೊದಲ ಗದ್ಯ ಕಥಾಸಂಕಲನ. ಚಾವುಂಡರಾಯನ 'ಚಾವುಂಡರಾಯ ಪುರಾಣ' ಮತ್ತೊಂದು ಗದ್ಯ ಕಥಾಸಂಕಲನ. ಕ್ರಿ.ಶ.ಸು.೧೦೩೧ರಲ್ಲಿ ದುರ್ಗಸಿಂಹ ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿದ ವಸುಭಾಗಭಟ್ಟನ 'ಪಂಚತಂತ್ರ' ಕಥೆಗಳು ಮನುಷ್ಯನ ನಡವಳಿಕೆಗಳನ್ನು ಪ್ರಾಣಿಗಳ ಮೂಲಕ ಕತೆಗಳಾಗಿ, ನೀತಿಯನ್ನು ತಿಳಿಸುವ ಅದ್ಭುತ ಕೃತಿ. ೧೨ನೇ ಶತಮಾನದಲ್ಲಿ ಬಂಧುವರ್ಮನ 'ಜೀವ ಸಂಬೋಧನೆ' ಕೃತಿ ಜೈನ ತತ್ವಗಳಾದ ಹನ್ನೆರಡು ಅನುಪ್ರೇಕ್ಷೆಗಳನ್ನು ಕತೆಗಳ ಮೂಲಕ ಕಟ್ಟಿಕೊಡುತ್ತದೆ. ನಯಸೇನನ ಧರ್ಮಾಮೃತ', ಬ್ರಹ್ಮಶಿವನ 'ಸಮಯ ಪರೀಕ್ಷೆ' ಮುಂತಾದವುಗಳನ್ನು ಇಲ್ಲಿ ಗುರುತಿಸಬಹುದು. ವೀರಶೈವ ಸಾಹಿತ್ಯದಲ್ಲಿ ಬರುವ ಪುರಾಣ ಕಥೆಗಳು ಕೂಡ ಕಥಾ ಪರಂಪರೆಗೆ ಜೊತೆಗೂಡಿವೆ.

"ಆದರೆ ಪಾಶ್ಚಾತ್ಯ ಸಾಹಿತ್ಯ ಪ್ರಭಾವದಿಂದ ಹುಟ್ಟಿಕೊಂಡ ಕನ್ನಡ ಕಥಾ ಸಾಹಿತ್ಯ ಎಲ್ಲ ದೃಷ್ಟಿಯಿಂದಲೂ ಹಿಂದಿನದಕ್ಕಿಂತ ಹೊಸತು. ಭಾವ, ಬಂಧ, ಸ್ವರೂಪ, ಲಕ್ಷಣ, ವಸ್ತು, ತಂತ್ರ, ನಿರೂಪಣೆ ಎಲ್ಲದರಲ್ಲೂ ಹೊಸತನ ಕಾಣಬಹುದು. ಬಿ.ಎಂ.ಶ್ರೀಯವರ 'ಇಂಗ್ಲೀಷ್ ಗೀತೆ'ಗಳಿಗಿಂತಲೂ ಮೊದಲೇ ೧೯೦೦ರಲ್ಲಿ ಪಂಜೆ ಮಂಗೇಶರಾಯರ ನನ್ನ ಚಿಕ್ಕ ತಾಯಿ', 'ನನ್ನ ಚಿಕ್ಕ ತಂದೆ' ಎಂಬ ಎರಡು ಕಥೆಗಳು 'ಸುವಾಸಿನಿ' ಮಾಸಪತ್ರಿಕೆಯಲ್ಲಿ ಪ್ರಕಟವಾದವು. ಪಂಜೆಯವರು, ಎಂ.ಎನ್.ಕಾಮತರು, ಕೆರೂರು

ವಾಸುದೇವಾಚಾರರು ಪ್ರಾರಂಭದಲ್ಲಿ ಕಥೆಗಳನ್ನು ಬರೆದವರು. ಕಾಮತರು ಇಂಗ್ಲೀಷ್ ಭಾಷೆಯಲ್ಲಿ ಪ್ರಸಿದ್ಧ ಪತ್ತೇದಾರ ಷರ್ಲಾಕ್ ಹೋಮ್ಸ್ ನಾಯಕನಾದ ಕಥೆಗಳಲ್ಲಿ ಕೆಲವನ್ನು ಕನ್ನಡಕ್ಕೆ ಅನುವಾದಿಸಿದರು.

ಆದರೆ ಸಣ್ಣಕಥೆಗೆ ಒಂದು ಸ್ವರೂಪವನ್ನು ತಂದುಕೊಟ್ಟ, ಅದನ್ನು ಗಂಭೀರವಾಗಿ ಜೀವನ ಚಿಂತನೆಯ ಮಾಧ್ಯಮವನ್ನಾಗಿ ಮಾಡಿ, ಭಾಷೆಯನ್ನು ಅದಕ್ಕೆ ಹದಗೊಳಿಸಿದವರು ಶ್ರೀನಿವಾಸರು (ಮಾಸ್ತಿ ವೆಂಕಟೇಶ ಅಯ್ಯಂಗಾರ್). ಅವರ ಮೊದಲನೆಯ ಕಥಾ ಸಂಗ್ರಹ 'ಕೆಲವು ಸಣ್ಣ ಕಥೆಗಳು' ೧೯೧೧ ರಿಂದ ೧೯೨೦ ರವರೆಗೆ ಬರೆದ ಕಥೆಗಳು ಇಲ್ಲಿ ಪ್ರಕಟವಾದವು" ಎಂದು ಶೇಷಗಿರಿರಾವ್ ಗುರುತಿಸುತ್ತಾರೆ. ನವೋದಯ ಕಾಲಘಟ್ಟದ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು, ಬಡವರ, ದಲಿತರ ಮೇಲಿನ ಅನುಕಂಪ, ಮಧ್ಯಮವರ್ಗದ ಬವಣೆಗಳು, ಶೈಕಣಿಕ ಸುಧಾರಣೆ, ಕಂದಾಚಾರಗಳಿಗೆ ವಿಡಂಬನಾತ್ಮಕ ಪ್ರತಿಕ್ರಿಯೆ, ಸ್ವಾತಂತ್ರ್ಯ ಚಳುವಳಿಯ ಸಾಹಸಗಾಥೆಗಳನ್ನು ಚಿತ್ರಿಸುವ ವಿಚಾರಗಳು ಇಲ್ಲಿನ ಸಾಹಿತ್ಯದಲ್ಲಿ ಪ್ರಕಟವಾದವು. ಮಾಸ್ತಿ, ಎಂ.ವಿ.ಸೀತಾರಾಮಯ್ಯ, ವ್ಯಾಸರಾಯ ಬಲ್ಲಾಳ, ಬೆಟಗೇರಿ ಕೃಷ್ಣಶರ್ಮ, ಗೊರೂರು, ಮುಂತಾದವರು ಬರೆಯಲಾರಂಭಿಸಿದರು. ಕಥೆಗಾರ್ತಿಯರಲ್ಲಿ ಕೊಡಗಿನ ಗೌರಮ್ಮ, ಜಯಲಕ್ಷ್ಮಿ ಆರ್.ಶ್ರೀನಿವಾಸನ್, ಶ್ಯಾಮಲದೇವಿ ಬೆಳಗಾಂವಕರ, ಸರಸ್ವತಿಬಾಯಿ ರಾಜವಾಡೆ, ನೀಳಾದೇವಿ, ಶಾಂತಾದೇವಿ ಕಣವಿ, ವಾಣಿ, ಪ್ರೇಮಾಭಟ್ ಮುಂತಾದವರು ತಮ್ಮ ಕೃತಿಗಳ ಮೂಲಕ ನವೋದಯದ ಹಾದಿಗೆ ಕಾಲಿಟ್ಟರು.

ರಷಿಯಾದ ಮಾರ್ಕ್ಸವಾದದ ಪ್ರಭಾವದಿಂದ ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯ ಹುಟ್ಟಿಕೊಂಡಿತು. ಕಲೆಗಾಗಿ ಕಲೆ ಎಂಬ ವಾದವನ್ನು ತಿರಸ್ಕರಿಸಿ 'ಬದುಕಿಗಾಗಿ ಕಲೆ' ಎನ್ನುವುದು ಸಾಹಿತ್ಯದ ಧೋರಣೆಯಾಯಿತು. ಪ್ರಭುತ್ವದ ಮೇಲಿನ ಕಾವ್ಯಕ್ಕಿಂತ ಜನಸಾಮಾನ್ಯನ ಮೇಲಿನ ಕಾವ್ಯ ಶ್ರೇಷ್ಠ ಎನ್ನುವುದು ಜಾಗತಿಕ ಧ್ವನಿಯಾಯಿತು. ಬಡವರ, ಕೂಲಿ ಕಾರ್ಮಿಕರ, ವೇಶ್ಯೆಯರ, ವರ್ಗ ತಾರತಮ್ಯವನ್ನು ವಿರೋಧಿಸುವ, ಪ್ರತಿಭಟಿಸುವ ಚಿಂತನೆಗಳ ಸಾಹಿತ್ಯ ಪ್ರಕಟಗೊಂಡವು. ಈ ಕಾಲಘಟ್ಟದ ಪ್ರಮುಖ ಕಥೆಗಾರರೆಂದರೆ, ಅನಕೃ, ಕಟ್ಟಿಮನಿ, ತರಾಸು, ಚದುರಂಗ, ನಿರಂಜನ, ಕೆ.ಸದಾಶಿವ, ಮಿರ್ಜಿ ಅಣ್ಣಾರಾಯರು, ಶೇಷಗಿರಿರಾಯರು ಮುಂತಾದವರು. ಇದೇ ಕಾಲಕ್ಕೆ ಅನುಪಮಾ ನಿರಂಜನ, ಎಚ್.ವಿ.ಸಾವಿತ್ರಮ್ಮ, ಎಚ್.ಎಸ್.ಪಾರ್ವತಿ, ಎಂ.ಕೆ.ಇಂದಿರಾ, ತ್ರಿವೇಣಿ, ಗೀತಾ ಕುಲಕರ್ಣಿ ಮುಂತಾದವರಿದ್ದರು.

ಪ್ರಯೋಗಶೀಲತೆಯೇ ಮುಖ್ಯ ಗುಣವುಳ್ಳ ನವ್ಯ ಸಾಹಿತ್ಯ ಹಿಂದಿನ ಸಾಹಿತ್ಯಕ್ಕೆ ಪ್ರತಿಭಟನೆಯೆಂಬಂತೆ ಹುಟ್ಟಿಕೊಂಡಿತು. ವ್ಯಕ್ತಿನಿಷ್ಠ ದೃಷ್ಟಿಕೋನ, ಸಂಪ್ರದಾಯ, ಸಾಮಾಜಿಕ ಆಚರಣೆಗಳನ್ನು ಪ್ರಶ್ನಿಸುವ ಮತ್ತು ನಿರಾಕರಿಸುವ ಧೋರಣೆ ಇಲ್ಲಿನ ಸಾಹಿತ್ಯದಲ್ಲಿ ಕಾಣಬಹುದು. ಗಿರಿಡ್ಡಿ ಗೋವಿಂದರಾಜುರವರು "ನವೋದಯ ಕಾಲದ ಲೇಖಕರು ವ್ಯಕ್ತಿಯ ಬದುಕನ್ನು ಹೊರಗಿನಿಂದ ಕಂಡರು. ನವ್ಯ ಲೇಖಕರಿಗೆ ಮನುಷ್ಯನ ಅಂತರಂಗದ ಬದುಕಿನಲ್ಲೇ ಆಸಕ್ತಿ ಹೆಚ್ಚಾಗಿರುವುದರಿಂದ ಅವರು ಬದುಕನ್ನು ಒಳಗಿನಿಂದ ನೋಡುತ್ತಾರೆ" ಎಂದು ಗುರುತಿಸುತ್ತಾರೆ. ನವ್ಯ ಸಾಹಿತ್ಯದಲ್ಲಿ ಕಥೆಗಳಿಗೆ ಪ್ರಮುಖ ಸ್ಥಾನವಿದೆ.

ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ಶಾಂತಿನಾಥ ದೇಸಾಯಿ, ಜಿ.ಎಸ್.ಸದಾಶಿವ, ಶಂಕರ ಮೊಕಾಶಿ ಪುಣೇಕರ, ಬೆಸಗರಹಳ್ಳಿ ರಾಮಣ್ಣ ಮುಂತಾದವರನ್ನು ಹೆಸರಿಸಬಹುದು, ಈ ಕಾಲಘಟ್ಟದಲ್ಲಿ ರಾಜಲಕ್ಷ್ಮಿ ಎನ್.ರಾವ್, ವೀಣಾ ಶಾಂತೇಶ್ವರ, ಕಮಲಾ ಹೆಮ್ಮಿಗೆ, ವೈದೇಹಿ, ಹೇಮಾ ಪಟ್ಟಣಶೆಟ್ಟಿ ಮುಂತಾದ ಲೇಖಕಿಯರು ಹೊಸತನದಿಂದ ಬರೆಯಲಾರಂಭಿಸಿದರು.

ಅಂಬೇಡ್ಕರರ ವಿಚಾರಗಳ ಪ್ರಭಾವ, ದಲಿತ ಚಳುವಳಿಯಿಂದಾಗಿ ದಲಿತ- ಬಂಡಾಯ ಚಳುವಳಿಗಳು ಪ್ರಾರಂಭಗೊಂಡವು. ದಲಿತರ ಶೋಷಣೆ, ಅಸಮಾನತೆ, ಜಾತಿ ವಿಷಮತೆ, ಜೀತಪದ್ಧತಿ, ಸ್ತ್ರೀ ಸಮಾನತೆ ಮುಂತಾದ ವಿಚಾರಗಳಿಗೆ ಈ ಚಳುವಳಿಗಳು ದನಿಯಾದವು. ಅಕ್ಷರ ಕಲಿತ ಕೆಳವರ್ಗದ ಜನ ತಮ್ಮ ದನಿಯನ್ನು ತಾವೇ ಎತ್ತುವಲ್ಲಿ, ತಮ್ಮ ನೋವುಗಳನ್ನು ಹೇಳಿಕೊಳ್ಳುವಲ್ಲಿ ಯಶಸ್ವಿಯಾದರು. ಮಹಿಳೆಯರ ದನಿಯೂ ಬಲವಾಯಿತು. ದೇವನೂರು ಮಹಾದೇವ, ಬರಗೂರು ರಾಮಚಂದ್ರಪ್ಪ, ಚೆನ್ನಣ್ಣ ವಾಲೀಕಾರ, ಕಾಳೇಗೌಡ ನಾಗವಾರ ಮುಂತಾದವರು ಪ್ರಮುಖರು, ಕಥೆಗಾರ್ತಿಯರಲ್ಲಿ ಗೀತಾ ನಾಗಭೂಷಣ, ಬಿ.ಟಿ.ಲಲಿತಾನಾಯಕ, ಸಾರಾ ಅಬೂಬಕರ್, ಬಾನು ಮುಷ್ತಾಕ್, ನೇಮಿಚಂದ್ರ ಮುಂತಾದ ಮಹಿಳೆಯರು ದನಿಯೆತ್ತಿದರು.

ಮಾನವನ ಇತಿಹಾಸ 'ಮಹಿಳಾ ಇತಿಹಾಸ'ಅಲ್ಲ. ಪ್ರಾಚೀನ ಇತಿಹಾಸವಿರುವ ಕನ್ನಡ ಸಾಹಿತ್ಯದ ಪ್ರಾರಂಭದ ಕೆಲವು ಶತಮಾನಗಳು ಮಹಿಳೆಯರ ಪಾಲಿಗೆ ಬರಡಾಗಿತ್ತು.

ಅವಳ ದನಿಗೆ ಯಾವ ಬೆಲೆಯೂ ಇರಲಿಲ್ಲ. ಹತ್ತನೇ ಶತಮಾನದಲ್ಲಿ ಅತ್ತಿಮಬ್ಬೆ ಸ್ವತಃ ಬರಹಗಾರ್ತಿಯಲ್ಲದಿದ್ದರೂ ಅವಳ ಬಗ್ಗೆ ಬರೆಸಿದ ಶಾಸನ, ಸಾಹಿತ್ಯಾಸಕ್ತಿಯಿಂದಾಗಿ ಪೊನ್ನ ರನ್ನರನ್ನು ಸಲಹಿ ಅವರಿಂದ ಕೃತಿ ರಚನೆ ಮಾಡಿಸಿದ್ದು ಸಾಮಾನ್ಯ ವಿಚಾರವೇನಲ್ಲ. ನಾಗಚಂದ್ರನಿಗೆ ಸಮಾನವಾಗಿ ತನ್ನ ಪ್ರಶ್ನೋತ್ತರಗಳ ಮೂಲಕ ಗಮನಸೆಳೆದ ಕಂತಿ, ಹನ್ನೆರಡನೆಯ ಶತಮಾನದ ವಚನ ಚಳುವಳಿಯಲ್ಲಿ ಪಾಲ್ಗೊಂಡ ಶಿವಶರಣೆಯರು, ವಚನಕಾರ್ತಿಯರ ಕೊಡುಗೆ ಮಹತ್ವದ್ದು. ಕೆಳವರ್ಗದ ಅನಕ್ಷರಸ್ಥ ಸ್ತ್ರೀಯರು ಸಮಾಜದ ಮುಖ್ಯವಾಹಿನಿಗೆ ಬಂದು ಸ್ವಾವಲಂಬಿ, ಸ್ವಾಭಿಮಾನಿ, ಜ್ಞಾನವಂತಳು ಎಂಬುದನ್ನು ಸಾಬೀತುಪಡಿಸಿದ ಅನೇಕ ವಚನಕಾರ್ತಿಯರು ಪುರುಷವರ್ಗಕ್ಕೆ, ಸಮಾಜಕ್ಕೆ, ಆಳುವ ದೊರೆಗಳಿಗೆ ಪ್ರಶ್ನೆಗಳನ್ನು ಕೇಳುವ ಮೂಲಕ ತಮ್ಮ ಅಸ್ತಿತ್ವವನ್ನು ಪ್ರಕಟಪಡಿಸಿದರು. ಸಿದ್ಧಭಾಷೆಯನ್ನು ತೊಡೆದು ಹೊಸ ಬಗೆಯ ಆಡುಭಾಷೆಯನ್ನು ಸ್ವೀಕರಿಸಿದರು. ಸಂಪ್ರದಾಯದ ತೊಡಕುಗಳನ್ನು, ಅದರಿಂದ ಅವರು ಅನುಭವಿಸುತ್ತಿರುವ ಲೋಕವನ್ನು ಜಗತ್ತಿಗೆ ತೋರಿಸಿಕೊಟ್ಟರು. ಕೀರ್ತನಕಾರರ ಸಂದರ್ಭದಲ್ಲಿ ಭಕ್ತಿ ಪರಂಪರೆಯನ್ನು ಸಮರ್ಥವಾಗಿ ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವ ಮುಂತಾದವರು ಕೃತಿಗಳನ್ನು ರಚಿಸಿದರು. ಮೈಸೂರು ಅರಸರ ಕಾಲಕ್ಕೆ ಸಂಚಿಯ ಹೊನ್ನಮ್ಮ 'ಹದಿಬದೆಯ ಧರ್ಮ' ಕೃತಿ ರಚಿಸಿ ಹೆಣ್ಣನ್ನು ಕನಿಷ್ಠವಾಗಿ ಕಂಡಿದ್ದನ್ನು ಖಂಡಿಸಿ, ಅವಳಿಗೂ ಸಮಾನ ಸ್ಥಾನ ಸಿಗುವಂತೆ ತನ್ನ ನಿಲುವನ್ನು ವ್ಯಕ್ತಪಡಿಸಿದಳು.

ಕಳೆದ ಶತಮಾನದ ಪೂರ್ವಾರ್ಧ ಹೆಣ್ಣುಮಕ್ಕಳಿಗೂ, ಹೊಸಿಲಾಚೆಯ ಪ್ರಪಂಚಕ್ಕೂ ಸಂಬಂಧವೇ ಇಲ್ಲದ ಸಾಂಪ್ರದಾಯಿಕ ಪರಿಸರ ದಟ್ಟವಾಗಿದ್ದ ಕಾಲವಾಗಿತ್ತು. ಆದರ್ಶ



ಸತಿ, ಆದರ್ಶ ಮಾತೆಯಾಗುವುದೇ ಹೆಣ್ಣಿನ ಬದುಕಿನ ಪರಮಸಾಧನೆ ಎನ್ನುವ ಕಾಲವದು. ಇಂತಹ ಕಾಲಘಟ್ಟದಲ್ಲಿ ಸ್ತ್ರೀಯರ ಆಧುನೀಕರಣದ ಅವಕಾಶಗಳಿಗಾಗಿ ಚಿಂತಿಸಿ, ಸ್ತ್ರೀಪರ ಸಾಹಿತ್ಯ ರಚಿಸಿದವರು ಆರ್.ಕಲ್ಯಾಣಮ್ಮ ಹಾಗೂ ನಂಜನಗೂಡು ತಿರುಮಲಾಂಬರವರು. ಆಧುನಿಕ ಕನ್ನಡ ಸಾಹಿತ್ಯದ ಮೊದಲ ಲೇಖಕಿಯರು ಎಂದು ಇವರಿಬ್ಬರನ್ನು ಗುರುತಿಸಲಾಗುತ್ತದೆ. ಕಲ್ಯಾಣಮ್ಮನವರು ತಮ್ಮ ಹತ್ತನೇ ವರ್ಷಕ್ಕೆ ಮದುವೆಯಾಗಿ ಮರುವರ್ಷವೇ ಬಾಲವಿಧವೆಯಾದರೂ ತಮ್ಮನ್ನು ಕಟ್ಟಿ ಹಾಕಿದ್ದ ಎಲ್ಲ ವಿಧಿ-ನಿಷೇಧಗಳನ್ನು ಲೆಕ್ಕಿಸದೆ ಅವಕಾಶ ವಂಚಿತ ನಿರ್ಗತಿಕ ಮಹಿಳೆಯರ ಕಲ್ಯಾಣಕ್ಕಾಗಿ ದುಡಿದರು. ತಂದೆಯ ಪ್ರೋತ್ಸಾಹದಿಂದ ಎಲ್.ಎಸ್. ಪಾಸಾಗಿ ಹಿರಿಯ ಲೇಖಕರ ಬೆಂಬಲದಿಂದ ಸಾಹಿತ್ಯ ರಚಿಸಲಾರಂಭಿಸಿದರು. ನಲ್ವತ್ತೆರಡು ವರುಷ ಸರಸ್ವತಿ' ಎಂಬ ಮಾಸಪತ್ರಿಕೆಯನ್ನು ನಡೆಸಿಕೊಂಡು ಬಂದರು. ಕಾದಂಬರಿ, ಕಥಾಸಂಕಲನ, ನಾಟಕಗಳನ್ನು ರಚಿಸಿದರು. ಏನು ಸಂಬಂಧ, ದೇವನಲ್ಲಿ, ದೇವಿಯ ತ್ಯಾಗ, ಫಲಿತಾಂಶ ಇವರ ಕಥಾಸಂಕಲನಗಳು,

"ನಂಜನಗೂಡು ತಿರುಮಲಾಂಬ, ಕಲ್ಯಾಣಮ್ಮ ಹಾಗೂ ಕೊಡಗಿನ ಗೌರಮ್ಮ ಮುಂತಾದ ನಮ್ಮ ಮೊದಲ ತಲೆಮಾರಿನ ಲೇಖಕಿಯರೆಲ್ಲಾ ಅಕ್ಷರ ಜ್ಞಾನದ ಹಿನ್ನೆಲೆಯನ್ನು ಹೊಂದಿದ್ದ ಮೇಲು ಜಾತಿಯ ಮಧ್ಯಮವರ್ಗದ ಕುಟುಂಬಗಳ ಪರಿಸರದಿಂದ ಬಂದವರೇ ಆಗಿದ್ದಾರೆ. ಹೀಗಾಗಿ ಅವರ ಕೌಟುಂಬಿಕ ಪರಿಸರ, ಅಲ್ಲಿನ ಉಸಿರುಕಟ್ಟಿಸುವ ವಾತಾವರಣ, ಅದೇ ಚೌಕಟ್ಟಿನಲ್ಲಿ ಕಂಡುಬರುವ ಉಲ್ಲಾಸದ ವಿವರಗಳು, ಈ ಲೇಖಕಿಯರ ಬಹುಪಾಲು ಕಥೆಗಳಲ್ಲಿ ತೀವ್ರವಾಗಿ ಕಾಣಿಸಿಕೊಳ್ಳುತ್ತವೆ. ಇವರ ಕಥೆಗಳ ಕೇಂದ್ರವೂ ಸಹ ಸಹಜವಾಗಿಯೇ ಸುಶಿಕ್ಷಿತ ಹೆಣ್ಣೆ ಆಗಿರುವುದು ಗಮನಿಸಬಹುದಾದ ಸಂಗತಿಯಾಗಿದೆ. ಇನ್ನುಳಿದಂತೆ ದೊಡ್ಡ ಪ್ರಮಾಣದಲ್ಲಿ ಇರುವ ಶೂದ್ರರು, ದಲಿತರು ಹಾಗೂ ದಲಿತ ಸಮೂಹದ ಬದುಕಿನ ಜೀವಂತ ವಿವರಗಳು ಇವರ ಕತೆಗಳಲ್ಲಿ ಸಂಪೂರ್ಣವಾಗಿ ಗೈರುಹಾಜರಾಗಿವೆ. ಒಂದು ವೇಳೆ ಅಪರೂಪಕ್ಕೆ ಕಾಣಿಸಿಕೊಂಡರೂ ಅಂತಹ ಶೂದ್ರ ಪಾತ್ರಗಳು ಪರಿಪೂರ್ಣವಾಗಿ ತಮ್ಮೆಲ್ಲ ವ್ಯಕ್ತಿತ್ವದೊಂದಿಗೆ ಅರಳಿರುವುದು ತೀರಾ ವಿರಳ! ಆದರೆ ಇದೇ ಅವಧಿಯಲ್ಲಿ ಉತ್ತರ ಕರ್ನಾಟಕದ ಬೆಳಗಾವಿ ಪ್ರದೇಶದ ನಮ್ಮ ಹಿಂದುಳಿದ ಜಾತಿ-ವರ್ಗದ ಹಿನ್ನೆಲೆಯಲ್ಲಿ ಹುಟ್ಟಿ ಬೆಳೆದ ಪ್ರಜ್ಞಾವಂತ ಲೇಖಕಿಯೂ, ಸಮಾಜ ಸುಧಾರಕಿಯೂ ಆಗಿದ್ದ ಬೆಳಗಾವಿ ಶ್ಯಾಮಲದೇವಿ (೧೯೧೦-೧೯೪೩) ಅವರ ಕಥಾ ಸಾಹಿತ್ಯದಲ್ಲಿನ ಸೂಕ್ಷ್ಮಗಳು ಹಾಗೂ ಅಪಮಾನಿತ ಜನವರ್ಗದ ನಿಸ್ಸಹಾಯಕತೆಯ ಒಡಲಲ್ಲೇ ಅಡಗಿರುವ ಸಂವೇದಾನಶೀಲ ಮನಸ್ಸುಗಳ ಚಿತ್ರಣವು ಅಪರೂಪದ್ದಾಗಿದೆ." ಎಂದು ಪ್ರೊ.ಕಾಳೇಗೌಡ ನಾಗವಾರ ಅವರು ಅಭಿಪ್ರಾಯಿಸುತ್ತಾರೆ.

ಇದು ಆ ತಲೆಮಾರಿನ ಲೇಖಕಿಯರ ಮಿತಿಯೂ ಹೌದು. ಆಗಿನ ಕಾಲಘಟ್ಟದಲ್ಲಿ ಮಹಿಳೆಯರನ್ನು ಶಾಲೆಗೆ ಕಳುಹಿಸುತ್ತಿದ್ದದ್ದೇ ಅಪರೂಪ. ಚಿಕ್ಕ ವಯಸ್ಸಿಗೆ ಮದುವೆ ಮಾಡಿ ಜವಾಬ್ದಾರಿ ಕಳೆದುಕೊಳ್ಳಲು ಹೆಣ್ಣಿನ ಪಾಲಕ-ಪೋಷಕರು ಆತುರರಾಗಿದ್ದರು. ಕೆಲವೇ ಕೆಲವು ಹೆಣ್ಣು ಮಕ್ಕಳಿಗೆ ಕಾಲೇಜು ಮೆಟ್ಟಿಲು ಹತ್ತುವ ಅವಕಾಶ ದೊರಕುತ್ತಿತ್ತು. ಕಲಿತ ಮಹಿಳೆಯರಲ್ಲಿ ಕೆಲವರು ಮಾತ್ರ ಸಾಹಿತ್ಯಕವಾಗಿ ತಮ್ಮನ್ನು ತೊಡಗಿಸಿಕೊಳ್ಳಲು



ಅನುವು ಆಗುತ್ತಿತ್ತು. ಮದುವೆಯಾದ ಮೇಲೆ ಗಂಡ-ಅತ್ತೆ ಮನೆಯ ಪ್ರೋತ್ಸಾಹವಿದ್ದರೆ ಮಾತ್ರ ಅವರ ಬರವಣಿಗೆ ಸಾಧ್ಯವಿತ್ತು. ಬಾಲವಿಧವೆಯರ ಸಂಕಟಗಳು, ಸ್ತ್ರೀಯರ ಅಭದ್ರತೆ, ತಾಯ್ತನದ ಹಂಬಲ, ವಿಷಮ ದಾಂಪತ್ಯ, ವರದಕ್ಷಿಣೆ ಕಿರುಕುಳ, ವೇಶ್ಯಾವಾಟಿಕೆ ಮುಂತಾದ ವಿಚಾರಗಳು ಅಂದಿನ ಲೇಖಕಿಯರ ಕಥೆ-ಕಾದಂಬರಿಯ ವಸ್ತುಗಳಾಗುತ್ತಿದ್ದವು. ಅದಕ್ಕಿಂತ ಭಿನ್ನ ಜಗತ್ತು ಅವರು ನೋಡಿರಲೂ ಇಲ್ಲ, ಕಲ್ಪಿಸಿಕೊಂಡೂ ಇರಲಿಲ್ಲ. ಮೇಲ್ವರ್ಗದ ಮಹಿಳೆಯರು ಕಂಡು ಕೇಳಿದ ಕತೆಗಳು ಹೀಗಾದರೆ, ದಲಿತ ಲೋಕದ ಮಹಿಳೆಯರು ವಿದ್ಯಾಭ್ಯಾಸದಿಂದ ವಂಚಿತರಾಗಿದ್ದರಿಂದ ಅವರು ತಮ್ಮ ಜಗತ್ತಿನ ಕತೆಗಳು ದಾಖಲಿಸುವುದಾದರೂ ಹೇಗೆ? ಆ ಕಾರಣದಿಂದಲೇ ಆ ವರ್ಗದ ಸೂಕ್ಷ್ಮಾತಿಸೂಕ್ಷ್ಮ ವಿವರಗಳು ದಾಖಲೇ ಆಗಲಿಲ್ಲ. ಆದರೆ ಆ ಕಾಲಘಟ್ಟದಲ್ಲಿ ಅಂತಹ ವರ್ಗದ ಜನರ ಬದುಕಿನ ಬವಣೆಗಳನ್ನು ಅನಾವರಣ ಮಾಡಿದ್ದು ಕುವೆಂಪು, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ ಮುಂತಾದವರು. ಅವರ ಕಾದಂಬರಿ, ಕಥೆಗಳಲ್ಲಿ ಹೆಣ್ಣಿನ ವಿವಿಧ ಸಂವೇದನೆಗಳನ್ನು ಸಮರ್ಥವಾಗಿ ದಾಖಲಿಸಿದ್ದಾರೆ.

ನಮ್ಮ ಸಮಾಜದಲ್ಲಿ ಅರ್ಧಕ್ಕಿಂತ ಹೆಚ್ಚು ಮಹಿಳೆಯರಿದ್ದರೂ ದಾಖಲಾಗುವಾಗ ಕೇವಲ ಪುರುಷರ ವಿಚಾರಗಳು, ಚಿಂತನೆಗಳನ್ನು ದಾಖಲಿಸುವುದನ್ನು ಪ್ರಾರಂಭದಿಂದಲೂ ಗಮನಿಸಿದ್ದೇವೆ. ಮನೆಯ ಗೃಹಕೃತ್ಯಗಳಿಗೆ ಮಾತ್ರ ಮೀಸಲಾಗಿಟ್ಟ ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಅವರಿಂದ ಹೆಚ್ಚಿನದೇನನ್ನೂ ಅಪೇಕ್ಷಿಸುವಂತಿರಲಿಲ್ಲ. ಒಲೆ ಊದಲು ಎರಡು ತುಟಿಯಿದ್ದರೆ ಸಾಕು ಎನ್ನುವ ಪರಂಪರೆಯ ವಾತಾವರಣದಲ್ಲಿದ್ದ ಅಂದಿನ ಮಹಿಳೆ, ಮನೆಕೆಲಸ, ಹಾಡು-ಹಸೆಯಲ್ಲಿ ಪರಿಣತಿ ಹೊಂದಿ, ತನ್ನ ಹೆತ್ತಮನೆಗೂ, ಕೊಟ್ಟ ಮನೆಗೂ ಕೀರ್ತಿ ತರುವಂತೆ ಬದುಕು ನಡೆಸಿ, ಗಂಡು ಮಕ್ಕಳನ್ನು ಹೆತ್ತು- ಹೊತ್ತು, ಸಾಕಿ ದಡ ಸೇರಿಸಿದರೆ ಅವಳ ಬಾಳು ಸ್ವರ್ಗದಲ್ಲಿ ಖಾತರಿಯಾಗುತ್ತಿತ್ತು ಎಂಬ ಮಾತುಗಳಿಂದ ಕಟ್ಟಿ ಹಾಕುತ್ತಿದ್ದ ಸಮಾಜದಲ್ಲಿ ಅವಳು ವಿದ್ಯೆ ಕಲಿಯುವುದು ಗಗನ ಕುಸುಮವಾಗಿತ್ತು. ಕಷ್ಟ-ಸುಖಗಳನ್ನು ಮರೆಯಲು ತಾವೇ ರಚಿಸಿದ, ಕೇಳಿಸಿಕೊಂಡ ಜಾನಪದ ಗೀತೆಗಳು ಅವರ ನಾಲಿಗೆಯಲ್ಲಿ ಸಲೀಸಾಗಿ ಹರಿದಾಡುತ್ತಿದ್ದವು.

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಮನೆಯಂಗಳದಲ್ಲಿಯೇ ಉಳಿದಳು. ಸಮಾಜದ, ಧರ್ಮದ ಸಂಸ್ಕೃತಿ-ಸಂಪ್ರದಾಯಗಳನ್ನು ಉಳಿಸುವ ರಾಯಭಾರಿ ಅವಳೆಂದೇ ನಂಬಿಸಿ, ಅದನ್ನೇ ಚಿಕ್ಕಂದಿನಿಂದ ತುಂಬಿ

ಅವಳ ಸ್ವಾತಂತ್ರ್ಯವನ್ನು ಕಸಿದುಕೊಂಡು ಅವಳನ್ನು ಹೊಸ್ತಿಲ ಒಳಗೆ ಮಾತ್ರ ನಿನ್ನ ಜಗತ್ತು ಎಂದು ನಂಬಿಸಿ, ಬಿಂಬಿಸಿ ಅದರಲ್ಲೇ ಸುಖ ಪಡುತ್ತಿದ್ದಾಳೆ ಎಂದು ತೋರಿಸಲಾಯಿತು. ಮದುವೆಯಾಗದಿದ್ದರೆ 'ಮೂದೇವಿ' ಅಂತಲೂ, ಮಕ್ಕಳಾಗದಿದ್ದರೆ 'ಬಂಜೆ', ಗಂಡ ಸತ್ತರೆ 'ಮುಂಡೆ/ಅಪವಿತ್ರೆ', ಅತಿ ಮಾತನಾಡಿದ ಎದುರುತ್ತರ ಕೊಟ್ಟರೆ 'ಗಂಡುಬೀರಿ/ಬಜಾರಿ' ಎಂದೂ, ಪರಪುರುಷನೊಂದಿಗೆ ಸಂಬಂಧ ಹೊಂದಿದ್ದರೆ 'ಸೂಳೆ' ಎಂದೂ ಅವಳಿಗೆ ಬಿರುದು ನೀಡುತ್ತಿದ್ದ ಸಮಾಜದಲ್ಲಿ ಇದಕ್ಕೆಲ್ಲಾ ಗಂಡೂ ಕೂಡ ಭಾಗಿ ಎಂಬುದನ್ನು ಜಾಣ ಮರೆವು ಮರೆಸುತ್ತಿತ್ತೇ? ಅಥವಾ ಅವಳ ಧ್ವನಿ ಅಡಗಿಸುವ ಹುನ್ನಾರವೇ? ಇಂದಿಗೂ ಇಂತಹ ಮಾತುಗಳಿಂದ ಮಹಿಳೆ ಬಿಡುಗಡೆಯಾಗಿಲ್ಲ ಎಂಬುದೊಂದು ವಿಪರ್ಯಾಸ.



ಅವಳ ಉಡುಗೆ-ತೊಡಿಗೆ, ಆಚಾರ-ವಿಚಾರ, ಮದುವೆ-ಮಕ್ಕಳು, ಇದೆಲ್ಲವನ್ನೂ ಇಪ್ಪತ್ತೊಂದನೇ ಶತಮಾನದಲ್ಲೂ ನಿಯಂತ್ರಿಸಲು ಈ ಸಮಾಜ ಪ್ರಯತ್ನಿಸುತ್ತಲೇ ಇದೆ. ಅತ್ಯಾಚಾರಕ್ಕೆ, ಅಂತರ್ಜಾತಿ ವಿವಾಹಕ್ಕೆ ಬಲಿಯಾಗುತ್ತಿರುವ ಮಹಿಳೆಯರ ಸಾವಿಗೆ ಸಾಂತ್ವನ ಹೇಳುವುದಿರಲಿ, ಸಮಾಜ, ಧಾರ್ಮಿಕ ಮುಖಂಡರ ಮತ್ತು ರಾಜಕೀಯ ಧುರೀಣರ ಹೇಳಿಕೆಗಳನ್ನು ಗಮನಿಸಿದಾಗ ಅಂದಿಗೂ ಇಂದಿಗೂ ಯಾವುದೂ ಬದಲಾಗಿಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ.

ಸೀಮಿತ ನೆಲೆಗಟ್ಟಿನಲ್ಲಿ ಮಹಿಳೆ ಪ್ರಾರಂಭದಲ್ಲಿ ಬರೆಯಲಾರಂಭಿಸಿದಾಗ ಅವಳ ಕೃತಿಗಳಿಗೆ ಆಯ್ದುಕೊಂಡ ವಸ್ತುಗಳು ಕೂಡ ಅವಳ ಕಂಡು ಕೇಳಿದ, ಅನುಭವಿಸಿದ ಘಟನೆಗಳನ್ನೇ ಆಧರಿಸಿದ್ದವಾಗಿದ್ದವು. ಅಂತಹ ಸಾಹಿತ್ಯದಲ್ಲಿ ಗಟ್ಟಿತನ ಕಂಡುಬರದಿದ್ದರೂ ಬರೆದಳೆಂಬ ಹೆಮ್ಮೆಯ ಬದಲು ಅಡಿಗೆ ಮನೆ ಸಾಹಿತ್ಯ' ಎಂದು ಅವಹೇಳನಕ್ಕೊಳಗಾದರೂ ಮಹಿಳೆಯರು ಧೃತಿಗೆಡದೆ ಬರೆದೇ ಬರೆದರು. ಇಂದು ಅಂತಹ ಮಾತುಗಳನ್ನು ಧಿಕ್ಕರಿಸಿ ಸಮಾನವಾಗಿ ಬರೆದ ಮಹಿಳಾ ಸಾಹಿತ್ಯವನ್ನು ಕಡೆಗಣಿಸಲು ಸಾಧ್ಯವೇ ಇಲ್ಲ.

ಕನ್ನಡ ಸಾಹಿತ್ಯದ ಮೇಲೆ ಬ್ರಿಟಿಷರ ಪ್ರಭಾವವೂ ಬೀರಿತು. ಇಲ್ಲಿನ ಅನೇಕ ಮಹಿಳೆಯರನ್ನು ಸಂಪ್ರದಾಯ, ಪರಂಪರೆಯ ಹೆಸರಲ್ಲಿ ಕಟ್ಟಿಹಾಕಿರುವುದನ್ನು ಗಮನಿಸಿ ಮಹಿಳಾ ಸುಧಾರಣಾ ಕಾನೂನುಗಳನ್ನು ತಂದರು. ಅನಿಷ್ಟ ಪದ್ಧತಿಗಳನ್ನು ನಿಷೇಧಿಸಿದರು. ಶೈಕ್ಷಣಿಕ ರಂಗದಲ್ಲಿ ಸಮಾನ ಅವಕಾಶ ನೀಡುವಂತೆ ಕರೆ ನೀಡಿದರು. ಅಂತಹ ವಾತಾವರಣ ನಿರ್ಮಿಸುವಂತೆ ಪ್ರೋತ್ಸಾಹಿಸಿದರು. ಇದು ಇಲ್ಲಿನ ಸಮಾಜ ಸುಧಾರಣಾ ಮುಖಂಡರಿಗೂ ಸರಿಕಂಡು ಅವರೂ ಈ ಕಾರ್ಯಕ್ಕೆ ಕೈಜೋಡಿಸಿದರು. ಅದರ ಪರಿಣಾಮವಾಗಿ ಕೆಲ ಮೇಲು ವರ್ಗದ ಮಹಿಳೆಯರು ಅಕ್ಷರ ಕಲಿಯುವ ಮೂಲಕ ಹೊಸ ದಾರಿಯನ್ನು ನಿರ್ಮಾಣ ಮಾಡಿದರು. ಪುರುಷರೂ ಕೂಡ ತಮ್ಮ ಕಾದಂಬರಿಗಳಿಗೆ ಮಹಿಳೆಯರನ್ನೇ ವಸ್ತುವಾಗಿಸಿಕೊಂಡರು. ಕುವೆಂಪುರವರ ಮಲೆಗಳಲ್ಲಿ ಮದುಮಗಳು, 'ಕಾನೂರು ಹೆಗ್ಗಡತಿ', ಕಾರಂತರ 'ಸರಸಮ್ಮನ ಸಮಾಧಿ' ಮುಂತಾದವುಗಳನ್ನು ಹೆಸರಿಸಬಹುದು. ಹೊಸಗನ್ನಡದ ಕಾಲದಲ್ಲಿ ಪ್ರಥಮ

ಮಹಿಳಾ ಕಾದಂಬರಿ ನೀಲಗಾರರು ಬರೆದ 'ಸದ್ಗುಣಿ'ಯಲ್ಲಿ ಮಹಿಳೆಯರಿಗೆ ಸಂಪ್ರದಾಯದಂತೆ ನೀತಿ ಬೋಧನೆಯನ್ನು ಮಾಡಿದೆ. ಆದರೆ ಮಹಿಳೆಗೆ ಶಿಕ್ಷಣ ಬೇಕು ಎಂಬುದನ್ನು ಬಲವಾಗಿ ಪ್ರತಿಪಾದಿಸಿದ ಕಾದಂಬರಿ ಇದು. ನಂತರ ಬಂದ ನಂಜನಗೂಡಿನ ತಿರುಮಲಾಂಬ, ಆರ್.ಕಲ್ಯಾಣಮ್ಮ ಇವರು ಭಾರತೀಯ ಪರಂಪರೆಯಲ್ಲಿಯೇ ಮಹಿಳೆ ಬದುಕಬೇಕೆಂದು ಬರೆದರು. ಅವರ ಸಾಹಿತ್ಯದ ವಸ್ತುವು ಸೀಮಿತವಾಗಿದ್ದಕ್ಕೆ ಈಗಾಗಲೇ ಕಾರಣವನ್ನು ಚರ್ಚಿಸಲಾಗಿದೆ.

ಹೊಸಗನ್ನಡ ಸಾಹಿತ್ಯವು ವಚನ ಸಾಹಿತ್ಯದಂತೆಯೇ ವೈಚಾರಿಕ ನೆಲೆಗಟ್ಟಿನಲ್ಲಿ ಹುಟ್ಟಿಕೊಂಡಿತು. ಪ್ರಗತಿಶೀಲ ವಿಚಾರಗಳು ರೂಪುಗೊಂಡವು. ಮಹಿಳೆಯರ ದನಿಗೆ ಬಹಳ ಗಟ್ಟಿ ದನಿಯನ್ನು ಸೇರಿಸಿದ್ದು ಅಂದಿನ ಲೇಖಕರು. ನವ ಸಮಾಜದ ನಿರ್ಮಾಣಕ್ಕೆ ಮಹಿಳೆಗೆ ಶಿಕ್ಷಣವೇ ಪ್ರಮುಖ ಅಸ್ತ್ರ ಎಂಬುದನ್ನು ಮನಗಾಣಿಸಿದರು. ನಂತರ ಬಂದ ಔದ್ಯೋಗಿಕ ಕ್ರಾಂತಿಯಿಂದಾಗಿ ಮಹಿಳೆ ಉದ್ಯೋಗ ರಂಗವನ್ನು ಪ್ರವೇಶಿಸಿದಳು.



ಇಂದು ಅವಳು ಉನ್ನತ ಶಿಕ್ಷಣ ಪಡೆದು, ಪ್ರತಿ ರಂಗದಲ್ಲಿಯೂ ತನ್ನ ಛಾಪನ್ನು ಮೂಡಿಸಿರುವುದನ್ನು ಹೆಮ್ಮೆಯಿಂದ ನೋಡುತ್ತಿದ್ದೇವೆ. ಆದರೆ ಅದರ ಹಿಂದಿನ ಹೆಜ್ಜೆಗಳು ಅಷ್ಟು ಸುಲಭವಾಗಿ ಆಕೆಗೆ ದಕ್ಕಿಲ್ಲ ಎಂಬುದನ್ನು ಮರೆಯಬಾರದು.

ಹೀಗೆ ಜಾಗೃತರಾದ ಮಹಿಳೆಯರು ಸಮಾಜದಲ್ಲಿನ ಅಂಧ ಸಂಪ್ರದಾಯ, ಸಾಮಾಜಿಕ ಬದಲಾವಣೆಗಾಗಿ ತಮ್ಮ ಕೃತಿಗಳನ್ನು ರಚಿಸತೊಡಗಿದರು. ಎಂ.ಕೆ.ಇಂದಿರ, ವಾಣಿ, ಜಾನಕಮ್ಮ ಮುಂತಾದವರು ಸಮಾಜ ಸುಧಾರಣೆಯ ಧೋರಣೆಯನ್ನು ತಮ್ಮ ಕೌಟುಂಬಿಕ ಚೌಕಟ್ಟಿನಲ್ಲಿಯೇ ಬರೆದರು. ಆದರೆ ಡಾ.ಅನುಪಮಾ ನಿರಂಜನ, ಎಚ್.ವಿ ಸಾವಿತ್ರಮ್ಮ ಮುಂತಾದವರು ಸಮಾಜದಲ್ಲಿ ಆಗಲೇಬೇಕಾದ ಸುಧಾರಣೆಗಳ ಬಗ್ಗೆ ಸ್ಪಷ್ಟವಾಗಿ ವ್ಯಕ್ತಪಡಿಸಿದರು. ಸಮಾಜದ ಓರೆಕೋರೆಗಳನ್ನು ಗಂಭೀರವಾಗಿ ಚರ್ಚಿಸಿದರು. ಅನುಪಮಾರವರು ವೈದ್ಯೆ ಆಗಿದ್ದರಿಂದ ಅವರ ದೃಷ್ಟಿಕೋನವು ಉಳಿದ ಲೇಖಕಿಯರಿಗಿಂತ ಭಿನ್ನವಾಗಿತ್ತು. ಅವರ ಬಳಿ ಬರುವ ರೋಗಿಗಳ ಕುಟುಂಬದ ಹಿನ್ನಲೆ, ಕಾಯಿಲೆಗಳ ಹಿನ್ನಲೆಯೊಂದಿಗೆ ಮಹಿಳಾ ಸಂವೇದನೆಯನ್ನು, ಆರ್ಥಿಕ ಚಿಂತನೆಗಳನ್ನು ಚಿತ್ರಿಸಿದರು. ದಲಿತ, ಕೊಳಚೆ ಪ್ರದೇಶದ ವ್ಯಕ್ತಿಗಳ, ದಮನಿತರ ದನಿಯಾಗಿ ಪರಂಪರೆಯಿಂದ ನಂಬಿಸಿದ್ದ ಕೀಳಿರಿಮೆಯನ್ನು ಮೆಟ್ಟಿ ನಿಲ್ಲುವಲ್ಲಿ ಇವರ ಕೃತಿಗಳು ಸಹಕಾರಿಯಾದವು.

ಇಪ್ಪತ್ತೊಂದನೆ ಶತಮಾನದ ಸಾಹಿತ್ಯವನ್ನು ಗಮನಿಸುವಾಗ ಇಪ್ಪತ್ತನೆಯ ಶತಮಾನದ ಕೊನೆಯಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡಿದ್ದ ಪ್ರಮುಖ ಬರಹಗಾರರು ಇಂದಿಗೂ ತಮ್ಮ ಬರಹಗಳನ್ನು ಮುಂದುವರೆಸಿರುವುದನ್ನು ಗಮನಿಸಬಹುದು. ನವೋದಯ, ನವ್ಯ, ದಲಿತ, ಬಂಡಾಯ ಕಾಲಘಟ್ಟಗಳು ಹಿಂದೆ

ಸರಿದಂತೆ ಹೊಸ ಕಾಲದ ಅವಲೋಕನ, ವಿಮರ್ಶೆಗಳ ಮೂಲಕ ಇಂದು ಕೃತಿಗಳು ಹೊರಬರುತ್ತಿವೆ. ಹಳೆಯ ತಲೆಮಾರಿನ ಬರಹಗಾರರೊಂದಿಗೆ ಹೊಸ ತಲೆಮಾರಿನವರು ಅವರದ್ದೇ ಆದ ಶಕ್ತಿ ಹಾಗೂ ಮಿತಿಯೊಂದಿಗೆ ಕೃತಿಗಳನ್ನು ರಚಿಸುತ್ತಿದ್ದಾರೆ. ಇಂದಿನ ಕಾಲಘಟ್ಟದಲ್ಲಿ ಮಾಹಿತಿ ತಂತ್ರಜ್ಞಾನದ ಪ್ರಗತಿಯಿಂದಾಗಿ ಸಾವಿರಾರು ಬರಹಗಾರರು ಈಗ ಕೃತಿಗಳನ್ನು ರಚಿಸುತ್ತಿದ್ದಾರೆ. ಪತ್ರಿಕೆಗಳು, ಅನ್‌ಲೈನ್ ಪತ್ರಿಕೆಗಳು, ಇಂಟರ್‌ನೆಟ್, ಫೇಸ್‌ಬುಕ್, ವಾಟ್ಸಪ್, ವೆಬ್‌ಪೇಜ್ ಮುಂತಾದ ಜಾಲತಾಣಗಳಲ್ಲಿ ಬರೆಯುತ್ತಿದ್ದಾರೆ. ಇಲ್ಲಿ ಬರೆಯುವ ಬರಹಗಾರರಿಗೆ ತಮ್ಮ ಮನದ ಅನಿಸಿಕೆಗಳನ್ನು ಹೊರ ಹಾಕುವ, ತಮ್ಮ ತಲೆಮಾರಿನ ಸಂಕಟಗಳನ್ನು ಹೇಳಿಕೊಳ್ಳುವ, ತಮ್ಮ ಸಮುದಾಯದಲ್ಲಿನ ತಲ್ಲಣಗಳು, ಸವಾಲುಗಳು, ಮುಂತಾದವಕ್ಕೆ ತತಕ್ಷಣದ ವೇದಿಕೆಯನ್ನು ಈ ಜಾಲತಾಣಗಳು ಒದಗಿಸುತ್ತಿವೆ.

ಇಂದು ಬದುಕು ಸರಳರೇಖೆಯಲ್ಲ. ಅಂದಿನ ಸಮಸ್ಯೆಗಳ ಸ್ವರೂಪ ಇಂದು ಬೇರೆಯದೆ ಮುಖ ಹೊತ್ತಿದೆ. ಇಂದಿನ ಕನ್ನಡ ಬರಹಗಾರರು ಕಾರ್ಪೋರೇಟ್ ವಲಯ, ಇಂಜಿನೀಯರ್, ವಿಜ್ಞಾನದ ವಿದ್ಯಾರ್ಥಿಗಳು, ವ್ಯಾಪಾರಿಗಳು ಹೀಗೆ ಬೇರೆ ಬೇರೆ ವಲಯದಲ್ಲಿ ಕನ್ನಡ ಸಾಹಿತ್ಯದ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಈ ಕಾಲಘಟ್ಟದಲ್ಲಿ ಗುರುತಿಸಬಹುದು. ಇಂದು ನಾನ್ ಅಕಾಡೆಮಿಕ್ ಬರಹಗಾರರೇ ಹೆಚ್ಚು ಕ್ರಿಯಾಶೀಲರಾಗಿ ಬರವಣಿಗೆಯಲ್ಲಿ ತೊಡಗಿಕೊಂಡಿರುವುದನ್ನು ಕಾಣಬಹುದು.



ಅಂದಿನ ಕಾಲದಲ್ಲಿದ್ದ ದಲಿತ, ಬಂಡಾಯ, ಸ್ತ್ರೀ ಮುಂತಾದ ಚಳುವಳಿಗಳೇ ಇಲ್ಲದ ಕಾಲಘಟ್ಟವಿದು. ಇಂದಿನ ಲೇಖಕರು ಮುಕ್ತವಾಗಿ ಬರೆಯುತ್ತಿದ್ದಾರೆ. ಇದು ಒಂದು ರೀತಿಯಲ್ಲಿ ಬರಹಗಾರರಿಗೆ ಅನುಕೂಲವೂ ಹೌದು ಅನಾನುಕೂಲವೂ ಹೌದು. ಚಳುವಳಿಗಳಿದ್ದಾಗ ಆಯಾ ಚಳುವಳಿಗಳ ಆಶಯಗಳಿಗೆ ಅನುಗುಣವಾಗಿ ಬರೆಯಬಹುದಿತ್ತು. ಚಳುವಳಿ ಇಲ್ಲದಾಗ ಬರವಣಿಗೆಗೆ ಮಾದರಿಗಳೆಂಬುದಿಲ್ಲ. ಬರಹಗಾರರೇ ತಮ್ಮ ದಾರಿಯ ಜಾಡನ್ನು ಕಂಡುಕೊಂಡು ಬರೆಯಬೇಕು. ವಿವಿಧ ಸಮುದಾಯಗಳಿಗೆ ಸೇರಿದ ಇಂದಿನ ತಲೆಮಾರಿನ ಲೇಖಕರು ಸೃಷ್ಟಿಸುತ್ತಿರುವ ಕನ್ನಡ ಸಾಹಿತ್ಯವು ಮುಕ್ತ ಛಂದಸ್ಸಿನ ಕಾಲವಾಗಿದೆ. ಒಣ ಹಾಗೂ ಕೃತಕ ತಾರ್ಕಿಕ ಸಿದ್ಧಾಂತಗಳ ಸಂಕೋಲೆಗಳಿಂದ ಲೇಖಕರು ನಿಧಾನವಾಗಿ ಹೊರ ಬರುತ್ತಿದ್ದಾರೆ. ಬರಹಗಾರರು ತಮ್ಮ ಸಮುದಾಯದ, ತಮ್ಮ ಹಳ್ಳಿ-ನಗರಗಳ ದನಿಯಾಗಲು ಪ್ರಯತ್ನಿಸುತ್ತಿದ್ದಾರೆ. ಇಂದಿನ ರಾಜಕೀಯ ಪರಿಸ್ಥಿತಿಗೆ ತಕ್ಷಣ ಸ್ಪಂದಿಸುತ್ತಿದ್ದಾರೆ. ಹೊಸ ಮಾರ್ಗವನ್ನು ತಾವೇ ಕಂಡುಕೊಳ್ಳುವ ತಹತಹಿಕೆಯಲ್ಲಿದ್ದಾರೆ. ಬದುಕನ್ನು ಕುರಿತು ಪ್ರೀತಿಯನ್ನು, ಕಳೆದುಕೊಳ್ಳುತ್ತಿರುವ ಮೌನವನ್ನು, ಪ್ರತಿಭಟನೆಯನ್ನು ಅರ್ಥವತ್ತಾಗಿ ದಾಖಲಿಸಲು ಪ್ರಯತ್ನಿಸುತ್ತಿದ್ದಾರೆ.

ಈ ಕಥಾಸಂಕಲನದ ಪ್ರತಿಯೊಂದು ಕಥೆಯ ಬಗ್ಗೆಯೂ ದೀರ್ಘವಾಗಿ ಚಿಂತಿಸಿ, ವಿಮರ್ಶಿಸಿ, ಚರ್ಚಿಸಿ ಬರೆಯಲು ಅವಕಾಶವಿದೆ. ಆದರೆ ನಾನು ಓದುಗರು ಈ ಕತೆಗಳ ಪ್ರವೇಶ ಮಾಡುವಾಗ ಇಲ್ಲಿನ ಕಥೆಗಳ ಕಾಲಘಟ್ಟ, ಕತೆಗಳ ವೈಶಿಷ್ಟ್ಯಗಳನ್ನು ತಿಳಿಸುವ ಪ್ರಯತ್ನಕ್ಕಾಗಿ ನನ್ನ ಕೆಲವು ಮಾತುಗಳನ್ನು ಸೇರಿಸಿದ್ದೇನೆ ಅಷ್ಟೇ. ಪ್ರತಿಯೊಂದು ಕತೆಯೂ ಆಯಾ ಓದುಗರು ಆ ಕತೆಗಳನ್ನು ಅವರವರ ಮನೋಧರ್ಮ, ಚಿಂತನೆ, ಆಳ ಅಧ್ಯಯನದ ಮೂಲಕ ಅರ್ಥೈಸಿಕೊಳ್ಳುತ್ತಾರೆ.

· ಆರ್.ಕಲ್ಯಾಣಮ್ಮನವರು ಸ್ತ್ರೀ ಸಮಾಜದ ಮತ್ತು ಮಕ್ಕಳ ಏಳಿಗೆಗಾಗಿ ಅವಿರತವಾಗಿ ದುಡಿದರು. ಹತ್ತು ವರ್ಷಕ್ಕೇ ಮದುವೆಯಾಗಿ ಮೂರೇ ತಿಂಗಳಿಗೆ ವಿಧವೆಯಾಗಿ, ನಂತರ ತಂದೆಯ ಬೆಂಬಲದಿಂದ ವಿದ್ಯಾಭ್ಯಾಸ ಮಾಡಿ, ಕೇಶಮುಂಡನ, ಮಹಿಳೆಯ ಶೋಷಣೆಯ ಬಗ್ಗೆ ಅರಿವು ಮೂಡಿಸಿದರು. ತಮಿಳು ಮಾತೃಭಾಷೆಯಾಗಿದ್ದರೂ ಸಂಸ್ಕೃತ, ಕನ್ನಡದಲ್ಲಿಯೂ ಅನೇಕ ಕೃತಿಗಳನ್ನು ರಚಿಸಿದ ಕ್ರಿಯಾಶೀಲ ಮಹಿಳೆ ಇವರು.

'ನನ್ನ ಧನವನ್ನು ನನಗೆ ತಾ' ಕಥೆಯು ಒಂದು ದುರಂತ ಕುಟುಂಬದ ಚಿತ್ರಣ ನೀಡುತ್ತದೆ. ಗಂಡನನ್ನು ಕಳೆದುಕೊಂಡ ತಾಯಿ, ಮೂರು ವರ್ಷದ ಮಗನಿಗೆ ಅಪ್ಪ ಇಂದು ಬರುವ, ನಾಳೆ ಬರುವನೆಂದು ಸುಳ್ಳು ಹೇಳಿ ಅದನ್ನು ನಂಬಿಸುವ ಮಾತೃಹೃದಯ ಚಿತ್ರಣ ಇಲ್ಲಿದೆ. ಮಗು ಹಾಸಿಗೆಯಿಡಿದಾಗ ತನ್ನ ಕಣ್ಣೀರನ್ನು ಮುಚ್ಚಿಟ್ಟುಕೊಳ್ಳಲಾಗದೆ, ಆ ಮಗುವಿನ ಮುಗ್ಧ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಕೊನೆಗೆ ಮಗುವು ಸತ್ತಾಗ ದೇವರಲ್ಲಿ ತನ್ನ ಕೂಸನ್ನು ವಾಪಸ್ಸು ಕೊಡು ಎಂದು ಕೇಳಿಕೊಳ್ಳುವ ತಾಯಿಯ ಸಂಕಟ ಇಲ್ಲಿನ ಕಥಾವಸ್ತು, ಸರಳ ಭಾಷೆ, ಮಗುವಿನ ಮುಗ್ಧ ಪ್ರಶ್ನೆ ಓದುಗರಿಗೆ ಕರುಳು ಮಿಡಿಯುವಂತೆ ಮಾಡುತ್ತದೆ.

· ಹವ್ಯಕ ಬ್ರಾಹ್ಮಣ ಸಂಪ್ರದಾಯ ಕುಟುಂಬದಲ್ಲಿ ಹುಟ್ಟಿದ ಗೌರಮ್ಮ ಮಡಕೇರಿಯಲ್ಲಿ ವಿದ್ಯಾಭ್ಯಾಸ ಮಾಡಿ ಶುಂಠಿಕೊಪ್ಪಕ್ಕೆ ಸೊಸೆಯಾಗಿ ಬಂದು 'ಕೊಡಗಿನ ಗೌರಮ್ಮ' ಎಂದೇ ಸಾಹಿತ್ಯಲೋಕದಲ್ಲಿ ಪರಿಚಿತರಾದರು. ಆ ಕಾಲಕ್ಕೇ ಈಜು, ಟೆನಿಸ್ ಮುಂತಾದ ಮಹಿಳೆಯರಿಗೆ ಅಂದು ದಕ್ಕದ ಹವ್ಯಾಸಗಳನ್ನು ಮೈಗೂಡಿಸಿಕೊಂಡಿದ್ದವರು ಗೌರಮ್ಮ, ಪ್ರತಿದಿನವೂ ತಪ್ಪದೆ ಟೆನಿಸ್ ಆಡುತ್ತಾ, ಸಮಯ ಸಿಕ್ಕಾಗ ಸಮೀಪದಲ್ಲಿದ್ದ ಹೊಳೆಯಲ್ಲಿ ಈಜಾಡುತ್ತಿದ್ದ ಅವರ ವೈಯಕ್ತಿಕ ಬದುಕನ್ನು ಗಮನಿಸಿದಾಗ ಅವರು ಅಂದಿನ ಇನ್ನಿತರ ಮಹಿಳೆಯರಿಗಿಂತ ಎಷ್ಟು ಮುಂದಿದ್ದರು ಎಂಬುದನ್ನು ಗಮನಿಸಬಹುದು. ಅವರ ಕಥಾವಸ್ತು ಕೂಡ ಆಧುನಿಕವೇ ಆಗಿದೆ. ಭಾಷೆ ಲವಲವಿಕೆಯಿಂದ ಕೂಡಿರುವುದನ್ನು ಅವರ ಕಥೆಗಳಲ್ಲಿ ಗಮನಿಸಬಹುದು. ಅವರು ಬಹಳ ಚಿಕ್ಕವಯಸ್ಸಿನಲ್ಲಿಯೇ ಈಜಾಡಲು ಹೋಗಿ ಸಾವನ್ನಪ್ಪಿದ್ದು ದುರಂತ.

`ಹೋಗಿಯೇ ಬಿಟ್ಟಿದ್ದ' ಕತೆಯಲ್ಲಿನ ನಾಯಕ-ನಾಯಕಿ ಸಾಮಾನ್ಯ ಕೂಲಿಕಾರರು. ರೈಲಿನಲ್ಲಿ ಸಾಗುವ ಈ ಕಥೆ, ಯುವಕರ ಮುಂದೆ ಮುದುಕನೊಬ್ಬ ತನ್ನ ಮೂವತ್ತು ವರ್ಷದ ಹಿಂದಿನ ಕತೆಯನ್ನು ಹೇಳಿಕೊಳ್ಳುತ್ತಾನೆ. ತಂದೆ-ತಾಯಿಯನ್ನು ಕಳೆದುಕೊಂಡು ಅನಾಥನಾಗಿ ಜೀತಕಿದ್ದ ಹುಡುಗ ಯುವಕನಾದಾಗ ಕೂಲಿ ಕೆಲಸಕ್ಕೆ ಬಂದ ಲತೀಫಾಳನ್ನು ಪ್ರೇಮಿಸುತ್ತಾನೆ, ಅವಳೂ ಅವನನ್ನು ಪ್ರೀತಿಸುತ್ತಾಳೆ. ಆದರೆ ಮುಂದೆ ನಡೆಯುವ ಘಟನೆಗಳು ಅಂತರಜಾತಿ ವಿವಾಹದ ದುರಂತವನ್ನು ಕಣ್ಣ ಮುಂದೆ ತೋರಿಸುತ್ತದೆ. ಆ ಕಾಲಕ್ಕೆ ಹಿಂದೂಗಳಲ್ಲಿ ವಿಧವಾ ವಿವಾಹ ಕಷ್ಟವಾಗಿತ್ತು. ಆದರೆ ಇಲ್ಲಿನ ನಾಯಕಿಯ ತಾಯಿ ಗಂಡ ಸತ್ತ ಮೇಲೆ ಬೇರೊಂದು ವಿವಾಹವಾಗಿದ್ದ ಪ್ರಸ್ತಾಪ ನೀಡುತ್ತಾರೆ ಗೌರಮ್ಮ, ಅಂದು ಆ ಸಮಾಜದಲ್ಲಿ ಅಂತಹ ಪದ್ಧತಿ ಆಚರಣೆಯಲ್ಲಿತ್ತು ಎಂಬುದನ್ನು ಮನಗಾಣಬಹುದು.

ಉತ್ತರ ಕರ್ನಾಟಕದ ಲೇಖಕಿಯರ ಪ್ರಥಮ ಸಣ್ಣ ಕಥಾ ಸಂಕಲನ ಶ್ಯಾಮಲದೇವಿ ಬೆಳಗಾವಕರ ಅವರ 'ಹೂಬಿಸಿಲು'. ನಂತರ ಅವರ 'ಹೊಂಬಿಸಿಲು ಪ್ರಕಟವಾಯಿತು. ಒಟ್ಟು ೨೨ ಸಣ್ಣ ಕತೆಗಳು ಸಮಕಾಲೀನ ಸಂದರ್ಭದ ಮಹಿಳೆಯರ ಬದುಕಿನ ವಾಸ್ತವ ಚಿತ್ರಣ ನೀಡುವಲ್ಲಿ ಯಶಸ್ವಿಯಾಗಿವೆ. ಕೆಳವರ್ಗದ ಜನರ ನೋವು- ನಲಿವುಗಳು ಇವರ ಕಥೆಗಳ ವಸ್ತುವಾಗಿವೆ.

ಇವರ 'ಕಂತಿಯ ದೇಶಾಂತರ' ಕುಡಿದ ಗಂಡನ ರಂಪಾಟವನ್ನು, ಮಕ್ಕಳೆರಡನ್ನೂ ಸಾಕುವ ಅಸಹಾಯಕತೆಯನ್ನು ವಿವರಿಸುತ್ತದೆ. ಕಂತಿ, ತನ್ನ ಮಕ್ಕಳ ಬದುಕು ಹಸನು ಮಾಡಬೇಕೆಂದೇ ದೇಶಾಂತರ ಬರುತ್ತಾಳೆ. ದಿಕ್ಕೆಟ್ಟ ಅವಳ ಬದುಕಿಗೆ ಹೆಂಡತಿ ಕಳೆದುಕೊಂಡ ವಿಧುರ ಮಾದೇವನ ಪ್ರವೇಶವಾಗುವ ಸಂದರ್ಭದಲ್ಲಿಯೇ ಮತ್ತೆ ಪತಿಯ ಭೇಟಿ, ಅವನ ಮೇಲಿನ ಕನಿಕರವನ್ನು ಈ ಕತೆ ಕಟ್ಟಿಕೊಡುತ್ತದೆ. ಕೊನೆಗೆ ಮಾದೇವನೊಂದಿಗೆ ಉಡುಕಿ ಮಾಡಿಕೊಂಡು ಸುಖ ಜೀವನಕ್ಕೆ ತೆರೆದುಕೊಳ್ಳುವ ಈ ಕತೆ ಬದುಕಿನಲ್ಲಿ ಬರೀ ಕತ್ತಲೆಯೇ ಇಲ್ಲ, ಬೆಳಕೂ ಇದೆಯೆಂಬುದನ್ನು ಮನಗಾಣಿಸುತ್ತದೆ. ಇದು ಲೇಖಕಿಯ ಆಶಯವೂ ಹೌದು. ಸರಳ ಉತ್ತರ ಕರ್ನಾಟಕದ ಭಾಷೆ, ತಾಯ್ತನ, ಕಾಯಕದ ಮಹತ್ವವನ್ನು ಈ ಕಥೆ ಕಟ್ಟಿಕೊಡುತ್ತದೆ.

ಸರಸ್ವತಿಬಾಯಿ ರಾಜವಾಡೆ ಪ್ರಗತಿಪರ ಧೋರಣೆ ಹೊಂದಿದ್ದ ಲೇಖಕಿ. ಉಡುಪಿಯ ಬಳಿಯ ಒಳಂಜಾಲದಲ್ಲಿ ಬಡತನದ ಕುಟುಂಬದಲ್ಲಿ ಜನಿಸಿದ್ದ ಇವರು ಅಪ್ಪ ಅಮ್ಮನ ಪ್ರೀತಿಯಿಂದ ವಂಚಿತರಾಗಿದ್ದರು. ೧೫ರ ಹರೆಯದ ಇವರು ಶ್ರೀಮಂತ ೫೨ ವಯಸ್ಸಿನ ರಾಯಶಾಸ್ತ್ರಿ ರಾಜವಾಡೆಯೊಂದಿಗೆ ಮದುವೆಯಾಗುತ್ತಾರೆ. ಸಿಂಗಪುರದಲ್ಲಿ ಅಕೌಂಟೆಂಟ್ ಆಗಿದ್ದ ಅವರ ಪ್ರೋತ್ಸಾಹದಿಂದ ಮುಂದೆ ಓದುತ್ತಾರೆ. 'ಗಿರಿಬಾಲೆ' ಕಾವ್ಯನಾಮದಿಂದ ಬರೆಯಲು ಪ್ರಾರಂಭಿಸಿದ ಇವರು ೬೫ ಕಥೆಗಳನ್ನು ಬರೆದರು. ಮೂರು ಕಥಾಸಂಕಲನಗಳನ್ನು ಹೊರತಂದರು.

'ಅವಳ ಉದ್ಧಾರ' ಅಂದಿನ ಸಮಾಜದ ಧೋರಣೆಯನ್ನು ವಿಡಂಬನಾತ್ಮಕವಾಗಿ ಧ್ವನಿಸುವ ಕತೆಯಾಗಿದೆ. ಈ ಕಥೆ ಕುಟುಂಬದ ಶೋಷಣೆ, ಸಮಾಜದ ಶೋಷಣೆಯನ್ನು ಅತ್ಯಂತ ಸಮರ್ಥವಾಗಿ ಎಳೆಎಳೆಯಾಗಿ ಬಿಡಿಸಿಟ್ಟಿದೆ. ಬಾಲವಿಧವೆಗೆ ಮನೆಯಲ್ಲಿ ಭಾವನೇ ಬಸುರಿಯಾಗುವಂತೆ ಮಾಡುತ್ತಾನೆ. ಆಕೆ ವಿಧವಾಶ್ರಮಕ್ಕೆ ಬಂದು ಸೇರುತ್ತಾಳೆ. ನಂತರದ ಸಂಕಟಗಳೊಂದಿಗೆ ಆಕೆ ಕೊನೆಗೆ ವೇಶ್ಯಾವಾಟಿಕೆ ಸೇರುತ್ತಾಳೆ. ವಿಧವಾಶ್ರಮದಿಂದ ಆದದ್ದು ಅವಳ ಉದ್ಧಾರ. ಸರಳ, ನೇರ ಸಂಭಾಷಣೆ, ನಾಯಕಿಯ ದಿಟ್ಟ ಪ್ರಶ್ನೆಗಳಿಂದಾಗಿ ಕತೆ ಗಮನ ಸೆಳೆಯುತ್ತದೆ. ಅಂದಿನ ಮಹಿಳೆಯರು ಕುಟುಂಬ ಹಾಗೂ ಸಮಾಜದಲ್ಲಿ ಹೇಗೆಲ್ಲಾ ಹಿಂಸೆ ಅನುಭವಿಸುತ್ತಿದ್ದರು ಎಂಬ ನಿಜ ಚಿತ್ರಣ ಇಲ್ಲಿದೆ.

ಹೆಬ್ಬಳಲು ವೆಲಪನೂರು ಸಾವಿತ್ರಮ್ಮನ ತಂದೆ ಮೈಸೂರು ಸಂಸ್ಥಾನದಲ್ಲಿ ಉನ್ನತ ಅಧಿಕಾರಿಯಾಗಿದ್ದರು. ಹೈಸ್ಕೂಲಿನಲ್ಲಿದ್ದಾಗಲೇ ಇವರ ಮದುವೆಯಾದರೂ ಪತಿಯ ಪ್ರೋತ್ಸಾಹದಿಂದ ಮೈಸೂರು ವಿಶ್ವವಿದ್ಯಾಲಯದಲ್ಲಿ ಬಿ.ಎ.ಪದವಿಯನ್ನು ಬಂಗಾರದ ಪದಕಗಳೊಂದಿಗೆ ಪಡೆದರು. ಲೇಖಕಿಯಾಗಿ, ಅನುವಾದಕಿಯಾಗಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಸಮಕಾಲೀನ, ಸಂಪ್ರದಾಯಸ್ಥ ಚಿಂತನೆಗಳ ಜೊತೆಗೆ ಆಧುನಿಕ ವಿಚಾರಗಳಿಗೂ ಸ್ಪಂದಿಸಿ ಕೃತಿ ರಚನೆ ಮಾಡಿದ್ದಾರೆ.

ಅವರ 'ಹೊಣೆ ಯಾರು?' ಕತೆ ಅಂದಿನ ಸಮಾಜ, ಕುಟುಂಬದಲ್ಲಿನ ಆಚಾರ- ವಿಚಾರಗಳನ್ನು ತಿಳಿಸುತ್ತಲೇ ಹೆಣ್ಣುಮಕ್ಕಳ ಸ್ಥಿತಿಗತಿಯನ್ನು ಅನಾವರಣ ಮಾಡುತ್ತದೆ. ಶುದ್ಧ ಪೆಂಗ ಮಗನನ್ನು ಕಟ್ಟಿಕೊಂಡು ವಿಧವೆಯಾದ ಸ್ವರ್ಣಮ್ಮ ಪಡುವ ಕಷ್ಟಗಳು, ಅವರಿವರ ಮನೆಯಲ್ಲಿ ಉಳಿದು ಮಗನಿಂದಾಗಿ ಅವಮಾನಿತಳಾಗಿ ಬದುಕು ಕಟ್ಟಲು ಹೋರಾಡುತ್ತಿರುವುದು ಒಂದು ಕಡೆಯಾದರೆ, ಮಗಳ ಮದುವೆಗಾಗಿ ಹೋರಾಡುವ ಶ್ರೀಮಂತ ಶ್ರೀನಿವಾಸರಾಯ ತನ್ನ ಒಬ್ಬಳೇ ಮಗಳನ್ನು ವೈದ್ಯನಾದ ಚಂದುವಿಗೆ ಕೊಡಲು ನಿರ್ಧರಿಸುವುದು, ಅದನ್ನು ಚಂದು ನಿರಾಕರಿಸುವುದು ಕೊನೆಗೆ ಸ್ವರ್ಣಮ್ಮನ ಮಗನಿಗೆ ಹುಚ್ಚು ಎಂದು ಗೊತ್ತಿದ್ದರೂ ಮದುವೆ ಮಾಡುವ ಶ್ರೀನಿವಾಸರಾಯ, ಕತೆಯ ನಾಯಕಿಯ ದುರಂತದ ಅಂತ್ಯಕ್ಕೆ ಯಾರು ಹೊಣೆ ಎಂದು ಚಂದು ಪ್ರಶ್ನಿಸಿಕೊಳ್ಳುತ್ತಾನೆ. ತಾನಾ? ಅವಳ ತಂದೆ-ತಾಯಿಯಾ? ಹುಚ್ಚನಾದರೂ ಮದುವೆ ಮಾಡಲೇಬೇಕಾದ ಸಮಾಜದ ಅನಿವಾರ್ಯತೆಯಾ? ಎಂಬುದು ಕತೆಯಲ್ಲಿ ಬಿಂಬಿತವಾಗಿದೆ.

· ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಸ್ಥಿತಿ, ಬಾಲ್ಯ ವಿವಾಹ, ವಿಧವೆಯರ ಗೋಳು ಹೀಗೆ ಸಮಾಜದಲ್ಲಿನ ಸಮಸ್ಯೆಗಳನ್ನು ತಮ್ಮ ಕಾದಂಬರಿ, ಕತೆಗಳ ಮೂಲಕ ಬೆಳಕು ಚೆಲ್ಲಿದವರು ಎಂ.ಕೆ.ಇಂದಿರಾರವರು.

"ವಿರಕ್ತ' ಕತೆ ಹಿಂದೂ-ಮುಸ್ಲಿಂ ಬಾಂಧವ್ಯದ ದ್ಯೋತಕದಂತಿದೆ. ಕತೆಯ ನಾಯಕ ಹಯಾತನಿಗೆ ಹುಚ್ಚೆಂದ ಜನ ಊಟ ಹಾಕುವುದು, ತನ್ನವರನ್ನೆಲ್ಲಾ ಕಳೆದುಕೊಂಡು ಸಂತನಂತೆ ಊರಲ್ಲಿನ ಪ್ರಾಣಿ-ಪಕ್ಷಿಗೆ ಊಟ ನೀಡುತ್ತಿದ್ದ ಹಯಾತ ಮುಂದೊಂದು ದಿನ ಶೃಂಗೇರಿ ಜಗದ್ಗುರುಗಳ ಕಣ್ಣಿಗೆ ಬಿದ್ದು ಸಂತನಾಗುವ ಕತೆ ಇಲ್ಲಿಯದು.

· 'ತ್ರಿವೇಣಿ' ಕಾವ್ಯನಾಮದಿಂದಲೇ ಪ್ರಖ್ಯಾತರಾದ ಅನಸೂಯ ಶಂಕರ್ ಮನುಷ್ಯನ ಆಂತರಿಕ ಸ್ತರದಲ್ಲಿ ನಡೆಯುವ ಮನೋವಿಶ್ಲೇಷಣೆಯ ಕ್ರಿಯೆಗಳನ್ನು ವೈಜ್ಞಾನಿಕವಾಗಿ ಚರ್ಚಿಸಿ, ಅದಕ್ಕೆ ಕಥೆಯ ರೂಪ ನೀಡಿ ವಿಭಿನ್ನ ರೀತಿಯಿಂದ ಕಾದಂಬರಿ, ಕತೆಗಳನ್ನು ಸಾಹಿತ್ಯಲೋಕಕ್ಕೆ ನೀಡಿದ ಬಹುಮುಖ್ಯ ಲೇಖಕಿ.

೧೯೬೦ ರಲ್ಲಿ ಪ್ರಕಟಗೊಂಡ ಎರಡು ಮನಸ್ಸು' ಕಥಾಸಂಕಲನದಿಂದ ಇಲ್ಲಿನ ಕತೆಯನ್ನು ಆಯ್ದುಕೊಳ್ಳಲಾಗಿದೆ. 'ಅಲಿ-ಅನಿಲ್' ಕತೆ ಹಿಂದೂ-ಮುಸ್ಲಿಂ ಗೆಳೆಯರ ಕುಟುಂಬದ ಮನಸ್ಥಿತಿಯನ್ನು ಅನಾವರಣಗೊಳಿಸುವ ವಿಶಿಷ್ಟ ಕತೆಯಾಗಿದೆ. ಕರಾಚಿಯಲ್ಲಿದ್ದ ಷೇಕ್ ಅಲಿ, ಕಲ್ಕತ್ತೆಯ ಅನಿಲ್ ಚಟರ್ಜಿ ಒಂದು ಕೋಮುಗಲಭೆಯ ಸಂದರ್ಭದಲ್ಲಿ ಪರಿಚಯವಾಗುತ್ತಾರೆ. ಮುಸ್ಲಿಂಮರು ಅನಿಲನನ್ನು ಕೊಲ್ಲಲು ಬಂದಾಗ ಅಲಿ, ಅನಿಲನನ್ನು ತನ್ನ ತಮ್ಮನೆಂದು ಹೇಳಿ ಬದುಕಿಸುತ್ತಾನೆ. ಇದು ಕಲ್ಕತ್ತೆಯಲ್ಲಿನ ಅನಿಲ್ ಕುಟುಂಬಕ್ಕೆ ತಿಳಿದು ಅಲ್ಲಿ ಅಲ್ಲಿಗೆ ಭೇಟಿ ನೀಡಿದಾಗ ನಡೆಯುವ ಕುತೂಹಲ ವಿಚಾರಗಳನ್ನು, ಮನಸ್ಥಿತಿಯನ್ನು, ವ್ಯಕ್ತಿಗಳ ಒಳಮುಖದ ತುಮುಲಗಳನ್ನು ಈ ಕಥೆ ಭಿನ್ನವಾಗಿ ಕಟ್ಟಿಕೊಡುತ್ತದೆ. ಅಂತ್ಯ ಯಾರೂ ಅರಿಯದ ರೀತಿಯಲ್ಲಿದ್ದು ಓದುಗರ ಹೃದಯ ಕಲಕುತ್ತದೆ.

· ಗೀತಾ ಕುಲಕರ್ಣಿ ಶಿವರಾಮ ಕಾರಂತರ ಪತ್ನಿ ಲೀಲಾರವರ ತಂಗಿ. ಅಂತರ್ಜಾತಿ ವಿವಾಹವಾಗಿ ಧಾರವಾಡದಲ್ಲಿ ನೆಲೆನಿಂತರು. ಇವರ ಏಳು ಕಥಾಸಂಕಲನಗಳು ಪ್ರಕಟಗೊಂಡಿವೆ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಕೃತಿ ರಚಿಸಿದ್ದಾರೆ.

`ದೂರ-ಬಹುದೂರ' ಕತೆ ರೈಲಿನಲ್ಲಿ ನಡೆಯುವ ಕತೆಯಾಗಿದೆ. ಗಂಡನನ್ನು ಕಳೆದುಕೊಂಡು ಪುಟ್ಟ ಮಕ್ಕಳ ತಾಯಿ ಸುಮತಿ, ಮಕ್ಕಳಿಲ್ಲದ ಸುಮಿತ್ರಮ್ಮನವರ ಮುಖಾಮುಖಿಯೊಂದಿಗೆ ಕತೆ ಅನಾವರಣಗೊಳ್ಳುತ್ತದೆ. ಸುಮತಿಯ ನಿಜ ಜೀವನದ ಘಟನೆಗಳು ಮನಕಲಕುತ್ತವೆ.

ಈ ಎಚ್.ಎಸ್.ಪಾರ್ವತಿ ಎಂ.ಎ ಪದವಿ ಪಡೆದು ಆ ಕಾಲಕ್ಕೇ ಆಕಾಶವಾಣಿಯ ಕಾರ್ಯಕ್ರಮ ನಿರ್ವಾಹಕಿಯಾಗಿದ್ದರು. ಸೃಜನಶೀಲ ಲೇಖಕಿಯಾಗಿ, ಭಾಷಾಂತರಕಾರ್ತಿಯಾಗಿ ಗುರುತಿಸಿಕೊಂಡಿದ್ದರು.

ಅವರ 'ಒಂಟಿ ಮೋಡ' ಕಥಾಸಂಕಲನದಿಂದ 'ಮನಸೊಂದು ರೆಕಾರ್ಡಿಂಗ್ ಟೇಪು' ಕತೆಯನ್ನು ಆಯ್ದುಕೊಳ್ಳಲಾಗಿದೆ. ರೋಹಿಣಿ ಸ್ವತಃ ತನ್ನ ಭಾವನಿಂದಲೇ ಅತ್ಯಾಚಾರಕ್ಕೊಳಗಾಗಿ ಅವನನ್ನೆ ಮದುವೆಯಾಗುವ, ಬಸುರಿಯಾಗುವ ಕತೆ ಇಲ್ಲಿದೆ. ಅಂದಿನ ಸಮಾಜದ ಕೌಟುಂಬಿಕ ಚಿತ್ರಣವನ್ನು ಪಾರ್ವತಿಯವರು ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ.

· ಅನುಪಮಾ ನಿರಂಜನ ವೃತ್ತಿಯಿಂದ ವೈದ್ಯೆಯಾಗಿದ್ದರೂ ಪ್ರವೃತ್ತಿಯಿಂದ ಬರಹಗಾರ್ತಿಯಾಗಿದ್ದರು. ಅವರು ೨೨ ಕಾದಂಬರಿಗಳನ್ನು, ೯ ಕಥಾಸಂಕಲನಗಳನ್ನು ಪ್ರಕಟಿಸಿದರು. ಮಕ್ಕಳಿಗಾಗಿ ೩೬೫ ಕಥೆಗಳ ೧೨ ಕಥಾಸಂಕಲನಗಳನ್ನೊಳಗೊಂಡ ದಿನಕ್ಕೊಂದು ಕತೆಗಳು ಗಮನಸೆಳೆಯುತ್ತವೆ. ಅವರ ಅನೇಕ ಕತೆಗಳಲ್ಲಿ ರೋಗ, ಅದಕ್ಕೆ ಪರಿಹಾರ, ಚಿಕಿತ್ಸೆ ಮುಂತಾದವುಗಳನ್ನು ಕತೆಯ ಚೌಕಟ್ಟಿನಲ್ಲಿಯೇ ಸೇರಿಸಿ ಓದುಗರನ್ನು ಸೆಳೆದಿದ್ದಾರೆ.

ಪೋಸ್ಟ್ ಆಫೀಸಿನಲ್ಲಿ ಕಾರಕೂನನಾಗಿದ್ದ ನಾಗಪ್ಪ, ಮನೆಯನ್ನು ಗಂಡ ತರುವ ಸಂಬಳದಲ್ಲಿಯೇ ಸಂಭಾಳಿಸುವ ಪಾರ್ವತಮ್ಮನ ಕತೆ ಇಲ್ಲಿದೆ. ರಾಮಾಯಣದಲ್ಲಿ ಬರುವ ಪುಷ್ಪಕ ವಿಮಾನದಿಂದ ಕುತೂಹಲಗೊಂಡ ಪಾರ್ವತಮ್ಮ, ಸಾಯುವ ಮುಂಚೆ ತಾನೂ ವಿಮಾನ ಹತ್ತಬೇಕೆಂದು ಚಕ್ಕುಲಿ-ಕೋಡುಬಳೆಯಿಂದ ಬಂದ ಹಣವನ್ನು ಗಂಟಿಕ್ಕುವ ಕೊನೆಗೂ ಆಕೆಗೆ ಕ್ಯಾನ್ಸರ್ ಆಗಿ ಬಾಂಬೆಗೆ ವಿಮಾನವೇರುವ ಕುತೂಹಲದ ಕತೆ 'ಪುಷ್ಪಕ', ಕ್ಯಾನ್ಸರ್ ಕಾಯಿಲೆ, ಅದರ ಚಿಕಿತ್ಸೆಯ ವಿವರಗಳನ್ನು ಲೇಖಕಿ ನೀಡಿದ್ದಾರೆ.

· ಇತ್ತೀಚೆಗಷ್ಟೇ ನಮ್ಮನ್ನಗಲಿದ ಶಾಂತಾದೇವಿ ಕಣವಿ, ಉತ್ತರ ಕರ್ನಾಟಕದ ದೇಸಿ ಸೊಬಗು, ಧ್ವನಿಪೂರ್ಣ ಭಾಷೆ, ಕಸರತ್ತಿಲ್ಲದ ಸರಳ ಬರವಣಿಗೆಯಲ್ಲಿ ಗಮನಸೆಳೆಯುತ್ತಾರೆ. ಇವರ ಏಳು ಕಥಾಸಂಕಲನಗಳು ಪ್ರಕಟಗೊಂಡಿವೆ.

ಒಂದು ಮೂಗುತಿಯ ಕಥೆ' ಬದುಕು ಕಟ್ಟಲು ಹೆಣಗಾಡುವ ಮಾನವ್ವ, ಕುಡುಕ ಗಂಡನ ಕಾಟ, ಮಗಳ ಮದುವೆಯ ಕನಸು, ಅಂತ್ಯದಲ್ಲಿ ಕಾಣುವ ಅವಳಲ್ಲಿದ್ದ ಮಾನವೀಯತೆಯನ್ನು ಅನಾವರಣ ಮಾಡುತ್ತದೆ. ಉತ್ತರ ಕರ್ನಾಟಕದ ಜವಾರಿ ಭಾಷೆ, ತಂತ್ರಗಾರಿಕೆಯಿಂದಾಗಿ ಕತೆ ಗಮನ ಸೆಳೆಯುತ್ತದೆ.

ನಾಡೋಜ ಕಮಲಾ ಹಂಪನಾ ಅವರು ವಿದ್ವಾಂಸರಾಗಿ, ಸಂಶೋಧಕರಾಗಿ ಪ್ರಾಚೀನ ಕೃತಿಗಳ ಅನುಸಂಧಾನಕಾರರಾಗಿ, ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಸಾರ್ಥಕವಾದ, ಗಂಭೀರವಾದ ಅಧ್ಯಯನ ಮತ್ತು ಸಂಶೋಧನೆ ಕೈಗೊಂಡು ಮೌಲಿಕ ಕೊಡುಗೆಗಳನ್ನು ನೀಡಿದ್ದಾರೆ.

ಅವರ 'ಕತೆಯಾಯಿತು ಘಟನೆ' ಕಥೆ ಅಂತರ್ಜಾತಿ ವಿವಾಹ, ಬಸವಣ್ಣನ ತತ್ವಗಳ ಅನುಷ್ಠಾನದಲ್ಲಿನ ವ್ಯಂಗ್ಯವನ್ನು ಅತ್ಯಂತ ಸಮರ್ಥವಾಗಿ ಧ್ವನಿಸುತ್ತದೆ. ದುರಂತದಲ್ಲಿ ಅಂತ್ಯವಾಗುವ ಕತೆಯಲ್ಲಿ ಮಹೇಶ-ಚಂದ್ರಿ

ಅಪಘಾತಕ್ಕೆ ಸಿಕ್ಕು ಸಾಯುವುದು, ಅದನ್ನು ಬದುಕಿರುವವರು ಅರ್ಥಮಾಡಿಕೊಳ್ಳುವ ಮನಸ್ಥಿತಿಗಳನ್ನು ಅದ್ಭುತವಾಗಿ ನಿರೂಪಿಸಿದ್ದಾರೆ.

- xlvi -

· ಸಾರಾ ಅಬೂಬಕರ್ ಮಸ್ಲಿಂ ಮಹಿಳೆಯರಿಗೆ ತಮ್ಮ ಅಭಿಪ್ರಾಯಗಳನ್ನು ಹೊರಹಾಕಲು ವೇದಿಕೆಗಳು ಇಲ್ಲದ ಕಾಲಘಟ್ಟದಲ್ಲಿ, ಅಂತಹ ಮಹಿಳೆಯರ ದನಿಯಾಗಿ ಬರೆಯಲು ಪ್ರಾರಂಭಿಸಿದರು. ಮುಸ್ಲಿಂ ಧರ್ಮದಲ್ಲಿರುವ ಆಚರಣೆಗಳು, ಪದ್ಧತಿ, ಮಹಿಳೆಯರಿಗೆ ಇರುವ ಕಟ್ಟುಪಾಡುಗಳನ್ನು ತಮ್ಮ ಕೃತಿಗಳಲ್ಲಿ ಸಮರ್ಥವಾಗಿ ಕಟ್ಟಿಕೊಡುತ್ತಿರುವ ಸಶಕ್ತ ಬರಹಗಾರ್ತಿ,

'ಸಾರಾಂಶ' ಕತೆಯಲ್ಲಿ ಶಬಾನಳ ಮುಂದೆ ಯಮುನ ತನ್ನ ಗೋಳಿನ ಕತೆಯನ್ನು ಹೇಳಿಕೊಳ್ಳುತ್ತಾಳೆ. ಅವಳಿಗೆ ಶಬಾನ ಆಶ್ರಯ ನೀಡಿದಾಗ ಹಿಂದೂ-ಮುಸ್ಲಿಂ ವಿದ್ಯಾವಂತರ ಮುಖವಾಡಗಳು ಅನಾವರಣಗೊಳ್ಳುವ ಚಿತ್ರಣ ಇಲ್ಲಿದೆ.

· ಮೂಲತಃ ಉಡುಪಿಯವರಾದ ಪ್ರೇಮಾಭಟ್, ಕರ್ನಾಟಕ ಸಚಿವಾಲಯದಲ್ಲಿ ಉದ್ಯೋಗಿಯಾಗಿದ್ದರು. ೧೨ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ೩೬೫ ಕತೆಗಳ ಬೃಹತ್ ಕಥಾಸಂಕಲನವೂ ಪ್ರಕಟವಾಗಿವೆ.

'ಬಿಂಬ' ಕತೆಯಲ್ಲಿ ಒಂದು ಸಣ್ಣ ಕಾರಣವನ್ನು ಮುಂದಿಟ್ಟು ತನ್ನ ಪತ್ನಿಯ ಮೇಲೆ ಸಂಶಯಪಡುವ ಗಂಡನಿಗೆ ಬಿಂಬ ಕಾದಂಬರಿ ನೀಡಿ ಅದರಲ್ಲಿ ಅವನ ಪ್ರತಿಬಿಂಬ ಕಾಣುವಂತೆ ಚಿತ್ರಿಸಿರುವ ಕತೆಯಿದು. ದಕ್ಷಿಣ ಕನ್ನಡದ ಕಂಬಳ, ಮಹಿಳಾ ಸಾಹಿತ್ಯದ ಅವಹೇಳನಕ್ಕೆ ಉತ್ತರ ಇವೆಲ್ಲವನ್ನೂ ಲೇಖಕಿ ಈ ಕಥೆಯಲ್ಲಿ ಚಿತ್ರಿಸಿದ್ದಾರೆ.

· ಸರಿತಾ ಕುಸುಮಾಕರ ದೇಸಾಯಿ ವೃತ್ತಿಯಲ್ಲಿ ವಕೀಲಿ ಮಾಡುತ್ತಲೇ ಸಾಮಾಜಿಕ ಕಾರ್ಯಕರ್ತೆಯಾಗಿ ಗುರುತಿಸಿಕೊಂಡಿದ್ದರು. ವಿಧಾನ ಪರಿಷತ್ತಿನ ಸದಸ್ಯೆಯಾಗಿಯೂ ಸೇವೆ ಸಲ್ಲಿಸಿದ್ದರು.

ಇವರ ಕಥಾಸಂಕಲನ 'ಕಾಶಿಯಲ್ಲಿ ಕಂಡಿದ್ದೇನು' ಕೃತಿಯಿಂದ ತೆಗೆದುಕೊಂಡ ಅದೇ ಶೀರ್ಷಿಕೆಯ ಕಥೆಯಲ್ಲಿ ವೃದ್ಧರ ಮನಸ್ಥಿತಿಯನ್ನು ಅತ್ಯಂತ ಸುಂದರವಾಗಿ ಚಿತ್ರಿಸಲಾಗಿದೆ. ವೈದಿಕ ಪರಂಪರೆಯ ಆಚರಣೆ, ಮಕ್ಕಳು-ವಯೋವೃದ್ಧರ ತಾಕಲಾಟಗಳನ್ನು ಈ ಕಥೆ ಧ್ವನಿಸುತ್ತದೆ.

ಗೀತಾ ನಾಗಭೂಷಣರವರು ಕೂಡ ಇತ್ತೀಚೆಗಷ್ಟೇ ನಮ್ಮನ್ನಗಲಿದ ಮೊಘಲಾಯಿ ಪರಿಸರದ ಪ್ರಮುಖ ಲೇಖಕಿ, ಕೆಳಸ್ತರ ಸಮುದಾಯದ ಮೇಲಿನ ದೌರ್ಜನ್ಯ, ಮೇಲ್ವರ್ಗದ ಜನರ ಶೋಷಣೆ, ಮೂಢ ನಂಬಿಕೆಗಳು ಮುಂತಾದ ವಿಚಾರಗಳನ್ನು ಬಂಡಾಯದ ದನಿಯಲ್ಲಿ ಹಸಿಹಸಿಯಾಗಿ ಚಿತ್ರಿಸಿದ ಲೇಖಕಿ ಇವರು.

'ಪುಂಡಿ ಪೂಜಾರಿಯಾದಾಗ' ಕತೆ ಕೂಡ ಕೆಳಜಾತಿಯ ವ್ಯಕ್ತಿಯೊಬ್ಬನಿಗೆ, ಸರ್ಕಾರದಿಂದ ಮೇಲ್ವರ್ಗದವರು ಪೂಜಿಸುತ್ತಿದ್ದ ಗುಡಿಯ ಪೂಜಾರಿಕೆ ಸಿಗುತ್ತದೆ. ಆಗ ಎರಡೂ ಜನಾಂಗದವರ ಮನಸ್ಥಿತಿ, ಸರ್ಕಾರದ ಬೆಂಬಲವಿದ್ದರೂ ಮೇಲ್ವರ್ಗದವರ ದಬ್ಬಾಳಿಕೆಯ ಚಿತ್ರಣವನ್ನು ಈ ಕಥೆ ಕಟ್ಟಿಕೊಡುತ್ತದೆ. ಭಾಷೆ, ಪರಿಸರ, ಆಚರಣೆ ಇವೆಲ್ಲವನ್ನೂ ಲೇಖಕಿ ಅನುಭವಿಸಿರುವುದರಿಂದ ಕಥೆಗೆ ಜೀವಂತಿಕೆ ಬಂದಿದೆ.

ನವ್ಯ ಪಂಥದಲ್ಲಿಯೇ ಗಟ್ಟಿ ಹೆಸರು ಮಾಡಿದ, ಮಹಿಳಾ ಪ್ರತಿಭಟನೆಯನ್ನು ತಮ್ಮ ಸಾಹಿತ್ಯದಲ್ಲಿ ಛಾಪಿಸಿದ ಕಥೆಗಾರ್ತಿಯರಲ್ಲಿ ವೀಣಾ ಶಾಂತೇಶ್ವರ ಪ್ರಮುಖರು.



ವೈಚಾರಿಕವಾಗಿ ಪುರುಷಪ್ರಧಾನ ವ್ಯವಸ್ಥೆಯ ಅವಗುಣಗಳನ್ನು ಸಮರ್ಥವಾಗಿ ಪ್ರತಿಭಟಿಸಿದವರಲ್ಲಿ ಮೊದಲಿಗರು ವೀಣಾ.

ಅವರ ಮೊಟ್ಟಮೊದಲ ಕಥಾಸಂಕಲನ 'ಮುಳ್ಳುಗಳು', ಈ ಕತೆಯ ನಾಯಕಿ ಪ್ರೊಶಾಂತಿ ಮದುವೆಯಾಗದ ಆದರೆ ಮದುವೆಗಾಗಿ ಕಾತರಳಾದ ಪ್ರಾಧ್ಯಾಪಕಿ. ಅವಳ ಒಂದು ದಿನದ ಚಿಂತನೆಗಳನ್ನು ಈ ಕಥೆ ನಿರೂಪಿಸುತ್ತದೆ. ಇಲ್ಲಿನ ಅನೇಕ ಸನ್ನಿವೇಶಗಳಲ್ಲಿ ಒಳಗಿನ, ಹೊರಗಿನ 'ಮುಳ್ಳುಗಳ' ವಿಶ್ಲೇಷಣೆಯ ಪ್ರಯತ್ನ ಅದ್ಭುತವಾಗಿ ಚಿತ್ರಣಗೊಂಡಿದೆ. ಇಂತಹ ಮಹಿಳಾ ಶೋಷಣೆಯ ಪರಿಸ್ಥಿತಿ ಅಂದಿಗಷ್ಟೇ ಅಲ್ಲದೆ ಇಂದಿಗೂ ಮುಂದುವರೆದಿದೆ. ಪ್ರತಿಭಟನೆಯ ದನಿಗಳು ಅಲ್ಲಲ್ಲಿ ಹೊರಬಂದರೂ ಬೇರೆಯದೆ ಬಣ್ಣ ಪಡೆಯುವುದನ್ನು ಇಂದಿಗೂ ಗಮನಿಸಬಹುದು.

· ಬಿ.ಟಿ.ಲಲಿತಾನಾಯಕ್ ಸಾಹಿತ್ಯ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಪರಿಚಿತರು. ಚಿಕ್ಕಮಗಳೂರು ಜಿಲ್ಲೆಯ ಲಂಬಾಣಿ ತಾಂಡ್ಯದಲ್ಲಿ ಜನಿಸಿದ ಅವರು ತಮ್ಮ ಕೃತಿಗಳಲ್ಲಿ ಜಾತೀಯತೆ, ಮಹಿಳೆಯರ ಶೋಷಣೆ, ದಲಿತರ ನೋವುಗಳಿಗೆ ದನಿಯಾಗಿದ್ದಾರೆ.

'ಲೂಟಿ' ಕತೆಯು ಲಂಬಾಣಿ ಜನರ ಭಾಷೆ, ಬದುಕು, ಆಚರಣೆಗಳ ಪ್ರತೀಕದಂತಿದೆ. ಈ ಕತೆ ಬಡತನದ ಬೇಗೆ, ಹೆಣ್ಣಿನ ಮೇಲಿನ ದಬ್ಬಾಳಿಕೆಯ ಕ್ರೌರ್ಯದ ಕಟು ವಾಸ್ತವವನ್ನು ಮನಮುಟ್ಟುವಂತೆ ಚಿತ್ರಿಸಿದೆ.

· ವೈದೇಹಿಯವರದ್ದು ಕನ್ನಡ ಸಾಹಿತ್ಯದಲ್ಲಿ ಪ್ರಮುಖವಾದ ಹೆಸರು. ಅವರ ಕತೆಗಳ ಕೇಂದ್ರಬಿಂದು ಹೆಣ್ಣೆ ಆಗಿದ್ದಾಳೆ. ಅವಳ ಅನುಭವದ ನೆಲೆಯಿಂದ ಬದುಕಿನೆಡೆ ಪರಿಶೀಲನಾತ್ಮಕವಾಗಿ ನೋಡುವ ಕಾಳಜಿಯೊಂದು ಅವರ ಕೃತಿಗಳಲ್ಲಿದೆ.

ಅವರ 'ಕ್ರೌಂಚ ಪಕ್ಷಿಗಳು' ಕಥಾಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾದೆಮಿಯ ಪ್ರಶಸ್ತಿ ಬಂದಿದೆ. ಅದೇ ಹೆಸರಿನ ಈ ಕತೆಯ ಶೀರ್ಷಿಕೆ ಬಂದದ್ದು ರಾಮಾಯಣದಿಂದ. ಒಂದು ಕ್ರೌಂಚ ಪಕ್ಷಿ ಸತ್ತು ಮತ್ತೊಂದು ಕ್ರೌಂಚ ಪಕ್ಷಿ ಬದುಕಿ ನೋವಿನಲ್ಲಿ ಒದ್ದಾಡಿದ್ದೇ ವಾಲ್ಮೀಕಿ ಮಹರ್ಷಿಗೆ ಅನುಕಂಪ ಹುಟ್ಟಿ ರಾಮಾಯಣ ಬರೆಯಲು ಕಾರಣವಾದದ್ದು. ಈ ಕತೆಯೂ ಕೂಡ ಸ್ವಾತಂತ್ರ್ಯ ನಂತರ ದೇಶ ವಿಭಜನೆಯ ನೆಪದಲ್ಲಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯದ ಚಿತ್ರಣವನ್ನು, ಶೋಷಣೀಯ ಪರಿಸ್ಥಿತಿಯನ್ನು ಸರಳ ನಿರೂಪಣೆಯಲ್ಲಿ ಸಂಕೀರ್ಣ ಭಾವಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ.

· ಮೂಲತಃ ಶಿವಮೊಗ್ಗದವರಾದ ವಸುಮತಿ ಉಡುಪ ಅವರ ಅನೇಕ ಕಥೆಗಳು ಹಿಂದಿ, ತೆಲುಗು ಮುಂತಾದ ಹಲವಾರು ಭಾಷೆಗಳಿಗೆ ತರ್ಜುಮೆಯಾಗಿವೆ. ಮಲೆನಾಡಿನ ಪರಿಸರ, ಭಾಷೆ, ಜೀವನ ಶೈಲಿ ಇವರ ಬಹುತೇಕ ಕಥೆಗಳ ವಸ್ತು.

'ದಾಂಪತ್ಯ ಗೀತೆ' ಕತೆಯು ಕಥಾನಾಯಕಿಗೆ ಕಾಣಿಸಿಕೊಂಡ ತೊನ್ನು ರೋಗದಿಂದಾಗಿ ಆಕೆ ಅನುಭವಿಸುವ ಮಾನಸಿಕ ತುಮುಲಗಳು, ಪತಿ ಹಾಗೂ ಕುಟುಂಬದವರ ಪ್ರತಿಕ್ರಿಯೆಯನ್ನು ಅತ್ಯಂತ ಸೂಕ್ಷ್ಮವಾಗಿ ತೆರೆದಿಡುತ್ತದೆ.

ಮುಂಬೈ ಕನ್ನಡಿಗರು ಸಾಹಿತ್ಯ ವಲಯಕ್ಕೆ ನೀಡಿದ ಕೊಡುಗೆಗಳಲ್ಲಿ ಬಲ್ಲಾಳ, ಚಿತ್ತಾಲ, ಕಾಯ್ಕಿಣಿಯವರಂತೆ ಮಿತ್ರಾ ವೆಂಕಟ್ರಾಜ್ ಕೂಡ ಪ್ರಮುಖರು. ಮೂಲತಃ ಕುಂದಾಪುರದವರು, ಕುಂದಾಪುರದ ಭಾಷೆ, ಪರಿಸರ ಈ ಕತೆಯ ವಿಶೇಷ.

ಇವರ 'ಮಾಯಕದ ಸತ್ಯ' ಕತೆಯಲ್ಲಿ ಒಂದೇ ಘಟನೆಯನ್ನು ಬೇರೆ ಬೇರೆಯವರು ಗ್ರಹಿಸುವ ರೀತಿ, ಬದಲಾಗುವ ವಿವರಣೆ ಹಾಗೂ ಸುಳ್ಳು-ಸತ್ಯಗಳ ನಡುವಿನ ತೆಳ್ಳಗಿನ ಗೆರೆ ಹೇಗೆ ನಿಧಾನವಾಗಿ ಮಾಯವಾಗುತ್ತದೆ ಎಂಬ ವಿಶ್ಲೇಷಣೆಯಿದೆ.

· ಪ್ರಗತಿಪರ, ಸೃಜನಶೀಲ ವಿಚಾರಧಾರೆಗಳನ್ನು ಪ್ರತಿಪಾದಿಸುವ ಲೇಖಕಿ ಉಮಾರಾವ್ ಕಥೆಗಾರ್ತಿ ಮತ್ತು ಅಂಕಣಗಾರ್ತಿ, ಮೂಲತಃ ಬೆಂಗಳೂರಿನವರಾದರೂ ನೆಲೆ ನಿಂತದ್ದು ಮುಂಬಯಿಯಲ್ಲಿ, ಸಮಾಜ ಸೇವೆಯಲ್ಲಿ ಹೆಚ್ಚು ಆಸಕ್ತಿ.

ಇವರ 'ಪರಕೀಯ' ಕತೆ ನಾಲ್ಕು ಜನ ಮಹಿಳೆಯರು ವಿವಿಧ ಭಾಗಗಳಿಂದ ಬಂದು ವೃದ್ಧಾಶ್ರಮದಲ್ಲಿ ಒಟ್ಟಾಗಿರುತ್ತಾರೆ. ಬೇರೆ ಬೇರೆ ವಯೋಮಾನದ ಮಹಿಳೆಯರ ಬದುಕಿನ ಅನಾವರಣ ಇಲ್ಲಿದೆ. ಹೆಣ್ಣಿಗೆ ಹೆಣ್ಣೆ ಶತ್ರುವಾಗುವ, ತಣ್ಣನೆಯ ಮಾತುಗಳಿಂದ ಕೊಲ್ಲುವ ಹಿರಿಯರ ಮನೋಭಾವದ ಮನಸ್ಥಿತಿ ಈ ಕತೆಯ ವಸ್ತು.

ಡಾ.ಎಚ್.ಗಿರಿಜಮ್ಮ ಸ್ತ್ರೀರೋಗ ತಜ್ಞೆ, ಸೃಜನಶೀಲ ಸಾಹಿತಿ. ಅವರ ಕತೆಗಳಲ್ಲಿ ಅಂತಃಕರಣದ ತುಡಿತವನ್ನು ಕಾಣಬಹುದು. ಅನೇಕ ಕಾದಂಬರಿಗಳು, ಕಥಾಸಂಕಲನಗಳು, ಆರೋಗ್ಯ ಮಾಲಿಕೆಗಳನ್ನು ರಚಿಸಿದ್ದಾರೆ. ಇತ್ತೀಚೆಗಷ್ಟೇ ತಮ್ಮ ಆತ್ಮಕಥೆಯನ್ನೂ ಇವರು ಬರೆದಿದ್ದಾರೆ.

'ಸಾಕ್ಷಿ(ಕೇಳಿದ್ದು)' ಇದೊಂದು ಪತ್ತೇದಾರಿ ಕತೆ, ಸ್ವತಃ ವೈದ್ಯೆಯಾಗಿರುವುದರಿಂದ ಲೇಖಕಿ ಮೂವರು ಸ್ನಾತಕೋತ್ತರ ವಿದ್ಯಾರ್ಥಿನಿಯರಲ್ಲಿ ಸಾಕ್ಷಿ ನಾಪತ್ತೆಯಾಗುವ, ಅವಳ ಕೊಲೆಯನ್ನು ಒಬ್ಬ ದಕ್ಷ ಪೋಲಿಸ್ ಅಧಿಕಾರಿ ಕಂಡುಹಿಡಿಯುವ ಕತೆಯಿದು. ಎಳೆಎಳೆಯಾಗಿ ಕೊಲೆ ಬಿಡಿಸಿಕೊಳ್ಳುವ ಅದ್ಭುತ ನಿರೂಪಣೆಯಿಂದಾಗಿ ಕಥೆ ಗಮನಸೆಳೆಯುತ್ತದೆ.

· ಜಯಶ್ರೀ ದೇಶಪಾಂಡೆ ಮೂಲತಃ ವಿಜಯಪುರದವರು. ಮನುಷ್ಯರ ಸಂಬಂಧಗಳ ಸೂಕ್ಷ್ಮಾತಿಸೂಕ್ಷ್ಮ ಎಳೆಗಳನ್ನು ಪೋಣಿಸುವ ವಿಶಿಷ್ಟ ಬರಹಗಾರ್ತಿ, ಅವರು ಜಗತ್ತಿನಾದ್ಯಂತ ಸಂಚರಿಸಿ ಅಲ್ಲಿನ ಭಾಷೆ, ಸಂಸ್ಕೃತಿ, ಜನಜೀವನ, ಇತಿಹಾಸವನ್ನು ಓದುಗರಿಗೆ ನಿಲುಕುವಂತೆ ಬರೆಯುತ್ತಾ ಬಂದಿದ್ದಾರೆ.

"ಎಲ್ಲಿ ಹೋದಿ ಗಂಗಾಮಾಯಿ?' ಉತ್ತರ ಕರ್ನಾಟಕದಲ್ಲಿನ ನೀರಿನ ಬವಣೆಯನ್ನು ಸಮರ್ಥವಾಗಿ ಧ್ವನಿಸುವ ಕತೆಯಾಗಿದೆ. ಪ್ರೀತಿ-ದ್ವೇಷದ ಎಳೆಯನ್ನು, ವೈಯಕ್ತಿಕ ವೈಷಮ್ಯಗಳನ್ನು ಅಲ್ಲಿನ ಭಾಷೆಯ ಸೊಬಗಿನಲ್ಲಿ ಕಟ್ಟಿಕೊಟ್ಟಿದ್ದಾರೆ.

· ಬಾನು ಮುಸ್ತಾಕ ಲೇಖಕಿಯಾಗಿ, ಪತ್ರಿಕಾ ವರದಿಗಾರ್ತಿಯಾಗಿ, ಅನುವಾದಕಿಯಾಗಿ, ನ್ಯಾಯವಾದಿಯಾಗಿ ಕ್ರಿಯಾಶೀಲರಾಗಿದ್ದಾರೆ. ಇವರ ಅನೇಕ ಕತೆಗಳು ಚಲನಚಿತ್ರಗಳಾಗಿ ರಾಜ್ಯ, ರಾಷ್ಟ್ರ ಪ್ರಶಸ್ತಿಗಳಿಂದ ಪುರಸ್ಕೃತವಾಗಿವೆ.

'ಹೆಣ್ಣು ಹದ್ದಿನ ಸ್ವಯಂವರ' ೨೦೩೮ ರಲ್ಲಿ ನಡೆಯಬಹುದಾದ, ಭವಿಷ್ಯದ ಬದುಕನ್ನು ವಿವೇಚಿಸುವ ಕತೆ, ಹೆಣ್ಣು ಮಕ್ಕಳ ಸಂಖ್ಯೆ ಕ್ಷೀಣಿಸುತ್ತಿರುವ ಇಂದಿನ ಪರಿಸ್ಥಿತಿ ಮುಂದಿನ ಸಮಾಜದ ಮೇಲೆ ಬೀರುವ ಪರಿಣಾಮಗಳು, ವೈದ್ಯಕೀಯ ಲೋಕದಲ್ಲಿ ಬರಬಹುದಾದ 'ಡಿಜೈನ್ ಬೇಬಿ'ಯ ಕಲ್ಪನೆ, ಹದ್ದಿನ ಬದುಕಿನೊಂದಿಗೆ



ಸಮೀಕರಿಸಿ ಚಿತ್ರಿಸಿದ್ದಾರೆ. ಕಲ್ಪನೆ ವಾಸ್ತವವಾಗುತ್ತಿರುವುದನ್ನು ಗಮನಿಸಬಹುದಾದ ಕುತೂಹಲದ ಕತೆಯಿದು.

· ಕಸ್ತೂರಿ ಬಾಯಿರಿ ಬಾದಾಮಿಯಲ್ಲಿ ನೆಲೆನಿಂತು ಅಲ್ಲಿನ ಭಾಷೆಯಲ್ಲಿಯೇ ಸಮರ್ಥವಾಗಿ ಕೃತಿಗಳನ್ನು ರಚಿಸುತ್ತಿದ್ದಾರೆ. ಅವರ ಕತೆಗಳು ದಟ್ಟ ವಿಷಾದವನ್ನು ಮತ್ತು ಮಡುಗಟ್ಟಿದ ನೋವಿನ ಜಿನುಗುವಿಕೆಯನ್ನು ಕತೆಗಳಲ್ಲಿ ಹೆಣೆಯುತ್ತವೆ.

'ದಿಂಡೀ' ಕತೆಯು ಉತ್ತರ ಕರ್ನಾಟಕದ ಭಾಗಗಳಲ್ಲಿ ಫಂಡಾರಪುರದ ಪಾಲಡುರಂಗನಿಗೆ ದಿಂಡೀ ಮ್ಯಾಳದ ಮೂಲಕ ಭಕ್ತಿ ಅರ್ಪಿಸುವ ಆಚರಣೆಯನ್ನು ಕಟ್ಟಿಕೊಡುತ್ತಲೇ, ಕಥಾನಾಯಕಿ ತನ್ನ ಕುಟುಂಬವನ್ನು ಊರವರ ಮುಂದೆ ತಲೆಯೆತ್ತಿ ನಿಲ್ಲಿಸಲು ಪಡುವ ಶ್ರಮ, ಅದಕ್ಕಾಗಿ ಆಕೆ ಜಾತ್ರೆಗಳಲ್ಲಿ ಹೋಟೆಲ್ ಇಟ್ಟು ಬದುಕು ಸಾಗಿಸುವ ಕುಟುಂಬದ ತೊಳಲಾಟ-ಜೀಕಾಟದ ಕತೆಯಿದು, ಭಾಷೆ, ಕತೆಯ ಹೆಣಿಕೆ, ಮನುಷ್ಯರ ಸೂಕ್ಷ್ಮ, ಮೋಸಗಳ ಅನಾವರಣ ಇಲ್ಲಿದೆ.

· ನೇಮಿಚಂದ್ರ ಕಥೆಗಾರ್ತಿ, ಅಂಕಣಗಾರ್ತಿ ಹಾಗೂ ಇಂಜಿನಿಯರ ಪದವೀಧರೆ. ಇವರ ಕಥೆಗಳು ಸಂವೇದನಾ ಸೂಕ್ಷ್ಮತೆ, ಮನಸ್ಸಿನ ವ್ಯಾಪಾರಗಳ ವಿಶ್ಲೇಷಣೆಯಿಂದ ಗಮನಸೆಳೆಯುತ್ತವೆ.

'ನೆನ್ನೆಗಳ ಹೊರೆ ಇಳಿಸಿ' ಕತೆ ಸಮಕಾಲೀನ ಬದುಕನ್ನು ಕಟ್ಟಿಕೊಡುತ್ತದೆ. ಮೆಟ್ರೋ ಸಿಟಿಗಳ ಧಾವಂತ, ಒತ್ತಡ, ಅವಸರದ ಬದುಕು, ಸಮಯವಿಲ್ಲದ ಕಿರಿಕಿರಿ, ಕಾಯ್ದುಕೊಳ್ಳದ ಸಂಬಂಧಗಳೇ ಬಾಂಬುಗಳಾಗಿ ಸ್ಫೋಟಿಸುವ ಚಿತ್ರಣವನ್ನು ಲೇಖಕಿ ಅತ್ಯಂತ ಸರಳ-ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ.

· ಜಯಶ್ರೀ ಕಾಸರವಳ್ಳಿ ವಿಶಿಷ್ಟ ಸಂವೇದನಾಶೀಲ ಕಥೆಗಾರ್ತಿ, ಲೇಖಕಿಯಾಗಿ, ಅನುವಾದಕಿಯಾಗಿ ಮಕ್ಕಳ ಕಥೆಗಳ ಬಗ್ಗೆ ಒಲವಿರುವ ಇವರು ಬ್ಲಾಗ್ ಬರಹಗಾರ್ತಿಯಾಗಿಯೂ ಗಮನಸೆಳೆದಿದ್ದಾರೆ.

ಮದ್ರಾಸಿನ ಪಾರ್ಲರ್ ನಲ್ಲಿ ಮುಖಾಮುಖಿಯಾಗುವ ವಿಯಾಟ್ನಂನ ಹುಡುಗಿ ಹ್ಯಾಂಗ್ ಅಲ್ಲಿನ ಗೆರಿಲ್ಲಾ ದಾಳಿ, ದೇಶ ಬಿಡುವ ಪರಿಸ್ಥಿತಿ, ಪ್ರಿಯಕರನೊಂದಿಗೆ ಶ್ರೀಲಂಕಾಗೆ ಬರುವ, ತಮಿಳು-ಶ್ರೀಲಂಕಾರ ಯುದ್ಧದಲ್ಲಿ ಮತ್ತೆ ದೇಶಬಿಟ್ಟು ಭಾರತಕ್ಕೆ ಬರುವ ಚಿತ್ರಣ ಇಲ್ಲಿದೆ. ಯುದ್ಧದ ಪರಿಣಾಮವನ್ನು ಇತಿಹಾಸದ ಪುಟಗಳೂ ವಿಯಟ್ನಾಂನ ಆ ಹೆಣ್ಣುಮಗಳೂ' ಕತೆ ವಿಶದಪಡಿಸುತ್ತದೆ. ಯುದ್ಧದ ಭೀಕರತೆಗೆ ಬಲಿಯಾಗುವ ಹೆಣ್ಣು, ಆಕೆಯ ಭಾಷೆಯ ತೊಡಕು, ಕುರೂಪವನ್ನು ಮುಚ್ಚಿಸಿ ಚಂದ ಕಾಣಲು ಬಂದ ಶಿಕ್ಷಕಿಯ ಮನಸ್ಥಿತಿ ಇವೆಲ್ಲವನ್ನೂ ಏಕಕಾಲಕ್ಕೆ ಈ ಕತೆ ನಿರೂಪಿಸುತ್ತದೆ.

· ಎಚ್.ನಾಗವೇಣಿಯವರು ದಕ್ಷಿಣ ಕನ್ನಡ ಜಿಲ್ಲೆಯವರು. ಕರಾವಳಿಯ ಸಾಂಸ್ಕೃತಿಕ ತಲ್ಲಣಗಳನ್ನು, ಅಲ್ಲಿನ ಸಾಮಾಜಿಕ, ಆರ್ಥಿಕ ಪಲ್ಲಟಗಳನ್ನು ತಮ್ಮ ಕಥೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ಅವರ 'ಧಣಿಗಳ ಬೆಳ್ಳಿಲೋಟ' ಕತೆ ಸಾಕಷ್ಟು ವಿಮರ್ಶಕರನ್ನು ಗಮನಸೆಳೆದ ಕತೆಯಾಗಿದೆ. ಭೂಮಾಲೀಕ ವರ್ಗವು ಹೇಗೆ ತನ್ನ ಅಧಿಕಾರದ ಮೂಲಕ ತನ್ನ



ಕೆಳವರ್ಗದ ಕೂಲಿಕಾರರನ್ನು ಶೋಷಿಸುತ್ತದೆ ಎಂಬುದನ್ನು ಇಲ್ಲಿ ಕಾಣಬಹುದು. ಅಂತಹ ತಣ್ಣನೆಯ ಕ್ರೌರ್ಯಕ್ಕೆ ಬಲಿಯಾಗುವ ಚೆನ್ನಮ್ಮನ ಸಂಸಾರ, ಪ್ರಕೃತಿ ಮತ್ತು ಮನುಷ್ಯನ ಸಂಬಂಧ, ಸಿಕ್ಕ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯುವ ಮೂಲಕ ತನ್ನ ಪ್ರತಿಭಟನೆಯನ್ನು ದಾಖಲಿಸುವ ಈ ಕತೆ ಸಾರ್ವಕಾಲಿಕ ಸತ್ಯವನ್ನು ಶೋಧಿಸುವಂತೆ ಪ್ರೇರೇಪಿಸುತ್ತದೆ.

· ಬಿ.ಟಿ.ಜಾಹ್ನವಿ ದಲಿತ ಹೋರಾಟಗಳಲ್ಲಿ ತೊಡಗಿಸಿಕೊಂಡಿರುವ, ಸೂಕ್ಷ್ಮವಾಗಿ ಬರೆಯುವ ಲೇಖಕಿ, ಸಂಬಂಧಗಳ ಬಗ್ಗೆ, ಸಮಾಜದ ಸಮಸ್ಯೆಗಳ ಬಗ್ಗೆ ತಮ್ಮ ಕೃತಿಗಳಲ್ಲಿ ವಿಚಾರಪೂರ್ಣವಾಗಿ ಕಟ್ಟಿಕೊಡುತ್ತಿದ್ದಾರೆ.

ಅವರ 'ನೆರೆಹಾವಳಿ' ಕತೆ ಲವಲವಿಕೆಯ ಸಂಭಾಷಣೆಯಿಂದ ಗಮನ ಸೆಳೆಯುವಂತಹದ್ದು. ಶಾಲೆಯಲ್ಲಿ ನೆರೆಹಾವಳಿ ಎಂದರೆ ನೆರೆಹೊರೆಯ ಹಾವಳಿ, ಅದು ಬಲಿಷ್ಠರ, ಶ್ರೀಮಂತರ ಹಾವಳಿ, ಅದು ಹಸಿವಿನ, ಆಸೆಗಳ ಹಾವಳಿ ಎಂದು ಬರೆದ ಹುಡುಗಿಯನ್ನು ಹುಡುಕುತ್ತಾ ಹೊರಡುವ ಗೆಳೆಯರಿಗೆ ಸಿಕ್ಕ ಆ ಹುಡುಗಿಯ ಕರುಣಾಜನಕ ಕತೆ, ಆ ಪುಟ್ಟ ಹುಡುಗಿಯ ದಿಟ್ಟ ನಿಲುವನ್ನು ಓದುಗರಿಗೆ ದಾಟಿಸುವ ಕತೆಯಿದು.

· ಎಂ.ಎಸ್.ವೇದ ಗಂಭೀರ ವಿಚಾರಧಾರೆಯುಳ್ಳ ಸೃಜನಶೀಲ ಲೇಖಕಿ. ರಚನಾ ಕೌಶಲ್ಯ ಮತ್ತು ಸ್ತ್ರೀ ಬದುಕಿನ ಮನೋಸ್ಥಿತಿಯನ್ನು ದಾಖಲಿಸುವ ಮೂಲಕ ಇವರ ಕೃತಿಗಳು ಗಮನಸೆಳೆಯುತ್ತವೆ.

'ಮೃತುವು ಮತ್ತವನ ಹೆಂಡತಿಯೂ' ಕತೆ ಒಬ್ಬ ತಿರಸ್ಕೃತ ಹೆಣ್ಣಿನ ಕತೆ. ತಾಯಿಯಿಂದ, ಗಂಡನಿಂದ ತಿರಸ್ಕಾರಕ್ಕೆ ಒಳಗಾದ ಕಥಾನಾಯಕಿ ತನ್ನ ಬದುಕನ್ನು ತಾನೇ ಕಟ್ಟಿಕೊಳ್ಳುವ ಕತೆಯಿದು. ದೇಸಿ ಭಾಷೆಯ ಸೊಗಡು, ಕತೆಯನ್ನು ಕಟ್ಟುವ ಕಲೆಯಿಂದಾಗಿ ಈ ಕತೆ ಓದುಗರಿಗೆ ಹೊಸ ಅನುಭವವನ್ನು ನೀಡುತ್ತದೆ.

· ಸವಿತಾ ಶ್ರೀನಿವಾಸ ಇವರು ಐಪಿಎಸ್ ಅಧಿಕಾರಿ, ಸಾಹಿತ್ಯದಲ್ಲಿ ಅಪಾರ ಆಸಕ್ತಿಯಿರುವ ಇವರು ಕಥೆಗಾರ್ತಿಯಾಗಿ ಅನೇಕ ಕೃತಿಗಳನ್ನು ಹೊರತಂದಿದ್ದಾರೆ. ಪತ್ರಿಕೋದ್ಯಮ ಮತ್ತು ಯೋಗದಲ್ಲಿಯೂ ಪದವಿ ಪಡೆದಿದ್ದಾರೆ.

ಇವರ 'ನಾಡ ದೇವಿಯೂ ಕಾಡಿನ ಮಗನೂ' ಕತೆ ಕಾಡಿನಿಂದ ನಾಡಿಗೆ ಬರುವ ವ್ಯಕ್ತಿ, ಅವನನ್ನು ವಿಚಿತ್ರವಾಗಿ ಕಾಣುವ ನಾಡಿನ ಜನ, ಅವರ ಮನಸ್ಥಿತಿಗಳನ್ನು ವಿವರಿಸುತ್ತಲೇ ಪ್ರಕೃತಿಯ ಸಂಬಂಧ ಕಳೆದುಕೊಂಡ ಮನುಷ್ಯರ ಕಷ್ಟ ಕಾರ್ಪಣ್ಯವನ್ನು ಈ ಕತೆ ಕಟ್ಟಿಕೊಡುತ್ತದೆ.

· ಡಾ.ಪದ್ಮನಿ ನಾಗರಾಜು ಪ್ರಾಧ್ಯಾಪಕಿಯಾಗಿ, ಕವಿಯಾಗಿ, ಕಥೆಗಾರ್ತಿಯಾಗಿ, ಸಂಘಟಕಿಯಾಗಿ, ಕೇಂದ್ರ ಸಾಹಿತ್ಯ ಅಕಾದೆಮಿಯ ಕನ್ನಡ ಸಲಹಾ ಸಮಿತಿಯ ಸದಸ್ಯೆಯಾಗಿ, ತಮ್ಮನ್ನು ಗುರುತಿಸಿಕೊಂಡಿದ್ದಾರೆ.

"ಉರಿವ ಬೆಂಕಿಗೆ ಮೈಯೆಲ್ಲ ಬಾಯಿ' ಕತೆ ದಕ್ಷಿಣ ಕನ್ನಡ, ಉಡುಪಿ ಭಾಗಗಳಲ್ಲಿ ಆಚರಣೆಯಿರುವ 'ನಾಗಮಂಡಲ'ದ ಕತೆಯಾಗಿದೆ. ಪಾತ್ರಧಾರಿಯೇ ಪಾತ್ರವಾಗಿ ಬಿಡುವ ಮತ್ತು ಆ ಕಾರಣದಿಂದ ಆ ಪಾತ್ರಧಾರಿಯ ಕುಟುಂಬವೇ ನರಳುವ ವಸ್ತುವನ್ನು ಈ



ಕಥೆ ತುಂಬಾ ಯಶಸ್ವಿಯಾಗಿ, ಹೃದಯಸ್ಪರ್ಶಿಯಾಗಿ ನಮ್ಮೆದುರು ತೆರೆದಿಡುತ್ತದೆ. ನಾಯಕಿಯ ದಿಟ್ಟ ನಿಲುವು ಅಂತ್ಯದಲ್ಲಿ ಗಮನ ಸೆಳೆಯುವಂತಹದ್ದು.

· ಸುನಂದಾ ಪ್ರಕಾಶ ಕಡಮೆ ಸಮಕಾಲೀನ ವಿಷಯಗಳ ಕುರಿತು ಬರೆಯುವ ಕಥೆಗಾರ್ತಿ. ನಿತ್ಯ ಬದುಕಿನ ಸಣ್ಣ ಘಟನೆಗಳನ್ನು ಕಲಾತ್ಮಕವಾಗಿ ಬಿಂಬಿಸುವ ಕಲೆಗಾರಿಕೆ ಇವರದ್ದು.

'ನೀರ ಮಣಿಗಳ ಮಾಲೆ' ಕತೆ ಮಧ್ಯಮವರ್ಗದ ಕುಟುಂಬಗಳಿಗೆ ಲಾಟರಿ, ಫ್ರೀ ಗಿಫ್ಟ್ ಆಸೆ ತೋರಿಸುವ ಕಂಪನಿಗಳ ಮೋಸತನವನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ. ಮೋಸದ ಜಾಲದಲ್ಲಿ ಬೀಳಿಸುವ ಮಾತು, ನಯಗಾರಿಕೆ, ವಂಚನೆಯ ವಿವರಗಳನ್ನು ಲೇಖಕಿ ಸೂಕ್ಷ್ಮವಾಗಿ ನಿರೂಪಿಸಿದ್ದಾರೆ.

· ಸುಮಂಗಲಾ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕಥೆಗಾರ್ತಿಯಾಗಿ, ಸಾಮಾಜಿಕ ಕಳಕಳಿಯ ಲೇಖನ, ವೈಚಾರಿಕ ಬರಹಗಳಿಂದ ಗುರುತಿಸಿಕೊಂಡಿದ್ದಾರೆ. ಮೂಲತಃ ಶಿವಮೊಗ್ಗದವರಾದರೂ ಈಗ ಬೆಂಗಳೂರಿನಲ್ಲಿ ನೆಲೆ ನಿಂತಿದ್ದಾರೆ.

"ಆ ಕ್ಷಣಗಳಲ್ಲಿ ಅದೆಂತ ನಿಗೂಢತೆ' ಕತೆ ಗಂಡ-ಹೆಂಡತಿಯ ಮಧ್ಯೆ ಇರುವಂತಹ ಸಂಬಂಧದ ಆಳ ಅರಿಯುವಲ್ಲಿನ ಸೋಲು, ಎಲ್ಲವೂ ನಮಗೇ ಪರಿಚಿತವಾಗಬೇಕೆಂಬ ಹಟ, ನಾವೆಂದುಕೊಂಡಂತೆ ನಡೆಯಬೇಕು, ನಡೆಯುತ್ತದೆ ಎಂಬ ನಿರೀಕ್ಷೆಯನ್ನು ಇಟ್ಟುಕೊಳ್ಳದೆ ಯಾವ ಕ್ಷಣ ಹೇಗೆ ತೆರೆದುಕೊಳ್ಳುತ್ತದೆಯೋ ಹಾಗೆ ಅದನ್ನು ಎದುರಿಸಬೇಕೆಂಬ ಸೂಕ್ಷ್ಮತೆ ಇಲ್ಲಿನ ಕತೆಯದ್ದು.

· ವಿಜಯಾ ಮೋಹನ್ ಮೂಲತಃ ತುಮಕೂರು ಜಿಲ್ಲೆಯ ಮದುಗಿರಿಯವರು. ಶಿಕ್ಷಕಿಯಾಗಿ, ಲೇಖಕಿಯಾಗಿ ಗುರುತಿಸಿಕೊಂಡಿದ್ದಾರೆ. ತಮ್ಮ ಜಿಲ್ಲೆಯ ಗ್ರಾಮ್ಯ ಭಾಷೆಯನ್ನೇ ತಮ್ಮ ಕತೆಗಳಿಗೆ ಬಳಸಿಕೊಂಡಿರುವ ಗಮನಾರ್ಹ ಕಥೆಗಾರ್ತಿ ಇವರು.

'ಪಾಣಿ' ಕತೆ ಗ್ರಾಮೀಣ ಪ್ರದೇಶದ ಸಂಕಷ್ಟಗಳನ್ನು ಅನಾವರಣ ಮಾಡುತ್ತದೆ. ರೈತರ ಬದುಕಿನ ಚಿತ್ರಣವನ್ನು ನೈಜವಾಗಿ ಕಟ್ಟಿಕೊಡುವ ಕತೆಯಿದು. ಸಂಪೂರ್ಣ ಕತೆ ಗ್ರಾಮೀಣ ಸೊಗಡಿನಲ್ಲಿದ್ದು ಗಮನಸೆಳೆಯುತ್ತದೆ.

· ಮೂಲತಃ ಕೊಡಗಿನವರಾದ ಶಾಂತಿ ಕೆ. ಅಪ್ಪಣ್ಣ ಕೆಲಸದ ನಿಮಿತ್ತ ಚೆನ್ನೈನಲ್ಲಿ ವಾಸವಾಗಿದ್ದಾರೆ. ಇವರು ವಿಭಿನ್ನ ಕತೆಗಳ ಮೂಲಕ ಓದುಗರ ಗಮನ ಸೆಳೆದಿರುವ ಹೊಸ ತಲೆಮಾರಿನ ಲೇಖಕಿ.

'ಒಂದು ಬಾಗಿಲು ಮತ್ತು ಮೂರೂ ಚಿಲ್ಲರೆ ವರ್ಷಗಳು' ತೃತೀಯ ಲಿಂಗಿಗಳ ಮನಸ್ಥಿತಿ, ಅವರನ್ನು ಸಮಾಜ ನೋಡುವ ನೋಟ, ಅವರಿಗೂ ಒಂದು ಮನಸ್ಸಿದೆ ಎಂದು ಅರ್ಥ ಮಾಡಿಕೊಳ್ಳದ ಕುಟುಂಬಗಳು ಇಂತಹ ಸಮಕಾಲೀನ ಸಮಸ್ಯೆಯನ್ನು ಈ ಕತೆ ಎಳೆಎಳೆಯಾಗಿ ಬಿಡಿಸಿಡುತ್ತದೆ. ಪ್ರೀತಿಸುವ, ಬದುಕಲ್ಲಿ ಭರವಸೆ ಹುಟ್ಟಿಸಿ ಅವರಿಗೂ ಒಂದು ಮನಸ್ಸಿದೆ ಎಂದು ಅರ್ಥ ಮಾಡಿಕೊಳ್ಳುವಂತೆ ಮನ ಕಲಕಿಸುವ, ವಿಚಾರಶೀಲರಾಗುವಂತೆ ಪ್ರೇರೇಪಿಸುವ ಕತೆಯಿದು.

ಈ ಕಥಾಸಂಕಲನದಲ್ಲಿ ಸೇರಿರುವ ಕತೆಗಳು ತಮ್ಮ ವಸ್ತು, ವಿಷಯ, ಕಟ್ಟಿಕೊಡುವ ತಂತ್ರಗಾರಿಕೆಯಿಂದಾಗಿ ಗಮನಸೆಳೆಯುತ್ತವೆ. ಆಯಾ ಪ್ರಾಂತ್ಯದ ಭಾಷೆಯನ್ನು ಇಲ್ಲಿನ ಕಥೆಗಾರ್ತಿಯರು ಸಮರ್ಥವಾಗಿ ದುಡಿಸಿಕೊಂಡಿದ್ದಾರೆ. ಜಗತ್ತು, ಹೆಣ್ಣನ್ನು ನೋಡುವ ದೃಷ್ಟಿಕೋನದ ವಿಸ್ತಾರತೆಯನ್ನು ಓದುಗರು ಗಮನಿಸಿದ್ದೇ ಆದರೆ ಈ ಕೃತಿಗೊಂದು ಸಾರ್ಥಕತೆ ದೊರಕುತ್ತದೆ.

ಅಂದು ಸ್ತ್ರೀಶಿಕ್ಷಣ, ವಿಧವಾ ವಿವಾಹ, ಬಾಲ್ಯ ವಿವಾಹ, ಕೌಟುಂಬಿಕ ದೌರ್ಜನ್ಯ, ವರದಕ್ಷಿಣೆ ಮತ್ತು ಜಾತಿಪದ್ಧತಿ ಮುಂತಾದ ಸಮಾಜದಲ್ಲಿ, ಕುಟುಂಬದಲ್ಲಿ ನಡೆಯುತ್ತಿದ್ದ ಸಮಸ್ಯೆಗಳನ್ನು ತಮ್ಮ ಕೃತಿಗೆ ವಸ್ತುಗಳನ್ನಾಗಿ ಮಾಡಿಕೊಂಡ ಲೇಖಕಿಯರು ಅವುಗಳ ವಿರುದ್ಧವಾಗಿ ಸಶಕ್ತವಾಗಿ ದನಿಯೆತ್ತಿದ್ದಾರೆ. ಇಂದು ಮಹಿಳೆಯರು ಕೌಟುಂಬಿಕ ನೆಲೆಯಿಂದ ಸಾಮಾಜಿಕ, ಸಾರ್ವಜನಿಕ ಉದ್ಯೋಗದ ನೆಲೆಗೆ ಸ್ಥಾನಾಂತರಗೊಳ್ಳುತ್ತಿದ್ದರೂ ಅಲ್ಲಿನ ಸಂಕಟ, ಸಂಭ್ರಮಗಳೇ ಬೇರೆ ಇವೆ. ಲಿಂಗ ತಾರತಮ್ಯ, ಸಾಂಪ್ರದಾಯಿಕ ಚೌಕಟ್ಟಿನಿಂದ ಹೊರಬರಲಾಗದ ಸಂಕಟ, ಅವಳ ಮೇಲಾಗುತ್ತಿರುವ ದೌರ್ಜನ್ಯ, ಪುರುಷಪ್ರಧಾನ ಸಮಾಜ ಮಹಿಳೆಯನ್ನು ಭೋಗ ವಸ್ತುವಾಗಿ ಇಂದಿಗೂ ನೋಡುತ್ತಿರುವ, ಅತ್ಯಾಚಾರಕ್ಕೆ ಬಲಿಯಾಗುತ್ತಿರುವ, ಸಂಪ್ರದಾಯದ ಬಿಗಿಮುಷ್ಠಿಯಿಂದ ಹೊರಬರಲು ಪ್ರಯತ್ನಿಸಿದಾಗಲೆಲ್ಲಾ ಮತ್ತೆ ಮತ್ತೆ ಧರ್ಮ, ಸಂಸ್ಕೃತಿಯ ಹೆಸರಿನಲ್ಲಿ ಕಟ್ಟಿಹಾಕುವ ಸಂಕೋಲೆಗಳಿಂದ ಮಹಿಳೆ ಬಿಡುಗಡೆ ಹೊಂದಲು ಸಾಧ್ಯವಾಗುತ್ತಿಲ್ಲ.

ಆಧುನಿಕ ಶಿಕ್ಷಣ ವ್ಯವಸ್ಥೆಯು ಮಹಿಳೆಯರಿಗೆ ಸ್ವಶಕ್ತಿಯಿಂದ ಬದುಕುವ ಆತ್ಮವಿಶ್ವಾಸ ನೀಡುತ್ತಿದೆ. ಉದ್ಯೋಗಸ್ಥ ಮಹಿಳೆಯರು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ದುಡಿಯುವ ಸ್ಥಳಗಳಲ್ಲಿ ಬದುಕನ್ನು ಕಟ್ಟುವುದಕ್ಕಾಗಿ ಹೋರಾಟ, ಲೈಂಗಿಕ ಕಿರುಕುಳ, ಸ್ವೇಚ್ಛೆಯ ಬದುಕಿನ ಅವಘಡಗಳು, ಕೌಟುಂಬಿಕ ವಿಘಟನೆ, ಸಮಾನ ಸ್ಥಾನಮಾನಕ್ಕಾಗಿ ಹೋರಾಟ, ಲಿಂಗ ತಾರತಮ್ಯದ ಬಗ್ಗೆ ದನಿ ಎತ್ತುತ್ತಿರುವ ಮಹಿಳೆಯರ ಬದುಕಿನ ಪ್ರತಿ ವಿಚಾರಗಳನ್ನು ಇಂದಿನ ಲೇಖಕಿಯರು ದಾಖಲಿಸುತ್ತಿದ್ದಾರೆ.

ಕಾನೂನಿನ ಬಲವಿದ್ದರೂ ಮಹಿಳೆಯರ ಮೇಲಿನ ದೌರ್ಜನ್ಯ ನಿಂತಿಲ್ಲ. ಅಂದಿನಿಂದ ಇಂದಿನವರೆಗೂ ಶೋಷಣೆಗಳು ಅವ್ಯಾಹತವಾಗಿ ಬೇರೆ ಬೇರೆ ಮುಖಗಳಿಂದ ತನ್ನ ಸ್ವರೂಪ ಬದಲಾಯಿಸುತ್ತಲೇ ಇವೆ. ಪ್ರತಿಯೊಂದಕ್ಕೂ ಹೆಣ್ಣನ್ನೇ ದೂಷಿಸುವ, ಕಾರಣ ಮಾಡುವ ಹುನ್ನಾರಗಳನ್ನು ಮೆಟ್ಟಿನಿಂತು ಆಕೆ ಬದುಕು ಕಟ್ಟುವ ಹೋರಾಟದಲ್ಲಿದ್ದಾಳೆ. ಅಂದಿನ ವರದಕ್ಷಿಣೆ, ಜಾತಿಪದ್ಧತಿ, ಲೈಂಗಿಕ ದೌರ್ಜನ್ಯ, ಅಂತರಜಾತಿ ವಿವಾಹ, ವೇಶ್ಯಾವಾಟಿಕೆ ಇಂದಿಗೂ ಮುಂದುವರೆಯುತ್ತಲೇ ಇವೆ. ನಗರ-ಗ್ರಾಮೀಣ ಭಾಗದ ಮಹಿಳೆಯರ ಸಮಸ್ಯೆಗಳು, ಹೋರಾಟಗಳ ದನಿ ಕುಗ್ಗಿಸುವ ಮಸಲತ್ತುಗಳು ನಿರಂತರವಾಗಿ ನಡೆಯುತ್ತಲೇ ಇವೆ.

ಪ್ರತಿಯೊಂದಕ್ಕೂ ಚಳುವಳಿ ನಡೆಸುವ, ಹೋರಾಟ ಮಾಡಿ ಪಡೆದುಕೊಳ್ಳಬೇಕಾದ ಸ್ಥಿತಿಯಲ್ಲಿ ಇಂದು ಮಹಿಳೆಯರಿದ್ದೇವೆ. ಇಂದಿನ ಮಹಿಳಾ ಲೇಖಕಿಯರು ಅಂತಹ ಹೋರಾಟಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ, ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಹಿಂದೂ, ಮುಸ್ಲಿಂ, ದಲಿತ ಹೆಣ್ಣುಮಕ್ಕಳ ಸಂಕಟಗಳು ಇಂದಿಗೂ ಮುಂದುವರೆದಿವೆ. ಅಂತಹ ಜ್ವಲಂತ ಸಮಸ್ಯೆಗಳಿಗೆ ಆಯಾ ಸಮುದಾಯದ ಅಕ್ಷರಸ್ಥ



ಮಹಿಳೆಯರು ದನಿಯಾಗುತ್ತಿದ್ದಾರೆ. ಇಂದು ಮಹಿಳೆಗೆ ಮದುವೆ, ಮಕ್ಕಳು ಅನಿವಾರ್ಯವಲ್ಲ. ಜಾಗತಿಕ ಸಂದರ್ಭದಲ್ಲಿ ಇಂದಿನ ಮಹಿಳೆಯರ ಸಾಮಾಜಿಕ, ಆರ್ಥಿಕ, ರಾಜಕೀಯ ಸವಾಲುಗಳು ಭಿನ್ನವಾಗಿವೆ. ಸಂಘಟನೆಗಳ ಮೂಲಕ ಪ್ರಪಂಚದಾದ್ಯಂತ ನಡೆಯುತ್ತಿರುವ ಶೋಷಣೆಗಳಿಗೆ ಮಹಿಳೆಯರು ಸ್ಪಂದಿಸುತ್ತಿದ್ದಾರೆ, ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ, ತಮ್ಮ ಮೇಲಾದ ಅನ್ಯಾಯಗಳಿಗೆ ಮೌನವಾಗಿರದೇ ಕಾನೂನಾತ್ಮಕ ಹೋರಾಟಗಳಿಗೆ ಇಳಿದಿದ್ದಾರೆ. ಇವೆಲ್ಲವೂ ಇಂದಿನ ಲೇಖಕಿಯರ ಕೃತಿಗಳಲ್ಲಿ, ಆತ್ಮಕಥನಗಳಲ್ಲಿ, ಕಾದಂಬರಿಗಳಲ್ಲಿ ದಾಖಲಾಗುತ್ತಿವೆ. ದಮನಿತರ ಬದುಕು ಕಟ್ಟಲು, ಸಾಂತ್ವನ ನೀಡಲು, ಆರ್ಥಿಕವಾಗಿ ಸ್ವತಂತ್ರರಾಗಿ ಬಾಳಲು ಅಕ್ಷರಸ್ಥ ಮಹಿಳೆಯರು ಸಂಘ-ಸಂಸ್ಥೆಗಳ ಮೂಲಕ ಶ್ರಮಿಸುತ್ತಿದ್ದಾರೆ.

ಹೊಸ ಬಗೆಯ ಆತಂಕ, ಅಭದ್ರತೆ, ಸಂಕಟಗಳಿಗೆ ಇಂದಿನ ಮಹಿಳೆಯರು ಸಿಲುಕಿದ್ದಾರೆ. ಇದು ಎಲ್ಲಾ ಸಮುದಾಯ, ಎಲ್ಲಾ ಧರ್ಮಗಳ ಮಹಿಳೆಯರೂ ಅನುಭವಿಸುತ್ತಿರುವ ತಲ್ಲಣಗಳಾಗಿವೆ. ಆಯಾ ಕಾಲಕ್ಕೆ ಇಂತಹ ತಲ್ಲಣಗಳಿಗೆ ಆಯಾ ತಲೆಮಾರಿನ ಬರಹಗಾರರು ಸ್ಪಂದಿಸಿದ್ದಾರೆ. ಇಂದಿನ ಹೊಸ ತಲೆಮಾರಿನ ಅಕ್ಷರಸ್ಥ ಕೆಳಸ್ತರದ ಮಹಿಳೆಯರು ತಮ್ಮ ಕುಟುಂಬ, ಧರ್ಮಗಳಲ್ಲಿ ನಡೆಯುತ್ತಿರುವ ಶೋಷಣೆಗಳನ್ನು, ಮೂಢನಂಬಿಕೆಗಳನ್ನು ತಮ್ಮ ಬರವಣಿಗೆಯಲ್ಲಿ ದಾಖಲಿಸುತ್ತಿದ್ದಾರೆ. ಸ್ವಾತಂತ್ರ್ಯಪೂರ್ವದಿಂದ ಪ್ರಾರಂಭಿಸಿ ಇಲ್ಲಿನವರೆಗೂ ಎಲ್ಲಾ ತಲೆಮಾರಿನ ಸಂವೇದನೆಯ ಉತ್ತಮ ಕತೆಗಳನ್ನು ಇಲ್ಲಿ ಪ್ರಾತಿನಿಧಿಕವಾಗಿ ದಾಖಲಿಸುವ ಪ್ರಯತ್ನ ಮಾಡಲಾಗಿದೆಯಷ್ಟೇ. ಇಲ್ಲಿ ದಾಖಲಾದವರಷ್ಟೇ ಕಥೆಗಾರ್ತಿಯರಲ್ಲ. ನಾನಾ ಕಾರಣಗಳಿಂದಾಗಿ ಇಲ್ಲಿ ಅನೇಕ ಉತ್ತಮ ಕಥೆಗಾರ್ತಿಯರ ಕತೆಗಳು ಬಿಟ್ಟು ಹೋಗಿವೆ ಎಂಬ ಅರಿವೂ ನನಗಿದೆ. ಹೊಸ ತಲೆಮಾರಿನ ಲೇಖಕಿಯರ ಕತೆಗಳು ಮುಂದಿನ ದಿನಗಳಲ್ಲಿ ದಾಖಲಾಗಬೇಕಾಗಿದೆ. ಇದು ಪರಿಪೂರ್ಣ ಕಥಾಸಂಕಲನ ಎಂಬ ಭ್ರಮೆ ನನಗಿಲ್ಲ. ಅರೆಕೊರೆಗಳೂ ಇರಬಹುದು. ಸಂಕಲನಕ್ಕೆ ಅದರದ್ದೇ ಆದಂತಹ ಮಿತಿಗಳೂ ಇವೆ ಎಂಬುದು ಸತ್ಯ. ಕನ್ನಡ ಸಾಹಿತ್ಯ ಪರಿಷತ್ತು ತನ್ನ ಶತಮಾನದ ಹೊಸ್ತಿಲಿನಲ್ಲಿ 'ಸಮಗ್ರ ಮಹಿಳಾ ಸಂಪುಟ' ತರುವ ಮೂಲಕ ದಾಖಲಿಸುವ ಪ್ರಯತ್ನ ಮಾಡುತ್ತಿರುವುದು ಸ್ತುತ್ಯಾರ್ಹ. ಇಡೀ ಯೋಜನೆಯ ಹೊಳಹನ್ನು ನೀಡಿದ ಡಾ.ಮಲ್ಲಿಕಾ ಘಂಟಿ ಮೇಡಂ ಅಭಿನಂದನಾರ್ಹರು. ಇಂತಹ ಸಂಕಲನ

ಸಿದ್ಧಪಡಿಸುವುದಕ್ಕೆ ಅವಕಾಶ ನೀಡಿದ ಕಸಾಪ ಅಧ್ಯಕ್ಷರಾದ ಮನು ಬಳಿಗಾರರಿಗೂ, ಸಲಹೆ-ಸೂಚನೆ ನೀಡಿದ ಡಾ.ಪದ್ಮರಾಜ ದಂಡಾವತಿ ಹಾಗೂ ಸಾಹಿತ್ಯ ಪರಿಷತ್ತಿನ ಸಮಸ್ತ ಸಿಬ್ಬಂದಿವರ್ಗಕ್ಕೆ ಧನ್ಯವಾದಗಳು. ಇಲ್ಲಿನ ಕಥೆಗಳನ್ನು ಸೇರಿಸಲು ನಾನು ದೂರವಾಣಿ ಮೂಲಕ ಕೇಳಿಕೊಂಡಾಗ ಅನುಮತಿ ನೀಡಿದ ಲೇಖಕಿಯರಿಗೆಲ್ಲಾ ಕೃತಜ್ಞತೆಗಳು, ನಮ್ಮನಗಲಿದ ಹಿರಿಯ ಲೇಖಕಿಯರ ಕಥೆಗಳನ್ನು ಅವರ ಕುಟುಂಬವರ್ಗದವರು ಬಳಸಿಕೊಳ್ಳಲು ಅನುಮತಿ ನೀಡಿದ್ದಾರೆ, ವೈದೇಹಿ, ಆಶಾದೇವಿ, ವಿನಯಾ ಒಕ್ಕುಂದ, ಕೆ.ನೀಲಾ ಇವರುಗಳು ಅಗಲಿದ ಕೆಲವು ಲೇಖಕಿಯರ ಕತೆಗಳನ್ನು ಅವರ ಸಂಕಲನಗಳಿಂದ ಕಳುಹಿಸಿಕೊಟ್ಟಿದ್ದಾರೆ. ಅವರೆಲ್ಲರಿಗೂ ಧನ್ಯವಾದಗಳು. ಕಥಾಸಂಕಲನದ ಸಂದರ್ಭದಲ್ಲಿ ನನಗೆ ಸಹಕರಿಸಿದ ನನ್ನ ವಿದ್ಯಾರ್ಥಿನಿಯರಾದ ಧವಳಚಂದ್ರಿಕ, ಅಹನ, ಅಂಶುಗೆ ಕೃತಜ್ಞತೆಗಳು.

**ಡಾ. ಪದ್ಮಿನಿ ನಾಗರಾಜು**

# ಪರಿವಿಡಿ


೧. ನನ್ನ ಧನವನ್ನು ನನಗೆ ತಾ ೧

-ಆರ್.ಕಲ್ಯಾಣಮ್ಮ

೨. ಹೋಗಿಯೇ ಬಿಟ್ಟಿದ್ದ! ೭

-ಕೊಡಗಿನ ಗೌರಮ್ಮ

೩. ಕಂತಿಯ ದೇಶಾಂತರ ೧೨

-ಶ್ಯಾಮಲದೇವಿ ಬೆಳಗಾಂವಕ

೪. ಅವಳ ಉದ್ಧಾರ ೨೨

-ಸರಸ್ವತಿಬಾಯಿ ರಾಜವಾಡೆ (ಗಿರಿಬಾಲೆ)

೫. ಹೊಣೆ ಯಾರು? ೨೮

-ಎಚ್.ವಿ.ಸಾವಿತ್ರಮ್ಮ

೬. ವಿರಕ್ತ ೪೦

-ಎಂ.ಕೆ.ಇಂದಿರಾ

೭. ಅಲಿ-ಅನಿಲ್ ೪೯

- ತ್ರಿವೇಣಿ

೮. ದೂರ-ಬಹುದೂರ ೫೮

-ಗೀತಾ ಕುಲಕರ್ಣಿ

೯. ಮನಸೊಂದು ರೆಕಾರ್ಡಿಂಗ್ ಟೇಪು ೬೬

ಎಚ್.ಎಸ್.ಪಾರ್ವತಿ

೧೦. ಪುಷ್ಪಕ ೭೨

-ಡಾ.ಅನುಪಮಾ ನಿರಂಜನ

೧೧. ಒಂದು ಮೂಗುತಿಯ ಕತೆ ೮೩

-ಶಾಂತಾದೇವಿ ಕಣವಿ

೧೨. ಕತೆಯಾಯಿತು ಘಟನೆ ೯೧

-ಡಾ.ಕಮಲಾ ಹಂಪನಾ

೧೩. ಸಾರಾಂಶ ೧೦೨

-ಸಾರಾ ಅಬೂಬಕರ್

೧೪. ಬಿಂಬ ೧೧೪

- ಪ್ರೇಮಾ ಭಟ್

೧೫. ಕಾಶಿಯಲ್ಲಿ ಕಂಡದ್ದೇನು ೧೨೨

-ಸರಿತಾ ಕುಸುಮಾಕರ ದೇಸಾಯಿ



೧೬. ಪುಂಡಿ ಪೂಜಾರಿಯಾದಾಗ

-ಗೀತಾ ನಾಗಭೂಷಣ

೧೭. ಮುಳ್ಳುಗಳು ೧೪೫

-ವೀಣಾ ಶಾಂತೇಶ್ವರ

೧೮. ಲೂಟಿ

–ಬಿ.ಟಿ.ಲಲಿತಾ ನಾಯಕ್

೧೯. ಕ್ರೌಂಚ ಪಕ್ಷಿಗಳು ೧೬೬

–ವೈದೇಹಿ

೨೦. ದಾಂಪತ್ಯ ಗೀತೆ ೧೮೦

ವಸುಮತಿ ಉಡುಪ

೨೧. ಮಾಯಕದ ಸತ್ಯ ೧೮೮

ಮಿತ್ರಾ ವೆಂಕಟ್ರಾಜ್

೨೨. ಪರಕೀಯ ೨೦೨

-ಉಮಾ ರಾವ್

೨೩. ಸಾಕ್ಷಿ(ಕೇಳಿದ್ದು) ೨೧೧

ಡಾ.ಎಚ್.ಗಿರಿಜಮ್ಮ

೨೪. ಎಲ್ಲಿ ಹೋದಿ ಗಂಗಾಮಾಯಿ? ೨೩೦

-ಜಯಶ್ರೀ ದೇಶಪಾಂಡೆ

೨೫. ಹೆಣ್ಣು ಹದ್ದಿನ ಸ್ವಯಂವರ ೨೪೭

-ಬಾನು ಮುಷ್ತಾಕ್

೨೬. ದಿಂಡೀ ೨೬೨

ಕಸ್ತೂರಿ ಬಾಯಿರಿ

೨೭. ನೆನ್ನೆಗಳ ಹೊರೆ ಇಳಿಸಿ ೨೭೬

ನೇಮಿಚಂದ್ರ

೨೮. ಇತಿಹಾಸದ ಪುಟಗಳೂ ವಿಯಟ್ನಾಂನ ಆ ಹೆಣ್ಣುಮಗಳೂ ೨೯೬

ಜಯಶ್ರೀ ಕಾಸರವಳ್ಳಿ

೧೯.    ಧಣಿಗಳ ಬೆಳ್ಳಿಲೋಟ    ೩೦೯

ಎಚ್.ನಾಗವೇಣಿ

೩೦.    ನೆರೆಹಾವಳಿ    ೩೧೬

- ಬಿ.ಟಿ.ಜಾಹ್ನವಿ

೩೧.    ಮೃತ್ಯೂವು ಮತ್ತವನ ಹೆಂಡತಿಯೂ    ೩೨೭

-ಎಂ.ಎಸ್. ವೇದ



೩೨.    ನಾಡ ದೇವಿಯೂ ಕಾಡಿನ ಮಗನೂ    ೩೪೦

ಸವಿತಾ ಶ್ರೀನಿವಾಸ

೩೩.    ಉರಿವ ಬೆಂಕಿಗೆ ಮೈಯೆಲ್ಲ ಬಾಯಿ    ೩೪೯

-ಡಾ.ಪದ್ಮನಿ ನಾಗರಾಜು

೩೪,    ನೀರ ಮಣಿಗಳ ಮಾಲೆ    ೩೬೬

ಸುನಂದಾ ಪ್ರಕಾಶ ಕಡಮೆ

೩೫.    ಆ ಕ್ಷಣಗಳಲ್ಲಿ ಅದೆಂಥ ನಿಗೂಢತೆ    ೩೭೪

-ಸುಮಂಗಲಾ

೩೬.    ಪಾಣಿ    ೩೯೫

-ವಿಜಯಾ ಮೋಹನ್

೩೭.    ಒಂದು ಬಾಗಿಲು ಮತ್ತು ಮೂರೂ ಚಿಲ್ಲರೆ ವರ್ಷಗಳು    ೪೦೩

-ಶಾಂತಿ ಕೆ ಅಪ್ಪಣ್ಣ

## ನನ್ನ ಧನವನ್ನು ನನಗೆ ತಾ

**- ಆರ್. ಕಲ್ಯಾಣಮ್ಮ**

**ಅಮ್ಮಾ, ನನಗೊಂದು ಬಿಸ್ಕೆಟ್ ಕೊಡುವೆಯಾ?**

"ಮಗು, ನೀನೀ ಔಷಧವನ್ನು ಮೊದಲು ಕುಡಿ: ಒಂದಲ್ಲ ನಿನಗೆ ನಾಲ್ಕು ಬಿಸ್ಕೆಟ್‌ಗಳನ್ನು ಕೊಡುವೆನು." ಹೀಗೆ ಹೇಳುತ್ತಾ ತಾಯಿಯಾದ ಪ್ರಭಾವತಿಯು ಕಿಟಕಿಯಲ್ಲಿ ಸೀಸೆಯಲ್ಲಿದ್ದ ಮಾತ್ರೆಯನ್ನು ಕೈಗೆ ತೆಗೆದುಕೊಂಡು ಮಲಗಿದ್ದ ಮಗುವಿನ ಸಮೀಪಕ್ಕೆ ಬಂದು ಮಗುವಿನ ಬಾಯಲ್ಲಿ ಮಾತ್ರೆಯನ್ನು ಹಾಕಿ ನುಂಗುವಂತೆ ಹೇಳಿದಳು. ಮಾತ್ರೆಯನ್ನು ಬಾಯಲ್ಲಿ ಹಾಕಿಕೊಂಡ ಮಗುವು ಕಹಿಗಾಗಿ ಮುಖವನ್ನು ವಿಕಾರ ಮಾಡುತ್ತಾ.

"ಅಮ್ಮಾ ನನಗೆ ಬಹಳ ಬಾಯಾರಿಕೆಯಾಗುತ್ತದೆ, ಸ್ವಲ್ಪ ನೀರು ಕೊಡು' ಎಂದು ಕೇಳಿತು. ಪ್ರಭಾವತಿಯು ಕಿಟಕಿಯಲ್ಲಿದ್ದುದೊಂದು ಹೂಜಿಯಿಂದ ನೀರನ್ನು ಒಂದು ಲೋಟೆಗೆ ಸುರಿದು ತಂದುಕೊಡಲು, ಮಗುವು ಅಷ್ಟನ್ನೂ ಕುಡಿದು, ಅಮ್ಮಾ, ನೀನು ಕೊಟ್ಟ ನೀರು ನನಗೆ ಒಂದು ಗುಟುಕಿಗೆ ಕೂಡ ಸಾಕಾಗಲಿಲ್ಲ, ಗಂಟಲು ಕೂಡ ನೆನೆಯಲಿಲ್ಲ. ಇನ್ನಿಷ್ಟು ಕೊಡು' ಎಂದು ಕೇಳಲು, ಮಗುವಿನ ಮಾತನ್ನು ಕೇಳಿದ ಮಾತೆಯ ವದನವು ಪುಪುಲ್ಲವಾಯಿತು. ಪ್ರಭಾವತಿಯು ಹೂಜಿಯಿಂದ ಮತ್ತೆ ಸ್ವಲ್ಪ ನೀರನ್ನು ಬಗ್ಗಿಸಿ ತಂದುಕೊಟ್ಟು, 'ಮಗೂ, ನೀನು ಮತ್ತೆ ನೀರು ಕೇಳಿದರೆ ನಾನು ಕೊಡುವುದಿಲ್ಲ, ಸುಮ್ಮನೆ ನೀರು ಕುಡಿದರೆ ನಿನ್ನ ಕಾಯಿಲೆಯು ಹೆಚ್ಚಾಗುವುದು' ಎಂದಳು. ನಾಲ್ಕಾರು ದಿನಗಳ ನಿರಂತರ ಜ್ವರದಿಂದ ಪೀಡಿತನಾದ ಬಾಲಕನು ನೀರಿನ ಪಾತ್ರೆಯನ್ನು ಎತ್ತಿ ಬಾಯಿಯ ಸಮೀಪಕ್ಕೆ ತೆಗೆದುಕೊಂಡು ಹೋದಾಗ ಬಲಹೀನತೆಯ ದೆಸೆಯಿಂದ ಕೈ ನಡುಗಿ ಲೋಟೆಯು ಬಿದ್ದು ಹಾಸಿಗೆ ಮೈಮೇಲೆಲ್ಲಾ ನೀರು ಚೆಲ್ಲಿ ಹೋಯಿತು. 'ಮಗೂ, ಅದೇಕಿಷ್ಟಾತುರಪಡುವೆ? ಮತ್ತೆ ನೀರು ಕೊಡುವುದಿಲ್ಲವೆಂದು ಹೇಳಿದ ಮಾತ್ರಕ್ಕೆ ನಿನ್ನ ಕೈಯಿಂದ ನೀರಿನ ಪಾತ್ರೆಯನ್ನೇ ಕಿತ್ತು ಕೊಳ್ಳುವೆನೆಂದೆಣಿಸಿದೆಯಾ?' ಎಂದು ತಾಯಿಯು ಕೇಳಲು, ಮಗುವು ಆ ಪಾತ್ರೆಯನ್ನು ದೂರ ಸರಿಸಿಟ್ಟು ತನ್ನನ್ನೆತ್ತಿಕೊಳ್ಳುವಂತೆ ಪ್ರಾರ್ಥಿಸಿತು. ಪ್ರಭಾವತಿಯ ಶರೀರಾದ್ಯಂತವೂ ಆನಂದದಿಂದ ರೋಮಾಂಚವಾಯಿತು. ವಾತ್ಸಲ್ಯದಿಂದ ಮಗುವನ್ನೆತ್ತಿಕೊಂಡು "ಮಗೂ, ನೀನೇ ನನ್ನ ನಿಧಿ, ನೀನೇ ನನ್ನ ಧನ, ನೀನೇ ನನ್ನ ರತ್ನ, ನೀನೇ ನನ್ನ ಜೀವನ, ನೀನೇ ನನ್ನ ಸರ್ವಸ್ವ" ಎಂದು ಹೇಳುತ್ತಾ ಪದೇ ಪದೇಮುತ್ತಿಟ್ಟಳು. ಮಾತೆಯ ಪ್ರೇಮದ ಏಕಮಾತ್ರಾಧಿಕಾರಿಯಾದ ಮಗುವು ಆನಂದದುಬ್ಬರದಲ್ಲಿ ಮೈಮರೆತನು, ಮಾತೆಯ ಅವಿರಳ ಚುಂಬನದಿಂದ ಮಗುವಿನ

ಮುಖವು ತೇಜೋಭರಿತವಾಯಿತು. ಆನಂದಸಾಗರದಲ್ಲಿ ಮುಳುಗಿದಾ ಮಗುವು ತಾಯಿಯ ಗಲ್ಲವನ್ನು ಮೇಲಕ್ಕೆತ್ತಿ "ಅಮ್ಮಾ, ಅಗೋ ನೋಡು, ನನ್ನ ಬಳಿಗರಾದಾರೋ ಬರುತ್ತಿರುವರು. ಅಪ್ಪನು ನಾಳೆಯ ದಿನ ಬರುವನೆಂದು ಆ ದಿನವೇ ಹೇಳಿದೆಯಲ್ಲವೆ?"- ಎಂದು ಕೇಳಲು ಪ್ರಭಾವತಿಯ ಹೃದಯದಲ್ಲೆಷ್ಟೋದಿನಗಳಿಂದಡಕವಾಗಿದ್ದ ದುಃಖವು ಹೊರಹೊಮ್ಮಿದರೂ, ತನ್ನ ದುಃಖವನ್ನು ಮಗುವು ಅರಿತುಕೊಳ್ಳಕೂಡದೆನ್ನುವ ಅಭಿಪ್ರಾಯದಿಂದ ಧೈರ್ಯ್ಯಗೊಂಡವಳಂತೆ ನಟಿಸಿ- "ಮಗೂ, ಅವರೀದಿನ ಬೆಳಿಗ್ಗೆ ಬಂದರು" ಎಂದಳು. ತಾಯಿಯ ಮಾತನ್ನು ಕೇಳಿದ ಮಗುವು ಇದ್ದಕ್ಕಿದ್ದಂತೆ, ಬೆದರಿ- "ಅಮ್ಮಾ, ಅಲ್ಲಿ ಗುಮ್ಮ ಬರುತ್ತಿದೆ, ಅದು ನನ್ನನ್ನು.... ಎಂದು ಕಿರಿಚಿತು.

ಪ್ರಭಾವತಿಯ ಪತಿಯು ಮರಣ ಹೊಂದಿ ಒಂದು ವರ್ಷವಾಗಿತ್ತು. ಆಗ ಮಗುವಿಗೆ ಮೂರು ವರ್ಷ ವಯಸ್ಸು, ಅರಿಯದೆ ಬಾಲಕನಿಗೆ ಈ ವಿಷಯವು ತಿಳಿಯದು. ತಾಯಿಯು ಹೇಳಲು ಪ್ರಯತ್ನ ಪಡಲಿಲ್ಲ; ಮಗುವು ಅಪ್ಪನೆಲ್ಲೆಂದ್ದು ಕೇಳುವಾಗಲೆಲ್ಲಾ 'ನಾಳೆಗೆ ಬರುವರು' ಎಂದಿಲ್ಲದ ನೆವಗಳನ್ನು ಹೇಳುತ್ತಿದ್ದಳು. ತಾಯಿಯ ಮಾತನ್ನು ಕೇಳಿದ ಮಗುವು ಒಂದೊಂದು ವೇಳೆ ಸಮಾಧಾನ ಹೊಂದುವುದು, ಒಂದೊಂದು ದಿನ ತಂದೆಯನ್ನು ನೋಡಿಯೇ ತೀರಬೇಕೆಂದು ಹಟ ಹಿಡಿಯುವುದು; ಆಗ ಪ್ರಭಾವತಿಯು ಕಳವಳಗೊಳ್ಳುವಳು. ರಾತ್ರಿ ಮಲಗಿದಾಗ ಹಾಸಿಗೆಯ ದಿಂಬನ್ನೆಲ್ಲಾ ತೋಯಿಸುವಳು. ಅವಳಿಗೆ ಪತಿ ವಿಹೀನೆಯಾದ ಅಬಲೆಗೆ ಈ ಜಗತ್ತಿನಲ್ಲಿದ್ದುದೊಂದು ಆಧಾರವು ಆ ಮಗುವು ಮಾತ್ರ. ಅವಳ ಸುಖಸಂತೋಷಗಳೆಲ್ಲವೂ ಆ ಮಗುವೊಂದನ್ನೇ ಅವಲಂಬಿಸಿದ್ದಿತು. ಅವಳ ಜೀವಾಧಾರವಾದ, ಜೀವನ ಸರ್ವಸ್ವವಾದ, ಸುಖಸಂತೋಷಗಳಿಗಾಕರವಾದ ಮಗುವೂ ಇಪ್ಪತ್ತು ದಿನಗಳಿಂದ ಜ್ವರದಿಂದ ನರಳುತ್ತಿದ್ದಿತು. ತಾನಾಡುತ್ತಿದ್ದ ಮಾತನ್ನು ಅರ್ಧದಲ್ಲೇ ನಿಲ್ಲಿಸಿದಾ ಬಾಲಕನು ಬಹಳ ಹೊತ್ತಾದ ಮೇಲೆ ಪುನಃ "ಅಮ್ಮಾ, ಅಪ್ಪನನ್ನು ನೋಡಬೇಕೆನಿಸುತ್ತದೆ. ನಾನು ಕೇಳುವಾಗಲ್ಲೆಲ್ಲಾ ನೀನು ಇಲ್ಲದ್ದೊಂದು ಕಾರಣ ಹೇಳುವೆ. ನಿನ್ನ ಕಾರಣಗಳನ್ನು ನಾನೀದಿನ ನಂಬುವುದಿಲ್ಲ. ಏನೇ ಆಗಲಿ, ಹೇಗಾದರೂ ಈ ದಿನ ತಂದೆಯನ್ನು ನಾನು ನೋಡಲೇಬೇಕು. ನೀನು ತೋರಿಸಲೇಬೇಕು... ಅಮ್ಮಾ, ನನಗೆ ಹೇಗೇಗೋ ಆಗುತ್ತದೆ. ಹೊಟ್ಟೆಯಲ್ಲಿ ಬಹಳ ಸಂಕಟವಾಗುತ್ತದೆ. ಅಮ್ಮಾ ನಾನು ಸಹಿಸಲಾರೆ" ಎಂದಳತೊಡಗಿತು. ಆ ಮಗುವು ಮಲಗಿದ ಕೊಠಡಿಯ ಕಿಟಕಿಯಿಂದ ನೋಡಿದರೆ, ರಸ್ತೆಯಲ್ಲಿ ತಿರುಗಾಡುವವರು ಕಾಣಿಸುತ್ತಿದ್ದು. ಜನರ ನೆರಳನ್ನು ಕಂಡಾಗಲೆಲ್ಲಾ ಬಾಲಕನು "ಅಮ್ಮಾ, ಅಗೋ ಅಪ್ಪ! ನೋಡು, ಅವರೆಲ್ಲೆಂದು ಕೇಳಿದರೆ ನೀನು ಹೇಳದೇ ಹೋದೆ. ನನ್ನನ್ನು ನೋಡುವುದಕ್ಕಾಗಿ ಅದೋ ಅಪ್ಪ ತಾನೇ ಬಂದಿದ್ದಾರೆ ಎನ್ನುವನು. ಪುನಃ ಸ್ವಲ್ಪ ಹೊತ್ತಿಗೆ 'ಅಮ್ಮಾ, ಮಾತಿಗೆ ಮರುಮಾತಾಡದೆ ಅಧೋಮುಖಿಯಾಗುವಳು. ಅನೇಕ ದಿನಗಳು ಹೀಗೆಯೇ ಕಳೆದವು. ಆ ದಿನವೂ ಹೀಗೆಯೇ ಮಗುವಿನ ಮಾತುಗಳನ್ನು ಕೇಳಿ ಕಣ್ಣೀರು ಸುರಿಸುತ್ತಿದ್ದಾಗ ಅವಳ ಸಂತೃಪ್ತ ಹೃದಯವನ್ನು ಶೀತಲ ಮಾಡುವ ಸಲುವಾಗಿ ಅವಳ ಸೋದರಮಾವನಾದ ವಸಂತರಾಯನು ಅಲ್ಲಿಗೆ ಬಂದು 'ಪ್ರಭಾ' ಎಂದು ಕೂಗಲು, ಪ್ರಭಾವತಿಯು ಬೆಚ್ಚಿಬಿದ್ದು, ಸ್ವಲ್ಪ ಹೊತ್ತು ಸ್ಥಬ್ಧಳಾಗಿದ್ದು ಪುನಃ

'ಮಾವಾ, ಈ ಬಾಲಕನನ್ನು ಯಾವ ಮಾತುಗಳಿಂದ ಸಂತೈಸಬೇಕೆನ್ನುವುದು ನನಗೆ ಗೊತ್ತಾಗಲಿಲ್ಲ; ನಾನೇನು ಮಾಡಲಿ? ಅವನೇನೇನೋ ಕೇಳುತ್ತಾನೆ' ಎನಲು, ವಸಂತರಾಯನು ಅವನ್ನಾ ಕತ್ತಲು ಕೋಣೆಯಲ್ಲಿ ಮಲಗಿಸಿರುವುದರಿಂದವನು ಭೀತನಾಗಿ ಹಾಗೆ ಮಾತನಾಡಿರಬಹುದು. ಅವನ್ನು ಬೆಳಕಿನಲ್ಲಿ ಕರೆತಂದು ಮಲಗಿಸು' ಎನಲು, ಪ್ರಭೆ ಬೆಳಕಲ್ಲಿ ಅವನನ್ನು ಕರೆತಂದು ಮಲಗಿಸಿ ಮಾವಾ, ಈಗ ಸರಿಹೋಯಿತೇನು?' ಎಂದಳು.

ವಸಂತರಾಯ-ಪ್ರಭಾ, ನಿನ್ನೆಗಿಂತ ಈ ಹೊತ್ತು ದೇಹಸ್ಥಿತಿಯು ಸ್ವಲ್ಪ ಗುಣವೋ??

ಪ್ರಭಾ- ನಿನ್ನೆಗಿಂತ ಜ್ವರವು ಈ ದಿನ ಸ್ವಲ್ಪ ಕಡಿಮೆಯಾಗಿದ್ದರೂ ನಿಶ್ಯಕ್ತಿಯು ಮಾತ್ರ ಹೆಚ್ಚಾಗಿದೆ. ಈಗ ತಾನೇ ಒಂದು ಘಂಟೆಗೆ ಮೊದಲು ಔಷಧಿಯನ್ನು ಕೊಟ್ಟಿದ್ದೇನೆ.

ಮಾವ-ಜ್ವರ ಕಡಿಮೆಯಾದರೂ ಈ ದಿನ ಬಹಳ ಸುಸ್ತಾಗಿರುವಂತೆ ಕಾಣುವುದು. ನೀನಳುವುದು ಇದಕ್ಕೆಯೋ, ಹುಚ್ಚಿ ಹೋಗು!'

ಪ್ರಭಾ- 'ಇಲ್ಲ ಮಾವ, ನಾನದಕ್ಕಾಗಿ ಅಳಲಿಲ್ಲ. ನಿತ್ಯವೂ ತಂದೆಯನ್ನು ತೋರಿಸುವಂತೆ ಪೀಡಿಸುತ್ತಾನೆ. ಅವನ ಕಾಟವನ್ನು ತಡೆಯಲಾರದೆ. ಇಂದು ಬರುವರು ಸಂಜೆಗೆ ಬರುವರು' ಎಂದು ಕಾರಣಗಳನ್ನು ಹೇಳುತ್ತಿದ್ದೇನೆ; ಅವನದನ್ನು ನಂಬಿದ್ದಾನೆ. ಸ್ವಲ್ಪ ಹೊತ್ತಿಗೆ ಮುಂಚೆ ಅವನು ಸಂಕಟಪಟ್ಟುದನ್ನು ನೋಡಿದರೆ ಮಾವಾ, ನನಗೇಕೋ ಭೀತಿಯಾಗುವುದು,

ಮಾವ-ಪ್ರಭಾ, ಖಾಯಿಲೆ ಬಂದವರಾರೂ ಬದುಕುವುದೇ ಇಲ್ಲವೆಂಬುದು ನಿನ್ನ ಸಿದ್ಧಾಂತವೇನು? ಮನುಷ್ಯರಿಗೆ ಬರದೆ ಖಾಯಿಲೆಯು ಮರಕ್ಕೂ, ಕಲ್ಲಿಗೂ ಬರುವುದೇ? ನೀನು ಇಲ್ಲದ್ದನ್ನೆಲ್ಲ ಮನಸ್ಸಿಗೆ ಹಚ್ಚಿಕೊಂಡು ಚಿಂತಿಸುವೆ. ನಿನ್ನ ಮನಸ್ಸಿಗಿರುವಷ್ಟು ಹೆಚ್ಚು ಖಾಯಿಲೆಯು ಅವನ ಮೈಗಿಲ್ಲ. ನಿಷ್ಕಾರಣವಾಗಿ ನೀನಳುವೆ. ಇನ್ನೆರಡು ದಿನಗಳಲ್ಲಿ ಸಂಪೂರ್ಣವಾಗಿ ಗುಣಹೊಂದುವನು. ನಾನೀಗ ಹೋಗಿ ಡಾಕ್ಟರನ್ನು ಕರೆತರುವೆನು. ಹೀಗೆ ಹೇಳಿ ಹೊರಟುಹೋದನು.

ಮಗುವಿನ ಜ್ವರವು ಕ್ರಮೇಣ ಇಳಿಯದೆ ಹೆಚ್ಚಾಗುತ್ತಾ ಬಂದಿತು. ಬಾಲಕ ಶಿರೋಪಾರ್ಶ್ವದಲ್ಲಿ ಕುಳಿತು ಪ್ರಭಲೆಯು ನಿಸ್ತೇಜವಾದ ಬಾಲಕನ ಮುಖ ಬಿಂಬವನ್ನು ಅನಿಮಿಷ ನೇತ್ರವಾಗಿ ನೋಡುತ್ತ ಕುಳಿತಿದ್ದಳು. ವಸಂತರಾಯನು ಡಾಕ್ಟರನ್ನು ಕರೆತಂದರು. ಅವನು ಮಗುವಿನ ನಾಡಿಯನ್ನು ಹಿಡಿದು ನೋಡಿ ಕಳಾಹೀನನಾದನು. ಇದನ್ನು ಕಂಡ ವಸಂತರಾಯನ ಮುಖವೂ ಕಾಂತಿಹೀನವಾಯಿತು. ಡಾಕ್ಟರು ವಸಂತರಾಯನನ್ನು ಕೊಠಡಿಯಿಂದಾಚೆ ಕರೆತುಕೊಂಡು ಹೋದನು. ಇದನ್ನು ನೋಡಿದ ಪ್ರಭೆಗೆ ತಾನೆದುರುನೋಡುತ್ತಿದ್ದ ಸಂಭವವು ನಡೆಯುವಂತೆ ತೋರಿತು. ಹೃದಯವು ದುಃಖಭರಿತವಾಗಿದ್ದುದರಿಂದ ಅವಳ ಕಣ್ಣುಗಳಲ್ಲಿ ನೀರು ಕೂಡ ಬರಲಿಲ್ಲ.

ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಳ್ಳಲು ಅವಳೆಷ್ಟೋ ಪ್ರಯತ್ನಿಸಿದಳಾದರೂ ಅವಳಾ ಪ್ರಯತ್ನವು ನಿಷ್ಫಲವಾಯಿತು.

* * * *



ಅಂದಿನ ರಾತ್ರಿಯು ಎಂದಿನಂತಿರದೆ ಅತಿ ಗಂಭೀರವಾಗಿತ್ತು. ಕೋಮಲವಾದ ಬಾಲಕನ ಮುಖದ ಮೇಲೆ ಅಪ್ರಕಾಶಿತವಾದ ದೀಪದ ಬೆಳಕು ಬಿದ್ದು, ಆ ಮುಖವನ್ನು ಮತ್ತಷ್ಟು ಭೀತಿದಾಯಕವನ್ನಾಗಿ ಮಾಡಿತು. ಪ್ರಭಾವತಿಯು ಶೂನ್ಯ ಹೃದಯಳಾಗಿ ವಸಂತರಾಯನಾಗಮನವನ್ನೇ ಆತ್ಯಾತುರದಿಂದ ನಿರೀಕ್ಷಿಸುತ್ತಿದ್ದಳು. ಮಗುವು ಅಮ್ಮಾ, ಎಂದಿತು, ಬಾಲಕನ ಆರ್ತಸ್ವರವನ್ನು ಕೇಳಿದ ಪ್ರಭೆಯ ಎದೆಯು ಝಲ್ಲೆಂದಿತು. ಈ ದಿನ ತನ್ನಾ ಧನದ ಅಪಹರಣವಾಗುವುದೆಂದು ಅವಳ ಮನಸ್ಸಿಗೆ ತೋರಿತು. ಕಂಪಿತ ಕರಗಳಿಂದ ಬಾಲಕನನ್ನೆತ್ತಿ ತೊಡೆಯಮೇಲಿರಿಸಿಕೊಂಡು 'ಏನು ಬೇಕು ನನ್ನ ರತ್ನ ಎಂದು ಕೇಳಲು, 'ಮಗುವು ಅಮ್ಮಾ ನನಗಾ ಹುಡುಗರೊಡನೆ ಆಡಬೇಕೆನ್ನಿಸುವುದು. ನನ್ನನ್ನು ಆಡಲು ಬಿಡುವೆಯಾ?' ಎನ್ನಲು- 'ಮಗೂ' ಮೊನ್ನೆಯಿಂದ ನೀನು ಸ್ವಲ್ಪವೂ ನಿದ್ರೆ ಮಾಡಲಿಲ್ಲ. ಸ್ವಲ್ಪ ನಿದ್ರೆ ಮಾಡು; ಆಮೇಲೆ ಬೇಕಾದಷ್ಟು ಆಡುವೆಯಂತೆ' ಎಂದು ಬೆನ್ನು ತಟ್ಟುತ್ತ ಹೇಳಿದಳು. ಕೆಲವು ನಿಮಿಷಗಳು ಕಳೆದ ನಂತರ ಮಗುವು ಸ್ವಲ್ಪ ಕಣ್ಣು ಮುಚ್ಚಿತು. ನಿದ್ರೆಯಲ್ಲಿ ಆಗಾಗ್ಗೆ ಬೆಚ್ಚಿಬಿದ್ದು, ಅಪ್ಪಾ, ಮಾವಾ, ಅಮ್ಮಾ' ಎಂದು ಕನವರಿಸುತ್ತಿದ್ದಿತು. ಪ್ರಭೆಯು ನಿದ್ರೆ ಮಾಡುವ ಮಗುವನ್ನೆತ್ತಿ ಎದೆಗಪ್ಪಿಕೊಂಡು 'ದೇವಾ, ಇದೇ ನನ್ನ ಜೀವನಾಧಾರ! ಜೀವಿತದ ಧನ!' ಎಂದಳು.

ಮೊದಲಿನ ದಿನ ಕಡಿಮೆಯಾಗಿದ್ದ ಜ್ವರವು ಆ ದಿನ ನೂರದೂರಕ್ಕೇರಿದಾಗ ವಸಂತರಾಯನು ಬಂದನು. ಪ್ರಭಾವತಿಯು ಮಾವಾ, ಡಾಕ್ಟರೇನು ಹೇಳಿದರು. ಎಂದು ಕೇಳುವಾಗಲೇ ಅವಳ ಕಣ್ಣುಗಳು ಅಶುಭರಿತವಾದವು. ಅದನ್ನು ನೋಡಿ ಮಾವನು ಪ್ರಭಾ, ಜ್ವರವು ಕಡಿಮೆಯಾಗದಿದ್ದರೂ ಪ್ರಾಣಭಯವಿಲ್ಲವೆಂದು ಹೇಳುತ್ತಾನೆ' ಎಂದು ಹೇಳಿದಾಗ ಮಗುವು ಎಡದಿಂದ ಬಲಕ್ಕೆ ಹೊರಳಿ- 'ಮಾವಾ ಯಾವಾಗ ಬಂದೆ?' ಅಪ್ಪನಲ್ಲಿ?' ಎಂದು ಕೇಳಿತು. ಪ್ರಭಾವತಿಯ ಕೈಯಿಂದ ವಸಂತರಾಯನು ಮಗುವನ್ನೆತ್ತಿಕೊಂಡು 'ಮಗೂ, ನಾನೀಗತಾನೇ ಬಂದೆನು. ಅಪ್ಪನು ಈಗಲೇ ಬರುವನು; ನಾನು ಹೇಳಿ ಬಂದಿದ್ದೇನೆ' ಎನಲು, ಮಗುವು ಮಾವ ಊರಿನಿಂದ ಬಂದೆಯಲ್ಲ ನನಗೆ ದಾಳಿಂಬರೀ ಹಣ್ಣು ತಂದೆಯಾ?' ಎನ್ನಲು, ಮಗೂ, ನಿನಗೆ ಬೇಕಾದುದೆಲ್ಲವನ್ನು ತಂದಿದ್ದೇನೆ, ಕೊಡಲೇನು?' ಎನಲು, ಪ್ರಭಾವತಿಯು ಮಾವ ನನ್ನ ಕೈಲಿ ಮಗುವನ್ನು ಕೊಟ್ಟು ಹಣ್ಣು ಸುಲಿದು ಕೊಡು. ನಾನು ಒಂದೊಂದು ಬೀಜವಾಗಿ

ತಿನ್ನುಸುವೆನು' ಎಂದಳು. ಮಗುವು ಮಾವಾ, ಅಪ್ಪನನ್ನು ತರತರುವೆನೆಂದು ಹೇಳಿದೆ. ಅಪ್ಪ ಬರಲಿಲ್ಲವೇ? ಅಪ್ಪನಿಗೆ ನನ್ನ ಮೇಲೇನು ಸಿಟ್ಟು? ನಾನು ಆಳುತ್ತೇನೆಂದೇ, ತಂಟೆ ಮಾಡುತ್ತೇನೆಂದೇ, ಅದೇಕೆ ಬರಲಿಲ್ಲ? ಎಂದು ಕೇಳಲು ಮಗೂ, ಅಪ್ಪನಿಗೆ ನಿನ್ನ ಮೇಲೇನೂ ಸಿಟ್ಟಿಲ್ಲ' ಎನಲು ಮಗುವು ಪುನಃ 'ಹಾಗಾದರೆ ಮಾವ, ನನ್ನನ್ನು ನೋಡಲೇಕೆ ಬರಲಿಲ್ಲ' ಎಂದು ಕೇಳಿತು. ವಸಂತರಾಯನು ಅದಕ್ಕೆ ಮಗೂ, ನಾಳೆಯ ದಿನ ನಾನು ಖಂಡಿತವಾಗಿಯೂ ಕರೆತರುವೆನು. ನೀನು ಅಮ್ಮನ ಬಳಿ ಮಲಗಿರು' ಎಂದು ಹೇಳಿ ಪ್ರಭೆಯ ಕೈಲಿ ಮಗುವನ್ನಿತ್ತನು.

ಮಗುವು- "ಅಮ್ಮಾ, ಅಪ್ಪ ಈ ದಿನ ಬಂದರೆಂದು ನೀನು ಹೇಳಿದೆ. ಅಪ್ಪನನ್ನು ನಾಳೆಯ ದಿನ ಕರೆತರುತ್ತೇನೆಂದು ಮಾವ ಹೇಳುತ್ತಾನೆ. ಯಾರ ಮಾತನ್ನು ನಂಬಲಿ?



ಕೊನೆಗೂ ಅಪ್ಪನನ್ನು ತೋರಿಸಲಾರೆಯಾ? ಅವನನ್ನು ನಾನು ನೋಡಬಾರದೇನು' ಎನಲು ಪ್ರಭೆಯು ಅಶ್ರುಪೂರಿತಲೋಚನಳಾಗಿ 'ನಿಜವಾಗಿಯೂ ನಾಳೆ" ಎಂದಳು. ಮಗುವು "ಅಮ್ಮಾ, ದಿನವೂ ನಾಳೆನಾಳೆಯೆಂದು ಹೇಳುವೆ ಇದರ ಅರ್ಥವಾದರೂ ಏನು?' ಎನಲು ಮಗುವಿನ ಮಾತನ್ನು ಕೇಳಿದ ಪ್ರಭೆಯ ಹೃದಯಕ್ಕೆ ಸಿಡಿಲು ಬಿದ್ದ ಹಾಗಾಯಿತು. ಮಗುವನ್ನು ಸಂತೈಸುವುದನ್ನು ಬಿಟ್ಟು ತಾನೇ ನೀರವವಾಗಿ ರೋಧಿಸ ತೊಡಗಿದಳು. ಬಹಳ ಹೊತ್ತು ಅತ್ತು ಕಣ್ಣೊರಸಿಕೊಂಡು, 'ಮಗೂ, ಸ್ವಲ್ಪ ಏಳು ಮುಖವೊರೆಸಿಕೊಂಡು ಸ್ವಲ್ಪ ಏನಾದರೂ ತಿನ್ನು; ಆಮೇಲೆ ಎಲ್ಲಾ ಹೇಳುವೆನು' ಎನಲು ಮಗುವು ಅಮ್ಮಾ, ನೀನದೇಕೆ ಅಳುವೆ? ತಂದೆಯೆಲ್ಲೆಂದು ಕೇಳಿದಾಗಲೆಲ್ಲಾ ಅಳುವೆ. ತಂದೆಯು ನನ್ನನ್ನು ನೋಡಲು ಬರಲಿಲ್ಲವೆಂದು ಅಳುವೆಯಾ?' ಎಂದಿತು. ಮಗುವಿನ ಈ ಮಾತುಗಳೇ ಅಂತ್ಯಕಾಲದ ಮಾತಾಯಿತು. ಪ್ರಭೆಯ ಹೃದಯವು ಶಿಲೆಯಂತೆ ಬಿರುಸಾಯಿತು. ಅವಳಾ ಮಗುವಿನ ನಿರ್ಜೀವ ದೇಹವನ್ನೆದೆಗಪ್ಪಿಕೊಂಡು ಚುಂಬಿಸಿದಳು. ಮಗುವನ್ನೆದೆಗಪ್ಪಿಕೊಂಡು ಉನ್ಮತ್ತಳಂತಿದ್ದ ಪ್ರಭೆಯು ಜಗತ್ತನ್ನೆಲ್ಲ ಭೀತಿಗೊಳಿಸುವ ಅಂಧಕಾರದಲ್ಲಿ, ಭೂತಪ್ರೇತಗಳೂ, ಪಿಶಾಚಿಗಳೂ ಹೊರ ಹೊರಡಲಂಜುವ ಆ ಘೋರನಿಶಿಯಲ್ಲಿ 'ದೇವಾ, ನನ್ನ ಧನವನ್ನು ನನಗೆ ತಾ' ಎಂದು ಚೀತ್ಕಾರ ಮಾಡಿದಳು. ಈ ಚೀತ್ಕಾರವು ದಶದಿಕ್ಕುಗಳಲ್ಲಿಯೂ ವ್ಯಾಪಿಸಿತು... ಎತ್ತ ನೋಡಿದರೂ ಮೇಲ್ಕಂಡ ಚೀತ್ಕಾರವೇ ಕೇಳಿಸುತ್ತಿತ್ತು.

# ಹೋಗಿಯೇ ಬಿಟ್ಟಿದ್ದ!

- ಕೊಡಗಿನ ಗೌರಮ್ಮ

ಒಮ್ಮೊಮ್ಮೆ ಕಲ್ಪನೆಗಿಂತಲೂ ನಿಜವು ಆಶ್ಚರ್ಯಕರವಾಗಿರುತ್ತದೆ. ಕೆಲವು ವೇಳೆ ಕಟ್ಟುಕತೆಯೋ ಎನ್ನುವಷ್ಟು ಅಸ್ವಾಭಾವಿಕವೂ ಆಗಿರುತ್ತದೆ. ಈಗ ನಾನು ಹೇಳುವ ವಿಷಯವೂ ಆ ಜಾತಿಗೆ ಸೇರಿದ್ದು, ಕೇಳಿದವರು ಇದು ಖಂಡಿತ ನನ್ನ ಕಲ್ಪನೆಯ ಪರಿಣಾಮವೆಂದು ಹೇಳದಿರಲಾರರು. ಅದಕ್ಕೋಸ್ಕರವಾಗಿಯೇ ಈ ವಿಷಯಕ್ಕೆ ಸಂಬಂಧಪಟ್ಟ ಪತ್ರಿಕೆಗಳನ್ನೆಲ್ಲ ನಾನು ಜೋಪಾನವಾಗಿಟ್ಟಿರುವುದು. ಯಾರಿಗೆ ಸಂಶಯವಿದೆಯೋ ಅವರು ಬಂದು ಇವುಗಳನ್ನು ಪರೀಕ್ಷಿಸಬಹುದು. ಆಗ ನಿಜವಾಗಿಯೂ ಸತ್ಯವು ಕಲ್ಪನೆಯನ್ನು ಮೀರಿಸುವುದು ಎಂಬುದರ ಮನವರಿಕೆಯಾಗದಿರಲಾರದು.

ಕಾಲೇಜಿನಲ್ಲಿ ಓದುತ್ತಿದ್ದ ಒಂದೇ ಊರಿನ ನಾವೈದು ಜನ ಮಿತ್ರರು ಯಾವುದೋ ಒಂದು ರಜೆಯಲ್ಲಿ ಊರಿಗೆ ಹಿಂದಿರುಗುತ್ತಿದ್ದೆವು. ನಾವು ಕುಳಿತ ಡಬ್ಬಿಯಲ್ಲಿ ನಾವೈವರಲ್ಲದೆ ಬೇರೊಬ್ಬ ಮುದುಕನೂ ಇದ್ದನು. ಆ ಮುದುಕನಿಗೆ ಅದೇಕೆ ನಮಗೆ ಆ ಕತೆ ಹೇಳಬೇಕೆಂದು ತೋರಿತೋ ತಿಳಿಯದು. ಕೆಲವು ದಿನಗಳ ಹಿಂದೆ ನಡೆದೊಂದು ಕೊಲೆಯ ವಿಷಯ ನಾವು ಮಾತಾಡುತ್ತಿದ್ದೆವು. ಅಷ್ಟು ಹೊತ್ತು ಸುಮ್ಮನಿದ್ದ ಆ ಮುದುಕ ತಾನಾಗಿಯೇ 'ನಾನೊಂದು ಕಥೆ ಹೇಳಲೇ?' ಎಂದು ಕೇಳಿದ. ಮುದುಕ ಯೋಗ್ಯನಂತೆ ಬೇರೆ ತೋರುತ್ತಾನೆ ನಿಷ್ಠುರವಾಗಿ, 'ನಿನ್ನ ಕತೆ ಕೇಳಲು ಇಚ್ಛೆ ನಮಗಿಲ್ಲ' ಎಂದು ಬಿಡುವುದು ಹೇಗೆ? ಇಷ್ಟವಿಲ್ಲದಿದ್ದರೂ ಸಮ್ಮತಿ ಸೂಚಿಸಿದೆವು.

ಮುದುಕ ಹೆಚ್ಚಿನ ಮುನ್ನುಡಿ ಯಾವುದನ್ನೂ ಬೆಳೆಯಿಸದೆ ಹೇಳಲು ತೊಡಗಿದ:

"ಇದು ಮೂವತ್ತು ವರ್ಷಗಳ ಹಿಂದಿನ ಮಾತು. ನಾನೀಗ ಯಾರ ವಿಷಯವಾಗಿ ಹೇಳಬೇಕೆಂದಿರುವೆನೋ ಅವನಾಗ ಇಪ್ಪತ್ತೈದು ವರ್ಷ ಪ್ರಾಯದ ದಷ್ಟಪುಷ್ಟನಾದ ಯುವಕನಾಗಿದ್ದನು. ಬಲು ಚಿಕ್ಕಪ್ರಾಯದಲ್ಲೇ ತಂದೆತಾಯಿಗಳನ್ನು ಕಳೆದುಕೊಂಡು, ಬೇರೆಯವರ ಮನೆಯಲ್ಲಿ ಬೆಳೆದಿದ್ದ. ಎಷ್ಟಾದರೂ ಬೇರೆಯವರು ಹೊಟ್ಟೆ-ಬಟ್ಟೆಗೆ ಕೊಡುವುದೇ ಅವರಿಗೆ ಕಷ್ಟ. ಇನ್ನು ವಿದ್ಯೆಗೆಲ್ಲಿಂದ ಬರಬೇಕು ಹಣ! ಏನೋ ಅವನನ್ನು ಸಾಕಿದವನ ಹೆಂಡತಿ ಒಳ್ಳೆಯವಳು. ಅವಳ ದಯೆಯಿಂದ ಆತ ಸ್ವಲ್ಪ ಓದುಬರಹಗಳನ್ನು ಕಲಿತ; ಅಷ್ಟೇ ಅವನ ವಿದ್ಯಾಭ್ಯಾಸ. ಎಂಟು ವರ್ಷ ವಯಸ್ಸಾದಂದಿನಿಂದ ಅವನಿಗೆ ಆ ಮನೆಯವರ ಕೆಲಸ ಶುರುವಾಯ್ತು. ಮೊದಮೊದಲು ಕರುಗಳನ್ನು ಕಾಯುತ್ತಿದ್ದ. ದೊಡ್ಡವನಾಗುತ್ತ ಬಂದಂತೆ ಕೆಲಸಗಳೂ ಹೆಚ್ಚು ಹೆಚ್ಚಾಯ್ತು. ಆದರವನಿಗೆ ಕೆಲಸವೆಂದರೆ ಬೇಸರವಿಲ್ಲ. ಬೆಳಗಿನಿಂದ ರಾತ್ರಿಯವರೆಗೂ ದುಡಿಯುತ್ತಿದ್ದ. ಅವನಂಥ ನಂಬಿಕೆಯ

ಕಷ್ಟಗಾರನಾದ ಆಳು ಮತ್ತೆಲ್ಲಿ ದೊರೆಯಬೇಕು! ಅದೂ ಸಂಬಳವಿಲ್ಲದೆ!! ಮನೆಯವರಿಗೂ ಅವನೆಂದರೆ ವಿಶ್ವಾಸ - ಆದರ!

ಹೀಗೆ ದಿನಗಳೊಂದೊಂದಾಗಿ, ವರ್ಷಗಳು ಕಳೆದವು. ಅವನೂ ಬೆಳೆಯುತ್ತ ಬಂದ. ಕಷ್ಟದಿಂದ ಬೆಳೆದ ಆರು ಅಡಿ ಎತ್ತರದ ಗಟ್ಟಿಮುಟ್ಟು ಶರೀರ. ಆರೋಗ್ಯದಿಂದ ತುಂಬಿದ ಗಂಭೀರವಾದ ಮುಖ ಚಟುವಟಿಕೆಯಿಂದ ತುಂಬಿ ಮಿಂಚುತ್ತಿದ್ದ ಕಣ್ಣುಗಳು ಇವೆಲ್ಲಾ ಸೇರಿ, ಆ ಮನೆಯವರ ಹೊಲಗದ್ದೆಗಳಲ್ಲಿ ಕೆಲಸ ಮಾಡುವ ನೂರಾರು ಆಳುಗಳ ಮಧ್ಯದಲ್ಲಿದ್ದರೂ ಅವನನ್ನು ಎತ್ತಿ ಬೇರೆಯಾಗಿ ತೋರಿಸುತ್ತಿದ್ದವು.

ಹೊಲದಲ್ಲಿ ಕೆಲಸ ಮಾಡುತ್ತಿದ್ದರೂ ಅವನಿರುವುದು ಮೊದಲಿನಂತೆ ಅವನ ಮನೆಯಲ್ಲೇ ಊಟ, ತಿಂಡಿ, ಎಲ್ಲಾ ಅವರಿಗಾದಂತೆ ಇವನಿಗೂ ದೊರೆಯುತ್ತಿತ್ತು. ಹೊಲದಲ್ಲಿ ಕೆಲಸ ತೀರಿಸಿ, ದನಗಳನ್ನು ಹಟ್ಟಿಗೆ ಕೂಡಿಸಿ, ಹಾಲು ಕರೆದು, ಕರುಗಳನ್ನು ಬೇರೆಯಾಗಿ ಕಟ್ಟಿ ಹುಲ್ಲುಹಾಕಿ ಮನೆಗೆ ಬರುವಾಗ ದೀಪಹತ್ತಿಸುವ ಸಮಯವಾಗುತ್ತಿತ್ತು. ಆ ಕೆಲಸವೂ ಅವನಿಗೇ, ದೀಪ ಹತ್ತಿಸಿ ಆಯಿತು ಎಂದರೆ ಮನೆಯ ಚಿಕ್ಕಮಕ್ಕಳ ಕೈಕಾಲು ತೊಳೆಯಬೇಕು; ಇದು ಅವನ ದಿನಚರಿಯ ಕೆಲಸಗಳಲ್ಲಿ ಕೊನೆಯದು, ಇಷ್ಟಾಗುವಾಗ ಏಳುವರೆ ಗಂಟೆಯಾಗುತ್ತಿತ್ತು. ಕೈಕಾಲು ತೊಳೆದುಕೊಂಡ ಮಕ್ಕಳು ಓದುವುದಕ್ಕೆ ಕುಳಿತರೆಂದರೆ ಇವನೂ ಹೋಗಿ ಒಂದು ಮೂಲೆಯಲ್ಲಿ ಕುಳಿತು, ಆ ಮಕ್ಕಳ ಪುಸ್ತಕಗಳನ್ನು ತಿರುವಿಹಾಕುತ್ತಿದ್ದ. ಆದ್ದರಿಂದಲೇ ಚಿಕ್ಕಂದಿನಲ್ಲಿ ಕಲಿತ ಸ್ವಲ್ಪ ಓದುಬರಹ ಮರೆತಿರಲಿಲ್ಲ.

ಒಂಬತ್ತು ಗಂಟೆಗೆ ಅವನಿಗೆ ಊಟ ಸಿಕ್ಕುತ್ತಿತ್ತು. ಆಗ ಊಟ ಮಾಡಿ ಮಲಗಿದರೆ ಪುನಃ ಬೆಳಗಿನ ನಾಲ್ಕು ಗಂಟೆಗೆ ಎದ್ದು ಕೆಲಸಕ್ಕೆ ಪ್ರಾರಂಭ.

ಒಂದು ದಿನದಿಂದ ಇನ್ನೊಂದು ದಿನಕ್ಕೆ ವ್ಯತ್ಯಾಸವಿಲ್ಲದಂತೆ ಇದೇ ತರದ ಕಾರ್ಯಕ್ರಮ ಅವನ ಜೀವನದಲ್ಲಿ. ಆಗ ತನಗೀತರದ ಜೀವನದಲ್ಲಿ ತೃಪ್ತಿಯೋ, ಅತೃಪ್ತಿಯೋ ಎಂದು ಯೋಚಿಸಲೂ ಸಹ ಸಮಯವಿರಲ್ಲ. ಇದ್ದರೂ ಆ ತರದ ಯೋಚನೆ ಎಂದೂ ಅವನಲ್ಲಿ ಉಂಟಾಗಿರಲಿಲ್ಲ. ಅವನ ಈ ತರದ ಜೀವನದಲ್ಲಿ ಸ್ವಲ್ಪವಾಗಿ ಬಹುಶಃ ಅವನಿಗೆ ತಿಳಿಯದಂತೆಯೇ ಪರಿವರ್ತನಯಾಗತೊಡಗಿದಾಗ ಅವನಿಗೆ 24 ವರ್ಷದ ವಯಸ್ಸು ನಡೆಯುತ್ತಿತ್ತು.

ಆ ವರ್ಷ ಅವರ ಗದ್ದೆಯ ಕೆಲಸ ಬೇಗ ತೀರಿಹೋಗಿತ್ತು. ಆದ್ದರಿಂದ ಅವನಿಗೆ ಹಿಂದೆ ಎಂದೂ ದೊರೆಯದಷ್ಟು ವಿರಾಮ. ಮತ್ತೆ ಅದೇ ವರ್ಷ ಆ ಮನೆಯವರ ಹಳೆಯ ಮೇಸ್ತ್ರಿಯೂ ಸತ್ತುಹೋದುದರಿಂದ ಅವನಿಗೇ ಆ ಕೆಲಸವೂ ದೊರೆಯಿತು. ಈಗವನಿಗೆ ಬೇರೆಯವರಿಂದ ಕೆಲಸ ಮಾಡಿಸುವುದಲ್ಲದೆ ತಾನೇ ಮಾಡಬೇಕಾಗಿರಲಿಲ್ಲ. ಇದರ ಜೊತೆಗೆ ಹಿಂದಿನ ಮೇಸ್ತ್ರಿಗಿದ್ದಷ್ಟಲ್ಲದಿದ್ದರೂ ಸ್ವಲ್ಪ ಸಂಬಳ ಬೇರೆ ಸಿಕ್ಕತೊಡಗಿತು.

ಜೀವನದಲ್ಲಿ ಎಂದೂ ತನ್ನದೆಂಬ ಒಂದು ಬಿಡಿ ಕಾಸೂ ಇಲ್ಲದಿದ್ದ ಅವನಿಗೆ, ಅಷ್ಟರಿಂದಲೇ ತೃಪ್ತಿ-ಆನಂದ.

ಮೊದಲೇ ಹೇಳಿದೆನಲ್ಲ, ಆ ವರ್ಷ ಅವನ ಕೆಲಸ ಬೇಗ ತೀರಿತ್ತೆಂದು, ತಮ್ಮ ಕೆಲಸ ತೀರಿದ ಮೇಲೆ ನೆರೆಹೊರೆಯವರ ಗದ್ದೆಗಳಿಗೆ ಹೋಗಿ ಸಹಾಯ ಮಾಡುವುದು ಹಳ್ಳಿಯ ಕಡೆಗೆ ವಾಡಿಕೆ. ಈಗವನು ಮೇಸ್ತ್ರಿಯಾದರೂ ಪದ್ಧತಿಯಂತೆ ಬೇರೆಯವರ ಗದ್ದೆಗಳಿಗೆ ಹೋಗಿ ಸಹಾಯ ಮಾಡುವ ರೂಢಿಯನ್ನು ತಪ್ಪಿಸಲಿಲ್ಲ. ಯಾವಾಗಲೂ ನಾಲ್ಕಾರು ಆಳುಗಳೊಡನೆ ನೆರೆಯವರ ಗದ್ದೆಗೆ ಹೋಗುತ್ತಿದ್ದ.

ಜೋರಾಗಿ ಮಳೆ ಸುರಿಯುತ್ತಿದ್ದರೂ ನಡುಕವನ್ನು ಹುಟ್ಟಿಸುವ ಚಳಿ ಇದ್ದರೂ ತುಂಬ ಜನರೊಂದಿಗೆ ಗದ್ದೆಗಳಲ್ಲಿ ಕೆಲಸ ಮಾಡಲು ಒಂದು ತರಹ ಉತ್ಸಾಹವಿದೆ. ಪದಗಳನ್ನೂ ಹಾಡಿಕೊಳ್ಳುತ್ತ ಹರಟೆ ಕೊಚ್ಚುತ್ತ ಕೆಲಸಮಾಡುವಾಗ ದಣಿವೆಂದರೇನು? ಎಂಬುದೇ ಮರೆತು ಹೋಗುತ್ತೆ, ನಾಟಿ ಕೆಲಸ ಮತ್ತು ಕೊಯ್ಲು ಕೆಲಸಗಳ ಸಮಯದಲ್ಲಿ ಗದ್ದೆಗಳಲ್ಲಿ ಕೆಲಸಮಾಡಲು ಬೇಸರವಿಲ್ಲ. ಅವನಂತೂ ಎಂದೂ ಮೈಗಳ್ಳನಾಗಿ ಕೂತವನಲ್ಲ. ಕೆಲಸವೆಂದರೆ ಅವನಿಗೆ ಆಟ ; ಅವನೊಡನೆ ಕೆಲಸ ಮಾಡುವುದೆಂದರೆ ಇತರರಿಗೂ ಉತ್ಸಾಹ, ಗದ್ದೆಗಳಲ್ಲಿ ಗಂಡಸರೂ, ಹೆಂಗಸರೂ ಒಂದುಗೂಡಿ ಕೆಲಸ ಮಾಡುತ್ತಿರುವುದು ವಾಡಿಕೆ. ನಾಟಿ ಸಮಯದಲ್ಲಿ (ಸಸಿಗಳನ್ನು ನೆಡುವಾಗ) ಅಗೆ ತೆಗೆದು ಕಂತೆ ಕಟ್ಟುವರು. ಗಂಡಸರು ಅವರು ತೆಗೆದ ಅಗೆಗಳನ್ನು ನೆಡುವುದು ಎಂದು ಪೈಪೋಟಿ ಬೇರೆ, ನಾಟಿ ನೆಡುವುದರಲ್ಲಿ ಅವನನ್ನು ಮೀರಿಸುವವರಿಲ್ಲ. ಆ ದಿನ ಅವನು ನೆಡುವಷ್ಟು ಚುರುಕಾಗಿ ಅವನಿಗೆ ಅಗೆ ಒದಗಿಸಿದರೆ ಆ ಅವಳೇ ಅವನ ಜೀವನವನ್ನು ಸಂಪೂರ್ಣವಾಗಿ ಪರಿರ್ತನೆಗೊಳಿಸಿದಾಕೆ. ಜಾತಿಯಿಂದವಳು ಮುಸಲ್ಮಾನರವಳು.

ಪ್ರೇಮಕ್ಕೆ ಜಾತಿ ಕುಲಗಳನ್ನು ಕಟ್ಟಿಕೊಂಡು ಮಾಡಬೇಕಾದುದೇನು? ಅದು ಕುರುಡು, ಅದರಲ್ಲೂ ನಿಜವಾದ ಪ್ರೇಮವಾದರೆ ಅದರ ಹಾದಿ ಎಂದೆಂದಿಗೂ ನಿಷ್ಕಂಟಕವಲ್ಲ.

ಮಳೆ ಬಿಸಿಲೆನ್ನದೆ ಸದಾ ದುಡಿತದಿಂದ ಬಣ್ಣ ಸ್ವಲ್ಪ ಕಪ್ಪಾದರೂ ಸೊಗಸಾದ ಮೈಕಟ್ಟು ತುಂಬಿದ ಅಗಲವಾದ ಮುಖ. ಆ ಮುಖದಲ್ಲಿ ಹರಿಯುವ ನಗು. ನಗುವಿನಿಂದರಳಿದ ಕಣ್ಣುಗಳು. ಮತ್ತೆ ಆ ಕೆಲಸದಲ್ಲಿಯ ಉತ್ಸಾಹ - ಇವೆಲ್ಲವನ್ನೂ ನೋಡಿದವರು 'ಯಾವ ಜಾತಿಯಲ್ಲಾದರೂ ಲತೀಫಾಳಂಥ ಹುಡುಗಿಯರು ಬಲು ಕಮ್ಮಿ' ಎಂದು ಒಪ್ಪಿಕೊಳ್ಳಬೇಕಾಗುವಂತಿದ್ದಳು... ಅವನ ಮನವನ್ನು ಕದ್ದ ಆ ಮುಸಲ್ಮಾನರ ಹುಡುಗಿ ಲತೀಫಾ.

ಅದೇ ಅವರ ಮೊಟ್ಟ ಮೊದಲಿನ ಪರಿಚಯ ಇಲ್ಲಿ ಇಷ್ಟು ಹೇಳಿದರೆ ಸಾಕು. ಅವರ ಪ್ರಣಯವು ಹೇಗೆ ಮುಂದುವರಿಯಿತು ಎನ್ನುವ ಅವಶ್ಯಕತೆಯಿಲ್ಲ.

ಅವನಿಗೆ ತನ್ನವರೆಂಬುವರು ಯಾರೂ ಇಲ್ಲ. ಅವಳಿಗೆ ತಾಯಿ ಇದ್ದರೂ ಅವಳು ಇನ್ನೊಬ್ಬನನ್ನು ಮದುವೆಯಾಗಿದ್ದಳು. ಆ ಮದುವೆಯಿಂದ ಮಕ್ಕಳೂ ಇದ್ದರು. ಚಿಕ್ಕಪ್ಪನ ಮನೆಯಲ್ಲಿ ಇವಳ ಜೀವನವೇನೂ ಸುಖಮಯವಲ್ಲ. ಮತ್ತೆ ನೆರೆಹೊರೆಯ ಹೊಲಗದ್ದೆಗಳಲ್ಲಿ ಕೆಲಸ ಮಾಡುವವರಿಗೆ ಒಬ್ಬರನ್ನೊಬ್ಬರು ನೋಡುವುದೂ

ಕಷ್ಟವಾದ ಮಾತಲ್ಲ. ಅಂತೂ ಆರೇಳು ತಿಂಗಳುಗಳಾಗುವಾಗ ಅವನು ಅವಳಿಗಾಗಿ ತನ್ನ ಜಾತಿಯನ್ನು ಬಿಡಲು ಸಹ ತಯಾರಾಗಿದ್ದ. ಅವಳು! ಅವನಿಗಾಗಿ ತನ್ನ ಜೀವನವನ್ನೇ ಧಾರೆ ಎರೆಯಲು ಸಿದ್ಧಳಾಗಿದ್ದಳು.



ಆದರೆ ಈ ಲೋಕದಲ್ಲಿ ಈ ತೆರದ ಪ್ರೇಮಕ್ಕೆ ಎಡೆ ಎಲ್ಲಿ? ಅವಳ ಚಿಕ್ಕಪ್ಪ ಒಂದು ದಿನ ಇವರಿಬ್ಬರು ಮಾತನಾಡುತ್ತಿರುವುದನ್ನು ನೋಡಿದ ; ಅಂದೇ ಅವನಿಗೆ ಸಂಶಯವಾಯ್ತು. ಬೇಗ ಲತೀಫಾಳ ಮದುವೆ ಮಾಡಿಬಿಡಬೇಕೆಂದು ಆಗಲೇ ನಿಶ್ಚಯಿಸಿದ. ಅವಳಂತಹ ಹುಡುಗಿಯರನ್ನು ಮದುವೆಯಾಗಲು ಯಾರು ತಾನೇ ಒಪ್ಪರು?

ತನ್ನ ಹೆಂಡತಿಯನ್ನು ಒಂದು ತಿಂಗಳ ಹಿಂದೆ ಕಳೆದುಕೊಂಡು - ಮಕ್ಕಳೊಂದಿಗನಾದ ನೆರೆಮನೆಯ ಮುಸಲ್ಮಾನರೊಬ್ಬನು ತಯಾರಾಗಿಯೇ ಇದ್ದ ಲತೀಫಳ ಚಿಕ್ಕಪ್ಪ ಅವನಿಂದ ನೂರು ರೂಪಾಯಿಗಳನ್ನು ಪಡೆದುಕೊಂಡು ಅವನಿಗವಳನ್ನು ಕೊಡಲೊಪ್ಪಿದ. ಈ ಸಂಬಂಧದಲ್ಲಿ ಲತೀಫಾಳ ಇಷ್ಟಾನಿಷ್ಟಗಳನ್ನು ಕೇಳುವಂತಿರಲಿಲ್ಲ. ಅವಳಿಗೂ ಅದು ಚೆನ್ನಾಗಿ ಗೊತ್ತಿತ್ತು. ಅವನ ಹತ್ತಿರ ಹೋಗಿ ಹೇಳುವುದೊಂದೇ ಅವಳಿಗೆ ತೋರಿದ ಉಪಾಯ. ಆದರೆ, ಅವಳು ಮನೆಬಿಟ್ಟು ಹೊರಗೆ ಹೋಗದಂತೆ ಎಚ್ಚರವಾಗಿದ್ದ ಅವಳ ಚಿಕ್ಕಪ್ಪ.

ಆ ದಿನ ಅವನು ಎಂದಿನಂತೆ ಅವಳನ್ನು ಕಾದ. ಗಂಟೆ ಏಳಾದರೂ ಅವಳ ಸುಳಿವಿಲ್ಲ. ಅವಳನ್ನು ನೋಡದೆ ಅವನಿಗೆ ಸಮಾಧಾನವಿಲ್ಲದಿದ್ದರೂ, ಕತ್ತಲಾಗುತ್ತ ಬಂದುದರಿಂದ ಯಜಮಾನನ ಮನೆಗೆ ಹೋಗಿ ದೀಪ ಹತ್ತಿಸದೆ ಉಪಾಯವಿರಲಿಲ್ಲ. ಮನಸ್ಸನ್ನು ಅವಳೆಡೆಗೆ ಕಳುಹಿಸಿ ಅವನು ಮನೆಗೆ ಬಂದ.

ಮರುದಿನ ಎಂದಿಗಿಂತಲೂ ಒಂದು ಗಂಟೆ ಮೊದಲೇ ಎದ್ದ. ಬೆಳಗಿನ ಕೆಲಸಗಳನ್ನೆಲ್ಲಾ ಬೇಗ ಬೇಗ ತೀರಿಸಿ, ಎಲ್ಲರೂ ಕಾಫಿ ಕುಡಿಯುತ್ತಿರುವ ಸಮಯ ನೋಡಿ, ಅವಳ ಮನೆಗೆ ಹೊರಟ. ಅವಳು ಹಟ್ಟಿಯಲ್ಲಿ ಹಾಲು ಕರೆಯುತ್ತಿದ್ದಳು. ಇವನು ದೂರದಲ್ಲಿ ಬರುವುದನ್ನು ನೋಡಿ, ಹಾಲಿನ ತಂಬಿಗೆಯನ್ನು ಅಲ್ಲೇ ಇಟ್ಟು ಅವನೆಡೆಗೆ ಓಡುತ್ತಾ ಹೋದಳು.

ಅವಳು ತನ್ನ ದುಃಖವನ್ನೆಲ್ಲಾ ತೋಡಿಕೊಳ್ಳುತ್ತಿರುವಾಗ ಅವನು ದಿಕ್ಕು ತೋರದೆ ನಿಶ್ಚಲವಾಗಿ ನಿಂತಿದ್ದ. ಅವಳಂತೂ ಒಂದೇ ಸಮನೆ ನಿನ್ನನ್ನು ಬಿಟ್ಟು ನಾನು ಇರಲಾರೆ; ನಿನ್ನ ಕೈಯಿಂದಲೇ ನನ್ನ ಕೊಂದುಬಿಡು' ಎಂದು ಅಳುತ್ತಿದ್ದಳು. ಅವನಿಗೆ ಬುದ್ಧಿ ಇತ್ತೋ ಇಲ್ಲವೋ ಎಂದು ನಾನೀಗ ಹೇಳಲಾರೆ. ಆದರೆ ಅವನಂತೆ ನಾನವಳನ್ನು ಪ್ರೀತಿಸಿ, ಅವಳನ್ನು ಇನ್ನೊಬ್ಬನ ಪಾಲಿಗೆ ಒಪ್ಪಿಸುವ ಪ್ರಸಂಗ ಬಂದಿದ್ದರೆ ನಾನೂ ಅವನು ಮಾಡಿದಂತೆಯೇ

ಮಾಡುತ್ತಿದ್ದನೇನೋ ನಿಜ. ಅವನಿಗೆ ಹಿತಾಹಿತಗಳನ್ನು ವಿವೇಚಿಸುವ ಶಕ್ತಿಯಿರಲಿಲ್ಲ. ಅವಳನ್ನು ಕರೆದುಕೊಂಡು ಎಲ್ಲಾದರೂ ಹೊರಟು ಹೋಗಬಹುದಿತ್ತು. ಆದರೆ ಆ ತರದ ಯೋಚನೆಗೆ ಎಡೆಮಾಡತಕ್ಕ ಮನುಷ್ಯನಾಗಿರಲಿಲ್ಲ ಅವನು. ಅವಳನ್ನು ಮದುವೆಯಾಗದೆ ಕಳ್ಳನಂತೆ ಕರೆದುಕೊಂಡು ಹೋಗುವುದು ಅವನಿಗೆ ಒಪ್ಪಿಗೆ ಇಲ್ಲ. ಮತ್ತೆ ಆ ಸಮಯದಲ್ಲಿ ಅಷ್ಟೊಂದು ಯೋಚಿಸುವಂತೆಯೂ ಇರಲಿಲ್ಲ ಅವನ ಮನಸು.

ಏನು ತೋರಿತೋ! ತನ್ನ ಕಾಲುಗಳನ್ನು ಹಿಡಿದುಕೊಂಡು ನನ್ನನ್ನು ಕೊಂದು ಬಿಡು' ಎನ್ನುತ್ತಿದ್ದ ಅವಳನ್ನು ಹಿಡಿದೆತ್ತಿ - ಕಣ್ಣೀರಿನಿಂದ ತೋಯ್ದ ಮುಖವನ್ನು



ಒರೆಸಿ, ಅವಳ ಅಗಲವಾದ ಹಣೆಗೆ ಭಕ್ತಿಯಿಂದ ಮುತ್ತಿಟ್ಟು ಅಳಬೇಡ ಲತಿ, ನಾವಿಬ್ಬರೂ ಜೊತೆಯಾಗಿ ಹೋಗೋಣ. ನನ್ನೊಡನೆ ಬರಲು ನಿನಗೆ ಬೇಸರವಿಲ್ಲ ತಾನೆ?' ಎಂದು ಕೇಳಿದ.

ತಿರುಗಿ ಅವಳವನ ಕಾಲುಗಳನ್ನು ಹಿಡಿದು - 'ಅವನ ಕೈ ಹಿಡಿದು ಬಾಳುವುದಕ್ಕಿಂತ ನಿನ್ನ ಕೈಯಿಂದ ನನಗೆ ಸಾವೇ ಹಿತ. ನನ್ನನ್ನು ಕೊಂದುಬಿಡು' ಎಂದಳು.

ಪುನಃ ಅವಳನ್ನು ಹಿಡಿದೆತ್ತಿ, ಅವಳ ಮುಖವನ್ನು ಎರಡು ಕೈಗಳಿಂದಲೂ ಹಿಡಿದು, ಅವಳ ಶಾಂತ ಗಂಭೀರ ನಯನಗಳಲ್ಲಿ ತನ್ನ ಪ್ರತಿಬಿಂಬವನ್ನು ನೋಡಿದ. ಮತ್ತೆ ತಯಾರಾದೆಯಾ ಲತಿ' ಎಂದ. ಅರೆಗಳಿಗೆಯ ಹಿಂದೆ ಅಳುವಿನಿಂದ ಕಳೆಗುಂದಿದ್ದ ಮುಖ ನಗುವಿನಿಂದ ಅರಳಿತು. ಅವನನ್ನೇ ತದೇಕ ದೃಷ್ಟಿಯಿಂದ ನೋಡುತ್ತ 'ಹೂಂ' ಎಂದವು ಅವಳ ಕಣ್ಣುಗಳು. ಅವಳ ಕಣ್ಣುಗಳಲ್ಲಿ ಆ ಮೂಕ ಅನುಮತಿಯನ್ನು ಓದಿ ಆತ ತಡೆಯಲಾರದೆ ಹೋದ. ಹತ್ತಿರ ಸೆಳೆದು ಅವಳ ಮುಖವನ್ನು ತನ್ನೆದೆಯಲ್ಲಿ ಅನಿಸಿಕೊಂಡ. ಮತ್ತೆ ಒಂದೇ ಒಂದು ಕ್ಷಣದಲ್ಲಿ ಅವನ ಸೆಳೆತವು ಸಡಿಲಾದಾಗ ಅವಳು ಶವವಾಗಿದ್ದಳು. ಅವಳ ಬೆನ್ನಿನಿಂದಾಗಿ ಎದೆಯಲ್ಲಿ ಹೊರಟ ಅವನ ಚೂರಿ ಅವಳ ಶರೀರದಲ್ಲಿತ್ತು. ಒಂದರೆಕ್ಷಣದ ಮೊದಲು ಅರಳಿ ಅವಳ ಮುಖವನ್ನು ಬೆಳಗಿಸಿದ್ದ ನಗುವೂ, ಆ ಕಣ್ಣುಗಳ ಶಾಂತ ನೋಟವೂ ಹಾಗೆಯೇ ಇದ್ದವು.

ಆದರವನಿಗದೊಂದೂ ಕಾಣದು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಶರೀರ ಅವನಿಗೆ ಕಾಣಿಸಲಿಲ್ಲ. ಜಾತಿ ಬಂಧನದ ಆಚೆ ನಿಂತು ಮುಗುಳು ನಗು ನಗುತ್ತ ತನ್ನನ್ನೇ ಕೂಗುತ್ತಿದ್ದ ಅವಳೆಡೆಗೆ ಸೇರಲು ಹತ್ತಿರದಲ್ಲೇ ಇದ್ದ ಬಾವಿಗೆ ಹಾರಿದ.

ಬಾವಿಗೆ ಹಾರಿದ – ಸತ್ತು ಅವಳೆಡೆಯನ್ನು ಸೇರುವ ಸಲುವಾಗಿ ; ಆದರೆ ಅವನು ಸಾಯಲಿಲ್ಲ - ಸಾಯಲಿಲ್ಲ...”

ಮುದುಕ ಇಷ್ಟು ಹೇಳಿ ಸ್ವಲ್ಪ ಹೊತ್ತು ಸುಮ್ಮನಾದ. ಕತೆ ಕೇಳುವ ಮೊದಲು ಏನೋ ಎಂತಿದ್ದ ನಾವು, ಕೇಳಿ ಈಗ ಅಳುವಂತಾಗಿ ಹೋಗಿದ್ದೆವು. ನಮ್ಮ ಕಣ್ಣೀರು ನೋಡಿ ಮುದುಕನೇನೆಂದುಕೊಳ್ಳುವನೋ ಎಂದು ಮುಖ ಮರೆಮಾಡಿ ಕಣ್ಣೆರೆಸಿ ಕೊಂಡೆವು. ಆದರೆ ಮುದುಕ ನಮ್ಮ ಕಡೆ ನೋಡುತ್ತಿರಲಿಲ್ಲ. ಶೂನ್ಯವನ್ನು ನಿಟ್ಟಿಸುತ್ತಿದ್ದ. ಅವನ ಕಣ್ಣುಗಳಲ್ಲಿ ವೇದನೆ ತುಂಬಿತ್ತು. ಬಹುಶಃ ಕತೆಯ ಅವನು ಮುದುಕನ ಸಂಬಂಧಿಯೋ ಏನೋ ಎನ್ನಿಸಿತು - ನಮಗವನ ಮುಖನೋಡಿ. ಅವನ ಅವಸ್ಥೆ ಏನಾಯಿತು? ಎಂದು ನಮಗೆಲ್ಲಾ ಕುತೂಹಲವಿದ್ದರೂ ಮುದುಕ ತಾನಾಗಿ ಪುನಃ ಪ್ರಾರಂಭಿಸುವ ತನಕ ಸುಮ್ಮನಿದ್ದೆವು.

ತಾನಾಗಿಯೇ ಮುದುಕ ಸ್ವಲ್ಪ ಹೊತ್ತಿನ ತರುವಾಯ ಮುಂದುವರಿಸಿದ :

“ಅವಳ ಚಿಕ್ಕಪ್ಪ ಅವಳೇಕೆ ಇನ್ನೂ ಬಂದಿಲ್ಲ ಎಂದು ನೋಡಲು ಬಂದವನು, ಅವನು ಬಾವಿಗೆ ಹಾರುವುದನ್ನು ನೋಡಿ ಎತ್ತಿ ಹಾಕಿದ. ಕ್ರಮಪ್ರಕಾರವಾಗಿ ಕೋರ್ಟಿನಲ್ಲಿ ವ್ಯಾಜ್ಯವೂ ಆಯಿತು. ಆದರೆ, ಅದೊಂದೂ ಅವನಿಗೆ ತಿಳಿಯದು. ಅವನಿಗೆ ಹುಚ್ಚೆಂದು ಜನರು ಹೇಳುತ್ತಿದ್ದರು. ಹುಚ್ಚೆಂದೇ ಅವನಿಗೆ ಫಾಸಿಯಾಗಲಿಲ್ಲ. ಆಗಿದ್ದರೆ

ಹೋಗಿಯೇ ಬಿಟ್ಟಿದ್ದ!



ಒಳ್ಳೆಯದಾಗುತ್ತಿತ್ತು. ಬಾವಿಯಲ್ಲಿ ಬಿದ್ದು ಅವಳ ಹತ್ತಿರ ಹೋಗಲಾಗದಿದ್ದರೆ ಫಾಸಿಯಾದರೂ ಅವಳ ಹತ್ತಿರ ಒಯ್ಯಬಹುದೆಂದು ಅವನೆಣಿಸಿದ್ದ ; ಪಾಪಿ ! ಅಷ್ಟೊಂದು ಭಾಗ್ಯವು ಅವನಿಗೆಲ್ಲಿ !!

“ಹುಚ್ಚನಲ್ಲದಿದ್ದರೂ ಹುಚ್ಚವೆನಿಸಿಕೊಂಡು ಮುವ್ವತ್ತು ವರ್ಷ ಹುಚ್ಚರ ಆಸ್ಪತ್ರೆಯಲ್ಲಿ ಕಳೆದ. ಮುವ್ವತ್ತು ವರ್ಷ ಹೇಗೆ ಕಳೆದ? ಎಂದು ಕೇಳಬೇಡಿ. ಹೇಗೆ ಕಳೆದ ಎಂದು ಹೇಳಬೇಕಾದರೆ ಹುಚ್ಚಿಲ್ಲದವರಿಗೂ ಹುಚ್ಚು ಹಿಡಿದೀತು. ಅಂತೂ ಕಳೆದ – ಅವಳ ಹತ್ತಿರ ಹೋಗುವುದೇ ಜೀವನದ ಹಂಬಲವಾದರೂ ಹೋಗಲು ದಾರಿ ತೋರದೆ, ಹುಚ್ಚರ ಮಧ್ಯದಲ್ಲಿ ಹುಚ್ಚರಿಗಿಂತಲೂ ಹುಚ್ಚನಾಗಿ ಕಳೆದ. ಮುವ್ವತ್ತು ವರ್ಷಗಳ ತರುವಾಯ ಒಂದು ದಿನ ಅವನ ಬಿಡುಗಡೆಯಾಯಿತು “ಬಿಡುಗಡೆಯಾಯಿತು ಇನ್ನೇನು ಹೋಗಬಹುದಲ್ಲ ' ಎಂದು ನೀವು ಹೇಳಬಹುದು. ಹೌದು ಹೋಗಬಹುದು. ಇದೋ ಹೊರಟೆ ಹೋಗುತ್ತೇನೆ....”

ಇದೇನು! ಕತೆ ಹೇಳುತ್ತ ಹೇಳುತ್ತ ಇವನಿಗೇ ಹುಚ್ಚು ಹಿಡಿಯಿತೇ ಎಂದು ನಾವು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. ಮತ್ತೆ ಅವನ ಮುಖವನ್ನು ನೋಡುವುದರೊಳಗೆ, ಅವನು ಮಿಂಚಿನ ವೇಗದಿಂದ, ಹೋಗುತ್ತಿದ್ದ ಆ ರೈಲ ಕಿಟಕಿಯಿಂದ ಕೆಳಗೆ ಹಾರಿಬಿಟ್ಟಿದ್ದ.

ದಿಟ್ಮೂಡರಾದ ನಾವು ಸರಪಳಿಯನ್ನೆಳೆದು ರೈಲನ್ನು ನಿಲ್ಲಿಸಿದೆವು.

ಆದರೆ, ಈ ಸಾರಿ ಮುವ್ವತ್ತು ವರ್ಷಗಳಿಂದ ದಾರಿ ಕಾಯುತ್ತಿದ್ದ ಲತೀಫಾಳೆಡೆಗೆ ಅವನು ಹೋಗಿಯೇ ಬಿಟ್ಟಿದ್ದ.

## ಕಂತಿಯ ದೇಶಾಂತರ

- ಶ್ಯಾಮಲದೇವಿ ಬೆಳಗಾಂವಕರ್

"ಅಯ್ಯೋ ಶಿವನೇ, ಎನ್ ನನ್ನ ಬಾಳಿವೀ ಮಾಡಿದಿದ್ದ ಶ್ಯಾಮಲಾದೇವಿ ಬೆಳಗಾಂವಕರ ಮನ್ಯಾಗ ಅರಿಗಿಣಿ ಅಂತಾ ಎರಡು ಮಕ್ಕಳನ್ನು ಇಟಗೊಂದು ದುಡಿದು ತಿಂದೇನಂದ್ರೂ ಜೀವಕ ಸುಕಾ ಇಲ್ಲಾ. ಮದಿವ್ಯಾಗಿ ಇವನ ಕೈಯ್ಯಾಗ ಉರಿಲಾಕ ಹತ್ತಿ ಅರ ವಷ್ಯಾತ್- ಮದಮದಲ ಆಟ ದುಡೀತಿದ್ದಾ-ಈಗ ಐದು ವರ್ಸದಿಂದೂ ಆಚೇ ಕಡ್ಡಿನ ಇಚಿಗೆ ಹಾಕಾಂತೆಲ್ಲಾ ಸುಮಾಗ ಕುಂತ ತಿನ್ನಂದ್ರ ಅದೂ ಬ್ಯಾಡಾ... ನಾ ದುಡದ ತಂದದ್ದನ್ನ ಎಲ್ಲಾ ಕಸಗೊಂಡ ಕ್ಯಾರಾ. ಹೆಂಡಾ ಕುಡದು ಜೋಲಿ ಹೊಡಕೊಂಡ ಬರಾನ. ಮತ್ತೆ ಮನ್ಯಾಗ ರೋಟ್ಟಿಲ್ಲಾಂತ ನನ್ನಟ ತಳಸ್ತಾನ, ಹೀಗಾಗಿ ಯಾಪಾರಗಾರ ಲೆಕ್ಕಾಚಾರ ಕೊಡೂದೂನು ನಿಂತ ಹೋಗಾಕತ್ತೂ ಉಪಾಸಾ ವನರಾಸಾನೂ ಆತೂ ಅಂತೇಳಿ ನಾ ಆಟ ಇಗ್ಲೀ ಮಾಡೀ ಸಾವಕಾರಗ ಮದಲ ಆಟ ನದೀ ಮ್ಯಾಗ ಆಳ ಕಳಸಪಾ ಅಂತ ಸೂಚ ಕೊಟವೋಗಿದ್ದೆ- ಇಂದ ಆಟ ಯಾಪಾರಾನೂ ಉಣ್ಣಿವೆಂತ ಚಲೋ ಅತೂ ಅಂತ, ಇಟ ಸಾಲಾನಾರ ಸವೀತೂ ಮಕ್ಕಳಿಗೇನೂ ಅಲ್ಲೇ ತಿನಿಸಿಗೊಂಡ ಬಂಂತ ಬೇಶಾತೂ ನಂದೇನು ಮೂಳಿ ಜಲಮಾ ಹಾ ಅಯ್ಯೋ ಮೈಯ್ಯ ನೋವ ಅಪ್ಪಾ ಶಿವನೇ... ಸಾವಕಾರ. ಸಾಲಾ ಮುಟ್ಟಿಸಿದ್ದೂ ನಂ ತಪ್ಪಾತೇನೋ ಎಪ್ಪಾ? ಅಂದಲ್ಲೇ ಶಿಂದಿಗೆ ರೊಕ್ಕಿಲ್ಲಾ ಅಂತ ಮಾರಾಯ ಮಾಡಿಕೊಂಡಾಂವಾ ಮೈಮುರಿ ತಳಿ ಸಿದ್ದಾ ರೊಟ್ಟಿಲ್ಲದ ಸಾರ ಬರಲೀ ನನಗ ಶಿವನೇ... ಮಕ್ಕಳನ್ನ ಕಟಗೊಂಡು ಈ ಎಮನ ಕೈಯಾಂದ ಪಾರಾಗಿ ಹೊರಬೀಳಬೇಕಂತ ಐಸ ಬಾರಿ ಇಚಾರಾ ಹಾಕ್ತಿನಿ. ಇಂದಿಲ್ಲಾ ನಾಳೆ ಸುಧಾರಿಸ್ಯಾನು ಅಂದ್ರ..ಅಗಾಣಿಲ್ಲಾ... ತೆಲಿಗೆ ಎಣ್ಣೆಲ್ಲಾ ಮೈಗೆ.. ನೀರಿಲ್ಲಾ... ಮಕ್ಕಳಿಗೆ ಅರಿಬಿ ಇಲ್ಲಾ.. ಗಾಳೀ... ಮಳೀ..ಚಳೀ ಅನ್ನದ ದುಡತಾ ತೆಪ್ಪಿಲ್ಲಾ . ಬ್ಯಾಡಪಾ ಪರಮೇಸುರಾ! ಇಂದ ಹುಣಿವೀ ಚಂದರಾಮನ ಸಾಕ್ಷಾಗಿ ಹೊಂಡತೇನಿ... ಇಕಾ... ಮಾದೇವಾ... ಎಲ್ಲಿದ್ದಲ್ಲಿ ಆಂವ ಸುಕದಿಂದಿರ್ಲಿ... ನನ್ನ ಕುಂಕುಮಕಟ ಆಶೇವಾಗಿಲಿ..." ಎಚ್ಚರದಪ್ಪಿ ಬಿದ್ದಿದ್ದ ಗಂಡನನ್ನು ಕತ್ತಲೆಯಲ್ಲಿಯೇ ವಂದಿಸಿದಳು. ಒಲೆಯ ಮೇಲೆ ಹಾಗೇ ಬಿದ್ದಿದ್ದ ಅರರಲ್ಲಿ ನಾಲ್ಕು ರೊಟ್ಟಿಗಳನ್ನು ಎತ್ತಿ ತಟ್ಟೆಯಲ್ಲಿಟ್ಟು ಒಂದೆರಡು ನೀರಿನ ಮಗಿಗಳನ್ನೂ ಮಕ್ಕಳ ಒಂದೆರಡು ಹರಕು ಅಂಗಿಗಳನ್ನೂ ಎರಡುಮೂರು ಚಿಂದಿಗಳನ್ನೂ ತೆಗೆದುಕೊಂಡು ಒಲೆಯ ಹಿಂದೆ ಬಚ್ಚಿಟ್ಟಿದ್ದ ೮-೧೦ ಆಣೆ ರೊಕ್ಕಗಳನ್ನು ಲುಂಗಿಗೆ ಸಿಕ್ಕಿಸಿ, ಸಣ್ಣ ಮಗುವನ್ನು ಬೆನ್ನಿಗೆ ಕಟ್ಟಿಕೊಂಡು, ದೊಡ್ಡ ಮಗನನ್ನು ಬೆನ್ನಿಗೆ ಹಚ್ಚಿಕೊಂಡು, ಆ ಹುಣ್ಣಿಮೆಯ ತುಂಬಿದ ಸರಿರಾತ್ರಿಯಲ್ಲಿ

ಸದ್ಧಡಗಿದಾಗ, ಮನೆಬಿಟ್ಟು ಹೊರಬಿದ್ದಾಳಾಕೆ. ತಾನು ಹೊರಟದ್ದು ಎಲ್ಲಿಗೆ ಎಂಬ ಅರಿವಿಲ್ಲ ಅವಳಿಗೆ, ಮೈ ಮೇಲೆಲ್ಲ ಅಲ್ಲಲ್ಲಿ ಬಾಸುಳುಗಳೆದ್ದಿವೆ. ನೆತ್ತರು ಸೋರುತ್ತಿದೆ. ಉಟ್ಟ ಹರಕ ಲುಂಗಿ, ಎದೆಯ ಮೇಲೆ ತೊಟ್ಟಿದ್ದ ಒಂದು ಹೊರೆ ಕರಿಮಣಿಗಳು, ನೆತ್ತಿಗೆಣ್ಣೆ ನೀರಿಲ್ಲದೆ ಜಡೆ ಗಟ್ಟಿ ಬಿಗಿದಿದ್ದ ಕೂದಲು ಸಿಂಬೆ,ಹಣೆಗೊಂದು ಬೊಟ್ಟು ಕುಂಕುಮ ಅದು ಸಹ ಕಣ್ಣೀರು ನೆತ್ತರುಗಳ ಹನಿಗಳಿಂದೊಡಗೂಡಿ ಮುಖದ ಮೇಲುದುರುತ್ತಿದೆ.. ಬಾಡಿ ಬಡವಾಗಿದ್ದ ಅವಳ ಕೈಗಳಲ್ಲಿ ನಾಲ್ಕು ತವರದ ಕಡಗಗಳು, ಈ ಅಲಂಕಾರದೊಂದಿಗೆ ಆ ಬೆಳದಿಂಗಳ ಮಧ್ಯರಾತ್ರಿಯಲ್ಲಿ ಕಾಡುಮೃಗಗಳ ಹೆದರಿಕೆಯಿಲ್ಲದೆ, ಮುತ್ತಿನಂಥವರೆಡು ಗಂಡು ಮಕ್ಕಳನ್ನು ಕಟ್ಟಿಕೊಂಡು ಬೇಗ ಬೇಗ ಊರು ದಾಟತೊಡಗಿದಳು... ಅವಳ ಮೈಯ್ಯ ನೋವು, ಮನದ ದುಃಖ ಎಲ್ಲವೂ ಮಾಯವಾಗಿದ್ದವು. ಹೋಗು ಹೋಗುತ್ತ ಹುಲಿರಾಯನ ಗುಡಿಯಲ್ಲಿ ಹೊಕ್ಕು. ಅವನಿಗಷ್ಟು ವಂದಿಸಿ, ಬಾಲದ ಕಲ್ಲು ಬಡೆದ ಹೊದರಿನಲ್ಲಿಟ್ಟ ೮-೧೦ ಆಣೆಗಳನ್ನು ತೆಗೆದುಕೊಂಡು ಎಪ್ಪಾ ಹುಲೀ ರಾಜಾ ಮಕ್ಕಳು ನನ್ನವಲ್ಲಾ ನಿನ್ನವೂ ಎನ್ನುತ್ತ ಊರು ದಾಟುವವರೆಗೆ ಅಡ್ಡ ದಾರಿ ಹಿಡಿಯೋಣವೆಂದು ಗದ್ದೆಗಳ ಬದುವಿನಗುಂಟಿ ಮುಂದೆ ಸಾಗಿದಳು.

ಗೋಕರ್ಣಕ್ಕೆ ಹೋಗುವ ದಾರಿಗೆ ಹೊಂದಿ ಘಟ್ಟದ ಅಂಚೆಗಿದ್ದ ಒಂದು ಚಿಕ್ಕ ಹಳ್ಳಿಯಲ್ಲಿ ಕಂತೆವ್ವ ತನ್ನ ತಿಂದಿಗುಡುಕ ಗಾಂಜಾಬಡಕ ಗಂಡನೊಂದಿಗೆ ಇದ್ದದ್ದು. ಅವರ ನಾಯಕ ಮಕ್ಕಳ ಜಾತಿಯವರಂತೆ, ನಾಯಕ ಮಕ್ಕಳೆಂದರೆ ತಾವು ಪಾಂಡವರ ವಂಶಜರೆಂದು ಹೇಳಿಕೊಳ್ಳುತ್ತಾರೆ. ಅವಳ ಹೆಸರು ಕಂತ್ವ ಅಂದರೆ ಕೊಂತೆವ್ವ ಕುಂತೆವ್ವ ಕುಂತೀದೇವಿ ಎಂದಿರಬಹುದೆ? ಗಂಡ ಹಣೆಗೆ ಕೊರೆಯುವುದು ತೋಟ ಹಿಡಿಯುವದು ಚಾಪೆ ಹೆಣೆಯುವದು ಯಾವ ಕೆಲಸವನ್ನೂ ಮಾಡಲಾರ. ಹಾಗಾದರೆ ಮುತ್ತಿನಂಥ ಮಕ್ಕಳ ಹೊಟ್ಟೆಯ ಗತಿಯೇನು? ಅಲ್ಲಿ ಇಲ್ಲಿ ಗುತ್ತಿಗೆಗಾರರಿಗೆ ದಮ್ಮಯ್ಯ ಗುಡ್ಡೆ ಹಾಕಿ, ಕಂತೆವ್ವ ಗೋಡಂಬಿಗಳನ್ನೂ ಹೂಮಾಲೆಗಳನ್ನೂ ಹಣಿಗೆಗಳನ್ನೂ ತನ್ನ ತಲೆಯ ಮೇಲೆ ಬುತ್ತಿಯ ಗಂಟಿನೊಡನೆ ತಟ್ಟೆಯಲ್ಲಿಟ್ಟುಕೊಂಡು ಚಾಪೆಯ ಸುರುಳಿ ಬಗಲಿಗೆ ಹಾಕಿ ಬೆನ್ನಿಗೊಂದು ಮಗುವನ್ನು ಕಟ್ಟಿಕೊಂಡು, ಬೆನ್ನ ಹಿಂದೆಯೊಂದಿಟ್ಟುಕೊಂಡು ನಸುಕಿನಲ್ಲಿಯೇ ಎದ್ದು ಕೈಗೆ ಸಿಕ್ಕ ಹಿಟ್ಟಿನ ರೊಟ್ಟಿಗಳನ್ನು ಬಡಿದು ೧-೨ ಗಂಡನಿಗಾಗಿಟ್ಟು, ಒಂದೆರಡು ತಾನು ಕಟ್ಟಿಕೊಂಡು ನೀರ ಮುಗಿಯೊಂದಿಗೆ ದಾರಿಗೆ ಬಂದು ಬೆಳಗಾದೊಡನೆ ಒಮ್ಮೆ ಕುಳಿತಳೆಂದರೆ, ಸಾಯಂಕಾಲದ ಏಳು ಗಂಟೆಗೆ ಮತ್ತೆ ಸಾಕಪ್ಪಾ ಶಿವನೇ ಜಲಮಾ ಎನ್ನುತ್ತ ಕಲ್ಲು ಮುಳ್ಳೆನ್ನದೆ ಹಳ್ಳಿಯ ದಾರಿ ಹಿಡಿದು ಬಂದು ಮನೆ ಕಾಣುವಳು. ಹಗಲೆಲ್ಲ ಆದ ವ್ಯಾಪಾರದಲ್ಲಿ ಆಸಲಿನ ಗಂಟನ್ನು ಸಾಹುಕಾರರಿಗೂ ಗುತ್ತಿಗೆಗಾರರಿಗೂ ಕೊಟ್ಟು ಮಿಕ್ಕ ಲಾಭದಲ್ಲಿ ಮನೆಯ ಪ್ರಪಂಚದ ಸಾಮಾನು ಕೊಳ್ಳಬೇಕೆಂದವಳ ಇಷ್ಟ ಆದರೆ ಇವಳಲ್ಲಿ ಒಂದು ಕಾಸು ನೋಡಿದರೆ ಸಾಕು ಹದ್ದಿನಂತೆ ಜಪ್ಪಿಸಿ ಕುಳಿತಿದ್ದ ಗಂಡ ಎಲ್ಲವನ್ನೂ ಬಡಿದು ಕಸಿದುಕೊಂಡು ಹೊರಹೋದವ ರಾತ್ರಿ ಹನ್ನೊಂದಕ್ಕೆ ನಾರುತ್ತ, ಪ್ರಜ್ಞೆಯಿಲ್ಲದೆ ಬೈಗಳ ಸುರಿಮಳೆ ಸುರಿಸುತ್ತ ಬರುವ, ಮತ್ತೆ ರೊಟ್ಟಿಯಿಲ್ಲದ ಹಾಳು ಒಲೆಯನ್ನು ಕಂಡೊಡನೆ ಕಿಡಿಕಿಡಿಯಾಗಿ ಕಂತೆವ್ವಳನ್ನು ಕಂಡಕಂಡಂತೆ ಬೈದು ಹೊಡೆಯುವನು. ಒಡೆಯುವನು, ಹೊಡೆತದಿಂದ ಚಡಪಡಿಸುತ್ತ

ರಾತ್ರಿಯನ್ನು ಕಳೆಯಬೇಕು. ನಸುಕು ಹರಿದೊಡನೆ ಅಪ್ಪ ಅಣ್ಣ ಎಂದು ಆನ್ಯರ ಕಾಲು ಕಟ್ಟಿಕೊಂಡು ಮಾಲು ತರಲು ಪ್ರಯತ್ನಿಸಬೇಕು! ಅಂಗಡಿಕಾರರಿಗೆ ಹೇಳಿಕೊಂಡು ಸಾಮಾನು ಉದ್ದರಿ ತರಬೇಕು ಮಕ್ಕಳ ಹಸಿವನ್ನು ಹಿಂಗಿಸಬೇಕು ಇದು ಅವಳ ನಿತ್ಯದ ಹೋರಾಟ, ಸಾಯಂಕಾಲ ವ್ಯಾಪಾರದಿಂದ ಬಂದ ಹಣದಿಂದ ಉದ್ದರೀ ತೀರಿಸಬೇಕೆಂದರೆ ಹೇಗೊ ಹೊಂಚು ಹಾಕಿ ಬಂದು ಗಂಡ ಅವನ್ನೆಲ್ಲ ಸೆಳೆದುಬಿಡುವ, ಒಮ್ಮೊಮ್ಮೆ ಅವಳು ಹುಲಿರಾಯನ ಗುಡಿಯಲ್ಲಿ ಬಾಲದ ಒಡೆದ ಪದರಿನಲ್ಲಿ ೨-೩ ಆಣೆಗಳನ್ನು ಮಗುವಿನ ಅಂಗಾಲ ತರುವ ನೆಪಮಾಡಿ, ನಡುವೇ ಎದ್ದು ಇಟ್ಟು ಬರುವಳು. ಆದರೆ ಇಷ್ಟರಿಂದ ಸಾಲ ಹೇಗೆ ಮುಟ್ಟುವದು? ಹೊಟ್ಟೆ ಬಟ್ಟೆ ಅರಿವೆ ಅಂಚಡಿಗಳಿಗೆ ಉಪಾಯವೇನು? ಉದ್ದರಿ ಕೊಡುವವರಾದರೂ ಅದೆಷ್ಟು ದಿನ ಕೊಡುವರು? ಕೊನೆಕೊನೆಗೆ ಗುತ್ತಿಗೆಗಾರರೂ ಸಾಹುಕಾರರೂ ಅಂಗಡಿಕಾರರೂ ಉದ್ದರಿ ಕೊಡದಾದರು. ಕೈಗಡ ಕೊಡುತ್ತಿದ್ದ ನೆರೆಹೊರೆಯ ಅಕ್ಕತಂಗಿಯರಂತೂ ಮೊದಲೇ ಬೇಸತ್ತಿದ್ದರು. ಹೀಗಾಗಿ ಬರುಬರುತ್ತ ಆಗುತ್ತಿಲ್ಲದ ಕಂತೆವ್ವನ ಹಾಳು ಬಾಳಿನ ಗೋಳನ್ನು ದೇವರಾಯನೇ ಬಲ್ಲ.

ಅಂದು ಹಣ್ಣಿಮೆ ಕರಿಹೊಳೆಯ ದಂಡೆಯ ಮೇಲೆ ಜನರು ಜಾತ್ರೆಯಾಗಿ ಕೂಡುವರು. ವ್ಯಾಪಾರ ಹೆಚ್ಚು ಹೀಗೆಂದು ಸರಿರಾತ್ರಿಯಲ್ಲಿಯೇ ಎದ್ದು ನಡಿಕೆಯಲ್ಲಿದ್ದ ಹಿಟ್ಟನ್ನು ತೆಗೆದು, ನಾಲ್ಕಾರು ರೊಟ್ಟ ಬಡಿದು ಗಂಡನಿಗಿಟ್ಟು ಮಿಕ್ಕವನ್ನು ತಾನು ಕಟ್ಟಿಕೊಂಡು ಮಧ್ಯಾಹ್ನಕೇನೇ ಆಳು ಕಳಿಸಲು ಗುತ್ತಿಗೆಗಾರರಿಗೆ ಹೇಳಿ ಸಾಷ್ಟಾಂಗ ಹಾಕಿ, ಹೂಮಾಲೆ, ಗೋಡಂಬಿ, ತಂಗು, ರಸಬಾಳೆಗಳನ್ನೂ ಹಣಿಗೆಗಳನ್ನೂ ತೆಗೆದುಕೊಂಡು ಮಕ್ಕಳೊಡನೆ ನದಿಗೆ ಬಂದಳು. ಅಂದು ಸುದೈವದಿಂದ ೩-೪ ರೂಪಾಯಿಗಳ ವ್ಯಾಪಾರವಾಯಿತು. ಮಕ್ಕಳಿಗೆ ಹಾಲು ಕೊಂಡು ಕುಡಿಸಿದಳು. ೪-೬ ರಸಬಾಳೆಗಳನ್ನು ಉಳಿಸಿಕೊಂಡು ತಟ್ಟೆಯ ಬುಡಕ್ಕೆ ಬಚ್ಚಿಟ್ಟಳು. ನದಿಯಲ್ಲಿ ಮಿಂದು, ಮಕ್ಕಳಿಗೆ ಸ್ನಾನ ಮಾಡಿಸಿ ಒದ್ದೆ ಅರಿವೆ ಉಟ್ಟು ರೊಟ್ಟಿ ತಿಂದಳು. ಆರುಗಂಟೆಯ ಸುಮಾರಿಗೆ ಗುತ್ತಿಗೆಗಾರರ ಆಳು ಬಂದ ೨ ರೂಪಾಯಿ ಅವನಿಗೆ ಕೊಟ್ಟು ೧ ರೂಪಾಯಿ ಅಂಗಡಿಕಾರ ಅಣ್ಣನಿಗಿತ್ತು. ನಾಲ್ಕಾಣೆಯಲ್ಲಿ ಹಿಟ್ಟು ಉಪ್ಪನ್ನು ತಂದು, ಮಿಕ್ಕ ೧೨ ಆಣೆಗಳನ್ನು ಜಡೆಗಟ್ಟಿದ ಮುಡಿಯಲ್ಲಿಟ್ಟು ತಂದು ಒಲೆಯ ಸಂದಿಯಲ್ಲಿ ಹೂತಿಟ್ಟಳು ಗಂಡ ರಭಸದಿಂದ ಬಂದ ಲೇ ಕಂತೀ ಇಂದ ಯಾಪಾರಾ ಬಾಳಾತಂತ ಊರಂತ ಊರೆಲ್ಲಾ ಸುದ್ದಿ. ಹೂಂ ಬಿಚ್ಚು ಉಡೀನ- ಅವಳಿಗೆ ಮಾತನಾಡಲಿಕ್ಕೆ ಸಹ ಅವಕಾಶ ಕೊಡದೆ ಸೆಳೆದನು. ಅರಿಯದೆ ಟೊಂಕದಲ್ಲಿದ್ದ ಚವಲಿಯೊಂದು ಉರುಳಿತು. ಸಾಕಾಯಿತು. ಅವನಿಗೆ, ಹೆಂಡ ಬಿಗಿದು ೧ ಗಂಟೆಯಲ್ಲಿ ಮನೆಗೆ ಬಂದ ಬಡಿದಿಟ್ಟ -೬-೭ ರೊಟ್ಟಿಗಳು ಒಲೆಯ ಮೇಲೆ ಹಾಗೆ ಇದ್ದವು. ಉಳಿದ ಹಣಕ್ಕಾಗಿ ಜಗಳ ಅವಳನ್ನು ಹೊಡೆದು ಬಡೆದು ನೆತ್ತರು ಸೋರಹತ್ತಲು ಗಾಬರಿಯಾದ ಮೊದಲೇ ಕುಡಿದವ ರಾತ್ರಿಯೂ ಬಹಳವಾಯಿತು. ಹೀಗಾಗಿ ಒಂದು ಮೂಲೆ ಹಿಡಿದು, ಗೊಂಗಡಿ ಹೊತ್ತುಕೊಂಡು ಗೊರಕೆ ಹೊಡೆಯುತ್ತ, ಮಧ್ಯೆಮಧ್ಯೆ ಬಡಿಬಡಿಸುತ್ತ ಬಿದ್ದುಬಿಟ್ಟ. ಮಾಡಿದ್ದ ರೊಟ್ಟಿಗಳು ಒಲೆಯ ಮೇಲೆಯೇ ಇದ್ದವು. ಗಂಡ ಉಣ್ಣಲಿಲ್ಲವೆಂದವಳಿಗೂ ಊಟವಿಲ್ಲ. ಆತ

ಹೆಂಡದಂಗಡಿಯಲ್ಲಿ ಮಸಾಲೆ ಪುಗ್ಗೆಗಳನ್ನು ತಿಂದ ಸಂಗತಿಯು, ಆ ನಿಷ್ಪಾದ ನಿರ್ಮಲ ಜೀವಕ್ಕೆ ಹೇಗೆ ಗೊತ್ತಾಗಬೇಕು? ಬಾವಿಯೊಳಗಿಂದ ನೀರು ತಂದು ಗಾಯ ತೊಳೆದುಕೊಂಡು, ನರಳುತ್ತ ಮಕ್ಕಳೆರಡರ ಮಧ್ಯದಲ್ಲಿ ವಿಚಾರದ ಜೋಕಾಲಿ ಬಿದ್ದ ಕಂತೆವ್ವನನ್ನು ಈಗ ತಾವು ಊರ ಹೊರಕ್ಕೆ ಬೆಳದಿಂಗಳ ಮಧ್ಯರಾತ್ರಿಯಲ್ಲಿ ಹೊರಟರುವದನ್ನು ಕಾಣುತ್ತಿದ್ದೇವೆ.

ನಿಜವಾಗಿಯೂ ಹುಲಿರಾಯ ಅವಳ ಮಕ್ಕಳನ್ನು ತನ್ನವೆಂದು ತಿಳಿದಿರಬೇಕು. ಅಂತೆಯೇ ವನದ ಇತರ ಪ್ರಾಣಿಗಳನ್ನು ಸಹ ಕಂತೆವ್ವನ ಹಾದಿಗೆ ಅಡ್ಡವಾಗಿ ಬರಗೊಡದೆ ಕಾಯುತ್ತ ನಿಂತಿರುವನೇನೋ ಎನ್ನುವಂತೆ ಆಗಾಗ ದೂರ ನಿಂತು ಮಾಡುತ್ತಿದ್ದ ಅರ್ಭಟಯನ್ನು ಬಾರಿ ಬಾರಿ ಕೇಳಿದಳು. ಕಂತೆವ್ವ ದೊಡ್ಡ ಮಗು ಅರ್ಧ ಮೈಲು ಹೋಗುವಷ್ಟರಲ್ಲಿ ನಡೆಯಲಾರದೆ ಅಳತೊಡಗಿತು. ಅದಕ್ಕೆ ತುಂಬ ನಿದ್ದೆಯ ವೇಳೆ. ಬೆನ್ನ ಮೇಲಿನ ಕೂಸಿಗೆ ಮೊದಲಿನಿಂದಲೇ ರೂಢಿಯಿದ್ದುದರಿಂದ ಅದು ಮುದ್ದಾಗಿ ಹಾಗೆಯೇ ಜೋಳಿಗೆಯಲ್ಲಿ ಜೋತುಬಿದ್ದು ನಿದ್ದೆ ಹೋಗಿತ್ತು. ಆಯಿತು. ದೊಡ್ಡವನನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡಳು. ಒಂದು ಕೈಯಿಂದ ದೊಡ್ಡ ಮಗುವನ್ನು ಒಂದು ಕೈಯಿಂದ ತಟ್ಟೆಯನ್ನು ಸಾವರಿಸುತ್ತ ಇಲ್ಲದ ಹುರುಪಿನಿಂದ ಓಡಹತ್ತಿದಳು. ಬೆಳಗಿನ ಐದಾಗುತ್ತ ಬಂದಿದ್ದಿತು. ದಾರಿಯಲ್ಲೊಂದು ಹಳ್ಳವು ಹತ್ತಿತ್ತು. ಮಕ್ಕಳೂ ಎದ್ದಿದ್ದವು. ತಂಗಳ ರೊಟ್ಟಿಯನ್ನು ತಟ್ಟೆಯ ಬುಡದಲ್ಲಿದ್ದ ರಸಬಾಳೆಯನ್ನು ತೆಗೆದಳು. ಮಕ್ಕಳ ಕೈಕಾಲು ಮೋರೆ ತೊಳೆಯಿಸಿ., ಎಂದೂ ಹಾಕದೆ ಜತನವಾಗಿಟ್ಟ ಹಳೆಯ ಹರಕು ಅಂಗಿಗಳನ್ನು ಹಾಕಿದಳು. ಕೈಕಾಲು ಮೋರೆ ತೊಳೆದುಕೊಂಡು ಮಕ್ಕಳಿಗೆ ಉಣಿಸಿ, ತಾನೂ ಎರಡು ರೊಟ್ಟಿಗಳನ್ನು ತಿಂದು ಗಿಡದ ಬುಡದಲ್ಲಿ ಮಕ್ಕಳನ್ನು ಕಟ್ಟಿಕೊಂಡು ಇನ್ನು ಮುಂದೇನು ಮಾಡುವದು?" ಎಂದು ಆಲೋಚಿಸುತ್ತ ಕುಳಿತಳು. ಗಂಡ ಬೆನ್ನ ಹತ್ತಿ ಹುಡುಕುತ್ತ ಬರಬಹುದೆ?" ಎಚ್ಚರವಾಗಿ ನೋಡಿ, ಏನೆಂದಿರಬಹುದು? ಆತನನ್ನೂ ಆತನ ಮನೆಯನ್ನೂ ಬಿಟ್ಟು ಬಂದ ಬಳಿಕ ತನಗಾದ ಲಾಭವೇನು? ನಷ್ಟವೇನು? ಆತನಿಗಂತೂ ತಾನು ಮನೆ ಬಿಟ್ಟು ಬಂದುದಕ್ಕೆ ದುಡಿತವು ಬೆನ್ನು ಹತ್ತಿ ಲಾಭವಾದಂತೆಯೇ ಸರಿ. ತನಗೆ..? ನಷ್ಟವೆ.. ನಷ್ಟವಂತೂ ಏನೂ ಇಲ್ಲ ಆದರೂ ಗಂಡನೆಂಬುದೊಂದು ಅಮೂಲ್ಯ ವಸ್ತು ಹೆಂಡತಿಗೆ.. ಹಾಗೆಯೇ ಹೆಂಡತಿಯೂ ಗಂಡನಿಗೆ ಅಮೂಲ್ಯ ರತ್ನವೇ ಅಲ್ಲವೆ? ಅಂದ ಮೇಲೆ ಆತ ತನಗೆ ಬೆಲೆ ಕೊಟ್ಟಿದ್ದರೆ... ತಾನವನಿಗೆ ಮೊದಲೇ ಕೊಟ್ಟಿದ್ದಿಲ್ಲವೆ?" ಮತ್ತೂ ಕೊಡುತ್ತಿದ್ದಿಲ್ಲವೆ.. ಅಂದ ಮೇಲೆ ಅವನನ್ನು ಬಿಟ್ಟು ಬಂದುದಕ್ಕೆ ನಷ್ಟವೇನೂ ಇಲ್ಲದಿದ್ದರೂ ಲಾಭವೇನು ಲಾಭವೇನಾದರೂ...? ಎರಡೂ ತೊಡೆಗಳ ಮೇಲೆ ತಲೆಯಿಟ್ಟು ಮಲಗಿದ ಎರಡೂ ಮಕ್ಕಳ ಕಡೆಗೆ ಕಣ್ಣು ಹೊರಳಿದವು. ಲಾಭ ಹವಳ ಮುತ್ತಿನ ಲಾಭ ಇದಕ್ಕಿಂತ ಹೆಚ್ಚಿನದಿನ್ನೇನು ಲಾಭವಾಗಬೇಕು ಆ ಯಮನ ಕೈಯಲ್ಲಿದ್ದರೆ ಇದೇ ರೀತಿ ಇನ್ನೆಷ್ಟು ದಿನ ಬಾಳುತ್ತಿದ್ದವೋ ಏನೋ... ತನ್ನ ಕೈಯಲ್ಲಿ ಬಂದು ಮುಂದೇನು ಉಣ್ಣುವವೋ, ಏನೋ.. ಏನೇ ಆಗಲಿ ಈ ಮಕ್ಕಳಿಗಾಗಿ ತಾನು ದುಡಿದ ತನ್ನ ಜೀವನ... ವಿಚಾರ ಮಾಡು ಮಾಡುತ್ತ ಮಕ್ಕಳನ್ನು ಮಗ್ಗುಲಿಗಿಟ್ಟುಕೊಂಡು, ಅಲ್ಲಿಯೇ ಹೊರಳಿಬಿಟ್ಟಳು. ಹಾಹಾ ಅನ್ನುವಷ್ಟರಲ್ಲಿ ಅವಳಿಗೆ ಗಾಢವಾಗಿ ನಿದ್ರೆ ಹತ್ತಿತು.

ಕಂತಿಯ ದೇಶಾಂತರ

ಮಾದೇವಾ ಬೇನೆ ಬೇಸರಿಕೆ ಬಿದ್ದಾಗ ಆರೈಕೆ ಮಾಡಲಿಕ್ಕಾದರೂ ಉಡಿಕೆಯಾಗು ಎಂದು ಅವನಿಗೆ ಗೌಡರು ಆಗಾಗ ಅನ್ನುವರು. ಛೇ ಯಪ್ಪಾ ಉಡಕೀ ಯಾಕೀನ್ನ ಆಗಣೀ ದೊರಿ! ನನ್ನ ಜೀವ ಅರದಾಳು ಎಂದಿದ್ದ ಗೌಡರೇ ಮೊದಲ ಮದಿವೆ ಮಾಡಿದ್ದರು. ಚೊಚ್ಚಲ ಬಾಣಂತಿತನದಲ್ಲಿ, ಹಡೆದ ಹತ್ತು ದಿನಗಳೊಳಗಾಗಿಯೇ ಮಗುವಿನೊಡನೆ ಪರಲೋಕ ಕಂಡಿದ್ದಳು. ಅಂದಿನಿಂದ ಮಾದೇವ ತನ್ನ ಎರಡನೇ ಮದುವೆಗಾಗಿ ಹಣ ಕೂಡಿಸಿಡುತ್ತಿದ್ದ.

ಗೌರಮ್ಮ ರೊಟ್ಟಿಯನ್ನು ಇನ್ನೂ ಏತಕ್ಕೆ ತರಲಿಲ್ಲರೆಂದು ಮಾದೇವ ದಾರೀ ಕಾಯುತ್ತಿದ್ದಾನೆ. ಹೊತ್ತೇರಿ ಹೋಗಿದೆ ದೂರದಲ್ಲಿ ಬಳೆಗಳ ಸಪ್ಪಳವಾದಂತಾಯಿತು. ಗೌರವ ಎಂದು ಕೂಗಿದ ಓ ಬಂದೆ ಎಂದಳು. ಏಸು ಹೊತ್ತು ಮಾಡಿರಿ ರೊಟ್ಟಿ ತರಾಕ ಹೂಂ.. ನಿಂದೆಲ್ಲಾ ಚಾಕರಿ ಮಾಡಿದೂಕ ತಿಂದೇನೇನ ನಿನ ಗಂಟೂ? ನಂದೆಲ್ಲಾ ಕತೀನ ನೆನಿಸಿಕೊಂಡು ಆತಗೊಂತ ಕುಂತ ಬಿಟ್ಟೆ ರೊಟ್ಟಿ ಮಾಡಿಟ್ಟಿದ್ದೆ. ಹಿರೇಮಗಾ ಕೇಳಿದಾ ಅಪ್ಪಗ ರೊಟ್ಟಿ ಒಯ್ದೇನಾ" ಅಂತ ಅವರಪ್ಪದೇನ ದೆಸಿ ಆಗೇದ ಯಾರು ಬಲ್ಲರೂ...? ಎಷ್ಟ ಬಡೀತಿದ್ದಾ ಎಷ್ಟ ಬೇಯೂದ ಮತ್ತೂ ಒಂದು ರೊಟ್ಟಿ ಅಂವನ ಸಲುವಾಗಿಟ್ಟು ಬರಿದ್ದೇ ಹ್ಯಾಂಗದಾನೊ ಎಲ್ಲಿದಾನೊ, ಹೊಟ್ಟ ನೆ ಯಾರ ನೋಡ್ತಿದ್ದಾರೂ... ಹೂ ಹೋಗ್ಲಿ ಬಿಡಿ! ನಿನ್ನ ಹಿರೇ ಮಗಾ ಏನಂದಾ...? ಮುಗುಳ್ನಗೆ ನಗಹತ್ತಿದೆ ಮಾದೇವ ಅವಳಿಗಿಂತ ೬-೭ ವರ್ಷಕ್ಕೆ ದೊಡ್ಡವ ಅವನದೂ ಎಳೆ ಪ್ರಾಯ ಗೌರಮ್ಮನ ಕೈಯ್ಯ ಅಡಿಗೆ ರುಚಿರುಚಿಯಾಗಿ ಅವನಿಗೆ ಸುಖವುಂಟಾಗುತ್ತಿತ್ತು. ಉಳಿದ ವೇಳೆ ಕಳೆಯಲು ಬಂಗಾರದಂತಹ ಮುದ್ದು ಮಕ್ಕಳು ಪೇಟೆಗೆ ಹೋಗುವಾಗ, ತೋಟಕ್ಕೆ ಹೋಗುವಾಗ ಅಡ್ಡಾಡಲಿಕ್ಕೆ ಹೋಗುವಾಗ, ಆ ಮಕ್ಕಳನ್ನು ಕಟ್ಟಿಕೊಂಡೇ ಹೊರಡುವನು ಮಾದೇವ. ಹೀಗಾಗಿ ಅವುಗಳಲ್ಲಿ ಇವನ ಬಗ್ಗೆ ಪ್ರೇಮಾದರಗಳೂ ಇವನಲ್ಲಿ ಅವುಗಳ ಬಗ್ಗೆ ವಾತ್ಸಲ್ಯವೂ ಬೆಳೆಯುತ್ತಲಿದ್ದವು. ಮಗನು ಏನೆಂದ? ಎಂದು ಮಾದೇವ ಕೇಳಿದೊಡನೆ, ಅವನ ಮುಗುಳಗೆಯಿಂದ ಅವಳಿಗದರ ಅರ್ಥವಾಯಿತು. ಬಿರುಗಣ್ಣಿನಿಂದವನನ್ನು ದುರುಗುಟ್ಟಿ ನೋಡಿದಳು. ಸುತ್ತಲೂ ಒಮ್ಮೆ ಮುಖ ತಿರುವಿದಳು. ಅವನು ಅಂದ ನಗೆಮಾತುಗಳನ್ನಾರೂ ಕೇಳಲಿಲ್ಲವೆಂದು ಸಮಾಧಾನವಾಯಿತು. ಅವನಿಗೆ ಉಣಬಡಿಸಿ ಕುಳ್ಳು ತಟ್ಟಲು ಹೋದಳು. ಹತ್ತು ನಿಮಿಷಗಳಲ್ಲಿ ಮಾದೇವ ಚೀರಿದಂತೆ ಕೇಳಿತು. ಬಂದು ನೋಡುತ್ತಾಳೆ. ಮೇವು ಕೊಯ್ಯುವಾಗ ಅಂದೇ ಸಾಣೆ ಹಿಡಿಸಿದ ಕುಡುಗೋಲೀನಿಂದಾತನ ಕಾಲು ಕೊಯ್ದಿದೆ. ಗಾಯವು ಹೆಚ್ಚಾದುದರಿಂದ ನೆತ್ತರು ಸೋರುತ್ತಿದೆ. ಮಿನುಗಂಡದಲ್ಲಿ ಕುಡುಗೋಲು ಆಳವಾಗಿ ಹೊಕ್ಕಿತ್ತು. ಭರನೆ ತನ್ನ ಸೀರೆಯನ್ನು ಹರಿದು ಮುಗಿಯಲ್ಲಿ ತೊಯ್ದಿಸಿ, ಗಾಯಕ್ಕೆ ಬಿಗಿದಳು, ಆತನ ಕಣ್ಣಿಗೆ ಕತ್ತಲೆ ಕವಿಯಹತ್ತಿ, ಒಮ್ಮೆಲೆ ನೆಲಕ್ಕೆ ಕುಸಿದುಬಿದ್ದನು. ಮನದಲ್ಲಿ ಏನೇ ಇರಲಿ, ಜನರೇನೆಂದಾರೆಂಬ ಭಯ ಜನಾ ಅಂತ, ದನಾ ಅಂತ ಏನಾರ ಅಂದುಕೊಳ್ಳಲಿ ನಾ ಸುಮ್ಮಗ ಇರಲಾರೆ... ಆತನ ತಲೆಯನ್ನು ತೊಡೆಯ ಮೇಲೆರಿಸಿಕೊಂಡು ನೆತ್ತಿಗೆ ನೀರು ಬಡಿದು, ಒಲ್ಲಿಯಿಂದ ಗಾಳಿ ಹಾಕುತ್ತಲೇ ನೆರೆ ಹೊಲದ ಸಂಗಣ್ಣನನ್ನು ಕೂಗಿ ಕರೆದಳು. ಆತ ಬಂದ. ಎಣ್ಣಾ ಸರಕ್ಕನ ಹೋಗಿ ಗೌಡಿಗೆ ತಿಳಿಸು ಇಕಾ, ಕಾಲಾಗಿಂದ

ಧಾರಿ ಧಾರಿ ರಗತಾ ಸೋರಾಕ ಹತ್ತೇತಿ ಇಬ್ಬರೂ ಒಂದೆರಡು ನಿಮಿಷ ವಿಚಾರಿಸಿ ಸಂಗಣ್ಣನ ಬಂಡಿಯಲ್ಲಿ ಆತನನ್ನು ಹಾಕಿ ಅವನನ್ನು ಗೌಡರ ಮನೆಗೆ ಮುಟ್ಟಿಸಿದರು ಆಳಿನ ಆರೈಕೆ ಮಾಡುವವರಾರು? ಸುಮ್ಮನೆ ಬಿಟ್ಟರೆ ಬಂಗಾರದಂಥ ಆಳು ವ್ಯರ್ಥವಾಗಿ ಸಾಯುವನು. ಗೌಡರು, ಗೌರಮ್ಮಾ ನಾವೆಲ್ಲ ದುಡ್ಡು ವೆಚ್ಚಮಾಡಬಹುದು. ಔಷಧ ಸಾಮಾನು ಕೊಡಿಸಬಹುದು. ಆರೈಕೆಯಲ್ಲಾ ನೀನೇ ಮಾಡಬೇಕಮ್ಮಾ ಆಗಲಿ, ತಂದೆ ನಾನೂ ಪರದೇಶಿ.. ದಿಕ್ಕಿಲ್ಲದಾಕಿ ಮತ್ತೇನೂ ಇಲ್ಲಾ ಅಂವನೂ ಹರೇದವ ನಾನೂ ದಿಕ್ಕಿಲ್ಲದಾಕಿ ಏನಂದಾರೂ ಅಂತ ಆಟ ವಿಚಾರಾ ಬಂದು, ಜೀವ ಹೆದರತೈತಿ.. ಏನೂ ಹೆದರ ಬ್ಯಾಡಾ ತಂಗೀ ಅವಂನೂ ಅನಾಥಾ ಈ ವೇಳೆಗೆ ಜನರ ಅನ್ನುವಿಕೆಯ ಕಡೆಗೆ ಲಕ್ಷಕೊಡಬೇಡ ಅನ್ನುವವರ ಬಾಯಿಗೆ ಬೀಗ ಹಾಕುವ ಕೆಲಸ ನನ್ನದು... ಗೌರಮ್ಮ ಸೆರಗು ಸಾವರಿಸುತ್ತ, ನಮ್ರವಾಗಿ ಹೂಗುಟ್ಟಿ ಒಳಕ್ಕೆ ಹೋದಳು. ಅವಳ ಹಿತ್ತಿಲ ಮನೆಯಲ್ಲಿಯೇ ಒಂದು ಹೊರಸು ಹಾಕಿ. ಮಾದೇವನ್ನು ಬೆಚ್ಚಗೆ ಹಾಸಿ ಮಲಗಿಸಿದರು. ವೈದ್ಯರ ಔಷಧ ಉಪಚಾರಗಳು ನಡೆದವು. ಹಗಲು-ರಾತ್ರಿಯೆನ್ನದೆ ಗೌರಿಯು ಮಾದೇವನ ಚಾಕರಿ ಮಾಡಹತ್ತಿದಳು. ಆತನಿಗೆ ನಿದ್ರೆ ಬಂದಾಗಷ್ಟು ಗೌಡರ ಮನೆಯ ಉಳಿದ ಕೆಲಸಗಳನ್ನು ಸಾವರಿಸುವಳು. ಹೊರಗಿನ ಕೆಲಸಕ್ಕೆ ೨-೩ ತಿಂಗಳ ಮಟ್ಟಿಗೆಂದು ಒಂದಾಳನ್ನೂ ಗೌಡರು ಇಟ್ಟಿದ್ದರು. ಗಾಯದ ಬಾಯಿಮುಚ್ಚಿಕೊಳ್ಳಲು ೧೫-೨೦ ದಿನಗಳು ಬೇಕಾದವು. ಮಲಗಿದ್ದಲ್ಲಿಂದಲೇ ದಿನದಲ್ಲಿ ೧-೨ ಸಾರಿ ಮಕ್ಕಳನ್ನು ಮಾತನಾಡಿಸುವನು ಮಾದೇವ. ಆವಕ್ಕೆ ಎರಡು ಪಾಟಿಗಳನ್ನು ತಂದು ಕೊಟ್ಟಿದ್ದನು. ಗೌಡರ ಮಕ್ಕಳ ಬಾಯಿಯಿಂದ ಕೇಳಿದ ಕಂದ ಪದ್ಯಗಳನ್ನು ಮಕ್ಕಳು ಅನ್ನುತ್ತ ಬಂದು ಅವನ ಬಳಿಯಲ್ಲಿ ಕುಳಿತವೆಂದರೆ ಆತನಿಗೆ ಹಿಡಿಸಲಾರದ ಹಿಗ್ಗುಂಟಾಗುವದು. ಈಗ ತನ್ನ ಮೇಲೆ ಗೌರಮ್ಮನ ತೀರಿಸಲಾರದಂಥ ಉಪಕಾರವಾಗಿದೆ. ಗೌಡರೂ ಗೌಡತಿಯೂ ಹೋಗುತ್ತ ಬರುತ್ತಿರುವಾಗ ಕೋಣೆಯಲ್ಲಿಣಿಕಿ ನೋಡಿ, ಮಾದೇವಾ ಗೌರಮ್ಮನ ಪುಣ್ಯದಿಂದ ಮತ್ತೆ ಹುಟ್ಟಿಬಂದಂತಾತಪ್ಪ ನೀನು! ಎನ್ನುವದನ್ನೂ ಗೌರಮ್ಮ ಎಷ್ಟೋ ಬಾರಿ ಕೇಳಿದಳು. ಮಾದೇವನಿಗೆ ಈಗ ಗೌರಿಯೆಂದರೆ ಪಂಚಪ್ರಾಣ! ರಾತ್ರಿಯ ಒಂದು ಬಡಿದಿದೆ ಎಡಬಲಕ್ಕೆ ಮಕ್ಕಳನ್ನಿಟ್ಟುಕೊಂಡು ಗೌರಮ್ಮ ಹೊರಳಿದ್ದಾಳೆ. ಕಣ್ಣಿಗಿನ್ನೂ ನಿದ್ರೆಬರದಿದ್ದರೂ ರೆಪ್ಪೆ ಮುಚ್ಚಿದ್ದಳು ಗೌರಮ್ಮ ಗೌರಾ! ಎದ್ದಳು. ಒಂಟಿ ಹೆಸರಿನಿಂದ ಸಂಬೋಧಿಸಿದ ಮಾದೇವ, ತನಗಂದವಳಿಗೆ ಎದೆಗುಡಿ ನೀರು ಕಾಯಿಸಿ ಆರಿಸಿಟ್ಟ ನೀರನ್ನು ಬಟ್ಟಲಿಗೆ ಸುರುವಿ, ಆತನ ಮುಂದೆ ಹಿಡಿದಳು, ನೀರು ಕುಡಿದ ಗೌರಾ ಕುಂತುಕೋ ನಿನ್ನ ಸಂಗಾಟ ಬಾಳ ಬಾಳ ಮಾತಾಡಬೇಕೂ ಅಂತೇನಿ ಅಂಜಂಜುತ್ತ ಹೊರಸಿನ ತುದಿಗೆ ಮೆಲ್ಲಗೆ ಕುಳಿತಳು. ಆತನ ಕಾಲಿನ ಕಡೆಗೆ ಅವಳ ದೃಷ್ಟಿ ದೇವರೆ, ಒಮ್ಮೆ ಈತ ನನ್ನ ಕೋಣೆ ಬಿಟ್ಟು ಹೋಗಲಿ ಕೋಣೆ ಬಿಟ್ಟು ಹೋದರೂ ಹೃದಯ ಬಿಟ್ಟು ಹೋಗಬಹುದೆ? ವಿಚಾರ ತರಂಗಗಳ ಮೇಲೆ ತರಂಗಗಳು ಬಂದು ಮನಸ್ಸು ಹೊಯ್ದ್ಯಾಡಹತ್ತಿ, ಕಣ್ಣಲ್ಲಿ ನೀರು ತುಂಬಿತು. ಮಾದೇವನೆಂದ, ಗೌರಾ! ತೀರದಂತಾ ಉಪಕಾರದ ಹೊರೀ ಹಾಕಿರ್ದಿ ನನ್ನ ಮ್ಯಾಗ! ನಾ ಹ್ಯಾಂಗ ತೀರಸಲಿ? ದುಡ್ಡಿನ ಉಪಕಾರಾ ಆಗಿದ್ರೆ ಲೆಕ್ಕಾ ಇಟ್ಟು ಜಲಮಾ ಎಲ್ಲಾ ದುಡುದುಕ್ಯಾರಾ, ನಿನ್ನ ಹೋರೀ

ಇಳಸ್ತಿದ್ದೇ.. ಆದರೆ ಈ ಚಾಕರೀ ಪುಣ್ಯದ ರಿಣಾಹ್ಯಾಂಗ ತೀರಸಲಿ..? ನಿನ್ನ ಮಕ್ಕಳನ್ನು ಎರಡೂ ನನಗೆ ಕೊಟ್ಟುಬಿಡು ನಾನ ಜ್ವಾಪಾನ ಮಾಡಿ ಇದ್ಯೆವ ಕಲಿಸಿ ಎಲ್ಲೆರ ದುಡದು ತಿನ್ನೋ ಹಾಂಗ ಮಾಡತೇನಿ..” ಗೌರಿಯ ಕೈಯಲ್ಲಿ ತನ್ನ ಕೈಯಿಟ್ಟು ಏನ ಮಾಡಿದರೂ ಈ ಉಪಕಾರ ತೀರೀತ ಗೌರಾ? ಎಂದ ಕಾಲಿಗೆ ಕುಡಗೋಲು ಬಡದಾಗನ ಗೌಡ್ರ ಸಂಕಾ ನೀ ಸಾಯತೀ ಅಂತ ಬೆದರಿದ್ರೂ... ಆದರೆ ಮತ್ತ ಈ ಮುಗುಳಗಿ ಮತ್ತ ನನಗೆ ನೋಡಾಕ ಸಿಕ್ತು. ನಾ ಮಾಡಿದ್ದರ ಫಲಾ ಇದಕ್ಕೂ ಹೆಚ್ಚಗಿನ್ನೇನ ಸಿಗಬೇಕು?” ಅಲ್ಲ.. ನೀಯೇನು ನನಗೆ ಕಡಿಮಿ ಮಾಡಿತಿದ್ಯಾ...?” ಗೌರಾ? ಮಾತಗ ಕೇಳ್ಯಾ...? ಇಲ್ಲಾ ಅನ್ನಾಕಿಲ್ಲ ಗೌರಿ ಸುಮ್ಮನಿದ್ದಳು. ನಾವಿಬ್ಬರೂ...? ಗೌರಿಯ ದೃಷ್ಟಿ ಮಕ್ಕಳ ಕಡೆಗೆ ಹೋಗಿ ಕಣೋಳಗಿಂದ ಕೃತಜ್ಞತೆಯ ನೀರು ಹರಿಯಹತ್ತಿತ್ತು.

ಅತ್ತ ಅದೇ ಸಮಯಕ್ಕೆ ಗೌಡರೂ ತಮ್ಮ ಪತ್ನಿಯ ಕೂಡ ಇದೇ ಬಗೆಗೆ ಆಲೋಚನೆ ಮಾಡತೊಡಗಿದ್ದರು. ನಮಗೆ ಅಂವನೂ ಬೇಕು. ಆಕೀನೂ ಬೇಕು. ತಣ್ಣಗ ಇಬ್ಬರದೂ ಊಡಿಕೇ ಮಾಡಿಬಿಡೋಣ... ನೀವು ಹೇಳೋ,, ನಿಮ್ಮ ಮಾತು ಮೀರಿ, ಇಬ್ಬರೂ ಹೋಗಲಿಕ್ಕಿಲ್ಲಾ... ಹೀಗೆ ಮಾಡೋಣ ನೀನು ಅವಳಿಗೆ ಹೇಳು. ನಾನು ಅವನಿಗೆ ಹೇಳುತ್ತೇನೆ. ಅಂ...? ಮರುದಿನ ಗೌರಿಯು ಕಸಮುಸುರೆಗಳಲ್ಲಿ ತೊಡಗಿರುವಾಗ ಗೌಡತಿಯು ಹಿತ್ತಿಲಿಗೆ ಹೋಗಿ, ಮೆಲ್ಲಗೆ ಮಾತು ತೆಗೆದು ಅವಳ ಒಪ್ಪಿಗೆ ಪಡೆದು ಬಂದಳು. ಅದರಂತೆಯೇ ಆಕೆ ಹಿತ್ತಿಲಲ್ಲಿರುವಾಗಲೇ ಗೌಡರು ಅವನ ಕ್ಷೇಮ ಸಮಾಚಾರಕ್ಕೆ ಹೋದಂತೆ ಹೋಗಿ ಒಳ್ಳೆಯ ಹುಡುಗಿ, ಕೈ ಹಿಡಿ ಮಾದೇವಾ! ನಾ ಎಲ್ಲಾ ಮಾಡಸ್ತೇನಿ.. ಎಂದರು. ಮಾದೇವ ಕಣ್ಣಲ್ಲಿ ನೀರು ತಂದು ನಾ ಯೇನ ನಿಮ್ಮ ಮಾತಿನ ಹೊರಗದೇನೇ ಧನ್ಯಾರ? ನೀವ ನನ ತಾಯಿ ತಂದೆ ಅಲೇಯಪ್ಪಾ! ಪರದೇಶಿ ಮಗಾ ನಾನೂ...” ಅವಳೂ ದಿಕ್ಕಿಲ್ಲದಾಕೀ... ಜನರ ಆಡಿಕೀದೂ ಆಮೇಲೆ ಹೆದರಿಕಿಲ್ಲೇನಪಾ!” ನೋಡ್ರಿ ತಮ್ಮ ಮನಸಿಗೆ ಹ್ಯಾಂಗ ಅನಸ್ಕೃತಿ ಹಾಂಗರಿ.. ಅಂತೂ ಗೌಡರೂ ಗೆದ್ದರು... ಗೌಡತಿಯೂ ಗೆದ್ದಳು.

ಒಂದು ತಿಂಗಳ ಆರೈಕೆಯಿಂದ ಮಾದೇವ ಎದ್ದು ಓಡಾಡಹತ್ತಿದ ಗೌರಿಯು ಹೆಸರಿಗೆ ಎರಡು ಸರ ಕರಿಮಣಿಗಳನ್ನಿಟ್ಟೇ ಇದ್ದಳು ಕೊರಳಲ್ಲಿ ಅತ್ತ ಕಡೆಗೆ ಯಾರ ಲಕ್ಷ್ಯವಿರಬೇಕು ಮರುವಾರವೇ ಗೌಡರ ಮನೆಯವರು ಅದಾವುದೋ ದೇವಿಯ ಜಾತ್ರೆಗೆಂದು ಹೊರಡುವವರು ಕುಟ್ಟೋಣ. ಬೀಸೋಣ, ಬಗೆಬಗೆಯ ಫಳಾರದ ಜಿನಸುಗಳನ್ನು ಮಾಡೋಣ. ಎಲ್ಲವೂ ಸಾಗಿತು. ಅರಿವೆ ಅಂಚಡಿಗಳನ್ನು ಒಗೆಯುವದು ನಡೆಯಿತು. ನಾಲ್ಕಾರು ಚಕ್ಕಡಿಗಳನ್ನು ಸವಾರಿ ಹೊರಡಿಸಿದರು. ಗೌರಿಯೂ ಗೌರಿಯ ಮಕ್ಕಳೂ ಹೊಸ ಬಟ್ಟೆಗಳನ್ನು ಕಂಡರು. ದೇವಿಗೆ ಹೋಗಿ ಮುಟ್ಟಲು ನಡುವೆ ಒಂದು ದಿನದ ವಸ್ತಿಯನ್ನು ಹೊಡೆಯಬೇಕಾಗುವುದು ಅಂದರೆ ಎರಡು ದಿನ ಮುಂಚಿತವಾಗಿ ಹೊರಡಬೇಕಿತ್ತು ಆ ಪ್ರಕಾರ ಇವರೆಲ್ಲ ನಿಬ್ಬಣದಂತೆ ಶೃಂಗಾರವಾಗಿ ಸಾಯಂಕಾಲಕ್ಕೆ ಹೊರಟರು. ಮರುದಿನದ ಬೆಳಗಿನವರೆಗೂ ಸವಾರಿ ಸಾಗಿದ್ದವು. ನಸುಕಿನಲ್ಲಿ ಒಂದು ಬಾವಿಯನ್ನು ನೋಡಿಕೊಂಡು ಒಂದು ಸಣ್ಣ ಬಸವಣ್ಣನ ಗುಡಿಯ ಹತ್ತಿರ ಬೀಡು ಬಿಟ್ಟರು. ಮಾದೇವ ಕೊಳ್ಳು ಹರಿದು, ಚಕ್ಕಡಿಗಳ ಸುತ್ತಲೂ ಗುಡಾರ ಕಟ್ಟಿ ಹುಲ್ಲು

ತೆಗೆದು. ಥಳಿ ಹೊಡೆದು ಅಣಿ ಮಾಡಿಕೊಟ್ಟು ಎತ್ತಿನ ಮೈ ತೊಳೆಯಲು ಉಳಿದ ಜತೆಗಾರರೊಡನೆ ಹೋದ ಇತ್ತ ಗೌರಿಯು ಮಕ್ಕಳನ್ನು ಗೌಡರ ಮಕ್ಕಳೊಂದಿಗೆ ತಿಂಡಿ ತಿನ್ನಲು ಬಿಟ್ಟು, ಒಡತಿಗೆ ಗುಟ್ಟು ಗದಡಿಗಳನ್ನು ಬಿಚ್ಚಿಬಿಚ್ಚಿ ಹಿಟ್ಟು ಅಕ್ಕಿಗಳನ್ನು ಸಿದ್ಧಪಡಿಸಿ ಕೊಡಹತ್ತಿದಳು. ಒಡತಿಯು ಮಿಂದು ಬಂದಳು. ಇನ್ನು ಹೋದಳು ಗೌರಮ್ಮ ಮಕ್ಕಳನ್ನು ಕರಕೊಂಡು ಬಾವಿಗೆ ದಾರಿಯಲ್ಲಿ ಬಸವಣ್ಣನಿಗೆ ನಮಸ್ಕರಿಸಿ ಮುಂದೆ ಹೊರಡಬೇಕೆಂದು ತಿರುಗಿದಳು. ಬಸವಣ್ಣನ ಗುಡಿಗೆ ನೂರು ಹೆಜ್ಜೆ ದೂರ ಒಬ್ಬ ಭಿಕ್ಷುಕನೂ ಹುಚ್ಚನೋ ಗಿಡದ ಬುಡದಲ್ಲಿ ಮಲಗಿ. ಸಾಯತೇನೊ ಎಂದೂ ಹೀಂಗ ಮಾಡೂದುಲ್ಲಾ ನಾನೂ ಒಮ್ಮೆ ನಿನ್ನ ಮಾರಿ ತೋರಸೂ.. ಎಂದು ನರಳುತ್ತಾ ಬಿದ್ದಿದ್ದನು. ಸುತ್ತು ನಿಂತು ಇದನ್ನು ನೋಡುತ್ತಿದ್ದ ಉಡಾಳರು ಅವನ ಮೈಮೇಲೆ ಕಲ್ಲು ಒಗೆಯಹತ್ತಿದರು. ಗೌರಿ ಇದನ್ನೆಲ್ಲ ಕೇಳಿ ನೋಡೋಣವೆಂದು ಓಡಿದಳು ಯಾರವನು ಯಾವನೋ ಹೊಲೆಯ ಎಂದನೊಬ್ಬ ಹಯ್ಯೋ ಯಪ್ಪಾ!~ ನಾನು ನನ್ನ ಕಾಲ್ಕಾಗ ಕಲ್ಲು ಹಾಕ್ಕೊಂಡೆ ಹೆಂತಾ ಗರತಿ ಗೌರಾಗಿದ್ದಾರೆ ನನ ದಶಿಂದ ತನ್ನ ಜಲಮಾ ಏಸಂತ ಹತಿ ಮಾಡಿದ್ಲೂ ನಾನು ಪಾಪಿ ಶಿಂದೀ ಕುಡುಕುಡುದ ಹೊಡದೆ ನಡೀ ಹುಚ್ಚನ ಮಾತೇನು? ಎನ್ನುತ್ತ ಎಲ್ಲರೂ ಅಲ್ಲಿಂದ ಬಾವಿಯ ಕಡೆಗೂ ಗುಡಿಗೋ ಕಾಲ್ಲೆಲೆದರು ಇನ್ನುಳಿದರು ಗೌರಮ್ಮ, ಅವಳ ಮಕ್ಕಳು ಅವಳಿಗಾಗಿ ತಿನ್ನಲು ಗೌಡಿತಿ ಕೊಟ್ಟ ಸುರುಳಿಹೋಳಿಗಿ ಕರಚೀಕಾಯಿಗಳು ಅವಳ ಉಡಿಯಲ್ಲಿ ಹಾಗೆಯೇ ಇದ್ದವು. ಭಿಕಾರಿಯ ಮುಂದೆ ಇಟ್ಟು ಇಕಾ. ತಿನ್ನೂ ನಿನಗ್ಯಾರೂ ಇಲ್ಲೇನು? ಎಲ್ಲೋ ನೋಡಿದ ಹಾಂಗೈತೀ... (ಮನಸ್ಸಿನಲ್ಲಿ) ನನ್ನೊಡ್ಯಾ ಬ್ಯಾರೇ ಇರಾಕಿಲ್ಲಾ ಶಿವಾ ಮಾದೇವಾ! ಮಾದೇವನ ಮೂರ್ತಿಯು ಕಣ್ಣ ಮುಂದೆ ಬಂದಿತು... ಭಿಕ್ಷುಕ ನೆರಳುತ್ತ ಅಂದ ಇಲ್ಲಾ ಯಾಕಮ್ಮಾ ನನಗೆ ಬಂಗಾರದಂತಾ ಹೇಣತಿ. ಮುತ್ತಿನಂತಾಯಾಡ್ಡ ಮಕ್ಕಳಿದ್ರೂ ಎಲ್ಲೀಯವ ನೀನೂ? ನಮ್ಮೂರು ಗಟ್ಟಿದ ಆಚೆಗೆ ಗೌರಿ ಬೆಚ್ಚಿದಳು ಭಿಕಾರಿ ನೋಡಲಿಲ್ಲ. ನಿನ್ನ ಹೇಣತೀ ಏಸೇನು? ಮಕ್ಕಳೆಲ್ಲೆದಾವ?" ಅಯ್ಯೋ ನನ್ನ ಕಂತೀ ಬಂಗಾರದ ಕಂತೀ.. ಹಿಂತಾ ಯಾಳೇದಾಗರ ನೀ ನನಗೆ ದೂರ ಮಾಡಬ್ಯಾಡಾ ನಾ ಸಾಯತೇನೀ ಸಂಗಟಾ ಬಾಳಾಗತೈತ್ಯೋ ಶಿವನೇ... ಕಾಂತೀ ನನ್ನ ಜೀವದ ಕಂತೀ... ಏಸ ಊರ ನೋಡಿದ್ವಿ ನಿನ್ನ... ಇನ್ನ ತಿರುಗೂ ರಾಗಾಣಿಲ್ಲಾ ಕಂತೀ.. ಕಂತೀ... ಗೌರಿಯಿಂದಿನ್ನು ಸಹಿಸಲಸಾಧ್ಯವಾಯಿತು.

ರೊಪ್ಪನೆ ಅವನ ಮೈಮೇಲೆ ಬಿದ್ದಳು. ಇಕಾ ನಾ ಬಂದೇನಿ ನಾನೆ ಕಂತಿ ಗೌಡ್ರ ಮನ್ಯಾಗ ತಿಂದುಂಡ ಸುಕದಿಂದದೇನೀ ಇಕಾ ನಿನ್ನ ಮಕ್ಕಳೂ ನಿನ್ನ ನಪ್ಪಾಗೇ ಆಗತೈತೀ ಮಕ್ಕಳ ಕಾಲಾಗ ಹೆದರಿ ನಿನ್ನೆ ಬಿಟ್ಟ ಬಂದೇ ಕಡೀಕ ದರ್ಸಣಾ ಕೋಟ್ಯಾ? ಆತನ ಬೆದರು ಮೈಯ್ಯ ಹೊಲಸುಕೂರಿಬಿದ್ದು ನಾರುತ್ತಿದ್ದೆ ದೇಹದ ನಾತ. ಇವಾವುದರ ಪರಿವೆ ಇಲ್ಲವಳಿಗೆ ಹೃದಯದಲ್ಲಿ ಹುದುಗಿದ್ದ ಪತಿಭಕ್ತಿಯ ಜಾಗೃತವಾಗಿದೆ. ಮಾಯೆ ಉಕ್ಕಿಬಂದಿದೆ... ಮಕ್ಕಳನ್ನು ಮುಂದೆ ಕರೆದು ತೋರಿಸಿದಳು. ಇಬ್ಬರನ್ನೂ ಅಪ್ಪಿಕೊಳ್ಳಲೆದ್ದ ಭಿಕ್ಷುಕ ಮಕ್ಕಳು ಹೆದರಿ ಓಡತೊಡಗಿದವು. ಉಡಿಯೊಳಗಿನ ಸುರುಳಿ ಹೋಳಿಗೆ ಭಿಕ್ಷುಕನಿಗೆ ತನ್ನ ಕೈಯಿಂದ ತಿನ್ನಿಸಿದಳು ಕಂತೀ ನೀ ಆರಾಮ ಆದೀ ಕಂದಪ್ಪಗೋಳು

ಬಾಳ ಸನ್ಮೆಂತ ಆದಾರ ದೇವರು ನಿನ್ನ ಭಾವಕ್ಕೆ ತಕ್ಕ ಪಲಾ ಕೊಟ್ಟಾ ಸುಕಾ ಕಂಡೀ ನಾನೋಡು, ಗಿಡದ ಬಡ್ಡಾಗೆ ಪರದೇಶದಾಗ ಆದರೂ ನೀ ಸಿಕ್ಕಿ ನನ್ನ ದೇವತೀ ನನಗೆ ಕಂಡಳೂ... ನಾಯೇನು ಇನ್ನೊಂದ ಗಳಿಗೀಯಾಂವಾ... ಅವಳು ಬಿಕ್ಕುತ್ತಲೇ ಇದ್ದಳು. ಹಿರಿ ಮಗನು ಓಡುತ್ತಹೋಗಿ ಮಾದೇವನನ್ನು ಯಾವಾಗ ಕರತೆಂದ ಅವಳಿಗೆ ಗೊತ್ತಾಗಲಿಲ್ಲ ಗೌರಾ ಇಕಾ ಮಾದೇವಾ ನೋಡು... ಇಂವ ಇಂವ" ನನ್ನ ಕಂತೀ ಮಾದೇವನಿಗೆ ಗೊತ್ತಾಯಿತು. ಭಿಕಾರಿಯೂ ಮಾದೇವನನ್ನು ನೋಡಿದ ಎಪ್ಪಾ ನೀನು ನನ್ನ ಕಂತಿಗೆ ಅನ್ನಾ ಹಾಕಿದ್ಯಾ...? ಇಲ್ಲವೆಂದು ಗೋಣುಹಾಕಿದ ಮಾದೇವ. ಇಕಾ ಕಂತೀ ನೀನೂ ಸಣ್ಣಾಕೀ ನಾ ಸತ್ತನೆಂತ ಹಾಂಗ ಉಳೀ ಬ್ಯಾಡಾ ಮಕ್ಕಳನ್ನು ಹಾಂಗ ನೋಡಪಾ ಅಂದ್ರ ಯಾವನೂ ನೋಡುದುಲ್ಲಾ ನೀ ಒಬ್ಬಾಂವನ್ನ ನೋಡಿಕೊಂಡು ಉಡಕೀ ಆಗೂ.." ಮಾದೇವನ ಕಣ್ಣಲ್ಲಿ ನೀರು ಬಂದಿತು. ಇಬ್ಬರ ದೃಷ್ಟಿಗಳು ಕೂಡಿದ್ದನ್ನು ಭಿಕ್ಷುಕ ಕಂಡನು... ಗೊತ್ತಾತೂ ಎಪ್ಪಾರಾಯ ಶೇರೇ ಶಿಂದೀ ಕುಡಿಬ್ಯಾಡಾ ಹಾಂ...ನಾ ತಿಂದೀ ಕುಡದ ಆಕೀಗೆ ಮಕ್ಕಳಿಗೆ ಎರವಾದೇ ಕಂ... ಹಕ್ಕಿಯು ಪಂಜರದೊಳಗಿಂದ ಹಾರಿ ಹೋಯಿತು. ಕಂತೆವ್ವ ಎದೆ ಬಡಿದುಕೊಂಡು ಆಳಲಾರಂಭಿಸಿದಳು. ತನ್ನ ಮಾಂಗಲ್ಯ ಹರಿದು ಅವನ ಮೇಲೆಸೆದು ತಗೋ ನಿನ್ನ ಮಣೀನ ಎಂದಳು. ಮಾದೇವ ಅದು ಸರಿಯಾದ ವೇಳೆ ಸ್ಥಳವಲ್ಲವೆಂದು ಸಮಾಧಾನ ಹೇಳಿ, ಗೌಡರ ಕಿವಿಗೆ ಈ ಸುದ್ದಿ ಹೋಗದಂತೆ ಅಲ್ಲಿಯೇ ದೂರದಲ್ಲಿ ಕಂತೆವ್ವನ ಗಂಡನ ಅಂತ್ಯಸಂಸ್ಕಾರ ಮಾಡಿಸಿದನು.

ದೇವಿಯ ಗುಡ್ಡದಲ್ಲಿಯೇ ಜಾತ್ರೆಯಲ್ಲಿ ಅವಳ ಗಂಡನ ಮೂರು ದಿನದ ಕರ್ಮ ಮುಗಿಸಿದನು ಮಾದೇವ ತರುವಾಯ ಮತ್ತೆರಡು ದಿನವಿದ್ದು ಉಡಿಕೆಯ ಶಿಷ್ಟಾಚಾರ ಮುಗಿಸಿಕೊಂಡು ಊರಿಗೆ ತೆರೆಳಿದರು. ಕಂತೆವ್ವ ಮನೆ ಬಿಟ್ಟು ಹೊರಟ ಎರಡು ವರ್ಷಗಳಲ್ಲಿ ಪರಿಸ್ಥಿತಿಯು ಬದಲಾಗಿ, ಅವಳ ಜೀವನವು ಈ ಮಟ್ಟಿಗೆ ಬಂದು ನಿಂತಿತ್ತು.

ಬಾಗಿಲು ಬಡಿದ ಸಪ್ಪಳವಾದುದರಿಂದ, ಗೌರಮ್ಮ ಎಚ್ಚೆತ್ತಳು ತೊಟ್ಟಿಲು ತೂಗುತ್ತಲೇ ಜೊಂಪು ಹತ್ತಿದಾಗ ಅದೆಲ್ಲ ತಾನು ಕಂಡ ಕನಸೆಂದು ಕಂತೆವ್ವನಿಗೆ ಆಗ ಅರಿವಾಯಿತು. ಹಿಂದಿನ ಎರಡು ವರುಷಗಳ ತನ್ನ ಜೀವನದ ನೆನಪೂ ಮನಸಿನ ಮೇಲೆ ಮೂಡಿತು...

ಮಾದೇವ ಪೇಟೆಯಿಂದ ಮಗುವಿಗೆ ಹುಟ್ಟಿದ ಹಬ್ಬದ ನಿಮಿತ್ತ ತಂದಿದ್ದ ಉಂಗುರವನ್ನೂ ಬೆಳ್ಳಿಯ ಉಡುದಾರವನ್ನೂ ಸುಂದರವಾದ ಬಟ್ಟೆಗಳನ್ನೂ ನೋಡಿ ಹಿಗ್ಗಿದಳು... ಜೀವನದಲ್ಲಿ ಬರೀ ಕತ್ತಲೆಯೇ ಇಲ್ಲ ಬೆಳಕೂ ಇದೆಯೆಂದವಳಿಗೆ ಕ್ಷಣ ಹೊತ್ತು ಅನಿಸದೆ ಹೋಗಲಿಲ್ಲ.

## ಅವಳ ಉದ್ಧಾರ

**- ಸರಸ್ವತಿಬಾಯಿ ರಾಜವಾಡೆ (ಗಿರಿಬಾಲೆ)**

ಪತಿತೆಯೊಬ್ಬಳು ವಿಧವಾಶ್ರಮದ ಮುಂದೆ ನಿಂತಿದ್ದಳು. 'ಭಗಿನಿ, ಸಂಕೋಚಪಡಬೇಡ, ಬಾ, ಒಳಗೆ ಬಾ, ನಿನ್ನ ಮನೆಯೇ ಎಂದು ತಿಳಿ, ಸಮಾಜರೂಪೀ ಕರಾಳ ರಾಕ್ಷಸನಿಂದ ನಿಮ್ಮಂಥವರನ್ನು ರಕ್ಷಿಸಲೆಂದೇ ಈ ಆಶ್ರಮದ ಸ್ಥಾಪನೆಯಾಗಿರುತ್ತದೆ.'

ಪತಿತೆಯ ಕಣ್ಣುಗಳಲ್ಲಿ ನೀರು ತುಂಬಿತು. ಅಹ! ತನ್ನದಲ್ಲದ - ತನ್ನೊಂದು ಸಣ್ಣ ಅಪರಾಧಕ್ಕಾಗಿ ಮನೆಯಿಂದಲೇ ಹೊರದೂಡಿ, ಬೀದಿಯ ಭಿಕಾರಿಣಿಯನ್ನಾಗಿ ಮಾಡಿದ ತನ್ನವರೆಲ್ಲಿ! ಸಹೋದರ ವಾಂಛಯಿಂದ ಅನಾಥಳಾದ ತನ್ನನ್ನು ಬರಮಾಡಿಸಿಕೊಳ್ಳುತ್ತಿರುವ ಈ ಮಹಾತ್ಮರಲ್ಲಿ!

ಅವಳು ಆಶ್ರಮದ ವ್ಯವಸ್ಥಾಪಕರನ್ನು ಹಿಂಬಾಲಿಸಿದಳು. ವಿಶಾಲವಾದೊಂದು ಕೊಠಡಿ. ಆಶ್ರಮದ ಕಾರ್ಯನಿರ್ವಾಹಕ್ಕಾಗಿ ಮೀಸಲಾಗಿಟ್ಟುದೆಂದು ಕಂಡೊಡನೆ ತಿಳಿದು ಬರುವಂಥ ವ್ಯವಸ್ಥೆಯುಳ್ಳದಾಗಿತ್ತು. ವ್ಯವಸ್ಥಾಪಕರು, ತಮ್ಮ ಆಸನದಲ್ಲಿ ಕುಳಿತು, ಮೇಜಿನ ಮೇಲಿದ್ದ ದಾಖಲೆಯ ಪುಸ್ತಕವನ್ನು ತೆಗೆದರು.

“ನಿನ್ನ ಊರಾವುದು ತಾಯಿ?'

'ಚಿಂತಾಮಣಿ'

'ಹೆಸರು?'

'ಗೋಪಿ'

'ವಯಸ್ಸು?'

'ಇಪ್ಪತ್ತಮೂರು'

'ಮಕ್ಕಳಾಗಿದ್ದುವೆ?'

`...........'

“ಹೇಳಮ್ಮ, ನಾಚುಗೆ ಬೇಡ'

'ಈ ಸ್ಥಿತಿಗೆ ಬಂದು ಹತ್ತು ವರ್ಷಗಳಾಗುತ್ತ ಬಂದವು. ನನ್ನ ಭಾಗ್ಯವು ಹಾಳಾದಾಗ ನಾನು ಇನ್ನೂ ಪ್ರಾಯಕ್ಕೆ ಬಂದಿರಲಿಲ್ಲ....'

“ಸರಿ : ಬಾಲವಿಧವೆ, ಆದರೆ ಇದೀಗ ಮನೆಯವರು ಕೈಬಿಡಲು ಕಾರಣವೇನು ತಿಳಿಸಬಹುದೆ?'



. .. ನನ್ನ ಭಾವನವರು.... ನನಗೀಗ ಏಳು ತಿಂಗಳು'

'ನಮ್ಮ ಆಶ್ರಮದ ಸಂಗತಿಯು ನಿನಗೆ ಹೇಗೆ ತಿಳಿಯಿತು ತಾಯಿ?'

'ಪತ್ರಿಕೆಗಳ ಜಾಹೀರಾತಿನ ಮೂಲಕ

“ನಿನಗೆ ಓದುಬರಹವುಂಟೆ?'

'ಶಾಲೆಗೆ ಹೋದವಳಲ್ಲ. ಆದರೂ ಓದಿ ಅರ್ಥಮಾಡಿಕೊಳ್ಳುವಷ್ಟು ತಿಳಿಯುತ್ತದೆ' 'ಸರಿ, ಯಾವ ಚಿಂತೆಯೂ ಇಲ್ಲದೆ ನೀನಿನ್ನು ಸುಖವಾಗಿರಬಹುದು. ಪ್ರಕೃತ ಮಾತೃಮಂದಿರ ವಿಭಾಗದಲ್ಲಿ ನಿನ್ನನ್ನಿರಿಸುವೆವು. ಅಲ್ಲಿ ಮಾತೆಯು ನಿನ್ನನ್ನು ನಿಶ್ಚಯವಾಗಿಯೂ ಪ್ರೀತಿಸುವರು.'

೨

ವಿಧುರನೊಬ್ಬನು ವಿಧವಾಶ್ರಮದ ಮುಂದೆ ನಿಂತನು. 'ದಯಮಾಡಿಸಬೇಕು ರಾಯರು. ತಮ್ಮದೇ ಸಂಸ್ಥೆ ಇದೆಂದು ತಿಳಿಯಬೇಕು. ಸಂಕೋಚಮಾಡಬಾರದು. ಒಳಕ್ಕೆ ಬರೋಣಾಗಲಿ.'

ವಿಧುರನು ವ್ಯವಸ್ಥಾಪಕನನ್ನು ಹಿಂಬಾಲಿಸಿದನು. ಇಬ್ಬರೂ ಏಕಾಂತಕ್ಕೆ ನಡೆದರು.

ನಿಮ್ಮ ಪ್ರಸಿದ್ಧ ಪತ್ರಿಕೆಯ ಪ್ರಕಾರ ನಾನು ಬಂದಿರುವುದಾಗಿದೆ. ದೊಡ್ಡಮನೆ, ಬೇಕಾದ ಸಂಪತ್ತು, ಮಕ್ಕಳಿಲ್ಲ. ಅವಳು ಹೋಗಿ ವರ್ಷವಾಯಿತು. ಇದ್ದಾಗಲೂ ಕಾಯಿಲೆ, ಸಂಸಾರ ಸುಖವಿಲ್ಲ. ಪ್ರಾಯಮೀರಿದರೂ ಒಂದು ಆಸೆ-ಒಂದು ಭ್ರಾಂತಿ ಒಂದಾದರೂ ಮಗುವಾಗಿ ಸಂಪತ್ತಿಗೆ ವಾರಸು ದೊರೆಯುವುದೋ, ಪಿತೃ ಋಣ ತೀರೀತೋ ಏನೋ ಎಂದು! ಸಣ್ಣ ಹುಡುಗಿಯನ್ನು ಮದುವೆಯಾಗುವ ಪ್ರಾಯ ಮೀರಿತು. ನೋಡಿ.

'ಛೇ, ರಾಯರೆ! ತಮಗೆ ಪ್ರಾಯ ಸಂದಿರುವುದೆಂದು ಹೇಳಿದುದಾರು? ಹೆಚ್ಚಾದರೆ ಐವತ್ತೋ ಸಂದೇಹ, ಪಾಶ್ಚಿಮಾತ್ಯರು ನೋಡಿ, ಐವತ್ತರಲ್ಲಿ ಯೌವನೋದಯವೆನ್ನುವರು. ತಮ್ಮಂತಹವರ ಸಹಾಯವಾಗಲೆಂದೇ - ಅನಾಥರಿಗೆ ದಾರಿಗಾಣಿಸಲೇಂದೇ ನಾವೀ ಆಶ್ರಮವನ್ನು ಬಹುಶ್ರಮದಿಂದ ನಡೆಸುತ್ತಾ ಬರುತ್ತಿದ್ದೇವೆ. ತಮ್ಮಂಥಾ ಎಷ್ಟೊಂದು ಸದೃಹಸ್ಥರು ನಮ್ಮಿಂದ ಸಂತೋಷ ಕಾಣಲಿಲ್ಲ! ಎಷ್ಟೊಂದು ಅನಾಥ-ಅಬಲೆಯರು ಮಕ್ಕಳು ಮರಿಗಳನ್ನು

ಹಡೆದು ಸಮಾಜದಲ್ಲಿ ಗೌರವಸ್ಥಾನವನ್ನು ಹೊಂದಲಿಲ್ಲ! ಎಲ್ಲ ಈಶ್ವರ ಕೃಪೆ! ತಮ್ಮ ಸುಖಕ್ಕಾಗಿ, ತಾವು ಇಷ್ಟ ಪಡುವ ಪ್ರಾಣಿಯನ್ನು ಆರಿಸಿಕೊಳ್ಳಬಹುದು. ಬಾಲವಿಧವೆಯರು, ಪ್ರೌಢ ವಿಧವೆಯರು, ಮಕ್ಕಳ ತಾಯಂದಿರು, ಗರ್ಭವತಿಯರು - ಇವರಲ್ಲಾದರೂ ಸರಿಯೆ, ತಮ್ಮ ತೋರಿಕೆಗೆ ಬಂದೊಡನೆ ತಮ್ಮ ಗೃಹಿಣಿಯೆಂದು ತಿಳಿಯಿರಿ.”

'ಆದೆಲ್ಲಾ ಸರಿಯೇ, ನನಗೆ ಪ್ರಾಯ ಬಂದ, ಒಂಟಿ ಸ್ತ್ರೀಯೇ ಆಗಬೇಕಾಗಿದೆ. ತಮ್ಮ ಖರ್ಚು ಏನು ತಗಲಬಹುದು?



'ತಮ್ಮಂಥವರು ಹಾಗೆ ಕೇಳಬಾರದು. ಅನಾಥೋದ್ಧಾರಕ್ಕಾಗಿ ವ್ಯಯಿಸಲ್ಪಡುವ ಹಣ. ಅದು ಎಷ್ಟಾದರೇನು? ತಾವು ಇಷ್ಟಪಟ್ಟಷ್ಟು.'

'ಐನೂರು?'

'ರಾಯರೇ!'

'ಹೋಗಲಿ, ಸಾವಿರ'

'ತಾವು ನಮ್ಮ ಗೋಪಿಯನ್ನು ನೋಡಬೇಕು. ಸುರಸುಂದರಿ, ಸದ್ಗುಣೀ, ಮಗಳಂತೆ ವರ್ಷದಿಂದ ಸಾಕಿದ್ದೇವೆ. ಅವಳ ಕೂದಲು ಮುಡಿಯ ಬೆಲೆಯಿಲ್ಲ ರಾಯರೇ ತಮ್ಮ ಸಾವಿರ! ಅದೋ, ಇತ್ತ, ಈ ಕಿಟಕಿಯ ಕಡೆಗೆ ಬನ್ನಿ, ಅಲ್ಲಿ ನೋಡಿ, ತುಲಸಿಗೆ ನೀರೆರೆಯುತ್ತಾಳಲ್ಲಾ, ಅವಳೇ ನಾಳೆ ತಮ್ಮ ಗೃಹಿಣಿಯಾಗ ತಕ್ಕವಳು! ತಮ್ಮಂತಹ ಶ್ರೀಮಂತರನ್ನು ಸೇರಿ ಅವಳ ಹಾಳಾದ ಭಾಗ್ಯವು ಬೆಳಗಲಿ!'

“ಏನು!... ಅವಳೆ? ನನ್ನವಳು? ಇರಲಿ. ಮರುಮಾತಿಲ್ಲದೆ ಐದು ಸಾವಿರವೆಂದು ಒಪ್ಪಿಕೊಂಡೆನು. ನಿಮ್ಮ ಆಶ್ರಮವು ಚಿರಸ್ಥಾಯಿಯಾಗಲಿ, ಇಂಥಾ ಸ್ತ್ರೀಯರು ನಿಮ್ಮ ಆಶ್ರಮದಲ್ಲಿ ಇನ್ನೂ ಹೆಚ್ಚಲಿ. ಆರ್ಯ ವಿಧರೀತ್ಯಾ, ನಾಳೆಯೇ ಶುಭಮುಹೂರ್ತವಾಗಬಹುದೆ?'

'ತಮ್ಮ ಆಜ್ಞೆಗೆ ವಿರೋಧವೆ?'

'ನಮಸ್ಕಾರ!'

'ನಮಸ್ಕಾರ'

## ೩

ಆಶ್ರಮದ ಬಯಲಲ್ಲಿ ಅವರಿಬ್ಬರು ಮಾತಾಡುತ್ತಿದ್ದರು.

'ಮಗು, ತಾಯಿ! ನೀನು ದುಃಖಿಸುವುದೇಕೆ?'

“ಅಯ್ಯೋ, ನನ್ನನ್ನು ಇಲ್ಲೇ ಇರಗೊಡಿ, ಏನೋ, ಬಲಪ್ರಯೋಗದಿಂದಾಗಿ ಮಾತ್ರ ನಾನು ಪತಿತೆಯಾದೆನಲ್ಲದೆ, ಆತ್ಮಸಾಕ್ಷಿಯಾಗಿ ನನಗೆ ಪೂರ್ವಸಂಪ್ರದಾಯದಲ್ಲಿ ನಂಬಿಕೆಯೂ, ಭಕ್ತಿ ಗೌರವಗಳೂ ಇವೆ. ಆತ್ಮತಃ ನಾನು ಪರಿಶುದ್ಧಳು - ಹಾಗೆಯೇ ಸಾಯುವವರೆಗೂ ಇರಬೇಕೆಂದು ನನ್ನ ಆಸೆ. ಅದನ್ನೇಕೆ ಕೆಡಿಸುವಿರಿ? ಇಷ್ಟು ದಿನ ತಾಯಿತಂದೆಯರಂತೆ ಸಾಕಿ ಕೊನೆಗೆ ಬಿಟ್ಟುಹಾಕುವಿರಾ? ಸ್ವೇಚ್ಛೆಯಿಂದಲ್ಲದೇ, ಆಶ್ರಮಗಳಲ್ಲಿ ಬಲಪ್ರಯೋಗ ಮಾಡಲ್ಪಡುವುದಿಲ್ಲವೆಂದು ಕೇಳಿದ್ದೆ. ಅದು ಸುಳ್ಳೆ?'

“ಏನು ಹುಚ್ಚಿ ಮಗು ನೀನು! ಇಷ್ಟು ಚಿಕ್ಕ ಪ್ರಾಯ! ಪ್ರಪಂಚವೆಲ್ಲಾ ಆನಂದಸಾಗರದಲ್ಲಿ ಓಲಾಡುತ್ತಿದೆ! ಇಂತಾ ರೂಪಾ! ಬದಲು ಪತಿಯ ಪ್ರೀತಿಯೇನೆಂಬುದರ ಕಲ್ಪನೆ ಕೂಡಾ ಇಲ್ಲದವಳು! ಹಾಗೆಲ್ಲಾ ಹಚ್ಚಿಕೊಳ್ಳಬಾರದು. ದೊಡ್ಡ ಮನೆ ಸೇರುವೆ. ಬೇಕಾದ ಸಂಪತ್ತು. ಒಳ್ಳೆ ಗುಣಿಗೃಹಸ್ಥ, ಅಲ್ಲದೆ ಒಬ್ಬೊಂಟಿಗ. ಅತ್ತೆ ಮಾವಂದಿರ ಕಾಟವಿಲ್ಲ, ಸವತಿ ಮಕ್ಕಳ ಉಪದ್ರವವಿಲ್ಲ. ಸ್ವತಂತ್ರಳಾಗುವೆ. ನೀನು ಸುಖಪಟ್ಟರೆ ನಮಗೆ ಆನಂದ.



ನಿಮ್ಮಂಥವರ ಉದ್ಧಾರವೇ ನಮ್ಮ ಆಶ್ರಮದ ಧ್ಯೆಯ! ಅಲ್ಲದೆ ಆಜನ್ಮ ನೀವೆಲ್ಲರೂ ಇಲ್ಲೇ ಕುಳಿತುಕೊಂಡರೆ ನಮ್ಮಿಂದ ಸಾಕಲು ಸಾಧ್ಯವಾಗುವುದೆ ತಾಯಿ? ಗತಿ ಇಲ್ಲದವರಿಗೆ ಗತಿಕಾಣಿಸಲೆಂದು ಮಾತ್ರ ಈ ಆಶ್ರಮ ಮಗು! ಅಲ್ಲಗಳೆದರೆ ನಿಮ್ಮನ್ನು ನಿಷ್ಠೂರವೆಂದು ತಿಳಿಯಬೇಕಾಗಿ ಬಂದೀತು!'

'ಹಾಗಾದರೆ, ಅಮ್ಮಾಜಿಯವರ ಉಪದೇಶದ ಅರ್ಥವೇನು?'

“ವ್ಯಭಿಚಾರ ಮಾತ್ರ ದೋಷವಮ್ಮಾ, ಒಬ್ಬನೊಂದಿಗೆ ಜೀವ ನಿರ್ವಾಹಕ್ಕಾಗಿ ಸಂಸಾರ ಮಾಡುವುದು ತಪ್ಪಲ್ಲ, ನಿನ್ನ ಹೊಸ ಪತಿಯೊಂದಿಗೆ ಪತಿವ್ರತೆಯರ ತತ್ವಗಳನ್ನು ನೀನು ಅನುಸರಿಸಿದರೆ ನಿನಗೆ ಮೋಕ್ಷವು ನಿಶ್ಚಯ.'

'ನನ್ನ ಮಗುವಿನ ಗತಿ?”

“ಎಲ್ಲಿಯ ಮಗು ತಾಯಿ? ಅದು ಅನೀತಿಯ ಸಾಕ್ಷಿ. ಒಬ್ಬ ಕಾಮುಕನ ವಾಸನಾಪಿಂಡ! ಅದು ಆಶ್ರಮದಲ್ಲೇ ಉಳಿಯಲಿ! ಅನಾಥ ಬಾಲಕರೊಂದಿಗೆ ಬೆಳೆದು ಕಲಾಶಾಲೆಯಲ್ಲಿ ಕಲಿತು, ಪ್ರಸಿದ್ಧಿಗೆ ಬರಲಿ. ಅದನ್ನು ನೀನು ಹೆತ್ತಿರುವೆಯೆಂದು ಯಾರಲ್ಲೂ ಪ್ರಸ್ತಾಪಿಸಬೇಡ. ನಿನ್ನ ಜೀವನದಲ್ಲಿ ಅದೊಂದು ಅಜ್ಞಾತಸಂಭವವಾಗಿರಲಿ.'

ಅವಳಿನ್ನೇನು ಮಾತಾಡಲು ಸಾಧ್ಯ? ಅವಳದ್ದೇನು ನಡೆಯಬಹುದು? ಮಾರನೆ ದಿನ ಆಶ್ರಮದ ವ್ಯವಸ್ಥಾಪಕರ ಎಡಕೈಯು ಐದು ಸಾವಿರದ ಥೈಲಿಯನ್ನು ಹಿಡಿದುಕೊಳ್ಳುವಾಗ ಬಲಕೈಯು ಗೋಪಿಯನ್ನೊಬ್ಬ ಮುದುಕನ ಕೈಯ್ಯನ್ನು ಹಿಡಿಸಿತು.

೪

ನೂತನ ಸಂಸಾರವು ಸಾಗುತ್ತಿರುವಾಗ ಒಂದು ದಿನ ನಟ್ಟಿರುಳಲ್ಲಿ 'ಬೇಡಗುಗಾತಿ! ಸಾಕು ನಿನ್ನ ಬಿನ್ನಾಣವೆಲ್ಲ. ಹಿಡಿಯಬಾರದಂತೆ- ಕುಡಿದರೆ ಕೆಟ್ಟುಹೋಗುವುದೇನು? ನಾನು ಗಳಿಸಿಟ್ಟ ಹಣವನ್ನು, ನಾನು ಉಪಭೋಗಿಸದೆ ಯಾರಿಗಿಡಲಿ? ನಿನ್ನನ್ನು ಕಟ್ಟಿಕೊಂಡು ವರ್ಷವಾಯಿತು, ಒಂದು ಮಗುವಾದರೂ ಹುಟ್ಟಿದರೆ ಸಾರ್ಥಕವಾಗುತ್ತಿತ್ತು. ಬಾಳಿನ ನೋವನ್ನು ಮರೆಯಲು ಕುಡಿಯುತ್ತಿದ್ದರೆ ನಿನ್ನದೇನು ನಷ್ಟ? ಅಧಿಕಪ್ರಸಂಗ ಮಾಡಿದೆಯಾದರೆ ಒದೆ ತಿನ್ನಬೇಕಾದೀತು.'

“ಅಯ್ಯೋ, ಹಾಗಲ್ಲ - ಕುಡಿತವು ಕೆಟ್ಟದೆಂದು ಕೇಳಿದ್ದೆ. ಹಣ ಹಾಳಾಗಲಿ, ಅದಾಗಲೆ ದೇಹವನ್ನೆಲ್ಲಾ ಕೆಡಿಸಿಕೊಂಡಿರುತ್ತೀರಿ. ಇನ್ನು ಕುಡಿದು, ಆತ್ಮವನ್ನೂ ಏಕೆ ಹಾಳುಮಾಡಿಕೊಳ್ಳಬೇಕೆಂದಿಷ್ಟೆ ನಾನು ಹೇಳುವುದು.... ಮತ್ತೆ ನಿಮಗೆ ಹೇಳಲು ನನಗೇನು ಅಧಿಕಾರವಿದೆ?'

'ನನ್ನಾತ್ಮವು ಅದೆಂದೂ ಹಾಳಾಗಿ ಹೋಗಿದೆ. ಮೇಲಾಗಿ ನಿನ್ನಂತಹ ಗೊಡ್ಡು ಹೆಣದೊಂದಿಗೆ ಸಂಸಾರ! ಇನ್ನೇನು ಬೇಕು ನನ್ನಾತ್ಮ ಹಾಳಾಗಲಿಕ್ಕೆ? ಕುಡಿತವು ನನಗೆ ಹೊಸತಲ್ಲ. ಹೆಚ್ಚು ಹರಟಬೇಡ. ಹೋಗಾಚೆ! ನಿನ್ನನ್ನು ಹೊರದೂಡಿದರೇನು? ನೀನಾರು ನನಗೆ ಉಪದೇಶ ಮಾಡಲಿಕ್ಕೆ? ನನಗೇನು? ಹಣವುಂಟು - ನಿನ್ನಂಥ ಹತ್ತು ಮಂದಿಯೂ ಇದ್ದಾರೆ. ನಿನ್ನಂತಹ ಗೊಡ್ಡಿಗೆ ತೆರಲಿಲ್ಲವೆ ಐದು ಸಾವಿರ?'

'ಸುಮ್ಮನೆ ಏಕೆ ಗೊಡ್ಡು - ಗೊಡ್ಡು ಎನ್ನುತ್ತೀರಿ? ನಿಮ್ಮಾತ್ಮವು ಒಪ್ಪುತ್ತದೆಯೇ? ಅಥವಾ ನೆರೆಕರೆಯವರ ಕಣ್ಣಿಗೆ ಮಣ್ಣು ಹಾಕಲು ಹಾಗೆ ಹೇಳುವಿರೆ? ನಾನು ಗೊಡ್ಡು ಎಂಬುದಕ್ಕೆ ಸಿದ್ಧಾಂತವೇನು? ಹೊರನೋಟಕ್ಕೆ ಗಂಡಹೆಂಡರಂತಿದ್ದರೆ ನಮ್ಮದು ತಂದೆಮಕ್ಕಳಂತಹ ಸಂಬಂಧ! ಹೇಳಿ - ನನ್ನ ದೇಹವನ್ನು ಪತ್ನಿರೂಪದಿಂದ, ಸ್ಪರ್ಶಿಸಬೇಕಾದ ರೀತಿಯಲ್ಲಿ, ಸ್ಪರ್ಶಿಸಿರುತ್ತೀರ? ಹಾಗಿದ್ದ ಮೇಲೆ ನನ್ನನ್ನು ಗೊಡ್ಡು ಎಂದು ಹೇಗೆ ನಿರ್ಧರಿಸಿದಿರಿ? ನಾನು ಹೇಗೂ ಪತಿತೆ, ಎಂದ ಮೇಲೆ ನನಗೆ ನಾಚುಗೆಯೇನು? ನಾನು ಗೊಡ್ಡಾಗಿ ಇದ್ದಿದ್ದರಾದರೂ ಸಮಾಜದಲ್ಲಿ ನನಗೆ ಸ್ಥಾನವಿರುತ್ತಿತ್ತೋ ಏನೂ! ಹಾಗಿರುತ್ತಿದ್ದರೆ ನಿಮ್ಮಲ್ಲಿಗೇಕೆ ಬರುತ್ತಿದ್ದೆ? ನಾನು ಗರ್ಭಿಣಿಯಾದ ದೋಷವೇ ನನ್ನನ್ನು ಪತಿತೆಯನ್ನಾಗಿ ಮಾಡಿತು ನಾನು ಗೊಡ್ಡಲ್ಲ - ನನ್ನ ಮಗು ಆಶ್ರಮದಲ್ಲಿ ಬೆಳೆಯುತ್ತಿದೆ.... ಮುದ್ದಾದ ಮಗು....'

"ಏನು!..... ನೀನು ವ್ಯಭಿಚಾರಿಣಿಯೇ? ಭಲೆ - ನಿನ್ನಂತಹ ಸೂಳೆಗೆ ನಾನು ಐದು ಸಾವಿರ ತೆತ್ತೆನೆ?....... ಆ ಮಗನೇಕೆ ನನಗೆ ಈ ವಿವರವನ್ನು ತಿಳಿಸಲಿಲ್ಲ! ಪಾಪಿ! ನನ್ನ ಐದು ಸಾವಿರ!'

'ಯಾರಲ್ಲಿ ಕೇಳುತ್ತೀರಿ? ನಿಮ್ಮಲ್ಲಿ ನಾನು ಬೇಡಿದೆನೇ? ಯಾರಿಗೆ ಕೊಟ್ಟಿರಿ? ಯಾಕೆ ಕೊಟ್ಟಿರಿ? ನನಗೇನು ಗೊತ್ತು? ನನ್ನನ್ನು ಗೋಳು ಹೋಯ್ದು ಫಲವಾದರೂ ಏನು? ನಾನು ಅನಾಥೆ – ಪತಿತೆ -ಅದೃಷ್ಟಹೀನೆ - ತಮ್ಮನ್ನು ಸೇರಿಯೂ ಸುಖದಿಂದ, ಗೌರವದಿಂದ ಇರಲು ಭಾಗ್ಯವಿಲ್ಲದ ಭಿಕಾರಿಣಿ.....'

ಎರಡು ಒದೆಗಳು!

'ಸುಖ? ಇನ್ನಾವ ಸುಖಬೇಕು ನಿನಗ? ಉಣ್ಣಲಿಲ್ಲವೇ? ಉಡಲಿಲ್ಲವೆ? ಮೇಲಾಗಿ ನನ್ನಲ್ಲಿ ಅಧಿಕಾರ ಮಾಡುತ್ತೀ. ಷಂಡನೆಂದು ಹಂಗಿಸುತ್ತೀ. ರಾಕ್ಷಸಿ - ಕುಲಟೆ - ನಡೆ ಬಿಡು ನನ್ನ ಮನೆಯನ್ನು - ಬಿಟ್ಟು ಹೊರಡು'.

ದೇವರೆ! ಎಲ್ಲಿಗೆ ಹೋಗಲಿ - ಈ ಅಪರರಾತ್ರೆಯಲ್ಲಿ.... !!!

"ಅಲ್ಲಿಗೆ, ನಿನ್ನ ಮಗುವಿನ ತಂದೆಯಲ್ಲಿಗೆ, ಓಡು.... ಐದು ಸಾವಿರ! ಬೆಳಗಾಗಲಿ; ಅವನನ್ನೊಂದು ಕೈ ನೋಡುವೆನು.'

ಕುಡುಕನು ಅವಳನ್ನು ಹೊರದಬ್ಬಿ ಬಾಗಿಲು ಹಾಕಿಕೊಂಡನು. ಅವಳು ಪುನಃ ನಿರಾಶ್ರಿತೆ!

ಅದೇ ರಾತ್ರಿ ದಾರಿಯಲ್ಲಿ

'ಏ, ಅಮ್ಮಾ, ಯಾರು ನೀನು - ಈ ರಾತ್ರಿ ಯಾಕೆ ಬೀದಿಯಲ್ಲಿ ಅಲೆಯುತ್ತೀ?"

'ವಿಧಿಯಪ್ಪಾ, ವಿಧಿ! ಅದನ್ನೆಲ್ಲಾ ಏನು ಕೇಳುತ್ತೀ - ನಾನೇನೆಂದು ಹೇಳಲಿ??

“ನೀನು ಚಂದಾಗಿದ್ದೀಯಲ್ಲಾ?'



‘...........

'ಏನಮ್ಮಾ ಮಾತಾಡುವುದಿಲ್ಲ, ನಿನ್ನನ್ನು ನೋಡಿದರೆ, ಮನೆಗೆ ಲಾತು ಕೊಟ್ಟು ಬಂದವವಳೆಂದು ತೋರುತ್ತದೆ. ಹಾಗಿದ್ದರೆ ಚಿಂತೆಬೇಡ, ಮಹಬೂಬಿ ಭಲೇ ಸಂತೋಷಪಟ್ಟಾಳು. ಬರುತ್ತೀಯಾ ಅಲ್ಲಿಗೆ ಹೋಗೋಣ?'

“ಯಾರಪ್ಪಾ, ಅದು, ಮಹಬೂಬಿಯೆಂದರೆ?'

'ಅದೆಲ್ಲಾ ನಿನಗೆ ಯಾಕೆ? ಬಾ, ಭಲೇ ರಂಗಿನಲ್ಲಿ ಕಾಲ ಕಳೆಯಬಹುದು' 'ನಡೆಯಪ್ಪಾ, ಇಡಿ ಮುಳುಗಿದವರಿಗೆ ಛಳಿಯೇನು? ಆಗುವುದೆಲ್ಲಾ ಆಗಲಿ, ಪ್ರಪಂಚದ ನಿಜಸ್ವರೂಪವಾದರೂ ಹೇಗಿದೆ ನೋಡೋಣ!

'ಒಳ್ಳೆ ಜಾಣೆಯಮ್ಮಾ ನೀನು ; ಹೀಗೆ ಬಾ.' ಮಹಬೂಬಿಯ ಮನೆಗೆ ಹೋದ ಮೇಲೆ:

“ಬುಬಾಜಾನ್, ನೋಡು ನಿನಗೊಂದು ಹಕ್ಕಿ!

'ಯಾರೆಲೋ ಅದು! ಏನಿದು ಬೊಬ್ಬೆ....' ಆದರೆ, ಅವಳನ್ನು ನೋಡುತ್ತಲೇ: 'ಆಹಾ, ಇದಾರು! ಭಲೆ ಖುಷಿಯಾಗಿದ್ದಾಳಲ್ಲಾ! ಬಾ, ಬಾಯೀ, ನೀನು ನನ್ನ ಮಗಳು! ಬಾ, ಹೀಗೆ ಬಾ'

ಅವಳೇನೆನ್ನುವಳು? ಅಲಂಕೃತವಾದ ಮನೆಯನ್ನೊಮ್ಮೆ ವಿಷಾದ ದೃಷ್ಟಿಯಿಂದ ನೋಡಿದಳು. ಅವಳಿಗೆ ತನ್ನ ಮುಂದಿನ ದಿನಗಳು ಅಲ್ಲಿ ಹೇಗೆ ಕಳೆಯಲಿದೆಯೆಂಬುದರ ಅರಿವಾಯಿತು. ಮಾರನೇ ದಿನವೇ ಅವಳ ಕಾರ್ಯಕ್ರಮವು ತೊಡಗುವುದು.

ವಿಧವಾಶ್ರಮದಿಂದ ಅದುದು ಇದೇ ಏನು?

ಅವಳ ಉದ್ದಾರ.

## ಹೊಣೆ ಯಾರು?

**- ಹೆಚ್.ವಿ. ಸಾವಿತ್ರಮ್ಮ**

"ಅಮ್ಮಾ, ಸೊರ್ನಮ್ಮ ಬಂದರು" . ಹೊರಗೆ ಆಡುತ್ತಿದ್ದ ಪುಟ್ಟ ಜಾನು ತಾಯಿಗೆ ವರ್ತಮಾನ ಕೊಟ್ಟಳು.

ಲಲಿತಮ್ಮ ಹುಬ್ಬು ಗಂಟುಹಾಕಿಕೊಂಡು "ಅದೊಂದೇ ಕಡಿಮೆಯಾಗಿತ್ತು ಈಗಿರೋ ಅವಾಂತರದಲ್ಲಿ" ಎಂದರು.

ಪಕ್ಕದಲ್ಲಿಯೇ ಕುಳಿತು ಊಟಮಾಡುತ್ತಿದ್ದ ಸುಬ್ರಹ್ಮಣ್ಯಂ "ಯಾಕೆ ಅಸಮಾಧಾನ ಪಟ್ಟುಕೊಳ್ಳುತ್ತೀ, ಆಕೆ ಬಂದದ್ದು ಒಳ್ಳೆಯದೇ ಅಲ್ಲವೇ ಅಮ್ಮನಿಗೆ ನಾಲ್ಕು ದಿನ ಅಡಿಗೆ ಮಾಡಿ ಹಾಕುತ್ತಾಳೆ. ನಿನಗೆ ನಿತ್ಯಾ ತಣ್ಣೀರು ಸ್ನಾನವಾದರೂ ತಪ್ಪುತ್ತಲ್ಲಾ' ಎಂದು ಸಮಾಧಾನಮಾಡಿದರು.

"ಏನು ಮಾಡ್ತಾಳೋ! ಅವಳ ಹೊಟ್ಟೆಗಾಗಿ ಮಿಕ್ಕರೆ ಅಲ್ಲವೇ ನಿಮ್ಮಮ್ಮನಿಗೆ" ಅಷ್ಟು ಹೊತ್ತಿಗೆ ಸ್ವರ್ಣಮ್ಮ ಅಲ್ಲಿಗೆ ಬಂದುದರಿಂದ ಮಾತು ಮುಂದುವರಿಸಲು ಹೋಗಿರಲಿಲ್ಲ. ಸ್ವರ್ಣಮ್ಮನನ್ನು ಸರಿಯಾದ ಹೆಸರಿನಿಂದ ಯಾರೂ ಕೂಗುತ್ತಿರಲಿಲ್ಲ. ಆಕೆಯ ಹೆಸರು ಸ್ವರ್ಣಾಂಬ ಎಂದು: ಈಗ ಚಿಕ್ಕವರಿಗೆಲ್ಲಾ ಸೊರ್ನಮ್ಮ" ದೊಡ್ಡವರಿಗೆಲ್ಲಾ "ಸೊರ್ನಿ" . ಎಂದಿನಂತೆ ಹರಿದು ತೇಪೆ ಗೀಪೆಯಾದ ಕೆಂಪು ಸೀರೆಯುಟ್ಟು ಕಂಕುಳಲ್ಲಿ ಮಾಸಿದ ಪಂಚೆಯ ಗಂಟನ್ನು ಹಿಡಿದು ಬಂದಿದ್ದಳು. ಸುಬ್ರಹ್ಮಣಂಗೆ ಆಕೆ ತನಗೇನು ಸಂಬಂಧವೆಂಬುದೇ ತಿಳಿದಿರಲಿಲ್ಲ. ತನ್ನ ತಾಯಿಯ ಚಿಕ್ಕಂದಿನ ಗೆಳತಿಯೋ, ದೂರದ ಸಂಬಂಧಿಯೋ ಇದ್ದಿರಬೇಕು. ಏಕೆಂದರೆ ಆಕೆಯ ವಿಚಾರವಾಗಿ ತಿಳಿದಿದ್ದ ಅಲ್ಪಸ್ವಲ್ಪ ಸಂಗತಿಗಳು ತಾಯಿಯಿಂದಲೇ.

"ಏನು ಸೋರ್ನಿ! ಬಹಳ ಅಪರೂಪವಾಗಿ ಬಂದುಬಿಟ್ಟೆಯಲ್ಲಾ?' ನಗು ಮುಖದಿಂದಲೇ ಸುಬ್ರಹ್ಮಣಂ ಸ್ವಾಗತಿಸಿದನು.

"ಮತ್ತೇನು! ರೈಲು ಛಾರ್ಜಿಗೆ ನಿಮ್ಮಪ್ಪ ಉಯಿಲಿನಲ್ಲಿ ನನಗೆ ಹಣ ಬರೀಲಿಲ್ಲವಲ್ಲಾ' ಎಲ್ಲರೂ ತನ್ನನ್ನು ಸಂಭೋದಿಸಿದಂತೆ ಸೊರ್ನಿಯೂ ಎಲ್ಲರನ್ನೂ ಏಕವಚನದಲ್ಲಿಯೇ ಸಂಭೋದಿಸುತ್ತಿದ್ದಳು.

"ನಿನ್ನನ್ನೂ ಟಿಕೆಟ್ ಕೇಳ್ತಾರೆಯೇ?"

'ಸೊರ್ನಿ ಮೂತಿ ತಿರುಗಿಸಿ, "ಇಲ್ಲ ಪಾಪ! ರೈಲಿನೋರು ನನ್ನ ಮಾವನ ಮನೆ ಬಳಗ 'ಬಾಮ್ಮಾ' ಅಂತ ಪಪ್ಪು ಕಾಳಸಿನಲ್ಲಿ ಕೂಡಿಸಿಕೊಂಡು ಬತ್ತಾರೆ."

"ಮತ್ತೆ ಈಗ ಹೇಗೆ ಬಂದೆ?"

ಆಗೋ ಆ ಶಿವಪ್ಪನ ಮನೆಗೆ ಹೋಗಿದ್ದೆ. ಅವರು ಸೋಮವಾರ ಮೈಸೂರಿಗೆ ಹೋಗ್ತಿವಿ ಅಂದ್ರು, ಅವರು ಹತ್ತು ಜನ ಇದ್ದರು. ನಾನೊಬ್ಬಳೇನು ಅವನಿಗೆ ಭಾರ? ಬಂದ್ದಿಟ್ಟೆ"

"ಒಳ್ಳೇ ಕೆಲಸ ಮಾಡಿದೆ. ಏಳು, ಮಡಿ ಉಟೊ."

"ಏನೇ ಲಲಿತಾ, ಮಕ್ಕೆಲ್ಲಾ ಚೆನ್ನಾಗಿದ್ದಾರೇನೇ? ಜಾನು ಒಬ್ಬಳೇ ಇದ್ದಾಳೆ ಚಂದು, ಬಾಬು ಎಲ್ಲೂ ಎಲ್ಲಿ?"

ಲಲಿತಮ್ಮ "ಕಾಲೇಜಿಗೆ ಹೋಗಿದ್ದಾರೆ" ಎಂದರು.

"ಕಾಲೇಜು? ಎಂಥಾದ್ದೇ! ಇನ್ನೂ ಚೋಟುದ್ದ ಹುಡುಗರು, ಅವರೆಂಥ ಕಾಲೇಜಿಗೆ ಹೋಗ್ತಾರೆಯೇ?"

"ಚಂದು ಈ ಸಲ ಬಿ.ಎಸ್ಸಿಗೆ ಕಡ್ತಾನೆ. ಬಾಬು ಇಂಟರ್ ಮೀಡಿಯೆಟ್" . ಸೂರ್ನಿ ಆಶ್ಚರ್ಯದಿಂದ ಅಲ್ಲೇ ಕುಸಿದು ಕುಳಿತಳು. "ಚೆನ್ನಾಯ್ತು. ಎಂಥ ಚಿನ್ನದಂಥ ಮಕ್ಕೇ! ನಿನ್ನ ಹೊಟ್ಟೆ ತಣ್ಣಗಿರಲಮ್ಮ, ಚಂದು ಡಿಕ್ರಿ ಕಳಾಸಿಗೆ ಬಂದ್ದಿಟ್ಟೆ! ಇಗೋ ಈ ಸುಬ್ಬನೂ ಹಾಗೆ, ಇನ್ನೂ ಇವನ್ನೊತೆ ಹುಡುಗ್ರೆಲ್ಲಾ ಹೈಸ್ಕೂಲೇ ದಾಟಿರಲಿಲ್ಲ, ಇವನು ಕೆಲಸಕ್ಕೆ ಸೇರೋವಾಗ, ಸರಿ! ನೀನೂ ಓದಿದವಳು ಸರಸ್ವತಿ ಸರಸ್ವತಿ ಹೊಟೇಲಿ ವಿದ್ಯಾವಂತರೇ ಹುಟ್ಟೋದು. ನನ್ಮಗ ನೋಡು! ಶುದ್ಧ ಪೆಂಗ. ಐದನೇ ಸಲ ಐದು ರೂಪಾಯಿ ಪರೀಕ್ಷೆಗೆ ಕಟ್ಟಿದ್ದಾನೆ. ಅಕ್ಷರ ತಕೊಂಡು ಗುಂಡಿನಿಂದ ಅವನ ಎದೆಗೆ ಹೊಡೀಬೇಕು." ಮಕ್ಕಳ ಹೊಗಳಿಕೆಯಿಂದ ಮನಕರಗಿ ಲಲಿತ, "ಏಳಿ ಸೋರ್ನಮ್ಮ, ಸ್ನಾನ ಮಾಡಿ" ಎಂದರು.

"ಇಗೋ ಅದಕ್ಕೇ ಬಂದಿರೋದು, ನನ್ನ ಮಗ ಮಾಣಿಕ್ಯ ಆಚೆ ಎಲ್ಲೋ ನಿಂತಿದ್ದಾನೆ, ಕರಿಯಮ್ಮಾ" .

"ಯಾರು? ಅನಂತನೂ ಬಂದಿದ್ದಾನೆಯೇ?"

"ಅವನ್ನೆಲ್ಲಿ ಬಿಟ್ಟು ಬರಲಿ ಹೇಳು. ಏನೋ ಸುಬ್ಬ, ಅವನಿಗೆಲ್ಲಾದರೂ ಒಂದೈದು ರೂಪಾಯಿನ ಜವಾನಿ ಕೆಲಸ ಕೊಡಿಸಬಾರದೇನೋ"

"ಲೋವರ್ ಸೆಕೆಂಡರಿ ಪರೀಕ್ಷೆಗೆ ಕಟ್ಟಿದ್ದಾನೆ ಅಂದೆ. ಪಾಸಾಗಲಿ, ನೋಡೋಣ" .

"ಅವನು ಪ್ಯಾಸಾಗೋದು ಮಣ್ಣಾದಮೇಲೆ ಅದೆಲ್ಲಾ ಬಿಟ್ಟಿಡು, ಈ ಸಲ ಶಿವಪ್ಪನೇ ಐದು ರೂಪಾಯಿ ಕೊಟ್ಟ. ಎಷ್ಟು ಸಲಾಂತ ಕೇಳೋದು ಹೇಳು?"

"ನೋಡಿಕೊಳ್ಳೋಣ ಏಳು ಸೊರ್ನಿ, ಊಟಮಾಡು, ಅನಂತನ್ನೂ ಕರಿ." ಅನಂತ ಸುಮಾರು ಹದಿನಾರು ಹದಿನೇಳು ವರ್ಷದ ಹುಡುಗ, ದೇಹ ವಯಸ್ಸು ಮೀರಿ ಬೆಳೆದಿದ್ದರೂ ಬುದ್ಧಿ ಮಾತ್ರ ಬೆಳವಣಿಗೆ ಚಿಹ್ನೆಗಳನ್ನೇ

ತೋರಿಸುತ್ತಿರಲಿಲ್ಲ. ತಾಯಿಯ ಹಿಂದೆ ಬಂದು ಬಾಯಿಬಿಟ್ಟುಕೊಂಡು ಸುಬ್ರಹ್ಮಣಂನನ್ನೇ ನೋಡುತ್ತಾ ನಿಂತನು. ಸೊರ್ನಿ,



"ಮಂಗನ ಹಾಗೆ ಮಿಕಿ ಮಿಕಿ ಅಂತ ನಿಂತ್ಕೋಬೇಡ, ಕೈಕಾಲು ತೊಳಕೊಂಡು ಊಟಮಾಡು" ಎಂದು ಮಗನನ್ನು ಕರೆದುಕೊಂಡು ಹೋದಳು.

ಲಲಿತಮ್ಮ, "ಸರಿ! ಇವಳು, ಇವಳ ಮಗ ಮನೆ ಸೇರಿದರೆ ಹೆಗ್ಗಣಗಳನ್ನು ಸಾಕಿಕೊಂಡಾಹಾಗೇ" ಎಂದರು.

ಸುಬ್ರಹ್ಮಣ್ಯಂ, "ಏನೋ ಪಾಪ! ಊಟಕ್ಕೆ ತೊಂದರೆಯಾದರೆ ನಾಲ್ಕು ದಿನ ಬರುತ್ತಾಳೆ, ಹೋಗುತ್ತಾಳೆ. ಬೇಜಾರು ಮಾಡಿಕೋಬೇಡ" ಎಂದು ಎದ್ದನು.

ಊಟಮಾಡುವಷ್ಟು ಹೊತ್ತು ಸೊರ್ನಿ ಲಲಿತಮ್ಮನೊಡನೆ ತನ್ನ ಗೋಳು ತೋಡಿಕೊಂಡಳು. "ಇದೊಂದೇ ಸೀರೆ, ನೋಡು ಲಲಿತಮ್ಮ, ಪಂಚೆ ಉಟ್ಟುಕೊಂಡು ಒಕ್ಕೋಬೇಕು. ಒಣಗಿದಮೇಲೆ ಉಟ್ಕೋಬೇಕು. ಒಂದು ಕಡೆ ಹೊಲಿದರೆ ಒಂದು ಕಡೆ ಹರಿಯುತ್ತೆ, ಪಂಚೇನೂ ಹರಕು. ಮಗ ದೊಡ್ಡವನಾದರೆ ಕಷ್ಟ ರೀತಿ ಅನ್ನೋ ಹಾಗಿಲ್ಲ. ಅವನಿಗೂ ಎಲ್ಲಾ ನಾನೇ ಒದಗಿಸಬೇಕು. ಮದುವೆ ಮಾಡದೆ ನಮ್ಮಪ್ಪ ಅಮ್ಮ ಬೀದಿ ಬಸವಿಯಾಗಿ ನನ್ನ ಬಿಟ್ಟಿಟ್ಟಿದ್ರೆ ಹಾಯಾಗಿತ್ತಾ ಇದ್ದೆ. ಆ ಮುಂಡೇದನ್ನ ಕಟ್ಟಿಕೊಂಡು ಒಂದು ದಿನವಾದರೂ ಸುಖಪಡಲಿಲ್ಲ. ಬಣ್ಣವಾಗಿ ಸೀರೆ ಉಡಲಿಲ್ಲ. ಒಡವೆ ಹಾಕಲಿಲ್ಲ. ಕೊನೆಗೆ ಆ ಪ್ರಾರಬ್ಧ, ಕ್ಷೌರಕ್ಕೆ ನಾಲ್ಕು ಕಾಸು ಕೂಡ ಬಿಟ್ಟುಹೋಗಲಿಲ್ಲ. ಅದಕ್ಕೂ ನಿಮ್ಮನ್ನೇ ಕೇಳಿಕೋಬೇಕಾಗಿದೆ.

ಅನಂತ ತಲೆ ತಗ್ಗಿಸಿಕೊಂಡು ಊಟ ಮಾಡುತ್ತಿದ್ದನು. ಬೇಕೆನ್ನುತ್ತಿರಲಿಲ್ಲ ಸಾಕೆನ್ನುತ್ತಿರಲಿಲ್ಲ. ಮಧ್ಯೆ ಮಧ್ಯೆ ಕೈ ತಿರುಗಿಸಿ ಏನೋ ಗೊಣಗಿಕೊಳ್ಳುತ್ತಿದ್ದನು. ಅಂತಹ ವೇಳೆಗಳಲ್ಲಾಲ್ಲಾ ಸೊರ್ನಿ, "ಸುಮ್ಮೆ ತಿಂದುಹೋಗೋ" ಎಂದು ಗದರಿಸುತ್ತಿದ್ದಳು.

"ಈಗ ನೀವು ಬಂದದ್ದು ಒಳ್ಳೇದೇ ಆಯ್ತು. ಸೊರ್ನಮ್ಮಾ, ಅತ್ತೆಮ್ಮನವರಿಗೆ ಮೈ ಹುಷಾರಾಗಿಲ್ಲ. ಸ್ವಲ್ಪ ದಿನ ಅಡಿಗೆ ಮಾಡಿಹಾಕಿದರೆ...."

"ನಿಜವಾಗಿ! ನನ್ನ ಬುದ್ಧಿಗೆ ಬೆಂಕಿ ಇಟ್ಟು, ಸುಬ್ಬಮ್ಮನೆಲ್ಲಿ ಅಂತ ಕೇಳಬೇಡವೇ? ಏನು ಖಾಯಿಲೆ? ಎಷ್ಟು ದಿನದಿಂದ? ಎಲ್ಲಿ ಮಲಗಿದ್ದಾರೆ."

"ಅಲ್ಲೇ ಮುಂದಿನ ಕೋಣೇಲೇ ಇದ್ದಾರೆ. ಏನು ಖಾಯಿಲೇನೋ! ಅವರಿಗೂ ವಯಸ್ಸಾಗಿದೆ, ಕೈಲಾಗೋದಿಲ್ಲ."

ಅಲ್ವೇ ಪಾಪ! ನನಗೇ ವಯಸ್ಸಾಯಿತು, ಸರಿಯಾಗಿ ಕಣ್ಣು ಕಾಣೋದಿಲ್ಲ. ನನಗಿಂತ ಇಪ್ಪತ್ತು ವರ್ಷವಾದರೂ ದೊಡ್ಡವಳಿರಬೇಕು, ನಿಮ್ಮತ್ತೆ"

* * * *

ಸೊರ್ನಮ್ಮ, ಅಂದಿನಿಂದ ಸುಬ್ಬಮ್ಮನ ಶುಶೂಷೆಗೆ ನಿಂತರು. ಸುಬ್ಬಮ್ಮ ಹಾಸಿಗೆ ಹಿಡಿದು ಆಗಲೇ ತಿಂಗಳಾಗಿತ್ತು. ಬಹು ಕಷ್ಟದಿಂದ ಬಚ್ಚಲು ಮನೆಯವರೆಗೆ ಹೋಗಿ ಬರುತ್ತಿದ್ದರು. ಅವರಿಗೆ ಬಾಯಿ ಕೆಟ್ಟು ಅನ್ನವೇ ಸೇರುತ್ತಿರಲಿಲ್ಲ. ಹುಳಿಯಾಗಿ ಹುಣಿಸೆ ಗೊಜ್ಜಿನಲ್ಲಿ ಅನ್ನ ಹಿಸುಕಿ ನುಂಗುತ್ತಿದ್ದರು. ಆದರೆ ಸೊರ್ನಿ ಅವರ ಉಪಚಾರಕ್ಕೇನೂ ಕಡಿಮೆ ಮಾಡಲಿಲ್ಲ. ದಿನಕ್ಕೊಂದು ಸಿಹಿ ಪದಾರ್ಥ ತಯಾರಿಸುತ್ತಿದ್ದು, ವಿಧವಿಧ



ಚಿತ್ರಾನ್ನಗಳನ್ನು ಕಲಸಿ ಮುದಿಕಿಗೆ ಬಲವಂತ ಮಾಡುತ್ತಿದ್ದಳು; ಆಕೆಗೆ ಓಕರಿಕೆ ಬರಲು, "ಅಯ್ಯೋ ಪಾಪ! ಬಾಯಿ ಕೆಟ್ಟುಹೋಗಿದೆ" ಎಂದು ತಾನೇ ಮುಗಿಸುವಳು. ಲಲಿತಮ್ಮ ಏನಾದರೂ ಅಂದರೆ "ಪಾಪ ಕಣಮ್ಮಾ, ಒಂದಲ್ಲ ಒಂದು; ನಾಲ್ಕು ಅಡಿಗೆ ಮಾಡಿದರೆ ಮುದುಕಿ ಏನಾದರೂ ತಿನ್ನುತ್ತೆ, ಅಲ್ವೇನೋ ಸುಬ್ಬ" ಎಂದು ಮನೆ ಯಜಮಾನನ ಸಹಾನುಭೂತಿಯನ್ನು ಅಪೇಕ್ಷಿಸುತ್ತಿದ್ದಳು. ಆತ, "ಮಾಡಮ್ಮಾ, ಮಾಡು" ಎಂದಮೇಲೆ ಲಲಿತೆ ಮಾತನಾಡುವ ಹಾಗಿರಲಿಲ್ಲ. ಒಂದು ಹೊತ್ತೇ ಉಣ್ಣಲಾರದ ಮುದುಕಿಗೆ ರಾತ್ರಿ ಫಲಾಹಾರಗಳೂ ಸಿದ್ಧವಾಗುತ್ತಿದ್ದವು. ಅನಂತನಿಗೂ ಅಜ್ಜಿಯ ಅಡಿಗೆಯಲ್ಲೇ ಊಟ.

ಲಲಿತ ಒಂದೆರಡು ಬಾರಿ, "ನಾನೇ ಅಡಿಗೆ ಮಾಡುತ್ತೇನೆ. ಇಷ್ಟು ಜನರಿಗೆ ಮಾಡೋವಳಿಗೆ ಇನ್ನೊಬ್ಬರು ಭಾರವೆ? ಸೊರ್ನಮ್ಮನ್ನ ಹೋಗು ಅನ್ನುತ್ತೇನೆ" ಎಂದಳು. ಸುಬ್ರಹ್ಮಣ್ಯಂ, "ಸಧ್ಯ, ಸುಮ್ಮನಿರು. ನೀನೂ ಆಮೇಲೆ ಬಿದ್ದರೆ ಕೇಳುವವರಾರು?" ಎನ್ನುತ್ತಿದ್ದನು.

ಒಂದು ದಿನ ಅನಂತ ಸ್ವರ್ಣಮ್ಮನ ಮುಂದೆ ಕುಳಿತು ಅಳುತ್ತಾ ಇದ್ದ. ಅಷ್ಟು ದೊಡ್ಡ ಹುಡುಗ ಅಳುವುದನ್ನು ನೋಡಿ ಗಾಭರಿಯಾಗಿ, "ಯಾಕೋ ಅನಂತ?" ಎಂದಳು.ಅವನು ಕಣ್ಣುಜ್ಜುತ್ತಾ, "ಚಂದು ಹೊಡೆದ," ಎಂದು ಉತ್ತರ

ಕೊಟ್ಟನು. ಲಲಿತಮ್ಮ ಗಾಭರಿಯಾಗಿ ಚಂದುವನ್ನು ಹುಡುಕಿಕೊಂಡು ಹೊರಟಳು. ಅವನು ಕೋಣೆಯಲ್ಲಿ ಗಟ್ಟಿಯಾಗಿ ಓದುತ್ತಿದ್ದುದನ್ನು ನೋಡಿ, ಸಮಾಧಾನದಿಂದ, "ಚಂದೂ, ಅನಂತನ ಯಾಕೋ ಹೊಡೆದೆ?" ಎಂದು ವಿಚಾರಿಸಿದರು.

"ಹೊಡೀದೆ! ಬಲಿಹಾಕಬೇಕಾಗಿತ್ತು."

ಲಲಿತಮ್ಮ ನಗುತ್ತಲೆ, "ಅವನಿಗೆ ಬುದ್ಧಿ ಇಲ್ಲ ಕಣೋ. ಏನು ಮಾಡಿದ?" "ಬುದ್ಧಿ ಇಲ್ಲ ಅಂತಾನೆ ಹೊಡೆದು ಅಷ್ಟಕ್ಕೇ ಬಿಟ್ಟಿದ್ದು, ಇಲ್ಲದಿದ್ದರೆ ಪೊಲೀಸ್ ಸ್ಟೇಷನ್ನಿಗೆ ಹಿಡಕೊಂಡುಹೋಗಿ ಎರಡು ವರ್ಷ ಲಾಕಪ್ಪಿನಲ್ಲಿ ಇಡಸ್ತಾ ಇದ್ದೆ."

ಲಲಿತಮ್ಮ ಗಾಭರಿಯಿಂದ, "ಯಾಕೋ ಏನಾದರೂ ಕದ್ದನೇ?"

ಚಂದು ಮುಖ ಕೆಂಪಾಯಿತು. "ಜಾನು ಆಡ್ತಾ ಇದ್ರೆ, ಅವಳ ಜಡೆ ಹಿಡಕೊಂಡು ಮುಖಕ್ಕೆ ಮುತ್ತು ಕೊಡೋಕೆ ಹೋಗ್ತಾ ಇತ್ತು ಆ ಮಂಗ! ನಾಲ್ಕು ಬಿಗಿದೆ ಅತ್ತುಕೊಂಡು ಹೋಯ್ತು."

ಲಲಿತಮ್ಮನಿಗೆ ನಿಜವಾಗಿ ಗಾಭರಿಯಾಯಿತು. ಖರ್ಚನ್ನು ನೋಡಿ ತಾಯಿ ಮಗನನ್ನು ಸಾಗಿಸಬೇಕೆಂದು ಯೋಚಿಸುತ್ತಿದ್ದವಳು, ಈ ವಿಚಾರ ಕೇಳಿ ನಿರ್ಧಾರ ಮಾಡಿದಳು. ಆ ಹುಚ್ಚನ ಮೇಲೆ ಕಾವಲಿರಲು ಸಾಧ್ಯವೇ? ಜಾನು ಅರಿಯದ ಹುಡುಗಿ, ಕಥೆಯ ಆಸೆಗಾಗಿ ಸ್ವರ್ಣಮ್ಮನ ಮುಂದೆ ಹೋಗಿ ಕೂತುಕೊಳ್ಳುವಳು. ಆಕೆಯಿಂದ ಹಾಡು ಕಲಿಯುವಳು. ಅನಂತ ಸದಾ ಅಲ್ಲೇ ಇರುವವನು. ಸ್ವರ್ಣಮ್ಮನ ಕಣ್ಣೂ ಚುರುಕಿಲ್ಲ. ಲಲಿತೆ ಹೆದರಿ ಸಂಜೆ ಗಂಡ ಬರುವುದನ್ನೇ ಕಾದಿದ್ದು ಸುದ್ದಿ ಕೊಟ್ಟಳು. ಸುಬ್ರಹ್ಮಣ್ಯಂಗೂ ತುಂಬಾ ರೇಗಿ ಹೋಯಿತು. ಆ ರಾತ್ರಿಯೇ 'ಸೊರ್ನಿ ನಾಳೆ ಬೆಳಿಗ್ಗೆ ನಿನ್ನ ಮಗನನ್ನೂ ಕರಕೊಂಡು ಹೋಗಮ್ಮ," ಎಂದನು.

ಸ್ವರ್ಣಮ್ಮನೂ ಮಗನಿಂದ ಅಲ್ಪ ಸ್ವಲ್ಪ ಸುದ್ದಿಯನ್ನು ತಿಳಿದಿದ್ದಳು. ಅದರಿಂದಾಗಿ ಹೆಚ್ಚು ಮಾತು ಬೆಳಸಲಿಲ್ಲ. ಲಲಿತಮ್ಮನ ಸಹಾನುಭೂತಿಯನ್ನೇ ಕೋರಿದಳು. "ನೋಡು, ನನ್ನ ಗ್ರಹಚಾರ ಲಲಿತಮ್ಮ. ನಾಲ್ಕು ದಿನ ಒಂದು ಕಡೆ ಹಾಯಂತ ನಿಲ್ಲೋದಕ್ಕೂ ಇಲ್ಲ, ಇವನ ಮಂಗಾಟದಿಂದ. ಇನ್ನು ಯಾವುದಕ್ಕೂ ಬುದ್ಧಿ ಬೆಳೀದಿದ್ರೂ ಈ ವಿದ್ಯೆಗಳೆಲ್ಲಾ ಬೆಳೀತಾ ಇವೆ" ಎಂದು ಕಣ್ಣೀರಿಟ್ಟಳು. ಲಲಿತಮ್ಮನಿಗೂ ಕನಿಕರವಾಗಿ ಬಣ್ಣವಾಗಿದ್ದ ಒಂದು ಸೀರೆಯನ್ನೂ, ಐದು ರೂಪಾಯಿಯನ್ನು ಕೊಟ್ಟು, "ನೀವೇನೂ ತಿಳಕೋಬೇಡಿ ಸೊರ್ನಮ್ಮಾ, ಜಾನೂಗೂ ಬುದ್ಧಿಯಲ್ಲ. ಏನಾದರೂ ಅನಾಹುತವಾದರೆ ಯಾರನ್ನ ಕೇಳುವುದು?" ಎಂದಳು.

ಸೊರ್ನಮ್ಮಾ ಕಣ್ಣೊರೆಸಿಕೊಳ್ಳುತ್ತಾ "ನಿಜಾಮ್ಮಾ ನಿಜ. ನನ್ನ ಪ್ರಾರಬ್ಧ ಕರ್ಮಕ್ಕೆ ನೀನೇನು ಮಾಡ್ತೀಯೇ?" ಎಂದು ಲಲಿತಮ್ಮ ಕೊಟ್ಟ ಸೀರೆಯನ್ನು ಪಂಚೆಯ ಗಂಟಿನಲ್ಲಿ ಸೇರಿಸಿಕೊಂಡು ಮಗನೊಡನೆ ಹೊರಟಳು. ಬೀದಿ ಬಾಗಿಲಲ್ಲಿ ನಿಂತಿದ್ದ ಚಂದ್ರುವನ್ನು ನೋಡಿ, "ಬದ್ದೀನಪ್ಪಾ ಚಂದು ಏನೋ ಮಂಕುಂಡೇದು. ಅದಕ್ಕೇನೂ ತಿಳೀದು. ಮನಸ್ಸಿನಲ್ಲಿಕ್ಕೋಬೇಡಪ್ಪಾ, ನಿಮ್ಮಪ್ಪನಿಗೆ ಹೇಳಿ ಏನಾದರೂ ಕೆಲಸ ಮಾಡಿಸಿಕೊಡು" ಎಂದು ಹೇಳಿದಳು. "ಪರವಾಯಿಲ್ಲ ಸೊರ್ನಮ್ಮಾ, ಹೇಳೀನಿ" ಎಂದು ಚಂದುವೂ ಆಶ್ವಾಸನೆ ಕೊಟ್ಟನು.

* * * *

ಮೊಮ್ಮಗನ ಮದುವೆ ನೋಡಿ ಸಾಯಬೇಕೆಂದಿದ್ದ ಸುಬ್ಬಮ್ಮನ ಆಸೆ ನೆರವೇರಲಿಲ್ಲ. ಶ್ರೀನಿವಾಸರಾಯರು ಮಗಳ ಜಾತಕದೊಡನೆ ಬಂದಾಗ ಆಕೆ ಸತ್ತು ವರ್ಷವಾಗಿತ್ತು. ಶ್ರೀನಿವಾಸರಾಯರಿಗೆ ಒಬ್ಬಳೇ ಮಗಳು ರಾಧೆ, ಜಾತಕ ಸರಿಹೋಗದುದರಿಂದಲೋ, ಯಾವ ಕಾರಣದಿಂದಲೋ, ಅಂತೂ, ಹುಡುಗಿಗೆ ಹದಿನೆಂಟು ವರ್ಷವಾದರೂ ಮದುವೆ ಕೂಡಿಬರಲಿಲ್ಲ. ಸುಬ್ರಹ್ಮಣ್ಯಂಗೆ ಶ್ರೀನಿವಾಸರಾಯರು ಹಳೆಯ ಪರಿಚಿತರೇ ಆದುದರಿಂದ ಅವರಿಗೂ ಈ ಸಂಬಂಧ ಕಷ್ಟವಾಗಿಯೇ ಇತ್ತು. ಆ ವರ್ಷ ಚಂದು ಎಂ.ಬಿ.ಬಿ.ಎಸ್., ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದುದರಿಂದ ಅವನು ಎಲ್ಲಾದರೂ ಕೆಲಸಕ್ಕೆ ಸೇರಿ, ಮದುವೆಯಾಗಿ ಸಂಸಾರ ಹೂಡಬಹುದೆಂದು ಅಭಿಪ್ರಾಯವಿತ್ತು. ಅದೂ ಅಲ್ಲದೆ ಈ ಸಂಬಂಧ ಕೂಡಿದರೆ ಜಾನಕಿಯನ್ನೂ ಶ್ರೀನಿವಾಸರಾಯರ ತಮ್ಮನಿಗೆ ಕೊಟ್ಟು ಮದುವೆ ಮಾಡಬಹುದೆಂಬ ಹಂಚಿಕೆಯೂ ಇತ್ತು.

ಲಲಿತಮ್ಮ ಮಗನ ಅಭಿಪ್ರಾಯ ತಿಳಿಯಲು ಬಂದರು. "ಚಂದೂ, ಶ್ರೀನಿವಾಸರಾಯರು ಬಂದಿದ್ದರು.

"ಅಷ್ಟೆಲ್ಲಾ ಪೀಠಿಕೆಯೇನೂ ಬೇಡಮ್ಮಾ, ಅವರ ಮಗಳನ್ನು ನೀನು ನೋಡಿದ್ದೀಯಾ?"

"ಇನ್ನೂ ಇಲ್ಲ. ನೀನು ಒಪ್ಪುವ ಯೋಚನೆಯಿದ್ದರೆ ಕರೆಸಬಹುದು." "ನಾನು ನೋಡಿದ್ದೀನಮ್ಮಾ. ನನಗಿಂತ ಗೇಣುದ್ದ ಎತ್ತರವಾಗಿದ್ದಾಳೆ. ನನ್ನ ಎರಡರಷ್ಟು ದಪ್ಪವಾಗಿದ್ದಾಳೆ. ಅವರು ಹದಿನೆಂಟು ವರ್ಷ ಎನ್ನುತ್ತಾರೆ. ನೋಡಿದರೆ ನನಗಿಂತ ನಾಲ್ಕು ವರ್ಷ ದೊಡ್ಡವಳಾಗಿಯೇ ಕಾಣುತ್ತಾಳೆ."

ಪುಸ್ತಕ ಹಿಡಿದು ಕುರ್ಚಿಯ ಮೇಲೆ ಕುಳಿತಿದ್ದ ಬಾಬು, "ನೋಡಮ್ಮಾ, ಯಾವ ಹೆಣ್ಣು ಬಂದರೂ ಇವರು ಹೀಗಾಡಿದರೆ ನನಗೆ ಯಾವಾಗ ಚಾನ್ಸು?"

ಲಲಿತಮ್ಮ ಬೇಸರದಿಂದ, "ಹೋಗೋ ಯಾವ ಮಾತಿಗೂ ನಿಮ್ಮ ಹುಡುಗಾಟವೆ."

ಚಂದು "ಅಲ್ಲಮ್ಮಾ, ಹೆಂಡತಿ ಅಂದ್ರೆ ಸ್ವಲ್ಪವಾದರೂ ಹೆದರಿಸೋ ಹಾಗಿರಬೇಡವೇ?" ಎಂದನು.

"ಇವನೆಂಥಾ ಪೂರ್ವಕಾಲದವನಮ್ಮಾ," ಎಂದು ಬಾಬು ಆಕಳಿಸಿದನು. "ಅವರಿಗೆ ಒಬ್ಬಳೇ ಮಗಳು. ತುಂಬಾ ಆಸ್ತಿಯಿದೆ."

"ಅವರ ಆಸ್ತಿ ಕಟ್ಟಿಕೊಂಡು ನಾನೇನು ಮಾಡಲಿ? ತುಂಬಾ ವರದಕ್ಷಿಣೆ ತಕೊಂಡು ಇಂಗ್ಲೆಂಡು, ಅಮೆರಿಕಾ ಎಲ್ಲಾ ಹೋಗಿ ಬಂದು ಯಾರಾದರೂ ತೆಳ್ಳಗೆ ಬೆಳ್ಳಗಿರೋ ಹುಡುಗೀನ ಮುದುವೆ ಮಾಡಕೋಬಹುದೇನೂ ಕೇಳಿ ನೋಡು."

"ಲಕ್ಷಣವಾಯಿತು. ಹೋಗೋ! ಅವಳೂ ಏನೋ ಹಿಂದಿ ಗಿಂದಿ ಓದಿದ್ದಾಳಂತೆ, ಸಂಗೀತ ಬರುತ್ತಂತೆ."

"ಹಿಂದಿ ಓದಿದ್ದರೆ ಯಾರಾದರೂ ಮಿನಿಸ್ಟರ್‌ಗೆ ಕೊಟ್ಟು ಮದುವೆ ಮಾಡಲಿ. ಉಪಯೋಗಕ್ಕೆ ಬರುತ್ತೆ, ನನಗೇನೋ ಇಂಗ್ಲೀಷ್ ಕಲಿತ ಹುಡುಗಿನೇ ಬೇಕಮ್ಮಾ!" "ಏನೋ ನಿನ್ನ ಹುಡುಗಾಟ ನನಗರ್ಥವಾಗೋಲ್ಲಪ್ಪ. ಈಗ ಅವರಿಗೇನು ಹೇಳೋದು?"

"ಖಂಡಿತ ಆಗೋಲ್ಲ ಅಂತಾನೆ, ಅವನಿಗೆ ಹುಚ್ಚು, ಹೇಳಿದ ಮಾತು ಕೇಳೋಲ್ಲ ಅಂತ ಹೇಳು."

ಲಲಿತಮ್ಮ ಈ ಮಾತನ್ನು ಗಂಡನಿಗೆ ಹೇಳಿದುದರಿಂದ ಮದುವೆಯ ಮಾತು ನಿಂತು ಹೋಯಿತು. ಶ್ರೀನಿವಾಸರಾಯರು ನಿರಾಸೆಯಿಂದ ಜಾತಕವನ್ನು ಹಿಂದಕ್ಕೆ ತೆಗೆದುಕೊಂಡು ಹೋದರು.

* * * *

ಜಾನಕಿಗೆ ಸಿಕ್ಕಿದ ವರ ಹಳ್ಳಿಯವನೇ. ಚಂದುವಿನ ಸಹಪಾಠಿ. ಗೋಪಾಲರಾಯರಿಗೆ ಒಬ್ಬನೇ ಮಗ ನೋಡುವುದಕ್ಕೂ ತುಂಬಾ ಲಕ್ಷಣವಾಗಿದ್ದ. ಆ ಮದುವೆಯಲ್ಲಿ ಚಂದುವಿನ ಸಡಗರವೋ ಸಡಗರ, ತಾನೇ ವರವನ್ನು ಹುಡುಕಿ ತಂದು ತಂಗಿಯ ಲಗ್ನ ಮಾಡಿಸುತ್ತಿದ್ದೇನೆಂಬ ಭಾವನೆಯಿಂದ ಓಡಾಡುತ್ತಿದ್ದನು. ಧಾರೆಯ ದಿನ ಊಟವಾದ ಮೇಲೆ ಜಮಖಾನೆಯ ಮೇಲೆ ಚಂದು ಮಲಗಿದ್ದನು. ಲಲಿತಮ್ಮ ಸೀರೆಗಳನ್ನು ಮಡಿಸಿಡುತ್ತಿದ್ದರು. ಚಂದು ಆಕಳಿಸುತ್ತಾ, "ನಿಮಗೆ ಬೇರೆ ಯಾರೂ ಅಡಿಗೆಯವರು ಸಿಕ್ಕಲಿಲ್ಲವೇನಮ್ಮಾ? ಹೋಳಿಗೆ ರೊಟ್ಟಿ ಹಾಗಿತ್ತು."

“ಸಾಧಾರಣವಾಗಿ ಹೋಳಿಗೆ ಮಾಡೋಕೆ ಅಡಿಗೆಯವರಿಗೆ ಬರೋದಿಲ್ಲ. ಅದು ಹೆಂಗಸರ ಕೆಲಸ ಸೊರ್ನಮ್ಮನನ್ನಾದರೂ ಕರೆಸಬೇಕಾಗಿತ್ತು.”

“ಹೌದು ಪಾಪ! ನಾಲ್ಕು ದಿನ ಪ್ರಾಣಿ ಹೊಟ್ಟೆತುಂಬಾ ಊಟ ಮಾಡುತ್ತಿದ್ದಳು.”



“ಈಗೇನು ಕೊಳ್ಳೆ ಹೋದದ್ದು. ಮದುವೆ ಇನ್ನೂ ಮೂರು ದಿನವಿದೆಯೆಲ್ಲಾ, ಈವತ್ತೇ ಕಾಗದ ಹಾಕಿಬಿಡು. ಬಂದ್ದಿದ್ದಾಳೆ.”

“ಅವರ ಅಡ್ರಸ್ ಯಾರಿಗೆ ಗೊತ್ತು?”

“ಅಡ್ರೆಸ್ಸೇನು? ಅವರ ತಮ್ಮ ಮಲ್ಲೇಶ್ವರದಲ್ಲಿ ಪೊಲೀಸ್‌ನಲ್ಲಿದ್ದಾನೆ. ಪೊಲೀಸ್ ಸ್ಟೇಷನ್ನಿಗೆ ಬರೆದು ಹಾಕು.”

ಸೊರ್ನಮ್ಮ ಮದುವೆಗೆ ಬರಲಿಲ್ಲ. ಮದುವೆಯಾಗಿ ತಿಂಗಳಾದ ಮೇಲೆ ಯಥಾಪ್ರಕಾರ ಬಟ್ಟೆಯ ಗಂಟನ್ನು ಹಿಡಿದುಕೊಂಡು ಸೊರ್ನಮ್ಮ ಪ್ರತ್ಯಕ್ಷವಾದರು. ಲಲಿತಮ್ಮ, “ಏನು ಸೊರ್ನಮ್ಮ ಮದುವೆಗೆ ಚಕ್ಕರ್ ಕೊಟ್ಟುಬಿಟ್ಟಿರಲ್ಲ. ನಮ್ಮ ಚಂದು ಎಷ್ಟು ಪೇಚಾಡಿದನೋ.”

“ಬಂಗಾರದಂಥ ಹುಡುಗನೇ ಅವನು! ಈ ಮುದಿಗೂಬೇನ ಜ್ಞಾಪಕ ಇಟ್ಟುಕೊಂಡು ಕಾಗದ ಬರೆದು ಹಾಕಿದನಲ್ಲೇ.”

“ಏನು ಪ್ರಯೋಜನ? ನೀವು ಬರಲಿಲ್ಲವಲ್ಲಾ.”

ಸೊರ್ನಮ್ಮ ಗಂಟನ್ನಿಟ್ಟುಕೊಂಡು ಅಲ್ಲೇ ಮೆಟ್ಟಿಲ ಮೇಲೆ ಕುಳಿತಳು.

“ಬರೋಕಾಗಲಿಲ್ಲಮ್ಮ. ಇಲ್ಲದಿದ್ದರೆ ನಮ್ಮ ಜಾನೂ ಮದುವೆಗೆ ನಾನು ತಪ್ಪಿಸಿಕೊಳೇನೆಯೇ? ಓಹೋ ಹೋ! ಏನು ವಿಜೃಂಭಣೆ ಅಂತ! ಅದೇ ಲಗ್ನಕ್ಕೆ ನನ್ನ ಮಗ ಇದ್ದಾನಲ್ಲ ಬೃಹಸ್ಪತಿ, ಅವನಿಗೂ ಮದುವೆ! ಮಣ್ಣು ಮುಕ್ಕೋಕೆ! ನಾನು ಹೇಗೆ ಬರಲಿ ಹೇಳು?”

ಲಲಿತಮ್ಮ ಆಶ್ಚರ್ಯದಿಂದ, “ಏನು ಅನಂತನಿಗೆ ಮದುವೆಯೆ? ಹೆಣ್ಣು ಯಾರು?” ಎಂದರು.

ಸೊರ್ನಮ್ಮ ಬೇಸರದಿಂದ, "ಯಾರೋ ಹೆಣ್ಣು ಹೆಚ್ಚಾಗಿದ್ದವರು. ಹಾಗನ್ನೂಕೂ ಇಲ್ಲ. ಒಬ್ಬಳೇ ಮಗಳಂತೆ, ನಿಮಗೂ ಗೊತ್ತಂತೆ ಶ್ರೀನಿವಾಸರಾಯರಂತೆ."

"ಏನು, ಲಾಯರ್ ಶ್ರೀನಿವಾಸರಾಯರೆ? ನಿಮ್ಮ ಸೊಸೆಯ ಹೆಸರು ರಾಧೆಯೆ?" "ಹೌದಮ್ಮ, ಅವರೆ, ಬಡಕೊಂಡೆ, ಅವನಿಗೆ ಹೆಂಡತಿ ಯಾಕೆ, ಸಾಕೋ ಯೋಗ್ಯತೆಯಿಲ್ಲ ಅಂತ ತಲೆ ಚಚ್ಚಿಕೊಂಡೆ. ನನ್ನ ಮಾತೆಲ್ಲಿ ನಡೆಯುತ್ತೆ. ಆ ಹುಡುಗಿ ಹಣೆ ಬರಹ ಹಾಗಿದ್ದರೆ?"

"ಅಂದರೆ ಮದುವೆ ಆಗಿಯೇ ಹೋಯ್ತೆ?"

"ಆಗೇ ಹೋಯ್ತುಮ್ಮ, ಆ ಹುಡುಗಿ ದುರದೃಷ್ಟಕ್ಕೆ ಸರಿಯಾಗಿ ಇವನಿಗೂ ಪೊಲೀಸಿನಲ್ಲಿ ಕೆಲಸ ಆಗಿತ್ತು, ನನ್ನ ತಮ್ಮಾನೇ ಮಾಡಿಸಿಕೊಟ್ಟಿದ್ದ. ಕೆಲಸದಲ್ಲಿರೋದರಿಂದ ಸರಿಯಾಗೇ ಇದ್ದಾನೆ ಅಂಡ್ಕೊಂಡೋ ಏನೋ. ಪಟ್ಟು ಹಿಡಿದುಬಿಟ್ರು, ಆ ಹುಡುಗೀಗೂ ತುಂಬಾ ದಿನದಿಂದ ವರ ಹುಡುಕ್ತಾ ಇದ್ರಂತೆ ಸಿಕ್ಕಲಿಲ್ಲವಂತೆ, ಯಾರಾದರೇನು ಅಂತ ಈ ಪೆಂಗನಿಗೇ ಕಟ್ಟಿಬಿಟ್ರು."

ಲಲಿತಮ್ಮನಿಗೆ ಏನು ಹೇಳುವುದಕ್ಕೂ ತೋರಲಿಲ್ಲ. ಸೊರ್ನಮ್ಮನೇ ಮಾತು ಮುಂದುವರಿಸಿದರು. "ಅವರಿಗೆ ಒಬ್ಬಳೇ ಮಗಳಂತೆ, ಬೇಕಾದಷ್ಟು ಆಸ್ತಿ ಇದೆಯಂತೆ,



ಇವನೂ ಅವರ ಮನೆ ಸೇರಿಬಿಟ್ಟು ಹಾಯಂತ ಊಟಮಾಡಿಕೊಂಡಿದ್ದಾನೆ. ನನ್ನೂ ಅಲ್ಲೇ ಇರು ಅಂದ್ರು. ಎಷ್ಟು ದಿನಾಂತ ಒಂದಡೆ ಊಟಮಾಡಿಕೊಂಡು ಸುಮ್ಮೆ ಬಿದ್ದಿರೋಕೆ ಆಗುತ್ತೆ ಹೇಳು? ನಿಮ್ಮನ್ನೆಲ್ಲಾ ನೋಡೋಣ ಅಂತ ಅನ್ನಿಸಿತು. ಬಂದುಬಿಟ್ಟೆ." "ತಿಳಿದೂ ತಿಳಿದೂ ನೀವು ಹೇಗೆ ಒಕ್ಕೊಂಡ್ರಿ ಸೊರ್ನಮ್ಮಾ?"

"ಈ ಮುದಿ ಗೂಬೇನ ಯಾರು ಕೇಳ್ತಾರೆ ಲಲಿತಮ್ಮ ? ಬಡಕೊಂಡೆ ಬೇಡಾಂತ. ಕೊನೇಗೆ ನನ್ನ ತಮ್ಮ... ಸುಮ್ಮನಿರು. ಮಗು ಹಾಯಾಗಿದ್ದಾನೆ, ಊಟಕ್ಕೆ ತೊಂದರೆಯಿಲ್ಲದೆ. ಅವನಷ್ಟು ಬುದ್ಧಿ ಇದ್ದರೆ ಬೇಕಾದಷ್ಟಾಯಿತು. ದಿವಾನ್‌ಗಿರಿ ಕೂಡ ಮಾಡಬಹುದು." ಅಂದ. ನಾನು ಸುಮ್ಮನಾದೆ. ಅವನೂ ಸಿಂಗಾರ ಮಾಡ್ಕೊಂಡು ಮಣೆ ಮೇಲೆ ಹರೀತ ಸಂತೋಷವಾಗಿ ಕೂತಿದ್ದ, ಭಗವಂತನ ಚಿತ್ರ ಹಾಗಿದ್ದರೆ ನಾನೇನು ಮಾಡೋಕಾಗುತ್ತೆ ಅಂತ ಸುಮ್ಮನಾದೆ.'

ಲಲಿತಮ್ಮನ ಮನಸ್ಸು ಕಲಕಿ ಹೋಗಿತ್ತು. ಈ ಮದುವೆಯಾದದ್ದು ಒಂದು ವಿಚಾರದಲ್ಲಿ ತನ್ನ ಅಪರಾಧವೇ ಎಂದು ಆಕೆಗನ್ನಿಸಿತು.

ಊಟಕ್ಕೆ ಕುಳಿತಾಗ ಲಲಿತಮ್ಮನೇ, "ಅನಂತೂಗೆ ಮದುವೆ ಆಯಿತಂತೆ," ಎಂದಳು. ಸುಬ್ರಹ್ಮಣ್ಯಂ, ಚಂದು ಇಬ್ಬರೂ ಗಾಭರಿಯಿಂದ "ಹಾ?" ಎಂದರು.

"ಹೌದು, ಸೊರ್ನಮ್ಮ ಹೇಳಿದರು. ಶ್ರೀನಿವಾಸರಾಯರೇ ಮಗಳನ್ನು ಕೊಟ್ಟರಂತೆ" ಚಂದುವಿನ ಮುಖ ಕೆಂಪಾಯಿತು. ಸುಬ್ರಹ್ಮಣ್ಯಂ ಅವನಿಗೇನು ಬಂತು?" ಎಂದು ಸೊರ್ನಮ್ಮನ ಮುಖನೋಡಿ ಸುಮ್ಮನಾದರು.

ಸೊರ್ನಮ್ಮನೇ "ಏನು ಬಂತೋಪ್ಪ, ಮಗಳು ಅಷ್ಟು ಭಾರವಾಗಿದ್ದರೆ ಕತ್ತಿಗೆ ಕಲ್ಲು ಬಿಗಿದು ಭಾವೀಲಿ ಹಾಕಬಾರದಾಗಿತ್ತೆ?" ಅಂದರು.

ಸುಬ್ರಹ್ಮಣ್ಯಂ ಸಮಾಧಾನಪಡಿಸುತ್ತಾ, "ಅಷ್ಟು ಮನಸ್ಸಿಗೆ ಹಚ್ಚಿಕೋಬೇಡ, ಸೊರ್ನಿ, ಅವನಿಗೇನಾಗಿದೆ? ಸ್ವಲ್ಪದಿನ ಸಂಸಾರ ಮಾಡಿದರೆ ಸರಿಹೋಗ್ತಾನೆ" ಎಂದರು.

ಸೊರ್ನಮ್ಮ, "ಹೂ, ಸರಿಹೋಗ್ತಾನೆ, ಕೊಳ್ಳಿ ಇಟ್ಟಮೇಲೆ" ಎಂದರು. ಚಂದು ಮಾತನಾಡದೆ ಊಟ ಮುಗಿಸಿ ಎದ್ದು ಹೋದುದನ್ನು ಲಲಿತಮ್ಮ ಗಮನಿಸಿ ಅವನ ಕೊಠಡಿಗೆ ಹೋದರು. ಚಂದು ಪುಸ್ತಕ ಹಿಡಿದು ಕುರ್ಚಿಯ ಮೇಲೆ ಕುಳಿತು ಕಿಟಕಿಯಾಚೆ ಎಲ್ಲಿಯೋ ನೋಡುತ್ತಿದ್ದನು. ಲಲಿತಮ್ಮ ಪ್ರೀತಿಯಿಂದ ಅವನ ತಲೆ ನೇವರಿಸುತ್ತಾ "ಚಂದೂ," ಎಂದರು. ಚಂದು ಎಳೆ ಮಗುವಿನಂತೆ ಬಿಕ್ಕಿ ಬಿಕ್ಕಿ ಅತ್ತುಬಿಟ್ಟನು. "ಯಾವ ಕೆಲಸದಿಂದ ಏನು ಅನಾಹುತವಾಗುತ್ತೆಂದು ತಿಳಿಯುವುದಿಲ್ಲ, ನೋಡಮ್ಮಾ" ಎಂದನು.

ಲಲಿತಮ್ಮ "ನೀನೇನು ಮಾಡಿದೆ ಚಂದು? ನೀನೊಲ್ಲೆ ಎಂದರೆ ಅನಂತನ್ನ ಬಿಟ್ಟು ಬೇರೆ ಯಾರೂ ಇರಲಿಲ್ಲವೆ? ಅಥವಾ ಮದುವೆ ಇಲ್ಲದೆ ಇಪ್ಪತ್ತು ವರ್ಷ ಕಳೆದಳು. ಇನ್ನಿಪ್ಪತ್ತು ವರ್ಷ ಕಳೆದು ಹೋಗುತ್ತಿರಲಿಲ್ಲವೆ? ಅವಳಿಗೇನು ಊಟಕ್ಕೆ ತೊಂದರೆಯಾಗಿತ್ತೆ? ಬುದ್ಧಿಯಿಲ್ಲದೆ ಅವರು ಮಾಡಿದ ಕೆಲಸಕ್ಕೆ ನೀನೇನು ಮಾಡ್ತೀಯೇ?" ಎಂದು ಸಮಾಧಾನ ಮಾಡಿದರು.

ಚಂದು "ಏನೋ ಮನಸ್ಸಿಗೆ ಸಮಾಧಾನವಿಲ್ಲಮ್ಮ, ತಪ್ಪು ನನ್ನದೇ ಎನ್ನಿಸುತ್ತೆ" ಎಂದನು.

ಲಲಿತಮ್ಮ ವಿಷಾದದಿಂದ ನಕ್ಕು, "ನೀನಿನ್ನೂ ಎಳೆ ಮಗು, ಚಂದು" ಎಂದು ಹೇಳಿ ಹೊರಗೆ ಹೋದರು.

* * * *

ಅನಂತ ಬೆಪ್ಪನೆಂದು ಶ್ರೀನಿವಾಸರಾಯರಿಗೆ ತಿಳಿಯದೆ ಇರಲಿಲ್ಲ.

ಅಳಿಯಂದಿರನ್ನು ಹುಡುಕಿ ಬೇಸರವಾಗಿ, "ಬೆಪ್ಪನಾದರೇನು, ಹೇಳಿದ ಮಾತು ಕೇಳಿಕೊಂಡು ಮನೇಲಿ ಬಿದ್ದಿದ್ದಾನೆ" ಎಂಬ ಧೋರಣೆಯಿಂದ ಅವಸರಪಟ್ಟು ಮಗಳಿಗೆ ಮದುವೆ ಮಾಡಿದ್ದರು. ರಾಧೆಯೂ ಅರಿಯದ ಎಳೆ ಹುಡುಗಿಯಲ್ಲ. ಬುದ್ಧಿ ಬಂದಂದಿನಿಂದ ತನ್ನ ಮದುವೆಗಾಗಿ ತಂದೆ ಪಟ್ಟ ಕಷ್ಟವನ್ನು ಅವಳು ಅರಿತಿದ್ದಳು. ಸಹಾನುಭೂತಿಯ ನಾಲ್ಕು ಮಾತುಗಳಾಡಲು ತಾಯಿಯೂ ಇರಲಿಲ್ಲ. ಚಂದುವನ್ನು ವಿಚಾರಿಸಲು ತಂದೆ ಹೋದಾಗ ಸಂಸಾರದ ಸುಖಸ್ವಪ್ನಗಳನ್ನೆಣಿಸಿ ಆನಂದಪಟ್ಟಿದ್ದಳು. ಹತಾಶನಾಗಿ ಹಿಂದಿರುಗಿದ ತಂದೆಯನ್ನು ನೋಡಿ ಅವಳ ರೋಷ ಉರಿದೆದ್ದಿತ್ತು. ತಾನು ಅನಂತನನ್ನು ಮದುವೆಯಾಗವುದು ಸಮಾಜದ ಮೇಲೆ ದ್ವೇಷ ತೀರಿಸುವುದಕ್ಕೆಂದೇ ಅವಳು ನಂಬಿದಳು. ಆ ಮದುವೆಯಿಂದ ಅವಳು ಯಾವ ಸುಖವನ್ನೂ ಬಯಸಲಿಲ್ಲ.

ಅನಂತನಿಗೇನೋ ಯಾವ ಆತಂಕವೂ ಇರಲಿಲ್ಲ. ಪುಷ್ಕಳವಾಗಿ ಊಟ ಸಿಕ್ಕುತ್ತಿತ್ತು. ಸುಖವಾಗಿ ಸುಪ್ಪತ್ತಿಗೆಯ ಮೇಲೆ ನಿದ್ರಿಸಬಹುದಾಗಿತ್ತು. ಅವನು ಜಗತ್ತನ್ನು ಎಂದೂ ಬೇರೆ ಯಾವುದಕ್ಕೂ ಬೇಡಿರಲಿಲ್ಲವಾದುದರಿಂದ ಸುಖಿಯಾಗಿದ್ದನು.

ಬಾಗಿಲಲ್ಲಿ ನಿಂತಿದ್ದ ಶ್ರೀನಿವಾಸರಾಯರು ತಲೆ ತಗ್ಗಿಸಿಕೊಂಡು ಹೋಗುತ್ತಿದ್ದ ಚಂದುವನ್ನು ಅಹ್ವಾನಿಸಿದರು. "ಏನೋ ಚಂದೂ ಹಾಗೇ ಹೊರಟು ಹೋಗ್ತಿದ್ದೀ ಊರಿಗೆ ಬಂದವನು ಮನೇಗೆ ಬರಬೇಡವೆ? ಸುಬ್ರಹ್ಮಣ್ಯನೇನೋ ಹೀಗೆಲ್ಲಾ ಮಾಡುತ್ತಿರಲಿಲ್ಲಪ್ಪಾ. ನೀವು ಈ ಕಾಲದವರು ತುಂಬಾ ಜಂಭ."

"ಜಂಭವಿಲ್ಲ, ಏನೂ ಇಲ್ಲ ಸಾರಿ, ಏನೋ ಕೆಲಸದ ಮೇಲೆ ಬಂದೆ. ಹಾಗೇ ಸೀನಿಯರ್ ಸರ್ಜನನ್ನೂ ನೋಡಿಕೊಂಡು ಬಂದೆ. ನೀವು ನಿಂತದ್ದು ನೋಡಲಿಲ್ಲ." ಶ್ರೀನಿವಾಸರಾಯರು ಬಾಗಿಲು ತೆಗೆದು ಚಂದುವನ್ನು ಒಳಕ್ಕೆ ಕರೆದುಕೊಂಡು ಹೋದರು. "ನಿನಗೇನಾದರೂ ಕೆಲಸ ಸಿಕ್ಕಿತೇನಪ್ಪಾ?"

"ಅದಕ್ಕೆ ಬಂದಿದ್ದೆ ಸಾರ್, ಈಗಿನ್ನೂ ಏನೂ ಸಿಕ್ಕಿಲ್ಲ. ಸುಮ್ಮನೆ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಓಡಾಡಿಕೊಂಡಿದ್ದೇನೆ".

“ಯಾವುದಾದರೂ ಪರದೇಶದ ವೇತನಕ್ಕೆ ಪ್ರಯತ್ನ ಮಾಡು, ಒಂದೆರಡು ವರ್ಷ ಹೋಗಿ ಬಂದರೆ ವಾಸಿ”

ಚಂದು ನಕ್ಕು, “ಪ್ರಯತ್ನವೇನೋ ಮಾಡಿದ್ದೀನಿ. ಹಣೇಲಿ ಬರೆದಿರಬೇಕಲ್ಲಾ” , ಎಂದನು.

“ಈಗ ಎಲ್ಲಿ ಇಳಿದಿದ್ದೀ, ಇಲ್ಲೇ ಬಂದು ಬಿಡಬಹುದಲ್ಲಾ”



“ಇಲ್ಲ. ಮಾಡ ಹೋಟಲಿನಲ್ಲಿದ್ದೀನಿ. ರಾತ್ರಿ ಹೊರಟುಬಿಡ್ತೀನಿ”

ಶ್ರೀನಿವಾಸರಾಯರು, “ರಾಧಾ, ಕಾಫಿ ತಂದೊಡಮ್ಮಾ” ಎಂದು ಕೂಗಿದರು.

ಒಳಗಿನಿಂದ ಅನಂತ ಬಂದು ಒಂದು ಕುರ್ಚಿಯ ಮೇಲೆ ಕುಳಿತನು. ಚಂದುವಿಗೆ ಮುಳ್ಳಿನ ಮೇಲೆ ನಿಂತಂತಿತ್ತು. “ಕಾಫೀನೂ ಬೇಡ, ಏನೂ ಬೇಡ ಸಾರ್, ನನಗೆ ಹೊತ್ತಾಯ್ತು” ಎಂದು ಎದ್ದನು.

“ಕೂತುಕೊಳ್ಳಿ. ಸ್ವಲ್ಪ ತಕ್ಕೊಂಡು ಹೋಗಿ” , ಎಂದು ಶ್ರೀನಿವಾಸರಾಯರು ಬಲವಂತ ಮಾಡುತ್ತಿರುವಾಗಲೇ ರಾಧೆ, ಒಂದು ಬಟ್ಟಲಿನಲ್ಲಿ ಕಾಫಿ ತಂದಿಟ್ಟು ಅಲ್ಲೇ ಬಾಗಿಲ ಬಳಿ ನಿಂತಳು. ಚಂದು ರಾಧೆಯನ್ನು ನೋಡಿ ಬಹಳ ವರ್ಷಗಳಾಗಿದ್ದವು. ಚಿಕ್ಕಂದಿನಲ್ಲಿ ಸ್ಥೂಲವಾಗಿ ಕಾಣುತ್ತಿದ್ದ ಶರೀರ ಈಗ ಒಂದು ವಿಧವಾದ ನೋವಿನಿಂದ ಕೂಡಿದ ಗಾಂಭೀರ್ಯವನ್ನು ತಳೆದಿತ್ತು. ಯಾವುದೋ ಸುಖಕ್ಕೆ ಹಂಬಲಿಸಿ ನಿರಾಸೆಯಿಂದ ಹೃದಯ ಬಾಡಿ ಹೋದಂತೆ ಕಾಣುತ್ತಿದ್ದ ಮುಖ. ಚಂದುವಿಗೆ ಕುಳಿತುಕೊಳ್ಳುವುದೇ ಕಷ್ಟವಾಯಿತು. ರಾಧೆಯೂ ಚಂದುವನ್ನು ನೋಡಿದಳು. ಎಲ್ಲಿಂದೆಲ್ಲಿಗೆ? ಅನಂತನೆಲ್ಲಿ, ಚಂದುವೆಲ್ಲಿ! ಮನುಷ್ಯಾಕೃತಿಯ ಈ ಮಂಗನೊಡನೆ ತನ್ನ ಸಂಸಾರವನ್ನು ನೆನೆದು ಅವಳು ನಡುಗಿದಳು. ಲೋಕದ ಸುಖಕ್ಕೆ ಕಣ್ಣುಮುಚ್ಚಿ ಕುರುಡಿಯಂತಿದ್ದರೆ ಕಾಲತಳ್ಳಬಹುದು. ಆವರಣದಿಂದ ಹೊರಕ್ಕೆ ಮನಸ್ಸನ್ನು ಹರಿಯಬಿಟ್ಟರೆ ಪಶ್ಚಾತ್ತಾಪಕ್ಕೆ, ವ್ಯಥೆಗೆ ಮಿತಿಯುಂಟೆ? ನಿಟ್ಟುಸಿರು ಬಿಟ್ಟು ಒಳಕ್ಕೆ ಹೋಗಿ ಮಂಚದ ಮೇಲೆ ಬಿದ್ದುಕೊಂಡಳು.

ಚಂದು ಎದ್ದಾಗ ಅನಂತನೂ ಎದ್ದು ಹಲ್ಲು ಕಿರಿದನು. ಚಂದು ಶ್ರೀನಿವಾಸರಾಯರಿಗೆ ಕೈಮುಗಿದು ಹೊರಟು ಹೋದನು. ಅನಂತ ಒಳಗೆ ಹೋಗಿ ಹೆಂಡತಿಯ ಬಳಿ ಕುಳಿತು ಕೆನ್ನೆ ಸವರಿಕೊಳ್ಳುತ್ತಾ..' ಇವನೇ ಅವತ್ತು ನನ್ನ ಹೊಡೆದಿದ್ದ!” ಎಂದನು.

ರಾಧೆ ಬೇಸರದಿಂದ, “ಒಳ್ಳೆ ಕೆಲಸ ಮಾಡಿದರು” , ಎಂದಳು.

ಅನಂತ “ಒಳ್ಳೆ ಕೆಲಸ! ಅವನು ಸಿಕ್ಕಲಿ ಬಲಿಹಾಕಿ ಬಿತ್ತೇನೆ” , ಎಂದು ಅಲ್ಲಿದ್ದ ಉದ್ದವಾದ ದೊಣ್ಣೆಯನ್ನು ಕೈಗೆ ತೆಗೆದುಕೊಂಡನು.

“ಇವತ್ತು ಸಿಕ್ಕದ್ದರಲ್ಲಾ. ಏಕೆ ಬಲಿ ಹಾಕಲಿಲ್ಲ” . – ರಾಧೆ ಅಣಕಿಸುವ ಧ್ವನಿಯಲ್ಲಿ ಕೇಳಿದಳು.

“ನೀನಿದ್ದೆ. ನಿಮ್ಮಪ್ಪ ಇದ್ರು, ಅದಕ್ಕೆ ಸುಮ್ಮಿದ್ದೆ.”

ರಾಧೆ ಹಿಂದು ಮುಂದು ನೋಡದೇ, “ನಾನು ಅವರನ್ನೇ ಮದುವೆ ಮಾಡಿಕೊಳ್ಳಬೇಕಾಗಿತ್ತು, ನಿಮ್ಮಂಥ ಪೆಂಗನ್ನ ಮಾಡಿಕೊಳ್ಳೋದು ನನ್ನ ಅದೃಷ್ಟದಲ್ಲಿದ್ದರೆ!” ಎಂದು ನಿಟ್ಟುಸಿರು ಕರೆದಳು. ಒಂದು ತೊಟ್ಟು ನೀರು ಅವಳ ಕೆನ್ನೆಯ ಮೇಲೆ ಜಾರಿತು ಅನಂತನಿಗೆ ಕೋಪದಿಂದ ಕಣ್ಣು ಕೆಂಪಾಯಿತು.

“ಹಾ ಅವನನ್ನೇ?” ಎಂದು ಅವನು ಕ್ರೋಧದಿಂದ ಹೇಳಿದುದೂ ರಾಧೆಗೆ ಕೇಳಸಲಿಲ್ಲ. ದೊಣ್ಣೆಯೆತ್ತಿ ಬಲವನ್ನೆಲ್ಲಾ ಪ್ರಯೋಗಿಸಿ ಅನಂತ ರಾಧೆಯ ತಲೆಗೆ ಹೊಡೆದನು.



ಅವಳು ಚೀರಿದ “ಅಪ್ಪಾ” ಎಂಬ ಶಬ್ದಕ್ಕೆ ಶ್ರೀನಿವಾಸರಾಯರು ಓಡಿ ಬರುವ ವೇಳೆಗೆ ಹಾಸಿಗೆಯೆಲ್ಲಾ ರಕ್ತದಿಂದ ತೋಯ್ದು ಹೋಗಿತ್ತು. ಅನಂತನೂ ಬಾಯಲ್ಲಿ ನೊರೆ ಸುರಿಸುತ್ತಾ ನೆಲದಮೇಲೆ ಪ್ರಜ್ಞೆಯಿಲ್ಲದೆ ಬಿದ್ದಿದ್ದನು.

ಚಂದು ತನ್ನ ಕೋಣೆಯನ್ನು ಸೇರುವ ವೇಳೆಗಾಗಲೇ ಶ್ರೀನಿವಾಸರಾಯರು ಎರಡು ಮೂರು ಸಲ ಟೆಲಿಫೋನ್ ಮಾಡಿದ್ದರು. ಅವರ ಅವಸರದ ಕರೆಯನ್ನು ಕೇಳಿ ಚಂದು ಪುನಃ ಅವರ ಮನೆಗೆ ಓಡಿದನು. ರಾಧೆಯ ಆಸೆಯೇನೂ ಇರಲಿಲ್ಲ. ಪೆಟ್ಟು ತಿಂದ ತಕ್ಷಣ ಅವಳ ಪ್ರಾಣ ಹಾರಿಹೋಗಿತ್ತು.

ಗಾಡಿ ತರಿಸಿ ಅನಂತನನ್ನು ಹುಚ್ಚಾಸ್ಪತ್ರೆಗೆ ಸಾಗಿಸುವ ಕೆಲಸವೊಂದೇ ಬಾಕಿಯಿತ್ತು.

“ನಾನೇ ಅವಳನ್ನ ಕೊಂದೆ ಚಂದು” ಎಂದು ಶ್ರೀನಿವಾಸರಾಯರು ಸುಡುತ್ತಿದ್ದ ಕರುಳಿನ ದುಃಖವನ್ನು ತೋಡಿಕೊಂಡರು. ಆದರೆ ಹೀಗಾಗುತ್ತೆಂದುಕೊಂಡಿರಲಿಲ್ಲ. ಅವನೂ ಹೀಗೆ ಯಾವಾಗಲೂ ಮಾಡಿರಲಿಲ್ಲ. ತನ್ನ ಪಾಡಿಗೆ ತಾನಿರುತ್ತಿದ್ದ, ಏನು ಬಂತೋ, ಏನೋ.”

ಚಂದುವಿನ ಬಾಯಲ್ಲಿ ಯಾವ ಸಮಾಧಾನದ ಮಾತೂ ಬರಲಿಲ್ಲ. ಕಲ್ಲು ಬೊಂಬೆಯಂತೆ ಕುಳಿತು ಕೇಳುತ್ತಿದ್ದನು.

ಚಂದುವಿನ ತಂತಿ ಸೇರಿದ ಕೂಡಲೇ ಹೊರಟು ಬಂದ ಸೂರ್ನಿ ತಲೆ ತಲೆ ಚಚ್ಚಿಕೊಂಡಳು. “ಬಂಗಾರದಂಥ ಸೊಸೆ, ಚಂದು. ಒಂದು ದಿನವಾದರೂ ಗಂಡನ ಮೇಲೆ ಅಸಮಾಧಾನ ಪಟ್ಟುಕೊಳ್ಳಿರಲಿಲ್ಲಪ್ಪಾ, ಬೆಪ್ಪು ಅಂತ ಅಸಡ್ಡೆ ಮಾಡ್ತಿರಲಿಲ್ಲಪ್ಪಾ. ಇವನಿಗೇನು ಬಂತು ಕೇಡುಗಾಲ!”

ಚಂದು ಸಮಾಧಾನದಿಂದ, “ಅದು ಅವನ ತಪ್ಪಲ್ಲ ಸೊರ್ನಮ್ಮ, ಬುದ್ಧಿ ಇಲ್ಲದವನನ್ನು ಯಾವ ಕೆಲಸಕ್ಕೆ ಹೊಣೆಮಾಡಬೇಕು? ಈ ತಪ್ಪು ಯಾರದೋ ಭಗವಂತನೇ ನಿರ್ಧರಿಸಬೇಕು."

* * *

“ಸೊರ್ನಿ ನಿನಗೆ ಸಾಯೋ ಕಾಲ ಬಂದರೂ ಬಾಯಿ ಚಪಲ ತೀರಲಿಲ್ಲವಲ್ಲೇ” ಎಂದು ಅವರೆಕಾಯಿ ಬಿಡಿಸುತ್ತಿದ್ದ ಸೊರ್ನಮ್ಮನನ್ನ ಸುಬ್ರಹ್ಮಣ್ಯಂ ಹಾಸ್ಯ ಮಾಡಿದನು. “ಏನೋ ಬದುಕಿರೋವರೆಗೂ ತಿಂದ್ಬಿಡೋಣ. ಆಮೇಲೆ ಏನಿದೆಯೋ, ಏನಿಲ್ಲವೋ? “ತಿನ್ನು ತಿನ್ನು ಯಾವತ್ತೋ ಊಟ ಮಾಡ್ತಾನೇ ಸಾಯ್ತಿಯ.”

“ಅದಕ್ಕಿಂತ ಒಳ್ಳೆ ಸಾವಿದೆಯೆ ಸುಬ್ಬ? ನನಗೂ ಕಾಲಬರಾ ಇದೇಂತ ಕಾಣುತ್ತೆ. ಈ ನಡುವೆ ಊಟದಲ್ಲೂ ನನಗೆ ಬೇಜಾರೆ.”

“ಇನ್ನೇನು ಗತಿ!”

“ಆಸ್ಪತ್ರೆಲಿ ಅನಂತನ್ನ ನೋಡಿಕೊಂಡು ಬಂದೆ. ಮುಂಡೇದು ಚಿನ್ನದ ಗಣಿ ಹಾಗಿದ್ದ ಹೆಂಡ್ತೀನ ಹೊಡದ್ದಾಕಿ ಅಲ್ಲಿ ಸಾಯ್ತಾ ಇದೆ. ನಾನು ಮೊದಲೇ ಅವನ್ನ ಆಸ್ಪತ್ರೆಗೆ ಹಾಕಿದ್ದರೆ, ಪಾಪ, ಶ್ರೀನಿವಾಸರಾಯರಿಗಾದರೂ ಹೊಟ್ಟೆ ಸಂಕಟ ತಪ್ಪುತ್ತಿತ್ತು.”



“ಅನಂತನ್ನ ನೋಡಿದ್ದೆಯಾ? ಹೇಗಿದ್ದಾನೆ?” ಸುಬ್ರಹ್ಮಣ್ಯಂ ಕುತೂಹಲದಿಂದ ಕೇಳಿದರು.

'ಇದ್ದಾನೆ. ಸರಿಯಾಗೇ ಇದ್ದಾನೆ. ಇದ್ದಕ್ಕಿದ್ದ ಹಾಗೆ “ರಾಧಾ” ಅಂತ ಕಿರುಚಿಕೋತಾನೆ. ಎರಡು ಕೈಯ್ಯ ಮುಖದ ಮುಂದೆ ಹಿಡಕೊಂಡು ನೋಡಿಕೋತಾನೆ. ಅಲ್ಲಿರೋ ಸೋಪು ಹಾಕಿ ಉಜ್ಜಿ ಉಜ್ಜಿ ತೊಳಕೋತಾನೆ. ಅದಕ್ಕಂಟಿರೋ ರಕ್ತ ಎಷ್ಟು ಜನ್ಮ ತೊಳೆದರೆ ಹೋದೀತು” ಎಂದು ಸೊರ್ನಮ್ಮ ಕಣ್ಮರೆಸಿಕೊಂಡಳು.

ಅಲ್ಲಿಯೇ ಕುಳಿತಿದ್ದ ಚಂದು ನಿಟ್ಟುಸಿರುಬಿಟ್ಟು ತನ್ನ ಕೈಗಳನ್ನೂ ನೋಡಿಕೊಂಡನು.

# ವಿರಕ್ತ

- ಎಂ.ಕೆ. ಇಂದಿರಾ

"ಅಲ್ಲಾ ಹೋ ಅಕ್ಬ! ರೇ ಮುಲ್ಲಾ ಆ.... ಆ... ಅಲ್ಲಾ ಹೋ ಅಕ್ಬರ್!"

ಶ್ರಾವಣದ ಅಮಾವಾಸ್ಯೆಯ ಬೆಳಗಿನ ಜಾವದ ಗಾಢಾಂಧಕಾರದ ಜಡಿ ಮಳೆಯಲ್ಲಿ ಎರಡು ಕೈಯಲ್ಲೂ ಕಿವಿ ಮುಚ್ಚಿ ಏಕಾಗ್ರತೆಯಿಂದ ನಮಾಜು ನಡೆಸಿದ್ದ ಹಯಾತ. ಅವನ ಬೋಳು ತಲೆಗೆ ಸುತ್ತಿದ್ದ ಕೊಳಕು ಲಪ್ಪಟೆಯೂ ನೆನೆದು ಅವನ ನೀಳಗಡ್ಡದ ತುದಿಯಿಂದ ನೀರು ಧಾರೆಯಾಗಿ ಸುರಿಯುತ್ತಿತ್ತು ; ಪಾಯಿಜಾಮ, ಕುರ್ತ ಪೂರಾ ನೆನೆದು ಮೈಗೆ ಅಂಟಿಕೊಂಡಿತ್ತು. ಗದಗುಟ್ಟುವ ಚಳಿಯಲ್ಲಿ ನಿಶ್ಚಿಲವಾಗಿ ಎರಡೂ ಕೈಯೆತ್ತಿ 'ಅಲ್ಲಾಹೋ!' ಎಂದು ಖುದಾನನ್ನು ಕೂಗಿ ಕರೆಯುತ್ತಿದ್ದ ಹಯಾತ.

ಆ ಮುಸುಲಧಾರೆಯ ಭೋರ್ಗರೆತದಲ್ಲಿ ಆ ಖುದಾನ ಕಿವಿಯೂ ಕಿವುಡಾಗಿತ್ತೇನೋ! ಜೊತೆಗೆ ಹಯಾತನದೂ! ಮಸೀದಿಯ ಸಮೀಪದಲ್ಲೇ ಇದ್ದ ಅವನ ಮುರುಕು ಗುಡಿಸಿಲಿನಿಂದ ಅವನ ಮುದಿ ತಾಯಿ ಫಾತಿಮಾಬೀ ಗಂಟಲು ಹರಿದು ಅರಚಿಕೊಳ್ಳುತ್ತಿದ್ದಳು- "ಅರೇ ಬೇಟಾ, ಬರಬಾದ್ ಹೋಗಯಾ ಜಲ್ಲಿ ಅರೇ!"

ಆದರೆ ಅವಳು ಮಳೆಯಲ್ಲಿ ನೆನೆದುಕೊಂಡು ಮಸೀದಿಗೆ ಬರಲಾರಳು. ಬರುವಂತೆಯೂ ಇರಲಿಲ್ಲ. ಗುಡಿಸಲಿನ ಬಾಗಿಲಲ್ಲಿ ನಿಂತು ಲಬೋ ಲಬೋ ಎಂದು ಬಾಯಿ ಬಡಿದುಕೊಂಡಳು.

ಹಯಾತನ ನಮಾಜು ಮುಗಿಯಿತು. ಕಣ್ಣು ತೆರೆದು ನೋಡಿದ. ಸೂರ್ಯೋದಯದ ಸಮಯವಾದರೂ ಪೂರ್ವ ಯಾವುದು, ಪಶ್ಚಿಮ ಯಾವುದು ಎಂದು ತಿಳಿಯಲಾರದಷ್ಟು ಕಾರ್ಮೋಡ ನಾಲ್ಕೂ ದಿಕ್ಕಿನಲ್ಲಿ ಆವರಿಸಿ, ಅಮಾವಾಸ್ಯೆಯನ್ನು ಹೆಪ್ಪು ಹಾಕಿದಂತಿತ್ತು. ಗಡಿಯಾರವಿಲ್ಲದೆಯೇ ವೇಳೆಯನ್ನು ಸುಲಭವಾಗಿ ತಿಳಿದುಕೊಳ್ಳಬಲ್ಲ ಒಂದು ತಿಳಿನೋಟ ಅಂದಿನ ಜನರಿಗೆ ಅಭ್ಯಾಸವಿತ್ತು. ಪ್ರತಿದಿನವೂ ಬೆಳಗಿನ ಜಾವ ನಾಲ್ಕೂವರೆಗೆ ಹಯಾತನಿಗೆ ಎಚ್ಚರವಾಗುವುದು. ಐದು ಗಂಟೆಗೆ ಸರಿಯಾಗಿ ಮಸೀದಿಯಲ್ಲಿ ನಮಾಜು ಮಾಡುತ್ತಿದ್ದ ಈ ಕ್ರಮ ಅವನಿಗೆ ಇಪ್ಪತ್ತು ವರ್ಷಗಳಿಂದ ಬಂದಿತ್ತು. ಸೂರ್ಯ ಹುಟ್ಟುವುದು ಹಿಂದು ಮುಂದಾದರೂ ಹಯಾತನ ನಮಾಜು ಹಿಂದು ಮುಂದಾದುದಿಲ್ಲ. ಇಂದು ಸೂರ್ಯದೇವನೂ ಈ ಮಳೆಗೆ ಹೆದರಿ ಮನೆಯಲ್ಲಿಯೇ ಅಡಗಿ ಕುಳಿತಂತಿತ್ತು.

ಹಯಾತ ತಾನು ಮನೆಯಿಂದ ಬರುವಾಗ ಹಿಡಿದು ತಂದಿದ್ದ ಮಸಿ ಹಿಡಿದ ಕಂದೀಲನ್ನು ಕೈಲಿ ಹಿಡಿದು ಮಸೀದಿಯ ಮೇಲಟ್ಟದಿಂದ ಮೆಲ್ಲಮೆಲ್ಲನೆ ಕೆಳಗಿಳಿದ. ಆ

ಅಮಾವಾಸ್ಯೆಯ ಕತ್ತಲೆಗೆ ಆ ಮಸಿ ಹಿಡಿದ ಕಂದೀಲು ಪೊರೆ ಬೆಳೆದ ಕಣ್ಣಿನಷ್ಟೇ ಪ್ರಯೋಜನಕಾರಿಯಾಗಿತ್ತು. ಹಾಗೆ ತಡವರಿಸುತ್ತ ಅವನು ಮಸೀದಿಯ ಕಟ್ಟೆಯಿಳಿದ. ಮನೆಗೆ ಇನ್ನೂ ಅರ್ಧ ಫರ್ಲಾಂಗು ಇದೆ. ದಾರಿಯುದ್ದಕ್ಕೂ ಕಿಚಿಕಿಚಿ ಕೊಚ್ಚೆಯ ಕೂಪ. ಇಲ್ಲಿಟ್ಟ ಕಾಲು ಅಲ್ಲಿ ಹೋಗುವಷ್ಟು ಎರೆಮಣ್ಣಿನ ಜಾರಿಕೆ, ಕಷ್ಟದಿಂದ ನಾಲ್ಕು ಹೆಜ್ಜೆ ಇಡುವುದರಲ್ಲಿ ಮಳೆಯಿಂದ ಪೂರಾ ನೆನೆದ ಅವನ ಕಂದೀಲು ಚೊರ ಚೊರ ಸದ್ದಿನ ಸಂಕೇತ ಕೊಟ್ಟು ಕಣ್ಣುಮುಚ್ಚಿತು.

"ಥತ್ ಇಸ್ಕಿ" ಅನ್ನುತ್ತ ಅವನು ಆ ಸತ್ತ ಕಂದೀಲನ್ನು ಎತ್ತಿ ಮುಖದ ಹತ್ತಿರ ಹಿಡಿದುಕೊಂಡು ಅಲುಗಿಸಿದ. ತಳದ ಒಂದಿಷ್ಟು ಎಣ್ಣೆ ಚೋಳ ಚೋಳ ಎಂದಿತು.

"ಏ ಬಹುತ್ ಖರಾಬ್ ಎಂದು ಅವನ ತುಟಿ ಬಹು ಮೆಲ್ಲಗೆ ಗೊಣಗುಟ್ಟಿತು. ಅವನೊಮ್ಮೆ ಸುತ್ತಲೂ ನೋಡಿದ. ಮುನಿಸಿಪಾಲಿಟಿಯ ಲಾಂದ್ರ ಕಂಬಗಳೆಲ್ಲಾ ಕಣ್ಣು ಮುಚ್ಚಿ ಸಾಲಾಗಿ ದೆವ್ವಗಳಂತೆ ನಿಂತಿದ್ದವು.

ಹಯಾತ ಕಂದೀಲನ್ನು ಕೆಳಗಿಳಿಸಿದ. ಕೆಂಪು ಎಣ್ಣೆಯ ಖಮರು ವಾಸನೆ ಅವನ ಮೂಗಿಗೆ ಬಡಿಯಿತು. ಬಹು ಕಷ್ಟದಿಂದ ಮನೆಯ ಜಾಡು ಹಿಡದು ಹೆಜ್ಜೆ ಹಾಕಿದ ಅಷ್ಟರಲ್ಲೇ ಫಾತಿಮಾ ಅಪಸ್ವರದಿಂದ ಜೋರಾಗಿ ಕಿರುಚಿದಳು.

ಹಾಯ್ - ರೇ - ಬೇಟಾ...." ಎಂದು.

ಅದು ತನ್ನ ತಾಯಿಯದೇ ಧ್ವನಿಯೆಂದು ಅವನಿಗೆ ಗೊತ್ತಾಯಿತು. ಯಾವುದೋ ಅಪಶಕುನದ ಬಿರುಗಾಳಿಯೊಂದು ಬಿರನೆ ಬೀಸಿ ಅವನ ಎದೆಯೊಳಗಿನ ದೀಪವನ್ನಾರಿಸಿತು. ಒಂದು ಕ್ಷಣ ಅವನು ಜಿಲ್ಲನೆ ಬೆವರಿದ. ಮನದ ವೇಗ ಕಾಲಿಗೆ ತಾಗಿತು. ಕಂದೀಲನ್ನು ಅತ್ತ ಒಗೆದು ಏಳುತ್ತ ಬೀಳುತ್ತ ತನ್ನ ಗುಡಿಸಿಲಿನತ್ತ ಓಡಿದ.

ಆದರೆ ಆಗಲೇ ಅವನ ಬದುಕಿನ ಶಾಂತಿದೀಪ ಆರಿ ಕೆಲವು ಗಳಿಗೆಗಳೇ ಕಳೆದಿತ್ತು. ಆ ಚಿಕ್ಕ ಗುಡಿಸಿಲಿನೊಳಗೆ ನಾಲ್ಕಾರು ಮಂದಿ ಬೂಬಿಯರು ಮುಖಕ್ಕೆ ತಮ್ಮ ಕೊಳಕು ದುಪ್ಪಟೆಗಳ ಮುಸುಕೆಳೆದು ಕುಳಿತು ಅಪಸ್ವರದಲ್ಲಿ ಅಳುತ್ತಿದ್ದರು. ಹಯಾತನ ಮಡದಿ ಮೋನಿಯ ಶಾಂತವಾಗಿ ಕಣ್ಣು ಮುಚ್ಚಿ ಮಲಗಿದ್ದಳು. ಬಹು ಕಷ್ಟದಿಂದ ಎಳೆದು ತೆಗೆದು ಸತ್ತ ಗಂಡು ಮಗುವನ್ನು ಒಂದು ಹರಕು ಬಟ್ಟೆಯಲ್ಲಿ ಸುತ್ತಿ ಒಂದು ಬದಿಗಿಟ್ಟಿದ್ದರು. ಮೋನಿಯಾಳ ಹೆಣಕ್ಕೆ ಕೊರಳವರೆಗೂ ಬಿಳಿಯ ದುಪ್ಪಟವನ್ನು ಹೊದಿಸಿದ್ದರು. ಏಳು ಗಂಡು ಮಕ್ಕಳನ್ನು ಹಡೆದು ಕಡೆಗೂ ಆ ಮನೆಯನ್ನು ಬೆಳಗಲಾರದೆ ಕಣ್ಣು ಮುಚ್ಚಿದ್ದಳು ಮೋನಿಯಾ, ಕೆಲವು ಸತ್ತು ಹುಟ್ಟಿದವು. ಮತ್ತೆ ಕಲವು ಹುಟ್ಟಿ ಸತ್ತವು. ಅಂತೂ ಒಂದೂ ಉಳಿಯಲಿಲ್ಲ. ಏಳನೆಯ ಮಗುವಿನೊಂದಿಗೆ ಅವಳೂ ದಾರಿ ಹಿಡಿದಳು. ಎರಡು ದಿನಗಳಿಂದ ಪ್ರಸವ ವೇದನೆ ಅನುಭವಿಸಿ ಸೋತ ಶರೀರ ಈಗ ಸಕಲ ವೇದನೆಗಳಿಂದ ಮುಕ್ತವಾಗಿ ತಣ್ಣಗೆ ಮಲಗಿತ್ತು. ಅವಳ ಮುಖದೆಡೆ ಒಂದು ಮೇಣದ ಬತ್ತಿ ಮಂದವಾಗಿ ಮೈದೂಗುತ್ತಿತ್ತು.

ಹಯಾತ ಮೈಮೇಲೆ ಪ್ರಜ್ಞೆಯಿಲ್ಲದೆ ಗುಡಿಸಿನೊಳಗೆ ನುಗ್ಗಿದಾಗ ಫಾತಿಮ ದಬದಬನೆ ಎದೆ ಗುದ್ದಿಕೊಂಡು ಗೋಳಿಟ್ಟಳು.



"ಏ ಕ್ಯಾ ಹೋಗಯಾ ಬೇಟಾ..."

ಬೂಬಿಯರು ಹಿಂದಕ್ಕೆ ಸರಿದು ಕುಳಿತರು. ಹಯಾತ ಬಂದು ಮೋನಿಯಾಳ ಬಳಿ ಕುಳಿತ ಅವನಿಗೆ ಎಲ್ಲವೂ ಅರ್ಥವಾಗಿತ್ತು, ಇತ್ಯರ್ಥವೂ ಆಗಿತ್ತು ಅವನು ಅವಳ ಮುಖದೆಡೆಗೆ ಬಾಗಿದ, ಅವನ ಗಡ್ಡದ ನೀರು ಅವಳ ಗದ್ದದ ಮೇಲೆ ತೊಟ್ಟಿಕ್ಕಿತು. ಎಡಗೈಯಿಂದ ಮೋನಿಯಾಳ ಹಣೆಯನ್ನು ಸವರುತ್ತ ನಡುಗುವು ದನಿಯಲ್ಲಿ ಗೊಣಗಿದ.

"ತುಮನೆ ಏ ಕ್ಯಾಕಿಯಾ ಮೋನಿ?"

ಅವನು ಹಾಗೆ ಕುಳಿತಾಗ ಕಣ್ಣೀರು, ಗಡ್ಡದ ನೀರು ಒಟ್ಟಾಗಿ ತೊಟ್ಟಿಕ್ಕಿದುವು. ನೆನೆದ ಬಟ್ಟೆಯ ನೀರು ಗುಡಿಸಿಲಿನೊಳಗೆಲ್ಲ ಹರಡಿತು. ಕಾಲುಗಳಿಗೆ ಕೆಸರು ಮೆತ್ತಿಕೊಂಡಿತ್ತು.

ತಂದೆ-ತಾಯಿ ಇಲ್ಲದ ತಬ್ಬಲಿ ಮೋನಿಯನ್ನು ತಂದು ಮದುವೆ ಮಾಡಿದ್ದಳು. ಫಾತಿಮಾ, ಸುಳಿನಗೆಯ ಮೆಲುಮಾತಿನ ಮೋನಿಯಾ ಗಂಡನಿಗೆ, ಅತ್ತೆಗೆ ಬಲು ಅಚ್ಚುಮೆಚ್ಚಾಗಿದ್ದಳು. ಗಂಡ ಸತ್ತ ನಂತರ ಮತ್ತೆ ನಿಕಾಮಾಡಿಕೊಳ್ಳದೆ ಒಬ್ಬನೇ ಮಗನನ್ನು ಬಲು ಕಷ್ಟದಿಂದ ಬೆಳೆಸಿ ಒಳ್ಳೆ ಸೊಸೆಯನ್ನು ತಂದುಕೊಡಿದ್ದಳು ಫಾತಿಮಾ. ಆದರೆ ಆ ಸೊಸೆಯಲ್ಲಿ ಒಂದು ಪ್ರಮುಖ ದೋಷವಿತ್ತು. ಮುಸಲ್ಮಾನರ ಜಾತಿಯಲ್ಲಿ ಜನಿಸಿಯೂ ಮಾಂಸ, ಕೋಳಿ, ಮಾಡಿದ ದಿನ ಅವಳು ಮನೆಯ ಹಿತ್ತಲಿನಲ್ಲಿಯೇ ಕಾಲ ಕಳೆಯುವಳು. ಕುರಿ ಕೋಳಿ ಕುಯ್ಯುವಾಗ ಅವಳು ಬಹು ದೂರ ಹೋಗಿ ಎರಡೂ ಕಿವಿಗಳಿಗೆ ಬೆಟ್ಟು ತುರುಕಿ ನಿಲ್ಲುತ್ತಿದ್ದಳು. ಬೂಬಿಯರಿಗೆಲ್ಲಾ ಇದೆಲ್ಲ ವಿಸ್ಮಯದ ಸಂಗತಿ. ಮಡದಿಯನ್ನು "ಬೊಮ್ಮನ್ ಕಿ ಲಡ್ಡಿ" ಎಂದು ಹಾಸ್ಯಮಾಡುತ್ತಿದ್ದ ಹಯಾತ. ಮತ್ತೆಲ್ಲ ವಿಷಯಗಳಲ್ಲಿ ಅತ್ತೆ ಸೊಸೆಯರು ಬಲು ಒಪ್ಪ.

ಹಯಾತ ಹೇಳಿ ಕೇಳಿ ಶ್ರಮಜೀವಿ. ಬೆಳಗಿನಿಂದ ಸಂಜೆಯವರೆಗೆ ಕುಲುಮೆಯ ಎದುರು ನಿಂತು ಕಾಸಿ ಬಡಿದು ದುಡಿಯುವವ. ಅತ್ತೆ ಸೊಸೆಯರ ಕಾಸು ಅವನು ಕೇಳಿದವನಲ್ಲ. ತನ್ನ ದುಡಿಮೆಯಲ್ಲಿ ಸಂತೃಪ್ತ ಜೀವನ ನಡೆಸಿಕೊಂಡು ಬಂದವ. ಮಧ್ಯೆ ಮಧ್ಯೆ ಅವನನ್ನು ಚಿಂತೆಗೀಡುಮಾಡಿದ ಸಂಗತಿ ಎಂದರೆ ಮೂರು ನಾಲ್ಕು ಮಕ್ಕಳ ಸಾವು. ಮೊದಲು ಊರಲ್ಲಿ ಆಸ್ಪತ್ರೆಯೇ ಇರಲಿಲ್ಲ. ಈಗ್ಗೆ ನಾಲೆ ದು ವರ್ಷಗಳಿಂದೀಚೆಗೆ ಆಸ್ಪತ್ರೆ ಬಂದಿತು. ಬಿಳೀ ಸೀರೆಯುಟ್ಟ ಕರೀ ಸೂಲಗಿತ್ತಿಯು ಬಂದಿದ್ದಳು. ಆದರೆ ಊರಿನ ಗಮ್ಯರ ಮನೆಯ ಹರಿಗೆಗಳಿಗೆ ಮಾತ್ರ ಆಕೆಯನ್ನು ಕರೆಯುತ್ತಿದ್ದರು.

ಬಡವರು ಕರೆದರೆ ಆಕೆಗೆ ಇಡೀ ಎರಡು ರೂಪಾಯಿ ಕೊಡಬೇಕಲ್ಲ? ಈ ಕಾರಣದಿಂದ ಬಡವರು ಅವಳನ್ನು ಕರೆಯುವ ವಾಡಿಕೆ ಇಲ್ಲ. ಅಲ್ಲದೆ ಹಳ್ಳಿಗಳಲ್ಲಿ ಬೂಬಿಯರು ಹೆಗ್ಗಡಿತೆಯರೇ ಸೂಲಗಿತ್ತಿಯರಾಗುತ್ತಾರೆ. ಮುಸಲ್ಮಾನರ ಕೇರಿಗೆ ಫಾತಿಮಾಳೇ ಸೂಲಗಿತ್ತಿ. ಆದ್ದರಿಂದ ಮೋನಿಯಾಳ ಹೆರಿಗೆಗೆ ಮೋನಿಯಾ ಮಕ್ಕಳು ಯಾಕೆ ಸತ್ತವೆಂದು ಯಾರಿಗೂ ತಿಳಿಯದು. ಕೊನೆಗಾಲಕ್ಕೆ ಅವಳಿಗಾದರೂ ಏನಾಗಿತ್ತೆಂದು ಯಾರಿಗೂ ತಿಳಿಯದು. ಎಲ್ಲ ಘೋಷಾದಲ್ಲಿ ನಡೆದ ಕತೆಯಾಯಿತು.

"ನಿನ್ನ ಮಗನಿಗೆ ಬುದ್ಧಿ ಭ್ರಮಣೆಯಾಗಿದೆ" ಎಂದು ಒಬ್ಬಿಬ್ಬರು ಮುಲ್ಲಾಗಳು ಫಾತಿಮಾಗೆ ತೀರ್ಮಾನ ಹೇಳಿದರು. ಹಾಗೆ ಹೇಳಲು ಸಾಧ್ಯವಿತ್ತು. ಹಯಾತ ಮನೆ



ಸೇರುತ್ತಿರಲಿಲ್ಲ. ಸದಾ ಮೌನ, ತಾಯಿ ಅವನು ಕುಳಿತಲ್ಲಿಗೆ ಮಾಂಸದ ಅಡಿಗೆ ಮಾಡಿ ಒಯ್ಯುವಳು. ಅವನು ಅದನ್ನು ಮೂಸಿ ನೋಡಿ ಎದ್ದು ಹೊರಟುಹೋಗುತ್ತಿದ್ದ. ಇತ್ತೀಚೆಗೆ ಅವನಿಗೆ ಹಳದೀ ದಾರದ ಬೀಡಿಯೂ ತಪ್ಪಿ ಹೋಯ್ತು, ಗೆಳೆಯ ಮುಕ್ಕಾಸಾಬಿ ಕೆಲವು ದಿನಗಳವರೆಗೆ ಬೀಡಿ ತಂದು ಕೊಡುತ್ತಿದ್ದ. ಹಯಾತ ಬೀಡಿ ಸೇದುತ್ತಿದ್ದ ಅಷ್ಟೇ. ಅವನೊಡನೆ ಮಾತನಾಡುತ್ತಿರಲಿಲ್ಲ. ಮುಕ್ತಾನಿಗೂ ಬೇಸರವಾಗಿ ಸುಮ್ಮನಾದ. ಕಡೆಗೆ ಮೋನಿಯಾಳ ದೆವ್ವ ಅವನಿಗೆ ಹಿಡಿದಿದೆಯೆಂದು ಎಲ್ಲರ ತೀರ್ಮಾನವಾಯ್ತು. ಅನ್ನ, ಸಸ್ಯಾಹಾರ ಕೊಟ್ಟರೆ ತಿನ್ನುತ್ತಿದ್ದ. ತಾಯಿ ಮಗನ ದುರವಸ್ಥೆಗೆ 'ಗೊಳೋ' ಎಂದು ಕೊಳ್ಳುತ್ತಾಳೆ.

ತಾಯಿ ಮುಂದಿಟ್ಟಿದ್ದನ್ನು ಸದ್ದಿಲ್ಲದೆ ನುಂಗುವ ಹಯಾತ. ಆಯಿತು, ಮತ್ತೆ ಅವನು ಅಲ್ಲಿಯೇ! ಮೂರು ದಿನ ಯಾರೂ ಊಟಕೊಡದಿದ್ದರೆ ಹಾಗೇ ಉಪವಾಸ ಕುಳಿತಿರುವ, ಮಗನಿಗೆ ಹುಚ್ಚು ಎಂದು ತೀರ್ಮಾನಿಸಿಕೊಂಡಳು ಫಾತಿಮಾ, ಅವಳ ಬದುಕು ಸೊರಗಿಹೋಯಿತು. ಕಣ್ಣು ತೀರಾ ಮಂಜಾಯಿತು. ಕೈಕಾಲು ಕುಗ್ಗಿತು. ದಿನದಿನದ ಕೂಳಿಗೆ ಅಭಾವವೆನಿಸಿತ್ತು. ದುಡಿಯುವ ಮಗನ ಅವಸ್ಥೆ ಹೀಗೆ ಸೊಸೆ ಹೋದಳು. ಫಾತಿಮಾ ಅರಳು ಮರುಳಾದಳು. ನೆರೆಹೊರೆಯ ಬಂಧುಗಳು ಅಷ್ಟಿಷ್ಟು ನೆರವು ನೀಡುತ್ತಿದ್ದರು. ಆರು ವರ್ಷಗಳು ನರಳಿ ಫಾತಿಮಾ ಸೊಸೆಯ ದಾರಿ ಹಿಡಿದಳು.

'ಅಲ್ಲಾ ಹೋ... ಅಕ್ಬರ್'

ಶಿಶಿರ ಋತುವಿನ ಕೊರೆವ ಚಳಿಯಲ್ಲಿ ಮೋನಿಯಾಳ ಗೋರಿಯ ಬದಿಯಲ್ಲಿ, ಚಂದ್ರ ಹಲಸಿನ ಮರದ ಕೆಳಗೆ ವೀರಮಂಡಿಯೂರಿ ಕುಳಿತು ಎರಡು ಕೈಯಿಂದ ಕಿವಿಮುಚ್ಚಿ ನಮಾಜು ನಡೆಸಿದ ಹಯಾತ. ಅವನ ಮೇಘನಾದ

ಉಡುಗಿಹೋಗಿದೆ. ಕಂಚಿನ ವಿಗ್ರಹದಂತಿದ್ದ ಕಟ್ಟುಮಸ್ತಾದ ಸುದೀರ್ಘ ನಿಲುವು ಉಪವಾಸ, ವನವಾಸಗಳಿಂದ ಬಸವಳಿದು ಬೆನ್ನು ಗೂನಿಟ್ಟಿದೆ. ಕಣ್ಣು ಮಂಕಾಗುತ್ತಿದೆ. ಅದಾವುದರ ಪರಿವೆಯೂ ಅವನಿಗಿರಲಿಲ್ಲ. ಅವನ ಮುದಿ ತಾಯಿ ಸತ್ತಾಗಲೂ ಅವನು ಅಳಲಿಲ್ಲ. ಅವನ ಬಂಧುಗಳೇ ಅವಳ ಅಂತಿಮ ಯಾತ್ರೆ ನಡೆಸಿದರು.

ಅತ್ತ ತಾಯಿ ಇತ್ತ ಮಡದಿ ಎರಡು ಗೋರಿಗಳ ನಡುವೆ ಹಯಾತ ಕುಳಿತಿರುತ್ತಿದ್ದ. ಅವನ ತಾಯಿಯ ಮರಣದ ನಂತರ ಅವನ ಹೊಟ್ಟೆಯ ಪಾಡಿಗೆ ಬಲು ಕಷ್ಟವಾಯಿತು. ಎರಡು ವೇಳೆ ನಮಾಜು ನಡೆಸಿ 'ಬಕರಿಹಳ್ಳದಲ್ಲಿ ಮೂರು ಬೊಗಸೆ ನೀರು ಕುಡಿದು ಕುಳಿತಿರುತ್ತಿದ್ದ. ತೀರಾ ಹಸಿವಾದಾಗ ಎದ್ದು ಜೂಗು ಹಾಕುತ್ತ ಊರೊಳಗೆ ಬರುವುದು ಅಭ್ಯಾಸವಾಯಿತು. ಊರವರಿಗೆಲ್ಲ ಅವನ ಮೇಲೆ ಅಪಾರ ಕನಿಕರ, ಯಾರ ಮನೆ ಬಾಗಿಲಿಗೂ ಹೋಗದೆ ಚರಂಡಿ ಪಕ್ಕದಲ್ಲಿ ಕುಳಿತಿರುವುದು ಅವನ ಪದ್ಧತಿ. ಕಾಸು ಕೊಟ್ಟರೆ ಅವನು ಮುಟ್ಟುತ್ತಿರಲಿಲ್ಲ. ಎಲೆಯಲ್ಲಿ ಒಂದಿಷ್ಟು ಅನ್ನ ಕೊಟ್ಟರೆ ಮಾತ್ರ ಕುಳಿತಲ್ಲೇ ತಲೆಬಾಗಿ ತಿನ್ನುತ್ತಿದ್ದ. ಬೀದಿಯ ನಾಯಿಗಳು ಅದರಲ್ಲಿ ಪಾಲಿಗೆ ಬರುವುವು.

"ಆವ್ ಭೈ, ಖಾವ್ ಖಾವ್"

ಅನ್ನುತ್ತ ಅದರ ಬೆನ್ನು ಸವರಿ ಒಂದೇ ಎಲೆಯಲ್ಲಿ ನಾಯಿಯೊಂದಿಗೆ ತಾನೂ ತಿನ್ನವ ಆಯಿತು, ಮತ್ತೆ ಅವನು ಮೆಲ್ಲಮೆಲ್ಲನೆ ಊರ ಹೊರಗೆ.



ಒಂದೊಂದು ದಿನ ನೇರವಾಗಿ ಬ್ರಾಹ್ಮಣರ ಕೇರಿಯಲ್ಲಿ ನಡೆಯುವುದುಂಟು. ಮೋನಿಯಾಳಿಂದ ರವಿಕೆ ಹೊಲಸಿಕೊಂಡ, ಟೋಪಿ ಕಾಲುಚೀಲ ಹಾಕಿಸಿಕೊಂಡ ತಾಯಂದಿರು ಅಲ್ಲಿದ್ದರು. ಫಾತಿಮಾಳ ಬದಲು ಬೇರೆ ಬೂಬಿಯರು ಈಗ ತರಕಾರಿ ಮಾರುತ್ತಿದ್ದರು ಆದರೂ ಆ ತಾಯಂದಿರು ಮೋನಿಯಾಳನ್ನು ಮರೆತಿರಲಿಲ್ಲ. ಹರಕು ಬಟ್ಟೆಯ ಹಯಾತ ಕತ್ತುಬಾಗಿ ನಡೆಯುವಾಗ ಆ ತಾಯಂದಿರು, ಕನಿಕರದಿಂದ ಅವನಿಗೆ ತಿಂಡಿ ಊಟ ಕೊಡುವುದುಂಟು. ಇದೀಗ ರೈಲ್ವೆ ಸ್ಟೇಷನ್ನಿನ ಹತ್ತಿರ ಅಕ್ಕಿಯ ಮಿಷನ್ನು ಪ್ರಾರಂಭವಾಯಿತು. ಹಯಾತ ದಿನವೂ ಚಂದ್ರ ಹಲಸಿನ ಮರದಡಿ ಕುಳಿತು ಅದರ ಕಾಮಗಾರಿ ನೋಡಿದ. ಅಕ್ಕಿ ಮಿಲ್ಲು ಪ್ರಾರಂಭವಾಯಿತು. ಏನೋ ಅವನೂ ಒಂದು ದಿನ ಸುಮ್ಮನೆ ಅದರ ಮುಂದೆ ಹೋಗಿ ನಿಂತ. ಮಿಲ್ಲು ನಡೆಯುತ್ತಿತ್ತು. ಒಂದು ಕಡೆ ಅಕ್ಕಿ, ಒಂದು ಕಡೆ ಹೊಟ್ಟು ರಾಶಿ ಬೀಳುತ್ತಿತ್ತು. ಅದರ ಒಡೆಯರು ಹಯಾತನ ಚಿರಪರಿಚಿತರು. ಏನು ತೋರಿತೋ ಒಂದು ಬೊಗಸೆ ಅಕ್ಕಿ ತೆಗೆದು ಹಯಾತನ ಮುಂದೆ ಹಿಡಿದರು. ಅವನು ತನ್ನ ಹರಕು ಶರಟು ಒಡ್ಡಿದ. ಅದನ್ನು ಅವನು ಏನು ಮಾಡುತ್ತಾನೆಂದು

ನೋಡುತ್ತಾ ನಿಂತರು. ಅವನು ಮೆಲ್ಲನೆ ತೋಪಿನೆಡೆಗ ಬಂದ. ಅಲ್ಲಿ ನೂರಿನ್ನೂರು ಪಾರಿವಾಳಗಳು ಹಾರಾಡುತ್ತಿದ್ದವು. ಹಯಾತ ಅವುಗಳ ನಡುವೆ ಹೋಗಿ ಕುಳಿತು ಪ್ರೀತಿಯಿಂದ ಕರೆದ:

"ಆವ್ ಬಚ್ಚೆ, ಇಧರ್ ಆವ್"

ಅಷ್ಟಷ್ಟು ಅಕ್ಕಿ ತೆಗೆದು ಎರಚುತ್ತಾ ಕುಳಿತ ಹಯಾತ. ಮೂರು ಗಳಿಗೆಯಲ್ಲಿ ನೂರಾರು ಪಾರಿವಾಳಗಳು ಅವನ ಸುತ್ತ ಮುತ್ತಿಕೊಂಡವು. 'ಗುಬುಕ್ ಗುಬುಕ್ ಅನ್ನುತ್ತ ನಾಲ್ಕಾರು ಪಾರಿವಾಳಗಳು ಅವನ ಮಡಿಲಿನೊಳಗಿನ ಅಕ್ಕಿಯನ್ನು ತಿಂದವು. ಅವನ ಬಾಡಿದ ಕಣ್ಣುಗಳಲ್ಲಿ ಅಪಾರ ಆನಂದ, ತೃಪ್ತಿ ಕುಣಿದಾಡಿತು.

"ಚಲೋ ಬೇಟಾ, ಖಾನಾ ಖತಮ್ ಹೋಗಯಾ, ಚಲ್‌ಚಲ್!"

ಎನ್ನುತ್ತಾ ಒಂದೊಂದಾಗಿ ಅವುಗಳನ್ನು ಹಾರಬಿಟ್ಟ.

ದೂರದಿಂದ ಎಲ್ಲವನ್ನೂ ನೋಡಿದರು ಮಿಲ್ಲಿನ ಮಾಲೀಕರು. ತಮ್ಮ ಗಾಡಿಗಳ ಹಳಿಗಳನ್ನೆಲ್ಲಾ ವರ್ಷದಲ್ಲಿ ಎರಡು ಮೂರು ಬಾರಿ ರಿಪೇರಿ ಮಾಡಿ ಕೊಡುತ್ತಿದ್ದವ ಹಯಾತ.

ಜಾತಿಯಲ್ಲಿ ತುರುಕನಾದರೂ ಎಂತಹ ನಂಬಿಗಸ್ತ ವಿನಯವಂತ ನಿಷ್ಠೆಯಿಂದ ಜೀವನ ನಡೆಸಿದ ಅವನ ಸಂಸಾರದ ಗತಿ ನೆನೆದು ಅವರು ಸಂಕಟಪಟ್ಟರು. ಅವನ ಗಮನ ಪೂರ ಹಕ್ಕಿ ಪಕ್ಕಿಗಳ ಕಡೆಗಿತ್ತು. ಕಡೆಗೊಮ್ಮೆ ಅವರೇ ಮಾತಾಡಿಸಿದರು.

"ಊಟ ಆಯ್ತನೋ ಹಯಾತ?"

ಅವನು ಉತ್ತರ ಕೊಡಲಾರನೆಂಬ ಅವರ ಕಲ್ಪನೆ ತಪ್ಪಾಯ್ತು. ಅವನು ನೇರವಾಗಿ ಉತ್ತರಕೊಟ್ಟ

"ಇಲ್ಲ ಸ್ವಾಮಿ.

"ನಮ್ಮನೆಗೆ ಬಾ, ಊಟಮಾಡುವಂತೆ,"

ಅವರ ಹಿಂದೆ ಮೌನವಾಗಿ ನಡೆದ.

"ಓಣಿಯಿಂದ ಹಿಂದೆ ಬಾ" ಅಂದರು ಮಾಲೀಕರು.

ಉದ್ದವಾದ ಓಣಿಯಿಂದ ಹಿಂಬದಿಯ ಬಾವಿಯ ಕಟ್ಟೆಯ ಬಳಿ ಬಂದು ನಿಂತ ಹಯಾತ. ಒಂದು ಬಾಳೆಯ ಎಲೆಯ ತುಂಬ ಅನ್ನ, ಮೇಲೋಗರ ಹಾಕಿ ತಂದು ಬಾವಿಕಟ್ಟೆಯ ಬದಿಯಲ್ಲಿಟ್ಟರು ಮಾಲೀಕರ ಮಡದಿ. ಹಯಾತ ಮೌನವಾಗಿ ತಿನ್ನತೊಡಗಿದ. ಸಂತೆಮಾಳದ ಬಡಕಲು ನಾಯಿಯೊಂದು ಅವನಿಂದ ತುಸು ದೂರದಲ್ಲಿ ನಿಂತು ತುಟಿ ನೆಕ್ಕಿಕೊಂಡು ಬಾಲ ಅಲ್ಲಾಡಿಸಿತು. ಅವನು ನಾಲ್ಕು ತುತ್ತು ತಿಂದಿದ್ದ; ಮೆಲ್ಲನೆ ಕರೆದ ಅದನ್ನು,

"ಖಾನ್ ಬೇಟಾ, ಇದರ್ ಆವ್!"

ನಾಯಿ ಅನುಮಾನದಿಂದ ಹೆಜ್ಜೆ ಇಡುತ್ತ ಹತ್ತಿರ ಬಂದು ಎಲೆಗೆ ಬಾಯಿಟ್ಟಿತು. ಒಂದು ನಿಮಿಷವೆನ್ನುವುದರಲ್ಲಿ ಗಬಗಬನೆ ಎಲ್ಲವನ್ನೂ ತಿಂದು, ಎಲೆಯನ್ನು ನೆಕ್ಕಿಟ್ಟಿತು. ಮತ್ತೆ ಆಕೆ ಅನ್ನ ತರುವುದರಲ್ಲಿ ಅವನು ಎದ್ದಾಗಿತ್ತು. ಆಕೆ ಕನಿಕರದಿಂದ ಕೇಳಿದರು, "ಯಾಕೋ ಹಯಾತ ಉಪವಾಸ ಸಾಯ್ತಿ? ದಿನಾ ಬಂದು ಊಟಮಾಡಿ ಹೋಗಬಾರದೇನೋ?"

ಅದಕ್ಕೆ ಅವನು ಮೆಲುನಕ್ಕು ಸುಮ್ಮನಾದ.

* * * *

ಊರೆಲ್ಲ ತಳಿರು, ತೋರಣಗಳಿಂದ ಅಲಂಕೃತವಾಗಿತ್ತು. ರಸ್ತೆಯುದ್ದಕ್ಕೂ ಗೋಮಯದಿಂದ ಸಾರಿಸಿ ರಂಗವಲ್ಲಿಯ ಕಲೆಯ ಬಲೆ ಹರಡಿದರು, ಊರಿನ ಹೆಂಗಳೆಯರು. ಮನೆಮನೆಯೂ ಸುಣ್ಣ ಕೆಮ್ಮಣ್ಣು ಸಾರಣೆಗಳಿಂದ ನಿರ್ಮಲಗೊಂಡು ಶೋಭಾಯಮಾನವಾಯಿತು. ತನ್ನ ಕೊಳಕು ದಪ್ಪಟಿ ಎಳೆದಾಡುತ್ತಾ ಮುದಿ ಹಯಾತ ವಿಸ್ಮಯದಿಂದ ಅತ್ತ ಇತ್ತ ನೋಡುತ್ತ ನಡೆದಿದ್ದ ರಸ್ತೆಯಲ್ಲಿ ಊರಿನ ವಕೀಲರೊಬ್ಬರು ಹಯಾತನನ್ನು ಕರೆದು ಹೇಳಿದರು.

"ನಾಳೆ ನಾಡಿದ್ದು ಎರಡು ದಿನ ನೀನು ಊರೊಳಗೆ ಬರಬೇಡವೋ ಹಯಾತ."

ಏಕೆಂದು ಅವನು ಪ್ರಶ್ನಿಸಲಿಲ್ಲ.

"ಅಚ್ಛಾ ಸಾಮಿ" ಅನ್ನುತ್ತಾ ಹಾಗೇ ಹಿಂದಿರುಗಿದ. ವಕೀಲರಿಗೆ ಮನ ಕರಿಗಿಹೋಯಿತು. ಕೂಡಲೆ ಅವರೆಂದರು:

"ಇಲ್ಲಿ ಕೇಳೋ ಹಯಾತ, ನಾಳೆ ಶೃಂಗೇರಿ ಜಗದ್ಗುರುಗಳು ನಮ್ಮೂರಿಗೆ ಬಾರೆ ಕಣೋ, ಊರೆಲ್ಲ ಶುಚಿಯಾಗಿರಬೇಕು. ನೀ ಏನೋ ಎಲ್ಲಾ ಬಿಟ್ಟೋನು. ಚೂರು ಅಶುಚಿ ಆದರೂ ಶಾಪ ಕೊಡ್ತಾರೆ ಕಣೋ ಗುರುಗಳು. ಅದಕ್ಕೆ ಹೇಳೆ, ಸಿಟ್ಟು ಬಂತೇನೋ ನಿಂಗೆ?"

"ಇಲ್ಲ ಸಾಮಿ, ಇತ್ತ ಬರಾಕಿಲ್ಲ ನಾನು."

ಹಾಗೆ ಹೇಳುತ್ತಲೇ ಸರಸರನೆ ನಡೆದ ಹಯಾತ, ಮರುದಿನ ಬೆಳಗಿನ ಎಂಟು



ಗಂಟೆಗೆಲ್ಲಾ ಬಹು ದೂರದಿಂದಲೇ ಬಾಜಾ-ಬಜಂತ್ರಿ, ತಾಳ ತಮಟೆಗಳ ಗದ್ದಲ ಕೇಳಿ ಬಂತು. ಹಯಾತ ಮೋನಿಯಾಳ ಗೋರಿಯ ಬಳಿ ಶಾಂತವಾಗಿ ಕುಳಿತ್ತಿದ್ದ. ರೈಸ್ ಮಿಲ್ಲಿನ ಪಕ್ಕದಲ್ಲೂ ಒಂದು ಚಪ್ಪರ ಹಾಕಿತ್ತು. ಗದ್ದಲ ಬಂದತ್ತ ತಿರುಗಿ ನೋಡಿದ ಹಯಾತ. ಕಿನಕಾಪಿನ ಗಾದಿಗಳಿಂದ ಅಲಂಕೃತವಾದ ಎರಡು ಭವ್ಯ ಆನೆಗಳು, ಎಂಟು ಕುದುರೆಗಳು, ಹತ್ತಿಪ್ಪತ್ತು ಮಂದಿ ಕಾಲಾಳುಗಳು, ಸುತ್ತಮುತ್ತ ಶುಚಿರ್ಭೂತರಾದ ಮಠದ ವಿಪ್ರೋತ್ತಮರ ಪರಿವಾರ ಬಾಜಾ-ಬಜಂತ್ರಿಗಳ ಮೇಳದೊಂದಿಗೆ ಮುತ್ತಿನ ಜಲ್ಲರಿಗಳಿಂದ ಅಲಂಕೃತವಾದ ಅಡ್ಡಪಲ್ಲಕ್ಕಿಯಲ್ಲಿ ಭಸ್ಮಭೂಷಿತರಾಗಿ ಕೆಂಪು ಕಾಶ್ಮೀರದ ಶಾಲನ್ನು ತಲೆ ತುಂಬ ಹೊದ್ದ ತೇಜಃಪುಂಜಮೂರ್ತಿ ಶ್ರೀ ಜಗದ್ಗುರುಗಳು ಮಂಡಿತರಾಗಿದ್ದರು. ದೂರದಿಂದಲೇ ಎಲ್ಲವೂ ಕಾಣಿಸಿತು ಹಯಾತನಿಗೆ, ಅವನು ಮೆಲ್ಲನೆ ಎದ್ದು ನಿಂತ. ಮಿಲ್ಲಿನ ಎದುರಿನ ಚಪ್ಪರದಲ್ಲಿ ಊರಿನ ಗಣ್ಯ ವ್ಯಕ್ತಿಗಳು. ಸ್ವಾಮಿಗಳನ್ನು ಎದುರ್ಗೊಳ್ಳಲು ಬಂದಿದ್ದರು. ಚಪ್ಪರದಡಿ ಪಲ್ಲಕ್ಕಿ ನಿಂತಿತು. ಹಯಾತ ದೂರದಿಂದಲೇ ಮೂರುಬಾರಿ ನೆಲಮುಟ್ಟಿ ಕುರ್ನಿಸಾತ್ ಮಾಡಿದ. ಗುರುಗಳು ಅವನ ನೋಡಿದರು. ಸುತ್ತಮುತ್ತಲಿನದೆಲ್ಲವನ್ನು ಮರೆತು ಒಲ್ಲದ ಪ್ರಶ್ನೆ ಕೇಳಿದರು.

"ಯಾರವನು?"

ಈ ಚಿಕ್ಕ ಪ್ರಶ್ನೆಗೆ ಊರಿನ ಗಣ್ಯ ಪ್ರಮುಖರೊಬ್ಬರು ಹಯಾತನ ಇತಿಹಾಸವನ್ನ ಬಹು ಸಂಕ್ಷಿಪ್ತವಾಗಿ ತಿಳಿಸಿದರು. ಮೆರವಣಿಗೆ ಮುಂದುವರೆಯಿತು. ಅಂದು ಸ್ವಾಮಿಗಳಿಗೆ ದೊಡ್ಡ ಮನೆಯೊಂದರಲ್ಲಿ ಬಿಡಾರ. ನೂರಾ ಎಂಟು ಸೌರನ್ನುಗಳ ಸ್ವರ್ಣಪೂಜೆ ಊರ ಗಣ್ಯ ವ್ಯಕ್ತಿಗಳೆಲ್ಲ ಸೇರಿ ಮಾಡಿಸುವ ಭವ್ಯ ಪಂಚಭಕ್ಷ ಪರಮಾನ್ನಗಳ ಮಹಾಭಿಕ್ಷೆ. ಊರ ತುಂಬ ಗದ್ದಲವೋ ಗದ್ದಲ.

ಎಲ್ಲ ಸಾಂಗೋಪಾಂಗ ನಡೆಯಿತು. ಊರ ಸಂತರ್ಪಣೆಗೆ ಎಲೆಹಾಕಿ ಬಡಿಸಿಯಾಗಿದೆ ಹಸ್ತೋದಕ ಹಾಕುವ ಸಮಯದಲ್ಲಿ ಗುರುಗಳು ಅಪ್ಪಣೆಕೊಡಿಸಿದರು.

“ಊರ ಹೊರಗಿನ ಆ ಸಾಧುವಿಗೊಂದು ಎಡೆ ಕೊಟ್ಟು ಬನ್ನಿ!”

ಅಲ್ಲಿ ನೆರದವರೆಲ್ಲ ತಬ್ಬಿಬ್ಬಾದರು. ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಜಗದ್ಗುರುಗಳ ಭೋಜನಕ್ಕೆ ಮುನ್ನ ಆ ತುರುಕನಿಗೆ ಊಟವೆ? ಗುರುವಾಕ್ಯ! ಮೂರುವಂತಿರಲಿಲ್ಲ. ಯಾರೋ ಒಬ್ಬರು ಹಯಾತನಲ್ಲಿಗೆ ಎಡೆಹೊತ್ತು ಓಡಿದರು. ಅಲ್ಲಿ ಹಯಾತ ಊರ ಕಂತ್ರಿ ನಾಯಿಯೊಂದಿಗೆ ತುತ್ತನೆತ್ತಿದಾಗಲೇ ಇಲ್ಲಿ ಸ್ವಾಮಿಗಳು ಪರಿಷಿಂಚನೆ ಮಾಡಿದರು.

ಈ ಪ್ರಕರಣದಿಂದ ಊರ ಗಣ್ಯರೆಲ್ಲರ ಮನಸ್ಸು ಒಂದು ವಿಧವಾಯಿತು. ಆದರೂ ಒಬ್ಬರೂ ತುಟಿಪಿಟಕ್ಕೆನ್ನಲಿಲ್ಲ. ಎಲ್ಲ ಸೇವಾರ್ಥ ಮುಗಿದು ಗುರುಗಳು ಮುಂದಿನ ಪಯಣಕ್ಕೆ ಸಿದ್ಧವಾದರು. ಇನ್ನೇನು ಅವರು ಮೇಲೆ ಏರಬೇಕು, ಆ ವೇಳೆಗೆ ನೊಂದ ತಾಯಿಯೊಬ್ಬಳು ತನ್ನ ಮಲರೋಗದ ಮಗುವನ್ನು ತಂದು ಸ್ವಾಮಿಗಳ ಪಾದದಡಿ ಹಾಕಿ ಕಣ್ಣೀರಿಟ್ಟಳು. ಯಾಕೋ ಎಲ್ಲೆಡೆ ಮೌನ ಆವರಿಸಿತು. ಸ್ವಾಮಿಗಳು ಅಪ್ಪಣೆ ಕೊಡಿಸಿದರು:



“ಮಗುವನ್ನು ಆ ಸಾಧುವಿನಲ್ಲಿಗೊಯ್ದಿರಿ, ಎಲ್ಲ ಒಳ್ಳೆಯದಾಗುತ್ತದೆ.”

ಆ ಸಾಧು ಯಾರೆಂದು ಎಲ್ಲರಿಗೂ ಅರ್ಥವಾಯಿತು. ಸ್ವಾಮಿಗಳು ಮುಂದೆ ಮಾತಾಡದೆ ಮೇನೆ ಏರಿದರು.

ಮರುದಿನ ಅನುಮಾನಿಸುತ್ತ ಮಗುವನ್ನು ಹಯಾತನಲ್ಲಿಗೆ ಒಯ್ದರು. ಕಾಲಿನ ಗೊರಸು ಕೊಳೆತು ನಡೆಯಲಾರದೆ ಬಿದ್ದಲ್ಲಿಯೇ ಬಿದ್ದುಕೊಂಡಿದ್ದ ಮುದಿ ಎತ್ತೊಂದಕ್ಕೆ ಎಲಗರಿಕೆ ಹುಲ್ಲು ಕಿತ್ತು ಕಿತ್ತು ಅದರ ಮುಖದ ಬಳಿ ಹಾಕುತ್ತಿದ್ದ ಹಯಾತ. ಮಗುವಿನ ತಂದೆ ಅವನ ಮುಂದೆ ಮಗುವನ್ನು ಮಲಗಿಸಿ ಹೇಳಿದರು.

“ಮಗುವಿಗೆ ತುಂಬಾ ಕಾಯಿಲೆ ಹಯಾತ.”

ಅವನು ಮಗುವನ್ನು ಒಂದು ಬಾರಿ ನೋಡಿದ. ಒಂದು ಚಿಟಿಕೆ ಮಣ್ಣು ತೆಗೆದು ಅದರ ಮೇಲೆ ಹಾಕಿ ಹೇಳಿದ,

“ಭಗವಂತ ಒಳ್ಳೇದು ಮಾಡ್ತಾನೆ ಸ್ವಾಮಿ, ಕರಕೊಂಡು ಹೋಗು”

ಮಗುವಿನ ತಂದೆಗೆ ಸಮಾಧಾನವನೆನಿಸಲಿಲ್ಲ. ಮಗುವನ್ನೆತ್ತಿಕೊಂಡು ನಡೆದರು. ನೂರಾರು ಔಷಧಿಗಳು ಮುಗಿದಿದ್ದವು. ಕೂಸಿನ ಆಸೆಬಿಟ್ಟಿದ್ದರು ತಂದೆ ತಾಯಿಗಳು.

ಆದರೆ ವಿಲಕ್ಷಣ ಪವಾಡವಾಯಿತು. ಒಂದು ವಾರವೆನ್ನುವುದರಲ್ಲಿ ಮಗು ದಿನದಿನಕ್ಕೆ ಚೇತರಿಸಿಕೊಂಡು ಆರೋಗ್ಯ ಪಡೆಯಿತು. ಗುರುವಾಕ್ಯದಲ್ಲಿ ಎಲ್ಲರಿಗೆ ಮಹಾನಂಬಿಕೆ ಬಂದಿತು. ಹಯಾತ ಊರಿನ ದೇವರಾದ, ಅಹರ್ನಿಶಿ ಅವನ ಸುತ್ತಮುತ್ತ ಜನ ಮುತ್ತಿಕೊಳ್ಳುತ್ತಿದ್ದರು. ಕಾಯಿಲೆ ಕಸಾಲೆ, ಮದುವೆ ಮುಂಜಿ, ಪರೀಕ್ಷೆ ವ್ಯಾಪಾರ ಇತ್ಯಾದಿ ನೂರೆಂಟು ಸಮಸ್ಯೆಗಳನ್ನು ಮುಂದೆ ತಂದು ಒಡ್ಡುತ್ತಿದ್ದರು ಊರಿನ ಜನರು, ಎಲ್ಲಕ್ಕೂ ಶಾಂತವಾದ ಉತ್ತರ ಸಿಗುತ್ತಿತ್ತು. ಅವನೀಗ ಊರೊಳಗೆ ಬರುವ ಪ್ರಮೇಯವಿರಲಿಲ್ಲ. ಅವನು ಕುಳಿತಲ್ಲಿಗೆ ಊಟ ತಿಂಡಿ ಒದಗುತ್ತಿತ್ತು.

ರಂಜಾನ್ ಹಬ್ಬದ ಕೊನೆಯ ದಿನಗಳು, ಉಪವಾಸದ ಇಪ್ಪತ್ತೆಂಟು ದಿನಗಳು ಕಳೆದುಹೋಗಿದ್ದವು. ಒಬ್ಬಿಬ್ಬರು ಮುಸಲ್ಮಾನ ಮುದುಕರು ಹಯಾತನ ಅಭಿಮಾನದ ಮೇಲೆ ರಾತ್ರಿಯ ವೇಳೆ ಶ್ಯಾವಿಗೆ ಪಾಯಸ ತಂದುಕೊಡುತ್ತಿದ್ದರು. ಯಾರೋ ಹೊಸಬಟ್ಟೆ ತಂದು ತೊಡಿಸಿದರು. ಆ ದಿನಗಳಲ್ಲಿ ಹಯಾತ ತೀರಾ ನಿಶ್ಯಕ್ತನಾಗಿದ್ದ. ಗೆಳೆಯ ಮುಕ್ಕಾ ಅವನನ್ನು ಮನೆಗೆ ಕರೆದೊಯ್ಯಬೇಕೆಂದು ಮಾಡಿದ ಯತ್ನ ವಿಫಲವಾಯ್ತು. ಅವನಿಗಾಗಿ ಅತ್ತ ಒಂದು ಪುಟ್ಟ ಗುಡಿಸಲು ತಯಾರಾಗಿತ್ತು. ಈಚಲು ಚಾಪೆಯ ಮೇಲೆ ಹಯಾತ ಮುದುರಿಕೊಂಡಿದ್ದ.

ಅಂದು ರಂಜಾನಿನ ಕೊನೆಯ ದಿನ. ಕೋಳಿಗಳು ಕೂಗಿದಾಗ ರೈಸ್ ಮಿಲ್ಲಿನ ಆಳುಗಳು ಮೈ ಒದರಿ ಎದ್ದು ಕುಳಿತಿದ್ದರು. ಹೇಮಂತ ಋತುವಿನ ಬೆಳಗಿನ ಜಾವದ ನಿಸರ್ಗ ಶಾಂತತೆಯಲ್ಲಿ ಕೋಮಲವಾಗಿ ಕೇಳಬಂದಿತು ಹಯಾತನ-

"ಅಲ್ಲಾ ಹೋ... ಅಕ್ಬರ್...."

'ಈಗ ಐದು ಗಂಟೆ ಎಂದು ಮಾತಾಡಿಕೊಂಡರು ಮಿಲ್ಲಿನ ಆಳುಗಳು, ಸುಮಾರು

ಎಂಟು ಗಂಟೆಯ ವೇಳೆಗೆ ಮಿಲ್ಲಿನ ಮಾಲಿಕರು ಮನೆಯಿಂದ ಬರುವಾಗ ಸ್ವಾಭಾವಿಕ ಇತ್ತ ತಿರುಗಿದರು. ಮೋನಿಯಾಳ ಗೋರಿ ಕಲ್ಲಿನ ಮೇಲೆ ತಲೆಯಿಟ್ಟು ಒರಗಿದ್ದ ಹಯಾತ. ಅವನಿಗೆ ಆರೋಗ್ಯವಿಲ್ಲವೆಂದು ಅವರಿಗೆ ಗೊತ್ತು. ಅವರು ಸ್ನಾನ ದೇವತಾರ್ಚನೆ ಮುಗಿಸಿ ಬಂದಿದ್ದರು. ರಸ್ತೆಯ ಬದಿಯಲ್ಲಿ ನಿಂತು ಎರಡು ಮೂರು ಬಾರಿ ಅವನನ್ನು ಕೂಗಿ ಕರೆದರು. ಅನುಮಾನವಾಯಿತು. ತುರುಕರ ಸ್ಮಶಾನ, ಹೋಗಲೋ ಬೇಡವೋ ಎಂದು ಯೋಚಿಸಿದರು. ಮನಸ್ಸು ತಡೆಯದೆ ಹತ್ತಿರ ಬಂದು ನೋಡಿದರು. ಹಯಾತ ಹೆಣವಾಗಿ ಎರಡು ಗಂಟೆ ಕಳೆದಿತ್ತು.

ಮುಂದೆ ಅರ್ಧ ಗಂಟೆಯಲ್ಲಿ ಊರೇ ಅಲ್ಲಿ ನೆರೆದು ಕಣ್ಣೀರಿಟ್ಟಿತು. ಹಯಾತನಿಗೆ ಅಂತ್ಯಗೌರವ ಸಲ್ಲಿಸಲು ವಕೀಲರು ಊರ ಗಣ್ಯ ವ್ಯಕ್ತಿಗಳು ಹಾಜರಿದ್ದರು. ಅವನನ್ನು ಸ್ಮಶಾನಕ್ಕೆ ಹೊರುವ ತಂಟೆಯೇ ಇರಲಿಲ್ಲ. ಅತ್ತ ಮೋನಿಯಾ ಇತ್ತ ಫಾತಿಮಾ ಇಬ್ಬರ ನಡುವೆ ಹಯಾತ ಗೋರಿಯಾದ. ಅವನ ಅಂತಿಮ ಸಂಸ್ಕಾರಕ್ಕೆ ಬ್ರಾಹ್ಮಣರು, ಮುಸಲ್ಮಾನರು, ಹೊಲೆ ಹದಿನೆಂಟು ಜಾತಿಯವರು ನಿಧಿ ಕೂಡಿಸಿದರು. ಜೀವಂತನಿದ್ದಾಗ ಅವನು ಒಬ್ಬರ ಕಾಸು ಮುಟ್ಟಲಿಲ್ಲ; ಒಬ್ಬರನ್ನು ಕಾಡಿ ಬೇಡಲಿಲ್ಲ ; ಒಬ್ಬರ ಮನ ನೋಯಿಸಲಿಲ್ಲ!

ಈಗ ಅವನಿಗಾಗಿ ನಿಧಿ ಕೂಡಿತು. ವಿಸ್ತಾರವಾದ ಗೋರಿಯಾಯಿತು. ಎತ್ತರವಾದ ಜಿಂಕ್‌ಶೀಟಿನ ಚಪ್ಪರವಾಯಿತು. ಎರಡು ವೇಳೆ ಸಾಮ್ರಾಣಿ ಧೂಪ ಹಾಕುತ್ತಾರೆ. ಸದಾ ಸುಗಂಧ ಕಡ್ಡಿಯ ಧೂಮ ಸುಳಿದಾಡುತ್ತಿರುತ್ತದೆ.

ಹಯಾತ ಅಮರನಾಗಿ ಇಂದಿಗೆ ಇಪ್ಪತ್ತು ವರ್ಷಗಳೇ ಕಳೆದವು. ಊರು ಅಖಂಡ ಬೆಳೆದಿದೆ. ನಾಗರೀಕತೆ ಎಲ್ಲೆಡೆ ಹರಡಿದೆ. ಹಯಾತನ ಗೋರಿಯ ಎದುರು ಭಾಗದಲ್ಲೇ ಭವ್ಯವಾದ ಮುಸಾಫಿರ್ ಖಾನೆ ಎದ್ದು ನಿಂತಿದೆ. ರಸ್ತೆ ಡಾಂಬರು ಬಳಿದುಕೊಂಡಿದೆ. ಆ ಸುತ್ತಮುತ್ತಲೆಲ್ಲ ಹೊಸ ಹೊಸ ಮನೆಗಳು ಶೋಭಿಸಿವೆ. ಹಯಾತನ ಆ ಪ್ರಶಾಂತವನದಲ್ಲಿ ಈಗ ಸ್ವಲ್ಪ ಗದ್ದಲ ಎನ್ನಬಹುದು.

# ಅಲಿ ಅನಿಲ್

- ತ್ರಿವೇಣಿ

ಕಲ್ಕತ್ತಗೆ ಹೊರಟಿದ್ದ ಆಪ್ತ ಗೆಳೆಯ ಅಲಿಯನ್ನು ಬೀಳ್ಕೊಡಲು ಅನಿಲ ಸ್ಟೇಷನ್ನಿಗೆ ಬಂದಿದ್ದ, ರೈಲು ಕರಾಚಿ ಸ್ಟೇಷನನ್ನು ಬಿಟ್ಟು ಹೊರಡಲು ಇನ್ನೂ ಹತ್ತು ನಿಮಿಷಗಳಿದ್ದವು. ಅನಿಲನ ಮುಖ ಪೆಚ್ಚಾಗಿತ್ತು. ಅಲಿ ಅವನನ್ನು ಸಮಾಧಾನಪಡಿಸುತ್ತಾ ಹೇಳಿದ,

"ಭಾಯಿ, ರಜ ಸಿಕ್ಕಲಿಲ್ಲವೆಂದು ಬೇಜಾರು ಮಾಡಿಕೊಳ್ಳಬೇಡ. ಇನ್ನೊಂದು ಬಾರಿ ಇಬ್ಬರೂ ಕೂಡಿಯೇ ನಿಮ್ಮೂರಿಗೆ ಹೋಗೋಣ."

ಮಂಕು ಕವಿದ ಮುಖದಲ್ಲಿ ನಗೆ ತುಂಬುತ್ತಾ ಅನಿಲ್ ಹೇಳಿದ "ಹಾಗೆ ಆಗಲಿ, ನನ್ನ ತಮ್ಮ ಸುನೀಲನನ್ನು ಗುರುತಿಸಬಲ್ಲೆಯಷ್ಟೆ. ಆಲ್ಬಂನಲ್ಲಿ ಅವನ ಫೋಟೋ ತೋರಿಸಿದ್ದೇನೆ. ಸುನೀಲನಿಗೆ ಕ್ರಿಕೆಟ್ ಬ್ಯಾಟ್ ಕೊಡಲು ಮರೆಯಬೇಡ. ಕ್ರಿಕೆಟ್ ಅಂದರೆ ಅವನಿಗೆ ಹುಚ್ಚು, ದಾದಾಗೆ ದಂತದ ಹಿಡಿಯ ಕೋಲು... ಎಲ್ಲಿಟ್ಟಿದ್ದೀಯಾ ... ಓ ಸರಿ ಅಲ್ಲಿದೆ... ರೈಲಿನಲ್ಲೇ ಮರೆತೀಯ."

ಅಲಿ ಅನಿಲನ ಕಳವಳವನ್ನು ನೋಡಿ ನಗುತ್ತಾ

"ನಾನು ಯಾವುದನ್ನೂ ಮರೆತಿಲ್ಲ ದೋಸ್ತ್ ಬೇಕಾದರೆ ಹೇಳೀನಿ ಕೇಳು, ನಿನ್ನ ಶೀಲಾಗೆ ಕರಾಚಿ ಸಿಲ್ಕಿನ ಸೀರೆ, ಮುತ್ತಿನ ಉಂಗುರ, ಮಾಗೆ ನಿನ್ನ ಫೋಟೋ, ದಾದಾಗೆ ಕೋಲು... ಇಷ್ಟೇ ತಾನೇ...."

ಅನಿಲನಿಗೆ ಸಮಾಧಾನವಾಯಿತು.

ಗಾರ್ಡಿನ ಸಿಳ್ಳೆ ಕೇಳಿಸಿತು. ಅನಿಲ್ ಗೆಳೆಯನ ಕೈಯನ್ನು ಸ್ವಲ್ಪ ಒತ್ತಿ ಹೋಗಿ ಬರೀಯಾ? ನಮ್ಮ ಮನೆಯಲ್ಲಿ ಯಾವುದಕ್ಕೂ ಸಂಕೋಚಪಟ್ಟುಕೊಳ್ಳಬೇಡ. ಸುನಿಲ್ ಸ್ಟೇಷನ್ನಿಗೆ ಬಂದಿರುತ್ತಾನೆ" ಎನ್ನುತ್ತ ಹಿಂದೆ ಸರಿದು ನಿಂತ. ಗಾಡಿ ಹೊರಟಿತು.

ಅಲಿ, ಅನಿಲ್ ಹಿಂದೂ, ಮುಸ್ಲಿಮರಾದರೂ ಅವರ ಗೆಳೆತನ ಪವಿತ್ರವಾಗಿತ್ತು. ಅವರ ಪರಿಚಯವಾದುದು ಒಂದು ವಿಚಿತ್ರ ರುದ್ರ ಸನ್ನಿವೇಶದಲ್ಲಿ, ಆಫೀಸಿನ ಕೆಲಸ ಮುಗಿಸಿಕೊಂಡು ಅನಿಲ ಮನೆಗೆ ಹೊರಟಿದ್ದ. ಅವನು ಆಫೀಸು ಬಿಡುವುದಕ್ಕೆ ಅರ್ಧ ಗಂಟೆ ಮುಂಚೆಯೇ ಅವನು ಹೋಗಬೇಕಾಗಿದ್ದ ದಾರಿಯಲ್ಲಿ ಕೋಮು ಗಲಭೆ ಪ್ರಾರಂಭವಾಗಿತ್ತು. ಅದನ್ನು ತಿಳಿಯದೆ ಹೊರಟಿದ್ದ ಅನಿಲನನ್ನು ನೋಡಿ ಪುಂಡರ ಗುಂಪೊಂದು ಗಲಭೆ ಮಾಡುತ್ತಾ ಅಟ್ಟಿಸಿಕೊಂಡು ಬಂತು. ಪ್ರಾಣಭಯದಿಂದ ಅನಿಲ ಹತ್ತಿರದಲ್ಲಿ ಸಿಕ್ಕಿದ ಮನೆಯೊಂದಕ್ಕೆ ನುಗ್ಗಿ ತಾನೇ ಬಾಗಿಲು ಹಾಕಿಕೊಂಡ. ಅವನ

ದುರಾದೃಷ್ಟಕ್ಕೆ ಅದು ಮುಸ್ಲಿಮರ ಮನೆಯಾಗಿತ್ತು. ಪುಂಡರು ಬಾಗಿಲಿಗೆ ಬಂದು ನಿಂತು ಗಲಾಟೆ ಮಾಡತೊಡಗಿದರು.

ಮುಂಬಾಗಿಲಿನಲ್ಲಾಗುತ್ತಿರುವ ಗಲಭೆ ಕೇಳಿ ಒಳಗಿನಿಂದ ತರುಣನೊಬ್ಬ ಈಚೆಗೆ ಬಂದು, ಬೆದರಿದ ಹಕ್ಕಿಯಂತೆ ಗೋಡೆಯ ಮೂಲೆಯಲ್ಲಿ ಹುದಿಗಿಕೊಂಡಿದ್ದ ಅನಿಲನನ್ನು ದೃಷ್ಟಿಸಿ ನೋಡಿದ.

"ಯಾರು ನೀವು?"

ಅನಿಲ ಮಾತನಾಡಲಿಲ್ಲ, ಮನೆಯಾತ ಮುಸ್ಲಿಮನಾಗಿರುವುದನ್ನು ನೋಡಿ ತನ್ನ ಬದುಕು ಕೊನೆಗಾಣುತ್ತಿದೆಯೆಂದು ಅವನಿಗೆ ಭಾಸವಾಯಿತು. ಹೆದರಿಕೆಯಿಂದ ಬಾಗಿಲನ್ನು ನೋಡಿ, ದೈನ್ಯದಿಂದ ಪ್ರಶ್ನಿಸಿದವನ ಕಡೆ ಕಣ್ಣು ತಿರುಗಿಸಿದ. ಮನೆಯಾತ ಮಾತನಾಡದೆ ಮುಂಬಾಗಿಲಿಗೆ ಹೋಗಿ ಬಾಗಿಲನ್ನು ತೆಗೆದ. ಒಳಗೆ ನುಗ್ಗಲು ಪ್ರಯತ್ನಿಸುತ್ತಿದ್ದ ಪುಂಡರು ಸ್ವಜಾತೀಯನನ್ನು ನೋಡಿ ತಟಸ್ಥರಾದರು.

"ಯಾರು ಬೇಕಾಗಿತ್ತು?" ಮನೆಯವನು ಕೋಪದಿಂದಲೇ ಪ್ರಶ್ನಿಸಿದ.

"ಕಾಫಾರನೊಬ್ಬ ಇಲ್ಲಿ ಬಂದು ಸೇರಿದ್ದಾನೆ. ಅವನನ್ನು ಬಿಟ್ಟುಕೊಡಬೇಕು"

"ಅವನು ಕಾಫರನಲ್ಲ. ನನ್ನ ಸಹೋದರ"

ಪುಂಡರು ಕ್ಷಮೆ ಬೇಡಿ ತೆರಳಿದರು. ಅಲಿ ಬಾಗಿಲು ಮುಚ್ಚಿ ಹಿಂತಿರುಗಿ ಬಂದಾಗ ಅನಿಲನ ಕಣ್ಣುಗಳು ತೇವಗೊಂಡಿದ್ದವು.

"ಭಾಯಿ, ಇನ್ನು ಹೆದರಿಕೆಯಿಲ್ಲ. ಕೆಲಸವಿಲ್ಲದ ಜನ ಜಾತಿಯ ಹೆಸರಿನಲ್ಲಿ ದೊಂಬಿ ಎಬ್ಬಿಸಿ ವ್ಯರ್ಥವಾಗಿ ರಕ್ತಪಾತ ಮಾಡುತ್ತಾರೆ" .

ಅನಿಲ ಅಲಿಯ ಕೈಗಳನ್ನು ಬಿಗಿಯಾಗಿ ಹಿಡಿದು ಹೇಳಿದ.

"ನೀವು ನಿಜವಾಗಿಯೂ ನನ್ನ ಸೋದರ, ನಿಮ್ಮ ಹೆಸರೇನು?" "ಷೇಕ್ ಅಲಿ, ತಮ್ಮ ಹೆಸರು?"

"ಅನಿಲ್ ಚಟರ್ಜಿ"

"ಇನ್ನು ಮೇಲೆ ನಾವಿಬ್ಬರೂ ಸ್ನೇಹಿತರಾಗಿರೋಣ" ಎನ್ನುತ್ತಾ ಅಲಿ ಕೈ ಮುಂದೆ ಮಾಡಿದ. ಅನಿಲ ಅವನ ಕೈಯನ್ನು ಬಿಗಿಯಾಗಿ ಹಿಡಿದ.

ಅಲಿಯ ಹೃದಯವೈಶಾಲ್ಯತೆಯನ್ನೂ, ಅವನು ಮಾಡಿದ ಉಪಕಾರವನ್ನೂ ವರ್ಣಿಸಿ ಅನಿಲ ತನ್ನ ಮನೆಯವರಿಗೆ ಕಾಗದ ಬರೆದಿದ್ದ. ಅನಿಲನ ಮನೆಯವರು ತನ್ನ ಮಗನ ಪ್ರಾಣ ಉಳಿಸಿದವನನ್ನು ಕೃತಜ್ಞತೆಯಿಂದ ಸ್ಮರಿಸಿ, ಅವನನ್ನು ಕಲ್ಕತ್ತೆಗೆ ಬರಲು ಆಹ್ವಾನಿಸಿದ್ದರು.

ಎರಡು ದಿವಸದ ನಂತರ ಅಲಿ ಕಲ್ಕತ್ತೆಯನ್ನು ತಲುಪಿದ. ಸುತ್ತಲೂ ಕಣ್ಣು ಹೊರಳಿಸಿ ದೂರದಲ್ಲಿ ತನ್ನನ್ನು ಹುಡುಕುವ ಪ್ರಯತ್ನದಲ್ಲಿದ್ದ ಸುನೀಲನನ್ನು ಗುರುತಿಸಿದ. ಅನಿಲನದೇ ಮುಖ, ಅದೇ ಎತ್ತರ. ಅನಿಲನೇ ತನ್ನನ್ನು ಎದುರುಗೊಳ್ಳಲು ಕಲ್ಕತ್ತೆಗೆ ಬಂದಿರುವಂತೆ ಭಾಸವಾಯಿತು. ತಾನೇ ಅವನೆಡೆಗೆ ಹೋಗಿ ಸುನೀಲನ ಭುಜದ ಮೇಲೆ ಕೈಯಿರಿಸಿ



'ಸುನೀಲ್ ಭಾಯಿ' ಎಂದ. ಸುನೀಲ ಹಿಂತಿರುಗಿ ನೋಡಿದ. ಪ್ರಯತ್ನಪೂರ್ವಕವಾದ ನಗೆಯೊಂದು ಅವನ ಮುಖದ ಮೇಲೆ ಹಾದುಹೋಯಿತು.

"ಅನಿಲ ಬರಲಿಲ್ಲವೆಂದು ಬೇಸರವೇ?" ಅಲಿ ಪ್ರಶ್ನಿಸಿದ.

ಸುನೀಲ ಪದಗಳನ್ನು ಹೃದಯದಿಂದ ಹುಡುಕಿ ತೆಗೆಯುವವನಂತೆ ಹೇಳಿದ

"ಹಾಗೇನಿಲ್ಲ.... ಮನೆಗೆ ಹೋಗೋಣವೇ?"

ಮನೆ ಸೇರಿದಾಗ ಅನಿಲನ ತಾಯಿ ಬೀನಾಚಟರ್ಜಿ ಮುಂಬಾಗಿಲಿನಲ್ಲಿ ನಿಂತಿದ್ದರು. ಆಕೆ ವಯಸ್ಸಾದ ಹೆಂಗಸು; ಮುಖದಲ್ಲಾಗಲೇ ಒಂದೆರಡು ಸುಕ್ಕುಗಳು ಕಾಣಿಸಿಕೊಂಡಿದ್ದವು.

"ನೀವು ಬಂದದ್ದು ಬಹಳ ಸಂತೋಷ. ಒಳಗೆ ಬನ್ನಿ."

ಆಕೆ ಬಲವಂತದಿಂದ ಆ ಮಾತುಗಳನ್ನು ಹೊರಗೆಡವಿದರೆಂಬುದು ಅಲಿಗೆ ಚೆನ್ನಾಗಿ ವ್ಯಕ್ತವಾಯಿತು. ಸ್ಟೇಷನ್ನಿನಲ್ಲಿ ಸುನೀಲನ ಮುಖಭಾವ ನೋಡಿದಾಗಲೇ ಅಲಿಯ ಉತ್ಸಾಹಕ್ಕೆ ತಣ್ಣೀರೆರಚಿದಂತಾಗಿತ್ತು. ಬೀನಾ ಚಟರ್ಜಿಯ ಸ್ವಾಗತ ತೋರಿಕೆಯ ಸ್ವಾಗತದಂತಿತ್ತು. ಹಾಗಾದರೆ ತನ್ನ ಆಗಮನ ಅವರಿಗೆ ಇಷ್ಟವಿರಲಿಲ್ಲವೇ? ಆಲಿಗೆ ವಿಚಿತ್ರ ಸ್ಥಳಕ್ಕೆ ಕಾಲಿಟ್ಟಂತೆ ಭಾಸವಾಯಿತು. ಕುರುಡ ಹೊಸ ಸ್ಥಳಕ್ಕೆ ಬಂದಂತಾಗಿತ್ತು ಅವನ ಸ್ಥಿತಿ, ತಾನಿಲ್ಲಿಗೆ ಬರಬಾರದಿತ್ತು ಎನ್ನಿಸಿತು ಅಲಿಗೆ ತಾನು ಪ್ರವೇಶಿಸಿದೊಡನೆ ಮನೆಯವರೆಲ್ಲ ಮುಖವಾಡಗಳನ್ನು ಧರಿಸಿ ಒಂದು ನಾಟಕವಾಡಲು ಸಿದ್ಧರಾಗಿರುವಂತೆ ತೋರಿತು. 'ಹಿಂದೂಗಳು ಒಳ್ಳೆಯ ನಟರಲ್ಲ' ಎಂದು ಅಲಿ ವಿಮರ್ಶಿಸಿದ.

ಬೀನಾಚಟರ್ಜಿ ಕುರ್ಚಿಯ ಮೇಲೆ ಕುಳಿತಿದ್ದ ಗಂಡನ ಕಡೆ ತಿರುಗಿದ ಕೂಡಲೇ ಶೂನ್ಯದೃಷ್ಟಿಯಿಂದ ಎತ್ತಲೋ ನೋಡುತ್ತಿದ್ದ ದಾದಾ ನಾಟಕದಲ್ಲಿ ತನ್ನ ಮಾತುಗಳನ್ನು ಮರೆತು ಹಿಂದಿನಿಂದ ಹೇಳಿಸಿಕೊಳ್ಳುವವನಂತೆ

"ಬನ್ನಿ, ಬಹಳ ಸಂತೋಷ" ಎಂದರು. ಅವ್ಯಕ್ತ ಶಕ್ತಿಯೊಂದು ದಾದನ ಕೈಗಳನ್ನು ಮುಂದಕ್ಕೆ ತಳ್ಳಿತು. ಮುದುಕನ ಕೈಗಳನ್ನು ಅಲಿ ಹಿಡಿದು ಕುಲುಕಿದ. ತನ್ನ ಪಾತ್ರ ನಿರ್ವಹಣೆ ಮುಗಿದ ಕೂಡಲೇ ಪಾತ್ರಧಾರಿ ವೇಷ ಕಳಚುವಂತೆ, ದಾದ ಅಷ್ಟು ಮಾತನಾಡಿದವರೇ ಪುನಃ ಶೂನ್ಯರಾಗಿ ನೋಡತೊಡಗಿದರು.

'ದಾದಾಗೆ ನನ್ನ ಕಂಡರೆ ಅಷ್ಟೇನೂ ವಿಶ್ವಾಸವಿಲ್ಲ' ಆಲಿ ಮನಸ್ಸಿನಲ್ಲೇ ಹೇಳಿಕೊಂಡ, ತಾನು ಮುಸ್ಲಿಮನಾದುದರಿಂದ ಅವರಿಗೆಲ್ಲ ತನ್ನ ಬರುವಿಕೆ ಹಿಡಿಸಲಿಲ್ಲವೇನೋ ಎಂದೆನಿಸಿತು ಅಲಿಗೆ.

"ಸುನೀಲ್ ಭಾಯಿ, ಅನಿಲ ನಿಮಗೆಲ್ಲ ಸಾಮಾನುಗಳನ್ನು ಕಳುಹಿಸಿದ್ದಾನೆ" ಎನ್ನುತ್ತಾ ಆಲಿ ಪೆಟ್ಟಿಗೆ ಬಿಚ್ಚಿದ. ಕ್ರಿಕೆಟ್ ಬ್ಯಾಟನ್ನು ಹೊರಗೆ ತೆಗೆದು ಸುನೀಲನಿಗೆ ಕೊಟ್ಟು "ನಿಮಗೆ ಕ್ರಿಕೆಟ್ ಹುಚ್ಚು ಎಂದು ಅನಿಲ ಹೇಳಿದ. ನೀವು ಚೆನ್ನಾಗಿ ಆಟವನ್ನು ಅಭ್ಯಾಸ ಮಾಡಬೇಕಂತೆ" ಎಂದ.

ಸುನೀಲನ ಹಣೆಯ ಮೇಲೆ ಬೆವರಿನ ಹನಿಗಳು ಕಾಣಿಸಿಕೊಂಡವು. ಕೆಳತುಟಿಯನ್ನು ಕಚ್ಚಿ ಹೇಳಿ



"ನೀವು ಬ್ಯಾಟು ತರುವ ಶ್ರಮ ವಹಿಸಿದ್ದಕ್ಕೆ ನನ್ನ ವಂದನೆಗಳು"

"ದಾದಾ ನಿಮ್ಮ ಸಂಜೆಯ ಸಂಚಾರಕ್ಕೆ ದಂತದ ಹಿಡಿಯ ಬೆತ್ತ"

ನಿದ್ದೆ ಮಾಡುತ್ತಿರುವವನನ್ನು ಹೊಡೆದೆಬ್ಬಿಸಿದರೆ ಬೆಚ್ಚಿ ಏಳುವಂತೆ ದಾದ ಬೆಚ್ಚಿದರು. ನಡುಗುತ್ತಿದ್ದ ತಮ್ಮ ಕೈಗಳನ್ನು ನೀಡಿ ಬೆತ್ತವನ್ನು ತೆಗೆದುಕೊಂಡು ಹೃದಯಕ್ಕೆ ಒತ್ತಿಕೊಂಡರು. "ಮಾ, ಅನಿಲ ಅವನ ಈಚಿನ ಭಾವಚಿತ್ರ ನಿಮಗೆ ಕಳುಹಿಸಿದ್ದಾನೆ"

ಬೀನಾಚಟರ್ಜಿಯ ಮುಖದಲ್ಲಿ ಯಾವ ಬದಲಾವಣೆಯೂ ಕಂಡು ಬರಲಿಲ್ಲ. "ಬಹಳ ಸಂತೋಷ" ಎಂದು ಚಿತ್ರದ ಕಡೆಗೆ ಕೈಚಾಚಿದರು. ಧ್ವನಿ ಏರು ತಗ್ಗಿಲ್ಲದೆ ನೀರಸವಾಗಿತ್ತು. ಸುಖ ದುಃಖದ ಸೋಂಕು ಸಹಿತ ಇರಲಿಲ್ಲ.

"ಭಾಭಿ ಎಲ್ಲಿ?"

"ಬಹೂ" ಅಧಿಕಾರವಾಣಿಯಿಂದ ಬೀನಾ ಸೊಸೆಯನ್ನು ಕೂಗಿದರು. ಶೀಲಾ ತಲೆಯ ಮೇಲೆ ಸೆರಗು ಹೊದ್ದು ಬಂದಳು. ಅಲಿಯ ಕೈಗಳಿಂದ ಸಿಲ್ಕಿನ ಸೀರೆಯನ್ನೂ ಮುತ್ತಿನ ಉಂಗುರವನ್ನೂ ಮಾತಿಲ್ಲದೆ ತೆಗೆದುಕೊಂಡು ಸರಸರನೆ ಒಳಗೆ ಹೋದಳು. ಅಲಿಗೆ ಅವಳ ವರ್ತನೆ ಆಶ್ಚರ್ಯವನ್ನುಂಟು ಮಾಡಿತು.

ಅನಿಲನನ್ನು ತಾನೂ ಮನೆಯವರಂತೆ "ಅನಿಲ' ಎಂದು ಸಂಬೋಧಿಸುತ್ತಿರುವುದು ಅಸಮಾಧಾನವನ್ನುಂಟುಮಾಡಿರಬೇಕೆಂದು ಅಲಿ ಊಹಿಸಿ

"ಅನಿಲ್ ಚಟರ್ಜಿಗೆ ರಜ ಸಿಕ್ಕಲಿಲ್ಲ. ಇಲ್ಲದಿದ್ದರೆ ನಾವಿಬ್ಬರೂ ಒಟ್ಟಿಗೇ ಬರಬೇಕಾಗಿತ್ತು." ಎಂದ.

ಬೀನಾ ಅಲಿಯ ಕಣ್ಣು ತಪ್ಪಿಸಿ ಸುತ್ತಮುತ್ತ ನೋಡುತ್ತಾ

"ಹೌದು... ಇನ್ನು ಊಟಕ್ಕೆ ಏಳುವಿರಾ?" ಎಂದು ಹೇಳಿ ಒಳಕ್ಕೆ ಹೋದರು. ತಾಯಿ, ತಂದೆ ಒಳಕ್ಕೆ ಹೋದೊಡನೆ ಸುನೀಲ ಆಲಿಯ ತೋಳಿನೊಳಕ್ಕೆ ಕೈಹಾಕಿ ಹೇಳಿದ.

"ನೀವು ಬಂದದ್ದು ನಮಗೆ ಬಹಳ ಸಂತೋಷ"

ಅಲಿ ನಸುನಕ್ಕ.

"ಸುನೀಲ್ ಅನಿಲನೂ ಬಂದಿದ್ದರೆ ಚೆನ್ನಾಗಿತ್ತು, ಎಂತಹ ಗೆಳೆಯ! ಅವನ ಗೆಳೆತನಕ್ಕಾಗಿ ನಾನು ಏನು ಮಾಡಲೂ ಸಿದ್ಧ. ಅನಿಲನಂತಹ ಜನ ಬಹಳ ಅಪರೂಪ." ಸುನೀಲನ ಮುಖದಲ್ಲಿ ಎಂತಹದೋ ಭಾವ ಮಂಜುಗಡ್ಡೆಯಂತೆ ಹೆಪ್ಪುಗಟ್ಟಿತು. ಕ್ಷಣಹೊತ್ತು ಬಿಟ್ಟು ಅವನು ಹೇಳಿದ

"ಒಳ್ಳೆಯವರಿಗೆ ಎಲ್ಲರೂ ಒಳ್ಳೆಯವರಂತೆ ಕಾಣಿಸುತ್ತಾರೆ"

ಅಲಿ ಪೆಚ್ಚಾದ. ತಾನು ಅನಿಲನನ್ನು ಅಷ್ಟು ಹೊಗಳಬಾರದಿತ್ತು ಎನಿಸಿತು. ಸುನೀಲನಿಗೆ ಮತ್ಸರವುಂಟಾಗಿರಬಹುದೆಂದು ಬಗೆದು ಓರೆಗಣ್ಣಿನಿಂದ ಅವನ ಮುಖ ನೋಡಿದ. ಸುನೀಲನ ಮುಖದಲ್ಲಿ ತೀವ್ರ ನೋವಿತ್ತು.

ಮಾತಿಲ್ಲದೆ ಸಾಗುತ್ತಿದ್ದ ಊಟ ಅಲಿಗೆ ಬೇಸರವನ್ನುಂಟುಮಾಡಿತು. ಆಗಾಗ್ಗೆ ಮುರಿದು

ನೆಲಕ್ಕೆ ಬೀಳುತ್ತಿದ್ದ ಸಂಭಾಷಣೆಯನ್ನು ಮೇಲಕ್ಕೆತ್ತಲು ಅಲಿಯನ್ನು ಬಿಟ್ಟು ಮತ್ತಾರೂ ಪ್ರಯತ್ನಿಸಲಿಲ್ಲ. ಎಲ್ಲೆಲ್ಲೂ ಹರಡಿದ್ದ ಮೌನ, ಗಂಭೀರ ವಾತಾವರಣ ಅಲಿಯ ಮನಸ್ಸಿಗೆ ಕಿರುಕುಳ ಕೊಟ್ಟಿತು. ಕೊನೆಗೆ ಏನು ಮಾಡಲೂ ತೋಚದೆ ಅಲಿ ತನ್ನ ಮನೆಯವರ ವಿಚಾರ ಮಾತನಾಡತೊಡಗಿದ. ಎಲ್ಲರೂ ಸ್ವಲ್ಪ ಉತ್ಸಾಹ ತೋರಿದಂತೆ ಕಂಡುಬಂತು.

"ನೀವು ನಮ್ಮ ಮನೆಯವರ ಆತಿಥ್ಯ ಸ್ವೀಕರಿಸಬೇಕು" ಎಂದು ಹೇಳಿ ಅಲಿ ಮುಗಿಸಿದಾಗ ಬೀನಾ ನಸುನಕ್ಕರು.

ರೂಮಿಗೆ ಹಿಂತಿರುಗಿದಾಗ ಅಲಿಯ ಮನಸ್ಸು ಭಾರವಾಗಿತ್ತು. ಅನಿಲನ ಮನೆಯವರ ನಡವಳಿಕೆ ಅವನಿಗೆ ಬಿಡಿಸಲಾರದ ಸಮಸ್ಯೆಯಾಗಿತ್ತು.

"ಎಷ್ಟಾಗಲಿ ನಾನು ಮುಸ್ಲಿಂ, ನನ್ನ ಸಾಮೀಪ್ಯವನ್ನು ಇವರು ಸಹಿಸುವುದಿಲ್ಲ ಎಂದು ತೋರುತ್ತದೆ. ಜಾತಿಬೇಧ ತೋರುವುದರಲ್ಲಿ ಹಿಂದೂಗಳದು ಎತ್ತಿದ ಕೈ ಎಂದುಕೊಂಡ. ಮನೆಯವರೆಲ್ಲರೂ ತನ್ನನ್ನು ಮೋಸಗೊಳಿಸಲು ಆಟ ಹೂಡಿದ್ದಾರೆ ಎಂಬ ಸಂಗತಿ ಅಲಿಗೆ ಖಚಿತವಾಯಿತು. ಅವರಿಗೆ ಅಷ್ಟು ಇಷ್ಟವಿಲ್ಲದಿದ್ದ ಮೇಲೆ ಹೊರಟುಹೋಗಲೇ ಎಂದು ಯೋಚಿಸಿದ. ಆದರೆ ಅನಿಲ ತಪ್ಪು ತಿಳಿದುಕೊಳ್ಳಬಹುದೆಂಬ ಸಂಶಯ ತಲೆದೋರಿ ಅನಿಲನಿಗಾಗಿ ಅವನ ಮನೆಯಲ್ಲಿರಬೇಕೆಂದುಕೊಂಡ.

ಅನಿಲ ತನ್ನೊಡನೆ ಗೆಳೆತನ ಬೆಳೆಸಿದುದೇ ಅವರಿಗೆ ಅಸಮಾಧಾನವನ್ನುಂಟುಮಾಡಿದ್ದ ಹಾಗಿತ್ತು. ಅನಿಲ ವಿಚಾರ ಬಂದೊಡನೆ ಎಲ್ಲರ ಮುಖದಲ್ಲೂ ಕರಿ ನೆರಳಾಡುತ್ತಿತ್ತು. ಅವರ ಮುಖ ಮೋಡ ಮುಸುಕಿದಂತಾಗುತ್ತಿತ್ತು. ಅವರ ವರ್ತನೆ ಅಲಿಯ ಅಭಿಮಾನವನ್ನು ನೋಯಿಸಿದರೂ ಒಂದು ವಿಷಯದಲ್ಲಿ ಮಾತ್ರ ಅಲ್ಲಿಗೆ ಯಾವ ಅನುಮಾನವೂ ಇರಲಿಲ್ಲ. ಅವನ ಬಗ್ಗೆ ಅನಿಲನ ಮನೆಯವರಿಗೆ ಯಾವ ಅಭಿಪ್ರಾಯವಿದ್ದರೂ, ಅವನು ತಮ್ಮೊಡನೆ ಇರುವಷ್ಟು ದಿನ ಸುಖವಾಗಿ; ಸಂತೋಷವಾಗಿ ಕಾಲ ಕಳೆಯಬೇಕೆಂಬುದೇ ಅವರ ಹೆಬ್ಬಯಕೆಯಾಗಿತ್ತು.

ಒಂದು ದಿನ ಅಲಿ ಸುನೀಲನೊಡನೆ ಪಾರ್ಕಿನ ಹುಲ್ಲಿನ ಮೇಲೆ ಕುಳಿತು ಮಾತನಾಡುತ್ತಾ

"ಸುನೀಲ್, ಅನಿಲನ ಕಾಗದ ಬಂದಿರಬಹುದು. ಅವನ ಗೆಳೆತನ ಸಿಕ್ಕಿದ್ದು ನನ್ನ ಪುಣ್ಯ. ಅವನೂ ಇಲ್ಲಿಗೆ ಬಂದಿದ್ದರೆ ನಾವೆಲ್ಲ ಇನ್ನೂ ಹೆಚ್ಚು ಸಂತೋಷವಾಗಿ ಕಾಲ ಕಳೆಯಬಹುದಾಗಿತ್ತು" ಎಂದು.

ಅಲಿಯ ಮಾತು ಕೇಳುತ್ತಾ ಹುಲ್ಲಿನಲ್ಲಿ ಮುಖ ಮುಚ್ಚಿಕೊಂಡು ಮಲಗಿದ್ದ ಸುನೀಲ ತಲೆಯೆತ್ತದೆ

"ಹೌದು, ನೀವು ಹೇಳುವುದು ನಿಜ" ಎಂದ.

“ನಿಮ್ಮಣ್ಣ ಸಾವಿರದಲ್ಲಿ ಒಬ್ಬ.”

“ನನಗದು ಗೊತ್ತಿಲ್ಲವೇ? ನಾನೂ, ನನ್ನ ಇಬ್ಬರು ಅಣ್ಣಂದಿರೂ ಬಹಳ ವಿಶ್ವಾಸದಿಂದ ಇದ್ದೆವು. ದೊಡ್ಡಣ್ಣ ಕಮಲ್, ಅನಿಲ್, ನಾನು. ಈಗ ನಾವು... ನಮ್ಮ ಪೈಕಿ..” ಸುನೀಲನ ಗಂಟಲನ್ನು ಒತ್ತಿ ಹಿಡಿದಂತಾಯಿತು. ಮಾತು ಪೂರ್ತಿಯಾಗಲಿಲ್ಲ. ಅಲಿ ಮುಂದೆ



ಮಾತನಾಡಬಹುದಾದ್ದನ್ನು ತಾನೇ ಊಹಿಸಿದ. ಕಮಲ್ ಕಾಶ್ಮೀರದ ಯುದ್ಧದಲ್ಲಿ ಮಡಿದಿದ್ದ. ಅನಿಲ ಕರಾಚಿಯಲ್ಲಿ ತನ್ನ ಸಂಸಾರದಿಂದ ದೂರ ಇದ್ದಾನೆ.”

“ಅನಿಲನಿಗೆ ಯಾವಾಗಲೂ ನಿಮ್ಮ ಯೋಚನೆ. ನಿಮ್ಮ ಫೋಟೋಗಳನ್ನೆಲ್ಲಾ ಆಲ್ಬಂನಲ್ಲಿಟ್ಟುಕೊಂಡಿದ್ದಾನೆ” .

ಸುನೀಲ ಬಿಕ್ಕಿ ಹೇಳಿದ

“ನನಗೂ ಅದು ಗೊತ್ತು. ನಾವಿಬ್ಬರೂ ಯಾವಾಗಲೂ ಬಹಳ ಅನ್ಯೋನ್ಯವಾಗಿಯೇ ಇದ್ದೆವು.”

ಸುನೀಲನ ದೇಹ ಕಂಪಿಸುತ್ತಿತ್ತು. ಮುಖ ಮತ್ತೂ ಹುಲ್ಲಿನಲ್ಲಿ ಹುದುಗಿದಂತೆ ತೋರಿತು.

ಶುಕ್ರವಾರ ಸಂಜೆ ಎಲ್ಲರೂ ಕಾಳಿಯ ದೇವಸ್ಥಾನಕ್ಕೆ ಹೋದರು. ಅತಿಥಿಯ ಸತ್ಕಾರ ಶೀಲನ ಪಾಲಿಗೆ ಬಿತ್ತು. ಆಲಿ ಶೀಲಳೊಡನೆ ವಿನೋದ ಮಾಡುತ್ತಾ ಹೇಳಿದ.

“ಭಾಭಿ, ಅನಿಲನನ್ನು ಬಹಳ ದಿನ ಬಿಟ್ಟಿರಬೇಡಿ, ಬೇಗ ಕರಾಚಿಗೆ ಬಂದು ಬಿಡಿ. ಅವನಿಗೆ ಯಾವಾಗಲೂ ನಿಮ್ಮದೇ ಧ್ಯಾನ. ಅವನು ಕಳುಹಿಸಿರುವ ಸೀರೆ, ಉಂಗುರ ಒಪ್ಪಿತೇ?”

ಶೀಲ ತಲೆಯ ಮೇಲಿದ್ದ ಸೆರಗನ್ನು ಹಣೆಯವರೆಗೆ ಎಳೆದುಕೊಂಡು ಹೇಳಿದಳು “ಹೂಂ, ಬಹಳ ಚೆನ್ನಾಗಿದೆ.”

“ಭಾಭಿ, ನನ್ನದೊಂದು ಸಮಸ್ಯೆಯನ್ನು ನಿಮ್ಮ ಮುಂದಿಡುತ್ತೇನೆ, ನಿಮ್ಮ ಉತ್ತರ ನನಗೆ ಬೇಕು.”

ಶೀಲ ತನ್ನ ದೊಡ್ಡ ಕಣ್ಣುಗಳನ್ನು ಅರ್ಧ ತೆಗೆದು "ಏನದು?" ಎಂದಳು, "ಸತ್ಯವಾಗಿ ಹೇಳಿ ಭಾಭಿ, ನಾನು ಮುಸ್ಲಿಮನಾದುದರಿಂದ ನನ್ನ ಬರುವಿಕೆ ನಿಮಗೆ ಇಷ್ಟವಾಯಿತೋ ಇಲ್ಲವೋ ಎಂದು ಅನುಮಾನ ಬರುತ್ತಿದೆ. ಅಥವಾ ನಾನೇನಾದರೂ ತಪ್ಪು ಮಾಡಿರುವೆನೆ? ನಿಮ್ಮ ವರ್ತನೆ, ಮಾತುಕತೆ ಸಹಜವಾಗಿಲ್ಲ. ನಾಟಕದಂತೆ..."

ಶೀಲ ಆತುರದಿಂದ ಹೇಳಿದಳು.

"ನೀವು ಖಂಡಿತ ಹಾಗೆ ಭಾವಿಸಬಾರದು. ಇದು ಮಾ, ದಾದಾಗೆ ತಿಳಿದರೆ ವ್ಯಥೆಪಡುತ್ತಾರೆ"

"ಹಾಗಾದರೆ ಕಾರಣ ಏನು? ನಮ್ಮ ಜಾತಿಯನ್ನು ಕಂಡರೆ ಅವರಿಗೆ ತಿರಸ್ಕಾರವೇ?? "ಛೇ. ಅವರಿಗೆ ಜಾತಿ ಭೇಧವಿಲ್ಲ"

"ಆದರೂ ಅವರಿಗೆ ನನ್ನನ್ನು ಕಂಡರೆ ಇಷ್ಟವಿರುವ ಹಾಗೆ ತೋರಲಿಲ್ಲ. ಹಾಗಾದರೆ ನಾನು ಅವರ ವರ್ತನೆಯನ್ನು ಏನೆಂದು ತಿಳಿಯಲಿ?"

"ಸಧ್ಯಕ್ಕೆ ಏನೂ ತಿಳಿಯಬೇಡಿ. ಸ್ವಲ್ಪ ದಿನ ತಡೆದರೆ ನಿಮಗೇ ಎಲ್ಲವೂ ಅರ್ಥವಾಗುತ್ತದೆ."



ಶೀಲಳ ಮುಖದ ವೇದನೆಯನ್ನು ಗಮನಿಸಿದರೆ ಅಲ್ಲಿ ಮುಂದೆ ಅವಳನ್ನು ಪ್ರಶ್ನಿಸಲು ಇಷ್ಟಪಡಲಿಲ್ಲ.

"ಹಾಗಾದರೂ ಇರಲಿ, ಅವರೆಲ್ಲ ನನ್ನನ್ನು ಸಂತೋಷಪಡಿಸಲು ಪ್ರಯತ್ನಿಸಿದ್ದಾರೆ. ಅದನ್ನು ಮಾತ್ರ ನಾನು ಮರೆಯುವುದಿಲ್ಲ"

ಶೀಲ ಸಂತೋಷದಿಂದ

"ನೀವು ಹೇಳುವುದು ನಿಜವೇ? ಮಾ, ದಾದ ನಿಮ್ಮ ಮಾತನ್ನು ಕೇಳಿದರೆ ಎಷ್ಟೋ ಸಮಾಧಾನಪಟ್ಟುಕೊಳ್ಳುತ್ತಾರೆ" ಎಂದಳು.

ಎದುರಿಗೆ ಕುಳಿತ ಬಂಗಾಲಿ ಹುಡುಗಿಯ ಮಾತನ್ನು ಕೇಳುತ್ತಿದ್ದ ಅಲಿ ಶೀಲಳನ್ನು ತನ್ನ ಹುಡುಗಿ ರೋಷನ್ ಜೊತೆ ಹೋಲಿಸಿ ನೋಡಿದ. ಇಬ್ಬರಿಗೂ ಬಹಳ ವ್ಯತ್ಯಾಸವಿತ್ತು. ನಸು ಕಪ್ಪು ಬಣ್ಣದ ದೊಡ್ಡ ಕಣ್ಣುಗಳು ಸ್ವಲ್ಪ ನೀಳವಾದ ಮುಖದ ಶೀಲಳಲ್ಲಿ ಲಾವಣ್ಯ ಅಡಗಿತ್ತು. ಶೀಲ ಯಾವಾಗಲೂ ಮೌನವಾಗಿರುತ್ತಿದ್ದಳು. ರೋಷನ್ ಮಾತಿನ

ಮಲ್ಲಿ. ಆದರೂ ಶೀಲ, ರೋಷನ್ ಒಳ್ಳೆಯ ಗೆಳತಿಯರಾಗಬಹುದು. ತಾನು ಅನಿಲ್ ಇರುವಂತೆ - ಎನಿಸಿತು ಅಲಿಗೆ, ಪಾಪ ರೋಷನ್ ತನಗಾಗಿ ಕಾಯುತ್ತಿರುವಂತೆ ಶೀಲ ಅನಿಲನ ಆಗಮನಕ್ಕಾಗಿ ಹಾತೊರೆಯುತ್ತಿರಬಹುದು.

"ಈಗ ನಿಮಗೆ ನನ್ನ ಬದಲು ಅನಿಲ್ ಇಲ್ಲಿದ್ದರೆ ಚೆನ್ನಾಗಿತ್ತು ಎನಿಸಬಹುದಲ್ಲವೆ?"

ಬಾಯಿಯಿಂದ ಮಾತು ಹೊರಬಿದ್ದ ತಕ್ಷಣ ಅಲಿಗೆ ತಾನು ಹಾಗೆ ಮಾತನಾಡಬಾರದಿತ್ತು ಎನಿಸಿತು. ಶೀಲ ನಸು ಬೆಚ್ಚಿದಳು. ಅವಳ ಕೃಷ್ಣವರ್ಣದ ಉಜ್ವಲವಾದ ಕಣ್ಣುಗಳು ಅಲಿಯನ್ನು ದಿಟ್ಟಿಸಿದವು. ಅಲಿಗೆ ದಿಗ್ಭ್ರಮೆಯಾಯಿತು. ಗಂಭೀರ ಸನ್ನಿವೇಶವನ್ನು ಮರೆಸುವ ಸಲುವಾಗಿ ಜೇಬಿನಿಂದ ರೋಷನ್‌ಳ ಭಾವಚಿತ್ರ ತೆಗೆದು ಶೀಲಳಿಗೆ ಕೊಟ್ಟು ಹೇಳಿದ.

"ಇವಳು ನನ್ನ ಬೇಗ ರೋಷನ್, ನೀವಿಬ್ಬರೂ ಗೆಳತಿಯರಾಗಬೇಕೆಂದು ನನ್ನ ಅಭಿಲಾಷೆ" .

ಅಲಿ ಶೀಲಳ ಅಭಿಪ್ರಾಯ ತಿಳಿಯಲು ತವಕಿಸಿದ. ಶೀಲ ಮೌನವಾಗಿ ರೋಷನಳ ಚಿತ್ರ ನೋಡಿದಳು, ಮುಸ್ಲಿಮರ ಉಡಿಗೆಯಲ್ಲಿದ್ದ ಲಕ್ಷಣವಾದ ಹುಡುಗಿಯೊಬ್ಬಳು ಶೀಲಳ ಕಡೆ ಮುಗುಳ್ನಗೆ ಬೀರುತ್ತಿದ್ದಳು. ಶೀಲ ಒಂದು ಗಳಿಗೆ ಚಿತ್ರದ ಕಡೆ ನೋಡಿ, ಅದನ್ನು ರಕ್ಷಿಸುವಂತೆ ತನ್ನ ಕೈಗಳಲ್ಲಿ ಬಿಗಿಯಾಗಿ ಹಿಡಿದು, ಸ್ವಲ್ಪ ಬಾಗಿ ಹಗುರವಾಗಿ ಮುತ್ತಿಟ್ಟು.

"ತಂಗಿ ದೇವರು ನಿನ್ನನ್ನಾದರೂ ಸುಖವಾಗಿಟ್ಟಿರಲಿ" ಎಂದಳು.

ಅಲಿಗೆ ಅವಳ ವರ್ತನೆ ಆಶ್ಚರ್ಯಕರವಾಗಿಯೂ, ಅತಿ ಸುಂದರವಾಗಿಯೂ ತೋರಿತು.

"ರೋಷನ್‌ಗೆ ನಿಮ್ಮ ಹಾರೈಕೆ ತಿಳಿಸುತ್ತೇನೆ. ಅವಳೂ ನಿಮಗೆ ಇದೇ ಶುಭಾಶಯವನ್ನು ಕೋರುತ್ತಾಳೆಂದು ನನ್ನ ನಂಬಿಕೆ" ಎಂದೆ.

ಅಲಿ ಕರಾಚಿಗೆ ಹೊರಡುವ ದಿನ ಬಂತು. ಸ್ಟೇಷನ್ನಿಗೆ ಹೊರಡಲು ಎಲ್ಲಾ ಸಿದ್ಧತೆಗಳೂ ನಡೆದಿದ್ದವು. ಮಾ, ದಾದ, ಸುನೀಲ, ಆಲಿಯೊಡನೆ ಕುಳಿತಿದ್ದರು. ಅಲಿ ವಿನೋದವಾಗಿ ಹೇಳಿದ.

"ಮಾ, ಅನಿಲನಿಗೆ ಸಂದೇಶ, ರಸಗುಲ್ಲ ಕಳುಹಿಸುವುದಲ್ಲವೇ? ಸುನೀಲ ತಾಯಿಯ ಕಡೆ ನೋಡಿದ. ಬೀನಾ ಮಾತನಾಡಲಿಲ್ಲ. ಅಲಿ ಎದ್ದು ನಿಂತು ಎಲ್ಲರಿಗೂ ಕೈ ಮುಗಿಯುತ್ತಾ

"ಇನ್ನೆರಡು ದಿನಕ್ಕೆ ನಾನು ಅನಿಲ ಜೊತೆ ಇರುತ್ತೇನೆ. ಇಲ್ಲಿ ನಾನು ಕಳೆದ ಪ್ರತಿಯೊಂದು ನಿಮಿಷವನ್ನೂ ಅವನಿಗೆ ವಿವರಿಸಿ ಹೇಳುತ್ತೇನೆ' ಎಂದ.

ಅಲಿಯ ಮಾತು ಮುಗಿಯುವುದೇ ತಡ ದಾದ ತಟ್ಟನೆ ಎದ್ದು ನಿಂತು ಕುರ್ಚಿಯೊಂದನ್ನು ಎಡವಿ, ತೂರಾಡುತ್ತಾ ಆಚೆಗೆ ಹೋಗಿಬಿಟ್ಟರು. ಸುನೀಲ 'ಅಮ್ಮಾ' ಎಂದು ದೈನ್ಯದಿಂದ ಕೂಗಿದ. ಬೀನಾಚಟರ್ಜಿ ತಾವು ಕುಳಿತಿದ್ದ ಕುರ್ಚಿಯನ್ನು ಹಿಂದಕ್ಕೆ ತಳ್ಳಿ ಮುಂದೆ ಬಂದು ಅಲಿಯ ತೋಳಿನ ಮೇಲೆ ಕೈಯಿಟ್ಟು ಮೃದುವಾಗಿ ಹೇಳಿದರು. "ಇಲ್ಲ ಮಗು, ನೀನು ಇನ್ನು ಅನಿಲನನ್ನು ನೋಡಲಾರೆ. ಅವನು ಸತ್ತು ಒಂದು ವಾರವಾಯಿತು"

"ಸತ್ತು ಹೋದ! ಅನಿಲ್ ! ಇಲ್ಲ ಸುಳ್ಳು" ಅಲಿ ಉದ್ವೇಗದಿಂದ ಕೂಗಿಕೊಂಡ. "ಹೌದು ಮಗು" ಬೀನಳ ದನಿ ಕುಗ್ಗಿತ್ತು. ಇಷ್ಟು ದಿನ ತಡೆದಿದ್ದ ಕಂಬನಿ ಕೆನ್ನೆಯ ಮೇಲೆ ಹನಿಹನಿಯಾಗಿ ಉರುಳುತ್ತಿತ್ತು.

"ಸುನೀಲ್, ಮಾ ಹೇಳುವುದು ನಿಜವೇ? ಅಲ್ಲವೆಂದು ಹೇಳು ಸುನೀಲ್

"ಹೌದು ಭಾಯಿ, ನೀವು ಇಲ್ಲಿಗೆ ಹೊರಟು ಬಂದ ದಿನವೇ ಕರಾಚಿಯಲ್ಲಿ ಕೋಮುವಾದ ಗಲಭೆ ಪ್ರಾರಂಭವಾಗಿ ಅನಿಲ ಚಾಕುವಿನಿಂದ ಇರಿಯಲ್ಪಟ್ಟ."

'ಅನಿರೀಕ್ಷಿತವಾದ, ನಂಬಲಸಾಧ್ಯವಾದ ತನ್ನ ಪ್ರಿಯ ಗೆಳೆಯನ ಸಾವನ್ನು ಕೇಳಿ ಅಲಿ ಕುರ್ಚಿಯಲ್ಲಿ ಕುಸಿದು ಬಿದ್ದು ಮುಖವನ್ನು ಕೈಗಳಿಂದ ಮುಚ್ಚಿಕೊಂಡ. ಸುನೀಲ ಮುಂದಕ್ಕೆ ಬಂದು ಅವನ ಕೊರಳಿನ ಸುತ್ತ ಕೈ ಹಾಕಿ ಹೇಳಿದ.

"ಸ್ವಲ್ಪ ಸೈರಿಸಿಕೊಳ್ಳಿ ಭಾಯಿ, ಸಹನೆ ತಂದುಕೊಳ್ಳಿ"

"ಈ ಸುದ್ದಿ ನಿಮಗೆ ಯಾವಾಗ ಬಂತು?"

"ನೀವು ಬರುವ ಹಿಂದಿನ ದಿನವೇ ತಂತಿ ಬಂತು. ಅನಿಲನ ಆಫೀಸಿನವರು ವಿವರಗಳನ್ನು ಆಮೇಲೆ ಕಳುಹಿಸಿದರು."

ಅಲಿಗೆ ದುಃಖ ಉಮ್ಮಳಿಸಿ ಬಂತು.

“ಇಷ್ಟಾದರೂ ನೀವು ನನ್ನನ್ನು ಇಲ್ಲಿಗೆ ಬರಮಾಡಿಕೊಂಡಿರಿ. ಅನಿಲನ ಬಗ್ಗೆ ನಾನಾಡುತ್ತಿದ್ದ ಪ್ರತಿಯೊಂದು ವಾಕ್ಯವೂ ಸೂಜಿಯ ಮೊನೆಯಂತೆ ನಿಮ್ಮ ಹೃದಯವನ್ನು ಚುಚ್ಚುತ್ತಿದ್ದರೂ ನೀವು ಮೌನವಾಗಿಯೇ ಎಲ್ಲವನ್ನೂ ಸಹಿಸಿದಿರಿ. ಅಯ್ಯೋ ದೇವರೆ! ನಿಮ್ಮ ಕ್ಷಮೆ ಬೇಡಲೂ ನನಗೆ ಬಾಯಿಲ್ಲ.”



ಅನಿಲನ ಮಾತು ಬಂದಾಗ ಇತರರು ತಾಳುತ್ತಿದ್ದ ಮೌನ ಅಲಿಗೆ ಈಗ ಅರ್ಥವಾಗುತ್ತಿತ್ತು. ತಾನು ಅವರ ವರ್ತನೆಗೆ ಎಂತಹ ಅರ್ಥವನ್ನು ಕಲ್ಪಿಸಿದ್ದ

ಬೀನಾ ಮೆಲ್ಲಗೆ ನುಡಿದಳು.

“ಮಗು ಕ್ಷಮಿಸುವುದಕ್ಕೇನಿದೆ? ನನ್ನ ಮಗುವನ್ನು ನೀನು ಹೊಗಳುವುದನ್ನು ಕೇಳಲು ಹೆತ್ತ ಕರುಳು ಹಂಬಲಿಸುತ್ತಿತ್ತು. ಆದರೆ ನಾವು ಎಲ್ಲಿ ನಿನ್ನೆದುರಿಗೆ ಸಹನೆ ಕಳೆದುಕೊಂಡು ದುಃ ಪ್ರದರ್ಶಿಸಿಬಿಡುತ್ತೇವೆಯೋ ಎಂದು ಭಯವಾಗುತ್ತಿತ್ತು.”

“ಮಾ, ನಾನು ಅನಿಲದ ಸುದ್ದಿ ಎತ್ತಿದಾಗ ನೀವು ನನ್ನನ್ನು ತಡೆಯಬಹುದಾಗಿತ್ತು. ಮೌನವಾಗಿ ಯಾತನೆಯನ್ನನುಭವಿಸುವ ಅಗತ್ಯವೇನಿತ್ತು. ನನ್ನಲ್ಲಿ ನಿಮಗೆ ನಂಬಿಕೆ ಸಾಲದಾಯಿತೆ? ನಾನೂ ಅನಿಲನನ್ನು ಪ್ರೀತಿಸುತ್ತಿದ್ದೆ. ಈ ವಿಚಾರ ನನಗೆ ತಿಳಿದಿದ್ದರೆ ನಾನಿಲ್ಲಿ ಒಂದು ಗಳಿಗೆಯೂ ಇರುತ್ತಿರಲಿಲ್ಲ.”

“ಗೊತ್ತು ಮಗು ಅದರಿಂದಲೇ ಅನಿಲನ ಮರಣದ ಸುದ್ದಿಯನ್ನು ನಿನ್ನಿಂದ ಮರೆಸಲು ಯತ್ನಿಸಿದ್ದು, ನಮ್ಮ ಮಗನ ಕೊನೆಯ ಆಸೆಯನ್ನು ಪೂರೈಸಲು ಪ್ರಯತ್ನಿಸಿದೆವು. ಆದರೆ ಸಾಕಷ್ಟು ಯಶಸ್ವಿಯಾಗಲಿಲ್ಲ. ನಮ್ಮ ವರ್ತನೆಯಲ್ಲಿದ್ದ ಅಸಹಜತೆಯನ್ನು ನೀನು ಬಂದ ದಿನವೇ ಕಂಡುಕೊಂಡೆ” .

“ನನ್ನನ್ನು ಸಂತೋಷವಾಗಿರಿಸಲು ಪ್ರಯತ್ನಿಸುತ್ತಿದ್ದ ಗಳಿಗೆಯಲ್ಲೇ ನೀವು....”

ಅಲಿ ಮಾತು ಪೂರ್ಣಮಾಡಲಿಲ್ಲ. ಹಿಂದಿನ ದೃಶ್ಯಗಳೆಲ್ಲ ಅವನ ಕಣ್ಣು ಮುಂದೆ ಹಾಯ್ದು ಹೋದವು. ದಾದನ ವಿಚಿತ್ರ ನಡವಳಿಕೆ, ಸುನೀಲ ಹುಲ್ಲಿನಲ್ಲಿ ಮುಖ ಮರೆಸಿದ್ದು, ಶೀಲ ರೋಷನಳಿಗೆ ಹಾರೈಸಿದ್ದು ಎಲ್ಲವೂ ಈಗ ಅವನಿಗೆ ಅರ್ಥವಾಯಿತು.

“ನಿಮ್ಮ ಮಗ ನಮ್ಮ ಜಾತಿಯವರಿಂದ ಕೊಲ್ಲಲ್ಪಟ್ಟಾಗಲೂ ನೀವು ನನ್ನನ್ನು ಅತಿಥಿಯನ್ನಾಗಿ ಸ್ವೀಕರಿಸಿದಿರಿ. ನನ್ನ ದೇಶದಲ್ಲಿ ಇದು ಸಾಧ್ಯರಾಗುತ್ತಿರಲಿಲ್ಲ. ನೀವು ಹಾಗೇಕೆ ಮಾಡಿದಿರಿ? ನಾನು ಅನಿಲನ ಸ್ನೇಹಿತನೆಂದು ನನಗೆ ಸ್ವಾಗತವಿತ್ತಿರಾ?” ಅಲಿಯ ಕಣ್ಣಿನಲ್ಲಿ ಕಂಬನಿಯಿತ್ತು.

ಬೀನಾ ಉತ್ತರ ಹೇಳಿದರು

“ನಿಮ್ಮ ಗೆಳೆತನಕ್ಕಾಗಿ ಮಾತ್ರ ನಾವು ನಿನ್ನನ್ನು ಸ್ವಾಗತಿಸಲಿಲ್ಲ. ಇದು ಎರಡು ಜನಾಂಗದ, ಎರಡು ದೇಶದ ಪ್ರಶ್ನೆ, ಹಿಂದೂ ಜನಾಂಗ ಮುಸ್ಲಿಮರನ್ನು ಹೇಗೆ ಆದರಿಸುತ್ತಾರೆ ಎಂಬುದನ್ನು ತೋರಿಸುವ ಸಲುವಾಗಿ ಸ್ವಾಗತಿಸಿದೆವು. ಒಂದೇ ಮನೆಯಲ್ಲಿದ್ದ ಸೋದರರು ಬೇರೆಯಾದರೂ ತಮ್ಮ ಅಣ್ಣನ ಮನೆಗೆ ಬಂದಾಗ ಆದರಿಸಬೇಕಷ್ಟೆ. ಅಷ್ಟು ದೂರದಿಂದ ನೀನು ನಿನ್ನ ಅಣ್ಣನ ಮನೆಗೆ ಬಂದಿರುವಾಗ ನಾವು ನಿನ್ನನ್ನು ಎದುರುಗೊಳ್ಳಬೇಡವೆ?”.

## ದೂರ-ಬಹುದೂರ!

**ಗೀತಾ ಕುಲಕರ್ಣಿ**

ರೈಲು ನಿಲ್ದಾಣವನ್ನು ಬಿಟ್ಟು ಒಂದು ಫರ್ಲಾಂಗು ಮುಂದೆ ಬಂದಿದೆ. ಅದರಿನ್ನೂ ಸುಮತಿಯ ಕಂಗಳಲ್ಲಿ ಕಂಬನಿ ತುಂಬಿಕೊಂಡು, ಮುತ್ತುದುರಿದಂತೆ ಅವಳ ಗಲ್ಲಗಳ ಮೇಲೆ ತೊಟ್ಟಿಕ್ಕುತ್ತಿದೆ. ಕೈಯಲ್ಲಿದ್ದ ನಾಲ್ಕು ತಿಂಗಳ ಹಸುಳೆ, ಹಸಿವೆಯಿಂದ ಹಾಲಿಗಾಗಿ ಅವಳೆದೆಗೆ ಮುಖ ಮಾಡಿ ಅಳುತ್ತಿದೆ. ಸುಮತಿಗಿದು ತಿಳಿದಿರಲಿಲ್ಲವೆಂದಲ್ಲ ಆದರೆ ಅದೆಲ್ಲೋ ದೂರ-ಬಹು ದೂರ ಹೊರಟಿತ್ತು. ಅವಳ ಮನಸ್ಸು!

ನಿಮ್ಮನೆಯಲ್ಲಿ ಬೀಳ್ಕೊಡಲು ಬಂದಿದ್ದ ತಂಗಿಯರ ಮೊಗ ಇನ್ನೂ ಸುಮತಿಯ ಕಣ್ಣೆದುರು ಕಟ್ಟಿದಂತಾಗಿದೆ. ಅದನ್ನವಳು ಮರೆಯುವುದೆಂತು?

ಇನ್ನು ಅವರೆಲ್ಲರನ್ನು ನೋಡುವ ಭಾಗ್ಯ ಎಂದೋ ಏನೋ...

ಅವಳ ಸುತ್ತೂ ಕುಳಿತಿದ್ದ ಮಕ್ಕಳಿಗೆ ತಾಯಿಯ ನೋವಿನ ಅರಿವಾಗಿಯೇ ಏನೊ, ಅವೂ ತಟಸ್ಥವಾಗಿ ಕುಳಿತಿದ್ದವು. ಅವರಲ್ಲಿ ಹಿರಿಯವಳಾದ ಚಾರೂ ಕಲ್ಲಿನಂತೆ ಕುಳಿತು ಕಣ್ಣೀರು ಸುರಿಸುವ ತಾಯಿಗೆ, ಇತ್ತಲಿನ ನೆನಪು ಕೊಡುವಂತೆ ಮೆಲ್ಲನೆ "ಮಾ ಮಾ. ಬೇಬಿ"  ಎನ್ನುತ್ತ ಸುಮತಿಯ ಗದ್ದವನ್ನು ಹಿಡಿದು ಮಗುವಿನಡೆಗೆ ತಿರುಗಿಸಿದಳು. ಸುಮತಿ ಬೆಚ್ಚಿಬಿದ್ದು ಅಳುತ್ತಿದ್ದ ಮಗುವಿಗೆ ಎದೆಹಾಲನ್ನಿತ್ತು. ಈವರೆಗೂ ತನ್ನನ್ನು ಬಳಸಿ ಕೊಂಡು ಏನೊಂದೂ ಮಾತು-ಆಟವಿಲ್ಲದೆ ಮುದುಡಿಕೊಂಡು ಕುಳಿತಿದ್ದ ಮಕ್ಕಳನ್ನು ಬರಸೆಳೆದು ಅಪ್ಪಿಕೊಂಡಳು.

ಅವಳಿಗೆ ತಾನು ಎಲ್ಲಿ? ಏನು? ಇದಾವುದರ ಪರವೆಯೂ ಇದ್ದಂತಿರಲಿಲ್ಲ, ಆ ಸಮಯದಲ್ಲಿ!

ಮರುಕ್ಷಣ ಅರಿವುಂಟಾಗಿ ಕಂಪಾರ್ಟಮೆಂಟಿನ ಸುತ್ತಲೂ ಒಮ್ಮೆ ಕಣ್ಣಾಡಿಸಿದಳು.

ದೂರದ ಪ್ರಯಾಣ. ಚಿಕ್ಕ ಚಿಕ್ಕ ಮಕ್ಕಳು ನಿದ್ರೆಗೂ ಅವಕಾಶವಿರಲೆಂದೇ ಎರಡನೆಯ ವರ್ಗದ ಟಿಕೇಟು ತೆಗೆದಿತ್ತು. ಗದ್ದಲವು ವಿಶೇಷವಿದ್ದಿರಲಿಲ್ಲ. ಅಲ್ಲಿದ್ದವರಲ್ಲಿ ಇವರಿಗೆದುರಾಗಿ ಕುಳಿತಿದ್ದ ಮಹಿಳೆ ಮಾತ್ರ ಸುಮತಿ, ಮತ್ತವಳ ಮಕ್ಕಳನ್ನು ಎವೆ ಇಕ್ಕದೆ ನೋಡುತ್ತಿದ್ದರು. ಅವರಾಡುತಿದ್ದ ಭಾಷೆ ಆ ಮಹಿಳೆಯ ಕುತೂಹಲವನ್ನು ಕೆರಳಿಸಿತ್ತು. ಕೊನೆಗೆ ತಡೆಯಲಾರದೆ ಕೇಳಿದರು.

"ಯಾವೂರಮ್ಮ ನಿಮ್ಮದು?"

"ನಮ್ಮದು ಇದೇ ಊರು"

"ಮತ್ತೆ ನೀವಾಡುವ ಮಾತು?"

"ಅದು ಅಸ್ಸಾಮಿ, ನಾವು ಈ ಊರು ಬಿಟ್ಟು ತುಂಬ ವರುಷಗಳಾದವು"

"ಅಷ್ಟು ದೂರದ ದೇಶದಲ್ಲಿ ನೀವಿರುತ್ತೀರಾ? ಮತ್ತೆ ನಿಮ್ಮ ಯಜಮಾನರು?"

ಈ ಪ್ರಶ್ನೆ ಶೂಲದಂತೆ ಇರಿಯಿತು ಸುಮತಿಯನ್ನು, ಯಾವುದನ್ನು ಮರೆಯಲೆತ್ನಿಸಿದಳೋ ಪುನಃ ಅದೇ ಮಾತು! ಆ ಹೆಂಗಸಿನ ಮೇಲೆ ಒಂದು ಕ್ಷಣ ಎಲ್ಲಿಲ್ಲದ ಕೋಪ ಉಕ್ಕಿ ಸುಮತಿಯನ್ನು ಕಾಡಿತು. ಆ ಹೆಣ್ಣು ಪಕ್ಕದಲ್ಲಿ ಅವಳ ರಾಯ ಕುಳಿತು ಪೇಪರೋದುತ್ತಿದ್ದರು. ಹೂಂ ಎಂದು ಕೊಂಡಳು ಮನದಲ್ಲಿ, ಅದಕ್ಕೆ ಇರಬೇಕು ಇವಳಿಗೆ ಇಲ್ಲದ ಜಂಭ

ಇನ್ನೊಂದು ಘಳಿಗೆಗೆ ತಾನೀ ಬಗೆಯಾಗಿ ಏಕೆ ಯೋಚಿಸಿದೆ? ಆ ಹೆಂಗಸಿಗೇನು ಗೊತ್ತು ತನ್ನ ದೌರ್ಭಾಗ್ಯ? ಎಂದು ಮನದ ನೋವನ್ನು ಅದುಮಿಕೊಂಡಳು. "ಆ ಭಾಗ್ಯ ನನಗಿಲ್ಲವಮ್ಮ

"ಅಯ್ಯಯ್ಯೋ ತಿಳಿಯದೆ ಕೇಳಿ ನಿಮ್ಮನ್ನು ನೋಯಿಸಿದೆ" ಮಾತಾಡಿದ ತನ್ನ ಬಾಯಿಯನ್ನು ಕೈಯಿಂದ ಮುಚ್ಚಿಕೊಂಡಾಗ ಸುಮತಿಯ ಬರಿದಾದ ಹಣೆಯು ಈಗ ಸ್ಪಷ್ಟವಾಗಿ ತನ್ನನ್ನೇ ನೋಡುವಂತೆ ಕಂಡಿತು.

ಪಶ್ಚಾತ್ತಾಪದಲ್ಲಿ ಬೆಂದ ಅವರು ಸುಮತಿಯ ಪಕ್ಕದಲ್ಲಿ ಕುಳಿತಿದ್ದ ಚಿಕ್ಕಮಗುವನ್ನು ತನ್ನೆಡೆಗೆ ಕರೆದುಕೊಳ್ಳುತ್ತ-

"ಅಸ್ಸಾಮಿಯಲ್ಲದೆ ಬೇರಾವ ಭಾಷೆ ಬರುತ್ತದೆ?"

"ಹಿಂದಿಯಲ್ಲೂ ಚೆನ್ನಾಗಿ ಮಾತನಾಡುತ್ತಾರೆ" ಎನ್ನುತ್ತ ಸುಮತಿ ತನ್ನ ಹಿರಿಯ ಮಗಳು ಚಾರೂಗೆ ಏನೋ ಸಂಜ್ಞೆ ಮಾಡಿದಳು.

ಚಾರು ಎದ್ದು ಬಾಸ್ಕೆಟಿನಲ್ಲಿದ್ದ ಬಿಸ್ಕಿಟು, ಹಣ್ಣುಗಳನ್ನು ತೆಗೆದು ಚಿಕ್ಕವರಿಗೆ ತಿನ್ನಲು ಕೊಟ್ಟಳು.

ರೈಲು ಮುಂದಿನ ಸ್ಟೇಶನ್ನಿನಲ್ಲಿ ನಿಂತಿತು. ಮತ್ತೆ ನೂಕು ನುಗ್ಗಲು ಜನರ ಓಡಾಟ ಕಿರುಚಾಟ ಅತ್ತಿಂದಿತ್ತ ಇತ್ತಿಂದತ್ತ ಚಾ ಕಾಫಿ ಚಾ ಕಾಫಿ ಕೇಳಿಕೊಂಡು ಹೋಗುವ ಹೋಟೆಲಿನ ಜನ.

'ಹಣ್ಣು ಹಣ್ಣು ಬೇಕೆನಮ್ಮ ಒಳ್ಳೆಯ ಕೊಡಗಿನ ಕಿತ್ತಳೆ' ಎನ್ನುತ್ತ ಹುಡುಗನೊಬ್ಬ ಸುಮತಿ ಕುಳಿತ ಕಂಪಾರ್ಟಮೆಂಟಿನ ಸಮೀಪಕ್ಕೆ ಬಂದ. ಅವನ ಕಡೆಗೆ ಆಕರ್ಷಿತರಾದ ಮಕ್ಕಳು ಕಿಟಕಿಯ ಬಳಿಗೋಡಿದವು.

ಆ ಹೆಂಗಸು ಆಗಲೇ ಎರಡು ಡಜನ್ ಕಿತ್ತಳೆಹಣ್ಣು ಕೊಂಡಾಗಿತ್ತು.

ಪುನಃ ರೈಲು ಹೊರಟಿತು....



ಸುಮತಿ ಕಿಟಕಿಯ ಹೊರಗೆ ಮುಖವಿರಿಸಿ ಆಗಸವನ್ನು ನೋಡುತ್ತಿದ್ದಳು.

ಅವಳ ಮೂರನೆಯ ಮಗಳು ನಯನ ಮಾ, ಮಾ ಎಂದು ಅವಳನ್ನು ಕರೆದಾಗ ಹೊರಗಿದ್ದ ದೃಷ್ಟಿಯನ್ನು ಒಳಗೆ ಬೀರಿದಳು.

"ಛೇ, ಛೇ ನೀವು ಇದೇನು ಮಾಡುತ್ತಿರುವುದು? ನನಗೆ ಇದು ಸರಿ ಬರುವುದಿಲ್ಲ" ಎನ್ನುತ್ತ ತನ್ನ ಮಕ್ಕಳ ಕೈಯಲ್ಲಿದ್ದ ಎರಡೆರಡು ಕಿತ್ತಳೆ ಹಣ್ಣುಗಳನ್ನು ತೆಗೆದುಕೊಂಡು ಆ ಹೆಂಗಸಿಗೇ ಕೊಡಲು ಎದ್ದಳು.

ಚಲುವಾದ ಮುದ್ದು ಮಕ್ಕಳ ಕೈಯಲ್ಲಿ ಹಣ್ಣು ಕೊಟ್ಟು ಮಾತೃ ವಾತ್ಸಲ್ಯದಿಂದ ನೋಡುತ್ತ ಕುಳಿತಿದ್ದ ಆ ಮಹಿಳೆಗೆ ಸುಮತಿಯ ಮಾತು-ರೀತಿ ದಿಕ್ಕುಗೆಡಿಸಿಬಿಟ್ಟಿತು. ತಾನಿತ್ತ ಹಣ್ಣುಗಳು ತಿರುಗಿ ತನ್ನ ಮಡಿಲೊಳಗೆ ಬಂದು ಬಿದ್ದಾಗ ಅವಳ ಕಣ್ಣುಗಳಲ್ಲಿ ಕಂಬನಿ ತುಂಬಿಕೊಂಡವು.

ಸುಮತಿ ಮರಳಿ ತನ್ನ ಸ್ಥಳದಲ್ಲಿ ಬಂದು ಕುಳಿತು ಎದುರು ನೋಡಿದಾಗ ಕಣ್ಣೀರು ಸುರಿಸುವ ಹೆಣ್ಣನ್ನು ಕಂಡು ದಿಗಿಲುಗೊಂಡಳು.

"ಯಾಕಮ್ಮಾ ಕಣ್ಣೀರು? ಹಣ್ಣು ಬೇಡವೆಂದೆನೆಂದೇ? ಮನೆಯ ಮಕ್ಕಳಿರಬಹುದೆಂದು ನಾನು ಹಾಗೆ ಮಾಡಿದ್ದು"

"ಅಷ್ಟು ಪುಣ್ಯ ನಾನು ಪಡೆದಿಲ್ಲ" ವ್ಯಥೆ ತುಂಬಿದ ಮನದಿಂದ ನುಡಿದರವರು.. ಮಾತೂ ಅಲ್ಲಿಗೇ ನಿಂತಿತು!

ಸುಮತಿಯ ಬುದ್ಧಿಗೂ ಈಗ ಏನೇನೂ ತೋಚದಾಯಿತು. ಈರ್ವರೂ ಒಂದು ವಿಧದಿಂದ ಸಮದುಃಖಿಗಳು! ತನಗೆ ತನ್ನಾತನ್ನಿಲ್ಲವಾದರೆ ಆ ಹೆಂಗಸಿಗೆ ತಮ್ಮಿಬ್ಬರ ಕುರುಹು... ಬಾಳಬೆಳಕೇ ಇಲ್ಲ! ಇದು ಎಂಥ ವಿಧಿಯ ವಿಚಿತ್ರ ಆಟ ತಾನರಿಯದೇ ಅವರ ಮನಸ್ಸು ನೋಯಿಸಿದುದಕ್ಕೆ ಅವಳಿಗೆ ದುಃಖವಾಯಿತು.

ಮಕ್ಕಳನ್ನು ಕರೆದು ಏನೋ ಉಸುರಿದಳು. ಹೇಗೆ ಉಡಿಯಲ್ಲಿ ಬಿದ್ದವೂ ಹಣ್ಣುಗಳು ಅಷ್ಟೇ ಲಘುವಾಗಿ ಪುನಃ ಮಕ್ಕಳ ಕೈಯನ್ನು ಏರಿದವು.

ಪಕ್ಕದಲ್ಲೇ ಓದುವುದರಲ್ಲಿ ತಲ್ಲೀನರಾಗಿದ್ದ ಆ ಮಹಿಳೆಯ ಪತಿ ಮಕ್ಕಳ ನಗುವಿಗೆ ಎಚ್ಚೆತ್ತು ಮೆಲ್ಲನೆ ಕಣ್ಣಿಗಿದ್ದ ಕನ್ನಡಕವನ್ನು ಮೂಗಿನ ಮೇಲಿರಿಸಿದರು. ತನ್ನ ಮಡದಿಯ ಪಕ್ಕದಲ್ಲೂ ತೊಡೆಯಲ್ಲೂ ಕುಳಿತು ಹಣ್ಣು ತಿನ್ನುತ್ತಿದ್ದ ಮುದ್ದು ಮಕ್ಕಳನ್ನು ಕಂಡು ಅವರ ಮನಸ್ಸು ಹಿಗ್ಗಿ ಹೋಯಿತು. ಪೇಪರು ಬದಿಗಿಟ್ಟು ಚಿಕ್ಕ ಮಗುವನ್ನು ತನ್ನ ತೊಡೆಯಲ್ಲಿ ಕುಳ್ಳಿರಿಸಿಕೊಂಡು ಅದರ ಗುಲಾಬಿ ಗಲ್ಲವನ್ನು ಸವರುತ್ತ "ನಿನ್ನ ಹೆಸರೇನು ಮಗೂ" ಎಂದರು. ಮಾತಿಲ್ಲದೆ ತನ್ನನ್ನೇ ಮಿಕಿಮಿಕಿ ನೋಡುತ್ತ ಕುಳಿತಿದ್ದ ಮಗುವನ್ನು ವಿಸ್ಮಯದ ಕಣ್ಣುಗಳಿಂದ ನೋಡಿ ಮಡದಿಯೆಡೆಗೆ ತಿರುಗಿದಾಗ

"ನಿಮ್ಮ ಮಾತು ತಿಳಿದರಲ್ಲವೇ ಅದಕ್ಕೆ ಹಿಂದಿಯಲ್ಲಿ ಕೇಳಿ, ಗಿಳಿ,ಗಿಳಿ ಮಾತಾಡಿದಂತೆ ಉತ್ತರ ಕೊಡುತ್ತದೆ ಎಂದರು ನಗುತ್ತ ಅವರ ಮಡದಿ.



ಸತಿ-ಪತಿಗಳ ಮಮತೆಯಲ್ಲಿ ಸುಮತಿಯ ಮಕ್ಕಳು ಹರುಷಗೊಂಡ ಹಕ್ಕಿಗಳಂತೆ ನಲಿದಾಡಿದವು. ಅವರ ಸುಖವನ್ನು ಕಂಡು ಸುಮತಿಗೂ ತೃಪ್ತಿಯೆನಿಸಿತು. ತನ್ನ ಪ್ರಯಾಣದ ಕೊನೆಯವರೆಗೂ ಈ ದಂಪತಿಗಳ ಜೊತೆ ದೊರೆತಿದ್ದರೆ...? ಹುಚ್ಚು... ಅವರೇಕೆ ಅಷ್ಟುದೂರ ಬಂದಾರು?" ತನ್ನಂತೆ ಗತಿ ಇಲ್ಲದವರೇ? ಎಲ್ಲಿಯವರೆಗೆ ಪ್ರಯಾಣವೋ ತಿಳಿಯಬೇಕಾಗಿತ್ತು ಅವಳಿಗೆ

"ನಿಮ್ಮದು ಎಲ್ಲಿಯವರೆಗೆ ಪ್ರಯಾಣ''?

"ಮದ್ರಾಸು. ಇವರು ಅಲ್ಲಿ ಡಾಕ್ಟರ್, ಈ ಬಾರಿಯ ಪ್ರಯಾಣದ ದಣಿವೇ ಈ ಮಕ್ಕಳಿಂದ ತಿಳಿಯದಾಯಿತು"

"ನಿಮ್ಮ ಹೆಸರು ನಾನು ಕೇಳಲಿಲ್ಲ ನನ್ನದು ಸುಮತಿ"

"ಓಹೋ ಸರಿಯಾಯಿತು. ನಿಮ್ಮ ಮೊದಲ ಅಕ್ಷರದಿಂದ ನನ್ನದೂ ಪ್ರಾರಂಭ. ಸುಮಿತ್ರಾ, ನಗುನಗುತ್ತಲೇ ನುಡಿದರು ಆಕೆ.

ಕೆಲ ನಿಮಿಷ ಹಾಗೆ ಸರಿಯಿತು.

ಮತ್ತೆ ಮಾತು ಬೆಳೆಯಿತು.

"ನೀವು ಈ ಮೊದಲು ಇತ್ತ ಕಡೆ ಎಂದು ಬಂದಿದ್ದೀರಿ?" ಸುಮಿತ್ರಮ್ಮ ಕೇಳಿದರು. "ಹತ್ತು ವರುಷಗಳ ಹಿಂದೆ. ಆಗಿನ್ನೂ ಚಾರು ಒಬ್ಬಳೇ ಹುಟ್ಟಿದ್ದಳು. ಅವರೊಡನೆ ಬಂದಿದ್ದೆ... ಈ ಸಲ ನಾನು ಅವರಿಲ್ಲದೇ ಬರಬೇಕಾಯಿತು... ಕಂಠ ಬಿಗಿದು ಸುಮತಿಗೆ ಮಾತು ಬಾರದಾಯಿತು.

ಕಿಟಕಿಯ ಹೊರಗೆ ಕತ್ತಲು ಕವಿದಿತ್ತು. ಇರುಳಿನ ಛಾಯೆ, ಒಳಗೂ ಹೊರಗು ಪಸರಿಸಿತ್ತು. ಬಾನಿನಲ್ಲಿ ಅಲ್ಲೊಂದು, ಇಲ್ಲೊಂದು ತಾರೆಗಳು ಿ ನುಗುತ್ತಿದ್ದವು. ಮೋಡಗಳ ಮರೆಯಲ್ಲಿ ಚಂದ್ರಮನ ಕಣ್ಣುಮುಚ್ಚಾಲೆ ಆಟ ಸಾಗಿತ್ತು.

ಊರಿನಿಂದ ತಂದಿದ್ದ ಟಿಫೀನು ಕ್ಯಾರಿಯರನಿಂದ ತಂದುದನ್ನು ಮಕ್ಕಳಿಗೆ ಉಣಿಸಿ ಅಲ್ಲಲ್ಲಿ ಸ್ಥಳಮಾಡಿ ಮಲಗಿಸಿದಳು.

ಅವಳಿಗೂ, ಊಟ ನಿದ್ರೆ ಯಾವುದೂ ಬೇಡವಾಗಿತ್ತು. ಹಾಗೆ ತನ್ನ ತೋಳನ್ನೇ ದಿಂಬಿನಂತಿರಿಸಿ ಕಟಕಿಗೆ ಒರಗಿ ಕಣ್ಣುಮುಚ್ಚಿದಳು.

* * * * *

ಹಿಂದೆ ಅವರೊಡನೆ ಬಂದಾಗ... ತನ್ನೂರಿನಲ್ಲಿ ಎಂಥ ಸಂಭ್ರಮದ ಸ್ವಾಗತ ಕಾದಿತ್ತು! ಬಂದ ಜನರಿಂದ ಬಿಡುಗಡೆ ಹೊಂದುವುದು ಮಹಾ ಪ್ರಯಾಸದ ಕೆಲಸ

ಊಟ-ಉಪಚಾರ ಸಾಕುಸಾಕಾಗಿತ್ತು! ಅರೆಗಳಿಗೆಯಾದರೂ ಸಮಯ ಮಿಗುತ್ತಿರಲಿಲ್ಲ! ಸುಖ! ಸಂತೋಷ ಆನಂದ! ಉತ್ಸಾಹ........ ಆದರೆ ಈ ಬಾರಿ ಅವರಿಲ್ಲ!! ಅವರಿದ್ದಿದ್ದರೆ ಆ ಮಾತೇ ಬೇರೆ!

ಅದೇ ಈಗ ಅವರದೇ ಮಕ್ಕಳನ್ನು ಕಟ್ಟಿಕೊಂಡು ಇಷ್ಟು ದೂರದ ದಾರಿಯಿಂದ ಬಂದ ತನಗೆ ಬಾ ಎಂದವರುಂಟೇ?

ಹಿಂದಿನ ಸುಖದ ಒಂದು ಕ್ಷಣವೂ ನೆನಪಿಗೆ ಬಾರದಂತೆ ಇದೇ ಊರು, ಇದೇ ಜನ ಇದೇ ನನ್ನವರು ನಡೆದುಕೊಳ್ಳಲಿಲ್ಲವೇ? ವಿಧಿ ಅವರನ್ನೊಯ್ಯುವ ಬದಲು ತಾನು ಹೋಗಿದ್ದರೆ?

ಈ ಮಕ್ಕಳಿಗೆ ತಾಯಿ ಎನ್ನುವುದು ಒಂದು ಅಭಾವವಾಗುತ್ತಿತ್ತು. ಅದರಿಂದ ಸಮಾಜದ ಪ್ರೀತಿ, ಗೌರವಕ್ಕೆ ಚ್ಯುತಿ ಬರುತ್ತಿತ್ತೆ...?

ಅಸ್ಸಾಮಿಗೆ ಹೋದ ಹೊಸದರಲ್ಲಿ.... ದೇಶ ಬೇರೆಯಾದರೂ ಅವರಿರುವರಲ್ಲವೇ ಎನ್ನುವ ಧೈರ್ಯ ತನಗೆ ಯಾವುದಕ್ಕೂ ಭಯಪಡದಂತೆ ಮಾಡಿತ್ತು.

ಅಲ್ಲಿಯ ಆಚಾರ-ವಿಚಾರ ಚಳಿ-ಬಿಸಿಲುಗಳಿಗೆ ಜಗ್ಗಲಿಲ್ಲ. ತನ್ನಾತನಿಗೆ ಸರಿಕಂಡಿದ್ದು ತನಗೂ ಸರಿ, ಸರಕಾರಿ ಹುದ್ದೆಯಲ್ಲಿದ್ದ ಅವರು ವರುಷದ ಅರ್ಧಕ್ಕಿಂತಲೂ ಹೆಚ್ಚಿನ ಸಮಯವನ್ನು ಪ್ರವಾಸದಲ್ಲಿ ಕಳೆಯಬೇಕಾಗುತ್ತಿತ್ತು! ಅಲ್ಲಿಯ ಜನರೊಡನೆ ಬೆರೆತು ಇರಲು ಆಗದೆ ತನ್ನೂರು ನೆನೆಸಿ ಕಣ್ಣೀರು ಕರೆದ ದಿನಗಳೂ ನೆನಪಿಗೆ ಬಂದವು!

... ಒಂದು ದಿನ "ಸುಮಾ" ಎಂದವರು ಹೊರಗಿನಿಂದಲೇ ಕರೆದರು ಚಾರುಗೆ ಹಾಲು ಕುಡಿಸುತ್ತ ಕುಳಿತಿದ್ದ ತಾನು ಹೊರಗೋಡಿ ಬಂದಾಗ, ಸಾಯಲಾಗಿದ್ದ ಹುಡುಗನೊಬ್ಬನನ್ನು ಹೆಗಲ ಮೇಲೆ ಹೊತ್ತು ನಿಂತಿದ್ದರು ತನ್ನಾತ.

ಊಟವಾದ ಮೇಲೆ ಅವರೇ ತಿಳಿಸಿದರು "ನೋಡು ಸುಮಾ, ಕಲಕತ್ತೆಯಿಂದ ಮರಳುತಿದ್ದೆ ನನಗೆ ಬೀದಿಯಲ್ಲಿ ಸಾಯಲು ಬಿದ್ದಿದ್ದ ಈ ಹುಡುಗನನ್ನು ಕಂಡು ಮರುಕವೆನಿಸಿತು, ಬರಗಾಲದ ದವಡೆಯಲ್ಲಿ ಸಿಕ್ಕ ಸಾವಿರಾರು ಜನರಲ್ಲಿ ಇವನೂ ಒಬ್ಬ.

ತಾಯಿ ತಂದೆ ಬಂಧು ಬಳಗ ಯಾರೂ ಇಲ್ಲದ ಈತನನ್ನು ಉಳಿಸಿಕೊಳ್ಳಬೇಕೆಂದು ಮನಸ್ಸು ಹಾತೊರೆಯಿತು. ನಿನ್ನ ಉಡಿಯಲ್ಲಿ ಹಾಕಿದ್ದೇನೆ ಸುಮಾ ಉಳಿಸುವ ಭಾರ ನಿನ್ನದು" ಎಂದಿದ್ದರು ಅವರು.

ದಿನಗಳೆದಂತೆ ಆ ಹುಡುಗ, ಅಲ್ಲ ಸುರೇನ್.. ಅದು ಅವನ ಹೆಸರು.. ಚೇತರಿಸಿಕೊಂಡ ಮನೆಯ ಎಲ್ಲ ಕೆಲಸಕ್ಕೂ ಮುಂದು ಅವರು ಪ್ರವಾಸದಲ್ಲಿದ್ದಾಗ ಅವನೇ ಸಹಾಯಕ ಎಂಥ ಸ್ವಾಮಿಭಕ್ತಿ ಅವನದು! ಅಂಥವನನ್ನು ಕಾಪಾಡಿ ತನಗಿತ್ತ ಅವರೇ...

ಬರಗಾಲ ಅವಳಿಗೇನೂ ಕೇಡು ಬಗೆಯಲಿಲ್ಲ ಇನ್ನು ನೆರೆಹಾವಳಿ... ಇಡಿಯ ಅಸ್ಸಾಮು ನೀರಲ್ಲಿ ಕೊಚ್ಚಿಕೊಂಡು ಹೋದಿತೋ ಏನೋ ಎನ್ನುವ ಭಯದ ಸೂಚನೆ ಇತ್ತು. ಅದರಿಂದ ಜನತೆಗಾದ ಹಾನಿಗೆ ಕೊನೆ ಇರಲಿಲ್ಲ! ಆಗ ತಮ್ಮ ಮನೆಯ ಅಂಗಳದವರೆಗೂ ನೀರು!..

ಅಬ್ಬಾ ಆ ನೀರಿನಲ್ಲಿ ಎಂಥೆಂಥ ದೊಡ್ಡ ಮೀನುಗಳು! ತಮ್ಮಂಗಳದಲ್ಲಿ ಬಿದ್ದು ಹೊರಳಾಡುತ್ತಿದ್ದವು! ಸುರೇನ್ ಒಂದೇ ಸವನೆ ಕಿರುಚುತ್ತಿದ್ದ. "ಮಾ ಮಾ ಎಷ್ಟು ದೊಡ್ಡ ಮೀನುಗಳಿವು? ಹಿಡಿಯಲೇ" ಎನ್ನುತ್ತಿದ್ದ

ಆದರೆ ಅವರು "ನೆರೆಹಾವಳಿಯಲ್ಲಿ ಎಲ್ಲಿ ಎಷ್ಟು ಹೀಗೆ ಹಾನಿಯಾಗಿದೆ? ಎನ್ನುವುದನ್ನು ನೋಡುವುದಕ್ಕೆ ಹೋಗಿದ್ದರು.



ತಾನು ಚಿಕ್ಕ ಚಿಕ್ಕ ಮಕ್ಕಳನ್ನು ತಬ್ಬಿಕೊಂಡು ನಡುಗುತ್ತಿದ್ದ ದೇಹವನ್ನು ನಿಲ್ಲಿಸಿಕೊಂಡು ಅವರು ಬರುವವರೆಗೂ ಕಾಯುತ್ತ ಎಂಥ ಭಯಾನಕ ದಿನವನ್ನು ಕಳೆದೆ! ಅಂಥದರಲ್ಲಿಯೂ ಅವರು ಮರಳಿದರು ಮನೆಗೆ

* * *

ಮತ್ತೆ ರೈಲು ನಿಂತಿತು. ಪುನಃ ಏರುವ ಇಳಿಯುವ ಗದ್ದಲ. ಕೆಲವರಿಗೆ ಏರುವ ಆತುರ ಹಲವರಿಗೆ ಇಳಿಯುವ ಅವಸರ. ಸುಮತಿ ಪಕ್ಕದಲ್ಲಿ ಬಂದು ನಿಂತಾಕೆಗೆ ಸ್ಥಳಕೊಡಲು ಮಲಗಿದ್ದ ಮಗುವನ್ನು ಎಚ್ಚರಗೊಳಿಸಿ ಎಡೆಮಾಡಿಕೊಟ್ಟಳು. ಇವಳ ಪಕ್ಕದಲ್ಲಿ ಬಂದು ಕುಳಿತಾಕೆ ದಯಾಮಯಿ; ಎಂದೇ ಆ ಮಗುವನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡಳು.

ನೋಡುತ್ತಿದ್ದ ಸುಮತಿಯ ಮನದಲ್ಲಿ ಒಂದ ಸತ್ಯ ಹೊಳೆಯಿತು.

ಮನುಷ್ಯರು ಬದುಕುವುದು ಏತರಿಂದ?

'ಟಾಲ್‌ಸ್ಟಾಯ್ ಕತೆಯನ್ನು ಓದಿದ್ದ ಅವಳಿಗೆ ಅದರ ಸತ್ಯ ಪ್ರತ್ಯಕ್ಷ ಕಣ್ಣೆದುರೆ ನಡೆದಂತಾಯಿತು.

ಮಲಗಿದ್ದ ಮಕ್ಕಳ ಮೊಗ ನೋಡನೋಡುತ್ತ ಎಂಥ ಅದೃಷ್ಟಹೀನ ಕಂದಮ್ಮಗಳಿವು!

ಎಂದುಕೊಂಡಳಾಕೆ.

* * * *

ಮೋಹನ... ಅವರದೇ ನಿಲುವು, ಅದೇ ರೂಪು ಸ್ವಭಾವವೂ ಅವರದೇ. ..... ಅಂದಿನ ಭೂಕಂಪದ ನೆನಪು ಅವಳನ್ನೊಮ್ಮೆ ನಡುಗಿಸಿಬಿಟ್ಟಿತು. ಮೋಹನ ಅಂದು ಭೂಮಿತಾಯ ಮಡಿಲು ಸೇರುತ್ತಿದ್ದನೋ ಏನೋ...

ರಾತ್ರಿ ಒಮ್ಮಿಂದೊಮ್ಮೆ ಮಂಚದಲ್ಲಿ ಮಲಗಿದ್ದ ತಾವೆಲ್ಲ ನೆಲಕ್ಕೆ ಬಿದ್ದು ಬಿಟ್ಟಿದ್ದು... ಮೊದಲಿಗೆ ಎಚ್ಚರಗೊಂಡು ತಾನು ಕಿಟಾರನೆ ಕಿರುಚಿ ಕೊಂಡದ್ದು, ಅವರು ಎದ್ದು ನಡುಗುತ್ತಿದ್ದ ತನ್ನನ್ನು, ತೊಟ್ಟಿಲಲ್ಲಿದ್ದ ಮೋಹನನನ್ನು, ಎಳೆದುಕೊಂಡು ಒಂದೇ ಹಾರಿಕೆಗೆ ಅಂಗಳಕ್ಕೆ ಹಾರಿದ್ದು....

ಮುಂದೊಂದು ಕ್ಷಣ ತೊಟ್ಟಿಲು ಕಟ್ಟಿದ್ದ ಕಂಬವೇ ಕೆಳಗುರುಳಿ ಬಿದ್ದಿತ್ತು...

ಅಲ್ಲಿಯೇ ಅಲ್ಲವೇ ತಾವೆಲ್ಲ ಮಲಗಿದ್ದು?

ಅಂದು ಅವರೇ ಉಳಿಸಿದ ಜೀವಗಳಿವು

ಇಂದು ಅವರು ಮಾತ್ರ ಇಲ್ಲವಾದರೆ?

ಬರಬರುತ್ತ ಮಕ್ಕಳು ಬೆಳೆಯುತ್ತಿದ್ದಂತೆ ಸುಖ-ಸಮೃದ್ಧಿ ಎನಿಸಿತ್ತು. ಸಂಸಾರ ಎಂಥ ಸುಖಮಯ!

ಆದರೆ ಅವೆಲ್ಲವೂ ಎಷ್ಟು ಕ್ಷಣಿಕವಾಗಿತ್ತು... ತನಗೆ ಕೊನೆಗೂ ಅದು ತಿಳಿಯಲಿಲ್ಲ!



ಸುಮತಿ ತನ್ನ ಕೈಯ ಆಸರೆಯಲ್ಲಿ ಹಾಲು ಕುಡಿಯುತ್ತಿದ್ದ ಏನೊಂದೂ ಅರಿಯದ ಹಸುಗೂಸನ್ನು ಕಣ್ಣೀರು ಸುರಿಸುತ್ತ ನೋಡಿದಳು.

ಜಗತ್ತಿನ ಬೆಳಕು ಕಾಣುವುದಕ್ಕೆ ಮೊದಲೇ ತನ್ನ ಜನ್ಮದಾತನನ್ನು ಕಳೆದುಕೊಂಡಿದೆ.

ಇಷ್ಟೆಲ್ಲ ದುಃಖವನ್ನೂ ಸಹಿಸಿಕೊಂಡು ಬಾಳು ಸಾಗಿಸಲು ಕಾರಣವಾಗಿದೆ ಈ ಕೂಸು!

ಅವಳ ಹೃದಯವನ್ನು ಕೊರೆಯುತ್ತಿದ್ದುದು ಅದೇ ಒಂದು ವಿಚಾರ!!

ಹಿಂದೆಂದೂ ತೋರಿಸದಷ್ಟು ಆಸೆ, ಈ ಬಾರಿ ತನ್ನ ಬಸರಿನಲ್ಲಿ ಅವರೇಕೆ ತೋರಿದರು?

"ನಿಮ್ಮಗಳ ಸುಖ-ದುಃಖ ತಿಳಿಯದ ಗಂಡುಗಳು ನಾವು"

"ಈ ಮಕ್ಕಳಿಂದ ನೀನೆಷ್ಟು ಅಸ್ವತಂತ್ರಳು! ಈ ಮಕ್ಕಳ ಲಾಲನೆ ಪಾಲನೆಯಲ್ಲಿ ನಿನ್ನ ಜೀವ ಸವೆಯುತ್ತಿದೆ" ಎಂದಿದ್ದರು ಅವರು.

ಮಕ್ಕಳಲ್ಲದೆ ಅವರ ಭವಿಷ್ಯತ್ತಿನ ಭಾರವನ್ನೂ ನಾನೇ ಹೊರಬೇಕಾದೀತೆಂದು ಅವರು ಭಾವಿಸಿದ್ದರೆ? ಈ ಚಾರು ಅವರಿಲ್ಲದೆ ಒಂದು ರಾತ್ರಿಯೂ ಕಳೆದವಳಲ್ಲ. ಇಂಥ ಸುಖದ ಸೌಧದಲ್ಲಿರಿಸಿದ ನಮ್ಮನ್ನು ಯಾವ ಶನಿಯ ದೃಷ್ಟಿ ಕೆಳಗುರುಳಿಸಿತು?

ತಾನಾಗ ಆರು ತಿಂಗಳ ಗರ್ಭಿಣಿ, ಆನಂದವೇ ಸುತ್ತು ಬಳಸಿ ಬಂದಂತಿತ್ತು.

ದಿನದಂತೆ ಅವರು ಜೀಪ್‌ನಲ್ಲಿ ಕುಳಿತಾಗ ಮಕ್ಕಳೆನ್ನುತ್ತಿದ್ದ ಟಾಟಾ, ಟಾಟಾ ಕೈ ಪ್ರತಿಯಾಗಿ ತಾವೂ ಮಾಡುತ್ತ ಸ್ನೇಹಾದ್ರ್ರ ಕಂಗಳಿಂದ ತನಗೂ ಬೀಳ್ಕೊಡುತ್ತ ಹೊರಟ ಅವರ ರಾಜಠೀವಿ ಮರೆಯುವುದೆಂತು?

..... ಜೀಪು ಮರಳಿತು. ಅವರು ಬಂದರು ಅಲ್ಲ, ಅವರನ್ನು ತಂದರು.

ಸ್ನೇಹಜಲ ತುಂಬಿದ ಆ ಕಣ್ಣುಗಳು... ಟಾಟಾ ಎಂದ ಆ ಕೈ-ಬಾಯಿಗಳು ನಿಸ್ತೇಜ ನಿರ್ಜಿವವಾಗಿದ್ದವು. ದೇಗುಲದ ದೀವಿಗೆ ಆರಿಹೋಗಿತ್ತು. ಅಯ್ಯೋ ಎಂಥ ನೋವು, ಏನು ಸಂಕಟ!!..

ಊರಿಗೆ ಊರೇ ಮರುಗಿತು. ಏನಾದರೂ ಅವರಿನ್ನು ಮರಳಿಯಾರೇ? ಅಷ್ಟು ದೂರದಲ್ಲಿದ್ದ ತನಗೆ ಯಾರಿದ್ದರು? ಇಲ್ಲ. ಹಾಗೆನ್ನಲಾರೆ. ಅಲ್ಲಿಯ ಪ್ರತಿಯೊಬ್ಬರಲ್ಲೂ ಅವರ ಜೀವ ಇದ್ದಂತಿತ್ತು. ಇಲ್ಲವಾಗಿದ್ದರೆ ಆ ಜನ ತನಗಾಗಿ, ತನ್ನ ಈ ಮಕ್ಕಳ ಬಗೆಗಾಗಿ ಸಹಾಯದ ಕೈ ನೀಡಲು ಬರುತ್ತಿತ್ತೇ?

* * * *

ರೈಲು ಮದ್ರಾಸು ಮುಟ್ಟಿತು.

ಸುಮತಿ ಇಳಿಯಲೇಬೇಕು ಕಾದಿರುವ ಮೈದುನನ ಮುಖವನ್ನು ನೋಡಬೇಕು. ತಂದೆ ಇಲ್ಲದ ಮಕ್ಕಳನ್ನು ತೋರಿಸಬೇಕು. ಅಂದು ಅವರಲ್ಲಿ ತಂಗಿದ್ದು ಮುಂದಿನ ಪ್ರಯಾಣ.

ಸುಮತಿ ಅವಸರದಲ್ಲಿ ಬೆಡ್ಡಿಂಗ್ ಕಟ್ಟುವಾಗ ಉಳಿದ ಸಾಮಾನುಗಳನ್ನು ತ್ವರೆಯಾಗಿ ಕೆಳಗಿಳಿಸುವುದು ನಡೆದಿತ್ತು. ಅದೇ ಬೇರಾರೂ ಆಗಿರದೆ ಅವರೇ ರೈಲಿನಲ್ಲಿ ಜೊತೆಯಾಗಿ ಬಂದ ಡಾಕ್ಟರ್ ದಂಪತಿಗಳು!

ಈವರೆಗೂ ಸುಮತಿ ತನ್ನ ಹಿಂದಿನ ನೆನಪಿನಲ್ಲಿ ಕೊಚ್ಚಿಹೋಗಿದ್ದಳು. ಅವಳಿಗೆ ಅರಿವು ಬಂದದ್ದು ಪುನಃ ಈಗ!

ಬೀಳ್ಕೊಡುವ ಮುನ್ನ ಸುಮತಿಯನ್ನು ಅಪ್ಪಿಕೊಂಡು ಸುಮಿತ್ರಮ್ಮ "ಒಂದು ಬಾರಿ ನಮ್ಮ ಮನೆಗೆ ಮಕ್ಕಳನ್ನು ಕರೆದುಕೊಂಡು ಬಂದು ಸುಖ ಕೊಡುವಿರಲ್ಲವೇ?" ಎಂದರು.

ಅವರ ಅಂತಃಕರಣದ ವಾತ್ಸಲ್ಯದ ಕರೆಗೆ ಇಲ್ಲ ಎನ್ನಲಾಗದೆ ಸಮ್ಮತಿ ಸೂಚಿಸಿ ತಲೆಬಾಗಿದಳು, ಸುಮತಿ,

ಮೈದುನ ಅತ್ತಿಗೆಯ ಕೈಯಲ್ಲಿದ್ದ ಮಗುವನ್ನು ತನ್ನ ಕೈಯಲ್ಲಿ ತೆಗೆದುಕೊಂಡ ರೈಲು ಮತ್ತೂ ಹೊರಟಿತು.

ಅದೂ ಒಂದು ಜೀವನವಿದ್ದಂತೆ

ಅಲ್ಲಲ್ಲಿ ಇಳಿದುಹೋಗುವ ಪಥಿಕರು

ಕೊನೆಮುಟ್ಟುವಲ್ಲಿ ಒಬ್ಬಿಬ್ಬರಾದರೂ ಉಳಿದಿರುವರೇನೋ!

ಮತ್ತೆಲ್ಲ ಜನ ಮಧ್ಯದಲ್ಲಿಯೇ ಇಳಿಯುತ್ತಾರೋ ಏನೋ......

# ಮನಸೊಂದು ರೆಕಾರ್ಡಿಂಗ್ ಟೇಪು

**- ಎಚ್. ಎಸ್. ಪಾರ್ವತಿ**

ಟೇಪುಗಳನ್ನು ಮಿಷಿನ್ನಿಗೆ ಹಾಕಿ ಆಯಿತು. ಎರಡು ಮಿಷಿನ್ನುಗಳಿಗೂ ಸಂಬಂಧ ಕಲ್ಪಿಸಲಾಯಿತು. ಕಾರ್ಯಕ್ರಮವನ್ನು ಸಿದ್ಧಪಡಿಸಲು ತಯಾರಾಗಿ ಕುಳಿತಳು ರೋಹಿಣಿ, ಅಭ್ಯಾಸ ಬಲದಿಂದ ಕೆಲಸ ಚುರುಕಾಗಿಯೇ ಸಾಗಿತು. ಅದರಲ್ಲಿ ಆಶ್ಚರ್ಯವಾದರೂ ಏನು ಈ ಕೆಲಸಕ್ಕೆ ಬಂದು ಆಗಲೇ ಎಂಟು ವರ್ಷಗಳಾದುವಲ್ಲ! ಈ ಯಂತ್ರಗಳೊಡನೆ ಕೆಲಸ ಮಾಡುವುದು ಅವಳಿಗೆ ಕವಡೆಯಾಡುವುದಕ್ಕಿಂತ ಸುಲಭ! ರೋಹಿಣಿ ಅಂದುಕೊಂಡಳು, ಏನೇ ಆಗಲಿ ಈ ಕೆಲಸ ಎಷ್ಟೋ ವಾಸಿ ಬೇರೆ ಬೇರೆ ನೌಕರಿಯಲ್ಲಿರುವವರು ಗೊಣಗಿಕೊಳ್ಳುವ ಹಾಗೆ ಮಾಡಿದ್ದನ್ನು ಮಾಡಿ ತಲೆಚಿಟ್ಟು ಹಿಡಿಯುವುದಿಲ್ಲ. ಮನುಷ್ಯರ ಸ್ವರವನ್ನು, ವಿಚಾರವನ್ನು, ಕಲೆಯನ್ನು ಟೇಪಿನಲ್ಲಿ ಸೆರೆ ಹಿಡಿಯುವುದು, ಆಗಿರುವ ತಪ್ಪುಗಳನ್ನು ತೆಗೆದುಹಾಕುವುದು, ಒಂದನ್ನು ಹತ್ತಾಗಿ ಪ್ರತಿಗಳನ್ನು ಮಾಡುವುದು, ಸೂಜಿದಾರಗಳಿಲ್ಲದೆಯೇ ಕಾರ್ಯಕ್ರಮಕ್ಕೆ ನಕಾಶೆಯ ಮೆರಗನ್ನು ಕೊಡುವುದು, ನಿಜಕ್ಕೂ ಸ್ವಾರಸ್ಯವಾದ ವಿಚಾರವೇ. ತನಗಿರುವ ಅದೃಷ್ಟಕ್ಕೆ ಇಂಥ ಕೆಲಸ ಸಿಕ್ಕಿದ್ದು ಆಶ್ಚರ್ಯವೇ!

ಅದೃಷ್ಟದ ನೆನಪಾದಾಗ ರೋಹಿಣಿಯ ಮನಸ್ಸು ಇದರಿಗಿದ್ದ ಮಿಷನ್ನು, ಟೇಪು ಎಲ್ಲವನ್ನು ದಾಟಿ ದೂರ ಸಂಚಾರ ಹೊರಟಿತು. ಮನಸ್ಸಿನ ಯಂತ್ರ ಗತಕಾಲದ ಮಿಷಿನ್ನಿನೊಂದಿಗೆ ಸಂಬಂಧ ಕಲ್ಪಿಸಿಕೊಂಡಿತು. ತಾನು ಈ ಕೆಲಸಕ್ಕೆ ಸೇರುವ ಯೋಚನೆಯಾದರೂ ಎಲ್ಲಿತ್ತು? ಇದು ಮಾತ್ರವೇನು ಬೇರೆ ಯಾವ ನೌಕರಿಗೂ ಹೋಗುವ ಉದ್ದೇಶವೂ ತನಗೆ ಇರಲಿಲ್ಲ. ಪ್ರತಿ ಜೀವನವನ್ನು ಸೂತ್ರದಲ್ಲಿ ಕಟ್ಟಿ ಕುಣಿಸುತ್ತಾನೆಂದು ಹೇಳಲಾದ ಆ ಸೂತ್ರದಾರ ಎಲ್ಲಿಗೋ ಹೊರಟಿದ್ದ ರೋಹಿಣಿಯ ಜೀವನವನ್ನು ಮತ್ತೆಲ್ಲಿಗೂ ತಂದು ನಿಲ್ಲಿಸಿದ್ದ.

ಸರಾಗವಾಗಿ ಓಡುತ್ತಿದ್ದ ಟೇಪು' ಕಟ್' ಎಂದಿತು. ಒಂದು ನಿಮಿಷ ಹಿಡಿತಕ್ಕೆ ಸಿಗದೆ ಮಿಷನ್ನಿನ ಚಕ್ರಗಳು ಗಿರಗಿರನೆ ತಿರುಗಿದವು. ರೋಹಿಣಿ ಚಟಕ್ಕನೆ ಎದ್ದು ಮಿಷನ್ನಿನ ಗುಂಡಿಯನ್ನು ಒತ್ತಿದಳು. ಮಿಷನ್ನಿನ ಚಲನೆಯನ್ನು ನಿಲ್ಲಿಸಿದಳು. ಕಿತ್ತು ಹೋಗಿದ್ದ ಭಾಗಗಳನ್ನು ಜೋಡಿಸಿ ಮಗ್ಗುಲಿನ ಯಂತ್ರದ ಮೇಲಿನ ಕಾರ್ಯಕ್ರಮಕ್ಕೆ ಅನುಸಾರವಾಗಿ ಹೊಂದಿಸಿಕೊಂಡು ಡಬ್ಬಿಂಗನ್ನು ಮುಂದುವರಿಸುವಷ್ಟರಲ್ಲಿ ನಾಲ್ಕಾರು ನಿಮಿಷಗಳೇ ಬೇಕಾದವು. ಹೂ! ಈ ಮಿಷಿನ್ನುಗಳ ಹಣೆಬರಹವೇ ಇಷ್ಟು.. ಕಾರಣವಿಲ್ಲದೆ ಕೈ ಕೊಡುತ್ತವೆ! ಅಥವಾ ಟೇಪೇ ಹಳೆಯದೇನೋ! ಪಾಪ! ಅದರ ತಪ್ಪು ತಾನೇ ಏನಿದೆ?

ಈ ಯಂತ್ರಗಳ ಮೇಲೆ ಅದು ಓಡುತ್ತಿರುವುದು ಎಷ್ಟು ನೂರನೇ ಸಲವೂ...? ಎರಡು ನಿಮಿಷ ಗಲಿಬಿಲಿಗೊಂಡಿದ್ದ ಮನಸ್ಸು ಶಾಂತವಾಯಿತು....... ಕೆಲಸ ಹಗುರವಾದ ಕೂಡಲೇ ಮನಸ್ಸು ಮತ್ತೆ ಭೂತಕಾಲದ ಪರದೆಯನ್ನು ಒರೆ ಮಾಡಿ ಇಣುಕಿ ಹಾಕಿತು.....

ರೋಹಿಣಿಯ ತಂದೆ ಶ್ರೀಮಂತರೇ, ತಮ್ಮ ಜಮೀನುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಾ ಹಳ್ಳಿಯಲ್ಲೇ ಇದ್ದರು. ಇಬ್ಬರೇ ಹೆಣ್ಣುಮಕ್ಕಳು. ಹಿರಿಯ ಮಗಳು ಸರೋಜಾ ರಾಜಣ್ಣನನ್ನು ಮದುವೆಯಾಗಿದ್ದಳು. ಮೈಸೂರಿನಲ್ಲಿ ವ್ಯಾಪಾರಿಯಾಗಿದ್ದ ರಾಜಣ್ಣ ತಂದೆಯ ಆಸ್ತಿಯನ್ನು ಮತ್ತಷ್ಟು ಬೆಳಸಿ ವಿವೇಕಿ ಎನಿಸಿಕೊಂಡಿದ್ದ. ರಾಜಣ್ಣ ಸರಸಿ, ನಯವಂತ. ಅವನ ಮಡದಿಯಾಗಿ ಮನೆಗೆ ಬಂದ ಸರೋಜಾ ಅತ್ಯಂತ ಸುಖಿಯಾದಳು. ರಾಜಣ್ಣನ ತಾಯಿ ಅವಳ ಪಾಲಿಗೂ ತಾಯಿಯೇ ಆದರು.

ಎಲ್ಲಾ ಸರಿಯಾಗಿದೆ ಎಂದು ಲೆಕ್ಕ ಪೂರ್ತಿಮಾಡಿ ಮುಗಿಸಿ ಬಿಟ್ಟರೆ ಅದು ಜೀವನ ಆಗುತ್ತದೆಯೇ? ಎರಡನೇ ಮಗಳು ರೋಹಿಣಿ ಹುಟ್ಟಿದ ಕೆಲವೇ ವರ್ಷಗಳಲ್ಲಿ ತಾಯಿ ತೀರಿಕೊಂಡರು. ಗಂಡನ ಮನೆಯಲ್ಲಿ ಸುಖವಾಗಿದ್ದರೂ ಸರೋಜಾ ತವರಿನ ಚಿಂತೆ ಹಚ್ಚಿಕೊಂಡಳು. ತಬ್ಬಲಿಯಾದ ತಂಗಿಗೆ ಎಷ್ಟು ಉಪಚಾರ ಮಾಡಿದರೂ ಸಾಲದು. ರೋಹಿಣಿ ತುಂಬಾ ಸೂಟಿಯಾದ ಹುಡುಗಿ, ಆಟ,ಪಾಠ ಎಲ್ಲದರಲ್ಲೂ ಮುಂದು. ಅವಳು ಹೈಸ್ಕೂಲ್ ವಿದ್ಯಾಭ್ಯಾಸ ಮುಗಿಸಿದಾಗ ಅವಳ ಶಿಕ್ಷಣಕ್ಕೆ ಅಲ್ಲಿಗೆ ಮಂಗಳ ಹಾಡಿ ಅವಳಿಗೆ ಮದುವೆ ಮಾಡುವ ಯೋಚನೆ ಮಾಡಿದರು ತಂದೆ, ಆದರೆ ಸರೋಜಾ ತಂದೆಯ ಅಭಿಪ್ರಾಯವನ್ನು ವಿರೋಧಿಸಿದಳು. ಅವಳ ದೃಷ್ಟಿಯಲ್ಲಿ ರೋಹಿಣಿ ಇನ್ನೂ ಮಗು, ಮೈಸೂರಿನ ತಮ್ಮ ಮನೆಗೆ ಕರೆದುಕೊಂಡು ಬಂದಳು. ಕಾಲೇಜಿಗೂ ಸೇರಿಸಿದಳು, ರೋಹಿಣಿ ನಾಲ್ಕೇ ದಿನಗಳಲ್ಲಿ ಅಕ್ಕನ ಮನೆಗೆ ಹೊಂದಿಕೊಂಡಳು. ಜೊತೆಯವರು ಇಲ್ಲದೆ ತಂದೆಯೊಡನೆ ಒಂಟಿಯಾಗಿ ಬಾಳಬೇಕಾಗಿದ್ದ ಹಳ್ಳಿಯ ಜೀವನದೊಂದಿಗೆ ಹೋಲಿಸಿದಾಗ ಅಕ್ಕನ ಮನೆ ಅವಳಿಗೆ ಸ್ವರ್ಗವೆನಿಸಿತು. ತಾಯಿಗಿಂತ ಹೆಚ್ಚಾಗಿ ತನ್ನನ್ನು ಪ್ರೀತಿಸುತ್ತಿದ್ದ ಅಕ್ಕ, ಮಮತೆಯಿಂದ ನೋಡಿಕೊಳ್ಳುವ ಅಕ್ಕನ ಅತ್ತೆ ರಂಗಮ್ಮ, ಮಾತುಮಾತಿಗೆ ಕೀಟಲೆ ಮಾಡುತ್ತಾ ಓಡಾಡುವ ರಾಜು ಭಾವ, ಹೊತ್ತು ಹೋಗಲಿಲ್ಲವೆಂದರೆ ಜೊತೆಗೆ ಆಟವಾಡಲು ಅಕ್ಕನ ಮಕ್ಕಳು, ಹರಟೆಗೆ ಕಾಲೇಜಿನ ಗೆಳತಿಯರು; ಇನ್ನೇನು ಬೇಕು! ರೋಹಿಣಿಯ ಬದುಕಿನ ತೊರೆ ತುಂಬಿ ಹರಿಯುತ್ತಿತ್ತು. ಕಾರಂಜಿಯಂತೆ ಪುಟಿಯುತ್ತಿದ್ದ ಉತ್ಸಾಹ, ಸಹಜವಾಗಿ ಬಂದಿದ್ದ ಬುದ್ಧಿ, ಆಕರ್ಷಕ ರೂಪ... ರೋಹಿಣಿ ಬಹುಬೇಗ ಕಾಲೇಜಿನ ಜನಪ್ರಿಯ ವಿದ್ಯಾರ್ಥಿನಿಯಾಗಿದ್ದಳು.

* * * *

"ಏನ್ರಿ ರೋಹಿಣಿ, ನಿದ್ದೆ ಮಾಡುತ್ತಿದ್ದೀರಾ? ಮನಸ್ಸು ಎಲ್ಲಿದೆ? ಅಯ್ಯೋ, ಟೇಪು ಸುತ್ತಿಕೊಂಡು ಬಿಟ್ಟಿದೆಯಲ್ಲ... ಎದುರಿಗೆ ಕೂತಿದ್ದೀರಾ, ಅಷ್ಟು ಗೊತ್ತಾಗಲಿಲ್ವಾ !"

“ಓಹ್ ಇವತ್ತು ತನಗೇನೋ ಆಗಿದೆ, ಸರಿಯಾಗಿ ರೆಕಾರ್ಡ್ ಆಗಿದೆಯೋ ಇಲ್ಲವೋ?”

ತನ್ನ ಅನ್ಯಮನಸ್ಕತೆಯನ್ನು ಕಂಡು ರೋಹಿಣಿಗೆ ತನ್ನ ಮೇಲೆಯೇ ಬೇಸರವೆನಿಸಿತು. ಟೇಪನ್ನು ಹಿಂದಕ್ಕೆ ಹಾಕಿದಳು. ಪರೀಕ್ಷಿಸಿ ನೋಡಿದಾಗ ಯಾಕೋ ಸಮಾಧಾನವಾಗಲಿಲ್ಲ.



ಕಾರ್ಯಕ್ರಮದ ಮೊದಲಿನಿಂದ ಕೊನೆಯವರೆಗೆ ಇದ್ದ “ ಕರ್... ಕರ್' ಶಬ್ದ ಕಿವಿಗೆ ಹಿಂಸೆ ಕೊಟ್ಟಿತು.

“ಥೂ! ಮೊದಲಿಂದ ಗಮನವಿಟ್ಟು ಕೆಲಸ ಮಾಡಬೇಕು' ಎಂದುಕೊಂಡಳು. ರೆಕಾರ್ಡ್ ಆಗಿದ್ದ ಟೇಪನ್ನು ಬಲ್ಕ್ ಇರೈಸರ್ ಮೇಲೆ ಹಾಕಿ ತಿರುಗಿಸಿ, ಮತ್ತೆ ಯಂತ್ರದ ಮೇಲೆ ಓಡಿಸಿದಾಗ ಟೇಪಿನ ಮೇಲಿದ್ದ ಮಾತುಗಳೆಲ್ಲ ಅಳಿಸಿಹೋಗಿದ್ದವು. ಒಂದು ನಿಮಿಷ, ಮನುಷ್ಯನ ಬುದ್ಧಿ ಶಕ್ತಿಯ ಬಗ್ಗೆ ಅವಳಿಗೆ ವಿಸ್ಮಯವೆನಿಸಿತು. ಒಂದು ಯಂತ್ರದ ಮೇಲೆ ಬಿಟ್ಟಕೂಡಲೇ ಟೇಪಿನ ಮೇಲಿದ್ದ ಅಕ್ಷರಗಳೆಲ್ಲ ಮಾಯವಾಗಿದ್ದವು. ಹಾಗೆಯೇ, ಮನುಷ್ಯನ ತಲೆಯಲ್ಲಿ, ಬೇಡವಾದರೂ ಉಳಿದು ನೋವು ಕೊಡುವ ಹಳೆಯ ನೆನಪುಗಳನ್ನೆಲ್ಲ ಅಳಿಸಬಲ್ಲ ಒಂದು ಯಂತ್ರವನ್ನು ಕಂಡುಹಿಡಿದರೆ ಎಷ್ಟು ಚೆನ್ನ! ಬೇಡವಾದಾಗ ಹಳೆಯದನ್ನೆಲ್ಲ ಮನಸ್ಸಿನಿಂದ ಅಳಿಸಿಹಾಕಿ ಉತ್ಸಾಹದಿಂದ ಹೊಸ ಜೀವನವನ್ನು ಆರಂಭಿಸಬಹುದು. ಹಳೆಯ ಕೊಳೆ ಚೂರು ಇಲ್ಲದಂತೆ ಒರೆಸಿ ಹಾಕಿಬಿಡಬಹುದು.

ತನ್ನ ಕಲ್ಪನೆಗೆ ತಾನೇ ನಕ್ಕಳು ರೋಹಿಣಿ, ಸದ್ಯದಲ್ಲಿ ಈ ಹುಚ್ಚು ಭಾವನೆಗಳಿಗೆಲ್ಲ ಬ್ರೇಕ್ ಹಾಕಿ ಕೆಲಸದಲ್ಲಿ ಗಮನವಿಡಬೇಕು ಎಂದುಕೊಂಡು, ಸರಸರನೆ ಮೇಲೆದ್ದು ಎರಡು ಯಂತ್ರಗಳಿಗೂ ಆಯಿಲ್ ಹಾಕಿ ಒರೆಸಿ, ಟೇಪನ್ನು ಹಾಕಿದಳು. ಒಮ್ಮೆ ಎಲ್ಲವನ್ನು ಪರೀಕ್ಷಿಸಿ ಕೆಲಸ ಆರಂಭಿಸಿದಳು. ಎರಡು ಯಂತ್ರಗಳಿಗೂ ಸಂಬಂಧ ಏರ್ಪಟ್ಟು, ಒಂದು ಟೇಪಿನ ಮೇಲಿದ್ದ ಮಾತುಗಳೆಲ್ಲ ಇನ್ನೊಂದು ಟೇಪಿಗೆ ಹಾಯಲು ಆರಂಭಿಸಿದ ಕೂಡಲೇ ಬೇಡ ಬೇಡವೆಂದು ತಡೆಹಿಡಿದರು ಮೊಂಡುಹಿಡಿಯುವ ಮಗುವಿನಂತೆ ಮತ್ತೆ ರೋಹಿಣಿಯ ಮನಸ್ಸಿನ ಯಂತ್ರ ಗತಕಾಲದ ಯಂತ್ರದೊಂದಿಗೆ ಜೋಡಿಸಿಕೊಂಡಿತು.

...ತನ್ನ ಜೀವನದ ದಿಕ್ಕನ್ನೇ ಬದಲಾಯಿಸಿದ ಆ ದಿನ, ತಂದೆಗೆ ಆರೋಗ್ಯ ಸರಿಯಾಗಿಲ್ಲವೆಂದು ಅಕ್ಕ ಮಕ್ಕಳನ್ನೂ ಕರೆದುಕೊಂಡು ಹಳ್ಳಿಗೆ ಹೋಗಿದ್ದಳು. ರೋಹಿಣಿ ಎಂದಿನಂತೆ ಕಾಲೇಜಿಗೆ ಹೋಗಿದ್ದಳು. ಸಂಜೆ ಮನೆಗೆ ಬಂದಾಗ ಅವಳು ಉತ್ಸಾಹದ ಬುಗ್ಗೆಯಾಗಿದ್ದಳು. ನೆಗೆಯುತ್ತಲೇ ಓಡಿಬಂದು ಪುಸ್ತಕಗಳನ್ನೆಲ್ಲ ಒಂದು ಕಡೆ ಎಸೆದಳು. ಮುಖ ತೊಳೆದ ಶಾಸ್ತ್ರ ಮಾಡಿ ಅಡಿಗೆಮನೆಗೆ ಹೋಗಿ ಕಾಫಿ ಮಾಡಿಸಿಕೊಂಡು ಕುಡಿದಳು. ಅತ್ತಿತ್ತ ಕಣ್ಣಾಡಿಸಿದಳು.

ಯಥಾಪ್ರಕಾರ ರಂಗಮ್ಮ ಮನೆಯಲ್ಲಿರಲಿಲ್ಲ ಪುರಾಣಕ್ಕೆ ಹೋಗಿರಬೇಕು. ಭಾವನ ರೂಮಿನಲ್ಲಿ ಮಾತ್ರ ದೀಪ ಉರಿಯುತ್ತಿತ್ತು.

"ಓಹ್ ! ಭಾವ ಆಗಲೇ ಬಂದಿದ್ದಾರೆ!"

ರೋಹಿಣಿಯ ಕಾಲಿಗೆ ಮತ್ತೆ ರೆಕ್ಕೆ ಮೂಡಿತು. ನಿಂತಲ್ಲಿಂದಲೇ ರಾಜೂ ಭಾವ"  ಎಂದು ಕೂಗುತ್ತಾ ಭಾವನ ಕೊಠಡಿಗೆ ಓಡಿದಳು. ರಾಜಣ್ಣ ಯಾವುದೋ ಪುಸ್ತಕ ಹಿಡಿದು ಮಂಚದ ಮೇಲೆ ಒರಗಿ ಕುಳಿತಿದ್ದ. ಅವನ ಹತ್ತಿರ ಬಂದು ನಿಂತ ರೋಹಿಣಿ ಹೇಳಿದಳು;

"ರಾಜೂ ಭಾವ, ನನಗೆ ಎಸ್ಸೆ ಕಾಂಪಿಟೇಷನ್ನಲ್ಲಿ ಫಸ್ಟ್ ಪ್ರೈಸ್ ಬಂದಿದೆ"



ರಾಜಣ್ಣ ಪುಸ್ತಕದಿಂದ ಕತ್ತು ತಿರುಗಿಸಿದ. ಪುಷ್ಟವಾದ ದೇಹ, ಆನಂದದಿಂದ ಅರಳಿದ ಮುಖ, ಕಣ್ಣುಗಳಲ್ಲಿ ಮಿಂಚು, ಸರೋಜೆಯ ಹೋಲಿಕೆ ಇದ್ದರು ಅವಳಿಗಿಂತ ರೋಹಿಣಿ ತುಂಬಾ ಸುಂದರಿ ಎಂದಿತು ರಾಜಣ್ಣನ ಮನಸ್ಸು, ತನ್ನ ಮಾತಿಗೆ ಉತ್ತರ ಕೊಡದೆ ಮಿಕಿ ಮಿಕಿ ನೋಡುತ್ತಿದ್ದ ರಾಜಣ್ಣನ ಕೈಯಿಂದ ಪುಸ್ತಕ ಕಿತ್ತುಕೊಂಡು ರೋಹಿಣಿ ಲಲ್ಲೆಗರೆದಳು.

ಭಾವಾ?... ನಾನು ಹೇಳಿದ್ದು ಕೇಳಿಸಲಿಲ್ಲವೇ?..? ಏನು ಯೋಚನೆ ಮಾಡ್ತಿದ್ರಿ ಭಾವ?"  "

ರೋಹಿಣಿಯ ಮುಖ ಅತೀ ಸಮೀಪಕ್ಕೆ ಬಂದಿತ್ತು. ಅವಳ ಮೈಯ್ಯ ಸುಗಂಧ ರಾಜಣ್ಣನ ಮನಸ್ಸನ್ನು ಮರೆಸಿತು. ಪ್ರತಿನಿತ್ಯ ಸಣ್ಣ ಹುಡುಗಿಯಂತೆ ಕಾಣುತ್ತಿದ್ದ ರೋಹಿಣಿ ಇಂದು ಒಮ್ಮೆಲೆ ಯುವತಿಯಂತೆ ಕಂಡಳು. ದೇಹದ ಶಾಖ, ಹಿತವಾದ ಉಸಿರು. ರಾಜಣ್ಣ ಎದ್ದು ಕೂತ. ಹತ್ತಿರವಿದ್ದವಳನ್ನು ಎರಡೂ ಕೈಗಳಿಂದ ಬಿಗಿದಪ್ಪಿದ. ರೋಹಿಣಿ ಬೆಚ್ಚಿದಳು."  ಭಾವಾ!" ಎನ್ನಲು ತೆರೆದ ಬಾಯನ್ನು ರಾಜಣ್ಣನ ತುಟಿಗಳೇ ಮುಚ್ಚಿದವು. ರೋಹಿಣಿ ಕೊಸರಿಕೊಂಡಳು. ಆದರೆ ರಾಜಣ್ಣನ ತಲೆಗೆ ಅಮಲೇರಿತ್ತು. ಅವನು ರೋಹಿಣಿಯ ಮುಖ, ಮೈಗಳಿಗೆ ಹುಚ್ಚನಂತೆ ಮುತ್ತಿಟ್ಟ ಕೈ ಅವಳ ಮೈಯನ್ನೆಲ್ಲ ಸವರಿತು. ಒಂದೇ ನಿಮಿಷದಲ್ಲಿ ರೋಹಿಣಿಯ ಹೆಣ್ಣುತನವೆಲ್ಲ ಸೂರೆಗೊಂಡ ರಾಜಣ್ಣ. ಅವನು ಈ ಲೋಕಕ್ಕೆ ಇಳಿದಾಗ ರೋಹಿಣಿಯ ಮುಖ ಬಿಳಿಚಿಕೊಂಡಿತ್ತು. ಏನನ್ನೋ ಕಳೆದುಕೊಂಡವಳಂತೆ ಅವಳು ನಿಧಾನವಾಗಿ ಎದ್ದು ಹೊರಟುಹೋದಳು. ವಿವೇಕ ಎಂತಹ ಸಮಯದಲ್ಲಿ ಕೈಕೊಟ್ಟಿತು ಎಂದು ದು ರಾಜಣ್ಣ ಒದ್ದಾಡಿದ.

ಪುರಾಣ ಮುಗಿಸಿಕೊಂಡು ಮನೆಗೆ ಬಂದ ರಂಗಮ್ಮ ಮಗನ ಮುಖದಲ್ಲಿ ಕುಣಿಯುತ್ತಿದ್ದ ಪೆಚ್ಚು ಕಳೆಯನ್ನು ನೋಡಿ ಆತಂಕಪಟ್ಟರು. ರೋಹಿಣಿಯ ಆರೋಗ್ಯ ಸರಿ ಇಲ್ಲ ಎಂದಾಗ ಇಷ್ಟು ಸಣ್ಣ ವಿಚಾರಕ್ಕೆ ತನ್ನ ಮಗ ನೊಂದುಕೊಳ್ಳುತ್ತಾನಲ್ಲಾ ಎಂತಹ ಹೆಂಗರುಳಿನವನು" ಎಂದು ಮಗನ ವಿಚಾರಕ್ಕೆ ಅಭಿಮಾನಪಟ್ಟರು. ರೋಹಿಣಿ ಮುಸುಕು ಹೊದ್ದು ಮಲಗಿದ್ದಳು. ರಂಗಮ್ಮ ಎಷ್ಟು ಕೂಗಿದರು ಅವಳು ಏಳದಾಗ, ನಿದ್ದೆ ಬಂದಿದೆ, ಪಾಪ! ಹುಡುಗಿಗೆ ಆಯಾಸವಾಗಿರಬೇಕು ಎಂದುಕೊಂಡು ಸುಮ್ಮನಾದರು.

ಮಾರನೆಯ ದಿನ ರೋಹಿಣಿ ಕಾಲೇಜಿಗೂ ಹೋಗಲಿಲ್ಲ. ರಾಜಣ್ಣ ಯಾವ ಕೆಲಸ ಮಾಡುವುದಕ್ಕೂ ತೋರದೆ ಒದ್ದಾಡಿದ. ಸಂಜೆ ಎಂದಿನಂತೆ ರಂಗಮ್ಮ ಪುರಾಣಕ್ಕೆ ಹೋದಮೇಲೆ ರಾಜಣ್ಣ ನಿಧಾನವಾಗಿ ರೋಹಿಣಿ ಮಲಗಿದ್ದಲ್ಲಿಗೆ ಬಂದ. ಅವನು ಬಂದುದರ ಅರಿವಾದರೂ ರೋಹಿಣಿ ತಿರುಗಿ ನೋಡಲಿಲ್ಲ. ಅಂಜುತ್ತಂಜುತ್ತಲೇ ಹತ್ತಿರ ಬಂದು ಅವಳ ಭುಜವನ್ನು ತಬ್ಬಿಕೊಂಡು ರಾಜಣ್ಣ ನುಡಿದ,

"ನನ್ನದು ತುಂಬಾ ತಪ್ಪಾಯ್ತು ರೋಹಿಣಿ, ಈ ಕಡೆ ನೋಡು ರೋಹಿಣಿ, ನನಗೆ ಏನು ಬೇಕಾದರೂ ಶಿಕ್ಷೆ ಕೊಡು ಮಾತಾಡದೆ ಹೀಗೆ ಕೊಲ್ಲಬೇಡ '



ರಾಜಣ್ಣ ಮೃದುವಾಗಿ ರೋಹಿಣಿಯ ಗಲ್ಲವನ್ನು ಹಿಡಿದೆತ್ತಿದ. ಅವನ ಕಣ್ಣುಗಳಲ್ಲಿ ಅದೇನು ಮೋಡಿಯಿತ್ತೋ!

ಒಮ್ಮೆ ಕತ್ತೆತ್ತಿ ನೋಡಿದವಳೇ ರೋಹಿಣಿ ಅವನನ್ನು ಬಲವಾಗಿ ತಬ್ಬಿಕೊಂಡಳು. ರಾಜಣ್ಣ ನಿಧಾನವಾಗಿ ಅವಳ ಬೆನ್ನು ಸವರಿದ. ಅವನ ಮೈಯ್ಯ ಶಾಖಕ್ಕೆ ಹಿಂದಿನ ದಿನದಿಂದ ಅವಳ ಹೃದಯದಲ್ಲಿ ಹೆಪ್ಪುಗಟ್ಟಿದ್ದ ದುಃಖವೆಲ್ಲ ಕರಗಿ ಕಣ್ಣೀರಾಗಿ ಹರಿಯಿತು. ರಾಜಣ್ಣ ಅವಳನ್ನು ಸಮಾಧಾನಪಡಿಸುತ್ತಲೇ ಇದ್ದ. ಪರಿಣಾಮ ಹಿಂದಿನ ದಿನದ ಪುನರಾವೃತ್ತಿ.

ಹಗಲೆಲ್ಲ ಒಬ್ಬರ ಮುಖ ತಪ್ಪಿಸಿ ಒಬ್ಬರು ಓಡಾಡುತ್ತಿದ್ದರು, ಸಂಜೆಯಾದೊಡನೆ ಯಾವುದೋ ಆಕರ್ಷಣೆ ಅವರಿಬ್ಬರನ್ನು ಒಂದುಗೂಡಿಸುತ್ತಿತ್ತು. ರಂಗಮ್ಮ ಮಗನ ಹಾಗೂ ರೋಹಿಣಿಯ ವಿಚಿತ್ರ ವರ್ತನೆ ಅರ್ಥವಾಗದೆ ಊಹಾಪೋಹಗಳಲ್ಲಿ ತೊಡಗಿದ್ದರು. ಸರೋಜಾ ಊರಿಂದ ಬರುವವರೆಗೆ ಪರಿಸ್ಥಿತಿ ಒಂದೇ ರೀತಿ ಇತ್ತು.

ಸರೋಜಾ ಸಂತೋಷವಾಗಿದ್ದಳು. ತಂದೆಯ ಆರೋಗ್ಯ ಸುಧಾರಿಸಿತ್ತು. ತಂಗಿಗೆ ಅನುಕೂಲವಾದ ಸಂಬಂಧ ಗೊತ್ತುಮಾಡಿಕೊಂಡು ಬಂದಿದ್ದಳು. ರೋಹಿಣಿಯ ವಿದ್ಯಾಭ್ಯಾಸ ಮುಗಿದ ನಂತರವೇ ಮದುವೆಯಾಗುವುದಕ್ಕೂ ಹುಡುಗ ಒಪ್ಪಿದ್ದ, ಈ ಎಲ್ಲಾ ವಿಚಾರಗಳನ್ನು ಅಕ್ಕನ ಬಾಯಿಂದ ಕೇಳಿದ ರೋಹಿಣಿಯ ಮುಖ

ಕಪ್ಪಿಟ್ಟಿತು. ರಾಜಣ್ಣ ಪೆಚ್ಚಾದ, ಗಂಡ, ತಂಗಿ ತೋರಿಸಿದ ಪ್ರತಿಕ್ರಿಯೆಯನ್ನು ಕಂಡು ಸರೋಜಾ ತಬ್ಬಿಬ್ಬಾದಳು. ಕಾರಣವನ್ನು ಪ್ರಶ್ನಿಸುವಂತೆ ಅತ್ತೆಯ ಮುಖ ನೋಡಿದಳು. ತನಗೇನು ತಿಳಿದಿಲ್ಲ ಎನ್ನುವಂತೆ ಆಕೆಯು ತಲೆಯಾಡಿಸಿದರು. ಆ ದಿನವೇನೋ ವಿಷಯ ಅಲ್ಲಿಗೆ ನಿಂತಿತು

ಆದರೆ ಸರೋಜೆಯ ಸೂಕ್ಷ್ಮದೃಷ್ಟಿಗೆ ನಡೆದದ್ದನ್ನು ಕಂಡು ಹಿಡಿಯುವುದಕ್ಕೆ ಕಷ್ಟವೇನು ಆಗಲಿಲ್ಲ, ವಿಷಯ ಅರ್ಥವಾದಾಗ ಸರೋಜಾ ಸಿಟ್ಟಿನಿಂದ ಕೆಂಡವಾದಳು. ಎಲ್ಲರನ್ನು ಸುಟ್ಟು ಭಸ್ಮ ಮಾಡಬೇಕು ಎನ್ನುವಷ್ಟು ಅವಳಿಗೆ ಸಿಟ್ಟು ಬಂತು. ತನ್ನನ್ನು ಬಿಟ್ಟು ಬೇರೆ ಹೆಣ್ಣನ್ನು ಕಣ್ಣೆತ್ತಿಯೂ ನೋಡಲಾರ ಎಂದುಕೊಂಡಿದ್ದ ರಾಜಣ್ಣ ತಂಗಿಯಂತೆ, ಮಗಳಂತೆ ಬೆಳೆಸಿದ್ದ ರೋಹಿಣಿಯನ್ನು ಕಾಮದ ದೃಷ್ಟಿಯಿಂದ ನೋಡಿದ ಎನ್ನುವುದನ್ನು ನೆನಸಿಕೊಂಡರೆ ಜಿಗುಪ್ಸೆಯಿಂದ ಅವಳ ಮೈ ಮೇಲೆಲ್ಲಾ ಮುಳ್ಳು ಎದ್ದಂತಾಯಿತು. ಬೇಸರ, ನಿರಾಸೆ, ಅಸೂಯೆ,ಸಿಟ್ಟು ಹೀಗೆ ವಿಧ ವಿಧ ಭಾವನೆಗಳ ಒತ್ತಡಕ್ಕೆ ಸಿಕ್ಕು ಸರೋಜಾ ಎರಡೇ ದಿನಗಳಲ್ಲಿ ರೋಗಿಯಂತಾದಳು.. ರೋಹಿಣಿಯ ಪಾಲಿಗಂತೂ ಮನೆ ಪ್ರತ್ಯಕ್ಷ ನರಕವಾಯಿತು.ಇಷ್ಟೇ ಸಾಲದು ಎನ್ನುವಂತೆ ಮುಂದೆ ಕೆಲವೇ ದಿನಗಳಲ್ಲಿ ಪರಿವರ್ತನೆ ಸರೋಜಾ ಗಮನಕ್ಕೂ ಬಂತು. ವಿಷಯ ತಿಳಿದ ರಂಗಮ್ಮ ಹೌಹಾರಿದರು. ಇನ್ನು ತಡ ಮಾಡುವಂತೆ ಇರಲಿಲ್ಲ ಯಾವುದಾದರೂ ಒಂದು ನಿಷ್ಕರ್ಷಕ್ಕೆ ಬರಲೇಬೇಕು.. ಮೊದಲು ರೇಗಾಡಿದರೂ ಕೊನೆಗೆ ರಂಗಮ್ಮನೆ ತೀರ್ಪುಕೊಟ್ಟರು.



"ಎಲ್ಲಾ ಪ್ರಪಂಚ ಮುಳುಗಿ ಹೋದವರ ಹಾಗೆ ಯಾಕಾಡ್ತಿದೀರಾ? ನನ್ನ ಮಗನಿಗೆ ಕಡಿಮೆ ಆಗಿರುವುದೇನು? ರೋಹಿಣಿಯನ್ನೂ ಅವನೇ ಮದುವೆ ಆಗ್ತಾನೆ

ಈಗ ಅವರೆಲ್ಲರ ಮುಂದೆ ಇದ್ದ ಮಾರ್ಗ ಅದೊಂದೇ, ಯಾರೋ ಹೇಳಿದರು; ಒಬ್ಬ ಹೆಂಡತಿ ಬದುಕಿದ್ದಾಗಲೇ ಇನ್ನೊಂದು ಮದುವೆ ಆಗುವುದು ಕಾನೂನಿಗೆ ವಿರುದ್ಧ ಎಂದು. ಆದರೆ, ದೂರಿತ್ತರಲ್ಲವೇ ಕಾನೂನನ್ನು ಜಾರಿಗೆ ತರುವುದು; ದೂರು ಕೊಡುವವರು ಯಾರು?ಯಾರ ಮೇಲೆ? ತನ್ನ ಸರ್ವಸ್ವವೆಂದು ಭಾವಿಸಿದ್ದ ಪತಿಯ ಮೇಲೆ, ಮಗಳಿಗಿಂತ ಹೆಚ್ಚಾದ ಮಮತೆಯಿಂದ ಬೆಳೆಸಿದ್ದ ತಂಗಿಯ ಮೇಲೆ ಸರೋಜಾ ದೂರು ಕೊಡುವುದಾದರೂ ಸಾಧ್ಯವೇ? ಅಂತೂ ಇಷ್ಟವಿರಲಿ,ಬಿಡಲಿ ಮದುವೆಗಂತೂ ಎಲ್ಲರ ಒಪ್ಪಿಗೆಯೂ ದೊರೆಯಿತು. ತಿರುಪತಿಯಲ್ಲಿ ರಾಜಣ್ಣನೊಂದಿಗೆ ರೋಹಿಣಿಯ ಮದುವೆ ನಡೆದೇ ಹೋಯಿತು.

ಮದುವೆಯ ದಿನವೇ ರೋಹಿಣಿಯ ಉತ್ಸಾಹ, ಹುಡುಗಾಟ ಎಲ್ಲಾ ಸತ್ತುಹೋದವು. ಅವಳ ಮನಸ್ಸಿನ ಆಶಾಗೋಪುರ ದೊಪ್ಪೆಂದು ಕುಸಿದುಬಿದ್ದಿತ್ತು. ಅವಳು ರಾಜಣ್ಣನನ್ನು ಪ್ರೀತಿಸುತ್ತಿದ್ದು ನಿಜ. ಆದರೆ ರಾಜು ಭಾವ

ಎನ್ನುವ ಭಾವನೆಯಿಂದ ಮಾತ್ರ. ಆದರೆ ಅವನನ್ನೇ ತನ್ನ ಗಂಡ ಎಂದು ಕಲ್ಪಿಸಿಕೊಳ್ಳುವುದೂ ಅವಳಿಗೆ ಅಸಹನೀಯವಾಗಿತ್ತು. ಅವಳ ಕಲ್ಪನೆಯಲ್ಲಿದ್ದ ರಾಜಕುಮಾರ ಬೇರೆ, ಆ ರಾಜಕುಮಾರನ ಚಿತ್ರ ಸ್ಪಷ್ಟವಾಗಿ ರೂಪುಗೊಳ್ಳುವಷ್ಟರಲ್ಲಿ ಕಲ್ಪನೆಯ ಮುಖಕ್ಕೆ ಮಸಿ ಬಿದ್ದಿತ್ತು. ವಸ್ತುಸ್ಥಿತಿಗೆ ಹೊಂದಿಕೊಳ್ಳಲಾರದೆ, ಪರಿಸ್ಥಿತಿಯನ್ನು ಮೀರಿ ಬದುಕಲೂ ಆಗದೆ ಊರನ್ನೇ ಬಿಟ್ಟು ಓಡಿ ಬಂದಿದ್ದಳು ರೋಹಿಣಿ, ಅವಳ ಮದುವೆಗೆ ಕಾರಣವಾಗಿದ್ದ ಮಗು ಶಶಿ ಸರೋಜೆಯ ಹತ್ತಿರವೇ ಬೆಳೆಯುತ್ತಿತ್ತು.ಬೇಕು ಎನ್ನಿಸುವ ಮುಂಚೆಯೇ ಹುಟ್ಟಿದ ಮಗುವಿನ ಬಗ್ಗೆಯೂ ಅವಳ ಮನಸ್ಸಿನಲ್ಲಿ ಸೆಳೆತವಿರಲಿಲ್ಲ.ಇರಲಿಲ್ಲ.ಆಗೊಮ್ಮೆ ಈಗೊಮ್ಮೆ ಮಗುವಿನ ನೆನಪು ಬಂದರೂ ಒಂಟಿತನದ ಶೂನ್ಯತೆ ರೋಹಿಣಿಯ ಬಾಳನ್ನು ನುಂಗಿತ್ತು.

'ಬರೀ ಡಬ್ಬಿಂಗ್ ಎಷ್ಟು ಹೊತ್ತು ಮಾಡ್ತೀರಿ?...ಅರೆ, ಎಲ್ಲಾ ಮುಗಿದು ಹೋಗಿದೆಯಲ್ಲ ರೋಹಿಣಿ, ಬೇಗ ಟೇಪು ತೆಗಿಯಮ್ಮ, ನನಗೂ ಸ್ವಲ್ಪ ಕೆಲಸ ಇದೆ."

ಹತ್ತಿರದಿಂದ ಬಂದ ನುಡಿ ಗತಕಾಲದಲ್ಲಿ ಸಂಚರಿಸುತ್ತಿದ್ದ ರೋಹಿಣಿಯ ಮನಸ್ಸನ್ನು ವರ್ತಮಾನಕ್ಕೆ ಎಳೆತಂದಿತು. ರೋಹಿಣಿ ಗಡಬಡಿಸಿ ಎದ್ದಳು. ಟೇಪನ್ನು ಹಿಂದಕ್ಕೆ ತಿರುಗಿಸಿ, ಮಿಷಿನ್ನಿಂದ ತೆಗೆದು ಪೆಟ್ಟಿಗೆಯಲ್ಲಿಟ್ಟು ಹೊರ ನಡೆದಳು.

# ಪುಷ್ಪಕ

**- ಡಾ. ಅನುಪಮಾ ನಿರಂಜನ**

ಸೀಮೆಯೆಣ್ಣೆ ಸ್ಟವ್ ಉರಿಯುತ್ತಿತ್ತು. ಅದರ ಮೇಲೆ ಕಬ್ಬಿಣದ ಬಾಣಲೆಯಲ್ಲಿ ಕೋಡುಬಳೆಗಳನ್ನು ಕರಿಯುತ್ತಿದ್ದಳು ಪಾರ್ವತಮ್ಮ. ಅಡುಗೆಮನೆಗೆ ಹೊಂದಿಕೊಂಡಿದ್ದ ಹಜಾರದಲ್ಲಿ ನಾಗಪ್ಪ ರಾಮಾಯಣ ಗ್ರಂಥವನ್ನು ಓದುತ್ತಾ ಕುಳಿತಿದ್ದರು. ಇದ್ದಕ್ಕಿದ್ದ ಹಾಗೆ ಹೊರಗೆ ಏರೋಪ್ಲೇನ್ ಹೋಗುವ ಶಬ್ದ ಕೇಳಿಸಿತು. ಅದನ್ನು ಕೇಳಿದೊಡನೆ ಪಾರ್ವತಮ್ಮನ ಮುಖ ಊರಗಲವಾಯಿತು. ಅವಳು ಮೇಲೆದ್ದು ಹಜಾರ ದಾಟಿ ಬಾಗಿಲಾಚೆಗೆ ನಿಂತು ಬಿಸಿಲಿಗೆ ಕೈ ಅಡ್ಡ ಹಿಡಿದು ಆಕಾಶದಲ್ಲಿ ತೇಲುತ್ತಿದ್ದ ವಿಮಾನವನ್ನು ಕಂಡಳು. ಅವಳ ಬಚ್ಚಬಾಯಿಯಲ್ಲಿ ಅಳಿದುಳಿದಿದ್ದ ನಾಲ್ಕು ಹಲ್ಲುಗಳು ಬಿರಿದ ತುಟಿಯಂಚಿನಿಂದ ಇಣುಕಿ ಮುಗಿಲು ನೋಡಿದುವು.

"ತಲೆ ಕೂದಲೆಲ್ಲಾ ಬೆಳ್ಗಾದ್ರೂ ನಿನ್ನ ಮೆದುಳಿಗೆ ಒಂದಿಷ್ಟು ಬುದ್ಧಿ ಬಲ್ಲಿಲ್ಲ!" ಎಂದರು ನಾಗಪ್ಪ ಓದುತ್ತಿದ್ದ ಪುಸ್ತಕದಿಂದ ತಲೆಯನ್ನು ಮೇಲೆತ್ತಿ.

"ಚಕ್ಕುಲಿ ಕೋಡಳೆ ಮಾಡೋದಕ್ಕೆ ಬುದ್ಧಿ ಯಾಕ್ಬೇಕು ಬಿಡಿ! ಅದನ್ನೆಲ್ಲಾ ನಿಮ್ಮ ಕೊಟ್ಟು ಬಿಟ್ಟಿದೀನಿ. ಸರ್ವಿಸಿನಲ್ಲಿರೋವಾಗ ಪೋಸ್ಟ್ ಆಫೀಸನ್ನೆಲ್ಲಾ ನೀವು ಉದ್ಧಾರ ಮಾಡಿದ್ದು ನಂಗೊತ್ತಿಲ್ವೆ?" ಎಂದು ಪಾರ್ವತಮ್ಮ ಮೊನಚಾಗಿ ನುಡಿದು ಅಡುಗೆ ಮನೆಗೆ ಹೋದಳು.

ಪೋಸ್ಟ್ ಆಫೀಸಿನಲ್ಲಿ ಕಾರಕೂನನಾಗಿ ತಾನು ಸಾಧಿಸಿದ್ದೇನು? ಎಂದು ನಾಗಪ್ಪ ಯೋಚಿಸಿದರು. ಏನೂ ಇಲ್ಲ. ಮಕ್ಕಳಿಬ್ಬರ ವಿದ್ಯಾಭ್ಯಾಸ, ಮದುವೆಗಳು, ತಮ್ಮ ಹೊಟ್ಟೆಪಾಡು, ಇಷ್ಟೆ, ಸ್ವಂತಕ್ಕಾಗಿ ಒಂದು ಮನೆಯನ್ನು ಕೊಂಡುಕೊಳ್ಳುವುದೂ ತನ್ನಿಂದ ಸಾಧ್ಯವಾಗಲಿಲ್ಲ. ಒಂದು ಹಜಾರ, ಅಡುಗೆ ಮನೆಯ ಈ ಬಂಗಲೆಗೆ ತಿಂಗಳಿಗೆ ಮೂವತ್ತೈದು ರೂಪಾಯಿ ಬಾಡಿಗೆ, ಅಕ್ಕಿ ಬೇಳೆ ಎಲ್ಲವೂ ದುಬಾರಿ. ಪೆನಷನ್‌ನಲ್ಲಿ ಇಬ್ಬರ ಸಂಸಾರ ಹೇಗೆ ಸಾಗಬೇಕು ಎಂದುಕೊಳ್ಳುತ್ತಿರುವಾಗ, ಈಗ, ವೈರಾಗ್ಯ ಬರಲು ಆರಂಭವಾಗಿದೆ. ಅದಕ್ಕಾಗಿಯೇ ಸಂಜೆಯ ಹೊತ್ತು ರಾಮಾಯಣ, ಮಹಾಭಾರತಗಳ ಪಾರಾಯಣ ಮಾಡುವುದು. ಪಾರಾಯಣ ಮಾಡಿದರೇನು ಬಂತು? ಮನಸ್ಸು ಎಲ್ಲೆಲ್ಲೋ ಸುತ್ತುತ್ತಿರುತ್ತದೆ. ಉದಾಹರಣೆಗೆ ಇವಳು ವಿಮಾನವನ್ನು ನೋಡಲು ಮಗುವಿನ ಗೆ ಓಡಿ ಬರುವಾಗ ತನಗೆ ಸಿಟ್ಟು ನೆತ್ತಿಗೇರುತ್ತದೆ. ಅವಳನ್ನು ಗೇಲಿಮಾಡಿ ನೋಯಿಸುವ ಮನಸ್ಸಾಗುತ್ತದೆ.

ನಾಗಪ್ಪ ಎದುರಿಗಿನ ಪುಸ್ತಕದ ಮೇಲೆ ಕಣ್ಣುಹಾಯಿಸಿದರು:

“ರಾವಣಸಂಹಾರವಾದ ಮೇಲೆ ಶ್ರೀರಾಮಚಂದ್ರ ವಿಭೀಷಣನಿಗೆ ಪಟ್ಟ ಕಟ್ಟಿದ. ಅನಂತರ ಸೀತೆಯೊಂದಿಗೆ ಪುಷ್ಪಕ ವಿಮಾನದಲ್ಲಿ ಅಯೋಧ್ಯೆಗೆ ಪಯಣ ಬೆಳೆಸಿದ.. ಅವನೊಂದಿಗೆ ಲಕ್ಷ್ಮಣನೂ ಸಕಲ ವಾನರ ಪರಿವಾರವೂ ಹೊರಟಿತು...

” ಪುಷ್ಪಕ ವಿಮಾನ

ರಾಮಾಯಣದ ಕಾಲದಲ್ಲೂ ವಿಮಾನವಿತ್ತೆ ಹಾಗಾದರೆ? ವಾನರಸೇನೆಯೆಲ್ಲಾ ತುಂಬಬೇಕಾದ ಬಹುದೊಡ್ಡ ವಿಮಾನವೇ ಇರಬೇಕು. ನಾವು ವಿಮಾನ ಕಂಡದ್ದು ಇಪ್ಪತ್ತನೆಯ ಶತಮಾನದಲ್ಲಿ ಬಹುಶಃ ಪುಷ್ಪಕ ಕವಿ ಕಲ್ಪನೆಯೆ? ಪುರಾಣಕತೆಗಳಲ್ಲಿ ಅನೇಕ ಪುಣ್ಯಪುರುಷರು ಸತ್ತಾಗ ಅವರ ಆತ್ಮವನ್ನು ಒಯ್ಯಲು ದೇವತೆಗಳ ವಿಮಾನ ಭೂಮಿಗೆ ಬರುತ್ತಿತ್ತಂತೆ ಇವನ್ನೆಲ್ಲ ನಂಬಬಹುದೆ? ಆದರೆ ಮರುಕ್ಷಣ ನಾಗಪ್ಪನವರಿಗೆ ಹೆದರಿಕೆಯಾಯಿತು. ಪುರಾಣಗಳನ್ನು ಪ್ರಶ್ನಿಸಬಾರದು. ಅದು ಪಾಪ. ಇದ್ದದ್ದು ಇದ್ದ ಹಾಗೆಯೇ ನಂಬಬೇಕು.

“ಉಪ್ಪು ಖಾರ ಸರಿಯಾಗಿದ್ದೋ ನೋಡಿ” ಎಂದು ಪಾರ್ವತಮ್ಮ ಎರಡು ಕೋಡುಬಳೆಗಳನ್ನು ತಂದು ತಟ್ಟೆಯಲ್ಲಿ ಇರಿಸಿ ಗಂಡನ ಮುಂದೆ ಹಿಡಿದಳು. ಘಮಘಮನೆ ಬರುತ್ತಿದ್ದ ಪರಿಮಳ, ಬಂಗಾರದ ಬಣ್ಣ, ನಾಗಪ್ಪ ಬಾಯಿ ಚಪಲ ತಡೆಯಲಾರದೆ ಅದನ್ನು ಮುರಿದು ಬಾಯಿಯಲ್ಲಿ ಹಾಕಿಕೊಂಡು ಸರಿಯಾಗಿದೆ” ಎಂದರು. ಚೆನ್ನಾಗಿದೆ ಎಂದರೆ ಹೆಂಡತಿ ಉಬ್ಬಿ ಹೋಗುವಳೆಂದು ಆ ಮಾತು ಹೇಳಲಿಲ್ಲ.

“ಡಾಕ್ಟರ್ ದಮಯಂತಿ ತಾಯಿ ಸುನಂದಮ್ಮ ಹೇಳಿದ್ರು ಒಂದು ಕೆಜಿ. ಅಳ್ಳೇದು ಮಾಡ್ಕೊಡಿ ಅಂತ. ಅವರ ಮನೆಗೆ ಯಾರೊ ಬರ್ತಾರಂತೆ!”

ತಿಂಡಿಯನ್ನು ಸವಿಯುತ್ತಿದ್ದ ನಾಗಪ್ಪ ಮಾತನಾಡಲಿಲ್ಲ. ಪಾರ್ವತಮ್ಮ ಒಳಗೆ ಹೋದಳು. ಖಾಲಿಯಾಗಿ ಹೊಗೆ ಕಾರುತ್ತಿದ್ದ ಎಣ್ಣೆಯಲ್ಲಿ ಇನ್ನಷ್ಟು ಕೋಡುಬಳೆಗಳನ್ನು ತೇಲಿಬಿಟ್ಟಳು.

ಅಲ್ಲ, ಈ ವಿಮಾನದ ಹುಚ್ಚು ನನಗ್ಯಾಕೆ ಅಂಟಿಕೊಂಡೀತು? ಅಂದುಕೊಂಡಳು. ಸುಮಾರು ಹತ್ತು ಹದಿನೈದು ವರ್ಷ ಹಿಂದಿನ ಮಾತು ಅವರ ಸಂಬಂಧಿಕನೊಬ್ಬ ಇಂಗ್ಲೆಂಡಿನಲ್ಲಿ ಓದು ಮುಗಿಸಿ ವಾಪಸು ಬಂದಿದ್ದ. ನೆರೆದ ನೆಂಟರಿಷ್ಟರ ಮುಂದೆ ಕುಳಿತು ತನ್ನ ಸಾಹಸಗಳನ್ನು ಅವನು ವರ್ಣಿಸುತ್ತಿರುವಾಗ ವಿಮಾನ ಪ್ರಯಾಣವನ್ನು ಬಣ್ಣಿಸಿದ್ದ ಸ್ವರ್ಗಕ್ಕೆ ಹೋದ ಅನುಭವವಾಗ್ತದೆ” , ಎಂದು ನಕ್ಕು ನುಡಿದಿದ್ದ. ಸ್ವರ್ಗಕ್ಕೆ ಹೋದವರು ವಾಪಸ್ಸು ಭೂಲೋಕಕ್ಕೆ ಬರಬಹುದೆ? ಎನಿಸಿತ್ತು ಪಾರ್ವತಮ್ಮನಿಗೆ

“ವಿಮಾನದಲ್ಲಿ ಛಾರ್ಜು ಎಷ್ಟಾಗುತ್ತೋ?' ಎಂದು ಪಾರ್ವತಮ್ಮ ಹೆದರಿ ಹೆದರಿ ಪ್ರಶ್ನಿಸಿದ್ದಳು.

ಸಂಬಂಧಿಕ ಅವಳ ಕಡೆಗೆ ತಿರುಗಿ ತಿರಸ್ಕಾರದಿಂದ ನಕ್ಕು ಅಂದಿದ್ದ:

ನಿಮ್ಮಂಥೋರಿಗಲ್ಲ ಅದು. ರೈಲು ಛಾರ್ಜಿಗಿಂದ ಮೂರುಪಟ್ಟು ನಾಲ್ಕು ಪಟ್ಟು ಆಗುತ್ತೆ!'



ಆ ಕ್ಷಣದವರೆಗೂ ಪಾರ್ವತಮ್ಮನಿಗೆ ತಾನು ವಿಮಾನದಲ್ಲಿ ಕುಳಿತುಕೊಳ್ಳಬೇಕು ಎಂಬ ಬಯಕೆ ಇರಲಿಲ್ಲ. ಆದರೆ ಆತ ಹಾಗೆಂದಮೇಲೆ ಅವಳಲ್ಲಿ ಆ ಹಟ ಇದ್ದಕ್ಕಿದ್ದ ಹಾಗೆ ಬೇರುಬಿಟ್ಟಿತು. ನಿಮ್ಮಂಥೋರಗಲ್ಲ ಅಂದಿದ್ದನಲ್ಲ ಅವನು. ಹಣದ ವಿಷಯ ತಾನೆ? ಅದನ್ನು ಹೇಗಾದರೂ ಸಂಪಾದಿಸಬಹುದು.

ನಾಗಪ್ಪನ ಸಂಪಾದನೆ ತಿಂಗಳಿಗೆ ಇನ್ನೂರು ರೂಪಾಯಿ. ಇದರಲ್ಲಿ ಹೊಟ್ಟೆ ಪಾಡು, ಮಗನ ವಿದ್ಯಾಭ್ಯಾಸ, ಮಗಳ ಮದುವೆ ಎಲ್ಲಾ ಆಗಿ ಈಗ ಉಳಿದದ್ದು ಬರೀ ಬಡತನ. ಮಗ ಕೆಲಸ ಸಿಕ್ಕಿ ಹೆಂಡತಿಯೊಂದಿಗೆ ಬೇರೆ ಊರಿಗೆ ಹೋದಾಗ, ಖಾಲಿ ಮನೆಯಲ್ಲಿ ಬೇಸರ ಬಂದು ಪಾರ್ವತಮ್ಮ ಅಕ್ಕಪಕ್ಕದ ಮನೆಯವರಿಗೆ, ತಿಂಡಿ ಮಾಡಿಕೊಡಲು ಆರಂಭಿಸಿದ್ದಳು. ರೂಪಾಯಿಗಳು ಬಲು ನಿಧಾನವಾಗಿ ಮುರುಕಲು ಟ್ರಂಕಿನ ಸೀರೆಯಡಿಯಲ್ಲಿ ಜಮಾವಣೆಯಾಗುತ್ತಿದ್ದುವು.

ಒಮ್ಮೊಮ್ಮೆ ಮನೆಯಲ್ಲಿ ಅಕ್ಕಿಬೇಳೆ ಕಡಿಮೆಯಾದಾಗ ನಾಗಪ್ಪ ಅನ್ನುತ್ತಿದ್ದರು

“ನಿನ್ನ ಟ್ರಂಕಿನಲ್ಲಿರೋ ರೂಪಾಯಿ ತೆಗೆ, ಮನೆ ಖರ್ಚೆಲ್ಲ ನನ್ನ ಪೆನ್‌ಷನ್‌ನಿಂದಾನೇ ಆಸ್ಬೇಕು ಅಂತ ರೂಲ್ಸ್ ಮಾಡಿದೀಯ?

'ರೂಲ್ಸ್ ಅಲ್ಲ. ಟ್ರಂಕಿನಲ್ಲಿ ಇರೋದನ್ನ ಮುಟ್ಟೋಹಾಗಿಲ್ಲ. ಅದು ದೇವರಿಗೆ ಮುಡುಪಿಟ್ಟ ಹಾಗೆ!'

ನಾಗಪ್ಪ ಕನಲಿ ನುಡಿಯುತ್ತಿದ್ದರು;

“ಶುದ್ಧ ಮೂರ್ಖತನ ನೀನು ವಿಮಾನದಲ್ಲಿ ಎಲ್ಲಿಗೆ ಹೋಗ್ತಿಯ?” “ಹೋಗ್ತಿನೋ ಬಿಡ್ತೀನೋ ಬೇರೆ ಮಾತು ಅದ್ರೆ ಟ್ರಂಕಿನಲ್ಲಿರೋದರ ವಿಷ್ಯ ಮಾತ್ರ ಮಾತಾಡೇಡಿ. ಅನ್ನ ಕಡಿಮೆ ಆದ್ರೆ ನಾನು ಉಪವಾಸನಾದ್ರೂ ಮಾಡ್ತೀನಿ. ನಿಮಗೆ ಮಾತ್ರ ಏಕಾದಶಿ ಮಾಡೋದಿಲ್ಲ. ಧೈರವಾಗಿರಿ!'

ಅವುಗಳ ಸ್ಮರಣೆಯಿಂದ ಮುಗುಳುನಗುತ್ತಾ ಮಾಡಿದ ತಿಂಡಿಯಲ್ಲಿ ತಮಗಾಗಿ ಸ್ವಲ್ಪ ತೆಗೆದಿರಿಸಿಕೊಂಡು ಉಳಿದುವನ್ನೆಲ್ಲಾ ಪಾತ್ರೆಯೊಂದರಲ್ಲಿ ತುಂಬಿಟ್ಟಳು ಪಾರ್ವತಮ್ಮ. ಸುನಂದಮ್ಮನ ಮನೆಗೆ ಯಾರೋ ಬರುತ್ತಾರಂತೆ

ಅವರ ಮಗಳನ್ನು ಡಾಕ್ಟರನ್ನು ನೋಡಲು ಬರಬಹುದೆ? ದಮಯಂತಿ ಬಲು ಒಳ್ಳೆಯ ಹುಡುಗಿ, ಡಾಕ್ಟರ್ ಆಗಿ ನಾಲ್ಕು ವರ್ಷವಾಯಿತು. ಈಗ ಮತ್ತೇನೋ ಓದಲು ಹೋಗುತಿದ್ದಾಳೆ. ಅವಳನ್ನು ಮದುವೆಯಾಗುವ ಹುಡುಗ ಪುಣ್ಯ ಮಾಡಿರಬೇಕು. ದಮಯಂತಿಯ ನಗೆ, ಮೆಲುಮಾತು, ಕಾಲು ಮುಟ್ಟುವ ಉದ್ದನೆಯ ಜಡೆ... ಜಡೆ ತುಂಬಾ ಉದ್ದವಿದ್ದರೂ ಒಳ್ಳೆಯದಲ್ಲವಂತೆ...

ಆಕೆ ಮೇಲೆದ್ದಳು, ಏನೋ ಒದ್ದೆಯಾದ ಹಾಗೆ ಅನಿಸಿತು. ಸೀರೆಗೆ ನೀರು ಅಂಟಿಕೊಂಡಿದೆಯೇನೋ ಎಂದು ಮುಟ್ಟಿ ನೋಡಿಕೊಂಡಳು ಕೈಕೆಂಪಾಯಿತು. ಮನಸ್ಸಿಗೆ ಗಾಬರಿ, ಮುಟ್ಟು ನಿಂತು ಹತ್ತು ವರ್ಷ ಕಳೆದಿತ್ತು. ಅದಲ್ಲ ಅನಿಸಿತು. ಕುರುವೇನಾದರೂ ಆಗಿ ಒಡೆಯಿತೆ? ಎಂದುಕೊಂಡಾಗ, ನೋವೇನೋ ಇರಲಿಲ್ಲ. ಕುರು ಆಗಿ ಒಡೆಯುವುದು ಹೇಗೆ ಸಾಧ್ಯ ಎಂದುಕೊಂಡಳು. ಬಚ್ಚಲು ಮನೆಗೆ ಹೋಗಿ ಸ್ವಚ್ಛ ಮಾಡಿಕೊಂಡು ಸೀರೆ ಬದಲಾಯಿಸಿಕೊಂಡು ಬಂದಾಗ ಯಾಕೋ ಏನೋ ಭಯ ಆಯಿತು. ಹ್ಯಾಗೂ



ಡಾಕ್ಟರ್ ದಮಯಂತಿ ಮನೆಗೆ ಹೋಗುತ್ತೇನೆ, ತೋರಿಸಿಕೊಂಡು ಬರಬಹುದು... ಎಂದುಕೊಂಡಳು. ಆದರೆ ಬೇಡ ನೋಡೋಣ ಇಷ್ಟಕ್ಕೆಲ್ಲಾ ಗಾಬರಿಯಾದರೆ ಹೇಗೆ? ಏನೋ ಉಷ್ಣ ಆಗಿರಬೇಕು. ಒಂದಿಷ್ಟು ಬಾರ್ಲಿ ನೀರು, ಮಜ್ಜಿಗೆ ಬಳಸಿದರೆ...

ಒಂದು ತಿಂಗಳು ಕಳೆದ ಬಳಿಕ ರಕ್ತಸ್ರಾವ ಮರುಕಳಿಸಿತು. ಈ ಬಾರಿ ಪಾರ್ವತಮ್ಮನಿಗೆ ನಿಜವಾಗಿಯೂ ಭೀತಿಯಾಯಿತು. ಅವಳು ನೆರೆಮನೆಯ ಡಾಕ್ಟರ್ ದಮಯಂತಿಯ ಬಳಿಗೆ ಹೋದಳು.

"ಮುಟ್ಟು ನಿಂತ ಬಳಿಕ ಹೀಗಾಗೋದು ಅಪಾಯ, ಪಾರ್ವತಮ್ಮ ನಾಳೆ ಆಸ್ಪತ್ರೆಗೆ ಬನ್ನಿ, ಪರೀಕ್ಷೆ ಮಾಡ್ತೀನಿ ಹಾಗೆ ನಮ್ಮ ಬಾಸ್‌ಗೂ ತೋರಿಸ್ತೀನಿ" ಎಂದಳು ದಮಯಂತಿ,

ಮರುದಿನ ಆಸ್ಪತ್ರೆಯಲ್ಲಿ ಪಾರ್ವತಮ್ಮನ ಗರ್ಭಕೋಶ ಪರೀಕ್ಷೆ ಮಾಡಿದಾಗ ದಮಯಂತಿಗೆ ಆತಂಕವಾಯಿತು. ಗರ್ಭಕೋಶದ ಬಾಯಿಯ ತುಂಬಾ ಹುಣ್ಣುಗಳಿದ್ದುವು. ಗೌವ್, ಹಾಕಿಕೊಂಡ ಬೆರಳುಗಳು ಅವನ್ನು ಮುಟ್ಟಿದೊಡನೆ ರಕ್ತಸ್ರಾವವಾಗುತ್ತಿತ್ತು. ಅದು ಕ್ಯಾನ್ಸರ್ ಎಂಬುದರಲ್ಲಿ ದಮಯಂತಿಗೆ ಸಂಶಯವಿರಲಿಲ್ಲ. ಆದರೂ ಅವಳು ಬಾಸ್ ಡಾ|| ಮಂಜೇಕರ್ ಅವರಿಗೂ ತೋರಿಸಿದಳು.

"ತಕ್ಷಣ ಅಪರೇಷನ್ ಮಾಡೋಣ" ಎಂದರು ಡಾ|| ಮಂಜೇಕರ್.

ಭಯದಿಂದ ಪಾರ್ವತಮ್ಮನ ಜಂಘಾಬಲವೇ ಉಡುಗಿ ಹೋಯಿತು.

"ಆಪ್ರೇಷನ್ ಮಾಡ್ಸಿಕೊಳ್ಳದಿದ್ರೆ ಏನಾಗುತ್ತೆ?" ಎಂದು ಅವಳು ದಮಯಂತಿಯನ್ನು ಕೇಳಿದಳು.

"ಕಾಯಿಲೆ ಆಚೆಚೆ ಹರಡುತ್ತೆ ಒಂದೆರಡು ತಿಂಗಳಲ್ಲಿ ಸತ್ತುಹೋಗ್ತಿರ" ಈ ಡಾಕ್ಟರುಗಳು ಹೇಗೆ ಕಡ್ಡಿ ತುಂಡು ಮಾಡಿದ ಹಾಗೆ ಮಾತಾಡುತ್ತಾರೆ ಎಂದು ಪಾರ್ವತಮ್ಮನಿಗೆ ಸಿಟ್ಟುಬಂತು. ಆದರೆ ಆಕೆಗೆ ಸಾಯುವುದು ಬೇಕಾಗಿರಲಿಲ್ಲ. ಇನ್ನೂ ಸಾವಿರ ಆಸೆಗಳನ್ನು ಕಟ್ಟಿಕೊಂಡು ಜಗತ್ತು ಬಿಡುವುದು ಹೇಗೆ? ಏನಾದರೂ ಆಗಲಿ, ಅಪರೇಷನ್ ಮಾಡಿಸಿಕೊಳ್ಳುತ್ತೇನೆ ಎಂದುಕೊಂಡಳು. ಟ್ರಂಕಿಗೆ ಬೀಗ ಹಾಕಿ ಅದರ ಬೀಗದಕೈಯನ್ನು ಸುನಂದಮ್ಮನವರ ಹತ್ತಿರ ಕೊಟ್ಟು.

"ನಮ್ಮವರ ಹತ್ರ ಕೊಡೋಡಿ. ತೀರಾ ಅಪತ್ಕಾಲ ಬಂದ ಹೊರತು.." ಎಂದಳು.

ನಾಗಪ್ಪನವರ ತಾರು ಕಂಡ ಕೂಡಲೇ ಮಗ ಕೇಶವ ಧಾವಿಸಿ ಬಂದ. ಮಗಳ ಮಾವನಿಗೆ ತುಂಬಾ ಕಾಯಿಲೆಯಾಗಿದ್ದುದರಿಂದ ಅವಳು ಬರುವುದು ಸಾಧ್ಯವಾಗಲಿಲ್ಲ. ಸಿರಿಯೂರಿನ ಆಸ್ಪತ್ರೆಯಲ್ಲಿ ಅಪರೇಷನ್ ಸಿದ್ಧತೆ ನಡೆಯಿತು. ಎಂ.ಎಸ್. ಪೋಸ್ಟ್ ಗ್ರಾಜುಯೇಟ್ ಆಗಿದ್ದ ದಮಯಂತಿ ಬಾಸ್‌ಗೆ ಸಹಾಯ ಮಾಡಲು ನಿಲುವಂಗಿ ಟೊಪ್ಪಿ ಧರಿಸಿ ಓಟಿಯಲ್ಲಿ ಪಾರ್ವತಮ್ಮನ ಮುಂದೆ ನಿಂತು.

"ಗುರುತು ಸಿಕ್ತಾ?" ಎಂದು ಕೇಳಿದಾಗ ಪಾರ್ವತಮ್ಮ ಕಕ್ಕಾಬಿಕ್ಕಿ.

"ನಾನು ದಮಯಂತಿ ಇಲ್ಲೇ ಇರ್ತಿನಿ, ಏನೂ ಹೆದರೋಬೇಡಿ" ಎಂದು ಅವಳು

ಹೇಳುತ್ತಿರುವಾಗಲೇ ಅನಸ್ತಿಸ್ಟ್ ಚುಚ್ಚುಮದ್ದೊಂದನ್ನು ಪಾರ್ವತಮ್ಮನ ನಾಳಕ್ಕೆ ಚುಚ್ಚಿದರು. ಆಕೆಗೆ ಕ್ಷಣಮಾತ್ರದಲ್ಲಿ ನಿದ್ದೆ ಬಂತು.

ಡಾ|| ಮಂಜೇಕರ್ ಪಾರ್ವತಮ್ಮನ ಹೊಟ್ಟೆ ಕುಯಿದರು. ಕರುಳುಗಳನ್ನು ಪಕ್ಕಕ್ಕೆ ಸರಿಸಿದಾಗ ಧಿಡೀರನೆ ಗೋಚರಿಸಿತು ಗರ್ಭಕೋಶ. ಅದನ್ನು ಕಂಡಕೂಡಲೇ ದಮಯಂತಿಗೆ ತುಸು ಗಾಬರಿಯಾಯಿತು. ಸಾಧಾರಣವಾಗಿ ಸ್ವಚ್ಛವಾಗಿ ಇರಬೇಕಾದ ಗರ್ಭಕೋಶದ ಮೇಲೆಲ್ಲಾ ಸಣ್ಣ ಹುಣ್ಣುಗಳ ಮಾದರಿಯ ಕ್ಯಾನ್ಸರ್ ಹರಡಿತ್ತು.

“my god ?” ಎಂದರು. ಡಾ|| ಮಂಜೇಕರ್, “I dont think we can proceed with the operation.

'ಮತ್ತೇನು ಮಾಡುತ್ತೀರಿ?” ಎಂದು ಕೇಳಿದಳು ದಮಂಯತಿ”

“ಮುಚ್ಚಿಬಿಡೋದು? ಕ್ಯಾನ್ಸರ್ ಹೊಟ್ಟೆಯಲ್ಲೆಲ್ಲಾ ಹರಡಿದ ಹಾಗೆ ಕಾಣುತ್ತೆ. ಅಪರೇಷನ್‌ನಿಂದ ಪ್ರಯೋಜನವಾಗಲ್ಲ. ಈಕೇನ್ನ ಬೊಂಬಾಯಿಗೆ ಕಳೋದು ವಾಸಿ.” “ಅವು ತುಂಬಾ ಬಡವು. ಸರ್”

“ಹ್ಯಾಗಾದ್ರೂ ಮಾಡೋಣ, ದಮಯಂತಿ,”

ಪಾರ್ವತಮ್ಮನಿಗೆ ಪ್ರಜ್ಞೆ ಬಂತು. ತಾನಿನ್ನೂ ಬದುಕಿದ್ದೀನಿ ಎಂಬ ತಿಳಿವಳಿಕೆಯಿಂದ ಅವಳ ತುಟಿಗಳಲ್ಲಿ ನಗು ತುಳುಕಿತು. ಆದರೆ ಆಯಾಗಳು, ನರ್ಸ್‌ಗಳು, ಕಡೆಗೆ ದಮಯಂತಿ ಕೂಡಾ ತನ್ನ ಬಗ್ಗೆ ಒಂದು ರೀತಿಯ ಕನಿಕರದಿಂದ ವರ್ತಿಸುತ್ತಿರುವುದನ್ನು

ಕಂಡಾಗ ಅವಳಿಗೆ ಆತಂಕ.

“ಈಯಮ್ಮ ಎಚ್ಚು ದಿವ್ಯ ಬದುಕಾಕಿಲ್ವಂತೆ!” “ಅಯ್ಯೋ ಪಾಪ!”

“ಓಗ್ಗಿ ಬುಡು, ಮುತ್ತೈದೆ ಸಾವು ಬತ್ತೈತೆ. ಪುಣ್ಯಾತಗಿತ್ತಿ”

ಹಾಗಾದರೆ ತಾನು ಸಾಯುವುದು ನಿಶ್ಚಿತ ಎಂದು ತೋರಿತು ಪಾರ್ವತಮ್ಮನಿಗೆ. ಅವಳ ಕಣ್ಣುಗಳಲ್ಲಿ ನೀರಾಡಿತು. ಮುತ್ತೈದೆ ಸಾವು ಬರಬೇಕೆಂದು ತನಗೂ ಇಷ್ಟ. ಆದರೆ ಗಂಡ ಇನ್ನೂ ಗಟ್ಟಿಮುಟ್ಟಾಗಿದ್ದಾರೆ. ಅವರ ಮರಣ ನಾಳೆ ಎಂದು ಗೊತ್ತಾದರೆ ತಾಮ ಹಿಂದಿನ ದಿನವೇ ಯಮರಾಯನ ಹತ್ತಿರ ಹೋಗಲು ಸಿದ್ಧ ಆದರೆ ಈಗಲ್ಲ, ಈಗಲ್ಲ...

ತಾನೇಕೆ ಬದುಕಬೇಕು? ತನ್ನಿಂದ ಯಾರಿಗೆ ಉಪಯೋಗ ಆದರೆ ತಾನು ಸತ್ತರೆ ಗಂಡನ ಗತಿ? ಅವರನ್ನು ನೋಡಿಕೊಳ್ಳುವುದಕ್ಕಾದರೂ ತಾನು ಬದುಕಿರಬೇಕು. ಅಲ್ಲದೆ, ಅಲ್ಲದೆ...ಈ ಬಿಸಿಲು ಈ ಮೋಡ, ಆಕಾಶದಲ್ಲಿ

ಅರಳುವ ನಕ್ಷತ್ರಗಳು, ಭೂಮಿಯ ಮೇಲೆ ಚಿಗುರುವ ಹುಲ್ಲು, ಗಿಡಮರಗಳಲ್ಲಿ ಬಿರಿಯುವ ಹೂಗಳು, ಎಲೆಗಳ ಮೇಲೆ ಮಿರುಗುವ ಮಂಜಿನ ವೈಡೂರ್‍ಯ್ಯಗಳು, ಇವಲ್ಲದೆ... ಇವಲ್ಲದೆ ತಮ್ಮ ಮನೆಯ ಮುಂದೆ ಸಾಲಾಗಿ ಹೋಗುವ ಕಪ್ಪು ಇರುವೆಗಳ ಸಾಲು, ಬೀದಿಯಲ್ಲಿ ಆಡುವ ಮಕ್ಕಳ ಕೇಕೆ,



ಇವನ್ನೆಲ್ಲಾ ತಾನು ನೋಡಬೇಕು. ಅನುಭವಿಸಬೇಕು ಕಡೆಗೆ ಕೋಡುಬಳೆ, ಚಕ್ಕುಲಿ ಮಾಡಿ ವಿಮಾನದಲ್ಲಿ ಹೋಗುವ ಆಸೆಗಾದರೂ ತಾನು ಬದುಕಬೇಕು.

ಡಾ|| ಮಂಜೇಕರ್, ನಾಗಪ್ಪನವರಿಗೆ ಹೇಳಿದರು.

“ನೀವು ಆದಷ್ಟು ಬೇಗ ಇವರನ್ನು ಬೊಂಬಾಯಿಯ ಟಾಟಾ ಮೆಮೊರಿಯಲ್ ಆಸ್ಪತ್ರೆಗೆ ಕರೊಂಡೋಗಿ. ಅಲ್ಲಿ ಮಾತ್ರ ಈ ಕಾಯಿಲೆಗೆ ಚಿಕಿತ್ಸೆ ಮಾಡಬೋದು.

ಶಸ್ತ್ರಕ್ರಿಯೆಯಾಗಿ ಒಂದು ವಾರವೂ ಕಳೆದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಪಾರ್ವತಮ್ಮನನ್ನು ಸಿರಿಯೂರಿನಿಂದ ಅಷ್ಟು ದೂರ ಕರೆದೊಯ್ಯುವುದಾದರೂ ಹೇಗೆ? ಎಂದು ನಾಗಪ್ಪ ಚಿಂತಿಸುತ್ತಿರುವಾಗ ದಮಯಂತಿ,

“ವಿಮಾನದಲ್ಲಿ ಹೋಗಹುದು ಹೆಚ್ಚು ಆಯಾಸವಾಗಲ್ಲ, ಕನ್‌ಸೆಷನ್ ಬೇರೆ ಕೊಡ್ತಾರೆ

ಎಂದಳು.

ಆದರೆ ವಿಮಾನದಲ್ಲಿ ಹೋಗುವಷ್ಟು ಸಿರಿವಂತರೇ ತಾವು? ಎಂದು ನಾಗಪ್ಪ ಖಿನ್ನಮನಸ್ಕರಾಗಿ ಕುಳಿತರು. ಆಗ ಹೆಂಡತಿ ಟ್ರಂಕಿನಲ್ಲಿ ಕೂಡಿರಿಸಿದ್ದ ಹಣದ ನೆನಪಾಯಿತು. ಬೀಗದ ಕೈಗಾಗಿ ಹುಡುಕಾಡಿದರು. ಸಿಗಲಿಲ್ಲ. ಆಸ್ಪತ್ರೆಯಲ್ಲಿ ಪಾರ್ವತಮ್ಮನನ್ನು ಕೇಳಿದಾಗ ಅದು ಸುನಂದಮ್ಮನವರ ಬಳಿ ಇರುವುದು ತಿಳಿಯಿತು. ಹೆಂಡತಿ ತಮ್ಮನ್ನು ನಂಬಲಿಲ್ಲವಲ್ಲ ಎಂದು ಗಂಡನಿಗೆ ಖೇದವಾದರೂ ಬೀಗದ ಕೈ ಇಸಿದು ತಂದು ಟ್ರಂಕಿನಲ್ಲಿ ಇದ್ದ ಹಣವನ್ನು ಎಣಿಸಿದರು.

ಮುದುಡಿದ ನೋಟುಗಳು ಚಿಲ್ಲರೆ, ವರ್ಷಗಟ್ಟಲೆ ಕೂಡಿಸಿದ ಹಣ, ನಾಲ್ಕು ನೂರು ರೂಪಾಯಿ ಐವತ್ತು ಪೈಸೆ ಇತ್ತು. ಪ್ರಯಾಣಕ್ಕೆ ಬೇಕಾದ ಉಳಿದ ಹಣವನ್ನು ದಮಯಂತಿ ಕೂಡಿಸಿಕೊಟ್ಟರು.

"ಹೋಗ್ಲಿ ಬಿಡಮ್ಮ, ಪಾಪ, ಪಾರ್ವತಮ್ಮನ ಒಂದು ಆಸೇನಾದ್ರೂ ಕೈ ಗೂಡಲಿ. ಆಕೆಯೇನೂ ವಾಪಸ್ಸು ಬರೋಲ್ಲ'

"ಅದ್ಯಾಕೇ ಹಾಗಂತೀ"

ಕ್ಯಾನ್ಸರ್ ಹರಡಿಬಿಟ್ಟಿದೆ, ಅಮ್ಮ. ಅವು ಉಳಿಯೊಲ್ಲ"

ಸುನಂದಮ್ಮನವರಿಗೆ ಅದನ್ನು ಕೇಳಿ ದುಃಖವಾಯಿತು. ಪಾರ್ವತಮ್ಮನಿಗಾಗಿ ಅಲ್ಲ ತನಗೆ ಬೇಕೆಂದಾಗ ತಿಂಡಿ ಮಾಡಿಕೊಡುವವಳು ಇಲ್ಲವಾಗುತ್ತಾಳಲ್ಲಾ ಎಂದು.

ಕೇಶವನಿಗೆ ರಜೆ ಇರಲಿಲ್ಲವೆಂದು ನಾಗಪ್ಪನವರೇ ಪಾರ್ವತಮ್ಮನ ಜೊತೆ ಮುಂಬಯಿಗೆ ಹೊರಡುವುದೆಂದು ನಿರ್ಧಾರವಾಯಿತು. ವಿಮಾನ ಪ್ರಯಾಣ ಎಂದ ಕೂಡಲೇ ಪಾರ್ವತಮ್ಮನ ಮುಖ ಅರಳಿತು. ಶಸ್ತ್ರಕ್ರಿಯೆಯ ನೋವನ್ನೂ ಮರೆತು ಆಕೆ ಎದ್ದು ಕುಳಿತಳು.

ಪ್ರಯಾಣದ ದಿನ ಗಂಡನ ಕೈ ಹಿಡಿದುಕೊಂಡು ಮೆಲ್ಲನೆ ವಿಮಾನದ ಬಳಿಗೆ ಬಂದಾಗ, ಪಾರ್ವತಮ್ಮನಿಗೆ ಸಂತೋಷದಿಂದ ಬವಳಿ ಬರುವ ಹಾಗಾಯಿತು. ತನ್ನ ಜೀವಮಾನದ ದೊಡ್ಡ ಬಯಕೆ ಇಂದು ಕೈಗೂಡುತ್ತಿದೆ. ಆದರೆ ತಾನೀಗ



ಹೋಗುತ್ತಿರುವುದು ರೋಗಿಯಾಗಿ, ಎಂಥ ವಿಪರ್ಯಾಸ! ನಾಗಪ್ಪನವರೂ ಬೆರಗಿನಿಂದ ವಿಮಾನ ದಿಟ್ಟಿಸಿದರು. ಪುಷ್ಪಕ ವಿಮಾನದ ನೆನಪಾಯಿತು ಅವರಿಗೆ. ಶ್ರೀರಾಮಚಂದ್ರ ಪಟ್ಟಾಭಿಷೇಕಕ್ಕಾಗಿ ಪುಷ್ಪಕದಲ್ಲಿ ಹೊರಟಿದ್ದ ತಾವೂ ಈಗ ಹೋಗುತ್ತಿದ್ದೇವೆ. ತಮಗೆ ಒಳ್ಳೆಯದಾಗಬೇಕು.

ಅವರಿಬ್ಬರೂ ತಮ್ಮ ಆಸನಗಳಲ್ಲಿ ಕುಳಿತರು. ಒಳ್ಳೆ ಹಂಸತೂಲಿಕಾ ತಲ್ಪದ ಹಾಗಿದೆ ಎಂದೆನಿಸಿತು ಪಾರ್ವತಮ್ಮನಿಗೆ ಆಯಾಸದಿಂದ ಅವಳು ಸೀಟಿಗೊರಗಿಕೊಂಡಳು. ಕಿಟಕಿಯಾಚೆ ದಿಟ್ಟಿಸಿದಾಗ ತಮ್ಮ ಊರು ತನ್ನ ರಹಸ್ಯಗಳನ್ನೆಲ್ಲಾ ಬಚ್ಚಿಟ್ಟುಕೊಂಡು ನಿಗೂಢವಾಗಿ ಕುಳಿತ ಹಾಗೆ ಕಂಡಿತು. ವಿಮಾನದ ಬಾಗಿಲು ಹಾಕಿಕೊಂಡಿತು. ಗಗನಸಖಿ ಪೆಪ್ಪರ್‌ಮೆಂಟ್‌ಗಳನ್ನು ತಂದುಕೊಟ್ಟಳು.

"ನಾವೇನು ಚಿಕ್ಕ ಮಕ್ಕಳೇ?" ಎಂದು ಪಾರ್ವತಮ್ಮ ಕೇಳಿಯೇಬಿಟ್ಟಳು.

"ಎಲ್ರೂ ತಿಂತಿದಾರೆ ನೀನೂ ಬಾಯಲ್ಲಿ ಹಾಕ್ಕೋ?" ಎಂದರು ನಾಗಪ್ಪ.

ವಿಮಾನದ ಪರದೆಯನ್ನೂ ಸೂರಿನ ಅಲಂಕಾರವನ್ನೂ ನೋಡುತ್ತಾ ಪಾರ್ವತಮ್ಮ ವಿಸ್ಮಿತಳಾದಳು. ಬಿಗಿದ ತುಟಿಗಳಿಂದ ಕುಳಿತ ಪ್ರಯಾಣಿಕರನ್ನು ಕಂಡು ಅವಳು ಗಂಡನ ತೋಳು ಮುಟ್ಟಿ,

"ಇವ್ರೆಲ್ಲಾ ಯಾಕೆ ಹೀಗೆ ಸುಮ್ನೆ ಕೂತಿದಾರೆ?" ಎಂದು ಪ್ರಶ್ನಿಸಿದಳು.

"ದೊಡ್ಡ ಮನುಷ್ಯರು! ಹೆಚ್ಚು ಮಾತಾಡ್ತಾರದು,"

ವಿಮಾನ ಮೇಲೇರಿತು ಮುಗಿಲುಗಳಿಗೆ ಬಿಸಿಲು ಕನ್ನಡಿ ಹಿಡಿಯಿತು. ಆಕಾಶದಲ್ಲಿ ಓಡುತ್ತಿದ್ದ ಮೋಡಗಳು ಈಜುವ ಹಿಮಗಡ್ಡೆಗಳ ಹಾಗೆ ಕಂಡವು ಪಾರ್ವತಮ್ಮನಿಗೆ. ಒಂದು ವಿಚಿತ್ರ ದೃಶ್ಯ ಗೋಚರಿಸಿದ ಹಾಗೆ ಭಾಸವಾಯಿತು.

ಅವಳು ಇದ್ದಕ್ಕಿದ್ದಂತೆ,

"ಅಲ್ನೋಡಿ, ಪರಮಾತ್ಮ ಕ್ಷೀರಸಾಗರದಲ್ಲಿ ಆದಿಶೇಷನ ಮೇಲೆ ಮಲಗಿದ ಹಾಗೆ ಕಾಣಿಸೋದಿಲ್ವೆ?" ಎಂದು ಕೇಳಿದಳು.

ನಾಗಪ್ಪ ಕಿಟಕಿಯ ಹೊರಗೆ ದಿಟ್ಟಿಸಿದರು. ಬರೀ ಮುಗಿಲುಗಳ ಹಿಂಡು,

"ಪಾತೂ, ನಿಂಗೆ ಮೈಲಿ ಹುಷಾರಿಲ್ಲ. ಸುಮ್ನೆ ಕೂತ್ಕ!"

ಪಾರ್ವತಮ್ಮನಿಗೆ ಸಿಟ್ಟುಬಂದಿತು. ಮೈ ಹುಷಾರಿಲ್ಲದಿದ್ದರೂ ತಲೆ ನೆಟ್ಟಗಿದೆ ಅಂದುಕೊಂಡಳು, ದೇವದೇವತೆಗಳ ಆಕಾಶದಲ್ಲಿ ಇರುತ್ತಾರೆ. ಎಂದು ತಾವು ನಂಬಿದ್ದೆವಲ್ಲ! ಇದ್ದರೆ ಅವರು ತಮಗೆ ಎಲ್ಲಿಯಾದರೂ ಸಿಗಬೇಕು. ಹಾಗಾದರೆ ತನ್ನ ಕಣ್ಣಿಗೆ ವಿಷ್ಣುಪರಮಾತ್ಮ ಗೋಚರಿಸಿದ್ದು ಸುಳ್ಳೆ? ಎಂದುಕೊಂಡಳು. ಇನ್ನು ಯಾರು ಕಣ್ಣಿಗೆ ಬಿದ್ದರೂ ಮಾತಾಡುವುದಿಲ್ಲ ಎಂದು ತುಟಿ ಬಿಗಿ ಹಿಡಿದುಕೊಂಡು ಕುಳಿತಳು.

ಸ್ವಲ್ಪ ಹೊತ್ತಿನಲ್ಲಿ ಗಗನಸಖಿ, ಬ್ರೆಡ್ ಮತ್ತು ಕೇಕ್‌ಗಳನ್ನು ತೆಗೆದುಕೊಂಡು ಬಂದಳು.

"ಇಸ್ಸಿ ಬ್ರೆಡ್ ಯಾರು ತಿಂತಾರೆ? ಹುರಿಗಾಳೋ ಚಕ್ಕುಲಿಯೋ ಇದೆಯಾ ಕೇಳಿ!" ಎನ್ನುತ್ತಾ ಅದನ್ನು ನೀಡಲು ಬಾಗಿದ ಯುವತಿಯನ್ನು ನಿನ್ನ ಹೆಸರೇನೇ, ತಾಯಿ!"

ಎಂದು ಕೇಳಿದಾಗ ಆಕೆ ಓತಿಕ್ಯಾತದಂತೆ ಮುಖ ಮಾಡಿ ಸಿಟ್ಟಿನಿಂದ ತಟ್ಟೆಯನ್ನು ಕುಕ್ಕಿ ಹೊರಟುಹೋದಳು.

ಪಾರ್ವತಮ್ಮ ವಿಧಿಯಿಲ್ಲದೆ ಬ್ರೆಡ್ಡನ್ನು ಕಚ್ಚಿ ತಿನ್ನತೊಡಗಿದಳು.

"ಈ ವಿಮಾನದಲ್ಲಿ ಕಕ್ಕಸುಗಿಕ್ಕಸು ಇಲ್ವೆ? ಇಷ್ಟೊಂದು ಜನ ಇದಾರೆ. ಹ್ಯಾಗೆ ಮಾಡ್ತಾರೆ?"

"ಇರಬೋದು ನಂಗೆ ಗೊತ್ತಿಲ್ಲ!"

"ಒಂದ್ಸಾರಿ ಹೀಗೇ ನಮ್ಮೂರಿಂದ ಬಸ್ನಲ್ಲಿ ಬರುವಾಗ ನಂಗೆ ಭೇದಿ ಹತ್ಕಂಡಿತ್ತು. ಪಾಪ~! ಬಸ್ಸಿನ ಡ್ರೈವರ್ ದಾರೀಲಿ ಮೂರು ನಾಲ್ಕು ಸಾರೆ ನಿಲ್ಲಿದ್ದ!"

"ವಿಮಾನ ಅಂದರೆ ಬಸ್ಸಲ್ಲ ಪಾತು ಇದು ಹೋಗ್ತಿರೋದು ಆಕಾಶದಲ್ಲಿ ಭೂಮಿ ಮೇಲಲ್ಲ. ಬೇಕು ಅಂದಡೆಯೆಲ್ಲಾ ಇದನ್ನ ನಿಲ್ಲೋಕೆ ಆಗೋಲ್ಲ" ಎಂದು ಸಿಟ್ಟಿನಿಂದ ನಾಗಪ್ಪ ನುಡಿದರು.

ಆಗೋ ಇಗೋ ಅನ್ನುವಷ್ಟರಲ್ಲಿಯೇ ವಿಮಾನ ಮುಂಬಯಿ ನಿಲ್ದಾಣದಲ್ಲಿ ಇಳಿದುಬಿಟ್ಟಿತು. ಅಲ್ಲಿಂದ ಟ್ಯಾಕ್ಸಿಯಲ್ಲಿ ಪರೇಲಿನಲ್ಲಿದ್ದ ನೆಂಟರ ಮನೆಗೆ ಗಂಡ-ಹೆಂಡತಿ ಪ್ರಯಾಣ ಬೆಳೆಸಿದರು. ದಾರಿಯಲ್ಲಿ ಸಾಲುಗಟ್ಟಿದ ವಾಹನಗಳು, ಜನರಿಂದ ತುಂಬಿ ತುಳುಕುತ್ತಿದ್ದ ಪಾದರಸ್ತೆಗಳು ಆಕಾಶದೆತ್ತರಕ್ಕೆ ಏರಿನಿಂತ ಮನೆಗಳು, ಇವನ್ನು ಕಂಡ ಪಾರ್ವತಮ್ಮನಿಗೆ ತಾನು ಮಾಯಾನಗರಿಗೆ ಬಂದಿರುವೆನೆನೋ ಎಂಬ ಭ್ರಮೆಯುಂಟಾಯಿತು. ಟಾಟಾ ಮೆಮೋರಿಯಲ್ ಆಸ್ಪತ್ರೆಗೆ ಬಂದರು.

ಜನಸಮುದ್ರ, ದುಃಖದ ತೆರೆಗಳು, ರೋಗಿಗಳು ಮತ್ತು ಅವರ ಸಹಾಯಕರ ಮುಖಗಳು ಆತಂಕದಿಂದ ತುಂಬಿಕೊಂಡಿವೆ. ನರಳಿಕೆ, ಸಂಕಟಗಳನ್ನು ಮೊಗೆ ಮೊಗೆದು ಚೆಲ್ಲುತ್ತಿವೆ. ಸಾವಿನ ಭೀತಿ ಕಣ್ಣಿನಲ್ಲಿ ಹೆಪ್ಪುಕಟ್ಟಿ ಕುಳಿತಿದೆ. ಈ ಜ್ವಾಲಾಮುಖಿಯ ಮಧ್ಯೆ ಕುಳಿತ ಡಾಕ್ಟರು, ನರ್ಸ್‌ಗಳು ಗಂಭೀರ ನಿರಾತಂಕ ಹೊಳೆಯುವ ನೆಲಗಳು, ಕುರ್ಚಿಗಳು, ಮೈಕ್ರೋಸ್ಕೋಪುಗಳು, ಅದರಲ್ಲಿ ಇಣುಕಿ ನೋಡುವ ಕಣ್ಣುಗಳು, ಅಧ್ಯಯನ, ಸಂಶೋಧನೆ, ಕಡಲಿನ ತೆರೆಗಳು ಅಪ್ಪಳಿಸುತ್ತಲೇ ಇವೆ.

ಪಾರ್ವತಮ್ಮನನ್ನು ಪರೀಕ್ಷಿಸಿದ ತಜ್ಞರ ಅಭಿಪ್ರಾಯ!

"ತುಂಬಾ Advanced case. ಯಾವ ಭರವಸೇನೂ ಕೊಡೋಕಾಗಲ್ಲ. ಅದ್ರೆ ಈಗ ರೇಡಿಯೇಷನ್ ಥೆರಪಿ ಶುರುಮಾಡೋಣ. Reaction ನೋಡ್ಕೊಂಡು ಮುಂದಿನ ಚಿಕಿತ್ಸೆ ನಿರ್ಧರಿಸಬಹುದು"

ಹೊರಗೆ ಬಂದಾಗ ಪಾರ್ವತಮ್ಮ "ಹಾಗಂದರೇನು?" ಎಂದು ಗಂಡನನ್ನು ವಿಚಾರಿಸಿದಳು.

"ರೇಡಿಯೇಷನ್ ಅಂದ್ರೆ ಒಂದು ಥರಾ ಲೈಟು ಕೊಡ್ತಾರೆ., ಅಷ್ಟೇ" ಎಂದು ನಾಗಪ್ಪ ನುಡಿದಾಗ, ಸದ್ಯ ಮತ್ತೆ ಶಸ್ತ್ರಕ್ರಿಯೆಯಿಲ್ಲವಲ್ಲ ಎಂದು ಅವಳು ಸಮಾಧಾನದ ನಿಟ್ಟುಸಿರುಬಿಟ್ಟಳು.



ಕೊಬಾಲ್ಸ್ ಕ್ಯಾಪ್‌ಸೂಲ್‌ಗಳನ್ನು ಯೋನಿಯೊಳಗೆ ಹಾಕಿದ ಬಳಿಕ ಅವಳಿಗೆ ಅದರ ಕಷ್ಟ ಅರ್ಥವಾಗತೊಡಗಿತು. ಒಳಗೊಳಗೇ ದಹಿಸುವ ಕೆಂಡದ ಹಾಗೆ ಅದು ತನ್ನ ಮೈಯನ್ನು ಸುಡುತ್ತಿದೆ ಎನಿಸಿತು. ನೋವು, ಉರಿ, ಸಹಿಸಲಸಾಧ್ಯ, ಆದರೆ ರಕ್ತಸ್ರಾವ ನಿಂತಿತು. ಪಾರ್ವತಮ್ಮ ರೇಡಿಯಾಲಜಿಸ್ಟರ ಬಳಿಗೆ ಹೋದಳು. ಹೊಟ್ಟೆಯ ಮೇಲೆ ಮಲಗಿಸಿ ಎಂದರು ಅವರು.

ಅವಳಿಗೆ ಇಂಗ್ಲೀಷು ಬರುತ್ತಿರಲಿಲ್ಲ. ಮರಾಠಿಯೂ ಇಲ್ಲ ಹತ್ತಿರದಲ್ಲಿದ್ದ ನರ್ಸ್ ಅವಳನ್ನು ಮಲಗಿಸಿದಳು, ರೇಡಿಯೆಲಜಿಸ್ಟ್ ದಪ್ಪಗಿನ ಕಪ್ಪು ಪೆನ್ನಿನಿಂದ ಅವಳ ಸೊಂಟದ ಮೇಲೆ ಚೌಕಾಕಾರದ ಗುರುತೊಂದನ್ನು ಹಾಕಿದರು. ಆ ಜಾಗಕ್ಕೆ ಮಾತ್ರ ರೇಡಿಯೇಷನ್ ಕೊಡಬೇಕು ಎಂಬುದನ್ನು ಸೂಚಿಸುವುದಕ್ಕಾಗಿ ಇದನ್ನು ಅಳಿಸಬೇಡಿ ಎಂದು ಅವರು ಸನ್ನೆಯಿಂದ ಸೂಚಿಸಿದಾಗ ಅವಳಿಗೆ ಗಾಬರಿಯಾಯಿತು., ಏನೋ ಬರೆದಿದ್ದಾರೆ. ಈ ಗುರುತು ಶಾಶ್ವತವಾಗಿ ತನ್ನ ಮೇಲೆ ಉಳಿಯುವುದೇ? ಎಂದು.

ಔಟ್ ಪೇಷಂಟ್ಸ್ ಡಿಪಾರ್ಟ್‌ಮೆಂಟಿನಲ್ಲಿ ಪಾರ್ವತಮ್ಮನೂ ನಾಗಪ್ಪನವರೂ ಇತರ ರೋಗಿಗಳಂತೆ ಒರಗುಬೆಂಚುಗಳ ಮೇಲೆ ಕಾದು ಕುಳಿತರು, ಹತ್ತಿರದಲ್ಲೇ ಫ್ಯಾನು ತಿರುಗುತ್ತಿತ್ತು. ದೂರದಲ್ಲೊಂದು ಗಡಿಯಾರ ಕಾಲ ಸೂಚಿಸುತ್ತಿತ್ತು. ಮೈಕಿನಿಂದ ಮಿಸ್ಟರ್ ಭಿಡೆ" , ಎಂಬ ಕರೆ ಕೇಳಿಸಿತು. ವೃದ್ಧನೊಬ್ಬ ಎದ್ದು ಒಳಗೆ ಹೋದ. ಅವನ ಕೈ ಹಿಡಿದು ಕರೆದೊಯ್ದು ಮಗ ಬಾಗಿಲಿನಲ್ಲೇ ನಿಂತ.

ನರಕದ ಒಳಗೆ ಒಬ್ಬನೇ ಹೋದ ಭಿಡೆ, ಹೊರಗಿದ್ದ ಯಂತ್ರದಲ್ಲಿ ರೇಡಿಯೇಷನ್ ಅವಧಿಯನ್ನು adjust ಮಾಡಿದರು. ಒಳಗೆ ಏನಾಗುತ್ತದೋ? ಎಂದು ಪಾರ್ವತಮ್ಮ ಕಾತರದಿಂದ ಬಾಗಿಲನ್ನೇ ನೋಡುತ್ತಾ ಕುಳಿತಳು. ಹೆದರಿಕೆಯಿಂದ ಅವಳ ಹೃದಯ ಹೊಡೆದುಕೊಳ್ಳುತ್ತಿತ್ತು. ಆ ಶಬ್ದ ಎಲ್ಲರಿಗೂ ಕೇಳಿಸುವುದೋ ಎಂದು ಅವಳು ಅತ್ತಿತ್ತ ನೋಡಿದಳು. ಅವರವರ ಕಷ್ಟ ಅವರಿಗೆ ಪ್ರತಿಯೊಬ್ಬರೂ ತಮ್ಮ ಚಿಂತೆಯಲ್ಲಿಯೇ ಮುಳುಗಿದ್ದುದನ್ನು ನೋಡಿ ಅವರಿಗೆ, ಸಮಾಧಾನವಾಯಿತು. ಕ್ಷಣಗಳು ಕಳೆದು ನಿಮಿಷಗಳಾದುವು. ಕಿರ್ ಎಂದು ಯಂತ್ರ ಶಬ್ದ ಮಾಡಿತು. ರೇಡಿಯೇಷನ್ ಕೊಠಡಿಯ ಬಾಗಿಲು ತೆಗೆಯಿತು. ಸ್ವಲ್ಪ ಹೊತ್ತಿನ ಬಳಿಕ ವೃದ್ಧನ ಎರಡೂ ಭುಜಗಳನ್ನು ಹಿಡಿದು ನಡೆಸಿಕೊಂಡು ಹೊರಬಂದ ಅವನ ಮಗ, ವೃದ್ಧ ಬೆಂಚಿನ ಮೇಲೆ ಮಲಗಿದ.

ಪಾರ್ವತಮ್ಮ ಎಂದು ಮೈಕಿನ ಮೂಲಕ ಹೆಸರು ಕೇಳಿಸಿದಾಗ ಆಕೆ ಗಡಗಡನೆ ನಡುಗಿದಳು. ಕಾಲನ ಕರೆ ತನಗೂ ಬಂತು ಅನಿಸಿತು. ಬಿಳಿ ಸೀರೆಯನ್ನು ಕಚ್ಚೆ ಹಾಕಿ ಉಟ್ಟಿದ್ದ ಆಯಾ ಅವಳ ಕೈ ಹಿಡಿದು ಒಳಗೆ ಕರೆದೊಯ್ದಳು.

ನರಕದೊಳಗೆ ಕಾದ ಕಬ್ಬಿಣದ ಒಲೆಗಳಿರುತ್ತವೆ, ಕಡಾಯಿಗಳಲ್ಲಿ ಕುದಿಯುವ ಎಣ್ಣೆಯಿರುತ್ತದೆ. ಕೆಂಪಗೆ ಕಾಸಿನ ಕಬ್ಬಿಣದ ತುಂಡುಗಳಿರುತ್ತವೆ. ಎಂದು ಪಾರ್ವತಮ್ಮನ ಹಿರಿಯರು ಅನ್ನುತ್ತಿದ್ದರು. ಆದರೆ ಅವಳು ನರಕವೆಂದು ಭಾವಿಸಿ ಒಳಹೊಕ್ಕ ಕೊಠಡಿ, ಲಿ ಅಂಥದೇನೂ ಇರಲಿಲ್ಲ ಬಟ್ಟೆ ಉಟ್ಟುಕೊಳ್ಳಲು ಮರೆಯಾಗಿ ಒಂದು ಸ್ಕ್ರೀನ್ ಮತ್ತು ಗೋಡೆಗೆ ಕಚ್ಚಿಕೊಂಡ ಕೆಂಪು ಬಣ್ಣದ ಕೋಬಾಲ್ಟ್ ಯಂತ್ರ ಮಾತ್ರ ಇದ್ದುವು. ಅವಳು



ಮೆಟ್ಟಲು ಹತ್ತಿ ಬಿಳಿ ಟ್ರಾಲಿಯ ಯಂತ್ರದ ಕೆಳಗೆ ಆಯಾ ನೂಕಿದಳು. ಗುರುತು ಮಾಡಿದ್ದ ಜಾಗದ ಮೇಲೆ ಸರಿಯಾಗಿ ಕೋಬಾಲ್ಟ್ ಕಿರಣಗಳನ್ನು ಹೊಂದಿಸಿ ಸ್ವಿಚ್ ಆನ್ ಮಾಡಿ, ಟೆಕ್‌ನೀಷಿಯನ್ ಹೊರಗೆ ಓಡುತ್ತಾ ಹೋಗಿ ಬಾಗಿಲು ಮುಚ್ಚಿಕೊಂಡರು.

ಎಷ್ಟು ಹೆದರುತ್ತ ಓಡಿದರು ಎನಿಸಿತು ಪಾರ್ವತಮ್ಮನಿಗೆ. ಇಲ್ಲಿ ತಾನೊಬ್ಬಳೇ ಸಜೀವ ಸುಡಲೆಂದು ಬಿಟ್ಟು ಹೋಗಿರುವರೆ? ಬೆನ್ನಿನ ಮೂಲಕ ಬಿಸಿಕಿರಣ ಒಳಗೆ ಇಳಿಯುತ್ತಿರುವ ಅನುಭವ. ಕರುಳುಗಳನ್ನು ಮುಟ್ಟಿ ತೊಳೆಸುವಂತೆ ಅಂಗಾಂಗಗಳೆಲ್ಲಾ ಬಿಸಿಯಾಗುತ್ತಿರುವಂತೆ.. ಅವಳೆಂದುಕೊಂಡಳು. ಸೌದೆಗಳ ಮೇಲೆ ಹೆಣವನ್ನಿಟ್ಟು ಸುಡುವಾಗ ಅದಕ್ಕೆ ಜೀವವಿರುವುದಿಲ್ಲ. ಎಂದು ಈ ಹಿಂಸೆ ಗೊತ್ತಾಗುವುದಿಲ್ಲ. ತಮ್ಮೂರಿನ ಅಗ್ನಿಚಿತೆಯಲ್ಲಿ ಸ್ವಿಚ್ ಹಾಕಿದ ಒಂದೆರಡು ನಿಮಿಷಗಳಲ್ಲಿ ಹೆಣ ಉರಿದು ಬೂದಿಯಾಗುವುದಂತೆ ತಾನೂ ಅಂಗುಲ ಅಂಗುಲವಾಗಿ ಸಾಯುತ್ತಿದ್ದೇನೆ ಎನಿಸಿತು. ಮನುಷ್ಯನಿಗೆ ಸಾಯಲು ಎಷ್ಟು ವ್ಯಥೆ? ಸಂಕಟಪಡುವುದಕ್ಕಿಂತ ಒಮ್ಮೆ ಮುಕ್ತಿ ಪಡೆಯುವುದೇ ಒಳಿತಲ್ಲವೆ?

ಅವಳು ಹಾಗೆ ಯೋಚಿಸುತ್ತಿರುವ ಹಾಗೆ ಬಾಗಿಲು ತೆರೆಯಿತು. ಕಚ್ಚೆ ಹಾಕಿದ ಹೆಂಗಸು ಒಳಬಂದಳು. ಏಳಲು ಹೋದರೆ ತಲೆತಿರುಗು, ವಾಂತಿ ಬರುವ ಹಾಗಾಗುತ್ತಿದೆ. ಮೆಲ್ಲನೆದ್ದು ನಡುಗುವ ಕೈಗಳಿಂದ ಸೀರೆ ಉಟ್ಟುಕೊಂಡಳು. ಹೆಂಗಸಿನ ಸಹಾಯದಿಂದ ಹೊರಬಂದಳು. ನಾಗಪ್ಪ ಅವಳನ್ನು ಹಿಡಿದು ಬೆಂಚಿನ ಮೇಲೆ ಕುಳ್ಳಿರಿಸಿದರು. ಅವಳ ಹೆಗಲ ಮೇಲೆ ಕೈ ಹಾಕಿ ಸಾಂತ್ವನಗೈದರು. (ಇವರು ಹೀಗೆ ಮೈ ಮುಟ್ಟಿದಾಗ ಯೌವನದಲ್ಲಿ ಇಡೀ ದೇಹದಲ್ಲಿ ಮಿಂಚು ಹರಿದ ಹಾಗಾಗುತ್ತಿತ್ತು. ಈಗ ಏನು ಅನಿಸುವುದಿಲ್ಲ. ಬರೀ ಕೊರಡು. ಕೊಳ್ಳಿಯಿಕ್ಕಬೇಕಾದ ಕೊರಡು!)

ದಿನ ಕಳೆದ ಹಾಗೆ ಪಾರ್ವತಮ್ಮನ ತಲೆತಿರುಗು ವಾಂತಿ ಜಾಸ್ತಿಯಾಯಿತು. ಎಷ್ಟೋ ವೇಳೆ ಆಸ್ಪತ್ರೆಯಿಂದ ಹಿಂತಿರುಗುವಾಗ ಗ್ಲೋಕೋಸ್ ಡ್ರಿಪ್ ಕೊಟ್ಟು ಕಳಿಸುತ್ತಿದ್ದರು. ಮನೆಯಲ್ಲಿ ಜೀವಚ್ಛವದಂತೆ ಬಿದ್ದಿರುತ್ತಿದ್ದ ಪಾರ್ವತಮ್ಮ ಗೋಗರೆಯುತ್ತಿದ್ದಳು.

"ನಂಗೆ ಇನ್ನು ಚಿಕಿತ್ಸೆ ಬೇಡ ಊರಿಗೆ ಹೋಗೋಣ. ನನ್ ಪಾಡಿಗೆ ನನ್ನ ಸಾಯೋಕೆ ಬಿಡಿ!"

"ಹ್ಯಾಗೂ ಇಷ್ಟು ದೂರ ಬಂದಿದೀವಿ. ಚಿಕಿತ್ಸೆ ಅರ್ಧದಲ್ಲಿ ಬಿಡೋಕೆ ಆಗುತ್ತಾ?" ದೇವು ಮಾಡಿಸಿದ ಹಾಗಾಗ್ಲಿ, ಮುಗಿಸೇ ಹೋಗೋಣ!"

ಪಾರ್ವತಮ್ಮನ ಕಣ್ಣ ಮುಂದಿತ್ತು ಅಳುವಿನ ತೆರೆ ಆ ಪರದೆಯಾಚೆಗೆ ಬೆಳ್ಳಿ ಬೆಳಕು ಕಾಣುತ್ತಿತ್ತು. ಉತ್ಸಾಹ, ಯೌವನ, ನಗುತ್ತಿರುವ ಪ್ರಕೃತಿ, ಪ್ರೀತಿಸುವ ಜನರ ಮುಖಗಳು ಮಸುಕುಮಸುಕು ಮೊದಲು; ಅನಂತರ ಹತ್ತಿರ ಹತ್ತಿರ ನಿಚ್ಚಳ

ಅವಳೆಂದುಕೊಂಡಳು. ತಾನೇನೋ ಮುಗ್ಗರಿಸಿಬಿದ್ದೆ. ಆದರೆ ಸೋತೆನೆಂದು ಒಪ್ಪಿಕೊಳ್ಳುವುದು ಹೇಗೆ? ತಾನೀಗ ಧೈರ್ಯದಿಂದ ಎದ್ದು ನಿಲ್ಲಬೇಕು. ಯಾವುದಾದರೂ ಕೈ ತನ್ನನ್ನು ಹಿಡಿದು ಮೇಲೆತ್ತುತ್ತದೆ. ಆಗ ಮುಖಕ್ಕೆ ತಗಲಿದ ಮಣ್ಣನ್ನು ಬೂದಿಯನ್ನು



ಒರೆಸಿಕೊಂಡು ಎಲ್ಲರಂತೆ ದಿಟ್ಟಳಾಗಿ ನಡೆಯಬಹುದು. ಏನೂ ಆಗದವಳಂತೆ, ಸಾವಿತ್ರಿ ಯಮನನ್ನೇ ಜಯಿಸಲಿಲ್ಲವೇ? ತಾನೂ ಹಾಗೆಯೇ ಮರಣವನ್ನು ಗೆದ್ದು ಚಿರಂಜೀವಿ ಆಗಬಹುದಾದರೆ?

ದಿನಗಳು ವಾರಗಳಾದವು ತಿಂಗಳು ಕಳೆದುವು. ಚಿಕಿತ್ಸೆ ಮುಗಿಸಿದ ಪಾರ್ವತಮ್ಮ ಚೇತರಿಸಿಕೊಂಡರು.

ಮುಂಬಯಿಂದ ಹಿಂತಿರುಗುವ ಪ್ರಯಾಣ ರೈಲಿನಲ್ಲಿ. ಕೈಲಿದ್ದ ಹಣವನ್ನೆಲ್ಲ ಮುಗಿಸಿ ನೆಂಟರಿಂದ ಸಾಲ ಇಸಿದುಕೊಂಡರೂ ಪಾರ್ವತಮ್ಮನ ಮುಖದಲ್ಲಿ ಜಗತ್ತನ್ನೇ ಜಯಿಸಿದವರ ಕಳೆಯಿತ್ತು.

ಮನೆ ಸೇರಿದಾಗ ಪಾರ್ವತಮ್ಮನನ್ನು ಕಂಡು ಡಾ| ದಮಯಂತಿ ವಿಸ್ಮಯ ಸಂತೋಷಗಳಿಂದ ಕೇಳಿದಳು;

"ನೀವು ಇಷ್ಟಮಟ್ಟಿಗೆ ಹುಷಾರಾಗಿ ಬರೀರ ಅಂತ ನಾನು ನೆನೆಸಿದ್ದಿಲ್ಲ!

" ಪಾರ್ವತಮ್ಮ ಬಚ್ಚಬಾಯಿ ತೆರೆದು ನಗುತ್ತಾ ಅಂದಳು

"ರಾಮಾಯಣದ ಸೀತಾದೇವಿ ಅಗ್ನಿಪರೀಕ್ಷೆ ಮುಗಿಸ್ಕೊಂಡು ಪುಷ್ಪಕ ಏರಿದ್ದು. ನಾನು ಪುಷ್ಪಕದಲ್ಲಿ ಹೋಗಿ ಅಗ್ನಿ ಪರೀಕ್ಷೆ ಮುಗಿಸ್ಕೊಂಡಂದೆ!"

## ಒಂದು ಮೂಗುತಿಯ ಕಥೆ

**- ಶಾಂತಾದೇವಿ ಕಣವಿ**

ಧಡ್.. ಧಡಲ್... ಬಡಲ್... ಟಪ್...ಠಪ್.. ಚರ್ರ್... ಆ ಚಿಕ್ಕ ಕೋಣೆಯಲ್ಲಿದ್ದ ವಸ್ತುಗಳೆಲ್ಲ ಕೈ ಕಾಲು ಬಂದವರಂತೆ ಅತ್ತ- ಇತ್ತ ಹಾರಾಡುತ್ತಿದ್ದವು. ಪಾತ್ರೆಗಳು ಜಿಗಿದಾಗ ಠಣ್ ಎಂದು ಸಪ್ಪಳಿಸಿದವು ಹಾಸಿಗಯನ್ನೆತ್ತಿ ಚಟಪಟ ಝಾಡಿಸಿದಾಗ ಹರಕು ಚಾಪೆಯ ಕಡ್ಡಿಗಳು ಡೊಂಕಾಗಿ ನಡು ಮುರಿಯಿತು. ತೂತು ಬಿದ್ದು ಚಾದರದಿಂದ ಕೈ ತೂರಿ ಹೊರಗೆ ಬಂದಿತು. ಕೋಣೆಯ ನಾಲ್ಕೂ ಮೂಲೆ ಖಾಲಿ ಮಾಡಿ ಕಸಬರಿಗೆ ಆಡಿಸಿದಾಗ ಜೊಂಡಿಗ, ಹಲ್ಲಿಗಳು, ಸರಸರ ಗೋಡೆ ಏರಿ ಹಂಚಿನಲ್ಲಿ ಸುರಕ್ಷಿತವಾದವು.

ಬೆಳಕು ಹರಿದಾಗಿನಿಂದ ವಟಗುಡುತ್ತ, ತನ್ನ ಕೋಣೆಯ ತಳಬುಡವನ್ನೆಲ್ಲ ಹುಡುಕುತ್ತಿದ್ದ ಮಾನವ್ವ ಹೊತ್ತೇರಿ ಬಹಳ ಹೊತ್ತಾಗಿದೆ, ಮನೆ ಕೆಲಸಕ್ಕೆ ಹೋಗಬೇಕು ಎನ್ನುವುದು ಮರೆತು ತನ್ನ ಕೆಲಸದಲ್ಲಿಯೇ ಗರ್ಕಾಗಿದ್ದಳು. ಆದರೂ ಅವಳ ವಸ್ತು ಸಿಕ್ಕಿರಲಿಲ್ಲ. ಕೈ ಸೋಲಲು ತಾನು ಸಿದ್ಧಳಿಲ್ಲವೆನ್ನುವುದನ್ನು ಸಾರುವಂತೆ ಅವಳೀಗ ದನಿ ಎತ್ತಿದ್ದಳು.

"ನೀ ಒಳ್ಳೆ ಗಂಟು ಬಿದ್ದೀ ನನಗ ಬಿಕನಾಶಿ. ಕೂಲಿ ಇಲ್ಲಾ ಕುಂಬಳ ಇಲ್ಲಾ. ದುಡ್ಡು ದುಗ್ಗಾಣಿ ದುಡಿಯಾಂಗಿಲ್ಲಾ ತಾಳಿಕಟ್ಟಿದ್ದ ಖರೇವು. ಗಂಡ ಅಂತ ಗಂಡಾ ಒನಕೀ ತುಂಡ ಆಗೀದಿ. ಆದಖರೆ ಉಪಯೋಗಕ್ಕೆ ಬಂದೀತು, ನೀ ಯಾತಕ್ಕೂ ಇಲ್ಲಾ, ಮದುವಿ ಆದಾಗಿಂದ ನಾನ ದುಡಿಬೇಕು. ಮುಸುರಿ ತಿಕ್ಕಿ, ಅರಿವಿ ಹಿಂಡಿ,ನೆಲಾ ತೊಳೆದು ನನ್ನ ಕೈಯಾನ ನರಾ ಸಾಯಾಕ ಹತ್ಯಾವ, ಮುಂಜಾಲಿಂದ ಚಂಜೀತನಾ ದುಡುದು ತಂದು ಕೂಳ ಕುದಿಸಿ ಅತ್ತಾಗ, ಅಣ್ಣಾ-ಅತಿಗಿ ಅಂತ ಭಾಳ ಬಡಕೊಂತಿ. ಯಾವಾಕಿ ಕೂಳ ಹಾಕ್ಕಾಳ ನಿನಗೆ ನೋಡತೇನಿ, ನೀ ಮನೀ ಬಿಟ್ಟ ಹೋಗಿಬಿಡು, ನಿನ್ನಿಂದ ಏನೂ ಹರಕತ್ತಿಲ್ಲಾ, ಕೂಳು ದಂಡ ನಿನಗ, ಕಡದರ ನಾಕ ಆಳು ಆಗೂ ಹಾಂಗ ಆದೀ, ದುಡಿಯಾಕ ಬ್ಯಾಡಾ, ಹೇಣಿ ಮಕ್ಕಳ ಸುಕ-ದುಕ್ಕ ನೋಡಾಕ ಬ್ಯಾಡಾ, ಚೈನೀ ಬೇಕು ಚೈನೀ, ಬೀಡಿಗೆ ಸುದ್ದಾ ನನಗೆ ಕೈ ಒಡ್ಡತೀ ನಾಚಿಕಿ ಬರಾಂಗಿಲ್ಲ ನಿನಗ? ಮನ್ಯಾಗಿನ ಚಿಲ್ಲರ ರೊಕ್ಕ ಅಂತೂ ಎಲ್ಲಿ ಇಟ್ಟಲ್ಲೆ ಮಾಯ ಆಕ್ಕಾವ, ನನ್ನ ಮೂಗುತಿ ಎಲ್ಲಿ ಐತಿ ಹೇಳ ಈಗ, ಮನೀಯಂತ ಮನೀ ಎಲ್ಲಾ ಹುಡುಕಿದರೂ ಸಿಗವಾಲ್ಲು, ನಿನ್ನೆ ರಾತ್ರಿನ್ಯಾಗ ಮೂಗಿನ್ಯಾಗ ಇತ್ತು. ಬೆಳಕ ಹರಿದಾಗ ಇಲ್ಲ ಅಂದರ, ಅದು ಎಲ್ಲಿ ಬಿದ್ದ ಹೊಕ್ಕತಿ? ನನಗೆ ನಿದ್ದೆ ಹತ್ತಿದಾಗ ನೀನ ತಗದೀ, ನನಗೆ ಎಲ್ಲಾ ಗೊತ್ತೈತಿ ನಿನ್ನ ಐದೇಶಿ ಬಲ್ಲೆ ನಾನು ಕತ್ತಲದಾಗ ಎದ್ದಾಕಿ ರಾತ್ರಿ ಆದರೂ ನನ್ನ ಕೆಲಸ ಮುಗಿಯುದಿಲ್ಲ.

ದುಡದು ದುಡುದು ಮೈಮ್ಯಾಲಿನ ಖಬರು ಇಲ್ಲದ ನೆಲಾ ಸಿಕ್ಕರ ಸಾಕಂತ ಬಿದ್ದಾಂಗ ಬಿದ್ದಿರತೇನಿ. ನೀನ ನನ ಮೂಗುತಿ ಬಿಚಿಕೊಂಡೀದಿ ಹೌದಲ್ಲೋ? ಆಣಿ ಮಾಡಿ ಹೇಳು, ಖರೇ ಹೇಳು. ನಿನ್ನ ಯಾವ ಗಣತಿಗೆ ಕೊಡಾಕ ಬಿಚಗೊಂಡೀ ಹೇಳು, ತತಾ ಇಲ್ಲಿ ಮೂಗುತಿ. ನನ್ನ ಕಣ್ಣ ತಪ್ಪಿಸಿ ಯಾವಾಕಿಗೆ ಕೊಟ್ಟರೂ ಆ ಬೋಸುಡಿ ಸೀರಿ ಕಳದು ಮಚ್ಚಲೆ ಬಡದು ಕಸಗೊಂಡ ಬತ್ತೀನಿ, ಹೇಳು,"

ಈ ಹೊತ್ತಿನಲ್ಲಿ ಮಾನವ್ವನನ್ನು ಕೆಲಸಕ್ಕೆ ಕರೆದರೂ ಉಪಯೋಗವಿಲ್ಲವೆಂದು ತಿಳಿದ ಸುನಂದ ತನ್ನ ಅಡಿಗೆ ಕೋಣೆಯಿಂದಲೇ ಮಾನವ್ವನ ಅಸ್ತವ್ಯಸ್ತ ಕೋಣೆಯನ್ನು, ಒಂಟಿ ಯುದ್ಧವನ್ನು ನೋಡುತ್ತಿದ್ದಳು. ಅಶಿಕ್ಷಿತೆಯಾಗಿದ್ದರೂ ಸುಂದರ ಮನಸ್ಸಿನ ಮಾನವ್ವ, ಬೇರೆ ಗಂಡಸರ ಮುಂದೆ ಮುಖ ಎತ್ತದೆ, ಮೈತುಂಬ ಸೆರಗು ಹೊದ್ದು, ತಲೆ ತಗ್ಗಿಸಿ ನೋಡ ನೋಡುತ್ತ ಬದಿಗೆ ಸರಿದು ನಿಲ್ಲುವ ಹೆಂಗಸು. ಕಿವಿಯಿಂದ ಕೇಳಬಾರದ, ಬಾಯಿಂದ ಬರಬಾರದ ಬೈಗುಳಗಳನ್ನೆಲ್ಲ ಸುರಿಸುತ್ತಿದ್ದ ಮಾನವ್ವನ ದುಃಖದ ಆಳವನ್ನು ಸುನಂದ ಚೆನ್ನಾಗಿ ಬಲ್ಲಳು. ಗುಡುಗಿನ ಹಿಂದೆ ಬರುವ ಮಳೆಯಂತೆ ನೆಲಕ್ಕೆ ಕೈ ಅಪ್ಪಳಿಸಿ ಶಪಿಸುತ್ತ ಮಾನವ್ವ ಈಗ ಆಳತೊಡಗಿದ್ದಳು.

"ಸಣ್ಣ ಮಗಳು ಸುಕದಿಂದ ಇರಲೆಂತ ಪಿರೀತಿಲೆ ನೋಕರದಾರಗ ನನ್ನ ಮದಿವೀ ಮಾಡಿಕೊಟ್ಟು ಮಣ್ಣಾಗಿ ಹ್ವಾದೆಲ್ಲ ಯವ್ವಾ, ಇವನಿಂದ ನಾ ಏನ ಸುಕಾ ಕಂಡೇ ನೀ ಕೊಟ್ಟ ಬೆಳ್ಳಿ ಪಟ್ಟಿ, ಗುಂಡಿನ ಸರಾ, ಎಲ್ಲಾ ಇವನ ಹೆಣಕ್ಕ ಬಡದೇ ಯವ್ವಾ ಈಗ ಮೂಗಿನೂ ಹೋತು. ನೋಕರಿ ಹ್ವಾದ ಮ್ಯಾಲೆ ಕೂಳಿಗೆ ದಂಡ ಆಗ್ಯಾನ ಯವ್ವಾ ಶೇಕೀ ಮದವಿ ನಾ ಹ್ಯಾಂಗ ಮಾಡಲೇ. ನಾ ದುಡದದ್ದು ಬ್ರಮರಾಕ್ಷಸ, ಸಾಲೂದಿಲ್ಲ ಯವ್ವಾ, ಕಿಸೇದಾಗ ರೊಕ್ಕ ಇಲದಿದ್ರೂ ಇವಂದ ದಿಮಾಕ್ ಭಾಳ ಯವ್ವಾ, ಇವಂಗ ನಾ ಒಬ್ಬಾಕಿ ಸಾಲೂದಿಲ್ಲ, ಗೆಣತೆರಿಗೆ ಮಾಡ್ತಾನ ಯವ್ವಾ, ನನ್ನ ಎಡ್ಡ ಗಂಡ ಮಕ್ಕಳೂ ಮಣ್ಣಾಗಿಟ್ಟು ನಾ ಬಂಜೆ ಆಗೀನಿ ಯಪ್ಪಾ,

ಗೇಟಿನ ಸಪ್ಪಳವಾಯಿತು. ಬಿಳಿ ದೋತರ, ಶರ್ಟು, ಗಾಂಧಿ ಟೊಪ್ಪಿಗೆಯಿಂದ ಅಲಂಕೃತವಾದ ಕರೀಮೂತಿಯ ನಿಂಗಪ್ಪ ತುಟಿ ಪಿಟಿಕ್ಕೆನ್ನದೆ, ಸ್ಥಿತಪಜ್ಞನಂತೆ ಗಂಭೀರವಾಗಿ ಹೊರಗೆ ಹೋಗುತ್ತಿದ್ದ. ನಾಲ್ಕಾರು ವರುಷಗಳಿಂದ ಈ ಜೋಡಿ ಅಥರಾ ಇಲ್ನೋಡಿಯ ದಾಂಪತ್ಯ ವೈಖರಿಯನ್ನು ಸಮೀಪದಿಂದ ನೋಡಿದ ಸುನಂದೆಗೆ ಈ ದೃಶ್ಯವೇನೂ ಹೊಸದಾಗಿರಲಿಲ್ಲ.

'ನಂದಾ, ಚಹಾ ಆತೇನು ಕೇಳುತ್ತಾ ಅಡಿಗೆ ಮನೆಗೆ ಬಂದ ವಿಶ್ವನಾಥ ಸುನಂದೆಯ ಭುಜದ ಸುತ್ತ ಕೈ ಹಾಕಿ ಹತ್ತಿರ ಎಳೆದುಕೊಂಡು ಇವತ್ತ ಮಾನವ್ವನ ಸುಪ್ರಭಾತಕ್ಕೆ ಎಚ್ಚರಾತು' ಎಂದು ನಕ್ಕ, ಅವನಿಗೆ ಅದೊಂದು ನಗುವ ವಿಷಯವೇ ಸುನಂದೆಯ ಮನಸ್ಸಿಗೆ ಬೇಸರವಾದರೂ ತೋರಿಸಿಕೊಳ್ಳದೇ ಶುಭ್ರವಾಗಿ ಹೊಳೆಯುತ್ತಿದ್ದ ಗಂಡನ ತಂಪು ಕೆನ್ನೆಯ ಮೇಲೆ ಬೆರಳಾಡಿಸಿದಳು.

'ಪಾಪ! ಮಾನವೆಂದೂ ಒಂದು ಕಷ್ಟದ ಜೀವನಾ, ಬರೀ ಹೋರಾಟ, ಹಿಂದಿನ ಜನ್ಮದೊಳಗ ನನಗೆ ವಿಶ್ವಾಸ ಇಲ್ಲಾ ವಿಶೂ ಆದರೂ ಒಮ್ಮೊಮ್ಮೆ ಇಂಥಾ ಒಳ್ಳೇ



ಹೆಂಡತಿಗೆ ಅಥಾ ಗಂಡನ್ನ ದೇವರು ಯಾಕ ಗಂಟು ಹಾಕಿದ್ದಾನು. ಹೋದ ಜನ್ಮದೊಳಗೆ ಏನು ಪಾಪಾ ಮಾಡಿದ್ದಾಳು ಅನಸ್ತದ."

"ಸಿಲ್ಲಿ, ನೀವು ಹೆಂಗಸರು ಹಿಂಗ ವಿಚಾರ ಮಾಡ್ತೀರಿ, ಅವರ ಭವಿಷ್ಯ, ಸುಖಾ- ದುಃಖಾ ಎಲ್ಲಾ ಅವರ ಕೈಯೊಳಗ ಇರದ. ನನ್ನ ಕೇಳಿದರ ಆಕೀ ಗಂಡನ್ನ ಹೊರಗ ಹಾಕಬೇಕು. ಒದ್ದು ಹೊರಹಾಕಬೇಕು ನೀ ಇಲ್ಲೆ ಇರೂದು ಜರೂರಿಲ್ಲ ಇರೂದ ಇದ್ದರ ಹೇಳಿದ್ದು ಕೇಳಿಕೊಂಡು ಬಿದ್ದಿರು ಅನಬೇಕು."

'ಇದು ಜೀವನಾ ವಿಶೂ, ಲಗ್ನಾ ಮಾಡಿಕೊಂಡ ಮ್ಯಾಲೆ ಹೆಣ್ಣಿಗೆ ಅಳಕೋತ ಆದರೂ ಜೀವನಾ ಕಳೀಬೇಕಾಗತದ, ಹೋಗಿಬಿಡು ಅಂತ ಕೊಡಿವಿ ಕಳಿಸಾಕ ಅಂವಾ ಮೂಲ್ಯಾಗಿನ ಕಸಾ ಅಲ್ಲ, ಗಂಡ ಅದಾನ, ತಾಳಿ ಕಟ್ಟಿದಾಂವ ತನ್ನ ಹಕ್ಕು ಸಾಧಸತಾನ."

'ಸರಿಯಾಗಿ ಸಂಸಾರಾ ಮಾಡಿದರ ಆಂವಾ ಗಂಡ, ಇಲ್ಲಾಂದರ ಗುಂಡುಕಲ್ಲು, ಆ ಒಜ್ಜೆ ಯಾಕ ಹೊರಬೇಕು? ನಾ ದುಡದು ನಂದು, ಮಗಳು ಹೊಟ್ಟೆ ತುಂಬಿಸಿಕೋತೇನಿ, ನಿನಗ ಕೂಳು ಹಾಕೂದಿಲ್ಲ, ಹೋಗಿ ಬಿಡು ಅನಬೇಕು.

ಸಿಟ್ಟು ಬಂದಾಗ ಮಾನವ್ವ ಹೀಗೆ ಎಷ್ಟೋ ಸಲ ಹೇಳಿದ್ದನ್ನು ಸುನಂದೆ ಕೇಳಿದ್ದಳು. ಆದರೆ ಭಂಡ ನಿಂಗಪ್ಪ ಯಾವ ಎಗ್ಗಿಲ್ಲದೆ ಅವಳ ಮಾತುಗಳನ್ನೆಲ್ಲಾ ಗಾಳಿಗೆ ತೂರಿ, ಅವಳ ಬಯ್ಯುಳಕ್ಕೆ ಬೆಲೆ ಕೊಡದೆ, ಇದ್ದ ರೊಟ್ಟಿಗಳನ್ನು ತಿಂದು ತಿರುಗಲು ಹೋಗುತ್ತಿದ್ದ. ಓದು ಬರಹ ತಿಳಿಯದ, ಬರೀ ಮೈಮುರಿ ದುಡಿತವನ್ನೇ ತಿಳಿದಿದ್ದ ಅಮಾಯಕ ಮಾನವ ತಾನಿಲ್ಲದೆ ಬಾಳಲಾರಳು ಎನ್ನುವ ಗುಟ್ಟನ್ನು ಆ ಪುಂಡ ಚೆನ್ನಾಗಿ ತಿಳಿದು ಕೊಂಡಿದ್ದ.

ವಿಚಾರ ಮಾಡುತ್ತ ಸುನಂದ ಗಂಡನನ್ನು ಕೂಗಿದಳು. 'ವಿಶೂ ಲಗೂನ ಬಾ, ವಿಶಾಲನ್ನ ಸಾಲಿಗೆ ಬಿಟ್ಟು ನೀನು ಆಫೀಸಿಗೆ ಹೋಗಬೇಕು. ತಿಂಡಿ ತೊಗೊಂಡು ತಯಾರಾಗು.'

ಸುನಂದೆಯ ಮುಖ ಗಂಭೀರವಾಗಿದ್ದರೆ ವಿಶ್ವನಾಥನಿಗೆ ಅಸಮಾಧಾನ. ಅವಳು ಈಗಲೂ ಎರಡು ಮಕ್ಕಳ ತಾಯಿಯಾದ ಮೇಲೂ ನಗುತ್ತ ಅವನ ಹಿಂದೆ ಮುಂದೆ ಸುತ್ತುತ್ತ ಇರಬೇಕು. ತಾನು ಅವಳನ್ನು ಮುದ್ದು ಮಾಡುತ್ತಾ ಇರಬೇಕು. ಸಮಸ್ಯೆಗಳನ್ನು ತಲೆಯಲ್ಲಿ ಇಟ್ಟುಕೊಂಡರೆ ತಲೆ ಬಿಸಿಯಾಗುತ್ತದೆ. ಸಾಧ್ಯವಿದ್ದಷ್ಟು ಬೇಗ ಅದಕ್ಕೆ ಪರಿಹಾರ

ಹುಡುಕಬೇಕು. ಇಲ್ಲವಾದರೆ ಅದರ ಬಗ್ಗೆ ಯೋಚಿಸಲೇಬಾರದು. ಜೀವನ ಇರುವುದೇ ಎಂಜಾಯ್ ಮಾಡಲಿಕ್ಕೆ ಅದು ಬಿಟ್ಟು ತಮಗೆ ಸಂಬಂಧವಿಲ್ಲದ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳುವದಕ್ಕಲ್ಲ. ಎನ್ನುವುದೇ ವಿಶೂನ ಜೀವನ ಸಿದ್ಧಾಂತ ಅದನ್ನೇ ಮತ್ತೊಮ್ಮೆ ಸುನಂದೆಗೆ ಹೇಳಿದ.

"ಪರ ಚಿಂತೆ ಎಮಗೆ ಏಕೆ ಅಯ್ಯಾ" ಅಂತ ಬಸವಣ್ಣನವರು ವಚನಾ ಹೇಳ್ಯಾರಲ್ಲ. ಭಾಳ ಒಳ್ಳೆ ಮಾತು ಮಾನವ್ವ, ನಿಂಗಪ್ಪ ಜಗಳಾ ಆಡಿದರಂತ ನೀ ಯಾಕ ಮಾರೀ ಕೆಟ್ಟ ಮಾಡತೀ, ಹಗಲೆಲ್ಲಾ ಇವರ ಜಗಳ ಕೇಳಲಿಕ್ಕೆ ಅಗೂದಿಲ್ಲ, ಆಕೀಗೆ ನಿಂಗಪ್ಪನ ಕೂಡ ಸಂಸಾರಾ ಮಾಡಲಿಕ್ಕೆ ಆಗದಿದ್ದರೆ ಸೋಡಚೀಟಿ ಕೊಟ್ಟುಬಿಡು ಅನ್ನು.ಒಮ್ಮೆ ನಿಕಾಲಿ



ಆಗಿ ಹೋಗದ, ನಾನು ಆಫೀಸಿಗೆ ಈಗ ಹೋದಾಂವ ಸಂಜಿಗೆ ಬರೀನಿ. ನಾ ಹೊರಗೆ ಹೊರಡೂ ಮುಂದ ಹಿಂದೆ ಅಳಮಾರಿ ಮಾಡಬ್ಯಾಡಾ, ನಗನಗ್ತಾ ಇರೂ."

ವಿಶ್ವನಾಥ ಒಳ್ಳೆಯ ಗಂಡ ಹೌದು. ಆದರೆ ಸ್ವಾರ್ಥಿ. ಯಾವಾಗಲೂ ನಗ್ತಾ ಇರಬೇಕಂತೆ ಅದು ಹೇಗೆ ಸಾಧ್ಯ? ನಾನೇನೂ ಯಂತ್ರ ಅಲ್ಲವಲ್ಲ. ನನಗೂ ಭಾವನೆಗಳಿವೆ, ವಿಚಾರಗಳಿವೆ, ಸಂವೇದನೆಗಳಿವೆ. ಹೊರ ಜಗತ್ತಿಗೆ ಕಣ್ಣು, ಕಿವಿ ಮುಚ್ಚಿಟ್ಟುಕೊಂಡು ತನ್ನನ್ನು, ತನ್ನ ಮನೆಯನ್ನು ಮಾತ್ರ ನೋಡಿಕೊಂಡಿರಬೇಕು ಅನ್ನೋದು ಸ್ವಾರ್ಥದ ಪರಮಾವಧಿ. ಸುನಂದ ಅವನ ಆಲೋಚನೆಯ ರೀತಿಯನ್ನೇ ಮೆದುವಾಗಿ ಪ್ರಶ್ನಿಸಿದಳು.

'ವಿಶೂ, ನೀ ಹೇಳೋದು ಒಂದು ರೀತಿ ಖರೇ. ಅದರ ನಾನೂ ಬರೇ ಮಾನವನ ಬಗ್ಗೇನೆ ವಿಚಾರ ಮಾಡೂದಿಲ್ಲ. ಗಂಡನಿಂದ ಶೋಷಿತರಾಗುವ ಎಲ್ಲ ಹೆಣ್ಣುಗಳ ಬಗ್ಗೆ ವಿಚಾರ ಮಾಡ್ತೀನಿ. ಅವರ ಸಮಸ್ಯೆಗಳನ್ನು ತಿಳಿದುಕೊಳ್ಳೋದಕ್ಕೆ ಪ್ರಯತ್ನಪಡ್ತೀನಿ. ಸಮಾಜಶಾಸ್ತ್ರ, ಓದಿರೋದರಿಂದ ಈ ಸಮಸ್ಯೆಯ ಆಳ ನನಗೆ ಅರ್ಥ ಆಗ್ತದ. ಅದರ ಇದಕ್ಕೆ ಡೈವೋರ್ಸನ ಪರಿಹಾರ ಅನ್ನೋದು ತಪ್ಪು, ಈಗ ನೀನ ನೋಡು, ನಿನ್ನ ದೊಡ್ಡಮ್ಮನ ಮಗಳು ಕುಮುದಿನಿ ಅದಾಳಲ್ಲ. ಗ್ರಾಜುಯೇಟ್ ಆಗಿ ನೌಕರಿ ಮಾಡ್ತಾಳ. ಆಕೀಗ ಗಂಡ, ಮಾವ ಬಹಾಳ ತ್ರಾಸ ಕೊಡ್ತಾರಲ್ಲ ಆಕೀಗೆ ಯಾಕೆ ಗಂಡನ್ನ ಡೈವೋರ್ಸ್ ಮಾಡಲಿಕ್ಕೆ ನೀನು ಸಲಹಾ ಕೊಡೂದಿಲ್ಲಾ? ಅರ್ಥಿಕವಾಗಿ ಸ್ವತಂತ್ರ ಇದ್ದಾಳೆ. ಗಂಡನ್ನ ಬಿಟ್ಟು ಬಿಡಬಹುದಲ್ಲಾ."

'ನಂದಾ ಛೇ ಛೇ ನೀ ಸಮಸ್ಯೆನ್ನು ಸರಿಯಾಗಿ ಅರ್ಥಾ ಮಾಡಿಕೊಳ್ಳುದಿಲ್ಲಾ ಸುಮ್ಮನ ಮಾತಾಡ್ತಿ, ಕುಮುದಿನಿ ಯಾರು? ಮಾನವ್ವ ಯಾರು?".. ಕಸಬರಿಗೆ ಹಿಡಿದು ಒಳಬರುತ್ತಿದ್ದ ಮಾನವ್ವನನ್ನು ನೋಡಿ ಮಾತು ನಿಲ್ಲಿಸಿ ಶೂಸಿನ ಲೇಸು ಕಟ್ಟಿಕೊಂಡು ವಿಶ್ವನಾಥ ಎದ್ದುಹೋದ.

ಸುನಂದೆ ಕೊಟ್ಟ ಚಹ ಕುಡಿಯುತ್ತ ಮಾನವ್ವ ಮತ್ತೊಮ್ಮೆ ಮೂಗು ಸೀಟುತ್ತ ಕಣ್ಣೀರು ಹರಿಸಿದಳು. 'ನಮ್ಮವ್ವ ಸಾಯೂ ಮುಂದ ನನ್ನ ಸಣ್ಣ ಮಗಳಿಗೆ ಮೂಗುತಿ ಕೊಡ್ರಿ ಅಂತೇಳಿ ಅಣ್ಣ-ಅತ್ತಿಗೆಗೆ ಕೆಟ್ಟ ಆಗಿ ನನಗ ಕೊಟ್ಟಳ್ಳಿ ಅವ್ವಾರ, ಈಗ ಅದನ್ನೂ ನುಂಗಿ ನೀರು ಕುಡದಾ."

ಮಾನವನ ಮೂಗುತಿಯೆಂದರೆ ಸುನಂದೆಗೂ ಹೊಸ ವಸ್ತುವಲ್ಲ. ಜೋಳದ ಕಾಳಿನಷ್ಟು ದೊಡ್ಡ ಒಳ್ಳೆಯ ಮುತ್ತಿನ ಮೂಗುತಿ. ಬಂಗಾರದ್ದು. ಅಂಥದನ್ನು ಮಾಡಿಸಲು ಈ ದಿನಗಳಲ್ಲಿ ಐದಾರು ನೂರು ರೂಪಾಯಿ ಬೇಕಾದೀತು. ಭದ್ರವಿಲ್ಲದ ಕೋಣೆ, ಕೈಶುದ್ಧ ಇಲ್ಲದ ಗಂಡ, ಪಾಪ, ಮಾನವ್ವ ಏನು ಮಾಡಿಯಾಳು? ಅವ್ವ ಕೊಟ್ಟ ಆಸ್ತಿಯನ್ನು ಜೋಪಾನವಾಗಿಟ್ಟುಕೊಳ್ಳಲು ಸುನಂದೆಯ ಕೈಯಲ್ಲಿಯೇ ಕೊಟ್ಟಿದ್ದಳು. ತಾನು ಮಾತ್ರ ಸಂತೆಯಲ್ಲಿ ಜೋಗೇರ ಹತ್ತಿರ ಕೊಂಡ ಕೆಂಪು ಹರಳಿನ ಮೂಗು ಬೊಟ್ಟು ಇಟ್ಟುಕೊಂಡು ನಾಳೆ ನಮ್ಮ ಶೇಕವ್ವನ ಮದುವ್ಯಾಗ ಮೂಗುತಿ ಆಕೀಗ ಕೊಡ್ತೀನಿ' ಎಂದು ಹಿಗ್ಗುತ್ತಿದ್ದಳು.

ಒಂದೆರಡು ತಿಂಗಳ ಹಿಂದೆ ಶೇಕವ್ವ ಮೈನೆರೆದಾಗ ಇದ್ದೊಬ್ಬ ಮಗಳ ಸಡಗರ



ನೋಡಲು ಮಾನವ್ವ ಅವಳನ್ನು ಐದು ದಿನ ಕೂಡ್ರಿಸಿ ಆರತಿ ಮಾಡಿದಳು. ಕೆಲಸ ಮಾಡುವ ಮನೆಗಳಲ್ಲಿ ಕೈಗಡ ತಂದು ಮಗಳಿಗೆ ಸೀರೆ, ಕುಬಸ, ಉತ್ತತ್ತಿ, ಕೊಬ್ಬರಿ- ಬೆಲ್ಲ ತರಿಸಿದ್ದಳು. ತಂದು ಕೊಟ್ಟವನು ನಿಂಗಪ್ಪನೇ, ತನ್ನ ಹೋಟೇಲ್ ಖರ್ಚು, ಬಸ್ಸು, ಬೀಡಿ ಎಂದು ಅವಳಿಂದ ಹತ್ತಿಪ್ಪತ್ತು ರೂಪಾಯಿ ಹೆಚ್ಚಿಗೆ ಕಿತ್ತಿದ್ದ. ತನ್ನ ಮನೆಯ ಶುಭ ಕಾರ್ಯಕ್ಕೆ ಹಳ್ಳಿಯಿಂದ ಬಳಗವನ್ನೂ ಕರೆಸಿದ್ದಳು. ಆಗ ಸುನಂದೆಯೇ ಶೇಕವನಿಗೆ ಹಾಕಲು ಮೂಗುತಿ ತೆಗೆದುಕೊಟ್ಟಿದ್ದಳು. ಶೇಕವ್ವನ ಮೇಲೆ ಹುಟ್ಟಿದ ಎರಡೂ ಗಂಡು ಮಕ್ಕಳು ಸತ್ತು ಹುಟ್ಟಿದ್ದವಂತೆ. ಅವಳಿಗೆ ಇನ್ನು ಮಕ್ಕಳೇ ಬೇಡವೆಂದು ಡಾಕ್ಟರರೇ ತೀರ್ಮಾನಿಸಿ ಆಪರೇಷನ್ ಮಾಡಿದ್ದರು. ಅದನ್ನು ನೆನೆಸಿ ಸುನಂದೆಯ ಮುಂದೆ ಆಗಾಗ ಕಣ್ಣೀರು ಹಾಕುತ್ತಿದ್ದಳು ಮಾನವ್ವ ಈಗಂತೂ ಶೇಕವ್ವನೇ ಅವಳಿಗೆ ಗಂಡು- ಹೆಣ್ಣೆ ಎಲ್ಲಾ ಅವಳಿಗೆ ಸಾಲೆ ಕಲಿಸಿ ಒಳ್ಳೆಯ ವರನಿಗೆ ಕೊಟ್ಟು ಮದುವೆ ಮಾಡುವುದೇ

ಅವಳ ಜೀವನದ ಗುರಿ.

ಮಗಳು ದೊಡ್ಡವಳಾದ ದಿನದಿಂದ ನಿಂಗಪ್ಪನಿಗೆ ವರ ಹುಡುಕಲು ಹೇಳಿದ ಮಾನವ್ವ ಮದುವೆಯಾದ ಮೇಲೆ ಮಗಳೊಡನೆ ಮೂಗುತಿಯು ಹೋಗುವದೆಂದು ತಿಳಿದು ತಾನೊಂದಿಷ್ಟು ದಿನ ಇಟ್ಟುಕೊಂಡು ಅಕ್ಕರತೆ ಮುಗಿಸಿಕೊಳ್ಳಲು ಬಯಸಿದ್ದಳು. ಅಂಥ ಮೂಗುತಿಯೇ ಮಾಯವಾಗಿದೆಯಲ್ಲ!

ಒಂದು ದಿನ ಸುನಂದೆಯ ಬಳಿಗೆ ಬಂದು ಮಾನವ್ವ ಬ್ಯಾಂಕ್ ಪಾಸ್ ಬುಕ್ ತೋರಿಸಿದಳು. ಎಂಥ ಸಾಹಸಿ ಈ ಹಳ್ಳಿ ಹೆಣ್ಣು ಎಂದು ಅಚ್ಚರಿ ಸುನಂದೆಗೆ, "ಅವ್ವಾರ ಶೇಕವ್ವನ ಮದುವಿಗೆ ರೊಕ್ಕಾ ಕೂಡಸಾಕ ಹತ್ತೇ. ತಿಂಗಳಾ ಇಪ್ಪತ್ತು ರೂಪಾಯಿ, ಹಿರಾನ ಹೋಗಿ ತುಂಬಿ ಬರತಾ. ಒಂದೀಟು ಲೆಕ್ಕ ಏಟ ಆಗೇತಿ ನೋಡ್ರಿ."

ಪಾಸ್ ಬುಕ್ ನೋಡಿದಾಗ ಸುನಂದೆಯ ಮನಸ್ಸಿಗೆ ಪಿಚ್ಚೆನಿಸಿತು. ಅವಳು ಹೇಳಿದ ಲೆಕ್ಕಕ್ಕಿಂತ ಐವತ್ತು ರೂಪಾಯಿ ಕಡಿಮೆ ಇದ್ದವು. ನಿಂಗಪ್ಪ ಇಲ್ಲೂ ತನ್ನ ಕೈಚಳಕ ತೋರಿಸಿದ್ದ. ತಾನು ಅವಳಿಗೆ ಯಾವ ರೀತಿ ತಾನೇ ಸಹಾಯ ಮಾಡಬಲ್ಲಳು. 'ನಿನಗೆ ಬೇಕಾದರೆ ಇನ್ನೂ ಇದ್ದತ್ತು ರೂಪಾಯಿ ಹೆಚ್ಚಿಗೆ ಸಂಬಳ ಕೊಡು. ಸೀರೆ, ಕುಪ್ಪಸ, ಚಹ, ತಿಂಡಿ ಅಂತೂ ಕೊಟ್ಟೇ ಕೊಡುತ್ತೀ, ಇದಕ್ಕೂ ಹೆಚ್ಚಿಗೆ ಏನೂ ಹಚ್ಚಿಕೊಳ್ಳಲು ಹೋಗಬೇಡ' ಎಂದು ವಿಶ್ವನಾಥ ತನಗೆ ಮೊದಲೇ ಎಚ್ಚರಿಸಿದ್ದ. ಸಿಟ್ಟು ಬಂದರೆ ಅವರಿಗೆ ಕೋಣೆ ಬಿಟ್ಟು ಹೋಗಲು ಗಂಡ ಹೇಳುವವನೇ. ತನ್ನ ಗಂಡನನ್ನು ಶಪಿಸುತ್ತ ಅಳುತ್ತ ಹೊರಟ ಮಾನವನಿಗೆ ಹೇಗೆ ಸಮಾಧಾನ ಹೇಳಬೇಕೆನ್ನುವುದು ತಿಳಿಯದೆ ಮಂಕಾದಳು ಸುನಂದೆ.

ತಮ್ಮ ಕೋಣೆಯ ಕೀಲಿ ಹಾಕಿದ್ದರಿಂದ ಶಾಲೆಯಿಂದ ಬಂದ ಶೇಕವ್ವ ಸುನಂದೆಯೊಡನೆ ಅಕ್ಕಿ ಆರಿಸುತ್ತ ಕುಳಿತವಳು ಗೇಟಿನತ್ತ ನೋಡಿ ಅವ್ವ ಬಂದಳ್ಳಿ ಎನ್ನುತ್ತ ಓಡಿದಳು. ಮಾನವ್ವನ ಆಕಾರ ಕಂಡು ಗಾಬರಿಯಾದ ಸುನಂದೆಗೆ ಮಾತೇ ಹೊರಡಲಿಲ್ಲ. ಅವಳ ಮೈಮೇಲಿನ ಸೀರೆ, ಕುಪ್ಪಸಗಳು ಅಲ್ಲಲ್ಲಿ ಹರಿದಿದ್ದವು. ತುರುಬು ಬಿಚ್ಚಿ ಕೂದಲು ಹಾರಾಡುತ್ತಿದ್ದವು. ಮುಖ ಕೈಗಳ ಮೇಲಾದ ಗೀರು ಗಾಯಗಳಿಂದ ರಕ್ತ ಒಸರುತ್ತಿತ್ತು. ಒಂದು ಕೈಯಲ್ಲಿ ಚಪ್ಪಲಿ ಇತ್ತು. ಎದೆಯ ಮೇಲಿನ ಸೆರಗಿನ ಖಬರು ಇರಲಿಲ್ಲ.

ಮುಖ ಸಿಟ್ಟಿನಿಂದ ಕೆಂಪಾಗಿ ರಿಯುತ್ತಿತ್ತು. ಶೇಕವ್ವನನ್ನು ತಬ್ಬಿಕೊಂಡು ನೆಲಕ್ಕೆ ಕುಳಿತು ಅಳಹತ್ತಿದಳು ಮಾನವ್ವ, ಅವಳ ದುಃಖ ಹರಿದು ಹೋಗುವವರೆಗೆ ತುಟಿ ಎರಡು ಮಾಡದೆ ಸುನಂದೆ ಸುಮ್ಮನೆ ನೋಡುತ್ತಿದ್ದಳು.

"ಆ ಬೋಸುಡಿ ಕಡಿಗೂ ನನ್ನ ಮೂಗಿ ಕೊಡಲೇ ಇಲ್ಲೀ ಆವ್ವಾರ."

'ಏನಿದು? ಯಾರು ಅಕಿ?" ನಾಲ್ಕಾರು ತಿಂಗಳ ಹಿಂದೆ ಕಳೆದು ಹೋದ ಮೂಗಿತಿಯ ವಿಷಯ ಮತ್ತೆ ಬಂದಾಗ ಸುನಂದೆಯ ಕುತೂಹಲ ಹೆಚ್ಚಿತು.

"ಈ ಊರ ಭಾಡ್ಯಾ ನನ್ನ ಮೂಗಿ ಬಿಚಿಗೊಂಡು ಆಕೀಗೆ ಕೊಟ್ಟಿದ್ದಾನು ಅನ್ನೂ ಸಂಶೇ ನನಗೆ ಇತ್ರಿ ಅವಾರ. ಇವತ್ತ ಚೆನ್ನವ್ವ ಹೇಳಿದ್ದು, ಆ ಮಲ್ಲಿ ನಿನ್ನ ಮೂಗಿನ್ಯಾಗಿಂದು ಇಟಕೊಂಡಾಳ ಅಂತ."

'ಮುಂದ? ನೀ ಆಕೀ ಕೂಡ ಜಗಳಾ ಮಾಡಿದೇನ?"

'ಮತ್ತ ಕೇಳಿ ಸುಮ್ಮನ ಇರಲೇ. ಹಾಲು ಕೊಡೂ ಬಸಪ್ಪನ ತಂಗಿರಿ ಆಖಿ. ಫೋಸ್ಟಿನ ಹಂತ್ಯಾಕ ಐತ್ರಿ ಅವರ್ಮನಿ. ಆಕಿ ಕಟಿಗ್ಗೆ ಹೋಗೂ ಮುಂದ ಬರೂಮುಂದ ಹಾದ್ಯಾಗ ಕುಂತಿರತಾನ ಇವಂಗ ಗಂಟು ಬಿದ್ದಾಳೆ ಆ ಮನಿಹಾಳ ಮೂಳಿ."

"ಆಕೀನ ಎಂದೂ ನಮ್ಮ ಕಂಪೌಂಡಿನ್ಯಾಗ ನೋಡಿಲ್ಲಾ. ಆಕಿ ಹ್ಯಾಂಗ ಬಂದು ಗಂಟು ಬಿದ್ದಳ ನಿಂಗಪ್ಪಗ ಸುನಂದೆ ಛೇಡಿಸಿದಳು.

ಕಣ್ಣೀರಿನಲ್ಲೇ ನಗುತ್ತ ಮಾನವ್ವ, ಚ್ಯಾಪ್ತಿ ಮಾಡ್ತಿರೇ ಅವ್ವಾರ. ಇದ ನಮ್ಮ ಮೂಳ ಹೊಕ್ಕತ್ರಿ ಆ ಹಂತ್ಯಾಕ. ಗಂಡಸರ ಕಚ್ಚಿ ಬದ್ರ ಇರೋದಿಲ್ಲ ಬಿಡಿ. ಅದರ ಆಕಿ ಮುಕ್ಕಾಟಲೆ ಮಾನವಂತ್ರಿ ಆಗಿ ಇರಬೇಕ."

ಸುನಂದೆಯ ಕುತೂಹಲ ವಿಚಿತ್ರ ಭಯಕ್ಕೆ ತಿರುಗುತ್ತಿತ್ತು. ತನ್ನ ಗಂಡ ಬೇರೆ ಹೆಣ್ಣಿನ ಸಂಗ ಮಾಡಿದರೆ ಕ್ಷಮಿಸಬಲ್ಲಳು ಮನಪ್ಪ ಆದರೆ ಗಂಡನಿಲ್ಲದ ಮಲ್ಲಿ ಮಾಡಿದ್ದು ಮಾತ್ರ ಮಾನಗೇಡಿಯ ಕೆಲಸ. ನಿಂಗಪ್ಪನನ್ನು ದೂರವಿಟ್ಟು ನಿನ್ನ ವಸ್ತು ನೀನು ತೆಗೆದುಕೊ ಎಂದು ಇವಳ ಮನೆಗೆ ತಂದು ಒಪ್ಪಿಸಬೇಕಾಗಿತ್ತೇನೋ ಮಾನವನಿಗೆ. ತಪ್ಪು ಮಾಡಿದ್ದು ಗಂಡಸಾದರೂ ಹೆಣ್ಣು ಇನ್ನೊಂದು ಹೆಣ್ಣನ್ನೇ ದೂರಬೇಕೆ? ಅವಳ ಬಗ್ಗೆ ಸಹಾನುಭೂತಿ ಅವಳಲ್ಲಿ ಹುಟ್ಟದೇ? ಸುನ ದೆಯ ಒಡಲೊಳಗೆ ಒಂದು ನೋವು ಹುಟ್ಟಿತು. ಅದಕ್ಕೆ ರೆಕ್ಕೆ – ಪುಕ್ಕಗಳೂ ಮೂಡಿಕೊಂಡು ಚಿತ್ರವಾಯಿತು.

ಮೂರ್ನಾಲ್ಕು ವರ್ಷಗಳ ಹಿಂದೆ ಸಂಗೀತಳು ಬಸಿರನಲ್ಲಿದ್ದಾಗಿನ ಮಾತು. ಅಗಸನಿಗೆ ಕೂಡಲೆಂದು ಗಂಡನ ಪ್ಯಾಂಟು-ಶರ್ಟ್ ಖಾಲಿ ಮಾಡುತ್ತಿದ್ದ ಸುನಂದೆಯ ಕೈಗೊಂದು ಪತ್ರ ಸಿಕ್ಕಿತು. ಅವರ ಆಫೀಸಿನ ಹುಡುಗಿಯೊಬ್ಬಳು

ಬರೆದದ್ದು. ವಿಶ್ವನಾಥ ಟೂರಿಗೆ ಹೋಗಿದ್ದ ಸಮಯದಲ್ಲಿ ಅಲ್ಲಿ ಅವಳ ತಂದೆಗೆ ಹುಷಾರಿಲ್ಲದಾಗ ಇವನು ಸಹಾಯ ಮಾಡಿದ್ದ, ಕೃತಜ್ಞತೆ ಸಲ್ಲಿಸಿ, ಇನ್ನೊಮ್ಮೆ ಬಂದಾಗ ಖಂಡಿತ ತಮ್ಮ ಮನೆಗೆ ಬರಬೇಕೆಂದು ಬರೆದಿದ್ದಳು.

ಮಾತೇನೋ ಸಣ್ಣದು ಆದರೂ ಸುನಂದೆಗೆ ಏಕೋ ಸಂಕಟವಾಗಿತ್ತು. ಪತ್ರ ಬಂದಾಗ ಇವಳಿಗೆ ತೋರಿಸಿ ಆ ಹುಡುಗಿಯ ವಿಷಯ ಹೇಳಿಬಿಟ್ಟಿದ್ದರೆ



ನಿರುಂಬಳವಾಗುತ್ತಿತ್ತು. ಇವಳಾಗಿಯೇ ಕೇಳಿದಾಗ ಮರೆತು ಬಿಟ್ಟಿದ್ದೆ, ಅದೇನು ದೊಡ್ಡ ವಿಷಯ ಅಲ್ಲ. ಅದನ್ನು ಬೆಳೆಸಬೇಡ ಎಂದು ದನಿ ಏರಿಸಿ ಮಾತನಾಡಿದ್ದ ವಿಶ್ವನಾಥ. ಆ ಮಾತಿನ ಹಿಂದೆ ನಾನೇನು ಮಾಡಿದರೂ ಪ್ರಶ್ನಿಸಲು ನೀನಾರು ಎನ್ನುವ ಧ್ವನಿ ಇತ್ತು. ಇವಳೂ ಕೂಗಾಡಿ ಮಾತು ಬಿಟ್ಟು ತವರು ಮನೆಗೆ ಹೊರಟು ಹೋಗಿದ್ದಳು. ಆದರೆ ಮುಂದೆ ಆದದ್ದೇನು? ಮಗಳು ಹುಟ್ಟಿದ ಮೇಲೆ ಕರೆಯಲು ಬಂದ ಗಂಡನೊಡನೆ ಸುಮ್ಮನೆ ಬಂದುಬಿಟ್ಟಿದ್ದಳು. ಆದರೆ ಆ ನೋವು ಬೆರಳಾಡಿಸುತ್ತ ಇರುತ್ತಿತ್ತು.

“ಅವ್ವಾರ ಇರಲಿ ಬಿಡಿ, ಆಳತೀರಾಕ

ವಿಶ್ವನಾಥ ಹೇಳುವ ಹಾಗೆ ತಾನು ಅಗತ್ಯಕ್ಕಿಂತ ಹೆಚ್ಚಿನ ವಿಚಾರ ಮಾಡುತ್ತಿದ್ದೇನೆ ಎಂದುಕೊಂಡು ನಕ್ಕಳು ಸುನಂದೆ. 'ಮುಂದ ಏನಾತು?

'ನನ್ನ ಮೂಗುತಿ ತಿರುಗಿ ಕೊಡು ಅಂತ ಮಲ್ಲಿಗೆ ಕೇಳಿ. ಆಕಿ ಹೊಯ್ಯಾಲಿ ಹಾಂಗ ಕೊಟ್ಟಾಳೆ, ನಿನ್ನ ಗಂಡನ್ನ ಕೇಳ ನನಗೊತ್ತಿಲ್ಲ ಅಂದು ಹೊಂಟ, ನಾ ಯಾಕ ಬಿಡಲಿ, ತುರುಬು ಹಿಡದು ಜಗ್ಗಿ ಪಟಾ ಪಟಾ ಬಡದಿ. ಆಕೀನೂ ನಾಕ ಏಟ ಬಡಿದು ನನ್ನ ಸೀರಿ, ಕುಬಸಾ ಹರದಳ್ಳಿ, ಮೂಗುತೀ ಜಗ್ಗಾಕ ಹೋದೆ ಸಿಗಲಿಲ್ಲಾ. ಮೂಗ ಕಡದಿನ್ನಿ, ಲಬಾ ಲಬಾ ಹೊಡ್ಕೊಂಡಳಿ ಹೊಟ್ಟಾಗಿನ ಸಂಕಟಕ ಕಾಲಾಗಿನಂದು ತೊಗೊಂಡು ಬಾರಿಸಿದಿನ್ನಿ, ಬಸರ ಹೆಣಮಗಳಿ, ಏನಾರ ಆದೀತು ಅಂತ ಒಣ್ಯಾನ್ನವರು ಬಂದು ಬಿಡಿಸಿದ್ರಿ. ಆದರೂ ನನ್ನ ಮೂಗತಿ ಸಿಗಲಿಲ್ಲಾ.'

'ನಿಂಗಪ್ಪ ಇದೇನ ಅಲ್ಲೆ?'

“ಅಂವಾ ಯಾಕ ಸಾಯಾಕ ಬರತಾ ಅಲ್ಲೆ. ಎಲ್ಲಿ ಹೋಗ್ಯಾನೋ ಎಡ್ಡ ದಿನಾ ಆತು ಮನೀಗ ಬಂದಿಲ್ಲಾ. ಸಂತೀನೂ ಮಾಡಿ ನಡೀ ಶೇಕೂ, ಒಲಿ ಹೊತ್ತು. ಹಸದಿದ್ದೀ. ಒಂದೀಟ ರೇಶನ್ ಅಕ್ಕಿ ಅದಾವ ಹಾಡ್ತೀನಿ.' ಮಾನವ್ವ ಎದ್ದಳು.

* * * * *

“ನಿಮ್ಮ ಮನೀ ಹಿಂದಿನ ಕ್ವಾಣಿ ಕೊಡ್ತಿರೇ ನಮಗ ಇರಾಕ.” ಒಂದು ಸಂಜೆ ನಿಂಗಪ್ಪ ಬಂದು ಕೇಳಿದ್ದ. ಮಾನವ್ವ ಅವನ ಹಿಂದೆ ನಿಂತಿದ್ದಳು. “ನನ್ನ ಹೇಣ್ಣಿ ನಿಮ್ಮ ಮನೀ ಕಸಾ ಮುಸುರಿ ಮಾಡ್ತಾಳು. ಹೇಳಿದ್ದ ಕೆಲ್ಸಾ, ಮಾಡ್ತಾಳು. ಕೊಟ್ಟರ ನಿಮ್ಮ ಉಪಕಾರ ಭಾಳ ಆಕ್ಕೆತಿ. ನಾವು ಇದ್ದ ಕ್ವಾಣಿ ಮುನಸಿಪಾಲಿಟಿಯವರು ಕೆಡವತಾರಿ ಇರಾಕ ಜಾಗಾ ಇಲ್ಲ ನಮಗ.” ನಿಂಗಪ್ಪ ವಿನಯದಿಂದ ಬೇಡಿಕೊಂಡಿದ್ದ ಒಳ್ಳೆಯ ಕೆಲಸದವರು ಸಿಗದೆ ಪರದಾಡುತ್ತಿದ್ದ ವಿಶ್ವನಾಥ-ಸುನಂದೆಯರು ಒಂದೆರಡು ದಿನ ವಿಚಾರ ಮಾಡಿ ಒಪ್ಪಿಗೆ ಕೊಟ್ಟಿದ್ದರು. ಬರಬರುತ್ತ ಅವರ ಸಂಸಾರದ ಸಂದಿಗೊಂದಿಗಳೆಲ್ಲ ಪರಿಚಯವಾಗಿದ್ದವು. ಹತ್ತುಹನ್ನೆರಡು ವರುಷಗಳ ಹಿಂದೆ ವಾಚ್‌ಮನ್ ಆಗಿದ್ದ ನಿಂಗಪ್ಪ ಹೆಣ್ಣಾಳನ್ನು ಕೆಣಕಿ ಕೂಲಿಯವರಿಂದ ಹೊಡೆತ ತಿಂದು ಆಸ್ಪತ್ರೆ ಸೇರಿದ್ದ. ಮಾನವ ದುಡಿದು ಜೋಪಾನ ಮಾಡಿದ್ದಳು. ತಾನು ಅದುವು ಮನುಷ್ಯನೆಂದು ನಿಂಗಪ್ಪ ಈಗಂತೂ ದುಡಿತವನ್ನೆ ಸಂಪೂರ್ಣ ಬಿಟ್ಟುಕೊಟ್ಟಿದ್ದ. ವಿಷಯ ತಿಳಿದ ಮೇಲೆ ವಿಶ್ವನಾಥ ಕೂಗಾಡಿ ಈಗ ಸುಮ್ಮನಾಗಿದ್ದ. ತಿಂಗಳುಗಳು ಕಳೆದರೂ ಮಾನವ್ವ ತನ್ನ ಮೂಗುತಿ ನೆನಸಿಕೊಂಡು ಆಳುವುದನ್ನು, ಗಂಡನನ್ನು ಶಪಿಸುವುದನ್ನು ಬಿಟ್ಟಿರಲಿಲ್ಲ.



'ಅವ್ವಾರ' ಮಾನವ್ವ ಒಂದು ಬಟ್ಟೆಯ ಗಂಟನ್ನು ಹಿಡಿದುಕೊಂಡು ಹಿತ್ತಿಲ ಬಾಗಿಲಿಗೆ ನಿಂತಿದ್ದಳು. ಏನೆಂದು ಕೇಳಲು ಹೋದ ಸುನಂದೆ ಮಾತು ಬಾರದೆ ನಿಂತಳು. ಕಣ್ಣುಮುಚ್ಚಿ ಬೆಚ್ಚಗೆ ಮಲಗಿದ್ದ ಗಂಡು ಮಗು ಅವಳ ಉಡಿಯಲ್ಲಿತ್ತು.

'ಮಲ್ಲಿಗೆ ಈಗೊಂದ ತಿಂಗಳಿಂದ ಆರಾಮ ಇದ್ದಿದ್ದಿಲ್ಲಂತ್ರಿ, ದಿನಾ ತುಂಬಿದ್ದವು. ಅದೇನೋ ಬಡ್‌ಪಶರ್, ಅದು ಹೆಚ್ಚಾಗಿತ್ತಂತ, ಆಶಕ್ತನೂ ಆಗಿದ್ದಳಿ, ಗಂಡ ಇಲ್ಲ ಮಿಂಡಗ ಬಸರಾದ್ರ ಯಾರ ಕೇಳಬೇಕ್ರಿ, ತಾನೂ ದುಡದು ತಿನ್ನಬೇಕು.. ನೆಟ್ಟಗೆ ಹೊಟ್ಟಿಗೆ ಇರತಿದ್ದಿಲ್ಲ. ಮೊನ್ನೆ ಬ್ಯಾನಿ ಎದ್ದಾಗ ಮುನಿಸಿಪಾಲ್ಟಿ. ದವಾಖಾನಿಗೆ ಇಂವನ ಕರಕೊಂಡ ಹೋಗಿದ್ರಂತ. ಖರ್ಚಿಗೆ ಮೂಗುತಿ ಮಾರಿದಂತ, ಹಡ್ಯಾಣ ತರಾಸು ಆಗಿ ಮಲ್ಲಿ ಸತ್ತಳಿ, ಆದರ ಈ ದಿಕ್ಕೇಡಿ ಕೂಸಾ ಬದಕೀತು. ಇಂವಾ ತೊಗೊಂಡು ಬಂದು ನನ್ನ ತಪ್ಪಾತು ಹೊಟ್ಟಾಗ ಹಾಕೋ, ಇದು ನಂದ ಕೂಸು. ಪರದೇಶಿ. ಈ ನಿನ್ನ ಕೈಯ ಕಾಲಂತ ತಿಳಕೊಂಡ ಹಿಡಿತೀನಿ. ಇದಕ್ಕೆ ತಾಯಿ ಆಗು. ಸ್ವಾಪಾನಾ ಮಾಡು ಅಂತ ಅಳಾಕ ಹತ್ತಿದ, ನನಗೂ ದುಕ್ಕ ಆತು. ಆ ಹೊಲಸರಂಡಿ ಸತ್ತುಹೋದಳು. ಈ ಕೂಸು ಏನು ಪಾಪಾ ಮಾಡೇದ, ನನಗೂ ಗಂಡು ಮಕ್ಕಳು ಇಲ್ಲಾ. ಇರಲಿ ಬಿಡು ಅಂದಿನಿ, ಹಾಂಗ ಬಿಟ್ರ ಅನಾತ ಆಕ್ಕತ್ರಿ, ಕೂಸಿಗೆ ಒಂದು ತುತ್ತು ಹಾಕಿ ಬೆಳೆಸಿದರ ಶಿವಾ ಮೆಚ್ಚಾನು ಅಲ್ಲೀ ಆಳ್ವಾರ?'

ಗೊಂಬೆಯಂತೆ ಗದ್ದಕ್ಕೆ ಕೈಕೊಟ್ಟು ಸುನಂದ ಮೂಕಳಾಗಿ ನಿಂತೇ ಇದ್ದಳು. ಚಳಿಗೆ ಬೆದರಿ ಕಣ್ಣು ತೆಗೆದು ಅಳುತ್ತಿದ್ದ ಮರಿನಿಂಗಪ್ಪನನ್ನು ಸೆರಗು ಮುಚ್ಚಿ ಎದೆಗೆ ಒತ್ತಿಕೊಂಡಳು ಮಾನವ್ವ.

# ಕತೆಯಾಯಿತು ಘಟನೆ

**- ಡಾ. ಕಮಲಾ ಹಂಪನಾ**

"ಸದ್ಯ ನಿನ್ನ ಪರೀಕ್ಷೆ ಮುಗಿದದ್ದು ನನಗೇ ಪರೀಕ್ಷೆ ಮುಗಿದಂತೆ ಆಗಿದೆ. ನಿನ್ನ ಆನಂದಕ್ಕಿಂತಾ ನನ್ನ ಆನಂದವೇ ಮಿಗಿಲು, ಎದುರಿಗೆ ಕಾಫಿ ಕುಡಿಯುತ್ತ ಕುಳಿತಿದ್ದ ಗೌರಿಯ ಕಣ್ಣಲ್ಲಿ ದೃಷ್ಟಿ ನೆಟ್ಟು ಹೇಳಿದ ಮಹೇಶ.

ಇಲ್ಲಿಯವರೆಗೂ ಪರೀಕ್ಷೆಯ ಗಡಿಬಿಡಿಯಲ್ಲಿ ಯಾವ ಸಮಸ್ಯೆಯೂ ನನ್ನ ತಲೆ ತಿನ್ನಲಿಲ್ಲ. ಎಲ್ಲಕ್ಕೂ ಮುಸುಕು. ಎಳೆದು ಬಿಟ್ಟಿದ್ದೆ; ಮುಗುಲ್ನಕ್ಕೂ ಹೇಳಿದಳು ಗೌರಿ.

'ಸದ್ಯ ಅದರಲ್ಲಿ ನನ್ನನ್ನು ಮರೆತು ಬಿಡಲಿಲ್ಲವಲ್ಲಾ' ನಗುತ್ತಾ ನುಡಿದ ಮಹೇಶ. "ನಿಮ್ಮನ್ನು ಮರೆತಿದ್ದೆ ಈಗ ನಿಮ್ಮ ಮುಖ ನೋಡಿದ ಮೇಲೆ ನಿ ನೆನಪಾದದ್ದು, ಅದೇ ಮೆಲುನಗೆಯಿಂದ ಉಸಿರಿದಳು ಗೌರಿ.

"ನಿಜವಾಗಿ ಹೇಳು, ನನ್ನನ್ನು ಮರೆತಿದ್ದೆ ಎಂದು! ಎಲ್ಲಿಂದ ಬರುತ್ತೆ ಆ ಮಾತು, ಗಂಟಲಿಂದಲೋ ಅಥವಾ ನಾಲಿಗೆಯ ತುದಿಯಿಂದಲೋ?

ನಿಜ, ಹೃದಯದಿಂದಂತೂ ಬಂದುದಲ್ಲ.

ನನಗೆ ಗೊತ್ತಿಲ್ಲವೇ ನನ್ನ ಹುಡುಗಿಯ ಮನಸ್ಸು!

ಗೌರಿಯ ಮುಖ ಕೆಂಪುತಾವರೆಯಾಗಿತ್ತು. ಅವನ ನೋಟವನ್ನು ಎದುರಿಸಲಾರದೆ ತಲೆತಗ್ಗಿಸಿದಳು ಗೌರಿ.

'ಏಕೆ ಇಷ್ಟಕ್ಕೆ ಇಷ್ಟು ನಾಚಿದರೆ ಹೇಗೆ? ನಾಳೆ ಮದುವೆಯಾಗಿ ಮನೆ ಮನ ತುಂಬಿದ ಮೇಲೆ ನನ್ನ ಕೈಗೆ ಸಿಕ್ಕುವೆಯಲ್ಲಾ, ಆಗೇನು ಮಾಡುವೆ?'

"ಒಡನೆಯೇ ಗೌರಿಯ ಮುಖದಲ್ಲಿ ಆನಂದದ ಜೊತೆಗೆ ಆತಂಕವೂ ಮನೆ ಮಾಡಿತು. ಕಣ್ಣುಗಳಲ್ಲಿ ಬಹಳ ತೆಳುವಾಗಿ ನೀರು ತುಂಬಿತು.

'ಹುಚ್ಚಿ, ಆಗಲೇ ಕಣ್ಣಲ್ಲಿ ನೀರು ಬಂದುಬಿಟ್ಟಿತೇ? ಬೆಂಗಳೂರ ನಲ್ಲಿಯಲ್ಲಿ ಕುಡಿಯಲು ನೀರು, ಇಲ್ಲದಿದ್ದರೂ ಈ ಹೆಣ್ಣುಮಕ್ಕಳ ಕಣ್ಣಲ್ಲಿಮಾತ್ರ ನೆನಸಿಕೊಂಡ ಒಡನೆಯೇ ನೀರು ಧಾರಾಕಾರವಾಗಿ ಸುರಿಯುತ್ತೆ, ಇದು ಆನಂದಭಾಷ್ಪ ತಾನೇ?' ಮಹೇಶನ ಪ್ರಶ್ನೆಗೆ ಹೌದು ಎನ್ನುವಂತೆ ಗೌರಿ ತಲೆಯಾಡಿಸಿದಳು. ಒಂದು ಕ್ಷಣ ಇಬ್ಬರೂ ತಮ್ಮ ತಮ್ಮದೇ ಆದ ಕನಸಿನಲ್ಲಿ ವಿಹರಿಸಿದರು. ಆನಂತರ ಗೌರಿಯೇ ಒಂದು ನಿರ್ಧಾರದ ಧ್ವನಿಯಲ್ಲಿ ಮಾತನಾಡಿದಳು. ಪ್ರೀತಿ ಪ್ರಣಯದ ಸಂದರ್ಭದಲ್ಲಿ ಗಂಡಿಗಿಂತ ಹೆಣ್ಣಿನ

ಹೊಣೆ ಹೆಚ್ಚಾಗಿರುತ್ತದೆ. ಅದಕ್ಕೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬೇಕಾದುದು. ಆಕೆಯ ಕರ್ತವ್ಯವೂ ಆಗಿರುತ್ತದೆ ಎಂದೇ ಗೌರಿಯು ನಿರ್ಧರಿಸಿದ್ದಳು. ಮಹೇಶನಿಗೆ ತನ್ನ ಅಭಿಪ್ರಾಯವನ್ನು ಖಚಿತಪಡಿಸಿದಳು.

'ನಮ್ಮ ಮನೆಯಲ್ಲೇನೋ ನಮ್ಮ ತಂದೆಯನ್ನು ಒಪ್ಪಿಸುವ ಧೈಯ್ಯ ನನಗಿದೆ, ಆದರೆ ನನಗೆ ನಿಮ್ಮದೇ ಚಿಂತೆ.

'ನನಗೇಕೆ ಚಿಂತೆ? ಚಿಂತೆ ಇರಬೇಕಾದುದು ನಿನಗಷ್ಟೆ! ಹುಡುಗಿಯಾದ ನೀನೇ ಧೈರವಾಗಿ ನಮ್ಮ ತಂದೆಯನ್ನು ಒಪ್ಪಿಸುತ್ತೇನೆ ಅಂತಿದೀಯಾ ಇನ್ನು ತರುಣನಾದ ನನಗೆ ಕಷ್ಟವೆ? ಕಷ್ಟವಾದರೂ ಸಾಧಿಸಿ ತೋರಿಸುವೆ.

"ಅವರು ಒಪ್ಪದಿದ್ದರೆ?'

'ಒಪ್ಪದಿದ್ದರೆ ಒಪ್ಪಿಸುವೆ ಗೌರಿ ಆ ಭರವಸೆ ನನಗೂ ಇದೆ.'

'ನನಗೇನೂ ನಿಮ್ಮ ತಂದೆ ಬಂಧುಗಳು ಅಷ್ಟು ಸುಲಭದಲ್ಲಿ ಒಪ್ಪಲಾರರು ಎನ್ನಿಸುತ್ತದೆ. ನಾನು ಇನ್ಯಾವ ಜಾತಿಯವಳಾಗಿದ್ದರೂ ಚಿಂತೆ ಇರಲಿಲ್ಲ. ಆದರೆ ನಾನೇ ಹರಿಜನಳಾಗಿದ್ದುದು ಅವರಿಗೆ ಒಪ್ಪಲು ತುಂಬ ಕಷ್ಟವಾಗಬಹುದು.'

ಗೌರಿಗೆ ಭರವಸೆ ಧೈಶ್ಯ ತುಂಬುವ ಧ್ವನಿಯಲ್ಲಿ ಮಹೇಶ ನುಡಿದ ಇರುವ ಸಂಗತಿಯನ್ನೆಲ್ಲಾ ಚಾಚೂ ಮರೆಮಾಚದೆ ಹೇಳಿ ನಮ್ಮ ಮದುವೆಗೆ ಒಪ್ಪಿಸಲು ಪ್ರಯತ್ನಿಸುವೆ ಒಪ್ಪಿದರೆ ಸಂತೋಷ ಒಪ್ಪದಿದ್ದರೆ ಇಷ್ಟೇ ಇದೆ ಊರಿಂದ ಬಂದು ಆರಸಮಾಜದಲ್ಲಿ ಮದುವೆ ಮಾಡಿಕೊಳ್ಳುವುದು ಅಲ್ಲಿಯವರೆಗೂ ನೀನು ಮಾತ್ರ ಗಟ್ಟಿಮನಸ್ಸು ಮಾಡಿಕೊಂಡಿದ್ದರೇ ಸಾಕು.

ಪ್ರೇಮ ಪ್ರೀತಿಯ ಸುಳಿಯಲ್ಲಿ ಮದುವೆಗೆ ಮುನ್ನ ಯಾವ ಗಂಡೂ ಹೆಣ್ಣ ಸಿಲುಕಬಾರದು. ಸಿಲುಕಿದ ಮೇಲೆ ಆದಷ್ಟು ಬೇಗ ಮದುವೆಯಾಗಬೇಕು. ಅದು ಅವರ ಬದುಕಿನ ಮೊದಲ ಮೆಟ್ಟಿಲು. ಆಮೇಲೆ ಸಾಧಿಸಬೇಕಾದುದೇ ಹೆಚ್ಚಿನದು ಈ ಅಂತರ್‌ಜಾತಿ ವಿವಾಹದಲ್ಲಿ ನಾವು ಅನ್ಯೋನ್ಯವಾಗಿದ್ದರೂ ಸಮಾಜ ನಮ್ಮನ್ನು ಅಷ್ಟು ಸುಲಭದಲ್ಲಿ ಸುಖವಾಗಿ ಬಾಳಿಸದು ಚಿಂತೆಯ ಹಾಳೆ ತೆರೆದಿಟ್ಟಳು ಗೌರಿ.

"ಕಾಲ ವ್ಯತ್ಯಾಸ ಆಗಿದೆ ಗೌರಿ ನೀನೂ ತಿಳಿದವಳು, ವಿದ್ಯಾವಂತೆ ಮೇಲಾಗಿ ಜಾಣೆ. ನಮ್ಮಿಬ್ಬರ ಅಭಿರುಚಿಗಳೂ ಒಂದೇ ಆಗಿದೆ. ಒಬ್ಬರನ್ನೊಬ್ಬರು ಮೂರು ವರುಷಗಳಿಂದ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇವೆ. ನಮ್ಮಿಬ್ಬರ ಮಧ್ಯೆ ಸಮಾಜದ ತೊಡಕು ಏನೂ ಮಾಡಲಾರದು. ಧೈರ್ಯಂ ಸರ್ವತ್ರ ಸಾಧನಂ' ಅಂತ ಕೇಳಿಲ್ಲವೇ?

ನಾವು ಎಷ್ಟು ಧೈರ್ಯದಿಂದ ಜೀವನವನ್ನು ಎದುರಿಸುತ್ತೆವೆಯೋ ಅಷ್ಟು ನಮಗೆ ಒಳ್ಳೆಯದು. ಇನ್ನು ಹೊರಡೋಣ ನಡಿ ಹೊತ್ತಾಯ್ತು ನೀನು ಪುನಃ ಊರಿಂದ ಎಂದು ಬರುವೆ ನೀವು ಹೇಳಿದ ದಿವಸ ಹೇಳಿದ ಕ್ಷಣಕ್ಕೆ.

'ಹಾಗಿರಬೇಕು ನೋಡು, ಒಳ್ಳೆ ಹುಡುಗಿ ನೀನು, ಇಂದು ಮಂಗಳವಾರ. ನೀನು ಭಾನುವಾರ ಬೆಳಿಗ್ಗೆ ಬಂದುಬಿಡು. ನಾವು ಶನಿವಾರ ರಾತ್ರಿಯೇ ಇಲ್ಲಿಗೆ ಬರುವೆ.



'ಖಂಡಿತಾ ಈ ಬಾರಿ ನೀವು ನಿರ್ಧಾರ ಮಾಡಿಕೊಂಡು ಬಂದುಬಿಡಿ ಇನ್ನು ನನಗೆ ಕಾಯಲು ಸಾಧ್ಯವಿಲ್ಲ.'

"ನಿನಗೊಬ್ಬಳಿಗೇ ಆತುರವೆಂದುಕೊಂಡೆಯಾ?' ಅರ್ಥಪೂರ್ಣವಾಗಿ ನಕ್ಕ ಮಹೇಶ. ಗೌರಿಯೂ ನಕ್ಕಳು ಗೌರಿಯನ್ನು ಅವಳ ಹಾಸ್ಟೆಲಿಗೆ ಮುಟ್ಟಿಸಿ ತನ್ನ ಅಧ್ಯಾಪಕ ಬಿಡಾರಕ್ಕೆ ಹಿಂದಿರುಗಿದ ಮಹೇಶ

* * * *

ಮಗ ಬಂದ ಸಡಗರ ಮನೆಯಲ್ಲಿ ಎಲ್ಲರಿಗೂ ಉತ್ಸಾಹ ತಂದಿತ್ತು. ಊಟಕ್ಕೆ ಬಡಿಸುತ್ತ ತಾಯಿ ಕೇಳಿದಳು ಈ ರಜೆಯಲ್ಲಾದರೂ ಪೂರ್ತಿ ಇಲ್ಲೇ ಇದ್ದು ಬಿಡು. ಈ ಹೆಣ್ಣಿನವರ ಕಾಟ ತಡೆಯದಾಗಿದೆ. ಹತ್ತಾರು ಹೆಣ್ಣುಗಳು ಕಾದಿವೆ ನಿನಗಾಗಿ ನಿನಗೆ ಯಾರು ಸರಿಹೋಗುತ್ತಾರೋ ನೋಡಪ್ಪ. ನೀನು ಯಾರನ್ನು ಒಪ್ಪಿದರೂ ನಮಗೆ ಸಂತೋಷವೇ ನಿನ್ನಪ್ಪಯ್ಯನಂತೂ ಈ ಬಾರಿ ನಿನ್ನ ಮದುವೆ ಮಾಡಿಮುಗಿಸಲೇಬೇಕಂತ ಪಟ್ಟು ಹಿಡಿದು ಕೂತವರೆ, ಇರುವ ಒಬ್ಬ ಮಗ ಕ್ವಾರ್ಟರ್ಸ್‌ನಲ್ಲಿ ಇದ್ದುಕೊಂಡು, ಪರದೇಶಿಯಂತೆ ಹೋಟೆಲ್‌ನಲ್ಲಿ ಊಟ ಮಾಡಿಕೊಂಡಿರುವುದೂ ನಮ್ಮಿಬ್ಬರಿಗೂ ಸುತಾರಂ ಇಷ್ಟ ಇಲ್ಲ. ನೀನು ಹೂಂ ಅಂದರೆ ಸಾಕು ಎಂಟು ದಿವಸದಲ್ಲಿ ಮದುವೆ ಮುಗಿಸಿ ನಿನ್ನ ಹೆಂಡತಿ ಜೊತೆ ನಿನ್ನನ್ನು ಊರಿಗೆ ಕಳಿಸುವೆ, ನೀನೇನು ಚಿಕ್ಕವನು ಅಂದುಕೊಂಡೆಯಾ? ಕೆಲಸಕ್ಕೆ ಸೇರಿ ಆಗಲೇ ಐದು ವರುಷ ತುಂಬಕ್ಕೆ ಬಂತು. ಅದೇನೋ ಅಪ್ಪ, ಮದುವೆ ಅಂದರೆ ಮೂಗು ಮುರೀತೀಯಾ, ನಿನ್ ಹಾಗೆ ಇರೋ ಹುಡುಗರನ್ನು ನಾನು ಕಂಡೆ ಇಲ್ಲವಲ್ಲಾ! ನಿನ್ನ ಜೊತೆಯ ಅನಂತ ಆಗಲೇ ಎರಡು ಮಕ್ಕಳ ತಂದೆಯಾದ; ನಿನ್ನ ಗಣಿಯ ರಘು ಇವತ್ತು ನಾಳೆಯೇ ಒಂದು ಮಗುವಿನ ತಂದೆಯಾಗುತ್ತಾನೆ. ನೀನು ಮಾತ್ರ ಗೆಣೆಮರದಂತೆ ಹಾಗೆ, ಇರು.

ಮಹೇಶನ ಊಟ ಮುಗಿದರೂ ತಾಯಿಯ ಮಾತು ಸಾಗುತ್ತಲೇ ಇತ್ತು. ಇದು ಮಹೇಶ ಊರಿಗೆ ಬಂದಾಗಲೆಲ್ಲಾ ತಾಯಿಯಿಂದ ಕೇಳುತ್ತಿದ್ದ ಸೇಮ್ ಟೇಪ್ ರಿಕಾರ್ಡ್ ಅವಳ ಮಾತಿಗೆ ಅಭವೂ ಇಲ್ಲ, ಶುಭವೂ ಇಲ್ಲ ಮಹೇಶ ಒಂದೇ ತರ ಇರುತ್ತಿದ್ದ. ಆದರೆ ಈ ಬಾರಿ ತಾಯಿಯ ಕಣ್ಣಲ್ಲಿ ನೀರು ಬಂದಾಗ ಮಾತ್ರ ಅವನು ಅವಕ್ಕಾದ.

'ಯಾಕಮ್ಮಾ ಕಣ್ಣೀರು ಹಾಕುವೆ? ಖಂಡಿತಾ ಈ ಬಾರಿ ನಾನು ಮದುವೆ ಆಗೇ ಆಗುತ್ತೇನೆ. ಆದರೆ ನೀನು ಹುಡುಕಿರುವ ಹೆಣ್ಣುಗಳಿಂದಲ್ಲ ನಾನೇ ಆರಿಸಿಕೊಂಡಿರುವ ಹೆಣ್ಣನ್ನು ಅವನ ಮಾತು ಕೇಳಿ ನೀಲವ್ವನಿಗೆ ಏಕ ಕಾಲದಲ್ಲಿ ಹರ್ಷ ವಿಷಾದ ಉಂಟಾದವು. ಮಗ ಮದುವೆ ಆಗುತ್ತೇನೆ. ಎಂದನಲ್ಲ ಅದೇ ಸಂತಸ. ಆದರೆ ತಾನು ಆರಿಸಿರುವ ಹೆಣ್ಣು ಅಂದನಲ್ಲ, ಯಾರಿರಬಹುದೊ

ಕುತೂಹಲ ತಡೆಯದೆ ಕೇಳಿದಳು ಯಾರೋ ಅದು ಆರಿಸಿರೋ ಹೆಣ್ಣು? ನಮ್ಮ ಜನ ತಾನೇ?'

'ನಮ್ಮ ಜನಾನೇ ಆಗಬೇಕು ಎನ್ನುವುದಾದರೆ ಆ ಹೆಣ್ಣಿನ ಕೊರಳಿಗೆ ಒಂದು ಲಿಂಗ ಕಟ್ಟಿಸಿಬಿಡು ನೀನು. ಆ ಮೇಲೆ ತಾಳಿ ಕಟ್ಟುತ್ತೇನೆ ನಾನು ನಗುತ್ತಾ ನುಡಿದ ಮಹೇಶ.



"ಏನೋ ಒಗಟಿನಂತೆ ಮಾತಾಡ್ತೀಯಾ ಮಹೇಶ. ನಿನ್ನ ಕಾಲೇಜಿನ ಇದ್ಯೆನಲ್ಲಾ ನನ್ನ ಮುಂದೆ ತೋರಿಸಬೇಡ ನಿಮ್ಮ ಮಾವನ ಮಗಳು ಅಂಬಿಕೇನ್ನೋ, ಅಥವಾ ನಮ್ಮೂರು ಚಿಕ್ಕ ಸಾತ್ಕಾರರ ಶಿವಪ್ಪನವರ ಮಗಳು ರುದ್ರಾಣೀನ್ನೋ ಮದುವೆ ಮಾಡಿಕೊಂಡು ಹಾಯ್ಕಾಗಿ ಸುಖವಾಗಿರು ನೀ ಏನೋ ಬೆಂಗಳೂರಿಗೆ ಒಂಟೋಗ್ತಿಯಾ ಇಲ್ಲಿ ನಮ್ಮ ಗತಿ ಹೇಳು. ಬೆಳಗಾಗಕೆ ಬಿಡೋಲ್ಲ, ಚೆಂಜಿಯಾಗೋಕೆ ಬಿಡುಲ್ಲ, ಹೆಣ್ಣು ಹೆತ್ತೋರು ನಮ್ಮ ಜೀವ ಹಿಂಡ್ತಾರೆ.'

ಅಷ್ಟರಲ್ಲಿ ಜಮಿನಿನ ಕಡೆ ಹೋಗಿದ್ದ ಶಂಭುಲಿಂಗಪ್ಪನವರು ಬಂದರು. ಮಗ ಮನಗೆ ಬಂದ ಸುದ್ದಿಯನ್ನು ಮನೆ ಆಳು ಕೆಂಚ ಆಗಲೇ ಯಜಮಾನರಿಗೆ ತಿಳಿಸಿದ್ದ

'ಯಾವಾಗ ಬಂದೆ ಮಹೇಶ?'

'ಆಗಲೇ ಬಂದೆ ಅಪ್ಪ

'ಚೆನ್ನಾಗಿ ಇದ್ದೀಯಾ?'

'ಇದ್ದೀನಪ್ಪ

'ಊಟಕ್ಕೆ ಬನ್ನಿ, ಆ ಮೇಲೆ ಮಾತಾಡಿರಂತೆ', ನೀಲವ್ವನ ಕರೆ ಕೇಳಿ ಶಂಭುಲಿಂಗಪ್ಪ ಒಳಗೆ ನಡೆದರು.

ಸಂಜೆ ಮಹೇಶ ತೋಟದ ಕಡೆ ಸುತ್ತಿಕೊಂಡು ಬರಲು ಹೊರಟ ಹಳೇ ಗೆಳೆಯ ರಘುವಿನ ಮನೆಗೆ ಹೋದ. ಅವನ ತಂದೆ ತಾಯಿ ಪ್ರೀತಿಯಿಂದ ಮಹೇಶನನ್ನು ಮಾತನಾಡಿಸಿ ರಘು ತನ್ನ ಗರ್ಭಿಣಿ ಹೆಂಡತಿಯನ್ನು ನೋಡಿಕೊಂಡು ಬರಲು ತಿಪಟೂರಿಗೆ ಹೋಗಿದ್ದಾನೆಂದೂ ಭಾನುವಾರ ಹಿಂತಿರುಗಿ ಬರುವನೆಂದು ತಿಳಿಸಿದರು. ಮುಂದೆ ನಡೆದು ಬಾಗಿಲ ಬಳಿ ನಿಂತಿದ್ದ ಆನಂತನನ್ನು ಮಾತನಾಡಿಸಿಕೊಂಡು ಊರುಬಿಟ್ಟು ರಾಷ್ಟ್ರೀಯ ಹೆದ್ದಾರಿಯನ್ನು ತುಳಿದ. ಅದು ಬೆಂಗಳೂರು ಬೊಂಬಾಯಿ ರಾಷ್ಟ್ರೀಯ ಹೆದ್ದಾರಿ ನಾಲ್ಕು, ತುಮಕೂರಿನಿಂದ ಬೆಂಗಳೂರಿಗೆ ಬರುವ ಈ ಹೆದ್ದಾರಿಯಲ್ಲಿ ತನ್ನ ಊರಿಂದ ಒಂದು ಮೇಲು, ನಡೆದರೆ ಅಲ್ಲಿ ಬಲಗಡೆ ಇರುವ ಹತ್ತಾರು ಅಡಿಕೆ ತೋಟಗಳಲ್ಲಿ ಶಂಭುಲಿಂಗಪ್ಪನವರ ತೋಟವೂ ಒಂದು. ಹೆದ್ದಾರಿಗೆ ಬಂದ ಮಹೇಶ ಹತ್ತಾರು ಗಜ ಮುಂದೆ ಬಂದಾಗ ಎಡಗಡೆ ಎಳ್ಳರೆ ಮೇಲೆ ಒಣಗಲು ಹರಡಿ ಹಾಸಿದ್ದ ಅಡಕೆಯ ಹೋಳುಗಳು ಕಂಡವು ಶ್ರಾವಣ ಭಾದ್ರಪದ ಆಶ್ವಿಜ ಮಾಸಗಳಲ್ಲಿ ಹೆಚ್ಚಾಗಿ ಫಸಲು ಕೊಡುವ ಅಡಕೆ ಮರಗಳು. ಇತರ ಮಾಸಗಳಲ್ಲೂ ತನ್ನ ಬಂಜೆತನವನ್ನು ಎಂದೂ ತೋರುತ್ತಿರಲಿಲ್ಲ. ಅಲ್ಲಿಗೆ ಬಂದಾಗ ಊರಿನ ಪರಿಚಯದವರನ್ನು ಮಾತನಾಡಿಸಿ ಮುಂದೆ ನಡೆದ ಮಹೇಶ. ದಾರಿಯಲ್ಲಿ ಹೊಲ ಗದ್ದೆ ತೋಟದ ಕೆಲಸಗಳನ್ನು ಮುಗಿಸಿಕೊಂಡು ಬರುತ್ತಿದ್ದವರೆಷ್ಟೋ ಮಂದಿ. ಕೆಲವರ ಬಳಿ ಒಂದುಮಾತು. ಇನ್ನು ಕೆಲವರ ಬಳಿ ಎರಡು ಮಾತು, ಮತ್ತೆ ಕೆಲವರ ಬಳಿ ನಿಂತು ಎರಡು ಮೂರು ಐದು ನಿಮಿಷಗಳ ಮಾತು ಮುಗಿಸಿ ಮುಂದೆ ಸಾಗಿದ. ದಾರಿಯ ಎಡಗಡೆಗೆ ಮರಳೂರು ಕೆರೆಯ ನೀರಿನಿಂದ ಸಮೃದ್ಧವಾಗಿ ಬೆಳೆದು ನಿಂತಿದ್ದ ಭತ್ತದ ಗದ್ದೆಗಳು ಅವುಗಳ ಮೇಲೆ ಹಾರುವ ಬೆಳ್ಳಕ್ಕಿಗಳ ತಂಡ ನೋಡುವವರನ್ನು ತನ್ನೆದೆಗೆ ಒಂದುಕ್ಷಣ



ಸೆಳೆದುಕೊಳ್ಳುತ್ತಿತ್ತು. ಒಳಗಡೆಗೆ ಮುಗಿಲನ್ನು ಚುಂಬಿಸಿ ನಿಂತ ಸಾಲು ಸಾಲಿನ ಅಡಕೆ ಮರಗಳು, ಕಸ್ತೂರಿ ಹೊಂಬಾಳ ಬಿರಿದು ತನ್ನ ಸುಗಂಧದಿಂದ ದಾರಿಹೋಕರನ್ನು ದೂರದಿಂದಲೇ ಸ್ವಾಗತಿಸುತ್ತಿತ್ತು.

ಎಷ್ಟು ಸಾರಿ ನೋಡಿದರೂ ಮತ್ತೂ ನೋಡಬೇಕೆನಿಸುವ ಈ ದೃಶ್ಯವನ್ನು ನೋಡುತ್ತ ಕಡೆಗೊಮ್ಮೆ ತಮ್ಮ ತೋಟವನ್ನು ಪ್ರವೇಶಿಸಿದ. ಒಳಗೆಡೆ ಹೆಜ್ಜೆ ಇಡುತ್ತಿದ್ದಂತೆಯೇ ಅಡ್ಡ ಬಿದ್ದ ಬುದ್ಧಿ ಎಂದು ತಲೆತಗ್ಗಿಸಿ ಹೇಳಿ, ಜಿಂಕೆಯ ಮರಿಯಂತೆ ಚಂಗನೆ ಹಾರಿ ಅಪ್ಪಯ್ಯೋ ಚಿಕ್ಕ ಬುದ್ಧರು ಬಂದಾರೆ. ಎಂದು ಕೂಗುತ್ತ ಅಡಕೆ ಮರಗಳ ಸಾಲಿನಲ್ಲಿ ಮರೆಯಾದಳು ಚಂದ್ರಿ

ಸ್ವಲ್ಪ ಹೊತ್ತಿನಲ್ಲಿಯೇ ಇಳಿವಯಸ್ಸಿನ ದೊಡ್ಡ ಚಿಕ್ಕಬುದ್ದಿಯವರ ಮುಂದೆ ಬಂದು ಕೈ ಮುಗಿದು ನಿಂತ ಅವನ ಜೊತೆಯಲ್ಲಿ ಮಾತನಾಡುತ್ತಲೇ ಮಹೇಶ ತೋಟವನ್ನು ಒಂದು ಸುತ್ತು ಸುತ್ತಿ ಬಂದ. ಆ ವೇಳೆಗೆ ಚಂದ್ರಿ ಎರಡು ಎಳನೀರ ಬಾಯಿಕೊಚ್ಚಿ ಮಹೇಶ ಬರುತ್ತಿದ್ದಂತೆಯೇ ಒಂದನ್ನು ಅವನ ಕೈಗೆ ಕೊಟ್ಟಳು.

'ಚೆನ್ನಾಗಿದ್ದೀಯಾ ಚಂದ್ರಿ?' ಎಂದು ಕೇಳಿದ ಮಹೇಶನಿಗೆ ದೊಡ್ಡ ಅವಳ ಚಂದ ಏನು ಕೇಳೀರಿ ಒಡೆಯ ಅಂದು ಅವಳನ್ನು ನೀವು ಬಾವಿಯಿಂದ ಎತ್ತಿ ಉಳಿಸದೇ ಇದ್ದಿದ್ದರೆ ಸಂದಾಗಿತ್ತು. ಅವಳು ಬದುಕಿದ್ದೆ ಕಷ್ಟಕ್ಕೆ ಬಂತು ನನಗೂ ಅವಳಿಗೂ ಈಗ ಜೀವಕ್ಕೆ ಬಂದೈತೆ' ಎಂದು ದಿಕ್ಕು ತೋಚದಂತೆ ಮಾತನಾಡಿದ. ಮಹೇಶ ಚಂದ್ರಿಯ ಕಡೆ ತಿರುಗಿದ ಅವಳು ಕಣ್ಣು ತುಂಬ ನೀರು ತುಂಬಿಕೊಂಡು ನಿಂತಿದ್ದಳು. ಹತಾಶ ಮನೋಭಾವ ಅವಳ ಮುಖದಲ್ಲಿ ಮನೆ ಮಾಡಿತ್ತು.

ಬಹಳ ಹೊತ್ತು ಮಹೇಶ ದೊಡ್ಡನ ಜೊತೆ ಮಾತನಾಡಿದ ಕಡೆಗೆ ಮೂವರೂ ಒಂದು ನಿರ್ಧಾರಕ್ಕೆ ಬಂದರು. 'ನಾಡಿದ್ದು ಶನಿವಾರ ಬೆಳಿಗ್ಗೆ ಒಂಬತ್ತೂವರೆ ಷಟಲ್ ಬಸ್ಸಿನಲ್ಲಿ ನಾನು ಹೊರಡುತ್ತೇನೆ. ಚಂದ್ರಿಯನ್ನೂ ಅದೇ ಬಸ್ಸಿಗೆ ಕರೆತಂದು ಬಿಡು, ಮಂದಿನದನ್ನು ನಾನು ನೋಡಿಕೊಳ್ಳುತ್ತೇನೆ' ಎಂದು ದೊಡ್ಡನಿಗೂ ಚಂದ್ರಿಗೂ ಭರವಸೆ ನೀಡಿ ಅಲ್ಲಿಂದ ಮನೆಕಡೆ ಹೊರಟ ಮಹೇಶ.

ಮಗ ಮನೆ ತಲುಪುವ ವೇಳೆಗೆ ಅವನನ್ನೇ ನಿರೀಕ್ಷಿಸುತ್ತ ಕುಳಿತಂತೆ ಇತ್ತು ಶಂಭುಲಿಂಗಯ್ಯನವರ ಮುಖಭಾವ. ಆದರೂ ತಕ್ಷಣ ಏನೂ ಮಾತನಾಡಲಿಲ್ಲ. ಮಹೇಶ ಬಚ್ಚಲು ಮನೆಗೆ ಹೋಗಿ ಮುಖ ಕೈಕಾಲು ತೊಳೆದುಕೊಂಡು ಬಂದ

“ಮಹೇಶ ನಿನ್ನ ಬಳಿ ಸ್ವಲ್ಪ ಮಾತನಾಡಬೇಕಿತ್ತು.'

“ಏನು ಅಪ್ಪಾಜಿ?'

'ಏನೋ ನಿಮ್ಮ ಅಮ್ಮನ ಹತ್ತಿರ ಹೇಳಿದೆಯಂತೆ ಅದನ್ನು ಕೇಳಿ, ನಿಮ್ಮ ಅಮ್ಮನನ್ನು ರೇಗಿಸಲು ಹೇಳಿದ ಹುಡುಗಾಟದ ಮಾತು ಅಂದುಕೊಂಡಿದ್ದೇನೆ ನಾನು' ಮಗನ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತಾ ಸುಮ್ಮನಾದರೂ ಶಂಭುಲಿಂಗಯ್ಯನವರು.

ಮಹೇಶ ತುಂಬಾ ಗಂಭೀರ ಭಾವದಿಂದ ಹೇಳಿದ 'ಅಮ್ಮನ ಬಳಿ ಹೇಳಿದ

ಮಾತುಗಳು ನೂರಕ್ಕೆ ನೂರು ನಿಜ ಅಪ್ಪಾಜಿ' ಶಂಭುಲಿಂಗಯ್ಯನವರ ಮುಖ ರಕ್ತದ ಓಕುಳಿಯಾಯಿತು. 'ಯಾರನ್ನು ಕಟ್ಟಿಕೊಳ್ಳುತ್ತಿಯೋ, ಹೊಲೆಯರವಲೋ, ಮಾದಿಕರವೋ?'

'ಹುಟ್ಟಿನಿಂದ ಜಾತಿ ಇಲ್ಲ, ಆಚರಣೆಯಿಂದ ಮಾತ್ರ ಜಾತಿ 'ಹೊಲಸು ತಿನ್ನುವವನೇ ಹೊಲೆಯ ಅಂತ ಬಸವಣ್ಣನವರು ಹೇಳಿದ್ದಾರೆ ಅಂತ ನೀವೇ ಎಷ್ಟೋ ಬಾರಿ ಸಭೆಯಲ್ಲೇ ನಿಂತು ಭಾಷಣ ಮಾಡಿದ್ದೀರಲ್ಲಾ ಅಪ್ಪಾಜಿ.

"ಭಾಷಣ! ಅದು ವೇದಿಕೆಯ ಮೇಲೆ ನಿಂತು ಆಡುವ ಮಾತು ಅಷ್ಟೇ!

ಅಂದರೆ ಬಸವಣ್ಣನವರ ನುಡಿದಂತೆ ನಡೆ ಎನ್ನುವ ತತ್ವಕ್ಕೆ ನಿಮ್ಮ ಅರ್ಥ?'

'ತಲೆ ಹರಟೆ ಮಾತನಾಡಬೇಡ, ಹೊಲೆಯರ, ಮಾದಿಗರ ಸಹವಾಸ ನಮ್ಮ ಮನೆತನದ ಗೌರವಕ್ಕೆ ಸಲ್ಲ. ಶಂಭುಲಿಂಗಯ್ಯನವರ ಮಾತಿನಲ್ಲಿ ನಿರ್ಧಾರದ ಧ್ವನಿಯಿತ್ತು. ಮಹೇಶ ವಿಚಲಿತನಾಗಿಲಿಲ್ಲ, ಮಾತು ಮುಂದುವರಿಸಿದ 'ಶಿವಭಕ್ತರೆಲ್ಲಾ ಒಂದೇ ಜಾತಿ ಎಂದು ಬಸವಣ್ಣನವರು ಹೇಳಿದರಲ್ಲಾ! ನೀವು ಊಹಿಸಿರುವ ಹಾಗೆ ನಾನು ಮೆಚ್ಚಿರುವ ಹುಡುಗಿ ಹರಿಜನರಲ್ಲಾ! ನೀವು ಊಹಿಸಿರುವ ಹಾಗೆ ನಾನು ಮೆಚ್ಚಿರುವ ಹುಡುಗಿ ಹರಿಜನ ಕನ್ಯೆಯಾದರೂ ಸದ್ಗುಣಿ. ಉತ್ತಮ ನಡೆತೆಯವಳು ನಿಮಗೆ ಜಾತಿಯೇ ಮುಖ್ಯವಾದರೆ ಆಕೆಗೂ ಲಿಂಗಧಾರಣೆ ಮಾಡಿಸಿದರೆ ಆಯಿತು. ಬಸವಣ್ಣನವರು ಅದೇ ಅಲ್ಲವೇ ಅವರ ಕಾಲದಲ್ಲಿ ಹೆಚ್ಚಾಗಿ ಮಾಡಿಸಿದ್ದು.'

"ಹುಚ್ಚು ಮುಂಡೇದೆ, ಅವರು ಹಾಗೆ ಮಾಡೇ ಈಗ ಲಿಂಗ ಕಟ್ಟಿದ ಹಜಾಮರು ಬೇರೆ, ಲಿಂಗ ಕಟ್ಟಿದ ಮಡಿವಾಳರು ಬೇರೆ, ಲಿಂಗ ಕಟ್ಟಿದ ಬಳೆಗಾರರು ಬೇರೆ ಅಂತ ಅವರವರದ್ದೇ ಒಂದೊಂದು ಗುಂಪಾಗಿ ವೀರಶೈವ ಧರ್ಮದಲ್ಲೇ ನೂರಾರು ಬಿರುಕುಗಳು ಮೂಡಿ ನಮ್ಮ ಧರ್ಮದಲ್ಲಿ ಒಗ್ಗಟ್ಟೇ ಇಲ್ಲದಂತೆ ಆಗಿದೆ. ಇಷ್ಟ ಬಂದವರಿಗೆಲ್ಲಾ ಲಿಂಗ ಕಟ್ಟಿಬಿಟ್ಟರೆ ಅವರಲ್ಲಾ ವೀರಶೈವ ಧರ್ಮೀಯರು ಆಗುತ್ತಾರೇನೋ? ಅವರು ಏನೋ ಹೇಳಿದರು. ಏನೋ ಮಾಡಿದರು. ಅದು ಅವರ ಕಾಲಕ್ಕೆ ಆಯಿತು. ಈಗ ನಿನ್ನ ಇಷ್ಟಕ್ಕೆ ಅನುಕೂಲಕ್ಕೆ ತಕ್ಕಂತೆ ಧರ್ಮಾನ ಪರಿವರ್ತಿಸಿದರೆ ಆ ಧರ್ಮಕ್ಕೆ ಏನು ಬೆಲೆ ಇರುತ್ತೇ ಹೇಳು. ಸುಮ್ಮನೆ ನಾನು ಹೇಳಿದಂತೆ ಕೇಳು, ಅಂಬಿಕಾಳ ಜೊತೆ ನಿನ್ನ ಲಗ್ನ ನಿಶ್ಚಯಿಸಿದ್ದೀನಿ, ಮನೆ ಹುಡುಗಿ, ನೀನೂ ನೋಡಿದ್ದೀಯಾ, ತೆಳ್ಳಗೆ, ಬೆಳ್ಳಗೆ ಒಳ್ಳೇ ಗೌರಿ ಇದ್ದ ಹಾಗೆ ಇದ್ದಾಳೆ. ನಿಮ್ಮ ಅಮ್ಮನಿಗೂ ತಮ್ಮನ ಮಗಳು ಅನ್ನುವ ಅಕ್ಕರೆ ನನಗೂ ಭಾವ ಮೈದುನ ಬಲಗೈಯಾಗಿ ಇರುತ್ತಾರೆ. ಅವಳನ್ನು ಮದುವೆ ಆಗಿ ಸುಖವಾಗಿ ಬದುಕುವ ಮಾರ್ಗ ಕಲಿ, ಇಲ್ಲದಿದ್ದರೆ ನನ್ನ ಆಸ್ತಿಯಲ್ಲಿ ಒಂದು ಹುಲ್ಲುಕಡ್ಡಿಯೂ ನಿನಗೆ ಸಿಗುವುದಿಲ್ಲ" ಕಡ್ಡಿ ತುಂಡಾದಂತೆ ನುಡಿದು ಶಂಭುಲಿಂಗಯ್ಯ ಎದ್ದರು.

'ಖಂಡಿತಾ ಆಗೋಲ್ಲಾ ಅಪ್ಪಾಜಿ, ಇದೊಂದು ವಿಷಯದಲ್ಲಿ ನನ್ನನ್ನು ನೀವುಗಳು ಕ್ಷಮಿಸಿ, ನಾನು ಮದುವೆ ಆಗುವುದಿದ್ದರೆ ನಾನು ಮಾತುಕೊಟ್ಟರುವ ಆ ಹರಿಜನ ಕನ್ನೆಯನ್ನೇ ಇನ್ನ್ಯಾರನ್ನೂ ಆಗೋಲ್ಲ' ತಂದೆಗಿಂತ ಗಟ್ಟಿಗನಾಗಿ ಕಂಡ ಮಹೇಶ. ಮಹಡಿ ಹತ್ತಿ ತನ್ನ ಕೊಠಡಿಗೆ ಹೋಗಿ ಸ್ವಲ್ಪ ಹೊತ್ತು ಸುಮ್ಮನೆ ಕಣ್ಮುಚ್ಚಿ ಕುಳಿತಿದ್ದ



ಮಹೇಶ, ಕಣ್ಣಮುಂದೆ ತನ್ನ ಗೌರಿಯ ಮದುವೆಯ ಚಿತ್ರ ಮೂಡಿ ಆ ಗಳಿಗೆಯಲ್ಲೂ ಅವನ ಮನ ಆನಂದದಿಂದ ಗರಿಗೆದರಿತು. ಮನ ಚಂತಿಸಿತು. ಶನಿವಾರ ಬೆಳಿಗ್ಗೆ ದೊಡ್ಡನಿಗೆ ಮಾತುಕೊಟ್ಟಂತೆ ಚಂದ್ರಿಯ ಒಂದು ಕೆಲಸ ಮುಗಿಸಿ ಬೆಂಗಳೂರಿಗೆ ಹೋಗಿ ಮೊದಲು ಆರ್ ಸಮಾಜದಲ್ಲಿ ತನ್ನ ಹಾಗೂ ಗೌರಿಯ ಮದುವೆಯ ಏರ್ಪಾಡು ಮಾಡಬೇಕು. ನನ್ನ ನಿರ್ಧಾರ ತಿಳಿದು ಗೌರಿ ಅದಿನ್ನೆಷ್ಟು ಸಡಗರ ಸಂತೋಷ ಪಡುವಳೋ! ಸಮಾಜದಲ್ಲಿ ಎಷ್ಟೋ ಗಂಡು ಹೆಣ್ಣುಗಳು ಪರಸ್ಪರ ಪ್ರೀತಿಸಿ ಮದುವೆಯ ಹಂತ ಮುಟ್ಟುತ್ತಾರೆ. ಆದರೆ ಅದನ್ನು ಗೆದ್ದು ನಿಲ್ಲದೆ ಸೋತ ಪ್ರಸಂಗಗಳೇ ಹೆಚ್ಚು. ಗಂಡು ಹೇಗಾದರೂ ಆ ನೋವನ್ನು ಮರೆಯುವನೇನೂ ಆದರೆ ಹಣ್ಣಿನ ಹೃದಯ ಬಲುಸೂಕ್ಷ್ಮ ! ಅವಳಿಗೆ ಆಗುವ ಆಘಾತ ಮಾತ್ರ ಬಹಳ ಹಿರಿದು, ತಂದೆ ತಾಯಿಗೆ ತಿಳಿಸಿದ್ದಾಯಿತು. ಅವರು ಕೋಪಗೊಂಡರೂ ಆಂತರ್ಯದಲ್ಲಿ ಅವರ ಆಶೀರ್ವಾದ ನಮ್ಮ ಮೇಲೆ ಇದ್ದೇ ಇರುತ್ತದೆ ಈ ನಿರ್ಧಾರಕ್ಕೆ ಬಂದನಂತರ ಕೊಠಡಿಯಿಂದ ಹೊರಕ್ಕೆ ಬಂದ ಮಹೇಶ. ಜೀವನದಲ್ಲಿ ಏನನ್ನೋ ಮಹತ್ತರವಾದುದನ್ನು ಸಾಧಿಸಿದ ಸಂತೃಪ್ತಿ ಅವನಿಗಾಗಿತ್ತು. ನಗುನಗುತ್ತಲೇ ಊಟಕ್ಕೆ ಕುಳಿತ. ತಾಯಿಯ ಮುಖವನ್ನು ಮಾತ್ರ ನೋಡಲು ಆಗಲಿಲ್ಲ, ನೀಲವ್ವನ ಕಣ್ಣುಗಳು ಕೆನ್ನೀರ ಮಡುವಾಗಿದ್ದವು. ಆಗಾಗ ಮೂಗು ಕಣ್ಣು ಒರೆಸಿಕೊಳ್ಳುತ್ತಿದ್ದಳು. ಏನೂ ಮಾತನಾಡಲಿಲ್ಲ.

ಮಾರನೆಯ ಬೆಳಿಗ್ಗೆಯೇ ಶಂಭುಲಿಂಗಯ್ಯ ಹಾಗೂ ನೀಲವ್ವ ಇಬ್ಬರೂ ನೀಲವ್ವನ ತಮ್ಮನ ಊರಾದ ಗುಬ್ಬಿಗೆ ಪ್ರಯಾಣಿಸಿದರು. ಶನಿವಾರ ಒಂಭತ್ತು ಗಂಟೆಯಾದರೂ ನೀಲವ್ವ ಶಂಭುಲಿಂಗಯ್ಯ ಹಿಂತಿರುಗಿ ಬರಲಿಲ್ಲ. ಮನೆಯಲ್ಲಿ ಇದ್ದ ಅಡಿಗೆ ಅಜ್ಜಿ ತಾಯವ್ವನಿಗೂ ಆಳು ಕೆಂಚನಿಗೂ ಹೇಳಿ ಮಹೇಶ ಬಸ್‌ಸ್ಟಾಂಡಿಗೆ ಬಂದ. ಬೆಂಗಳೂರಿಗೆ ಹೊರಡುವ ಬಸ್ ಆಗಲೇ ಬಂದು ನಿಂತಿತ್ತು. ದೊಡ್ಡನಾಗಲೀ ಚಂದ್ರಿಯಾಗಲೀ ಕಾಣಲಿಲ್ಲ. ಬಸ್ಸಿನಲ್ಲಿ ಜನ ಆಗಲೇ ತುಂಬಲಾರಂಭಿಸಿದರು. 'ಸ್ವಾಮಿ ನಿಮ್ಮದು ಎಷ್ಟು ಸೀಟು ಬೆಂಗಳೂರಿಗೊ' ಎಂದ ಕಂಡಕ್ಟರ್; ಇಲ್ಲಪ್ಪ, ನಮ್ಮದು ಎರಡೇ ಸೀಟು, ಇಲ್ಲೇ ಹಿರೇಹಳ್ಳಿಗೆ ಎಂದ ಮಹೇಶ ಬಸ್ ಹೊರಡುವ ವೇಳೆಗೆ ಹೊಸ ಸೀರೆ ಕುಪ್ಪಸ ತೊಟ್ಟು ತಲೆತುಂಬ ಹೂ ಮುಡಿದು ಚಂದ್ರಿ ದೊಡ್ಡನ ಜೊತೆಯಲ್ಲಿ ಓಡೋಡಿ ಬಂದು ಬಸ್ಸು ಹತ್ತಿದಳು. ದೊಡ್ಡ, ಮಹೇಶ ಕುಳಿತಿದ್ದ ಕಿಟಕಿಯ, ಬಳಿ ಬಂದು "ನೀವೇ ಕಾಪಾಡಬೇಕು ಒಡೆಯ ಚಂದ್ರನ ನಿಮ್ಮ ಉಡಿಗೆ ಹಾಕಿದೀನಿ ಎಂದ ಬಸ್ ಹೊರಟಿತು.

ನೀಲಪ್ಪ ಶಂಭುಲಿಂಗಯ್ಯನವರ ಲೆಕ್ಕಾಚಾರ ತಲೆಕೆಳಗಾಗಿತ್ತು. ನೀಲವ್ವನ ತಮ್ಮ ಮಹೇಶನಿಗೆ ಅಂಬಿಕೆಯನ್ನು ಕೊಡಲು ನಿರಾಕಿಸಿದ. ಗೌರಿ ಮಹೇಶರ ಮಾತುಗಳು ಅವನ ಕಿವಿಗೆ ಸ್ವಲ್ಪ ಮುಟ್ಟಿತ್ತು. ಆದರೂ ಪಟ್ಟು ಬಿಡದ ನೀಲವ್ವ ತಮ್ಮನ ಮನೆಯಲ್ಲೇ ಕುಳಿತು ಅವನಿಗೆ ಸಮಾಧಾನ ಹೇಳಿ ಅದೆಲ್ಲಾ ಮದುವೆ ಆಗುವವರೆಗೂ ಆ ಮೇಲೆ ಸರಿಹೋಗುತ್ತಾನೆ. ನಾನೆಲ್ಲ ಅವನಿಗೆ ಸರಿಯಾಗಿ ಬುದ್ದಿ ಹೇಳಿ ದಾರಿಗೆ ತರುತ್ತೇನೆ ಎಂದು ಭರವಸೆ ಕೊಟ್ಟು ಒಪ್ಪಿಸಿಕೊಂಡಳು.



ಶನಿವಾರ ಹನ್ನೆರಡು ಗಂಟೆಗೆ ಕ್ಯಾತ್ಸಂದ್ರಕ್ಕೆ ಹೊರಟು ನಿಂತರು ನೀಲವ್ವ ಶಂಭುಲಿಂಗಪ್ಪ, ಅಷ್ಟರಲ್ಲಿ ಆಳು ಕೆಂಚ ಹಾಗೂ ಸೋಮ ಸೈಕಲ್ಲುಗಳಲ್ಲಿ ಬಂದು ಮನೆ ಮಂದೆ ಇಳಿದರು. ಇಬ್ಬರ ಕಣ್ಣುಗಳಲ್ಲೂ ನೀರಿಲ್ಲ ಮಾತು ಹೊರಡುತ್ತಿರಲಿಲ್ಲ. "ಏನಾಯಿತು. ಬೊಗಳಿರೋ ಎಂದು ಒಡೆಯಲು ಗದರಿದಾಗ ಮಂಚಕಲ್‌ಕುಪ್ಪೆ ತಾವ ಮಹೇಶಪ್ಪ ಹೋಗುತ್ತಿದ್ದ ಬಸ್ಸು ಲಾರಿಗೆ ಡಿಕ್ಕಿ ಹೊಡೆದು ಅಲ್ಲೇ ಸತ್ತೋಗವರಂತೆ ಬಿಕ್ಕಳಿಸುತ್ತಾ ನುಡಿದರು.

* * * * *

ತಿಪಟೂರಿನಲ್ಲಿದ್ದ ರಘು ಭಾನುವಾರ ಪತ್ರಿಕೆ ಬಿಡಿಸಿ ನೋಡಿ ದಂಗಾದ ಕ್ಯಾತ್ಸಂದ್ರದ ಶಂಭುಲಿಂಗಯ್ಯನವರ ಪುತ್ರ ಬೆಂಗಳೂರಿನ ಎಸ್.ವಿ.ಎಸ್ ಕಾಲೇಜಿನಲ್ಲಿ ಇತಿಹಾಸ ಉಪನ್ಯಾಸಕರಾಗಿದ್ದ ಮಹೇಶ ಏನ್ನುವವರು ಬಸ್ಸು ಲಾರಿ ಅಪಘಾತದಲ್ಲಿ ಮರಣ ಹೊಂದಿದ್ದಾರೆ. ಕ್ಯಾತ್ಸಂದ್ರದ ಚಂದ್ರಪ್ಪ, ಕೆಸರುಮಡುವಿನ ದೇವಮ್ಮ ಎನ್ನುವವರೂ ಸ್ಥಳದಲ್ಲಿಯೇ ಮರಣ ಹೊಂದಿದ್ದಾರೆ. ಇನ್ನೂ ಹತ್ತಾರು ಜನರಿಗೆ ತೀವ್ರ ಗಾಯಗಳಾಗಿವೆ ತುಮಕೂರಿನ ಆಸ್ಪತ್ರೆಯಲ್ಲಿ ಮುಂದಿನ ವಿವರವನ್ನು ರಘು ಓದಲಾರದಾದ ತಕ್ಷಣವೇ ಹೊರಟು ಕ್ಯಾತ್ಸಂದ್ರಕ್ಕೆ ಬಂದ. ಊರೆಲ್ಲಾ ಸೂತಕ ಹೊಡೆದಂತೆ ಅವನಿಗೆ ಕಂಡಿತು. ಬಾಲ್ಯ ಗೆಳೆಯನ ಆಕಸ್ಮಿಕ ಸಾವು ಅವನನ್ನು ಮೂಕಗೊಳಿಸಿತು. ಶನಿವಾರ ರಾತ್ರಿಯೇ ಸಂಸ್ಕಾರ ಕಾರ್ಯವೆಲ್ಲ ಮುಗಿದಿತ್ತು. ಬಸ್ ಸ್ಟಾಂಡಿನಲ್ಲೇ ಆನಂತ ಸಿಕ್ಕಿದ. ಅನಂತ, ಮಹೇಶ, ರಘು ಎಲ್ಲರೂ ಒಟ್ಟಿಗೇ ಓದಿದವರು ಮಹೇಶ ಅಧ್ಯಾಪಕನಾಗಿದ್ದ ಕಾಲೇಜಿನಲ್ಲಿಯೇ ಆನಂತನೂ ಉಪನ್ಯಾಸಕನಾಗಿದ. ರಘ್ ಮಾತ್ರ ಓದು ಮುಗಿಸಿ ಹಳ್ಳಿಗೆ ಬಂದು ತನ್ನ ಜಮೀನು ಸಾಗುವಳಿ ಕೆಲಸದಲ್ಲಿ ತೊಡಗಿದ್ದ. ಆನಂತನಿಗೆ ಮಹೇಶ ಗೌರಿಯರ ಸಂಬಂಧ ಚೆನ್ನಾಗಿ ಗೊತ್ತಿತ್ತು. ಹಿಂದಿನ ಸಂಜೆ ಮಹೇಶ, ಅನಂತನೊಡನೆ ತಮ್ಮಿಬ್ಬರ ಮದುವೆಯ ವಿಷಯವನ್ನು ವಿವರವಾಗಿ ಹೇಳಿ ಮದುವೆಗೆ ರಘುವನ್ನು ಕರೆತರಲು ಒತ್ತಾಯಿಸಿ ಹೇಳಿದ್ದ. ಇದೆಲ್ಲವನ್ನೂ ಕೇಳಿ ರಘುವಿಗೆ ಕಣ್ಣು ತುಂಬಿ ಬಂತು, ಮುಂದೆ ಮನೆ ಕಡೆ ಮುಖ ಮಾಡಿ

ಹೊರಟ ಸ್ಕೂಲ್ ಮೈದಾನ ದಾಟಿ ಅರಳೀಕಟ್ಟೆ ಹತ್ತಿರ ಬರುವ ವೇಳೆಗೆ ಕೆಂಚ ಎದುರಿಗೆ ಸಿಕ್ಕಿದ. ಕೇಳಿದಿರಾ ಸ್ವಾಮಿ ಎಂದ ಅವನ ಕಣ್ಣೀರಿನ ಜೊತೆಯಲ್ಲಿ ಆಕ್ರೋಶವೂ ತುಂಬಿತ್ತು.

"ಕೇಳಿದೆ ಕೆಂಚಾ ಹೀಗೆ ಆಗಬಾರದಿತ್ತು' ಎಂದ ರಘು 'ಹಾಗೇ ಆಗಬೇಕು ಸ್ವಾಮೇರ, ಮೋಸ ಮಾಡೋರಿಗೆಲ್ಲಾ ಇದೆ ಸಿಕ್ಷೆ. ನೋಡಿದಿರಾ, ನಾನು ಮದುವೆ ಆಗಾನ ಅಂತ ಇದ್ದ ಚಂದ್ರನ ಚಿಕ್ಕ ಸ್ವಾಮೇರು ಹೊಡಕೊಂಡು ಹೊಂಟೇಬಿಟ್ಟರು, ದೇವೇನು ಕಣ್ಣುಮುಚ್ಚಿ ಕುಂತವನಾ, ಮೋಸಗಾರರಿಬ್ಬರಿಗೂ ಸರಿಯಾಗಿ ಸಿಕ್ಷೆ ಮಾಡ್ದ' ಇಷ್ಟು ಹೇಳಿ ಅಲ್ಲಿ ನಿಲ್ಲದ ಮುಂದೆ ನಡೆದ ಕೆಂಚ.

ಇದೇನು ಇವನು ಹೇಳೋದು? ಅನಂತ ಹೇಳಿದ್ದೇನು? ದ್ವಂದ್ವದಲ್ಲಿ ಸಿಲುಕಿದ ರಘು. ಮನೆಗೆ ಬಂದಾಗ ರಘುವಿನ ಸಪ್ಪೆ ಮುಖ ನೋಡಿ ಅವನ ತಾಯಿ ಗದರಿದಳು, 'ಮಹೇಶ ಸತ್ತ ಅಂತ ಸಪ್ಪಗಿದ್ದೀಯ, ಅವನು ಸತ್ತದ್ದೇ ಒಳ್ಳೆದಾಯ್ತು ಜಾತಿ ಇಲ್ಲ ಕುಲ ಇಲ್ಲ, ಗೋತ್ರ ಇಲ್ಲ. ಅಧಿಕಾರ ಅಂತಸ್ತು ಇಲ್ಲ ಎಲ್ಲಾ ಬಿಟ್ಟು ಹೊಲೆಯರ ಮುಂಡೇದು



ಆ ಚಂದ್ರೀನ ಕಟ್ಟಿಕೊಂಡು ಹೊರಟಿದ್ದನಲ್ಲೋ! ಅವಳ ನೆರಳು ಬಿದ್ರೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು, ಅಂಥದರಲಿ ಅವಳನ್ನು ಕಟ್ಟಿಕೊಳ್ಳುವುದೇ? ಅದಕ್ಕೇ ದೇವರು ಸರಿಯಾಗಿ ಮಾಡಿದ' ಮಾತು ಕೇಳಿ ಕರುಳು ಕತ್ತರಿಸಿ ಬಂತು ರಘುವಿಗೆ

ಸಂಜೆ ದೊಡ್ಡನನ್ನು ನೋಡಲು ಶಂಭುಲಿಂಗಯ್ಯನವರ ತೋಟದ ಕಡೆ ಹೊರಟ ರಘು, ದೊಡ್ಡ ಬೇಲಿ ಬಾಗಿಲ ಬಳಿ ಹೊಂಗೆ ಮರದ ಬುಡಕ್ಕೆ ಒರಗಿ ಶೂನ್ಯದಲ್ಲಿ ದೃಷ್ಟಿ ನೆಟ್ಟು ಕುಳಿತಿದ್ದ. ದೊಡ್ಡ ಎಂದ ರಘು ಕೂತುಕೋ ಏಳಬೇಡ ಎಂದ ದೊಡ್ಡನಿಗೆ ಏಳುವ ಶಕ್ತಿಯೂ ಇರಲಿಲ್ಲ. ಕುಳಿತು ಗೋಳೋ ಎಂದು ಅಳಲು ಪ್ರಾರಂಭಿಸಿದ ಅವನು ಸಮಾಧಾನ ಹೊಂದುವವರೆಗೂ ರಘು ಅವನನ್ನು ಏನೂ ಕೇಳಲಿಲ್ಲ. ಸ್ವಲ್ಪ ಹೊತ್ತಾದ ನಂತರ ದೊಡ್ಡನೇ ಪ್ರಾರಂಭಿಸಿದ ಒಳ್ಳೆಯವರಿಗೆ ಇದು ಕಾಲ ಅಲ್ಲ ಬುದ್ದಿ ದೇವರು ಓಳೊಳ್ಳೆ ಒಡವೇನೇ ತನ್ನ ತಾವಕೆ ಕರಕೊಂತಾನೆ ಬುಧುವಾರ ಚಂಚಿ ಚಿಕ್ಕ  ಬುದ್ಧರು ಇಲ್ಲಿಗೆ ಬಂದಿದ್ದರು. ದೇವರಂತ ಮನುಷ್ಯರು, ಸಹಾಯ ಮಾಡ್ತೀನಿ ಅಂದರು. ನನ್ನ ಅದೃಷ್ಟಾನೇ ನೆಟ್ಟಗಿಲ್ಲ ಬಿಡಿ. ನನ್ನೊಡೆಯ ಏಳ್ತಿನಿ ಕೇಳಿ, ನನ್ನ ಇಬ್ಬರು ಹೆಂಡರು ತೀರಿಕೊಂಡ ಮೇಲೆ ಹಿರೇಹಳ್ಳಿಯವರು ಚೆನ್ನಿನ, ಚೆನ್ನಂಗೆ ಕೊಟ್ಟು ಮದುವೆ ಮಾಡಬೇಕು ಅಂತ ಬಾಸೆ ತಕ್ಕೊಂಡ್ರು. ಆ ಚೆನ್ನಂಗೂ ಚಂದ್ರಿ ಅಂದ್ರೆ ಪಂಚಪ್ರಾಣ ಮೂರು ದಿವಸಕ್ಕೆ ಏನಾರ ನೆಪ ಮಾಡಿಕೊಂಡು ಬಂದು ಚೆನ್ನಿನ ನೋಡಕೊಂಡು

ಓಗದೆ ಇದ್ದರೆ ಅವನ ಜೀವಾನೇ ನಿಲ್ಲಿದ್ದಿಲ್ಲ. ಚಂದ್ರಿಗೂ ಆಟೆ, ಅವಳ ಮಾವ ಅಂದ್ರೆ ಪ್ರಾಣ ಬಿಡೋಳು ಈ ವರ್ಷ ಮದುವೆ ಮಾಡಿಕೊಡಾನ ಅಂತಿದ್ದೆ. ಅಷ್ಟರಾಗೆ ಯಾವುದೋ ಕೆಟ್ಟಗಳಿಗೇಲಿ ನಮ್ಮ ಒಡೆಯರ ಮನೆ ಆಳು ಕೆಂಚನ ಕಣ್ಣು ನಮ್ಮ ಚಂದ್ರಿ ಮೇಲೆ ಬೀಳೋದಾ! ಈಗ ಎಂಟು ದಿವಸದ ಮುಂದೆ ದೊಡ್ಡ ಸಾವುಕಾರರು ತೋಟಕ್ಕೆ ಬಂದರು, ಎಣ್ಣೀರು ಕುಡಿದರು. ಆಮೇಕೆ, ಈ ಜೇಷ್ಠಮಾಸಕ್ಕೆ ನಿಮ್ಮ ಚಂದ್ರವ್ವನ ನಮ್ಮ ಮನೆ ಆಳು ಕೆಂಚನಿಗೆ ಕೊಟ್ಟು ಮದುವೆ ಮಾಡು, ತಿಳಿತಾ ಅಂತ ಏಳಿ ಒಂಟೇ ಹೋದರು, ಅವರ ಮಾತಿಗೆ ಎದುರಾಡಾಕೆ ಆದಾತಾ? ಚಂದ್ರಿ ನಾನೂ ದುಃಖದಾಗೆ ನಲುಗಿಹೋದ್ವಿ, ಮೊನ್ನೆ ಗುರುವಾರ ಚಂಚೆ ಚಿಕ್ಕ ಬುದ್ಧರು ಬಂದಿದಾಗ ಅವರ ತಾವ ಎಲ್ಲಾ ಏಳುಕೊಂಡು ಅತ್ತು ಬಿಟ್ಟೆ' ಅವರು ನಮ್ಮ ಸಮಾಧಾನ ಮಾಡಿ ಹೇಳಿದರು.

"ನೀನು ನಾಳೇನೇ ಚಿನ್ನನನ್ನು ಕರೆಸಿಕೊಂಡು ಹಿರೇಹಳ್ಳಿಲಿ ಶನಿವಾರ ಬೆಳಿಗ್ಗೆ 10 ಗಂಟೆಗೆ ಮದುವೆಗೆ ಸಿದ್ಧಮಾಡಿಕೊಂಡಿರು ಅಂತ ಹೇಳು, ಚೆನ್ನಿನ ನಾನು ಶನಿವಾರ ಬೆಳಿಗ್ಗೆ ಒಂಭತ್ತೂವರೆ ಗಂಟೆ ಪಟಲ್ ಬಸ್‌ನಲ್ಲಿ ಅಲ್ಲಿಗೆ ಕರೆದುಕೊಂಡು ಹೋಗುತ್ತೀನಿ ಅಲ್ಲಿ ಅವರಿಬ್ಬರಿಗೂ ಮದುವೆ ಮಾಡಿಸಿ ಇಬ್ಬರನ್ನೂ ಸ್ವಲ್ಪ ದಿವಸ ಬೆಂಗಳೂರಿಗೆ ನಮ್ಮ ಮನೆಗೆ ಕರೆದುಕೊಂಡು ಹೋಗುತ್ತೇನೆ, ಅವನಿಗೆ ಅಲ್ಲೇ ಎಲ್ಲಾದರೂ ಕೆಲಸ ಕೊಡಿಸುತ್ತೇನೆ ಆಮೇಲೆ ನಿನ್ನನ್ನೂ ಕರೆಸಿಕೊಡ್ತೀನಿ. ನಿನಗೂ ವಯಸ್ಸಾಯಿತು. ಇನ್ನು ನಿನಗೆ ತೋಟದ ಕೆಲಸ ಸಾಕು. ಜೀವಮಾನವಿಡೀ ನಮ್ಮ ಮನೆಗೆ ದುಡಿದಿದ್ದೀಯಾ! ಇನ್ನು ನನ್ನ ಹತ್ತಿರ ಬಂದು ಸುಖವಾಗಿ ಇದ್ದು ಬಿಡು, ನನಗೂ ಮನೆಯಲ್ಲಿ ಒಬ್ಬರು ದೊಡ್ಡವರು ಇದ್ದ ಹಾಗೆ ಆಗುತ್ತದೆ, ಎಂದು ಹೇಳಿ ಮುನ್ನೂರು ರೂಪಾಯಿ



ಕೊಟ್ಟರು. ನಾಳೇನೆ ಹೋಗಿ ಚಂದ್ರಿಗೆ ಬೇಕಾದ ಬಟ್ಟೆ ಬರೆ ತಗೆದುಕೊಂಡು ಚಿನ್ನಂಗೂ ಮದುವೆ ಖರ್ಚಿಗೆ ಸ್ವಲ್ಪ ಕೊಡು ಅಂತ ಹೇಳಿ ಹೋದರು. ಅವರು ಹೇಳಿದ ಹಂಗೆ ಎಲ್ಲಾ ವ್ಯವಸ್ಥೆ ಮಾಡಿ ಮಗಳನ್ನು ಕಳಸ್ಥೆ ಸ್ವಾಮಿ, ಚಂದ್ರಿ ನೇರ ಅವರಮಾನ ತಾಕೆ ಸ್ವರ್ಗಕ್ಕೇ ಒಂಟೋದಲು ಸ್ವಾಮಿ' ಎಂದು ಹೇಳಿ ಗೋಳೋ ಎಂದು ಅಳಲು ಮತ್ತೆ ಪ್ರಾರಂಭಿಸಿದ.

ಅವನನ್ನು ರಘು ತನಗೆ ತಿಳಿದ ರೀತಿಯಲ್ಲಿ ಸಮಾಧಾನಗೊಳಿಸಿ ಮನೆಗೆ ಬರುತ್ತಾ ಹಾಗೇ ಶಂಭುಲಿಂಗಯ್ಯನವರ ಮನೆಗೆ ಹೋದ ಆಗ ತಾನೇ ಸೂರ ಅಸ್ತಂಗತವಾಗಿದ್ದ. ಕೆಮ್ಮುಗಿಲಿನ ಝಳ ಇನ್ನೂ ಕಡಿಮೆಯಾಗಿರಲಿಲ್ಲ. ನಡುಮನೆಯಲ್ಲಿ ಇದ್ದ ಹೆಂಗಸು "ಅವರು ರೂಮಾಗೆ ಅವರೆ ಕರೀತೀನಿ ತಾಳಿ' ಎಂದು ಎಡಗಡೆ ಇದ್ದ ಕೊಠಡಿಯೊಳಕ್ಕೆ ಹೋದಳು. ಕೆಲವು ಕ್ಷಣಗಳಲ್ಲಿಯೇ ಹೊರಕ್ಕೆ ಬಂದು ಒಳಕೇ ಬರಬೇಕಂತೆ, ಕರೀತಾರೆ ಎಂದಳು. ರಘು ಕೊಠಡಿಯನ್ನು ಪ್ರವೇಶಿಸಿದ. ನೀಲವ್ವ ಮುಂಚದ ಮೇಲೆ ಮಲಗಿದ್ದಳು. ರಘುವನ್ನು

ಕಂಡು ಮುಸ್ತಿ ಮುಸಿ ಅಳಲು ಪ್ರಾರಂಭಿಸಿದಳು. ಶಂಭುಲಿಂಗಯ್ಯನವರು ತಮ್ಮ ನೋವನ್ನು ನುಂಗಿಕೊಂಡು ಹೆಂಡತಿಯನ್ನು ಸಾಂತ್ವನಗೊಳಿಸಲು ಯತ್ನಿಸುತ್ತಿದ್ದರು. ಆ ಸಂದರ್ಭಕ್ಕೆ ಯಾವ ಮಾತನಾಡಿದರೂ ಆ ಮಾತು ತನ್ನ ಅರ್ಥವನ್ನು ಕಳೆದುಕೊಳ್ಳುತ್ತದೆ. ಎಂದು ರಘು ಸುಮ್ಮನೆ ಕುಳಿತ. ನೀಲವ್ವ ಸ್ವಲ್ಪ ಸಮಾಧಾನ ಹೊಂದಿದ ಮೇಲೆ ಶಂಭುಲಿಂಗಯ್ಯನವರು, 'ನೋಡು ರಘು ನೀನಾದರೂ ಇವಳಿಗೆ ಸ್ವಲ್ಪ ತಿಳಿವಳಿಕೆ ಹೇಳಪ್ಪ' ಎಂದರು. ಬಹಳ ಕಷ್ಟಪಟ್ಟು, 'ಇವತ್ತಿನ ನಿಮ್ಮ ಸಂಕಟಾನ ಆ ಶಿವನೇ ಕಡಿಮೆ ಮಾಡಲಾರೆ ಇನ್ನ ನರಮನುಷ್ಯರಾದ ನಮ್ಮ ಮಾತುಗಳಿಂದ ಏನು ಕಡಿಮೆ ಮಾಡಲು ಸಾಧ್ಯ? ಹೆತ್ತ ಕರುಳ ನೋವು ಆ ತಾಯಿಗೇ ಗೊತ್ತು, ಎಲ್ಲ ದೈವಲೀಲೆ. ಆ ದೇವರೇ ಅವನನ್ನು ಕರೆಸಿಕೊಂಡ ಅಂತ ಸಮಾಧಾನ ತಂದುಕೊಳ್ಳಿ ಎಷ್ಟು ಅತ್ತರೆ ತಾನೇ ಹೋದ ಮಹೇಶ ಹಿಂತಿರುಗಿ ಬರುತ್ತಾನೆಯೇ? ರಘುವಿಗೆ ಇನ್ನು ಮುಂದೇ ಮಾತಾಡಲು ಸಾಧ್ಯವಾಗಲಿಲ್ಲ. ಅವನ ಕಂಠವೂ ಗದ್ಗದವಾಗಿ ಸ್ವರ ನಿಂತಿತು. ಶಂಭುಲಿಂಗಯ್ಯನವರು ವಸ್ತ್ರದ ತುದಿಯಿಂದ ಕಣ್ಣನ್ನು ಒರೆಸಿಕೊಂಡರು.

'ರಘು ನಾವೇ ನಮ್ಮ ಮಗನನ್ನು ಕೊಂದುಬಿಟ್ಟೆವೆ. ನಾವು ಹೆಣ್ಣನ್ನು ಒಪ್ಪಿಸಿಕೊಂಡು ಮದುವೆ ನಿಶ್ಚಯ ಮಾಡಿಸಿಕೊಂಡು ಬಂದೇ ಬರೀವಿ ಅಂತ ಅವನಿಗೆ ಖಾತ್ರಿಯಾಗಿ ಹೋಯಿತು. ಅದಕ್ಕೆ ಅವನು ಅವಸರ ಅವಸರವಾಗಿ ಚಂದ್ರನ ಕರಕೊಂಡು ಹೊರಟುಬಿಟ್ಟ. ಈಗ ನನ್ನ ಮನಸ್ಸಿಗೆ ಏನೇನೋ ಹೊಳೆಯುತ್ತೆ ರಘು ಇದಕ್ಕೆ ಎರಡು ತಿಂಗಳ ಹಿಂದೆ ಅವನು ತೋಟಕ್ಕೆ ಹೋಗಿದ್ದಾಗಲೇ ಆ ಚಂದ್ರಿ ಬಾವಿಗೆ ಬಿದ್ದಿದ್ದು ಇವನೇ ಬಾವಿಗೆ ಹಾರಿ ಅವಳನ್ನು ಮೇಲಕ್ಕೆ ಎತ್ತಿದ್ದ. ಏನು ಅವತ್ತಿನಿಂದಲೇ ಅವರಿಬ್ಬರಿಗೆ ಸ್ನೇಹ ಬೆಳಿತೋ, ಅಥವಾ ಮೊದಲೇ ಸ್ನೇಹ ಬೆಳೆದಿದ್ದು ಅವತ್ತೇನಾದರೂ ಇಬ್ಬರ ನಡುವೆ ಮಾತುಕತೆ ನಡೆದು ಅವಳು ಬಾವಿಗೆ ಹಾರಿಕೊಂಡಿದ್ದಳೋ ಏನೋ! ಗೊತ್ತಿಲ್ಲ, ಅವಳೇನೋ ನಾನು ಬಟ್ಟೆ ಒಗೀತಿದ್ದೆ, ಕಾಲು ಜಾರಿ ಬಿದ್ದೆ ಚಿಕ್ಕಯ್ಯನವರು ಆ ಗಳೀಗೆಗೆ ಅಲ್ಲಿಗೆ ಹೆಂಗೆ ಬಂದರೊ, ಅಂತೂ ನನ್ನ ಜೀವ ಉಳಿಸಿದರು, ಇಲ್ಲದಿದ್ದರೆ ನನ್ನ ಗತಿ ಗಂಗಮ್ಮನ ಪಾಲೇ ಆಗಿತ್ತು ಅಂತ ಆಮೇಲೆ ಹೇಳಿದಳು.

ನಿಜಾಂಶ ಯಾರಿಗೆ ಗೊತ್ತೋ ಆ ಶಿವನೇ ಬಲ್ಲ! ಅವಳೂ ಒಳ್ಳೆ ಹುಡುಗಿನೇ ಜಾತಿ ಯಾವುದಾದರೆ ಏನಂತೆ ಇನ್ನೊಂದು ಎರಡು ದಿವಸ ಬಿಟ್ಟು ನಾವೇ ಸಮಾಧಾನದಿಂದ ಯೋಚನೆ ಮಾಡಿದ್ದರೆ ಚಂದ್ರಿನ್ನೇ ಸೊಸೆ ಮಾಡಿಕೊಳ್ಳುತ್ತಿದ್ದೆವೋ ಏನೋ! ಈಗ ಪ್ರಪಂಚ ಎಷ್ಟು ವಿಶಾಲವಾಗಿ ಬೆಳೆದಿದೆ. ಒಟ್ಟಿನಲ್ಲಿ ಮನುಷ್ಯನ ಮನಸ್ಸನ್ನು ಅರ್ಥಮಾಡಿಕೊಳ್ಳುವುದೇ ಕಷ್ಟ ಇದ್ದೊಬ್ಬ ಮಗನನ್ನು ನಾವು ಕಳೆದುಕೊಂಡವಿ ಇದ್ದ ಒಬ್ಬ ಮಗಳನ್ನು ಆ ದೊಡ್ಡ ಕಳಕೊಂಡ. ಅವರಿಬ್ಬರ ಸಾವಿಗೆ ನಾವೇ ಕಾರಣ ಆದೆವು' ನಿಟ್ಟುಸಿರಿಟ್ಟು ಮಾತು ನಿಲ್ಲಿಸಿದರು. ಶಂಭುಲಿಂಗಯ್ಯ ಚಂದ್ರಿ ಮಹೇಶರ ಸಂಬಂಧದ ಬಗ್ಗೆ ಅವರಿಗಿದ್ದ ತಪ್ಪು ಬಾವನೆಯನ್ನು ಹೋಗಲಾಡಿಸುವ ಆತುರ ಮನಸ್ಸಿನಲ್ಲಿ ಮೂಡಿದರೂ ಆ ಸಂದರ್ಭ ಸರಿಯಲ್ಲವೆಂದು ಸುಮ್ಮನಾದ ರಘು. ಮುಂದೆಯೂ ಸಹ ಆ ವಿಷಯವನ್ನು ಹೇಳುವುದರಿಂದ ಯಾವ ಪ್ರಯೋಜನವೂ ಇಲ್ಲವೆಂದು ತಿಳಿದು ರಘು ಅಲ್ಲಿಂದ ಮೇಲಕ್ಕೆ ಎದ್ದ. ಅವನ ಹೃದಯ ಗೆಳಯನಿಗಾಗಿ ಹಿಂಡಿಹೋಗಿತ್ತು. ಅಪಘಾತ ಕತೆಯ ಸುರುಳಿಯನ್ನು ಬಿಚ್ಚಿತ್ತು.

# ಸಾರಾಂಶ

**- ಸಾರಾ ಅಬೂಬಕರ್**

ಆ ದಿನ ಶಬಾನ ಎಂದಿನಂತೆಯೇ ಗಂಡನನ್ನು ಬೀಳ್ಕೊಟ್ಟು ಮನೆಬಾಗಿಲಲ್ಲಿ ನಿಂತಿದ್ದಾಗ ದೂರದಲ್ಲಿ ಹೆಂಗಸೊಬ್ಬಳು ಬರುತ್ತಿರುವುದನ್ನು ಕಂಡಳು. ನೇರವಾಗಿ ತಮ್ಮ ಮನೆಯ ಗೇಟಿನ ಬಳಿಗೆ ಬಂದಾಕೆ.

"ಅಮ್ಮಾ, ನಿಮ್ಮ ಮನೆಯಲ್ಲಿ ಫೋನಿದೆಯೇ?" ಎಂದು ಕೇಳಿದಳು.

ಶಬಾನ ಕ್ಷಣಕಾಲ ಹಿಂದೆ ಮುಂದೆ ನೋಡಿದಳು. ದಿನ ಬೆಳಗಾದರೆ "ನಾನೊಮ್ಮೆ ಫೋನ್ ಮಾಡಲೇ?" ಎಂದು ಕೇಳಿಕೊಂಡು ಬಂದು ತೊಂದರೆ ಕೊಡುವವರ ಸಂಖ್ಯೆ ಕಮ್ಮಿಯಿಲ್ಲ. ಸರಕಾರಿ ಮನೆಗಳ ಬಡಾವಣೆಯಾದುದರಿಂದ ಎಲ್ಲರೂ ಸರಕಾರಿ ಅಧಿಕಾರಿಗಳು, ದೂರವಾಣಿ ಕೂಡ ಸರಕಾರದ್ದೆ. ಆದರೆ ಎಲ್ಲ ಅಧಿಕಾರಿಗಳ ಮನೆಯಲ್ಲಿ ದೂರವಾಣಿ ಸೌಲಭ್ಯವಿಲ್ಲ. ಹೀಗಾಗಿ ಈ ಅಧಿಕಾರಿಗಳಾಗಲಿ, ಅವರ ಪತ್ನಿಯರಾಗಲಿ, "ನಾನೊಮ್ಮೆ ಫೋನ್ ಮಾಡಲೇ?" ಎಂದು ಕೇಳಿಕೊಂಡು ಬಂದರೆ ಶಬಾನ ಅವರನ್ನು ಹೇಗೆ ತಡೆದಾಳು? ಹೀಗಾಗಿ ದೂರವಾಣಿಯ ಬಿಲ್ ಬಂದಾಗೊಮ್ಮೆ ಶಬಾನಳಿಗೆ ಗಂಡ ಸಮಿಯುಲ್ಲನಿಂದ ಛೀಮಾರಿ ತಪ್ಪಿದ್ದಲ್ಲ.

"ಅದೇನು ನಿನ್ನಪ್ಪನ ಮನೆಯ ಫೋನ್ ಎಂದು ತಿಳಿದೆಯಾ? ಸರಕಾರಿ ಫೋನ್ ಎಂದರೆ ಕೇಳುವವರಿಲ್ಲವೆಂದುಕೊಂಡೆಯಾ? ಯಾರಾದರೂ ಫೋನ್ ಮಾಡಲು ಬಂದರೆ ಸಾಧ್ಯವಿಲ್ಲ ಎಂದು ಖಡಾಖಂಡಿತವಾಗಿ ಹೇಳಿಬಿಡು." ಎಂದು ದಬಾಯಿಸುತ್ತಿದ್ದನು. ಒಂದೊಮ್ಮೆ ಹಾಗೆ ಹೇಳಿಯೂ ಆಕೆ ಗಂಡನಿಂದ ಅವಹೇಳನಕ್ಕೆ ಗುರಿಯಾದ ಒಂದು ಪ್ರಸಂಗ ಎದುರಾಗಿತ್ತು.

ಹಿಂದಿನ ದಿನವೇ ದೂರವಾಣಿಯ ಬಿಲ್ ಬಂದು ಗಂಡನ ಕೆಂಗಣ್ಣಿಗೆ ತುತ್ತಾಗಿದ್ದ ಆಕೆ ಆ ದಿನ ಆದಾರೋ ಹೊಸಬರೊಬ್ಬರು ಫೋನ್ ಮಾಡಲು ಬಂದಾಗ ಮುಲಾಜಿಲ್ಲದೆ, "ಸಾಧ್ಯವಿಲ್ಲ" ಎಂದಿದ್ದಳು. ಆದರೆ ರಾತ್ರಿ ಸಮಿಯಲ್ಲ ಬಂದಾಗ ಅದೇ ಒಂದು ಹಗರಣವಾಗಿತ್ತು.

"ನನ್ನ ಸ್ನೇಹಿತ ರವಿಯ ಪತ್ನಿ ಬೆಳಿಗ್ಗೆ ಫೋನ್ ಮಾಡಲು ಬಂದಾಗ ನೀನು "ಸಾಧ್ಯವಿಲ್ಲ" ಎಂದೆಯಂತೆ? ಯಾರಾರಿಗೋ ಫೋನ್ ನೀಡಿ ನನ್ನಿಂದ ಬಿಲ್ ಕಕ್ಕಿಸುತ್ತಿದ್ದೆಯಲ್ಲ? ನನ್ನ ಸ್ನೇಹಿತನ ಪತ್ನಿ ಬಂದಾಗ ಬೇಡ ಅನ್ನಲು ಅದೇನು ನಿಮ್ಮಪ್ಪನ ಮನೆಯ ಫೋನ್ ಕೆಟ್ಟು ಹೋಯಿತೇ?" ಎಂದು ಎಂದಿನಂತೆಯೇ ಚುಚ್ಚಿದ್ದನು.

ಶಬಾನ "ಅದೇನೊ ಒಂದು ಗಾದೆ ಇದೆಯಲ್ಲ... ಇಟ್ಟು ಕೊಂಡರೂ ಕೇಡು, ತೆಗೆದು ಹಾಕಿದರೂ ಕೇಡು" ಅಂತ? ಹಾಗೇ ಆಯಿತು ನಿಮ್ಮ ಮಾತು" ಎಂದು ಗೊಣಗಿ ಸುಮ್ಮನಾಗಿದ್ದಳು.

ಅದಕ್ಕೆಂದೇ ಈ ದಿನ ಈ ಯಾವ ಹಗರಣವೂ ಬೇಡವೆಂದು. "ನಮ್ಮ ಫೋನ್ ಕೆಟ್ಟಿದೆ" ಎಂದುಬಿಟ್ಟಳು. ಬಳಿಕ ಆ ಹೆಂಗಸನ್ನೊಮ್ಮೆ ಕೂಲಂಕುಶವಾಗಿ ನೋಡಿದಳು. ಗೌರವರ್ಣ, ಒಂದು ಕಾಲದಲ್ಲಿ ಸುಂದರಿಯಾಗಿದ್ದಳೆಂದೇ ಹೇಳಬಹುದಾದ ಮುಖ ಲಕ್ಷಣ. ಎಣ್ಣೆಗಾಣದ ತಲೆಗೂದಲು, ಕಾರ್ಮೋಡ ಮುಸುಕಿದಂತಹ ಮುಖಭಾವ, ಮಾಸಿದ ಬಟ್ಟೆ ಎಲ್ಲವೂ ಕಥೆಯೊಂದರ ಸಾರಾಂಶದಂತೆ ಕಂಡಿತ್ತು ಆಕೆಗೆ. ಕಾರ್ಮೋಡವಾಗಲೇ ಹನಿಯುದಿರಿಸತೊಡಗಿತ್ತು. ಬಂದಾಕೆ ಕಣ್ಣೊರೆಸಿಕೊಳ್ಳುತ್ತಾ ಹೋಗಲುದ್ಯುಕ್ತಳಾದಾಗ ತೀರ ಮೃದು ಹೃದಯಿಯಾದ ಶಬಾನ.

"ಬಾಮ್ಮಾ ಒಳಗೆ ಬಾ ಕೊಂಚ ಹೊತ್ತಿನಲ್ಲಿ ಫೋನ್ ಸರಿಹೋಗಬಹುದು" ಎನ್ನುತ್ತಾ ಆಕೆಯನ್ನು ಕರೆದು ಒಳಗೆ ಕೂರಿಸಿದಳು.

ಈಕೆ ಯಾರಿಗೆ ಫೋನ್ ಮಾಡಬೇಕಾಗಿದೆ? ಯಾವ ಸಂದೇಶ ತಲುಪಿಸಬೇಕಾಗಿದೆ? ಶಬಾನ ಯೋಚಿಸುತ್ತಾ ಒಂದೆರಡು ಬಾರಿ ಒಳಗೆ ಹೊರಗೆ ಓಡಾಡಿದಳು. ಆಕೆ ಈ ಬಡಾವಣೆಯಲ್ಲಿರುವವರ ತರಹ ಕಾಣುತ್ತಿಲ್ಲವಲ್ಲ?

"ನಿಮ್ಮ ಹೆಸರೇನು?" ಶಬಾನ ಕೇಳಿದಳು,

"ಯಮುನ"

"ಗಂಡನಿಗೇನು ಕೆಲಸ?"

"ಅವರು ವಿಧಾನಸೌಧದಲ್ಲಿ ಕೆಲಸದಲ್ಲಿದ್ದಾರೆ"

"ಈಗೇನು ಅವರಿಗೆ ಫೋನ್ ಮಾಡಬೇಕಾಗಿದೆಯೇ?"

ಆಕೆ ಕೊಂಚ ಹೊತ್ತು ಸುಮ್ಮನಿದ್ದು ಬಾಡಿದ ಮುಖದಿಂದ, "ಅವರಿಗಲ್ಲ ನಮ್ಮ ಪರಿಚಯದವರೊಬ್ಬರಿಗೆ" ಎಂದಳು. ಶಬಾನಳಿಗೆ ಪೇಚಿಗಿಟ್ಟುಕೊಂಡಿತು. ಪರಿಚಯವಿಲ್ಲದವಳೊಬ್ಬಳನ್ನು ಮನೆಯ ಹಾಲಿನಲ್ಲಿ ಕೂರಿಸಿ ಆಕೆ ತನ್ನ ಮನೆಗೆಲಸ ಮುಂದುವರಿಸುವುದಾದರು ಹೇಗೆ? ಈಕೆಯನ್ನು ಆದಷ್ಟು ಬೇಗ ಕಳಿಸಿಬಿಡಬೇಕೆಂದಾಲೋಚಿಸಿದ ಶಬಾನ ಫೋನಿನ ಬಳಿ ಹೋಗಿ ರಿಸೀವರ್ ಎತ್ತಿಕೊಂಡು ಪರೀಕ್ಷಿಸುವಂತೆ ನೋಡಿ, "ಹೂಂ, ಈಗ ಫೋನ್ ಸರಿಯಾಯಿತು. ಈಗ ಮಾಡಿ" ಎಂದಳು.

ಆಕೆ ರಿಸೀವರ್ ಎತ್ತಿಕೊಂಡು ತನ್ನಲ್ಲಿದ್ದ ಚೀಟಿಯನ್ನು ನೋಡಿ ನಂಬರ್ ತಿರುಗಿಸಿದಳು. ಬಳಿಕ ಮಾತನಾಡುತ್ತಾ ಅಳತೊಡಗಿದಳು. ಅಳುತ್ತಳುತ್ತಾ ಹಲವಾರು ವಿಷಯಗಳನ್ನು ಅದಾರಿಗೋ ತಿಳಿಸಿ ರಿಸೀವರ್ ಕೆಳಗಿಟ್ಟು ಎದ್ದಳು.

ಮಾರನೇ ದಿನ ಯಮುನ ಬಂದಾಗ ಶಬಾನಳಿಂದ "ಸಾಧ್ಯವಿಲ್ಲ" ಎನ್ನಲಾಗಲೇ ಇಲ್ಲ. ನಿನ್ನೆಯಂತೆಯೇ ಅಳುತ್ತಳುತ್ತಲೇ ಮಾತನಾಡಿ ರಿಸೀವರ್ ಕೆಳಗಿಟ್ಟು ಸೆರಗಿನಿಂದ ಕಣ್ಣು, ಮುಖ ಒರೆಸಿಕೊಳ್ಳುತ್ತಲೇ ಆಕೆ ಎದ್ದು ನಿಂತಾಗ ಶಬಾನ,



"ಯಾಕಮ್ಮಾ ಅಳ್ತಿಯಾ? ಏನು ವಿಷಯ?" ಎಂದು ಮೃದುವಾಗಿ ಕೇಳಿದಳು. ಹಣ್ಣಾದ ಕುರುವಿಗೆ ಸೂಜಿ ಚುಚ್ಚಿದಾಗ ರಸಿಗೆ ಹೊರಬರುವಂತೆ, ಆಕೆಯ ಎದೆಯಾಳದಿಂದ ನೋವಿನ ಜಲಪಾತವೊಂದು ಧುಮ್ಮಿಕ್ಕಿ ಹೊರಟಿತು. ಸಾರಾಂಶವಾಗಿ ಕಂಡದ್ದು ಇಡಿ ಕತೆಯಾಗಿ ಕಣ್ಮುಂದೆ ಹರಡಿತು.

* * * *

ನನಗೆ ತಂದೆ ಇಲ್ಲ. ತಾಯಿ ಮತ್ತು ಇಬ್ಬರು ಅಣ್ಣಂದಿರಿದ್ದಾರೆ. ಮೂವರು ಅಕ್ಕಂದಿರಿಗೆ ಮದುವೆಯಾಗಿದೆ. ನಾನು ಕೊನೆಯವಳು, ತಂದೆ ತೀರಿದ ಬಳಿಕ ಮದುವೆಗಿದ್ದ ನಾನು ಮನೆಯವರೆಲ್ಲರ ಕಣ್ಣೀರಿಗೆ ಕಾರಣವಾಗಿದ್ದೆ. ಮನೆಯಲ್ಲಿ ತಾಯಿಯಿದ್ದೂ ತಾಯಿಯ ವಾತ್ಸಲ್ಯದಿಂದ ವಂಚಿತಳಾಗಿದ್ದೆ. ಅಣ್ಣಂದಿರಿಗೆ ನಾನೊಂದು ಹೊರೆಯಾಗಿದ್ದೆ. ನನ್ನನ್ನು ಆದಷ್ಟು ಬೇಗ ಹೇಗಾದರೂ ದಾಟಿಸಿ ಕೈತೊಳೆದುಕೊಳ್ಳಬೇಕೆಂದು ಎಲ್ಲರೂ ತವಕಿಸುತ್ತಿದ್ದರು. ತಂದೆಯ ಕಾಲದಲ್ಲಿ ನಾವೆಲ್ಲರೂ ಚೆನ್ನಾಗಿ ಬದುಕಿದ್ದೆವಾದರೂ ಅಕ್ಕಂದಿರ ಮದುವೆಗಾಗಿ ಆಸ್ತಿಗಳ ಮಾರಾಟವಾಗಿ ಮನೆಯಲ್ಲಿ ಬಡತನ ಕಾಲು ಹಾಕಲು ತವಕಿಸುತ್ತಿತ್ತು. ಅಂದರೆ ನಾವು ತೀರಾ ಬಡವರಾಗೇನೂ ಇರಲಿಲ್ಲ. ಸಂಸಾರ ವೆಚ್ಚಕ್ಕೆ ಸಾಕಾಗುವಷ್ಟು ಆದಾಯ ಇದ್ದೇ ಇತ್ತು.

ನಾನಾಗ ಶಾಲೆಯಲ್ಲಿ ಒಂಭತ್ತನೇ ತರಗತಿಯಲ್ಲಿ ಕಲಿಯುತ್ತಿದ್ದೆ ಒಂದು ದಿನ ನಾನು ಶಾಲೆಯಿಂದ ಬರುವಾಗ ನಮ್ಮ ಮನೆಯಲ್ಲಿ ಇಬ್ಬರು ಪುರುಷರು ನನ್ನಣ್ಣನೊಡನೆ ಮಾತನಾಡುತ್ತಿದ್ದರು. ಒಬ್ಬರು ನನ್ನಣ್ಣನ ಸ್ನೇಹಿತರಾಗಿದ್ದರು. ಇನ್ನೋರ್ವರು ಅವರ ಪರಿಚಯದವರು. ಆತ ನನ್ನನ್ನು ನುಂಗುವಂತೆ ನೋಡುತ್ತಿದ್ದುದ್ದನ್ನು ಕಂಡ ನಾನು ತಲೆ ತಗ್ಗಿಸಿಕೊಂಡು ಮನೆಯೊಳಗೆ ಸೇರಿಕೊಂಡು ಮತ್ತೊಮ್ಮೆ ಆತನ ಮುಖ ನೋಡಲಿಚ್ಚಿಸಲಿಲ್ಲ.

ಅದೇಕೋ ನನ್ನೆದೆ ಬಡಿದುಕೊಂಡಿತು. ಆ ಕಣ್ಣುಗಳು ನನ್ನನ್ನು ಕನಸಿನಲ್ಲೂ ಹಿಂಬಾಲಿಸಿ ನನ್ನೆದೆಯ ತಳಭಾಗವನ್ನೇ ಶೋಧಿಸುವಂತೆ ಕಾಣುತ್ತಿತ್ತು. ಈ ಸ್ಪುರದ್ರೂಪಿ ತರುಣನ ಮುಖ ಮತ್ತೆ ಮತ್ತೆ ಕಣ್ಣಿಗೆ ಕಟ್ಟಿದಂತಾಗುತ್ತಿತ್ತು.

ಅದಾಗಿ ಒಂದು ವಾರವಾಗಿತ್ತೇನೋ... ಆದಿನ ನಾನು ಎಂದಿನಂತೆ ಶಾಲೆಯಿಂದ ಮರಳುತ್ತಿದ್ದೆ. ಆದಾರೋ ನನ್ನನ್ನು ಹಿಂಬಾಲಿಸುತ್ತಿರುವ ಅನುಭವವಾಗಿ ಹಿಂದಿರುಗಿ ನೋಡಿದೆ.

ಅವೇ ಕಣ್ಣುಗಳು. ನನ್ನಾಳವನ್ನು ಕೆದಕಿ ನೋಡುವಂತೆ ಕಾಣುತ್ತಿದ್ದ ಕಣ್ಣುಗಳು. ಎಷ್ಟು ಬೇಗನೆ ಹೆಜ್ಜೆ ಹಾಕಲು ಪ್ರಯತ್ನಿಸಿದರೂ ಹೆಜ್ಜೆಗಳನ್ನು ಕೀಳಲಾಗದೆ ನಾನು ನಿಂತಲ್ಲೇ ನಿಂತೆ. ಆತ ನನ್ನ ಬಳಿ ಬಂದು, "ನಿನ್ನ ಹೆಸರು ಯಮುನಾ ಎಂದಲ್ಲವೇ?" ಎಂದು ಕೇಳಿದರು. ನಾನು ಆತನ ದೃಷ್ಟಿ ತಪ್ಪಿಸಿಕೊಂಡು ನೆಲ ನೋಡುತ್ತಾ "ಹೂಂ" ಎಂದೆ "ನನ್ನ ಪರಿಚಯವಿಲ್ಲವೇ?" ಎಂದು ಕೇಳಿದಾಗ 'ಉಂಟು' ಎನ್ನುವಂತೆ ತಲೆಯಾಡಿಸಿದೆ. ಬಳಿಕ ಆತ ನನ್ನ ಸಮೀಪ ಸರಿದು ನನ್ನ ಕೈಯಲ್ಲಿ ಒಂದು ಪೊಟ್ಟಣವನ್ನಿಟ್ಟರು "ನಿನಗಾಗಿಯೇ ತಂದೆ, ಮತ್ತೆಂದಾದರೂ ಬರುವೆ" ಎನ್ನುತ್ತಾ ಹೊರಟು ಹೋದರು. ನಾನು ಆತುರದಿಂದ ಪೊಟ್ಟಣವನ್ನು ಬಿಚ್ಚಿದೆ. ಅದರಲ್ಲೊಂದು



ರವಿಕೆಯ ಬಟ್ಟೆ, ಪ್ರೀತಿಯ ಯಮುನಳಿಗಾಗಿ ಪುಟ್ಟ ಉಡುಗೊರೆ' ಎಂಬ ಚೀಟಿಯೂ ಇತ್ತು. ಇದ್ಯಾವುದನ್ನೂ ಮನೆಯಲ್ಲಿ ತಿಳಿಸದೆ ರವಿಕೆಯ ಬಟ್ಟೆಯನ್ನು ಪೆಟ್ಟಿಗೆಯಲ್ಲಿ ಭದ್ರಪಡಿಸಿದೆ.

ಆಮೇಲೆ ಆತ ಆಗಾಗ ಶಾಲೆಯ ಬಳಿ ನನ್ನನ್ನು ಭೇಟಿಯಾಗತೊಡಗಿದ. ಬರುವಾಗಲೆಲ್ಲ ಕೈಯಲ್ಲಿ ನನಗಾಗಿ ಏನಾದರೊಂದು ತಿಂಡಿಯ ಪೊಟ್ಟಣವೋ, ಪೆನ್ನೋ, ಟೇಪೋ ಏನಾದರೊಂದು ಇದ್ದೇ ಇರುತಿತ್ತು. ಈ ರೀತಿಯ ವಾತ್ಸಲ್ಯಪೂರ್ಣ ನಡುವಳಿಕೆಯ ಅನುಭವವೇ ಇಲ್ಲದ ನನ್ನ ಹೃದಯ ನಿಧಾನವಾಗಿ ಆತನೆಡೆಗೆ ವಾಲತೊಡಗಿತ್ತು. ಕೊನೆಗೊಂದು ದಿನ ಆತ ನನ್ನೊಡನೆ "ಯುಮುನಾ, ನನ್ನನ್ನು ಮದುವೆಯಾಗುವೆಯಾ?" ಎಂದು ಮುಗುಲ್ನಗುತ್ತಾ ಕೇಳಿದಾಗ ನನ್ನೆದೆಯಲ್ಲಿ ಸಂತಸದ ಕಡಲೊಂದು ಉಕ್ಕುಕ್ಕಿ ಮೊರೆಯಿತು. ನನ್ನನ್ನು ಬಂಧಿಸಿದ, ನನ್ನ ಇಡೀ ಬದುಕನ್ನು ನಾಶ ಮಾಡಿದ ಆ ಮುಗುಳ್ನಗೆಯನ್ನು ಆ ಬಳಿಕ ನಾನು ಎಷ್ಟೋ ಬಾರಿ ದ್ವೇಷಿಸಿದ್ದೇನೆ. ಆದರೆ ಆ ದಿನ ಮಾತ್ರ ಆ ಮುಗುಳ್ನಗೆ ನನ್ನನ್ನು ಬಾನೆತ್ತರ ತೇಲಿಸಿತು.

ಮುಂದೆ ಕೆಲವು ದಿನಗಳಲ್ಲಿ ನನ್ನ ಪರೀಕ್ಷೆ ಮುಗಿದು ಬೇಸಿಗೆ ರಜೆ ಬಂದಾಗ ಆತ ನನ್ನಣ್ಣನೊಡನೆ ನನ್ನನ್ನು ಆತನಿಗೆ ಮದುವೆ ಮಾಡಿಕೊಡಬೇಕೆಂದು ಪೀಡಿಸತೊಡಗಿದರು. ಇದೇ ಸಂದರ್ಭದಲ್ಲಿ ಆತನ ಮದುವೆಯಾಗಿ ಒಂದು ಮಗುವಿನ ತಂದೆಯೂ ಆಗಿದ್ದಾನೆಂಬ ಸುದ್ದಿಯನ್ನು ಅಣ್ಣ ಹೊತ್ತು ತಂದನು. ನಾನು ಆಘಾತಗೊಂಡು ಮೂಲೆ

ಸೇರಿದೆ. ಮುಂದಿನ ಬಾರಿ ಆತ ಬಂದಾಗ ನನ್ನ ತಾಯಿಯೇ ಆತನೊಡನೆ ಈ ವಿಷಯವನ್ನೆತ್ತಿ ನಮ್ಮ ಹುಡುಗಿಗೆ ಮೋಸ ಮಾಡಬೇಕೆಂದುಕೊಂಡಿರಾ?" ಎಂದು ಕೇಳಿದರು.

ಈ ವಿಷಯವನ್ನು ನಾನು ಮೊದಲೇ ನಿಮಗೆ ತಿಳಿಸೋಣವೆಂದಿದ್ದೆ. ನಾನು ಖಂಡಿತವಾಗಿಯೂ ನಿಮಗೆ ಮೋಸ ಮಾಡಬೇಕೆಂದುಕೊಂಡಿರಲಿಲ್ಲ ನನ್ನ ಹೆಂಡತಿ ಮಾನಸಿಕ ರೋಗಿ ನನಗೂ ಅವಳಿಗೂ ಈಗ ಯಾವ ಸಂಬಂಧವೂ ಇಲ್ಲ. ಮಗುವಿಗಾಗಿಯಷ್ಟೆ ನಾನಾಕೆಯನ್ನು ಮನೆಯಲ್ಲಿಟ್ಟುಕೊಂಡಿದ್ದೇನೆ. ದಯವಿಟ್ಟು ಯಮುನಳನ್ನು ನನಗೆ ಮದುವೆ ಮಾಡಿಕೊಡಿ ನಾನಾಕೆಯನ್ನು ರಾಣಿಯಂತೆ ನೋಡಿಕೊಳ್ಳುವೆ ಎಂದು ಪರಿಪರಿಯಲ್ಲಿ ನನ್ನ ತಾಯಿಯನ್ನು ಸಂತೈಸಿ ಒಪ್ಪಿಸಿದರು.

ಬಳಿಕ ನನ್ನ ಬಳಿ ಬಂದು ಬಗೆಬಗೆಯಲ್ಲಿ ಗೋಗರೆದರು "ಕಟ್ಟಿಕೊಂಡಾಕೆ ಸರಿಯಾಗಿದ್ದಿದ್ದರೆ ನಾನು ಇನ್ನೊಬ್ಬಾಕೆಯನ್ನು ಬಯಸುತ್ತಿದ್ದೇನೆ? ನೀನು ಯಾವ ರೀತಿಯಲ್ಲೂ ಸಂದೇಹಪಡುವುದು ಬೇಡ ನಿನ್ನನ್ನು ಬಿಟ್ಟು ನಾನು ಬದುಕಿರಲಾರೆ..."

ಬಹುಶಃ ನನ್ನ ತಾಯಿ ಮತ್ತು ಅಣ್ಣಂದಿರು ತಡೆದಿದ್ದರೆ ಆ ವಿವಾಹ ನಡೆಯುತ್ತಿರಲಿಲ್ಲವೇನೋ ಅವರನ್ನೆಲ್ಲ ಎದುರಿಸಿ ಇವರನ್ನು ವಿವಾಹವಾಗಲು ನಾನು ಖಂಡಿತವಾಗಿಯೂ ಮುಂದಾಗುತ್ತಿರಲಿಲ್ಲ. ಆದರೆ ಆಶ್ಚರ್ಯಕರವಾದ ರೀತಿಯಲ್ಲಿ ಎಲ್ಲರೂ ಈ ಮದುವೆ ನೆರವೇರಿಸಲು ಆತುರಪಟ್ಟರು. ಹೆಚ್ಚು ಜನರನ್ನು ಆಮಂತ್ರಿಸದೆ ಹೆಚ್ಚು ಖರ್ಚಿಲ್ಲದೆ ಮನೆಯಲ್ಲೇ ಒಂದು ರೀತಿಯಲ್ಲಿ ಗುಟ್ಟಾಗಿ ಎಂಬಂತೆ ನನ್ನ



ಮದುವೆಯನ್ನು ನೆರವೇರಿಸಿದರು. ಅಲ್ಲಿಗೆ ನನ್ನ ವಿದ್ಯಾಭ್ಯಾಸವೂ ಕೊನೆಗೊಂಡಿತು.

ಮದುವೆಯಾದ ಒಂದೆರಡು ವರ್ಷಗಳವರೆಗೆ ನಾನು ತವರಿನಲ್ಲಿಯೇ ಇದ್ದೆ. ಇವರು ನಮ್ಮ ಮನೆಗೆ ಆಗಾಗ ಬಂದು ಹೋಗುತ್ತಿದ್ದರು. ನಾನೂ ಬೆಂಗಳೂರಿಗೆ ಬರುವೆನೆಂದರೆ, "ಕೊಂಚ ದಿನ ಕಳೆಯಲಿ, ಆ ಮೇಲೆ ಕರೆದೊಯ್ಯುವೆ" ಎಂದು ದಿನದೂಡತೊಡಗಿದರು. ನಾನಾದರೂ ಎಷ್ಟು ದಿನ ತವರಿನಲ್ಲಿ ಎಲ್ಲರ ಕಾಲ ಕಸವಾಗಿರಲಿ? ಕೊನೆಗೊಂದು ದಿನ ಈಗ ವರ್ಷದ ಕೆಳಗೆ, ನಾನು ಅವರೊಡನೆ ಹೊರಟೇ ಬಿಟ್ಟೆ ತವರಿನಲ್ಲಿ ಕೊಟ್ಟ ಅಷ್ಟಿಷ್ಟು ಚಿನ್ನಾಭರಣಗಳನ್ನೂ ನನ್ನೊಡನೆ ಒಯ್ದೆ.

ಅವರೊಡನೆ ಅವರ ಮನೆಗೆ ಬಂದ ನನಗೆ ಆಘಾತ ಕಾದಿತ್ತು. ಅವರ ಹೆಂಡತಿ ಎರಡು ವರ್ಷಗಳ ಗಂಡು ಮಗುವನ್ನು ಕಂಕಳಲ್ಲಿಟ್ಟುಕೊಂಡು ಬಂದು ಬಾಗಿಲು ತೆರೆದಳು. ಆರೋಗ್ಯವಾಗಿ ಗಟ್ಟಿಮುಟ್ಟಾಗಿದ್ದ ಆಕೆ ಯಾವುದೇ

ಖಾಯಿಲೆಯಿಂದಲೂ ನರಳುತ್ತಿದ್ದಂತೆ ಕಂಡುಬರಲಿಲ್ಲ. ನನ್ನನ್ನು ಕರೆದೊಯ್ದು ಒಂದು ಕೋಣೆ ತೋರಿಸಿ ನನ್ನ ಸೂಟ್‌ಕೇಸನ್ನು ಅಲ್ಲಿಟ್ಟರು ಬಳಿಕ ಆಕೆಯನ್ನು ಇನ್ನೊಂದು ಕೋಣೆಗೆ ಕರೆದೊಯ್ದು ಅದೇನೇಂದರೋ ಆಕೆ ಹೆಚ್ಚು ಗಲಾಟೆಯನ್ನೇನೂ ಮಾಡದೆ ಸುಮ್ಮಾನಾದಳು.

ಆಕೆ ಮಾನಸಿಕ ರೋಗಿಯಲ್ಲ, ಮಾತ್ರವಲ್ಲ ನನ್ನನ್ನು ಅವರು ವಿವಾಹವಾದಾಗ ಆಕೆ ಬಾಣಂತಿಯಾಗಿದ್ದಳು ಎಂಬುದೂ ನನ್ನರಿವಿಗೆ ಬಂತು. ನಾನು ಸಂಪೂರ್ಣವಾಗಿ ಇವರ ಮೋಸದ ಬಲೆಯಲ್ಲಿ ಬಿದ್ದಿದ್ದೆ. ಆ ರಾತ್ರಿ ಅವರು ಕೋಣೆಯೊಳಗೆ ಬಂದಾಗ “ಹೀಗೇಗೆ ನನ್ನನ್ನು ವಂಚಿಸಿದಿರಿ?” ಎಂದು ಕೇಳಿದಾಗ ಮೊತ್ತ ಮೊದಲ ದಿನ ನಿನ್ನ ಭೇಟಿಯಾದಾಗ ನೀನು ದರ್ಪದಿಂದ ತಿರಿಗಿಯೂ ನೋಡದೆ ಒಳನಡೆದೆಯಲ್ಲ? ಆ ನಿನ್ನ ಅಹಂಕಾರ ಮುರಿಯಲಿಕ್ಕೆ!” ಎಂದು ಎದ್ದು ಹೊರನಡೆದರು. ತಮ್ಮ ಹೃದಯದ ಕೆಸರನ್ನು ಆತನೇ ತೆರೆದು ತೋರಿದಾಗ ಅದರ ದುರ್ವಾಸನೆಗೆ ಮೂಗು ಮುಚ್ಚಿಕೊಂಡು ಓಡುವ ಸಾಮರ್ಥ್ಯ ವಾದರೂ ನನ್ನಲ್ಲಿದ್ದಿದ್ದರೆ? ಇಲ್ಲ ಅದು ಸಾಧ್ಯವೇ ಇಲ್ಲ, ವಿವಾಹವೆಂಬ ವ್ಯವಸ್ಥೆಯ ಕಂಬಕ್ಕೆ ನಾನಾಗಲೇ ಬಿಗಿಯಲ್ಪಟ್ಟಿದ್ದೆ.

ಆ ರಾತ್ರಿಯಿಡಿ ನಾನು ಕೋಣೆಯಲ್ಲಿ ಒಂಟಿಯಾಗಿ ಅಳುತ್ತಲೇ ಇದ್ದೆ. ನನ್ನ ಭವಿಷ್ಯವನ್ನು ನೆನೆದು ನಡುಗಿದೆ. ಆದರೆ ನಾನಾಗ ಏನೂ ಮಾಡುವಂತಿರಲಿಲ್ಲ. ಹೆಂಗಸರು ಸೋತಾಗಲೆಲ್ಲಾ ಮಾಡುವಂತೆ ಇದು ನನ್ನ ಹಣೆಬರಹವೆಂದು ಸುಮ್ಮನಾದೆ. ನಾನು ಹೇಗೋ ಆ ಸವತಿಯೊಡನೆ ಹೊಂದಿಕೊಂಡು ಬದುಕತೊಡಗಿದೆ. ಹಗಲಿನಲ್ಲಿ ಆ ಮನೆಯ ಕೆಲಸದಾಳಾದೆ. ರಾತ್ರಿಯಲ್ಲಿ ಆತನಿಗೆ ಬೇಕೆನ್ನಿಸಿದಾಗ ಆತನ ಹಾಸಿಗೆಯಲ್ಲಿ ಪಾಲುಗಾರ್ತಿಯಾದೆ. ತಾಳಿ ಕಟ್ಟಿಸಿಕೊಂಡ ತಪ್ಪಿಗೆ ಆತನ ಬಿಟ್ಟಿ ಸೂಳೆಯಾದೆ.

ಈ ನಡುವಿನಲ್ಲೊಮ್ಮೆ ಗರ್ಭಿಣಿಯಾದೆ. ಕೂಡಲೇ ಅವರು ನನ್ನನ್ನು ರಮಿಸತೊಡಗಿದರು. “ನೋಡು ಯಮುನಾ ನೀನಿನ್ನೂ ಚಿಕ್ಕ ಪ್ರಾಯದವಳು. ಈಗಲೇ ಈ ಮಗುವಿನ ತಾಪತ್ರಯವೆಲ್ಲ ಏಕೆ? ಕೊಂಚ ಕಾಲ ಹೀಗೆಯೇ ಇಟ್ಟುಕೊಳ್ಳುವಾಸೆ ಎನ್ನುತ್ತಾ ಮಗುವಾದರೆ ನಿನಗೆ ಕಷ್ಟ ಗರ್ಭಿಣಿಯಾಗುವುದು ಹೆರಿಗೆಯಾಗುವುದೆಲ್ಲ ಸುಲಭದ ಕೆಲಸವೆಂದುಕೊಂಡೆಯಾ? ಕೆಲವೊಮ್ಮೆ ಶಸ್ತ್ರಕ್ರಿಯೆ ಕೂಡಾ ಬೇಕಾಗುತ್ತದೆ.

ಕೆಲವೊಮ್ಮೆ ಹೆಂಗಸರು ಸತ್ತೇ ಹೋಗುತ್ತಾರೆ" ಎಂದೆಲ್ಲಾ ಭಯಪಡಿಸಿದರು. ಈಗ ನಾನು ಬದುಕಿದ್ದೇನೆಯೇ? ಎಂಬ ಪ್ರಶ್ನೆ ಮನದಲ್ಲಿ ಮೂಡಿ ಮರೆಯಾಯಿತು. ಆದರೂ ನೋಡಿ ಅಮ್ಮ ಯಮದೂತರನ್ನು ಪ್ರತ್ಯಕ್ಷ ಕಾಣುತ್ತೇವೆಂದಾಗ ಹಿಂದಿರುಗಿ ಓಡದವರಾರು? ಹೀಗಾಗಿ ಅವರ ಬಣ್ಣದ ಮಾತಿಗೆ ಮರುಳಾಗಿಯಲ್ಲದಿದ್ದರೂ ಸಾವಿಗೆ ಹೆದರಿ ಅವರೊಡನೆ ಆಸ್ಪತ್ರೆಗೆ ಹೋದೆ. ಒಂದು ದಿನ ಅಲ್ಲಿದ್ದು ಖಾಲಿ ಹೊಟ್ಟೆಯಲ್ಲಿ ಹಿಂದಿರುಗಿದೆ.

ಮನಸ್ಸಂತೂ ಮೊದಲೇ ಖಾಲಿಯಾಗಿತ್ತು. ಈಗ ನಾನೊಂದು ಮರದ ಕೊರಡಾದೆ. ಒಂದೆರಡು ದಿನ ಕಳೆದ ಬಳಿಕ ನನ್ನ ಪೆಟ್ಟಿಗೆ ತೆರೆದು ನೋಡಿದರೆ ಅದರಲ್ಲಿದ್ದ ನನ್ನ ಚಿನ್ನದೊಡವೆಗಳು ಮಾಯವಾಗಿದ್ದವು. ನಾನು ಅಳುತ್ತಾ ಈ ವಿಷಯವನ್ನು ಇವರಿಗೆ ತಿಳಿಸಿದಾಗ ಅವರು ತಣ್ಣಗೆ "ಅದು ನಿನ್ನ ಆಸ್ಪತ್ರೆ ಖರ್ಚಿಗಾಗಿ ನಾನು ತೆಗೆದು ಅಡವಿಟ್ಟಿದ್ದೇನೆ.

ಮುಂದಿನ ತಿಂಗಳ ಸಂಬಳ ಬಂದಾಗ ತೆಗೆಸಿಕೊಡುವೆ" ಎಂದರು.

ಇಲ್ಲಿಗೆ ಮುಗಿಯಿತೆಂದುಕೊಂಡಿರಾ, ಅಮ್ಮಾ? ಈಗ ಸವತಿಯ ಕಾಟ ಪ್ರಾರಂಭವಾಯಿತು. ಈಗ ಉಗ್ರಾಣ ಮತ್ತು ಅಡಿಗೆ ಮನೆಗೆ ಕೂಡ ಬೀಗ ಬಂತು. ಎರಡು ಹೊತ್ತು ಹೊಟ್ಟೆಗೆ ಸಮನಾಗಿ ಅನ್ನ ಬೀಳುವುದೂ ದುಸ್ತರವಾಯಿತು. ನನ್ನ ಗಂಡ ಎಲ್ಲವನ್ನೂ ಕಂಡೂ ಕಾಣದಂತೆ ವರ್ತಿಸುತ್ತಿದ್ದರು. ನಾನು ತಾಯಿಯಾಗಬಾರದೆಂದಿದ್ದರಲ್ಲವೇ? ಆದರೆ ಆಕೆ ಗರ್ಭಿಣಿಯಾಗಿದ್ದಳು!

ಈಗ ಶಬಾನ ಬಾಯಿ ಬಿಟ್ಟಳು. "ಅಂದರೆ, ಬಿತ್ತಿ ಬೆಳೆಯುವುದಕ್ಕೊಂದು ಹೊಲ. ಇನ್ನೊಂದು ಆಟದ ಮೈದಾನ... ಇಂತಹ ಏರ್ಪಾಡು ತಾನೇ?" ಉದ್ವಿಗ್ನಳಾಗಿ ನುಡಿದಳಾಕೆ. ಆಕೆಯ ಹೊಟ್ಟೆಯೊಳಗೆ ತಳಮಳ ಪ್ರಾರಂಭವಾಗಿತ್ತು.

"ಹೌದಮ್ಮ ಹಾಗೆ ಇರಬಹುದು. ಮುಂದಿನ ಕತೆ ಕೇಳಿ ಕೆಲವು ದಿನಗಳ ಹಿಂದೆ ಎರಡು ದಿನಗಳವರೆಗೆ ಅನ್ನವನ್ನೇ ಹಾಕದೆ ಸತಾಯಿಸಿದಳಾಕೆ. ಆ ದಿನ ರಾತ್ರಿ ಮನೆಗೆ ಬಂದವರೊಡನೆ ನಾನೀ ವಿಷಯ ತಿಳಿಸಿದಾಗ, ಯಮುನಾ, ಈಗ ಅವಳ ಮನಸ್ಸೇಕೋ ಸರಿಯಾಗಿಲ್ಲ ನೀನು ಕೆಲವು ದಿನಗಳವರೆಗೆ ನನ್ನ ಸ್ನೇಹಿತನೊಬ್ಬನ ಮನೆಯಲ್ಲಿರು. ನಾನು ದಿನಾಲೂ ಅಲ್ಲಿಗೆ ಬರುವೆ. ಅಲ್ಲಿ ನಿನಗೇನೂ ತೊಂದರೆಯಾಗದು" ಎಂದರು. ಸದ್ಯ ಈ ಸವತಿಯ ಕಾಟ ತಪ್ಪಿದರೆ ಸಾಕೆಂದು ನಾನು ಒಪ್ಪಿಕೊಂಡೆ. ಹಾಗೆಯೇ ನಾಲ್ಕೈದು ದಿನಗಳ ಕೆಳಗೆ ನನ್ನನ್ನು ಇಲ್ಲಿ ತಮ್ಮ ಗೆಳೆಯ ರಂಗಪ್ಪ ಎನ್ನುವವರ ಮನೆಗೆ ತಂದು ಬಿಟ್ಟರು. ಒಂದೆರಡು ದಿನ ಅಲ್ಲಿ ಬಂದು ನನ್ನನ್ನು ನೋಡಿಕೊಂಡು ಹೋದರು. ಈಗ ಮೂರು ದಿನಗಳಿಂದ ಈ ಕಡೆ ಸುಳಿದಿಲ್ಲ. ಈಗ ರಂಗಪ್ಪನ ಪತ್ನಿ ನಾವೇಕೆ ನಿನ್ನನ್ನಿಟ್ಟುಕೊಳ್ಳಬೇಕು? ನೀನು ನಮ್ಮ ಮನೆ ಬಿಟ್ಟು ಹೊರಡು ಎಂದು ನನ್ನನ್ನು ಒತ್ತಾಯಿಸುತ್ತಿದ್ದಾರೆ. ಈಗ ನಾನೇನು ಮಾಡಲಮ್ಮಾ?" ಎನ್ನುತ್ತಿದ್ದಂತೆ ಮತ್ತೊಮ್ಮೆ ಕಟ್ಟೆಯೊಡೆದು ಅಳು ಹೊರಟಿತು.

ಶಬಾನ ಆಘಾತಕ್ಕೊಳಗಾದಂತೆ ಕುಳಿತೇ ಇದ್ದಳು. ಇಂತಹ ನಿರ್ದಯಿಗಳೂ, ವಂಚಕರೂ ಈ ಪ್ರಪಂಚದಲ್ಲಿದ್ದಾರೆಯೇ? ಆಕೆ ಯಮುನಳೊಡನೆ,

"ಯಮುನಾ, ಈ ದಿನ ಹೇಗೂ ನೀವು ಅದೇ ಮನೆಯಲ್ಲಿರಿ. ನಾಳೆ ಏನಾದರೂ



ಯೋಚನೆ ಮಾಡೋಣ" ಎನ್ನುತ್ತಾ ಆಕೆಯನ್ನು ಕಳುಹಿಸಿದಳು. ಗಂಡನ ಅನುಮತಿ ಪಡೆಯದೆ ತನ್ನ ಮನೆಯಲ್ಲಿ ಆ ಆನಾಥ ಹೆಣ್ಣಿಗೆ ಆಕೆ ಆಶ್ರಯ ನೀಡವಂತಿಲ್ಲವಲ್ಲ?

ರಾತ್ರಿ ಸಮಿಯುಲ್ಲನೊಡನೆ ಆಕೆ ಯಮುನಳ ಕಣ್ಣೀರ ಕಥೆಯನ್ನೆಲ್ಲ ತಿಳಿಸಿದಳು. ಬಳಿಕ, "ನೋಡಿ, ನಾಳೆ ನಾನು ಆಕೆಯನ್ನು ಯಾರಾದರೂ ಲಾಯರ ಬಳಿಗೆ ಕರೆದೊಯ್ಯಲೇ?" ಎಂದು ಕೇಳಿದಳು.

ಸಮಿಯುಲ್ಲ ನಕ್ಕುಬಿಟ್ಟನು. "ನಿನಗೆ ಹುಚ್ಚ? ಲಾಯರ ಬಳಿಗೆ ಬರಿಗೈಯಿಂದ ಹೋಗಲು ಸಾಧ್ಯವೆಂದುಕೊಂಡೆಯಾ? ಆಕೆ ಯಾರು, ಆತ ಯಾರು, ಏನು ಕತೆ ಎಂದೆಲ್ಲ ತಿಳಿಯದೆ ಲಾಯರ ಬಳಿ ಹೋಗಿ ಏನೂ ಪ್ರಯೋಜನವಿಲ್ಲ. ನೀನು ಸುಮ್ಮನಿರು ನಾವೇಕೆ ಇದರಲ್ಲೆಲ್ಲ ಸಿಕ್ಕಿ ಹಾಕಿಕೊಳ್ಳೋಣ? ಆಕೆ ನಾಳೆ ಬಂದರೆ ನಯವಾಗಿ ಸಾಗಿಹಾಕಲು ಪ್ರಯತ್ನಿಸು" ಎಂದನು. ಶಬಾನ ಕಿಟಕಿಗೆ ಮುಖವಿಟ್ಟು ಹೊರಗಿನ ಗಾಡಾಂಧರಕಾರದತ್ತ ದೃಷ್ಟಿ ನೆಟ್ಟಳು.

ಯಮುನಳ ಕತೆಯೇನೋ ಪೂರ್ತಿಯಾಗಿತ್ತು. ಆದರೆ ಹೊಸದೊಂದು ಕತೆ ಇದೇ ತಾನೇ ಪ್ರಾರಂಭವಾಗುತ್ತಿದೆಯೆಂದು ತೋರಿತು ಶಬಾನಳಿಗೆ ಗಂಡನ ಅನುಮತಿ ಇಲ್ಲದೆ ಹುಲ್ಲು ಕಡ್ಡಿಯನ್ನಾದರೂ ಎತ್ತಿಡಲಾಗದ ತಾನು ಯಮುನಳಿಗೆ ಯಾವ ವಿಧದಲ್ಲಿ ನೆರವಾಗಲಿ? ಈಗ ಆಕೆ ಬಂದರೆ ತಾನೇನು ಮಾಡಬೇಕು?

ಬೆಳಿಗ್ಗೆ ಸಮಿಯುಲ್ಲಿ ಕಛೇರಿಗೆ ಹೊರಡುತ್ತಿದ್ದಂತೆ ಆಕೆ ಇನ್ನೊಮ್ಮೆ ಆತನೊಡನೆ, "ನೋಡಿ, ಆ ಹೆಂಗಸು ಬಂದರೆ ಏನು ಮಾಡೋಣ?" ಎಂದು ಕೇಳಿದಳು.

"ನನಗೆ ಆಫೀಸಿನಲ್ಲಿರುವ ತಲೆಬಿಸಿ ಸಾಲದೂಂತ ನೀನೂ ಒಂದಿಷ್ಟು ಬೆಂಕಿ ಹೊತ್ತಿಸು! ಆಕೆ ಬಂದರೆ ಏನಾದರೊಂದು ಸಬೂಬು ಹೇಳಿ ಸುಮ್ಮನೆ ಆಚೆಗೆ ಕಳಿಸು, ನನಗೆ ಹೊತ್ತಾಯಿತು." ಎನ್ನುತ್ತಾ ಸ್ಕೂಟರ್ ಹತ್ತಿ ಹೊರಟು ಹೋಗಿದ್ದನು.

ಯೋಚಿಸುತ್ತಾ ಕುಳಿತಿದ್ದವಳು ಗೇಟಿನ ಶಬ್ದ ಕೇಳಿ ತಲೆ ಎತ್ತಿದಳು. ಯಮುನ ಬಂದು ಬಾಗಿಲ ಬಳಿ ನಿಂತು, "ಅಮ್ಮಾ.. ನನ್ನನ್ನು ರಂಗಪ್ಪನ ಮನೆಯಿಂದಲೂ ಹೊರ ಹಾಕಿದರು." ಎನ್ನುತ್ತಾ ಕುಸಿದು ಕುಳಿತು ಅಳತೊಡಗಿದಳು. ಅಸಹಾಯಕಳಾಗಿ ತನ್ನ ಮುಂದೆ ಅಳುತ್ತಾ ಕುಳಿತ ಹೆಣ್ಣನ್ನು ನಯವಾಗಿ, ಏನಾದರೂ ಸಬೂಬೂ ಹೇಳಿ ಹೊರ ಹಾಕಬೇಕಲ್ಲವೇ? ಛೇ!

"ಈಗ ನೀನೇನು ಮಾಡುತ್ತೀಯ?"

"ಅಮ್ಮಾ, ನಿಮ್ಮಲ್ಲಿ ಮನೆಗೆಲಸ ಮಾಡಿ ದಿನ ನೂಕುತ್ತೇನೆ. ದಯವಿಟ್ಟು ನನಗೆ ಆಶ್ರಯ ಕೊಡಿ.." ಅಧೀರಳಾಗಿ ನಡುಗುತ್ತಾ ನುಡಿದು ಶಬಾನಳ ಕಾಲ ಬಳಿ ಕುಸಿದಳು. ಕಾಲಿಗೆ ಬಿದ್ದಾಕೆಯನ್ನು ಒದ್ದು ಹೊರತಳ್ಳಲು ಸಾಧ್ಯವೇ? ತಾನು ಓರ್ವ ಹೆಣ್ಣಾಗಿ, ಹೆಣ್ಣೆ ಹೆಣ್ಣಿನ ಶತ್ರು ಎಂಬ ಲೇಖನವನ್ನೋದಿ ಅರ್ಧ ಗಂಟೆಯೂ ಆಗಿಲ್ಲ!

"ಬಾಮ್ಮ, ಒಳಗೆ ಬಾ ದೇವರು ಮಾಡಿಸಿದಂತಾಗಲಿ" ಎನ್ನುತ್ತಾ ಶಬಾನ ಆಕೆಯನ್ನು ಒಳಗೆ ಕರೆದೊಯ್ದು ಚಹಾ ತಿಂಡಿ ನೀಡಿ ಮನೆಗೆಲಸಕ್ಕೆ ಹಚ್ಚಿ ಹೊರಬಂದಳು. ಅದೇ



ತಾನೇ ಮನೆಯೊಳಗಿನಿಂದ ಹೊರಬಂದು ಎದುರು ಮನೆಯ ಅಂಬುಜಮ್ಮ ಗೇಟಿನ ಬಳಿ ಬಂದು ಹರಟೆಗೆ ನಿಂತರು.

"ನಿಮಗೆ ಮನೆಗೆಲಸಕ್ಕೆ ಹೆಂಗಸು ಸಿಕ್ಕಿದಳಾ ಮಿಸೆಸ್ ಸಮಿಯುಲ್ಲಾ?" ಎನ್ನುತ್ತಾ ಸಾರಿ ಮರೆತುಬಿಟ್ಟೆ ಹಾಗೆ ಕರೆದರೆ ನಿಮಗೆ ಇಷ್ಟವಾಗುವುದಿಲ್ಲ ಅಲ್ಲವೇ?" ಎಂದೂ ಸೇರಿಸಿದರು..

"ಹೌದು ಅಂಬುಜಮ್ಮ ಮನೆಯ ಹೊರಗೆ ಹಗಲಿರುಳೂ ನಾನು ಮಿಸೆಸ್ ಸಮಿಯುಲ್ಲಾನೆ ಮನೆಯ ಒಳಗಾದರೂ ನಾನು ಶಬಾನ ಎಂಬ ಸುಂದರವಾದ ಹೆಸರಿನಿಂದ ಕರೆಸಿಕೊಂಡು ನಾನೂ ಓರ್ವ ವ್ಯಕ್ತಿ ಎನ್ನಿಸಿಕೊಳ್ಳೋಣ ಎಂಬಾಸೆ" ಎನ್ನುತ್ತಾ ಯಮುನಳ ಕತೆಯೆಲ್ಲವನ್ನೂ ವಿವರಿಸಿದಳು. ಎಲ್ಲವನ್ನೂ ಕೇಳಿಸಿಕೊಂಡ ಅಂಬುಜಮ್ಮ.

"ನೋಡಿ ಶಬಾನ ಇಂತಹ ಹೆಂಗಸರನ್ನೆಲ್ಲಾ ನಂಬಬೇಡಿ. ಯಾವ್ಯಾವುದೋ ಆಟ ಕಟ್ಟಿ ಇಂತಹವುಗಳೆಲ್ಲ ಮನೆಯೊಳಗೆ ಸೇರಿಕೊಳ್ತವೆ. ರಾತ್ರಿಯಲ್ಲಿ ಕೈಗೆ ಸಿಕ್ಕಿದ್ದನ್ನು ದೋಚಿಕೊಂಡು ಪರಾರಿಯಾಗುತ್ತಾರೆ ಅಥವಾ ಅವರದೊಂದು ಗ್ಯಾಂಗೇ ಇದೆಯೋ ಏನೂ ಯಾರಿಗೆ ಗೊತ್ತು ಇದು ಬೆಂಗಳೂರು ಎಚ್ಚರದಿಂದಿರಿ" ಎಂದು ಸಲಹೆ ನೀಡಿದರು.

ಈಗ ಶಬಾನಳ ಮನದಲ್ಲೂ ಸಂದೇಹ ಮೂಡಿ ಆಕೆಯನ್ನು ಗೊಂದಲದಲ್ಲಿ ಕೆಡವಿತು. ಈಗ ತಾನೇನು ಮಾಡಲಿ? ಬೀದಿಯಲ್ಲಿ ಹೋಗೋ ಮಾರೀನ ಮನೆಗೆ ಬಂದು ಹೋಗು ಎಂದಂತಾಯಿತಲ್ಲ? ಸಮಿಯುಲ್ಲ ಬಂದು ಇನ್ಯಾವ ಹಗರಣ ಪ್ರಾರಂಭಿಸುತ್ತಾರೋ ಆಕೆ ಒಳಬಂದು ಯಮುನಳ ಚಲನವಲನಗಳಲ್ಲಿ ಕಣ್ಣಿಡತೊಡಗಿದಳು.

ಸಾಯಂಕಾಲ ಸಮಿಯುಲ್ಲ ಬಂದವನೇ, "ನಿನ್ನ ಫೋನ್ ಸ್ನೇಹಿತೆ ಬರಲಿಲ್ಲವೇ? ಏನು ಮಾಡಿದಿ?" ಎಂದು ಕೇಳಿದನು. ಶಬಾನ ಅಳುಕುತ್ತಲೇ

"ಆಕೆ ಬಂದು ಕಾಲಿಗೆ ಬಿದ್ದು ಅಳತೊಡಗಿದಾಗ ನಾನೇನು ಮಾಡಲಿ? ಮನೆಗೆಲಸ ಮಾಡಿಕೊಂಡು ಇಲ್ಲೇ ಇರುವೆನೆಂದು ಗೋಗೆರೆದಳು. ನೀವು ಬಂದ ಮೇಲೆ ಯಾವುದನ್ನೂ ತೀರ್ಮಾನಿಸೋಣವೆಂದು ಇಲ್ಲೇ ಇರಿಸಿಕೊಂಡಿದ್ದೇನೆ. ಹೇಗೂ ನನಗೂ ಸಹಾಯಕೊಬ್ಬರು ಬೇಕಾಗಿತ್ತು. ಮುಂದಿನ ತಿಂಗಳು ತಾಹಿರ ಹೆರಿಗೆಗೆ ಬರುವೆನೆಂದು ತಿಳಿಸಿದ್ದಾಳೆ" ಎಂದು ನುಡಿದಳು.

"ಏನು ಆ ರೀತಿ ಬಂದಾಕೆಯನ್ನು ಮನೆಯೊಳಗೆ ಸೇರಿಸಿಕೊಂಡೆಯಾ? ನಿನ್ನ ತಲೆ ಕೆಟ್ಟಿಲ್ಲ ತಾನೇ ಯಾವ ಢಕಾಯಿತ ತಂಡದವಳೋ ಯಾರಿಗೆ ಗೊತ್ತು? ನಾನೇ ಆಕೆಯನ್ನು ಹೊರಹಾಕುತ್ತೇನೆ" ಎಂದು ಮುಂದಾದಾತನನ್ನು ಶಬಾನ ತಡೆದಳು. ಆಕೆಯ ಕುರಿತು ಇಂತಹ ಯಾವ ಅನುಮಾನಗಳಿಗೂ ಕಾರಣವೇ ಇಲ್ಲವೆಂಬುದು ಶಬಾನಳಿಗೆ ಈಗಾಗಲೇ ಖಚಿತವಾಗಿತ್ತು.



"ಇವತ್ತೊಂದು ದಿನ ತಾಳಿ ಆಕೆ ಢಕಾಯಿತ ತಂಡವಳೇನೂ ಅಲ್ಲ ಆಕೆ ವಿಧಾನಸೌಧದ ರಂಗಪ್ಪನವರ ಮನೆಯಲ್ಲಿ ಕೆಲವು ದಿನಗಳವರೆಗೆ ಇದ್ದಳಂತಲ್ಲ? ಅವರನ್ನೊಮ್ಮೆ ವಿಚಾರಿಸಿದರೆ ಎಲ್ಲ ತಿಳಿದೀತು. ಈ ರಾತ್ರಿಯಲ್ಲಿ ಒಂಟಿ ಹೆಂಗಸನ್ನು ಹೊರಹಾಕುವಷ್ಟು ನಿರ್ದಯರಾಗಬೇಡಿ" ಎಂದು ಬೇಡಿಕೊಂಡಳು. ಆಕೆಯ ದನಿ ನಡುಗಿ ದೇಹ ಹಿಡಿಯಾಯಿತು.

ರಾತ್ರಿ ಮಲಗುವಾಗ ಶಬಾನ ಬಾಗಿಲುಗಳಿಗೆಲ್ಲ ಒಳಗಿನಿಂದ ಬೀಗ ಹಾಕಿದಳು. ಆದರೂ ನಿದ್ದೆ ಇಲ್ಲದೆ ಹಾಸಿಗೆಯಲ್ಲಿ ಹೊರಳಾಡಿದಳು. ಇಲಿ ಓಡಿದ ಶಬ್ದ ಕೇಳಿ ಬೆಚ್ಚಿ ಬಾಗಿಲು ತೆರೆದು ಹೊರಬಂದು ಯಮುನ ಗಾಢ ನಿದ್ದೆಯಲ್ಲಿದ್ದುದನ್ನು ಖಾತ್ರಿ ಮಾಡಿಕೊಂಡು ಒಳಸೇರಿದಳು.

ಯಮುನ ಬೆಳಿಗ್ಗೆ ಎದ್ದು ಮನೆಗೆಲಸ ಪ್ರಾರಂಭಿಸಿದ್ದಳು. ಚುರುಕಾಗಿ ಓಡಾಡಿಕೊಂಡು ಅಚ್ಚುಕಟ್ಟಾಗಿ ಮನೆಗೆಲಸಗಳನ್ನೆಲ್ಲ ಮಾಡಿ ಶಬಾನಳ ಮೆಚ್ಚುಗೆಗೂ ಪಾತ್ರಳಾದಳು.

ಆ ದಿನ ಬೆಳಿಗ್ಗೆ ಶಬಾನ ಗಂಡನೊಡನೆ, "ನೋಡಿ, ನೀವು ಯಾವುದಕ್ಕೂ ವಿಧಾನಸೌಧದ ರಂಗಪ್ಪನವರನ್ನೊಮ್ಮೆ ಕಂಡು ಬನ್ನಿ ಯಮುನಳ ಗಂಡನ ವಿವರವನ್ನೆಲ್ಲ ತಿಳಿದುಕೊಂಡು ಬನ್ನಿ, ಓರ್ವ ಲಾಯರನ್ನಾದರೂ ಕಂಡು ಆಕೆಗೇನಾದರೂ ಸಹಾಯ ಮಾಡಲು ಪ್ರಯತ್ನಿಸುವಾ" ಎಂದಳು.

ಈಗ ಸಮಿಯುಲ್ಲ ಎಂದಿನಂತೆ ಆಕೆಯೊಡನೆ ರೇಗದೆ, ಆಗಲಿ ಎಂದು ತಲೆಯಾಡಿಸಿ ಹೊರಟನು. ಹಾಗೆಯೇ ಸಾಯಂಕಾಲ ರಂಗಪ್ಪನವರ ಮನೆಗೆ ಹೋಗಿ ಯಮುನಳ ಗಂಡನ ಕುರಿತು ಕೇಳಿದನು. ಬಳಿಕ ನನ್ನ ಹೆಂಡತಿ ಅದೇನೋ ಲಾಯರು, ಕೇಸು ಎಂದೆಲ್ಲ ಹೇಳುತ್ತಿದ್ದಾಳೆ ಅಂತಹ ವಂಚಕರನ್ನು ಜೈಲಿಗೆ ಕಳಿಸಬೇಕೆನ್ನುತ್ತಿದ್ದಾಳೆ ಎಂದನು. ರಂಗಪ್ಪನವರ ಮುಖ ನಿಸ್ತೇಜವಾಯಿತು. ಆತ ಕ್ಷಣಕಾಲ ಮೌನವಾಗಿದ್ದು ಬಳಿಕ,

"ಆತ ನನ್ನ ಸಹೋದ್ಯೋಗಿ, ಪುಟ್ಟಪ್ಪ ಅಂತ ಹೆಸರು ಆ ಹೆಂಗಸು ಹೇಳಿದ್ದೆಲ್ಲ ಸತ್ಯವೂ ಹೌದು. ಆದರೆ ನಾವು ಆಕೆಯನ್ನು ಹೊರಹಾಕಲಿಲ್ಲ. ಆಕೆ ತಾನಾಗಿಯೇ ಇಲ್ಲಿಂದ ಹೋದಳು. ಆದರೆ ನೀವು ಆಕೆಗೆ ಲಾಯರ ಬಳಿಗೆಲ್ಲ ದಾರಿ ತೋರಿಸಬೇಡಿ. ಕೇಸು ಗೀಸು ಆದರೆ ನಾವೆಲ್ಲ ಸಿಕ್ಕಿ ಹಾಕಿಕೊಳ್ಳಬೇಕಾಗುತ್ತದೆ. ನೀವು ಆಕೆಯನ್ನು ಕಳಿಸಿಬಿಡಿ" ಎಂದನು. ಸಮಿಯುಲ್ಲ ಮನೆಗೆ ಬಂದವನೇ ಶಬಾನಳೊಡನೆ.

"ನಿನಗೆ ಬೇಕಾದರೆ ಯಮುನಳನ್ನು ಇಟ್ಟುಕೋ ಆದರೆ ಈ ಲಾಯರು ಕೇಸು. ಎಂಬ ಯೋಚನೆಯನ್ನೆಲ್ಲ ತಲೆಯಿಂದ ಹೊರಹಾಕು" ಎಂದನು ಗಡುಸಾಗಿ,

ಮತ್ತೂ ಒಂದೆರಡು ದಿನಗಳು ಕಳೆದವು. ಆ ರಾತ್ರಿ ಅಡುಗೆ ಮುಗಿಸಿ ಶಬಾನ ಹಾಲಿನಲ್ಲಿ ಕುಳಿತಿದ್ದಳು. ಸಮಿಯುಲ್ಲ ಅಲ್ಲೇ ಪತ್ರಿಕೆಯೊದುತ್ತಿದ್ದನು ಗೇಟಿನ ಶಬ್ದ ಕೇಳಿದ ಶಬಾನ ಎದ್ದು ಬಾಗಿಲು ತೆರೆದಳು. ನಾಲ್ಕೈದು ಜನ ಗಂಡಸರು ಗೇಟು ತೆರೆದು ಒಳ ಬರುತ್ತಿದ್ದರು ಆಕೆ ಬೇಗನೆ ಒಳಬಂದು ಗಂಡನಿಗೆ ತಿಳಿಸಿ ಒಳಹೋಗಿ ಬಾಗಿಲ ಮರೆಯಲ್ಲಿ ನಿಂತಳು.

“ಓ ನೀವೇ? ಬನ್ನಿ ಬನ್ನಿ” ಎಂಬ ಗಂಡನ ಸ್ವಾಗತದ ನುಡಿ ಕೇಳಿ ಬಂದವರಾರೆಂದು ಇಣುಕಿ ನೋಡಿದಳು. ತಮ್ಮ ಬಡಾವಣೆಯ ತಮ್ಮ ಪರಿಚಯದವರೇ, ಇಂಜಿನಿಯರ್ ಇನಾಯತುಲ್ಲಾ, ಟ್ರಜರಿಯ ಆಕ್ಟರ್ ವಿಧಾನಸೌಧದ ಅಕ್ರಂ, ಲೆಕ್ಚರರ್ ಶೌಕತ್ ಆಲಿ ಮತ್ತು ಬುಖಾರಿ.

ಬಂದವರು ಕೊಂಚ ಹೊತ್ತು ಹರಟೆ ಹೊಡೆದು ಬಳಿಕ, ಸಮಿಯುಲ್ಲಾ, “ಅದ್ಯಾವುದೋ ಒಂದು ಹೆಣ್ಣು ಬಂದು ನಿಮ್ಮ ಮನೆಯಲ್ಲಿ ಸೇರಿಕೊಂಡಿದೆಯಂತಲ್ಲಾ? ಅಂತಹವರನ್ನೆಲ್ಲ ಇಟ್ಕೊಬೇಡಿ ಆ ಮೇಲೆ ನಿಮ್ಮ ತಲೆಗೆ ಬಂದೀತು” ಎಂದನು. ಅಕ್ರಂ ಸಮಿಯುಲ್ಲ ಅವರೊಡನೆ ಸಂಕ್ಷಿಪ್ತವಾಗಿ ಯಮುನಳ ಕಥೆ ಹೇಳಿ,

“ನಾನಾಗಲೇ ನನ್ನಾಕೆಗೆ ಹೇಳಿದ್ದೆ. ಆಕೆಯನ್ನು ಒಳಗೆ ಸೇರಿಸಬೇಡವೆಂದು, ಹೆಂಗಸರಿಗೆ ಇವೆಲ್ಲಾ ಅರ್ಥವಾಗುವುದಿಲ್ಲ ನೋಡಿ. ಯಾವುದಾದರೊಂದು ಹೆಣ್ಣು ಅಳುತ್ತಾ ಬಂದುಬಿಟ್ಟರೆ, ಈಕೆಯ ಹೃದಯ ಕರಗಿ ನೀರಾಗಿ ಕಾಲಬುಡದಲ್ಲಿ ಹರಿದೇ ಬಿಡುತ್ತದೆ!” ಎಂದಾಗ ಎಲ್ಲರೂ ನಕ್ಕರು.

“ಸರ್ ಇದು ಬೆಂಗಳೂರು. ಇಲ್ಲಿ ಇಂತಹ ಘಟನೆಗಳೆಲ್ಲ ತೀರಾ ಸಾಮಾನ್ಯ. ಯಾವನೋ ಒಬ್ಬ ಹೆಣ್ಣೊಬ್ಬಳನ್ನು ತನಗೆ ಸಾಕೆನಿಸುವಷ್ಟು ಕಾಲ ಉಪಯೋಗಿಸಿದ. ಈಗ ಅವಳಿಂದ ಬಿಡುಗಡೆ ಹೊಂದಲು ಈ ರೀತಿ ಉಪಾಯ ಹೂಡಿದ್ದಾನೆ. ಗುರುತು ಪರಿಚಯವಿಲ್ಲದ ಸ್ಥಳದಲ್ಲಿ ಈ ರೀತಿ ತಂದುಬಿಟ್ಟರಾಯಿತಲ್ಲ? ವಿಳಾಸ ಕೈಯಲ್ಲಿರುವವರೇ ಬೆಂಗಳೂರಿನಲ್ಲಿ ಮನೆ ಹುಡುಕುವುದು ಕಷ್ಟ ಇನ್ನು ವಿಳಾಸವೇ ಇಲ್ಲದವರು? ನೀವು ಮಾತ್ರ ಅದಷ್ಟು ಬೇಗ ಆಕೆಯನ್ನು ಕಳಿಸಿಬಿಡಿ” ಎನ್ನುತ್ತಾ ಸಮಿಯುಲ್ಲನ ತೀರಾ ಸಮೀಪ ಸರಿದು, “ಆಕೆ ಹಿಂದು ತಾನೇ? ನಾಳೆ ಯಾರಾದರೂ ಕಿತಾಪತಿ ಮಾಡಿ ಗಲಾಟೆ ಎಬ್ಬಿಸಿದರೆ ಕಷ್ಟ” ಎಂದು ಅಕ್ಟರ್, ಪಿಸುಗುಟ್ಟಿದನು. ಬಳಿಕ ಸಮಿಯುಲ್ಲ ಹೆಂಡತಿಯನ್ನು ಕರೆದು, ಅವರು ಹೇಳಿದ್ದೆಲ್ಲ ಕೇಳಿಸಿಕೊಂಡೆಯಲ್ಲ? “ಒಳ್ಳೆ ಮಾತಿನಲ್ಲಿ ನಾಳೆ ಆಕೆಯನ್ನು ಕಳಿಸಿಬಿಡು ಎಂದನು. ಎಲ್ಲಿಗೆ ಎಂದು ಮಾತ್ರ ಯಾರೂ ಹೇಳಲೇ ಇಲ್ಲವಲ್ಲ ಎಂಬ ಪ್ರಶ್ನೆ ಮಾತ್ರ ಆಕೆಯ ಮನದಲ್ಲಿ ಮೂಡಿ ಮರೆಯಾಯಿತು.

ಶಬಾನಳ ಮನದಲ್ಲಿ ಇನ್ನೊಮ್ಮೆ ಆಶಾಂತಿ, ಗೊಂದಲಗಳ ಅಲೆ ಎದ್ದಿತು. ಓರ್ವ ಆನಾಥ ಹೆಣ್ಣಿಗೆ ಆಶ್ರಯ ನೀಡಲು ಸಾಧ್ಯವಿಲ್ಲದಂತಹ ಈ ವ್ಯವಸ್ಥೆಯಾದರೂ ಎಂತಹುದು? ಯಮುನಳೊಡನೆ, ಮನೆ ಬಿಟ್ಟು ಹೋಗು ಎಂದು ಯಾವ ಮುಖದಿಂದ ಹೇಳಲಿ?

ಮರುದಿನ ಸಂಜೆಗೆ ಸಮಿಯುಲ್ಲ ಬಂದವನೇ, “ಆಕೆಯನ್ನು ಕಳಿಸಿದೆಯಾ?” ಎಂದು ಕೇಳಿದನು, ನಾಳೆ ಖಂಡಿತವಾಗಿ ಕಳಿಸುವೆ” ಎಂದಳು ಶಬಾನ.

ನಿನ್ನೆಯಂತೆಯೇ ಈ ದಿನವೂ ಅವರ ಮನೆಗೆ ಅವರ ಪರಿಚಯದ ಕೆಲವರು ಬಂದರು. ಅರಣ್ಯ ಇಲಾಖೆಯ ಮಧುಸೂಧನ, ವಿಧಾನಸೌಧದ ರಾಮಣ್ಣ, ಕಂದಾಯ ಇಲಾಖೆಯ ಮರಿಯಪ್ಪ, ಬ್ಯಾಂಕಿನ ಕಾಮತ್ ಎಲ್ಲರೂ ಬಂದರು. ಅದೂ ಇದೂ ಮಾತನಾಡಿ ಕೊನೆಗೆ ರಾಮಣ್ಣ



"ನೋಡಿ ಸಮಿಯುಲ್ಲ, ಹೀಗಳ್ತೇವೆ ಅಂತ ಬೇಜಾರು ಮಾಡ್ಕೊಬೇಡಿ ಮತ್ತೆ... ನಿಮ್ಮ ಮನೆಯಲ್ಲೊಬ್ಬಳು ಹೆಂಗಸು ಸೇರಿಕೊಂಡಿದ್ದಾಳಂತಲ್ಲ?" ಹಿಂದೂ ಹೆಂಗಸು? ಆಕೆಯನ್ನು ನೀವು ಮನೆಯಲ್ಲಿಟ್ಟುಕೊಂಡರೆ ನಿಮಗೆ ತೊಂದರೆಯಾದೀತು, ಈಗಾಗಲೇ ಇಲ್ಲಿ ಕಾಲೋನಿಯಲ್ಲಿ ಗುಸುಗುಸು ಪ್ರಾರಂಭವಾಗಿದೆ. ಆಕೆ ಮತಾಂತರಗೊಳ್ಳುತ್ತಾಳೆ ಅಂತ. ಅದರಲ್ಲೆಲ್ಲ ನಾವು ವರಿ ಮಾಡಿಕೊಳ್ಳುವಂತಹುದೇನೂ ಇಲ್ಲ. ಓ... ಓ... ಆದರೂ ನೀವೆಷ್ಟಾದರೂ ನಮ್ಮ ಗೆಳೆಯರು ತಾನೆ? ನಾಳೆ ಏನಾದರೂ ಕೋಮು ಗಲಭೆಯಾದರೆ.. ಏನಾದೀತೆಂದು ನೀವೇ ಯೋಚಿಸಿ" ಎಂದನು.

ಸಮಿಯುಲ್ಲನ ಮುಖ ಬಿಳಚಿಕೊಂಡಿತು. ಮತಾಂತರದ ಮಾತು ಹೇಗೆ ಬಂತು? ನಾನು ನಾಳೆಯೇ ಆಕೆಯನ್ನು ಕಳಿಸಿಬಿಡುವೆ ಎಂದು ಆಶ್ವಾಸನೆಯಿತ್ತ ಬಳಿಕ ಬಂದವರೆಲ್ಲರೂ ಹೊರಟು ಹೋದರು.

ಸಮೀಯುಲ್ಲ ಶಬಾನ ಎಲ್ಲಿದ್ದೀಯಾ ಎಂದು ಗಡುಸಾಗಿ ಕರೆಯುತ್ತಾ ಒಳಬಂದು "ನಿನ್ನಿಂದಾಗಿ ನಾನು ಏನೇನು ತೊಂದರೆಗಳನ್ನೆಲ್ಲ ಅನುಭವಿಸಬೇಕಾಗಿದೆಯೋ ಏನೋ, ನೋಡು, ಕೋಮುಗಲಭೆಯವರೆಗೂ ಬಂತಲ್ಲ ಈ ಪ್ರಕರಣ? ಈಗ ನಾನೇನು ಮಾಡಲಿ?" ಎಂದು ಗದರಿದನು.

ಶಬಾನ ಶಾಂತಚಿತ್ತಳಾಗಿ "ಏನೂ ಮಾಡಬೇಕಾಗಿಲ್ಲ ಈ ರಾತ್ರಿ ಬೆಳಗಾಗಲಿ, ನಾನೇ ಅವಳನ್ನು ಕಳಿಸುವೆ" ಎಂದಳು.

ವಿದ್ಯಾವಂತ ನಾಗರಿಕ ಜಗತ್ತಿನ ನಡವಳಿಕೆ ಕಂಡು ಶಬಾನ ಬೆಚ್ಚಿದಳು. ನಿನ್ನೆ ಮುಸ್ಲಿಮರು, ಇಂದು ಹಿಂದೂಗಳು ಓರ್ವ ಅನಾಥ ಹೆಣ್ಣನ್ನು ಸಂಪೂರ್ಣ ಬೆತ್ತಲೆ ಮಾಡಿ ಬೀದಿಗಟ್ಟುವುದರಲ್ಲಿ ಯಾರೂ ಹಿಂದೆ ಬೀಳಲಿಲ್ಲ! ಇಲ್ಲಿ ತಪ್ಪು ಮಾಡಿದವಳು ತಾನು ಅನಾಥ ಹೆಣ್ಣಿಗೆ ಆಶ್ರಯ ನೀಡುವ ತಪ್ಪು!

ಅವಿದ್ಯಾವಂತ ಬಡವರು ವಾಸಿಸುವ ಸ್ಥಳವಾಗಿದ್ದರೆ ಇಷ್ಟು ಹೊತ್ತಿಗೆ ಕೆಲವು ಮನೆಗಳ ಗಾಜು ಪುಡಿಪುಡಿಯಾಗಿ ಒಂದಷ್ಟು ರಕ್ತ ಹರಿದು, ಒಂದಿಬ್ಬರ ಬಲಿದಾನವಾಗಿ ಪತ್ರಿಕೆಗಳಿಗೆ ಸಾಕಷ್ಟು ಆಹಾರವಾಗಿ ಎಲ್ಲವೂ

ಆಗುತ್ತಿತ್ತು. ಆದರೆ ವಿದ್ಯಾವಂತ ನಾಗರಿಕ ಪ್ರಜೆಗಳಿರುವಲ್ಲಿ ಹಾಗೆಲ್ಲ ಆಗುವುದಿಲ್ಲ! ಆಕೆಯ ತುಟಿಯ ಕೊನೆಯಲ್ಲಿ ವ್ಯಂಗ್ಯ ನಗುವೊಂದು ಸುಳಿದು ಮರೆಯಾಯಿತು.

ಬೆಳಿಗ್ಗೆ ಎದ್ದವಳೇ ಶಬಾನ ಯಮುನಳನ್ನು ಕರೆದಳು. ಶಬಾನಳಿಗೂ ಮೊದಲು ಆಕೆ ತಾನೇ “ಅಮ್ಮಾ ಎರಡು ದಿನ ಊಟ ಹಾಕಿ ರಕ್ಷಣೆ ನೀಡಿದ್ದಕ್ಕೆ ನನ್ನ ಕೃತಜ್ಞತೆಗಳು. ನನಗಾಗಿ ಕೇಳಬಾರದ ಮಾತುಗಳನ್ನು ಕೇಳಿದಿರಿ, ಮನಸ್ಸಿನ ನೆಮ್ಮದಿ ಹಾಳು ಮಾಡಿಕೊಂಡಿರಿ. ದೇವರು ನಿಮ್ಮನ್ನು ಚೆನ್ನಾಗಿಟ್ಟರಲಿ” ಎಂದು ಅಳುತ್ತಾ ಹೊರಟೇ ಹೋದಳು. ಶಬಾನಳ ಕಣ್ಣುಗಳು ನೀರಿನಿಂದ ತುಂಬುತ್ತಿದ್ದವು.

ಕತ್ತಲೆ ತುಂಬಿದ ಆಕೆಯ ತಲೆಯೊಳಗೆ ಮಿಂಚಿನ ರೇಖೆಯೊಂದು ಸುಳಿದು ಮಾಯವಾಯಿತು. ವಿದಾನಸೌಧ ರಂಗಪ್ಪನೇ ಈ ಕೋಮುಗಲಭೆಯ ಸೃಷ್ಟಿಕರ್ತನೆಂಬುದು ಈಗ ಆಕೆಗೆ ತಿಳಿದುಹೋಗಿತ್ತು.

ಸಾರಾಂಶ ೧೧೩

ಅಸಹಾಯಕಳಾದ ನಿರಾಶ್ರಿತಳಾದ ಹೆಣ್ಣೋರ್ವಳಿಗೆ, ಅನ್ನ ಬಟ್ಟೆ ಆಶ್ರಯ ನೀಡುವ ಚೈತನ್ಯ ತಮಗಿದ್ದರೂ, ಅದಕ್ಕೆ ಬೇಕಾದ ಹೃದಯ ಸ್ಪಂದನ ಕೂಡ ಇದ್ದರೂ ಈ ವ್ಯವಸ್ಥೆಯಲ್ಲಿ ಅದನ್ನೇಕೆ ಕಾರ್ಯರೂಪಕ್ಕೆ ತರಲಾಗುತ್ತಿಲ್ಲವೆಂಬುದು ಈಗ ಆಕೆಗೆ ಮನವರಿಕೆಯಾಗತೊಡಗಿತ್ತು.

ವ್ಯವಸ್ಥೆಯೊಂದರ ಸಾರಾಂಶದಂತೆ ಕಾಣುತ್ತಿದ್ದ ಯಮುನಾ ನಡೆದು ಹೋಗುತ್ತಿದ್ದುದ್ದನ್ನು ನೋಡುತ್ತಾ ಶಬಾನ ನಿಟ್ಟುಸಿರಿಟ್ಟು ಅಂದಿನ ಪತ್ರಿಕೆಯನ್ನು ಕೈಗೆತ್ತಿಕೊಂಡಳು. “ಮಹಿಳೆಯರ ಅಭಿವೃದ್ಧಿಗಾಗಿ ಸರಕಾರ ಹಮ್ಮಿಕೊಂಡ ಯೋಜನೆಗಳು” ಎಂಬ ದಪ್ಪಕ್ಷರದ ತಲೆಬರಹವನ್ನು ಕಂಡಾಕೆ ಪತ್ರಿಕೆಯನ್ನತ್ತ ಎಸೆದು ಒಳನಡೆದಳು.

# ಬಿಂಬ

**- ಪ್ರೇಮಾ ಭಟ್**

ನೋಡಬೇಕು ಅವಳನ್ನು ಎಂದುಕೊಂಡಿದ್ದೆ. ಎತ್ತರಕ್ಕೆ ಐದು ಅಡಿಗೂ ಹೆಚ್ಚು ಎತ್ತರಕ್ಕಿದ್ದಾಳೆ ಎಂದಿದ್ದ ನಟೇಶ. ಸರಳವಾಗಿ ಸುಂದರವಾಗಿ ಸಿಂಗರಿಸಿಕೊಳ್ಳುತ್ತಾಳೆ. ಎಂದು ಹೇಳಿದ್ದ. ರೂಪವೂ ಅಷ್ಟೇ ; ಮಾತೂ ಅಷ್ಟೆ ಆಕರ್ಷಕ ಎಂದು ಅವಳನ್ನು ಕಂಡಿರದ ನನ್ನ ತೃಷೆಯನ್ನು ಹೆಚ್ಚಿಸಿದ್ದ ನಟೇಶ. ಅವಳ ಕಥೆ, ಕಾದಂಬರಿಗಳನ್ನು ಓದಿ ಮೆಚ್ಚಿಕೊಂಡವರಲ್ಲಿ ನಾನೊಬ್ಬನಾಗಿದ್ದುದರಿಂದಲೇ ಅವಳನ್ನು ಕಾಣಬೇಕೆಂಬ ಉತ್ಕಟ ಬಯಕೆಗೆ ಒಳಗಾಗಿದ್ದೆ. ನಾನು ಮಾತ್ರವಲ್ಲ ನನ್ನ ಹೆಂಡತಿ ರಮಾ ಕೂಡ ಅವಳ ಬರಹವನ್ನು ಮೆಚ್ಚಿಕೊಂಡವರಲ್ಲಿ ಒಬ್ಬಳಾಗಿದ್ದಳು. ನಾವಿಬ್ಬರೂ ಅವಳ ಬರಹವನ್ನು ಕುರಿತು ಚರ್ಚಿಸುತ್ತಿದ್ದೆವು. ನಮ್ಮ ನಮ್ಮೊಳಗೆ ವಿಮರ್ಶಿಸುತ್ತಿದ್ದೆವು.

ಅವಳು ಚಿತ್ರತಾರದಲ್ಲಿ ಬರೆದ ಒಂದು ನೀಳ್ಗತೆ ನನ್ನನ್ನು ಬಹಳವಾಗಿ ಆಕರ್ಷಿಸಿತ್ತು. ಅದರ ಗುಣವೇ ಹಾಗಿತ್ತು. ಹೆಚ್ಚು ಗಾತ್ರವೂ ಅಲ್ಲದ, ಹೆಚ್ಚು ತೆಳುವೂ ಅಲ್ಲದ ಚೌಕಟ್ಟು, ಹೂರಣವಾದರೋ ಬಲುಗಟ್ಟಿ, ಹೊರ ಚೌಕಟ್ಟು ಒಂದು ಸಾಮಾನ್ಯ ಕಥೆ ಎನ್ನುವ ಭಾವವನ್ನು ಹುಟ್ಟಿಸಿದರೂ, ಅದರ ಆಳಕ್ಕೆ ಇಳಿದು ನೋಡಿದಾಗ, ಅದರ ಜಾಡನ್ನು ಹಿಡಿದು ಅಲುಗಾಡಿಸಿದಾಗ ಅದರ ಒಳ ತಿರುಳಿನ ಅನುಭವ ಆಗದೆ ಇರುತ್ತಿರಲಿಲ್ಲ, ತೋಡು - ತೊಲೆ, ಕಾಡು-ಮೇಡು, ನದಿ-ನದಗಳ ವರ್ಣನೆಯು ಇಲ್ಲದ ಕಥೆಯದು. ಪ್ರಣಯದ ಕಾವಾಗಲಿ, ಗಂಡು-ಹೆಣ್ಣಿನ ಮೇಳವಾಗಲಿ ಆ ಕಥೆಯಲ್ಲಿ ಇರಲಿಲ್ಲ. ಅದೇ ನನ್ನ ಮನಸ್ಸಿಗೆ ಬಹಳವಾಗಿ ಹಿಡಿಸಲು ಒಂದು ಕಾರಣ ಎಂದು ಹೇಳಬಹುದೇನೋ.

ಕಂಬಳದಲ್ಲಿ ಎರಡು ಕೋಣಗಳನ್ನು ಸ್ಪರ್ಧೆಗೆ ಬಿಟ್ಟಾಗ, ಪ್ರತಿಸ್ಪರ್ಧಿಗಳು ಒಂದನ್ನೊಂದು ತಿವಿದು ಒಂದು ಕೋಣ ಸತ್ತುಬಿದ್ದದ್ದು, ಆ ಕೋಣದ ಮೂಲಕ ಮಂಜಯ್ಯನ ಕರುಣಾಜನಕ ಚಿತ್ರ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿತ್ತು, ಕೋಣವನ್ನು ಮಂಜಯ್ಯ ಸಾಕಿದ್ದೆಂದರೆ ಹಾಗೆ ಹೀಗೆ ಅಲ್ಲ, ಅದು ಅವನಿಗೆ ಜೀವ, ಉಸಿರು, ಎಡೆಬಿಡದೆ ಅದರ ಸಂರಕ್ಷಣೆಯನ್ನು ತಾನೇ ಸ್ವತಃ ಮಾಡಿದ್ದ, ಕೋಣ ಮಂಜಯ್ಯನ ಮನೆಗೆ ಬಂದಾಗ ಮೂರು ವರ್ಷದ ಕಡಸು.. ಆರು ವರ್ಷ ಮತ್ತೆ ಮಂಜಯ್ಯ ಕಂಡಿದ್ದ, ಅದು ಬೆಳೆದಂತೆ ಸಾಲ ಗೇಣಿ ಮೂಲ ಗೇಣಿಯವರ ಗದ್ದೆಯಲ್ಲೆಲ್ಲ ನೊಗಕಟ್ಟಿಕೊಂಡು ದುಡಿದದ್ದು. ಮಂಜಯ್ಯನ ಸಂಸಾರದ ಹೊರೆಯನ್ನೇ ಹೊತ್ತದ್ದು. ಆ ಕೋಣ ತಂದಾಗ ಹನುಮಿಯ ಕತ್ತಿನ ತಾಳಿ ಕುತ್ತಿಗೆ ಕರಿಮಣಿಸರ ಕಂಡದ್ದು, ಹಿರಿಯ ಮಗ ಶೇಷ ಶಾಲೆ ಕಲಿತು ಈಗ ಪಂಚಾಯತಿ ಮಂಡಳಿಯಲ್ಲಿ ಗುಮಾಸ್ತನಾಗಿರುವುದು, ಎಲ್ಲಾ ಆ ಕೋಣದ

ದೆಸೆಯಿಂದ, ಅದು ಒಂದು ರೀತಿಯಲ್ಲಿ ಮಂಜಯ್ಯನ ಮನೆಯನ್ನು ಪವಾಡ ರೂಪವಾಗಿಯೇ ಮಾಡಿತ್ತು. ಇದನ್ನೆಲ್ಲ ನೆನಪಿಸಿಕೊಂಡು ಮಂಜಯ್ಯ ಮೂರು ರಾತ್ರಿ ಮೂರು ಹಗಲು ನಿದ್ರೆ ಮಾಡದೆ, ಊಟ ಮಾಡದೆ ಕಳೆದದ್ದು. ಯಾರೆಷ್ಟು ಸಮಾಧಾನ ಹೇಳಿದರು ಮಂಜಯ್ಯ ತನ್ನ ಪ್ರಲಾಪವನ್ನು ಬಿಡದೆ ಹೋದದ್ದು, ಮತ್ತೆ ಹನುಮಿ ಬಂದು ಮೆತ್ತಗೆ ಮಂಜಯ್ಯನ ಕಿವಿಯಲ್ಲಿ ಉಸುರಿದ್ದು. ಸದಾ ಕೋಣದ ಪಕ್ಕಕ್ಕೆ ಇರುತ್ತಿದ್ದ ಹಟ್ಟಿಯ ಎಮ್ಮೆ ಗಬ್ಬಕ್ಕೆ ಬಂದದ್ದನ್ನು ಕೇಳಿ ಮಂಜಯ್ಯ ಕಣ್ಮರೆಸಿಕೊಂಡು ಮೇಲೆದ್ದು ಹಟ್ಟಿಯ ಕಡೆಗೆ ನಡೆದದ್ದು. ಕಥೆ ಸಾಮಾನ್ಯ ಎನಿಸಿದರೂ ಮಂಜಯ್ಯನ ಅಪಾರವಾದ ವ್ಯಥೆ ಮಂಜಯ್ಯನ ಕೂಗಿಗೆ ಕೋಣ ಎಲ್ಲಿದ್ದರೂ ಓಡಿಬರುತ್ತಿದ್ದುದು. ಪರಸ್ಪರ ಸೆಳೆತ. ಓದುಗರನ್ನು ಪ್ರಚೋದಿಸಿ ತಾವೂ ಆ ಸೆಳೆತದಲ್ಲಿ ಒಬ್ಬರಾಗಿಬಿಡುವಂತಹ ಆ ಗಾಢ ಮಧುರ ಶೈಲಿ ನನ್ನನ್ನು ಮಾತ್ರವೇನು ನನ್ನವಳನ್ನು ದಿಟ್ಮೂಢಗೊಳಿಸಿತ್ತು.

ಲೇಖಕರು ತಮ್ಮ ಆತ್ಮವನ್ನು ತಮ್ಮ ಬರಹದ ಪುಟಪುಟದಲ್ಲೂ ತೆರೆದಿಡುತ್ತಾರೆ ಎಂದು ಪಾಶ್ಚಾತ್ಯ ಸಾಹಿತಿಯೊಬ್ಬ ಹೇಳಿದ ಮಾತನ್ನು ಓದಿದ ನೆನಪಾಗಿ, ಈ ಮಾತು ಎಷ್ಟು ಸತ್ಯ. ಅವಳೆಲ್ಲೋ ತನಗಾತ್ಮೀಯವಾದುದೇನನ್ನೋ ಕಳೆದುಕೊಂಡಿದ್ದಾಳೆ. ಅದೇ ಈ ಕಥೆ ಅವಳ ಲೇಖನಿಯಲ್ಲಿ ಹರಿತವಾಗಿ ಮೂಡಿ ಬಂದಿದೆ. ನನ್ನವಳು ಇದೇ ಮಾತನ್ನೇ ಹೇಳಿದಳು.

'ಸ್ವಾನುಭವವಿಲ್ಲದ ಇಂತಹ ಕಥೆಗಳು ಸೃಷ್ಟಿಯಾಗಲಾರವು ಕಣ್ರೀ. ಎಷ್ಟು ಸಹಜವಾಗಿ ಬಂದಿದೆ ಈ ಕಥೆ. ಸಾಮಾನ್ಯವಾದ ಕೋಣದ ಬಗ್ಗೆ ಮಂಜಯ್ಯ ಇಟ್ಟಿರುವ ಪ್ರೇಮ- ವಿಶ್ವಾಸ ಅನಂತ ಅಪಾರ, ಅವನು ಶಾಶ್ವತವಾಗಿ ಸಂಪಾದಿಸಿದ ಮೌಲ್ಯಗಳಲ್ಲಿ ಕಳೆದುಕೊಂಡವೆಷ್ಟೋ. ಆದರೂ ಕೋಣವನ್ನು ಕಳೆದುಕೊಂಡ ಮಂಜಯ್ಯ ತನ್ನ ಜೀವಿತ ಇರುವವರೆಗೂ ಅದನ್ನು ಮರೆಯಲಾರ. ಕಥೆ ಎಷ್ಟು ಸೊಗಸಾಗಿದೆ" ಎಂದಳು.

"ನನ್ನ ತಲೆ ತುಂಬ ಮಂಜಯ್ಯನ ಕೋಣ, ಮಂಜಯ್ಯ ತುಂಬಿಕೊಂಡಿದ್ದರು. ನಾನು ಏನನ್ನೂ ಹೇಳಲು ಶಕ್ತನಾಗದೆ ಸುಮಾಳ ಮತ್ತೊಂದು ಕೃತಿಯನ್ನು ರಮಾಳಿಗೆ ಕೊಟ್ಟು ಹೇಳಿದೆ.

"ತೇಲುವ ಮೋಡದಲ್ಲಿರುವ ನೀಲುವಿನ ಪಾತ್ರ ಕೂಡ ನನ್ನ ಮನಸ್ಸಿಗೆ ಹಿಡಿಸಿತು. ರಮಾ" , ಮಂಜಯ್ಯ ಕಳೆದುಕೊಂಡ ಕೋಣದ ಕಥೆ ಓದಿ ಸುಮಾ ತನ್ನ ಜೀವಿತದಲ್ಲಿ ಮರೆಯಲಾರದೇನನ್ನೋ ಕಳೆದುಕೊಂಡಿರಬೇಕು ಎಂದೆ ಹಾಗಾದರೆ ಆ ನೀಲು ಯಾರಿರಬಹುದು? ಲೇಖಕಿಯೇ ಇದ್ದಾಳು ಎನ್ನುತ್ತೀಯೇನು ನೀಲುನ ಗಂಡ ವ್ಯಭೀಚಾರಿ-ಕುಡುಕ, ವಿಷಯಲಂಪಟಿ, ಲಂಗು ಲಗಾಮು ಇಲ್ಲದೆ ಹೋದ ಗಂಡನನ್ನು ದಂಡಿಸದೆ, ಎದುರವಾದಿಸದೆ ತಿದ್ದಿ, ಅವನನ್ನು ಒಬ್ಬ ಹೊಸ ಮನುಷ್ಯನನ್ನಾಗಿಸುವ ನೀಲುವಿನಂತಹವರು ಈ ಕಾಲದಲ್ಲಿಲ್ಲವೇ ಇಲ್ಲ ಎಂದು ನೀನು ನಾನು ವಾದಿಸಬಹುದು. ಅಂತಹ ಗಂಡನ ಕೈಹಿಡಿದ ಹೆಂಡತಿ ಅವನನ್ನು ಮೀರಿ ಬೆಳೆದಾಗ ಆಗುವ ಅನರ್ಥವೇ ಬೇರೆ. ಸತೀಧರ್ಮ ಅರಿತಿದ್ದ ಹೆಣ್ಣು ಅದಕ್ಕಾಗಿ ಹೋರಾಡಿ ಬದುಕನ್ನು ರೂಪಿಸ ಹೊರಟಾಗ ಕೊನೆಗೂ

ದೊರಕುತ್ತದೆ, ಬಯಸಿದಂತಹ ಬದುಕು. ಇದಕ್ಕೆ ತಾಳ್ಮೆ ಬೇಕು, ಸಾಧನೆ ಬೇಕು ಎಂದೆ. ನನ್ನ ಮಾತಿಗೆ ರಮಾಳ ಪ್ರತಿ ಮಾತಿಲ್ಲ. ಇಬ್ಬರ ವಿಚಾರ



ಮನಸ್ಸು ಏಕರೂಪವಾದಾಗ ಬದುಕು ಸಮೃದ್ಧಿ ಎಂದೆನಿಸುತ್ತಿತ್ತು. ನನ್ನ ರಮಾ ನಾನು ಒಪ್ಪಿ ಮೆಚ್ಚಿದ ಹುಡುಗಿ.

ಲೇಖಕಿಯರ ಬರಹವೆಂದರೆ ಒಂದು ರೀತಿಯ ಅಸಡ್ಡೆ ಈ ಪುರುಷರಿಗೆ ಮಾತ್ರವೇನು, ಸ್ತ್ರೀಯರಿಗೂ ಸಹ. ಅವಳ ಸಾಹಿತ್ಯದಲ್ಲಿ ಉಪ್ಪು, ಹುಳಿ ಎರಡೂ ಇಲ್ಲ. ಏನಿದ್ದರೂ ಅವಳದು ಅಡಿಗೆಮನೆಯ ಸಾಹಿತ್ಯ ಎಂದು ಹಂಗಿಸುವ ಗಂಡಸರನ್ನು, ಅಯ್ಯೋ! ಬಿಡಮ್ಮ ಅವಳೇನು ಬರೀತಾಳೆ. ಇಂತಹದ್ದೊಂದು ಕಥೆ ನಾನು ಸೃಷ್ಟಿಮಾಡಬಲ್ಲೆ ಎನ್ನುವ ಹೆಣ್ಣು, ಈ ಇಬ್ಬರ ದೃಷ್ಟಿಯಲ್ಲೂ ಮಹಿಳಾ ಸಾಹಿತ್ಯದ ಬಗ್ಗೆ ಅವಹೇಳನೆ ನಡೆದಿರುವಾಗಿ ನೀವೊಬ್ಬರು ಸುಮಳ ಬರವಣಿಗೆಯನ್ನು ಮೆಚ್ಚೋದು ಮಾತ್ರವಲ್ಲದೆ ವಿಮರ್ಶೆಯನ್ನು ಮಾಡುತ್ತಿದ್ದೀರಲ್ಲ, ನಿಜವಾಗಿ ನೀವಿವತ್ತು ನನಗೆ ಗೌರವ ಸೂಚಿಸಿದಂತೆ ಆಗಿದೆ ಎಂದಳು ನನ್ನ ರಮಾ ನನ್ನೆಡೆಗೆ ಕುಡಿನೋಟ ಹರಿಸಿ. ನನ್ನ ರಮಾಳ ಮಾತೇ ಹಾಗೆ, ಅವಳ ರೂಪಕ್ಕೆ ಮೋಡಿಯಾದಂತೆ ಅವಳ ಮಾತಿಗೂ ನಾನು ಅತೀತನಾಗುತ್ತಿದ್ದೆ. ಪ್ರಾಯಶಃ ನನ್ನ ರಮಾಳಂತಹ ಹೆಣ್ಣನ್ನು ಕಂಡು ನೀಲುನಂತಹ ಪಾತ್ರವನ್ನು ಸುಮಾ ಸೃಷ್ಟಿಸಿರಲಿಕ್ಕೂ ಸಾಕು ಎಂದುಕೊಳ್ಳುತ್ತಿದ್ದಂತೆ ರಮಾ ಹೇಳಿದಳು.

“ನೀವೊಂದು ಕಾಗದ ಬರೆಯಬಾರದೇಕೆ? ಸುಮಾಳ ಪರಿಚಯ ನಮಗಿರಲಿ” ಎಂದಳು. ನಾನು ರಮಾಳ ಮಾತಿನಂತೆ ಸುಮಾಳಿಗೆ ಒಂದು ಕಾಗದ ಬರೆದೆ, ಮರು ಟಪಾಲಿಗೆ ಅವಳಿಂದ ಉತ್ತರವೂ ಬಂತು, ನನ್ನ ವಿಮಾರ್ಶಾತ್ಮಕವಾದ ಸುದೀರ್ಘ ಕಾಗದ ಕಂಡು ಅವಳೇನು ಹೆಚ್ಚು ಸಂತೋಷಿಸಿದಂತೆ ಕಾಣಲಿಲ್ಲ. ಇಂತಹ ಕಾಗದಗಳು ಅವಳಿಗೆಷ್ಟು ಬಂದು ಹೋಗಿವೆಯೋ ಆನಂದಿಸಲು ಎಂದುಕೊಂಡೆ. ಅವಳು ನನ್ನನ್ನು ಮಾತ್ರ ಹಾರ್ದಿಕವಾಗಿ ಸ್ವಾಗತಿಸಿದ್ದಳು ತನ್ನ ಮನೆಗೆ, ಕಾಗದ ಹಿಡಿದು ಅಡುಗೆ ಮನೆಗೆ ಬಂದು ರಮಾಳಿಗೆ ಹೇಳಿದೆ.

“ಈ ದಿನ ನಾನು ಸುಮಾಳ ಮನೆಗೆ ಹೋಗಿಬರುತ್ತೇನೆ” .

“ಆಗಬಹುದು” ಎಂದಳು ರಮಾ.

ಕಛೇರಿಗೆ ಬಂದವನು ನಟೇಶನ ಮುಂದೆ ಸುಮಾಳ ಕಾಗದ ಹಿಡಿದ, ಮನಸ್ಸಿಗಾದ ಸಂತೋಷವನ್ನು ಅವನೊಡನೆ ಹಂಚಿಕೊಳ್ಳಬೇಕೆಂಬ ತವಕ. ಸುಮಾಳ ಬರಹವನ್ನು ನನ್ನಂತೆ ಅವನೂ ಮೆಚ್ಚಿಕೊಂಡಿದ್ದ, ಕಾಗದ ನೋಡಿ ಹೇಳಿದ,

“ಅವಳ ಬರಹದಂತೆ ಅವಳ ವೈಯಕ್ತಿಕ ಜೀವನ ಇಲ್ಲ. ನೀನು ಸುಮಾಳನ್ನು ನೋಡಬೇಕಲ್ಲವೆ, ನಡಿ ಈ ದಿನ ಕಬ್ಬನ್ ಪಾರ್ಕಿಗೆ ಹೋಗಬರೋಣ, ನಿನ್ನ ಆರಾಧ್ಯ ಮೂರ್ತಿ ಅಲ್ಲಿ ಸಿಗುತ್ತಾಳೆ” ಎಂದ.

“ಹಾಗೆಂದರೇನೋ ನಟೇಶ” ಎಂದೆ,

“ನೀನು ಸುಮ್ಮನೆ ನನ್ನ ಜೊತೆಗೆ ಬಾ” ಎಂದ.

ನಾನು ಮಾತನಾಡದೆ ಅವನನ್ನು ಹಿಂಬಾಲಿಸಿದೆ.

ಕಬ್ಬನ್ ಪಾರ್ಕಿಗೆ ಇಬ್ಬರೂ ಮಾತನಾಡುತ್ತಾ ಬಂದೆವು. ಅಲ್ಲೊಂದೆಡೆ ದಟ್ಟವಾಗಿ ಬೆಳೆದ ಆ ಗುಂಪಿನೆಡೆಯಲ್ಲಿ ಕುಳಿತುಕೊಂಡೆವು.



“ನೋಡು ಓ ಅಲ್ಲಿ ಕುಳಿತಿದ್ದಾನಲ್ಲ ಮುದಿಯ, ಅವನ ಪ್ರೇಯಸಿ ಸುಮ” ಎಂದ ನಟೇಶ.

ನಾನು ಆ ಗಿಡದ ಮರೆಯಲ್ಲಿ ಹಣುಕಿ ನೋಡಿದೆ. ಆತ ನಟೇಶನೆಂದಂತೆ ಇಳಿ ವಯಸ್ಸಿನವನು. ಕಣ್ಣಿಗೆ ಕನ್ನಡಕ ಹಾಕಿಕೊಂಡಿದ್ದ, ತಲೆಗೂದಲು ನೆರೆತಿತ್ತು.

“ಎಲ್ಲಿ ಸುಮಾ” ಎಂದೆ.

“ಅವಳು ತೋಟಗಾರಿಕೆ ಇಲಾಖೆಯಲ್ಲಿ ಕೆಲಸದಲ್ಲಿ ಇದ್ದಾಳೆ, ಸ್ವಲ್ಪ ಹೊತ್ತಿನಲ್ಲಿ ಬಾಳೆ ನೋಡ್ತಿರು' ಎಂದ.

ನೋಡುತ್ತಲೇ ಕುಳಿತೆ, ಸ್ವಲ್ಪ ಹೊತ್ತಿನಲ್ಲಿ ನಟೇಶ ಹೇಳಿದ ಸುಮಾ ಅಲ್ಲಿಗೆ ಬಂದಳು. ನನ್ನ ಭಾವನೆಯನ್ನೇನೂ ಅವಳು ಉಕ್ಕಿಸಲಿಲ್ಲ. ಕಥೆಗಾರ್ತಿ ಸಾಧಾರಣ ಮೈಕಟ್ಟಿನವಳಾಗಿದ್ದಳು. “ಹಿಂದೊಮ್ಮೆ ಅವಳ ಎತ್ತರವನ್ನು ಕುರಿತು ವ್ಯಾಖ್ಯಾನ ಕೊಟ್ಟಿದ್ದೆ”

ಎಂದೆ ನಾನು ನಟೇಶನೊಂದಿಗೆ.

“ನಿಜ ನಿನ್ನ ಹಾಗೆ ನನಗೂ ಕಥೆಗಾರ್ತಿ ಸುಮಳನ್ನು ಕಾಣುವ ಹುಚ್ಚು ಇತ್ತು. ಎಂದಿನಿಂದ ಅವಳ ತಪಾಸಣೆಗೆ ತೊಡಗಿದ್ದೆ, ಕೊನೆಗೂ ತಿಳಿಯಿತು ಈ ವನಸುಮಳೇ 'ಸುಮ' ಎಂದು, ಅವಳ ಹೆಸರು ವನಸುಮ,

'ಸುಮ' ಎಂದು ಅರ್ಧ ಹೆಸರನ್ನೇ ಕಾವ್ಯನಾಮ ಮಾಡಿಕೊಂಡು ಕಥೆ ಬರೆಯುತ್ತಿದ್ದಾಳೆ. ಬದುಕಿನಲ್ಲಿ ತಾವೇನು ಸಾಧಿಸದವರು ಕಥೆ ಬರೆಯಲು ಹೊರಡುವುದು ಸರಿಯಲ್ಲ" ಎಂದ.

"ಅವಳ ವೈಯಕ್ತಿಕ ಬದುಕು ನಮಗೇಕೆ, ನಮಗೆ ಬೇಕಾಗಿರುವುದು ಅವಳಲ್ಲವಷ್ಟೆ" ಎಂದೆ.

"ನಿಜ ನಿನ್ನ ಮಾತು ಒಂದು ಲೆಕ್ಕಕ್ಕೆ ಸಮ, ಆದರೂ ಅವಳ ಬರಹದ ಮುಂದೆ ಅವಳಿಲ್ಲ" ಎಂದ.

"ಅದು ಯಾವಾಗಲೂ ಹಾಗೆ, ಸತ್ಯ ಕಠೋರವಾಗಿರುತ್ತದೆ" ಎಂದೆ.

ನಟೇಶ ಸುಮ್ಮನಾದ, ನಾನು ಮತ್ತೆ ಹಣಕಿ ಆ ಗಿಡದ ಗುಂಪಿನತ್ತ ದೃಷ್ಟಿ ಚಾಚಿದೆ. ಸುಮ, ಆತನ ತೋಳನ್ನು ತನ್ನ ಕೈಗೆ ತೆಗೆದುಕೊಂಡು ಮೃದುವಾಗಿ ಸವರುತ್ತಿದ್ದಳು. ಅವನು ಮಾತ್ರ ಎಡಬಿಡದೆ ಹರಟುತ್ತಿದ್ದಂತೆ ಎನಿಸಿತು. ನಾನು ಯೋಚಿಸುತ್ತ ನಟೇಶನ ಕಡೆಗೆ ತಿರುಗಬೇಕು ಅವನೆಂದ,

"ಶ್ರೀಹರಿ ಸುಮಾಳ ಪತಿ ಹೇಗಿದ್ದಾನೆ ಗೊತ್ತ, ತೊಳೆದಿಟ್ಟ ಮುತ್ತಿನಹಾಗೆ, ಅವಳಿಗೆ ಅವನಿಂದಾದ ಮುದ್ದು ಮಗು ಕೂಡ ಇದೆ. ಆದರೂ ಸುಮ ಈ ಮುದಿಯನ ಸ್ನೇಹ ಬಿಡುವುದಿಲ್ಲ. ಇದೆಂತಹ ವಿಚಿತ್ರ" ಎಂದ.

ಯಾಕೋ ನನ್ನ ಮನಸ್ಸು ಸುಮಾಳನ್ನು ಅಷ್ಟೊಂದು ಕೀಳಾಗಿ ಕಾಣಲು ಸಿದ್ಧವಿರಲಿಲ್ಲ. ಅವಳ ಸಾಹಿತ್ಯದ ಶೈಲಿಯ ಮನವರಿಕೆ ನನಗಿದೆ. ಶೀಲ ಹೇಗಿರುತ್ತದೋ ಸಾಹಿತ್ಯವೂ ಹಾಗೆ ಇರಬೇಕು. ಅವಳ ಸಾಹಿತ್ಯದಲ್ಲೆಲ್ಲೂ ಅಶ್ಲೀಲದ ಸೋಂಕು ಇದ್ದದ್ದು ನಾನು ಕಂಡಿಲ್ಲ. ಬರಹದ ಪುಟಪುಟಗಳಲ್ಲೂ ಒಂದು ಶುದ್ಧವಾದ ನಿರ್ಮಲ ಅಂತಃಕರಣ

ಮಿಡಿಯುವುದನ್ನು ನೋಡಿದ್ದೆ, ಏಕೋ ನಟೇಶನ ಮಾತಿಗೆ ಒತ್ತು ಕೊಡಲು ಇಷ್ಟವಿಲ್ಲದೆ ಮೇಲೆದ್ದೆ.

"ನಿನಗೆ ಸುಮಾಳನ್ನು ಮುಖತಃ ಭೇಟಿಮಾಡುವ ಇಷ್ಟವಿದ್ದರೆ ಹೇಳು ಈಗ" ಎಂದ.

"ಇದೆ" ಎಂದೆ.

ಆಶ್ಚರ್ಯದಿಂದ ನನ್ನ ಕಡೆ ನೋಡಿದ.

"ಮಾರಾಯ ಎಚ್ಚರವಾಗಿರು, ಬೇಕಾದರೆ ಈ ವಿಳಾಸ ತಗೋ ನೋಡು" ಎಂದು ಸುಮಾಳ ಮನೆಯ ವಿಳಾಸ ಕೊಡಲು ಬಂದ.

'ಬೇಡ ನನ್ನಲ್ಲಿದೆಯಲ್ಲ" ಎಂದೆ.

"ಓ, ಮರೆತಿದ್ದೆ" ಎಂದು ಮೇಲೆದ್ದ.

ಅದೇ ಸಂಜೆ ನಾನು ಸುಮಾಳನ್ನು ಅರಸಿಕೊಂಡು ಅವಳ ಮನೆಗೆ ಹೊರಟೆ, ಬಾಗಿಲಲ್ಲೇ ಅವಳ ಪತಿ ಶ್ರೀಕಾಂತ, ಮಗ ಪ್ರಿಯಾಂಕ ನನ್ನನ್ನು ಹಾರ್ದಿಕವಾಗಿ ಸ್ವಾಗತಿಸಿದರು.

"ಇನ್ನೇನು ಸುಮಾ ಬರುವ ಹೊತ್ತು, ಕುಳಿತಿರಿ" ಎಂದು ಕಾಫಿ ಡಿಕಾಕ್ಷನ್ನಿಗೆ ಸಕ್ಕರೆ ಬೆರೆಸಿ ಶ್ರೀಕಾಂತ ತಂದುಕೊಟ್ಟ. ಎಂತಹ ಸೌಜನ್ಯ, ಇಂತಹ ಪತಿಯನ್ನು ಹೊಂದಿರುವ ಸುಮಾ ಎಂದೂ ಹೊಸಿಲು ದಾಟಿ ಹೋಗಲು ಸಾಧ್ಯವಿಲ್ಲ ಎಂದುಕೊಂಡೆ ಮನಸ್ಸಿನಲ್ಲೇ, ಸುಮಾ ಸ್ವಲ್ಪ ಹೊತ್ತಿನಲ್ಲಿ ಬಂದಳು.

"ಅದೋ ನೋಡು ಸುಮಾ, ನಿನ್ನನ್ನು ಅರಸಿಕೊಂಡು ಅದಾರೋ ಬಂದಿದ್ದಾರೆ" ನೇರವಾಗಿ ಸುಮಾ ಕೋಣೆಗೆ ಬಂದಳು.

ಎದ್ದು ನಮಸ್ಕಾರ ಹೇಳಿದೆ.

"ಕುಳಿತುಕೊಳ್ಳಿ" ಅವಳು ಸೌಜನ್ಯದಿಂದ ಹೇಳಿದಳು.

ನಾನು ನನ್ನ ಪರಿಚಯ ಹೇಳಲು ಸಿದ್ದನಾದೆ,

"ಅಗತ್ಯ ಎಲ್ಲ, ನೀವು ಶ್ರೀಹರಿ ಅಲ್ವೆ?" ಎಂದಳು.

"ನಿಮಗೆ ಹೇಗೆ ತಿಳಿಯಿತು?"

“ನಾವು ಕಥೆಗಾರರು, ನಮ್ಮ ಮನಸ್ಸು, ಸೂಕ್ಷ್ಮವಾಗಿ ಕೆಲಸ ಮಾಡುತ್ತಿರುತ್ತದೆ. ನಮ್ಮ ದೃಷ್ಟಿ ಭೂತಗನ್ನಡಿ ಇದ್ದ ಹಾಗೆ, ಹೊರಜಗತ್ತನ್ನು ಸೂಕ್ಷ್ಮವಾಗಿ ನಿರುಕಿಸುತ್ತಿರುತ್ತದೆ. ನನ್ನನ್ನು ನೋಡಿದರೆ ನಿಮಗೆ ಸಾಮಾನ್ಯ ಅನ್ನಿಸಬಹುದು, ನಿಜ. ನಿಮ್ಮೊಡನೆ ಹರಟುವಾಗ, ನನ್ನ ಪತಿ ಶ್ರೀಕಾಂತ, ಮಗ ಪ್ರಿಯಾಂಕನ ಜೊತೆ ಸರಸವಾಡುವಾಗ ನಾನು ಸಾಮಾನ್ಯ ಸುಮ. ಆದರೆ ಬರವಣಿಗೆಗೆ ತೊಡಗಿದಾಗ ಬೇರೊಂದು ಪ್ರಪಂಚವನ್ನು ಸೃಷ್ಟಿಸಿಕೊಳ್ಳುತ್ತೇನೆ. ಆಗ ಮಾತ್ರ ನಾನು ಸಾಮಾನ್ಯ ಸುಮ ಅಲ್ಲ. ಇದೊಂದು ರೀತಿ ದೈವೀಶಕ್ತಿ ಎನ್ನಿ. ಇನ್ನು ನೀವು ಮೊನ್ನೆ ಬರೆದ ಕಾಗದವೂ ಬಂದಿದೆ. ನಾನು ಉತ್ತರವನ್ನೂ ಕೊಟ್ಟಿದ್ದೇನೆ.



ಅಂದಮೇಲೆ ನೀವು ಶ್ರೀಹರಿ ಅಲ್ಲದೆ ಬೇರಾರು ಇರಲು ಸಾಧ್ಯ? ಕಥೆ ಅಂದಮೇಲೆ ಊಹೆಯೂ ಇರಬೇಕು. ಊಹೆಯ ತಳಹದಿಯ ಮೇಲೆ ಸಹಜತೆಯನ್ನು ಹಾಸಿ ಹೊದೆಯುತ್ತೇನೆ. ಊಹೆ ಹೊರ ಮೈ ಆದರೆ ಸಹಜತೆ ಅದರ ಒಳ ಮೈ” ಎಂದಳು.

ನಾನು ಸುಮಾಳನ್ನೇ ಒಂದೆರಡು ಕ್ಷಣ ನಿರುಕಿಸಿದೆ. ಅವಳ ಅರೆಬಿರಿದ ಕಣ್ಣುಗಳಲ್ಲಿ ಅತೀತವಾದ ಕಾಂತಿ ಹೊರಹೊಮ್ಮುತ್ತಿರುವಂತೆನಿಸಿತು ನನಗೆ. ಅವಳಲ್ಲಿದ್ದ ಗೌರವ ಒಂದಿನಿತೂ ಕಡಿಮೆಯಾಗಲು ಸಾಧ್ಯವಿಲ್ಲ ಎನಿಸಿತು. ಅವಳ ಮುಖದಲ್ಲಿ ಎದ್ದು ಕಾಣುವ ಶಾಂತವಾದ, ಪರಿಪೂರ್ಣವಾದ, ಅಭೂತಪೂರ್ವವಾದ ಮಂದಹಾಸ ನನ್ನನ್ನು ಅಮಾಯಕನನ್ನಾಗಿಸಿತು. ಆ ಗುಂಗಿನಲ್ಲಿಯೇ ಆ ದಿನ ನಾನು ಕಬ್ಬನ್‌ಪಾರ್ಕ್‌ನಲ್ಲಿ ಕಂಡ ದೃಶ್ಯವನ್ನು ಬಣ್ಣಿಸಿದೆ, ನಾನೇನು ಸುಮಳ ಮುಂದೆ ಹೇಳುತ್ತಿದ್ದೇನೆ ಎಂಬ ಪರಿವೆಯೇ ನನಗಿರಲಿಲ್ಲ. ಅವಳು ನಗುತ್ತ ನುಡಿದಳು,

“ಶ್ರೀಹರಿ.... ನೀವು ಕೇಳುತ್ತಿರುವ ಈ ಪ್ರಶ್ನೆ ನನ್ನನ್ನೇನೂ ವಿಚಲಿತಳನ್ನಾಗಿಸಲಿಲ್ಲ, ಆದರೆ ನೀವು ದುಡುಕಿ ಈ ಪ್ರಶ್ನೆಯನ್ನು ಕೇಳುತ್ತಿದ್ದೀರಿ ಎಂಬುದನ್ನು ನಾನು ಚೆನ್ನಾಗಿ ಬಲ್ಲೆ, ಶ್ರೀಹರಿ ಇಂತಹ ಸುದ್ದಿಗಳು ಹಬ್ಬುವುದು ಸ್ತ್ರೀಯರಿಂದ, ಅದನ್ನು ನೀವು ನಂಬಬೇಡಿ ಅಂತ ನಾನು ಖಂಡಿತ ಹೇಳಲಾರೆ, ಆದರೆ ಇಷ್ಟು ಮಾತ್ರ ಹೇಳುತ್ತೇನೆ, ಸತ್ಯಶೋಧನೆ ಮಾಡದೆ ಯಾವುದೇ ಒಂದು ವಿಷಯವನ್ನು ನಂಬಬೇಡಿ ಎಂದು ನನ್ನ ಕಳಕಳಿಯ ಪ್ರಾರ್ಥನೆ” ಎಂದಳು ಸುಮ, ಕ್ಷಣಬಿಟ್ಟು ಮತ್ತೆ ಹೇಳಿದಳು. ನನ್ನ ಬದುಕನ್ನು ಪವಾಡಸದೃಶ ಮಾಡಿದ ಮಹಾ ಪುರುಷರು ಕೃಪಾನಂದ, ಅವರು ನನ್ನ ತಂದೆಗೆ ಸಮಾನ, ಚಿಕ್ಕ ವಯಸ್ಸಿನಲ್ಲಿ ತಂದೆ-ತಾಯಿಯರ ಪ್ರೀತಿಯಿಂದ ವಂಚಿತಳಾದ ನಾನು ಅಣ್ಣ-ಅತ್ತಿಗೆಯ ಆಶ್ರಯದಲ್ಲಿ ಬೆಳೆದೆ. ಅತ್ತಿಗೆ ಮೊದಲ ಹೆರಿಗೆಯಲ್ಲಿ ಸತ್ತುಹೋದಳು. ಅಣ್ಣ ಬೇರೆ ಮದುವೆಯಾದ, ಹಿರಿಯ ಅತ್ತಿಗೆಯ ತಂದೆ ಕೃಪಾನಂದರು ಸ್ವತಃ ಲೇಖಕರು ಅತ್ತಿಗೆ ಸತ್ತ ಕೊರಗನ್ನು ನನ್ನಲ್ಲಿ ತುಂಬಿಕೊಳ್ಳಲು ಪ್ರಯತ್ನಿಸಿದರು. ಅವರ ಗರಡಿ ಮಜಲಿನಲ್ಲಿ ನಾನು ಒಬ್ಬ ಲೇಖಕಿಯಾಗಲು ಸಾಧ್ಯವಾಯಿತು.

ಮುಂದೆ ಅವರೇ ನಿಂತು ನನಗೆ ಮದುವೆ ಮಾಡಿದರು. ಶ್ರೀಕಾಂತನಂತಹ ಒಳ್ಳೆಯ ಪತಿ ದೊರಕಿದ್ದು ಕೃಪಾನಂದರ ಆಶೀರ್ವಾದ, ಇವತ್ತು ಮನೆಯಲ್ಲಿ ಸೊಸೆ ಏನು ಅಡಿಗೆ ಮಾಡಿದರೂ ಕೃಪಾನಂದರು ನನಗೆ ತಂದು ಉಣಬಡಿಸುತ್ತಾರೆ. ಅದಕ್ಕಿಂತಲೂ ಅವರು ಉಣಬಡಿಸುವ ಸಾಹಿತ್ಯ, ಅವರು ಹರಟುವಲ್ಲಿ ಕಂಡು ಕೇಳರಿಯದ ವಿಚಾರಗಳು ನನ್ನ ಬರವಣಿಗೆಗೆ ಒಂದು ಸ್ಫೂರ್ತಿ, ಶಕ್ತಿಯನೆಲೆ ಉತ್ಪತ್ತಿಯಾಗುವುದು ಹೀಗೊಂದು ಪರಿಸರ ನಿರ್ಮಿತವಾದಾಗ, ಶ್ರೀಕಾಂತನಂತಹ ಪತಿ, ಪ್ರಿಯಾಂಕನಂತಹ ಮುದ್ದು ಮಗನಿರುವಾಗಲೇ ಇಂತಹದೊಂದು ಕಥೆ ಸೃಷ್ಟಿಯಾಗಲು ಸಾಧ್ಯ, ಈ ಜನರ ಮೂಢ ಬುದ್ಧಿಗೆ ಏನು ಹೇಳಬೇಕೋ!" ಎಂದ ಸುಮಾ ಬೀಳ್ಕೊಳ್ಳುವ ಮುನ್ನ "ಆಗಾಗ ಬರುತ್ತಿರಿ"  ಎಂದು "ಅಮೃತಗಳಿಗೆ' ಎಂಬ ತನ್ನ ಒಂದು ಕೃತಿಯನ್ನು ಕೊಟ್ಟು ಕಳಿಸಿದಳು. ಅದನ್ನು ಓದುವ ಕಾತರಾತರದಲ್ಲಿ ಮನೆಗೆ ಬಂದೆ, ನನ್ನ ಮಲಗುವ ಕೋಣೆಯಲ್ಲಿ ಕೇಳಿ ಬಂದ ಪರಪುರುಷನ ಧ್ವನಿ ನನ್ನನ್ನು ದಿಟ್ಮೂಢನನ್ನಾಗಿಸಿತು. ಇದೇನು... ಇದಾರು... ನಮ್ಮ



ರಮಾ ಅಂತಹವಳೇ? ಖಂಡಿತಕ್ಕೂ ಎಷ್ಟು ಮಾತ್ರಕ್ಕೂ ಸಾಧ್ಯವಿಲ್ಲ. ಹಾಗಾದರೆ ಆ ಗಂಡಸು ಯಾರು? ಯೋಚಿಸಿದೆ. ನನ್ನ ಬುದ್ಧಿಗೆ ಏನೊಂದು ಹೊಳೆಯಲಿಲ್ಲ. ಕಣ್ಣ ದೃಷ್ಟಿ ಆಕಾಶದ ನಕ್ಷತ್ರಗಳನ್ನು ಎಣಿಸಲು ಬರುತ್ತವೆಯೇ. ಹಾಗೆಯೇ ಈ ಸ್ತ್ರೀಯರನ್ನು ನಂಬುವುದಾದರೂ ಹೇಗೆ ಎಂದುಕೊಂಡೆ. ಕಾಲು ಮನೆಯೊಳಗೆ ಅಡಿಯಿಡಲು ಸಿದ್ಧವಾಗಿಲ್ಲ. ಮನೆಗೆ ಒಂದು ಸುತ್ತು ಬಂದು ಹಿತ್ತಲಲ್ಲಿ ಹೋಗಿ ಕುಳಿತುಕೊಂಡೆ. ನನ್ನ ಕೋಣೆಯಿಂದ ಗಹಗಹಿಸಿ ನಗುವ ಸದ್ದು ಕೇಳಿಬಂತು, ರಮಾ ಮತ್ತು ಅವನು ಇಬ್ಬರೂ ಕೂಡಿ ನಗುತ್ತಿದ್ದಾರೆ. ನಾನು ಆಳ ಪ್ರಪಾತಕ್ಕೆ ಇಳಿದುಹೋದೆ, ಶೂನ್ಯವನ್ನು ನಿರುಕಿಸಿದೆ, ಏನೂ ಅರ್ಥವಾಗಲಿಲ್ಲ, ಹೊರ ಬಾಗಿಲು ತೆಗೆದ ಸದ್ದು ಕೇಳಿಸಿತು. ಆತ ಹೊರಟುಹೋಗಿರಬೇಕು. ಎದ್ದು ಮುಂಬಾಗಿಲಿಗೆ ಬಂದ ನನ್ನನ್ನು ನೋಡಿ ರಮಾ ಹೆದರಿದಂತೆ ಕಂಡಿತು. ನನ್ನ ಕಲ್ಪನೆ ನನಗೆ ನಿಜದ ಭೀತಿಯನ್ನು ಹುಟ್ಟಿಸಿ ನನ್ನನ್ನು ಅಧೀರನನ್ನಾಗಿಸಿತು. ಅಯ್ಯೋ ದೇವರೆ ನನ್ನ ರಮಾ ಹೀಗಾದಳಲ್ಲ ಎಂದು ಕೊರಗಿದೆ. ರಮಾ ಏನೋ ಮಾತನಾಡಲು ಅನುಮಾನಿಸಿದಳು. ನನಗೆ ಹಸಿವಿಲ್ಲ ಊಟ ಬೇಡ ಎಂದು ಹೋಗಿ ಹಾಸಿಗೆಯಲ್ಲಿ ಬಿದ್ದುಕೊಂಡೆ, ನಿದ್ರೆ ಬರಲಿಲ್ಲ, ಹೊಟ್ಟೆಯಲ್ಲಿ ಎದ್ದ ವಿಪ್ಲವ ಉಪಶಮನವಾಗಲಿಲ್ಲ. ರಮಾ ಬಂದು ದೀಪ ಆರಿಸಿ ಮಲಗಿದಳು. ಅವಳ ಸನಿಹಕ್ಕಾಗಿ ಹಾತೊರೆಯುತ್ತಿದ್ದವನಿಗೆ ಆ ದಿನ ಚಿತ್ರಹಿಂಸೆಯನ್ನುಂಟುಮಾಡಿತು. ರಮಾ ಏನೋ ಹೇಳಲು ಹವಣಿಸುತ್ತಿರುವಂತೆ ಕಂಡಳು. ನಾನು ಉತ್ತರಿಸುವ ಉತ್ಸಾಹ ತೋರಿಸಲಿಲ್ಲ, ಮರುದಿನ ಹೊತ್ತಿಗೆ ಮುಂಚೆ ಎದ್ದು ನಿತ್ಯವಿಧಿಗಳನ್ನು ಮುಗಿಸಿಕೊಂಡು ಹೊರಗೆ ಹೊರಟೆ, ಮಧ್ಯಾಹ್ನದ ಊಟಕ್ಕೂ ಬರಲಿಲ್ಲ. ಸಂಜೆ ಬಂದಾಗ ರಮಾ ಪೂರ್ಣ ಇಳಿದುಹೋದಂತೆ

ಕಾಣುತ್ತಿದ್ದಳು. ಅವಳ ಕೈಲಿ ಸುಮಳ 'ಬಿಂಬ' ಎಂಬ ಕೃತಿ ಇತ್ತು. ಅದನ್ನು ತಂದುಕೊಟ್ಟವರು ಯಾರು ಎಂದು ನಾನು ಕೇಳಲಿಲ್ಲ. ಅವಳೇ ಹೇಳಿದಳು.

"ಈ ಕಾದಂಬರಿ ಓದಿ, ನಿಮಗೇನನ್ನಿಸುತ್ತದೋ ಹೇಳಿ. ನನಗಲ್ಲ ಸುಮಾಳಿಗೆ" ಎಂದಳು.

"ಇವಳೇಕೆ ಹೀಗನ್ನುತ್ತಿದ್ದಾಳೆ, ನನ್ನ ಹಾಗೆ ಇವಳೂ ಸಂಶಯ ತಾಳಿರಬಹುದೇ? ನನ್ನ ಮತ್ತು ಸುಮಳ ಪರಿಚಯದ ನಡುವೆ ಬೇರೇನನ್ನೋ ಕಲ್ಪಿಸಿದ್ದಾಳೇನು ನನ್ನ ರಮಾ?" ಯೋಚಿಸುತ್ತಾ ಬಿಂಬ ಕೃತಿಯನ್ನು ಪಡೆದು ಎರಡೇ ದಿನದಲ್ಲಿ ಓದಿ ಮುಗಿಸಿದೆ. ಪ್ರೀತಿಯ ಹೆಂಡತಿ ವರದಾಳ ವಿಷಯದಲ್ಲಿ ಎಸ್ತ್ರ ಒಂದು ಸಣ್ಣ ಕಾರಣವನ್ನು ಮುಂದಿಟ್ಟು ಸಂಶಯ ತಾಳುವುದು, ಹದಿನಾಲ್ಕು ವರ್ಷ ಮಾತು ಬಿಟ್ಟ ವಿಪ್ರ ಮಗಳ ಮದುವೆಯ ಸಂಭ್ರಮದಲ್ಲಿ ಹೆಂಡತಿ ವರದಾಳೊಂದಿಗೆ ಮಾತನಾಡುವುದು, ಈ ಹದಿನಾಲ್ಕು ವರ್ಷದ ಮಧ್ಯೆ ವರದಾ ಪಡುವ ಮಾನಸಿಕ ತುಮುಲ ಮಂಗಳ ಕಾರ್ಯದಲ್ಲಿ ಪರ್ಯಾವಸಾನಗೊಳ್ಳುವುದು 'ಬಿಂಬ' ಕಾದಂಬರಿಯ ಕಥಾವಸ್ತು, ಸೇಬುಹಣ್ಣುಗಳನ್ನು ಒಂದು ತಟ್ಟೆಯ ತುಂಬ ತುಂಬಿಕೊಂಡು ಬಂದ ರಮಾ ನನ್ನ ಕೈಲಿದ್ದ 'ಬಿಂಬ ನೋಡಿ.



"ಹೇಗಿತ್ತು ಕಥೆ" ಎಂದಳು, ನಾನು ಉತ್ತರಿಸುವುದರೊಳಗೆ "ದುಬೈಯಿಂದ ಅಣ್ಣ ಮರಳಿ ಬಂದಿದ್ದಾನೆ. ಹಿಂದಿನ ಮನಸ್ತಾಪವೆಲ್ಲ ಮರೆತಿದ್ದಾನೆ, ನಿಮಗೆ ಮುಖ ತೋರಿಸಲು ಧೈರ್ಯವಿಲ್ಲವಂತೆ" ಎಂದು ಒಂದು ಕ್ಷಣ ತಡೆದು ಹೇಳಿದಳು. ಯಾಕೋ ಒಂದು ವಾರದಿಂದ ನಿಮ್ಮ ಮನಸ್ಥಿತಿ ಸರಿಯಾಗಿಲ್ಲ. ಆದ್ದರಿಂದ ಹೇಳಲು ಹೆದರಿದೆ ಎಂದಳು. ನಾನು ನನ್ನ ಪ್ರತಿಬಿಂಬವನ್ನು ಕನ್ನಡಿಯಲ್ಲಿ ನೋಡಿಕೊಂಡೆ, ನನ್ನ ಬಿಂಬ ನನ್ನನ್ನು ಅಣಕಿಸಿತು. ವೃಥಾ ರಮಾಳ ಬಗ್ಗೆ ಸಂಶಯ ತಾಳಿದ್ದ ನನ್ನ ಮನಸ್ಸು ತಿಳಿಯಾದದ್ದು 'ಬಿಂಬ' ಕೃತಿಯನ್ನು ಓದಿದ ಮೇಲೆ.

## ಕಾಶಿಯಲ್ಲಿ ಕಂಡದ್ದೇನು?

**- ಸರಿತಾ ಕುಸುಮಾಕರ ದೇಸಾಯಿ**

ಶ್ರೀಧರಾಚಾರ್ಯರು ಊಟ ಮುಗಿಸಿ ತಲೆಬಾಗಿಲಲ್ಲಿ ಬಂದು ನಿಂತಾಗ ಸೂರ್ಯ ಆಕಾಶದ ಮಧ್ಯಕ್ಕೆ ಬಂದಿದ್ದ. ಅಂಗಳವೆಲ್ಲ ಸುಡು-ಸುಡುತ್ತಿತ್ತು. ಬಾಯಿಯಲ್ಲಿ ಸಣ್ಣ ಬೆಲ್ಲದ ತುಂಡನ್ನು ಹಾಕಿಕೊಂಡು ಮತ್ತೊಮ್ಮೆ ಸಣ್ಣ ಬೆಲ್ಲದ ತುಂಡನ್ನು ಹಾಕಿಕೊಂಡು ಮತ್ತೊಮ್ಮೆ ಗಟಗಟ ನೀರುಕುಡಿದು ಆಚಾರ್ಯರು ನಿತ್ಯದ ಪರಿಪಾಟದಂತೆ, ಅಂಗಳದಲ್ಲೇ ಕಟ್ಟಿಸಿದ್ದ ಬೇವಿನಮರದ ಕಟ್ಟೆಗೆ ಕುಂಟುತ್ತ ಬರುವಷ್ಟರಲ್ಲಿ ಅವರ ಬರೀ ಕಾಲುಗಳು ಬಿಸಿಲ ಝಳದಿಂದ ಭಗಭಗ ಎನ್ನತೊಡಗಿದ್ದವು. ಬೇವಿನಮರದಡಿಯ ಕಟ್ಟೆಯಲ್ಲಿ ಒರಗಿ ಬೀಸಣಿಗೆಯಿಂದ ಬೀಸಿಕೊಳ್ಳುತ್ತ 'ಉಸ್' ಎಂದು ಉಸಿರೆಳೆದುಕೊಂಡರು. ಬೊಜ್ಜು ಹೊಟ್ಟೆಯ ಮೇಲೆ ತೀಡಿಕೊಂಡಿದ್ದ ಗಂಧದ ನಾಮ ಒಣಗಿ ಬಿಟ್ಟಿತ್ತು. ಅಲ್ಲಲ್ಲಿ ಬೆವರಿಳಿದು ಹಸಿಯಾಗಿತ್ತಷ್ಟೆ. ಆಚಾರ್ಯರು ಹೊರಳಿ ಹೊರಳಿ ಮಲಗಿದರು. ಕಣ್ಣು ತೆರೆದರೆ ಬಿಸಿಲು, ಮುಚ್ಚಿದರೆ ನಿದ್ದೆ ಬರಲೊಲ್ಲದು. ಬರೀ ವಿಚಾರಗಳು.. ಹಾಳು ಹಾಳು ಯೋಚನೆಗಳು... ಏನೋ ಮುಜುಗರ ಸಿಡಿಸಿಡಿ... ಬಲವಂತದಿಂದ ಎಲ್ಲಾ ವಿಚಾರಗಳನ್ನೂ ಬದಿಗೊತ್ತಿ ನಿದ್ದೆ ಮಾಡಲೇಬೇಕೆಂದು ನಿರ್ಧರಿಸಿ ಆಚಾರ್ಯರು ಪ್ರಯತ್ನಿಸಿದಾಗ ಸ್ವಲ್ಪ ಜೊಂಪು ಹತ್ತಿತು. ನಿದ್ದೆಗೆ ಭಂಗ ಬಂದದ್ದು ಪೋಸ್ಟ್ಮ್ಯಾನ್‌ನ ಗೊಗ್ಗರು ಧ್ವನಿ ಗಡಬಡಿಸಿ ಎದ್ದು ಕುಳಿತ ಆಚಾರ್ಯರು ಬಂದ ಕಾಗದಗಳ ಮೇಲೆ ಕಣ್ಣೋಡಿಸಿದಾಗ ಅದರಲ್ಲಿ ತಮಗೆ ಬರಬೇಕಾದದ್ದು ಒಂದೂ ಇರಲಿಲ್ಲ. ಎಲ್ಲ ಮಗ ಸೊಸೆಗೆ ಬಂದದ್ದೆ, ಆತುರದಿಂದ ಬಂದು ನಿಂತ ಸೊಸೆ ತುಳಸಿಗೆ ಅವೆಲ್ಲ ಒಪ್ಪಿಸಿ ಮತ್ತೆ ಅಡ್ಡಾದರು. ಈಗ ಆಚಾರ್ಯರಿಗೆ ಸಿಟ್ಟು ಡಿಗ್ರಿ ಡಿಗ್ರಿಗಳಲ್ಲಿ ಏರತೊಡಗಿತ್ತು. ಮೊದಲೇ ಗಂಟು ಸಿಡುಕು ಮುಖ ಮೇಲೆ ಸಿಟ್ಟು ಬಂದಾಗ ಮಕ್ಕಳಾಗಲಿ, ಸೊಸೆಯಾಗಲಿ ಮಾತನಾಡಿಸುವುದಿರಲಿ... ಅವರ ಮುಂದೆ ಹಾಯ್ದು ಹೋಗುವುದೂ ದುಸ್ತರ.

ಆಚಾರ್ಯರು ಅದುಮಿ ತಡೆಹಿಡಿದಿದ್ದ ವಿಚಾರಗಳೆಲ್ಲ ಏಕಕಾಲಕ್ಕೆ ಹೊರ ಹೊಮ್ಮಿದಾಗ ಬೀಸಣಿಗೆಯಿಂದ ಬಲವಾಗಿ ಭರಭರ ಬೀಸಿಕೊಳ್ಳತೊಡಗಿದರು ಅದರ ಗಾಳಿಯಿಂದ ಅವರಿಗೇನೂ ಸಮಾಧಾನವಾಗುವಂತಿರಲಿಲ್ಲ ಅದು ಒಂದು ಕ್ರಿಯೆ ಮಾತ್ರ ಆಗಿತ್ತಷ್ಟೆ!

ದೂರದ ಹುಬ್ಬಳ್ಳಿಯಲ್ಲಿದ್ದ ಶ್ರೀಕಾಂತನ ಮೇಲೆ ಅವರ ಕೋಪಾಸ್ತ್ರ ಹೊರಟಿತ್ತು 'ತಂದೆ ಎಂಬ ಅಭಿಮಾನ ಬೇಡವೆ? ಪತ್ರಕ್ಕೆ ಮರುತ್ತರ ಬರುವಷ್ಟೂ ವ್ಯವಧಾನವಿರಲಿಕ್ಕಿಲ್ಲವೇ? ಮದುವೆಗೆ ಮುನ್ನ ಸ್ವಲ್ಪ ಪರವಾಗಿದ್ದಿಲ್ಲ.... ಲಗ್ನವಾದಾಗಿನಿಂದ

ಬದಲಾಗಿ ಬಿಟ್ಟಿದ್ದಾನೆ. ಆ ಬಿನ್ನಾಣಗಿತ್ತಿಯ ಬೆಡಗಿನಲ್ಲಿ ಎಲ್ಲರನ್ನು ಮರತೇಬಿಟ್ಟ ಹಾಗೆ ಇದೆ. ಏನಂದ್ರೂ ಶ್ರೀನಾಥನೇ ವಾಸಿ... ಬಾಯಿಯಿಂದ ಏನೂ ಮಾತನಾಡದಿದ್ದರೂ, ಗೌರವ ಇಟ್ಟಿದ್ದಾನೆ... ಇದು ಅಂತೂ ಹುಚ್ಚು... ಗೋಪಿ. ತಂದೆ ಎಂದರೆ ಏನೇನೂ ಅನಿಸೋದೇಯಿಲ್ಲ... ಕಾಲು... ನೋವಾದರೆ ನಾನೇ ಕರೆದು ಒತ್ತಿಸಿಕೊಳ್ಳಬೇಕು... ಮೂರು ಹೊತ್ತು ಅಲೆಯುವುದೇ ಅಲೆಯುವುದು ಅದೇನು ಕೆಲ್ಲವೋ ಏನೋ... ಇನ್ನು ಗೋಪಿಗೂ ಒಂದು ಮಾಡಿಬಿಡಬೇಕು.. ಆ ಬರೋ ರಮಣಿ ನನಗಾಗಿ ಎಷ್ಟು ಮಾಡಬೇಕಾಗಿದೆ ಗೊತ್ತೇ ಇದೆ. ಈಗಿನ ಕಾಲದವರ ಹಣೇಬರಹ, ಶ್ರೀಕಾಂತನ ಹೆಂಡ್ತಿ ಬರೀ ಡಾಕ್ಟರಿಕೆ ಪಾಸು ಮಾಡಿದ್ದಾಳೋ?.... ಅದರ ಜೊತೆಗೆ ಸ್ವಲ್ಪ ಅಡಿಗೆ ಕೆಲಸ ಕಲ್ತಿದಾಳೋ ಇಲ್ಲೋ ಅಲ್ಲಿಗೂ ಒಂದು ನಾಲ್ಕು ದಿವಸ ಹೋಗಿ ಬರೋಣಾ ಅಂದ್ರೆ ಆ ಮೂರ್ಖನಿಂದ ಎರಡಕ್ಷರ ಕಾಗದಾನೇ ಇಲ್ಲ...

ಮುಖ್ಯವಾಗಿ ಅಂದ್ರೆ ಅವಳು ಬದುಕಿ ಇದ್ದಿದ್ದರೆ....? ಈ ಪರಿಸ್ಥಿತಿ ಯಾಕೆ ಇರುತ್ತಿತ್ತು? ಈ ಮಕ್ಕಳ ಸೊಸೆಯರ ಮುಲಾಜೇ ಇಲ್ಲದೇ ಇರಬಹುದಿತ್ತು. ಪುಣ್ಯವಂತೆ ಸತ್ತು ಸ್ವರ್ಗದಲ್ಲಿದ್ದಾಳೆ... ನನ್ನನ್ನು ಈ ನರಕದಲ್ಲೇ ಬಿಟ್ಟು! ಹೆಂಡ್ತಿ ಸತ್ತ ಮೇಲೆ.... ಈ ಮುದಿವಯಸ್ಸಿನಲ್ಲಿ ಪರಾಧೀನ ಆಗಿ ಹೆಚ್ಚು ದಿವಸ ಮಾತ್ರ ಬದುಕಬಾರದು;

ಈ ಹಿರಿಸೊಸೆ ತುಳಸಿ ಈ ಮನೆಗೆ ಬಂದು ಹನ್ನೆರಡು ವರ್ಷ ಆಯ್ತು, ಐದು ಮಕ್ಕಳ ತಾಯಿ ಆಗಿದ್ದಾಳೆ ಮೊನ್ನೆ ಮೊನ್ನೆವರೆಗೂ "ಮಾವಾ" ಅಂದ್ರೆ ಎಷ್ಟು ಮರ್ಯಾದೆ ಎಷ್ಟು ಅದರ; ಆದರೆ ಶ್ರೀಕಾಂತರ ಲಗ್ನ ಅದಾಗಿನಿಂದ ಇವಳ ವರ್ತನೆಯೇ ಬೇರೆ ಆಗಿದೆ. ಆ ಸೊಸಿ ಕಂಡಿದ್ದೂ ಮಾಡಿಸಿಕೊಳ್ಳಿ ಅಂತ ಇರಬಹುದು ನಾನೇನು ಕಿವಿಯಲ್ಲಿ ತುತ್ತು ಇಡುವುದಿಲ್ಲ... ಎಲ್ಲ ಅರ್ಥವಾಗುತ್ತದೆ.. ಎಲ್ಲರ ಗುಣವೂ ಗೊತ್ತಗ್ತದೆ.. ಶ್ರೀನಾಥ ಎದುರಿಗೆ ನಿಂತು ಮಾತನಾಡದಿದ್ದವನು ಮೊನ್ನೆ ಹೇಗೆ ವಾದಿಸಿದ, ಆ ಹುಚ್ಚು ಗೋಪಿನೂ ಅವರ ಕಡೆಗೇ... ನೀನು ಸುಮ್ಮನಿದ್ದು ಬಿಡಪ್ಪ ಅನ್ನುತ್ತಾನೆ ಎಲ್ಲದಕ್ಕೂ ನಾನೇನು ತಪ್ಪು ಹೇಳಿದೆ? ಹೌದು ಇಷ್ಟು ವರ್ಷ ಮಡಿ ಮೈಲಿಗೆ ಆಚಾರದಲ್ಲಿ ದಿನ ಕಳೆದೋನು... ತುಳಸಿಯ ತಾಯಿ ಮಾಡಿದ ಅಡಿಗೆ ಹೇಗೆ ಊಟಮಾಡ್ಲಿ? ತುಳಸಿಗೆ ಏನಾಗಿದೆ? ಮೊದಲು ಬೆಳಿಗ್ಗೆ ಬೇಗ ಎದ್ದು ದೇವರ ಕಟ್ಟೆ ಸಾರಿಸಿ ರಂಗವಲ್ಲಿ ಹಾಕಿ ಪೂಜೆಗೆ ಸಜ್ಜುಗೊಳಿಸಿ ದೇವರ ನೈವೇದ್ಯಕ್ಕೆ ಅಣಿಗೊಳಿಸಿ ಎಷ್ಟು ವಿವೇಕದಿಂದ ಕಲೆಸ ಮಾಡಿಕೊಂಡು ಕುಲು ಕುಲು ಅಂತ ಇದ್ದೋಳು ಈಗ? ಎಂಟು ಗಂಟೆ ಹೊಡೆದ್ರೂ ಬಿದ್ದುಕೊಂಡೇ ಇದ್ದಾಳೆ... ಎಲ್ಲ ಆ ಸಕೇಸಿದೇ ಓಡಾಟ... ನನಗಂತೂ ಹೇಸಿಗೆ ಬರದೆ.. ಖಡಾ ಖಂಡಿತಾ ಹೇಳಿಬಿಟ್ಟೆ... ನನಗಾಗಿ ಯಾರೂ ಮಾಡೋದು ಬೇಕಾಗಿಲ್ಲ. ಎಲ್ಲ ನಾನೇ ಮಾಡಿಕೊಡ್ತೀನಿ... ನನ್ನ ಕೈಲೇ ನಾನು ಅಡಿಗೆ ಮಾಡಿಕೊಳ್ತಿರೋದು ಶ್ರೀನಾಥನಿಗೇನು ಗೊತ್ತಿಲ್ಲೇನು? ಗೋಪಿಗೂ ಗೊತ್ತಲ್ಲ... ಎಲ್ಲರೂ ತೆಪ್ಪಗೆ ಇದ್ದಾರೆ ಭಾಗೂ ಬದುಕಿದ್ದಿದ್ದರೇ? ನನಗೆ ಯಾರ ಮುಲಾಜಿಗೂ ಬೇಕಾಗಿಲ್ಲ. ನನ್ನ ಪಿತ್ರಾರ್ಜಿತ ಸ್ವಯಂ ಆಸ್ತಿ ಆ ಗದ್ದೆ ನನ್ನ ಹೆಸರಿಗೇ ಇರೋತನಕ ಈ ಮಕ್ಕಳ ಚಿಕ್ಕಾಸಿನ ಆಸೆಯೂ ನನಗಿಲ್ಲ. ಶ್ರೀನಾಥ ಪ್ರೊಫೆಸರ್,

ಶ್ರೀಕಾಂತ ಡಾಕ್ಟರು. ಅವರಿಂದ ನನಗಾಗುವ ಲಾಭವಾದರೂ ಏನು? ಯಾವ ಮಗ ಹತ್ತಿರ ಕುಳಿತು ನಾಲ್ಕು ಸುದ್ದಿ ಹೇಳ್ಬೇಕಾಗಿದೆ?



ಯಾವ ಮಗ 'ಅಪ್ಪ ನಿಮಗೇಗಾನಾಗಿದೆ' ಎಂದು ವಿಚಾರಿಸುವವ? ಏನೇ ಅಂದ್ರೂ ಭಾಗೂ ಹೋಗಿ ನನ್ನ ಪರದೇಶಿ ಮಾಡಿಬಿಟ್ಟು.

ಬಿಸಿಲಿನ ಬೇಗೆ ಕ್ರಮೇಣ ಕಡಿಮೆಯಾಗತೊಡಗಿತು. ಆಚಾರ್ಯರ ಸಿಟ್ಟೂ ಏರಿ ಏರಿ ಇಳಿಯುವ ಹಂತದಲ್ಲಿದ್ದಾಗಲೇ ಮೊಮ್ಮಕ್ಕಳು ಶಾಲೆಯಿಂದ ಬಂದದ್ದು ಕಂಡ ತಕ್ಷಣ ಅವರು ಒದರಿದರು. 'ಏ ಮಾಧು ಕಿಟ್ಟಿ, ಸಾಲ್ಯಾಗೆ ಅಂಥೋರ ಇಂಥೋರ ಮುಟ್ಟಿದ್ದೀರಿ ಕಾಲು ಕೈ ತೊಳೆದುಕೊಳ್ಳಿ' ಎಂದು ಗೋಪಿ ಅದೇ ತಾನೇ ಹೊರಗಿನಿಂದ ಬರುತ್ತಲೇ “ನೀನು ಸುಮ್ಮನೇ ಇರಬಾದೇನಪ್ಪ” ಎಂದ. ಸಿಟ್ಟು ನೆತ್ತಿಗೇರಿತು ಆಚಾರ್ಯರಿಗೆ ಎಲ್ಲರ ಮೇಲೆ ಹುಟ್ಟಿದ ಕೋಪ ಭಂಡಾರವೆಲ್ಲ ಗೋಪಿಯ ತಲೆಗೆ ಘಟ್ಟಿಸತೊಡಗಿತು. ಮಕ್ಕಳಿಗೆ ಒಂದರೆಡು ಬುದ್ಧಿ ಮಾತು ಹೇಳುವ ಸ್ವಾತಂತ್ರ್ಯವೂ ತಮಗೆ ಇಲ್ಲವೆ? ಎಂದು ಕೆರಳಿದ ಆಚಾರ್ಯರು ಆ ಪ್ರಕರಣ ಅಲ್ಲಿಗೇ ಬಿಟ್ಟು ಬಿಡಲು ತಯಾರಾಗಲಿಲ್ಲ. ಪ್ರತಿನಿತ್ಯ ಪತಿ ಬರುವ ಹೊತ್ತಿಗೇ ಒಂದಲ್ಲ ಒಂದು ರೀತಿ ಹಗರಣ ಹುಟ್ಟುವುದು ತುಳಸಿಗೆ ತಲೆಬೇಸರ ತಂದಿತ್ತು. ಹೇಗಾದರೂ ಅವರನ್ನು ಸಮಾಧಾನಗೊಳಿಸಲೇ ಬೇಕಲ್ಲ ಎಂದು ಯೋಚಿಸತೊಡಗಿದ್ದಳು.

ಶ್ರೀಧರಾಚಾರ್ಯರು ಹಿಡಿದಿದ್ದ ಬೀಸಣಿಗೆಯನ್ನು ಒಂದು ಮೂಲೆಗೆ ಬೀಸಿ ಎಸೆದು ಕೈಲಿ ಹಿಡಿದಿದ್ದ ಒದ್ದೆ ಪಂಚೆಯಿಂದ ತಲೆ ಎದೆ ಒರಸಿಕೊಳ್ಳುತ್ತ, ವಟಗುಟ್ಟುತ್ತ ಶತಪಥ ಹಾಕತೊಡಗಿದರು. ಬೇಕೆಂತಲೇ ಕೆದಕಿ ಜಗಳ ಬೆಳೆಸುವ ಹವಣಿಕೆಯಲ್ಲಿದ್ದರು. ತುಳಸಿ ಒಳಬಾಗಿಲಲ್ಲಿ ನಿಂತು ಬಹು ಮೆಲ್ಲಗೆ ಹೇಳಿದ್ದು ಕೇಳಿಸಿತು. “ಫಲಾಹಾರ ಆಗಿದೆ. ಅಡಿಗೆ ಮನೆಗೆ ಬರೀರಾ” ಎಂದು. ಆಚಾರ್ಯರು ಗೊಂದಲಕ್ಕೆ ಬಿದ್ದರು. ಫಲಹಾರಕ್ಕೆ ಎದ್ದರೆ ಈ ಪ್ರಸಂಗದಲ್ಲಿ ತಮ್ಮ ಸೋಲನ್ನು ಒಪ್ಪಿಕೊಂಡಂತಲ್ಲವೇ? ಆದರೆ ಶಿರಾದ ಸುವಾಸನೆ ಅವರ ಮೂಗಿಗೆ ಬಡಿದಿತ್ತು. ತಿನ್ನುವ ಚಪಲಕ್ಕೆ ಕಡಿವಾಣ ಹಾಕಲು ಅಸಮರ್ಥರಾದ ಆಚಾರ್ಯರು ಮಡಿಯುಟ್ಟುಕೊಂಡು ಮಣೆಮೇಲೆ ಕುಳಿತೇ ಬಿಟ್ಟರು. ಬಾಳಿ ಎಲೆಯಲ್ಲಿ ಮಲ್ಲಿಗೆಯಂತೆ ಅರಳಿ ಹಗುರಾಗಿ ಮಿದುವಾಗಿ ತುಪ್ಪದಲ್ಲಿ ಗದಗದ ಕಂಪಿಸುತ್ತ ಹರಡಿದ್ದ, 'ಶಿರಾ' ಆಚಾರ್ಯರ ಗಂಟಲಲ್ಲಿ ಇಳಿಯತೊಡಗಿದಂತೆ ಸೊಸೆ ಬಗ್ಗೆ ಆಗ ತಾಳಿದ್ದ ಭಾವನೆಗಳೆಲ್ಲ ಮರೆತೇ ಹೋಗಿತ್ತು. ಅದರ ಜೊತೆಗೇ ಪ್ರತಿನಿತ್ಯ ಹೀಗೇ ಯಾಕೆ ಕಾಳಜಿವಹಿಸಬಾರದು ಎಂಬ ಆತಂಕದ ನೋವೂ ಅವರನ್ನಾವರಿಸಿತ್ತು. ಮಗುವಿನ ಮುಗ್ಧತೆಯಿಂದ ಸಂತೃಪ್ತಿಯಿಂದ 'ಶಿರಾ' ತಿನ್ನುತ್ತಿದ್ದ ಮಾವನವರನ್ನು

ಅನುಕಂಪದಿಂದ ನೋಡುತ್ತ ಬಾಗಿಲಲ್ಲಿ ನಿಂತಿದ್ದ ಸೊಸೆಯ ಮನದ ಕೋಲಾಹಲವನ್ನು ಅವರು ಗ್ರಹಿಸಲು ಅಸಮರ್ಥರಾಗಿದ್ದರು.

ಬೇವಿನ ಕಟ್ಟೆಯಲ್ಲಿ ಒರಗಿ ಒಳ ಪಡಸಾಲೆಯ ಕೋಣೆಯಲ್ಲಿದ್ದ ಸೊಸೆಗೂ ಕೇಳಿಸಲಿ ಎಂಬ ಉದ್ದೇಶದಿಂದಲೇ ತಮ್ಮ ಗೆಳೆಯ ವೆಂಕಣ್ಣನಿಗೆ ಆಚಾರ್ಯರು ಗಟ್ಟಿಯಾಗಿ ಹೇಳತೊಡಗಿದ್ದರು. ಸೊಸೆ ಮಕ್ಕಳನ್ನು ಬೈಯುವುದು, ಕ್ಷಣದಲ್ಲೇ ಹೊಗಳುವುದು, ಹೊಗಳಿದ್ದನ್ನು ಮರೆತು ತಕ್ಷಣ ತೆಗಳುವುದು ವೆಂಕಣ್ಣ ಪ್ರತಿನಿತ್ಯ ಕೇಳುವ ನುಡಿಮುತ್ತುಗಳೇ, ಆಚಾರ್ಯರು ಹೇಳಿದ್ದಕ್ಕೆಲ್ಲ 'ಊಹೂಂ ಅಲ್ಲ' ಎಂಬ ಧೈರ್ಯ ವೆಂಕಣ್ಣ ಪಡೆದು ಬಂದಿರಲಿಲ್ಲ. ಇಂದು ಸಹ, ಆಚಾರ್ಯರ ಆಂತರ್ಯ



ಊಹಿಸಿ ವೆಂಕಣ್ಣ, ಆಚಾರ್ಯರು ಹುಬ್ಬಳ್ಳಿಗೆ ಹೋಗುವೆ ಎಂದಾಕ್ಷಣ "ಅಷ್ಟೇ ಮಾಡ್ರಿ, ಅವರ ಕಾಗದದ ದಾರಿ ಯಾಕೆ ನೋಡ್ತೀರಿ" ಎಂದು ಸಲಹೆ ಕೊಟ್ಟರು.

ನಿರ್ಧರಿಸಿದಂತೆ ಶ್ರೀಧರಾಚಾರ್ಯರು ಹುಬ್ಬಳ್ಳಿಗೆ ಹೊರಟು ನಿಂತಾಗ ಯಾರೂ ಬೇಡ ಎನ್ನದಿರುವುದೂ ಅವರಿಗೆ ಸಖೇದಾಶ್ಚರ್ಯಕ್ಕೆ ಕಾರಣವಾಯಿತು. ಕೋಪ.. ದುಃಖವು ಏಕಕಾಲದಲ್ಲಿ ಉದ್ಭವಿಸಿತ್ತು. ತಮ್ಮ ಇರುವಿಕೆಯಿಂದ ಎಲ್ಲರಿಗೂ ಬೇಸರವೇ ಎಂದು ಶಂಕಿಸಿ ಆಚಾರ್ಯರು ಬಳಲಿದರು, ಹುಬ್ಬಳ್ಳಿಯ ಮಗನ ಮನೆಯ ಸುಖದ ಕಲ್ಪನೆಯ ಚಿತ್ರದಿಂದ ಅಲ್ಪ ಸಮಾಧಾನವಾಯಿತವರಿಗೆ ಅಲ್ಲಿ ಗಂಡ... ಗುಂಡಿ ಇಬ್ಬರೇ.. ಏನಾದರೂ ಅಪರೂಪವಾದದ್ದು ಮಾಡಿಸಿ ತಿನ್ನಬಹುದಾ ನೋಡೋಣ... ಅಲ್ಲೇ ಸುಖವಾಗಿದ್ದರೆ.. ಇಲ್ಲಿಗೆ ಬರುವುದೇ ಬೇಡ... ನಾನು ಕಟ್ಟಿಸಿದ ಮನೆ ಎಂಬ ಒಂದೇ ಅಭಿಮಾನಕ್ಕೆ ಬರಬೇಕಷ್ಟೆ ಇಲ್ಲಿದ್ದರೆ ಈ ಜಂಜಾಟ ಯಾರಿಗೆ ಬೇಕು?.

ಹುಬ್ಬಳ್ಳಿಗೆ ಬಂದಾಗ ಆಚಾರ್ಯರಿಗೆ ಎಣಿಸಿದ್ದಕ್ಕಿಂತಲೂ ಹೆಚ್ಚಿನ ಸ್ವಾಗತ ಸಂಭ್ರಮ ಸಿಕ್ಕಿತು. ಮನೆ ಅಚ್ಚುಕಟ್ಟಾಗಿ ಶಾಂತವಾಗಿತ್ತು. ತಂದೆಗೆ ಸ್ವಲ್ಪವೂ ಅನಾನುಕೂಲವಾಗದಂತೆ ಶ್ರೀಕಾಂತ ಕಾಳಜಿವಹಿಸಿ ಮಡಿ ಅಡಿಗೆಗಾಗಿ ಉಡುಪಿ ಕಡೆಯ ನಾರಾಯಣ ಎಂಬುವನನ್ನು ನೇಮಿಸಿದ, ದೇವರಪೂಜಾ ಸಾಮಗ್ರಿ, ಕೃಷ್ಣಾಂಜನ ಪೆಟ್ಟಿಗೆ ಮುದ್ರೆ, ಅಕ್ಷತಿ ಉಂಡಿ ಸಾಣಿಕಲ್ಲು ಎಲ್ಲವನ್ನು ಶ್ರೀಕಾಂತ ತಂದಿಟ್ಟಿರುವುದು ಕಂಡು ಅಚಾರ್ಯರು ಉಬ್ಬಿ ಹೋದರು, ಅವೆಲ್ಲ ಅಲ್ಲಿ ಇರಲಿಕ್ಕಿಲ್ಲವೆಂದು ಆಚಾರ್ಯರು ತಮ್ಮ ಜೊತೆಗೆ ಒಯ್ದಿದ್ದರು. ಮಗ ತಮಗಾಗಿ ಮಾಡಿರುವ ವ್ಯವಸ್ಥೆ, ಸೊಸೆ ಶಾಲಿನಿಯ ವಿನಯ ನೋಡಿ ಆಚಾರ್ಯರು ಎಂಟು ದಿವಸ ಹಾಯಾಗಿ ಕಳೆದರು. ಎಂಟೇ ದಿವಸ ಅವರು ಸಮಾಧಾನ ಶಾಂತವಾಗಿದುದ್ದು.. ನಂತರ ಪ್ರಾರಂಭವಾಯಿತು ಅವರ ಬಿಡಿಸಲಾಗದ

ಸಮಸ್ಯೆಗಳು, 'ಮಾವನವರು ಎಷ್ಟು ಒಳ್ಳೆಯವರು' ಎಂದು ಶಾಲಿನಿ ಹಿಗ್ಗುವಷ್ಟರಲ್ಲೇ ಅವರ ಅಸಲುರೂಪ ಕಾಣುವ ಪ್ರಸಂಗ ಬಂದೇ ಬಿಟ್ಟಿತು.

ಶಾಲಿನಿ, ಶ್ರೀಕಾಂತ ಬೆಳಿಗ್ಗೆ ಎಂಟು ಗಂಟೆಗೆ ಆಸ್ಪತ್ರೆಗೆ ಹೋದರೆ ಒಂದು ಗಂಟೆಗೋ ಎರಡು ಗಂಟೆಗೋ ಮರಳುತ್ತಿದ್ದದ್ದು. ಅನಂತರ ಊಟ. ಅಲ್ಪ ವಿರಾಮ, ನಾಲ್ಕು ಗಂಟೆಗೆ ಪುನಃ ಹೋಗಿ ಬಿಡುತ್ತಿದ್ದರು.. ಮತ್ತೆ ಬರುವುದು ರಾತ್ರಿ ಎಂಟು ಅಥವಾ ಒಂಭತ್ತಕ್ಕೇ, ಪೂರಾ ಮನೆ ತಮಗೇ ಒಪ್ಪಿಸಿದಂತೆ ಇರುತ್ತಿತ್ತು. ಮೊದಲೆರಡು ದಿವಸ ಆಚಾರ್ಯರಿಗೆ ಹಿಗ್ಗೇ ಎನಿಸಿತು. ಆದರೆ ನಾಲ್ಕೈದು ದಿನಗಳ ನಂತರ ಆಚಾರ್ಯರ ಅಸಮಾಧಾನ ಪರಮಾವಧಿಗೆ ತಲುಪಿತ್ತು. ಆ ಸುಟ್ಟ ಅಡಿಗೆಯವನು ಬಡಿಸೋದು ಉಂಡು ಮನೆ ಕಾಯುತ್ತ ಬಿದ್ದಿರಲು ನಾನೇನು ಇವರ ಮನೆಯ ನಾಯಿಯೇ? ತಮ್ಮ ಮೋಜು ತಮಗೆ!! ನನ್ನ ಕೇಳುವವರೇ ಇಲ್ಲ ಆಚಾರ್ಯರು ಗೊಣಗಿಕೊಂಡರು.

ಶಾಲಿನಿ ಒಮ್ಮೆ ಮಧ್ಯಾಹ್ನ ರೆಫ್ರಿಜರೇಟರ್‌ನಲ್ಲಿಟ್ಟ ಜ್ಯೂಸ್ ತೆಗೆದು ಶರಬತ್ ಮಾಡಿ ಕೊಟ್ಟಾಗ ಆಚಾರ್ಯರು ತಮ್ಮ ಮಡಿ ಆಚಾರ-ವಿಚಾರ ಬದಿಗೊತ್ತಿ 'ಕುಡಿದುಬಿಟ್ಟರು, ಆದರಂತೆ ತಾವು ಮರುಳುವುದು ತಡವಾದಲ್ಲಿ ತೆಗೆದುಕೊಳ್ಳಬೇಕೆಂದು ಶಾಲಿನಿ ತೋರಿಸಿ ಹೋಗಿದ್ದಳು.



ಆದರೆ ಅಂದು ಬರುವಷ್ಟರಲ್ಲಿ ಮಾವನವರು ಉಗ್ರ ನರಸಿಂಹ ಅವತಾರ ತಾಳಿದ ಹಿನ್ನೆಲೆ ಅವಳಿಗೆ ಅರ್ಥವಾಗಲಿಲ್ಲ. ನಿರರ್ಗಳವಾಗಿ ಬಯ್ಗುಳು ಹೊರಬಿದ್ದವು "ಅಬ್ರಾಹ್ಮಣ್ಯ ಮನೆ ಆಗಿದೆ... ಕ್ರಿಶ್ಚಿಯನ್, ಮುಸಲ್ಮಾನರ ಮನೆ ಮಾಡೀರಿ... ಅದರಲ್ಲಿ ಜ್ಯೂಸ್ ತೆಗೆದುಕೊಳ್ಳಲು ಹೋದ್ರೆ ಸಾಲಾಗಿ ಕೋಳಿಮೊಟ್ಟೆ ತುಂಬಿವೆ. ಏನು ಅನ್ಯಾಯ ಏನು ಅನ್ಯಾಯ!! ನನ್ನ ಕಣ್ಣೆದುರಿಗೇ ಈ ಹೊಲಸು ನೋಡಲಾರೆ.. ನಾನು ಇವತ್ತೇ ಹೊರಟು ಹೋಗ್ತಿನಿ" .

ಶ್ರೀಕಾಂತ ವಾದಿಸಿದ "ನೀನು ತಿನ್ನುವುದಿಲ್ಲ ಬಿಟ್ಟಬಿಡು... ಆದರೆ ತಿನ್ನುವವರಿಗೆ ನಿನ್ನ ಅಭ್ಯಂತರವೇಕೆ?"

"ಬಾಯಿಮುಚ್ಚು" ಆಚಾರ್ಯರು ಗುಡುಗಿದರು, ಶಾಲಿನಿ ನಡುಗಿದಳು. ಆಚಾರ್ಯರು ಆ ಮೊಟ್ಟೆಗಳನ್ನೆಲ್ಲ ಬೀದಿಗೆ ಎಸೆದಾಗ ಶ್ರೀಕಾಂತ ತನ್ನ ಕೋಪ ತಡೆದುಕೊಳ್ಳಲು ಪ್ರಯತ್ನಿಸಿದ.

ಆಚಾರ್ಯರು ಮೆಲ್ಲಗೆ ಶಾಲಿನಿಯ ಬಗ್ಗೆ ತಮ್ಮ ಪ್ರತಿಕ್ರಿಯೆ ಹೊರಪಡಿಸುತ್ತ ಕೈಯಲ್ಲಿ ಬಳೆ ಹಾಕಿಕೊಳ್ಳಲೇಬೇಕು. ಗೌರಿಪೂಜೆ, ತುಳಸೀಪೂಜೆ ಯಾಕೆ ಮಾಡಲಿಲ್ಲ? ದೇವರ ಮನೆಯಲ್ಲಿ ನಂದಾದೀಪ

ಹಚ್ಚಬಾರದೆ? ಎಂದೆಲ್ಲ ಹೇಳಿದಾಗ ಶಾಲಿನಿ ತುಟಿ ಪಿಟಕ್ಕೆನ್ನದೇ... ತನ್ನ ತಪ್ಪು ಎಲ್ಲ ಒಪ್ಪಿಕೊಂಡು ಮತ್ತೊಮ್ಮೆ ಅಂತಹ ತಪ್ಪು ಮಾಡುವುದಿಲ್ಲ ಎಂದು ಕೇಳಿಕೊಂಡ ಅನಂತರವೇ ಆಚಾರ್ಯರು ಊಟಕ್ಕೆ ಎದ್ದದ್ದು. ಕೈತೊಳೆದು ಹೊರ ಬರುತ್ತಿದ್ದಂತೆ.... ಶ್ರೀಕಾಂತ ಶಾಲಿನಿಗೇ ಗದುರಿಸುತ್ತಿದುದ್ದು... "ನೋಡ್ತಿದ್ದೆ ಅಪ್ಪ ಇವತ್ತೊಂದು ದಿವಸ ಉಪವಾಸ ಇರಿದ್ದನೇ ಅಂತ... ಎಲ್ಲದಕ್ಕೂ ಎಲ್ಲರೂ ಜೀ, ಜೀ, ಎನ್ನುವುದರಿಂದಲೇ ಅಪ್ಪನಿಗೆ ತನ್ನ ತಪ್ಪಿನ ಅರಿವೇ ಹುಟ್ಟುವುದಿಲ್ಲ. ಬರೀ ಇತರರಿಗೆ ಉಪದೇಶ ಮಾಡಲಿಕ್ಕಾಗಿಯೇ ತನ್ನ ಅವಿರ್ಭಾವ ಎಂದು ಅಪ್ಪ ಭಾವಿಸಿಬಿಟ್ಟಿದ್ದಾನೆ." ಎಂದು ಗೊಣಗಿದ್ದು ಕಿವಿಗೆ ಬಿದ್ದು ಆಚಾರ್ಯರಿಗೆ ಸಂಕಟವೆನಿಸಿತು. ತಾವು ಏನು ತಪ್ಪು ಮಾಡಿದ್ದು? ಸೊಸೆ ಯೋಗ್ಯ ಗೃಹಿಣಿ ಆಗಲಿ ಎಂದೇ ಅಲ್ಲವೇ ನಾಲ್ಕು ಮಾತು ಹೇಳಿದ್ದು... ಓಹೋಹೋ! ಇವನೊಬ್ಬ ದೊಡ್ಡ ಡಾಕ್ಟರ್ ತಂದೆಗೆ ಕಿಮ್ಮತ್ತೇ ಬೇಡವೇ.... ಸೊಸೆಗೆ ಹೇಳುವಷ್ಟೂ ಅಧಿಕಾರ ನನಗಿಲ್ಲವೇ.... ಶ್ರೀಕಾಂತನಿಗೆ ಇನ್ನೂ ತಿಳಿಯದೆ... ಹೆಂಡ್ತಿನ್ನ ತಲೆ ಮೇಲೆ ಕೂಡಿಸಿಕೊಂಡು ಬಿಡುತ್ತಾನೆ. ಭಾಗು ಇದ್ದಾಗ ತಾವು ಇಷ್ಟು ಸಲಿಗೆ ಎಂದಾದರೂ ಕೊಟ್ಟಿದ್ದರೆ? ಛೇ ... ಛೇ...

ಎರಡು ತಿಂಗಳು ಕಳೆಯುವಷ್ಟರಲ್ಲಿ ಆಚಾರ್ಯರಿಗೆ ಆ ವಾತಾವರಣ, ಆ ಮನೆ, ಊರು ಎಲ್ಲ ಬೇಸರದ ನರಕ ಎನಿಸಿಬಿಟ್ಟಿತು. ಆಚಾರ್ಯರು ಮನದಲ್ಲೇ ಮಿಡುಕತೊಡಗಿದರು. ಮಗನೂ ಡಾಕ್ಟರ್, ಸೊಸೆನೂ ಡಾಕ್ಟರೂ....ಮುಪ್ಪು ಇಲ್ಲೇ ಕಳೆದರಾಯ್ತು ಎಂದು ನಾನು ಇಲ್ಲಿಗೆ ಬಂದೆ ಈ ಎರಡು ತಿಂಗಳಲ್ಲಿ ಸುಮ್ಮನೇ ಅಂತ ಆದ್ರೂ ಆಗಲಿ, ಒಂದಾದರೂ ಇಂಜೆಕ್ಷನ್ ಕೊಟ್ಟಿದ್ದಾರಾ? ಹೋಗ್ಲಿ, ಏನಾದರೂ ಟಾನಿಕ್? ಬರೀ ಹೊಟ್ಟೆಗೆ ಇಷ್ಟು ಹಾಕಿದ್ರೆ ಗೆದ್ದೋಯ್ತು ಅಂದುಕೊಂಡು ಬಿಟ್ಟಿದ್ದಾರೆ. ಸಣ್ಣ ಅಕ್ಕಿ ಅನ್ನ ಬೆಣ್ಣೆ ಕಾಸಿದ ತುಪ್ಪ ಬಿಟ್ಟು ಇಲ್ಲಿಗೆ ಬಂದಿದ್ದೆ ತಪ್ಪು. ಸದಾ ಇವರಿಗೆ ಸಿನಿಮಾ, ನಾಟಕ, ಕಬ್ಬು ಒಂದು ದಿನನಾದ್ರೂ ಉಪಚಾರಕ್ಕೆ ಅವ ಆದ್ರೂ, 'ಅಪ್ಪಾ'

"ನೀನೂ ಬಾ' ಅಂತ ಕರೀತಾರೇನು? ಇಲ್ಲಿಗಿಂತ ಅಲ್ಲಿಯೇ ಪರವಾಯಿಲ್ಲ ಪುರಾಣಕ್ಕಾದರೂ ಹೋಗಿದ್ದೆ... ವೆಂಕಣ್ಣ ನಿತ್ಯ ಬರಿದ್ದ... ಗೋಪಿ ನಿತ್ಯ ಹಾಸಿಗೆ ಹಾಸಿ ಕಾಲು ಒತ್ತುತ್ತಿದ್ದ. ಮಾಧು, ಕಿಟ್ಟು ಕಥೆ ಹೇಳು ಅಂತ ದುಂಬಾಲು ಬೀಳುತ್ತಿದ್ದುವು. ಹೊತ್ತು ಎಷ್ಟು ಸರನೇ ಕಳೆದ್ಹೋಗುತ್ತಿತ್ತು. ಏನೋ ಪಾಪ... ತುಳಸಳ ಆರೋಗ್ಯ ಏನಾಗಿತ್ತೋ ಏನೋ ಹೊತ್ತಾಗಿ ಏಳುತ್ತಿದ್ದಳು ಈ ಹೆಣ್ಣು ಮಕ್ಕಳ ಜಡ್ಡು ನಮಗೇಗೆ ತಿಳಿದೀತು.? ಇದಕ್ಕಿದ್ದಂತೆ ಅವರಿಗೆ ಆ ಸೊಸೆಯ ಮೇಲೆ ಅಭಿಮಾನ ಉಕ್ಕಿ ಹರಿಯತೊಡಗಿತು. ತಕ್ಷಣ ಅಲ್ಲಿಂದ ಹೊರಡುವ ನಿರ್ಧಾರ ಮಾಡಿಕೊಂಡು ಕೃಷ್ಣಾಂಜನ ಪೆಟ್ಟಿಗೆ ಕಟ್ಟಲು ಉದ್ಯುಕ್ತರಾದರು.

ಹೊರಟು ನಿಂತವರಿಗೆ ಉಪಚಾರಕ್ಕಾದರೂ "ಇನ್ನು ನಾಲ್ಕು ದಿವಸ ಇರಪ್ಪ ಎಂದು ಮಗ ಹೇಳಬಹುದು ಎಂದುಕೊಂಡಿದ್ದ ಆಚಾರ್ಯರಿಗೆ ನಿರಾಶೆಯೇ ಆಯ್ತು. ಮಗನ ಪ್ರತಿಕ್ರಿಯೆ ಏನೆಂದು ತಿಳಿಯಲು ಆತುರರಾಗಿ ಮಗ.. ಸೊಸೆಯ ಸಂಭಾಷಣೆ ಆಲಿಸತೊಡಗಿದ ಆಚಾರ್ಯರಿಗೆ ಆಘಾತವೇ ಕಾದಿತ್ತು, 'ಮಾವನವರು ಹೊರಟು ಬಿಡುವರಂತೆ' ಎಂದು ವ್ಯಥೆ ತುಂಬಿದ ಧ್ವನಿಯಿಂದ ಶಾಲಿನಿ ಹೇಳಿದ್ದಕ್ಕೆ ಶ್ರೀಕಾಂತನ ಪರಿಹಾಸ್ಯದ ಮರುತ್ತರ ಕೇಳಿಸಿತು' "ಹೋದರೆ ಹೋಗ್ಲಿ ಬಿಡು.. ನೀನ್ಯಾಕೆ ಕೊರಗಿ ಆತ ಸುಖವಾಗಿರಲಿ ಅಂತ ನಾವು ಎಷ್ಟು ಒದ್ದಾಡಿದರೂ ಆತನಿಗೆ ತೃಪ್ತಿ ಎಲ್ಲಿದೆ? ಸಮಾಧಾನ ಎಲ್ಲಿದೆ? ತನ್ನ ತಲೆಯಲ್ಲಿ ಬಂದದ್ದೇ ನಡೆಸ್ತಾನೆ... ಇಲ್ಲಿ ಏನು ಕೊರತೆಯಾಗಿತ್ತು? ಹಾಲು, ಹಣ್ಣು ತರಕಾರಿ! ಆದ್ರೂ ಸಹ ಹೋಗ್ತಿನಿ ಅಂದ್ರೆ? ಹೋಗ್ಲಿ! ಇನ್ನು ಅಲ್ಲಿ ಆದ್ರೂ ಅಣ್ಣ ಎಷ್ಟು ಹೆದರಿ ಹೆದರಿ 'ಜೀ ಜೀ' ಅಂತಿರುತ್ತಾನೆ... ಮಕ್ಕಳ ಮನೆ ಆದ್ರೂ ಅತ್ತಿಗೆ ಎಷ್ಟು ಕಳಕಳಿಯಿಂದ ಒಂದು ಮಗುವಿನಂತೆ ಸಾಕ್ತಾರೆ ಆದ್ರೂ ಅಲ್ಲಿಯಾದ್ರೂ ಅರಾಂ ಇದ್ದಾರೇನು? ಸ್ವರ್ಗ ಸುಖ ಹುಟ್ಟಿಸಿಕೊಟ್ರ ತೃಪ್ತಿ ನೆಮ್ಮದಿ ತಂದುಕೊಳ್ಳದೇ ಇದು ನರಕ ಅಂತಾನೇ ಗೋಳಾಡುತ್ತಿರುತ್ತಾನೆ." ಮುಂದೆ ಆಲಿಸಿ ಕೇಳುವಷ್ಟು ತಾಳ್ಮೆ ಆಚಾರ್ಯರಲ್ಲಿ ಉಳಿಯಲಿಲ್ಲ. ಮುಖ ಸಿಂಡರಿಸಿ ಶಪಥ ಮಾಡಿಕಂಡರು.. ಇನ್ನೊಮ್ಮೆ ಈ ಶತಮೂರ್ಖನ ಮನೆಗೆ ಕಾಲು ಹಾಕಿದರೆ ಆಣೆ" !

ಹಿರಿ ಮಗನ ಕಾಗದದಿಂದ ತುಳಸಿ ಏಳು ತಿಂಗಳ ಗರ್ಭಿಣಿಯೆಂದು ತಿಳಿಯಿತು. ಹುಬ್ಬಳ್ಳಿಯಿಂದ ಹೊರಡಬೇಕೆನ್ನುವಷ್ಟರಲ್ಲಿ ಆ ಕಾಗದದ ಒಕ್ಕಣೆಯಿಂದ ಆಚಾರ್ಯರು ಧರೆಗಿಳಿದೇ ಹೋದರು. ಹೊಸದೊಂದು ಸಮಸ್ಯೆ ಮುಂದೆ ನಿಂತಿತ್ತು. ಏಳು ತಿಂಗಳಾದ ಮೇಲೆ ಮಡಿಯುಟ್ಟು ಅಡಿಗೆ ಮಾಡಿದರೂ ಅದು ಮೈಲಿಗೆ ಆಚಾರ್ಯರು ವಿಲಿ ವಿಲಿ ಒದ್ದಾಡತೊಡಗಿದರು. ಹುಬ್ಬಳ್ಳಿಯಲ್ಲಿ ನಿಂತಿರುವುದೂ ಮುಳ್ಳಿನ ಮೇಲೇ ನಿಂತ ಹಾಗೆ ಆಗಿತ್ತು. ಯಾವಾಗ ಇಲ್ಲಿಂದ ಹೊರಡಲಿ? ಎಂದು ಎದುರು ನೋಡುತ್ತಿದ್ದ ಆಚಾರ್ಯರಿಗೆ ದಿಕ್ಕೇ ತೋಚದಂತಾಯಿತು. ಕ್ಷಣಕ್ಕೊಮ್ಮೆ ತಾವು 'ಪರದೇಶಿ' 'ಪರದೇಶಿ' ಎನಿಸತೊಡಗಿತ್ತು. ತಮ್ಮ ಶರೀರದ ಅಂಗಾಂಗಳನ್ನೇ ಯಾರೋ ಕಿತ್ತೆಸೆಯುತ್ತಿರುವರೆಂಬಷ್ಟು ನೋವು ಅವರಲ್ಲಿ ಉಂಟಾಯಿತು.

ಸ್ಪೆಷಲ್ ರೈಲ್ವೆ ಗಾಡಿಯಿಂದ ಕೆಲವರು ಕಾಶಿ, ಮಥುರಾ, ಗಯಾ ಮುಂತಾದ ಪವಿತ್ರ ಕ್ಷೇತ್ರಗಳಿಗೆ ಯಾತ್ರೆ ಕೈಗೊಂಡ ವರದಿ ಕೇಳಿ ಆಚಾರ್ಯರು ತಾವೂ ಯಾಕೆ ಆ



ಗುಂಪಿನಲ್ಲಿ ಹೋಗಬಾರದು ಎಂದು ಯೋಚಿಸಿದರು. ಇದುವರೆಗೂ ಯಾತ್ರೆಗಳ ಬಗ್ಗೆ ಯೋಚಿಸಿಯೇ ಇರಲಿಲ್ಲ. ಈ ವಾತಾವರಣದಿಂದ ದೂರವಿರಲು ಇದೊಂದು ಸುಯೋಗ್ಯ ಅವಕಾಶವೆಂದು ನಿರ್ಧರಿಸಿ ದಿಟ್ಟ ಹೆಜ್ಜೆ ಇಡಲು ಸಂಕಲ್ಪಿಸಿದರು. ಇನ್ನು ಅವರಿಗೆ ಪ್ರಶ್ನೆಯಾಗಿ ಉಳಿದಿದ್ದು... ಊಟ, ಆಹಾರ?

ತಮ್ಮ ನಿರ್ಣಯವನ್ನು ಶ್ರೀಕಾಂತನಿಗೆ ತಿಳಿಸಿದಾಗ ಆ ವಿವಿಧ ಕಡೆಯ ಯಾತ್ರಾರ್ಥಿಗಳೊಡನೆ ಇವರಿಗೆ ಹೊಂದಿಕೊಳ್ಳಲಿಕ್ಕಾಗಲಿಕ್ಕಿಲ್ಲ ಈ ಇಳಿ ವಯಸ್ಸಿನಲ್ಲಿ ಇಷ್ಟು ದೀರ್ಘ... ಪ್ರವಾಸದ ಆಯಾಸ ತಡೆದುಕೊಳ್ಳಲಾಗಲಿಕ್ಕಿಲ್ಲ ಎಂದೆಲ್ಲ ಯೋಚಿಸಿ 'ಬೇಡ' ಎಂದಾಗ ಆಚಾರ್ಯರಿಗೆ ಒಂದು ತರಹದ ಹಟವೇ ಹುಟ್ಟಿಬಿಟ್ಟಿತು. ನಾನೇನೂ ಈ ಮಕ್ಕಳ ಕೈಗೊಂಬೆಯೇ? ಅವರು ಹೇಳಿದ್ದೇ ನಡೆಯಬೇಕೆ? ಬಹುಶಃ ಹಣ ಕೊಡಬೇಕಾಗುತ್ತದೆಂದು ನನ್ನ ಆರೋಗ್ಯದ ನೆಪ ಹೂಡಿದ್ದಾರೆ. ಎಂದು ರೇಗಾಡತೊಡಗಿದರು.

ಹದಿನೈದು ದಿವಸಗಳ ಮೊದಲೇ ಟಿಕೆಟ್ ರಿಜರ್ವ ಮಾಡಿಸಲಾಯಿತು. ಯಾತ್ರಾ ಸ್ಪೆಷಲ್ ಗಾಡಿ ಮೊದಲು ಹುಬ್ಬಳ್ಳಿಯಿಂದಲೇ ಹೊರಡಲಿದ್ದುದರಿಂದ ಶ್ರೀನಾಥ, ತುಳಸಿ, ಗೋಪಿ, ಮಕ್ಕಳು ಎಲ್ಲರೂ ಆಚಾರ್ಯರನ್ನು ಬೀಳ್ಕೊಡಲು ಹೊರಟು ಬಂದಿದ್ದರು. ಸುರಕ್ಷಿತವಾಗಿ ಮರಳಲಿ ಎಂದು ಹಾರೈಸಿ ಶ್ರೀ ಸತ್ಯನಾರಾಯಣ ವ್ರತ ಆಚರಿಸಿ ಬಂಧು ಬಾಂಧವರೂ, ಆಚಾರ್ಯರ ಮಿತ್ರವೃಂದ ಎಲ್ಲರೂ ಸ್ಟೇಷನ್‌ಗೆ ಅವರನ್ನು ಕಳಿಸಲು ಬಂದಿದ್ದರೂ, ಡ್ರೈ... ಪ್ರೋಟ್ಸ್‌ಗಳ ಡಬ್ಬಗಳು, ಉತ್ತತ್ತಿ, ಬಾದಾಮಿ, ಕಲ್ಲುಸಕ್ಕರೆ, ಕಾಸಿದ ತುಪ್ಪ, ಅವಲಕ್ಕಿ, ಅರಳಿಟ್ಟು, ಉಂಡಿ, ಫಲಹಾರಗಳು ಎಲ್ಲ ಆಚಾರ್ಯರ ಪೆಟ್ಟಿಗೆಯಲ್ಲಿ ಭದ್ರವಾಗಿ ಸೇರಿದುವು. ಚಳಿಯಾದೀತೆಂದು ರಗ್ಗು, ಸ್ವೆಟರ್, ಮಪ್ಲರ್, ಎಲ್ಲ ಶ್ರೀಕಾಂತ... ಶ್ರೀನಾಥ ತಂದು ಕೊಟ್ಟಿದ್ದರು. ಜೊತೆಗೆ ಸಮಯಕ್ಕಾಗುತ್ತದೆಂದು ಶ್ರೀಕಾಂತ ಕೆಲವು ಔಷಧಿಗಳನ್ನು ಕೊಟ್ಟು ತೆಗೆದುಕೊಳ್ಳುವ ವಿಧಾನ ವಿವರಿಸಿದ್ದ. ಗಾಡಿ ಕದಲುವವರೆಗೆ ತುಳಸಿ, ಶಾಲಿನಿ ಮಾವನವರಿಗೆ ಜಾಗೃತೆ ಇರಲು ಆರೋಗ್ಯದ ಬಗ್ಗೆ ಕಾಳಜಿ ಇರಲಿ ಎಂದೂ, ಆಗಾಗ ಕಾಗದ ಬರೆಯಿರಿ ಎಂದೂ ವಿನಂತಿಸಿಕೊಂಡರು. ಆಚಾರ್ಯರ ಮನದಲ್ಲಿ ಕೋಲಾಹಲವೇ ನಡೆದಿತ್ತು. ದೂರದ ಊರಿಗೆ ಹೋಗುತ್ತಿರುವೆ.. ಆದ್ದರಿಂದ ಇವರಿಗೆಲ್ಲ ಸಂತೋಷವೇ ಆಗಿದೆ. ಆದರ ವಿನಯ ತೋರಿಸುತ್ತಿದ್ದಾರೆ, ಎಂದು ಮಿಡುಕಿ ಉಕ್ಕುವ ಉರಿಮೋರೆಯಿಂದಲೇ ಗಾಡಿಯಲ್ಲಿ ಕುಳಿತಿದ್ದರು. ಮಕ್ಕಳು ಮೊಮ್ಮಕ್ಕಳೆಲ್ಲರೂ ಕಾಲಿಗೆ ಎರಗಿ ನಮಸ್ಕಾರ ಮಾಡುತ್ತಿದ್ದರೂ ಅವರ ಕಡೆಗೆ ಲಕ್ಷವೇ ಇರಲಿಲ್ಲ. ಶ್ರೀನಾಥ ಶ್ರೀಕಾಂತ ತಂದೆಗೆ ವಂದಿಸಿ ಹಣ ಬೇಕೆನಿಸಿದಾಗ

ಕಾಗದ ಬರೆದುಬಿಡಿ ಎಂದೂ, ಪ್ರಯಾಣ ಸಾಕೆನಿಸಿದಾಗ ಯಾತ್ರಾ ಸ್ಪೆಷಲ್ ಕಾರ್ಯಕ್ರಮದಂತೆ ನಡೆದುಕೊಳ್ಳಲು ಅಸಾಧ್ಯವೆನಿಸಿದರೆ, ತಿಳಿಸಿದರೆ ತಕ್ಷಣ ತಾವು ಬಂದು ಕರೆದೊಯ್ಯುವುದಾಗಿ ಹೇಳಿದಾಗಲೂ ಆಚಾರ್ಯರ ಮುಖದಲ್ಲಿ ಸಮಾಧಾನ ಸುಳಿಯಲಿಲ್ಲ. ಬಿಗುಮಾನ, ಬಿಂಕದಿಂದ ಸೆಟೆದು ಕುಳಿತಿದ್ದರು.

ಯಾತ್ರೆಯ ಗಾಡಿ ಸಾಗಿತ್ತು. ಆಚಾರ್ಯರು ಕಷ್ಟಪಟ್ಟು ಆ ವಾತಾವರಣಕ್ಕೆ ಹೊಂದಿಕೊಳ್ಳತೊಡಗಿದರು. ಅವರಿಗಾಗಿ ಯಾವುದಕ್ಕೂ ಕೊರತೆಯಾಗದಂತೆ ಸ್ಪೆಷಲ್



ಏರ್ಪಾಡಾಗಿತ್ತು. ಹಣ್ಣು ಹಂಪಲಿಗಂತೂ ಬರಗಾಲವಿರಲಿಲ್ಲ. ಕೈತುಂಬ ಹಣ ನಾಲಿಗೆ ತುಂಬ ತಿನ್ನುವ ಚಪಲ, ಊರುಬಿಟ್ಟು ತಿಂಗಳು ಸರಿದಿತ್ತು ಇಷ್ಟು ದಿನಗಳಲ್ಲಿ ಆಚಾರ್ಯರು ಒಮ್ಮೆಯೂ ಇತರ ಯಾತ್ರಿಕರ ಸ್ನೇಹ ಬೆಳೆಸಿರಲಿಲ್ಲ, ಅವರ ಹರಟೆ ವಿನೋದದಲ್ಲಿ ಭಾಗವಹಿಸುತ್ತಿರಲಿಲ್ಲ, ಸದಾ ತಮ್ಮ ಶ್ರೀಮಂತಿಕೆಯ ಪ್ರದರ್ಶನ, ಗಂಭೀರತೆಯಲ್ಲಿಯೇ ಇರುತ್ತಿದ್ದರು.

ಇತರ ಯಾತ್ರಿಕರು ಈ ಯಾತ್ರೆಯ ಅವಕಾಶವನ್ನು ಜೀವನದ ಮೋಜನ್ನಾಗಿ ಮಾಡಿಕೊಂಡಿದ್ದರು. ಪರಸ್ಪರರು ತಮ್ಮ ಮಕ್ಕಳು... ಸೊಸೆ... ತಮ್ಮ ಮೊಮ್ಮಕ್ಕಳು ತಮ್ಮ ಊರುಗಳ ಮಾಹಿತಿಯನ್ನು ಮಾಡಿಕೊಳ್ಳುತ್ತಿದ್ದರು. ಎಷ್ಟೋ ದಿನಗಳ ಪರಿಚಯವಿರಬಹುದೆಂಬಷ್ಟು ಪರಸ್ಪರರು ಆತ್ಮೀಯರಾಗಿದ್ದರು.. ಯಾತ್ರಿಕರಲ್ಲೇ ಹೆಚ್ಚು ವಯಸ್ಕರಾಗಿದ್ದ ನಾಗೇಶರಾಯರು ರಸಿಕ. ಹಾಸ್ಯ ಚಟಾಕಿ ಹಾರಿಸುತ್ತ ಮಾತನಾಡದಿರುವವರನ್ನೂ ಎಳೆದು ಹರಟೆಗೆ ಆಹ್ವಾನವಿಯುತ್ತಿರುವುದು ಅವರಿಗೆ ವಿಚಿತ್ರವೆನಿಸಿತ್ತು. ರಾಯರ ಸುದ್ದಿ ಹರಟೆಗೆ ಬೆಲ್ಲಕ್ಕೆ ಇರುವೆ ಮುತ್ತಿದಂತೆ ಇತರರು ಬಂದು ಸೇರುತ್ತಿದ್ದರೂ ಆಚಾರ್ಯರು ಮಾತ್ರ ತಮ್ಮ ಸ್ಥಳ ಬಿಟ್ಟು ಕದಲದೆ ಕುಳಿತಲ್ಲಿಂದಲೇ ದ್ರಾಕ್ಷಿ, ಕಲ್ಲು ಸಕ್ಕರೆ ಸಳಕುಬಾಯಿಗೆ ಹಾಕಿಕೊಳ್ಳುತ್ತ ಅವರ ಹರಟೆಗೆ ಕಿವಿಗೊಡುತ್ತ ಎಲ್ಲರನ್ನೂ ಸೂಕ್ಷ್ಮ ವಾಗಿ ಪರೀಕ್ಷಿಸುತ್ತಿದ್ದರು.

ತಮ್ಮ ಊರು, ತಮ್ಮ ಗದ್ದೆ, ತಮ್ಮ ಮನೆ, ತಮ್ಮವರ ಸಹವಾಸದಲ್ಲೇ ತಾವು ಕೂಪ ಮಂಡೂಕದಂತೆ ಇರುವುದು ಈಗ ಆಚಾರ್ಯರ ಗಮನಕ್ಕೆ ಬರತೊಡಗಿತ್ತು, ಇತರರ ಜೀವನಕ್ರಮ ಸ್ವಭಾವ ತಿಳಿದುಕೊಳ್ಳುವ ಅವಕಾಶವೇ ಅವರಿಗೆ ಒದಗಿರಲಿಲ್ಲ. ಈ ಕಾಶೀಯಾತ್ರೆಯ ಪ್ರಸಂಗದಿಂದ ಆಚಾರ್ಯರು ಅದೇ ತಾನೇ ಹುಟ್ಟಿದ ಶಿಶು ಕಣ್ಣು ತೆರೆದು ಸುತ್ತಮುತ್ತಲಿನ ಜಗತ್ತನ್ನು ಅರಿತುಕೊಳ್ಳುವಂತೇ ಆಗಿದ್ದರು. ಇಳಿ ವಯಸ್ಸಿನ ನಾಗೇಶರಾಯರ ಜಿಗಿದಾಟ, ಕುಣಿದಾಟ ನಗು, ಹರಟೆ ಎಲ್ಲ ಕಣ್ಣು ಕಣ್ಣು ಬಿಟ್ಟು ಕಂಡುಕೊಂಡ ಆಚಾರ್ಯರಿಗೆ ತಮ್ಮ ಬಗ್ಗೆ ಒಂದು ತರಹದ ಬೇಸರ ಎನಿಸಿತು. ಈ ಮುದುಕನಿಗೆ ಬಯಸಿದ್ದೆಲ್ಲ ಸಿಕ್ಕಿರಬಹುದು. ಅದಕ್ಕೆ ಇಷ್ಟು ನಿಶ್ಚಿಂತೆಯಾಗಿ ಹಾರಾಡುತ್ತಾನೆ. ಎಂದುಕೊಂಡರಾದರೂ ತಾವಾಗಿ ಅವರ ಸ್ನೇಹ ಮಾಡಲಿಲ್ಲ!

ಅವಲಕ್ಕಿ ಕುಟ್ಟಿ ಕುಟ್ಟಿ ಕೂಡಿಟ್ಟ ಹಣದಿಂದ ಯಾತ್ರೆಗೆ ಬಂದಿದ್ದ ವೆಂಕಮ್ಮ, ಮಂದಿ ಮನೆಯಲ್ಲಿ ಅಡಿಗೆ ಮಾಡಿ ಬಾಲ್ಯದ ಆಸೆ ಈಡೇರಿಸಿಕೊಳ್ಳಲಿಕ್ಕಾಗಿ ಮೋಕ್ಷ ಸಿಗುವುದೆಂದು ನಂಬಿ ಈ ಕಾಶೀಯಾತ್ರೆಗಾಗಿ ಹಣ ಕೂಡಿಸಿಕೊಂಡು ಬಂದಿರುವ ವಿಧವೆ ತಿಪ್ಪಕ್ಕನ ದೃಢತೆ, ಸಾಹಸದ ಬಗ್ಗೆ ತಿಳಿದಾಗ ಅಚಾರ್ಯರು ಬಾಯಿ ಮೇಲೆ ಬೆರಳಿಟ್ಟುಕೊಂಡರು! ನಾಲ್ಕು ಗಂಡುಮಕ್ಕಳು ಉನ್ನತ ಅಧಿಕಾರಿಗಳಿದ್ದರೂ ಚಿಕ್ಕಾಸು ಕಳಿಸದಿದ್ದರೂ ತಮ್ಮ ಮಾಸ್ತರಿಕೆಯಲ್ಲೇ ಹಣ ಕಲೆಹಾಕಿ ಯಾತ್ರೆಗೆ ಬಂದಿದ್ದ ರಂಗಣ್ಣನ ಪರಿಚಯದಿಂದ ಅಂತೂ ಆಚಾರ್ಯರು ತಮ್ಮ ಜೀವನವನ್ನು ಕ್ಷಣ ಹೊತ್ತು ಇತರರ ಜೀವನೊಂದಿಗೆ ಹೋಲಿಸಿಕೊಳ್ಳುವಷ್ಟು ಮಟ್ಟಿಗೆ ಸಮರ್ಥರಾದರೆನ್ನಬಹುದು. ಆದರೂ ಏನೋ ಅಭಾವ ಏನೋ ಕೊರತೆಯ ಆವರಣ ಸದಾ ಅವರನ್ನು ಆವರಿಸಿರುತ್ತಿತ್ತು.

ಒಮ್ಮೆ ನಾಗೇಶರಾಯರೇ ಆಚಾರ್ಯರ ಪಕ್ಕದಲ್ಲಿ ಕುಳಿತು ಅವರ ಬಿಗುವನ್ನು



ಸಡಲಿಸುವ ನೆಪ ಹೂಡಿ ಅವರ ಮನೆ, ಮಕ್ಕಳು, ಇತರರ ಮಾಹಿತಿ ಪಡೆದರು. ಆದರೆ ಆ ಎಲ್ಲ ಸುಖ ಲಭ್ಯವಿದ್ದರೂ ಅವರ ಬಾಯಿಯಿಂದ ಸಂತೃಪ್ತಿಯ ಒಂದು ಶಬ್ದವೂ ಹೊರಡದಿದ್ದುದು ರಾಯರಿಗೆ ಅಚ್ಚರಿಯೆನಿಸಿತ್ತು ಮತ್ತೆರಡು ದಿನಗಳ ನಂತರ ನಾಗೇಶರಾಯರು ಮಾತಿಗೆ ಎಳೆಯುತ್ತ ಆಚಾರ್ಯರ ತಾಪತ್ರಯವಿಲ್ಲದ ಸುಖಬಾಳ್ವೆ, ಸುಖಾರೋಗ್ಯದ ಬಗ್ಗೆ ಕೇಳಿ ತಿಳಿದು ಹಾಸ್ಯದಿಂದಲೇ ನುಡಿದಿದ್ದರು... "ಅಲ್ವೇ, ಸಿಟ್ಟಾಗಬ್ಯಾಡ್ರಿ, ಆಚಾರ್ಯರೆ.. ಒಂದು ಮಾತು... ನಿಮಗೆ ದೇವರು ಇಷ್ಟೆಲ್ಲ ಕರುಣಿಸಿದರೂ ನೀವು ಸದಾ ಗುಡ್ಡ ಕಡಿದು ನಿಮ್ಮ ಮೇಲೇ ಉರುಳಿಬಿದ್ದವರಂತೆ ಯಾಕೆ ಹೀಂಗ ದುಃಖದಲ್ಲೇ ಮುಳುಗಿರುತ್ತೀರಿ.. ಸ್ವಲ್ಪ ನಗೋದು ಕಲೀರಿ" ಎಂದಾಗ ನುಂಗಿ ಬಿಡುವರೋ ಎಂಬಂತೆ ಕೆಕ್ಕರಿಸಿ ನೋಡಿದ್ದರು ಆಚಾರ್ಯರು, ಇತರರ ಉಪದೇಶಕ್ಕೆ ಮಣಿಯುವವರೇ? ತಮಗೆ ಸರಿಕಂಡಂತೆ ತಮ್ಮ ಮೂಗಿನ ನೇರಕ್ಕೆ ಮಾತನಾಡಿ ಇತರರೂ ತಮ್ಮ ಹೇಳಿಕೆಯನ್ನೇ ಅನುಮೋದಿಸಬೇಕೆಂಬ ಛಲ ಪಡೆದುಬಂದವರು ಅವರು! ನಾಗೇಶರಾಯರು ಸುಮ್ಮನೆ ಎದ್ದು ಹೋಗಿ ಬಿಟ್ಟರು.

ಮತ್ತೊಮ್ಮೆ ಸಿಡುಕು ಮುಖ ಹೊತ್ತು ತಮ್ಮಲ್ಲೇ ಮುಳುಗಿದ್ದ ಆಚಾರ್ಯರನ್ನು ನಾಗೇಶರಾಯರೇ ಆ ಮಾತು ಈ ಮಾತಿಗೆ ಎಳೆದು, ಮಾತಿನ ಮಧ್ಯೆ ಧೈರ್ಯವಹಿಸಿ ಹೇಳಿಯೇ ಬಿಟ್ಟರು. ನೋಡಿ ಆಚಾರ್ಯರೇ... ಇಷ್ಟು ದಿವಸದಾಗ ನೀವು ಒಮ್ಮೆಯೂ ನಕ್ಕಿಲ್ಲ... ಒಮ್ಮೆಯೂ ಗಂಟುಮೋರೆ ಬಿಟ್ಟಿಲ್ಲ... ಬೇಕಾದ್ರೆ ಕನ್ನಡಿ ಹಿಡಿದು ತೋರಿಸೇನು ನಿಮ್ಮ ಮಾರಿ...?

ಅವರ ಮಾತು ಮುಗಿಯುವ ಮುನ್ನವೇ ಆಚಾರ್ಯರು ಗುಡುಗಿದರು.. "ಏನು ನಗ್ತಾ.. ನಗಬೇಕಂತೆ ನಗಬೇಕು. ನಗುನಗುತ್ತ ಇರಲು ಏನಿದೆ ನನ್ನಲ್ಲಿ? ಮಕ್ಕಳು... ಇದ್ದಾರೆ ಅಂದ್ರೆ ಇದ್ದಾರೆ ತಂದೆ ಹಿರಿಯರು ಅಂತ ಏನಾದ್ರೂ ಮಾನ ಮರ್ಯಾದೆ... ಪ್ರೇಮ. ಅಂತಃಕರಣ? ಸೊಸೆಯರೂ, ಅವರೂ ಅಷ್ಟೇ... ಮಕ್ಕಳೇ ತಾತ್ಸಾರ ಮಾಡಿದ

ಮೇಲೆ ಅವರಂತೂ ಹೊರಗಿನಿಂದ ಬಂದೋರು..." ನಾಗೇಶರಾಯರು

ಮೌನತಾಳಿದರು... ಇನ್ನೊಬ್ಬರ ಮನಸ್ಸಿನ ಆಳಕ್ಕೆ ಇಳಿದು ಅವರ ಅಂತರಂಗವನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಕಲೆ ರಾಯರಿಗೆ ಸಿದ್ಧಹಸ್ತವಾಗಿದ್ದರೂ 'ತಾವೇ ತಪ್ಪಿರಬಹುದೇ?' ಎಂದು ಮನದಲ್ಲೇ ಎಣಿಸತೊಡಗಿದರು.

ಎಲ್ಲರೂ ಕಾಶಿ ತಲುಪಿದ್ದರು. ತಮ್ಮ ಸಹಯಾತ್ರಿಕರ ಅಮಿತಾನಂದ, ಭಕ್ತಿ ಭಾವ ನೋಡಿ ಆಚಾರ್ಯರಿಗೆ ಒಂದು ತರಹವೆನಿಸಿತು. ವಿಶ್ವನಾಥನ ದರ್ಶನ, ತೀರ್ಥ ಸ್ನಾನ ಮಾತ್ರದಿಂದಲೇ ಪುನೀತರಾದೆವೆಂಬಂತೆ ಹೆಮ್ಮೆ ಗರ್ವಗಳಿಂದ ಎಲ್ಲರೂ ಉತ್ಸಾಹದ ಬುಗ್ಗೆಗಳಾಗಿದ್ದರೆ ಆಚಾರ್ಯರು ಮಾತ್ರ ಎಲ್ಲ ಯಾಂತ್ರಿಕ ರೀತಿಯಲ್ಲಿ ತೀರ್ಥಸ್ನಾನ, ದರ್ಶನ, ಮುಗಿಸಿ ದೇವಸ್ಥಾನದ ಕಂಬಕ್ಕೊರಗೆ ಕುಳಿತುಬಿಟ್ಟಿದ್ದರು. ಈ ಜನಕ್ಕೆ ಯಾಕೆ ಯಾಕೆ ಇಷ್ಟು ಹಿಗ್ಗು? ಓಹೋ ಬಹುಶಃ ಇವರೆಲ್ಲರಿಗೆ ಹಣದ ಕೊರತೆ... ಬೇಕೆನಿಸಿದಾಗ ಬರಲು ಸಾಧ್ಯವಾಗಿರಲಿಕ್ಕಿಲ್ಲ ಎಂದುಕೊಂಡರು. ಒಂಟಿಯಾಗಿ ಕುಳಿತ ಆಚಾರ್ಯರನ್ನು ಕಂಡರೂ ನಾಗೇಶರಾಯರು ಸುಮ್ಮನೇ ಹಾಯ್ದು ಹೋದಾಗ ಅಚಾರ್ಯರೆ ಅವರನ್ನು ಮಾತನಾಡಿಸಿ ಬಳಿಗೆ ಕರೆದರು "ಹಾಂ... ಮತ್ತೇ ರಾಯರೆ ಯಾತ್ರೆ ಅಂತೂ

ಮುಗೀತಾ ಬಂತು. ನಗು ನಗುತ್ತಾ ಇರುವಂತಹ ಸುಖಬಾಳ್ವೆ ಪಡೆದು ಬಂದವರು ನೀವು... ಪುಣ್ಯವಂತರು..ದೇವರು ನಿಮಗೆ ಎಲ್ಲ ಕೊಟ್ಟಿದ್ದಾನೆ ನೋಡ್ರಿ. ಅದಕ್ಕೇ ಸದಾ ನಗುನಗುತ್ತಾ ಕಾಲ ಕಳೀತೀರಿ... ಇನ್ನು ಮನೆಗೆ ಸೇರಿ ಹಾಯಾಗಿ ಇದ್ದೀರಿ. ಆದ್ರೆ ನಾನು? ನಾನು ಮಾತ್ರ ಪುನಃ ಆ ಮಕ್ಕಳು, ಸೊಸೆಯರ ಜಂಜಾಟದ ನರಕಕ್ಕೇ ಹೋಗಬೇಕು ನೋಡಿ.

ನಾಗೇಶರಾಯರು ನಗೆ ಬೀರುತ್ತ ಮರು ನುಡಿದರು.... "ನನಗೆಲ್ಲಿದೆ ಆಚಾರ್ಯರೆ ಮನೆ? ನನ್ನ ಹೆಂಡ್ತಿ ಸತ್ತು ನಲ್ವತ್ತು ವರ್ಷ ಆಗಿ ಹೋಯ್ತು, ಇದ್ದೊಬ್ಬ ಮಗ ಮಹಬೂಬ್ ನಗರದ ರೈಲು ಅಪಘಾತದಲ್ಲಿ ತೀರಿಹೋಗಿ ಹದಿನೈದು ವರ್ಷವಾಯಿತು. ಈ ಜೀವನದಲ್ಲಿ ನನ್ನದೆಂದು ನನಗೇನೂ ಉಳಿದಿಲಪ್ಪ!!"

"ಆಂ...!? ಎಂದು ಬಾಯಿ ತೆರೆದರು ಆಚಾರ್ಯರು ರಾಯರೇ ನುಡಿದರು, "ನೋಡ್ರಿ ಆಚಾರ್ಯರೆ.... ಸುಖ ಯಾರಿಗೆ ಬೇಕೆನಿಸುವುದಿಲ್ಲ... ಆದ್ರೆ ಸುಖ ಸುಖ ಅಂತ ಹುಡುಕ್ಕೊಂತ ಹೋದ್ರೆ ಸಿಗೋವಸ್ತು ಏನ್ರಿ ಅದು? ಸುಖ ಎಂಬೋದನ್ನು ನಾವು ನಮ್ಮಲ್ಲೇ ಹುಟ್ಟಿಸ್ಕೋ ಬೇಕಾಗುತ್ತದೆ! ನಮಗೆ ಸಿಕ್ಕಿದ್ದರಲ್ಲೇ ತೃಪ್ತಿ, ಸಮಾಧಾನ ತಂದುಕೊಳ್ಳೋದೇ ಸುಖ... ಸುಖ ದುಃಖ ಮನಸ್ಸಿನ ವಿವಿಧ ರೂಪಗಳಲ್ಲಿ ಎರಡು ವಿಧ ನಾವು ಹುಟ್ಟಿದಾಗ ಏನ ತರ್ತೀವಿ ಸಾಯೋ ಮುಂದೆ ಏನು ಒಯ್ಯುತ್ತೀವಿ, ಆದ್ರೆ ನಾವು ಹ್ಯಾಂಗ ಬಾಳ್ವೆ ಮಾಡಿದ್ವಿ ಅಂಬೋದನ್ನ ಮಾತ್ರ ನಾಲ್ಕು ಮಂದಿ ನೆನಸ್ಕಾರ ತೀರ್ತು.... ನಮ್ಮಿಂದ ಒಳ್ಳೆಯದಾಯಿತು ಅಂದ್ರೆ ಅದೇ ನಮ್ಮ ಸುಖ... ಪುಣ್ಯ! ನಾವು ಇನ್ನೊಬ್ಬರಿಗೆ ಕೆಟ್ಟದ್ದು ಮಾಡಿದ್ವಿ, ತ್ರಾಸು ಕೊಟ್ಟ ಅಂದ್ರ ಅದೇ ನಮ್ಮ ದುಃಖ ಪಾಪ, ಇದ್ದುದರಲ್ಲಿ ತೃಪ್ತಿ, ಸಹನೆ... ಇದೇ ನಮಗೆ ಶಾಂತಿ... ಇವು ಇಲ್ಲಿ ಸಿಕ್ಕರೇನು? ಸ್ವರ್ಗ - ಮೋಕ್ಷದಲ್ಲಿ ಸಿಕ್ಕರೇನು, ಎರಡೂ ಒಂದೇ!

ಪೆಟ್ಟು ಬಿದ್ದ ಹಾವು ಮುದುರಿ ಮಲಗುವಂತೆ ಆಚಾರ್ಯರು ನಾಗೇಶರಾಯರ ಮಾತಿನ ಸತ್ಯದ ಅರಿವಿನಿಂದ ಆಘಾತರಾಗಿ ನಿಶ್ಚಿತನರಾಗಿ ಅವರನ್ನೇ ಪಿಳಿ ಪಿಳಿ ನೋಡಿದ್ದರು!

ಹೌದು ನಿಜ.. ಏನೂ ಇಲ್ಲದ ನಾಗೇಶರಾಯರು ಎಲ್ಲವನ್ನೂ ಪಡೆದಿದ್ದರು. ಎಲ್ಲವನ್ನೂ ಪಡೆದ ತಾವು?

# ಪುಂಡಿ ಪುಜಾರಿಯಾದಾಗ

- ಗೀತಾ ನಾಗಭೂಷಣ

ಶಿವಳ್ಳಿ ಅಂತ ಆ ಹಳ್ಳಿಯ ಹೆಸರು.ಆದರೆ ಹಳ್ಳಿಯಲ್ಲಾಗಲಿ, ಅದರ ಆಸುಪಾಸಿನ ಅಡವಿ ಬೈಲು, ಕಣಿವೆಯಲ್ಲಾಗಲಿ, ಶಿವನ ಹರಕು - ಮುರುಕು ಗುಡಿಗುಂಡಾರವೂ ಇರಲಿಲ್ಲ ಶಿವನದೂ ಇಲ್ಲ ಅವನ ಲಿಂಗದ್ದೂ ಇಲ್ಲ. ಯಾಕೆ ಆ ಹಳ್ಳಿಗೆ ಶಿವಳ್ಳಿ ಅಂತ ಹೆಸರು ಬಂತೂ ಅನ್ನೋದು ಅಲ್ಲಿರುವ ಯಾರಿಗೂ ಗೊತ್ತಿಲ್ಲ.

ಅಲ್ಲಿರುವವರೆಂದರೆ ಬಹಳ ಜನರೇನೂ ಅಲ್ಲ. ಬರೀ ದೋನಸೆ ಗುಡಿಸಲುಗಳಿದ್ದ ಮೂಲಹಳ್ಳಿ, ಈಗ ತನ್ನ ಕೈಕಾಲು ಚಾಚಿದೆ. ಊರು, ಹೊಲಗೇರಿ ಅಂತ ಎರಡೇ ಹಿಸ್ಸೆಗಳಿದ್ದವು ಮೊದಲು. ಈಗ ಜನತಾ ಮನೆಗಳು ಅಂತ ಗೋರಮೆಂಟಿನವರು, ಹೊಲಗೇರಿ ದಾಟಿ ಆಚೆ ಬಯಲಿನಲ್ಲಿ ಸಾಲು ಮನೆ ಕಟ್ಟಿಸಿದ್ದಾರೆ. ಮಂದಿ ಬಂದು, ಶಾಂತಪೂಜೆ ಮಾಡಿಸಿಕೊಳ್ಳುವ ಮೊದಲೇ ಅವು ತೊಡೆಯ ಕಸುವಳಿದು, ಕಿಸಿದುಬಿದ್ದು ಅರ್ಧಮರ್ದ ಸೀಳಿ, ಗೋಡೆ ಬಿದ್ದು, ಬಾಗಿಲು ಮುರಿದು, ಹಳ್ಳಿಯ ಹತ್ತು ಹದಿನೆಂಟು ಹಲ್ಕಟ್ ಧಂದೆಗಳ ಆಸರೆದಾಟಗಳಾಗಿವೆ. ಹಗಲು ಕೆಲಸವಿಲ್ಲದ ಮೈಗಳ್ಳರಿಗೆ ಹುಲಿಕಟ್ಟಿಯಾಟ, ಚಕಾರ ಆಟ ಆದರೆ ರಾತ್ರಿ ಕಾಮನಾಟ, ಕುಡಿವಾಟ, ಜೂಜಾಟ, ಜಗಳಾಟಗಳೆಲ್ಲ ಅಲ್ಲಿ ಬೇಕಾಬಿಟ್ಟಿಯಾಗಿ, ನಿರಾತಂಕವಾಗಿ ನಡೆಯುತ್ತವೆ. ಹೇಳಿಕೇಳಿ ಸರಕಾರ ಕಟ್ಟಿಸಿದ ಜನತಾ ಮನೆಗಳು, ಇನ್ನೂ ಬಡವರಿಗೆ ಅಲಾಟ್ ಆಗಿರಲಿಲ್ಲ. ಅಂದ ಮೇಲೆ ಹಳ್ಳಿಯ ಜನರ ಉಪಯೋಗಕ್ಕೆ ಯಾವ ಅಡ್ಡಿ ಆತಂಕಗಳೂ ಇರಲಿಲ್ಲ.

ಹೀಗಾಗಿ ಮೊದಲು ಹಳ್ಳಿಯ ಕೊನೆಯಲ್ಲಿದ್ದ ಹೊಲಗೇರಿ ಈಗ ಹಳ್ಳಿಯ ನಡುಗೇರಿಯಾಗಿ ನಿಂತಿದೆ. ನೂರಕ್ಕೆ ಹತ್ತಿರ, ಹೊಲೆಯರ ಗುಡಿಸಲುಗಳಿವೆ ಅಲ್ಲಿ. ಸೇಂದಿ ಪೊರಕೆಯ, ಸೇಂದಿ ಬಚ್ಚಿನ ಝುಪಡಿಗಳು, ಹೊಲಗೇರಿಯಂಥಾ ಕೇರಿಯಲ್ಲಿ ಹಗಲು ಹೊತ್ತು ದೀವಟಿಗೆ ಉರಿಸಿಕೊಂಡು ಹುಡುಕಿದರೂ ಸಹ ಒಂದೂ ಗಚ್ಚಿನ ಮನೆ, ಹೋಗಲಿ ಅರಚಪ್ಪರದ ಮನೆ ಬೇಡ, ಟಿನ್ ಛಾವಣಿಯ ಮನೆಯೂ ಸಿಗುವುದಿಲ್ಲ. ಅರೆಬರೆ ಉಪವಾಸ, ಅರೆಬೆತ್ತಲೆ ಮೈಯ ಈ ಮಂದಿಗೆ, ಅಂದಿಗೂ ಇಂದಿಗೂ ಒಂದೇ ರೀತಿಯ ಮನೆಗಳು ಅಂದರೆ ಝುಪಡಿಗಳು.

ಹಾಂ... ಹಳ್ಳಿಯ ಮ್ಯಾಗೇರಿಗೆ ಹೋದರೆ ಮಾತ್ರ ಬೇಕಾದಷ್ಟು ಗಚ್ಚಿನ ಮನೆಗಳು ಸಿಗುತ್ತವೆ. ಎಲ್ಲವೂ ಅವೇ ಅಥವಾ ಅದರಂಥವೇ. ಆ ಮ್ಯಾಲಿನ ಗಲ್ಲಿಯ ಮಂದಿಯ ರೀತಿ ರಿವಾಜುಗಳೇ ಬೇಕೆ, ಇರಸರಿಕೆಯೇ ಬೇರೆ, ಗರ್ಧಿ ಗಮ್ಮತ್ತುಗಳೇ ಬೇರೆ, ಕಳ್ಳು ತುಂಬಿದರೆ ತಾನೆ ಮಳ್ಯಾ3? ಪಾಪ... ಕೆಳಗೇರಿಯ ಹೊಲೆಮಾದಿಗ, ಕಾಟಕ ಕಬ್ಬಲಿಗ,

ಕುರುಬ, ಕುಂಬಾರ ಅಂತ ಹಲವು ಹದಿನೆಂಟು ಜಾತಿಯ ಜನರ ಕಳ್ಳು ತುಂಬುವುದಂತೂ ದೂರ, ಯಾವಾಗಲೂ ಖಾಲಿಯೇ. ವರ್ಷಕ್ಕೊಮ್ಮೆ ನಡೆಯುವ ಮರಗವ್ವನ ಜಾತ್ರೆಯಲ್ಲಿಯೇ ಅವರು ಹೊಟ್ಟೆ ತುಂಬ ಉಣ್ಣುವುದು. ಅದೂ ದನ, ಕುರಿ ಕೋಳಿಗಳ ಖಂಡದೂಟ.

ಹೌದು. ಶಿವಳ್ಳಿಯಲ್ಲಿ ಹೊಲಗೇರಿಯ ಅಂಚಿಗೆ ದೆವ್ವದಂತ ದೊಡ್ಡ ಬೇವಿನಮರದಡಿಯಲ್ಲಿ ಮರಗವ್ವನ ಗುಡಿಯಿದೆ. ಗುಡಿಯೆಂದರೆ ನಾಲ್ಕು ಉದ್ದನೆಯ ಕರಿಕಲ್ಲು ನೆಲದಲ್ಲಿ ಹೂಳಿ, ಮೇಲೆರಡು ಅಂಥವೇ ಫರಸಿ ಹಾಕಿ ನೆರಳು ಮಾಡಿ ಸುಣ್ಣ ಸವರಿದ ಗುಡಿ, ಒಳಗೆ ಹಿಂದೆ ಮರಗವ್ವ ದೇವಿಯ ದೊಡ್ಡ ಕಟ್ಟಿಗೆಯ ಗೊಂಬೆ. ಕಣ್ಣು, ಮೂಗು, ಬಾಯಿ ಇದ್ದಲ್ಲೆಲ್ಲ ಬರಿ ಕೆತ್ತನೆಯ ಗುರುತುಗಳು. ಅವೂ ಈಗ ದಿನಾಗಲೂ ಎಣ್ಣೆ ಹಚ್ಚಿ ತೊಳೆದು ಅರಿಶಿಣ ಕುಂಕುಮ ಬಳಿದೂ, ಬಳಿದೂ ಕರಗೆ ಜಿಡ್ಡುಗಟ್ಟಿವೆ. ಅದಕ್ಕೊಂದು ಎರಡು ಮೊಳದ ಸೀರೆ, ಅದರ ಮುಂದೆ ಅಂಥವೇ ಐದು ಸಣ್ಣ ಸಣ್ಣ ಕಟ್ಟಿಗೆಯ ಗೊಂಬೆಗಳು, ಮಾರವ್ವನ ಮಕ್ಕಳವು, ಅವಕ್ಕೆ ಅಂಗಿ ಚಡ್ಡಿಗಳಿಲ್ಲ, ಬರಿ ಬೆತ್ತಲೆಯ ಪಾಪದ ಮಕ್ಕಳು.

ಶಿವಳ್ಳಿ ಮ್ಯಾಗೇರಿಯಲ್ಲಿ ದೊಡ್ಡವಾದ ಮಹಾಲಕ್ಷ್ಮಿಯ ಮಂದಿರ ಒಂದಿದೆ. ಯಾವ ಕಾಲದಲ್ಲಿಯೋ, ಯಾವ ರಾಯನೋ ಅಥವಾ ರಾಣಿಯೋ ಕಟ್ಟಿಸಿದ ಹದಿನೆಂಟು ಕರಿಕಂಬಗಳ ಮಜಬೂತಾದ ಗರ್ಭಗುಡಿ, ಮುಂದೊಂದು ವಿಶಾಲ ಪಡಶಾಲೆ, ಮುಂದೆ ಬಹುದೊಡ್ಡ ಬಯಲಿನ ಸುತ್ತ ಕಲ್ಲುಗೋಡೆಯ ಕಾಂಪೌಂಡು ಒಳಗಿನ ಮಹಾಲಕ್ಷ್ಮಿಯ ಮೂರ್ತಿಯಂತೂ ತನ್ನನ್ನು ಕಡೆದವನ ಕೈಯ ಕಲೆಯ ನಾಜೂಕತೆಗೆ ಸಾಕ್ಷಿಯಾಗಿ ನಿಂತಿದೆ. ಮಹಾಲಕ್ಷ್ಮಿ ಎಂದರೆ ಕೇಳಬೇಕೆ? ದಿನವೂ ಅವಳಿಗೆ ಬಣ್ಣಬಣ್ಣಗಳ ರೇಷ್ಮೆಯ, ಜರತಾರಿಯ ಸೀರೆ ಕುಪ್ಪಸಗಳ ಅಲಂಕಾರ, ಮಲ್ಲಿಗೆ ಗುಲಾಬಿಗಳ ದಂಡೆಗಳು, ಬಂಗಾರದೊಡವೆಗಳ ಸಿಂಗಾರ.

ಶಿವಳ್ಳಿಯ ಮಹಾಲಕ್ಷ್ಮಿ ಅಂದ್ರೆ ಬಲು ಜಾಗೃತ ದೇವತೆ ಅಂಬೋಸುದ್ದಿ, ಅದು ಹೇಗೋ ಏನೋ ಸೊಲ್ಲಪುರ, ಪುಣೆ, ಬೊಂಬಾಯಿ, ಹೈದರಾಬಾದು ಅಂತ ಆಸುಪಾಸಿನ ಎಲ್ಲ ಊರು ಪಟ್ಟಣಗಳ ಕಡೆಗೆ ಹರಡಿತ್ತು. ದೂರ ದೂರದಿಂದ ಜಾತ್ರೆಗೆ ಸಿರಿವಂತರು ಬರುತ್ತಿದ್ದರು. ಧನ, ಕನಕಗಳನ್ನರ್ಪಿಸಿ ಹೋಗುತ್ತಿದ್ದರು. ಅದೆಲ್ಲ, ಮ್ಯಾಗೇರಿಯ ಬಂಬು ಮುಖಂಡ ಶ್ರೀಪತಿರಾಯನ ಮಲಗುಮನೆಯ ಮಂಚದ ಕೆಳಗಿನ ಕಬ್ಬಿಣದ ತಿಜೋರಿಯಲ್ಲಿಯೂ, ದೇವಿಯ ದಿನನಿತ್ಯದ ಒಡವೆಗಳು, ಸೀರಿಗಳೆಲ್ಲ ಪೂಜಾರಿ ಸೀನಪ್ಪಚಾರಿಯ ಸುಪರ್ದಿನಲ್ಲಿಯೇ ಇದ್ದವು ಹಬ್ಬ ಹುಣ್ಣಿಮೆಗಳಲ್ಲಿ ಒಮ್ಮೊಮ್ಮೆ ದೇವಿಯ ಕುತ್ತಿಗೆಯ ಒಡವೆಗಳಲ್ಲಿ ಒಂದೂ ಎರಡೋ ಆಚಾರಿಯ ಹೆಂಡತಿ ವೆಂಕಮ್ಮನ ಕುತ್ತಿಗೆಯಲ್ಲಿಯೂ ಕಾಣಿಸುತ್ತವೆ ಎಂಬುದು ಅದೇ ಗಲ್ಲಿಯ ಕೆಲ ಹೆಂಗಸರು ಹೊಟ್ಟೆ ಕಿಚ್ಚಿನಿಂದಲೋ, ಖರೆವೋ ಆಡಿಕೊಳ್ಳುವ ಚಿಲ್ಲರೆ ಗುಸು ಗುಸು ಮಾತುಗಳಿಗೆ ದೊಡ್ಡ ಗಂಡಸರಾರೂ ಕಿವಿಗೊಟ್ಟಿರಲಿಲ್ಲ.

ಅಂತೂ ಶಿವಳ್ಳಿಯಲ್ಲಿ, ಒಂದು ವರ್ಷದಲ್ಲಿ ಎರೆಡೆರಡು ಹೆಣ್ಣು ದೇವತೆಗಳ ಜಾತ್ರೆಗಳಾಗುತ್ತಿದ್ದವು. ಹೀಗಾಗಿ ಆ ಹಳ್ಳಿಯ ಮೇಲೆ ಜೋಡಿ ಹೆಣ್ಣಿನ ಬಿಗಿತ



ಬಲವಾಗಿದ್ದುದರಿಂದಲೋ ಏನೋ ಗಂಡು ದೇವತೆಗಳು ಯಾರಿಗೂ, ಯಾವ ಕಾಟವೂ ಕೊಡದೆ ತೆಪ್ಪಗಿದ್ದುವು.

ಗುರುಪಾದಪ್ಪ ಸಾತ್ಕಾರ ಅಂದ್ರೆ ಶಿವಳ್ಳಿಯ ಮ್ಯಾಗೇರಿಯಲ್ಲಿಯೇ ದೊಡ್ಡ ಆಸಾಮಿ, ದೋನಸೆ ಕೂರಗಿ ಜಮೀನಿನ, ಎಂಟೆತ್ತಿನ ಒಕ್ಕಲುತನವಿರುವ ಸಾತ್ಕಾರ ಈಗ ವಯಸ್ಸು ಮುಕ್ಕಾಲು ಮುಗಿದು, ಮೀಸೆಗೂದಲೆಲ್ಲ ಸುಣ್ಣ ಸವರಿದಂತೆ ಬೆಳ್ಳಗಾಗಿ, ತಲೆ ತಾಮ್ರದ ತಂಬಿಗೆಯಾಗಿ, ಕೈಕಾಲುಗಳಲ್ಲಿಯ ಕಸುವು ಇಳಿದು. ಕಣ್ಣು ಕಲ್ಲಗಳೆಲ್ಲ ಒಳನಟ್ಟು ಹೋದರೂ ಅವನ ಹಿಂದಿನ ಸಾತ್ಕಾರಿಕೆಯ ಗತ್ತುಗಾರಿಕೆ ಹೋಗಿಲ್ಲ. ಹಣ+ಹರೆಯ ಇದ್ದಾಗಿನ ಮಾತೇ ಬೇರೆಯಿತ್ತು. ಬಡವರ ಕರಿ ಮಣ್ಣಿನ ಎರೆ ಹೊಲಗಳೆಲ್ಲ ಈ ಸಾತ್ಕಾರನ ಕಾಲ ಕೆಳಗೆ ಅವರ ಮಜಬೂತಾದ ಮೈಕಟ್ಟಿನ ಚೆಂದದ ಹೆಣ್ಣುಗಳೆಲ್ಲ ಇವನ ಟೊಂಕದ ಕೆಳಗೆ ಪಾಪ, ಇವಿಷ್ಟೇ ಇವನ ಅವಗುಣ, ಉಳಿದದ್ದರಲ್ಲಿ ಗುರುಪಾದಪ್ಪ ಸಾತ್ಕಾರ ಒಳ್ಳೆಯವನೇ.

ಹೊಲೆಯರ ಮಲ್ಲಣ್ಣ ಈ ಸಾತ್ಕಾರನ ಮನೆಯಲ್ಲಿಯ ಹಳೆಯ ಜೀತದಾಳು. ನಂಬಿಕಸ್ತ. ಇವನಿಗೂ ಸಾತ್ಕಾರನದೇ ವಯಸ್ಸು, ಸಾತ್ಕಾರನ ಮಗ ಈ ಸೂರ ಬೆಳೆದದ್ದು ಮಲ್ಲಣ್ಣನ ತೊಡೆ ತೋಳುಗಳಲ್ಲಿಯೇ ಮಕ್ಕಳಿಲ್ಲದ ಮಲ್ಲಣ್ಣನಿಗೆ ಮಾಲಿಕನ ಮಗನೇ ಸರ್ವಸ್ವ

"ಮಲ್ಲಾ...... ಆ ಕಬ್ಬ ಕೆತ್ತಿ ಕೊಡು....."

ಎನ್ನುತ್ತ ಮೂರು ವರ್ಷದ ಈ ಸೂರ ಹೊಲದಲ್ಲಿ ನಡೆದು ಬಂದಾಗ ಮಲ್ಲಣ್ಣನ ಎದೆಯಲ್ಲೆಲ್ಲ ಕಸವಿಸಿ.

"ಅಲ್ಲೇ ನಿಂದ್ರೂ ಮಗಾ.... ನಡ್ಕೊಂಡು ಬರಬ್ಯಾಡ... ನಿನ್ನ ಹುನಂಥಾ ಅಂಗಾಲಿಗಿ ಕೆಸರ ಹತ್ತತಾದೋ ಕೂಸು....." ಎನ್ನುತ್ತ ಇದ್ದಲ್ಲಿಂದ ಓಡಿ ಬಂದು ಈ ಸೂರನನ್ನು ಅನಾಮತ್ತಾಗಿ ಎತ್ತಿಕೊಂಡೊಯ್ದು ತನ್ನ ಕಂಬಳಿಯ ಮೇಲೆ ಕೂಡಿಸಿ ಕಾಲಿನ ಮಣ್ಣು ತೊಳೆದು ತನ್ನ ಧೋತರ ಕೊನೆಯಿಂದ ಒರೆಸಿದಾಗಲೇ ಅವನಿಗೆ ಸಮಾಧಾನ ಮಲ್ಲಣ್ಣ ಕಬ್ಬು ತಂದು ಕೊಟ್ಟಾಗ ಈ ಸೂರನ ಎಂದಿನ ಅಪ್ಪಣೆ.

"ಸುಲಿದು ಕುಡು ಮಲ್ಲಾ......."

"ಅಯ್ಯೋ..... ನಾ ತಿಂತೀನಿ ...........ಸುಲ್ದು ಕುಡೊ ..."

“ನಾವು ಹೊಲೇರು ಈ ಸೂರ.......... ನನ್ನೆಂಜ್ಲು ನೀ ತಿನ್‌ಬಾರ್ದು ಮಗಾ...” “ಊಹೂಂ... ಅದೆಲ್ಲಾ ನನಗ್ಗೊತ್ತಿಲ್ಲ.... ನೀ ಸುಲ್ದು ಕುಡಲಿಲಿಂದ್ರ ತಿನ್ನಂಗೇ ಇಲ್ಲ..... ಊಂ......” ಎನ್ನುತ್ತ ಈ ಸೂರ ಅಳತೊಡಗಿದರೆ ಮಲ್ಲಣ್ಣನ ಹೊಟ್ಟೆಯಲ್ಲಿ ಚಾಕು ಚೂರಿಗಳ ಚೆಲ್ದಾಣ, ಮೇಲೆ ಕೆಳಗೆ ಅತ್ತ ಇತ್ತ, ಸುತ್ತ ಮುತ್ತ ನೋಡಿ, ತೋಟದಲ್ಲಿ ಹತ್ತಿರ ಯಾರೂ ಇಲ್ಲದನ್ನು ಖಾತ್ರಿ ಪಡಿಸಿಕೊಂಡು, ಕಬ್ಬು ಸುಲುದು, ಧೋತರದಿಂದ ಮತ್ತೆ ಮತ್ತೆ ಅದನ್ನು, ಒರೆಸಿ ಒರೆಸಿ ಮಗುವಿಗೆ ತಿನ್ನಿಸುವುದೂ ಇದೆ. ಆದರೆ ಇದೆಲ್ಲ ಕದ್ದು ಮುಚ್ಚಿ ಕಳವಿನ ಸುಳಿವಿನ ಗಂಟು ಯಾರ ಮುಂದೂ ಬಿಚ್ಚಬಾರದು ಅನ್ನೋ ಒಪ್ಪಂದ ಇಬ್ಬರ ನಡುವೆ.



ಅಂತೂ ಇಂತೂ ಹೀಗೆಯೇ ದಿನಗಳು ಹುಟ್ಟಿ, ಹುಟ್ಟಿ ಸಾಯತೊಡಗಿದ್ದುವು ತಿಂಗಳು, ವರುಷಗಳೂ ನರಳುತ್ತ ಅಸುನೀಗಿದ್ದವು. ಬೀಜಗಳು ಮೊಳೆತು ಮೊಳಕೆಗಳು ಮರವಾಗಿ, ಮರ ಮುದಿಯಾಗುತ್ತಿದ್ದುವು. ಅಂತೆಯೇ ಮಲ್ಲಣ್ಣ ; ಗುರುಪಾದಪ್ಪ ಸಾತ್ಕಾರನೂ ಅವರಿಗರಿವಿಲ್ಲದಂತೆಯೇ ಹರೆಯ ಕಳೆದುಕೊಂಡು ಮುಪ್ಪಿನ ಕಮರಿಯಲ್ಲಿ ಮುಗ್ಗರಿಸಿ ಬಿದ್ದರು. ಈ ಸೂರನೂ ಹಸಿ ಹರೆಯದ, ಬಿಸಿ ನೆತ್ತರಿನ, ಗಡುಸಾದ ಗಂಡಸಾಗಿ ನಿಂತು ಕಲಬುರ್ಗಿ ಜಿಲ್ಲೆಯ ಕಲೆಕ್ಟರನಾಗಿ ಬಂದಿದ್ದ. ಒಂದರೆಡು ಸಲ ಶಿವಳ್ಳಿಗೂ ಬಂದಿದ್ದ. ಬಂದಿದ್ದಾಗ ಅವನು ಮೊದಲು ಮಾತಾಡಿಸಿ, ಅಪ್ಪಿಕೊಂಡದ್ದು ಮಾತ್ರ ಮಲ್ಲಣ್ಣನನ್ನೇ. ಸ್ವಚ್ಛ ಮನಸ್ಸಿನ, ಅಚ್ಚುಮೆಚ್ಚಿನ ಮುಖದ ಈ ಸೂರನ ಅಪ್ಪಿಗೆಯಲ್ಲಿ ಭೋಲಾಭಾಲಾ ಮಲ್ಲಣ್ಣ ಖುಷಿಯಿಂದ ಗೊಳೋ ಎಂದು ಅತ್ತುಬಿಟ್ಟಿದ್ದ.

ಮಲ್ಲಣ್ಣ ಮೊದಲಿನಿಂದ ಮರಗವ್ವನ ಗುಡಿಯ ಪೂಜಾರಿಯಾಗಿದ್ದವನು ತನಗಿದ್ದ ಅಂಗೈ ಅಗಲದ ಹೊಲವನ್ನೂ ಸಾತ್ಕಾರನಿಗೇ ಮಾರಿ. ಬಂದ ದುಡ್ಡಿನಲ್ಲಿ ಮದುವೆಯಾಗಿ, ನೆರೆ ಹಳ್ಳಿಯ ನಿಂಗಿಯನ್ನು ತಂದು ಸಂಸಾರ ಹೂಡಿದ್ದ. ದಿಕ್ಕುದೆಸೆಯಿಲ್ಲದ ನಿಂಗಿ ಬಲು ಮೆಹನತ್ತಿನ ಹೆಣ್ಣು, ದಣಿವೇ ಗೊತ್ತಿಲ್ಲದ ದುಡಿತ ಅವಳದು. ಹೊಲಮನೆ, ಕೂಲಿನಾಲಿ ಅಂತ ಬಿಡುವಿಲ್ಲದಂತೆ ದುಡಿಯುವ ಹೆಣ್ಣು, ಮಲ್ಲಣ್ಣನ ನಸೀಬು ದೊಡ್ಡದು ಎಂದರು ಗಲ್ಲಿಯ ಮಂದಿ, ಮಲ್ಲಣ್ಣನೇನೂ ಕಡಿಮೆಯಾಗಿರಲಿಲ್ಲ. ಕಟ ಕಟ ರೊಟ್ಟಿ, ಕಾರದ ಪುಡಿ ತಿಂದೇ ಅವನು ಪೈಲ್ವಾನನಂತೆ ಬೆಳೆದಿದ್ದ. ಮೈ ಒರಟಾದರೂ ಮನಸ್ಸು ಮೆತ್ತಗೆ, ದೇಹ ಅಮವಾಸ್ಯೆಯಂತೆ ಕಪ್ಪಾದರೂ ಹೃದಯ ಹುಣ್ಣಿಮೆಯಂತೆ, ಕಡುಗಪ್ಪಿನ ದುಂಡು ಮುಖದ, ಬಿಳುಪುಗಳುವೆ ಬಟ್ಟಲು ಗಣ್ಣಿನ ನಿಂಗಿಗೂ ಇವನಿಗೂ, ನೆದರು ತಾಕುವ ಜೋಡಿ.

ರಸಿಕತೆ ಹೊಲೆಯ, ಹಾರುವ ಅಂತ ಜಾತಿ ಕುಲ ನೋಡುತ್ತದೆಯೇ? ಮಲ್ಲಣ್ಣ ಬಲು ರಸಿಕ, ಹಗಲೆಲ್ಲ ಸಾತ್ಕಾರನ ತೋಟ, ಹೊಲಗಳಲ್ಲಿ ಮೈ ಮುರಿದು ದುಡಿದು ಬಂದ ಅವರಿಗೆ ರಾತ್ರಿಯೆಲ್ಲ ಕಣ್ಣುಗಳ ಮುಂದೆ ಕೈಲಾಸವೇ ಪೂರಕೆಯ ಸಣ್ಣ ಗುಡಿಸಲ ತುಂಬ ಸುಖ ಸೊಕ್ಕಿ ಉಕ್ಕುತ್ತಿತ್ತು.

ಆಕಾಶೆಂಬೋ ಆಕಾಶ, ಅದರ ಬೆಳದಿಂಗಳು, ಚುಕ್ಕಿ, ಚಂದ್ರಾಮರೆಲ್ಲ ಅವರ ಅಂಗೈಗಳಲ್ಲಿಯೇ ಹರಿದು ಬಿದ್ದು ಕುಲುಕುಲು ನಗುತ್ತಿದ್ದುವು.

ಹೀಗೆಯೇ ಸಮಯ ಸರಿಯಿತು, ಜೊತೆಗೆ ಅವರ ಹರೆಯ ಹಣ್ಣಾಗಲು ತೊಡಗಿದಾಗ ಆ ಗಂಡ ಹೆಂಡತಿಗೆ ಅನ್ನಿಸಿತು ; ತಮಗಿನ್ನು ಮಕ್ಕಳಾಗೋದಿಲ್ಲ ಅಂತ, ನಿಂಗಿಯ ಹೊಕ್ಕಳ ನಡುವೆ ಕಚಕ್ಕನೆ ಮುಳ್ಳು ಮುರಿದಂತಾಗಿ ಕಣ್ಣುಗಳಿಂದ ನೀರು ಸ್ವಾತಿ ಮಳೆಯ ಹನಿಯಂತೆ ಫಳ್ಳನೆ ಚಿಮ್ಮಿತು.

"ಬ್ಯಾಡ್ ನಿಂಗೀ.... ನನ್ನರಗಿಣಿ.... ನಿ ಕಣ್ಣಾಗ ನೀರು ಹಾಕಾರು" ಎನ್ನತ್ತ ಮಲ್ಲಣ್ಣ ತಟ್ಟನೆ ಅವಳ ಕಣ್ಣೀರಿಗೆ ತುಟಿಯಿಟ್ಟು ಗಟ ಗಟ ಕುಡಿದ.

ಸರಿ, ಮುಂದೆ ಅವರು ಮಕ್ಕಳ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಮರಗವ್ವನ ಗುಡಿಯ ಪೂಜಾರಿಯಾದವನು ಎಂದೂ ಆ ದೇವತೆಗೆ ಮಕ್ಕಳು ಕುಡು' ಎಂದು ಕೇಳಲಿಲ್ಲ.



ಇಂಥ ಹೊತ್ತಿನಲ್ಲಿಯೇ ಇವರಿಗೆ ಸಾವ್ಕಾರನ ಕಿರಿಯ ಮಗ ಈಸೂರ ಹತ್ತಿರದವನಾದದ್ದು. ಮಲ್ಲಣ್ಣ ನಿಂಗಿಯರ ನಡುವೆಯೇ ಅಂಬೆಗಾಲಿಕುತ್ತ ಓಡಾಡುತ್ತ, ತೊದಲು ನುಡಿಯುತ್ತ ಈಸೂರ ದೊಡ್ಡವನಾಗಿದ್ದ. ಮುಂದೆ ಕಲಬುರ್ಗಿಗೆ ಓದಲು ಹೋಗಿದ್ದ, ನಂತರದ ಒಂದು ದಿನ ಕಲಿತು ಜಿಲ್ಲೆಗೆ ಈಸೂರ ಕಲೆಕ್ಟರನಾಗಿ ಬಂದಿದ್ದ.

ಶಿವಳ್ಳಿ ಈಗ ಮೊದಲಿನಂತೆ ಮೊಗಲಾಯಿ ಆಗಿರಲಿಲ್ಲ. ಅದರ ಸೋಗು, ಧಿಮಾಕು ದುಮ್ಮಾನಗಳೆಲ್ಲ ಪೂರಾ ಬದಲಾಗಿದ್ದು ಈರಭದ್ರ ಲಿಂಗಾಯತ ಹೋಟೆಲಿನಲ್ಲಿ ಇವರಿಗಾಗಿ ಸ್ಪೆಷಲ್ಲಾದ ಅಂಚು, ಕಿವಿ ಹರಿದ ಬಸಿಗಳಿರಲಿಲ್ಲ. ಮ್ಯಾಗೇರಿಯ ಮಂದಿಯ ಹತ್ತಿರವೂ ಈಗ ಮೊದಲಿನ ಮಡಿಹುಡಿ ಉಳಿದಿರಲಿಲ್ಲ. ಸರ್ಕಾರದವರು ಈಗ ಹೊಲೆ ಮಾದಿಗರಿಗೆ, ಅಡವಿ ಸುತ್ತುವ ಕಾಡುಸಿದ್ದ, ಕುರುಬ, ಲಂಬಾಣಿಗರಿಗೆಲ್ಲ ಬದುಕುವ ಭಾರಿ ಸೌಕರ್ಯಗಳನ್ನು ಒದಗಿಸಿಕೊಟ್ಟಿತ್ತು. ಸರಕಾರದ ಕಣ್ಣಿನಲ್ಲಿ ಹೊಲೆಯ ಹಾರುವವರೆಲ್ಲ ಸರಿಸಮಾನರಾಗಿದ್ದರು. ಸರಕಾರದ ಲೋಕರಿಗಳಲ್ಲಿ ಹೊಲೆ ಮಾದಿಗ, ಗೊಂಡ, ಸಿದ್ಧ, ಬೇಡರಿಗೆ ನೋಕರಿ ಕೊಟ್ಟು ಉಳಿದವು ಮೇಲಿನ

ಮಂದಿಗೆ ಹಂಚುವ ಕಾನೂನು ಬಂದಿತ್ತು. ಮತ್ತೆಲ್ಲ ನೂರೆಂಟು ಏನೇನೋ ; ಗೋರಮೆಂಟು ಕೆಳಜಾತಿಯ ಮಂದಿಗಾಗಿ ಮಾಡಿತ್ತು.

ಆ ದಿನ ಸಂಜೆ ಹೊತ್ತು ತಾಯಿ ಹೊಟ್ಟೆಗೆ ಹೋಗುವ ಮುಂದೆಯೇ ಊರ ತುಂಬ ತಳವಾರ ಕುಂಟು, ಮಾದರ ಮಾಲ್ಯಾ ಕೂಡಿ ಹಲಗೆ ಬಾರಿಸುತ್ತ ಡಂಗುರ ಸಾರಿದರು.

ಢಮ್ಮ ಢಮ್ಮ.... ಢಪ್ಪ.... ಢಪ್ಪ......

ಕೇಳ್ರೇಪೋ ಕೇಳ್ರೀ.... ಸಣ್ಣವ್ರು ದೊಡ್ಡವ್ರು

ಮುದುಕು, ಮಕ್ಕು, ಹರೆದವ್ರು, ಬಲಿತವ್ರು

ಎಲ್ಲೋರು ಕಿವಿಗೊಟ್ಟು, ಎಲ್ಲಾ ಮರ್ತು ಕೇಳ್ರೀ......

ನಾಳಿಗಿ ಹೇಳಿಲ್ಲಂದೀರಿ...... ಕೇಳಿಲ್ಲಂದೀರಿ.........

ಢಮ್ಮು ಢಮ್ಮು......ಢಪ್ಪ ಢಪ್ಪು..............

ಶಿವಳ್ಳಿ ಮ್ಯಾಗೇರ್ಯಾಗಿನ ಮಾಲಗಸಿಮಿ ಗುಡಿಗಿ, ಹುವ್ವಾತರ್ಲಕ, ಕಸ ಉಡಗಲಕ್ಕ, ಝೂಂಗಟೆ ಭಾರಸಲಕ್ಕಂತ ಗೋರಮೆಂಟಾಗ ಐದಾರು ನೋಕರಿಗೋಳು ಖಾಲಿ ಅವಾ ಅಂತ್ರೆಪ್ಪಾ... ನೂರೆಂಟು ಜಾತಿ ಮಂದಿ, ಅವಕ್ಕೆ ಬೇಕಾದ್ರ ಅರ್ಜಿ ಹಾಕ್ಬೇಕಂತ್ರಪ್ಪಾ.....

ಹೊಲೇರು ಮಾದ್ರು ಹಿಡ್ಕೊಂಡು ಬ್ರಾಂಬ್ರು ಲಿಂಗಾಯ್ತು.....

ಎಲ್ಲಾ ನೂರೆಂಟು ಕುಲದ ಮಂದೀನೂ ಬೇಕಾದ್ರ ಅರ್ಜಿ

ಹಾಕ್ಬೇಕಂತ ಕಲೆಕಟರ ಸಾಹೇಬ್ರು ಹುಕುಂ ಮಾಡ್ಯಾರಂತಪೋ.....

ಢಮ್ಮ ಢಮ್ಮು........... ಢಪ್ಪ ಢಪ್ಪ.....

ಕೇಳ್ರೇಪೋ ಕೇಳ್ರೀ........... ಕಿವಿಗೊಟ್ಟು, ಚಿತ್ತಗೊಟ್ಟು ಕೇಳ್ರೀ.....

ನಾಳಿಗೀ ಹೇಳಿಲ್ಲಂದಿರೀ... ಕೇಳಿಲ್ಲಂದೀರಿ............

ಕುಂಟ ಮತ್ತು ಮಾಲ್ಯಾರು ಹಿಂಗಂತ ಡಂಗೂರ ಸಾರುತ್ತ, ಹಲಗೆ ಬಾರಿಸುತ್ತ ಹಳ್ಳಿಯ ಗಲ್ಲಿಗಲ್ಲಿಗಳಲ್ಲಿ ನಡೆದರು. ಹಿಂದೆ ಗುಬು ಗುಬು ಅಂತ ಪೋರರ ಹಿಂಡು ಕೇಕೆ ಹಾಕುತ್ತ, ಚಪ್ಪಾಳೆ ತಟ್ಟುತ್ತ, ಕುಣಿಯುತ್ತ, ಹರಿದ ಚಡ್ಡಿಗಳಿಂದ ತಿಕಮುಚ್ಚಿಕೊಳ್ಳುತ್ತ, ಓಡುತ್ತ ಹೊರಟವು.

ಗಾಳಿ ಬೀಸಿದ ಬೆಂಕಿ ಜ್ವಾಲೆಗಳಂತೆ ಸುದ್ದಿ ಸರಸರನೆ ಚಟಪಟನೆ ಉರಿಯುತ್ತ ಎಲ್ಲ ಕಡೆಗೆ ಫೈಲಾಯಿಸಿತು. ಹಾಂ ಹಾಂ ಅನ್ನೋದರಲ್ಲೇ ಅದು ಕಚ್ಚೆ ಕಳೆದುಕೊಂಡು. ಬಾಯಿಗೆ ಕೈ ಹಚ್ಚಿ ಲಬೋ ಲಬೋ ಎಂದು ಹೊಡ್ಕೊಳ್ಳುತ್ತ ಊರು ಹೊಲಗೇರಿ ಒಂದು ಮಾಡಿತು. ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಗಲ್ಲಿಯ ಸಂದಿಗೊಂದಿಗಳಲ್ಲೆಲ್ಲ ಬೇಕಾಬಿಟ್ಟಿಯಾಗಿ ಡಿಸ್ಕೊ ಕುಣಿಯುತ್ತ ಹಳ್ಳಿಯ ಹೆಣ್ಣು ಗಂಡುಗಳ ಬಾಯಿಂದ ಮಾತುದಿರಿಸಿತು.

“ಅಯ್ಯ ಕೇಳಿದಿರೇ ಅಮೋಸಕ್ಕಾ... ಇನ್ನಮ್ಯಾಲಾ ನಮ್ ಮಹಾಲಕ್ಷ್ಮಿ ಗುಡಿಯೊಳಗೂ ಶೂದ್ರ ಮುಂಡೇ ಮಕ್ಕು ಬಾವೋ ಏನ್ ಮಣೋ....”

ಬ್ರಾಂಬ್ರು ಗೋದಾವರಿ ಬಾಯಿಯ ಅಚ್ಚರಿಯ ದನಿ.

“ಹಂಗಿರ್ಲಿಕ್ಕಿಲ್ಲ ಬಿಡ್ರಿ ಮಾವಸೀ.... ಈಗಿರೋ ಅರ್ಚಕರಿಗಿ, ಪಾರುಪತ್ಯಗಾರೀಗಿ ಎಲ್ಲಾ ಸರ್ಕಾರದ ಪಗಾರ ಕುಡ್ತಾರೋ ಏನೋ...”

“ಈಗ ಮತ್ತ ಗುಡಿ ಕಾರುಬಾರೆಲ್ಲ ಗೋರಮೆಂಟೇ ಮಾಡ್ತದೋ ಏನೋ... ಈ ಕಾನೂನು, ಮಣ್ಣು ಮನೆ, ಅಂತ ಸುಡ್ಲಿ... ನಮಗೊಂದೂ ತಿಳಿಯೂದಿಲ್ಲ ನೋಡು....”

ಮಹಾಲಕ್ಷ್ಮಿ ಗುಡಿ ಕಟ್ಟೆಯ ಮೇಲೆ ಕುಳಿತಿದ್ದ ಹಾರುವ ಗಂಡಸರದ್ದು ಬೇರೆಯೇ ಸಂಭಾಷಣೆಗಳು.

“ಹೂಂ..... ಈಗ ಎಲ್ಲ ಕೆಲಸಗಳಿಗೂ ಸರ್ಕಾರ ತಾನೇ ಅಪಾಯಿಂಟ್‌ಮೆಂಟ್ ಮಾಡಿ ಆರ್ಡರು ಕುಡ್ತದೋ ಏನೋ... ಹೂಂ......”

ಪೂಜಾರಿ ಶೀನಪ್ಪಾ ಚಾರಿ ಘುರುಕಿ ಹೊಡೆದರು. ಕುಲಕರ್ಣಿ ದತ್ತಾರಾವ ಸಣ್ಣಗೆ ಕುಹಕ ರಾಗ ಎಳೆದ.

“ಅಲ್ಲ... ಮತ್ತೆ ಇದರೊಳಗೂ ರೋಸ್ಟರ್ ಅಂತ ಎಸ್ಸಿ, ಎಸ್‌ಟಿ ಮಂದಿಗೇ ಮೀಸಲಾತಿ ಅಂತ ಅಂದ್ರೆ ಮುಗಿದೇ ಹೋಯ್ತು.”

“ಏಯ್.... ಛೇ, ಛೇ... ಏನು ಮಾತಂತ ಆಡ್ತಿರ್ರೀ ನೀವು ಶೀನಪ್ಪಾ? ಆ ಹೊಲೆ ಸೂಳ್ಯಾ ಮಕ್ಕೈಗಿ ಅರ್ಚಕರ ಕೆಲ್ಸಾ ಕುಡ್ತಾರಂತಿರೇನು ನೀವು? ಹಿಂತಾ ಗುಮಾನಿ ಬ್ಯಾಡ ಮಾರಾಯ್ಕೆ, ಸರಿಯಾಗಿ ನಮ್ಮ ದೇವತೆಯ

ಹೆಸರು ಉಚ್ಚಾರ ಮಾಡ್ಲಿಕ್ಕಿ ಬರೋದಿಲ್ಲ ಆ ಹುಂಬನನಗಿ.... ಮಹಾಲಕ್ಷ್ಮಿ ಅಂತ ಅವರಾರರೇ ಹೋಯಿಂದ ನೋಡೆ ಯವ್ವಾ...ಸೇವಾ ಮಾಡೋಕೆ ಯಾವುದಾದರೂ ಕೊಟ್ರೆ ಸಾಕು ಬಿಡು, ನಮ್ ಪಾಪ ಎಲ್ಲಾ ಪರಿಹಾರ ಆಗಿ ಮುಂದಿನ ಜನುಮದಾಗ ಎತ್ತೆ.... ಬೇತಲದಾಗೇ ಕುಂತಾದ ನೋಡು ಎನ್ನುತ್ತಲೇ ಒಂದು ಅಂದಾಜಿನ ಮೇಲೆ ಹೇನು ಹಿಡಿದು ತೆಗೆದು ನೆಲದ ಹಾಸುಗಲ್ಲಿಗೆ ಹಾಕಿ ಒರೆದಳು.



ಎರುಡು ಫರ್ಲಾಂಗಿನ ದೂರದ ಸೇಂದಿ ಖಾನೆಯ ಮೈದಾನದಿಂದ ಎರಡು ದನಿಗಳಲ್ಲಿ ಇವೇ ಚರ್ಚೆಗಳು,

"ಏಯ್ ಕಾಡ್ಡಾ.... ನಾ ಮಾಲಗಸಿಮಿ ಗುಡಿ ಕೆಲಸಕ್ಕೆ ಅರ್ಜಿ.... ಹ..... ಹಾಕ್ತಿನೋ......"

"ಮದಲ ಮಾರಿ ನೋಡ್ಯಕೋ ನಿಂದು ಕನ್ನಡ್ಯಾಗ.... ಹ...... ಹ...... ಹಾ....... ಹ.... ಹಾ..... ನೀ ದಿನ್ನಾ ಸಂಜಿ ಮುಂದ ಮೂಗಿಗೆ ಬರಾತನಕ. ಸಿಂದಿ ಕುಡ್ಕೊಂಡು ಹೋಗಿ, ಜೋಗಣಿ ಕೆಂಚಿ ಮನ್ಯಾಗ ಮಸ್ಕೊಂಡು ಬಂದು ಮಾಲಗಸಿಮಿ ಗುಡಿ ಕಸಾ ಹೊಡಿ.. ಆ ಸತ್ತುಳ್ಳಕ್ಕಿ ತಾಯಿ ನಿನ್ನ ಕಣ್ಣ ಕಳಿತಾಳ ತಿಳೀತೇನು... ಅವೆಲ್ಲಾ ಮಡಿ ಮಡಿ ಮಾಡಗೆಪಾ... ಮಾಲಪ್ಪಾ ಸಾಕು ನಡಿ..... ಬಾಟಲಿ ವಾಲಿ ಆಯ್ತು..."

"ನಿಮ್ಮವ್ವನ ಸುವ್ವರ್ ನನ್ಮಾ..... ನನಗೆ ಕೆಂಚಿನೂ ಬೇಕು...ಮತ್ತು ಮಾಲಗಸಿಮಿ ಗುಡಿ ಕಸಾ ಹೊಡ್ಯಾದನೂ ಬೇಕು... ಯಾರರ ಅಡ್ಡ ಬಂದ್ರೆ ಒಬ್ಬೊಬ್ರಿಗೆ ಕಬ್ಬ ಕಡದಂಗ ಕಚಾ ಕಚಾ ಕಡ್ದು ಬಿಡ್ತೀನಿ ಹುಷಾರ್....."

"ಥತ್ ಇದರವ್ವನ ತಂದು.... ಈ ಮಗನಿಗಿ ಭಾರಿ ನಶಾ ಆಗಿ ತಲೀಗೇರಾದ ಕಾಣಸ್ತದ. ಎಳ್ಕೊಂಡುನಡೋ ಇದಕ್ಕ....."

ಹೀಗೆ ಶಿವಳ್ಳಿಯ ಬಹುತೇಕ ಮಂದಿಯ ಬಹಳ ಮಾತುಗಳೆಲ್ಲ ಬೆಲ್ಲದ ಕರಣಿಗೆ ನೊಣ ಮುಕುರುವಂತೆ, ಡಂಗೂರದ ವಿಷಯದ ಸುತ್ತಲೇ ಮುಕುರುತ್ತಿದ್ದವು.

ಅರ್ಜಿ ಹಾಕುವ ಕೊನೆಯ ದಿನವೂ ಹತ್ತಿರವಾಯಿತು ಮ್ಯಾಗೇರಿಯ ಮಂದಿಯಿಂದ ಅರ್ಜಿಗಳು ಕಲೆಕ್ಟರ್ ಕಚೇರಿಗೆ ದೌಡಾಯಿಸಿದವು. ಅರ್ಜಿದಾರರಿಗೆ ವಯಸ್ಸಿನ ಮಿತಿಯಿತ್ತು. ಆದರೆ ಕೆಳಗೇರಿಯ ಶೂದ್ರರಿಗೆ ಅದರ ಮಿತಿಯಲ್ಲಿಯೂ ರಿಯಾಯ್ತಿ ಇತ್ತು. ಹೊಲಗೇರಿ, ಮಾದಿಗರಲ್ಲಿ, ಲಂಬಾಣಿ ತಾಂಡ್ಯಾ, ಗೊಂಡ ಕುರುಬ, ಕಾಡಸಿದ್ದರ ಕಡೆಗಳಿಂದಲೂ ಹರೆಯದ ಹುಡುಗರು ಅರ್ಜಿ ಬರೆಯಿಸಿ ಹಾಕಿದರು. ಮಲ್ಲಣ್ಣನ ತಮ್ಮ ಫುಂಡೆಪ್ಪನೂ ಮೆಟ್ರಿಕ್

ಪಾಸುಮಾಡಿದ್ದ. ಕನ್ನಡ........... ಓದಲು ಬರೆಯಲು ಸರಿಯಾಗಿ ಬರುತ್ತಿತ್ತು ಆದರೆ ಪುಂಡಿಗೂ ಸಾವಕಾರನ ಮನೆಯಲ್ಲಿ ಜೀತ ತಪ್ಪಿರಲಿಲ್ಲ. ಅವನೂ ಅರ್ಜಿಸಿದ್ದ. ಆದರೆ ಅವನು ಹಾಗೆ ಅರ್ಜಿ ಹಾಕಿದ್ದರ ಹಿಂದೊಂದು ದೊಡ್ಡ ಕಥೆಯೇ ಇತ್ತು.

ಕಲೆಕ್ಟರ್ ಈಸೂರನ ಕಡೆಯಿಂದ ಗುಟ್ಟಾಗಿ ಪುಂಡಿಗೆ ಕರೆ ಬಂದಾಗ ಅವನು ಗಾಬರಿಯಾಗಿದ್ದ. ಸಿಕ್ಕ ಬಸ್ಸು ಹತ್ತಿ ಕಲಬುರ್ಗಿಗೆ ಬಂದು ಕತ್ತಲಾಗುತ್ತಿರುವಂತೆ ಈಸೂರನ ಬಂಗಲೆಯ ಮುಂದೆ ಕೈ ಕಟ್ಟಿಕೊಂಡು ಹಾಜರಾಗಿದ್ದ. ಈಸೂರ ನಗುತ್ತ ಅವನನ್ನು ಒಳಗೆ ಕರೆದಾಗಲೇ ಪುಂಡಿಯ ಎದೆ ಬಡಿತ ಸಮವಾದದ್ದು.

"ಪುಂಡಿ.... ನೀ ಮಹಾಲಕ್ಷ್ಮಿ ಮಂದಿರದ ಕಸಗುಡಿಸೋ ಕೆಲಸಕ್ಕೆ ಯಾಕ ಅರ್ಜಿ ಹಾಕಿದ್ದಿ?"

"ಆಂ... ಊ.... ನಾ.... ನಾ... ಹಾಕ್ತಿದ್ದಿಲ್ರೀ ಸಾಬ್ರೇ..... ಕರೇವಂದ್ರ ನಾ ಒಲ್ಲೆವೋ ಅಂತ ಕುಂತಿದ್ವಿನ್ರೀ... ನಮ್ ಕೇರ್ಯಾಗಿನ ಹರ್ಯಾದ ಪಾರಗೋಳೆಲ್ಲಾ ಜಬರದಸ್ತಿಲಿಂದ... ತಪ್ಪಾಯ್ತು.... ಬೇಕಾದ್ರ ವಾಪಸ್ ತಕ್ಕೋತೀನ್ರಿ.......



ಪುಂಡಿ ಅಳುವುದೊಂದೇ ಬಾಕಿಯಿತ್ತು.

"'ಹುಚ್ಚ... ಅದಕ್ಕಲ್ಲೋ ನಾ ಹೇಳಿದ್ದು ಪುಂಡಿ.... ನೀನು ಪೂಜಾರಿ ಕೆಲಸಕ್ಕೆ ಯಾಕ ಅರ್ಜಿ ಸಲ್ಲಿಸಲಿಲ್ಲ ಅಂತ... ಹ್ಯಾಂಗಿದ್ರೂ ನಿನಗ ಕನ್ನಡ ಓದ್ಲಿಕ್ಕೆ ಬರೀಲಿಕ್ಕೆ ಬರ್ತದ... ಪೂಜಾದ ಮಂತ್ರಗೋಳೆಲ್ಲಾ ಈಗ ಕನ್ನಡದಾಗೇ ಭಾಷಾಂತ್ರ ಮಾಡ್ಸಿ ಬಿಟ್ಟೇನಿ.... ದೇವಿ ಸಿಂಗಾರ, ಸೀರಿ ಉಡಸೋ ರೀತಿ, ಅವೆಲ್ಲಾ ಸ್ವಲ್ಪ ದಿವಸ ರೂಢಿ ಆದ್ಹಂಗ ಬಾರ್ತಾದ....."

"ತೋಬಾ.... ತೋಬಾರ್ರಿ......... ಸಾಹೇಬ್ರೇ.... ಹಿಂಗಂದು ನನಗ ಪಾಪದಾಗ ಹಾಕಬ್ಯಾಡ್ರಿ.... ನಾನಂತೂ ಹೇಳಿಕೇಳಿ ಹೊಲ್ಯಾ.. ದಿನ ಬೆಳಗಾದ್ರ ಖಂಡಾ ತಿಂದು, ಸಿಂದಿ ಕುಡ್ದು ರಾತ್ರಿಯೆಲ್ಲಾ ಮೈಲಿಗಿಯಾಗೋ ಕಮ್ಮ ಜಾತಿಯಂವಾ, ಆ ಮಾತಾಯಿ ಮಹಾಲಕ್ಷ್ಮಿ ಪೂಜಾಕ್ಕ ನಾ ಯೋಗ್ಯ ಅಲ್ರೀ...'

ಈಸೂರ ಗಟ್ಟಿಯಾಗಿ ನಕ್ಕುಬಿಟ್ಟಿದ್ದ. ಎದ್ದು ಬಂದು ಅವನ ಬೆನ್ನು ತಟ್ಟಿ, ಪ್ರೋತ್ಸಾಹಿಸುವ ದನಿಯಲ್ಲಿ ಧೈರ್ಯ ತುಂಬಿದ.

"ಇಲ್ನೋಡು ಪುಂಡೀ.... ನಾನೂ ನೀನೂ ಸುಮಾರಿಗಿ ಒಂದೇ ವಯಸ್ಸಿನವರು. ಆದ್ದರಿಂದ ಸಲುಗೆ ವಹಿಸಿ ಹೇಳೀದ್ದೀನಿ, ನೀ ಮೊದ್ಲು ನಿನ್ನ ತೆಲಿಯೊಳಗಿಂದ ಆ ಹುಂಬ ವಿಚಾರಗಳಿಗಿ ಸತ್ತು ಹೊಡಿಬೇಕು. ಅಲ್ಲ... ಇಷ್ಟೊರ್ಷೆಲ್ಲ ಮಹಾಲಕ್ಷ್ಮಿ ಪೂಜಾರಿ ಆಗಿ ಆ ಆಚಾರಿಗೊಳೇ ಕೆಲ್ಸಾ ಮಾಡ್ಕೋತ ಬಂದಾರ, ಈಗ ಜಾತಿ ಕುಲ ಏನೂ ಉಳಿದಿಲ್ಲ ಈ ಗುಡಿ ಈಗ ಯಾವ ಜಾತಿಯ ಜನರದ್ದೂ ಗುತ್ತಿಗಿ ಅಲ್ಲ. ಇದು ಸರ್ಕಾರಕ್ಕೆ ಸೇರಿದ್ದು, ಸರ್ಕಾರದ ನಿಯಮದ ಪ್ರಕಾರ ನೌಕರಿ ಕುಡ್ತೀವಿ ಈ ಬ್ರಾಂಬ್ರೆಲ್ಲ ಕದ್ದು ಮುಚ್ಚಿ ಎಲ್ಲ ಕುಡಿತಾರ ಮುಂಜಾನೆದ್ದು ಮೈ ತೊಳ್ಕೊಂಡು ಮಹಾಲಕ್ಷ್ಮಿ ಪೂಜಾ ಮಾಡ್ತಾರೋ ಇಲ್ಲೋ ನೀನೇ ಹೇಳು? ಅದಕ್ಕೂ ಪೂಜಾಕ್ಕೂ ಏನೂ ಸಂಬಂಧ ಇಲ್ಲ ಮನಸ್ಸು ಮೊದಲ ಮಡಿಯಿಂದಿರಬೇಕಪ್ಪಾ ಪುಂಡಿ..... ನೀ ಸುಮ್ಮ ನಾ ಹೇಳಿದ್ದಾಂಗ ಗುಡಿಯ ಪೂಜಾರಿಯ ಕೆಲಸಕ್ಕ, ಅರ್ಜಿ ಹಾಕು ನಾನು ಈ ನನ್ ಜಿಲ್ಲಾದೊಳಗೆ ಒಂದು ಹೊಸಾ ಪದ್ಧತಿ ಸುರು ಮಾಡಿ, ಹೊಸಾ ಕ್ರಾಂತಿ ಮಾಡೋಕಂತ ಮಾಡೀನೆಪ್ಪಾ ಅದಕ್ಕೇ ಇಷ್ಟು ಒದ್ದಾಡ್ತಿದ್ದೀನಿ ಇದಕ್ಕೆ ಕೆಳಗೇರಿಯ ನಿಮ್ಮ ಜನರ ಸಹಕಾರ ಬೇಕ ನೋಡು......"

"ಅಲ್ಲಿ....ನಾನು ....ನಾನು ......"

ಪುಂಡಿಯ ಗಂಟಲೊಣಗಿತ್ತು, ಹಸ್ತ ಹೊಸೆದು, ಹಲ್ಲು ಕಿರಿದ, ಮಾತು ಕಳೆದುಕೊಳ್ಳುತ್ತ ತೊದಲಿದ.

"ನಾ ಇದ್ದೀನಲ್ಲೋ ಪುಂಡಿ ನಿನ್ನ ಹಿಂದ... ಈ ಪೂರ್ತಿ ಜಿಲ್ಲಾನೇ ನನ್ನ ಕೈಯೊಳಗದಾ ಏನಪ್ಪಾ... ಸರ್ಕಾರ, ಕಾನೂನು, ಪೋಲೀಸು, ಎಲ್ಲಾ ನಿನ್ನ ಕಡಿನೇ ಇರ್ತದ. ನೀ ಯಾವುದಕ್ಕನೂ ಅಂಜಬಾರ್ದು.... ನಿನ್ನ ಕೂದಲಳೆಳಿಗಿ ದಕ್ಕಿ ಆಗಲಾರದಂಗ ನೋಡ್ಕೋ ಜವಾಬ್ದಾರಿ ನಂದು ಮತ್ತ ನಿನಗ ತಿಂಗಳ ತಿಂಗಳಿಗೆ ಐದಾರುನೂರು ರುಪೈ ಪಗಾರ ಸಿಗ್ತದ. ಮುಂದ ವರ್ಷ ವರ್ಷಕ್ಕೆ ಹೆಚ್ಚಾಗ್ತದ ನೀ ರಿಟಾಯರ ಆದ ಮ್ಯಾಲ ಪೆನಶನ್ ಸಿಗ್ತಾದ.... ಈಗೋ ಈ ಅರ್ಜಿ ಮ್ಯಾಲ ಸಹಿ ಮಾಡು ಪುಂಡಿ......"

ತಾಸ್ಗೊತ್ತು ಈಸೂರ ತಾನು ಕಲಿತದ್ದೆಲ್ಲ ಖರ್ಚು ಮಾಡಿ ಪುಂಡಿಯ ಮಿದುಳಿನೊಳಗೆ ತುರುಕಿ, ತುರುಕಿ, ಜೋರುಹಾಕಿ ಒಳಕ್ಕೆ ತಳ್ಳಿದಾಗ ಪುಂಡಿ ಸಹಿ ಮಾಡಿದ್ದ. ಹಾಗೆ ನೋಡಿದರೆ ಪುಂಡಿಯೇನೂ ಹೆದರುಪುಕ್ಕ ಯುವಕನಾಗಿರಲಿಲ್ಲ ಅವನ ಮೈಯಲ್ಲಿಯೂ ಎಲ್ಲ ಜಾತಿಯ ಹರೆಯದ ಪೋರರ ಮೈಯಲ್ಲಿಯಂತೇ ಬಿಸಿ ರಕ್ತವೇ ಹರಿದಾಡುತ್ತಿತ್ತು. ಸಿಟ್ಟು ಸೆಡವು, ಕೋಪ ತಾಪ, ಛಲ, ಹಟ, ಅವನಿಗೂ ಇದ್ದುವು. ಆದರೆ ಅಣ್ಣ ಮಲ್ಲಣ್ಣನ ಅಂಜಿಕೆಯಿಂದ ಸುಮ್ಮನಿದ್ದ, ಈಗ ಜಿಲ್ಲೆಯ ಕಲೆಕ್ಟರನಾದ ಈಸೂರನೇ ತನ್ನ ಕಡೆಗಿರುವಾಗ ಅವನೊಳಗಿನ ಸಹಜ ಅಭಿಮಾನ ಹೆಡೆಯೆತ್ತಿತ್ತು. ಅವನು ಅರ್ಜಿಗೆ ಸಹಿ ಹಾಕಿದ್ದ.

ಮನೆಗೆ ಬಂದು ಅಣ್ಣ ಅತ್ತಿಗೆ, ಹೆಂಡತಿಯರ ಮುಂದೆ ಹೇಳಿದಾಗ ಮಲ್ಲಣ್ಣನಿಗೆ ಹೆಂಡತಿಯಂತೂ ದನಿತೆಗೆದು ಅತ್ತೆ ಬಿಟ್ಟಳು.

"ಯಾಕ್ ಹಿಂಗ್ ಮಾಡೊ ಪುಂಡೀ.... ಆ ಮತಾಯಿ ಲಗಸಿಮಿಗಿ ನಮ್ಮಂದಿ ಮುಟ್ಟಿ ಪೂಜಾ ಮಾಡಿದ್ರ ಅಕಿ ನಮಗ ಜೀವದಲ್ಲಿಂದ ಇಡಂಗಿಲ್ಲೋ ತಮ್ಮಾ.... ಯಾ ಕೆಡಗಾಲಕ್ಕ ನಿನಗ ಹಿಂತಾ ಬುದ್ಧಿ ಬಂತೋ....."

"ಏ ಸುಮ್ಕಿರೆಲೆ ಬೋಸುಡಿ...... ಯಾರರೆ ಸತ್ತ್ಹಂಗ ಅಳಬ್ಯಾಡೇ ನಿನ್ನವ್ವನಾ.... ಏನೂ ಆಗಂಗಿಲ್ಲ. ಈಸೂರ ನಮಗೆಂದೂ ಕೆಡಕ ಮಾಡಂಗಿಲ್ಲಂತ ತಿಳಿ ಸುಮ್ಕಿರು......"

ಮಲ್ಲಣ್ಣ ಹೆಂಡತಿಗೆ ಬೈಯ್ದು ಅವಳ ಬಾಯಿ ಮುಚ್ಚಿಸಿದರೂ ಒಳಗೊಳಗೆ ಕೆಟ್ಟ ವಿಚಾರಗಳು ಎದ್ದು ಬಂದು ಅವನ ಎದೆಗುಂಡಿಗೆ ಗುದ್ದ ತೊಡಗಿದುವು ಸಲ್ಲದ ಶಂಕೆಗಳು ಅವನ ಮೆದುಳು ಚುಚ್ಚತೊಡಗಿದಾಗ ಅವನು ಪುಂಡಿಯನ್ನು ಕರೆದುಕೊಂಡು

ಹೆಂಡದ ದುಕಾನಿನ ಕಡೆಗೆ ನಡೆದನು.

ರಾತ್ರಿ ಹಾಸಿಗೆಯಲ್ಲಿ ಪುಂಡಿಯ ಹೆಂಡತಿ ಕಾಳಿ ಸೊರ ಬುರೆ ಸದ್ದು ಮಾಡುತ್ತ ಅಳುತ್ತ ಮಾತುಗಳನ್ನು ಎತ್ತಿ ಎತ್ತಿ ಗಂಡನ ಎದೆಗೆ ಬೀಸಿ ಒಗೆಯ ತೊಡಗಿದಳು.

"ಮದ್ಲೇ ನಮಗ ಇನ್ನಾ ಮಕ್ಕಳಾಗಿಲ್ಲ. ನಿಮ್ಮಣ್ಣ ಅತ್ತಿಗಿಗಿಗೂ ಮಕ್ಕಳೇ ಆಗಲಿಲ್ಲ. ಯಾ ದೇವ್ರ ಕಾಟಾನೋ ಏನೋ.... ಈಗ ಮಾತಾಯಿ ಮಾಲಗಸಿಮಿಗಿ ಮುಟ್ಟಿ ಪೂಜಾ ಮಾಡ್ಲಿ ಅಂದ್ರ ನಮಗ ಏಳೇಳು ಜನ್ಮ ಮಕ್ಕಳೇ ಆಗಲಿಕ್ಕಿಲ್ಲ. ನಮ್ಮ ಮನ್ಯಾಗ ರಗತದ ಹೊಳಿ ಹರಸ್ತಾಳ ಆ ತಾಯಿ, ದನದ ಖಂಡಾ ತಿಂದು, ಬನದ ಸಿಂದಿ ಕುಡ್ಯಾ ಹೊಲ್ಯಾ ಆಗಿ ನೀ ಹಿಂಗ್ಯಾಕ ಮಾಡ್ದ್ಯೋ......."

"ಇದೆಲ್ಲಾ ಈಸೂರಪ್ಪಗ ಹೇಳೀನೇ ಕಾಳಿ.. ಇದರಾಗೇನೂ ತೆಪ್ಪಿಲ್ಲಂತ ಅವರೇ ಹೇಳ್ಯಾರ, ಪೂಜಾಕ್ಕ ಹೋಗಾ ಮುಂದ ಮಡಿಲಿಂದ ಹ್ವಾದ್ರ ಸಾಕು ಅಂದ್ರೂ....."

"ಹೂಂ.. ಅಂತಾರ.... ಅವು ದೊಡ್ಡ ಮಂದಿ, ಏನೇನೋ ಅಂತರಾ, ಅದಕ್ಕೆ ನೀ ಗಂಗೆತ್ತಿನಂಗ ತಲಿಹಾಕಿ ಬಂದಿ ಆಯ್ತು... ನಾಳಿಗ ನಿನಗ ಏನರ ಜೀವವಕ ಧೋಕಾ ಆದ್ರೆ ನಾ ರಂಡಿಮುಂಡಿ ಆಗ್ತಿನಿ ನಿನಗೇನಾಗ್ತದೋ......

ಅವಳ ಅಳು ಹೆಚ್ಚಾಯಿತು. ಪುಂಡಿ ಸುಮ್ಮನಾದಷ್ಟು ಕಾಳಿ ಜೋರಾದಳು. ಅವನು ತಣ್ಣಗಿದ್ದಷ್ಟು ಅವಳು ಗರಂ ಆದಳು. ಪುಂಡಿಗೊ ಮೊದಲೇ ತಲೆಯಲ್ಲಿ ಹುಳುಗಳೆದ್ದು



ಸೊಕ್ಕಿನಿಂದ ಗುಂಯಗುಡುತ್ತಿದ್ದುವು. ಆಗತಾನೇ ಕುಡಿದು ಬಂದ ಸೇಂದಿಯ ಅಮಲು ಬೇರೆ, ಕತ್ತಲಲ್ಲೇ ಕಾಳಿಯ ಕಣ್ಣೆರಸಿ, ತೋಳು ಬಳಸಿ, ಗಲ್ಲಕ್ಕೆ ಗಲ್ಲ ಒತ್ತಿದಾಗ ಕಾಳಿ, ಕಾದ ಹೆಂಚಿನ ಮೇಲಿನ ಎಳ್ಳಿನಂತೆ ಥಟ್ಟನೆ ಸಿಡಿದಳು. "ಸುಮ್ಮಾರ ಬೀಳು.... ಖಬರದಾದ ಅಂತೀನಿ, ನನಗ ಮುಟ್ಟ ಬ್ಯಾಡಂದ್ರ ಮುಟ್ಟಬ್ಯಾಡ....." ಅವಳು ಅಷ್ಟು ಅಂದದ್ದೇ ತಡ ಇಷ್ಟು ಹೊತ್ತ ಪುಂಡಿ ತಡೆದಿದ್ದ ಎಲ್ಲರ ಮೇಲಿನ ಎಲ್ಲ ಸಿಟ್ಟು, ಸಂತಾಪ, ಗೊಂದಲಗಳನ್ನು ಸಂಯಮದ ಕಟ್ಟೆಯೊಡೆದು ಹೊರನುಗ್ಗಿದುವು.

"ಹಲ್ಕಟ್ ರಂಡೀ... ಒಂದೇ ಸವನ ಒದರಲಕ್ಹತ್ತಾದ ಇದರವ್ವನ..... ಸಾಯಿ........" ಎಂದವನೇ ಧಬ ದಭನ ಅವಳಿಗೆ ಎಂಡ್ಹತ್ತು ಗುದ್ದು ಗುದ್ದಿ. ದೂರತಳ್ಳಿ, ಕೌದಿ ಎಳೆದುಕೊಂಡು ಹೊರಬಂದು. ಅಂಗಳದಲ್ಲಿ ಹಾಸಿಕೊಂಡು ಮಲಗಿದನು. ಬಹಳ ಹೊತ್ತು ಗುಡಿಸಲೊಳಗಿಂದ ಕಾಳಿಯ ಅಳು, ಬೈಗುಳಗಳು ಕ್ಷೀಣವಾಗಿ ಹೊರಬರುತ್ತ ಮೊದಲು ಅವನ ಕಿವಿಗೆ ತಾಕುತ್ತ ಕ್ರಮೇಣ ಅವನ ಗೊರಕಿಯಲ್ಲಿ, ಅದರ ಸದ್ದಿನಲ್ಲಿ ಸಾಯತೊಡಗಿದುವು.

ಒಂದು ನಿಗದಿತ ದಿನ ನೌಕರಿಯ ಇಂಟರ್‌ವ್ಯೂವ್‌ಗೆ ಹಾಜರಾಗುವಂತೆ ಅರ್ಜಿ ಸಲ್ಲಿಸಿದವರಿಗೆಲ್ಲ ಎಂಡೋಮೆಂಟ ಇಲಾಖೆಯ ಅಧ್ಯಕ್ಷರೂ ಆಗಿದ್ದ ಕಲೆಕ್ಟರ, ಈಸೂರನ ಕಛೇರಿಯಿಂದ ಶಿವಳ್ಳಿಗೆ ಪತ್ರಗಳು ರವಾನೆಯಾದುವು. ಅಂಚೆಯಾಳು ಧೂಳಪ್ಪ ಅವುಗಳನ್ನು ಹಳ್ಳಿಯ ಮ್ಯಾಗೇರಿ, ಕೇಳಗೇರಿ ಹಾರುವಕೇರಿ, ಹೊಲಗೇರಿಗಳಲ್ಲೆಲ್ಲ ಹಂಚಿ ಹೋದ.

ಉಳ್ಳವರು ಭರ್ಜರಿಯಾಗಿ ಧಿರಿಸು ಹಾಕಿಕೊಂಡು ಸಂದರ್ಶನಕ್ಕೆ ನಡೆದರು. ಎದೆಗುಂಡಿಗೆಗಳ ತುಂಬ ಪುಕ್ಕಲುತನ ತುಂಬಿಕೊಂಡ ಕೆಳಗೇರಿಯವರೂ ಇದ್ದುದರಲ್ಲಿಯೇ ಶಿಸ್ತಿನಿಂದ ನಡೆದರು. ಜರಿಯಂಚಿನ ಗುಲಾಬಿ ಬಣ್ಣದ ಮಡಿಪಂಚೆಯುಟ್ಟು ಬೆತ್ತಲೆ ಎದೆ, ಹೊಟ್ಟೆ, ಹಣೆಯ ಮೇಲೆ ಗಂಧ ವಿಭೂತಿಯ ಪಟ್ಟೆ ಬಳಿದುಕೊಂಡು, ಕೊರಳಲ್ಲಿ ಬಂಗಾರದಲ್ಲಿ ಪೋಣಿಸಿದ ರುದ್ರಾಕ್ಷಿ ಧರಿಸಿ, ಸಂಸ್ಕೃತ ಶ್ಲೋಕಗಳನ್ನು ಗುಣಗುಣಿಸುತ್ತ ಬಸ್ಸು ಹತ್ತಿದ

ಆಚಾರೆಪ್ಪನನ್ನು, ಥಾಟಾಗಿ ಬಂದು ಕುಂತ ಶಿವಳ್ಳಿಯ ಮೇಲು ಕೆಳಗಿನ ಗಲ್ಲಿಗಳ ಮಂದಿಯನ್ನು ಕಂಡು ಬಸ್ಸಿನಲ್ಲಿದ್ದವರೆಲ್ಲ ಕಣ್ಣು ಕಣ್ಣು ಬಿಟ್ಟರು.

ಸಂದರ್ಶನ ಮುಗಿದು ಎಂಟು ಹತ್ತು ದಿನಗಳಾಗಿದ್ದುವು ಅರ್ಜಿದಾರರೆಲ್ಲ ತಮ್ಮ ತಮ್ಮ ನೌಕರಿಯ ಆರ್ಡರಿಗಾಗಿ ದಿನವೂ ಧೂಳಪ್ಪನ ದಾರಿ ಕಾಯುತ್ತಿದ್ದರು. ಆದರೆ ಖಾಲಿ ಬರುವ ಧೂಳಪ್ಪ ಮುಗಿಲಿಗೆ ಕಣ್ಣ, ಕೈ ತಿರುವಿ ತಾರಮ್ಮಯ್ಯ ಹಾಡಿ ಮುಂದಿನೂರಿಗೆ ಸೈಕಲ್ ಬಿಡುತ್ತಿದ್ದ.

ಅಂತೂ ಇಂತೂ ಕೊನೆಗೊಂದು ದಿನ ಕಲಬುರ್ಗಿಯಿಂದ ಶಿವಳ್ಳಿಯ ಕೆಲವರಿಗೆ ಮಹಾಲಕ್ಷ್ಮೀ ಮಂದಿರದ ನೌಕರಿಗಳ ಅಪಾಯಿಂಟಮೆಂಟ್ ಆರ್ಡ್ರಗಳು ಬಂದುವು.

ಅದರಲ್ಲಿ ಮುಖ್ಯವಾದ ವಿಚಿತ್ರವೆಂದರೆ ಹಿಂದಿನಿಂದಲೂ ಗುಡಿಯ ಪೂಜಾರಿಕೆ ಮಾಡುತ್ತ ಬಂದಿದ್ದ ಆಚಾರಿ ಮನೆತನದ ಶೀನಪ್ಪಾಚಾರಿಗೆ ಪೂಜಾರಿಕೆಯ ಬದಲಾಗಿ ಗುಡಿಯ ಆಚಾರದ ಕಸಗುಡಿಸುವ ಕೆಲಸ, ಲಿಂಗಾಯತರ ಬಸನಿಂಗಪ್ಪನಿಗೆ ಗುಡಿಯ ಕಾರುಭಾರಿಯ ಕೆಲಸ ಸಿಕ್ಕಿತ್ತು ಎಸ್ಸಿ ಜನಾಂಗದಲ್ಲಿ ಬರುವ ಹೊಲೆಯ ಪುಂಡನಿಗೆ ಮಾತ್ರ ಮಹಾಲಕ್ಷ್ಮಿಯ ಪೂಜಾರಿಕೆಯ ಹುದ್ದೆ ದಕ್ಕಿತ್ತು!



ಬಹಳ ವರ್ಷಗಳಿಂದ ತಮ್ಮ ಗಲ್ಲಿಯ ಮರಗವ್ವನ ಪೂಜೆ ಮಾಡತ್ತಲೆ ಬಂದಿದ್ದ ಪುಂಡಿಗೆ ಇದು ಬಡ್ತಿಯಂತಾಗಿತ್ತು. ಎಲ್ಲರೂ ತಂತಮ್ಮ ಆರ್ಡರ್ ಕಾಗದಗಳನ್ನು ಹತ್ತು ಹತ್ತು ಸಲ ಓದಿ, ಓದಿಸಿ, ಖಾತ್ರಿಪಡಿಸಿಕೊಂಡರು. ಆಚಾರೆಪ್ಪನ ಬೆಕ್ಕಿನ ಕಣ್ಣುಗಳಲ್ಲಿ ನೆತ್ತರಿಳಿಯಿತು. ಹಲ್ಲಿಗೆ ಹಲ್ಲು ಮಸೆದುವು. "ಹಲ್ಕಟ್ ಸೂಳ್ಯಾ ಮಕ್ಕು ಎಲ್ಲೋರೂ.... ತಾಯಿಗ್ಗಂಡ್ರು.... ಹುಂ......" ಎಂದು ಬೈಗುಳಗಳನ್ನು ಝಾಡಿಸಿ ಒಗೆಯುತ್ತ, ಕೈಯಲ್ಲಿಯ ಕಾಗದವನ್ನು ಹರಿದು ಚೂರು ಚೂರು ಮಾಡಿ ನೆಲಕ್ಕೆಸೆದು ಹೂ ಎಂದು ಉಗುಳಿ ಮೆಟ್ಟುಗಾಲಿನಿಂದ ಗಸಗಸನೆ ತಿಕ್ಕಿದನು ಸಿಟ್ಟಿನ ಉರಿ ತಣ್ಣಗಾಗಲಿಲ್ಲ. ತಟ್ಟನೆ ಜೇಬಿನಿಂದ ಕಡ್ಡಿ ಡಬ್ಬಿ ತೆಗೆದು ಚರನೆ ಕಡ್ಡಿಗೀರಿ ಕಾಗದದ ಚೂರುಗಳಿಗೆ ಉರಿ ಹಚ್ಚಿದನು. ಅವೆಲ್ಲ ಉರಿದು ಕರಕಾಗಿ ಕರಿಕಾಗೆಯ ಪುಕ್ಕಗಳಂತೆ ಗಾಳಿಯಲ್ಲಿ ಮೇಲಕ್ಕೆ ಹಾರಿದುವು.

ಶಿವಳ್ಳಿಯೆಂಬೋ ಶಿವಳ್ಳಿಯೆಲ್ಲಾ ಅಂದು ಉಲ್ಟಾಪಲ್ಟಾ ಆಯಿತು. ತಲೆ ಕೆಳಗೆ ಕಾಲು ಮೇಲಾಗಿ ನಿಂತು ತೇಕ ತೊಡಗಿತು. ಸುದ್ದಿ ಸಂಜೆ ಹೊಲ ಗದ್ದೆಗಳಿಂದ ಮನೆಗುಡಿಸಲುಗಳಿಗೆ ಬರುವ ಮಂದಿಯನ್ನು ಎದುರುಗೊಳ್ಳಲು

ಮೈಮೇಲಿನ ಖಬರು ಹಾರಿ ದೌಡಾಯಿಸುತ್ತ ; ಮೈಮೇಲೆ ಬಂದವರಂತೆ ಝೇಲಿ ಹೊಡೆಯುತ್ತ ಹೇಳಿಕೆಗೆ ಶುರಮಾಡಿತು.

ಹಾರುವರೆಲ್ಲ ಸಿಟ್ಟು ಅಪಮಾನಗಳಿಂದ ಮುಸು ಮುಸು ಮಾಡಿದರು. ಹಲ್ಕಟ ಸರ್ಕಾರ ಹಲ್ಕಟ್ ಕಾನೂನು ಎಂದರು. ರೋಸ್ವರಂತೆ. ದೇವರ ಪೂಜೆಗೂ ಹೊಲೆಮಾದಿಗರು ಪೂಜಾರಿಗಳೆ? ಇದ್ದ ಬಿದ್ದ ಧರ್ಮ ಆಚಾರಗಳೆಲ್ಲ ಹಾಳಾದುವು. ಎಂದರು. ಇದು ಈಸೂರನ ಅಧರ್ಮದ ಪರಮಾವಧಿ, ರಾವಣಾಸುರ ಇವನು. ರಾಮ ಅವತಾರ ಎತ್ತಿ ಬಂದು ಇವನನ್ನು ಸಂಹರಿಸುತ್ತಾನೆ ಎಂದರು. ಆಚಾರಿಯಂತೂ ನಿಂತಲ್ಲಿ ನಿಲ್ಲಲಾರದೆ ಕುಂತಲ್ಲಿ ಕೂಡದೆ, ಬಾಲ ಸುಟ್ಟ ಬೆಕ್ಕಿನಂತೆ ಕೇರಿಯ ತುಂಬ ಓಡಾಡುತ್ತ ತನಗಾದ ಅನ್ಯಾಯಕ್ಕೆ ಉಪ್ಪುಕಾರ ಹಚ್ಚಿ ಬೈಯುತ್ತ ಅಳುತ್ತಿದ್ದ,

ಈ ಮಂದಿಯ ಬುದ್ಧಿಗೇಡಿತನಕ್ಕೆ ರೋಸಿ ಹಗಲು ಸರಿದು ಮುಸ್ಸಂಜೆಯಾವರಿಸಿತು. ಎಲೆ ತಿಂದು ಉಗುಳಿದ ಪಾನ್ ಅಂಗಡಿಯ ಮುಂದಿನ ರಸ್ತೆ, ನೆಲದಂತೆ ಆಕಾಶೆಂಬೋ ಅಕಾಶೆಲ್ಲಾ ಕೆಂಪಗಾಯಿತು. ಮ್ಯಾಗೇರಿಯ ಮಂದಿಯ ಸಿಟ್ಟಿನ, ಬಿಸಿಯುಸಿರಿನ ಹಬೆಗೆ ಸಂಜೆಯ ತಂಗಾಳಿಯೂ ಬೆಚ್ಚಗಾಯಿತು.

ರಾತ್ರಿಯಾಯಿತೂ, ಬೇರೆ ಯಾವುದರ ನಕಲಿ ಕಲಬೆರಕೆಗೂ ಒಗ್ಗದ, ಅಪ್ಪಟ ಕತ್ತಲೆ ಗಟ್ಟಿಯಾಗ ತೊಡಗಿತು. ಕೆಳಗೇರಿಯ ಮಂದಿಯೆಲ್ಲ ಬಾಯಿಗೆ ಬೀಗ ಜಡಿದಂತೆ ಗಪಚಿಪ ಆದರು ಎಲ್ಲರಿಗೂ ಯಾಕೋ ತಾವೇ ಏನೋ ತಪ್ಪು ಮಾಡಿದಂಥ ಅಳುಕು ಹರೆಯದ ಹುಡುಗರು ಕೆಲವರು ಮಾತ್ರ ಪುಂಡಿಯನ್ನು ಎಳೆದುಕೊಂಡು ಹಣಮಪ್ಪನ ಗುಡಿ ಬೈಲಿಗೆ ಬರುತ್ತ ತಮ್ಮೆದೆಯ ಖುಷಿಯನ್ನು ಅವನ ಮೈ ತುಂಬ ಮೆತ್ತಿದರು. ಮಲ್ಲಣ್ಣ ತಮ್ಮನ ಮೈದಡವಿದ ನೋಕರಿ ಸಿಕ್ಕ ಕೆಳಗೇರಿಯ ಎಲ್ಲರೂ ಒಂದೇ ದಿನ ತಮ್ಮ ಮಂದಿರದ ಕೆಲಸಕ್ಕೆ ಹಾಜರಾಗಲು ನಿರ್ಧರಿಸಿದರು.

ನಾಳೆಯೇ ಮುಂಜಾನೆ ಪುಂಡಿ ಮಹಾಲಕ್ಷ್ಮಿಯ ಗುಡಿಯ ಪೂಜೆಗೆ ನಿಲ್ಲಬೇಕು.

ಹಿಂದಿನ ರಾತ್ರಿಯೆಲ್ಲ ಕೆಳಗೇರಿಯಲ್ಲಿ ಎಲ್ಲರ ಗುಡಿಸಲುಗಳ ಸಾರಣೆ ಕಾರಣೆ ಕಂಡುವು. ಅಂದು ರಾತ್ರಿ ಯಾರು ಸೇಂದಿ ಕುಡಿಯಲಿಲ್ಲ ಪುಂಡಿಯಂತೂ ಆರ್ಡರ ಕಾಗದ ಬಂದಾಗಿನಿಂದಲೂ ಕುಡಿಯುವುದನ್ನು ಬಿಟ್ಟಿದ್ದ ಕಾಳಿಯ ಮಗ್ಗುಲಿನಿಂದಲೂ ದೂರವಿದ್ದ, ಭೋಳೆತನದ ಈ ಕೆಳಜಾತಿಯ ಮಂದಿ ಮಹಾಲಕ್ಷ್ಮಿ ದೇವಿಗೆ ಹೆದರಿ ಆ ರಾತ್ರಿಯಂತೂ ಯಾರೂ ಜೋಗಿಣಿ ಪರಹೆಂಗಸರಿರಲಿ ಸ್ವಂತ ತಮ್ಮ ಹಂಡಿರ ಹಾಸಿಗೆಗೂ ಹೋಗದೆ ಮಡಿ ಪಾಲಿಸಿದರು ಮರಗವ್ವ ದೇವತೆಯ ಮಾತು ಬೇರೆಯಿತ್ತು. ಅವಳು ಅವರಿಗೆ ತಲೆತಲಾಂತರಿಂದ ಗೊತ್ತು ಆದರೆ ಈ ಮೇಲಿನ ಕುಲದ ದೇವತೆ ಮಹಾಲಕ್ಷ್ಮಿ ತೀರ ಅಪರಿಚಿತಳು ಹೇಗೋ ಏನೋ.....

ಹರೆಯ ಮೈಹೊಕ್ಕು, ದಾಸವಾಳದ ಗಿಡದ ತುಂಬ ಹೂ ಅರಳಿದಂತೆ ಶಿವಳ್ಳಿಯ ಪೂರುವ ಅಕಾಶವೆಲ್ಲ ಕುಂಕುಮ ಚೆಲ್ಲಾಡಿತು. ಗಿಡಗಂಡೆಯ ಕೊರಳುಗಳು ಹಕ್ಕಿದನಿಯಲ್ಲಿ ಶುಭ ಬೆಳಗು ಹಾಡಿದುವು. ಪುಂಡಿ ಎರಡೆರಡು ಸಲ ಹೊಳೆಯಲ್ಲಿ ಮುಳುಗಿದ್ದು, ಹೊಸ ಪಂಚೆಯುಟ್ಟು, ಹೆಗಲಿಗೊಂದು ಕೆಂಬಣ್ಣದ ಅಗ್ಗದ ಟವಲು ಹಾಕಿಕೊಂಡು ಹಾಲು ಸಕ್ಕರೆಯ ಬಟ್ಟಲಿನೊಂದಿಗೆ ಮಹಾಲಕ್ಷ್ಮಿ ಗುಡಿಯ ಬಾಗಿಲು ತೆರೆದು ನಿಂತ, ಪುಂಡಿ ಬಾಗಿ ಹೊಸ್ತಿಲಿಗೆ ಹಣೆಯಿಟ್ಟು ಒಳಬಂದ ಕಪ್ಪುಕಲ್ಲಿನಲ್ಲಿ ಕಡೆದ ಮಹಾಲಕ್ಷ್ಮಿಯ ಮುಖ ನಂದಾದೀಪದಲ್ಲಿ ಥಳಥಳಿಸುತ್ತ ನಗೆಬೀರಿತು.

ಲಿಂಗಾಯಿತರ ಬಸಲಿಂಗವ್ವ ಬುಟ್ಟಿ ತುಂಬ ಹೂ ಹರಿದು ಹಾರಕಟ್ಟಿ ತಂದಿಟ್ಟಳು. ಮಂದಿರದ ಆವರಣದ ಕಸಗುಡಿಸಲು ಆಚಾರಿ ಬಂದಿರಲಿಲ್ಲವಾಗಿ ಅವಳೇ ಲಗುಬಗೆಯಿಂದ ಕಸಗುಡಿಸಿ, ನೀರು ಹಾಕಿದಳು ಅಷ್ಟರಲ್ಲಿ ಪುಂಡಿಯ ಪೂಜೆ ಮುಗಿಯಿತು. ತನಗೆ ತಿಳಿದಂತೆ ಅವನು ದೇವಿಗೆ ಸೀರೆಯುಡಿಸಿ, ಸಿಂಗಾರ ಮಾಡಿದ್ದ, ಕುಂಕುಮ ಅರಿಶಿಣ ಲೇಪಿಸಿದ್ದ ನೂರು ಸಲ ಅವಳಿಗೆ ಮನದೊಳಗೆ ವಂದಿಸುತ್ತ ಏನಾದ್ರೂ ಚೂಕ್ ಆದ್ರ ಮಾಫ್ ಮಾಡು ನನ್ನವ್ವಾ...... ಎಂದು ಕಣ್ಣು ತುಂಬಿ ಅಂಗಲಾಚಿದ್ದ.

ಪೂಜೆ ಮುಗಿಯಿತು ಗಂಟೆ ಬಾರಿಸಿ ಮಂಗಳಾರತಿಯ ತಟ್ಟೆ ಹಿಡಿದುಕೊಂಡು ಹೊರಬಂದು ನೋಡುತ್ತಾನೆ. ಎಲ್ಲ ಕಡೆ ತನ್ನದೇ ಕೆಳಗೇರಿಯ ಕಪ್ಪು ಕುಲದ ಮಂದಿಯ ಮುಖಗಳೇ ಎಲ್ಲ ಕಡೆ ಕಣ್ಣಗಲಿಸಿ ದಿಟ್ಟಿಸಿದ ಒಂದಾದರೂ ಮ್ಯಾಗೇರಿಯ ಮೇಲಿನ ಕುಲದ ಮಂದಿಯ ಮಾರಿ ಕಾಣಲಿಲ್ಲ. ಅವನು ಕ್ಷಣಕಾಲ ಕಂಗಾಲಾದ ಇದ್ದಬಿದ್ದ ಧೈರ್ಯ ಕುಸಿಯಿತು. ಒಮ್ಮೆ ತನ್ನ ಮಂದಿಯನ್ನು ಮತ್ತೊಮ್ಮೆ ಗರ್ಭಗುಡಿಯಲ್ಲಿಯ ಮಹಾಲಕ್ಷ್ಮಿಯ ಮುಖವನ್ನು ಮಿಟಿಮಿಟಿ ನೋಡಿದ ಅವಳೇನು ಮಹಾಲಕ್ಷ್ಮಿಯೋ ಮರಗವ್ವನೋ ಅನ್ನೋದು ಒಂದುಗಳಿಗೆ ಅವನಿಗೆ ತಿಳಿಯಲಿಲ್ಲ. ಮರುಗಳಿಗೆ ಎಲ್ಲರಿಗೂ ಮಂಗಳಾರತಿಯ ತಟ್ಟೆಕೊಟ್ಟು ಒಳಬಂದು ತಟ್ಟೆ ಕೆಳಗಿಟ್ಟವನೇ ಮಹಾಲಕ್ಷ್ಮಿಯ ಮೂರ್ತಿಯ ಪಾದಗಳನ್ನಪ್ಪಿಕೊಂಡು ಕುಸಿದು ಬಿದ್ದು ಹಸುಗೂಸಿನಂತೆ ಬಿಕ್ಕಿ ಬಿಕ್ಕಿ ಅಳತೊಡಗಿದ. ಮರು ನಿಮಿಷ ಹುಚ್ಚು ಆವೇಶದಿಂದ ಗಸಕ್ಕನೆ ಎದ್ದು ನಿಂತ. ಅವನ ಕಣ್ಣುಗಳ ಕೆಂಪಿನಲ್ಲಿ ಎಂಥದೋ ನಿಶ್ಚಯ ರೂಪುಗೊಂಡಿತ್ತು. ದಡದಡನೆ ದೃಡ ಹೆಜ್ಜೆಗಳಿಡುತ್ತ ಹೊರಬಂದ. ಆಗಲೇ ಜನರೆಲ್ಲ ಹೊರಟು ಹೋಗಿದ್ದರು. ಪುಂಡಿ

ಸಡಸಡನೆ ಹೊರಬಂದ, ಮುಂದಿನ ಮಹಾದ್ವಾರದ ಬಳಿ ಪೊಲೀಸ ಪೇದೆಗಳಿಬ್ಬರೊಂದಿಗೆ ಇನ್ಸ್ಪೆಕ್ಟರ್ ಶಿವರಾಮ್ ನಿಂತಿದ್ದ. ಪುಂಡಿ ಮಾತಾಡಿದ.

"ನಡೆಯಿರಿ ಇನ್ಸ್‌ಪೆಕ್ಟರೇ.... ದೇವಿಯ ವಸ್ತ್ರ, ಬಂಗಾರದ ಒಡವೆಗಳೆಲ್ಲ ಹಿಂದಿನ ಪೂಜಾರಿಯಾಗಿದ್ದ ಆಚಾರೆಪ್ಪನ ಸುಪರ್ದಿನಲ್ಲೇ ಇವೆ. ಅವನಿಂದ ಮೊದಲು ಛಾರ್ಜು ತಗೋತಿನಿ, ನೀವು ನನ್ನ ಜೋಡಿ ಬರ್ಬೇಕು.... ಬರ್ತೀರಲ್ಲ?" "ನಿಮಗೆ ಎಲ್ಲ ರೀತಿಯಿಂದಲೂ ಸಹಕರಿಸಬೇಕೆಂದೇ ಕಲೆಕ್ಟರ್ ಸಾಹೇಬರ ಅಪ್ಪಣೆಯಾಗಿದೆ. ನಡೆಯಿರಿ ಪೂಜಾರಿಗಳೇ.... ಬರ್ತೀನಿ......"

ಪುಂಡಿ ಪೂಜಾರಿಯ ವೇಷದಲ್ಲಿಯೇ ಸಡಸಡನೆ ಆಚಾರೆಪ್ಪನ ಮನೆಯ ಕಡೆಗೆ ದಾಪುಗಾಲು ಹಾಕಿದನು. ಪೊಲೀಸ ಅಧಿಕಾರಿ ಪೇದೆಗಳೊಂದಿಗೆ ಜೊತೆಗೂಡಿದ. ಮುಂದೆ ನಡೆದಂತೆಲ್ಲ ಕೆಳಗೇರಿಯ ಬಿಸಿ ರಕ್ತ ಹಸಿ ಹರೆಯದ ಅವನ ವಾರಿಗೆಯ ಗೆಳೆಯರು ಗುಂಪು ಗುಂಪಾಗಿ ಅವನೊಂದಿಗೆ ಹೆಜ್ಜೆಹಾಕತೊಡಗಿದರು. ಆಚಾರೆಪ್ಪನ ಮನೆಗೆ ಹೋಗುತ್ತ ಹೋಗುತ್ತ ಗುಂಪು ದೊಡ್ಡದಾಗತೊಡಗಿತು. ಮ್ಯಾಗೇರಿಯ ಕೆಲವೇ ಮಂದಿಯ ಕೆಲವೇ ಮನೆಗಳೆಲ್ಲ; ಶೂದ್ರರ ಕಾಲ್ತುಳಿತದಿಂದೆದ್ದ ಮಣ್ಣು ಧೂಳಿನಿಂದ ಮುಚ್ಚಿ ಹೋಯಿತು. ಅವರು ಆಚಾರಿಯ ಮನೆಗೆ ಬಂದಾಗ ಮನೆ ಬಾಗಿಲಿಗೆ ಬೀಗ ಹಾಕಿತ್ತು! ಆಚಾರಿ ಮಹಾಲಕ್ಷ್ಮಿ ದೇವಿಯ ಆಭರಣಗಳೊಂದಿಗೆ ಹಿಂದಿನ ರಾತ್ರಿಯೇ ಪರಾರಿಯಾಗಿದ್ದ.

## ಮುಳ್ಳುಗಳು

**ವೀಣಾ ಶಾಂತೇಶ್ವರ**

ಪೋಸ್ಟಾಫೀಸಿನ ಟಾವರ್‌ಕ್ಲಾಕಿನಲ್ಲಿ ಏಳು ಗಂಟೆ ಹೊಡೆದ ಸದ್ದು, ಕೊನೆಗೂ ಬೆಳಗಾಯಿತು. ಅಯ್ಯೋ, ಎಷ್ಟು ಬೇಸರ! ಈ ಮಳೆಗಾಲದಲ್ಲಂತೂ ಉದ್ದುದ್ದವಾದ ರಾತ್ರಿಗಳನ್ನು ಕಳೆಯುವುದೆಂದರೆ ಪ್ರಾಣಸಂಕಟ. ನಿದ್ದೆಯಾದರೂ ಎಷ್ಟೆಂದು ಬಂದೀತು? ನಡುವೆ ಎಚ್ಚರಾದಾಗ ಬೇಸರವೋ ಬೇಸರ, ಕತ್ತಲು. ಮಚ್ಚರದಾನಿಯಲ್ಲಿ, ಕೋಣೆಯಲ್ಲಿ, ಕೋಣೆಯ ಹೊರಗಡೆ ಎಲ್ಲಾ ಕಡೆ ಕತ್ತಲೋ ಕತ್ತಲು. ಜಿಟಿ-ಜಿಟಿ ಮಳೆಯ ಸಪ್ಪಳ ಬೇರೆ. ನಿದ್ರೆಗಾಗಿ ಹಾಸಿಗೆಯಲ್ಲಿ ಹೊರಳಾಡಿದಷ್ಟೂ ಕಣ್ಣು ನಿಚ್ಚಳವಾಗುತ್ತವೆ. ಇಲ್ಲದ ಸಲ್ಲದ ವಿಚಾರ ಬೇರೆ... ಹಾಳು ವಿಚಾರಗಳು... ಹಾಳು ಹಳೇ ವಿಚಾರಗಳು... ಮೆತ್ತನ್ನ ಹಾಸಿಗೆ ಮುಳ್ಳಾಗಿ ಮೈಗೆ ಚುಚ್ಚುತ್ತದೆ, ಇನ್ನು ಎಂದಾದರೂ ಬೆಳಗಾದೀತೋ ಇಲ್ಲವೋ ಎನ್ನಿಸುವಷ್ಟರ ಮಟ್ಟಿಗೆ ಬೇಸರ ಬರುತ್ತದೆ.

ಅಂತೂ ಬೆಳಗಾಯಿತು. ಮಗ್ಗುಲ ರೂಮಿಗೆ ಹೊಸದಾಗಿ ಪಿ.ಯು.ಸಿ. ಗೆ ಬಂದ ಹುಡುಗಿ ಎತ್ತರದ ಧ್ವನಿಯಲ್ಲಿ ಉದಯರಾಗ ಹಾಡುತ್ತಿದ್ದಾಳೆ. ಯಾವುದೋ ದರಿದ್ರ ಹಿಂದಿ ಫಿಲ್ಮಿನ ರೋಮ್ಯಾಂಟಿಕ್ ಗೀತೆ, ಮೂಲೆಯ ಬಾಥರೂಮಿನ ನಳದಿಂದ ಜೋರಾಗಿ ನೀರು ಸುರಿಯುತ್ತಿರುವ ಸದ್ದು ಕೇಳುತ್ತಿದೆ. ಕಸಗುಡಿಸುವ ಸದ್ದು, ಯಾರ ರೂಮಿನಲ್ಲೋ ಚಹಾ ಮಾಡಲು ಸ್ಟೋವ್ ಹೊತ್ತಿಸಿದ ಸದ್ದು, 'ಹಲೋ, ಗುಡ್ ಮಾರ್ನಿಂಗ್', ಹಾಸ್ಟೆಲು ಎಚ್ಚತ್ತಿದೆಯೆಂದು ಹೇಳುತ್ತಿವೆ.

ಏಳಲಿಕ್ಕೇ ಬೇಸರ, ರಾತ್ರಿ ಮಲಗಿರಲಿಕ್ಕೆ ಬೇಸರ. ಮುಂಜಾನೆ ಏಳಲಿಕ್ಕೆ ಬೇಸರ... ಎದ್ದಾದರೂ ಮಾಡುವುದೇನು ಇಷ್ಟು ಬೇಗ? ಅಭ್ಯಾಸದ ತಲೆನೋವಂತೂ ಇಲ್ಲ. ಅದೂ ಇದ್ದ ಕಾಲವೊಂದಿತ್ತು. ಆಗಲೂ ಬೇಸರವೇ. ಆದರೆ ಆಗ ಮಲಗಿರಲು ಬೇಸರವಿರಲಿಲ್ಲ. ತಲೆದಿಂಬಿಗೆ ತಲೆಯಿಟ್ಟೊಡನೆ ಸಾಕು. ಕಣ್ಣುಗಳು ಮುಚ್ಚಿಬಿಡುತ್ತಿದ್ದವು. ಕಣ್ತೆರೆದಾಗ ಅರ್ಧ ಹಗಲಾಗಿರುತ್ತಿತ್ತು. ಸುಖನಿದ್ರೆ. ಸವಿಗನಸು.. ಆಗಿನ ಎಲ್ಲವೂ ಹಾಗೆಯೇ ಸಿಹಿ-ಸಿಹಿ.

ಹ್ಞಾ, ಈಗೆದ್ದು ಲೆಕ್ಚರು ತಯಾರಿಸಬೇಕು? ಹೌದು.

ಅದೇನು ಎಷ್ಟೊತ್ತಿನ ಕೆಲಸ ತಯಾರು ಮಾಡದೆಯೇ ಹಾಗೆ ಹೋಗಿ ನಿಂತು ಬಾಯಿಗೆ ಬಂದದ್ದು ಒದರಿದರೂ ನಡೆಯುವುದು ದೆವ್ವನ ಹಾಗೆ ಪಟ್ಟೆಪಟ್ಟೆಯ ಬಿಗಿ ಉಡುಪು ತೊಟ್ಟು ಬರುವ ಆ ಹುಡುಗರ ಲಕ್ಷ ಅಭ್ಯಾಸದ ಕಡೆ ಇರುವುದು ಅಷ್ಟರಲ್ಲೇ ಇದೆ, ತಾನು ಈ ಥಂಡಿಯಲ್ಲಿ ಎದ್ದು ಲೆಕ್ಚರು ತಯಾರು ಮಾಡಿ ಕ್ಲಾಸಿಗೆ

ಹೋಗಿ ನಿಂತು ಒದರಬೇಕು. ಆ ಮಕ್ಕಳು ಆರಾಮಾಗಿ ಕಾಲುಚಾಚಿ ಆಕಳಿಸುತ್ತ, ಕೂತು ತನ್ನ ಮುಖ ನೋಡುತ್ತಿರಬೇಕು, ಹಲವು ವರ್ಷಗಳ ಅನುಭವ, ಲೆಕ್ಚರು ಅಂದರೆ ವಿದ್ಯಾರ್ಥಿಗಳಿಗೆ ಬೇಸರವಾಗುವುದು ಸಹಜವೆ. ಅವರ ಹದ್ದಿನ ಕಣ್ಣು ತನ್ನ ಮೇಲೆ ಮುಖ, ಕೊರಳು, ಎದೆ, ಕಾಲು ಚಪ್ಪಲಿಯವರೆಗೂ ಹರಿದಾಡುತ್ತದೆ ಆ ದೃಷ್ಟಿ, ತನಗಾಗ ಮೈಗೆಲ್ಲಾ ಚೂಪಾದ ಮುಳ್ಳು ಚುಚ್ಚುತ್ತಿರುವಂಥ ಅನುಭವ.

ಇದು ದಿನದ್ದೇ. ಹೊಸದೇನಲ್ಲ ಮುಂಜಾನೆಯ ಹೊತ್ತು ವಿಚಾರಿಸುವಷ್ಟೇನೂ ಮಹತ್ವದ್ದಲ್ಲ.

"ಬಾಗಲಾ ತಗೀರೀ ಬಾಯಿ, ಕಸಾ ತಗೀತೇನು.

ದರಿದ್ರ ಫ್ಯೂನ್‌ನ ದನಿ. ಎದ್ದೊಡನೆ ಈ ಶನಿಯ ಮುಖದರ್ಶನವಾಗಬೇಕು. ಅದೂ ಕಸಬರಿಗೆಯೊಂದಿಗೆ, ರಜೆಗೆ ಮನೆಗೆ ಹೋದಾಗ ಮಾತಿಗೆ ಮಾತು ಬಂದು ಈ ವಿಷಯ ಕೇಳಿ ಅಕ್ಕ ತವರಿಗೆ ಹಬ್ಬಕ್ಕೆಂದು ಮಕ್ಕಳೊಂದಿಗೆ ಬಂದವಳು. ನಗುತ್ತ ಅಂದಿದ್ದಳು ಲಗೂ ಲಗ್ನಾ ಮಾಡಿಕೋಬಾರದ ಶಾಂತಿ? ಆಮ್ಯಾಲ ನಿನ್ನ ಗಂಡನ ಬಂದು ಗದ್ದಾತುಟಿ ಹಿಡಿದು ರಮಿಸಿ ಎಬ್ಬಸ್ತಾನ ದಿನಾ ಮುಂಜಾನೆ.

ಈ ವಯಸ್ಸಿಗೆ ಇಂಥ ಮಾತು ಕೇಳಿ ನಾಚಬೇಕೆ? ಆದರೂ ಹೃದಯದಲ್ಲೆಲ್ಲೋ ಏನೋ ಮಿಸುಕಾಡಿದಂತೆ ಭಾಸ. ಹಾಗೆ ಎಬ್ಬಿಸಲು ಬರುವ ಆ ಗಂಡ ಹೇಗಿರಬಹುದು? ಮೊನ್ನೆ ಇಂಟರ್ ಯೂನಿವರ್ಸಿಟಿ ಕ್ರಿಕೆಟ್ ಮ್ಯಾಚಿನಲ್ಲಿ ಸೆಂಚುರಿ ಹೊಡೆದ ಆ ಕ್ಯಾಪ್ಟನ್ ಸುಧೀರ ಇದ್ದನಲ್ಲ. ಹಾಗೆ ಎತ್ತರ, ಸಾರ್ಟ್ ಇರಬಹುದೆ? ಅಥವಾ ಆ ಅವನ ಹಾಗೆ ? ಥೇಟ್ ಅವನ ಹಾಗೆ?

ಛೇ, ಮುಂಜಾನೆ ಏಳುತ್ತಲೂ ಅವನ ನೆನಪು ಬಂದದ್ದು ನೆಟ್ಟಗಾಗಲಿಲ್ಲ. ಶಾಂತಿ ಜೋರಾಗಿ ಕಾಲು ಝಾಡಿಸಿ ಹೊದಿಗೆಯನ್ನು ಒದ್ದು ಎದ್ದು ಕುಳಿತಳು. ತಲೆಕೂದಲು ಸರಿಪಡಿಸುವ ನೆಪದಲ್ಲಿ ತಲೆಯನ್ನು ಝಾಡಿಸಿ ಮಚ್ಛರದಾನಿಯನ್ನು ಸರಿಸಿ ಎದ್ದು ಬಾಗಿಲು ತೆರೆದಳು.

"ಏಟೋತ್ರಿ ಯಲ್ವಾ?" ಎಂದು ಹಲ್ಲು ಕಿರಿಯುತ್ತ ಒಳಬಂದ ಮಾದನ ಗೂಗೆಗಣ್ಣಿನ ದೃಷ್ಟಿಯ ದಿಕ್ಕನ್ನು ಗಮನಿಸಿದಾಗ ಅವಳಿಗೆ ತನ್ನ ಸೆರಗು ಅಸ್ತವ್ಯಸ್ತವಾಗಿದೆಯೆನ್ನುವುದರ ಅರಿವಾಯಿತು. ಅದೇ ಅವಳಿಗೆ ಚಿರಪರಿಚಿತವಾದ ಮುಳ್ಳಿನ ಮೊನೆ- ಹುಡುಗರ ಕಣ್ಣಲ್ಲೂ ಅದೇ, ಮಾದನ ಕಣ್ಣಲ್ಲೂ ಅದೇ ಹಾಸ್ಟೆಲಿನ ಮುಂದೆ ಸದಾ ಬಾಲ ಅಲ್ಲಾಡಿಸುತ್ತ ಬಿದ್ದಿರುವ ಗಂಡುನಾಯಿಯ ಕಣ್ಣಲ್ಲೂ ಅದೇ, ನಾಯಿಯಾದರೇನು ಗಂಡಲ್ಲವೆ?

ಸೆರಗು ಸರಿಪಡಿಸಿಕೊಳ್ಳುವ ಗೋಜಿಗೆ ಹೋಗದೆ ಹಾಗೆಯೇ ಅವಳು ಬಾಥರೂಮಿಗೆ ಹೋದಳು. ಎದುರಿನ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ದೃಷ್ಟಿಸಿದಳು. ಈ ಮುಳ್ಳು ಚುಚ್ಚಿದಂತೆ ಅನಿಸುವದು ಬರೇ ಭ್ರಮೆಯೇ? ಅದು ನಿಜವೇ ಆಗಿದ್ದರೆ ಮೈಯೆಲ್ಲ ತೂತಾಗಬೇಕಿತ್ತಲ್ಲ!

"…….ಗುಡ್ ಮಾರ್ನಿಂಗ್ ಮ್ಯಾಡಂ…" ನಡುವೆಯೇ ಬಂದ ದನಿ ಕೇಳಿ ಶಾಂತಿ ಹೊರಳಿ ನೋಡಿ ಉತ್ತರ ರೂಪವಾಗಿ ತುಟಿಯಗಲಿಸಿದಳು. ಟೂಥ್ ಬ್ರಶ್‌ನಿಂದ



ಹಲ್ಲುಜ್ಜಿಕೊಳ್ಳುತ್ತಿದ್ದ ಬಾಯಲ್ಲೆಲ್ಲಾ ಹೇಸಿಗೆ ಬರಿಸುವ ಹಾಗೆ ಕಾಲ್ಗೇಟ್ ಬಿಳಿನೊರೆ ತುಂಬಿದ. ಅರೆಬತ್ತಲೆ ನೈಟ್‌ಡೆಸ್ಸಿನಲ್ಲಿದ್ದ ಮೇರಿ ಮುಖ ತೊಳೆದು ರೂಮಿಗೆ ಹಿಂದಿರುಗುತ್ತಿದ್ದಾಗ ಶಾಂತಿಗೆ ಮಜಾ ಅನ್ನಿಸಿತು ಈ ಮೇರಿ ಯಾವಾಗಲೂ ಅರ್ಧ ಮೈ ತರೆದುಕೊಂಡೇ ಗಂಡುಹುಡುಗರ ಭುಜಕ್ಕೆ ಭುಜ ತಾಗಿಸುತ್ತ ಕಾಲೇಜಿನಲ್ಲಿ ಅಡ್ಡಾಡುತ್ತಾಳೆ. ಇವಳಿಗೆ ಯಾರ ದೃಷ್ಟಿಯ ಮುಳ್ಳಿನ ಅನುಭವವೂ ಆಗಿರಲಾರದೆ? ಪ್ರೊಫೆಸರುಗಳ ರೂಮಿಗೂ ಬಂದು ತಾಸುಗಟ್ಟಲೆ ಒಂದೇ ವಾಕ್ಯದ ಅರ್ಥ ಕೇಳುತ್ತ ಫ್ರೀಯಾಗಿ ಕೂತಿರುತ್ತಾಳೆ, ಅದು ಯಾವುದೂ ಒಂದು ದಿವಸವೂ ಅವಳ ಹೃದಯದ ಆಳದವರೆಗೆ ಹೋಗಿರಲಾರದೆ? ಹೃದಯವೆಂಬುದಾದರೂ ಅವಳಿಗಿದೆಯೆ? ಅಥವಾ ಈ ಹೃದಯವೆಂಬುದು ಯಾರಿಗೂ ಇಲ್ಲವೇ ಇಲ್ಲವೋ ಏನು ಮಣ್ಣೋ!

'ಶಾಂತಿ, ನನ್ನ ಹೃದಯದಲ್ಲಿ ನಿನ್ನ ಮೂರ್ತಿ ಭದ್ರವಾಗಿ ನೆಲೆಯೂರಿದೆ" ಎಂದು ಅಂದು ಹಿಂದೆಂದೋ ಅಂದಿದ್ದ ಅವನು ಮೂರ್ತಿಸಹಿತವಾಗಿ ಹೃದಯವನ್ನೂ ಕಿತ್ತು ಬಿಸಾಡಿಬಿಟ್ಟ ನಂತರ. ಆ ಅಯೋಗ್ಯನ ಕಣ್ಣಲ್ಲೂ ಮುಳ್ಳಿದ್ದವೇ?

ಸ್ಟೋವಿನ ಮೇಲೆ ಕುದಿಯುತ್ತಿದ್ದ ಎಸರಿಗೆ ಸಕ್ಕರೆ ಹಾಕುತ್ತಿದ್ದಳು. ಶಾಂತಿ. ಒಂದು ಎರಡು ಮೂರು 'ಅವನ' ನೆನಪನ್ನು ಹೇಗಾದರೂ ಮಾಡಿ ಓಡಿಸಬೇಕು. ಇದು ನೆನೆಯುತ್ತ ಕೂಡುವ ಹೊತ್ತಲ್ಲ, ಕಾಲೇಜಿಗೆ ತಡವಾಗುತ್ತದೆ. ಇಂಥದರ ಬಗೆಗೆಲ್ಲ ತಲೆ ಕೆಡಿಸಿಕೊಳ್ಳಲು ತಾನೇನು ಹದಿನೈದರ ಹುಡುಗಿಯೆ? ಅಯ್ಯೋ ಎಷ್ಟು ಚಮಚೆ ಸಕ್ಕರೆ ಹಾಕಿದೆ. ಮರತೇ ಹೋಯಿತಲ್ಲ… ಹೋಗಲಿ, ತಾನು ಮಾಡಿದ ಚಹಾ ಕುಡಿದು ಯಾರು ಶಿಫಾರಸು ಕೊಡಬೇಕಾಗಿದೆ? ಸ್ವಲ್ಪ ಹೆಚ್ಚೇನು ಕಡಿಮೆಯೇನು ನಡೆಯುತ್ತದೆ.

ಹಿಂದೊಮ್ಮೆ ಹಾಸ್ಟೆಲಿಗೆ ಬಂದು ತಾನು ಮಾಡಿಕೊಟ್ಟ ಚಹಾ ಕುಡಿದಾಗ ಪ್ರೊ. ದೇಸಾಯಿ ಹೇಳಿದ್ದ, "ಮಿಸ್ ಶಾಂತಿ ನಿಮ್ಮ ಚಹಾ ಆಗದೀ ಉತ್ತಮ ಅಗೇದು ನೀವು ಫಸ್ಟ್ ಕ್ಲಾಸ್ ಹೌಸ್ ವೈಫ್ ಆಗತೀರಿ ಬಿಡ್ರಿ."

ತಾನೇನು ನನ್ನನ್ನು ಲಗ್ನ ಮಾಡಿಕೊಳ್ಳುವವನಿದ್ದನೆ?… ಛೇ ದೇಸಾಯಿಯ ಬಗ್ಗೆ ಹೀಗೆಲ್ಲ ವಿಚಾರಿಸಿದರೆ ಉಪಯೋಗವಿಲ್ಲ. ಸಂಭಾವಿತ, ಮಳ್ಳ ಗಂಡಸು ಅದು. ಅವನ ದೃಷ್ಟಿಯಲ್ಲಿ ಯಾಕೋ ಮುಳ್ಳಿದ್ದಂತೆ ಕಾಣುವುದಿಲ್ಲ

ತನ್ನ ಮೇಲಂತೂ ಬಹಳ ಪ್ರೀತಿ, ಅಭಿಮಾನ. ಅದಕ್ಕೆ ಅವನೊಂದಿಗೆ ತಾನು ಶ್ರೀಯಾಗಿರುವುದು. ಎಷ್ಟು ವರ್ಷಗಳಿಂದ ನೋಡುತ್ತಿದ್ದೇನೆ. ಒಮ್ಮೆಯೂ ಆತ ತನ್ನೆಡೆ ನೋಡುವ ದೃಷ್ಟಿಯಲ್ಲಿ ಮುಳ್ಳಿನ ಮೊನೆಯಿಲ್ಲ.

ಹೊರಗಡೆ ರಸ್ತೆಯ ಮೇಲೆ ಯಾರೋ ಅಶ್ಲೀಲವಾದ ಹಾಡೊಂದನ್ನು ಗುನುಗುನಿಸುತ್ತ ಹೊರಟಿರುವಂತಿದೆ. ಎದ್ದು ನೋಡಬೇಕು. ಕಿಡಕಿಯೊಳಗಿನಿಂದ... ಛೇ, ಬೇಡ ತಾನೇನು ಕಾಲೇಜು ಹುಡುಗಿಯೆ ಹೀಗೆಲ್ಲ ಪ್ರಚೋದಿಸಲಿಕ್ಕೆ? ಆದರೂ ಒಮ್ಮೆ ನೋಡಲಡ್ಡಿಯಿಲ್ಲ ಆ ಹಾಡುವ ಕತ್ತೆಗೆ ಕಾಣದಂತೆ ಗೋಡೆಯ ಮರೆಗೆ ಕಾಣದಂತೆ ನಿಂತು ಕನ್ನಡಿ ಹಿಡಿದು ರಸ್ತೆಯ ಮೇಲಿನ ದೃಶ್ಯ ನೋಡುವುದೇನು ಹಾಸ್ಟೆಲಿನೊಳಗಿರುವವರಿಗೆ ಹೊಸದಲ್ಲ.



ಅರ್ಧ ಕುಡಿದ ಚಹಾದ ಕಪ್ಪನ್ನು ಟೇಬಲ್ಲಿನ ಮೇಲಿಟ್ಟು ಶಾಂತಿ ಕನ್ನಡಿಯಿದ್ದ ಕಡೆ ಬಂದಳು. ಹಾಡುವ ಕತ್ತೆಯ ಬಾಯಿಂದ ಹೇಸಿ ನಗೆಯ ಅಲೆಗಳು ಹೊರಟು ಹಾಸ್ಟೆಲಿನ ಗೋಡೆಗಳನ್ನು ಭೇದಿಸಿ, ಮುಳ್ಳಿನಂತೆ ಚುಚ್ಚತೊಡಗಿವೆ. ಛೂ ಈ ಹೊಲಸು ಕೆಲಸ ಬೇಡ. ಯಾಕೋ ಮತ್ತೆ ಒಮ್ಮೆಲೆ ಎಲ್ಲದರ ಬಗೆಗೂ ಹೇಳತೀರದ ಬೇಸರ ಬರುತ್ತಲಿದೆ...

ಅರ್ಧಕ್ಕೆ ಬಿಟ್ಟ ಚಹಾದಲ್ಲಿ ನೊಣ ಬಿದ್ದು ಒದ್ದಾಡತೊಡಗಿದೆ. ಸಿಹಿ ಚಹಾದ ಆಸೆಗೆ ಬಿದ್ದು ಬಂದಿದ್ದ ನೊಣ... ಇನ್ನೂ ಜೀವವಿದೆ. ತೆಗೆದು ಹೊರಗೆ ಹಾಕೋಣವೆ? ಬದುಕಿಕೊಳ್ಳಲಿ ಪಾಪ.

ಶಾಂತಿಯ ಕೈ ಕಪ್ಪಿನಡೆ ಹೋಗಿ ತಟ್ಟನೆ ಅಲ್ಲೇ ನಿಂತಿತು. ಈಗ ಅದನ್ನು ಹೊರಗೆ ಹಾಕಿದರಾದರೂ ಉಪಯೋಗವೇನು? ಅದಕೇನೂ ಮೊದಲಿನಂತೆ ಹಾರಲಾಗುವುದಿಲ್ಲ. ಒದ್ದಾಡಿ ಎರಡು ನಿಮಿಷದ ನಂತರ ಸಾಯುವುದು ನಿಶ್ಚಿತ. ಬೇಡ. ಕಪ್ಪಿನಲ್ಲಿಯ ನೊಣಸಹಿತ ಚಹಾವನ್ನು ಕಿಡಿಕಿಯಾಚೆ ಚೆಲ್ಲಿದಳು. ಆಕೆ ಇನ್ನು ಲೆಕ್ಚರು ತಯಾರಿಸಬೇಕು. ಡ್ಯೂಟಿ- ಡೂ ಆರ್ ಡೈ...

ಅವಳಿಗೆ ನಗು ಬಂತು. ಕಿಸಕ್ಕನೆ ನಕ್ಕಳು. ಕ್ಲಾಸಿನಲ್ಲಿ ಕಲಿಸುವುದು ಅಂದರೆ ಯಾವುದನ್ನು ಆ ನಿರ್ಭಾಗ್ಯ ಹುಡುಗರು ಓದಿ ಮನನ ಮಾಡಿಕೊಳ್ಳಬೇಕೋ, ಯಾವುದರಿಂದ ಅವರ ಉದ್ಧಾರ ಸಾಧ್ಯವೆಂದು ಹಿರಿಯರ ತಿಳುವಳಿಕೆಯೋ ಅದು ಬರೇ ಬೂಟಾಟಿಕೆ ನಿಷ್ಪ್ರಯೋಜಕ. ಅರ್ಥಹೀನವಾದುದು. ಎಲ್ಲಾ ಹಿಪಾಕ್ರಸಿ~ ಎಂದು ಮೊನ್ನೆ ದೇಸಾಯಿ ಅಂದದ್ದು ನೆನಪಾಯಿತು.

ಇವತ್ತೇಕೋ ಉಪಯೋಗವಿಲ್ಲದ ವಿಚಾರಗಳು ಬರತೊಡಗಿವೆ. ಸ್ನಾನದ ಹೊತ್ತಾಯಿತು. ಇನ್ನು ಈ ವಿಚಾರ ಬಿಟ್ಟು ಏಳಬೇಕು. (Act, act in the living present' ಎಂದು ನಿನ್ನೆ ಕಲಿಸಿದ್ದು ಮನದಲ್ಲಿ ಮೂಡಿ ಅಣಕಿಸಿ ನಕ್ಕು ಮಟಾಮಯಾ ಆಯಿತಲ್ಲ ಖೋಡಿ!)

ಸ್ನಾನದ್ದೂ ಒಂದು ಮಜ, ಬಡಬಡಾ ಒಂದು ನಿಮಿಷದಲ್ಲಿ ನೀರು ಸುರುವಿಕೊಂಡಾದ ನಂತರ ಬಹಳ ಹೊತ್ತಿನವರೆಗೆ ಮೈ ಒರೆಸಿಕೊಳ್ಳುತ್ತ ನಿಲ್ಲಬೇಕೆನಿಸುತ್ತದೆ. ಯಾಕೆ ಹೀಗೆ? ಕಾರಣ ಕೇಳಿದರೆ ಆ ಮಡಿವಂತ ಸಂಸ್ಕೃತ ಲೆಕ್ಚರರ್ ಮಿಸ್ ಕುಲಕರ್ಣಿ 'ಹೂ ಹೊಲಸು' ಅಂದಳು. ಇದ್ದುದನ್ನು ಇದ್ದಂತೆ ಹೇಳಿದರೆ ಹೊಲಸಂತೆ! ಅವಳಿಗೆಂದೂ ಹಾಗನಿಸಿರಲಾರದೇ? ಮತ್ತೇಕೆ ಇಲ್ಲದ ಆತ್ಮವಂಚನೆ?

ಡೈನಿಂಗ್ ಹಾಲಿನಲ್ಲಿ ಗದ್ದಲವೋ ಗದ್ದಲ. ಶಾಂತವಾಗಿ ಊಟ ಮಾಡಲಿಕ್ಕೂ ಬಿಡುವುದಿಲ್ಲ. ಹಾಳು ಹುಡುಗಿಯರು ಅವರ ಟೀಕೆಗೆ, ನಗೆಗೆ, ಕೊಂಕು ನೋಟಕ್ಕೆ ಕೊನೆಯೇ ಇಲ್ಲ - ಕೊನೆಯೆ ಇಲ್ಲ.

ಹಲವೇ ವರ್ಷಗಳ ಹಿಂದೆ ತಾನೂ ಒಬ್ಬಳಾಗಿದ್ದೆ ಇಂಥ ಗುಂಪಿನಲ್ಲಿ ಯಾರದೋ ಸಂಬಂಧವಿಲ್ಲದವರ ಪ್ರೇಮ ಪ್ರಕರಣದ ಬಗ್ಗೆ, ಹೊಸದಾಗಿ ಲೆಕ್ಚರರ್ ಆಗಿಬಂದಿರುವ ಸ್ಮಾರ್ಟ್ 'ಹುಡುಗ'ರ ಬಗ್ಗೆ ಗಂಟೆಗಟ್ಟಲೆ ಬೇಸರವಿಲ್ಲದೆ ಚರ್ಚೆ ಮಾಡುತ್ತಿದ್ದೆ. ಈಗೇಕೆ



ಈ ಬೇಸರ? ನಿರ್ಲಿಪ್ತತೆ? ಶೂನ್ಯತೆ? ಆ ಭ್ರಮೆ ಒಳ್ಳೆಯದೋ, ಈ ಭ್ರಮೆನಿರಸನ ಒಳ್ಳೆಯದೋ?

ಎಲ್ಲವೂ ಭ್ರಮೆಯೇ ಹಾಗಾದರೆ? ದೇಸಾಯಿ ಭ್ರಮೆ, 'ಅವನು' ಭ್ರಮೆ, ನಾಳೆಯೊಮ್ಮೆ ತನಗೆ ಗಂಡನಾಗಿ ಬರಲಿರುವ ಪ್ರಾಣಿ ಭ್ರಮೆ. ಮಾದ ಭ್ರಮೆ. ಹಾಸ್ಟೆಲಿನ ನಾಯಿ ಭ್ರಮೆ. ತಾನು ದಿನಾ ಅನುಭವಿಸುತ್ತಿರುವ ಮುಳ್ಳಿನಂತೆ ಚುಚ್ಚುವ ನೂರು ಮುಠಾಳರ ದೃಷ್ಟಿಯೂ ಭ್ರಮೆ? ಥೇ, ಅಲ್ಲ. ಈ ಮುಳ್ಳಿನಂಥ ದೃಷ್ಟಿಯೊಂದೇ ಸತ್ಯ ಉಳಿದುದೆಲ್ಲ ಭ್ರಮೆ ರಸ್ತೆಯಲ್ಲಿ, ಕಾಲೇಜಿನಲ್ಲಿ, ಬಸ್ಸಿನಲ್ಲಿ, ಟ್ರೈನಿನಲ್ಲಿ, ಮಾರ್ಕೆಟ್‌ನಲ್ಲಿ ಈ ಇಡೀ ಜಗತ್ತಿನ ತುಂಬ ಸತ್ಯವಾದುದೆಂದರೆ ಅದೊಂದೇ. ಸಣ್ಣ ಹುಡುಗನಿರಲಿ, ತರುಣನಿರಲಿ, ಮುದುಕನಿರಲಿ, ಪ್ರತಿಯೊಂದು ಗಂಡಿನ ಕಣ್ಣಲ್ಲೂ ಅದೇ ಮುಳ್ಳಿನ ಮೊನೆ, ಒಂಟಿ ಹೆಣ್ಣನ್ನು, ಅದರಲ್ಲೂ, ಹುಡುಗಿಯನ್ನು ನೋಡಲಿಕ್ಕೆ ಸ್ವಲ್ಪ ಚೆನ್ನಾಗಿರುವವಳನ್ನು ಕಂಡರೆ ಸಾಕು. ಒಂದೇ ಸಮನೆ ಚುಚ್ಚುತ್ತದೆ ಈ ಮುಳ್ಳುಗಳು...

ಇವುಗಳಿಂದ ಮುಕ್ತಿ ಪಡೆಯಬಹುದೆಂದು ಭ್ರಮಿಸಿ 'ಅವನ' ಜೊತೆ ಗೆಳೆತನ ಬೆಳೆಸಿದ್ದು ಮುಳ್ಳುಗಳಿಂದ ದೂರ-ದೂರ ಬರೇ ಹೂವುಗಳಿರುವ ದ್ವೀಪಕ್ಕೆ ತನ್ನನ್ನು ಕರೆದೊಯ್ಯಬಲ್ಲನೆಂದು ಅನಿಸಿತ್ತು. ಅದೂ ಒಂದು ದೊಡ್ಡ ಭ್ರಮೆ. ಅದರ ನಿರಸನವಾದದ್ದು. 'ಅವನ' ಕಣ್ಣನೋಟದಲ್ಲೇ ಹುದುಗಿದ್ದ ಮುಳ್ಳಿನ ಅರಿವು ಮೊದಲ ಬಾರಿ ಆದಾಗ

ಆಘಾತ ಹೃದಯ ಬಿರಿದು ಹೋಗುತ್ತಿರುವದೇನೋ ಎಂಬಂಥ ಅನುಭವ! ಅದೇ ಮೊದಲು ಅದೇ ಕೊನೆ. ನಂತರ ಅವನ ಮುಖದರ್ಶನವೂ ಬೇಡವೆನಿಸಿತು.

ಕಲಸಿದ್ದ ಅನ್ನ ಗಂಟಲಲ್ಲಿಳಿಯಲ್ಲೊಲ್ಲದು. ಅದನ್ನಲ್ಲೇ ಬಿಟ್ಟು ಕೈತೊಳೆದು ಎದ್ದು ನಡೆದಳು ಶಾಂತಿ.

ಮೇಕಪ್, ಎರಡು ನಿಮಿಷದ ಕೆಲಸ ಯಾರನ್ನು ಮೆಚ್ಚಿಸಲೆಂದೋ! ಮೊನ್ನೆ ತೆಗೆದುಕೊಂಡ ಡ್ರೈಲಾನ್ ಸೀರೆ ಉಟ್ಟರೆ? 'May I feel your saree?' ಎಂದು ನಾಚಿಕೆ ಬಿಟ್ಟು ಕೇಳಿ, ತಾನುತ್ತರಿಸುವ ಮೊದಲೆ ಸೆರಗು ಮುಟ್ಟಿ ನೋಡುತ್ತಾರೆ ತನ್ನ ಸಹೋದ್ಯೋಗಿಗಳು. ಒಮ್ಮೊಮ್ಮೆಯಂತೂ ಆ ಸರಗಿನಲ್ಲೇ ಅವರ ಬೆರಳುಗಳ ಮುಳ್ಳಿನ ಕರೆಂಟ್ ಹರಿದಾಡಿದಂತೆ ಮೈ ಜುಮ್ಮೆನಿಸುತ್ತದೆ.

ಒಟ್ಟು ಈ ಮುಳ್ಳುಗಳಿಂದ ಬಿಡುಗಡೆ ಇದೆಯೆಂದು ಒಮ್ಮೆ ತಿಳಿದದ್ದು ತಪ್ಪಾಗಿ ಹೋಯಿತು. ತಾನು ಮದುವೆಯಾಗುವ ಪ್ರಾಣಿ ಗಂಡು, ಅಂದ ಬಳಿಕ 'ಅವನ ಕಣ್ಣಲ್ಲೂ ಮುಳ್ಳಿರಲೇಬೇಕಲ್ಲ?

ದಡದಡನೆ ಮೆಟ್ಟಿಲಿಳಿದು ಶಾಂತಿ ಕಾಲೇಜಿಗೆ ನಡೆದಳು. ಹದಿನೈದರ ಎಳೆಯರಿಂದ ಹಿಡಿದು ಇಪ್ಪತ್ತೈದರ ಕೋಣಗಳವರೆಗಿನ ಎಲ್ಲ ಗಂಡು ಹೆಣ್ಣು ಗದ್ದಲ ಮಾಡುತ್ತ ಹೊರಟಿವೆ. ಸೈಕಲ್ಲು ವೀರನೊಬ್ಬ ಸದ್ದಿಲ್ಲದೆ ಹಿಂದಿನಿಂದ ಬಂದು ಭರ್ರನೆ ತನ್ನ ತೀರ ಸಮೀಪದಿಂದ ಹಾಯ್ದು ಹೋಗುತ್ತಾನೆ ರಸ್ತೆಯಲ್ಲಿ ನಿಂತ ಕೆಂಪುನೀರಿನ ಪ್ರೋಕ್ಷಣೆ ತನ್ನ ಬಿಳಿ ಸೀರೆಗೆ, ಮೊನ್ನೆ ತಾನವನಿಗೆ ಕ್ಲಾಸಿನಲ್ಲಿ ಮಾತಾಡಿದ್ದಕ್ಕಾಗಿ ಬೈದದ್ದರ ನೆನಪಾಯಿತು.



"... ಗುಡ್ ಮಾರ್ನಿಂಗ್ ಮ್ಯಾಡಂ" ಸ್ಕೂಟರ್ ನಿಲ್ಲಿಸಿ ಒಳ್ಳೆ ಸ್ಟೈಲಿಶ್ ಆಗಿ ವಂದಿಸುತ್ತಿದ್ದಾನೆ ಶಿಷ್ಯೋತ್ತಮ ಶಂಕರ ಶೆಟ್ಟಿ, ಮೂರು ಸಲ ಕೂತರೂ ಬಿ.ಎ. ಪಾಸಾಗಲೊಲ್ಲ. ಅಪ್ಪನ ದುಡ್ಡು ಬಹಳವಿದೆಯೆಂದು ಬರೇ ಊರೆಲ್ಲ ಸುತ್ತುವುದರಲ್ಲೇ ವೇಳೆ ಕಳೆಯುತ್ತಾನೆ. ಕಳೆದ ವರ್ಷ ಒಮ್ಮೆ ತನ್ನನ್ನು ಪಿಕ್ಚರಿಗೆ ಕರೆಯುವ ಸಾಹಸ ಮಾಡಿತ್ತಲ್ಲವೆ ಈ ಕೋತಿ? ತಾನೆಂದರೆ ಏನೆಂದು ತಿಳಿದಿದ್ದನೋ? ಆಗಲೇ ಅವನಿಗೊಂದು ಕಪಾಳಿಗೆ ಹೊಡೆಯಬಹುದಿತ್ತು ಯಾಕೋ ಹಾಗೆ ಮಾಡಲಿಲ್ಲ. ಯಾಕೆ ಸುಮ್ಮನೆ ದುಷ್ಟರ ಸಹವಾಸ ಎಂದು ಬಿಟ್ಟಿರಬೇಕು. ತಾನವನ ಗುರು, ಈಗ ಗುಡ್ ಮಾರ್ನಿಂಗ್ ಹೇಳುವಾಗ ಒಬ್ಬ ಗರ್ಲ್ ಫ್ರೆಂಡಿನೊಂದಿಗೆ ಮಾತಾಡುವಾಗ ಇರುವಂಥ ಮುಖಭಾವ. ಹಾಳಾಗಿ ಹೋಗಲಿ, ಇವನಿಗೆ ಪ್ರತಿಯಾಗಿ ಉತ್ತರಿಸಬಾರದು.

ಗಂಟು ಮುಖ ಹಾಕಿ ಹಾಗೇ ಮುಂದೆ ನಡೆದಳು, ಶಾಂತಿ

ಅಲ್ಲಾ, ಅಂದು ಹಾಗೆ "ಪಿಕ್ಚರಿಗೆ ಬರುವಿರಾ ಮ್ಯಾಡಂ ಪ್ಲೀಜ್?" ಎಂದು ಈ ಶೆಟ್ಟಿ ಕೇಳಿದಾಗ ಬರೇ ಸಿಟ್ಟೇ ಬಂದಿತ್ತೇ ತನಗೆ? ಏನು ಅಭಿಮಾನವೂ ಅನ್ನಿಸಿತ್ತೋ? ಸ್ವಲ್ಪ ಸ್ವಲ್ಪ?

ಛೇ ಅಂಥ ಗೂಂಡಾ ಕರೆದರೆ ಯಾವ ಹುಡುಗಿಗೆ ಅಭಿಮಾನವೆನ್ನಿಸಲು ಸಾಧ್ಯ, ತನಗಂತೂ ಅವನ ಕಣ್ಣಿನಲ್ಲಿಯ ಜಾಲೀ ಮುಳ್ಳುಗಳ ಬಗೆಗೆ ಎಂದಿನಿಂದಲೂ ಹೇಸಿಗೆ ತನಗೆ ಹೇಗೆ ಅಭಿಮಾನವೆನಿಸುವುದು ಶಕ್ಯವಿದೆ?

ಆದರೂ ಶೆಟ್ಟಿ ಹ್ಯಾಂಡ್‌ಸಮ್ ಇದ್ದಾನೆ.. ಸ್ಕೂಟರೋ ಚೆನ್ನಾಗಿದೆ..

ನೂರಾಐವತ್ತು ಅಜ್ಞಾನಿ ಅವಿವೇಕಿಗಳ ದೊಡ್ಡ ಗುಂಪು ಪಿಯುಸಿ ಕ್ಲಾಸಿನಲ್ಲಿ. ಇವರಿಗೆ ವ್ಯಾಕರಣ ಕಲಿಸಬೇಕು. ಅಂದರೆ ಭಾಷೆ ಸುಧಾರಿಸುತ್ತದೆ. ತಳಹದಿ ಭದ್ರವಾಗಿದ್ದರೆ ಮನೆ ಗಟ್ಟಿಮುಟ್ಟಾಗುವುದಿಲ್ಲವೆ ಹಾಗೆ.

ಏನೋ ಅಪಸ್ವರ. ತನ್ನ ಜೀವನದ ವ್ಯಾಕರಣಪಾಠ ಸರಿಯಾಗಿ ಆಗಲಿಲ್ಲವೇನೋ? ಈಗ ಮತ್ತೆ ಮೊದಲಿನಿಂದ ತಾನು ವ್ಯಾಕರಣ ಕಲಿಯಲು ಶುರು ಮಾಡಬೇಕೆ ಹಾಗಾದರೆ ? ಬಿ.ಎ ಕ್ಲಾಸಿಗೆ ಬಂದು ಅಂಕಲೆಯ ಒಂದನೇ ಭಾಷಾಂತರ ಓದಿದ ಹಾಗೆ ಆಗುತ್ತದಲ್ಲ!

ಬೋರ್ಡಿನ ಮೇಲೆ ಯಾವನೋ ಪ್ರೇಮವೀರ ದೊಡ್ಡ ಅಕ್ಷರಗಳಲ್ಲಿ 'ಐ ಲವ್ ಯೂ' ಎಂದು ಬರೆದಿದ್ದಾನೆ. ಬಹುಶಃ ಪಂಜಾಬೀ ಡ್ರೆಸ್ಸಿನ ಆ ಚಂದ ಹುಡುಗಿಯ ಸಲುವಾಗಿ ಇರಬೇಕು. ಮಧ್ಯಾಹ್ನ ಟೀಗೆ ಹೋದಾಗ ದೇಸಾಯಿಗೆ ಹೇಳಲು ಒಳ್ಳೆ ವಿಷಯ. ಎದುರಿಗೆ ಹೋಗಿ ಬೊಗಳುವ ತಾಕತ್ತಿಲ್ಲ. ತೆರೆಮರೆಯಲ್ಲಿ ನಿಂತು ವೊವ್ ಅನ್ನುತ್ತಾರೆ. ಮುಂದೆ ಹೋದರೆ ಸ್ತಬ್ಧ, ಜಾಗೃತರಾಗಿ ಉರಿಯುವುದು ಕಣ್ಣಲ್ಲಿನ ಬೆಂಕಿಯೊಂದೇ ಥತ್- ಅನ್ನಬಹುದು... ವಾಹ್, ಅನ್ನಬಹುದು... ವಾಹ್, ಇಂದು ನಿಜವಾಗಿಯೂ ತಮ್ಮ ಮಾತುಕತೆಗೆ ರಂಗೇರುವುದು.

ಬಹುಶಃ ತಾನು ಹೀಗೆಲ್ಲ ರೊಚ್ಚಿನಿಂದ ಮಾತಾಡುತ್ತಿದ್ದುದರಿಂದಲೇ ಇರಬೇಕು 'ಅವನು' ತನಗೆ ಹೆದರಿದ್ದು, ತನ್ನಿಂದ ದೂರ ಸರಿದಿದ್ದು, ಸಹಜವೆ ಪಾಪ, ಕಟ್ಟಿಕೊಂಡ

ಹೆಂಡತಿ ತನಗೆ ಪೂರಾ ವಿಧೇಯಳಾಗಿರಬೇಕೆಂದು ಯಾವ ಪೌರುಷಪ್ರಿಯನಾದ ಗಂಡಸು ಬಯಸುವುದಿಲ್ಲ? ಅವನದೇನೂ ತಪ್ಪಿಲ್ಲ. ಎರಡೂ ಹೊತ್ತು ಅಡಿಗೆ ಮಾಡಿ ಹಾಕಿ ರಾತ್ರಿ ಅವನೊಟ್ಟಿಗೆ ಮಲಗಿ. ಹಗಲು ಅವನೇನು ಮಾಡಿದರೂ ಸುಮ್ಮನಿದ್ದು ಸಾಕಿದ ನಾಯಿಯ ಹಾಗೆ ಬರೇ ಗೋಣು ಹಾಕುವ ಆದರ್ಶ ಹೆಂಡತಿ ಬೇಕಾಗಿದ್ದಳು. ಅವನಿಗೆ ಯಾರಿಗೆ ಬೇಡ? ಹೆಂಡಿರ ಡಿಗ್ರಿ ಸುಡುಗಾಡು ತೆಗೆದುಕೊಂಡು ಏನು ಮಣ್ಣು ಮಾಡುವುದು?

ಮೂಲೆಯಲ್ಲಿ ಕುಳಿತ ಆ ಕ್ರಿಶ್ಚನ್ ಹುಡುಗ ಕಿಡಿಕಿಯ ಹೊರಗಡೆ ನೋಡುತ್ತಿದ್ದಾನೆ. ಕಾರಿಡಾರ್‌ನಲ್ಲಿ ಮಾತಾಡುತ್ತ ನಿಂತ ಹುಡುಗಿಯರ ಬೆನ್ನುಗಳ ಕಡೆ ಸಣ್ಣ ಹುಡುಗ ಹದಿನೇಳು ದಾಟಿರಲಾರದು. ಆದರೂ ನೋಟದಲ್ಲಿ ಮುಳ್ಳಿನ ಪ್ರಖರತೆಯಿದೆ. ಕ್ಲಾಸಿನ ಕಡೆ ಇವನಿಗೆ ಲಕ್ಷ್ಯವೇ ಇದ್ದಂತಿಲ್ಲ. ಇವನನ್ನೇ ಎದ್ದು ನಿಲ್ಲಿಸಿ ಪ್ರಶ್ನೆ ಕೇಳಬೇಕು. ಕೂಗಿ ನಿಲ್ಲಿಸಿದಾಗ ಹೇಗೆ ಹಲ್ಲು ಕಿರಿಯುತ್ತಾನೆ ಅಯೋಗ್ಯ ಕಾಲರು ಹಿಡಿದು ಹೊರಗೆ ನುಗಿಸಿಬಿಡಬೇಕು ಅದು ಸಾಧ್ಯವಿದ್ದಿದ್ದರೆ...

'Lovely' ವಿಶೇಷಣವನ್ನು ನಿನ್ನ ವಾಕ್ಯದಲ್ಲಿ ಉಪಯೋಗಿಸು ನೋಡೋಣ ಎಂದರೆ. 'Madam, you are Lovely'ಎನ್ನುತ್ತಾನೆ. ಅವನು. ಇವನ ಮಾತು ಪ್ರಾಮಾಣಿಕವಾಗಿರಬಹುದೇ? ಅವನ ವಯಸ್ಸಿನ ಎರಡರಷ್ಟು ವಯಸ್ಸಾಗಲು ಬಂದಿತು ನನಗೆ, ನನ್ನನ್ನೇ ವರ್ಣಿಸ ಹೊರಟಿದ್ದಾನೆ ಮಗ, ನನ್ನ ಮೇಲೊಂದು ಕವಿತೆ ಬರೆಯುತ್ತಾನೇನೋ ಇನ್ನು ಕಾಲೇಜು ಮಿಸಲೆನಿಗೆ! ಇವನ ಮಾತು ಕೇಳಿ ಉಳಿದ ಮುಗ್ಧಾಳರೆಲ್ಲ ಕ್ಲಾಸರೂಮಿನ ಮೇಲಿನ ಛಪ್ಪರ ಹಾರಿಹೋಗುವ ಹಾಗೆ ನಗುತ್ತಿದ್ದಾರಲ್ಲ...

ಒಂದು ಕ್ಷಣ ಅವಳಿಗೆ ಬಹಳ ಸೆಂಟಿಮೆಂಟಲ್ ವಿಚಾರಗಳು ಬಂದವು. ಜಗತ್ತೇ ತನ್ನನ್ನು ಅವಮಾನಿಸುತ್ತಿದೆ. ಇಡೀ ಜಗತ್ತಿನ ವಿರುದ್ಧ ಬಂಡೇಳಬೇಕು. ಒಬ್ಬೊಬ್ಬರನ್ನಾಗಿ ಎಲ್ಲರನ್ನೂ ಜೀವಂತ ಸುಡಬೇಕು... ಕೊನೆಗೆ ತಾನೂ ಅದೇ ಬೆಂಕಿಯಲ್ಲಿ ಬಿದ್ದು ಬೆಂದು ಹೋಗಬೇಕು.... ಹಹ್ಹಹ್ಹ... ಏ ಹುಡುಗಾ ನಿನ್ನಂಥವರ ಧೈರ್ಯ ಎಷ್ಟೆಂದು ಕಿಮ್ಮತ್ತು ಏನೆಂದು ನನಗೆ ಗೊತ್ತಿದೆಯೋ ಎಂಥ ಗಂಡಸು ನೀನು! ಬರೇ ನಾನು ನಿನ್ನ ಉತ್ತರ ಕೇಳಿ ಕೆಂಗಣ್ಣು ಮಾಡಿದ್ದಕ್ಕೆ ಪೆದ್ದು ಪೆದ್ದಾಗಿ ಕೂತುಬಿಟ್ಟೆ...

ನಿಜವಾದ ಕಷ್ಟಪರಿಹಾರಕನೆಂದರೆ ಕ್ಲಾಸು ಮುಗಿಯಿತೆಂದು ಗಂಟೆ ಹೊಡೆಯುವ ಪ್ಯೂನ್ ಒಬ್ಬನೆ.. ಗಂಟೆಯ ಸದ್ದು ಸ್ವರ್ಗದ ಬಾಗಿಲೇ ಎನಿಸುತ್ತದೆ...

"ಹಲೋ ಮಿಸ್ ಶಾಂತಿ ಟೀಗೆ ಬರ್ತೀರೇನು?"

ಕೇಳಿದವನು ಪ್ರೊ. ದೇಸಾಯಿ, ಮರೆಯತೊಡಗಿದ ಹಳೆಯ ಕನಸಿನೆಡೆ ಎಳೆಯುತ್ತಿವೆ ಇವನ ಮುಖದ ಮೇಲಿನ ಈ ಮುಗ್ಧತೆ, ನಿಷ್ಕಪಟ ಭಾವ- ಇದು ಬರೇ ಛದ್ಮವೇಷವೆಂದು ತನಗೆ ಗೊತ್ತಿಲ್ಲವೆ? ಒಬ್ಬ ಗಂಡಸು

ಹೀಗಿರಲು ಸಾಧ್ಯವೇ ಇಲ್ಲ. ಆದರೆ ಇವನು ಎಲ್ಲರಿಗಿಂತ ಬೇರೆಯಾಗಿದ್ದಂತೆ ತೋರಿ ನನಗೆ ಮತ್ತೆ ಮುಳ್ಳುಗಳಿಲ್ಲದ ಹೂವುಗಳಿರುವ ದ್ವೀಪದ ಬಗ್ಗೆ ವಿಚಾರ ಮಾಡಲು ಹಚ್ಚುತ್ತಾನಲ್ಲ! ಇವನ ಕಣ್ಣಲ್ಲೂ ಮುಳ್ಳುಗಳು ಕಂಡರೆ ಎಷ್ಟು ಒಳ್ಳೆಯದು! ಮುಳ್ಳುಗಳೆಂದರೆ ಜೀವನದ ಒಂದು ಅನಿವಾರ್ಯ



ಭಾಗವೆಂದು ನಂಬಿ ಬಿಡುವುದು ಆಗ ಸುಲಭವಾಗುತ್ತಿತ್ತು. ಇವನನ್ನು ನೋಡಿದಾಗ, ಇವನೊಂದಿಗೆ ಇದ್ದಾಗೆಲ್ಲ. ಮುಳ್ಳುಗಳಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾದರೂ ಆದೀತೆಂಬ ಅಸಹಾಯ ಬಲಹೀನ, ನಿರಪಯೋಗಿ ಆಸೆಯೊಂದು ಹುಟ್ಟುತ್ತದೆ. ಬೇಡ ಬೇಡವೆಂದರೂ ಆಸೆಯೇ ದುಃಖದ ಮೂಲವೆಂದು ಹೇಳಿದ ಜ್ಞಾನಿಗಳು ಇಂಥದೇ ಆಸೆಯನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದರೇನೋ!

"ಟೀಗೆ ಬರಲಿಕ್ಕೂ ಇಷ್ಟು ವಿಚಾರ ಮಾಡಬೇಕಾಗತದೇನ್ರೀ? ಬನ್ನಿ ಬರಿ ಹೋಗೋಣ"

ಹೌದು ವಿಚಾರ ಮಾಡುವುದನ್ನು ಇನ್ನು ಬಿಟ್ಟು ಬಿಡಬೇಕು. ಬರೇ ಕಾರ್ಯ ಮಾಡಬೇಕು. ಕರ್ಮಯೋಗಿಯಾಗಬೇಕು...

ದೇಸಾಯಿಯ ವ್ಯಕ್ತಿತ್ವದಲ್ಲಿ ನಿಜವಾಗಿಯೂ ಎಂಥದೋ ಜಾದೂ ಇದೆ. ಇಲ್ಲವಾದರೆ ಸುಮ್ಮನೆ ಅವನನ್ನು ಹಿಂಬಾಲಿಸುವ ಮನಸ್ಸು ತನಗೇಕೆ ಆಗುತ್ತಿತ್ತು?

"ಇವತ್ತ ನಮ್ಮ ಡಿಪಾರ್ಟಿಮೆಂಟಿನ್ಯಾಗ ಫಿಲ್ಮ ಶೋ ಆದ ನೋಡ್ಲಿಕ್ಕೆ ಬರೀರೇನು ಮಿಸ್ ಶಾಂತಿ?"

ಚಹಾ ಕುಡಿಯುತ್ತಿದ್ದಾಗ ಕೇಳಿದ ಪ್ರೊ. ದೇಸಾಯಿ.

ಫಿಲ್ಮ ಶೋದಲ್ಲಿ ಏನಿರುತ್ತದೆ ಸುಡುಗಾಡು ರಾತ್ರಿ ಏನಾದರೂ ಪ್ರೋಗ್ರಾಮ್ ಇದ್ದಾಗ ಅಥವಾ ಪಿಕ್ಚರು ನೋಡಲಿಕ್ಕೆ ಹೋದಾಗ ತಿರುಗಿ ಬರುವಾಗ ಕತ್ತಲಾಗುವದೆಂದು "ಅವನು' ಹಾಸ್ಟೆಲಿಗೆ ಕಳಿಸಲು ಬರುತ್ತಿದ್ದ. ಪಿಕ್ಚರಿನ ಸೊಗಸು ಹೆಚ್ಚಿನದೋ? ಅವನ ಜೊತೆಯ ಸೊಗಸು ಹೆಚ್ಚಿನದೋ? ಎಷ್ಟೋ ಸಲ ಬೇಕಂತಲೇ ರಾತ್ರಿ ಹಾಸ್ಟೆಲಿಗೆ ಹೋಗಲು ತಡಮಾಡಿದ ಪ್ರಸಂಗ ತರಿಸಿಕೊಂಡದ್ದೂ ಉಂಟು. ತನಗೇಕೆ ಆಗ ಒಮ್ಮೆಯೂ 'ಅವನ' ಕಣ್ಣಮುಳ್ಳಿನ ಅರಿವು ಬರಲಿಲ್ಲ? ಅಷ್ಟೊಂದು ಮಬ್ಬು ಮುಸುಕಿರಬಹುದು. ಅಥವಾ ಅವನೇ ಅದನ್ನು ವ್ಯಕ್ತಗೊಳಿಸಿರಲಿಕ್ಕಿಲ್ಲ. ಏನಾಯಿತೋ ಅಂತೂ ಆಗ ಅದದ್ದೆಲ್ಲಾ ನೋವಿನ ನೆನಪು...

ಉಳಿದಿದ್ದು ಬರಿ ಕತ್ತಲು...

“ಇಲ್ಲ”  ಎಂದು ದೇಸಾಯಿಗೆ ಹೇಳಬೇಕೇನು?

“ತಿರುಗಿ ಹೊಗಲಿಕ್ಕೆ ಕತ್ತಲಾಗತದ..”

“ಅದಕ್ಯಾಕ ಚಿಂತಿ? ನಾ ಕಳಸಲಿಕ್ಕೆ ಬರ್‍ತೀನಿ...”

“ವಾಹ್ ದೇಸಾಯಿ ಎಷ್ಟು ಫಾರ್‌ವರ್ಡ್ ಆಗಿರುವನಲ್ಲ.. ಎಂದು ಅವಳಿಗೆ ನಗೆ ಬಂದಿತು.

ಸಂಜೆಯ ತನಕವೂ ಅವಳು ವಿಚಾರ ಮಾಡುತ್ತಲೇ ಇದ್ದಳು. ಫಿಲ್ಮ್ ಶೋದಲ್ಲಿ ಎಂದಿಲ್ಲದೇ ಇಂದೇಕೆ ಆಸಕ್ತಿ ಬಂದಿತು ತನಗೆ? ಯಾಕೆ ಮತ್ತೆ ಸಣ್ಣ ಹುಡುಗಿಯಾಗಬೇಕು ಅನಿಸುತ್ತದೆ. ತನ್ನನ್ನು ದೇಸಾಯಿಯ ಜೊತೆ ರಾತ್ರಿ ನೋಡಿದ ಯಾರಾದರೂ ವಿದ್ಯಾರ್ಥಿಗಳು ನಾಳೆ ಕಾಲೇಜಿನಲ್ಲಿ ಸುಮ್ಮನೆ ಗದ್ದಲ ಮಾಡಬೇಕು. ಛೇ, ಇಂಥದರಲ್ಲಿ



ಆನಂದಿಸುವ ದಿನಗಳು ಇನ್ನೂ ಕಳೆದುಹೋಗಿಲ್ಲವೆ? ಈಗ ಈ ಎಲ್ಲದರಿಂದ ದೂರವಾಗುವ ಪ್ರಬಲ (ಪ್ರಾಮಾಣಿಕ?) ಇಚ್ಛೆಯುಂಟಾಗಿದೆ. ಕಂಡ ಕಂಡ ಮುಗ್ದಾಳರ ಕಣ್ಣುಗಳಲ್ಲಿನ ಮುಳ್ಳುಗಳಿಂದ ಚುಚ್ಚಿಸಿಕೊಂಡು ಚುಚ್ಚಿಸಿಕೊಂಡು ಹೇಸಿಹೋಗಿದೆ. ಸಾಧ್ಯವಾದಷ್ಟು ಬೇಗ ಇದರಿಂದ ಮುಕ್ತವಾಗಬೇಕು ಹೌದು...

ಹಾಗಾದರೆ ದೇಸಾಯಿಗೆ 'ಹೂ' ಅಂದದ್ದೇಕೆ?

ಛೂ, ಇಂಥ ಉಪಯೋಗವಿಲ್ಲದ ವಿಚಾರಗಳಿಂದಲೇ ನನ್ನ ತಲೆ ಅರ್ಧ ಬೆಳ್ಳಗಾದದ್ದು ಇದನ್ನಿನ್ನು ಬಿಟ್ಟುಬಿಡಬೇಕು.

“ಎಕ್ಸಕ್ಯೂಜ್ ಮಿ ಮಿಸ್ ಶಾಂತಿ, ಬ್ಯಾಡ್ಮಿಂಟನ್ ಆಡಲಿಕ್ಕೆ ಬರೀರೇನು?”

“ಹೊಸದಾಗಿ ಲೆಕ್ಚರರ್ ಆಗಿ ಸೇರಿದ. ಪುಣೆಯಿಂದ ಬಂದಿದ್ದ ಹುಡುಗ, ವಡಗಾಂವಕರ ಇನ್ನೂ ಸಣ್ಣವನಿದ್ದಾನೆ. ಇರಲಿ. ಇಂಥವರ ಗೆಳೆತನ ಕುತ್ತಿಗೆಗೆ ಬರುವುದಿಲ್ಲ.

ಪಟ್-ಪಟ್ ಎಂದು ಒಂದರಮೇಲೊಂದರಂತೆ ಶಾಂತಿ ಶಾಟ್ ಹೊಡೆದಾಗ ಆಟ ನಿಲ್ಲಿಸಿ ಹೇಳಿದ ವಡಗಾಂವಕರ. “ನಿಮ್ಮ ಆಟ ಎಕ್ಸಲೆಂಟ್; ನಾಳಿನ ಟೂರ್ನಾಮೆಂಟಿನ್ಯಾಗ ನನ್ನ ಪಾರ್ಟನರ್ ಆಗ್ತಿರೇನು ಫೀಜ್...?”

ಟೂರ್ನಾಮೆಂಟಿನಲ್ಲಿ ಪಾರ್ಟ್ನ ಆಗಬೇಕೆಂತೆ ಟೂರ್ನಾಮೆಂಟು ಮುಗಿದ ನಂತರ? ಅವನ್ಯಾರೋ ತಾನ್ಯಾರೋ?

"ಟೂರ್ನಾಮೆಂಟ್ಲನ್ಯಾಗ ?" ಎಂದಳು ಶಾಂತಿ

ಪೆಚ್ಚು ಪೆಚ್ಚಾಗಿ ನೋಡಿದ ಆತ, "ಹೂ ಯಾಕ? ನೀವು ಈಗಾಗಲೇ ಬ್ಯಾರೆ ಯಾರ್ನರ ಸಿಲೆಕ್ಟ್ ಮಾಡ್ತೀರೇನು?"

ಗಂಭೀರವಾಯಿತು ಶಾಂತಿಯ ಧ್ವನಿ "ಇಲ್ಲ, ಅಂಥ ಯೋಗ್ಯರು ಇನ್ನೂ ಯಾರೂ ಕಣ್ಣಿಗೆ ಬಿದ್ದಿಲ್ಲ?"

"ಹಂಗಾರ ನನ್ನ ಪ್ರಪೋಜಲ್ ಎಕ್ಸೆಪ್ಟ್ ಆಧಾಂಗ?" ವಡಗಾಂವಕರನ ಧ್ವನಿಯಲ್ಲಿ ಕಣ್ಣಲ್ಲಿ ಉತ್ಸಾಹವೋ ಮತ್ತೇನೋ ಮಿಂಚುತ್ತಿತ್ತು.

"ನೋಡೋಣ" ಎಂದವಳೇ ಬ್ಯಾಕೇಟ್‌ನ್ನು ಬೀಸಿ ಒಗೆದು ಹೊರಟುಬಿಟ್ಟಳು. ಯಾಕೋ ಎಲ್ಲರ ಮೇಲೂ ಅಗಾಧ ಸಿಟ್ಟು ಬರತೊಡಗಿದೆ.

ದರಿದ್ರ ಫಿಲ್ಮ್‌ಶೋ ಯಾಕಾದರೂ ನೋಡಲು ನಿಂತೆನೋ ಎನಿಸುತ್ತದೆ... ಇದು ಮುಗಿಯುವುದೇ ಇಲ್ಲವೆ? ಅರ್ಧಕ್ಕೆ ಎದ್ದರೆ ಹೇಗೆ? ಬೇಡ ಇನ್ನೂ ಸ್ವಲ್ಪ ಕತ್ತಲಾಗಲಿ..

"ನಿಮಗ ಸುಮ್ಮ ತ್ರಾಸು..." ಹೊರಡುವಾಗ ದೇಸಾಯಿಗೆ ಹೇಳಿದಳು ಶಾಂತಿ,

"ಛೇ. ತಾಸ್ರೆಲ್ಲೀದು? ಹತ್ತು ಮಿನಿಟಿನ ದಾರಿ ಅರ್ಧ ಮೈಲೂ ಆಗೊದಿಲ್ಲ ನಿಮ್ಮ ಹಾಸ್ಟೆಲು ನಿಮ್ಮ ಸಲುವಾಗಿ ಇಷ್ಟ ಮಾಡೂದೇನ ಭಾಳ?"

ಇದಕ್ಕೇನೆಂದು ಉತ್ತರಿಸುವುದು? ಯಾಕೋ ಎದೆ ಹಾರತೊಡಗಿದೆ.

ಕತ್ತಲದಾರಿ ದೇಸಾಯಿ ಒಳ್ಳೆಯವನು ಖರೆ. ಆದರೂ ಗಂಡಸರನ್ನು ನಂಬಬಾರದು. ದಾರಿಯಲ್ಲಿ ತಪ್ಪಿ ಏನಾದರೂ ಆದರೆ...ಛೇ ಅವನಿಗೆಲ್ಲಿ ಅಂತಹ ಧೈರ್ಯವಿದೆ? ಇದು ತನ್ನದೇ ಭ್ರಮೆ.

(ಎಷ್ಟ ಕಲಿತರೆನು, ಎಷ್ಟೇ ದೊಡ್ಡ ಕೆಲಸ ಇದ್ದರೇನು, ಬೇಕಾದಂಥಾ ಸೋಶಿಯಲ್ ಪೊಜೆಶನ್ ಇದ್ದರೇನು. ಹೆಣ್ಮಕ್ಕಳು ಒಬ್ಬೊಬ್ಬರ ಇರೂದಂದ್ರ ಭಾಳ ಕಠಿಣ ಅದನವಾ ಶಾಂತೂ ದೂರ ಇರಾಕಿ, ನಿನ್ನ ದೇವರ ಕಾಯಬೇಕು' ತಾನು ನೌಕರಿಗೆಂದು ಊರು ಬಿಟ್ಟು ಬರುವಾಗ ಅಂದಿದ್ದರು. ಅಪ್ಪ. ಹ ಅವರಿಗೇನು ಗೊತ್ತು ಕತ್ತಲಲ್ಲಿಯ ವಾಕಿಂಗಿನ ಮಜಾ...)

'ದಿನಾ ಕಾಲೇಜಿನ್ಯಾಗ ಹಿಂಗ ಫಿಲ್ಮ ಶೋ ಇಟ್ಟರ ಹ್ಯಾಂಗಾದೀತು?" ದೇಸಾಯಿ ಕೇಳುತ್ತಿದ್ದ.

ಅಂದರೆ ದಿನಾ ತನ್ನನ್ನು ಹೀಗೆ ಕಳಿಸಲಿಕ್ಕೆ ಬರುತ್ತಾನಂತೇನು? ಇವತ್ತು ಇವನಿಗೆ ಏನೋ ಆಗಿದೆ. ಏನೇನೋ ಮಾತಾಡುತ್ತಿದ್ದಾನೆ. ಎಲ್ಲಿಗೆ ಮುಟ್ಟುವನೋ ನೋಡಬೇಕು. ಹೇಗೂ ಹಾಸ್ಟೆಲು ಇನ್ನೂ ದೂರವಿದೆ.

"ಅಂದರೆ ಇದರ ಮೂಲಕ ನಮ್ಮ ಹುಡುಗರಿಗೆ ಬೌದ್ಧಿಕ ಶಿಕ್ಷಣ ಕೂಡಬಹುದು. ನಿಮಗೆ ಏನನಸ್ತದರಿ ಮಿಸ್ ಶಾಂತಿ!"

ಈತ ಸುಳ್ಳೇ ತನ್ನ ಉದ್ವಿಗ್ನತೆಗೆ ಮುಸುಕು ಹಾಕುತ್ತಿದ್ದಾನೆ ಆದರೆ ನನಗೆ ಗೊತ್ತಾಗುವದಿಲ್ಲವೇ ಇವನಿಗೆ ಈ ಕತ್ತಲೊಳಗೆ ನಿಶೆ ಏರಿದ್ದು? ಏರುತ್ತಲೇ ಹೊರಟಿದ್ದು?

'ನೀವ್ಯಾಕೋ ಸೀರಿಯಸ್ ಕಾಣಸ್ತೀರೆಲಾ ಕಾರಣಾ ಕೇಳಬಹುದೇನು?'

ಬೇಡವೋ ಮಹಾರಾಯ ನನ್ನ ಮನಸ್ಸಿನಲ್ಲಿ ಈ ಕ್ಷಣದಲ್ಲಿ ನಡೆದಿರುವ ಗೊಂದಲವನ್ನೆಲ್ಲಾ ನಿನಗೆ ಹೇಳಿದರೆ ಅದನ್ನು ಕೇಳಿ ನಿನಗೆ ಶಾಕ್ ಆಗುವುದು.

ಛೇ ಅಸಹ್ಯ ಅನಿಸುವದು. ನನಗೆ ಗೊತ್ತೋ ದೇಸಾಯಿ ನೀನೂ ಬೇರೆ ಎಲ್ಲರಂತೆ ಒಬ್ಬ ಸಾಮಾನ್ಯ ಮನುಷ್ಯ ಆಸಾಮಾನ್ಯವಾದುದಕ್ಕೆ ಅಂಜುವ ಮನುಷ್ಯ ಬೇಡ, ಸುಮ್ಮನೆ ನಡೆ.

ಹತ್ತು ನಿಮಿಷಗಳು ಎಷ್ಟು ಬೇಗ ಕಳೆದು ಹೋದವು! ತಾನೆಣಿಸಿದಂತೆ ಏನೂ ಅನಾಹುತವಾಗಲಿಲ್ಲ. ದೇಸಾಯಿ ಸುಮ್ಮನೇ ಇದ್ದಾನೆ. ಒಮ್ಮೆ ಸಹ ತನ್ನ ಸಮೀಪ ಕೂಡಾ ನಡೆಯುವಾಗ ಸಹಜವೆಂಬಂತೆ ಅವನ' ಹಾಗೆ! ಬರಲಿಲ್ಲ.

ಹಾಸ್ಟೆಲಿನ ಗೇಟು ಕಂಡಾಗ ಎಂಥದೋ ಉದ್ವಿಗ್ನತೆ ಹೃದಯದಲ್ಲಿ ತುಂಬಿ ಹರಿಯಿತು.

ಸುರಕ್ಷಿತವಾಗಿ ಬಂದೆನಲ್ಲಾ ಎಂಬ ಸಮಾಧಾನವೆ?

ಇರಬಹುದು.

ಏನೂ ಮಜಾ ನಡೆಯಲಿಲ್ಲವಲ್ಲಾ, ಎಂಬ ಅಸಮಾಧಾವೇ? ಯಾಕಿರಬಾರದು?

“ಥ್ಯಾಂಕ್ಸ್, ಗುಡ್‌ನೈಟ್, ಎಂದು ಒಳಗೋಡಿದಳು ಶಾಂತಿ



ಎಂಥದೋ ಅನಿರ್ದಿಷ್ಟ, ಅಸ್ಪಷ್ಟ ಮಧುರ ಭಾವ, ದೀಪ ಹಾಕಿದರೆ ಅದೆಲ್ಲಿ ಕಳೆದು ಹೋಗುವದೋ ಎಂದು ಕತ್ತಲಲ್ಲೇ ಆಕೆ ಕಾಟಿನ ಮೇಲೆ ಬಿದ್ದುಕೊಂಡಳು.ಊಟ ? ಇವತ್ತು ಬೇಡ.

ಗುಯ್ಞ್ ಎಂದು ಹಾರಾಡುತ್ತಿವೆ ಸೊಳ್ಳೆಗಳು ಪರದೆ ಹಾಕಲು ಬೇಸರ.

“ಬರುತ್ತೀರಾ ಮಿಸ್ ಶಾಂತಿ ನನ್ನ ಜೊತೆ?”

“ಟೀಗೆ ಬರುತ್ತೀರಾ ಶಾಂತಿ?”

“ಬ್ಯಾಡ್ಮಿಂಟನ್ ಆಡ್ಲಿಕ್ಕೆ ಬರುತ್ತೀರಾ ಶಾಂತಿ?

“ಫಿಲ್ಮ್ ಶೋ ನೋಡಲಿಕ್ಕೆ ಬರುತ್ತೀರಾ ಶಾಂತಿ?”

“ಮ್ಯಾಡಂ ಪಿಕ್ಚರಿಗೆ ಬರುತ್ತೀರಾ?”

“ಬರುತ್ತೀರಾ ಶಾಂತಿ?” ಬರುತ್ತೀರಾ ಶಾಂತಿ?”

- ಕಿಟಾರನೆ ಕಿರುಚಬೇಕೆನಿಸಿತು ಅವಳಿಗೆ ಹತ್ತಾಗಿ ನೂರಾಗಿ ಕೀಸರಿಟ್ಟಿರುವ ಈ ಅಪರಿಚತ ದನಿಗಳು ಎಲ್ಲಿಯವು? ಯಾರು ಹೀಗೆ ಕರೆಯುವವರು? ಎಲ್ಲಿದ್ದಾರೆ? ಹೀಗೆ ಬಹಿರಂಗವಾಗಿ ತನ್ನ ಅವಮಾನ ಮಾಡಲು ಎಷ್ಟು ಧೈರ್ಯ ಈ ಆಯೋಗ್ಯರಿಗೆ? ಒಬ್ಬೊಬ್ಬರನ್ನಾಗಿ ಒದ್ದು ಕಳಿಸಬೇಕು ಇವರೆಲ್ಲರನ್ನೂ,

ಮುಳ್ಳು ಚುಚ್ಚಿದಂತಾಗುವ ಈ ಸೊಳ್ಳೆಗಳ ಕಡಿತ ಸಹಿಸಲಾಗುವುದಿಲ್ಲ ಇನ್ನು ಎದ್ದು ಸುತ್ತಲೂ ಮುಚ್ಚರದಾನಿ ಹಾಕಬೇಕು. ಇಲ್ಲವಾದರೆ ರಾತ್ರಿಯಿಡೀ ಕಣ್ಣಿಗೆ ಕಣ್ಣು ಹತ್ತಲಿಕ್ಕಿಲ್ಲ.

"ಬರುವುದಿಲ್ಲ ಹಾಳಾಗಿ ಹೋಗಿರೋ' ಎಂದುಕೊಂಡು ಶಾಂತಿ ಮುಚ್ಚರದಾನಿಯನ್ನು ಇಳಿಬಿಟ್ಟಳು. ತುಂಬು ಹೊದ್ದುಕೊಂಡು ಮಲಗಿದಳು.

ದೇಸಾಯಿಯೊಬ್ಬ ವಿಚಿತ್ರ ಮನುಷ್ಯ ತಿಳಿದುಕೊಳ್ಳಲು ಪ್ರಯತ್ನಿಸಿದಷ್ಟೂ ಹೆಚ್ಚು ಗೂಢವಾಗುತ್ತ ನಡೆದಿದೆ ಅವನ ವ್ಯಕ್ತಿತ್ವ ಬಹಳ ಮಜಾ ಇದ್ದಾನೆ...

ಒಂದು ಸೊಳ್ಳೆ ಹೇಗೋ ತಪ್ಪಿಸಿಕೊಂಡು ಒಳಸೇರಿದೆ ಗುಯ್ ಎಂದು ಒಂದೇ ಸಮನೆ ಕಿರಿಚುತ್ತ ಹಾರತೊಡಗಿದೆ. ಇದರಿಂದೇನೂ ನಿದ್ರೆಗೆ ಬಹಳ ಭಂಗ ಬರಲಾರದು. ಇರಲಿ. ಇಡೀ ದಿನ ಇಷ್ಟು ದಣಿದ ನಂತರ ಯಾರು ಈಗ ಈ ಒಂಟಿ ಸೊಳ್ಳೆಯನ್ನು ಓಡಿಸಲೆಂದು ಎದ್ದು ದೀಪ ಹಾಕಲು ತ್ರಾಸು ತೆಗೆದುಕೊಳ್ಳಬೇಕು?

...ನಿದ್ರೆಯೇಕೆ ಬರಲೊಲ್ಲದು? ಇದೂ ನನ್ನ ಜೊತೆ ಆಟ ಆಡತೊಡಗಿದೆ. ಇದಕ್ಕೆ ಸೋಲಬಾರದು. ನಿದ್ರೆ ಬರಿಸಿಕೊಳ್ಳುವ ಸುಲಭ ಸಾಧನ ನನಗೆ ಗೊತ್ತಿದೆ. ಭವಿಷ್ಯದ ಬಗೆಗೆ ನಿಷ್ಫಲ, ಆದರೆ ಸವಿಯಾದ ಕನಸು ಕಾಣುವುದು... ಹೌದು.. ಒಂದೇ ದಾರಿ. ಮುಳ್ಳುಗಳ ನೆನಪಿನಿಂದ ದೂರ ಹೋಗಲು ಇದೊಂದೇ ದಾರಿ...

ಥಟ್ಟನೇ 'ಅವನ' ನೆನಪು ಈಗ ರಾತ್ರಿ ಹತ್ತು ಗಂಟೆ 'ಅವನು' ಏನು ಮಾಡುತ್ತಿರಬಹುದು? ಮಲಗಿಕೊಂಡಿರಬಹುದು... ತನ್ನ ಹೆಂಡತಿಗೆ ತನಗೆ ಬಹಳ ವಿಧೇಯಳಾಗಿರುವಳೆಂದುಕೊಂಡು ಆರಿಸಿ ಮದುವೆಯಾದ ಆ ಎರಡು ಸಾರಿ ಮ್ಯಾಟ್ರಿಕ್

ನಾಪಾಸಾದ ಹುಡುಗಿಗೆ ಹೇಳುತ್ತಿರಬಹುದು... "ಪ್ರಿಯೆ, ನನ್ನ ಹೃದಯದಲ್ಲಿ ನಿನ್ನ ಮೂರ್ತಿ ಭದ್ರವಾಗಿ ನೆಲೆಯೂರಿದೆ." ಎಂದು.

ಛೇ ಈ ವಿಚಾರ ಬೇಡವೇ ಬೇಡ

ಮತ್ತೇನು ವಿಚಾರಿಸುವುದು ಹಾಗಾದರೆ?

ಮುಂಜಾನೆ ನಾಳೆಯಲ್ಲ, ಮುಂದೊಂದು ದಿನ ಮುಂಜಾನೆ ತನ್ನನ್ನೆಬ್ಬಿಸಲು. ಬರುವ ಆ ಗಂಡ ಹೇಗಿರಬೇಕು? ಕ್ರಿಕೆಟಿಯರ್ ಸುಧೀರನ ಹಾಗೆ ಬೇಡ, ಅಂಥವರಿಗೆ ಬಹಳ ಹುಡುಗಿಯರು ಬೆನ್ನು ಹತ್ತುತ್ತಾರೆ. 'ಅವನ' ಹಾಗಂತೂ ಬೇಡವೇ ಬೇಡ. 'ಅವನ' ಕಣ್ಣ ತುಂಬ ಬರೀ ಚೂಪುಮುಳ್ಳು. ಇನ್ನಾರ ಹಾಗೆ?

ಹಾಳಾದವನು ಹೇಗಾದರೂ ಇರಲೊಲ್ಲನೇಕೆ, ಈಗಂತೂ ಪುಣ್ಯಕ್ಕೆ ನಿದ್ರೆ ಬರತೊಡಗಿದೆ...

ನಡೆ.

ಏ ದೇಸಾಯಿ, ಈ ಹೊತ್ತಿನಲ್ಲಿ ಸುಳ್ಳೇ ನೆನಪಿಗೆ ಬಂದು ಕಾಡಬೇಡ ಹೋಗು.

- ಶಾಂತಿ ಗಟ್ಟಿಯಾಗಿ ಮುಸುಕೆಳೆದುಕೊಂಡಳು.

# ಲೂಟಿ

-ಚಿ.ಐ. ಲಲತಾ ನಾಯಕ್

ಸುಮಾರು ಹತ್ತು ವರುಷಗಳ ಹಿಂದೆ ಅವಳು ಬೀರುವಿನ ಕೈ ಹಿಡಿದಾಗ ಅಂತಹ ಸುಖವನ್ನು ಅನುಭವಿಸಿದ್ದಳು. ತೌರು ಮನೆಯವರು ಕೊಟ್ಟಿದ್ದ ಕೆಲವೇ ಬೆಳ್ಳಿ ಆಭರಣಗಳನ್ನು ಧರಿಸಿಕೊಂಡು ಹುರುಪಿನಿಂದ ಓಡಾಡುತ್ತಿದ್ದಳು. ಹರ್ಷದಾಯಕವಾಗಿದ್ದ ವರ್ತಮಾನದ ದಿನಗಳ ಹೊರತು ತಪ್ಪಿಯೂ ಭೂತ ಭವಿಷ್ಯತ್ತುಗಳ ಚಿಂತೆ ಆಗ ಅವಳ ಮನದಲ್ಲಿ ಸುಳಿಯುತ್ತಿರಲಿಲ್ಲ.

ವರುಷಗಳೆ ಉರುಳಿದವು ಆಕೆ ಮೇಲೆ ಮೇಲೆ ಬಸುರಿ ಬಾಣಂತಿಯಾಗಿ ನಾಕೈದು ಮಕ್ಕಳ ತಾಯಿಯೂ ಆದಳು. ತನ್ನಲ್ಲಿ ಪುಟಿಯುತ್ತಿದ್ದ ಸುಖ ಸಂಭ್ರಮದ ಸೆಲೆಯೊಂದು ಸುಳಿವು ಕೊಡದೆ ಬತ್ತಿ ಹೋಗಿದ್ದರ ಬಗ್ಗೆ ಯೋಚಿಸಲು ಅವಳಿಗೆ ಬಿಡುವಿರಲಿಲ್ಲ.

ಹೆಂಡತಿಯನ್ನು ಹೊಡೆದು ಬಡೆದು ಪೀಡಿಸುವ ಬೇರೆ ಗಂಡಸರಿಗೆ ಹೋಲಿಸಿದರೆ ಖೀರು ಅವರುಗಳಿಗಿಂತ ಎಷ್ಟೋ ಪಾಲು ಒಳ್ಳೆಯವನು. ಭಾರೀ ಸಿಟ್ಟು ಬಂದ ಹೊರತು ಆತ ಹೆಂಡತಿಯ ಮೇಲೆ ಕೈ ಮಾಡುತ್ತಿರಲಿಲ್ಲ ಸ್ವಂತ ಜಮೀನು ಇಲ್ಲದ್ದರಿಂದ ಕೂಲಿನಾಲಿ ಮಾಡಿ ಹೆಂಡತಿ ಮಕ್ಕಳ ಹೊಟ್ಟೆ ತುಂಬಿಸಲು ಹೆಣಗಾಡುತ್ತಿದ್ದ.

ರಾಮಿ ಐದನೆಯ ಹೆರಿಗೆಯಲ್ಲಿ ಅಪರೇಷನ್ ಮಾಡಿಸಿಕೊಂಡ ನಂತರ ದಂಪತಿಗಳಿಗೆ ಮಕ್ಕಳಾಗುವ ಆತಂಕ ದೂರವಾಗಿತ್ತು. ಇನ್ನು ತಾವಿಬ್ಬರೂ ದುಡಿದು ಮಕ್ಕಳನ್ನು ಸಾಕಬಹುದೆಂಬ ಧೈರ್ಯ ಉಂಟಾಗಿತ್ತು. ಆರು ತಿಂಗಳು ಕೂಸಿಗೆ ಹೊಟ್ಟೆ ತುಂಬ ಎದೆ ಹಾಲೂಡಿಸಿ, ಎಂಟೊಂಬತ್ತು ವರ್ಷದ ತನ್ನ ಹಿರಿಯ ಮಗಳ ವಶಕ್ಕೆ ಅದನ್ನು ಒಪ್ಪಿಸಿ ಆಕೆ ಗಂಡನೊಡನೆ ಕೂಲಿಗೆ ಹೊರಡುತ್ತಿದ್ದಳು...

ಆ ಕಾಲ ಕಳೆದು ಮಗು ಒಂದೂವರೆ ವರುಷದ್ದಾಗಿದೆ ತಾಯಿಯ ಎದೆ ಹಾಲು ಅದಕ್ಕೇನೇನೂ ಸಾಲದು. ಉಣ್ಣುವ ಆರೇಳು ಬಾಯಿಗಳಲ್ಲಿ ಈಗ ಅದೂ ಒಂದು, ಹೀಗಾಗಿ ತಿನ್ನುವುದರಲ್ಲಿ ಕೂಡು ಲೆಕ್ಕವಾದರೆ, ದುಡಿಯುವ ಕೈ ಮುರಿದು ಮೂಲೆ ಸೇರಿದೆ!

ಕಳೆದ ಮೂರು ವಾರಗಳ ಹಿಂದೆ ಖೀರು ಗೌಡರ ಹೊಲಕ್ಕೆ ಗೊಬ್ಬರ ಹೇರಲು ಒಪ್ಪಿಕೊಂಡಿದ್ದ. ತಿಪ್ಪೆಯಿಂದ ಮೈಲು ದೂರದಲ್ಲಿದ್ದ ಹೊಲಕ್ಕೆ ಹೆದ್ದಾರಿಯಿಂದಲೇ ಹೋಗಬೇಕಾಗಿತ್ತು. ಬಂಡಿ ಹೊರಳಿಸಲು ಒಂದೆರಡು ಮಾರು ದೂರ ಮಾತ್ರ ಉಳಿದಿರುವಾಗ, ಹಿಂದಿನಿಂದ ಬಂದ ಲಾರಿಯೊಂದು ಬಂಡಿ ಒಂದು ತುದಿಗೆ ಗುದ್ದಿ ಉರುಳಿಸಿ ಅದೇ ವೇಗದಲ್ಲಿ ಮುಂದೆ ಹೊರಟು ಹೋಗಿತ್ತು.

ಪ್ರಜ್ಞೆ ತಪ್ಪಿ ಬಿದ್ದಿದ್ದ ಬೀರುವನ್ನು ಗೌಡರು ಸರ್ಕಾರಿ ದವಾಖಾನೆಗೆ ಒಯ್ದು, ಪ್ರಥಮ ಚಿಕಿತ್ಸೆ ಕೊಡಿಸಿ, ಮನೆಗೆ ಕಳುಹಿಸಿ ಕೈ ತೊಳೆದುಕೊಂಡರು, ಪಕ್ಕೆ ನೋವೆಂದು ಗೋಳಾಡುವ ಗಂಡನನ್ನು ರಾಮಿ ವೈದ್ಯರ ಬಳಿ ಕರೆದೊಯ್ದು ತೋರಿಸಿದಾಗ ಪಕ್ಕೆಲುಬು ಮುರಿದಿರಬಹುದು ಇಲ್ಲಿ ಗುಣ ಆಗೋದಿಲ್ಲ ಪಟ್ಟಣದ ದೊಡ್ಡ ದವಾಖಾನೆಗೆ ಒಯ್ಯ, ಎಂದು ಸಲಹೆ ಮಾಡಿದರು.

ರಾಮಿ ಗೌಡರ ಪಾದ ಹಿಡಿದು ಸಹಾಯ ಕೋರಿದಳು. "ಖರ ಬಿಡು, ನೀ ಹೇಳ್ಳಂಗ ಆಂವ ಗುಣ ಅದನಂದ್ರ ನನ್ನ ಮನಿ ಜೀತ ಗೇಯ್ದಾರೆ ಸಾಲ ತೀರಿಸ್ತಾನ. ಆದ್ರ ಸತ್ತನಂದ್ರ ಯಾರು ತೀರಿಸ್ತಾರ? ನೀ ಅನಕೆ ಮಕ್ಕಳಾಕಿ. ಅವರ ದೇಖು ರೇಖು ಮಾಡೂಧ ರಗಡಾಗದ, ಇನ್ನ ನನ ಸಾಲದ ಗತಿ?

ಹೆಂಗಾರ ತೀರಿಸ್ತೀನಿ ಒಡೆಯ ಕಷ್ಟದ ಕಾಲದಾಗ ಕೈ ಹಿಡಿರಿ ಧಣಿ! ಎಂದು ರಾಮಿ ಪರಿಪರಿಯಾಗಿ ಬೇಡಿದ್ದು ವ್ಯರ್ಥ ಪ್ರಲಾಪವಾಗಿ ಗೌಡನಿಂದ ಬೈಗುಳ ತಿಂದು ಹಿಂದಿರುಗಬೇಕಾಯಿತು...

ತನ್ನ ಮುಂದಿನ ಹಾದಿ ಎರಡು ಕವಲಾಗಿ ಸೀಳಿದ್ದನ್ನು ಗಮನಿಸಿದ ಆಕೆ ನಡೆಗೆಯನ್ನು ನಿಧಾನಗೊಳಿಸಿ ಯೋಚಿಸತೊಡಗಿದಳು. ಯಾವ ಹಾದಿ ಹಿಡಿಯಲಿ? ನದಿ ದಂಡೆಯದೋ, ದುರ್ಗದ್ದೋ? ಯಾವುದನ್ನೂ ಬೇಗನೆ ನಿರ್ಧರಿಸಲಾಗದೆ ಗೊಂದಲಕ್ಕೆ ಬಿದ್ದಳು.

ಇದುವರೆಗೂ ತಾನೆಂದೂ ಒಂಟಿಯಾಗಿ ದುರ್ಗದ ಅಡವಿಗೆ ಹೋಗಿಲ್ಲ ತಾಂಡದ ಹತ್ತಾರು ಹೆಂಗಸರು ಗಂಡಸರು ಒಟ್ಟಾಗಿ ಹೊರಡುವಾಗ ತಾನೂ ಅವರೊಂದಿಗೆ ಹೋಗಿ ಸೌದೆ ಹೊರೆ ಕಟ್ಟಿಕೊಂಡು ಗುಂಪಿನೊಡನೆ ಹಿಂದಿರುಗುತ್ತಿದ್ದಳು. ಆದರೆ ಈ ದಿನ ಜೊತೆಗಾರ್ತಿಯರೆಲ್ಲಾ ಹೊರೆ ಕಟ್ಟಿಕೊಂಡು ಹಿಂದಿರುಗಿ ಬಿಟ್ಟಿದ್ದಾರೆ. ಕೆಲವರಾಗಲೇ ಪೇಟೆಗೆ ಹೋಗಿ ಹೊರೆ ಮಾರಾಟ ಮಾಡಿ ಮನೆ ಸೇರಿಕೊಂಡಿದ್ದೂ ಆಗಿದೆ...

ತಾಂಡದ ಕಡೆಯಿಂದ ಯಾರೋ ಗಂಡಸೊಬ್ಬ ವೇಗವಾಗಿ ಬರುತ್ತಿರುವುದು ಕಾಣಿಸಿದಾಗ, ದುರ್ಗದ ಕಡೆ ಹೊಂಟವನೇ ಇರಬಾರದೇಕೆ? ಎಂಬ ಆಶಾಭಾವದಿಂದ ಅತ್ತ ದಿಟ್ಟಿಸಿ ನೋಡಿದಳು. ಬರುತ್ತಿರುವವನು ಕಾಳು ಎಂಬುದು ತಿಳಿದು ಅವಳ ಮುಖ ಒಂದಷ್ಟು ಅರಳಿತು. ಆದರೆ ಅವನ ಕೈಲಿ ಕೊಡಲಿ ಇಲ್ಲದ್ದನ್ನು ಕಂಡು ನಿರಾಸೆಯಾಯಿತು.

"ಯಾಕೆ ಬಾಯಿ, ಒಬ್ಬಕಿನ್ಯ ಹೋಂಟೀಯಲ್ಲ ಕಟಗಿಗಿ?" ಎಂದು ಕಾಳು ವಿಚಾರಿಸಿದ.

"ಏನ್ಮಾಡಲಣ್ಣಾ, ನನ್ನ ನಸೀಬು ಅಗದಿ ತೊಟ್ಟ ಐತಿ, ಹಿರಿಯಗ ಇನ್ನಾದರೂ ಆರಾಮ ಆಗುವಲ್ಲು... ಪಕ್ಕೆ ಬ್ಯಾನೆ ಅಂತ ಒಂದೇ ಸವನೆ ಒದರಾಡ್ತಾನೆ ಸಣ್ಣ ಕೂಸಿಗೆ ಜ್ವರ ಬ್ಯಾರೆ ಬಂದಾವ. ಅದಕ್ಕೆ ಮುಂಜಾನೆ ಎಲ್ಲರ ಕೂಡ ಹೊಂಡಲಿಕ್ಕಾಗಲಿಲ್ಲ!" ಎಂದು ತನ್ನ ಸಂಕಟ ತೋಡಿಕೊಂಡಳು.

“ದುನಿಯಾದೊಳಗ ಯಾರೂ ಬಂಡಿಯಿಂದ ಬೀಳಂಗೇ ಇಲ್ಲೇನು ಬಾಯಿ?! ಜಾಲು ಇದ್ದ ಮೋಟರ್ ಗಾಡಿಯಿಂದ ಬಿದ್ರೂ ಸೈತ ಒಂದು ವಾರಕ್ಕೆಲ್ಲ ಆರಾಮವಾಗಿ



ಕುಂಟ ಹಿಡಿದು ದಗದ ಮಾಡಲಿಕ್ಕ ಹತ್ಯಾನ- ಆ ಭೀಮಪ್ಪನ ಮಗ ಈತಗೇನಾತು ಅಂತೀನಿ!”

“ಎಂಥ ಮಾಯದ್ದು ಬಂದು ಅಮರಿಕೊಳ್ತು ಅಂತ ಹೇಳ್ಳಣ್ಣಾ! ದೊಡ್ಡ ದಾವಖಾನಿಗೆ ಒಯ್ಯಬೇಕೆಂದ್ರೆ ಕೈಯಾಗ ರೊಕ್ಕಿಲ್ಲ ಗೌಡ್ರ ಬಲ್ಲಿ ಬೇಡಾಕ ಬೇದು ಹ್ವಾದ್ರೆ ಕಳಿಸಿಬಿಟ್ರು!”

ಮೈ ಮುರ್ದು ದಗದಾ ಮಾಡಿದೋರಿಗೇ ರೊಕ್ಕ ಬಿಚ್ಚಲಿಕ್ಕ ವಲ್ಲೆ ಅಂತಾನ ಆ ಮಗ. ಇನ್ನು ನಿನಗೆ ಹ್ಯಾಂಗ ಕೊಟ್ಟಾನು ಬಿಡು... ಹಂಗಾರ ಇರಲಿ ಸೇವಾಲಾಲನ ಗುಡಿಗೆ ಹೋಗಿ ಬೀರುಗ ಒಂದಿಷ್ಟು ದುಳ್ತಾ (ಬೂದಿ) ಪರಸಾದ ಕೊಡ್ಸು, ನಮ್ಮಜ್ಜ ಮತ್ತಷ್ಟೋರೆಲ್ಲಾ ಜಡ್ಡಾದ್ರ ದವಾಖಾನಿಗೆ ಹೋಗ್ತಿದ್ರೇನು?” ಎಷ್ಟೋತ್ತಾಗಿ ಆ ಸ್ವಾಮಿ ಪಾದಕ್ಕೆ ಶರಣಾಗಿದ್ರು, ಹೌದಿಲ್ಲೋ?”

“ಈಗ ನಾ ಆದ್ರೂ ಅದ್ನೇ ಮಾಡ್ತೀನಲ್ಲ ಕಾಳಣ್ಣ ಬರೋ ಅಮಾಸಿಗ ಗದ್ದಮ್ಮಗ ಒಂದ್ ಹುಂಜ ಕೊಡ್ತೀನಿ ಅಂತ ಬೇಡಿಕೊಂಡೀನಿ. ಮಠದಯ್ಯಗ ಮುಡಿಪು ಕಟ್ಟೀನಿ”

“ಬಾಬಣ್ಣನ ಹತ್ರ ಒಂದಿಷ್ಟು ಮಂತ್ರ ಹಾಕ್ಸಿಬಿಡು, ಬಾಯಿ, ಗಾಳಿಗೀ ಮೆಟ್ಟಿಕೊಂಡೈತೋ ಏನೋ... ” ಎಂದು ಅತ ಮತ್ತೊಂದು ಹೊಸ ಸೂಚನೆ ನೀಡಿದಾಗ, ಆಕೆ ನಿರಾಕರಿಸುವ ಸ್ಥಿತಿಯಲ್ಲಿರಲಿಲ್ಲ. ಈಗಾಗಲೇ ತನ್ನ ಮೂಗಿನಲ್ಲಿದ್ದ ಚಿನ್ನದ ಮುಕುರವನ್ನೂ ಗಂಡನ ಸಲುವಾಗಿ ಮಾರಿದ್ದಾಗಿತ್ತು. ಈಗ ಉಳಿದಿರುವುದು ಇದೊಂದೇ ಎಂದು ತನ್ನ ಕಾಲಂದುಗೆಯನ್ನು ನೋಡಿಕೊಂಡಳು.

“ರಸ್ತೆ ದಗದ ಸುರವಾಗತೈತಿ ಅಂತ ಆವತ್ತು ನೀ ಅಂದಿದ್ಯಲ್ಲಣ್ಣಾ?” ಎಂದು ಆಕೆ ಪ್ರಶ್ನಿಸಿದಾಗ ಬರೋ ಸ್ವಾಮಾರದಿಂದ ಸುರುವಾಗತೈತಿ ಅದರ ಸಂಬಂಧನೇ ಸುಣಕಲ್ ಮೇಸ್ತ್ರಿ ಕಡೆ ಹೊಂಟೀನಿ. ಎಷ್ಟು ಆಳು, ಬೇಕಂನೋದನ್ನ ಕೇಳಿ, ಹೆಸರು ಹೆಚ್ಚಿಸಿ ಬರ್ತೇನೆ”  ಎಂದ ಕಾಳ.

“ಹಂಗ್ರಾದ್ರ ನಿನಗ ಪುಣ್ಯ ಬರ್ತದ, ನನದೊಂದ್ ಹೆಸರು ಹಚ್ಚಿ ಬಾಯಣ್ಣ ನನಪಾಡು ಏನಂಬೂದು ನಿನಗೆ ಚಲೋತ್ತನಾಗಿ ತಿಳಿದೈತಿ!” ಎಂದು ವಿನಂತಿಸಿಕೊಂಡರು.

“ಯುದ್ಧಕ್ಕಗೊತ್ತಿಲ್ಲ ಬಿಡು ಬಾಯಿ, ನಮ್ಮಂಥ ಗರೀಬರ ಹಣೆಬರವೆಲ್ಲಾ ಈಟೇನೋಡು, ಏಳು ಗುಡ್ಡಸುತ್ತಾಡಿ ತುಕಡಿ ತೊಟ್ಟಿ ತಾಣಬೇಕಾಗ್ಯೆತಿ' ಎಂದು ನಿಟ್ಟುಸಿರಿಟ್ಟು, “ನೀ ಏನು ಈಗ ನದಿ ದಂಡಿಗ ಹೊಂಟದಿ?” ಎಂದು ವಿಚಾರಿಸು.

“ಇಲ್ಲಣ್ಣ ದುರ್ಗಕ್ಕೆ ಹೋಗಬೇಕಂದ ಮಾಡೀನಿ.ಎಂದಾ ಆಕೆ ಹೇಳಿದೊಡನೆ ಕಾಳು ಆತುರದಿಂದ ನುಡಿದ ಬ್ಯಾಡ ಬಾಯಿ, ಒಬ್ಬಾಕಿನೇ ಅಲ್ಲಿಗೆ ಹೋಗಬ್ಯಾಡ, ಅಡವಿಗ ತೋಳ ಬಂದಾವ, ಕರ್ದಿ ಬಂದಾವ, ಮನ್ಸರನ್ನ ಎತ್ತಿಕೊಂಡ್ ಹೋಗಲಿಕ್ಕ ಹತ್ಯಾಂತ ಮಂದಿ ಹೇಳಲಿಕ್ಕ ಹತ್ಯಾರ ಆ ರತೀಬಾಯಿ, ಧೀರಜ್ಜಿ ಎದ್ದು ಕಣ್ಣಾರೆ ಕಂಡು ಬಂದರಾಂತ ಸುಮ್ನೆ ನದಿ ದಂಡಿಗ ಹೋಗು” ಎಂದು ಸಲಹೆ ನೀಡಿ ಆತ ದಾರಿ ಹಿಡಿದ.

ರಾಮಿ ಪುನಃ ಗೊಂದಲಕ್ಕೀಡಾದಳು. ಸಮೀಪದ ನದಿದಂಡೆಗೆ ಹೋದರೆ ದಪ್ಪ ಕಟ್ಟಿಗೆಯಂತೂ ಸಿಗುವುದಿಲ್ಲ. ಬರೀ ಪುರಲೇ ಕಟ್ಟಿಗೆಯಷ್ಟೇ ಆಯ್ದು ತರಬೇಕು. ಕೊಳ್ಳುವ ಗಿರಾಕಿಗಳು ಅದನ್ನು ಒಂದೆರಡು ರೂಪಾಯಿಗಿಂತಲೂ ಹೆಚ್ಚು ಬೆಲೆಗೆ



ಕೇಳುವುದೇ ಇಲ್ಲ. ಅಷ್ಟು ಕಡಿಮೆ ರೊಕ್ಕದಲ್ಲಿ ಜೋಳ ಕೊಳ್ಳುವುದೆಂತು? ಉಪ್ಪು ಮೆಣಸಿಗೂ ಸಹಿತ ಸಾಲುವುದಿಲ್ಲ... ದುರ್ಗಕ್ಕೆ ಹೋದರೆ ದಪ್ಪ ದಪ್ಪನೆಯ ಒಣಕಟ್ಟಿಗೆ ತರಬಹುದು. ಐದು ರೂಪಾಯಿಗಳವರೆಗೂ ಗಳಿಸಬಹುದು!... ತೋಳ, ಕರಡಿ ಅಂತ ಅಂಜಿಸುತ್ತಿದ್ದಾರಲ್ಲಾ.. ಹಾಡು ಹಗಲಿನಾಗ ಅವು ತನ್ನನ್ನೇನು ಮಾಡಿಯಾವು? ಹಂಗೇನಾದರೂ ಕಾಣಿಸಿದರೆ ಓಡಿ ಬಂದು ಬಿಟ್ಟಿರಾಯಿತು... ಬಲು ದೃಢ ನಿರ್ಧಾರ ತಳೆದು ಸರಸರನೆ ಹೆಜ್ಜೆ ಹಾಕಿದಳು.

ಚಿರಪರಿಚಿತವಾದ ಹಾದಿ ಅರ್ಧ ತಾಸಿನಲ್ಲಿ ಸವೆದು, ಕಾದು ಹೋಗಿದ್ದ ಭೂಪ್ರದೇಶ ಕೊನೆಗೊಂಡಿತೆಂಬಂತೆ ವಿರಳವಾಗಿ ಗಿಡಗಂಟೆಗಳು ಕಾಣಿಸತೊಡಗಿದವು! ಎತ್ತತ್ತರಕೆ ಬೆಳೆದು ನಿಂತ ವಿವಿಧ ಜಾತಿಯ ಮರಗಿಡ, ಮುಳ್ಳು ಬೇಲಿ, ಬೆಳೆ-ಪೊದೆಗಳು ದಟ್ಟೈಸುತ್ತ ಬಂದು ಆಕೆಯ ನಡಿಗೆ ನಿಧಾನಗೊಂಡಿತು. ಅಂಕುಡೊಂಕಿನ ಏರು ತಗ್ಗಿನ ಕಠಿಣವಾದ ಮಾರ್ಗದಲ್ಲಿ ಅತೀ ಎಚ್ಚರಿಕೆಯಿಂದ ಕ್ರಮಿಸುತ್ತ ಕಟ್ಟಿಗೆ ಶೋಧೆಗೆ ತೊಡಗಿದಳು.

ಅಲ್ಲೊಂದು ಇಲ್ಲೊಂದು ಒಣ ಕಟ್ಟಿಗೆಯ ತುಂಡುಗಳು ಕಾಣಿಸಿದ್ದನ್ನೂ ಹಿಗ್ಗಿನಿಂದ ಸಂಗ್ರಹಿಸತೊಡಗಿದಳು. ದೊಡ್ಡದೊಂದು ಪೊದೆಯ ನಡುವೆ ಗೆದ್ದಲು ಹತ್ತಿದ ಒಣಮರವೊಂದನ್ನು ಕಂಡು ಲಗುಬಗೆಯಿಂದ ಅದರತ್ತ

ನುಗ್ಗಿದಳು. ಕೈಗೆಟುಕುವ ರೆಂಬೆ ಟೊಂಗೆಗಳನ್ನೆಲ್ಲ ಕೊಡಲಿಯಿಂದ ಕಡಿಕಡಿದು ಒಂದೆಡೆ ರಾಶಿ ಹಾಕುತ್ತಿರುವಾಗ ಪೊದೆಯಲ್ಲಿ ಯಾವುದೋ ಪ್ರಾಣಿ ಚಲಿಸಿದಂತೆ ಕಂಡುಬಂದು ಅವಳ ಎದೆಬಡಿತ ದ್ವಿಗುಣಿಸಿತು.

ಗಾಬರಿಯಿಂದ ಹಿಂದಕ್ಕೆ ಜಿಗಿದು ಕಣ್ಣಗಲಿಸಿ ನೋಡಿದಳು. ಮೈ ತುಂಬ ಕಪ್ಪು ಕೂದಲುಳ್ಳ ಆಳೆತ್ತರದ ಪ್ರಾಣಿಯೊಂದು ತನ್ನತ್ತಲೇ ನೋಡ ತೊಡಗಿದೆ. ರಾಮಿಯ ಜಂಘಾಬಲ ಉಡುಗಿತು ಗಂಟಲ ಪಸೆ ಆರಿ ಮೈಯೆಲ್ಲಾ ಬೆವತು ನೀರಾಯಿತು. ಕೂಗಿಕೊಳ್ಳಲಾಗಲಿ ಓಡಿ ಹೋಗಲಾಗಲಿ ಸಾಧ್ಯವಾಗದೆ ಕಂಪಿಸುತ್ತ ನಿಂತುಬಿಟ್ಟಳು.

"ಕಲ್ದಿ ಮನ್ಸರನ್ನ ಕಂಡ್ರೆ ಸುಮ್ನೆ ಬಿಡೋದಿಲ್ಲ! ಅದರಾಗೂ ಗಂಡು ಕಲ್ದಿ ಕೈಗೆ ಹೆಣ್ಣು ಮಕ್ಕಳೇನಾರ ಸಿಕ್ಕಿಹಾಕ್ಕೊಂಡ್ರೆ ಕಥೆ ಮುಗಿದೇ ಹೋಯ್ತು! ಅದು ಮಾನಭಂಗ ಮಾಡಿ ಮಾಡಿ ಸಾಯಿಸಿಬಿಡತ್ತೈತಿ" ಎಂದು ಜನಗಳು ಹೇಳುವುದನ್ನು ಕೇಳಿದ್ದ ರಾಮಿ. ತನಗೆ ಅಪಮೃತ್ಯು ಸಮೀಪಿಸಿತೆಂದೇ ತೀರ್ಮಾನಿಸಿದಳು. ಮಂದಿ ಹೇಳಿದ್ದ ಬುದ್ಧಿಮಾತು ಕೇಳಬೇಕಾಗಿತ್ತು. ಉಪವಾಸ ಸತ್ತರೂ ಚಿಂತಿಲ್ಲ ಒಬ್ಬಾಕಿನ ಇಲ್ಲಿಗೆ ಬರಬಾರದಾಗಿತ್ತು! ಎಂದು ಒಳಗೊಳಗೇ ಪೇಚಾಡಿಕೊಂಡಳು.

ಹುಲ್ಲು ಜೋಪಡಿಯ ಮೂಲೆಯಲ್ಲಿ ಮುದುಡಿ ಮಲಗಿರುವ ಗಂಡ, ತನ್ನ ಬರುವಿಕೆಗಾಗಿ ಎದುರು ನೋಡುತ್ತ ಹಟ್ಟಿ ಬಾಗಿಲಲ್ಲಿ ಹಸಿದು ಕುಳಿತಿರಬಹುದಾದ ಬಡಕಂದಮ್ಮಗಳನ್ನು ನೆನೆದು ಅವಳ ಕಣ್ಣು ಒದ್ದೆಯಾದವು.

ಕರಡಿ ತನ್ನ ಮೇಲೆ ಆಕ್ರಮಣ ಮಾಡಲು ಸಜ್ಜಾಗುತ್ತಿರುವುದು ಸ್ಪಷ್ಟವಾದೊಡನೆ ರಾಮಿ ಜಾಗೃತಳಾದಳು. ತನ್ನ ಮಕ್ಕಳ ಆರೈಕೆಗಾಗಿಯಾದರೂ ತಾನು ಬದುಕಬೇಕು... ಎಂಬ ಹಂಬಲ ಅವಳನ್ನು ಅಲ್ಲಿಂದ ತಪ್ಪಿಸಿಕೊಂಡು ಓಡಲು ಪ್ರೇರೇಪಿಸಿತು. ಹಿಡಿತದಿಂದ

ಜಾರುತ್ತಿದ್ದ ಕೊಡಲಿಯನ್ನೆತ್ತಿ ಹೆಗಲಿಗೇರಿಕೊಂಡು ಓಡಲೆಂದು ರಭಸದಿಂದ ಹಿಂದಿರುಗಿದಳು.

ಅದೇ ಸಮಯಕ್ಕೆ ಪಟ್ಟಣದ ನಾಗರಿಕನಂತೆ ಕಾಣುವ ತರುಣನೊಬ್ಬ ತೀರ ಸನಿಹದಲ್ಲೇ ಬರುತ್ತಿರುವುದನ್ನು ಕಂಡು ಅವಳಿಗೆ ತುಸು ಧೈರ್ಯ ಬಂದಂತಾಯಿತು. 'ಅಯ್ಯೋ!ಯಪ್ಪಾ! ಕಲ್ದಿ '' ಎಂದು ಜೋರಾಗಿ ಕೂಗಿ ಕೊಂಡಳು.

ಅದನ್ನು ಕೇಳಿದ ತರುಣ ತಟ್ಟನೆ ಅಲ್ಲಿಯೇ ನಿಂತ, ಕರಡಿ ಆಕೆಯತ್ತ ನುಗ್ಗಿ ಬರುತ್ತಿರುವುದನ್ನು ಕಂಡು ಅಪ್ರತಿಭಾನಾದರೂ ಕ್ಷಣದಲ್ಲಿಯೇ ಸಾವರಿಸಿಕೊಂಡು, ತನ್ನ ಪ್ಯಾಂಟಿನ ಜೇಬಿನಿಂದ ಬೆಂಕಿಪೊಟ್ಟಣವನ್ನು ತೆಗದು ಥಕ್ಕನೆ ಕಡ್ಡಿಗೀರಿದ ಬಗಲ ಚೀಲದಿಂದ ಹೊರಗಿಣುಕುತ್ತಿದ್ದ ಪತ್ರಿಕೆಯೊಂದನ್ನು ಹೊರಗೆಳೆದು ಅದಕ್ಕೆ ಕಡ್ಡಿ ಮುಟ್ಟಿಸಿದ. ಕಾಗದ ಭರಭರನೆ ಹೊತ್ತಿಕೊಂಡಿತು.

ಕಣ್ಣಿವೆ ಮುಚ್ಚುವುದರೊಳಗಾಗಿ ಕರಡಿ ಎತ್ತಲೋ ಮಾಯವಾಯಿತು. ರಾಮಿ ಪುನರ್ಜನ್ಮ ಪಡೆದವಳಂತೆ ನಿಟ್ಟುಸಿಬಿಟ್ಟಳು. ನನ್ನ ಪಾಲಿನ ದೇವ್ರು ಬಂದ್ಹಂಗ ಬಂದ್ರೀಯಪ್ಪಾ ಇಲ್ಲಿಕ್ಕಂದ್ರಾ ಇವತ್ತು ನನ್ನ ಕತಿ ಮುಗಿತಿತ್ರೀ ಎನ್ನುತ್ತಾ ತರುಣನಿಗೆ ಕೈ ಮುಗಿದಳು.

"ಒಬ್ಬಳೇ ಬಂದಿದ್ದೀಯಾ ಅಥವಾ ಜೊತೇಲಿ ಯಾರದ್ರು ಬಂದಿದ್ದಾರಾ?" ಎಂದು ಆತ ಕೇಳಿದಾಗ ನಿಜ ಹೇಳಬೇಕೋ ಬಾರದೋ ಎಂದು ಅವಳ ಮನಸ್ಸು ತೊಳಲಾಡಿತು. ಈತನ ಮಾರಿ ನೋಡಿದ್ರ ಚಲೋ ಮನ್ಸನ್ಹಂಗ ಕಾಣಿಸ್ತಾನ ಖರೆ ಹೇಳಿದರಾಯ್ತು. ಎಂದುಕೊಂಡು "ಒಬ್ಬಾಕಿನೇ ಬಂದ್ರೇನಿ ನನ್ನ ಹಿರಿಯಗ ಆರಾಮ ಇಲ್ಲದ ಸಲುವಾಗಿ ನನ್ನ ಜೋಡಿ ಬಂದಿಲ್ರಿ' ಎಂದು ಕಾರಣ ನೀಡಿದಳು.

ಆತ ನಾಲಿಗೆಯಿಂದ ಲೊಚಲೊಚನೆ ಶಬ್ದ ಹೊರಡಿಸಿ ದುಃಖ ಸೂಚಿಸುತ್ತ ನಿನ್ನ ಗಂಡನಿಗೆ ಏನು ಖಾಯಿಲೆ?" ಎಂದು ಪ್ರಶ್ನಿಸಿದಾಗ 'ನೀವು ಡಾಕುಟ್ರು ಆದಿರೇನ್ರಿ ಸಾಹೇಬ್ರೆ?' ಎಂದು ಮರುಪ್ರಶ್ನೆ ಹಾಕಿದಳು. ರಾಮಿ.

"ಇಲ್ಲಮ್ಮ ನಾನು ಡಾಕ್ಟ್ರಲ್ಲ ನಾನೊಬ್ಬ ವರದಿಗಾರ. ದುರ್ಗಾ ನೋಡಬೇಕು ಅಂತ ಬಂದಿದ್ದೆ..." ಎಂದು ತನ್ನನ್ನು ಪರಿಚಯಿಸಿಕೊಂಡ ಆತ, ರಾಮಿಯ ಒಂದೆರಡು ಫೋಟೋ ತೆಗೆದುಕೊಂಡ. "ಅದನ್ನು ಒಯ್ದು ಏನು ಮಾಡ್ತೀರಿ ಸಾಹೇಬ್ರೆ?' ಎಂದು ಆಕೆ ಕೇಳಿದಾಗ 'ಪೇಪರ್‌ನಲ್ಲಿ ಹಾಕ್ತಿವಿ ನಿಮ್ಮಂಥ ಬಡಜನಗಳ ಕಷ್ಟ ಸುಖ ಕೇಳಿ ತಿಳ್ಕೊಂಡು ಅದನ್ನ ಪೇಪರಲ್ಲಿ ಬರೆಯೋದು ನಮ್ಮಂಥವರ ಕೆಲಸ. ಕೆಲವು ಸಾರಿ ಇದು ಸರಕಾರದ ಗಮನಕ್ಕೆ ಬಂದು ನಿಮಗೇನಾದ್ರೂ ಸೌಲತ್ತುಗಳು ಸಹ ಸಿಗಬಹುದು!" ಎಂದು ಆತ ವಿವರಿಸಿದಾಗ ರಾಮಿಗೆ ಆತನ ಬಗ್ಗೆ ಗೌರವ ಹುಟ್ಟಿತು. ತನ್ನ ಸಂಸಾರದ ಯಾವತ್ತೂ ಕಷ್ಟ ಸಂಕಟಗಳನ್ನು ಆತನ ಮುಂದೆ ತೆರೆದಿಟ್ಟಳು.

"ನಿನ್ನ ಗಂಡ ಖೀರು- ಗೌಡನ ಹೊಲದಲ್ಲಿ ಕೆಲ್ಸ ಮಾಡ್ತಿರುವಾಗ ಅಪಘಾತಕ್ಕೊಳಗಾಗಿರುವುದರಿಂದ ಆತನೇ ಖರ್ಚು ಹಾಕಿ ಇವನನ್ನು ಬದುಕಿಸಬೇಕು ಇಲ್ಲವಾದ್ರೆ ಕಾನೂನಿನ ಪ್ರಕಾರ ಗೌಡ ತಪ್ಪಿತಸ್ಥನಾಗ್ತಾನೆ. ಇದನ್ನೆಲ್ಲ ನಾನು ಪೇಪರಿಗೆ ಬರೀತೀನಿ ನೀನು ಚಿಂತೆ ಮಾಡ್ಬೇಡ" ಆತ ಅಭಯ ನೀಡಿದಾಗ ಇಂದಿನಿಂದ ತನ್ನ



ಕಷ್ಟ ಕೋಟಲೆಗಳೆಲ್ಲ ಕೊನೆಗೊಂಡಂತೆ ಅನ್ನಿಸಿ ರಾಮಿಯ ಮನ ಹಗುರವಾಯಿತು.

ಆಕೆ ಹುರುಪಿನಿಂದ ಕಟ್ಟಿಗೆ ಸಂಗ್ರಹಿಸಿ ಭಾರಿ ಹೊರೆ ಕಟ್ಟಿದ್ದನ್ನು ವರದಿಗಾರ ಅತ್ಯಂತ ಶ್ರಮದಿಂದ ಅವಳ ತಲೆಗೆ ಹೊರಿಸಿದ. ಆಕೆ ಕೃತಜ್ಞತೆಯಿಂದ ಕೈ ಮುಗಿದು ಅವನನ್ನು ಬೀಳ್ಕೊಟ್ಟು ತನ್ನ ಹಾದಿ ಹಿಡಿದಳು.

ಎರಡಾಳು ಹೊರುವ ಹೊರೆ ಹೊತ್ತಿದ್ದರೂ ರಾಮಿಯ ಮುಖದಲ್ಲಿ ಆಯಾಸದ ಛಾಯೆ ಮೂಡಿರಿಲಿಲ್ಲ. ಆ ಕಾಗದ ಬರೆಯೋ ನನ್ನ ಬರಲಿಲ್ಲ ಅಂದ್ರ ಈ ದೆವ್ವನಂತಹ ಹೊರೆಯನ್ನ ನಾ ಒಬ್ಬಾಕೆನೆ ಹೊತ್ತು ಕೊಳ್ಳೋದ್ ಆಗಿರಲಿಲ್ಲ. ಎತ್ತಾಗಿಂದ ಬಂದನೋ ಪುಣ್ಯಾತ್ಮ ದೇವರ ಹಂಗ... ಅವನ ಹೆಂಡ್ತಿ ಮಕ್ಕು ತಣ್ಣಗಿರಲಿ! ಈವತ್ತು ಈ ಹೊರೆಯನ್ನು ಐದು ರೂಪಾಯಿಗೆ ಕಡಿಮೆ ಹಾಕಲೇಬಾರು, ಅಂಗಡಿಯಿಂದ ಎರಡು ಕಿಲೋ ಜ್ವಾಳ ಕೊಂಡು, ಸುಣ್ಣದಂಥ ನುಣ್ಣನೆಯ ಹಿಟ್ಟು ಮಾಡ್ತಿ, ಗಂಡ-ಮಕ್ಕಳಿಗೆ ಬೆಳ್ಳನೆಯ ಭಕ್ತಿ ತಟ್ಟಿ ಕೊಡಬೇಕು. ಪಾವಿ ರೊಕ್ಕ ಕೊಟ್ಟು ಬೆಳ್ಳುಳ್ಳಿ ಒಯ್ಯಬೇಕು. ಹಿರಿಯಗ ಬೆಳ್ಳಿಳ್ಳಿ ಕಾರ ಅಂದ್ರ ಬಲು ಪೀರೀತಿ ಹಂಗೇ ರೊಕ್ಕ ಉಳುದ್ರೆ ಒಂದರ್ಧ ಮಾಪು ಸರಾಯಿಯನ್ನು ಒಯ್ಯಬೇಕು ಅದನ್ನ ಕುಡಿದು ಮಕ್ಕೊಂಬಿಟ್ರೆ ಮೈ ಬ್ಯಾನಿಯೆಲ್ಲಾ ಮರಂಗ ಅಕ್ಷಂತೆ ಪಾಪ! ಹಂಗಾದ್ರೂ ಥ್ವಾಡೆ ಹೊತ್ತು ಮರೀಲಿ!...

ಒಮ್ಮಲೆ ಅವಳಿಗೆದುರಾಗಿ ಇಬ್ಬರು ವ್ಯಕ್ತಿಗಳು ಅಡ್ಡ ನಿಂತು "ಏಯ್ ಯಾಡಿ, ಹೊರೆಯನ್ನ ಕೆಳಗ್ಗೆ ಒಗಿ!" ಎಂದು ಗಡಸು ಧ್ವನಿಯಲ್ಲಿ ಅಜ್ಞಾಪಿಸಿದಾಗ ಆಕಾಶದಲ್ಲಿ ಗರಿಗೆದರೆ ಹಾರಾಡುತ್ತಿದ್ದ ಪಕ್ಷಿ ಕ್ಷಣಾರ್ಧದಲ್ಲಿ ರೆಕ್ಕೆ ಮುರಿದು ನೆಲಕ್ಕೆ ಬೀಳುವಂತೆ. ರಾಮಿ ಸುಂದರ ಕಾಲ್ಪನಿಕ ಲೋಕದಿಂದ ಕಟು ವಾಸ್ತವಕ್ಕೆ ಜಾರಿದಳು.

ಕತ್ತಿನವರೆಗೂ ಕೂದಲು ಬಿಟ್ಟು ಹುಲುಸಾಗಿ ಗಡ್ಡ ಮೀಸೆ ಬೆಳೆಸಿದ್ದು, ಚಿತ್ತಾರದ ಅಂಗಿ ದೊಗಳೆ ಪ್ಯಾಂಟು ಹಾಕಿಕೊಂಡಿದ್ದ ಮಧ್ಯ ವಯಸ್ಸಿನ ಆ ಗಂಡಸರಿಬ್ಬರೂ ಕುಡಿದು ಮತ್ತರಾಗಿ ತನ್ನನ್ನೇ ನುಂಗುವಂತೆ ನೋಡುತ್ತಿರುವುದನ್ನು ಕಂಡು ಎರಡನೆಯ ಬಾರಿ ಕರಡಿಯ ದರ್ಶನವಾದಂತೆ ಅನ್ನಿಸಿ ರಾಮಿ ಬೆಚ್ಚಿದಳು.

"ಏನ್ ನೋಡ್ತಿದ್ದಿ? ಹೊರೆ ಕೆಳಕ್ಕೆ ಒಗಿ ಅಂದಿದ್ದು ಕೇಳಿಸಲಿಲ್ಲಾ?" ಎಂದು ಮತ್ತೊಮ್ಮೆ ಗದರಿಸಿದಾಗ ಯಧ್ಧಕ್ಕೆ ಒಗಿಬೇಕ್ರಿಯಪ್ಪಾ? ಕತ್ತಲಾಗದ ಲಗೂ ಲಗೂ ನಾ ಮನಿಗೆ ಹೋಗಬೇಕ್ರಿ" ಎಂದಳು ಹೊರೆಯನ್ನು ಮತ್ತಷ್ಟು ಬಿಗಿಯಾಗಿ ಹಿಡಿದುಕೊಳ್ಳುತ್ತ

"ಪುಕ್ಕಟೆ ಕಟಿಗಿ ಕಡಿದು, ಹೂಂ ಅಂತ ಹೊರೆ ಮಾಡ್ಕೊಂಡಿದ್ದಿ ಲಗೂ ಮನಿಗ ಹೋಗಲಾರದ ಮತ್ತೇನು ಮಾಡ್ತಿದ್ದಿ!"... ಎನ್ನುತ್ತ ಒಬ್ಬ ಅವಳು ಹೊತ್ತಹೊರೆಯನ್ನು ಎಳೆದಾಡಿ ನೆಲಕ್ಕೆ ಬೀಳಿಸಿದರೆ, ಮತ್ತೊಬ್ಬ ಅವಳ ಕೈಯ ಕೊಡಲಿಯನ್ನು ಕಸಿದುಕೊಂಡ. "ದಿನಾ ಹಿಂಗ್ ಬಂದ್ ಬಂದು ಕಳುವಿಲೆ ಕಟಗಿ ಕಡಕೊಂಡ ಹೋಗೀರಲ್ಲಾ. ಗುತ್ತಿಗೆ ತಗೊಂಡಿರೋ ನಾವೇನು ಬಾಯಾಗೆ ಮಣ್ ಹಾಕ್ಕೊಂಡ್ ಹೋಗಬೇಕಂತಿರೇನು??" ಒಬ್ಬ ರೋಷದಿಂದ ಮೂದಲಿಸಿದ.

"ಭಾಳ ಕಡಿದಿಯಪ್ಪಾ ಕೆಳಗ್ ಬಿಡ್ಡೊವನೇ ಅಯ್ಕೊಂಡೀನ್ರಿ, ಒಬ್ರು ಕಾಗದ ಬರಿಯೋ ಸಾಹೇಬ್ರು ಇಲ್ಲೇ ಎಲ್ಲೋ ಆದಾರ ಬೇಕಾದ್ರೆ ಅವರನ್ನ ಕೇಳಿ ನೋಡ್ರಿ!

"ಯಾ ಸಾಹೇಬನ ಸಾಕ್ಷಿನೂ" ಬೇಕಾಗಿಲ್ಲ ನಮಗ, ನಮ್ಮ ಪರವಾನಗಿ ಇಲ್ಲ



ಅಡವಿಯೊಳಗೆ ಕಾಲಿಟ್ಟಿದ್ದಿ ಮತ್ತ ಕೈಯಾಗ ಕೊಡಲಿ ಹಿಡಿದಿದ್ದಿ ಇದೇ ಸಾಕ್ಷಿ ಸಾಕು ತೆಗೆ ತೆಗಿ ರೊಕ್ಕ. ಒಂದ್ ಕೊಡ್ಲಿಗ ಇಪ್ಪತ್ತು ರೂಪಾಯಿ ದಂಡ ತೆರಬೇಕಾಗ್ತದ ಅಷ್ಟು ಕೊಟ್ಟು ನಡಿ ಇಲ್ಲಿಂದ?"

"ರಾಮಿ ಗಾಭರಿಗೊಂಡಳು ಬಡವಿ ಇಪ್ಪತ್ತು ರೂಪಾಯಿ ಎಲ್ಲಿಂದ ತಲ್ಲಿ ಧಣಿ! ಇದೊಂದ್ ಸರ್ತಿ ದೊಡ್ಡ ಮನಸ್ಸು ಮಾಡಿ ಬಿಟ್ಟುಬಿಡ್ರಿ, ಇನ್ನೊಮ್ಮೆ ಈ ಕಡೆ ಬರಂಗ್ತಲ್ರೀ!" ಎಂದು ದೀನಳಾಗಿ ಬೇಡಿದಳು.

"ಬಿಟ್ಟಿದ್ದೀವಿ ಹೋಗು ಕಟಗಿ ಕೊಡ್ಲಿ ಎರಡನ್ನೂ ದಂಡಕ್ಕೆ ಹಾಕ್ಕೊಂಡಿದೀವಿ" ಎಂದುದನ್ನು ಕೇಳಿ ಆಕೆ ಹೌಹಾರಿದಳು.

ಅಯ್ಯಯ್ಯೋ! ನಿಮ್ಮ ದಮ್ಮಯ್ಯ, ಹಂಗ್ ಮಾಡಬ್ಯಾಡ್ರಿ ಒಡೆಯ! ಕೊಡ್ಲಿ ನನ್ನ ಬಲಗೈ ಇದ್ದಂಗ ಕಡೇಕ ಅದೊಂದನ್ನಾದ್ರು ಕೊಟ್ಟುಬಿಡಿ. ನಾ ಹೊಂಟೋಗ್ತಿನಿ...'

"ಅದ್ದಂಗ್ ಹೊಂಟೋಗ್ತಿದ್ದಿ ನಿಂದ್ರು ಚಲೋದೊಂದು ಮೊಲದ ಬ್ಯಾಟೆ ಸಿಕ್ಕೇತಿ ಹೆಂಗೂ ಒಣ ಕಟಗಿ ಜಮಾಯಿಸಿದ್ದಿ ಅದರಾಗ ಹುರಿದು ತಿಂದು ಮಜಾ ಮಾಡಾಮಂತ!"

“ಏಯ್ ಯಾಡಿ ನಿನ್ನ ಕಾಲಾಗ ಅದಾವಲ್ಲ ಅವು ಬೆಳ್ಳಿದೇನ?” ಇಬ್ಬರೂ ವಿಧವಿಧವಾಗಿ ಬಡಬಡಿಸಲಾರಂಭಿಸಿದಾಗ ರಾಮಿ ಭೀತಿಯಿಂದ ಕಂಪಿಸುತ್ತ ನಿಂತಳು.

“ನಿನ್ನ ಸಂಚಿನಾರ ಹೊರಗೆ ತೆಗಿಯ... ಐದ್ಹತ್ತು ರೂಪಾಯಾರೆ ಸಿಗತಾನೇ ನೋಡಮ” ಎನ್ನುತ್ತಾ ಅವರಿಬ್ಬರೂ ಸನಿಹಕ್ಕೆ ಬಂದು ಸಂಚಿ ಎಳೆಯುವ ನೆಪದಲ್ಲಿ ಅವಳ ಲಂಗದ ಲಾಡಿಯನ್ನು ಬಿಚ್ಚಿ ಹಾಕಿ. ಮೆಲ್ಕುಸುಕನ್ನು ಕಿತ್ತೆಸೆದರು.

“ಬಿಡ್ರಿ ನನ್ನ ಬಿಟ್ಟು ಬಿಡ್ರಿ!” ಎಂದು ಆಕೆ ಕೂಗಾಡಿ ಪ್ರತಿಭಟಿಸಿದಾಗ” “ನೀ ಹಿಂಗೆ ಗದ್ಲಾ ಹಾಕಿದಂದ್ರ ಕೂಡ್ಲಿ ಕಟಕಿ ಎರಡನ್ನೂ ಒಯ್ದು ಬಿಡ್ತೀವಿ ನೋಡು!” ಎಂದು ಬೆದರಿಸಿದರು.

'ಒಯಿದ್ರ ಒಯ್ಯುವಲ್ಲಯ್ಯಾಕೆ, ನನ್ನನ್ನು ಬಿಟ್ಟುಬಿಡ್ರಿ, ನಾ ಹೊಂಟೋಗ್ತಿನಿ'' ಎಂದು

ಕೊಸರಾಡಿದಳು ರಾಮಿ.

“ಬಿಡುಹಂಗ ಇತ್ತಂದ್ರ ಹಿಡೀತಾನೇ ಇದ್ದಿಲ್ಲಬೇ! ಈ ಅಡವಿಯಾಗ ನೀ ಎಷ್ಟು ಒದರಿದರೂ ಏನೂ ಸುಖ ಇಲ್ಲ ಬಿಡು” ಎಂದು ಅಟ್ಟಹಾಸ ಮಾಡುತ್ತ ಅವಳ ಮೇಲೆರಗಿದರು.

ಎಷ್ಟೋ ಹೊತ್ತಿನ ಮೇಲೆ ರಾಮಿ ದುಷ್ಟರಿಂದ ಬಿಡುಗಡೆ ಪಡೆದು ಪ್ರಯಾಸದಿಂದ ಎದ್ದು ತನ್ನ ಕೊಡಲಿ ಕಟ್ಟಿಗೆಗಾಗಿ ಹುಡುಕಾಡಿದಳು. ಅವರೆಡೂ ಮಾಯವಾಗುವುದರ ಜೊತೆಗೆ ತನ್ನ ಕಾಲಿನ ಗೆಜ್ಜೆಗಳೂ ಕಾಣೆಯಾಗಿದ್ದವು ರಾಮಿಯ ಎದೆತುಂಬ ರೋಷ ಹೆಡೆಯಾಡಿತು. ಮುಷ್ಟಿಗಳು ಬಿಗಿದುಕೊಂಡವು.

“ನೀವು ಯಾವ ಗವಿಯಾಗ ಹೋಗಿ ಅವಿತುಕೊಂಡ್ರೂ ನಾ ಬಿಡಂಗಿಲ್ರೋ! ನನ್ನ ಕೊಡ್ಲಿ ಕಸಗೊಂಡು, ಆದರಿಂದ ನಿಮ್ಮನ್ನ ಸಣ್ಣಕ್ ಕಡಿದು ಚೂರ್ ಚೂರ್ ಮಾಡಿದಮ್ಯಾಲೇ ನಾ ಮನಿಗೆ ಹೋಗ್ತಿನೋ!!” ಎಂದು ಕಾಡು ನಡುಗುವಂತೆ ಚೆತ್ಕರಿಸುತ್ತ ದಟ್ಟಡವಿಯಲ್ಲಿ ಓಡತೊಡಗಿದಳು....

# ಕ್ರೌಂಚ ಪಕ್ಷಿಗಳು

**- ವೈದೇಹಿ**

ಅರುಂಧತಿ, ಹೆಚ್ಚಿನ ಓದು ಸಂಶೋಧನೆ ಅಂತ ದೆಹಲಿಯಲ್ಲಿಯೇ ಇದ್ದವಳು, ಊರಿಗೆ ಬಂದಿದ್ದಳು 'ಏನೋ ಒಂದು ವಿಶೇಷ ಹೇಳಲಿಕ್ಕಿದೆ. ಬನ್ನಿ ಎಲ್ಲರೂ, ಒಟ್ಟಿಗೇ ಕುಳಿತು ಕೇಳಬೇಕು. ತಪ್ಪಿಸಬೇಡಿ ಖಂಡಿತ' ಅಂತ ಪ್ರತಿಯೊಬ್ಬರನ್ನೂ ಪ್ರತ್ಯೇಕವಾಗಿ ಕರೆದಳು. ಅವಳು ಕರೆದ ರೀತಿಯೆಂದರೆ ಏನೇ ಇದ್ದರೂ ಅಲ್ಲಿಗೇ ಬಿಟ್ಟು ಹೊರಡಬೇಕು, ಹಾಗೆ, ಅಂತೆ ಎಲ್ಲ ಹೊತ್ತಿಗೆ ಮುಂಚೆಯೇ ಹಿರಿಯ ಮನೆಯಲ್ಲಿ ಹಾಜರಾದರು. ಲೋಕಾಭಿರಾಮ ಪೀಠಿಕಾ ಮಾತುಗಳು, ಮುಗಿಯುವುದನ್ನೇ ಕಾದಂತೆ ಸುರುಮಾಡಿದಳು ಅರುಂಧತಿ.

'ಮಧ್ಯೆ ಯಾರೂ ಮಾತಾಡಬಾರದು, ಹ್ಞ?

"ಅದೆಲ್ಲ ಬಿಡು ಆಹ, ಅಗತ್ಯ ಕಂಡರೆ ಮಾತಾಡುವವರೇ, ಅನಾವಶ್ಯಕ ಇಲ್ಲ'

'ಏನದು ಸುರುಮಾಡು ಹ್ಞಂ

...... ಅವತ್ತೊಂದು ದಿನ, ವಿಶಾಖಾಬೆನ್ ಮನೆಗೆ ನಾನೂ ನನ್ನ ಫ್ರೆಂಡ್ ಅನಿತಾ ಹೋಗಿತ್ತು, ಅವರ ಸಂದರ್ಶನ ಮಾಡೋಕೆ ಅಂತ... ವಿಶಾಖಾಬೆನ್ ಗೊತ್ತಲ್ಲ? ಸ್ವಾತಂತ್ರ್ಯ ಹೋರಾಟದಲ್ಲಿದ್ದವರು. ಗಾಂಧೀಜಿಗೆ ಹತ್ತಿರದವರು. ಸ್ವಾತಂತ್ರ್ಯ ಸಿಕ್ಕಿದ ಮೇಲಂತೂ ವಲಸೆ ಜನರ ಪುನರ್ವಸತಿಗಾಗಿ ಎಷ್ಟು ದುಡಿದಿದ್ದಾರೆ ಅಂತಿಲ್ಲ. ಎಲ್ಲ ರಾಜಕಾರಣಿಗಳ ಥರ ಅಲ್ಲ ಅವರು, ಅಧಿಕಾರಕ್ಕಾಗಿ ಆಸೆ ಪಡದೆ ಕರೆದರೂ ಸರಕಾರ ಸೇರದೆ ಸಾಂಸ್ಕೃತಿಕ ಇಂಡಿಯಾ ಕಟ್ಟಲು ಹೊರಟವರು. ಈ ವಯಸ್ಸಿನಲ್ಲಿಯೂ ಮಹಿಳೆಯರ ಸಮಸ್ಯೆಗಳಿಗೆ ಅವರು ತುಡಿಯೋ ರೀತಿ ನೋಡಬೇಕು... ಒಬ್ಬರೇ ಇದ್ದಾರೆ. ಒಬ್ಬ ಸಹಾಯಕಿ ಜತೆಗೆ, ನಾವವರ ಮನೆಗೆ ಹೋಗುವಾಗ ಬೆಳಗಿನ ಹತ್ತು ಗಂಟೆ, ಮನೆ ತಲುಪಿ ಬೆಲ್ ಮಾಡಿದೊಡನೆ ಸಹಾಯಕಿ ಬಂದು ಬಾಗಿಲು ತೆರೆದಳು

"ಅನಿತ......ಅರುಂಧತಿ... ನಾ?'

ಹೌದು ಎನ್ನುತ್ತಲೂ 'ಹೇಳಿದ್ದರು ಅಮ್ಮ ನೀವು ಬರುತ್ತೀರಿ ಅಂತ. ಬನ್ನಿ, ಒಳಗೆ ಬನ್ನಿ, ಕುಳಿತುಕೊಳ್ಳಿ... ಅಮ್ಮ ಈಗ ಬರುತ್ತಾರೆ.' ಎರಡು ಗ್ಲಾಸು ನೀರು ತಂದಿಟ್ಟು 'ಲೀಜಿಯೆ', ಮುಗುಳು ನಕ್ಕು ತಲೆಯ ಮೇಲೆ ಸರಿಯಾಗಿಯೇ ಇದ್ದ ಸೆರಗನ್ನು ಸುಮ್ಮನೆ ಮುಟ್ಟಿ ಸರಿಮಾಡಿಕೊಳ್ಳುತ್ತ ಒಳ ನಡೆದಳು. ತೆಳ್ಳಗಿನ ಸೆರಗಿನ ಮರೆಯಲ್ಲಿ ಕಾಣುತ್ತಿದ್ದ ಜಡೆ ಹಾಕಿ ಸುತ್ತಿದ ತುರುಬು ಮೇಲೆ ಅರ್ಧ ಚಂದ್ರಾಕೃತಿಯಲ್ಲಿ ಮುಡಿದ

ಹೂದಂಡೆ! ಹೋ.. ಇದು ಥೇಟ ನಮ್ಮೂರ ಹಳೆಸ್ಟೈಲ್ ಎಂದೇ ಮೆಲ್ಲಗೆ, ಅದನ್ನು ನೋಡಿಯೇ ಎಷ್ಟು ಖುಶಿಯಾಯ್ತು ಅಂತಿಲ್ಲ. ದೂರದಲ್ಲಿದ್ದಾಗ ಹಾಗೆಯೇ ತಾನೆ? ಊರನ್ನು ನೆನಪಿಸುವ ಇಷ್ಟಿಷ್ಟು ಸಣ್ಣದೂ ದೊಡ್ಡದಾಗಿ ಕಾಣುತ್ತದೆ.

ಜಮುನಾಪಾರ್‌ನಲ್ಲಿಯ ಸಾಮಾನ್ಯವಾದೊಂದು ಫ್ಲ್ಯಾಟ್ ಅದು. ಸರಕಾರ ಇದಕ್ಕಿಂತ ದೊಡ್ಡ ಮನೆ ಕೊಡಮಾಡಿದರೆ ನೋಡಿಕೊಳ್ಳೋದು ಕಷ್ಟ ಅಂತ ವಿಶಾಖಾಬೆನ್ ಅದನ್ನು ಬಿಟ್ಟು ಈ ಫ್ಲ್ಯಾಟ್ ಆಯ್ದುಕೊಂಡರಂತೆ. ನಾವು ಕುಳಿತ ಆ ಸಣ್ಣ ಹಾಲನ್ನು ಅಲಂಕರಿಸಿದ ಅಚ್ಚುಕಟ್ಟೆಂದರೆ ಎಲ್ಲೆಲ್ಲಿನದೋ ಕೈ ಕೆಲಸದ ಕೃತಿಗಳು, ಅದೂ ಇದೂ ಸಂಗ್ರಹ ನೋಡಬೇಕು!... ಎಲ್ಲ ಹೇಗಿದ್ದೂ, ಆ ಜಾಗ ಅವಕ್ಕೇ ಲಗತ್ತೆನ್ನುವ ಹಾಗೆ ಅದು ಎಂತು ಕೆಲವರಿಗೆ ವಸ್ತುಗಳನ್ನು ಕಂಡೊಡನೆ ಅವಕ್ಕೊಪ್ಪುವ ಜಾಗವೂ ಹೊಳೆಯುತ್ತದೋ! ಒಂದು ಪಾರ್ಶ್ವದಲ್ಲಿ ಮಹಾತ್ಮಾ ಗಾಂಧಿ ಚಿತ್ರದೊಳಗಿಂದ, ಉದ್ದ ನಗುತ್ತ ನಮ್ಮನ್ನೇ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದರು! ಬಿಟ್ಟೆವೆ? ನಾವೂ ಅವರನ್ನೇ ನೋಡತೊಡಗಿದೆವು. ದೃಷ್ಟಿಯುದ್ಧ ನಡೆಯುತ್ತಿದ್ದಂತೆ

ಬಂದರು ವಿಶಾಖಾ ಬೆನ್

ನಾವು ಎದ್ದು ನಿಂತೆವು.

ಅದೇ ಮೊದಲಬಾರಿ ನಾನವರನ್ನು ನೋಡೋದು... ಉಜ್ವಲ ಪ್ರಭೆಯೊಂದು ಸ್ತ್ರೀರೂಪ ತಾಳಿ ನಡೆದು ಬಂದರೆ ಹೇಗೆ! ಹರವಾದ ಮುಖ, ವೃದ್ಧಾಪ್ಯಕಳೆಯ ಕಿರಣಗಳಂತೆ ಸುಕ್ಕುಗಳು, ಕುಲು ಕುಲು ಅಲುಗುವ ಗಲ್ಲ-ಗದ್ದ, ಕರುಣಾದ್ರ್ರ ಆಳ ಕಣ್ಣುಗಳು ... ಅದರಲ್ಲೇನೋ ಒಂದು ವಿಷಾದ ಛಾಯೆ, ನೂಲಿನ ಸಾದಾ ಸೀರೆ, ಕಸೂತಿ ಅಂಚಿನ, ಹಳೆಯ ಕಾಲದ ಹಾಗೆ ಕಂಡೂ ಹೊಸ ವಿರಸದಲ್ಲಿ ಹೊಲಿಸಿಕೊಂಡ ರವಕೆ...

ಬೆನ್ನ ಹಿಂದೆ ಕೈ ಕಟ್ಟಿಕೊಂಡು ಬಂದು 'ಕುಳಿತುಕೊಳ್ಳಿ' ಎನ್ನುತ್ತ ಕುಳಿತರು. 'ಏನು ಕೇಳಬೇಕೋ, ಕೇಳಿ, ಬಂದ ಉದ್ದೇಶ ಮೊದಲು ಮುಗಿಯಲಿ'.

ಅದು ಗರ್ವವಲ್ಲ, ಗತ್ತೂ ಅಲ್ಲ. ಅನಗತ್ಯ ಮಾತಿಗೆ ಎಡೆ ಇಲ್ಲದ ಸೀದ ನೇರ ಧ್ವನಿ, “ನಿಮ್ಮ ಪ್ರಶ್ನೆಗಳಿಗೆ ಉತ್ತರ ಕೊಟ್ಟೇ ಕೊಡುತ್ತೇನೆ ಅಂತ ಹೇಳಲಾರೆ. ಅವು ನನ್ನಲ್ಲಿ ಬೇರೆ ವಿಚಾರ ಉಕ್ಕಿಸಿದರೆ ಅದಕ್ಕೆ ನೆಗೆದರೂ ನೆಗದೆ ನಕ್ಕರು. ಆ ನಗೆಯೇ ಸಾಕು, ಜೀವ ಹೋದವರಿಗೆ ಜೀವ ಬರಲು....

ಅನಿತಾ ಕ್ಯಾಮೆರಾ ತೆರೆದಳು. ಸಂದರ್ಶನ ಆರಂಭಿಸಿದೆವು. ಸರಿ.... ಇದಕ್ಕೂ ಮೊದಲು ಆಕೆ ನಮ್ಮನ್ನು ಎಲ್ಲಾಯಿತು ಯಾವೂರು ಏನು ಇತ್ಯಾದಿ ವಿವರ ಕೇಳಿದ್ದು- ಹೇಳಲೇ ಇಲ್ಲವಲ್ಲ! ಎಲ್ಲಿಯವಳು ಅಂತ ಹೇಳಲಿಕ್ಕೂ ಅವರ ಮುಖದ ಮೇಲೆ ಛಕ್ಕನೆ ಏನೋ ಒಂದು ಆಶ್ಚರ್ಯ! ಮೂಡಿತು ಮಾಯವಾಯ್ತು! ಅದನ್ನು ಕಂಡವಳಿಗೆ ಇದೇನಪ್ಪ ಅಂತ ನನಗೂ ಒಮ್ಮೆ ಆಶ್ಚರ್ಯ. ಆಶ್ಚರ್ಯದಲ್ಲಿಯೇ ತೇಪ್‌ರೆಕಾರ್ಡರ್ ಆನ್ ಮಾಡಿದೆ.

ಅವರ ಬಾಲ್ಯ, ಹಿನ್ನೆಲೆ, ಹುಟ್ಟಿದೂರಿನ ನೆನಪುಗಳು, ಅಂದಿನ ರಾಜಕೀಯ ಸಾಮಾಜಿಕ ಸ್ಥಿತಿಗತಿ, ಸ್ವಾತಂತ್ರ್ಯ ಹೋರಾಟದ ಆ ದಿನಗಳು... ಅವರೇ ಹೇಳಿಕೊಂಡಂತೆ ಒಮ್ಮೊಮ್ಮೆ ನಾವು ಕೇಳುವುದೊಂದು ಅವರ ಲಹರಿಯೇ ಒಂದು. ಮಾತೆಂದರೆ, ಏನದು! ಮಾತಿನ ಕೊಯ್ದು. ಎಲ್ಲಿಯೂ ಅನಾವಶ್ಯಕ ರಂಗಿಲ್ಲ. ಅತಿವರ್ಣನೆಯಿಲ್ಲ. ಅನುಭವದ ಭಾರ. ಚಕಿತಗೊಳಿಸುವಷ್ಟು ಖಚಿತ. ತನ್ನ ಜೈಲುವಾಸಗಳು, ತಾನು ಕಂಡ ಕೆಲ ಸ್ವಾತಂತ್ರ್ಯ ಹೋರಾಟಗಾರರು, ಗಾಂಧೀಜಿಯವರೊಡನೆ ತನ್ನ ಮುಖಾಮುಖಿ ಚರ್ಚೆ ಭಿನ್ನಾಭಿಪ್ರಾಯಗಳು... ವ್ಯಕ್ತಿಯಿಂದ ವ್ಯಕ್ತಿಗೆ ಘಟನೆಯಿಂದ ಘಟನೆಗೆ ನಿರರ್ಗಳವಾಗಿ ಹರಿಯುವ ಇತಿಹಾಸದ ಝರಿ. ಅವೆಲ್ಲವೂ ನಮಗೆ ಬೇಕಾದವೇ. ಸಮೃದ್ಧವಾಗಿ ವಿಷಯ ಸಂಗ್ರಹ ಆಗುತ್ತಿದೆಯಲ್ಲ, ಒಂದು ಬದಿಯಲ್ಲಿ ಖುಶಿ ನಮಗೆ ಇನ್ನೊಂದು ಬದಿಯಲ್ಲಿ, ನಮ್ಮ ಪ್ರಶ್ನೆಗಳು ನೆಲೆ ಮಾತ್ರವೆಂಬಂತೆ ಆಕೆ ನೆನಪು ಹರಡಿಕೊಂಡ ಪರಿ ನೋಡಿ ದಿಗಿಲು.

ಅಂತೂ ಬಂದು ಬಂದು ವಿಷಯ ದೇಶ ವಿಭಜನೆಯ ಸಂದರ್ಭಕ್ಕೆ ತಲುಪಿತು. ಈಗ ಮಾತ್ರ

ಕಣ್ಮುಚ್ಚಿ ಮೌನ ಕುಳಿತು ಬಿಟ್ಟರು ವಿಶಾಖಾ ಬೆನ್! ದಾರುಣವಾದೊಂದು ವೇದನೆ ಮರುಕಳಿಸಿದಂತೆ.

ಎದುರು ನಾವಿಬ್ಬರು. ಮೂಕ ಮರ್ಮರರು.

ಅಚಾನಕ್ಕಾಗಿ ಹೊರಗೆ ನಿಶ್ಯಬ್ದವಾದ್ದು ನೋಡಿ ಅಚ್ಚರಿಯಾಯ್ತು, ಬಹುಷಃ, ಸಹಾಯಕಿ ಮೆಲ್ಲ ಹೊರಗಿಣಿಕಿದಳು. ಜೋರಾಗಿ ಮಾತಾಡಿದರೆ ಎಲ್ಲಿ ವಾತಾವರಣಕ್ಕೆ ಗೀಚು ಬಿಳುತ್ತದೋ ಎಂಬಷ್ಟು ಮೆತ್ತಗೆ 'ಕುಡಿಯಲು ಬೇಕೆ' ಕೇಳಿದಳು.

ಕಣ್ತೆರೆದರು ವಿಶಾಖಾ ಬೆನ್,

"ಬನ್ನಿ ಲಕ್ಷ್ಮಮ್ಮ,, ಏನು, ಜ್ಯೂಸ್ ತಗೋತೀರಾ? ಸರಿ.... ಜ್ಯೂಸ್ ತನ್ನಿ' ಲಕ್ಷ್ಮಮ್ಮ! ಯಾವ?

ನಾನೊಮ್ಮೆ ಕುಳಿತಲ್ಲಿಂದ ನಿಮಿಟುವಂತಾಯ್ತು.

ಆ ಹೆಸರನ್ನು ಉಚ್ಚರಿಸಿದ ಬಗೆ ಹಾಗಿತ್ತು. ಬಹುಶಃ, ಒತ್ತು ಕೊಟ್ಟಂತೆ ಆಗಷ್ಟೇ ಊರು ತುರುಬು ಬೇರೆ ಕಂಡಿತಲ್ಲ. ಯಾಕೆನ್ನೆಲಿ ಮತ್ತೆ, ತಕ್ಷಣ, ನಾನು ಪೂರ್ತಿಮರೆತೇಬಿಟ್ಟಂತಿದ್ದ ಅಶ್ನಾರ್ಣ ಭಟ್ಟರ ನೆನಪಾಯಿತೆಂದರೆ! ಅದೇ... ಅಶ್ನಾರ್ಣ ಭಟ್ಟರು... ಯಾರು... ತಿಳಿತ?

-ಹೌದಪ್ಪ, ಆ ನಿತ್ಯ ವಿರಹಿ ಭಟ್ಟರಲ್ಲವೆ? ತಿಳಿಯದೆ!'

'ಕ್ರೌಂಚಪಕ್ಷಿ ಅಂತ ಕರೆಯುತ್ತಿದ್ದವಲ್ಲ, ಆ ಭಟ್ಟರು? ಪಾಪ ಹೊಟ್ಟೆನೋವು ಹೊಟ್ಟೆನೋವು ಅಂತ ಕಡೆಗೂ ಅದನ್ನು ತಡೆಯಲಿಕ್ಕಾಗದೆ ಜೀವ ತೆಗೆದುಕೊಂಡರಲ್ಲ!'

"ಹ! ಏನು! ಅಯ್ಯೋ! ಹೋದರೆ ಅವರು? ಅದೂ ಹಾಗೆ! ನನಗೆ ಗೊತ್ತೇ ಇಲ್ಲ... ಯಾರೂ ನನಗೆ ಹೇಳಲಿಲ್ಲ... ಯಾಕೆ ಹೇಳಲಿಲ್ಲ?'

ಗುಸುಗುಟ್ಟಿದಳು ಅರುಂಧತಿ.

'ಹೇಳಲು ನೀನೆಲ್ಲಿದ್ದ ಊರಲ್ಲಿ? ನಮಗೂ ಹೇಳಬೇಕೆಂದು ತೋಚಲಿಲ್ಲ ಬಿಡು... ಹಾಗೆ ಎಷ್ಟು ಜನ ಬೇಕು, ಮೇಲೆ ಹೋದವರು. ಅವರೆಲ್ಲ ಇದ್ದಾರೆ ಅಂತಲೇ ಎಣಿಸಿ ನಮ್ಮ ನಮ್ಮ ತಲೆಬಿಸಿಯಲ್ಲಿ ನಾವು ನಾವು'.

ನಿಟ್ಟುಸಿರು... ನಿಶ್ಯಬ್ದ

'ನಡುವೆ ಮಾತಾಡಬಾರದು ಸರಿಯೇ. ಆದರೆ ಸಾರಿ, ಯಾರು? ಯಾರು ಈ ಅಶ್ನಾರ್ಣ ಭಟ್ಟರೆಂದರೆ?

ನಿಮಗೆಲ್ಲ ಗೊತ್ತಿರಬಹುದು ನಮಗೆ ಹೇಗೆ?'

ಎಳೆಯ ಕೊರಳುಗಳು ಮೌನ ಸೀಳಿದವು.

ನೆನಪು, ಧಾರವಾಹಿ

ಒಬ್ಬೊಬ್ಬರ ನೆನಪೂ.

….. …… ……

ಬಹಳ ಹಿಂದೆ ಯಾರೋ ಒಬ್ಬರು, ಹೆಸರು ಮರೆತುಹೋಗಿದೆ ಈಗ, ಬ್ರಹ್ಮಚಾರಿ ಅಂತ ಅಷ್ಟು ನೆನಪಿದೆ, ಉತ್ತರ ಭಾರತದ ಕಡೆ ಸಂಚಾರ ಹೊರಟಾಗ ಊರುಬದಿಯ ಅಡುಗೆ ಮಾಡುವರರೇ ಬೇಕು ಅಂತ ವಿಚಾರಿಸುತ್ತಿದ್ದರಂತೆ. ಅಶ್ನಾರ್ಣ ಭಟ್ಟರ ತಂದೆ ಸಣ್ಣಪ್ಪ ಭಟ್ಟರು ಮಗನನ್ನು ಆತನ ಜೊತೆ ಕಳಿಸಿಕೊಟ್ಟರಂತೆ, ಉತ್ತರ ಭಾರತ ಅಂದರೇನು ಆಗ, ಪಾರಿನ್ನೇ ಕಳಿಸುವಾಗ ತಾಯಿ ಕಾತ್ಯಾಯಿನಿಯಮ್ಮ ಮೂರ್ಛ ಹೋಗುವಷ್ಟು ಅತ್ತರಂತೆ.

ಇದ್ದಾರೆ ಈಗಲೂ, ಶತಾಯುಷಿ ಹೋಗಿ ಕೇಳಿ ಬೇಕಾದರೆ,

ಅಶ್ನಾರ್ಣ ಭಟ್ಟರಾದರೂ ಆತ ಹೋದ ಕಡೆಗೆಲ್ಲ ಅವರ ಸಂಗಡ ಹೋದರೆ? ದಿಲ್ಲಿಯಲ್ಲಿಯೇ ಉಳಿದು ಬಿಟ್ಟರು. ಅಲ್ಲಿದ್ದ ಊರುಮನೆ ಜನರಿಗೆ ಒಮ್ಮೆ ಅಡುಗೆ ಭಟ್ಟ, ಒಮ್ಮೆ ಪುರೋಹಿತ ಒಮ್ಮೊಮ್ಮೆ ಎರಡೂ ಆಗಿ, ಸಣ್ಣಪುಟ್ಟ ಪೂಜೆ, ಊಟದ ಮನೆ ಅಂತ ಎರಡನ್ನೂ ನಿಭಾಯಿಸಿಕೊಂಡು ಹೇಗೋ ನೆಲೆಯೂರಿದರು. ಆಗೊಮ್ಮೆ ಈಗೊಮ್ಮೆ ಊರಿಗೆ ಬರುವರು. ಬಂದಾಗೆಲ್ಲ ತಂದೆ ಅಡುಗೆಗೆ ಹೋಗುತ್ತಿದ್ದ ಖಾಯಂ ಮನೆಗಳಿಗೆ ಹೊಕ್ಕು

ಹೊರಡುವರು. ಉತ್ತರದೇಶದ ಚಪಾತಿ ಬಾಜಿ, ಬಾಸುಂದಿ ತಯಾರಿಸಿ ಹೊಸರುಚಿ ಉಣಿಸುವರು. ಇದ್ದರೆ ಇರಬೇಕು ದಿಲ್ಲಿಯಲ್ಲಿ ಅಂತೆಲ್ಲ ಅಲ್ಲಿನ ಸಂಗತಿ ಬಣ್ಣನೆ ಮಾಡುವರು. ನಿಧಾನವಾಗಿ ಅಲ್ಲವರು ಪುಟ್ಟದೊಂದು ಗೂಡು ಹೋಟೆಲನ್ನೂ ಸುರು ಮಾಡಿದ್ದರಂತೆ. ಒಮ್ಮೆ ಬಂದವರು, ಮಂಜಯ್ಯ ಅಂತ, ಇಲ್ಲಿನವರೆ, ಅವರ ಮಗಳನ್ನು ಮದುವೆ ಮಾಡಿಕೊಂಡು ಹೊರಟುಹೋದರು.



ಹಾಗೆ ಮದುವೆಯಾಗಿ ಹೋದವರು ಮರಳಿ ಬಂದದ್ದು ಮಾತ್ರ, ಒಬ್ಬರೇ.

ಸ್ವಾತಂತ್ರ್ಯ ಸಿಕ್ಕಿ ಎರಡು ವರ್ಷ ಕಳೆದ ಮೇಲೆ.

ಇಷ್ಟು ದಿನ ತನಗೆ ಪರದೇಶಿ ಯೋಗವಲ್ಲವೇ? ಇಲ್ಲವಾದರೆ ಊರು ಬಿಟ್ಟು ಅಷ್ಟು ದೂರ ಸಂಸಾರ ಹೂಡುವ ಅಗತ್ಯ ಇತ್ತೆ ತನಗೆ? ಈಗ ಸತ್ಯನಾಶವಾಗಿ ವಾಪಾಸು ಬಂದ ಹಾಗಾಯಿತಲ್ಲ ಅಂತ ಒಂದು ಕೊರಗುತ್ತಿದ್ದರು ಅಷ್ಟಿಷ್ಟಲ್ಲ... ನಾವೆಲ್ಲ ನೋಡುವಾಗ ಆಗಲೆ ನಡುವಯಸ್ಸು ಅವರಿಗೆ ಮರು ಮದುವೆಯಾಗಿ ನಾಲ್ಕು ಮಕ್ಕಳ ತಂದೆಯಾಗಿದ್ದರು. ಫುಲ್‌ಟೈಂ ಅಡುಗೆ ಭಟ್ಟರಾಗಿದ್ದರು. ತಂದೆಯೂ ತೀರಿಕೊಂಡು ಅವರ ಖಾಯಂ ಮನೆಗಳ ವಿಶೇಷಗಟ್ಟಲೆ ಊಟದ ಜವಾಬ್ದಾರಿಯನ್ನೆಲ್ಲ ತಾನೇ ವಹಿಸಿಕೊಂಡಿದ್ದರು. ಕಾಶಿಯಲ್ಲಿ ಏನಾದರೂ ಬಿಟ್ಟುಬರಬೇಕಲ್ಲವೆ, ತಾನು ಪೌರೋಹಿತ್ಯವನ್ನು ಬಿಟ್ಟುಬಂದೆ. ಇಷ್ಟಕ್ಕೂ ಪೌರೋಹಿತ್ಯವೇನು ಕಷ್ಟದ್ದಲ್ಲ. ಎರಡು ಗಣೇಶಾಯ ನಮಃ, ಶಿವಾಯ ನಮಃ, ಪ್ರದ್ಯುಮ್ನಾಯ ನಮಃ ಅಂತ ಜೋರಾಗಿ ಹೇಳಲು ಬಂದರೆ ಬೇಕಾದಷ್ಟಾಯಿತು. ಮತ್ತೆಲ್ಲ ಬಾಯೊಳಗೇ ಮಣಮಣ, ತಾನು ಸುಧಾರಿಸಿದನಲ್ಲ ಈ ಕೆಲಸವನ್ನೂ - ನಗುವರು.

ನಗುವಂದೆಂದರೆ, ಸ್ವಲ್ಪ ನಕ್ಕರೂ ಸರಿ, ಕಣ್ತುಂಬ ನೀರು.

ಆ ಕಣ್ಣೋ! ಎಷ್ಟೊತ್ತಿಗೆ ಕಂಡರೂ ಕೆಂಪು ಕಿಸ್ಕಾರಹೂವು, ಭಟ್ಟರೆ, ಏನು ಎರಡು ಪೆಗ್ ಹಾಕಿದ್ದೀರ ಅಂತ ಕುಶಾಲು ಮಾಡುವಷ್ಟು.

"ಅಬ್ಬ, ದೇವರದಯದಿಂದ ಅದೊಂದು ಅಭ್ಯಾಸ ಇಲ್ಲ' ಎಂಬರು, ತಮಾಷೆಗೆ ಕೇಳಿದ್ದು ಅಂತ ಗೊತ್ತಿದ್ದೂ ಬೋಳೇಶಂಕರನಂತೆ.

ನಮಗವರು ಕೇವಲ ಅಡುಗೆ ಭಟ್ಟರೆ? ಛೇಛೇ, ಅಜ್ಜನಂತಿದ್ದರಲ್ಲ.

ರಾಮಾಯಣ ಹೇಳುವ ಅಜ್ಜ ನೂರು ಪ್ರಶ್ನೆ ಕೇಳಿದರೂ ಬೇಜಾರಿಲ್ಲದೆ ಉತ್ತರ ಹೇಳುವ ಅಜ್ಜ.

-ಭಟ್ಟರೆ, ನೀವು ಅಶ್ನಾರ್ಣ ಭಟ್ಟರು ಹೇಗೆ?

"ಅದು ಮಗೂ, ಲಕ್ಷ್ಮೀನಾರಾಯಣ ಅಂತ ನನ್ನ ಅಪ್ಪಯ್ಯ ಅಷ್ಟು ಚಂದದ ಹೆಸರಿಟ್ಟರೂ ಯಾರೋ ನಾಲಗೆ ಹೊಡಕದವರು ಅಕ್ಷಾರ್ಣ ಮಾಡಿದರು. ಅದೇ ಬಿದ್ದುಹೋಯ್ತು'

ಭಟ್ಟರೆ, ನಿಮಗೆ ಸಮೋಸ ಗೊತ್ತುಂಟ?

'ಹೋ, ಸಮೋಸಾ ಅಷ್ಟೆ ಅಲ್ಲ. ಮೋಸಾ ಸಾ ಗೊತ್ತು...'

ಹಾಗಾದರೆ ಕಟ್ಲೆಟ್?

"ಅದಕ್ಕೇನು, ಕಟ್ಟಿದರೆ ಸರಿ ಬಿಟ್ಟರೆ ಸರಿ. ನೀನು ತಿನ್ನಬೇಕಾ? ಇವತ್ತು ಸಾಯಂಕಾಲವೇ ಮಾಡುವ, ಈಗ ಇಕ, ಇದೊಂದು ಕೆಲಸ ಮುಗಿಯಲಿ'

ಭಟ್ಟರೆ, ಸೀತೆಯನ್ನು ರಾಮ ಯಾಕೆ ಕಾಡಿಗೆ ಕಳಿಸಿದ?



"ಅದೂ... ಯಾಕೆಂತ ಹೇಳುವದಪ್ಪಾ... ಕ್ರೌಂಚಪಕ್ಷಿ ಸತ್ತ ಮೇಲೆ ಎಲ್ಲ ಅಷ್ಟೇ ಮಗೂ'

ತಪ್ಪಲ್ಲವೆ ಅದು?

'ತಪ್ಪೆಂದರೆ ತಪ್ಪು ಸರಿಯೆಂದರೆ ಸರಿ.

ಹಾಗಲ್ಲ ತಪ್ಪೋ ಸರಿಯೋ ಎರಡರಲ್ಲೊಂದು ಹೇಳಿ.

"ಶ್ರೀಹರೀ ನಾರಾ...ಯಣ ಗೋವಿಂದಾ.... ನಾನು ತಪ್ಪು ಅಂದೆ ಅಂತಿಟ್ಟಿಕೋ ಶ್ರೀರಾಮಚಂದ್ರ ಸೀತಾಮಾತೆಯನ್ನು ವಾವಸ್ಸು ಕರೆಯುತ್ತಾನೋ, ಅವಳು ಬರುತ್ತಾಳೋ? ನೀವು ಸರಿ ಅಂದ ಹಾಗೆ ಇದು. ಹೂ ಯಂತ ಭಟ್ಟರೆ!

"ತಪ್ಪೋ ಸರಿಯೋ ಹೇಗೆ ಮಗೂ ಹೇಳುವುದು? ಅದೊಂದು ಹಲವಾ ಆಗಿದ್ದರೆ ಕರಕ್ಕೆ ಕೊಯ್ದು ಹೇಳುತ್ತಿದ್ದೆ!'

ನೀವು ಅಯೋಧ್ಯೆ ನೋಡಿದ್ದೀರ?

'ಹೌದಲ್ಲ, ಒಮ್ಮೆ ದಿಲ್ಲಿಯಿಂದ ತುದಿಗಾಲಿನಲ್ಲಿ ನಿಂತು ಇಣುಕಿದೆ. ನೋಡಿದರೆ, ಅರೆ, ಅಲ್ಲೆ ಆಚೆ ಅಯೋಧ್ಯೆ!

ಒಂದು ಕೌಂಚಪಕ್ಷಿಯನ್ನು ಹೊಡೆದರು. ಇನ್ನೊಂದು ಎಲ್ಲಿ ಹೋಯಿತು?

'ಹಾರಿಯೋಯಿತು?

ಎಲ್ಲಿಗೆ?

"ಅದೊಂದು ಹೇಳಲು ಆ ವಾಲ್ಮೀಕಿಗೂ ಹೊಳೆಯಲಿಲ್ಲ ನೋಡು.. ಬಹುಷಃ ಅದೂ ಸತ್ತು ಹೋಯಿತು... ಯಾರಿಗೂ ಗೊತ್ತಾಗದ ಹಾಗೆ.

………

ಭಟ್ಟರೆ, ನೀವು ನೆಹರೂ ಅವರನ್ನು ಕಣ್ಣಾರೆ ಕಂಡಿದ್ದೀರಂತೆ!

ಹೌದೆ! ಕೆಂಪು ಗುಲಾಬಿಯನ್ನು ನೀವೇ ದಿನಾ ಕೊಡುತ್ತಿದ್ದುದೆ? ಎಲ್ಲ ಬಂಡಲ್, ಆಗ ಅವರ ಕೋಟಿಗೆ ಕೆಂಪುಗುಲಾಬಿ ಇನ್ನೂ ಸ್ಟಾರ್ಟ್ ಆಗಿರಲಿಲ್ಲ.

'ಗಾಂಧೀಜಿಯವರ ಭಾಷಣ ಇದೇ ಕಿವಿಯಾರೆ ಕೇಳಿದ್ದೆ ಗೊತ್ತೆ ಮಕ್ಕಳೆ? ಎಂತಹ ಮನುಷ್ಯ ಏನು ಕತೆ! ನೋಡಲಿಕ್ಕೆ ಮಾತ್ರ ನಮ್ಮ ಹಾಗೇ, ನಮ್ಮ ಹಾಗೆ ಉಡುಗೆ ತೊಡುಗೆ ನಡಿಗೆ ಎಲ್ಲ. ಕೋಲು ತೆಗೆದು ಆ ಕೈಗೆ ಒಂದು ಸೌಟು ಕೊಟ್ಟು ಚಿತ್ರ ಬಿಡಿಸಿ ನೋಡಿ ಬೇಕಾದರೆ, ಅಡುಗೆಭಟ್ಟರೇ, ಥೇಟ! ಅಲ್ಲ. ಒಂದು ಲೆಕ್ಕದಲ್ಲಿ ಗಾಂಧೀಜಿ ನಮ್ಮ ದೇಶದ ದೊಡ್ಡ ಅಡುಗೆಭಟ್ಟ, ಯಾಕೆ ಹೇಳಿ' ಎನ್ನುತ್ತ ಗಾಂಧೀಜಿ ಅವರು ಅಡುಗೆ ಊಟ ಉಪಾಹಾರ ಪಥ್ಯದ ಆಡಿದ ಮಾತುಗಳೆಂದು ಉದ್ಧರಿಸಿ 'ಪ್ಲೇಟು ಈಚೆ ಬೀಳುವುದು ಆಚೆ ಬಿತ್ತು, ಹಾಗಾಗಿ ಅವರು ಕೇವಲ ಅಷ್ಟಕ್ಕೇ ನಿಲ್ಲದೆ ಮಹಾತ್ಮರಾದರು'... ಸಾರಿನಪುಡಿಗೆ ಹುರಿಯುತ್ತ, ತರಕಾರಿ ಹೆಚ್ಚುತ್ತ, ಅಕ್ಕಿ ತೊಳೆಯುತ್ತ, ಪಾಕ ಕುದಿಸುತ್ತ ಮಹಾತ್ಮನನ್ನು ತನಗೆ ಕಂಡ ಪಾತ್ರೆಯಲ್ಲಿ ಹಾಕಿ ಮಗುಚುವರು. ಗಾಂಧೀಜಿ ತನ್ನ

ಹೆಣ್ಣು ಕೊಟ್ಟ ಮಾವನೋ ತಾತನೋ ತನ್ನ ಕಿಸೆಯಲ್ಲಿ ಸದಾ ಇರುತ್ತ, ಬೇಕೆಂದಾಗ ಥಂಗನೆ ನೆಗೆವರೋ ಎಂಬಂತಿದ್ದ ಅಶ್ವಾರ್ಣ ಭಟ್ಟರು.

ಕೊಮ, ಅರ್ಧವಿರಾಮ, ಆಶ್ಚರ್ಯ ಚಿಹ್ನೆಗಳಂತೆ ಮಾತಿನ ನಡುನಡುವೆ ರಾಗವಾಗುವ ತುಲಸೀ ರಾಮಾಯಣದ ದೋಹೆಗಳು, ಉತ್ತರ ದೇಶದಲ್ಲಿ ಕಾಲ ಕಳೆದ ಪುಣ್ಯಫಲ, ಇದು. ರಾಮಚರಿತ ಮಾನಸದ ದೋಹೆಗಳು ತನ್ನ ನಾಲಗೆಯಲ್ಲಾಡುವುದು ಎಂದು ಕಣ್ತುಂಬುವರು.

ದೋಹೆ ಸುರುವಾಯಿತೆ! ಅದು ಹೇಗೋ ನಿಧಾನವಾಗಿ ದೇಶ ವಿಭಜನೆಯ ಕರಾಳ ದಿನಗಳ ನೆನಪು ಮೇಲೇಳುತ್ತ ಅವರ ಮನದಲ್ಲಿ ಮೋಡ ಕಟ್ಟಲು ಸುರುವಾಗುವುದು. ನಾಲ್ಕಾರು ದೋಹೆ ಕಳೆಯುತ್ತಲೇ ಮೋಡ ದಟ್ಟೈಸುವುದು... ಭಟ್ಟರನ್ನು ಅವರು ಬಿಟ್ಟು ಬಂದ ದಿಲ್ಲಿಯ ಮೊಹಲ್ಲಾಕ್ಕೆ ಸಯಸಯನೆ ಒಯ್ದು ಸ್ಮರಣೆಯ ಮಳೆಯಲ್ಲಿ ತೋಯಿಸತೊಡಗುವುದು.

- ವಿಭಜನೆಯ ಗಲಭೆ ದೊಂಬಿಗಳನ್ನು ಮೊಹಲ್ಲಾದಲ್ಲಿ ತಾನು ಪ್ರತ್ಯಕ್ಷ ಕಂಡು ಅನುಭವಿಸಿದವನಲ್ಲವೆ. ಇಲ್ಲವಾದರೆ ತನಗೂ ಅವು ಉಳಿದೆಲ್ಲ ಸುದ್ದಿ ಸಮಾಚಾರಗಳಂತೆ ಪೇಪರಿನಲ್ಲಿ ಕೇಳುವ ಕಾಣುವ ಎಲ್ಲಿಯೋ ನಡೆದ ಗಲಾಟೆ ಮಾತ್ರವಾಗಿಯೇ ಉಳಿಯುತ್ತಿತ್ತೇನೋ. ಎಷ್ಟು ಬೆಚ್ಚಗೆ ಇದ್ದೆ, ತಾನು. ಪೌರೋಹಿತ್ಯ ಅಡುಗೆ ಹೋಟೆಲು ಅಂತ ಹೆಂಡತಿಯೊಂದಿಗೆ ಒಪ್ಪವಾಗಿ ಸಂಸಾರ ಮಾಡಿಕೊಂಡು, ಇವತ್ತಿನ ದಿನ ಮರ್ಯಾದೆಯಲ್ಲಿ ಕಳೆಯಿತು, ದೇವರೇ, ನಾಳಿನ ದಿನವೂ ನಿನ್ನದೇ ಹೊಣೆ ಎಂದು ದೇವರ ಪಟಕ್ಕೆ ಎರಡು ಹೂವು ಏರಿಸುತ್ತ, ಎಲ್ಲರೂ ಸ್ನೇಹಿತರೇ, ಎಲ್ಲರೂ ಭಟ್‌ಜೀ ಏಕ್ ಚಾಯ್, ಭಟ್‌ಜೀ ಏಕ್ ದೋಸಾ, ಪೂರೀ, ರೋಟೀ, ಸಬೀ, ಬಾಜೀ, ಭಟ್‌ಜೀ ಎನ್ನುತ್ತ ಪಟ್ಟಾಂಗ ಹೊಡೆದು ತಿಂದು ಕುಡಿದು ಹೋಗುವವರೇ... ಅತ್ತ ಇತ್ತ ಹರುಡುತ್ತಿದ್ದ ಗಲಭೆಗಳ ಸಮಾಚಾರವನ್ನಂತೂ ಎಷ್ಟು ಸಲ ಚರ್ಚೆ ಮಾಡುತ್ತಿದ್ದೆವೋ, ಗಿರಾಕಿಗಳಿಗಂತೂ ಮಾತಾಡಲು ಅದು ಬಿಟ್ಟು ಬೇರೆ ಇಲ್ಲ. ಆದರೆ ಜ್ವಾಲೆ ತಮ್ಮ ಮೊಹಲ್ಲಾದಲ್ಲಿಯೂ ಹಬ್ಬಿ ಅಷ್ಟು ಶೀಘ್ರ ಸ್ವಾಹಾ ಮಾಡಿಬಿಡಬಹುದು ಅಂತ ಹನಿ ಸಂದೇಹ ಕೂಡಾ ಇರಲಿಲ್ಲವಲ್ಲ.. ಯಾ ಅಲ್ಲಾಹ್... ನಾರಾಯಣಾ... (ನಮ್ಮನ್ನು ನಗಿಸಲೋಸುಗ ಉತ್ತರ ದೇಶದಲ್ಲಿದ್ದು ಬಂದವ ಎಂಬ ಝಾಪು ತೋರಿಸಲೋ ಅನಾವರಣದ ಬಿಗಿ ಸಡಿಲಿಸಿ ಉಸಿರು ತೆಗೆದುಕೊಳ್ಳಲೋ ಅಥವಾ ಸತ್ಯವಾಗಿಯೋ ಅಂತೂ ಭಟ್ಟರು ಆಗಾಗ ಈ ರೀತಿ ಉದ್ಧರಿಸುತ್ತಿದ್ದರು). ಅಷ್ಟರವರೆಗೂ ಇವ ಹಿಂದೂ ಇವ ಮುಸ್ಲಿಮ ಇವ ಬೇರೆಯವ ಇವ ನಮ್ಮವ, ಈ ಬಡ ಬ್ರಾಹ್ಮಣ ದಕ್ಷಿಣ ದೇಶದವ ಅಂತೇನೂ ಇರಲೇ ಇಲ್ಲವಲ್ಲ. ಅಷ್ಟು ಒಳ್ಳೇದರಲ್ಲಿ ಇರುವ ಹೊತ್ತಿಗೆ ಸಂದೇಹ ಹೇಗಾದರೂ ಬಂದೀತು?

ಹೀಗಿರುತ್ತ ಒಂದು ದಿನ ಎಣ್ಣೆ ಕಾಯುತ್ತ ಇದೆ, ಪೂರಿ ಮಾಡಬೇಕು, ಹಿಟ್ಟು ಕಲಸಿಟ್ಟಿದ್ದೇನೆ, ಬಾಜಿ ರೆಡಿಯಿದೆ, ಒಂದು ಹಿಂಡು ಜನ ನುಗ್ಗಿತು. ಏನು, ಯಾರೂ ಹೊಸಬರಲ್ಲ, ದಿನಾ ಬಂದು ಹೋಗುವ ಮಂದಿಯೇ, ಗಿರಾಕಿಗಳೇ. ಆದರೆ ಅಂದು ಅವರ ಅವತಾರವೇ ಬೇರೆ, ಬಂದವರು ಬಂದಾಯಿತು, ಅದು ಚೆಲ್ಲಿ ಇದು ಚೆಲ್ಲಿ



ಬಿಸಾಡಿ ಒಗೆದು ಏನು ಎತ್ತ ನೋಡುವುದರೊಳಗೆ ತನ್ನನ್ನತ್ತ ದೂಡಿಯಾಯಿತು. ತಾನು ಬಾಯಿ ಕಳೆದು ಕುಳಿತಿದ್ದ ಎಣ್ಣೆ ಬಾಣಲೆಯೊಳಗೆ ಬೀಳದ್ದು ಪುಣ್ಯ, ಒಳಗೋಡಿ ಅಚ್ಯುತಾಷ್ಟಕ ಹೇಳುತ್ತಾ ಮಜ್ಜಿಗೆ ಕಡೆಯುತ್ತಿದ್ದ ಲಕ್ಷ್ಮಿಯನ್ನು ಅನಾಮತ್ತು ಎತ್ತಿಕೊಂಡು ನಡೆದಾಯಿತು!...

“ಅಯ್ಯೋ... ಅಯ್ಯೋ... ಗಂಡನೆಂಬ ನನ್ನ ಎದುರಿಗೇ.. ಎದುರೆದೂರಿಗೆ ಬೊಬ್ಬೆ ಹೊಡೆದರಿಲ್ಲ, ಹಿಂದೆ ಓಡಿದರಿಲ್ಲ... ಕ್ಷಣದಲ್ಲಿ ಎಲ್ಲ ಮಾಯ!.. ಈ ಕಲಿಯುಗದಲ್ಲಿ ಭೂಮಿ ಬಾಯಿ ಬಿಡುವುದಿದ್ದರೆ ಅದು ಉತ್ತರ ದೇಶದಲ್ಲೇ ನೋಡಿ ಬೇಕಾದರೆ, ಕ್ರೌಂಚ ಪಕ್ಷಿಯನ್ನು ಹೊಡೆದು ಸಾಯಿಸಿದ್ದು ಅಲ್ಲಿಯೇ. ರಾಮ ಸೀತೆಯನ್ನ ತ್ಯಜಿಸಿದ್ದು ಅಲ್ಲಿಯೇ. ಅಲ್ಲಿ ನಡೆದಷ್ಟು ತಾಪಪಾಪಗಳು ಇನ್ನೆಲ್ಲಿಯೂ ನಡೆದಿಲ್ಲ... ಈ ದೇಶ ಉದ್ಧಾರವಾಗೋದು ಅಂತ ಇದೆಯೇ? ಸಾಧ್ಯವೇ ಇಲ್ಲ'.

ಅದು ಸುತರಾಂ ಸಾಧ್ಯವಿಲ್ಲವೆಂಬಂತೆ ಕೈಯಲ್ಲಿರುವ ಸೌಟನ್ನೋ ಸಟ್ಟುಗವನ್ನೋ ಒಲೆಯ ಮೇಲಿನ ಪಾತ್ರೆಯಂಚಿಗೆ ಪಠಾರ ಕುಟ್ಟಿ ರೋಷಭರಿತ ನೋವಿಗೊಂದು ಸೌಂಡು ಕೊಟ್ಟುಕೊಳ್ಳುವರು. ಒಳಗೆ ಇಳಿದು ತಣಿಯುವ ಮೇಲುದನಿಯಲ್ಲಿ 'ಚೌ ಪ್ರಭು ದೀನ ದಯಾಲು ಕಹಾವಾಗಿ ಆರತ ಹರನ ಬೇದ ಜಸು ಗಾವಾ ಜಪಂಹಿ ನಾಮ ಜಪ ಆರತ ಬಾರೀ ಮಿಠಂಹಿ ಕುಸಂಕಟ ಹೋಹಿ ಸುಖಾರೀ... ಅಂತ, ಮೊರೆ ಹೋಗುವುದು ಸಂಕಟ ಹರಿಸುವ ದೀನದಯಾಲು ಎಂದು ವೇದಗಳೂ ಕೊಂಡಾಡುವ ತುಲಸೀದಾಸರು ಆರಾಧಿಸುವ ಸಿಯಾರಾಮನಿಗೇ.

ಅವರಿಂದಾಗಿಯೇ ಎಷ್ಟು ದೋಹೆಗಳು ನಮಗೂ ಬಾಯಿಪಾಠ ಬಂದವು!

‘.....ಅಲ್ಲೇ ಆಚೆಗೆ ಎರಡನೆಯ ಹೆಂಡತಿ ಅನ್ನಪೂರ್ಣಮ್ಮ, ಸಹಾಯಕ್ಕೆಂದು ಗಂಡನ ಜತೆಗೇ ಬರುವವರು. ಭಟ್ಟರ ಮಾತು ಕಿವಿಮೇಲೆ ಹಾಯುತ್ತಿದ್ದಂತೆ ಅವರ ಕಣ್ಣಂಚು ಒದ್ದೆ, ತುದಿಯಲ್ಲಿ ನಗೆ, ದೋಹೆ ಹೇಳುವ ಗಂಡನನ್ನೊಮ್ಮೆ ಹುಬ್ಬಿನ ಏರಿಳಿತ ಸನ್ನೆಯಲ್ಲಿಯೇ ತೋರಿಸುತ್ತ 'ಹೋಕಿಲ್ಲದ ಆ ಬೇಡ ಎರಡೂ ಹಕ್ಕಿಗಳನ್ನೂ ಒಂದೇ ಸಲಕ್ಕೆ ಹೊಡೆದು ಹಾಕಿಪ್ಪನಲ್ಲ, ಸರಿಯಾಗುತ್ತಿತ್ತು. ರಾಮಾಯಣವೆ ಆಗುತ್ತಿರಲಿಲ್ಲ, ಸುಳ್ಳ?'

ಮರುಕ್ಷಣವೇ 'ಈಗಲೂ ಶ್ರೀರಾಮಚಂದ್ರ ಹಾಗೇಯಪ್ಪ ಇವರು. ಮಲಗುವುದು ನೆಲದ ಮೇಲೆಯೇ, ಖಾಲಿ ಒಂದು ಚಾಪೆ ಹಾಸಿಕೊಂಡರಂತ, ಉರುಡಿದರಂತ, ಮಂಚ ಬೇಡ, ಹಾಸಿಗೆ ಹೊದಿಕೆ ಬಿಡಿ, ದಿಂಬೂ ಬೇಡ! ಸೀತೆಯನ್ನು ಕಾಡಿಗೆ ಕಳಿಸಿದ ಮೇಲೆ ಶ್ರೀರಾಮಚಂದ್ರ ಬರೀ ನೆಲದ ಮೇಲೆ ಮಲಗುತ್ತಿದ್ದನಂತಲ್ಲ!...' ಎನ್ನುವುದೂ ಅವರೇ.

ಅವರ ಕಷ್ಟ ಅವರಿಗೆ, ಪಾಪ.

ಎಲ್ಲಿ ಮಲಗಿದರೇನು, ಮಕ್ಕಳು ನಾಲ್ಕು ಆದವಲ್ಲ. ಅಂತ ಹಿಂದಿನಿಂದ ಅನ್ನಪೂರ್ಣಮ್ಮನಿಗೆ ಕೇಳದಂತೆ ದೊಡ್ಡವರೊಬ್ಬರು ಆಡಿದರೆ ಅರ್ಥವಾಗದೆಯೂ ನಗಲು ಹೇಗೂ ನಾವಿದ್ದೆವು, ಒಂದು ದಂಡೇ. ಅಂದ ಹಾಗೆ ಅಂತಹದನ್ನು ಕೇಳಿದೊಡನೆ ಅರ್ಥವಾಗದೆಯೂ ನಗುತ್ತೇವಲ್ಲ, ನಗೆ ಬೇಕಾಗುತ್ತದಲ್ಲ, ಹೇಗದು?



ಭಟ್ಟರ ಮನಸ್ಸಿನ ಸಂಕಟ ಎಷ್ಟಿತ್ತೋ. ಆದರೆ ಅವರ ದೈಹಿಕ ಸಂಕಟ ಮಾತ್ರ ಅಯ್ಯಬ! ಇದ್ದಕ್ಕಿದ್ದಂತೆ ಅಮರಿಕೊಳ್ಳುವ ಒಂದು ಭಯಂಕರ ಹೊಟ್ಟೆನೋವು ಅವರಿಗೆ ಅದು ಬಂತೂ ಎಂದರೆ ಅವರು ಒದ್ದಾಡುತ್ತಿದ್ದುದು ನೀಡಬೇಕು. ವಿಲವಿಲ ವಿಲವಿಲ. ಗಾಯಗೊಂಡ ಪಕ್ಷಿ ಪಟಪಟ ರೆಕ್ಕೆ ಬಡಿದು ಒಯ್ದಾಡುವುದಿಲ್ಲವೇ? ಹಾಗೇ

ಮುಷ್ಟಿ ಎರಡನ್ನೂ ಎದೆಗೊತ್ತಿಕೊಂಡು ಮುದುರಿ ಮುದ್ದೆಯಾಗಿ ಗೋಡೆಗೆ ಮುಖ ಮಾಡಿ ನರಳಲು ಸುರುಮಾಡಿದರೆಂದರೆ ಪಾಪ, ಅರ್ಧಗಂಟೆ ಮುಕ್ತಿಯಿಲ್ಲ. ಆ ಹೊತ್ತಿಗೆ ಅವರನ್ನು ಕರೆಯುವಂತಿಲ್ಲ. ಮಾತಾಡಿಸುವಂತಿಲ್ಲ, ಬೆರಳ ತುದಿಯಲ್ಲಿಯೂ ಮುಟ್ಟುವಂತಿಲ್ಲ. ಸಂಕಟ ಸಂಕಟ ಎನ್ನುವರು. ಎದ್ದು ನೀರು ಕುಡಿಯುವರು, ಬಿದ್ದು ಹೊರಳಾಡುವವರು. ಕ್ಷಣದಲ್ಲಿ ಬಿಳಿಚಿ ನೀರ್ಜಿವ, ಬೂದಿ ಮಂತ್ರ ತಾಯತ ಯಾವುದಕ್ಕೂ ಬಗ್ಗದ, ಇಂಥದ್ದೆಂದು ಹಿಡಿಯಲು ಡಾಕ್ಟರರಿಗೂ ಆಗದೇ ಹೋದ ಕಾಯಿಲೆಯದು. ಆ ಮದ್ದು ಈ ಮದ್ದು ಭಸ್ಮ ಕರ್ಮ ಅಂತ ಸ್ವಲ್ಪ ದುಡ್ಡು ಹುಡಿ ಮಾಡಿದರೆ? ಎಲ್ಲ ನೀರಲ್ಲಿ ಹೋಮ.

ಅರ್ಧ, ಹೆಚ್ಚೆಂದರೆ ಮುಕ್ಕಾಲು ಗಂಟೆ, ಕಳೆಯಿತೇ, ಅಂತಾ ನೋವು ಸಂಕಟ, ಮಾಯ! ಮಾಯವಾದ ಮರುಕ್ಷಣ ನೋಡಿದರೆ, ಸ್ವಲ್ಪ ಆಗ ಎಷ್ಟು ಹೊರಳಾಡಿದ ಜನ ಇದೇಯಾ ಅಂತ ಆಶ್ಚರ್ಯ ಪಡಬೇಕು! ಹಾಗೆ ಮುಂಚಿನ ಅದೇ ಭಟ್ಟರು! -

ಇನ್ನು ಏನೇ ಪ್ರಶ್ನೆ ಕೇಳಿ, ತೊಂದರೆಯಿಲ್ಲ.

ಅಂದ ಹಾಗೆ ಭಟ್ಟರೆ, ಆಮೇಲೆ? ಏನಾಯ್ತು?

ನಿಮ್ಮ ಹೆಂಡತಿ ಏನಾದರು?

ನೀವೊಬ್ಬರೇ ಬಂದಿರಿ ಏಕೆ?

ತಲಾಶು ಮಾಡಬಹುದಿತ್ತಲ್ಲ?

ನೀವೇನು ಸೇತುವೆ ಕಟ್ಟಿ ಲಂಕೆಗೆ ಹೋಗಬೇಕಾಗಿರಲಿಲ್ಲ!...

ಕಡೆಕಡೆಗಂತೂ ಈ ಇಲ್ಲ ಪ್ರಶ್ನೆಗಳನ್ನು ಯಾರೂ ಕೇಳದಿದ್ದರೂ ತನ್ನದೇ ಎಂಬಂತೆ ಅದಕ್ಕೆ ಉತ್ತರ ಕೊಡುವುದು ತನ್ನ ಹೊಣೆ ಎಂಬಂತೆ ಬೆನ್ನು ಬಾಗಿಸಿಕೊಂಡು ಒಲೆಯ ಮುಂದಿನ ಕೆಲಸದಲ್ಲಿರುತ್ತಲೇ ನೆನಪಿನ ದೋಣಿ ಬಿಡುವ ಭಟ್ಟರು.

ಒಲೆಯ ಮೇಲೆ ಎಣ್ಣೆ ಇಟ್ಟೊಡನೆಯಂತೂ ಅದಕ್ಕೇ ಕಾದಂತೆ ಎಲ್ಲಿಂದ ಉಕ್ಕಿ ಬರುತ್ತಿತ್ತೋ ನೋವು ಮೇಲೆಮೇಲೆ.

ಹುಡುಕುತ್ತಾ ತಾನೂ ಕಾಡುಕಾಡು ಅಲೆದೆ, ಸ್ವಲ್ಪ ತಿರುಗಿದೆನೇ ಸ್ವಲ್ಪ ತಿರುಗಿದೆನೇ? ಕಡೆಗೂ ಸಿಗಲಿಲ್ಲ. ಯಾವ ರಾವಣನ ಅಶೋಕವೃಕ್ಷದ ಕೆಳಗೆ ಕಣ್ಣೀರಲ್ಲಿ ಕೈ ತೊಳೆಯುತ್ತಿರುವಳೋ.. ರಾಮಾ ಎಂದು ಕನಲುವರು. ಅನ್ನಪೂರ್ಣಮ್ಮನ ಎದುರಿಗೇ ಆಗ ಅನ್ನಪೂರ್ಣಮ್ಮ ಸಾ ತಾನೂ ಆ ದುಃಖದಲ್ಲಿ ಭಾಗಿಯೆಂಬಂತೆ 'ಹೆಣ್ಣು ಹೆಂಗಸು, ಏನು ಮಾಡಬೇಕಾಯ್ತು ಪಾಪ. ಉತ್ತರ ದೇಶದಲ್ಲಿ ಹಾಗೆಯೇ ಅಂತಲ್ಲ, ಹೆಂಗಸರ ಮೇಲೆಯೇ ಕಣ್ಣಂತೆ. ಎತ್ತಿ ಹೊರಟೇ ಬಿಡುವುದಂತೆ... ಅಲ್ಲ ಎದುರೆದೂರಿಗೆ

ಹೆಂಡತಿಯನ್ನು ಎಳೆದುಕೊಂಡು ಹೋದರೆ ಎಂಥಾ ಗಂಡಸಿಗೇ ಇರಲಿ, ಹೇಗಾಗಬೇಕು! ಇವರು ಹುಡುಕಿದ್ದಂತೂ ಅಷ್ಟಿಷ್ಟಲ್ಲವಂತೆ (ಆಗಷ್ಟೇ ಭಟ್ಟರು ಹೇಳಿ ಮುಗಿಸಿದ್ದರೂ ಅದನ್ನೇ ಹೇಳುವ ಉಮೇದಿನಲ್ಲಿ) ಬರೀ ದಿಲ್ಲಿ ಮಾತ್ರವಲ್ಲ, ಸುತ್ತಮುತ್ತ ಊರು ಕೇರಿ ಹೋಗಿಹೋಗಿ ಕಾಶಿಯಲ್ಲಿಯೂ... ಊರಿಗೆ ಬರುವಾಗ ಒಳ್ಳೆ ಹುಚ್ಚನ ಹಾಗಿದ್ದರೂ. ನಾನಾದ್ದಕ್ಕೆ ಮದುವೆಯಾದೆ, ಅಪ್ಪ ಸತ್ತವಳು' ಬಾಡಿದಂತೆ ಮುಖ, ನಗೆಯಾಡುವರು.

ಆಗ ಮೆಲ್ಲ ಒಂದು ಪ್ರಶ್ನೆಯ ಬಾಣ ಪಿರಕ್ಕನೆ ಅವರತ್ತ ಹಾರುವುದು. 'ಅನ್ನಪೂರ್ಣಮ್ಮ, ಒಂದು ವೇಳೆ ಅಲ್ಲ, ಒಂದು ವೇಳೆ ಅಂದೆ-ಲಕ್ಷ್ಮಮ್ಮ ಬಂದುಬಿಟ್ಟರು ಎನ್ನಿ, ಆಗ?' ಅನ್ನಪೂರ್ಣಮ್ಮನೇನು ತಡವರಿಸುವರೇ? 'ಹೋ, ಬರಲಿ ಬರಲಿ, ಅದೇನೋ ಹೇಳುತ್ತಾರಲ್ಲ, ಏನದು, ವೆಲ್‌... ಕಮ್‌.. (ಗಂಟಲಲ್ಲೇ ನಗೆ) ನಂಗೇನು? ಲಾಭ ನಿನ್ನ ಆಶ್ನಾರ್ಣ ಭಟ್ಟರಿಗೇ. ಎರಡೆರಡು ಹೆಂಡಿರಾದರಲ್ಲ, ಸುಲ... ಭದಲ್ಲಿ,

ಆದರೆ ಭಟ್ಟರಿಗೆ ನಗೆ ಬರದ ಹೊತ್ತದು. ಅದೇ ಮೊಹಲ್ಲಾದ ಸ್ವಲ್ಪ ಹೆಂಗಸರು ಹಾಗೆ ಮಾಯವಾದರೆ! ಯಾರು ಯಾರನ್ನು ಯಾಕೆ ಯಾವ ಕೋಮಿನವರು.... ಕೇಳುವ ಹಾಗೆಯೇ ಇಲ್ಲ. ಎಂದು ಮೇಲೆ ದುಃಖ ತನಗೊಬ್ಬನಿಗೇ ಅಲ್ಲ, ತನ್ನೊಡನೆ ಎಷ್ಟು ಮಂದಿ! ಎಂಥಾ ಸ್ಥಿತಿ ಎಂದರೆ ಗಾಂಧಿ ಇಲ್ಲ ನೆಹರೂ ಇಲ್ಲ, ಯಾ.. ರಿಲ್ಲ, ಅಂಥಾ ಸ್ಥಿತಿ.

“ಅಯ್ಯೋ, ಹೆಂಡತಿ ಹುಡುಕಲಿಕ್ಕೂ ಅವರೆಲ್ಲ ಬಂದರೆ ಸೈ ಮತ್ತೆ'. - ಅನ್ನಪೂರ್ಣಮ್ಮ,

- ನೆನಪುಗಳು ಇಲ್ಲವೆ ಇಲ್ಲ ಅಂತಾಗುವುದಿಲ್ಲ. ಅಡಿ ಬೀಳುತ್ತವೆ, ಹೆಚ್ಚು ಬೀಳುತ್ತವೆ. ಸಮಯ ಸಂದರ್ಭ ಅನುಸಾರ ಠಪ್ಪ ಮಂಡೆ ಎತ್ತುತ್ತವೆ! ಒಮ್ಮೆ ಕೆಲಸ ಅಂತ ನಾವೆಲ್ಲ ಊರಿಂದ ದೂರವಾಗಿ ಆಶ್ನಾರ್ಣ ಭಟ್ಟರನ್ನು ಅದರಂತೆಯೇ ಇದ್ದೆವಲ್ಲ! ಈಗ ನೋಡಿದರೆ!

-ಹೂಂ ಒಬ್ಬೊಬ್ಬರದೂ ಎಷ್ಟು ನೆನಪು.

- ಈಗ ಅವರನ್ನು ನೆನೆಸಿಕೊಂಡರೂ ಕಾಣೋದು ಒಬ್ಬ ನಿತ್ಯ ವಿರಹಿ'ಕಂಬನಿಗೆ ಬಹಳ ನಾಚಿಗೆ, ಅದು ಮಾತುಕತೆಗಳ ಹಿಂದೆ ಅಡಗಿಕೊಂಡಿರುತ್ತದೆ ಗೊತ್ತೆ?' ಅಂತ ಅವರದೇ ಒಕ್ಕಣೆಯಲ್ಲಿ ಎಷ್ಟು ಸಲ ಹೇಳಿದ್ದರೂ! ಒಟ್ಟಾರೆ ಹೇಳುತ್ತಿದ್ದಾರೆ ಅಂತಲೇ ಮಾಡಿದ್ದೆ.

ಹೊಗೆ ಮುಂದೆ ಕುಳಿತು ಕುಳಿತೇ ಅವರ ಕಣ್ಣು ಕಿಸ್ಕಾರಗೆಂಪು ಅಂತ ನಾನೆಣಿಸಿದ್ದೆ.

ಆಯಿತು, ನಿಲ್ಲಿಸುತ್ತೀರ, ಸಾಕು, ಧಾರಾವಾಹಿ.

ವಿಷಯ ಮುಂದುವರಿಸಲು ಬಿಡಿಯಪ್ಪಾ...

ಅರುಂಧತಿ ಮುಂದುವರಿಸಿದಳು.

ಹ್ಞಾ,

ಲಕ್ಷಮ್ಮ? ಯಾವ? ತಲೆಮೇಲೆ ಸೆರಗೆಳೆದುಕೊಂಡು ಹಿಂದೀ ಮಾತಾಡಿಕೊಂಡು ಪಕ್ಕಾ ಉತ್ತರಭಾರತದ ಹೆಂಗಸರಂತೆಯೇ ಕಾಣುವ ಅವರು.. ಇಲ್ಲ... ಆದರೂ...



ಅವರು ಇರಲಿಕ್ಕಿಲ್ಲ ಅಂತಂದುಕೊಳ್ಳುತ್ತಲೇ ಮೆಲ್ಲ ಕೇಳಿದೆ. 'ಏನು, ಲಕ್ಷ್ಮಮ್ಮನಾ! ಅವರ ಹೆಸರು ಲಕ್ಷ್ಮಮ್ಮ ಅಂತವ?'

"ಹೌದು, ಹೆಸರು ಬದಲಿಸಲಿಲ್ಲ ನಾನು, ಯಾಕೆ ಬದಲಿಸಬೇಕು, ಸುಮ್ಮನೆ'.

'ಅಂದರೆ?' ಉಸಿರು ಸಿಕ್ಕಿಕೊಂಡಂತೆ ಕೇಳಿದೆ.

'ನಿಮ್ಮ ಪ್ರಶ್ನೆಗೇ ಬಂದೇ?' ಎಂದರು ವಿಶಾಖಾ ಬೆನ್, ದೇಶ ವಿಭಜನೆ ಗಲಭೆ ಮಾರಾಮಾರಿ ರಕ್ತದೋಕುಳಿ ಎಲ್ಲರನ್ನೂ ಸ್ವತಃ ಕಂಡ ಕುದಿಯಲ್ಲಿ ವಿವರಿಸುತ್ತ ಕೋಮು ಕೋಮುಗಳ ಜಗಳದಲ್ಲಿ ಜೀವ ಕಳೆದುಕೊಂಡ, ನರಕ ಹಿಂಸೆ ಅನುಭವಿಸಿದ, ಬೆಂದು ಮುದ್ದೆಯಾದ, ಕದ್ದು ಹೋದ, ಕ್ಷಣಮಾತ್ರದಲ್ಲಿ ಬದುಕಿನ ಗತಿಯೇ ತಿರುಗಿಹೋದ, ಹಗಲು ರಾತ್ರಿಗಳ ಬಣ್ಣವೇ ಬದಲಾದ, ಗಂಡಂದಿರೂ ಮಕ್ಕಳೂ ಇಲ್ಲವಾದ ಬದಲಾದ ಅಥವಾ ಹೊಸದಾದ ಮಹಿಳೆಯರ ನಾನಾ ಸ್ಥಿತಿ-ಗತಿಗಳನ್ನು ತೇವದನಿಯಲ್ಲಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದರು ವಿಶಾಖಾ ಬೆನ್.

'ಮನುಷ್ಯ ಮನುಷ್ಯನಾಗಿರೋದು ಸಾಮಾನ್ಯ ಸ್ಥಿತಿಯಲ್ಲಿ ಮಾತ್ರ ಸಿದ್ಧಾಂತ ತತ್ವ ರೀತಿ ನೀತಿಗಳ ಬುಡ ತುಸುವೇ ಅಲ್ಲಾಡಿದರೂ ಮೊದಲು ಬಲಿಯಾಗೋದು ಮಹಿಳೆ, ಅವಳ ದೇಹ, ಅವಳ ಮನಸ್ಸು, ಅವಳ ಬದುಕು'.

ಲಕ್ಷಮ್ಮನ ವಿಚಾರ ಹೆಚ್ಚು ಹೊತ್ತು ತಡೆಯಲಾರದವಳು ನಾನು...

"ಅಲ್ಲ... ಲಕ್ಷ್ಮಮ್ಮ....?'

"ಹ್ಞಾ, ಲಕ್ಷ್ಮಮ್ಮ, ಬರಲಿ ಅವರೇ ಹೊರಗೆ, ಹೇಳುತ್ತೇನೆ'- ನಿಡುಸುಯ್ದು ಸುಮ್ಮನಾದರು ವಿಶಾಖಾ ಬೆನ್, ಲಕ್ಷ್ಮಮ್ಮ ಬರುವವರೆಗೂ.

ಲಕ್ಷ್ಮಮ್ಮ ಬಂದರು, ಎಲ್ಲರಿಗೂ ಅದೇ ಈಗ ತಯಾರಿಸಿದ ತಾಜಾ ಜ್ಯೂಸ್ ಕೊಟ್ಟರು. ಒಳ ಹೋಗಲು ಬೆನ್ನು ತಿರುಗಿಸಬೇಕು. 'ಹೋಗಬೇಡಿ ಇರಿ ಲಕ್ಷ್ಮಮ್ಮ' - ವಾತ್ಸಲ್ಯ ಕೂಡಿದ ಯಜಮಾನಿ ದನಿಯದು. ನಿಲ್ಲಲೇಬೇಕು. 'ಕುಳಿತುಕೊಳ್ಳಿ. ಹೇಳಿ ನೀವೆ ನಿಮ್ಮ ಸ್ವಂತ ಕಥೆ. ಇವರಿಗೆಲ್ಲ ಬೇಕಂತೆ. ಎಲ್ಲ ನಡೆದು ಬಹಳ ಕಾಲವೇ ಆಯ್ತು. ಈಗ ಹೇಳಲು ಸಾಧ್ಯ ನಿಮಗೆ'

ಲಕ್ಷ್ಮಮ್ಮ ಮೆಲು ನಕ್ಕರು, 'ಹೇಗೂ ಬಹಳ ಕಾಲ ಆಗಿಯಾಯ್ತು. ಈಗ ಹೇಳಿ ಏನು?'

ಇನ್ನು ತಾಳಲಾರದೆ ನಾನು ಕನ್ನಡದಲ್ಲೇ ಸ್ಫೋಟಗೊಂಡೆ. "ನೀವು... ಅವರಲ್ಲವೆ? ಅಲ್ಲ. ಬಹುಶ ಇರಲಿಕ್ಕಿಲ್ಲ... ಅಶ್ವಾರ್ಣ ಭಟ್ಟರ, ಹೆಂಡತಿ...??

ವಿಶಾಖಾ ಬೆನ್ ಮತ್ತದೇ ಆಶ್ಚರ್ಯದಿಂದ ನನ್ನತ್ತ ನೋಡಿದರು. ಅನಿತಾ 'ಯಾವ ಭಾಷೆಯೆ ಇದು!' ಎಂಬಂತೆ ತಬ್ಬಿಬ್ಬು ನಕ್ಕಳು. ಆದರೆ ಲಕ್ಷ್ಮಮ್ಮ ಅಪ್ಪಟ ಕನ್ನಡದಲ್ಲಿ "ಅದೆ ನಾನು ಎಣಿಸಿದೆ, ದಂಟಾಡಿ ಜಲಜಾಕ್ಷಮ್ಮನದೇ ಹೋಲಿಕೆ... ಹೇಗೆ ಇದೂ ಅಂತ. ಅವರನ್ನೇ ಕಂಡ ಹಾಗಾಯ್ತು ಕೇಳುವವಳಿದ್ದೆ. ಮಳ್ಳು ಎಂದೀರಿ ಅಂತ ಬಾಯಿ ತೆರೆಯಲಿಲ್ಲ. ನೀವು ಅವರಿಗೇನಾಗಬೇಕು? ಮಗಳಾ?'



"ಹೂ ಹಾಗಾದರೆ ನೀವು ಅದೇ ಲಕ್ಷಮ್ಮ!'

"ಅಲ್ಲ, ಆ ಲಕ್ಷಮ್ಮ ಅಲ್ಲ. ಈಗ ಬೇರೆ ಜನ್ಮ' - ನಕ್ಕರು. ನೋವು ನುಂಗಿ ನೀರು ಕುಡಿದಂತೆ!

ನೀನು ಲಕ್ಷ್ಮಮ್ಮನ ಊರಿನವಳೆಂದು ಆಗಲೇ ಆಶ್ಚರ್ಯ ಆಯ್ತು ನನಗೆ'. ಎಂದ ವಿಶಾಕಾ ಬೆನ್ ಸಂಧಾನ ನಡೆಸಿ ಕದ್ದು ಹೋದ ಮಹಿಳೆಯರನ್ನು ಮರಳಿ ಕರೆತಂದ ಕತೆ ಹೇಳತೊಡಗಿದರು. ಸರಕಾರದ ಪ್ರತಿನಿಧಿಯಾಗಿ ಎರಡೂ ಕಡೆಯ ಅಂತಹ ಮಹಿಳೆಯರ ವಿನಿಮಯ ಪ್ರಕ್ರಿಯೆಯೆಲ್ಲ ನಡೆದು ಮುಗಿವಾಗ ವರ್ಷವೇ ಉರುಳಿತ್ತು, ಯಾರು ಯಾರೆಲ್ಲ ಯಾರ ಯಾರ ಮನೆ ಸೇರಿದ್ದರು. ಯಾವ ಯಾವ ಶಿಬಿರದಲ್ಲಿದ್ದರು. ಕರೆದೊಯ್ಯಲು ಬಂದ ನಮ್ಮನ್ನು ಕಂಡು ಆತಂಕಗೊಂಡರು. ಅತ್ಯಾಚಾರಕ್ಕೊಳಗಾದವರು, ಹೊಟ್ಟೆಪಾಡಿಗಾಗಿ ವೇಶ್ಯೆಯರಾದವರು, ಆಗಲೇ ಕೆಲವರು ಬಸುರಿಯರು, ಬಾಣಂತಿಯರು... ಎರಡೂ ಕಡೆಯಲ್ಲಿಯೂ ಅಂದರೆ ನಮ್ಮಲ್ಲಿಯೂ, ಬನ್ನಿ ಎಂದರೆ ಕೆಲವರಿಗೆ ಇಲ್ಲಿ ಮತ್ತೆ ಮನೆ ಸೇರಿಸದಿದ್ದರೆ ಎಂಬ ಭಯ, ಈಗಿರುವಲ್ಲಿಯೇ ತಮಗೆ ಪ್ರೀತಿ ಸಿಗುತ್ತಿದೆ. ಹೊಟ್ಟೆಬಟ್ಟೆಗೂ ಪರವಾಗಿಲ್ಲ ಅಂತ ಅದನ್ನೇ ಆಯ್ದುಕೊಂಡವರು, ಆಗಿದ್ದು ಆಯ್ತು ಈಗ ಯಾವ ಮುಖವಿಟ್ಟುಕೊಂಡು ಮರಳಲಿ? ಶಾಪಗ್ರಸ್ಥರು ತಾವು ಅಂತ ಅತಂತ್ರರಾದರೂ ಮರಳಲು ಒಪ್ಪದವರು. ಒಬ್ಬಳಂತೂ ಮುಗ್ಧವಾಗಿ ಬೇರೆ

ನನ್ನೆನ್ನೇ ಕೇಳಿದಳು. ಈಗಿನ ಗಂಡ ಬಹಳ ಒಳ್ಳೆಯವ, ಮುಂಚಿನವನು ಒಳ್ಳೆಯವನೇ ಇದ್ದ. ಆದರೆ ಅವನಿಗಿಂತಲೂ ಈತ ಇನ್ನೂ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾನೆ ಬರಬೇಕೆ ನಾನು? ಬಂದರೆ ಅವಮಾನವಿಲ್ಲದ ಬದುಕಿನ ಆಶ್ವಾಸನೆ ಕೊಡುತ್ತೀರಾ?'

ಏನಿತ್ತು ಉತ್ತರ ನನ್ನಲ್ಲಿ? ಪುನರ್ವಸತಿ ಕೇಂದ್ರದ ಭರವಸೆಯೊಂದು ಬಿಟ್ಟು?... ಭೀಕರ ಸಂದಿಗ್ಧ ಗಳಿಗೆಗಳು ಅವೆಲ್ಲ. ಹಾಗೆ ಕೆಲ ಮಂದಿ ಮರಳಿ ಬಂದರು ಕೂಡರು ಬಂದವರು ಕೆಲವರು ಅವರವರ ಮನೆ ಸೇರಿಕೊಂಡರೆ ಕೆಲವರು ಪುನರ್ವಸತಿ ಕೇಂದ್ರ... ಈ ಲಕ್ಷಮ್ಮ ನಮ್ಮನೆಯಲ್ಲಿಯೇ ನಿಂತರು. ಒಬ್ಬಂಟಿ ನಾನು, ನಿಲ್ಲಿಸಿಕೊಂಡೆ... ಪರಸ್ಪರ ಆಧಾರವಾಯ್ತು. ಎನ್ನಿ. ಏನೋ ಎಲ್ಲ ಒಂದೊಂದು ಋಣ ಅಷ್ಟೆ..." ಅವರ ದನಿ ಸಣ್ಣಗೆ ಕಳಕಿದಂತಾಯ್ತು.

ನಾನೋ ಲಕ್ಷ್ಮಮ್ಮ ಸಿಕ್ಕಿದ ಸಂಭ್ರಮದಲ್ಲಿದ್ದೆ. ಲಕ್ಷ್ಮಮ್ಮಾ ನಿಮಗಾಗಿ ಭಟ್ಟರು. ಎಷ್ಟೆಲ್ಲಾ ತಿರುಗಿದರು. ಊರು ಊರು ಕೇರಿ ಕೇರಿ ಸುತ್ತಿದೆ, ಹುಚ್ಚನಂತಾಗಿದ್ದೆ. ಅಂತ ನಮ್ಮೊಡನೆಲ್ಲ ಹೇಳಿ ಹೇಳಿ ನವೆಯುತ್ತಿದ್ದರು. ಪಾಪ. ಛೇ, ಅವರಿಗೊಂಚೂರು ಸೂ ಸಿಕ್ಕಿದ್ದರೂ ಸಾಕಿತ್ತು ಗೊತ್ತೇ ಆಗದೆ ಹೋಯಿತಲ್ಲ!

ಅವರಿಗೆ ಮದುವೆಯಾಗಿ ನಾಲ್ಕು ಮಕ್ಕಳಿದ್ದಾರೆ ಅಂತ ಹೇಳಲು ಮಾತ್ರ ನಾಲಗೆ ತಡೆಯಿತು! ನಮಗೇ ಗೊತ್ತಿಲ್ಲದಂತೆ, ನಮ್ಮನ್ನು ನಿಯಂತ್ರಿಸುತ್ತದೆಯಲ್ಲ, ಏನುದು, ಅದದೇ ಅಚ್ಚರಿ ನನಗೆ, ಈಗಲೂ.,

ನಕ್ಕರು ಲಕ್ಷ್ಮಮ್ಮ ಏನು ಗೊತ್ತಾಗದೆ? ಗುರುತಿಸಲು ಬಂದಿದ್ದರಲ್ಲ ಅವರೂ! ಅವರನ್ನು ನೋಡಿದ್ದೇ ಎಲ್ಲಿಂದ ಬಂತೋ ದೇವರೆ, ಕಟ್ಟೆ ಒಡೆದಂತೆ ಆಳು! ಅಯ್ಯಮ್ಮ.

ಬಿಡುಗಡೆ ಆಯ್ತು ಅಂತ ನಿಸೂರಾಗಿ ಅತ್ತೂ ಅತ್ತೂ ಅತ್ತೂ... ಅಳುತ್ತಲೇ ಕರೆಯುತ್ತಾರೆ. ಈಗ ಕರೆಯುತ್ತಾರೆ ಇನ್ನೊಂದು ಗಳಿಗೆಯಲ್ಲಿ ಕರೆಯತ್ತಾರೆ. ಅಂತ ಇದ್ದರೆ, ಹ್ಞ, ಇಲ್ಲ! ಕರೆಯುತ್ತಿಲ್ಲ! ಆಶ್ಚರ್ಯದಿಂದ ಕಣ್ಣು ಮುಖ ಒರೆಸಿಕೊಂಡು ನೋಡುತ್ತೇನೆ, ಘಟ, ಮೈ ಮೇಲಿನ ಬೈರಾಸನ್ನು ತಲೆಯ ಮೇಲೆ ಹಾಕಿಕೊಂಡು ತಲೆಯಡಿ ಮಾಡಿಕೊಂಡು ಕರ್ಮಾಂತರಕ್ಕೆ ಹೊರಟವರ ಹಾಗೆ ವಾಪಾಸು ಹೋಗುತ್ತಿದೆ. ಈ ಹೆಂಗಸು ತನಗೆ ಗುರುತೇ ಇಲ್ಲ ಎಂದರಂತೆ! ನನಗೆ ನಂಬಲಿಕ್ಕಾಗದೆ ಹಿಂದೆಯೇ ಓಡಿದೆ. ಕರೆದೆ, ಬೆಂಬತ್ತಿದೆ... ಊಹೂಂ ಉಪ್ಪು ಉಪ್ಪಿನ ಕಲ್ಲೆನ್ನದೆ ಜನ ದಾಪುಗಾಲಿನಲ್ಲಿ ಹೊರಟು ಹೋ...ಗಿದ್ದೆ ಹಿಂತಿರುಗಿ ಕೂಡ ನೋಡಲಿಲ್ಲ.'

* ಹ್ಞ'.. ಸತ್ಯಕ್ಕು, ಅಕ್ಷರಶಃ ಕಳೆದ ಬಾಯಿ ಮುಚ್ಚಲಿಲ್ಲ ನಾನು.

ಸಿಟ್ಟಿನ ಕಾವು ಪೂರ್ತಿ ತಣಿದಿಲ್ಲ. ಆದರೆ ಶೋಕವಿಲ್ಲ! ಹಾಗಿತ್ತು ಸ್ವರ, ಬೇಕೆಂದೇ ಬೇಕಾದರೆ ಸ್ವರ ಕಳಕಿದೆ, ಕಣ್ಣಂಚಿನಲ್ಲಿ ನೀರು ತುಳುಕಿದೆ ಅಂತ ಕಟ್ಟಿ ಹೇಳಬೇಕು ಅಷ್ಟೇ ಏಕಾಂತದಲ್ಲಿ ಚಿಂತಿಸಿ ಪಕ್ವವಾದವರ ಧ್ವನಿಯೆಲ್ಲ ಹೀಗೆಯೇ ಇರುತ್ತದೆಯೇನೋ, ಸೀತೆ ಶಕುಂತಲೆಯರಂತೆ ನೆನಪುಗಳು ಖಾಲಿ ನೆನಪುಗಳಾಗಿ- ಸಿಹಿ-ಕಹಿ ಪದರ ಕಳಚಿ ಅವರದೇ ಭಾಷೆಯಲ್ಲಿ - ಭ್ರಮಾಮಯ ಕಾಯ ಕಳಚಿ,

ಕದ್ದೊಯ್ದು ಕತೆಯನ್ನೂ, ನಾನು ಕೇಳಿದ್ದರಿಂದ ಹೇಳಿದರು ಲಕ್ಷ್ಮಮ್ಮ, ಅಬ್ಬ ಇಲ್ಲಾದರೂ ಭಟ್ಟರು ಸುಳ್ಳಲ್ಲ. ಹೋಟೆಲು, ಕಾದ ಎಣ್ಣೆ, ಪೂರಿಬಾಜಿ, ಮಜ್ಜಿಗೆ ಕಡೆಯುತ್ತ ಅಚ್ಯುತಾಷ್ಟಕ ಸ್ವಲ್ಪ ಜೀವ ಬಂದ ಹಾಗಾಯ್ತು. ಇಲ್ಲವಾದರೆ ದಿನನಿತ್ಯದ ಬದುಕಿನಲ್ಲಿ ಮರೆತಂತಿದ್ದರೂ ಅಜ್ಜನಂತೆ ಒಡಲಲ್ಲೇ ಅಡಗಿರುವ ಪ್ರೀತಿಯ ಆಶ್ನಾರ್ಣ ಭಟ್ಟರನ್ನು ಅಂಥಾ ದೊಡ್ಡ ಸುಳ್ಳನ ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸೋದು ಎಂದರೆ

... ಹೌದಪ್ಪ ಸುಲಭವಲ್ಲ.

'………….

- ತಡಿತಡಿ, ಒಂದು ವರ್ಷಕ್ಕೂ ಮಿಕ್ಕಿ ಲಕ್ಷಮ್ಮ ಎಲ್ಲೋ ಇದ್ದರು ಅಂದೆಯೆ?"

-ಎಲ್ಲೋ ಇದ್ದ ಹೆಂಡತಿಯನ್ನು ಮತ್ತೆ ಕರೆದುಕೊಳ್ಳುವುದು, ಅಲ್ಲ, ಕಷ್ಟವೇ ಭಟ್ಟರ ಅವಸ್ಥೆ ಬಾಯಲ್ಲಿ ಹೇಳಿದ್ದು ಸರಳವಲ್ಲ.

ಅದೇನು ಆಯುಷ್ಯವೆಲ್ಲ ಎಲ್ಲೆಲ್ಲೂ ಬಳಿದು ಖಾಯಿಲೆ ಹತ್ತಿಸಿಕೊಂಡು ಬರುವ ಯಜಮಾನರ ಜೊತೆ ಸಂಸಾರ ಮಾಡುವ ಹೆಂಗಸರು ಎಷ್ಟು ಬೇಕು!

- ಅದು ಬೇರೆ ವಿಚಾರ, ಇದು ಬೇರೆಯೇ ಅದೂ ಇದೂ ಕಲಿಸಬಾರದು.

- ಹೇಗೆ? ಬೇರೆ ಹೇಗೆ?

- ಸುಮ್ಮನೆ ಕಾಲು ಕೆರೆಯಬೇಡ.

- ಭಟ್ಟರು ಆತ್ಮಹತ್ಯೆ ಮಾಡಿಕೊಂಡರು ಪಾಪ, ಇದನ್ನೂ ಯೋಚಿಸಬೇಕು.

-ಇಷ್ಟಕ್ಕೂ ಲಕ್ಷ್ಮಮ್ಮ ಹೇಳಿದ್ದು ಸತ್ಯ ಅಂತ ನಂಬುವುದು ಹೇಗೆ?



- ನಂಬದಿರುವುದು ಹೇಗೆ?

- ಹೋ, ಭಟ್ಟರು ದುಷ್ಟರಲ್ಲ ಅಷ್ಟು ದುಷ್ಟರಂತೂ ಖಂಡಿತ ಅಲ್ಲವೇ ಅಲ್ಲ.

...ಹಾಗಾದರೆ ಲಕ್ಷ್ಮಮ್ಮನಿಗೇನು ದುಷ್ಟರೆ ಅಥವಾ ಅವರಿಗೆ ಮರುಳೆ ಆ ರೀತಿ ಹೇಳಲಿಕ್ಕೆ?"

- ಅದೇ.

- ಅದರರ್ಥ, ಭಟ್ಟರಿಗೆ ಮರುಳಂತವೆ?

- ಅದೆ.

- ಆದರೆ ಒಂದು ನೋಡೂ, ಸಮೋಸಾ, ಅಂದಾಗಲೆಲ್ಲಾ ಅವರು.. ಮೋಸಾ ಶಬ್ದ...

...ನಿಮಗೆ ವರ್ಷ ಯಾಕಾಯ್ತು ಅಂತ! ತಮಾಶೆ ಮಾತಾಡಿದ್ದಕ್ಕೆಲ್ಲ ಅರ್ಥ ಸೂಚನೆ ಸಂಕೇತ ಮಣ್ಣು ಮಸಿ ಕಟ್ಟಿ, ಶಿ!

- ಹೌದು ಹೌದು ಮಾತಾಡುವುದೇ ಕಷ್ಟ ಮಾಡಬಾರದು.

- ನನ್ನ ಕೇಳಿದರೆ ಇಬ್ಬರನ್ನೂ ಆಲಿಸಬೇಕು. ಆಗಲೇ ತೀರ್ಮಾನ ಸಾಧ್ಯ.

-ನಿಮ್ಮನ್ನೀಗ ತೀರ್ಮಾನಕ್ಕೆ ಕರೆದವರು ಯಾರೆಂತ ಬೇಕಲ್ಲ.

- ಯಾರು ಯಾಕೆ ಕರೆಯಬೇಕು? ನಮ್ಮ ನಮ್ಮ ಅಂತರಂಗ ಇಲ್ಲವೆ?

- ಛೇಛೇಛೇ, ಭಟ್ಟರೆ, ನೀವೀಗ ಇರಬೇಕಿತ್ತು.

-ಅಯ್ಯೋ ಬಿಡು, ಒಂದು ಲೆಕ್ಕದಲ್ಲಿ ಸತ್ತದ್ದೇ ಒಳ್ಳೇದಾಯ್ತು.

…… ………

- ಮುಗಿಯಿತೆ ಅಥವಾ ಇನ್ನೂ ಉಂಟೆ?

…… ………

ಮುಗಿಯಿತು ಎಂದರೆ ಮುಗಿಯಿತು. ಎನ್ನುತ್ತ ಮುಂದುವರಿಸಿದಳು. ಆರುಂಧತಿ ಆದರೂ ಇನ್ನು ಸ್ವಲ್ಪವೇ ಸ್ವಲ್ಪ ಹೇಳಿಬಿಡುತ್ತೇನೆ. ಅವರು, ಆ ಲಕ್ಷ್ಮಮ್ಮ ಭಟ್ಟರ ಬಗ್ಗೆ ಒಂದು ಮಾತು ಕೇಳಿದ್ದರೆ ನನ್ನ ಬಳಿ! ನಾನೇ ಹೇಳಿದೆ ಅವರು ಹೇಗಿದ್ದಾರಂತ ವಿಚಾರಿಸುತ್ತೇನೆ. ವಿಚಾರಿಸಿ...'

'ವಿಚಾರಿಸಿಕೊಳ್ಳಿ. ನಿಮಗೆ ಬೇಕಿದ್ದರೆ ಪರಪುರುಷರ ಸಮಾಚಾರ ನನಗಂತೂ ಬೇಡ' ಎಂದರು! ಶಾಬಾಷ್ ಎನ್ನುತ್ತಿದ್ದೇನೇನೋ. ಆದರೆ ಮನಸ್ಸಿನೆದುರು ಆಶ್ನಾರ್ಣ ಭಟ್ಟರು, ಗೋಡೆಗೆ ಮುಖ ಮಾಡಿ ನರಳುತ್ತಿದ್ದಾರೆ.

`ನೀವು ಸಿಕ್ಕಿದ ಸಂಗತಿ ಅವರಿಗೆ...

ಈಗಲೂ ಮಾತನ್ನು ಅರ್ಧದಲ್ಲಿ ಕಡಿದು, 'ಸಿಕ್ಕಿದ್ದೆನಲ್ಲ, ಆಗಲೆ, ನಾನೆಲ್ಲಿ ಕಳೆದು ಹೋಗಿದ್ದೆ?'

ವಿಶಾಖಾ ಬೆನ್ ಕಡೆಗೆ ತಿರುಗಿ ಹಿಂದಿಯಲ್ಲಿ 'ನಾನಿಲ್ಲಿಗೆ ಬಂದ ಪುರಾಣ ಹೇಳಿದೆ ಅಂತಂದು ಮತ್ತೆ ನನ್ನತ್ರ ತಿರುಗಿ ಕನ್ನಡದಲ್ಲಿ ನಾತಾಡದೆ ಯಾವ ಕಾಲವಾಗಿತ್ತೋ, ಅಮ್ಮನ ಮನೆಗೆ ಬಂದ ಹಾಗಾಯ್ತು, ಎಂದರು.

ಬನ್ನಿ ಹಾಗಾದರೆ, ಊರಿಗೆ ಹೋಗುವ, ನಾನು ಕರೆದುಕೊಂಡು ಹೋಗುತ್ತೇನೆ'

ಎಲ್ಲಿ? ಯಾವ ಊರು? ಕುಂಟೆಮೇಲೆ ಹೋಗುವ ಕಾಲಕ್ಕೆ? ನಿಮಗೆ ಬೇರೆ ಉದ್ಯೋಗವಿಲ್ಲ. ಇನ್ನು ಹೋಗುವುದು ಒಂದೇ ಊರಿಗೆ, ಟಿಕೆಟು ಬರುವುದೇ ತಡ, ಜಾರುವುದೇ, ನಿಂತು ಗ್ಲಾಸು ಜೋಡಿಸುತ್ತ ಒಂದು ಲೆಕ್ಕದ ಜಾತಿಯೋ ಪಾತಿಯೋ, ಸಿಕ್ಕಿದ ಪ್ರೀತಿ ಬಿಟ್ಟುಕೊಳ್ಳದೆ ಅಲ್ಲಿಯೇ ಮನಸ್ಸು ಗಟ್ಟಿಮಾಡಿ ಉಳಿದರಲ್ಲ, ಅವರು ಗೆದ್ದರು. ಗುಣಗುಣಿಸಿ, ನನ್ನನ್ನು ಅಚ್ಚರಿಯ ಕೊಂಡದಲ್ಲಿ ಬೀಳಿಸಿ ಈ ಅಮ್ಮ ಒಬ್ಬರು ಇಲ್ಲದಿರುತ್ತಿದ್ದರೆ ಅಂಥವರು ಕುತ್ತಿಗೆಗೆ ಬಳ್ಳಿ ತೆಗೆದುಕೊಳ್ಳಬೇಕಿತ್ತು ಹ!.

' ಟ್ರೇಯಲ್ಲಿ ಗ್ಲಾಸು ಕಣಕಣಿಸುತ್ತ ಒಳನಡೆದರು ಲಕ್ಷ್ಮಮ್ಮ,

ತುಸು ಹೊತ್ತು ಮೂವರೂ ಹಾಗೆಯೇ, ಸುಮ್ಮನಿದ್ದೆವು.

ನಿಮ್ಮ ಸಮಯ ದಂಡ ಮಾಡಿದೆ... ವಿಧಿಯಿರಲಿಲ್ಲ'

ಇಲ್ಲ ಇದೂ ನಿಮಗೆ ಬೇಕಾದ್ದೆ ಇವತ್ತಿಗೆ ಸಾಕು, ಮತ್ತೆ ತಿಳಿಸಿ ಕೇಳಿ ಎಂದರು ವಿಶಾಖಾ ಬೆನ್.

ನಮ್ಮನ್ನು ಕಳಿಸಿಕೊಡಲು ಬಾಗಿಲವರೆಗೆ ಬಂದರು. ಹಾಗೆ ನೋಡಿದರೆ ಇನ್ನೊಂದು ಬಗೆಯ ಕ್ರೌಂಚಪಕ್ಷಿ. ಈ ವಿಶಾಖಾ ಬೆನ್, ಮದುವೆ, ವಿಧವೆ, ಮರು ಮದುವೆ, ವಿಚ್ಛೇದನ ಅಂತ-ಅದೂ ಆ ಕಾಲದಲ್ಲಿ ಎಲ್ಲವನ್ನೂ ಎದುರಿಸಿ ಒಳಗೂ ಹೊರಗೂ ಬಾಳಿದವರು, ಹುಟ್ಟಾ ಕನಸುಗಾತಿ, ತುಂಬಾ ಸುಂದರಿಯಾಗಿದ್ದರಂತೆ ಬೇರೆ. ಹೇಳಿದೆನಲ್ಲ, ವೃದ್ಧಾಪ್ಯದಲ್ಲಿಯೂ ಹೇಗಿದ್ದರು! ಅವರೊಡನೆ ಕೇಳಲು ಮಸ್ತು ಪ್ರಶ್ನೆ ತಯಾರು ಮಾಡಿಕೊಂಡಿದ್ದೆ. ಅವರ ವೈಯುಕ್ತಿಕ ಬದುಕಿನ ಬಗ್ಗೆಯೂ ಅವರು ಅದನೆಲ್ಲ ಬಾಯೇ ಬಿಡುವುದಿಲ್ಲವಂತೆ. ಆದರೂ ಸಾವಧಾನವಾಗಿ ಕೇಳಬೇಕಂತಿದ್ದೆ. ಎಲ್ಲ, ಛೆ, ಅಚಾನಕ್ ಈ ಲಕ್ಷ್ಮಮ್ಮ ಒಬ್ಬರು ಸಿಕ್ಕಿ, ಉಳಿದೇ ಹೋದುವು. ಇಷ್ಟಕ್ಕೂ ಅವರು ಮಾತಾಡಿದ ರೀತಿಯಾದರೂ ಹೇಗಿತ್ತು, ಸೂಕ್ಷ್ಮ, ವೈಯಕ್ತಿಕ ಪ್ರಶ್ನೆಗಳು ಹಣುಕಲು ಎಲ್ಲಿಯೂ ಎಣೆಯೇ ಸಿಗದ ಹಾಗೆ, ಇನ್ನೊಮ್ಮೆ ಹೋದಾಗಲಾದರೂ ಎತ್ತಿಕೊಳ್ಳುತ್ತಲೇ ಅದನ್ನೇ ಕೇಳಬೇಕು. ಆದರೆ ಅವರ ಮುಖದಲ್ಲಿನ ನಿರ್ಲಿಪ್ತತೆ ಆ ವಿಷಾದ ಎಣಿಸಿದರೆ... ಅಯ್ಯಮ್ಮ, ಕೇಳಲು ನನಗೆ ಉಸಿರು ಹೊರಟರೆ ಸಾಕು...

.....ದೀರ್ಘ ನಿಟ್ಟುಸಿರುಬಿಟ್ಟು ನೋಡಿದರೂ ನೋಡುತ್ತಿಲ್ಲದ ಭಾರ ನೋಟದಲ್ಲಿ ಸುಮ್ಮನೆ ಕುಳಿತಳು ಆರುಂಧತಿ,

ಹೌದು

- ಬಿಡು, ಅದರ ಸ್ವಂತ ವಿಷಯ ತಿಳಿದು ನಾವೇನು ಸಾಯಬೇಕೀಗ?

- ಅದೆ..



'…….

ಇಕ ಇಲ್ಲಿ ನೋಡು, ನನ್ನ ಪ್ರಕಾರ ಅದೆಲ್ಲ ಬೇಡ. ಬದಲು ನೀನು, ಇದನ್ನು ಕೇಳು... ಅವರು ಹೇಳಿಯಾರು. ಸತ್ಯಕ್ಕೂ ನಡೆದದ್ದು ಏನು ಅಂತ... ಈ ಲಕ್ಷ್ಮಮ್ಮನದು

- ಅರರೆ! ಸತ್ಯಕ್ಕೂ ಅಂದರೆ?

- ಸತ್ಯವ ಮಣ್ಣ, ಅದನ್ನಾದರೂ ತಿಳಿಕೊಂಡು ಏನು ಮಾಡುತ್ತೀರಿ. ನಡೆಯಿರಿ ನಡೆಯಿರಿ. ಊಟವಾಗಲಿ ಮೊದಲು, ಎಷ್ಟು ಸತ್ಯ ಬೇಕು ಏನು, ಕಡೆಗೆ ನೋಡುವ ಹಿರಿಯರೊಬ್ಬರು ದನಿ ತೆಗೆದರು.

# ದಾಂಪತ್ಯ ಗೀತೆ

**- ವಸುಮತಿ ಉಡುಪ**

ಘನಘೋರ ಯುದ್ಧ ಮುಕ್ತಾಯವಾದ ನಂತರ ನೆಲೆಸುವ ಮಸಣ ಮೌನದಂತಾ ಒಂದು ವಿಲಕ್ಷಣ ಮೌನ ಮನದೊಳಗೆ, ನಾಯಿ, ನರಿ, ಹದ್ದುಗಳೂ ಖಾಲಿಯಾಗಿ ಭಣಗುಟ್ಟುವ ವಿಕ್ಷಿಪ್ತ ಶಾಂತಿ ಎದೆಯೊಳಗೆ ತೀರ್ಮಾನ ತೆಗೆದುಕೊಳ್ಳುವವರೆಗೆ ತುಮುಲ, ವಿಪ್ಲವ. ಒಮ್ಮೆ ನಿರ್ಧಾರಕ್ಕೆ ಬಂದ ನಂತರ ವೃಥಾ ತಾನು ನರಳಿದ್ದಲ್ಲದೆ ಹೆತ್ತವರನ್ನೂ ಅಗ್ನಿಕುಂಡಕ್ಕೆ ತಳ್ಳಿದ್ದರ ಕುರಿತು ಪಶ್ಚಾತ್ತಾಪದ ಭಾವ. ಬಗಲಲ್ಲಿ ಮಲಗಿದ ಎರಡು ವರ್ಷ ತುಂಬಲಿರುವ ಕಂದ ನಿದ್ದೆ ಮಾಡಿ ಬಹಳ ಹೊತ್ತಾಗಿದ್ದರೂ ಕೈ ಅನೈಚ್ಛಿಕವಾಗಿ ಚುಕ್ಕು ತಟ್ಟುತ್ತಿತ್ತು. ಮನಸ್ಸು ಎಲ್ಲೋ ಕಳೆದುಹೋಗಿತ್ತು. ಕಳೆದ ಆರು ತಿಂಗಳಿಂದ ಅಮ್ಮನನ್ನು ತಾನು ಎಷ್ಟು ಬಳಲಿಸಿಬಿಟ್ಟೆ ಎಂದು ನೆನೆದರೆ ಇದೀಗ ರಮ್ಯಳಿಗೆ ಕಳವಳವಾಗುತ್ತದೆ. ಆದರೆ ಅಮ್ಮನನ್ನು ಬಿಟ್ಟು ಮಾನಸಿಕ ತುಮುಲವನ್ನು ಮತ್ತಾರಲ್ಲಿ ಹಂಚಿಕೊಳ್ಳಬೇಕು? ತನ್ನ ಮೇಲೆ ಅನಿರೀಕ್ಷಿತವಾಗಿ ಬಂದೆರಗಿದ ವಿಪತ್ತಿಗೆ ತನಗಿಂತಾ ಹೆಚ್ಚು ಕೊರಗು ಹಚ್ಚಿಕೊಳ್ಳುವವಳು ಅಮ್ಮನಲ್ಲದೆ ಮತ್ಯಾರು? ಕಣ್ಣೀರೊರೆಸುವುದಕ್ಕೆ ಅಮ್ಮನ ಸೆರಗಿಗಿಂತಾ ಅತ್ಯಮೂಲ್ಯವಾದದ್ದು ಮತ್ತೇನಿದೆ? ಮುಖ ಮುಚ್ಚಿಕೊಳ್ಳುವುದಕ್ಕೆ ಅಮ್ಮನ ತೊಡೆಗಿಂತಾ ಅವಲಂಬನೆ ಬೇರೇನು?

ಟೂರು ಮುಗಿಸಿ ನಾಳೆ ರಾತ್ರಿ ವಾಪಸು ಬರುವುದಾಗಿ ಫೋನ್ ಮಾಡಿದ್ದಾನೆ ಗಂಡ. ಈ ರಾತ್ರಿ, ನಾಳೆ ಮತ್ತೊಂದು ರಾತ್ರಿ ಅಲ್ಲಿಗೆ ಈ ಮನೆಯ ಋಣ ಮುಗಿದಂತೆ. ತಂತು ಕಡಿದಂತೆ. 'ಬೇಡ'.. ಎಂದು ತಡೆಯಬಹುದೇ ಗಂಡ? ಯಾಕೋ ಆ ನಂಬಿಕೆಯ ಬುಡ ಭದ್ರವಾಗಿಲ್ಲ. ಅಮ್ಮನ ಏಕಮಾತ್ರ ಸುಪುತ್ರ ಅಮ್ಮ ಹಾಕಿದ ಗೆರೆ ದಾಟದ ಪ್ರೀತಿಪಾತ್ರ. ತಪ್ಪೇನಿಲ್ಲ. ಅವನ ಅಮ್ಮ ಕಷ್ಟ ಸೋಸಿ ಅವನ ಸಾಕಿದವರು. ದೊಡ್ಡ ಮಾಡಿದವರು. ಅವರು ಹೇಳಿದಂತೆ ಕೇಳಿದರೆ ಅದರಲ್ಲಿ ಹುಳುಕು ಹುಡುಕುವ ಸ್ವಭಾವ ರಮ್ಯಳಿಗಿಲ್ಲ. ಆದರೆ ಯಾವುದನ್ನು ಕೇಳಬೇಕು, ಯಾವುದನ್ನು ಕೇಳಬಾರದು ಎನ್ನುವ ಯುಕ್ತಾಯುಕ್ತ ಪರಿಜ್ಞಾನ ಅವನಿಗಿದೆಯೇ? ಇದು ಸರಿ, ಇದು ತಪ್ಪು ಅನ್ನುವುದಕ್ಕೆ ನಿರ್ದಿಷ್ಟ ಮಾನದಂಡ ಯಾವುದಿದೆ? ಒಬ್ಬರಿಗೆ ತಪ್ಪಾಗಿ ಕಂಡಿದ್ದು ಮತ್ತೊಬ್ಬರಿಗೆ ಸರಿ ಅನ್ನಿಸಬಹುದು. ಎಲ್ಲಾ ಅವರವರ ದೃಷ್ಟಿಕೋನ. ಇರುವ ಒಬ್ಬ ಮಗ ಸುಖವಾಗಿ, ನೆಮ್ಮದಿಯಾಗಿ, ಗೆಲುವಾಗಿ ಬದುಕಬೇಕೆಂದು ಹೆತ್ತ ಹೊಟ್ಟೆ ನಿರೀಕ್ಷಿಸಿದರೆ ಅದರಲ್ಲಿ ಅಸ್ವಾಭಾವಿಕತೆ ಏನುಂಟು?

ತಾನು ಇಷ್ಟು ಔದಾರ್ಯದಿಂದ ಯೋಚಿಸುತ್ತಿರುವುದರ ಕುರಿತು ರಮ್ಯಳಿಗೇ ಆಶ್ಚರ್ಯವಾಗುತ್ತದೆ. ಮೋಹ ಕಡಿದುಕೊಳ್ಳುವವರೆಗೆ ನೋವು. ಒಮ್ಮೆ ಧೃಡ ನಿರ್ಧಾರ

ಮಾಡಿ ಕಡಿದುಕೊಂಡಿದ್ದಾದರೆ ಆಮೇಲೆ ಯಾವ ನೋವಿಗೂ ಸಂಕಟಕ್ಕೂ ಆಸ್ಪದವಿಲ್ಲ. ಆಸ್ಪದ ಕೊಡಬಾರದು. ಬೇಕಾದ್ದೊಂದೇ, ಗಟ್ಟಿ ಮನಸ್ಸು ಇಂತಾ ನೋವನ್ನು ಬೇಕಾದಷ್ಟು ಜನ ಅನುಭವಿಸಿದವರಿರಬಹುದು. ಲೋಕದಲ್ಲಿ ಯಾವ ಕತೆ ಹೊಸದಿದೆ?

ಬೆಡ್ ಲೈಟಿನ ಮಂಕು ಬೆಳಕಿನಲ್ಲಿ ಕೋಣೆಯೊಳಗೆ ಒಂದು ನಿಗೂಢ ವಾತಾವರಣ. ಸ್ಪಷ್ಟ ಹಾಗೂ ಅಸ್ಪಷ್ಟ. ಅವರವರ ಭಾವಕ್ಕೆ ತಕ್ಕಂತೆ ನೋಟ, ಸ್ವರ್ಗದ ತುಣುಕು ಅನಿಸುತ್ತಿದ್ದುದು ಇದೇ ಶಯನಗೃಹ, ನರಕಕ್ಕೆ ತಳ್ಳಿದ ಕ್ಷಣಕ್ಕೆ ಸಾಕ್ಷಿಯಾದದ್ದೂ ಇದೇ. ಮುಗಿಲಲ್ಲಿ ಸಂಚರಿಸುವವರನ್ನು ನೆಲ ಕಚ್ಚುವಂತೆ ಮಾಡಲು ವಿಧಿಗೆ ಎಷ್ಟು ಹೊತ್ತು ಬೇಕು? ಚಿಟಿಕೆ ಹೊಡೆಯುವಷ್ಟು ಹೊತ್ತು? ಓಹೋ, ಬೇಕಾದಷ್ಟಾಯ್ತು ಅನ್ನುತ್ತದೆ ರಮ್ಯನ ಅನುಭವ. ಯಾವ ಸುಖವೂ ಶಾಶ್ವತವಲ್ಲ ಎನ್ನುವ ಸತ್ಯ ಈ ವಯಸ್ಸಿಗೇ ಅವಳಿಗೆ ಮನವರಿಕೆಯಾಗಿದೆ. ಹಾಗೆಯೇ ದುಃಖವೂ ಅಶಾಶ್ವತ ಎನ್ನುವಂತಾದರೆ? ಅದಿನ್ನೂ ಅನುಭವಕ್ಕೆ ಬರಬೇಕಿದೆ.

ಮಹಡಿಯ ಮೇಲಿರುವ ತಮ್ಮ ಈ ಏಕಾಂತಗೃಹ ಅಂದರೆ ರಮ್ಯನಿಗೆ ಬಲು ಅಚ್ಚುಮೆಚ್ಚು ತನ್ನ ಅಭಿರುಚಿಗೆ ತಕ್ಕಂತೆ ಅದನ್ನು ಶೃಂಗರಿಸಿಟ್ಟುಕೊಂಡಿದ್ದಾಳೆ. ಈ ಸ್ವರ್ಗ ತ್ರಿಶಂಕುಸ್ವರ್ಗವಾಗುವುದೆಂಬ ಸಣ್ಣ ಮುನ್ಸೂಚನೆಯಾದರೂ ಕಂಡಿದ್ದಿತ್ತೇ? ಇಲ್ಲ. ಈ ಕ್ಷಣಗಳು ಅಮರ ಎನ್ನುವ ಭ್ರಮೆ. ಬದುಕೇ ಒಂದು ಭ್ರಮೆ ಎನ್ನುವ ಅರಿವಿಲ್ಲದೆ ಈ ಭ್ರಮೆ ಸೃಜಿಸಿದ ಮಾಯೆಯ ಆವರಣದಲ್ಲಿ ನೂಚ್ಚಗೆ, ಬೆಚ್ಚಗೆ ಇದ್ದೇವೆಂಬ ಮೈ ಮರೆವು.

ನಿಟ್ಟುಸಿರಿಡುತ್ತಾ ಅಂಗಾತನೆ ಮಲಗಿದಳು ರಮ್ಯ, ಕಣ್ಣೆದುರಿನ ಗೋಡೆಯ ಮೇಲೆ ಅಣಕಿಸುವಂತೆ ನೋಡುತ್ತಿದೆ ವಿಶ್ವಾಮಿತ್ರ ಮೇನಕೆಯರ ಚಿತ್ರಪಟ ಕಮಂಡಲದ ಕೈಯನ್ನು ನಿರಾಕರಣೆಯ ಪರಿಯಲ್ಲಿ ಉದ್ದಕ್ಕೆ ನೀಡಿ, ಒಲಿದು ಕೂಡಿದವಳ ಕಡೆ ಮುಖ ತಿರುವಿ, ಹೊರಡಲಣಿಯಾಗಿ ನಿಂತಿರುವ ವಿಶ್ವಾಮಿತ್ರ ಮಗುವನ್ನು ಮುಂದೆ ಹಿಡಿದು ಆತಂಕದ ಮುಖ ಹೊತ್ತು ನಿಂತಿರುವ ಮೇನಕೆ, ಬೆಳಿಗ್ಗೆ ಎದ್ದೊಡನೆ ದಿನಾ ಇದೇ ಚಿತ್ರ ಕಣ್ಣಿಗೆ ಬಿದ್ದು ಬಿದ್ದು ಅದರ ಪರಿಣಾಮ ತನ್ನನ್ನು ಸುತ್ತಿಕೊಂಡಿತೇ? ಎದ್ದ ಕೂಡಲೆ ಮೊದಲು ದೇವರ ಪಟ ನೋಡಬೇಕೆಂದು ದೊಡ್ಡವರು ಇದಕ್ಕೇ ಹೇಳುವುದೇ? ಅಥವಾ ಕಣ್ಣೆದುರು ಬೀಸಣಿಗೆಯಂತೆ ಜೋಡಿಸಿ ಹಿಡಿದ ಕೈ? ಚಿಕ್ಕಂದಿನಲ್ಲಿ ಅಮ್ಮ ಉರು ಹಾಕಿಸಿದ, 'ಕರಾಗ್ರೇ ವಸತೇ ಲಕ್ಷ್ಮೀ' ಮರೆತಿಲ್ಲ. ಆದರೆ ಅದನ್ನು ಪರಿಪಾಲಿಸಬೇಕೆಂದು ಅನಿಸಿದ್ದೂ ಇಲ್ಲ. ಸಂಕಟ ಬಂದಾಗ ಮಾತ್ರಾ ವೆಂಕಟರಮಣ. ಈ ಪಟದ ಕತೆಗೂ ತನ್ನ ಬದುಕಿಗೂ ಇರುವ ವ್ಯತ್ಯಾಸ ಎಂದರೆ ವಿಶ್ವಾಮಿತ್ರನ ಸ್ಥಾನದಲ್ಲಿ ತಾನು ನಾಲ್ಕು ವರ್ಷಗಳ ದಾಂಪತ್ಯ ಜೀವನವನ್ನು ತುಂಡರಿಸಿಕೊಂಡು ಹೋಗಬೇಕೆನ್ನುವ ತೀರ್ಮಾನ ತನ್ನದು, ಗಂಡ ಮನೆಯಲ್ಲಿಲ್ಲದ ಅವಧಿಯಲ್ಲಿ ನಡೆದ ಘಟನಾವಳಿಗಳಿಂದ ರೂಪು ತಳೆದದ್ದು ಬಲವಾದದ್ದು. ಕರುಳ ತುಣುಕಿನ ಕುರಿತು ತನ್ನ ಒಡಲು ಬೇಯುತ್ತಿದೆ. ಅದನ್ನು ನಿರಾಕರಿಸಿ ಹೋಗುವ ಮನೋಬಲ ತನ್ನಲ್ಲಿಲ್ಲ. ಮಗಳು ತನ್ನೊಡನೆ ಇರುತ್ತಾಳೆ. ಇದರ ಬಗ್ಗೆ ಆಕ್ಷೇಪ ಬರಲಿಕ್ಕಿಲ್ಲ. ಮಾತ್ರವಲ್ಲ

ನಿರಾಳವೆನಿಸಲೂಬಹುದು. ಈ ಅನಿಸಿಕೆಯೊಂದಿಗೆ ಮನಸ್ಸಿಡೀ ಆಕ್ರಮಿಸಿಕೊಂಡ ವಿಷಣ್ಣಭಾವ, ಕಣ್ಣೀರು ಬರುತ್ತಿಲ್ಲ ರಮ್ಯನಿಗೆ, ಒಡಲ ತಾಪದಲ್ಲಿ ಕುದಿಕುದಿದು ಆವಿಯಾಗಿಹೋಯ್ತ? ಅನಿರೀಕ್ಷಿತವಾಗಿ



ಆಕಾಶ ಕಳಚಿ ನೆತ್ತಿಯ ಮೇಲೆ ಬಿದ್ದ, ಸುಳಿವು ನೀಡದೆ ಸಿಡಿಲೆರಗಿದ ಆ ನೆನಪು ಅವಳ ಮನಸ್ಸಿನಲ್ಲಿ ಇನ್ನೂ ಹಸಿಯಾಗಿದೆ. ಬಿಸಿಯುಗುಳುತ್ತಿದೆ. ಆರೇಳು ತಿಂಗಳ ಹಿಂದಿನ ಒಂದು ಮುಸ್ಸಂಜೆ. ಪತಿಯ ಆಪ್ತಸ್ನೇಹಿತನ ಮದುವೆಯ ಆರತಕ್ಷತೆಗೆಂದು ಅಲಂಕರಿಸಿಕೊಳ್ಳುವ ಸಡಗರ, ಪೀತಾಂಬರ ಉಟ್ಟು, ಆಭರಣ ತೊಟ್ಟು, ನೆಕ್ಲಸಿನ ಕೊಂಡಿ ಹಾಕಲು ಗಂಡನ ಹತ್ತಿರ ಕೇಳಿಕೊಂಡ ಆ ಗಳಿಗೆ ವಿಷಗಳಿಗೆಯಾದೀತೆಂಬ ಅರಿವು ಮನಸ್ಸಿನಲ್ಲಿ ತೃಣಮಾತ್ರವೂ ಇರಲಿಲ್ಲ. ನಿಲುಗನ್ನಡಿಯ ಎದುರು ನಿಂತು ತನ್ನ ಚಂದ ನೋಡಿಕೊಳ್ಳುತ್ತಾ, ತನ್ನ ತಾನೇ ಮೆಚ್ಚುತ್ತಾ, ನಿಡುಜಡೆಯನ್ನು ಮುಂದಕ್ಕೆಳೆದುಕೊಂಡು ಬಳುಕಿ ನಿಂತಿದ್ದಳು ಮುಗ್ಧ, ಕೊಂಡಿ ಹಾಕಲು ಹಿಂಬದಿಗೆ ಬಂದು ನಿಂತ ಗಂಡನ ಬೆರಳುಗಳು ಅಲ್ಲೇ, ಹಾಗೇ, ತಟಸ್ಥವಾಗಿದ್ದರ ಅರಿವಾಗಿ ಕೀಟಲೆಯ ನಗುವಿನೊಂದಿಗೆ ತನ್ನ ಬೆಂಭಾಗದಲ್ಲಿ ಪ್ರತಿಫಲಿಸುತ್ತಿದ್ದ ಅವನ ಮುಖ ನೋಡಿದರೆ ಅಲ್ಲಿ ಗಾಬರಿ, ಆತಂಕ.

"ಏನಾಯ್ತು?" ಕೊರಳು ಕೊಂಕಿಸಿ, ಕೇಳಿದ್ದಳು ರಮ್ಯ ಅವನು ಉಗುಳು ನುಂಗಿದ್ದ. ತಡವರಿಸಿದ್ದ.

"ಇಲ್ಲೇನೋ ಬಿಳಿಕಲೆ ಕಾಣ್ತಿದೆ. ನೋಡ್ಕಂಡಿಲ್ವಾ ನೀನು?" ಪಸೆಯಾರಿದ ಗಂಟಲಲ್ಲಿ ಕೇಳಿದ್ದ. ಸರ್ರನೆ ಆರಿತ್ತು ಎದೆಬಡಿತ. ಕುತ್ತಿಗೆಯ ಹಿಂಭಾಗ ಕಣ್ಣಿಗೆ ಬೀಳುವುದು ಹೇಗೆ? ಯಾರಾದರೂ ನೋಡಿ ಹೇಳಬೇಕೇ ವಿನಾ, ಆಗಲೂ ಮುಚ್ಚಿಕೊಂಡಿರುತ್ತದೆ ಜಡೆ.

"ಏನಾದ್ರೂ ಗಾಯ ಆಗಿತ್ತೇನೇ? ಗುಳ್ಳೆ, ಗಿಳ್ಳೆ?"

ಇಲ್ಲ, ಏನಾಗಿದ್ದೂ ನೆನಪಿಲ್ಲ. ಅಂತಾದ್ದೇನೂ ಆಗಿಲ್ಲ. ಮತ್ತೇನದು ಕಲೆ? ಬಿಳಿಕಲೆ? ಕುತ್ತಿಗೆ ತಿರುಗಿಸಿ ನೋಡಿಕೊಳ್ಳಲು ಯತ್ನಿಸುತ್ತಾ ಸೋತು, ಕಣ್ಣುಗಳು ತುಂಬಿಕೊಂಡು,

"ಏನೋ ಅಲರ್ಜಿ ಆಗಿರ್ಬೇಕು, ಬಿಡು, ಎಲ್ಲಾ ಸರಿಯಾಗುತ್ತೆ. ಅಷ್ಟಕ್ಕೆ ಅಳು ಬಂದ್ಬಿತ್ತು. ಹುಚ್ಚಿ..."

ಸಮಾಧಾನ ಮಾಡಿದ್ದು ಗಂಡ ಪ್ರಸಿದ್ಧ ಔಷಧಿ ಕಂಪೆನಿಯೊಂದರ ಮಾರಾಟ ಪ್ರತಿನಿಧಿಯಾಗಿರುವ ಅನುಭವಿ. ಏನೂ ಆಗಿರಲ್ಲ. ಅಲರ್ಜಿ ಎಂತದೋ ಅಲರ್ಜಿ. ಪದೇ ಪದೇ ಆ ಪದವನ್ನು ಉರು ಹಾಕಿಕೊಂಡಿದ್ದಳು ರಮ್ಯ, ಏನಾಗಿಲ್ಲವೆಂಬಂತೆ, ಎಲ್ಲಾ ಮಾಮೂಲೆನ್ನುವಂತೆ, ಮದುವೆಯ ಆರತಕ್ಷತೆಗೆ ಹೋಗಿ ಬಂದಿದ್ದರೂ

ಮನಸ್ಸಿನ ಉತ್ಸಾಹ ಬತ್ತಿಹೋಗಿತ್ತು. ಮುಖ ಬಿಳಿಚಿಕೊಂಡಿತ್ತು. ಭೀತಿಯ ಭೂತ ದೇಹ ಹೊಕ್ಕಿತ್ತು. ತಾಣವನ್ನು ಹೀರಿತ್ತು. ಜಡೆಯ ಮರೆಯಲ್ಲಿದ್ದ, ಹಾಗಿದೆ ಎಂದು ಗಂಡ ಹೇಳಿದ್ದ, ಆ ಕಲೆ ಎಲ್ಲಿ, ಯಾರ ಕಣ್ಣಿಗೆ ಬೀಳುತ್ತದೆಯೋ ಎನ್ನುವ ಆತಂಕ. ಎದೆಗುದಿ ಯಾಕಾಯ್ತು ಹೀಗೆ? ಏನಾಯ್ತು? ಇಡೀ ರಾತ್ರಿ ನಿದ್ದೆ ಇಲ್ಲದೆ ಬಿಸುಸುಯ್ತು. ವಿಪರೀತದ್ದೇನೂ ಆಗಿರದೆ ಇರಲಿ ಎಂದು ದೇವರಲ್ಲಿ ಬೇಡಿಕೆ. ಹರಕೆ, ಬೆಳಿಗ್ಗೆ ಯಾವತ್ತಿಗಿಂತಾ ಮುಂಚೆ ಎದ್ದು ಬಂದವಳ ಮುಖ ನೋಡಿ ಅತ್ತೆ ಕೇಳಿದ್ದರು.

"ಯಾಕೇ ಮುಖ ಒಂಥರಾ ಆಗಿದೆ? ಹುಷಾರಿಲ್ವಾ? ಇಷ್ಟು ಬೇಗ ಯಾಕೆ ಎದ್ದಿಟ್ಟೆ?"



ಅತ್ತೆ ಹಾಗೇ, ಊರೂರು ಸುತ್ತುವ ವೃತ್ತಿಯಲ್ಲಿರುವ ಮಗ ಮನೆಯಲ್ಲಿದ್ದಾಗ ಸೊಸೆ ಅವನ ಪಕ್ಕ ಬಿಟ್ಟಗಲಬಾರದು ಎನ್ನುವ ವಾಂಛಲ್ಯ, ಸೂರ್ಯ ನೆತ್ತಿಯ ಮೇಲೆ ಬರುವವರೆಗೆ ಗಂಡಹೆಂಡಿರು ಮಹಡಿಯಿಂದ ಇಳಿಯದಿದ್ದರೂ ಮುನಿಸಿಲ್ಲ. ಮತ್ಸರ ಇಲ್ಲ. ಅತ್ತೆ ಬೇರೆ ಅಲ್ಲ, ಅಮ್ಮ ಬೇರೆ ಅಲ್ಲ.

* * * *

"ಅತ್ತೆ ಬೇರೆ ಅಲ್ಲ, ಅಮ್ಮ ಬೇರೆ ಅಲ್ಲ' ಜಂಭ ಕೊಚ್ಚುವಾಗಲೆಲ್ಲಾ ವಿಧಿಮರೆಯಲ್ಲಿ ನಿಂತು ನಗುತ್ತಿತ್ತೇನೋ, ಅತ್ತೆಗೆ ಹೇಳುವ ಮನಸ್ಸಿಲ್ಲ, ಹೇಳದೆ ಮುಚ್ಚಿಟ್ಟುಕೊಳ್ಳುವಂತಿಲ್ಲ. ಲ್ಯುಕೋಡರ್ಮಾ ಎಂದು ತಜ್ಞವೈದ್ಯರು ಗುರ್ತಿಸಿದ್ದರು. ಮಾತ್ರೆ ಮುಲಾಮು, ಬಿಸಿಲಲ್ಲಿ ನಿಲ್ಲುವ ಚಿಕಿತ್ಸಾಕ್ರಮ, ಒಂದು ಮನೆಯಲ್ಲಿದ್ದುಕೊಂಡು ಮುಚ್ಚಿಟ್ಟುಕೊಳ್ಳುವುದು ಹೇಗೆ? ಅಮ್ಮನಿಗೆ ಈ ಸಂಗತಿ ತಿಳಿಸಬಾರದೆಂಬ ವಿಷಯ ಮಗನಿಗೆ ಪಥ್ಯವಾದದ್ದೇನಲ್ಲ. ದಿನನಿತ್ಯದ ಕ್ಷುಲ್ಲಕ ಸಂಗತಿಗಳನ್ನೂ ಅಮ್ಮನೊಡನೆ ಹಂಚಿಕೊಳ್ಳುವವನು ಇಂತಾದ್ದನ್ನು ಹೊಟ್ಟೆಯೊಳಗಿಟ್ಟುಕೊಳ್ಳಬಲ್ಲನೇ? ಸುದ್ದಿ ಕೇಳಿ ಅತ್ತೆ ತಲ್ಲಣಿಸಿಹೋದರು. ಆರಿಸಿ ಆಯ್ದುಕೊಂಡ ಅಪರೂಪದ ರತ್ನ ತನ್ನ ಸೊಸೆ ಎನ್ನುವ ಗರ್ವಕ್ಕೆ ಮುಳ್ಳು ಚುಚ್ಚಿದಂತಾಗಿರಬೇಕು.

"ನಿಮ್ಮ ವಂಶದಲ್ಲಿ ಯಾರಿಗಾದ್ರೂ ಈ ಖಾಯಿಲೆ ಇತ್ತೇನೇ?" ಎನ್ನುವ ಮೊದಲ ಪ್ರತಿಕ್ರಿಯೆಯಲ್ಲೇ ಸ್ಪಷ್ಟ ಅಸಹನೆ ಗುರ್ತಿಸಿ ಕಂಪಿಸಿದಳು ರಮ್ಯ.

"ಇಲ್ಲ, ನಂಗೊತ್ತಿಲ್ಲ..." ಎನ್ನುವಾಗ ಗಂಟಲು ಬತ್ತಿಹೋಗಿತ್ತು.

ಅಮ್ಮನಿಗೆ ಫೋನು.

"ಬಾ ಅಮ್ಮಾ, ತಕ್ಷಣ ಬಾ.."

ಮರುಬಸ್ಸಿಗೆ ಅನ್ನುವಂತೆ ಧಾವಿಸಿ ಬಂದಿದ್ದಳು ಅಮ್ಮ. ತನ್ನ ಕಣ್ಣೀರಿನೊಂದಿಗೆ ಅಮ್ಮನ ಕಣ್ಣೀರು ಬೆರೆತು, 'ಯಾಕೆ ಹೀಗಾಯ್ತು? ದೇವರು ಯಾಕಿಂತಾ ಶಿಕ್ಷೆ ಕೊಟ್ಟ?' ಅಮ್ಮ ಕಂಗೆಟ್ಟಿದ್ದಳು. ಹೀಗೆ ಕಂಗೆಟ್ಟಿದ್ದರೂ ಮಗಳ ಬೆನ್ನು ತಡವಿ ಸಮಾಧಾನಿಸಿದ್ದಳು.

"ಹೆದರಬೇಡ ಪುಟ್ಟಿ, ಈಗೆಲ್ಲಾ ಎಂತೆಂತಾ ಖಾಯಿಲೆಗೂ ಔಷಧಿ ಕಂಡುಹಿಡಿದಾರೆ. ಇದೆಲ್ಲಾ ಏನು ಮಹಾ? ಇನ್ನೂ ಈಗ ಶುರುವಾಗಿದೆ."

ಯಾವಾಗ ಶುರುವಾಗಿದ್ದೋ ಯಾರಿಗೆ ಗೊತ್ತು? ಗಮನಿಸಿದವರು ಯಾರು?

"ಹೀಗೇ ಹರಡ್ತಾ ಹೋದ್ರೆ ಏನು ಗತಿ? ಹೊರಗಿನೋರಿಗೆ ಹ್ಯಾಗೆ ಮುಖ ತೋರಿಸ್ತಮ್ಮಾ ನಾನು?"

"ಏನಾಗಲ್ಲ ಕಣೇ, ದೇವಿದಾನೆ. ಏನೇನೂ ಆಗಲ್ಲ"

ಅಸಹಾಯಕ ಜೀವಗಳು ಪರಸ್ಪರ ತೆಕ್ಕೆ ಹಾಕಿಕೊಂಡು ಒಬ್ಬರಿನ್ನೊಬ್ಬರ ಅವಲಂಬನೆಯಲ್ಲಿ ಮಾನಸಿಕ ಬಲವನ್ನು ಒಗ್ಗೂಡಿಸಿಕೊಳ್ಳಲು ಪಡುತ್ತಿದ್ದ ಆ ಹಾಡೋ? ಸುಳ್ಳೇ ಗಂಡನನ್ನು ದೂರಬಾರದು, ಪರಿಪರಿಯಲ್ಲಿ ಸಾಂತ್ವನ ಹೇಳಿದ್ದ. 'ಯಾವ ಕಾರಣಕ್ಕೂ ನಿನ್ನ ಮೇಲಿನ ಪ್ರೀತಿ ಕಮ್ಮಿಯಾಗೊಲ್ಲ' ಅಂದಿದ್ದ. ತನ್ನ ಸುರೂಪ



ಮೂಲಕಾರಣವಾಗಿ ಅವನು ತನ್ನನ್ನು ಪ್ರೀತಿಸುವುದಕ್ಕೂ, ಆರಾಧಿಸುವುದಕ್ಕೂ, ಕರ್ತವ್ಯದ ಭಾವನೆಯಿಂದ ಆರೋಪಿಸಿಕೊಂಡ ಸಹಬಾಳ್ವೆಗೂ ಅಂತರ ಇರುವುದಿಲ್ಲವೇ? ಈ ಭಾವನೆ ಕೂಡಾ ಶಾಶ್ವತವಾಗಿರುವುದೆಂದು ನಂಬುವುದು ಹೇಗೆ? ರಮ್ಯ ನಾನಾ ಚಿಂತೆಗಳಿಂದ ಸೊರಗಿದಳು. ಬಳಲಿದಳು. 'ನಾಳೆ ತನ್ನ ಮಗಳಿಗೂ ಹೀಗಾದರೆ?' ಎನ್ನುವ ಸುಡುಸುಡುವ ಬೆಂಕಿಯಂತಾ ವಿಚಾರದಿಂದ ಎದೆ ಝುಗ್ಗನಿಸಿ, ಈ ಥರದ ಮಾನಸಿಕ ನರಳಾಟಕ್ಕಿಂತಾ ಸಾವೇ ವಾಸಿ ಎನ್ನುವಂತಾ ಭಾವ ಕೂಡಾ ಮನಸ್ಸಿನಲ್ಲಿ ಸುಳಿಯತೊಡಗಿ, ಏನೂ ಅರಿಯದ ಮುಗ್ಧ ಕಂದನ ಮುಖ ನೋಡುತ್ತಿದ್ದಂತೆ ಸಾವಿನ ಯೋಚನೆ ಹಿಂದೆ ಸರಿಯುತ್ತಿತ್ತು. ಸತ್ತು ಸಾಧಿಸುವುದೇನು ಅನಿಸುತ್ತಿತ್ತು. ಎಲ್ಲಾ ಮುನ್ನಿನಂತೆ ಸರಿಯಾಗಲೂಬಹುದಲ್ಲವೇ? ಯಾಕಾಗಬಾರದು? ಅಮ್ಮ ಹೇಳಿದಂತೆ, ಗಂಡ ಹೇಳುವಂತೆ, ಈಗ ಎಂತೆಂತಾ ಖಾಯಿಲೆಗೂ ಔಷಧಿಗಳಿರುವಾಗ ಇದೇನು ಮಹಾ? ವಾಸ್ತವಕ್ಕೆ ಇದು ಖಾಯಿಲೆಯೇ ಅಲ್ಲ. ದೈನಂದಿನ ಜೀವನಕ್ಕೆ ಯಾರ ಅಡ್ಡಿಯೂ ಇಲ್ಲ. ಚರ್ಮಕ್ಕೆ ಬಣ್ಣ ನೀಡುವ ವರ್ಣದ್ರವ್ಯದ

ಕೊರತೆಯಿಂದಾದ ಬಣ್ಣಗೆಡುವಿಕೆ ಅದಕ್ಕೇಕೆ ಅಂಜಬೇಕು? ಬಾಹ್ಯರೂಪ ಮಾತ್ರಾ ಈ ಜಗತ್ತಲ್ಲಿ ಮುಖ್ಯವೇ? ಏನೂ ಆಗಿಲ್ಲ ಅಂದುಕೊಂಡರೆ ಏನಾಗಿಲ್ಲ. ಮದುವೆಯಾಗಿ, ಒಂದು ಮಗುವಿನ ತಾಯಿಯಾಗಿ, ತನ್ನನ್ನು ತಾನು ಸಮಾಧಾನಿಸಿಕೊಳ್ಳಲು ಯತ್ನಿಸುತ್ತಾಳೆ ರಮ್ಯಾ, ಆದರೆ ಸಮಾಧಾನ ಸುಲಭದಲ್ಲಿ ಕೈಗೆಟಕುವಂತೆ ಕಾಣುತ್ತಿಲ್ಲ. ಅದಕ್ಕೆ ಬೇಕು ತನ್ನ ನಿಕಟವರ್ತಿಗಳ ಧೈರ್ಯ ತುಂಬುವ ಮಾತು. ಸಹಾನುತಾಪದ ಆಸರೆ, ಎಲ್ಲರಂತಿಲ್ಲದೆ ಎಲ್ಲರೊಡನೆ ಒಡನಾಡುವುದೆಂದರೆ ಸುಲಭಸಾಧ್ಯವಲ್ಲ. ಬಾಹ್ಯರೂಪ ಮುಖ್ಯವಲ್ಲ ಎಂದು ಎಷ್ಟೇ ಮನಸ್ಸನ್ನು ನಂಬಿಸಿಕೊಳ್ಳಲೆತ್ನಿಸಿದರೂ ಅದು ತಂದುಕೊಡುವ ಆತ್ಮವಿಶ್ವಾಸ ಬೆಲೆ ಕಟ್ಟಲಾಗದ್ದು, ಪರರ ಮೇಲೆ ಮೊದಲು ಪ್ರಭಾವ ಬೀರುವುದೇ ಹೊರರೂಪ. ಬಾಹ್ಯಸೌಂದರ್ಯ ಊನ ಇದ್ದರೆ ಜನ ನೋಡುವ ದೃಷ್ಟಿಯೇ ಬೇರೆ. ಹಾಗೂ ಯೋಚಿಸುತ್ತಾ, ಹೀಗೂ ಚಿಂತಿಸುತ್ತಾ, ರಮ್ಯಾ ದಣಿಯುವಾಗ ನಿದ್ದೆ ಇಲ್ಲದ ರಾತ್ರಿಗಳು ಸರ್ವೇಸಾಮಾನ್ಯವಾದಾಗ, ಅತ್ತೆ ಅಮ್ಮನೊಡನೆ ಹೇಳಿದ್ದರು.

"ನಿನ್ನೊತೆ ಸ್ವಲ್ಪದಿನ ಇವಳನ್ನು ಕಕ್ಕೊಂಡೋಗಿ ದೇವರೋ, ದಿಂಡರೋ, ಔಷಧಿಯೋ, ಪಥ್ಯವೋ, ವಾಸಿ ಆದೇಲೆ ಕರ್‍ಕೊಂಬನ್ನಿ..."

ಒಳಾರ್ಥವನ್ನು ಒಡಲಲ್ಲಿ ಹುದುಗಿಸಿಟ್ಟುಕೊಂಡ ಮಾತು, ತನ್ನ ಅತ್ತೆ ಆಡಿದ ಮಾತು 'ವಾಸಿ ಆದೇಲೆ ಕರ್‍ಕೊಂಬನ್ನಿ.' ಅಂದರೆ ಆಗದಿದ್ದರೆ ಕರೆದುಕೊಂಡು ಬರಬೇಡಿ ಎನ್ನುವ ಅರ್ಥವೇ? ಗಂಡನೊಡನೆ ಸಂಕಟ ಹಂಚಿಕೊಂಡಾಗ ಅವನು ಹೇಳಿದ್ದೇನು?

"ನಿನ್ನ ಮನಸ್ಸು ಸರಿಯಾಗಿಲ್ಲ ರಮ್ಯಾ, ಎಲ್ಲಕ್ಕೂ ಅಪಾರ್ಥ ಮಾಡ್ಕೊತಿ, ಅಮ್ಮ ಮಾಮೂಲಾಗಿ ಹೇಳಿರ್ತಾಳೆ. ಅವಳು ಹೇಳಿದ್ದೂ ಸರಿ. ಸ್ವಲ್ಪ ದಿನ ಅಮ್ಮನ ಮನೇಲಿ ಇದ್ದು ಬಾ... ನಾನೂ ಊರಲ್ಲಿರಲ್ಲ ಅಂದ್ರೆ ಸುಮ್ಮೆ ಕೊರಗ್ತಾಕೂತ್ಕತಿ..."

ಅಮ್ಮನನ್ನು ವಹಿಸಿಕೊಂಡ ಮಗ, ಅವನೂ ತನ್ನನ್ನು ದೂರ ಮಾಡುತ್ತಿದ್ದಾನೆಯೇ? ಅಥವಾ ಅವರು ಹೇಳಿದಂತೆ ತಾನು ಎಲ್ಲಕ್ಕೂ ಅಪಾರ್ಥ ಕಟ್ಟುತ್ತಿದ್ದೇನೆಯೇ? 'ಗಂಡ ಮನೆಗೆ ಓಡೋಡಿ ಬರುವುದೇ ತನ್ನ ಆಕರ್ಷಣೆಯಿಂದ' ಎನ್ನುವ ನಂಬಿಕೆಗೆ ಕೊಡಲಿಪೆಟ್ಟು ಮಗಳ ಪಾಠ ಕೂಡಾ ಸಡಿಲವಾಗುತ್ತಿದೆಯೇ?

ಆಮೇಲಿನ ಎರಡು ತಿಂಗಳು ಒಂದು ಅಗ್ನಿದಿವ್ಯ. ಅಪ್ಪ ದೊಡ್ಡದೊಡ್ಡ ತಜ್ಞರನ್ನು ಸಂಪರ್ಕಿಸಿ, ಬಿಳುಪಿನ ಜಾಗದ ಮೇಲೆ ಹೊಸ ಚರ್ಮದ ಕಸಿ ಮಾಡುವ ಚಿಕಿತ್ಸೆ ನಡೆದು, ಗೆದ್ದೆ, ಗೆದ್ದೇಬಿಟ್ಟೆ. ಅತ್ತೆ ಹೇಳಿದಂತೆ ಖಾಯಿಲೆ, ಖಾಯಿಲೆಯಾ ಅದು, ಏನೇ ಆಗಿರಲಿ, ವಾಸಿ ಮಾಡಿಕೊಂಡು ಗಂಡನ ಮನೆಗೆ ಪ್ರಯಾಣ. ನಡಿಗೆಯಲ್ಲಿ ಜಂಭದ ಗತ್ತು. ಅದರದು ತೋರಿಕೆಯ ಬಿಂಕ, ಒಳಗೊಳಗೆ ಕುಸಿದು ಹೋಗಿದ್ದ ಜೀವಚೈತನ್ಯ ಇನ್ನೂ, ಮುನ್ನಿನ ಸ್ಥಿತಿಗೆ ತಲುಪಿರಲಿಲ್ಲ. ಆತ್ಮವಿಶ್ವಾಸ ಮರಳಿರಲಿಲ್ಲ. ಅವ್ಯಕ್ತ ಭಯವೊಂದು ಹೃದಯ ಹೊಕ್ಕು ಕುಳಿತುಬಿಟ್ಟಿತ್ತು. ಅಂತಸ್ತನ್ನು ಅಲುಗಿಸಿಬಿಟ್ಟಿತ್ತು.

ತೆರೆದ ಹೃದಯದಿಂದ ಸ್ವಾಗತಿಸಿದ್ದರು ಅತ್ತೆ. ತೆರೆದ ತೋಳಿನಿಂದ ಸ್ವಾಗತಿಸಿದ್ದ ಗಂಡ, ಎಲ್ಲಾ ಮೊದಲಿನಂತೆ ಮಾಮೂಲಿಯಾಗಿದೆಯಾ? ಕತೆ ಕಟ್ಟಿದ್ದು ನಾನೇನಾ? ನಿಧನಿಧಾನವಾಗಿ ಚೇತರಿಸಿಕೊಂಡರೂ ಸ್ನಾನಕ್ಕಿಳಿದಾಗ ಮೈಯಿಡೀ ಪರೀಕ್ಷಿಸಿಕೊಳ್ಳುವ ಹೊಸ ಗಿರ. ಏಕಾಂತದಲ್ಲಿರುವಾಗ ಕನ್ನಡಿಯೆದುರು ನಿಂತು ಮುಖ ತಿರುಗಿಸಿ, ಮುರುಗಿಸಿ ಪರೀಕ್ಷೆ, ಯಾವುದೇ ಕಷ್ಟವಿರಲಿ, ಸಂಕಟವಿರಲಿ, ಒಂದು ಸಲ ಬಂತು, ಹೋಯ್ತು, ವಾಸಿಯಾಯ್ತು ಅನ್ನುವಂತಿದ್ದರೆ ಹೇಗೋ ಸಹಿಸಬಹುದು. ಕಷ್ಟಕ್ಕೊಂದು ಅಂತ್ಯವಿದೆ ಎನ್ನುವ ನಂಬಿಕೆಯೇ ರಾಮಬಾಣವಾಗಿರುತ್ತದೆ. ಆದರೆ ತನ್ನದೆಂತಾ ದುರ್ದೈವದ ಹುಟ್ಟೋ? ಅಗ್ನಿದಿವ್ಯ ಮುಗಿದಿರಲಿಲ್ಲ. ಕಸಿ ಮಾಡಿ ಮೊದಲಿನಂತಾದ ಚರ್ಮದ ಬದಿಯಲ್ಲಿ ಮತ್ತೆ ಬಿಳುಪು ತಿರುಗತೊಡಗಿ, ಈ ಸಲ ಕನ್ನಡಿಯ ಎದುರು ನಿಂತು ಕುತ್ತಿಗೆಯ ಹಿಂಭಾಗದ ಚರ್ಮವನ್ನು ಎಳೆದು ನೋಡಿಕೊಂಡರೆ ನನ್ನ ಕಣ್ಣಿಗೆ ಬೀಳುವಂತೆ ಕಲೆ, ಯಾವಾಗಲೂ ಅಷ್ಟೇ, ತನ್ನ ಮನಸ್ಸು ತೀವ್ರ ಘಾಸಿಯಾಗಿ ಗಂಡನೊಡನೆ ಅದನ್ನು ಹಂಚಿಕೊಳ್ಳಬೇಕೆನಿಸುವ ಕ್ಷಣದಲ್ಲಿ ಅವನಿರುವುದಿಲ್ಲ. ಕಾಯಬೇಕು, ಕುದಿಯಬೇಕು. ಅಮ್ಮನೊಡನೆ ಮಾತಾಡೋಣವೆಂದರೆ ಅತ್ತೆಯ ಕಿವಿಗೆ ಬೀಳುತ್ತದೆ. ಕಿವಿಗೆ ಬೀಳುವುದನ್ನು ತಡೆಹಿಡಿಯಬಹುದು. ಆದರೆ ಕಣ್ಣಿಗೆ ಬೀಳುವುದನ್ನು?

"ಅಮ್ಮಾ, ಮತ್ತೆ ಹಾಗೇ ಆಗಿದೆ ಅಮ್ಮಾ, ಮೊದಲಿನ ಜಾಗದ ಪಕ್ಕದಲ್ಲಿ" ಗೊರಗೊರ ಗಂಟಲಲ್ಲಿ ವರದಿ ಅತ್ತೆಯ ಕೈಲಿದ್ದ ಭಗವದ್ಗೀತೆ ಕೈ ಜಾರಿ ಕೆಳಗೆ ಬಿದ್ದಿತ್ತು "ಶಿವಶಿವಾ" ಎನ್ನುವ ಉದ್ಗಾರ ಬಾಯಿಯಿಂದ ಜಾರಿತ್ತು.

ಗಂಡ ಊರಿಗೆ ಬರುವುದಕ್ಕೂ ಮುಂಚೆ ನನ್ನಮ್ಮ ಬಂದಿದ್ದಳು. ಮೂರು ಸಂಜೆ,

ದೀಪ ಬೆಳಗುವ ಹೊತ್ತು. ಆದರೆ ಕಣ್ಣೆದುರಲ್ಲಿ ಕಗ್ಗತ್ತಲೆ. ಮನಸ್ಸಿಡೀ ಶೂನ್ಯ. ಇದು ಹೀಗೇ ಮುಉಂದುವರಿದರೆ ಕೊನೆಯೆಲ್ಲಿ? ಕೊನೆ ಇದೆಯಾ?

ಮೆತ್ತನೆ ಕಡ್ಡಿ ತೀರಿ ದೇವರ ದೀಪ ಬೆಳಗಿಸುತ್ತಾ ಅತ್ತೆ ಹೇಳಿದ್ದರು.

"ಹೇಗೂ ಬಂದಿದೀರಲ್ಲ, ಅದೇ ಡಾಕ್ಟ ಹತ್ರ ಕಕ್ಕೊಂಡೋಗಿ..."

ಅಮ್ಮ ನನ್ನ ತಲೆಯೊಳಗೆ ಕೊರೆಯುತ್ತಿದ್ದ ಪ್ರಶ್ನೆಗೆ ದನಿ ಕೊಟ್ಟಿದ್ದಳು.

"ಕರ್ಕೊಂಡ್ಹೋಗೋದು ಸರಿ. ಮತ್ತೆ ಹೀಗೇ ಆದ್ರೆ? ನನ್ನ ಕೈಕಾಲು ನಡುಗಿದೆ. ದೇವರು ನನ್ನ ಮಗೂಗೆ ಯಾಕೆ ಇಂತಾ ಶಿಕ್ಷೆ ಕೊಟ್ಟ? ಕಣ್ಣುಂಟಾ ಅವನಿಗೆ? ದೇವರಂತೆ ದೇವು..."



ಅಮ್ಮ ಜರಿಯುತ್ತಿದ್ದ ಅದೇ ದೇವರಿಗೆ ಸುತ್ತು ಬಂದು, ಅಡ್ಡಬಿದ್ದು ಅತ್ತೆ ಅಪ್ಪಣೆ ಕೂಡಿಸಿದ್ದರು.

"ಈ ಖಾಯಿಲೆ ಜನ್ಮಕ್ಕಂಟಿದ್ದು ಅಂತಾದ್ರೆ ಅದಕ್ಕೆ ಏನ್ಮಾಡ್ಬೇಕೂಂತ ಗೊತ್ತಿದೆ

"ಏನ್ಹೇಳ್ತಿದೀರಿ ನೀವು? ನಂಗಂತೂ ಅರ್ಥವಾಗಿಲ್ಲ..." ಅಮ್ಮನ ಮಾತು ನಾಯಿಮರಿಯೊಂದು ದೈನ್ಯದಿಂದ ಕುಂಯ್ಗುಟ್ಟಿದಂತೆ ಕೇಳಿಸಿ ರಮ್ಯನ ಅಭಿಮಾನ ಕೆರಳಿತ್ತು.

"ಅಮ್ಮಾ, ನೀನು ಮಾತಾಡ್ಬೇಡ, ಸುಮ್ನಿಡ್ಬಿಡು. ಯಾರಿಗೆ, ಯಾವಾಗ, ಏನಾಗುತ್ತೇಂತ ಭವಿಷ್ಯ ಗೊತ್ತಿದ್ದಿದ್ರೆ ಈ ಲೋಕದ ಕತೆಯೇ ಬೇರೆ ಆಗಿರ್ತಿತ್ತು." ಅತ್ತೆ ಮಾತಾಡಿರಲಿಲ್ಲ. ಅಮ್ಮನೂ, ಅತ್ತೆಯ ನಿರೀಕ್ಷೆಯಂತೆ ಮರುದಿನ ಅಮ್ಮನೊಡನೆ ನಾನು ತೌರಿಗೆ ಹೊರಡಲಿಲ್ಲ. ನಾನೇನು ಕದ್ದು ಬಂದವಳಾ? ಇಟ್ಟುಕೊಂಡವಳಾ? ತಾಳಿ ಕಟ್ಟಿದವನಿಗೆ ಹೇಳಿಯೇ ಹೋಗುತ್ತೇನೆ. ನನ್ನ ವಿಧಿಯನ್ನು ಎದುರಿಸುತ್ತೇನೆ. ತಾಯಿಯಂತೆ ಮಗನೂ ಮುಖವಾಡ ಧರಿಸಿದ್ದರೆ ಕಳಚಿ ಬೀಳಲಿ ಅದೂ. ನಿಜರೂಪದರ್ಶನವಾದರೆ, ಭವಿಷ್ಯ ಎದುರಿಸಲು ಬೇಕಾದ ಆತ್ಮಸ್ಥೈರ್ಯವನ್ನಾದರೂ ಆವಾಹಿಸಿಕೊಳ್ಳಬಹುದು. ಮನಸ್ಸು ವಿಷವಾಗಿ ಹೋಗಿದ್ದ ಆ ರಾತ್ರಿ ನಿರ್ಧಾರವೊಂದು ರೂಪುಗೊಂಡಿತ್ತು. ಗಟ್ಟಿಯಾಗಿತ್ತು. ಅಮ್ಮ ಊರಿಗೆ ಹೊರಡುವಾಗ ಹೇಳಿದ್ದೆ.

"ಅಮ್ಮಾ, ನನ್ನ ಬಿ.ಎ. ಮಾರ್ಕ್ಸ್ಕಾರ್ಡ್ ಹುಡುಕಿಟ್ಟಿದ್ದೀಯಾ? ಬೇಕಾಗಬಹ್ದು..."

"ಹುಡುಕೋಕೆ ಏನಿದೆ? ಎಲ್ಲಾ ಜೋಪಾನವಾಗುಂಟು..."

"ಆಯ್ತಮ್ಮಾ, ಅಳಬೇಡ. ನೀನು ಹೊರಡು, ಬಸ್ಸಿಗೆ ಹೊತ್ತಾಗುತ್ತೆ." ಅಮ್ಮ ಕಾಲೆಳೆಯುತ್ತಾ ಅರೆಮನಸ್ಸಿನಿಂದ ಹೊರಟಿದ್ದಳು. ತುಂಬಿ ತುಳುಕುತ್ತಿದ್ದ ಕಣ್ಣೀರಿನಿಂದ ಅವಳ ಹೆಜ್ಜೆಗಳು ತಡವರಿಸುತ್ತಿದ್ದುದಕ್ಕೆ

ನಾನು ಸಾಕ್ಷಿಯಾಗಿದ್ದೆ. ಹೆತ್ತ ಮಕ್ಕಳಿಗಿಂತಾ ದೊಡ್ಡ ದೌರ್ಬಲ್ಯ ಹೆತ್ತವರಿಗೆ ಮತ್ತೇನುಂಟು? ಎಲ್ಲಾ ಸುಸೂತ್ರವಾಗಿದ್ದರೆ ಸರಿ. ಇಲ್ಲದಿದ್ದರೆ ನಾಯಿಪಾಡು. ಜೀವಂತ ನರಕ.

* * * *

"ಮತ್ಯಾಕೆ ತೌರಿಗೆ ಹೋಗ್ತಿ? ಮೊನ್ನೆ ಮೊನ್ನೆ ಬಂದಿದ್ದಲ್ವಾ? ಅದೇನಾಗುತ್ತೋ ಆಗ್ಲಿ, ನಾನಿದೀನಿ. ನೋಡ್ಕೊತೀನಿ.. "ಹೆಚ್ಚುಕಡಿಮೆ ಕಿರುಚಿದ್ದ ಗಂಡ, ಅಹಾ, ಆಕ್ರೋಶ ಕೂಡಾ ಇಷ್ಟು ಇಂಪಾಗಿರಲು ಸಾಧ್ಯವೇ? ಅನುಭವವಾದವರಿಗಷ್ಟೇ ಗೊತ್ತು. "ಅವತ್ತು ಹೋಗು ಅಂತ ನೀವೇ ಕಳಿಸಿದ್ರಿ."

"ಹೌದು, ಕಳಿಸಿದೆ, ಏನಾಯ್ತಿಗ? ನಿಂಗೆ ಶಾಕ್ ಆಗಿತ್ತು. ಸ್ವಲ್ಪ ಸುಧಾರಿಸಿಕೊಳ್ಲಿ ಅಂತ ಕಳಿಸಿದ್ದು ತಪ್ಪಾ? ಅದೇ ಅಭ್ಯಾಸ ಮಾಡ್ಕೊಬೇಡ. ಪದೇಪದೇ ಶಾಕ್ ಆಗ್ತಿದ್ರೆ ಅದನ್ನ ಜೀರ್ಣಿಸಿಕೊಳ್ಳೋಕೆ ಕಲಿಬೇಕು. ಇಲ್ಲಿದೆ ಬದುಕೋಕೆ ಸಾಧ್ಯಾನಾ?" "ಜೀರ್ಣಿಸಿಕೊಳ್ಳೋ ಧೈರ್ಯ ನಿಮಗುಂಟಾ?" "ಬರುತ್ತೆ ತನ್ನಷ್ಟಕ್ಕೆ ನನಗೂ ಬರುತ್ತೆ. ನಿನಗೂ ಬರುತ್ತೆ."



"ತುದಿನಾಲಿಗೆಯ ಮಾತಾಡೋಡಿ. ಮೊದಲಿನ ಹಾಗೆ ನನ್ನ ಪ್ರೀತಿ ಮಾಡೋಕೆ ಸಾಧ್ಯವಾಗುತ್ತಾ ನಿಮಗೆ?"

"ಹೇಳಿದ್ನಲ್ಲ, ಅಭ್ಯಾಸ ಆಗುತ್ತೆ ಅಂತ? ಇಷ್ಟಕ್ಕೂ ಇದು ವಾಸಿಯಾಗೋದೇ ಇಲ್ಲ ಅಂತ ಯಾಕೆ ಅಂದ್ಕೋತಿ? ಬೆಸ್ಟ್ ಅನ್ನೋದು ಏನುಂಟೋ ಅದನ್ನ ಪತ್ತೆ ಮಾಡ್ತೀನಿ ನಾನು. ಆಗ್ಲಿಲ್ಲ ಅಂದ್ಕೋ, ಇನ್ನೂ ಇನ್ನೂ ಜಾಸ್ತಿಯಾಗುತ್ತೆ ಅಂದ್ಕೋ, ಯಾವಾಗ್ಲ ವರ್ಸ್ಟ್ ಯಾವುದೋ ಅದಕ್ಕೆ ರೆಡಿ ಆಗಿರ್ಬೇಕು.."

"ಖಾಯಿಲೆ ಜನ್ಮಕ್ಕಂಟಿದ್ರೆ ಏನು ಮಾಡ್ಬೇಕೂಂತ ಗೊತ್ತುಂಟಂತೆ ಅತ್ತೆಗೆ..."

"ನಂಗೂ ಗೊತ್ತುಂಟು ಕಣೇ. ನಾನು ನಿಮ್ಮತ್ತೆಯ ಮಗ..."

ಎಷ್ಟೋ ತಿಂಗಳುಗಳ ನಂತರ ಮನಸ್ಸು ಹಗುರಾಗುತ್ತಿರುವ, ಹಾರಾಡುತ್ತಿರುವ, ಅನುಭವ. ಜೀರ್ಣಿಸಿಕೊಳ್ಳುವುದು, ಹೊಂದಾಣಿಕೆ ಮಾಡಿಕೊಳ್ಳುವುದು, ಇಷ್ಟಕ್ಕೂ ಇದು ಖಾಯಿಲೆಯೇ ಅಲ್ಲವಲ್ಲ? ಒಪ್ಪಿಕೊಳ್ಳಬೇಕಾದವರು ಒಪ್ಪಿಕೊಂಡರೆ ಎಲ್ಲಾ ಅಭ್ಯಾಸವಾಗುತ್ತದೆ. ಆಗಬೇಕು. ಸಮಸ್ಯೆಗಳು ಸವಾಲಾಗಬೇಕೇ ವಿನಾ ಸೋಲಿಗೆ ನೆಪ ಆಗಬಾರದು ಎನ್ನುವಂತಾ ಭಾವವೊಂದು ರಮ್ಯನ ಮನಸ್ಸಿನಲ್ಲಿ ಹಾದುಹೋಗಿ ಅವಳನ್ನು

ಪುಳಕಗೊಳಿಸಿತು. ಹಾಗೂ ಯಾವ ಸಮಸ್ಯೆಯೂ ನಾವೆಂದುಕೊಂಡಷ್ಟು ಕ್ರೂರವಾಗಿರುವುದಿಲ್ಲ. ಎಲ್ಲವೂ ನಮ್ಮ ನಮ್ಮ ಮನೋಧಾರ್ಡ್ಯವನ್ನು ಅವಲಂಬಿಸಿರುತ್ತದೆ ಅನ್ನುವ ಭಾವವೂ...

ಮಗಳನ್ನು ಎದೆಗಪ್ಪಿಕೊಂಡು ಮುದ್ದಿಸುತ್ತಾ ಗಂಡ ಹೇಳುತ್ತಿದ್ದ.

"ಎಂತಾ ಪಾಪಿ ಕಣೇ ನೀನು. ಮನೆಯ ನೆರಳು ಬೇಕೂಂತ ಓಡೋಡಿ ಬಂದ್ರೆ ತೌರಿಗೆ, ಹೋಗ್ತಾಳಂತೆ ತೌರಿಗೆ ಮದುವೆಯಾಗಿ ವರ್ಷ ನಾಲ್ಕಾಯ್ತು. ಇನ್ನೂ ತೌರಿನ ಮೋಹ ಹೋಗ್ಲಿಲ್ವಾ? ಇನ್ನುಂದೆ ಈ ಚೇಷ್ಟೆ ಎಲ್ಲಾ ಬಂದ್..."

"ರೀ, ನಾನು ಎಂ.ಎ. ಮಾಡ್ಬೇಕೂಂತ ಅಂದ್ಕೊಂಡಿದೀನಿ ಕ, ಸಾಧ್ಯವಾದ್ರೆ, ಕೆಲಸ ಸಿಕ್ಕಿದ್ರೆ, ಯಾಕೆ ಸೇರೋಬಾರು?"

ಅವನು ಹೇಳುತ್ತಿರುವುದಕ್ಕೂ, ಇವಳು ಹೇಳುತ್ತಿರುವುದಕ್ಕೂ, ಸಂಬಂಧವೇ ಇಲ್ಲ. ಚಕಿತಗೊಂಡಂತೆ ಹೆಂಡತಿಯತ್ತ ನೋಡಿದ ಗಂಡ ಎಲ್ಲಾ ಅರ್ಥವಾದಂತೆ ತಲೆ ಅಲುಗಿಸಿದ.

"ಅಂತೂ ಮನುಷ್ಯನ್ನ ನಂಬಲ್ಲ ನೀನು" ಅಂದ.

"ನಿಮ್ಮನ್ನ ನಂಬ್ರೀನಿ ಕಣ್ರೀ..."

"ಅಂದ್ರೆ? ನಾನು ಮನುಷ್ಯ ಪ್ರಾಣಿ ಅಲ್ಲಾ ಅಂತ್ಲಾ?"

"ಕನ್ನಡಿ ನೋಡ್ಕಳಿ..." ಎನ್ನುತ್ತಾ ಕಿಲಕಿಲನೆ ನಗುವಾಗ ಆ ನಗೆ ಆರೋಪಿಸಿಕೊಂಡಿದ್ದಾಗಿರದೆ ಹೃದಯಾಂತರಾಳದಿಂದ ಬಂದಿದ್ದೆಂಬುದರ ಅರಿವಾಗಿ ಹೊಂದಾಣಿಕೆಯ ಮೊದಲ ಹಂತಕ್ಕೆ ತನಗೇ ಅರಿವಿಲ್ಲದೆ ತಾನು ಅಣಿಯಾಗಿದ್ದರ ಕುರಿತು, ಮನಸ್ಸಿನ ಶಕ್ತಿಯ ಕುರಿತು ರಮ್ಯಾ ಬೆರಗುಗೊಂಡಳು.

# ಮಾಯಕದ ಸತ್ಯ

- ಮಿತ್ರಾ ವೆಂಕಟ್ರಾಜ್

ಸಂಜೆಯಾಗಿತ್ತಷ್ಟೇ. ಆದರೆ ಆಕಾಶದಲ್ಲಿ ಮೋಡಗಳು ಎಷ್ಟು ದಟ್ಟವಾಗಿದ್ದವೆಂದರೆ, ಪಾಲಾಡಿ ಗುತ್ತಿನ ಮನೆಯು ಕತ್ತಲಿನ ಮುಸುಕನ್ನು ತನ್ನ ಮೇಲೆ ಎಳೆದುಕೊಂಡಾಗಿತ್ತು. ಆ ಮನೆಯ ಕತೆ ಅಥವಾ ಕತೆಗಳನ್ನು ಬಲ್ಲವರಿಗೆ, ಹಾಗೆ ಕತ್ತಲಿನಲ್ಲಿ ಅಡಗಿಕೊಂಡು ತನ್ನಷ್ಟಕ್ಕೆ ಇದ್ದು ಬಿಡುವುದರಲ್ಲಿ ಅದಕ್ಕೆ ಅದೆಷ್ಟು ನೆಮ್ಮದಿಯಿದೆ ಎಂಬುದನ್ನು ಊಹಿಸುವುದು ಕಷ್ಟವಾಗಲಿಕ್ಕಿಲ್ಲ. ಇದೀಗ ಮನೆಯ ಗುರಿಕಾರ ರಾಮಯ್ಯ ಸತ್ತು ತಿಂಗಳಿನ್ನೂ ಪೂರ್ತಿಯಾಗಿಲ್ಲವಾಗಿ, ಅವನ ಸೂತಕದ ನೆರಳೂ ಮನೆಯ ಸುತ್ತ ಗಾಢವಾಗಿ ಪಸರಿಸಿದಂತಿತ್ತು.

ದಿನವಿಡೀ ಬೆಳಕನ್ನಾಗಲೀ, ಮನುಷ್ಯನ ಮುಖವನ್ನಾಗಲೀ ನೋಡದ ತೆಂಕು ಉಪ್ಪರಿಗೆಯ ಮುಚ್ಚಿಗೆಗೆ ನೇಣು ಹಾಕಿಕೊಂಡಂತೆ ನೇತಾಡುತ್ತಿದ್ದ ಬಾವಲಿಗಳು ಒಂದೊಂದಾಗಿ ತಮ್ಮನ್ನು ಬಿಡುಗಡೆ ಮಾಡಿಕೊಂಡು, ಆವರಿಸುತ್ತಿದ್ದ ಕತ್ತಲನ್ನು ಅರಸಿಕೊಂಡು ಕಿಟಿಕಿಗಳ ಗೂಟಗಳ ಎಡೆಯಿಂದ ಪಟಪಟ ಸದ್ದಿನೊಂದಿಗೆ ಹಾರಿಹೋಗತೊಡಗಿದ್ದವು.

ಮನೆಯ ಹಿಂದಿನ ಹಿತ್ತಲ ಅಂಗಳದಲ್ಲಿ ಕುಳಿತಿದ್ದ ಮನೆಕೆಲಸದ ಗುಳ್ಳಿ ಕುಳಿತಲ್ಲೇ ತೂಕಡಿಸುತ್ತಿದ್ದಳು. ಬೀಡಿ ಹೊತ್ತಿಸಲಿಕ್ಕೆಂದು, ಚೂಪು ಬಾಯಿ ಮಾಡಿ, ಬಚ್ಚಲು ಒಲೆಯ ಕೆಂಡವನ್ನು ಉರುಪುತ್ತಿದ್ದ ಕುಷ್ಟ, 'ಏ ಗುಳ್ಳಿ, ರಾತ್ರಿ ಆಯ್ತಾರೇ, ಬೆಲ್ಲ ತೂಗೂಕೆ ಸುರು ಮಾಡಿ ಆಯ್ತ?' ಎಂದ. ತೋಟದ ಕೆಲಸದ ಕುಷ್ಟನಿಗೆ ಬೀಡಿಯಿಲ್ಲದಿದ್ದರೆ ಕೈಕಾಲು ಬಿಡಿ, ತಲೆಯೂ ಓಡುತ್ತಿರಲಿಲ್ಲ.

"ನಿನ್ನೆ ರಾತ್ರಿ ದೊಡ್ಡಬ್ಬೆ ಮನೆಯಿಂದ ಬಪ್ಪಪ್ಪತ್ತಿಗೆ ಎಷ್ಹೊತ್ತ್ ಆಯ್ತ್ ಅಂತ ಮಾಡಿದ್ದಿ?' ಎಂದಳು ಮನೆಕೆಲಸದ ಗುಳ್ಳಿ, ಎಳೆಯುತ್ತಿರುವ ಕಣ್ಣುಗಳನ್ನು ಬಲವಂತದಿಂದ ತೆರೆಯುತ್ತ

'ಎಷ್ಹೊತ್ತು?'

'ನಡು ರಾತ್ರಿ ದಾಟಿತ್ತ್, ಗೊತ್ತಿತ್ತಾ? ಕಾರ್ಗಾನ್ ಕಸ್ತಲೆ. ಆ ಬ್ಯಾಣದತ್ರ ಅಂತೂ..... ಅಬಬಬಬಬಬ.....' ಎಂದು ಮೈ ಸಿಂಡರಿಸಿದಳು.

"ಅಲ್ಲನ, ಗೋಳಿ ಕಟ್ಟೆ ಹತ್ರ ಸತ್ಯವಂತಿ ಭೂತ ಹಿಡಿಲಿಲ್ಯ ನಿನ್ನ?' ಬೀಡಿ ಎಳೆಯುತ್ತ ಬಂದು ಅಂಗಳದ ಮಧ್ಯದಲ್ಲಿ ಕಾಲು ನೀಡಿ ಕುಳಿತ ಕುಷ್ಟ ಕುಚೇಷ್ಟೆಯ ದನಿಯಲ್ಲಿ ಕೇಳಿದ.

'ಯಾವ ಭೂತ? ನಿನ್ನ ಮಂಡ. ಭೂತವೂ ಇಲ್ಲ, ಮತ್ತೊಂದೂ ಇಲ್ಲ. ನೆಟ್ಟಗೆ ಮನಿಗೆ ಹೋಯಿ ಚಾಪೆಗೆ ಮುಖ ಕೊಡೊಷ್ಟೊತ್ತಿಗೆ, ಕುಪ್ಪಣ್ಣನ ಕೋಳಿ ಕೂಗೂ ಅಟ್ಟಣೆ ಮಾಡ್ಕಂತಿತ್ತು.

ಅಲ್ಲೇ ಹತ್ತಿರ ನೆಲಕ್ಕಂಟಿದಂತೆ ಸಪಾಟಾಗಿ ಬಿದ್ದುಕೊಂಡಿದ್ದ ದಾಸುನಾಯಿ ಆಗೊಮ್ಮೆ ಈಗೊಮ್ಮೆ ಬಾಲ ಅತ್ತಿತ್ತ ಆಡಿಸಿ ನುಸಿ ಓಡಿಸುತ್ತ, ತನಗೆ ಪೂರಾ ನಿದ್ದೆ ಬರಲಿಲ್ಲವೆಂಬುದನ್ನು ತೋರಿಸುತ್ತಿತ್ತು.

ಸ್ವಲ್ಪ ಮೊದಲು ಬೈಂದೂರಿಗೆ ಹೋಗುವ ಕೊನೆಯ ಬಸ್ಸು ತಪ್ಪಿ ಹೋಯಿತೆಂದು ರಾತ್ರಿ ಕಳೆಯಲು ಆ ಮನೆಯ ಅಂಗಳದ ಮೊರೆ ಹೊಕ್ಕು ಮೂಲೆಯಲ್ಲಿ ಆಸೀನರಾಗಿದ್ದ ಇಬ್ಬರು ವ್ಯಕ್ತಿಗಳಲ್ಲಿ ಉದ್ದದವನು ಕುಷ್ಟನ ಹತ್ತಿರ ಒಂದು ಬೀಡಿ ಬೇಡಿ ಪಡಕೊಂಡು, 'ಯಾವ ಭೂತ......?' ಎಂದು ಕೇಳಿದವ, ಬೀಡಿ ಉರಿಸಲು ತಾನೂ ಬಚ್ಚಲೊಲೆಯ ಕೆಂಡದತ್ತ ನಡೆದ.

'ಅದೊಂದು ದೊಡ್ಡ ಕತಿ ಮಾರಾಯ್ರೆ' ಅಂದ ಕುಷ್ಟ, ಕುಷ್ಟನದ್ದು ಏನಂದ್ರೆ, ಅದೊಂದು ದೊಡ್ಡ ಕತೆಯೆನ್ನದೆ ಅವನು ಯಾವ ಕತೆಯನ್ನೂ ಆರಂಭಿಸುವ ಕಟ್ಟಳೆಯಿರಲಿಲ್ಲ. ಮತ್ತೆ ಒಮ್ಮೊಮ್ಮೆ, 'ನನ್ನ ಹತ್ತಿರ ಕೇಣ್ ಬೇಡಿಯೆ' ಎಂದೋ, "ಅಯ್ಯೋ ನನ್ನ ಕೈಯ್ಯಲ್ಲಿ ಹೇಳೋಕ್ಯಾತಿಲ್ಯೆ' ಎಂದೋ ಅಂದರೆ, ಅವನಿಗೆ ಅದನ್ನು ಹೇಳಲೇಬೇಕಾಗಿದೆ ಎಂದು ಅರ್ಥ.

"ಅದೇ ಕಾಣಿ, ಬ್ಯಾಣದ ಈಚೆ ಬದಿಗಿನ ಆ ಗೋಳಿ ಮರ ಇತ್ತಲ್ಲ, ಮಂಜಪ್ಪನ ಹೆಂಡ್ತಿ ಸತ್ಯವಂತಿ ಭೂತ ಆಯಿ ಅದೇ ಗೋಳಿ ಮರದಲ್ಲಿ ಇಪ್ಪುದಂಬ್ರು, ಹೇಳ್ತ್‌ರಪ್ಪ.... ನಂಗೊತ್ತಿಲ್ಲ. ರಾತ್ರಿ ಹೋಪವ್ರನ್ನ, ಬಪ್ಪವ್ರನ್ನ ಹಿಡ್ಕಂಡ್ ಬಿಡುತ್ತಂಬ್ರು.'

"ಏ.... ಹೋಗಾ.... ಹೋಗಾ.... ಮಾತಾಡ್ತ... ಬಾಯಿ ಇತ್ತ್ ಅಂತ.ಹಿಡ್ಕಣ್ತ್‌ತಂತೆ, ಹಿಡ್ಕಂಬುದ್ ನಿನ್ನಂತವ್ರನ್ನೆ...... ನೀನ್ ಸುರೂ ಜಾಗ್ರತೆ ಮಾಡ್ಕ' ಎಂದ ಗುಳ್ಳಿ ಚಾಪೆಯನ್ನು ಕೊಡಕಿ ಹಾಸುತ್ತ ತನ್ನ ಮಲಗುವ ಸಿದ್ಧತೆಯಲ್ಲಿ ತೊಡಗಿದಳು.

ಅರ್ಧ ತೆರೆದ ಕಣ್ಣುಗಳ ಎಡೆಯಿಂದ ಕ್ಷಣ ಕಾಲ ಕೆಂಪಗೆ ನಿಗಿನಿಗಿಸಿದ ಕೆಂಡ ಮತ್ತು ಅದಕ್ಕೆ ತಾಗಿದ್ದ ಮೂತಿ ಕೆಂಪು ಮಾಡಿಕೊಳ್ಳುತ್ತಿದ್ದ ಬೀಡಿಯ ತುಂಡುಗಳನ್ನೇ ನೋಡುತ್ತಿದ್ದ ಗಿಡ್ಡದವ ಗೋಡೆಗೊರಗಿ ಕುಳಿತಲ್ಲಿಂದಲೇ,

'ಯಾಕೆ? ಹಿಡ್ಕಂಬುದು ಯಾಕೆ?' ಎಂದು ಕೇಳಿದ.

`ಮೊನ್ನೆ ಹಾಂಗೇ ಆಯ್ತಲ್ಲ ಮಾರಾಯ್ರೆ, ಈಗ ಒಂದಿಪ್ಪತ್ತು ದಿನ ಆಯ್ತು, ಇಲ್ಯ ಪೇಪರಿನಾಗೆಲ್ಲ ಬಂದಿತ್ತಲ್ಲ, ನೀವ್ ಓದ್‌ಲಿಲ್ಯ ? ನಮ್ಮ ರಾಮಯ್ಯ ಒಡೇರು ಅಲ್ಲಿ ಬಪ್ಪಷ್ಟೊತ್ತಿಗೆ ರಕ್ತ ಕಾರ್ಕಂಡು ಹೋಯೇ ಬಿಟ್ರಲ್ಲ. ಏಣ್ಸಿದ್ರೆ ಅಳ್ಳೆ ದಡಗುಟ್ಟ್ ತ್ತು. "ಅಲ್ಲ ಮಂಜಪ್ಪ ಅಂದ್ಯಲ್ಲ, ಯಾರು ಅದು?'

'ಕೇಣ್‌ಲಿಲ್ಯ ನೀವು? ರಾಮಯ್ಯನ ಸೋದರಳಿಯ, ಮಂಜಪ್ಪ ಸರದಾರ ಚಂದ್ಗೋಪಿ ರಾಯಣ್ಣ ಕುಷ್ಟ ರಾಗವಾಗಿ ಹೇಳಿದಾಗ ಗುಳ್ಳಿಯೂ ದನಿ ಕೂಡಿಸಿದಳು.



ಕುಷ್ಟ ಮುಂದುವರಿಸಿದ, 'ಈಗ ಒಂದಿಪ್ಪತ್ತು ವರ್ಷ ಹಿಂದಿನ ಕತಿಯೇ. ಮಂಜಪ್ಪ ಅಂದ್ನಲ್ಲ, ಒಳ್ಳೆ ಲಟ್ಟ ಜನ. ಉದ್ದ, ಉದ್ದಕ್ಕೆ ತಕ್ಕ ಮೈಕಟ್ಟು, ಹರಿವಾಣದಷ್ಟು ಅಗಲ ಮುಖ, ಕುಡಿ ಮೀಸೆ...... ದಪ್ಪ ಕಾಡಿಗೆ ಬಣ್ಣದ ತಲೆ ಕೂದಲನ್ನು ನೀಟ ಹಿಂದಕ್ಕೆ ಬಾಚ್ಕಂಡು, ..... ಹ್ವಾ.. ದೊರೆ ನನ್ಮಗ... ಕಂಡವ ಕಣ್ತೆಗೆಯ. ಆಯ್ತಲ್ಲ....."

ಹುಟ್ಟಿ ನಾಲ್ಕು ವರ್ಷಕ್ಕೇ ಅಪ್ಪನನ್ನು ಕಳೆದುಕೊಂಡವನನ್ನು ಅವನ ಅಬ್ಬೆ ಓನಮ್ಮ ಕಣ್ಣಲ್ಲಿ ಕಣ್ಣಿಟ್ಟು ಸಾಕಿ ದೊಡ್ಡದು ಮಾಡಿದ್ದಳು. ಓನಮ್ಮನ ಅಣ್ಣ, ಅಂದ್ರೆ, ಒಡೇರು ರಾಮಯ್ಯನಾದರೂ ಅಷ್ಟೆ, ಸುಮ್ಮನೆ ಹೇಳಬಾರದು, ಅಪ್ಪನ ಸ್ಥಾನದಲ್ಲಿ ನಿಂತು ಹೊಟ್ಟೆಯ ಮಗನು ಬೇರೆಯಲ್ಲ ಅವನು ಬೇರೆಯಲ್ಲ ಎಂಬಂತೆ ಸೋದರಳಿಯನನ್ನು ನೋಡಿಕೊಂಡಿದ್ದ.

'ಮಂಜಪ್ಪ ಬೆಳೆದು ಪ್ರಾಯಕ್ಕೆ ಬಂದಾಗ ಒಂದ್ಸಲ ಏನಾಯ್ತಂದ್ರೆ.....

ಒಂದ್ಸಲ ಕುಂದೇಶ್ವರ ಗುಡಿಯ ಮಾಪೂಜೆಗೆ ಹೋದಾಗಲೇ ಅಲ್ಲಿ ಅವನು ಸತ್ಯವಂತಿ ಹೆಣ್ಣನ್ನು ಮೊತ್ತ ಮೊದಲು ಕಂಡದ್ದು. ಸತ್ಯವಂತಿ ಹೆಣ್ಣು, ಬಸ್ರೂರು ಮಾಬಲಯ್ಯನ ಏಕಮಾತ್ರ ಕುವರಿ, ಮಕ್ಕಳಿಲ್ಲದೆ ಕೊರಗುತ್ತಿದ್ದ ಮಾಬಲಯ್ಯನಿಗೆ ಕೆರೆಯೂರು ಸತ್ಯದೇವತೆಯ ವರದಿಂದ ಹುಟ್ಟಿದ ಮಗಳಿಗೆ ಸತ್ಯವಂತಿ ಎಂದು ಹೆಸರಿಟ್ಟಿದ್ದರು. ಮಗು ಸೇವಂತಿಗೆ ಹೂವಿನಂತೆ ಅರಳುತ್ತರಳುತ್ತ, ಮನೆಮಂದಿಯ ಕಣ್ಮಣಿಯಾಗಿ ನೋಡುವವರ ಕಣ್ಣುಕುಕ್ಕುವಂತೆ ಬೆಳೆದು ದೊಡ್ಡವಳಾಗಿದ್ದಳು. ಮಾಪೂಜೆಗೆ ಬರುವಾಗ ಹದಿನಾರರ ಜವ್ವನೆ, ತನ್ನ ಓರಗೆಯವರೊಂದಿಗೆ ಗುಡಿಗೆ ಬಂದವಳು ಕೈಯ್ಯಲ್ಲಿ ಹಣ್ಣುಕಾಯಿಯ ತಟ್ಟೆ ಹಿಡಿದು ಸುತ್ತು ಬರುತ್ತಿದ್ದಾಗ ಮಂಜಪ್ಪನ ಕಣ್ಣಿಗೆ ಬಿದ್ದಿದ್ದಳು.

ಗುಳ್ಳಿ ಹೇಳುತ್ತಿದ್ದಳು, ಅವಳ ಕಣ್ಣಲ್ಲಿನ ಹೊಳಪೇನು, ಕಾಲ್ನಡಿಗೆಯ ಝುಳಪೇನು... ಇನ್ನು ಮೈಮಾಟವಾ...ನೆತ್ತಿಲಿ ನೀರು ಹುಯ್ದರೆ ಕಾಲುಂಗುಷ್ಟಕ್ಕೆ ಬೀಳಬೇಕು. ಯಾರು ಯಾರವಳು ಅನ್ನುಕೂ ಬಸೂರು ಮಾಬಲಯ್ಯನ ಮಗಳು ಅಂತ ಗೊತ್ತಾಯ್ತು. ಇಬ್ಬರೂ ಒಬ್ಬರನ್ನೊಬ್ಬರು ಕಂಡದ್ದಂದ್ರೆ... ಅದು ಯಾವ

ನಮೂನೆಯೋ, ಇನ್ನು ಯಾರೂ ಇಲ್ಲೆ ಈ ಪ್ರಪಂಚದಲ್ಲಿ ಅಂಬೋ ಹಾಗೆ ಕಂಡದ್ದೇ ಕಂಡದ್ದು, ಆಯ್ತಲ್ಲ, ಅವನ ಕಣ್ಣೋಳಗೆ ಅವಳು ನೆಟ್ಟು ಬಿಟ್ಟಳು; ಅವಳ ಕಣ್ಣೊಳಗೆ ಅವನು.'

'ಮಂಜಪ್ಪನಿಗೆ ಫಜೀತಿಗೆ ಇಟ್ಟುಕೊಂಡದ್ದಂದ್ರೆ ಮತ್ತೇನಲ್ದೇ,' ಕುಷ್ಟ ಮುಂದುವರಿಸಿದ, "ಮನಿಗೆ ಬಂದು ಹೇಳೂಕೂ ಉಪಾಯ ಇಲ್ಲ. ಕತಿ ಹಾಂಗಿದ್ದಿತ್ತು. ಅಂದ್ರೆ, ಅವನ ಅಬ್ಬೆ ಕೂತ್ರೆ ನಿಂತ್ರೆ ಮದಿ ವಿಷ್ಯ ಕರಕರಿ ಮಾಡುತ್ತೆ ಕಂಡು, ಇನ್ನು ಮೂರು ವರ್ಷ ತನ್ನ ಮದಿ ಸುದ್ದಿ ಎತ್ತುವಾಗ ಅಂತ ಧಾಣಾಧಂಗುರ ತಾಕೀತು ಮಾಡಿದ್ದ ಮಾರಾಯ. ಈಗ ಅಬ್ಬೆ ಹತ್ರ ಹೇಳೂಕೆ ಅವನಿಗೆ ನಾಚಿಕೆ, ಅದಲ್ದೆ ಮತ್ತೊಂದು ಏನಂದ್ರೆ, ಅವನ ಸೋದರಮಾವ ರಾಮಯ್ಯನಿಗೂ ಬಸ್ರೂರಿನ ಮಾಬಲಯ್ಯನಿಗೂ ಯಾವ್ದೋ ವಿಷಯಕ್ಕೆ ದೊಡ್ಡ ಕಟಿಪಿಟಿ ಆದ್ದು ಅವನಿಗೆ ನೆನಪಿದ್ದಿತ್ತು. ಹೀಂಗಿಪ್ಪತ್ತಿಗೆ ಎಂತ ಮಾಡ್ಕಾಯ್ತು?



'ಮಂಜಪ್ಪ ಮನಿಗೆ ಬಂದವನೇ ಉಪ್ಪರಿಗೆ ಹತ್ತಿ ಕೌಂಚಿ ಮಲ್ಕಂಡ್ ಬಿಟ್ಟ. ಊಟಿಲ್ಲ, ತಿಂಡಿಲ್ಲ, ಕಾಪಿ ಗೀಪಿ ಏನ್ ಕೇಣ್ಬೇಡಿ. ಅಬ್ಬೆ ಕರ್‌ದ್ರೆ ಹಾಂ ಇಲ್ಲ ಹೂಂ ಇಲ್ಲ. ಅಬ್ಬೆಗೆ ಮಾರಾಶಿ ಆಶ್ಚರ್ಯ, ಮಗ ಯಾವತ್ತೂ ಹೀಂಗ್ ಮಾಡ್ಯವ ಅಲ್ಲ. ಗಂಡಿಗೇನ್ ರಾಹು ಬಡೀತಾ ಏನ್ಕತಿ ಅಂತ ವಿಚಾರ ಮಾಡೂಕ್ ಹತ್ತೀಳು. ಅಷ್ಟಾಪೂಕೂ ಅವನ ಭಾವನೆಂಟ ಒಬ್ಬ ಇದ್ದ.

'ಹಾಂ, ಅದೇ ಆ ಭಾವನೆಂಟ ಉಪ್ಪರಿಗೆ ಹತ್ಕೊಂಡು ಹೋಯಿ ಮಂಜಪ್ಪನ್ನ ಮಾತಾಡ್ಸಿದ ಅಂಬ್ರು, ಮಂಜಪ್ಪ ಅವನ ಕೈಯ್ಯಲ್ಲಿ ಎಲ್ಲ ಹೇಳ್ಕೊಂಡು ದುಃಖ ತೋಡಿಕೊಂಡ. ಜ್ವರದ ಬಿಸಿಯೇರಿದ ಮೈ; ಸಿಡಿದು ಚೂರಾಗುವ ತಲೆನೋವು; ಅರಸಿನಮಂಡಿಗೆ ಆದವ್ರಿಗೆ ಕಂಡದ್ದೆಲ್ಲ ಅರಸಿನ ಕಾಂಬುವ ಹಾಂಗೆ ತನಗೆ ಈಗ ಎಲ್ಲ ಕಡೇಲೂ ಸತ್ಯವಂತಿದೇ ಮುಖ ಕಾಣೋಕೆ ಸುರುವಾಯಿತ್ತು ಅಂದಂಬ್ರು, ಇದೀಗ ಪರಿಸ್ಥಿತಿ ಜೋರಾಯಿತ್ತು ಅಂತ ಹೇಳಿ, ಆ ಭಾವನೆಂಟ ಕೆಳಗೆ ಇಳ್ಕಂಡ್ ಬಂದು ಓನಮ್ಮನಿಗೆ ಸೂಕ್ಷ್ಮ ಸುಳು ಕೊಟ್ಟ. ಹೀಂಗೀಂಗ್ ಹೀಂಗೀಂಗ್ ಆಯಿತ್ತ್, ಆವತ್ತು ಮಾಪೂಜೆ ದಿವ್ಸ ಬಸ್ರೂರು ಮಾಬಲಯ್ಯನ ಮಗಳು ಸತ್ಯವಂತಿನ್ನ ಕಂಡಂದಿನಿಂದ ಜ್ವರ ಬಂದಂಗಾಯಿ... ಅಂತ ಅಂದ್ನಂತೆ.' ಎಂದ ಕುಷ್ಟ ಕೈಯ್ಯಲ್ಲಿದ್ದ ಬೀಡಿಯ ತುಂಡನ್ನು ಬಾಯಿಗಿಟ್ಟದ್ದು ನೋಡಿ, ಗುಳ್ಳಿ ಕತೆಯ ಎಳೆಯನ್ನು ಎತ್ತಿಕೊಂಡಳು,

"ಅಬ್ಬೆಗೆ ಅದನ್ನ ಕೇಂಡದ್ದೇ, ಮಾ ಕುಶಿಯೋ ಕುಶಿ, ಕುಶಿಯಂದ್ರೆ ಹೇಳೂಕೆಡೆಯ. 'ಮಗನೇ, ನಂಗೊಂದು 'ಸು' ಕೊಡುದ್ ಅಲ್ದನ ನೀನು.' ಅಂತಂದು ಸಂಭ್ರಮ ಪಟ್ಟಳು. ಸತ್ಯವಂತಿನ್ನ ಅವಳೇನು

ಕಾಣದವಳಲ್ಲ. ಚಂದೊಳ್ಳಿ ಚೆಲುವೆ, ಯಾವ ಸಭೆಯಲ್ಲೂ ಎದ್ದು ರೈಸುವಂತವಳು, ಹನ್ನೆರಡೂರಲ್ಲಿ ಸಿಗದಂತವಳು. ಓನಮ್ಮ ತಡಮಾಡಲಿಲ್ಲ. ಸೀದಾ ಅಣ್ಣಯ್ಯನ ಹತ್ತಿರ ಒಸಗೆ ಒಯ್ದಳು. ಆ ಗುತ್ತಿನ ಮನೆಯ ಯಜಮಾನಿತಿ ಓನಮ್ಮನಾದ್ರೂ, ಸಮಸ್ತ ವಹಿವಾಟನ್ನು ನೋಡಿಕೊಳ್ಳುವವ ಅವಳ ಅಣ್ಣ ರಾಮಯ್ಯನೇ. ಯಾವುದಕ್ಕೂ ಅಣ್ಣಯ್ಯನ್ನ ಕೇಳದೆ ಒಂದು ಗೀಟು ದಾಟುವ ತಂಗೆಮ್ಮ ಅವಳಲ್ಲ. ಓನಮ್ಮ ಅಂತ ಅಲ್ಲ ಈ ಸುತ್ತಿನ ಯಾರೇ ಆದರೂ, ರಾಮಯ್ಯ ಒಡೇರ ಮಾತೆಂದರೆ ಸೈ ಅಂತ ಹೇಳುವವರೇ ವಿನಃ, ಅಲ್ಲ ಅನ್ನುವ ಎದೆಗಾರಿಕೆಯವರು ಹುಟ್ಟಿ ಬರಬೇಕು. ಅಂದ್ರೆ, ಅವನ ಮಾತಿಗೊಂದು ತೂಕವಿತ್ತು. ಒಳ್ಳೆ ವರ್ಚಸ್ಸಿನ ಜನ, ನಾಲ್ಕು ಮಂದಿಗೆ ಬೇಕಾದವನು.

ಬೀಡಿಯ ಹೊಗೆಯನ್ನು ಹಾರಿಸುತ್ತಿದ್ದ ಕುಷ್ಟನಿಗೆ ನಗು ಬಂತು. ಗುಳ್ಳಿಯ ಸ್ವರವನ್ನು ಮೀರುವ ಏರು ದನಿಯಲ್ಲಿ ಹೇಳತೊಡಗಿದ, 'ಅಲ್ಲ ಅವನ ಮೀಸೆ ಕಂಡೇ ಡೊಗ್ಗಾಲು ನಮಸ್ಕಾರ ಹಾಕ್ಕು. ಸುಳ್ಳಲ್ಲ ನಾ ಹೇಳುತ್ತೆ.... ಒಂದು ಮಾರು ಉದ್ದ. ಒಳ್ಳೆ ತಿಪ್ಪಿ ಹದ ಮಾಡಿದ ಹುರಿಹಗ್ಗ ಇಲ್ಲ? ಅದರ ಕಣಾಗೆ ಪಳಪಳ ಹೊಳಿಯೂ ಗೋಟುಮಂಡೆ, ಅದರ ಮೇಲೆ ಜರಿ ಅಂಚಿನ ಮುಂಡಾಸು.... ಕೈಯ್ಯಲ್ಲೊಂದು ಕೊದಂಟಿ. ಜನ ಮಾತ್ರ ಖಡಾಖಡಿ. ಬೇಕಾದವಿಗೆ ಉಪಕಾರಿ, ಎದ್ ಹಾಕ್ಕಂಡವ್ರಿಗೆ... ಮಾಭಯಂಕರ...' ನಾಕಂಕಣದ ಆ ಚೌಕಿಮನೆಯ ಒಳಗಿನಿಂದ ಹೆಬ್ಬಾಗಿಲಿಗೆ ಓಡೋಡಿ ಬಂದ ಓನಮ್ಮ ಸಂಭ್ರಮದಿಂದ ಅಣ್ಣಯ್ಯನಿಗೆ ಸುದ್ದಿ ಮುಟ್ಟಿಸಿದರೆ, ಅಣ್ಣಯ್ಯನೇನು ಅವಳ ಸಂತೋಷದಲ್ಲಿ



ಪಾಲುಗೊಳ್ಳಲು ಹೋಗಲಿಲ್ಲ. ರಾಮಯ್ಯನಿಗೆ ಈ ನೆಂಟಸ್ತಿಕೆ ಮಾಡುವುದರಲ್ಲಿ ಒಂದು ಸಾಸಮಿ ಕಾಳಿನಷ್ಟೂ ಆಸಕ್ತಿಯಿರಲಿಲ್ಲ.

"ಏನ್ ಬ್ಯಾಡ, ಯಾರ ಮಗಳು ಅವಳು? ಯಾರವ ಮಾಬಲ? ಮಂಜಪ್ಪನಿಗೆ ಅಂತಿಂಥ ಕಾಟಾಕೂಟಿ ನೆಂಟಸ್ತಿಕೆ ಬ್ಯಾಡ ಗೊತ್ತಾಯ್ತ.' ಅಂತ ಬೊಬ್ಬೆ ಹಾಕಿ ಕೈಯ್ಯಲ್ಲಿದ್ದ ದೋಂಟಿಯನ್ನು ನೆಲಕ್ಕೆ ಕುಟ್ಟಿದ್ದ. ಅವನು ಹೇಳಿದುದರಲ್ಲೂ ತಪ್ಪಿರಲಿಲ್ಲ. ಸುತ್ತುಮುತ್ತಿನ ಏಳೇಳು ಊರೊಳಗೆಲ್ಲ ಹೆಸರು ಮಾಡಿದ ತಮ್ಮ ಗುತ್ತಿನ ಮನೆಗೆ ತಕ್ಕ, ಸರಿಸಾಟಿಯಾದ ಮನೆತನ ಆಗಬೇಕೆ ಹೊರತು, ಹಾಗೆ ಯಾರುಯಾರನ್ನೋ ತಂದು ಅಳಿಯನಿಗೆ ಕಟ್ಟಲು ಅವನೇನು ಗತಿಗೋತ್ರ ಇಲ್ಲದವನೇ?

ಆದರೆ ಓನಮ್ಮ ಬಿಡಲಿಲ್ಲ. 'ಇಲ್ಲ ಅಣ್ಣಯ್ಯ, ನಿಂಗೆ ಗೊತ್ತಿಲ್ಲ. ನನ್ನ ಮಗು ಮನಸ್ಸು ಮಾಡಿದೆ ಅಂದ್ರೆ, ಆ ಹೆಣ್ಣು ಏನೋ 'ಪೆಶಲ್' ಇರಲೇ ಬೇಕು.' ಅಂತ ಹಠ ಕಟ್ಟಿದಳು. ರಾಮಯ್ಯನೂ ಸತ್ಯವಂತಿಯನ್ನು

ನೋಡದವನೇನಲ್ಲ. ಹಿಂದಿನ ಸಲ ಬಸೂರಿನ ಒಂದು ಕೋಲದಲ್ಲಿ ಅವಳನ್ನು ನೋಡಿ ಅವಳ ಅಂದ ಚಂದ, ನಡೆಯುವ ವೈಖರಿ, ಎಲ್ಲವನ್ನು ಮನಸಾರ ಮೆಚ್ಚಿದ್ದ. ಆದರೆ, ಅವಳು ತನ್ನ ಅಳಿಯನ ಗತ್ತಿಗೆ, ತಮ್ಮ ಮನೆತನದ ಘನತೆಗೆ ಸರಿಯಾದ ವಧು ಎಂದು ಒಪ್ಪುವದು ಅವನಿಗೆ ಎಣಿಸಲಾರದ್ದಾಗಿತ್ತು. ತನಗಾಗದ ಮಾಬಲಯ್ಯನ ಮಗಳು ಬೇರೆ. ಯಾರು ಬೇಕು ಹೇಳು, ಹೆಣ್ಣುಗಳಿಗೇನು ಕಮ್ಮಿಯಾ, ಸಾವಿರ ಹೆಣ್ಣುಗಳನ್ನು ಸಾಲು ಕಟ್ಟಿ ನಿಲ್ಲಿಸಿಯೇನು, ಮಂತ್ರಿಗಳ ಮಗಳನ್ನ ಬೇಕಾದರೆ ತಂದೇನು ಎಂದು ಬಗೆಬಗೆಯಲ್ಲಿ ತಂಗಿಗೆ ಹೇಳಿ ನೋಡಿದ. ತನ್ನಳಿಯನಿಗೆ ಯಾಕೆ ಇಂಥ ಬುದ್ಧಿ ಬಂತಪ್ಪ ಎಂದು ಕೊರಗಿದ. ಆದರೆ ಓನಮ್ಮ ಬಿಡಲಿಲ್ಲ. ಕೊನೆಗೂ ತಂಗಿಯ ಮಾತೇ ಗೆದ್ದಿತು.

ಮಾರನೇ ದಿನವೇ ಓನಮ್ಮನ ಸವಾರಿ ಕಾರು ಮಾಡಿಕೊಂಡು ಅಣ್ಣಯ್ಯ ಅತ್ತಿಗೆಮ್ಮರ ಜೊತೆಯಲ್ಲಿ ಬಸೂರಿಗೆ ಹೊರಟೇ ಬಿಟ್ಟಿತು. ಮಾತುಕತೆ ಗೀತುಕತೆ ನಡೆಯಿತು. ಪಾನಕ ಪನಿವಾರ ಆಯಿತು. ಮದುವೆಗೆ ದಿನ ನಿಶ್ಚಯ ಮಾಡಿಕೊಂಡೇ ವಾಪಸ್ಸು ಬಂದರು. ತಾಯಿ ಬಸರೂರಿನಿಂದ ಸುದ್ದಿ ತಂದ ಮರುಗಳಿಗೆಗೇ ಮಂಜಣ್ಣ ದಿಡನೆ ಎದ್ದು ನಿಂತಾಯಿತು. ಅವನ ತಲೆನೋವು ಹಾರಿಯಾಗಿತ್ತು. ಜ್ವರ ಮಂಗಮಾಯ. ಓನಮ್ಮನನ್ನು ಎತ್ತಿಹಿಡಿದು ಮೂರು ಸುತ್ತು ತಿರುಗಿ ಕುಣಿದಾಡಿದ ಮಗ.

ಆಚೀಚೆ ಕಾಂಬುದ್ರೊಳಗೆ ಮದುವೆ ಹುಡಿ ಹಾರಿಸಿಯೇ ಬಿಟ್ಟಳು ಓನಮ್ಮ. ಒಂದು ಸಲ ಕೈ ಹಾಕಿದ ಮೇಲೆ, ಮರ್ಯಾದೆ ಪ್ರಶ್ನೆ, ರಾಮಯ್ಯನೂ ಹಿಂದೆ ಉಳಿಯಲಿಲ್ಲ. ಮದುವೆಯ ಏರ್ಪಾಡಿನಲ್ಲಿ ನೂಲೆಳೆಯಷ್ಟು ಊನವೂ ಆಗದಂತೆ, ಧಾಂ ಧೂಂ ಗೌಜಿಯಲ್ಲಿ ನಡೆಸಿದ. ಅವನ ಹೇಳಿಕೆಯಂತೆ ಮದುವೆಯ ಸಕಲ ಕಾರ್ಯವೂ ಗುತ್ತಿನ ಮನೆಯಲ್ಲೇ ನಡೆಯಿತು. ಬಸೂರಿನಿಂದ ಬಂದ ಹೆಣ್ಣಿನವರ ದಿಬ್ಬಣವನ್ನು ಹೂಮಾಲೆ ಹಾಕಿ ಸನ್ಮಾನಿಸಿ, ಆರತಿ ಎತ್ತಿ ಎದುರುಗೊಂಡರು. ಬೇಂಡು, ವಾದ್ಯ, ಗರ್ನಾಲು, - ಗಲಾಟೆಯೋ ಗಲಾಟೆ, ಗಂಧಸಾಲೆ ಅಕ್ಕಿಯ ಮುತ್ತಿನ ಬಣ್ಣದ ಮುಗುಳನ್ನದ ಪರಿಮಳವೆಂದರೆ ಚಪ್ಪರ ದಾಟಿ ಊರುತುಂಬ ಹರಡಿತ್ತು; ಒಂದಲ್ಲ, ಎರಡಲ್ಲ, ಹದಿನಾರು ಬಗೆಯ ಭಕ್ಷ್ಯಗಳು.... ಏನುಂಟು, ಏನಿಲ್ಲ ...

ಹಾಗಂತ ಬಸರೂರಿನಲ್ಲಿ ಮಾಬಲಯ್ಯನೊಂದಿಗೆ ಮಾತುಕತೆ ಆಗುವಾಗಲೂ, ಮತ್ತೆ ಮದುವೆಯ ಸಮಯದಲ್ಲೂ, ರಾಮಯ್ಯ ಒಂದು ನಮೂನೆ ಬಿಗಿದುಕೊಂಡೇ ಇದ್ದನೆನ್ನಬಹುದು. ಆದರೆ ಒಂದು ಸಲ ಅಕ್ಷತೆ ಕಾಳು ಬಿದ್ದು, ಸತ್ಯವಂತಿಯನ್ನು ಸೊಸೆಯಾಗಿ ಮನೆ ತುಂಬಿಸಿಕೊಂಡದ್ದೇ, ಮತ್ತೆ ರಾಮಯ್ಯನ ಚರ್ಯೆ ಬದಲಾಗತೊಡಗಿತು. ಅಂದರೆ, ಸತ್ಯವಂತಿಯ ಕಾಲಗುಣ ಹಾಗಿತ್ತು.

ಕಿಣ್ ಕಿಣ್ ಕೈ ಬಳೆ, ಕಣ ಕಣ ಕಾಲ್ಗೆಜ್ಜೆ ಸದ್ದು ಮಾಡಿಕೊಂಡು ಅವಳು ಮನೆ ತುಂಬ ಓಡಾಡುತ್ತ ಇದ್ದರೆ, ಮನೆಯಲ್ಲಿದ್ದ ಎಲ್ಲರಿಗೂ ಉಮೇದಿನ ಸಂಭ್ರಮ. ಓನಮ್ಮನಿಗೆ - ಮನೆಗೆ ಬಂದದ್ದು ಸೊಸೆಯಲ್ಲ, ಹುಟ್ಟಿದ ಮಗಳೇ ಅಂಬಷ್ಟು ಪ್ರೀತಿ. ಮಂಜಪ್ಪನಂತೂ ಹೆಂಡತಿಯನ್ನು ಹೆಜ್ಜೆ ಬಿಡದೆ ಅನುಸರಿಸುತ್ತಿದ್ದ. ಇನ್ನು ರಾಮಯ್ಯನೂ ಹೊಸ ಪ್ರಾಯ ಬಂದವರ ಹಾಗೆ ಓಡಾಡಲಿಕ್ಕೆ ಸುರುಮಾಡಿದ್ದ. ಗುತ್ತಿನ ಮನೆಯ ಸೊಸೆಯ ಮೇಲೀಗ ಅವನಿಗೆ ಎಲ್ಲಿಲ್ಲದ ಅಕ್ಕರೆ.

'ಮಂಜಣ್ಣನಿಗೆ ಹೆಂಣ್ತಿ ಮೇಲೆ ಅದು ಯಾವ ನಮೂನೆ ಪ್ರೀತಿ ಅಂದ್ರೆ.... ಅಯ್ಯಯ್ಯಯ್ಯಯ್ಯಯ್ಯ..... ಈ ಲೋಕದ್ದಲ್ಲ ಅದು. ಹುಟ್ಟಿದ ಮೇಲೆ ಯಾರೂ ಮದುವೆಯೇ ಆಯ್ಲಿಲ್ಯ ಅಂತ ಕಾಣ್ಕು. ಅಲ್ಲ, ಯಾವುದೂ ಅತಿ ಮಾಡುಕಾಗ ಅಂತ ಹೇಳೂದು ಸುಳ್ಳಲ್ಲ ಕಾಣಿ.' ಎಂದು ಕುಷ್ಟ ಲೊಚಗುಟ್ಟಿ ಸುಮ್ಮನಾದ.

'ಯಾಕೆ? ಏನಾಯ್ತು?'

"ಆಪುದೆಂತ? ಹೇಳ್ತೆ, ಕೇಣಿ. ಎಂಥ ಹೇಳಿದೆ? ಹೌದು; ಹೆಂಣ್ತಿ ಮೇಲೆ ವಿಪ್ರೀತ ಪ್ರೀತಿ, ಅಂದ್ರೆ, ಎಲ್ಲಿ ಹೋಪುದಾದ್ರೂ ಅವಳನ್ನ ಕಟ್ಟಿಕೊಂಡೇ ಹೋಪುದು. ಒಂದ್ಸಲ ಕಮಲಶಿಲೆಗೆ ಏನೋ ಕೆಲ್ಸದ ಮೇಲೆ ಒಬ್ಬನೇ ಹೋಯಿದ್ದಂಬ್ರು, ಮಾವಿನ ಹಣ್ಣಿನ ಕಾಲ. ಹಣ್ಣು ಕತ್ತರಿಸಿ ಕೊಟ್ಟರಂಬ್ರು, ಕಮಲಶಿಲೆ ಪೈರಿ ಅಂದ್ರೆ ಭಾಳ ಹೆಸ್ರು ಹೋದ್ದಲ್ಲ. ಒಂದು ಹೋಳು ಬಾಯಿಗೆ ಹಾಕ್ಕಂಡದ್ದಷ್ಟೇ ಅಂಬ್ರು, ಉಳಿದದ್ದನ್ನ ಎಲೆಚೂರಲ್ಲಿ ಕಟ್ಕಂಡು ಸತ್ಯವಂತಿಗೆ ಅಂದ್‌ಹೇಳಿ ಹಿಡ್ಕಂಡ್ ಬಪ್ಪುದೇಯಾ ಅಂವ, ಗೆಳೆಯರ ಬಗೆಯವರು ಕೇಳಿದವರೆಲ್ಲ ಸ್ವಲ್ಪ ಹೀಲಿ ಮಾಡಲಿಲ್ಲ. ಅಲ್ಲ, ಆ ನಮೂನಿಯೂ ಉಂಟ ಹಾಂಗಾರೆ? ಹೆಂಣ್ತಿ ಅಂದ್ರೆ ಬೇರೆ ಯಾರೂ ಕಾಣಲೇ ಇಲ್ಲ ಅಂಬಾಗೆ, ಸೀರೆ, ಚಿನ್ನ, ಮತ್ತೊಂದು, ಇನ್ನೊಂದು, ಅವಳು ಕೇಳಿದ್ದು, ಕೇಳೂಕ್ಕುಂಚೆ, ಅವಳ ಎದ್ರು, ತಕೋ, ಬಂದು ಬಿದ್ದಾಯ್ತು.'

"ಅಲ್ಲ, ಮತ್ತ್ ಅವಳೂ ಹಾಂಗೇ ಅವನ್ನ ಜೀವದ ಗಂಟೆ ಕಣಾಗೆ ಪ್ರೀತಿ ಮಾಡ್ ತಿದ್ದಳಂತಲ್ಲಾ, ಅದ್ ಹೇಳ್ ಮತ್ತೆ' ಅಂದಳು ಗುಳ್ಳಿ ಕುಷ್ಟನಿಗೆ

'ಹಾಂ, ಅಲ್ದ ಮತ್ತೆ? ಅವ ಹೇಳಿದ್ದು ಅವಳಿಗೆ ಸಮ; ಅವಳು ಹೇಳಿದ್ದು ಅವನಿಗೆ ಜೊತೆ ಹಕ್ಕಿಗಳು.' ಹಕ್ಕಿನ ತಾಯಿ ಮನೆಕ್ಕಿಂತ ಅವಳು ಇಲ್ಲಿ ಗಂಡನ ಮನೆಯಲ್ಲಿ ಇರುತ್ತಿದ್ದದ್ದೇ ಜಾಸ್ತಿ. ಇನ್ನು ಬಸೂರಿಗೆ ಹೋಗುವುದಾದರೂ

ಮಂಜಪ್ಪನ ಸವಾರಿಯನ್ನು ಕಟ್ಟಿಕೊಂಡೇ. ಅವಳು ಅಲ್ಲಿ ಇರುವಷ್ಟು ದಿವಸವೂ ಅವನೂ ಅಲ್ಲೇ ಮೊಕ್ಕಾಂ, ಇದು ಮಾತ್ರ ರಾಮಯ್ಯನಿಗೆ ತೀರ ಅತಿಯಾಯಿತೆಂದು ಒಮ್ಮೊಮ್ಮೆ ಕಾಣುತ್ತಿದ್ದುದಿತ್ತು. ಹಾಗೆಂದು



ತಂಗಿಯೊಡನೆ ಆಡಿಯೂ ತೋರಿಸುತ್ತಿದ್ದ. ಆದರೆ ಓನಮ್ಮನಿಗೋ ಮಗನ ಮೇಲಿನ ಮೋಹದಲ್ಲಿ ಮಗ ಮಾಡಿದ್ದೆಲ್ಲ ಚಂದ ಕಾಣುತ್ತಿತ್ತು.

ವರ್ಷದೊಳಗೆ ಓನಮ್ಮ ಅಜ್ಜಿಯಾದಳು. 'ಮಗು ಸೂರ್ ದೇವ್ರಂದ್ರೆ ಕೊಂಗಾಟದ ಕೊಡಿಮುದ್ದು. ಎಲ್ಲರೂ ಮುದ್ದುಮಾಡುವವರೇ. ಅಜ್ಜಿಯ ಮಡಿಲಲ್ಲಿ ಆಡಿ ದಣಿದರೆ, ತಾಯಿಯ ಹೆಗಲಲ್ಲಿ ನಿದ್ರಿಸಿಯಾನು. ಮಂಜಪ್ಪನ ಬೆನ್ನ ಮೇಲೆ ಸವಾರಿ ಮಾಡುತ್ತಿದ್ದರೆ, ರಾಮಯ್ಯ ತಾನು ಸೆಳೆದುಕೊಂಡು ಲಾಲಿಸಿಯಾನು. ಒಮ್ಮೊಮ್ಮೆ ರಾಮಯ್ಯ, ಹೀಂಗೆ ಹೆಂಡಿ ಸೆರಗು ಹಿಡ್ಕಂಡೇ ಇದ್ದರೆ, ಕೆಲಸದ ಜವಾಬ್ದಾರಿ ಕಲಿಯೂದು ಏಗ್ಗಿಗೆ? ಮಕ್ಕಳಾಟಿಕೆ ಜಾಸ್ತಿ ಆಯ್ತು,' ಎಂದು ಬೈದು, ಮಂಜಪ್ಪನನ್ನು ಕೆಲಸದ ಮೇಲೆ ಹೊರಗೆ ಕಳಿಸಿ, ತಾನು ಸತ್ಯವಂತಿಯ ಕೋಣೆಯಲ್ಲಿ ಮಗುವನ್ನು ಆಡಿಸಿಕೊಂಡು ಕುಳಿತುಬಿಡುತ್ತಿದ್ದ.

"ಅದೇ ಹೊತ್ತಿಗೆ ಅಲ್ಲ ಮಂಜಪ್ಪನಿಗೆ ಆ ಮಳಿಗೆ ಶಂಕ್ರಣ್ಣನ ದೋಸ್ತಿ ಆದದ್ದು?' ಕೂರಿ ಕೆಳಗೆ ಜರುಗಿದ್ದ ತಲೆಯನ್ನು ಗರ್ಕೆಂದು ಕೊಡಹಿದ ಗುಳ್ಳಿ ಪ್ರಶ್ನೆಯೋಪಾದಿಯಲ್ಲಿ ಹೇಳಿದಳು.

'ಹೌದನ ಮಾರಾಯ್ತಿ, ನಿದ್ದೆಯೊಳಗೂ ನಿನ್ನ ಕೆಮಿ ಸೂಕ್ಷ್ಮ ಅಡ್ಡಿಲ್ಲ, ಬಿಡು. ಹಾಂ, ಅದೇ ಮಳಿಗೆ ಶಂಕ್ರಣ್ಣ ಅಂದ್ರೆ ಭಾಳ ಡೌಲಿನ ಜನ. ಅವನದ್ದು ವ್ಯವಾರ ಅಂದ್ರೆ ಒಂದೆರಡಲ್ಲ, ಎಲ್ಲದೊಳಗೂ ಇದ್ದ ಅವ. ಅದು ಯಾವ ಗಳಿಗೆಯಲ್ಲಿ ಮಂಜಪ್ಪನಿಗೂ ಅವನಿಗೂ ದೋಸ್ತಿ ಆಯ್ತು! ಮಾ ಕೆಟ್ಟ ಗಳಿಗೆ! ಮಾ... ಮಾ. ಸುಟ್ಟ ಗಳಿಗೆ ಅಂದ್ರಲ್ಲ...... ಶಂಕ್ರಣ್ಣ.... ತೆಗ್ಗ ತೆಗ್ಗ ಆ ಮನೆಯನ್ನ. ಕುಪ್ಪ ಸುಸ್ತು ಹೊಡೆದವನಂತೆ ನಿಟ್ಟುಸಿರುಬಿಟ್ಟು, ಎಡಗೈಯಿಂದ ಪರಪರ ಮಂಡೆ ಕೆರೆದುಕೊಂಡ.

'ಎಂಥ ಮಾಡ್ದ ?'

"ಅಯ್ಯೋ, ಮಾಡುದಾ? ಅವ ಎಂಥ ಮಾಡಲಿಲ್ಲ ಹೇಳಿನಿ. ಅವನಂಥವನ್ನ ಕುತ್ತಿಗೆ ಹಿಚುಕಿಯೇ ಸಾಯಿಸಬೇಕು. ... ಆದದ್ದೂ ಹಾಂಗೇ ಅಂತ ಮಾಡ್ಕಣಿ. ಅಲ್ಲ ಎಂಥ ಆಯ್ತುಂದ್ರೆ.....' ದೊಡ್ಡ ವ್ಯಾಪಾರಸ್ತ ಅವ. ಗಂಗೊಳ್ಳಿಯಲ್ಲಿ ದೊಡ್ಡ ಮಳಿಗೆ ಇದ್ದಿತ್ತು. ಭತ್ತ ಧಾನ್ಯ ತೆಕಂಡು ದಾಸ್ತಾನು ಮಾಡಿ, ಅಲ್ಲಿಂದ ಮಚ್ಚೆಯಲ್ಲಿ ಬೊಂಬಾಯಿ, ಸೂರತ್, ಯಾಕೆ, ಮಸ್ಕತ್ತಿನವರೆಗೂ ಅವನ ಸರಕು ಹೋಗುತ್ತಿತ್ತು. ಮಂಜಪ್ಪನ ಗುತ್ತಿನ ಮನೆಗೆ

ಅವನು ಭತ್ತ, ತೆಂಗಿನಕಾಯಿ ಸಾಟೆ ಹಿಡಿಯಲು ಬರುತ್ತಿದ್ದ. ಒಂಥರಾ ಶೋಕಿಲಾಲಾ. ಗುತ್ತಿನ ಮನೆಗೆ ಬಂದರೆ ಅದೂ ಇದೂ ಮಾತಾಡುತ್ತ ಕೂತುಕೊಂಡು ಬಿಡುತ್ತಿದ್ದ. ಮಂಜಪ್ಪನಿಗೂ ಅವನಿಗೂ ಗುಪ್ತ ಆದದ್ದು ಹಾಗೆ, ಮತ್ತೆ ಭಾಳ ದೋಸ್ತಿ ಬೆಳೆಯಿತು.

'ಹಾಂಗೆ ಮನೆಗೆ ಬಪ್ಪುಕು ಸುರುವಾದ್ದೇ.... ಮತ್ತೆ ಯಾವಾಗ ನೋಡಿರೂ ಗುತ್ತಿನ ಮನೇಲ್ಲೇ. ಬಂದು ಕೂತು, ಸತ್ಯವಂತೀ, ನಿನ್ನ ಕೈ ಕಾಪಿ ಅಂದ್ರೆ ಅಮೃತ ಅಂತ ಕಾಪಿ ಕೇಂಬುದು, ಮಜ್ಜಿಗೆ ನೀರು ಕುಡಿಯೂದು.'

ಶಂಕ್ರಣ್ಣನ ಈ ಅತಿ ಸಲಿಗೆಯ ವಿಷಯದಲ್ಲಿ ರಾಮಯ್ಯನಿಗೆ ಮಾತ್ರ ಏನೇನೂ ಮನಸ್ಸಮಾಧಾನವಿರಲಿಲ್ಲ. ಅವನಿಗಂದರೆ ಎಲ್ಲದೊಳಗೂ ಒಂದು ಶಿಸ್ತು ಬೇಕು, ಯಾವುದಕ್ಕೂ ಒಂದು ನಿಯಮ ಇರಬೇಕು ಅಂತ ಹೇಳುವವ; ಇವ ಕಂಡ್ರೆ ಹೀಂಗೆ



ಆದ್ರೆ ರಾಮಯ್ಯನಿಗೆ ಹೇಳೋಕೆ ಸಂದಿಗ್ಧ, ದೊಡ್ಡ ಕುಳವಾರು; ಸೋದರಳಿಯನ ದೋಸ್ತ ಬೇರೆ. ಆದರೂ ಸೂಕ್ಷ್ಮದಲ್ಲಿ ಹೇಳಲಿಕ್ಕೆ ನೋಡಿದರೆ ಮಂಜಪ್ಪನಿಗೆ ಆದು ತಥ್ಯವಾಗಲಿಲ್ಲ. ಸ್ವಲ್ಪ ಮನಸ್ತಾಪಕ್ಕೆ ಎಡೆಯಾಯಿತೇ ವಿನಃ ಮತ್ತೇನೂ ಅದರಿಂದ ಉಪಕಾರವಾದಂತೆ ಕಾಣಲಿಲ್ಲ.

ಮಂಜಪ್ಪ, ಸತ್ಯವಂತಿಯರಿಗೆ ಎಲ್ಲಿಗೆ ಹೋಗಲಿಕ್ಕಿದ್ದರೂ ಶಂಕ್ರಣ್ಣ ತನ್ನ ಕಾರು ಕಳುಹಿಸಿಕೊಡುತ್ತಿದ್ದ. ಸತ್ಯವಂತಿ ಬನ್ನೂರಿಗೆ ಹೋಗುವುದಾದರೆ, ಅವನ ಕಾರಲ್ಲೇ ಹೋಗಿ ಬರುತ್ತಿದ್ದಳು. ಕೆಲವೊಮ್ಮೆ ಶಂಕ್ರಣ್ಣ ಮಂಗೂರಿಗೋ, ಬೊಂಬಾಯಿಗೋ ಕೆಲಸದ ಮೇಲೆ ಹೊರಟರೆ, 'ಏ ಮಂಜಪ್ಪ, ಇಲ್ಲಿ ಎಂಥ ಮಾಡ್ತಿ? ನಡಿ ನನ್ನೊಟ್ಟಿಗೆ. ಅಂತ ಜೊತೆಗೆ ಕರೀತಿದ್ದ. ಒಟ್ಟಿಗೆ ಸತ್ಯವಂತಿಯನ್ನೂ ಹೊರಡಿಸುತ್ತಿದ್ದ. ಶಂಕ್ರಪ್ಪನ ಒಡನಾಟ, ಅವನ ರೀತಿ ನೀತಿ ಕ್ರಮ ಎಲ್ಲ ಸತ್ಯವಂತಿಗೆ ರಂಗಾಗಿರಬೇಕು. ಇಲ್ಲದಿದ್ದರೆ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುವ ಗಂಡನನ್ನು ಬಿಟ್ಟು ಅವಳು ಅವನ ಬಲೆಗೆ ಬೀಳ ಬೇಕೆಂದರೆ? ಪುಣ್ಯಕ್ಕೆ ಇದನ್ನೆಲ್ಲ ನೋಡಲಿಕ್ಕೆ ಓನಮ್ಮ ಹೆಚ್ಚುಕಾಲ ಬದುಕುಳಿಯಲಿಲ್ಲ. ಮಳೆಗಾಲದಲ್ಲಿ ಜೋರು ಸೀತಜ್ವರ ಬಂದದ್ದೇ, ಎದೆಯಲ್ಲಿ ನೀರು ತುಂಬಿದಂತಾಗಿ ಅವಳು ಕೊನೆಯುಸಿರೆಳೆದಿದ್ದಳು.

ಮಂಜಪ್ಪನಿಗೆ ಸ್ವಲ್ಪ ತಡವಾಗಿಯೇ ತನ್ನ ಮಡದಿಯ ಚರ್ಯೆಯ ಅರಿವಾಯಿತು. ಬಸೂರಿಗೆ ಹೋಗಲಿಕ್ಕಿದ್ದಾಗಲೆಲ್ಲ ಶಂಕ್ರಣ್ಣ ಯಾಕೆ ಕಾರು ಕಳುಹಿಸುತ್ತಾನೆಂದು ಅವನಿಗೆ ಗೊತ್ತಾಗಿ ಆಘಾತವಾಯಿತು. ಕಣ್ಣಾರೆ ನೋಡಿಯೇ ಸಿದ್ಧ ಎಂದು ಒಂದು ದಿನ ಸತ್ಯವಂತಿ ಹೋಗುವಾಗ ಕಾರನ್ನು ಹಿಂಬಾಲಿಸಿ ಹೋದ, ಕಾರು ಬೇರೆ

ದಾರಿ ಹಿಡಿದು ಶಂಕ್ರಣ್ಣನ ಮನೆಯೆದುರು ನಿಂತಾಗ ಅವನಿಗೆ ಗರಬಡಿದಂತಾಗುತ್ತದೆ. ಸತ್ಯವಂತಿ ಕಾರಿನಿಂದ ಇಳಿದು ಆ ಮನೆಯೊಳಗೆ ಹೋದ ಸ್ವಲ್ಪ ಹೊತ್ತಿನಲ್ಲಿ ಮಂಜಪ್ಪನೂ ಆ ಮನೆಯನ್ನು ಹೊಕ್ಕ. ಮುದ್ದಿನ ಮಡದಿಯನ್ನು ಆಪ್ತ ಸ್ನೇಹಿತನ ತೆಕ್ಕೆಯಲ್ಲಿ ನೋಡಿದ್ದೇ ಅವನ ಮನಸ್ಸಿನ ಸ್ಥಿಮಿತ ಪೂರ ತಪ್ಪಿತು. ಸತ್ಯವಂತಿಯೆಂದರೆ ಅದೆಷ್ಟು ಪ್ರೀತಿಯಿತ್ತೋ, ನಿಮಿಷಮಾತ್ರದಲ್ಲಿ ಅದು ಅಷ್ಟೇ ಗಾತ್ರದ ದ್ವೇಷವಾಗಿ ಬದಲಾವಣೆಗೊಂಡಿತ್ತು. ಸಿಟ್ಟಿನ ಭರದಲ್ಲಿ ಒಂದೇ ಪೆಟ್ಟಿಗೆ ಹಾರಿ, ಶಂಕ್ರಣ್ಣನನ್ನು ಹಿಡಿದೆಳೆದು ಬಗ್ಗಿಸಿ, ಕುತ್ತಿಗೆ ಹಿಚುಕಿ ಕೊಂದೇ ಬಿಟ್ಟ. ಸತ್ಯವಂತಿಯನ್ನು ದರದರ ಎಳೆದುಕೊಂಡು ಮನೆಗೆ ತಂದು ಕೊಟ್ಟಿಗೆಯಲ್ಲಿ ಕೂಡಿಟ್ಟು ಅನ್ನ ನೀರು ಕೊಡದೆ ಸಾಯಿಸಿದ.

ಈ ಯಾವತ್ತೂ ಸಂಗತಿ ನಡೆಯುವಾಗ ಹರಹರಾ ಅಂತ ರಾಮಯ್ಯ ಊರಲ್ಲಿರಲಿಲ್ಲ. ಹರಕೆಯ ಮೇಲೆ ಕಾಪು ಮಾರಿಯಮ್ಮನ ಗುಡಿಗೆ ಹೋದವನಿಗೆ ಅಲ್ಲೇ ಪೈಕಿಯವರ ಮನೆಯಲ್ಲಿ ನಾಲ್ಕು ದಿನ ಉಳಿಯಬೇಕಾಗಿ ಬಂದಿತ್ತು. ವಾಪಸ್ಸು ಬಂದವ ಎದೆ ಬಡಿದುಕೊಂಡ. ತನ್ನ ಮಾತಿಗೆ ಕಿವಿಗೊಡದೆ ಇದೆಂತಹ ಮೂರ್ಖತನ ಮಾಡಿದಿ; ಗುತ್ತಿನ ಮನೆಯ ಮರ್ಯಾದೆಯನ್ನು ಮೂರು ಕಾಸಿಗೆ ಮಾರಿದಿಯಲ್ಲ ಮಗನೇ ಎಂದು ಮಂಜಪ್ಪನನ್ನು ಸಿಕ್ಕಾಬಟ್ಟೆ ಜರೆದ, ಕೊಲೆಯಂತಹ ವಿಷಯವನ್ನು ಎಷ್ಟು ದಿನ ಗುಟ್ಟಿನಲ್ಲಿಡಲು ಸಾಧ್ಯ? ಪೋಲೀಸರಿಗೆ ಸುಳಿವು ಸಿಕ್ಕಿ ಇನ್ನೇನು ಗುತ್ತಿನ ಮನೆಗೆ ಧಾಳಿ ಇಡುತ್ತಾರೆಂದಾಗುವಾಗ, ಮಂಜಪ್ಪನಿಗೆ ಬದುಕು ಭಾರವಾಗಿ, ಜೀವನದಲ್ಲಿ ಜಿಗುಪ್ಸೆ



ಬಂದು ಉಪ್ಪರಿಗೆಯ ಭಾವಣೆಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ.

ಗಂಡನನ್ನೂ, ಮಿಂಡನನ್ನೂ ಬಲಿತೆಗೆದುಕೊಂಡ ಸತ್ಯವಂತಿ ಪಿಶಾಚಿಯಾಗಿ ಬ್ಯಾಣದ ಈಚೆ ಬದಿಗಿನ ರಸ್ತೆ ಬದಿಯ ಗೋಳಿ ಮರದಲ್ಲಿ ಇರಲಿಕ್ಕೆ ಸುರುಮಾಡಿದಳು. ರಾತ್ರಿ ಹೊತ್ತು ಆ ಜಾಗದಲ್ಲಿ ಹಾದು ಹೋಗುವವರನ್ನು ಹಿಡಿಯುತ್ತಾಳೆಂದು ಎಲ್ಲರೂ ಹೇಳುತ್ತಾರೆ. ಅಂತೂ ಏನಾದರೂ ಉಪದ್ರ ತಪ್ಪಿದ್ದಲ್ಲ.

ಕತೆ ಕೇಳುತ್ತಿದ್ದ ಗುಳ್ಳಿಯ ಕೊರಳು ಸರ್ತವಾಯಿತು. ಅವಳ ನಿದ್ದೆಯೆಲ್ಲ ಹಾರಿಹೋಯಿತು. 'ಕತಿ ಪೂರ ತದ್ದಿತ ಮಾಡಿ ಹೇಳೀಯಲ್ಲ ಮಾರಾಯ. ನಮ್ಮ ಸತ್ಯವಂತಿ ಹೆಣ್ಣಂದ್ರೆ ಕೈ ತೊಳು ಮುಟ್ಟಬೇಕ್ ಬಲ್ಯ, ಬಾಯಿಗೆ ಬಂದದ್ ಅನ್‌ಬೇಡ, ನಿನ್ನ ಬಾಯಲ್ಲಿ ಹುಳ ಅಕ್ಕು, ಗೊತ್ತಾಯ್ತುಲ್ಲ.' ಎಂದು ಏರುಸ್ವರದಲ್ಲಿ ಗದರಿದಳು. "ಕತಿ ಯಾರ ಕೈಯ್ಯಲ್ಲುಂಟ ಅವರು ಹೇಳಿದ್ದೇ ಕತಿಯಾ ಹಾಂಗಾರೆ?' ಎಂದಳು.

ಆಗ ಕುಷ್ಟ, 'ನೀ ಎಂಥ ಹೇಳುತ್ತು? ಇಲ್ಲಿ ಭೂತಕ್ಕೆ ಕೊಟ್ಟಾಗ ನುಡಿ ಹೇಳಿದ್ದು ಸುಳ್ಳ ಹಾಂಗಾರೆ? ನಿಮ್ಮ ಬಸ್ರೂರಿನ ಕತಿ ಬ್ಯಾರೆ ಇತ್ತಾ ಏನಾ' ಎಂದನೇ ಹೊರತು, ಅವಳ ಏರುಸ್ವರವಾಗಲೀ, ಸಿಟ್ಟಿನ ಬೈಗಳಾಗಲೀ ಅವನನ್ನು ಒಂದೆಳೆಯನ್ನೂ ವಿಚಲಿತಗೊಳಿಸಿದಂತೆ ಕಾಣಲಿಲ್ಲ. ಗುಳ್ಳಿಯೂ ಅಷ್ಟೆ ಸ್ವರವನ್ನೇನೋ ಏರಿಸಿದ್ದಳು; ಸಿಟ್ಟು ಮಾಡಿ ಗದರಿದ್ದಳು. ಆದರೆ ಅವಳ ಮನಸ್ಸು ಬೇರೆಲ್ಲೋ ಹೋಗಿತ್ತು:

ಒಮ್ಮೆ ಬಸ್ರೂರಿನಲ್ಲಿ ಜೊತೆಯ ಹೆಂಗಸರೊಂದಿಗೆ ನೇಜಿ ನೆಡುತ್ತಿದ್ದಾಗ ಸತ್ಯವಂತಿಯ ಬಗ್ಗೆ ಕಟ್ಟೆಮನೆ ಅಂತಿ ಹೇಳಿದ ಮಾತುಗಳು ಗುಳ್ಳಿಯ ಕಿವಿಯಲ್ಲಿ ರಿಂಗುಣಿಸುತ್ತಿದ್ದವು. ಮಾತನಾಡುತ್ತ, ಕೇಳುತ್ತ, ಅವರೆಲ್ಲ ಪದ ಕಟ್ಟಿ ಹಾಡಿದ್ದರು:

ಸತ್ಯಂತೀ????? ಸತ್ಯಂತೀ????.....ನಮ್ಮವ್ವ ಸತ್ಯವಂತೀ

ಬಂದಾಳೇ ನಮ್ಮವ್ವ ಅಂಗೈ ಮೇಲೆ ಮದರಂಗೀ

ಅಂಗೈ ಮೇಲೆ ಮದರಂಗೀ ಕಣ್ಣ ಕೊಡಿ ಕಾಡೀಗೀ

ಬಂದಾಳೇ ನಮ್ಮವ್ವ ಉಡುಪಿ ಮಗ್ಗದ ಸೀರೆ

ಉಡುಪಿ ಮಗ್ಗದ ಸೀರೆ ಒನಪಾಗಿ ಉಟ್ಯಾಳೆ

ಬಂದಾಳೇ ನಮ್ಮವ್ವ ಎಡದ ಜಡೇಲಿ ಎಡಸಂಪಿಗೆ

ಎಡದ ಜಡೇಲಿ ಎಡಸಂಪಿಗೆ ಬಲಕ್ಕೆ ಮುಡಿದಳೆ ಎಳೆಸಿಂಗಾರ

ನಮ್ಮವ್ವ ಸತ್ಯವಂತಿ........

ಅದೇ ಗುಂಗಿನಲ್ಲಿ, 'ಗಂಡನ ಮೇಲೆ ಪ್ರಾಣ ಇಟ್ಕಂಡಿದ್ದಕ್ಕೆ ನಮ್ಮ ಸತ್ಯಂತಿ ಎಂದಳು ಗುಳ್ಳಿ ಅವ ಹೇಳಿದ್ದು ಸತ್ಯ, ಅವ ಮಾಡಿದ್ದು ಚಂದ. ಅಂಥದ್ದರಲ್ಲಿ, ಏನಾಯ್ತುಂದ್ರೆ, ಆ ಶಂಕ್ರಣ್ಣ ಇಲ್ಲ, ಮಾ ಕುತಂತ್ರಿ ಅವ. ಎಲ್ಲ ಎಡಾಂತರದಲ್ಲೇ ದುಡ್ಡು ಮಾಡಿದ್ದು, ಸುಟ್ಟವ. ಯಾಪಾರ ಗೀಪಾರ ಅಂತ ಮಂಜಪ್ಪನ ಸಿಕ್ಕಿ ಹಾಕಿಯ. ಮಂಜಪ್ಪನಿಗೆ ನಷ್ಟದ ಮೇಲೆ ನಷ್ಟ, ಕುಷ್ಟ ನೀ ಹೇಳಿದ್ದು ಒಂದಕ್ಕೆ ಸಮನೇ ಮನೆಗೆ ಬರ ಇದ್‌ನಲ್ಲ. ಕಣ್ಣು ಹಾಕಿಯ ಸತ್ಯವಂತಿ ಮೇಲೆ. ಮಂಜಪ್ಪನ ಹತ್ತಿರ ಹೇಳಿದಂಬ್ರು ಹೇಳಿದ್ದಂದ್ರೆ, ಕರಾರು

ಹಾಕಿದ ಅಂಬ್ರು, - ಸತ್ಯವಂತಿನ್ನ ಕಳ್ಸು, ನಿನ್ನ ನಷ್ಟ ಎಲ್ಲ ತುಂಬಿ ಕೊಡ್ತೆ, ಸಾಲದ ಕಡತ ಹಿಂದೆ ಮಾಡ್ತೆ, ಇಲ್ಲದ್ರೆ, ವ್ಯಾಜ್ಯ ಮಾಡಿ ಜೈಲಿಗೆ ಕಳಿಸ್ತೆ ಅಂತ. ಆಯ್ತು! ಮಂಜಪ್ಪ ಕಂಗಾಲು. ಎಂಥ ಮಾಡುದಂತ ಗೊತ್ತಾಯ್ಲಿಲ್ಲ. ಹೊಟ್ಟೆಯೊಳಗೆ ಶಂಕ್ರಣ್ಣನ ಮೇಲೆ ಕುದಿಕುದಿ ಸಿಟ್ಟು ಉಕ್ಕುತ್ತಿತ್ತು. ಹ್ಯಾಂಗರೂ ದುಡ್ಡು ಕೊಡ್ಸಿ ಅವನ ಗಾಳದಿಂದ ಬಚಾವಾಯ್ಕು ಅಂತ ಯೋಚನೆ ಮಾಡಿ ಮಾಡಿ ಸುಸ್ತು ಹೊಡೆದು ಮನೆಗೆ ಬಂದು ಉಪ್ಪರಿಗೆ ಹತ್ತಿದ.'

ಪಡು ಉಪ್ಪರಿಗೆಯಲ್ಲಿನ ಅವಳ ಕೋಣೆಗೆ ಬರುವಾಗ ಅವನ ಚೆಲುವೆ ಕನ್ನಡಿಯೆದುರು ನಿಂತು ಆಗಷ್ಟೇ ಸ್ನಾನ ಮಾಡಿ ಬೈರಾಸದಲ್ಲಿ ಸುತ್ತಿದ್ದ ಕೂದಲ ಗಂಟನ್ನು ಬಿಚ್ಚಿ ತಲೆ ಕೊಡಹಿಕೊಳ್ಳುತ್ತಿದ್ದಳು. ಮಂಜಪ್ಪ ಸುಮ್ಮನೆ ಬಾಗಿಲ ದಾರಂದಕ್ಕೆ ಒರಗಿ ನಿಂತು ತೆರೆ ತೆರೆಯಾಗಿ ಕೆಳಗಿಳಿಯುತ್ತ ಬೆನ್ನ ತುಂಬ ಹರಡಿ ನಿಂತ ಅವಳ ಕೂದಲ ರಾಶಿಯನ್ನೇ ನೋಡಿದ. ಹಣೆಗೆ ಕುಂಕುಮವಿಟ್ಟು, ಕಣ್ಣಿಗೆ ಕಾಡಿಗೆ ತೀವಿಕೊಳ್ಳುವಾಗ ಅವಳ ದೃಷ್ಟಿ ಕನ್ನಡಿಯೊಳಗಿನ ಮಂಜಪ್ಪನ ಮೇಲೆ ಬಿತ್ತು. ಬೆರಳ ತುದಿಯ ಕಾಡಿಗೆಯನ್ನು ನೆತ್ತಿಯ ಕೂದಲಿಗೆ ನೀವಿಕೊಳ್ಳುತ್ತ ಹಿಂದಿರುಗಿ ಅವನನ್ನು ನೋಡಿ, ಯಾಕೆ ಒಳಗೆ ಬರದೆ ಅಲ್ಲೇ ನಿಂತಿದ್ದೀ ಎನ್ನುವಂತೆ ನಕ್ಕಳು. ಎಂದಿನಂತಾದರೆ ಅವನು, 'ರಾಣಿಯಮ್ಮನ್ನ ಕಾಂಬುದು' ಎನ್ನುತ್ತಿದ್ದನೇನೋ.

ಹೇಳುತ್ತ ಹೇಳುತ್ತ ಗುಳ್ಳಿಗೆ ಅಂತಿ ತನಗೆ ಹೇಳಿದ್ದು ಸ್ವಲ್ಪ ಬೇರೆ ಇತ್ತಲ್ಲವೇ ಎಂದು ಚೂರು ಸಂಶಯವಾದರೂ ಅವಳದನ್ನು ಲೆಕ್ಕಿಸಲಿಲ್ಲ. ಹಾಗೆ ಕತೆಗೆ ಅಲ್ಲಲ್ಲಿ ತನ್ನದೇ ಒಂತಟಕು ಮಸಾಲೆ ಬೆರೆಸುವುದೆಂದರೆ ಅವಳಿಗೆ ಯಾವಾಗಲೂ ಖುಶಿಯೇ.

ಜಡೆ ಹೆಣೆಯುತ್ತ ಅವನತ್ತ ನಡೆದು ಬರುತ್ತಿದ್ದ ಮುದ್ದಿನ ಮಡದಿಯನ್ನು ನೋಡಿ ಶಂಕ್ರಣ್ಣನ ಕರಾರನ್ನು ನೆನೆದು ಮಂಜಪ್ಪ ಸಂಕಟ ಪಟ್ಟ, ಅವಳ ಮುಖವನ್ನು ನೋಡುತ್ತಿದ್ದಂತೆ, ಅವಳ ಬಟ್ಟಲು ಕಣ್ಣುಗಳನ್ನು ಮತ್ತು ಅದರ ಆಳವನ್ನು ಎದುರಿಸುವುದು ತನ್ನಿಂದಾಗದ ಮಾತೆಂಬುಂದು ಅವನಿಗೆ ಅನಿಸತೊಡಗಿತು. ಸತ್ಯವಂತಿಗಾಗಲೇ ಸಂದೇಹವಾಗತೊಡಗಿತ್ತು. ಅವನ ಮುಖದ ಔದಾಸ್ಯ, ಕಣ್ಣಲ್ಲಿನ ಪಸೆ, ಎಂದಿನಂತಿಲ್ಲದ ಪರಿ - ಎಲ್ಲಿಯೋ ಏನೋ ತಪ್ಪಿದೆಯೆಂಬ ಅರಿವನ್ನು ಅವಳ ಹೃದಯಕ್ಕೆ ಮುಟ್ಟಿಸಿದ್ದುವು. ತನ್ನ ಮಾರುದ್ದದ ಜಡೆಯನ್ನು ಅವನ ಕುತ್ತಿಗೆಯ ಸುತ್ತ ಸುತ್ತಿ ಹಿಡಿದು, 'ಏನಾಯ್ತು, ಹೇಳು. ನಾನು ಕೇಳಲಿಕ್ಕೆ ತಯಾರು. ' ಎಂದು ಅವನನ್ನು ಕಣ್ಣಲ್ಲೇ ಬಂಧಿಸಿ ಕೇಳಿದಳು. ಅವನು, 'ನನ್ನ ಸತ್ಯ......' ಎಂದು ಸುರುಮಾಡಿದ್ದೆಷ್ಟೋ ಅಷ್ಟೆ. ಅವನ ಗಂಟಲಲ್ಲಿ ಸಾವಿರ ಮುಳ್ಳು ಕಂತಿದಂತಾಯಿತು.

ಆವತ್ತಿಂದ ಮಂಜಪ್ಪನ ಚಹರೆಯೇ ಬೇರೆಯಾಗಿ ಬಿಟ್ಟಿತು. ದಿನ ದಿನಕ್ಕೆ ಬಾಡಿ ಬಸವಳಿಯುತ್ತ ಹೋದ. ಮಾತಿಲ್ಲ, ಕತೆಯಿಲ್ಲ. ಈ ರೀತಿಯಲ್ಲಿ ಸೊರಗುವ ಗಂಡನನ್ನು ಬಗೆಬಗೆಯಲ್ಲಿ ಕಾರಣ ಕೇಳಿದರೂ, ಅವನು ಹೇಳಲು

ಒಲ್ಲ. ಅಖೈರಿಗೊಂದು ದಿನ, ಸತ್ಯವಂತಿ ಹೇಳಲೇಬೇಕೆಂದು ಹಠ ಹಿಡಿದು ಕುಳಿತಳು. ಆವತ್ತು ಅವರಿಬ್ಬರೂ ಬಸರೂರಿನ ಕೊಡಿ ಹಬ್ಬಕ್ಕೆ ಹೊರಡುವವರಿದ್ದರು. ಮಂಜಪ್ಪನಿಗೆ ಹೊರಡುವ ಉಮೇದೇ ಇರಲಿಲ್ಲ.



"ಯಾಕಾ ಹೀಂಗ್ ಉದಾಸೀನ ಮಾಡ್ತೆ? ಏಗ್ಳಿನ ಉಮೇದೆಲ್ಲ ಎಲ್ಲಿ ಹೋಯಿತ್ತು? ಯಾವಾಗ ಕಂಡ್ರೂ ಮನಸ್ಸು ಮಿಟ್ಟೆ ಮಾಡ್ಕಂಡು, ಮುಖ ಬಾಡ್ಸ್ಕಂಡು, ಇದ್ ಯಾವ ನಮೂನಿ? ಬಾ, ಹಬ್ಬಕ್ಕೆ ಹೋಯಿ ಬಂದರಾದ್ರೂ ನಿನ್ನ ಮನಸ್ಸು ಅರಳಲಕ್ಕು. ನಡಿ ಹೋಪ." ಎಂದು ರಮಿಸಿದಳು.

'ಇಲ್ಲ, ತನಗೆ ಯಾವುದಕ್ಕೂ ಮನಸ್ಸಿಲ್ಲ,' ಎಂದು ಅವನದು ಒಂದೇ ಉತ್ತರ.

ಅವಳಿಗೆ ತಡಕೊಳ್ಳಲಿಕ್ಕಾಗಲಿಲ್ಲ. 'ಏನು ಇದರ ಅರ್ಥ? ನೀ ಕೊರಗಿಕಂಡು ಕೂತ್ರೆ, ನಂಗೆ ಅದರ ಕಾರಣವೂ ಗೊತ್ತಾಪುಕಾಗ್ದ? ನಂದೂ ನಿಂದೂ ದೇಹ ಬೇರೆ ಆದ್ರೇನು ಜೀವ ಒಂದೇ ಅಲ್ದ ?' ಎಂದವಳು, "ನಿಂಗೆ ನನ್ನ ಮೇಲಿರುವ ಪ್ರೀತಿ ಸತ್ಯ ಅಂತಾದ್ರೆ, ನಾ ನಿನ್ನನ್ನು ನನ್ನ ಹೃದಯದೊಳಗೆ ಧರಿಸಿಕಂಡದ್ದು ಹೌದಂತಾದ್ರೆ - ನಮ್ಮ ಪ್ರೀತಿಯಾಣೆ. ನೀ ಹೇಳ್ಕ್' ಎಂದು ಅವನನ್ನು ದಿಗ್ಬಂಧನಕ್ಕೆ ಒಳಮಾಡಿದಳು.

ಮಂಜಪ್ಪನಿಗೆ ಇನ್ನು ತಡಿಯಲಾಗಲಿಲ್ಲ. ಹತ್ತಿರ ಬಂದ ಸತ್ಯವಂತಿಯನ್ನು ಒಂದೇ ಪೆಟ್ಟಿಗೆ ಅಪ್ಪಿ ಹಿಡಿದ. ಅವಳ ಕೊರಳಲ್ಲಿ ಮುಖ ಹುದುಗಿಸಿ, ಪಟಪಟನೆ ಹೇಳುವಂಥದ್ದನ್ನೆಲ್ಲ ಹೇಳಿ ಮುಗಿಸಿದ. ಜೈಲಿಗೆ ಹೋಗುವ ಬದಲು ತಾನು ಕುತ್ತಿಗೆಗೆ ಹಗ್ಗ ಹಾಕಿಕೊಳ್ಳುವುದು ಒಳ್ಳೆಯದು ಅಂದ. ಅವನ ಕಣ್ಣಲ್ಲಿ ಕೋಡಿ ಹರಿಯುತ್ತಿತ್ತು. ಗಂಡನ ದೇಹವನ್ನು ಆಲಂಗಿಸಿದ್ದ ಸತ್ಯವಂತಿ ಕ್ಷಣ ಮಾತ್ರದಲ್ಲಿ ಅವನ ನೋವು, ದುಃಖ, ಸಂಕಟ, ಅಪಮಾನಗಳನ್ನು ಗ್ರಹಿಸಿಬಿಟ್ಟಳು. ಅವನ ಬೆನ್ನು ಸವರುತ್ತಿದ್ದ ಅವಳ ಕೈಬೆರಳುಗಳ ಮೂಲಕ ಅವೆಲ್ಲವೂ ಹರಿದು ಬಂದು ಅವಳೊಳಗೆ ಸೇರಿಕೊಂಡುಬಿಟ್ಟವು. ಕಣ್ಣಲ್ಲಿ ಒಂದು ಹುಂಡು ನೀರು ತರಲಿಲ್ಲ. 'ಇವತ್ತೇ ನಾನು ಹೋದೇನು.' ಎಂದಳು.

ತನ್ನ ಕೋಣೆಗೆ ಹೋಗಿ ಹೊರಡುವ ತಯಾರಿ ನಡೆಸಿದಳು.

`ಕಿವಿಗೆ ವಜ್ರದೋಲೆ, ಮುತ್ತಿನ ಬುಗುಡಿ ಹಾಕೀಳು, ಎಣ್ಣೆ ಹಾಕಿ ತಲೆ ಬಾಚಿ ಜಡೆ ಹೂ ಇಟ್ಕಂಡಳು. ಕುಂಕುಮ ಅರಸಿನ ಹಚ್ಚಿಕೊಂಡಳು. ಕುತ್ತಿಗೆಗೆ ಎರಡೆಳೆಯ ಅವಲಕ್ಕಿಸರ, ಮೂರೆಳೆಯ ಚಕ್ರ ಸರ ಸಿಕ್ಕಿಸಿಕೊಂಡಳು. ಕೈಗೆ ಪಾಟ್ಲೆ ಬಳೆ ತುರುಕಿಸೀಳು. ಪಟ್ಟೆ ಸೀರೆ ಉಟ್ಕಂಡು, ಜಾಕಿನ ಕುಪ್ಪಸ ತೊಟ್ಕಂಡಳು. ಆಮೇಲೆ ಸೀದ ಉಗ್ರಾಣದ ಕೋಣೆಗೆ ನಡೆದಳು.

ಉಗ್ರಾಣದ ಕೋಣೆಗೆ ಹೋದವಳು ಸೆರಗನ್ನು ಮಾಟವಾಗಿ ಸುತ್ತಿ ಸರಿಪಡಿಸಿ ಹೊರಬಂದಳು. ಹೀಗೆ ತಯಾರಾಗಿ ನಿಂತವಳು ಶಂಕ್ರಣ್ಣ ಕಳುಹಿಸಿದ್ದ ಕಾರಿನಲ್ಲಿ ಕುಳಿತು ಒಬ್ಬಳೇ ಬಸರೂರಿಗೆ ಹೊರಟಳು.

ಬಸರೂರಿನಲ್ಲಿ ಶಂಕ್ರಣ್ಣನ ಬಿಡಾರದ ಮನೆಗೆ ಅವಳು ಕಾಲಿಡುವಾಗ ಮುಸ್ಸಂಜೆ ಕರಗುತ್ತಿತ್ತು. ಸತ್ಯವಂತಿ ನಿಜವಾಗಿಯೂ ತನ್ನ ಕೈಗೆ ದಕ್ಕಿದಳೆಂದು ಶಂಕ್ರಣ್ಣನಿಗೆ ಪುರುಬಾಯಿಯಲ್ಲಿ ನೀರಿರಲಿಲ್ಲ. ಅವನ ಕಾಲುಗಳಾದರೋ ನೆಲದಿಂದ ಒಂದು ಗೇಣು ಮೇಲೇ ಇದ್ದುವೆನ್ನಬೇಕು. ಅವಳ ಕೈ ಹಿಡಿದು ಒಳಗೆ ಕರಕೊಂಡು ಹೋಗಿ ತನ್ನ ಹಾಸಿಗೆಯ ಮೇಲೆ ಕುಳ್ಳಿರಿಸಿದ. ಎರಡೂ ಕೈ ಬಾಚಿ ಅವಳನ್ನು ಬಳಸಲೆಂದು ಬಗ್ಗಿದಾಗ, ಸತ್ಯವಂತಿ ಅವನ ತಲೆಯನ್ನು ಎಡಗೈಯಿಂದ ತನ್ನ ಎದೆಗೊತ್ತಿ, ಬಲಗೈಯಿಂದ



ಸೆರಗಿನೆಡೆಯಲ್ಲಿದ್ದ ಕುಡುಕತ್ತಿಯನ್ನು ಹೊರಗೆಳೆದು ಅವನ ಕುತ್ತಿಗೆಯ ಹಿಂಭಾಗವನ್ನು ಕತ್ತರಿಸಿಬಿಟ್ಟಳು.

ಕೈಯಲ್ಲಿ ಕತ್ತಿಯಿದ್ದಂತೆ ಅವಳು ಹಾಲಾಡಿ ಗುತ್ತಿನ ಮನೆಗೆ ಬಂದು ತಲಪುವಾಗ ನಡುರಾತ್ರಿ ಮೀರಿತ್ತು. ರಕ್ತ ಹೆಪ್ಪುಗಟ್ಟಿದ ಕತ್ತಿಯನ್ನು ಗಂಡನಿಗೆ ತೋರಿಸಿದ ಸತ್ಯವಂತಿ, 'ನಾನು ಸತ್ಯದವಳು ಹೌದೇ ಎಂದಾದರೆ, ಈ ಪಾಪ ತುಂಬಿದ ಲೋಕದಲ್ಲಿ ಇನ್ನು ಇರಬಾರದು.' ಎನ್ನುತ್ತಿದ್ದಂತೆ, ಮಾಯಕವಾಗಿ ಬಿಟ್ಟಳು.

ಮಂಜಪ್ಪ, 'ಸತ್ಯ..... ನನ್ನ ಸತ್ಯಾ......' ಎಂದು ಕೂಗಿ ಕೂಗಿ ಕರೆದ. ಮನೆತುಂಬ ಹೆಂಡತಿಯನ್ನು ಹುಡುಕಿದ. ಉಪ್ಪರಿಗೆ, ಕಡಗಟ್ಟು, ಪಡಸಾಲೆ, ಚೌಕಿ, ಜಗಲಿ ಎಂದು ಹುಡುಕಿದಲ್ಲೇ ಪುನಃ ಪುನಃ ಹೋಗಿ ನೋಡಿ ತಡಕಿದ. ತಲೆ ಕೆದರಿ, ಮೈ ಸೊರಗಿ, ಹುಚ್ಚುಹಿಡಿದವರಂತಾದ. ಒಂದು ರಾತ್ರಿ ತೆಂಕಿನ ಉಪ್ಪರಿಗೆಯ ಭಾವಣಿಗೆ ನೇಣು ಹಾಕಿಕೊಂಡು ಜೀವ ತೆಗೆದುಕೊಂಡ.

ಮಾಯಕಳಾದ ಸತ್ಯವಂತಿ ಭೂತವಾಗಿ ಅಲ್ಲಲ್ಲಿ ಅಲೆದು, ಮತ್ತೆ ಬಸ್ರೂರಿನ ಮನೆಗೆ ಹೋಗಿ ತನಗೆ ಅಲ್ಲಿ ಸ್ಥಾನ ಬೇಕೆಂದು ಕೇಳಿ ಅಲ್ಲೇ ನೆಲಸಿದಳಂತೆ. ವರ್ಷಕ್ಕೊಮ್ಮೆ ಇಲ್ಲಿ ಗಂಡನ ಮನೆಯಲ್ಲಿ ಸಂಚಾರ ಮಾಡಿ ಹೋಗುತ್ತಾಳಂತೆ.

“ಬಾಲೆ ಸೂರನ ಅವಸ್ಥೆ ಪಾಪ ಯಾರಿಗೂ ಬೇಡ. ಗತಿಗೋತ್ರ ಇಲ್ಲದೆ ಹೋಯ್ತು. ಅದ್ರೆ ಹನ್ನೆರಡು ವರ್ಷ ತುಂಬುಕೂ ಆ ಸತ್ಯವಂತೀ ಭೂತ ಬಂದು ತೆಕೊಂಡು ಹೋಯಿ ಮಾಯ ಮಾಡೀಳಂಬು, ಸುಳ್ಳಲ್ಲ, ನಂಗ್ ಗೊತ್ತಿತ್ತು, ಹೌದಂಬ್ರು,' ಅಂದಳು ಗುಳ್ಳಿ ಕಂಡವರಂತೆ.

“ಅಯ್ಯೋ, ಅಲ್ದನ ಗುಳ್ಳಿ, ಆಗ್ಳಿಗೆ ಅವನ ಮಾಮು ಬಂದು ಬಸ್ರೂರಿಗೆ ಕರ್ಕಂಡ್ ಹೋದ ಅಂತಿದ್ರಲ್ಲ. ಈಗೆಲ್ಲೋ ತಲೆ ಬಿಂಗ್ರಿಯಾಗಿ ಮರ್ಲರ ಕಣಾಗೆ ತಿರ್ಕಂಡ್ ಅಲೀತ ಇರ್ತ ಅಂತ್ರಪ್ಪ.' ಎಂದ ಕುಷ್ಟ

ಕತೆ ಸಾಗಿದ್ದಾಗಲೇ ಬಂದು ಕೆಳಜಗಲಿಯಲ್ಲಿ ಕಂಬಕ್ಕೊರಗಿ ಕುಳಿತು ಕೇಳುತ್ತಿದ್ದ ಊಳಿಗದ ಸೀನಣ್ಣ, 'ನೀನ್ ಎಂಥ ಹೇಳುತ್ತೆ? ನಿಮಗೆ ಇಬ್ರಿಗೂ ಎಂಥದೂ ಗೊತ್ತಿಲ್ಲೆ. ನೀವು ಹೇಳುತ್ತ ಒಂದೂ ಸತ್ಯ ಅಲ್ಲ. ಮೊನ್ನೆ ರಾಮಯ್ಯ ಸತ್ತದ್ದು ಹ್ಯಾಂಗಂತ ಮಾಡಿದ್ರಿ? ಭೂತವೂ ಅಲ್ಲ, ಪ್ರೇತವೂ ಅಲ್ಲ. ಅದೇ ಆ ಸೂರ - ಮಂಜಪ್ಪನ ಮಗ ಬಂದು ಗುಂಡ್ ಹಾಕಿ ಅವನ್ನ ಕೊಂದದ್ದ್ ಅಂತೆ.

“ಅಯ್ಯೋ ದೇವ್ರೆ......' ಕುಷ್ಟನೂ ಗುಳ್ಳಿಯೂ ಒಟ್ಟಿಗೇ ಚೀರಿದರು. ಉಳಿದವರಿಬ್ಬರೂ ದನಿಗೂಡಿಸಿದರು.

“ಅದ್ಯಾಕಾದ್ರೂ ಅಂತಹ ಕಲಿಬುದ್ಧಿ ಬಂತು ಆ ಗಂಡಿಗೆ?' ಕುಪ್ಪನೂ ಗುಳ್ಳಿಯೂ ಜತೆಯಾಗಿ ಕೇಳಿದರು.

“ಅವನ ಬಸ್ರೂರು ಮಾಮು ಗೊತ್ತುಂಟಲ್ಲ, ಅವನಿಗೆ ಬೊಂಬಾಯಿವರೆಗೂ ಕೈ ಉಂಟಂತೆ. ಅವನದ್ದೊಂದು ಬಸ್ರೂರು ಕೂಟ ಅಂತ ಕಟ್ಕಂಡು, ಈ ಸೂರನ್ನೂ ಅದ್ಕೆ ಸೇರ್ಸಿಕಂಡಿದ್ದಂತೆ. ಈ ಮಾಮುಗೆ ಅವನ ಅಪ್ಪನ ಕಾಲದಿಂದಲೂ ರಾಮಯ್ಯನ



ಮೇಲೆ ಕೆಟ್ಟ ಹಗೆ ಇದ್ದಿತ್ತಲ್ಲ? ತಂಗಿ ಸತ್ತ ಮೇಲೆ ಅದು ಜೋರಾಯ್ತು, ಸಮ ಗಾಳಿ ಹಾಕಿ ಸೂರನ್ನ ಎತ್ತಿ ಕಟ್ಟಿದ. ಸೂರನಿಗೆ ಮುಂಚೆಯೇ ಮಂಡೆ ಬಿಂಗ್ರಿಯಾಯಿತ್ತು. ಸಿಟ್ಟಿನಲ್ಲಿ ಕುದೀತಾ ಇದ್ದ. ಅಪ್ಪ ಅಬ್ಬೆ ಸಾವಿಗೆ ರಾಮಯ್ಯನೇ ಕಾರಣ ಅಂತ ಅವನ ತಲೆಯೊಳಗೆ ಹೋಗಿಬಿಟ್ಟಿತ್ತು, ಅಲ್ಲಿಂದಲ್ಲಿಗೆ ಸಮಾ ಆಯ್ತು.'

“ಅದು ಸಮ. ಆದರೆ ನಮ್ಮ ಒಡೇರಂತಹ ಒಳ್ಳೆ ಜನಕ್ಕೆ ಹೀಂಗ್ ಮಾಡುಕಾಗ ಇತ್ತ್.'

'ಒಳ್ಳೆ ಜನವಾ?!' ಸೀನಣ್ಣ ಜಗಲಿಯಿಳಿದು ಕೆಳಗೆ ಬಂದು, ಕುಷ್ಟನ ಹತ್ತಿರ ನಿಂತು, ತಗ್ಗಿದ ದನಿಯಲ್ಲಿ ಹೇಳಿದ, 'ಈ ರಾಮಯ್ಯ ಏನು ಸಾಮಾನ್ಯ ಅಲ್ಲ ಅಂಬ್ರು, ಮಳಿಗೆ ಶಂಕ್ರಣ್ಣನ್ನ ಕೊಲ್ಲಿದ್ದು ಅವನೇ ಅಂತೆ. ಮಂಜಪ್ಪನೂ ಅಲ್ಲ, ಸತ್ಯವಂತಿಯೂ ಅಲ್ಲ. ಗೊತ್ತಾಯ್ತ?'

ಸ್ವಲ್ಪ ಹೊತ್ತು ಯಾರೊಬ್ಬರೂ ಮಾತನಾಡಲಿಲ್ಲ. ಒಟ್ಟಾರೆ ಏನಾರ ಒಂದು ಹೇಳ್‌ಬೇಡ. ಅಂದಳು ಗುಳ್ಳಿ.

'ಒಟ್ಟಾರೆಯ? ಅದ್ಕೆ ನಾ ಹೇಳಿದ್ದು ನಿಮಗೆ ಎಂಥ ಗೊತ್ತಿತ್ತು ಅಂತ ಮಳಿಗೆ ಶಂಕ್ರಣ್ಣನ ಕಂಡ್ರೆ ರಾಮಯ್ಯನಿಗೆ ಕಂಡಾಪಟ್ಟೆ ಉರಿ ಇದ್ದಿತ್ತಂದ್ರು, ವ್ಯಾಪಾರದಾಗೆ ಅವನನ್ನ ಅಡಿ ಹಾಕ್ಕಂತ ಹಿಕ್ಮತ್ ಮಾಡಿ....... ಡಮ್ಮ್. ಮುಗಿಸಿದ್ದು ಎನ್ನುವಂತೆ ಕೈಯಿಂದ ಸನ್ನೆ ಮಾಡಿ, 'ಮಾಡುದೆಲ್ಲ ಮಾಡಿ, ಮಂಜಪ್ಪನ ಮೇಲೆ ಅಪವಾದ ಹೊರಿ ಕೈ ತೊಳ್ಕೊಂಡ.'

'ರಾಮ ರಾಮಾ, ದೇವ್ರಂಥ ಮನುಷ್ಯ ಹೀಂಗೂ ಮಾಡುದ?' ಎಂದ ಕುಷ್ಟ

'ಹೀಂಗಷ್ಟೇ ಅಲ್ಲ.' ಎನ್ನುತ್ತ ಸೀನಣ್ಣ ಉಟ್ಟ ಲುಂಗಿಯನ್ನು ರಪ್ಪನೆ ಮೇಲೆಳೆದು ಕಟ್ಟಿ, 'ಪೂರ ಕೇಂಡ್ರೆ...... ಏನಿಲ್ಲ.' ಎಂದ.

"ಅಂದ್ರೆ?' ಎಂದ ಕುಷ್ಟ ಅರ್ಥವಾಗದೆ.

ಅವರೆದುರು ಕುಕ್ಕರುಗಾಲಿನಲ್ಲಿ ಕುಳಿತು, ಸುತ್ತಲಿನ ಕತ್ತಲಿಗೆಲ್ಲಿಯಾದರೂ ತನ್ನ ಸ್ವರ ತಾಗಿ ಶಬ್ದವಾಗುವುದೋ ಎಂದು ಹೆದರುವವನಂತೆ ತಗ್ಗಿದ ದನಿಯಲ್ಲಿ, 'ಸತ್ಯವಂತಿ ಜೀವ ಇಪ್ಪಪ್ಪತ್ತಿಗೆ ಸ್ವಲ್ಪ ಕಾಟ ಕೊಡಲಿಲ್ಲಂಬ್ರು ರಾಮಯ್ಯ, ಮತ್ತೆ ಅವಳನ್ನ ಹಪ್ ಮಾಡಿದ್ದೂ ಅವನೇ ಅಂತೆ.' ಸೂರ ಸಣ್ಣವನಿರುವಾಗ ರಾಮಯ್ಯ ಕೋಣೆಗೆ ಬಂದು ತನ್ನ ತಾಯಿಯ ಮೇಲೆ ಕೈ ಹಾಕುವುದನ್ನು ಕಂಡಿದ್ದನಂತೆ. ಅದನ್ನೆಲ್ಲ ಕಂಡೇ ಅವನು ಆ ನಮೂನೆಯ ಹಗೆ ಬೆಳೆಸಿಕೊಂಡದ್ದು. ಈಗ ಹನ್ನೆರಡೊರ್ಷದ ಹಗೆ ತೀರ್ಸ್ಕಂಡ್ ಹೋದ.'

'ಹೌದ?' ಎಂದ ಕುಷ್ಟನ ಸ್ವರದಲ್ಲಿ ನಂಬುಗೆಯಿದ್ದಂತಿರಲಿಲ್ಲ.

'ಎಂಥ ಕತಿ ಮಾರಾಯ!' ಎಂದು ಗುಳ್ಳಿ ತಲೆ ಅಲ್ಲಾಡಿಸಿದಳು.

'ಕತಿ! ಕತಿಯಾ ಗಿತಿಯಾ ನಾನೇನ್ ನಿಮಗೆ ಕತಿ ಹೇಳಿದ್ದಲ್ಲ ಇಷ್ಟೊತ್ತು! ಕತಿಗಿತಿ ಹೇಳ್ಕೆ ನಂಗೇನ್ ಬತ್ತಿಲ್ಲ, ಪುರುಸೊತ್ತು ಮೊದಲೇ ಇಲ್ಲ. ಗೊತ್ತಾಯ್ತು.' ಎಂದು

ತುಸು ಸ್ವರ ಏರಿಸಿ ಹೇಳಿದ ಸೀನಣ್ಣ, ಸ್ವಲ್ಪ ಹೊತ್ತು ಚಾವಡಿಯ ಬಾಗಿಲಿನಿಂದ ಕಾಣುತ್ತಿದ್ದ, ಮನೆಯ ಒಳಗೆ ತುಂಬಿದ ಕತ್ತಲ ಮುದ್ದೆಯನ್ನೇ ದಿಟ್ಟಿಸುತ್ತ ಸುಮ್ಮನೆ ಕುಳಿತು ಬಿಟ್ಟ. ಆ ಕತ್ತಲಿನ ದಪ್ಪ ಪದರುಗಳ ಎಡೆಯಲ್ಲಿ ಹಿಂದಿನ ದಿನ ಅವನು ನೋಡಿದ ದೃಶ್ಯ ಮೂಡಿ ಮೂಡಿ ಮಾಯವಾದಂತೆ ಅವನಿಗೆ ಕಾಣುತ್ತಿತ್ತು.

ಮುನ್ನಾ ದಿನ ಪೋಲೀಸರು ಮನೆಯ ತಪಾಸಣೆಗೆಂದು ಬಂದಾಗ ಸೀನಣ್ಣನೇ ಅವರನ್ನು ಕೋಣೆಯಿಂದ ಕೋಣೆಗೆ ಕರೆದುಕೊಂಡು ಹೋದವನು. ಇಷ್ಟು ವರ್ಷ ಆ ಮನೆಯ ಪರಿಚಯವಿದ್ದೂ, ತಿಜೋರಿ ಕೋಣೆಯ ಕೆಳಗೆ ನೆಲಮಾಳಿಗೆಯಿದ್ದುದು ಅವನಿಗೆ ತಿಳಿದಿರಲಿಲ್ಲ. ಪೋಲೀಸರು ತಿಜೋರಿಯನ್ನು ಜರುಗಿಸಿ, ಅದರಡಿಯ ಬಾಗಿಲು ತೆರೆದಾಗಲೇ ಅವನು ಅದನ್ನು ನೋಡಿದ್ದು, ಕೆಳಗೆ ಇಳಿದು ನೋಡುವಾಗ, ಅಲ್ಲಿ ದಟ್ಟವಾದ ಸಾಲೆಬಲೆಗಳ ನಡುವೆ ಒಂದು ಅಸ್ಥಿಪಂಜರ ಕುತ್ತಿಗೆಯಲ್ಲಿ ಕರಿಮಣಿ ತಾಳಿ!

ತಾನು ಅದನ್ನು ಕಂಡದ್ದು ಹೌದೇ ಅಥವಾ ಇದೂ ಒಂದು ಮಾಯಕವೇ ಎಂಬ ಸಂದೇಹ ಇನ್ನೂ ಸೀನಣ್ಣನ ಮನಸ್ಸಿನಲ್ಲಿ ಹಾಯುತ್ತಿತ್ತು.

ಮತ್ತೆ ಅದೆಷ್ಟೋ ಹೊತ್ತು ಆ ಅಂಗಳದಲ್ಲಿ ಮಾತೆಂಬುದು ಮಾಯವಾಯಿತು. ಒಂದು ರೀತಿಯ ದಪ್ಪ ಗಾಢ ಮೌನವು ದಟ್ಟವಾದ ಮಂಜಿನಂತೆ ಅಂಗಳ, ಚಾವಡಿ, ತೋಟಗಳ ತುಂಬ ಆವರಿಸಿಬಿಟ್ಟಂತಾಗಿತ್ತು.

# ಪರಕೀಯ

**- ಉಮಾ ರಾವ್**

ಮಹಿಳೆಯರಿಗಾಗಿಯೇ ನಿರ್ಮಿಸಿದ ವೃದ್ಧಾಶ್ರಮ ಆನಂದಾಲಯ. ಇಲ್ಲಿ ದೊಡ್ಡ ಕಾಂಪೌಂಡಿನಲ್ಲಿ ಹಲವಾರು ಮರಗಳ ನಡುವೆ ಹತ್ತು ಕುಟೀರಗಳಿವೆ. ಒಂದೊಂದು ಕುಟೀರದಲ್ಲಿ ನಾಲ್ಕು ಮನೆಗಳು. ಒಟ್ಟು ನಲವತ್ತು ಮನೆಗಳಿವೆ. ಮನೆಗಳ ನಡುವೆ ಒಂದು ಅಂಗಳ, ಮಧ್ಯೆ ತುಳಸಿ ಕಟ್ಟೆ, ಅತ್ತಿತ್ತ ಒಂದೆರಡು ಕಲ್ಲು ಬೆಂಚುಗಳು, ಒಂದಷ್ಟು ಹೂ ಗಿಡಗಳು, ಮನೆ ಎಂದರೆ ಒಂದು ಕೋಣೆ, ಚಿಕ್ಕ ಅಡುಗೆ ಮನೆ, ಅದರಲ್ಲಿ ಸಿಂಕು- ಕಟ್ಟೆ, ಒಂದು ಬಚ್ಚಲ ಮನೆ, ಕಕ್ಕಸು, ಒಬ್ಬ ವ್ಯಕ್ತಿ ಸ್ವತಂತ್ರವಾಗಿ ಬದುಕಲು ಸಾಕಾಗುವಷ್ಟು ಸ್ಥಳ. ಅಡಿಗೆ ಮಾಡಿಕೊಳ್ಳಲು ಆಗದವರು ಅಥವಾ ಇಷ್ಟವಿಲ್ಲದವರು ಅಲ್ಲಿಯೇ ನಿರ್ಮಿಸಿದ್ದ ಕ್ಯಾಂಟೀನ್‌ನಿಂದ 308, ಊಟ ತರಿಸಿಕೊಳ್ಳಬಹುದಾಗಿತ್ತು. ಆನಂದಾಲಯದ ೩ನೇ ನಂಬರ್ ಕುಟೀರದಲ್ಲಿ ಇರುವವರು ಸುಂದರಮ್ಮ, ಸುನೀತಾ, ಸರಸಿ ಮತ್ತು ಝಾನ್ಸಿ ಬಾಯಿ.

*

ಸುಂದರಮ್ಮನ ವಯಸ್ಸು ಎಪ್ಪತ್ತೈದು. ದಡೂತಿ ಹೆಂಗಸು. ಉಬ್ಬು ಹಲ್ಲು. ದೊಡ್ಡ ಗಂಟಲು, ತಲೆಮೇಲೆ ಕಪ್ಪು ಬಣ್ಣ ಹಚ್ಚಿದ ಕೂದಲಿಗೆ ಬಿಳಿ ಕೂದಲಿನ ಪುಟ್ಟ ಗಂಟು. ಪ್ರತಿ ಮಾತಿನಲ್ಲೂ ದರ್ಪ ತೋರಿಸುವ ಅಭ್ಯಾಸ. ಎಲ್ಲರಿಗೂ ಸುಂದರಮ್ಮನ ಬಾಯಿಗೆ ಬೀಳಲು ಸ್ವಲ್ಪ ಭಯವೇ. ಮತ್ತೆ ಮತ್ತೆ, ತಮ್ಮ ಒಬ್ಬನೇ ಮಗನ ಬುದ್ಧಿವಂತಿಕೆ, ಅವನು ಇಂಜಿನಿಯರಿಂಗ್ ಫಸ್ಟ್ ಕ್ಲಾಸಲ್ಲಿ ಪಾಸಾದ ಮೇಲೆ ಅಮೆರಿಕಾದವರು ಕರೆಸಿಕೊಂಡ ರೀತಿ, ಈಗ ಅಲ್ಲೇ ಚೆಲುವೆ ಬಿಳಿ ಹುಡುಗಿಯೊಬ್ಬಳನ್ನು ಮದುವೆಯಾಗಿ ಸೆಟಲ್ ಆಗಿರುವ ಬಗ್ಗೆ ಎಲ್ಲರ ಎದುರು ಜಂಬ ಕೊಚ್ಚಿಕೊಳ್ಳುತ್ತಿದ್ದರು.

ಯಜಮಾನರು ತೀರಿ ಹೋದಮೇಲೆ ಎಷ್ಟು ಕರೆದ, ಇಲ್ಲೇ ಬಂದು ಮಹಾರಾಣಿ ಥರಾ ಇದ್ದು ಬಿಡು, ಅಲ್ಲಿ ಒಬ್ಬಳೇ ಯಾಕೆ ಒದ್ದಾಡ್ತೀಯಾ ಅಂತ. ಇಲ್ಲಾ ಅಂದುಬಿಟ್ಟೆ, ನಮ್ಮ ನೆಲ, ಜಲ, ಭಾಷೆ ಬಿಟ್ಟು ಹೋಗೋದೂಂದ್ರೆ ನಂಗೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದರು. ಸುಂದರಮ್ಮ ಎಂದೂ ವ್ರತ, ನಿಯಮ, ಯಾತ್ರೆ ಅಂತ ತಲೆ ಕೆಡಿಸಿ ಕೊಂಡವರಲ್ಲ. ಬೆಳಗಾಗೆದ್ದು ತಮ್ಮ ಗೂಡಿನಲ್ಲಿದ್ದ ನರಸಿಂಹ ದೇವರಿಗೆ ಕೈ ಮುಗಿದು ಬಿಟ್ಟರೆ ಆಯ್ತು, ಭಯ ಇದ್ದೋರಿಗೆ ದೇವರ ಹುಚ್ಚು, ನಂಗೇನು ಭಯ, ಬದುಕಲ್ಲಿ ಅಂಥಾ ತಪ್ಪೇನು ಮಾಡಿದ್ದೀನೀಂತ ಭಯ ಎಂದೆಲ್ಲಾ ಲೆಕ್ಚರ್ ಕೊಟ್ಟು ಪ್ರತಿ

ಶುಕ್ರವಾರ ಬರೀ ಬೆಲ್ಲ ತಿಂದುಕೊಂಡು ಸಂತೋಷಿಮಾ ವ್ರತ ಮಾಡುವವರಲ್ಲಿ ಕೀಳರಿಮೆ ಹುಟ್ಟಿಸುತ್ತಿದ್ದರು.

ಸುಂದರಮ್ಮನ ಪಕ್ಕದ ಮನೆಯಲ್ಲಿದ್ದವರು ಸರಸಿ, ಸರಸಿ ಹೆಸರಿಗೆ ಸರಿಯಾಗಿ ಒಳ್ಳೇ ಸರಸಿಯೇ. ತೆಳ್ಳಗೆ, ಬೆಳ್ಳಗೆ ಎತ್ತರವಾಗಿದ್ದ ಅವರ ಕಪ್ಪು ಕೂದಲಿನ ಬಗ್ಗೆ ಯಾರಾದರೂ ಗೇಲಿ ಮಾಡಿದರೆ, "ಅದು ಬಿಡಿ, ಅದೆಲ್ಲಾ ವಂಶಪಾರಂಪರ್ಯವಾಗಿ ಬಂದ ಉಡುಗೊರೆ. ೮೦ ವರ್ಷ ಆದರೂ ಕರೀ ಕೂದಲು, ಆನೆ ಕಿವಿ" ಎಂದು ನಕ್ಕುಬಿಡುತ್ತಿದ್ದರು. ಎಂಭತ್ತೈದರ ಬೊಚ್ಚು ಬಾಯಿಯ ವೃದ್ಧಿಯಾಗಿದ್ದೂ ಸದಾ ನಗು, ಗೇಲಿ, ತಮಾಷೆ, ಯಾರಾದರೂ "ನೋಡಿ, ಪಕ್ಕದ ಕುಟೀರದ ಕೃಷ್ಣರಾಯರು ಹೋಗಿಬಿಟ್ಟರಂತೆ" ಅನ್ನೋ ಸುದ್ದಿ ತಂದರೆ, "ಅಯ್ಯೋ, ಆಗಿತ್ತಲ್ಲಾ ವಯಸ್ಸು ಸಾಕಷ್ಟು, ಆಶ್ಚರ್ಯವೇನು? ನಾವೆಲ್ಲಾ ಇಲ್ಲಿ ಬಂದಿರೋದೇ ಹೋಗೋಕೆ..!!!" ಎಂದು ದೊಡ್ಡದಾಗಿ ನಕ್ಕುಬಿಡುತ್ತಿದ್ದರು. ಬೇರೆಯವರಿಗೆ ಈ ರೀತಿ ಮಾತು ಇಷ್ಟವಾಗದಿದ್ದರೂ, "ಅದು ಸರಿ ಅನ್ನಿ" ಎಂದು ಹಲ್ಲು ಗಿಂಜುತ್ತಾ ಜಾಗ ಖಾಲಿ ಮಾಡಿಬಿಡುತ್ತಿದ್ದರು. ಸುಂದರಮ್ಮ ನಂತೂ ರೇಗಿ, "ಏನ್ರಿ, ಮಾತು ಮಾತಿಗೂ ಸಾವು, ಸೂತಕಾನೇ ನಿಮ್ಮ ಬಾಯಲ್ಲಿ. ಸಾವೇನು ಹೇಳಿ ಕೇಳಿ ಬರುತ್ತಾ ಅಥವಾ ವಯಸ್ಸಾದವರಿಗೆ ಬರುತ್ತಾ, ಎಂದು ದಬಾಯಿಸಿದರೆ "ವಯಸ್ಸಾದವರಿಗಂತೂ ಬೇಗ ಬರುತ್ತೆ" ಎಂದು ಮತ್ತಷ್ಟು ನಗುತ್ತಿದ್ದರು. ಸರಸಿ ಗಂಡನನ್ನು ಕಳೆದುಕೊಂಡದ್ದು ಚಿಕ್ಕಂದಿನಲ್ಲಿ. ಹದಿಮೂರೋ, ಹದಿನಾಲ್ಕೂ ವಯಸ್ಸಿನಲ್ಲಿ. ಆಗಿನ ಕಾಲದಲ್ಲೇ ತಹಸೀಲ್ದಾರರಾಗಿದ್ದ ಅವರ ತಂದೆ ವಿವೇಕದಿಂದ ಈ ಬಾಲ ವಿಧವೆಗಾಗಿ ಒಂದು ಮನೆ, ಹೊಲ ಬಿಟ್ಟು ಹೋಗಿದ್ದರು. ಎಪ್ಪತ್ತೈದರವರೆಗೂ ಸ್ವಂತ ಮನೆಯಲ್ಲಿ ಒಬ್ಬರೇ ಇದ್ದ ಸರಸಿ, ನಂತರ ಕೈಲಾಗದೆಂದು ಮನೆ ಮಾರಿ ಇಲ್ಲಿಗೆ ಬಂದಿದ್ದರು. ಸಾಕಷ್ಟು ಹಣ ಇಟ್ಟುಕೊಂಡಿದ್ದರಿಂದ ಆರಾಮವಾಗಿ ಕ್ಯಾಂಟೀನಿನಿಂದ ಊಟ, ತಿಂಡಿ ತರಿಸಿಕೊಂಡು ಎಲ್ಲರ ಅಸೂಯೆಗೆ ಪಾತ್ರರಾಗಿದ್ದರು. ಯಾವಾಗಲೂ ಏನಾದರೂ ಓದೋದು, ಹಳೆ ಸ್ವೆಟರನ್ನ ಬಿಚ್ಚಿ ಮತ್ತೆ ಮತ್ತೆ ಹೊಸ ಪ್ಯಾಟರ್ನ್‌ನಲ್ಲಿ ಹೆಣೆಯುವುದು, ಮನೆ ಮುಂದಿದ್ದ ನಾಲ್ಕಾರು ಗಿಡಗಳನ್ನು ಶ್ರದ್ಧೆಯಿಂದ ನೋಡಿಕೊಳ್ಳುವುದು ಹೀಗೆ ಏನಾದರೂ ಮಾಡುತ್ತಲೇ ಇರುತ್ತಿದ್ದರು. ತನ್ನ ತರುವಾಯ ತಮ್ಮೆಲ್ಲಾ ಹಣವನ್ನೂ ಆನಂದಾಲಯ ಟ್ರಸ್ಟಿಗೆ ಬರೆದಿದ್ದ ಸರಸಿಗೆ ಎಂದೂ ಬದುಕು ಹೊರೆ ಎನ್ನಿಸುತ್ತಿರಲಿಲ್ಲ.

*

ಝಾನ್ಸಿಬಾಯಿ ಮಡಿಕೇರಿಯಿಂದ ಬಂದವಳು. ಚಿಕ್ಕ ವಯಸ್ಸಿನಲ್ಲಂತೂ ತುಂಬಾ ಚೆಲುವೆಯಿದ್ದಿರಬೇಕು. ಎತ್ತರದ ಆಳು. ಈಗಲೂ ಒಳ್ಳೆ ಮೈಕಟ್ಟು, ಕಾಂತಿಯುಕ್ತ ಆರೋಗ್ಯ ಸೂಸುವ ಮುಖ. ಅವಳು ಬರುವ ಮೊದಲೇ ಅವಳು ಮಂಡಿ ನೋವಿಗಾಗಿ ತಿಕ್ಕಿಕೊಂಡಿರುತ್ತಿದ್ದ ತೈಲದ ವಾಸನೆ ಗಪ್ಪೆಂದು ಎಲ್ಲರ ಮೂಗಿಗೆ ಬಡಿಯುತ್ತಿತ್ತು. ಸುಂದರಮ್ಮ ಮುಖ ಸಿಂಡರಿಸಿ, ಸರಿ ಝಾನ್ಸಿ ಬರುತ್ತಿರಬೇಕು ಎನ್ನುತ್ತಿದ್ದರು. ಮೈಮೇಲೆ ಸಾಕಷ್ಟು ಬಂಗಾರ, ಕೊಡಗಿನ ಶೈಲಿ ಸೀರೆ, ತಾನೇ ಬೇರೆ ತರಹ ಎಂಬ ಅಹಂಕಾರ. ಹಾಳಾದ್ದು ಜೀವಮಾನವೆಲ್ಲಾ ಎಸ್ಟೇಟ್ ಮನೆ ಅಭ್ಯಾಸವಾಗಿ

ಹೋಗಿ, ಈ ಸಣ್ಣ ಮನೆಯಲ್ಲಿ ಉಸಿರು ಕಟ್ಟುತ್ತಪ್ಪಾ, ದಿನಾ ನಾನ್ ವೆಜ್ ಆಗಬೇಕು ನಂಗೆ, ಈ ಗಡ್ಡೆ-ಗೆಣಸು ತಿಂದು ಬಾಯೆಲ್ಲಾ ಕೆಟ್ಟು ಹೋಗಿದೆಪ್ಪ. ಇವತ್ತು ಮಧ್ಯಾಹ್ನ ಮಸಾಲೆ ದೋಸೆಗೆ ಹಾಕಿದೀನಿ, ನೀವು ಮೂರೂ ಜನಾನೂ ಬಂದುಬಿಡೀಪ್ಪ. ಪಾಪ, ನಿಮಗೆ ತಾನೆ ಮಾಡಿ ಹಾಕೋರು ಯಾರು, ಬೆಂಗಳೂರು ಜನ ತುಂಬಾ ನಾಜೂಕು, ಫರ್ಲಾಂಗು ದೂರಕ್ಕೂ ಆಟೋ ಹಿಡೀತಾರಪ್ಪ, ನಮ್ಮ ಕಡೆಯವರ ಹಾಗೆ ಗಟ್ಟಿ ಇಲ್ಲಪ್ಪಾ, ಏನಾದರೂ ಒಂದು ವ್ಯಂಗ್ಯ. ಒಂದು ದಿನ ಸುಂದರಮ್ಮ ಇದೆಲ್ಲಾ ಕೇಳೀ ಕೇಳೀ ಸಾಕಾಗಿ "ಅಲ್ಲಾ ಝಾನ್ಸಿ, ನೀವು ಇಷ್ಟೆಲ್ಲಾ ಹೇಳೋರು, ಅಲ್ಲೇ ಇರೋದಲ್ವಾ, ಇಲ್ಲಿಗೆ ಯಾಕೆ ಬಂದ್ರೀ..." ಅಂದದ್ದಕ್ಕೆ, "ಅಲ್ಲಿ ಹೀಗೆ ರಸ್ತೆಗೊಂದು ವೃದ್ಧಾಶ್ರಮ ಇಲ್ಲಪ್ಪಾ, ನಾನೇನು ಮಾಡಲಿ ನನ್ನ ಕರ್ಮ ಇಲ್ಲಿಗೆ ಬರಬೇಕಾಯ್ತುಪ್ಪಾ" ಎಂದು ಎಲ್ಲರ ಬಾಯಿ ಮುಚ್ಚಿಸಿದ್ದಳು. ಅಚ್ಚರಿಯೆಂದರೆ, ಅವಳು ಇಲ್ಲಿ ಯಾಕೆ ಬಂದಿದ್ದಾಳೇಂತ ಯಾರಿಗೂ ಗೊತ್ತಿರಲಿಲ್ಲ. ಯಾರಾದರೂ ಆ ವಿಷಯ ಎತ್ತಿದರೆ, ಇರಲಿ ಬಿಡಿ, ಅದೆಲ್ಲಾ ಈಗ ಯಾಕೆ ಎಂದು ಬಿಡುತ್ತಿದ್ದಳು. ಎಲ್ಲರೂ ಪಾಪ, ಅವಳ ಬದುಕಿನಲ್ಲಿ ಬಾಯಿ ಬಿಟ್ಟು ಹೇಳಲಾಗದ ದುರಂತ ಏನೋ ಇದೆ ಎಂದುಕೊಂಡು ಸುಮ್ಮನಾಗಿ ಬಿಡುತ್ತಿದ್ದರು.

*

ಇನ್ನು ಸುನೀತಾ, ವಯಸ್ಸು ೬೦ ಮೀರಿದ್ದರೂ ಕಾಣುತ್ತಿದ್ದುದು ೪೫ರಂತೆ. ಮೊಳಕಾಲ ವರೆಗೆ ಬರುವ ಜಡೆ, ದೊಡ್ಡ ಕಣ್ಣುಗಳು, ಯಾವಾಗಲೂ ಉಡುತ್ತಿದ್ದುದು ಚೆನ್ನಾಗಿ ಸ್ಟಾರ್ಚ್ ಮಾಡಿದ ಬಣ್ಣ ಬಣ್ಣದ ಬಂಗಾಲೀ ಕಾಟನ್ ಸೀರೆಗಳು. ಸುಂದರಮ್ಮನ ಪ್ರಕಾರ "ನಮ್ಮ ಹಾಗೆ ಮದುವೆ ಇಲ್ಲ, ಮಕ್ಕಳಿಲ್ಲ, ವಯಸ್ಸು ಹೇಗೆ ಕಾಣುತ್ತೆ ಹೇಳಿ?" ಸುನೀತಾ ಕಟ್ಟಾ ಸ್ತ್ರೀವಾದಿ. ರಾಮಾಯಣದ ಕತೆಯಿಂದ ಇಂದಿನ ಮುಂಗಾರು ಮಳೆಯವರೆಗೂ ಎಲ್ಲಾ ಕಡೆ ಹೆಂಗಸರ ಶೋಷಣೆ ಕಾಣುವ ಹೆಂಗಸು.

ಅದಕ್ಕೇ ಒಂಟಿಯಾಗಿರೋದೇ ವಾಸಿ, ಗುಲಾಮಗಿರಿ ಬೇಡಾಂತ ಮದುವೆ ಆಗದೇನೇ ಇದ್ದು ಬಿಟ್ಟೆ ಅಂತ ಸಾರಿ ಹೇಳಿ ಬೇರೆಯವರಲ್ಲಿ ಕೊಂಚ ಮುಜುಗರ ಹುಟ್ಟಿಸುವಾಕೆ. ಸುಂದರಮ್ಮನ ಪ್ರಕಾರ ಅವಳೂ ಅವರ ಊರಿನವಳೇ, ನಿಮ್ಮ ಮನೆಯವರ ನೆನಪಿದೆ ನಂಗೆ ಎಂದರೆ, ನನಗಂತೂ ನೆನಪಿಲ್ಲ ಎಂದು ನಿಷ್ಕರುಣೆಯಿಂದ ತಿರಸ್ಕರಿಸುವಾಕೆ. ದಿನಾ ಎಲ್ಲಾದರೂ ಓಡಾಟ. ನೀಟಾಗಿ ಸ್ಟಾರ್ಚ್ ಹಾಕಿದ ಕಾಟನ್ ಸೀರೆ ಉಟ್ಟು, ಎಗ್ಜಿಬಿಶನ್, ಸೇಲ್, ಪುಸ್ತಕದಂಗಡಿ, ಭಾಷಣಗಳು ಅಂತ ತಿರುಗಾಟ. ಅವಳನ್ನು ನೋಡಲು ಎಂದೂ ಯಾರೂ ಬಂದವರಿಲ್ಲ. ಇದರ ಬಗ್ಗೆ ಅವಳಿಗೆ ಕೊರಗಿಲ್ಲ. ಅವಳ ರೂಮಿನ ದೀಪ ರಾತ್ರಿಯೆಲ್ಲಾ ಆರುವುದೇ ಇಲ್ಲ ಎನ್ನುವುದು ಎಲ್ಲರೂ ಕಂಡಿರುವ ವಿಚಿತ್ರ ಆ ಪ್ರಶ್ನೆಗೆ ಅವಳೆಂದೂ ಉತ್ತರಿಸಿಲ್ಲ.

ಅದೇಕೋ ಸುಂದರಮ್ಮನಿಗೆ ಸುನೀತಾ ಕಂಡರೆ ಸ್ವಲ್ಪ ವಾಂಛಲ್ಯ. ಅವಳ ಕಂಡರೆ ಯಾವ ವಿಷಯವಾದರೂ ಅವರ ನಿಲುವು ಮೃದು. ಎಲ್ಲರ ಬಗ್ಗೆಯೂ

ಏನಾದರೊಂದು ಕಟಕಿಯಾಡುತ್ತಿದ್ದ ಸುಂದರಮ್ಮನಂಥಾ ಸುಂದರಮ್ಮನೂ ಅವಳ ಬಗ್ಗೆ ಕೊಂಕು ಮಾತನಾಡಿದ್ದನ್ನು ಕಂಡವರಿಲ್ಲ. ಸುನೀತಾ ಮೇಲೇನೂ ತೋರಿಸಿ ಕೊಳ್ಳದಿದ್ದರೂ ಅವರನ್ನು ಅಮ್ಮ ಎಂದು ಕರೆಯುತ್ತಿದ್ದುದು ನಿಜ. ಸುನೀತಾಗೆ ಜ್ವರ ಬಂದರೆ ಗಂಜಿ ಮಾಡಿ ತಂದುಕೊಡುವುದು, ಮಾವಿನ ಕಾಯಿ ತೊಕ್ಕು ಮಾಡಿದಾಗ ಯಾರಿಗೂ ತಿಳಿಯದಂತೆ ಅವಳಿಗೆ ಕೊಂಚ ಕೊಡುವುದು. ಅವಳು ಫುಟ್‌ಪಾತ್ ಜಾರಿ ಕಾಲು ಮುರಿದು ಕೊಂಡಾಗಂತೂ ತಾಯಿಗಿಂತಾ ಹೆಚ್ಚಾಗಿ ಸೇವೆ ಮಾಡಿದ್ದರು. ಏನಾದರೂ, ಸುನೀತಾಗೆ ಮಾತ್ರ ಸ್ಪೆಶಲ್ ಎಂದು ಅಕ್ಕಪಕ್ಕದವರು ತಮಾಷೆ ಮಾಡಿದರೆ, ಪಾಪ, ಅದು ಚಿಕ್ಕ ವಯಸ್ಸಲ್ಲೇ ಏನೇನು ಕಂಡಿದೇಂತ ನನಗೊತ್ತು, ಅವಳ ವಿಷಯ ಬಿಟ್ಟುಬಿಡಿ ಎನ್ನುತ್ತಿದ್ದರು. ಆದರೆ ಆ ಏನೇನು ಮಾತ್ರ ಎಂದೂ ಬಾಯಿ ಬಿಟ್ಟಿರಲಿಲ್ಲ. ಸುನೀತ ಸುಂದರಮ್ಮನನ್ನು ಅವರಿಗಿಷ್ಟವಾದ ವಿಷ್ಣುವರ್ಧನ್ ಸಿನೆಮಾಗಳಿಗೆ ಕರೆದುಕೊಂಡು ಹೋಗಿ ಖುಷಿ ಪಡಿಸುತ್ತಿದ್ದಳು. ಇದರ ಬಗ್ಗೆ ಸರಸಿ, ಝಾನ್ಸಿ ಎಂದೂ ಅಸೂಯೆ ಪಡುತ್ತಿರಲಿಲ್ಲ. ಅವರ ಸಂಬಂಧ ಬೇರೇನೇ ಬಿಡಿ ಎನ್ನುತ್ತಿದ್ದರು. ಈ ನಾಲ್ಕು ಜನರಿದ್ದ ೩ನೇ ನಂಬರ್ ಕುಟೀರ ಅಲ್ಲಿ ಹೆಸರಾಗಿದ್ದದ್ದು ಸೌಹಾರ್ದಕ್ಕೆ, ಬೇರೆ ಕುಟೀರಗಳಲ್ಲಿ ದಿನಕ್ಕೊಮ್ಮೆ ಜಗಳ, ಮನಸ್ತಾಪ. ಇವರು ಎಸೆದ ಕಸ ನಮ್ಮ ಮನೆ ಒಳಗೆ ಹಾರಿ ಬಂತು, ಆಕೆ ತಲೆ ಬಾಚಿ ಕೂದಲು ಅಲ್ಲೇ ಹಾಕ್ತಾರೆ, ಯಾರೋ ನಿನ್ನೆ ಕದ್ದು ಮುಚ್ಚಿ ಮೀನು ಮಾಡಿಕೊಂಡಿದ್ದಾರೆ, ಇವರ ಮನೆ ನಲ್ಲಿ ಲೀಕ್ ಆಗ್ತಿರೋದ್ರಿಂದ ನಮ್ಮೆಲ್ಲರಿಗೂ ಹೆಚ್ಚು ಬಿಲ್ ಬರುತ್ತೆ, ಅವರು ಟೀವಿ ರಾತ್ರಿ ಹನ್ನೆರಡು ಗಂಟೆವರೆಗೂ ಜೋರಾಗಿ ಹಾಕ್ತಾರೆ-ಹೀಗೆ ಹಲವಾರು ದೂರುಗಳು. ಕೊನೆಗೂ ಮ್ಯಾನೇಜರವರೆಗೂ ಕಂಪ್ಲೇಂಟು. ಹಾಗೆ ದೂರುಗಳಿಲ್ಲದ್ದು ೩ನೇ ನಂಬ ಕುಟೀರದಿಂದ ಮಾತ್ರ ಬರುತ್ತಿದ್ದ ಚಿಕ್ಕಪುಟ್ಟ ಅಸಮಾಧಾನಗಳನ್ನೂ ತಮ್ಮಲ್ಲೇ ಸರಿ ಮಾಡಿಕೊಂಡು ನಗುನಗುತ್ತಾ ಮನೆಗೆ ಹೋಗುತ್ತಿದ್ದರು ಅಲ್ಲಿನವರು.

*

ದಿನಾ ಸಂಜೆ ಇಲ್ಲಿನವರು ನಾಲ್ಕೂವರೆಯಿಂದ ಸೂರ್ಯ ಮುಳುಗುವ ವರೆಗೂ ತುಳಸಿ ಕಟ್ಟೆಯ ಸುತ್ತ ಹರಟೆಗೆ ಕೂಡುತ್ತಿದ್ದರು. ಆಗ ಈ ರೀತಿ ಸಮಸ್ಯೆಗಳ ನಿವಾರಣೆಯಾಗುತ್ತಿತ್ತು. ಜೊತೆಗೆ ಬುಷ್‌ನಿಂದ ದೇವೇಗೌಡರ ಆಡಳಿತದವರೆಗೂ ಎಲ್ಲಾ ಇವರ ಮಾತುಗಳಿಗೆ ಒಳಗಾಗುತ್ತಿತ್ತು. ಅಲ್ಲದೇ ಸ್ವಾರಸ್ಯವಾದ ಗಾಳಿಸುದ್ದಿಗಳು, ಈ ಸಂಸ್ಥೆಯ ಬೇರೆ ನಿವಾಸಿಗಳ ಬಗ್ಗೆ ಗುಟ್ಟು ಕತೆಗಳು ಎಲ್ಲಾ ಸುತ್ತ ತಿರುಗಿ ಅಲ್ಲೇ ಸಾಯುತ್ತಿದ್ದುವು. ಅಲ್ಲಿಂದ ಹೊರಗೆ ಹರಿದಾಡಿ ವಿಷ ಹರಿಸುತ್ತಿರಲಿಲ್ಲ. ಮನದಾಳದ ನೋವುಗಳು ಕಣ್ಣೀರಾಗಿ ಹರಿಯುತ್ತಿದ್ದುವು. ಕೊನೆಗೆ, ತಾವೆಲ್ಲಾ ಇಲ್ಲಿ ಬಂದಿರುವುದು ತಮ್ಮ ಆಯ್ಕೆಯಿಂದಲೇ, ಬದುಕಿನ ಈ ಹಂತದಲ್ಲಿ ತಾವು ಇನ್ನೆಲ್ಲೂ ಇಷ್ಟು ಸುಖ ವಾಗಿರಲು ಸಾಧ್ಯವಿರಲಿಲ್ಲ ಎಂಬ ವಿಷಯವನ್ನು ಒಬ್ಬರಲ್ಲಿ ಒಬ್ಬರು ಸ್ಥಾಪಿಸಿ, ಹಾಗೆ ಸ್ಥಾಪಿಸುವುದರಿಂದ ತಾವೂ ನಂಬಿ, ಹಗುರಾಗಿ ಏಳುವ ಹೊತ್ತಿಗೆ ಕತ್ತಲು ಕಾಲಿಟ್ಟಿರುತ್ತಿತ್ತು. ಆದರೆ ಎಲ್ಲರ ಮನಸ್ಸಿನಲ್ಲೂ ತಾವು ಇಲ್ಲಿ ಕೊನೆಯ ದಿನಗಳನ್ನು ಕಳೆಯಲು ಕಾರಣವಾದ ಯಾವುದೋ ಗಾಯ ಪ್ರತಿ ಕ್ಷಣವೂ ಅಂತರಂಗವನ್ನು

ಬಗೆಯುತ್ತಲೇ ಇತ್ತು. ಅಂದರೆ ಅದು ಏನು ಎಂಬುದನ್ನು ಯಾರು ಯಾರಿಗೂ ಸ್ಪಷ್ಟ ಪಡಿಸದೇ ತಮ್ಮ ತಮ್ಮ ಘನತೆ ಕಾಪಾಡಿಕೊಂಡಿದ್ದರು.

*

ಇಲ್ಲಿ ಪಟ್ಟಾಂಗ ಹೊಡೆಯುತ್ತಿದ್ದಾಗ ಇವರ ಕೋಣೆಯ ಮೂಲೆಗಳಲ್ಲಿ ಇವರಿಗಾಗಿಯೇ ಕಾದು ಕೂತು ಹೊಂಚು ಹಾಕುತ್ತಿದ್ದ ಒಂಟಿತನ ಇವರು ಮನೆಗೆ ಕಾಲಿಟ್ಟ ಕೂಡಲೇ ಗಬಕ್ಕನೆ ಉಸಿರುಕಟ್ಟಿಸುವಂತೆ ಆಕ್ರಮಿಸಿ, ಬೇರ್ಯಾರಿಗೂ ಪರಿಚಯವಿಲ್ಲದ ಅವರ ಖಾಸಗೀ ಬದುಕುಗಳನ್ನು, ಸಂಕಟಗಳನ್ನು ಎದುರಿಗೆ ನಿಲ್ಲಿಸಿ ಕೈಕಾಲುಗೆಡಿಸಿ, ಆ ಕತ್ತಲು ಕ್ಷಣಗಳಲ್ಲಿ ಅವರ ಮೈ ಬೆವರು ಇಳಿಸುತ್ತಿತ್ತು.

ಸುಂದರಮ್ಮನ ಮಗ ಎಂದೂ ಅವರನ್ನು ಜೊತೆಯಲ್ಲಿ ಬಂದಿರು ಎಂದು ಕರೆದೇ ಇರಲಿಲ್ಲ. ನಿನ್ನ ಪಾಡಿಗೆ ನೀನಿರು, ಬೇಕಾದಷ್ಟು ದುಡ್ಡು ಕಳಿಸ್ತೀನಿ ಎಂದುಬಿಟ್ಟಿದ್ದ. ವರ್ಷಕ್ಕೊಂದು ಸಲ ಆದ್ರೂ ಹೆಂಡತಿ ಮಕ್ಕಳ ಜೊತೆ ಬಾರೋ, ಮೊಮ್ಮಕ್ಕಳನ್ನು ಒಂದು ಸಲ ಆದ್ರೂ ಎತ್ತಿಕೊಂಡು ಸಂತೋಷಪಡ್ತೀನಿ ಎಂದು ಎಷ್ಟು ಗೋಗರೆದರೂ ಅವನು ಕರಗಿರಲಿಲ್ಲ. ಸರಸಿಯ ದುಃಖವೇ ಬೇರೆ. ಮಗಳು ಬದುಕಲ್ಲಿ ಸಂತೋಷ ವಾಗಿರೋಕೆ ಸಾಕಷ್ಟು ಹಣ ಇದ್ದು ಬಿಟ್ರೆ ಆಯ್ತು ಅಂತ ಅಪ್ಪ ಅಂದುಕೊಂಡು ಬಿಟ್ರಲ್ಲಾ, ತಾನೂ ರಕ್ತ, ಮಾಂಸದ ಜೀವಿ, ತನಗೂ ಭಾವನೆಗಳು, ಕನಸುಗಳೂ ಇರುತ್ತವೆ ಎಂಬ ಯೋಚನೆ ಅವರ ಮನಸ್ಸಿಗೆ ಬರಲೇ ಇಲ್ಲವಲ್ಲಾ, ಹೆಣ್ಣಾಗಿ ಒಂದು ದಿನ ಸಹಜವಾಗಿ ಬದುಕಲಿಲ್ಲವಲ್ಲಾ ಎಂದು ತುಂಬಾ ನೊಂದುಕೊಳ್ಳುತ್ತಿದ್ದರು.

*

ಝಾನ್ಸಿಬಾಯಿಯ ಪುರಾತನ ಮನೆಯನ್ನು ಅವಳ ಮಗ ರಿನೋವೇಟ್ ಮಾಡಿಸಿ ಫೈವ್ ಸ್ಟಾರ್ ಹೋಟೆಲೊಂದಕ್ಕೆ ಹೆರಿಟೇಜ್ ಪ್ರಾಪರ್ಟಿ ಎಂದು ಕೋಟ್ಯಾಂತರ ರೂಪಾಯಿಗಳಿಗೆ ಲೀಜ್‌ಗೆ ಕೊಟ್ಟಿದ್ದ. ೧೦೦ ವರ್ಷ ಹಳೆಯ ಶೈಲಿಯ ಕಟ್ಟಡ. ಅಂದಿನವೇ ಮಂಚ, ಕುರ್ಚಿ, ಮೇಜುಗಳು. ಆ ಕಾಲದ ದಿರಿಸು ತೊಟ್ಟು, ಬೆಳ್ಳಿ ತಟ್ಟೆಗಳಲ್ಲಿ ಅಪ್ಪಟ ಕೊಡಗಿನ ಆಹಾರವನ್ನು ತಮ್ಮ ವಿದೇಶೀ ಗ್ರಾಹಕರಿಗೆ ಹಂಚುವ ಕೆಲಸಗಾರರು. ಸ್ಯಾಟಿನ್ ಗುಲಾಬಿಗಳ ನಡುವೆ ಅರಳಿ ನಿಂತಿದ್ದ ತಮ್ಮ ಅತ್ತೆ, ಮಾವನ ಫೋಟೋ “ಎಫೆಕ್ಸ್” ಗೋಸ್ಕರ ಡೈನಿಂಗ್ ರೂಮಿನಲ್ಲಿ ಎನ್ಲಾರ್ಜ್ ಮಾಡಿಸಿ ಹಾಕಿದ್ದ. ತಾವು ಹೊಸದಾಗಿ ಮದುವೆಯಾಗಿ ಬಂದಾಗ, ತಮ್ಮಿಬ್ಬರಿಗಾಗಿ ಕೈಯ್ಯಾರೆ ಮಾಡಿದ್ದ ಕಸೂತಿ ಕೆಲಸದ ದಿಂಬಿನ ಚೀಲಗಳು, ಲೇಸ್ ಅಂಚಿನ ಮಗ್ಗಲಾಸಿಗೆಗಳು ಈಗ ಮಾಸ್ಟರ್ ಬೆಡ್ ರೂಮಿನಲ್ಲಿ ಆಗಿನ ಕಾಲದ ವಾತಾವರಣ ಸೃಷ್ಟಿಸಲು ಬಳಕೆಯಾಗಿದ್ದವು. ತಮ್ಮ ಅಮೂಲ್ಯ ಖಾಸಗೀ ಬದುಕು ಈ ರೀತಿ ಬಳಕೆಯಾಗುವುದು ಝಾನ್ಸಿಗೆ ತುಂಬಾ ನೋವುಂಟು ಮಾಡಿತ್ತು. ಆದರೆ ಕೋರ್ಟಿಗೆ ಹೋಗಲು ಮನಸ್ಸಾಗದೆ ಝಾನ್ಸಿಬಾಯಿ

ಮಗನೊಡನೆ ಪ್ರತಿಸಲ ಅವನು ಫೋನ್ ಮಾಡಿದಾಗಲೂ ಜಗಳವಾಡುತ್ತಿದ್ದರು. ಸ್ವಲ್ಪ ದಿನ ತಡೀಮ್ಮಾ, ದುಡ್ಡು ಸೇರಲಿ.



ಪ್ರಾಪರ್ಟಿ ವಾಪಸ್ಸು ತಗೋತೀನಿ, ಆಗ ಎಲ್ಲ ಒಟ್ಟಿಗೆ ಮಹಾರಾಜರ ಮನೆಯಂತಿರಬಹುದು ಎಂದು ಅವಳ ಬಾಯಿ ಮುಚ್ಚಿಸುತ್ತಿದ್ದ. ಇನ್ನೇನು ಮಾಡಲೂ ತಿಳಿಯದೆ, ತನ್ನ ಮಗ ಅಷ್ಟು ಆಸ್ತೀನೂ ಹಾಳು ಮಾಡಿ ವಿದೇಶಕ್ಕೆ ಓಡಿ ಹೋಗಿದ್ದಾನೆ, ತಾನು ಬೀದಿಗೆ ಬಂದಿದ್ದೇನೆ ಎಂದು ಆನಂದಾಲಯದಲ್ಲಿ ಸುಳ್ಳು ಹೇಳಿ ಜಾಗ ಗಿಟ್ಟಿಸಿದ್ದರು.

*

ದೀಪ ಆರಿಸಿದರೆ ಸುನೀತಾಗೆ ತನ್ನ ಬಾಲ್ಯದ ಕ್ಷಣಗಳು ಕಾಡುತ್ತಿದ್ದುವು. ಎಷ್ಟು ಚಿಕ್ಕವಳು ತಾನು. ಅಮ್ಮ ಹೋದಮೇಲೆ ದಿನಾ ತನ್ನ ಪಕ್ಕದಲ್ಲಿ ಮಲಗುತ್ತಿದ್ದ ಅಪ್ಪ ಇದ್ದಕ್ಕಿದ್ದಂತೆ ಒಂದು ದಿನ ತನ್ನನ್ನು ಪಕ್ಕದ ಮನೆಯವರೊಡನೆ ಬಿಟ್ಟು ಹೋಗಿ, ೨ ದಿನಗಳ ನಂತರ ಮರಳಿ ಬರುವಾಗ ಕೆಂಪು ಜರೀ ಸೀರೆ, ಹಸಿರು ಗಾಜಿನ ಬಳೆಗಳ ಹೆಂಗಸೊಂದಿಗೆ ಬಂದು ಇವಳು ನಿನ್ನ ಚಿಕ್ಕಮ್ಮ ಅಂದಿದ್ದ. ಅಂದಿನಿಂದ ತನ್ನೊಬ್ಬಳನ್ನೇ ಬಿಟ್ಟು, ತಾನು ಚಿಕ್ಕಮ್ಮನೊಂದಿಗೆ ಪಕ್ಕದ ರೂಮಿನಲ್ಲಿ ಬಾಗಿಲು ಹಾಕಿ ಮಲಗಲು ಶುರು ಮಾಡಿದ್ದ. ಆ ಮೊದಲ ರಾತ್ರಿ ಎಷ್ಟು ಹೆದರಿಕೆಯಾಗಿತ್ತು ತನಗೆ, ಎಲ್ಲೆಲ್ಲೂ ಕತ್ತಲು, ಹೊರಗೆ ಸಿಡಲು ಮಳೆ, ಎಷ್ಟು ಕೂಗಿದರೂ, ಗೋಗರೆದರೂ ಅಪ್ಪನಿಂದ ಉತ್ತರವಿಲ್ಲ. ಮೈ ನಡುಗಿ, ಭಯದಿಂದ ಹಲ್ಲು ಕಟಕಟ ಅಂದಿತ್ತು. ಪ್ರತಿ ರಾತ್ರಿ ದೀಪವಾರಿಸಿದ ಕೂಡಲೇ, ಈ ಗಳಿಗೆಗಳು ಮರುಕಳಿಸುತ್ತಿತ್ತು. ಮೈ ಬೆವರಿ ಮೆಟ್ಟು ಬಿದ್ದು ಏಳಿಸುತ್ತಿತ್ತು. ಭೂತಗಳು ಪ್ರತ್ಯಕ್ಷ. ಅಂದಿನಿಂದ ಇಂದಿನವರೆಗೂ ರಾತ್ರಿಯೆಲ್ಲಾ ದೀಪ ಹಾಕಿಯೇ ಮಲಗುವುದು ಅವಳ ಅಭ್ಯಾಸವಾಗಿ ಹೋಗಿತ್ತು. ಇವತ್ತೇಕೋ ಗಂಟೆ ಒಂದಾದರೂ ಸುಂದರಮ್ಮನಿಗೆ ಊಟಕ್ಕೇಳಲೇ ಮನಸ್ಸಾಗಲಿಲ್ಲ. ಬೆಳಗಾಗೆದ್ದು ತಮಗೆ ಇಷ್ಟವಾದ ಹಾಗಲಕಾಯಿ ಗೊಜ್ಜು, ನಿಂಬೆ ಸಾರು ಮಾಡಿಟ್ಟುಕೊಂಡಿದ್ದರು. ಬಿಸಿ ಮಾಡೋಕೂ ಇಟ್ಟಿದ್ದರು. ಆದರೆ ಹೊಟ್ಟೆ ಎಂದಿನಂತೆ ಚುರುಗುಟ್ಟಲಿಲ್ಲ. ಮತ್ತೆ ಬಚ್ಚಲುಮನೆಗೆ ಹೋಗಿ ಜಾಲರಿ ಕಿಟಕಿಯಿಂದ ಇಣುಕಿ ನೋಡಿದರು. ಸುನಿತಾ ಟೇಬಲ್ ಮೇಲೆ ದಿನದಂತೆ ಅಡಿಗೆ ಪಾತ್ರೆ ಇಟ್ಟುಕೊಳ್ಳುತ್ತಿದ್ದಳು. ಸುಂದರಮ್ಮನವರ ಕೋಪ ನೆತ್ತಿಗೇರಿತು. ಇಷ್ಟೆಲ್ಲಾ ಆಗಿದೆ, ಮಳ್ಳಿ ಹಾಗೆ ಊಟದ ತಯಾರಿ ಮಾಡ್ಕೊತಿರೋದು ನೋಡು. ಯಾರಿಗೆ ಗೊತ್ತು. ಆದರೆ ತಮ್ಮ ಕಣ್ಣುಗಳೇನೂ ಸುಳ್ಳು ಹೇಳುವುದಿಲ್ಲವಲ್ಲಾ, ಇನ್ನೂ ೬ ತಿಂಗಳಾಗಿಲ್ಲ ೪೦,೦೦೦ ಸುರಿದು ಕಣ್ಣಾಪರೇಷನ್ ಮಾಡಿಸಿಕೊಂಡು. ಆ ಡಾಕ್ಟರ್ ಹೇಳಿದ ಹಾಗೆ ಮಗು ದೃಷ್ಟಿ ಥರಾ ತೀಕ್ಷ್ಯವಾಗಿದೆ. ದೊಡ್ಡ ಕನ್ನಡಕ ಹಾಕಿಕೊಂಡ ಮನುಷ್ಯ ಬಂದದ್ದು, ೧-೨ ಗಂಟೆ ಹೊತ್ತು ಕೂತು ಸುನೀತಾ ಜೊತೆ ಮಾತಾಡಿದ್ದು, ಮಧ್ಯೆ ಮಧ್ಯೆ

ಏನೇನೋ ಬರೆದುಕೊಂಡಿದ್ದು ಎಲ್ಲಾ ಕಂಡಿತ್ತು. ಕೂದಲು ಅರ್ಧ ನರೆತಿತ್ತು. ಆದರೆ ಲಕ್ಷಣವಾಗಿದ್ದ. ಅವನಿಗೆ ಎರಡೆರಡು ಸಲ ಕಾಫಿ ಸರಬರಾಜು ಬೇರೆ ಮಾಡಿದ್ದಳು. ಯಾರವನು... ಏನಾದರೂ ತನಗೆ ಗೊತ್ತಿಲ್ಲದ ಸಂಬಂಧ... ಇರಲಾರದು ಈ ವಯಸ್ಸಿನಲ್ಲಿ... ಅಥವಾ ಪತ್ರಕರ್ತನೋ, ಆಗಾಗ ಆಶ್ರಮಕ್ಕೆ ಬರುತ್ತಿದ್ದರು ಪೇಪರಿನವರು. ಜರ್ನಲಿಸ್ಟೇ ಇರಬೇಕು. ಇವಳನ್ನು ನೋಡಲು ಎಂದೂ ನೆಂಟರಿಷ್ಟರು, ಸ್ನೇಹಿತರು ಬಂದದ್ದೇ ಇಲ್ಲ. ಸಂದರ್ಶನಕ್ಕೆ ಬಂದದ್ದಾದರೆ,



ಗಂಟೆಗಟ್ಟಲೆ ಮಾತಾಡುವಷ್ಟು ಅವಳಲ್ಲಿ ಸ್ಪೆಶಲ್ ಏನಿದೆ. ಇದೆಲ್ಲಾ ಸುನೀತಾ ತಮಗೇಕೆ ಹೇಳಲಿಲ್ಲ. ಒಂದಿಷ್ಟು ನೆಗಡಿ, ಕೆಮ್ಮು, ಜ್ವರ ಆಯಿತು ಓಡಿ ಬರಬೇಕು ತನ್ನ ಹತ್ತಿರ. ಯಾರೋ ಏನೋ ಬೇಸರವಾಗುವಂಥಾ ಮಾತು ಅಂದರು, ಅಮ್ಮಾ ನೋಡಿ ಹೇಗಂದುಬಿಟ್ಟರೂಂತ ತನ್ನೆದುರು ಹೇಳಿಕೊಳ್ಳಬೇಕು. ಈಗ, ಇಂಥಾ ದೊಡ್ಡ ವಿಷಯ ತನಗೆ ಉಸುರೇ ಇಲ್ಲವಲ್ಲಾ. ತಾನೂ ಎಲ್ಲರ ಹಾಗೆ ನಾಳೆ ಪೇಪರಿನಲ್ಲಿ ಇವಳ ಫೋಟೋ ನೋಡಿ ತಿಳ್ಕೊಬೇಕೇನು. ತಾನೂ ಇನ್ನೆಲ್ಲರಲ್ಲಿ ಒಬ್ಬಳೇನು. ಹೊಟ್ಟೆಯೊಳಗೆ ವಿಚಿತ್ರ ಸಂಕಟ ಮರುಕಳಿಸಿತು. ಇಷ್ಟು ದಿನ ತಾವು ಅಂದುಕೊಂಡಿದ್ದೆಲ್ಲಾ ಸುಳ್ಳೇನು. ಮಾತು ಮಾತಿಗೂ ಅಮ್ಮಾ ಅಮ್ಮಾ ಎನ್ನುತ್ತಿದ್ದವಳು... ಇಷ್ಟೇ ಏನು ಅವಳ ಅಂತಃಕರಣ, ಮೆಟ್ಟಿಂಗಾಲ ಮೇಲೆ ನಿಂತೂ ನಿಂತೂ ಕಾಲು ಬೆರಳ ತುದಿಗಳು ಝುಂ ಎನ್ನ ತೊಡಗಿದ್ದವು. ಗೊಜ್ಜು ಕುದ್ದು ಕುದ್ದು ಸೀದ ವಾಸನೆ ಬಂತು. ಲೊಚಗುಟ್ಟುತ್ತಾ ಅಲ್ಲಿಂದ ಎದ್ದರು.

*

೪ ಗಂಟೆ ಆಗುವುದನ್ನೇ ಕಾಯುತ್ತಿದ್ದ ಸುಂದರಮ್ಮ ಬೇಗಬೇಗ ತಲೆ ಬಾಚಿಕೊಂಡು ದಿನಕ್ಕಿಂತಾ ೫ ನಿಮಿಷ ಮೊದಲೇ ಹೊರಗೆ ಬಂದು ತುಳಸಿ ಕಟ್ಟೆಯ ಎದುರು ಬೆಂಚಿನ ಮೇಲೆ ಕೂತರು. ಅವರನ್ನು ನೋಡಿ ಸರಸಿ, ಝಾನ್ಸಿಯೂ ಬಂದು ಕೂತರು. ಸುಂದರಮ್ಮನವರ ಮುಖ ಕಪ್ಪಿಟ್ಟು ದುಮುದುಮು ಉರಿಯುತ್ತಿದ್ದದ್ದು ನೋಡಿ ಇಬ್ಬರಿಗೂ ಸ್ವಲ್ಪ ಗಾಬರಿಯಾಯಿತು. ತಮಗೆ ತಿಳಿದಂತೆ ಬೆಳಗ್ಗಿಂದಾ ಅಂಥಾದ್ದೇನೂ ನಡೆದಿಲ್ಲ. ಕೊಂಚ ಹೊತ್ತು ಅಸಹನೀಯ ಮೌನ ಆವರಿಸಿತು. ಝಾನ್ಸಿ ಗಡಿಯಾರ ನೋಡಿಕೊಂಡು, ಇದ್ಯಾಕೋ ಸುನೀತ ಇಷ್ಟು ಹೊತ್ತಾದ್ರೂ ಬರಲಿಲ್ಲಪ್ಪಾ, ದಿನಾ ಎಲ್ಲರಿಗಿಂತಾ ಮುಂಚೆ ಬಂದು ಕೂತಿರೋಳು ಎಂದದ್ದಕ್ಕೆ ಸರಸಿ ನಗುತ್ತಾ, ಅಯ್ಯೋ, ಅದಾರೋ ಅವಳ ಇಂಟರ್‌ವ್ಯೂಗೆ ಬಂದಿದ್ದನಲ್ಲಾ ಊಟ ಲೇಟಾಗಿರಬೇಕು. ಸರಿ, ಹೆಚ್ಚು ನಿದ್ದೆ ಹೊಡೆದಿದ್ದಾಳೆ

ಎಂದು ನಕ್ಕರು. "ಯಾವ ಪತ್ರಿಕೇ, ನಿಮಗೆ ಹೇಗೆ ಗೊತ್ತಾಯ್ತು" ಎಂದು ಝಾನ್ಸಿ ಕುತೂಹಲ ತೋರಿಸಿದಾಗ, ಸರಸಿ "ಅಯ್ಯೋ, ಅದೆಲ್ಲಾ ನಂಗೊತ್ತಿಲ್ಲಪ್ಪಾ. ಬೆಳಗ್ಗೆ ಮನೇಲಿ ಸಕ್ಕರೆ ಮುಗಿದು ಹೋಗಿತ್ತು. ತರೋಕೇಂತ ಸುನೀತ ಮನೆಗೆ ಹೋದೆ. ಆಗ ಆತ ಅಲ್ಲಿ ಕೂತಿದ್ರಲ್ಲಾ, ಪರಿಚಯ ಮಾಡಿಸಿದ್ದು ಅಷ್ಟೆ. ಡೀಟೇಲ್ಗಳೆಲ್ಲ ಸುಂದರಮ್ಮನಿಗೆ ಗೊತ್ತಿರಬೇಕು, ಏನ್ರೀ" ಎಂದು ಅವರತ್ತ ನೋಡಿದಾಗ, ಸುಂದರಮ್ಮ ಗೊತ್ತಿಲ್ಲ ಎಂದು ಬಾಯಿಬಿಟ್ಟು ಹೇಳಲಾಗದೆ, ಅವಮಾನದಿಂದ ಕುಗ್ಗಿ ಹೋದರು. ಅಷ್ಟು ಹೊತ್ತಿಗೆ ಸರಿಯಾಗಿ ಗರಿಮುರಿ ಸ್ಟಾರ್ಚ್ ಮಾಡಿದ ಗುಲಾಬಿ ಬಣ್ಣದ ಸೀರೆ ಉಟ್ಟು ಸುನೀತ ನಡೆದು ಬಂದಳು. ಸುಂದರಮ್ಮನವರಿಗೆ ಅವಳ ನಡಿಗೆಯಲ್ಲಿ ಹೊಸ ಹಗುರತೆ ಕಂಡು ಬಂದಿತು. ಎಷ್ಟು ಚೆನ್ನಾಗಿ ಕಾಣ್ತಿದ್ದಾಳೆ ಅನ್ನಿಸಿ ಇನ್ನೂ ಹೊಟ್ಟೆ ಉರಿಯಿತು.

ಝಾನ್ಸಿ ಜೋರಾಗಿ "ಕಂಗ್ರಾಟ್ಸ್ ಸುನೀತಾ, ಏನೋ ಸಂದರ್ಶನ ಅಂತೆ, ದೊಡ್ಡ ಸೆಲೆಬ್ರಿಟಿ ಆಗಿ ಬಿಟ್ರಿ" ಅಂದದ್ದಕ್ಕೆ ಅವಳು ನಕ್ಕು, "ಹಾಗೇನೂ ಇಲ್ಲ, ಸ್ವತಃ ತಮ್ಮ ಆಯ್ಕೆಯಿಂದ ಒಂಟಿಯಾಗಿ ಬಾಳುತ್ತಿರುವ ದಿಟ್ಟ ಮಹಿಳೆಯರ ಬಗ್ಗೆ ಒಂದು ಸೀರೀಸ್



ಬರೆಯುತ್ತಿದ್ದಾರಂತೆ. ಅದಕ್ಕೇ ನನ್ನ ಜೊತೇನೂ ಮಾತಾಡೋಕೆ ಬಂದಿದ್ದರು" ಎಂದು ವಿವರಣೆ ಕೊಟ್ಟಳು. "ಏನೇನು ಕೇಳಿದ್ರು" ಎಂದು ಬಾಯಿ ಹಾಕಿದ ಸರಸಿಗೆ "ನನ್ನ ಬದುಕಿನ ಬಗ್ಗೆ ಎಲ್ಲಾ ಕೇಳಿದರು. ಬಾಲ್ಯ, ವಿದ್ಯಾಭ್ಯಾಸ, ಕಾಲೇಜು, ಆಮೇಲೆ ಟೀಚರ್ ಕೆಲಸದ ದಿನಗಳು ಎಲ್ಲಾ. ಅಯ್ಯೋ, ಫುಲ್ ಪೇಜ್ ಲೇಖನ ಅಂತೆ. ಏನಷ್ಟು ನೆನಪಿರುತ್ತೆ ಚಿಕ್ಕಂದಿಂದ..."

ಇಷ್ಟು ಹೊತ್ತು ತುಟಕ್ ಪಿಟಕ್ ಎನ್ನದೆ ಕೂತಿದ್ದ ಸುಂದರಮ್ಮನ ಮುಖ ಈಗ ವಿಚಿತ್ರವಾಗಿ ತಿರುಗಿಕೊಂಡು ಸೊಟ್ಟಗಾಯಿತು. ತುಟಿಗಳು ಸಣ್ಣಗೆ ಅದುರತೊಡಗಿದವು. ಮುಖದ ಮೇಲೆ ನೀಲಿ ಛಾಯೆ ಹರಡಿ, ನೋಡುವವರಿಗೆ ಭಯ ಹುಟ್ಟಿಸುವಂತಾಯ್ತು.

"ಯಾಕೆ, ನನ್ನನ್ನು ಕರೆದಿದ್ರೆ ಎಲ್ಲ ನೆನಪು ಮಾಡಿ ಕೊಡುತ್ತಿದ್ದೆ." ಗೊಗ್ಗರು ಧ್ವನಿಯಲ್ಲಿ ಮಾತಾಡಿದರು. ಈ ಪ್ರತಿಕ್ರಿಯೆ ನಿರೀಕ್ಷಿಸದಿದ್ದ ಸುನೀತಾ ಹೆದರುತ್ತಲೇ "ಆಂ ನಿಮಗೆ ತಾನೇ ಏನು ಗೊತ್ತಮ್ಮಾ ನನ್ನ ಬಾಲ್ಯದ ವಿಷಯ, ಇಲ್ಲಿ ಬಂದಮೇಲೆ ತಾನೇ ಪರಿಚಯ ಆದದ್ದು..." ಎಂದು ತಡವರಿಸಿದಳು,

"ಎಷ್ಟು ಸಲ ಹೇಳಿದ್ದೀನಿ ನಾನೂ ನಿಮ್ಮೂರಿನವಳೆ ಅಂತ. ನಾನು ನಿನಗಿಂತಾ ಎಷ್ಟು ದೊಡೋಳು ನಿನಗೆ ಗೊತ್ತೇ ಇದೆ. ನಿನ್ನ ಬಾಲ್ಯ ನಿನಗಿಂತ ನನಗೆ ಚೆನ್ನಾಗಿ ನೆನಪಿದೆ. ತಪ್ಪು ಮಾಡಿದೆ ಸುನೀತಾ... ಹೂಸಿದ್ದು

ಕೆಮ್ಮಿದ್ದಕ್ಕೆಲ್ಲಾ ಓಡಿ ಬರ್ತಿಯಾ ನನ್ನ ಹತ್ತಿರ ಅಮ್ಮ, ಅಮ್ಮ ಅಂತ. ನಾನೆಲ್ಲಾ ವಿವರವಾಗಿ ಹೇಳಿದ್ರೆ ಅನ್ನಿಗೆ ಗೊತ್ತಾಗಿರೋದು ನೀನೇನೆಲ್ಲಾ ಬವಣೆ ಪಟ್ಟಿದ್ದೀಯಾಂತ, ಎಲ್ಲಿಂದ ಎಲ್ಲಿಗೆ ಬಂದಿದೀಯಾಂತ. ಆಗ ನಿನ್ನ ಸಂದರ್ಶನ ಇನ್ನೂ ಪರಿಣಾಮಕಾರಿಯಾಗಿರೋದು..." ಎಂದು ತಡವರಿಸುತ್ತಾ ನಿಧಾನವಾಗಿ ಹರಿದ ಸುಂದರಮ್ಮನವರ ಕಂಠದಲ್ಲಿ ಶೀತಲ ಕ್ರೌರ್ಯ ತುಂಬಿರುವುದು ಎಲ್ಲರಿಗೂ ಭಾಸವಾಯಿತು. ಸುನೀತಾ ಸಾವರಿಸಿಕೊಳ್ಳಲು ಪ್ರಯತ್ನಿಸಿದಳು.

"ಏನ್ಕೇಳ್ತೀರಿ ಸರಸಿ, ಇವಳು ಇನ್ನೂ ೩ ವರ್ಷದವಳು, ಅವಳಮ್ಮ ಯಾವುದೋ ಶೆಟ್ಟಿ ಜೊತೆ ಓಡಿಹೋದಾಗ, ಇವಳಪ್ಪ ಸ್ವಲ್ಪ ದಿನಕ್ಕೆ ಇವಳಿಗೊಂದು ಮಲ ತಾಯಿನೂ ತಂದಿಟ್ಟ. ಊರಿನೋರಿಗೆಲ್ಲ ಇವಳ ಕಂಡ್ರೆ ಕನಿಕರ, ಪಾಪ, ಓಡಿಹೋದವಳ ನತದೃಷ್ಟ ಕೂಸು, ತಾಯಿ ಇದ್ದೂ ತಬ್ಬಲಿ ಅಂತ. ಇಂಥಾ ಮಗೂನ್ನ ಬಿಟ್ಟು ಓಡಿಹೋಗಿದಾಳಲ್ಲಾ, ಎಂಥಾ ಹೆಂಗಸು. ಇವಳು ಬೆಳೆದ ಮೇಲೇನೋ ಅಪ್ಪ ಇವಳಿಗೆ ಮದುವೆ ಮಾಡೋಕೆ ಹರ ಸಾಹಸ ಮಾಡಿದ, ಉಹೂಂ, ಪಾಪ ಇದರ ಹಣೇಲಿ ಬರೆದಿರಲಿಲ್ಲ. ಅಷ್ಟು ಸುಲಭಾನಾ ಅಂಥಾ ಹುಡುಗಿ ಮದುವೆ ಆಗೋದು... ಆಮೇಲೆ ಏನು ಮಾಡ್ತಾಳೆ ಟೀಚರ್ ಟ್ರೇನಿಂಗ್ ಮಾಡಿ ಕೆಲಸಕ್ಕೆ ಸೇರಿದಳು. ನೀನೇನು ಅಲ್ಪಸ್ವಲ್ಪ ಕಷ್ಟ ಪಟ್ಟಿದೀಯಾ... ನನ್ನನ್ನು ಕೇಳಿದ್ರೆ ಎಲ್ಲಾ ಹೇಳ್ತಿದ್ದೆ..." ಎಂದು ನಿಟ್ಟುಸಿರು ಬಿಟ್ಟು ನಡಗುತ್ತಿದ್ದ ತಮ್ಮ ಕೈಗಳತ್ತ ದಿಟ್ಟಿಸಿದರು.

ಮುಂದೆ ಬಂದದ್ದು ಮೌನ. ಯಾರೂ ಒಡೆಯಲಾಗದ ಮೌನ, ಕೊನೆಗೆ ಅದನ್ನು ಮುರಿದಿದ್ದು ನಿಧಾನವಾಗಿ ಎದ್ದು ಹೋದ ಸುನೀತಾ ಸೀರೆಯ ನಿರಿಗೆಗಳ ಸಣ್ಣ ಸರಭರ, ಹಿಂದೆಯೇ ಅವಳು ಬಾಗಿಲು ಬಡಿದ ಸದ್ದು.

ಮಾರನೆಯ ದಿನ ಎಂದಿನಂತೆ ಬೆಳಗಿನ ಜಾವ ಎದ್ದ ಸುಂದರಮ್ಮ ಮಾಡಿದ ಮೊದಲ ಕೆಲಸ ಬಚ್ಚಲುಮನೆಗೆ ಹೋಗಿ ಜಾಲರಿ ಕಿಟಕಿಯಿಂದ ಸುನೀತಾ ಮನೆಯೊಳಗೆ ನೋಡಿದ್ದು. ಅವರಿಗೊಂದು ಆಶ್ಚರ್ಯ ಕಾದಿತ್ತು. ಮೊದಲ ಬಾರಿಗೆ ಆ ರಾತ್ರಿ ಅವಳ ಮನೆಯ ದೀಪ ಆರಿತ್ತು... ಅವರಿಗೇಕೋ ಎದೆ ಝಲ್ಲಂದಿತು. ಹೆದರೋದಕ್ಕೆ ಕಾರಣವಿಲ್ಲ ಎಂದು ಸಮಾಧಾನ ಮಾಡಿಕೊಂಡರು. ರಾತ್ರಿ ಬಲ್ಬ್ ಬರ್ನ್ ಆಗಿರಬೇಕು, ನಿದ್ದೆ ಹತ್ತಿ ಅವಳಿಗೆ ಗೊತ್ತಾಗಿರಲಾರದು ಎಂದುಕೊಂಡರು. ಆದರೆ ಹಿಂದೆಂದೂ ಹೀಗಾಗಿರಲಿಲ್ಲವಾದ್ದರಿಂದ, ತಮ್ಮ ಯೋಚನಾಸರಣಿಯಲ್ಲಿ ತಮಗೇ ನಂಬಿಕೆ ಇಲ್ಲದಿದ್ದರಿಂದ ಹೊಟ್ಟೆಯಲ್ಲೇನೋ ಸಂಕಟವೆನಿಸಿತು. ಹಲ್ಲುಜ್ಜಿ, ಕಾಫಿ ಮಾಡಿಕೊಂಡು ಕುಡಿದು ಸೂರ್ಯ ಅಷ್ಟು ಬೆಳಕು ಚೆಲ್ಲಲು ಕಾದರು. ಎಳೆ ಬಿಸಿಲು ಬಂದು ಅದು ಅವಳ ರೂಮಿನ ಕಿಟಕಿಯ ಮೂಲಕ ಒಳಗೆಲ್ಲಾ ಬೆಳಕು ಚೆಲ್ಲಿದಂತೆ ಮತ್ತೆ ಜಾಲರಿ ಕಿಟಕಿ ಹತ್ತಿರ ಹೋಗಿ ಮೆಟ್ಟಿಂಗಾಲು ಹಾಕಿ ನಿಂತರು. ಬಿಸಿಲಿಗೆ ಕಿರಿದಾದ ಕಣ್ಣುಗಳು ನಿಧಾನವಾಗಿ ತೆರೆದುಕೊಂಡು ಕಿಟಕಿಯ ಫ್ರೇಮಿನ ಚೌಕಟ್ಟಿನಲ್ಲಿ ಎಲ್ಲಾ ಸ್ಪಷ್ಟವಾಗಿ ಕಾಣತೊಡಗಿತು. ಸುನೀತಾ ಸೀಲಿಂಗ್ ಫ್ಯಾನಿನಿಂದ ನಿಶ್ಚಲವಾಗಿ ನೇತಾಡುತ್ತಿದ್ದಳು.

# ಸಾಕ್ಷಿ (ಕೇಳಿದ್ದು)

**- ಡಾ.ಎಚ್. ಗಿರಿಜಮ್ಮ**

ಪೋಸ್ಟ್ ಮಾರ್ಟಂ ಹಾಲಿನಲ್ಲಿ ಶವವೊಂದರ ಪೋಸ್ಟ್ ಮಾರ್ಟಂ ನಡೆಸಿದ್ದ ಆ ವಿಭಾಗದ ಪ್ರೊಫೆಸರ್ ವಿದ್ಯಾರ್ಥಿಗಳಿಗೆ ವಿವರಣೆ ನೀಡುತ್ತಿದ್ದರು.

ಆ ಯುವಕನ ಸಾವು ಅಸಹಜವಾದದ್ದು, ಅದೊಂದು ಕೊಲೆಯೆಂದು ಅನಾಮಧೇಯ ಕರೆಯಿಂದ ಆಗಲೆ ಹೂತಿದ್ದ ಶವವನ್ನು ತೆಗೆದು ಪೊಲೀಸರು ಮರು ಶವಪರೀಕ್ಷೆಗೆಂದು ತಂದಿದ್ದರು. ಶವವು ಕೊಳೆತ ಸ್ಥಿತಿಯಲ್ಲಿದ್ದುದರಿಂದ ವಿಪರೀತ ದುರ್ವಾಸನೆಯಿಂದ ಕೂಡಿತ್ತು. ಎಲ್ಲರೂ ಮಾಸ್ಕ್ ಧರಿಸಿದ್ದರು.

ಪ್ರೊಫೆಸರ್ ಗಂಭೀರವಾಗಿ ಹೇಳುತ್ತಾ ಶವದ ಮೇಲಿನ ಗುರುತುಗಳನ್ನು ತೋರಿಸುತ್ತಿದ್ದರು. 'ನೋಡಿ... ಈ ಹಿಂದೆ ಅಂದರೆ ಒಂದು ವಾರದ ಹಿಂದೆ ಪೋಸ್ಟ್ ಮಾರ್ಟಂ ಮಾಡಿದ ವೈದ್ಯರು. ಶವದ ತಲೆಯ ಭಾಗವನ್ನು ನೋಡಿರಲಿಲ್ಲ. ಪೋಸ್ಟ್ ಮಾರ್ಟಂ ಮಾಡಿಯೂ ಇರಲಿಲ್ಲ. ಮೆಟ್ಟಿಲಿನಿಂದ ಜಾರಿಬಿದ್ದ ಪರಿಣಾಮ ಈತ ಮೃತಪಟ್ಟಿದ್ದಾನೆ. ದೇಹದ ಯಾವುದೇ ಭಾಗಕ್ಕೂ ತೀವ್ರ ತರಹದ ಪೆಟ್ಟು ಬಿದ್ದಿಲ್ಲವಾದ ಕಾರಣ ಭಯದಿಂದ ಹೃದಯ ಸ್ತಂಭನವಾಗಿ ಮೃತಪಟ್ಟಿದ್ದಾನೆಂದು ವರದಿಯಲ್ಲಿ ತಿಳಿಸಿದ್ದರು. ಪೂರ್ತಿಯಾಗಿ ನೋಡದೆ ಹಾಗೆ ವರದಿಯನ್ನು ಕೊಡುವುದು ಅದೆಷ್ಟು ಮೋಸವಾಗುತ್ತದೆ ಅಲ್ವಾ?'

ಮೀರಾ ನಿಧಾನವಾಗಿ ಹಿಂದಿನಿಂದ ಬಂದು ವಿದ್ಯಾರ್ಥಿಗಳ ಗುಂಪಿಗೆ ಸೇರಿ, ಆಸಕ್ತಿಯಿಂದ ಆಲಿಸುತ್ತಿದ್ದ ಮಾನಸಿಯ ಪಕ್ಕಕ್ಕೆ ಸರಿದು ನಿಂತು,

'ಮಾನ್ಸಿ...' ಎಂದು ಕರೆದಳು ಪಿಸುದನಿಯಲ್ಲಿ.

ಗಾಭರಿಯಿಂದ ಅವಳತ್ತ ತಿರುಗಿ ನೋಡಿದ ಮಾನಸಿ, 'ನೀನಾ? ಯಾಕೆ ಇಲ್ಲಿಗೆ ಬಂದೆ?" ಕೇಳಿದಳು.

'ಅಬ್ಬಬ್ಬಾ! ಎಂಥಾ ಕೆಟ್ಟ ವಾಸನೆ? ದಿನಾ ಇಲ್ಲಿ ಹೇಗಿರ್ತೀಯಾ?' ಎಂದ ಮೀರಾ ಕರ್ಚೀಫಿನಿಂದ ಬಾಯಿ ಮೂಗನ್ನು ಒತ್ತಿ ಹಿಡಿದುಕೊಂಡಳು.

"ಅದಿರಲಿ... ಇಲ್ಲೀಗ್ಯಾಗೆ ಬಂದೆ? *

'ಸಾಕ್ಷಿ ಇನ್ನೂ ಹಾಸ್ಟೆಲ್‌ಗೂ ಬಂದಿಲ್ಲ, ಕಾಲೇಜಿಗೂ ಬಂದಿಲ್ಲ. ಶನಿವಾರದಿಂದ ಅವಳ ಪತ್ತೆಯೇ ಇಲ್ಲ.

'ನೆನ್ನೆ ಭಾನುವಾರ ತಾನೇ?' ಅವಳ ಫ್ರೆಂಡ್ ಮನೆಯಲ್ಲಿ ಉಳಿದುಕೊಂಡಿರಬಹುದು, ಇವತ್ತು ಬರಬಹುದು.

“ಅದಿರಲಿ... ನೀನ್ಯಾಕೆ ಇಲ್ಲಿಗೆ ಬಂದೆ? ಪ್ರೊಫೆಸರ್ ಅವರದು ಹದ್ದಿನ ಕಣ್ಣು ನೋಡಿದರೆ, ಪಿಸುಮಾತು ಕಿವಿಗೆ ಬಿದ್ದರೆ ಇಬ್ಬರನ್ನೂ ಹೊರಗೆ ಹಾಕ್ತಾರೆ...' ಗದರಿಸುವ ದನಿಯಲ್ಲಿ ಮಾನಸಿ ಪಿಸುಮಾತಿನಲ್ಲೇ ಹೇಳಿದಳು. ನಿಜಕ್ಕೂ ಅವಳಿಗೆ ಮೀರಾಳ ಆಗಮನ ಹೆದರಿಕೆ ತಂದಿತ್ತು.

“ಆಗಲಿ ಬಿಡು.. ಒಳ್ಳೆಯದೇ ಆಯ್ತು..'

ಪ್ರೊಫೆಸರ್ ಮುಂದುವರಿಸಿದ್ದರು.

'ಆತ ಪೂರ್ತಿಯಾಗಿ ಪೋಸ್ಟ್ ಮಾರ್ಟಂ ಮಾಡಿಯೇ ಇಲ್ಲ. ಹೀಗಾಗಿ ಅವರಿಗಿದು ಕೊಲೆಯಿರಬಹುದೆಂಬ ಅನುಮಾನವೂ ಬಂದಿರಲಿಕ್ಕಿಲ್ಲ. ಈ ತಲೆಯ ಭಾಗ ನೋಡಿ... ಹಿಂದಿನಿಂದ ಜೋರಾಗಿ ಭಾರಿ ವಸ್ತುವಿನಿಂದ ಹೊಡೆದಿದ್ದಾರೆ. ತಲೆ ಬುರುಡೆಯ ಹಿಂಭಾಗ ಸೀಳಿ ಚೂರಾಗಿದೆ. ಅನಾಮಧೇಯ ಕರೆ ನಿಜವಾಗಿದೆ. ಇದೊಂದು ಕೊಲೆಯೇ ಹೌದು.

ವಿದ್ಯಾರ್ಥಿಗಳು ಅದನ್ನು ನೋಡಲು ಮುಂದೆ ಹೋದರು.

'ಮಾನ್ನೀ....' ಮೀರಾ ಮತ್ತೆ ರಾಗ ತೆಗೆದಳು.

'ನಿನ್ನ ಕಾಲು ಹಿಡ್ಕೊತೀನಿ... ಪ್ಲೀಸ್ ಇಲ್ಲಿಂದ ಹೋಗು ಸಂಜೆ ಹಾಸ್ಟೆಲ್‌ಗೆ ಬಂದಾಗ ಮಾತನಾಡಿದರಾಯ್ತು.... ಮಾನಸಿ ಗೊಗರೆದಳು.

“ನೀನು ಹಾಸ್ಟೆಲಿಗೆ ಬಂದ ಕೂಡಲೇ ಸ್ನಾನಕ್ಕೆಂತ ಮತ್ತೆ ಹೋಗಿ ಬಿಡ್ತೀಯಾ?'

“ನೀನು ಹೋಗ್ತಿಯೋ ಇಲ್ವೋ?' ಮಾನಸಿ ಕಣ್ಣರಳಿಸಿ ಹೇಳಿದಳು ಮೀರಾ ಮರು ಮಾತನಾಡದೆ ಪೋಸ್ಟ್ಮಾರ್ಟಂ ಹಾಲಿನಿಂದ ಹೊರಗೆ ಬಂದಳು.

****

'ಚಕ್ರವರ್ತಿ ಮೆಡಿಕಲ್ ಸೈನ್ಸ್, ಮತ್ತು ರಿಸರ್ಚ್ ಸೆಂಟರ್ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿಗಾಗಿ ಬಂದಿದ್ದ ಸಾಕ್ಷಿ. ಮೀರಾ ಮತ್ತು ಮಾನಸಿ ಮೂರೂ ಹುಡಿಗಿಯರು ಹಾಸ್ಟೆಲಿನಲ್ಲಿ ಒಂದೇ ರೂಮಿನಲ್ಲಿದ್ದರೂ, ಸ್ನಾತಕೋತ್ತರ ಪದವಿಯ ಆಯ್ಕೆ ಬೇರೆ ಬೇರೆಯಾಗಿತ್ತು. ಅವರ ಮೂರು ವರ್ಷಗಳ ಅವಧಿಯ ಪದವಿ ಮುಗಿಯುತ್ತಾ ಬಂದಿತ್ತು. ಆರು ತಿಂಗಳ ಬಳಿಕ ಅವರ ಅಂತಿಮ ಪರೀಕ್ಷೆ ಇದ್ದುದರಿಂದ ಗಂಭೀರವಾಗಿ ಓದುತ್ತಿದ್ದರು.

ಪ್ರಬಂಧಗಳನ್ನು ಬರೆದು, ನಂತರ ಅವಕ್ಕೆ ವಿಶ್ವವಿದ್ಯಾಲಯದಿಂದ ಸಮ್ಮತಿಯೂ ಸಿಕ್ಕಿದ್ದರಿಂದ ನಿರಾಳವಾಗಿ ಉಸಿರಾಡಿದ್ದರು. ಈಗ ಪರೀಕ್ಷೆಗಾಗಿ ಓದುವುದೊಂದು ಬಾಕಿಯಿತ್ತು. ಕಾಲೇಜು ಸಿಟಿಯಿಂದ ಏಳು ಕಿಲೋಮೀಟರಿನಷ್ಟು ದೂರವಿದ್ದು, ಕ್ಯಾಂಪಸ್‌ನ ಒಳಗೇ ಹುಡುಗರ ಹಾಸ್ಟೆಲ್, ಹುಡುಗಿಯರ ಹಾಸ್ಟೆಲ್ ಮತ್ತು ಲೈಬ್ರರಿ, ಕ್ಯಾಂಟೀನ್ ಕೆಲವು ಸಿಬ್ಬಂದಿ ವರ್ಗದವರಿಗೆ ವಸತಿ ಗೃಹಗಳು ಇದ್ದವು. ಕಾಲೇಜಿನ ಮುಖ್ಯ ದ್ವಾರದ ಮುಂದೆ ಮುಖ್ಯ ರಸ್ತೆ ದಾಟಿದರೆ ಸಾಲಾಗಿ



ಡಾಬಾಗಳು, ಸಣ್ಣ ಹೋಟೆಲ್‌ಗಳು, ಅಂಗಡಿಗಳು, ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಆ ಕೂಡಲೇ ಬೇಕಾಗುವ ವಸ್ತುಗಳು ಸಿಗುವಂತಿದ್ದು, ಮೂರು ನಾಲ್ಕು ಮೆಡಿಕಲ್ ಶಾಪುಗಳು ಇದ್ದವು. ಮೊದಲು ಖಾಲಿ ನಿವೇಶನಗಳಿದ್ದ ಜಾಗಗಳಲ್ಲಿ ಮನೆಗಳು ನಿರ್ಮಾಣವಾಗಿದ್ದು, ಅದೊಂದು ಪ್ರತ್ಯೇಕವಾದ ಊರಿನಂತಿತ್ತು.

ಶನಿವಾರದಂದು, ಸಾಕ್ಷಿ, ಮಾನಸಿ ಮತ್ತು ಮೀರಾ ಹಾಸ್ಟೆಲಿನ ಊಟ ಬೇಡವೆಂದು ಊಟಕ್ಕಾಗಿ ಸಿಟಿಗೆ ಬಂದಿದ್ದರು, ನಂತರ ಮಾನಸಿ ಮೀರಾ ಹಾಸ್ಟೆಲಿಗೆ ಬಂದಿದ್ದರು. ಸಾಕ್ಷಿ ತಾನು ಸ್ನೇಹಿತೆಯನ್ನು ಭೇಟಿಯಾಗಿ ಬರುವೆನೆಂದು ಅಲ್ಲಿಯೇ ಉಳಿದಿದ್ದಳು. ಅವಳು ಸೋಮವಾರ ಬೆಳಿಗ್ಗೆ ಕಾಲೇಜಿಗೂ ಹಾಸ್ಟೆಲಿಗೂ ಬಾರದೇ ಇದ್ದದ್ದು ಗೆಳತಿಯರನ್ನು ಆತಂಕಕ್ಕೀಡು ಮಾಡಿತ್ತು. ಪರೀಕ್ಷೆ ಹತ್ತಿರ ಬರುತ್ತಾ ಇರೋ ಸಂದರ್ಭದಲ್ಲಿ ಸ್ನೇಹಿತೆ ಅಂತ ದಿನಗಟ್ಟಲೇ ಅಲ್ಲೇ ಉಳಿದಿದ್ದು ಬೇಸರ ತರಿಸಿತ್ತು. ಮೊಬೈಲ್‌ನಿಂದ ಕರೆ ಮಾಡಿದರೂ ಅವಳು ಉತ್ತರಿಸಿರಲಿಲ್ಲ. ಅವಳ ಸ್ನೇಹಿತೆ ಪೂರ್ಣಿಮಾಳಿಗೆ ಫೋನು ಮಾಡಿದರೂ ಅವಳೂ ಪ್ರತಿಕ್ರಿಯೆ ನೀಡಿರಲಿಲ್ಲ. ಒಮ್ಮೆಯೂ ಫೋನ್ ಎತ್ತಿಕೊಂಡು ಉತ್ತರಿಸುವ ಸೌಜನ್ಯ ತೋರಲಿಲ್ಲ. ಯಾವುದಕ್ಕೂ ಫೋನ್ ಮಾಡಿ ಹೇಳುತ್ತಿದ್ದವಳು. ಏನೂ ಹೇಳದೇ ಮೌನವಾಗಿ ಉಳಿದಳು. ಇವರು ಫೋನ್ ಮಾಡಿದರೂ ನಾಟ್ ರೀಚಬಲ್ ಆದ್ದರಿಂದ ಇವರೂ ಸುಮ್ಮನಾಗಿ ಬಿಟ್ಟಿದ್ದರು. ಆದರೆ ಸಾಕ್ಷಿ ಭಾನುವಾರ ಮುಗಿದು ಸೋಮವಾರವಾದರೂ ಹಾಸ್ಟೆಲಿಗೆ ಬರಲಿಲ್ಲ. ಇದು ಇಬ್ಬರಲ್ಲೂ ಆತಂಕ ಮೂಡಿಸಿತ್ತು. ಹಾಸ್ಟೆಲಿನಲ್ಲಿರೋ ಬೇರೆ ಹುಡುಗಿಯರಿಗೆ ಕೇಳಿದರೆ, ಅದೇ ಒಂದು ದೊಡ್ಡ ಸುದ್ದಿಯಾಗಿ ವಾರ್ಡನ್ ಕಿವಿಗೇನಾದರೂ ಬಿದ್ದರೆ? ಸದ್ಯ ಹಾಗೆ ಆಗುವುದೇ ಬೇಡ ಎಂದು ಸಾಕ್ಷಿ ರೂಮಿಗೆ ಬಾರದ ಸುದ್ದಿ ಒಳಗೇ ಉಳಿಯಿತು. ಪರೀಕ್ಷೆಯ ಭಯದಿಂದ ಕೆಲವರು ರೂಮಿನೊಳಗೇ ಕುಳಿತುಕೊಂಡು ಓದುತ್ತಿದ್ದರೆ, ಕೆಲವರು ರೀಡಿಂಗ್ ರೂಮಿನಲ್ಲಿ ಕುಳಿತು ಓದುತ್ತಿದ್ದರು. ಜೂನಿಯರ್ ಹುಡುಗಿಯರಿಗೆ ಇದಾವುದರ ಅರಿವೂ ಇರಲಿಲ್ಲ.

ಸಂಜೆ, ಮಾನಸಿ ಕಾಲೇಜಿನಿಂದ ಬಂದವಳೇ ಸ್ನಾನಕ್ಕೆಂದು ಹೋಗಿದ್ದಳು. ಮೀರಾ ಅವಳಿಗಾಗಿ ಕಾಫಿ ಕುಡಿಯದೇ ಕಾತುರದಿಂದ ಕಾಯುತ್ತಾ ಕುಳಿತಿದ್ದಳು.

ಗಡಿಬಿಡಿಯಿಂದ ರೂಮಿನೊಳಗೆ ಬಂದ ಮಾನಸಿ, 'ಸ್ಸಾರಿ ಕಣೆ.... ಪೋಸ್ಟ್ ಮಾರ್ಟ್ ಹಾಲಿನಿಂದ ಬಂದ ಕೂಡಲೆ ಸ್ನಾನ ಮಾಡದೇ ಇರೋಕಾಗೊಲ್ಲಾ...' ಎನ್ನುತ್ತಾ ಟವಲಿನಿಂದ ತಲೆಗೂದಲನ್ನು ಒರೆಸಿಕೊಳ್ಳುತ್ತಾ ಮೀರಾಳ ಬಳಿ ಬಂದಳು.' ಮೀರಾ ಮುಖ ಊದಿಸಿಕೊಂಡು ಕುಳಿತಿದ್ದಳು.

"ಹೇಳಿದೆನಲ್ಲಾ ಸ್ಸಾರಿ ಅಂತ.. ಬಾ... ಕಾಫಿ ಕುಡಿದು ಬರೋಣ...'

"ನೀನು ಹೀಗೆ ದಿನಕ್ಕೆರಡು ಬಾರಿ ಸ್ನಾನ ಮಾಡ್ತಾಯಿರು. ಸವೆದು ಹೋಗಿ, ಒಂದು ದಿನ ಮಾಯವಾಗಿ ಬಿಡ್ತೀಯಾ' ಎಂದು ಮೀರಾ ತನ್ನ ಅಸಹನೆಯನ್ನು ಹೊರಗೆ ಹಾಕಿದಳು.



'ಸದ್ಯ, ಈಗ ಮಾಯವಾಗಿರೋ ಸಾಕ್ಷಿ ಮರಳಿ ಬಂದರೆ ಸಾಕು' ಎಂದು ಮಾನಸಿ, ಮೀರಾಳನ್ನು ಎಳೆದುಕೊಂಡು ಮೆಸ್‌ನತ್ತ ನಡೆದಳು.

ಮೆಸ್ಸಿನಲ್ಲಿ ಟೇಬಲ್ಲಿನ ಮುಂದೆ ಅಲ್ಲಲ್ಲಿ ಕುಳಿತಿದ್ದ. ಹುಡುಗಿಯರು ಮಾತನಾಡುತ್ತಾ ನಗುತ್ತಾ ಕಾಫಿ ಕುಡಿಯುತ್ತಾ ಮಧ್ಯೆ ಮಧ್ಯೆ ಏನನ್ನೋ ತಿನ್ನುತ್ತಿದ್ದರು. ಮಾನಸಿ ಮತ್ತು ಮೀರಾ ಏನೂ ಮಾತನಾಡದೆ ಕುಳಿತು ಕಾಫಿ ಕುಡಿದು ಎದ್ದು ರೂಮಿಗೆ ಬಂದರು. ಮೀರಾ ಇನ್ನೂ ಗಂಭೀರವಾಗಿಯೇ ಇದ್ದಳು.

'ಯಾಕೆ ತಿನ್ನೋಕೆ ಏನೂ ತೆಗೆದುಕೊಂಡು ಬರಲಿಲ್ಲ?' ಮಾನಸಿಯೇ ಮಾತಿಗಿಳಿದಳು.

"ನಿನಗೆ ಹೃದಯವೇ ಇಲ್ಲ. ಸಾಕ್ಷಿ ಬರದೇ ಇವತ್ತಿಗೆ ಮೂರು ದಿನಗಳಾದವು. ಅದರ ಬಗ್ಗೆ ಸ್ವಲ್ಪವಾದ್ರೂ ಕಳಕಳಿ ಇದೆಯಾ?' ಹೇಳುತ್ತಿದ್ದಂತೆಯೇ ಅವಳ ಕಣ್ಣುಗಳಲ್ಲಿ ನೀರು ತುಂಬಿತು. ಮಾನಸಿ ಗಂಭೀರಳಾದಳು.

'ಮೀರಾ... ಈಗ ಏನು ಮಾಡ್ಬೇಕು ನೀನೇ ಹೇಳು. ಯಾರಿಗೂ ಹೇಳುವ ಹಾಗೂ ಇಲ್ಲ. ಕೇಳುವ ಹಾಗೂ ಇಲ್ಲಾಂತ ತಾನೆ ನಾವು ಅಂದುಕೊಂಡಿದ್ದು?'

'ಸಿಟಿಯಲ್ಲಿರೋ ಆ ಪೂರ್ಣಿಮಾ ಕೂಡಾ ಫೋನ್ ತೆಗೆದುಕೊಳ್ತಾಯಿಲ್ಲ. ಹಾಳಾದೋಳು, ಕಷ್ಟಕ್ಕಾಗೋಲ್ಲ ಏನೂ ಇಲ್ಲ. ಸ್ನೇಹಿತೆಯಂತೆ... ಸ್ನೇಹಿತೆ...' ಮೀರಾ ಸಿಡಿಗುಟ್ಟಿದಳು.

"ಅವಳಿಗೆ ನಮ್ಮ ಒತ್ತಡ ಹೇಗೆ ಗೊತ್ತಾಗುತ್ತೆ? ಮೊಬೈಲ್ ಫೋನ್‌ಗೆ ಏನಾಗಿದೆಯೋ ಏನೋ.. ಒಂದಿಮಿಷ ತಾಳು, ಮತ್ತೆ ನಾನು ಫೋನ್ ಮಾಡ್ತೀನಿ...' ಎಂದು ಮಾನಸಿ, ಪೂರ್ಣಿಮಾಳಿಗೆ ಫೋನ್ ಮಾಡಿದಳು.

ಫೋನ್ ರಿಂಗಾಗುತ್ತಿತ್ತು, 'ಏನಾಯ್ತು?' ಮೀರಾ ಕಾತುರದಿಂದ ಕೇಳಿದಳು.

'ರಿಂಗಾಗ್ತಿದೆ. ಫೋನ್ ತಗೂಂಡಳು' ಎಂದ ಮಾನಸಿ, 'ಹಲೋ ಪೂರ್ಣಿಮಾ.... ನಾನು ಮಾನಸಿ...' ಎಂದಳು.

"ಹಲೋ.... ಏನು ವಿಷ್ಯ ಮಾನಸಿ... ನಂಗೆ ಫೋನ್ ಮಾಡಿದ್ದೀಯಾ?' ಅತ್ತ ಕಡೆಯಿಂದ ಪೂರ್ಣಿಮಾ ಕೇಳಿದಳು.

'ಶನಿವಾರದಿಂದಲೂ ನಿನ್ನ ಫೋನಿಗೆ ಪ್ರಯತ್ನ ಮಾಡ್ತಾನೆ ಇದ್ದೀವಿ. ಯಾಕೆ? ಫೋನ್ ಸರಿಯಾಗಿರಲಿಲ್ವಾ?'

'ಇಲ್ಲಾ ಮಾನಸಿ, ಶನಿವಾರ ಲೈಬ್ರರಿಗೆ ಹೋಗಿದ್ದಾಗ ಸೈಲೆಂಟ್ ಮಾಡ್ಕೊಂಡಿದ್ದೆ. ಅವಸರದಲ್ಲಿ ಬರುವಾಗ ಮರೆತು ಬಂದು ಬಿಟ್ಟಿದ್ದೆ. ಇವತ್ತು ಹೋಗಿ ತೆಗೆದುಕೊಂಡು ಬಂದೆ. ಲೈಬ್ರರಿಯನ್ನು ತೆಗೆದಿಟ್ಟಿದ್ದರು. ಸದ್ಯ ಸಿಕ್ಕಿತು..

"ನಿನ್ನ ಮನಗೇನಾದರೂ ಸಾಕ್ಷಿ ಬಂದಿದ್ದಾಳಾ?' ಮಾನಸಿ ಕೇಳಿದಳು.

'ಸಾಕ್ಷೀನಾ? ನೋ ನೋ... ಈಗ ಪರೀಕ್ಷೆಗಾಗಿ ಓದೋದು ಬಿಟ್ಟು ಸಿಟಿಗೆಲ್ಲಿ ಬಾರ್ತಾಳೆ?' ಎಂದಳು ಪೂರ್ಣಿಮಾ.

"ಹೌದಾ? ನಿನ್ನ ಮನೆಗೆ ಬಂದಿದ್ದಾಳೇಂತಾ ಅಂದ್ಕೊಂಡಿದ್ದೆ. ಊರಿಗೇನಾದ್ರೂ ಹೋಗಿರ್ಬೇಕು ಬಿಡು'.



'ಇಲ್ಲಾ ಮಾನಸಿ... ಶನಿವಾರ ಸಾಯಂಕಾಲ ಐದು ಗಂಟೆಗೆ ಅನಾಟಮಿ ಬ್ಲಾಕ್‌ನತ್ತ ಹೋಗ್ತಾ ಇದ್ದಳು.. ಅವಳೂ ಅವಸರದಲ್ಲಿದ್ದಳು. ನಾನೂ ಅವಸರದಲ್ಲಿದೆ. ಸಿಟಿ ಬಸ್ಸು ತಪ್ಪಿ ಹೋಗುತ್ತೇಂತಾ.. ಯಾಕೆ? ಅವಳು ಹಾಸ್ಟೆಲಿಗೆ ಬಂದಿಲ್ವಾ?' ಪೂರ್ಣಿಮಾ ಆಶ್ಚರ್ಯದಿಂದ ಕೇಳಿದಳು.

'ಹಾಗೇನಿಲ್ಲ...' ಎಂದು ಹೇಳುತ್ತಿದ್ದ ಮಾನಸಿಯ ಮಾತನ್ನು ಅರ್ಧದಲ್ಲಿಯೇ ಕಡಿದ ಪೂರ್ಣಿಮಾ, ಎಲ್ಲಿ ಹೋಗ್ತಾಳೆ? ಅನಾಟಮಿ ಡಿಪಾರ್ಟ್‌ಮೆಂಟಿನಲ್ಲಿರೋ ಅವಳ ಊರಿನ ಅಸಿಸ್ಟೆಂಟ್ ಪ್ರೊಫೆಸರ್ ಶಿವಾನಂದನನ್ನು ಮಾತನಾಡಿಸಲು ಹೋಗಿದ್ದಾಳೆ. ಬಾಳೆ ಬಿಡು...' ಹೇಳಿದಳು.

'ಸರಿ... ಸರಿ... ಥ್ಯಾಂಕ್ಸ್ ಪೂರ್ಣಿಮಾ....'

'ಇಟ್ಸ್.. ಓಕೆ.... ಎನ್ನುತ್ತಾ ಫೋನ್ ಕೆಳಗಿಟ್ಟಳು ಪೂರ್ಣಿಮಾ,

ಫೋನಿನಲ್ಲಿ ಮಾತನಾಡುತ್ತಿದ್ದ ಮಾನಸಿಯ ಮುಖಭಾವವನ್ನೇ ನೋಡುತ್ತಾ ಕುಳಿತಿದ್ದ ಮೀರಾ, ದಿಗ್ಗನೆ ಎದ್ದು ನಿಂತು, ಏನಂತೆ ಮಾನಸಿ... ಕಾತುರದಿಂದ ಕೇಳಿದಳು.

ಮಾನಸಿ ಎಲ್ಲವನ್ನೂ ಹೇಳಿ, 'ನಿಂಗೆ ಆ ಡಾಕ್ಟರ್ ಶಿವಾನಂದ ಅವರ ಫೋನ್ ನಂಬರ್ ಗೊತ್ತಾ?' ಎಂದು ಕೇಳಿದಳು.

"ಅಂ.... ನನ್ನ ಹತ್ತಿರ ಇಲ್ಲ. ತಾಳು ಟೇಬನಲ್ಲಿ ಮೇಲೆ ಅವಳ ಟೆಲಿಫೋನ್ ಡೈರಿಯಲ್ಲಿದ್ದೇಕು. ನೋಡಿ ಹೇಳ್ತಿನಿ..' ಎಂದು ಮೀರಾ ಸಾಕ್ಷಿಯ ಮೇಜಿನ ಮೇಲೆ, ಪುಸ್ತಕಗಳ ನಡುವೆಯಿದ್ದ ಟೆಲಿಫೋನ್ ಡೈರಿಯನ್ನು ಕೆದಕಿ. ಹುಡುಕಿ ತೆಗೆದು ಶಿವಾನಂದನ ಫೋನ್ ನಂಬರನ್ನು ಕೊಟ್ಟಳು.

ಮಾನಸಿ ಡಾಕ್ಟರ್ ಶಿವಾನಂದನಿಗೆ ಫೋನ್ ಮಾಡಿದಳು. ಶಿವಾನಂದ 'ಹಲೋ' ಎಂದ ಕೂಡಲೆ ಮಾನಸಿ, 'ಶಿವಾನಂದ್... ನಾನು ಮಾನಸಿ... ಸಾಕ್ಷಿಯ ರೂಂಮೇಟ್...' ಎಂದಳು.

'ಹೇಳಿ ಡಾಕ್ಟ್ರೆ... ಏನು ವಿಷಯ?'

'ಶನಿವಾರ ಸಂಜೆ ಸಾಕ್ಷಿ ನಿಮ್ಮನ್ನು ನೋಡಲು ಬಂದಿದ್ದಾಳಾ?'

'ಹೂಂ... ಶನಿವಾರ ಅನಾಟಮಿಯ ಹಾಲ್ ಮಧ್ಯಾಹ್ನವೇ ಬಾಗಿಲು ಹಾಕಿರುತ್ತದೆ. ಅವಳಿಗದು ಮರೆತು ಹೋಗಿತ್ತಂತೆ. ಅದರಲ್ಲಿ ಅನಾಟಮಿಯ ಹಾಲ್‌ನ ಬಾಗಿಲು ಅರ್ಧ ತೆಗೆದಿತ್ತೊಂತ ಒಳಗೆ ಹೋಗಿ ನನ್ನ ಛೇಂಬರ್‌ನಲ್ಲಿ ಕುಳಿತು ನನಗೆ ಫೋನ್ ಮಾಡಿದ್ದಳು. ನನಗೆ ಗಾಬರಿಯಾಗಿತ್ತು. ಪ್ರೊಫೆಸರ್ ಇಳಂಗೋವನ್ ಒಂದೊಂದ್‌ಸಲ ರಾತ್ರಿ ಎಂಟು ಗಂಟೆಯವರೆಗೂ ಅವರ ಛೇಂಬರಿನಲ್ಲಿದ್ದಾರೆ. ಅವರೇನಾದ್ರೂ ಅವಳನ್ನು ನೋಡಿ ಬಿಟ್ಟರೆ ಗ್ರಹಚಾರ ಬಿಡಿಸಿ ಬಿಡ್ತಾರೆ ಅಂತ ಹೇಳಿ, ಅವಳನ್ನು ಲೈಬ್ರರಿಯ ಹತ್ತಿರ ಬರಲು ಹೇಳಿದ್ದೆ...'

'ಸರಿ, ಬರ್ತೀನಿ, ನಿನಗೊಂದು ಶಾಕಿಂಗ್ ವಿಷಯ ಹೇಳ್ಬೇಕೂಂತ ಹೇಳಿದಳು. ಮೊದಲು ಅಲ್ಲಿಂದ ಬಾ... ಎಂದಿದ್ದೆ. ನಂತರ ನನ್ನ ರೂಮಿನಿಂದ ರೆಡಿಯಾಗಿ ಲೈಬ್ರರಿಯ

ಹತ್ತಿರ ಹೋದೆ. ಏಳು ಗಂಟೆಯವರೆಗೂ ಅವಳು ಬಾರ್ತಾಳೇಂತಾ ಕಾಯುತ್ತಾ ಅಲ್ಲೇ ನಿಂತಿದ್ದೆ.. ಮೂರು ನಾಲ್ಕು ಬಾರಿ ಫೋನ್ ಕೂಡಾ ಮಾಡಿದ್ದೆ. ಅವಳ ಫೋನಿನಿಂದ ನೀವು ಕರೆಯುತ್ತಿರುವ ನಂಬರು ವ್ಯಾಪ್ತಿಯ ಪ್ರದೇಶದೊಳಗಿಲ್ಲಾಂತ ಹೇಳೋಕೆ ಶುರುವಾಯಿತು. ಕತ್ತಲಾಯ್ತುಂತ ಹಾಸ್ಟೆಲಿಗೆ ಹೋಗಿದ್ದೇಕೂಂತ ನಾನೂ ಅಲ್ಲಿಂದ ನನ್ನ ರೂಮಿಗೆ ಬಂದು ಬಿಟ್ಟೆ...' ಶಿವಾನಂದ ಹೇಳುತ್ತಿದ್ದ. ಮಾನಸಿ ಮಾತನಾಡದೇ ಕೇಳಿಸಿಕೊಳ್ಳುತ್ತಿದ್ದಳು. ಅವಳ ಮುಖದಲ್ಲಾಗುತ್ತಿದ್ದ ಬದಲಾವಣೆ ಗಮನಿಸಿದ ಮೀರಾ. “ಏನಂತೆ? ಎಂದು ಗಾಬರಿಯಿಂದ ಕೇಳಿದಳು. ಕೈಸನ್ನೆಯಿಂದ ಅವಳನ್ನು ಸುಮ್ಮನಿರುವಂತೆ ಸೂಚಿಸಿದ ಮಾನಸಿ.

'ಮತ್ತೆ ನೀವು ಅವಳಿಗೆ ಫೋನ್ ಮಾಡ್ಲೆ ಇಲ್ವಾ?' - ಕೇಳಿದಳು.

'ರಾತ್ರಿ ಒಂಬತ್ತು ಗಂಟೆಗೆ ಮತ್ತೆ ಫೋನ್ ಮಾಡಿದ್ದೆ. ಮತ್ತದೇ ಉತ್ತರ... ಸುಮ್ಮನಾಗಿಬಿಟ್ಟೆ...' ಎಂದು ಶಿವಾನಂದ.

‘....’

'ಯಾಕೆ ಏನು ವಿಷಯ?'- ಶಿವಾನಂದ ಕೇಳಿದ. 'ನಾನು ನಾಳೆ ಬಂದು ನಿಮ್ಮನ್ನು ಭೇಟಿಯಾಗಿ ಎಲ್ಲವನ್ನೂ ಹೇಳುತ್ತೇನೆ... ಥ್ಯಾಂಕ್ಸ್' ಎಂದ ಮಾನಸಿ ಕುರ್ಚಿಯ ಮೇಲೆ ಕುಸಿದು ಕುಳಿತಳು.

'ಯಾಕೆ? ಏನಾಯ್ತು? ಏನಂತೆ....' ಮೀರಾ ಅವಳ ಬಳಿ ಬಂದು ಅವಳ ಮುಖ ನೋಡಿ ಗಾಬರಿಯಿಂದ ಕೇಳಿದಳು. ಮಾನಸಿ ಏನು ಹೇಳಬೇಕು, ಹೇಗೆ ಹೇಳಬೇಕು ಎಂಬಂತೆ ಕುಳಿತಿದ್ದಳು.

'ಮಾನ್ಸಿ.... ಏನಂತೆ? ಸಾಕ್ಷಿ ಅಲ್ಲಿದ್ದಾಳಂತಾ? ಏನಾಯ್ತು? ಮೀರಾ ಮಾನಸಿ ಸ್ಥಿತಿ ಕಂಡು ಗಾಬರಿಯಾಗಿ ಕೇಳಿದಳು.

ಒಮ್ಮೆ ಮೀರಾಳತ್ತ ನೋಡಿದ ಮಾನಸಿ, 'ಪೂರ್ಣಿಮಾ ಹೇಳಿದ್ದು ನಿಜಾ ಕಣೆ. ಸಾಕ್ಷಿಯನ್ನು ಅನಾಟಮಿ ಬ್ಲಾಕ್ ಹತ್ತಿರ ಹೋಗೋದನ್ನು ನೋಡಿದ್ದು ಪಕ್ಕಾ ಆಯ್ತು' ಎಂದ ಮಾನಸಿ, ಶಿವಾನಂದ ಹೇಳಿದ ವಿಷಯವನ್ನು ತಿಳಿಸಿದಳು.

'ಅನಾಟಮಿ ಪ್ರೊಫೆಸರ್ ಇಳಂಗೋವನ್ ಕಂಡರೆ ಸಾಕ್ಷಿಗೆ ಆಗೋಲ್ಲ. ಅವರನ್ನು ನೋಡಿದ್ರೆ ರಾಕ್ಷಸನನ್ನು ನೋಡಿದ ಹಾಗಾಗುತ್ತೆ ಅಂತ ಹೇಳಿದ್ದು. ನೀನು ನೋಡಿಲ್ಲ ಅಲ್ವಾ?' ಮೀರಾ ಹೇಳಿದಳು.

'ಹತ್ತಿರದಿಂದ ನೋಡಿಲ್ಲ....'

'ಅಬ್ಬಾ! ಒಳ್ಳೆಯ ರಾಕ್ಷಸನ ಹಾಗಿದ್ದಾನೆ. ತೊನ್ನು ರೋಗ ಬೇರೆ ಆವರಿಸಿಕೊಂಡು ಕತ್ತಲಲ್ಲಿ ಆ ಮುಖ ನೋಡಿದ್ರೆ ಭಯದಿಂದಾನೇ ಸತ್ತು ಹೋಗ್ತಾರೆ.'

'ಆ ವಿಷ್ಯ ಯಾಕೀಗ ಮೀರಾ?'

'ಸಾಕ್ಷಿಗೆ ಅಲ್ಲಿಗೆ ಹೋಗೋಕೆ ಸಾಧ್ಯವಿಲ್ಲಾಂತ ಅನ್ನೋಕೆ ತಿಳಿಸಿದೆ. ಏನೋ ಮುಖ್ಯವಾದ ವಿಷಯ ಇರೇಕೂಂತ, ಶನಿವಾರ ಅನ್ನೋದನೂ ಮರೆತು ಹೋಗಿದ್ದಾಳೆ..'



"ಅವಳು ಮನೆಗೇನಾದ್ರೂ ಹೋಗಿರಬಹುದಾ?' ಮಾನಸಿ ಏನನ್ನೋ ಯೋಚಿಸುತ್ತಾ ಹೇಳಿದಳು. ಇದ್ದರೂ ಇರಬಹುದು. ಅವಳು ಯಾವಾಗ ಏನು ಮಾಡ್ತಾಳೇಂತ ಹೇಳೋದು ಕಷ್ಟ.' ಎಂದ ಮೀರಾ ಅವಳ ತಾಯಿಗೆ ಫೋನ್ ಮಾಡಿ ಕೇಳೋಣವಾ?' ಕೇಳಿದಳು.

"ಈಗ ಬೇಡ. ಬೆಳಗ್ಗೆ ಮಾತನಾಡೋಣ. ಒಂದು ವೇಳೆ ಹೋಗಿರದೇ ಇದ್ದರೆ ಸುಮ್ಮನೆ ಗಾಭರಿಯಾಗ್ತಾರೆ...'

'ಮಾನ್ಸಿ.. ಆ ಇಳಂಗೋವನ್‌ಗೆ ಕಾಲೇಜಿನಲ್ಲಿ ಒಳ್ಳೆಯ ಹೆಸರಿದೆ. ಎಲ್ಲರೂ ಹೆದರುತ್ತಾರೆ. ಅಷ್ಟು ಶಿಸ್ತು... ನಿಯಮ ಪಾಲನೆ ಅವರದು. ಒಳ್ಳೆಯ ಟೀಚರ್ ಕೂಡಾ ಅಂತ ಹೇಳ್ತಾರೆ...'

'ಮತ್ತೆ ಅವರ ವಿಷಯ ಶುರು ಮಾಡಿದೆಯಾ? ಮೊದಲು ಮುಂದೇನು ಮಾಡೋಕೂಂತ ಹೇಳು..." "ಅಲ್ಲಿಗೆ ಸಾಕ್ಷಿ ಹೋಗಿದ್ದಂತ ನಂಬೋಕೆ ಆಗ್ತಾಯಿಲ್ಲ.'

'ಮೀರಾ ಈ ಸುದ್ದಿ ಬಹಿರಂಗ ಆಗುವ ಮೊದಲು ವಾರ್ಡನ್‌ಗೆ ತಿಳಿಸಬೇಕು. ಇಲ್ಲದಿದ್ದರೆ ನಮ್ಮನ್ನು ಹೊರಗೆ ಹಾಕ್ತಾರೆ ಅಷ್ಟೆ...'

'ಸರಿ'

'ಈಗಲೇ ಹೋಗೋಣವಾ?'

'ಬೇಡಾ.. ಊಟ ಆದ್ಮಲೆ ಹೋಗೋಣ. ಆಗ ಮೇಡಂ ಊಟ ಮಾಡಿ ಫ್ರೀಯಾಗಿದ್ದಾರೆ' ಎಂದಳು ಮೀರಾ, 'ಸರಿ... ಅವಳ ಮಾತಿಗೆ ಮಾನಸಿ ಒಪ್ಪಿಗೆ ಸೂಚಿಸಿದಳು.

****

ಹಾಸ್ಟೆಲಿನ, ಕಾಂಪೌಂಡಿನ ಆವರಣದಲ್ಲಿ ಹಿಂದುಗಡೆಯೇ ಇದ್ದ ವಾರ್ಡನ್ ಮನೆಯ ಬಳಿಗೆ ಮಾನಸಿ ಮತ್ತು ಮೀರಾ ಬಂದಾಗ ಒಂಬತ್ತು ಗಂಟೆಯಾಗಿತ್ತು. ಹೊರಗಡೆ ಪೋರ್ಟಿಕೋದಲ್ಲಿ ಕುಳಿತಿದ್ದ ವಾರ್ಡನ್ ಯಾರೊಂದಿಗೋ ಮಾತನಾಡುತ್ತಿದ್ದರು. ಮೀರಾ ಮತ್ತು ಮಾನಸಿ ಬಂದು ನಿಂತಾಗ ವಾರ್ಡನ್, 'ಇದೇನು? ಇಷ್ಟು ಹೊತ್ತಿನಲ್ಲಿ? ಎನಿ ಪ್ರಾಬ್ಲಮ್?' ಎಂದು ಕೇಳಿದರು.

ಮೊದಲು ಹಿಂಜರಿದು ನಿಂತರೂ ವಿಷಯವನ್ನು ಹೇಳಲೇಬೇಕಾಗಿರುವುದರಿಂದ, ಮಾನಸಿ ಮುಂದೆ ಬಂದು, 'ಮೇಡಂ... ಸಾಕ್ಷಿ ಶನಿವಾರದಿಂದ ಇದುವರೆಗೂ ಹಾಸ್ಟೆಲಿಗೆ ಬಂದೇ ಇಲ್ಲ. ಫೋನ್ ಮಾಡಿದರೆ ಬೆಳಿಗ್ಗೆಯಿಂದ ಸ್ವಿಚ್ ಆಫ್ ಅಂತಾ ಬಾರ್‍ತಾ ಇದೆ...' ಹೇಳಲು ಆರಂಭಿಸಿದಳು. 'ಅಂದರೆ?' ಚಕಿತರಾಗಿ ಕೇಳಿದಳು ವಾರ್ಡನ್,

ಮಾನಸಿ ಎಲ್ಲ ವಿವರವನ್ನೂ ಹೇಳಿದಳು. ಡಾಕ್ಟರ್ ಶಿವಾನಂದ ಹೇಳಿದ ವಿಷಯ ಮತ್ತು ಅವನ ವಿಷಯ ಹೇಳಲಿಲ್ಲ. ತನ್ನತ್ತ ಪ್ರಶ್ನಾರ್ಥಕವಾಗಿ ನೋಡಿದ ಮೀರಾಳಿಗೆ ಕಣ್ಣು ಸನ್ನೆಯಿಂದಲೇ ಸುಮ್ಮನಿರುವಂತೆ ಸೂಚಿಸಿದ ಮಾನಸಿ. 'ಇದುವರೆಗೂ ಎಂದೂ



ಹಾಸ್ಟೆಲಿಗೆ ಲೇಟಾಗಿ ಬದವಳೇ ಅಲ್ಲ. ಪರೀಕ್ಷೆಯಿರುವುದರಿಂದ ಲೈಬ್ರರಿ ಬಿಟ್ಟರೆ ಬೇರೆಲ್ಲಿಗೂ ಹೋಗುತ್ತಿರಲಿಲ್ಲ....' ಹೇಳಿದಳು.

“ಊರಿನಗೇನಾದರೂ ಹೋಗಿರಬಹುದಾ?' ವಾರ್ಡನ್ ಕೇಳಿದರು.

'ನಮಗೂ ಅದೇ ಅನುಮಾನ ಬಂದಿತ್ತು. ಅವಳ ತಾಯಿಗೆ ಫೋನ್ ಮಾಡ್ಬೇಕೂಂತ ಅಂದ್ಕೊಂಡೆವು. ಬೆಳಗ್ಗೆ ಮಾಡಿದರಾಯ್ತುಂತ ಮೊದಲು ನಿಮಗೆ ತಿಳಿಸಲು ಬಂದೆವು. ಎಂದಳು ಮಾನಸಿ.

ವಾರ್ಡ್‌ನ್ ಅವರಿಗೆ ಸಿಟ್ಟು ಬಂದಿತು. 'ನನ್ನ ಹತ್ತಿರ ಬರೋಕೆ ನಿಮಗೆ ಮೂರು ದಿನಗಳು ಬೇಕಾಯ್ತಾ? ನನ್ನ ಮನೆ ಅಷ್ಟು ದೂರವೇನಿಲ್ಲಾಂತ ಅಂದ್ಕೊಂಡಿದ್ದೀನಿ' ಎಂದರು. ಸಿಟ್ಟನ್ನು ಮಾನಸಿಯ ಮೇಲೆ ತೀರಿಸಿದರು. 'ಸಾಕ್ಷಿಯ ಮನೆ ನಂಬರ್ ಇದ್ರೆ ಕೊಡಿ' ಎಂದರು ಮುಖ ಗಂಟಿಕ್ಕಿ.

ಮೀರಾ ತನ್ನ ಮೊಬೈಲ್‌ನಲ್ಲಿದ್ದ ಸಾಕ್ಷಿಯ ಮನೆಯ ಫೋನ್ ನಂಬರನ್ನು ವಾರ್ಡ್‌ನ್ ಅವರಿಗೆ ಕೊಟ್ಟಳು. ವಾರ್ಡನ್ ಸಾಕ್ಷಿಯ ಮನೆಗೆ ಫೋನ್ ಮಾಡಿದರು.

'...."

`ನಾನು ವಾರ್ಡನ್ ಮಾತಾಡ್ತಾ ಇದ್ದೀನಿ. ಸಾಕ್ಷಿ ಅಲ್ಲಿಗೇನಾದರೂ ಬಂದಿದ್ದಾಳೆಯೇ'

'...."

ಮತ್ತೆಲ್ಲಿಗೆ ಹೋಗಿರಬಹುದು?

.....'

ಮೂರು ದಿನಗಳಿಂದ ನಿಮ್ಮ ಮಗಳು ಹಾಸ್ಟೆಲಿಗೆ ಬಂದಿಲ್ಲ. ಅವಳ ರೂಮೇಟ್ಸ್ ಈಗ ಬಂದು ಹೇಳುತ್ತಿದ್ದಾರೆ. ಎಲ್ಲಾ ಕಡೆಯೂ ಅಂದರೆ ಸಾಕ್ಷಿಯ ಗೊತ್ತಿರೋರಿಗೆಲ್ಲಾ ಫೋನ್ ಮಾಡಿದರೂ ಸುಳಿವು ಸಿಗಲಿಲ್ಲ. ಇದನ್ನು ತಿಳಿಸುವುದು ನಮ್ಮ ಕರ್ತವ್ಯ ಹೇಳ್ತಾಯಿದ್ದೀನಿ.'

'...."

'ಅಳುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಗಾಭರಿಯಾಗಬೇಡಿ, ನಾಳೇನೇ ಕಾಲೇಜಿನ ಪ್ರಿನ್ಸಿಪಾಲ್ ಅವರ ಆಫೀಸಿನ ಹತ್ತಿರ ಬಂದು ಬಿಡಿ. ನಿಮಗೆ ಗೊತ್ತಿರೋರ ಮನೆಗೆ ಸಾಕ್ಷಿ ಹೋಗಿದ್ದಾಳೆಯೇ ಅಂತಾನೂ ಖಚಿತಪಡಿಸಿಕೊಂಡು ಬನ್ನಿ.. ಗಾಭರಿಯಾಗಬೇಡಿ. ನಾವಿದ್ದೇವೆ... ಬಂದು ಬಿಡಿ....'

'...."

"ಸರಿ... ಎಂದು ವಾರ್ಡನ್ ಮೊಬೈಲ್ ಕೆಳಗಿಟ್ಟು ಕುಳಿತರು. ಅವರ ಗಂಭೀರವಾದ ಮುಖ ನೋಡಿ ಇಬ್ಬರಿಗೂ ವಿಷಯದ ಗಂಭೀರತೆ ಅರ್ಥವಾಯಿತು. ಈಗ ಅವರಿಗೆ ಹೆದರಿಕೆಯಾಗತೊಡಗಿತು.

'ನೀವೂ ಬೆಳಿಗ್ಗೆ ಪ್ರಿನ್ಸಿಪಾಲ್ ಛೇಂಬರಿನ ಬಳಿ ಬರಬೇಕು, ತಪ್ಪಿಸಿಕೊಳ್ಳುವ ಹಾಗಿಲ್ಲ. ವಾರ್ಡನ್ ಗಂಭೀರವಾಗಿ ಹೇಳಿದರು.

'ಸರಿ... ಮೇಡಂ..' ಎಂದು ಇಬ್ಬರೂ ಹಾಸ್ಟೆಲಿನತ್ತ ನಡೆದರು. ತಮ್ಮ ರೂಮು ಸೇರುವವರೆಗೂ ಇಬ್ಬರೂ ಮಾತನಾಡಲಿಲ್ಲ. ಒಂದು ವಿಧದ ಭಯ, ಆತಂಕದಿಂದ ಅವರ ಬಾಯಿ ಕಟ್ಟಿ ಹೋಗಿತ್ತು... ವಾರ್ಡನ್ ಹತ್ತಿರ ಬರುವವರೆಗೂ ವಿಷಯದ ಗಂಭೀರತೆಯ ಬಗೆಗೆ ಭಯವಾಗಿರಲಿಲ್ಲ. ಈಗ ಅದು 'ಸಾಕ್ಷಿಯ ನಾಪತ್ತೆ'ಯ ವಿಷಯವಾಗಿತ್ತು.

* * * *

ಮರುದಿನ ಬೆಳಿಗ್ಗೆ -

ಚಕ್ರವರ್ತಿ ಮೆಡಿಕಲ್ ಕಾಲೇಜು ಮತ್ತು ರಿಸರ್ಚ್ ಸೆಂಟರ್‌ನ ಪ್ರಿನ್ಸಿಪಾಲ್ ಛೇಂಬರಿನೊಳಗೆ ಎಲ್ಲರೂ ಸೇರಿದ್ದರು. ಸಾಕ್ಷಿಯ ತಂದೆ ತಾಯಿ, ಮೀರಾ ಮತ್ತು ಮಾನಸಿ, ಹಾಸ್ಟೆಲಿನ ವಾರ್ಡನ್ ಮತ್ತು ಡಾಕ್ಟರ್ ಶಿವಾನಂದ ಎಲ್ಲರೂ ಕುಳಿತಿದ್ದರು. ಮೊದಲು ಮಾನಸಿಯನ್ನೇ ಕೇಳಿದರು. ಅವಳು ಪ್ರಿನ್ಸಿಪಾಲ್ ಮುಂದೆ ಸಾಕ್ಷಿ ಶನಿವಾರ ಸಂಜೆ ಅನಾಟಮಿ ಬ್ಲಾಕ್‌ನತ್ತ ಹೋಗಿದ್ದನ್ನು ತಮ್ಮ ಸ್ನೇಹಿತೆ ನೋಡಿದ್ದಾಗಿಯೂ, ನಂತರ ಶಿವಾನಂದನ ಜೊತೆ ಫೋನ್‌ನಲ್ಲಿ ಮಾತನಾಡಿದಾಗ ಅವಳು ಅಲ್ಲಿಯೇ ಇದ್ದುದಾಗಿಯೂ ಹೇಳಿದಳು. ಡಾಕ್ಟರ್ ಶಿವಾನಂದ ಅವರನ್ನು ಕರೆಯಿಸಿ ವಿಚಾರಿಸಲಾಗಿ ಮಾನಸಿಗೆ ಹೇಳಿದ್ದನ್ನೇ ಆತನೂ ಹೇಳಿದ್ದ, ಸಾಕ್ಷಿ ತಾಯಿಯು ಶಿವಾನಂದನನ್ನು ಅಪ್ಪಿಕೊಂಡು ಆಳಲಾರಂಭಿಸಿದರು. ಶಿವಾನಂದ ಅವರನ್ನು ಸಾಂತ್ವನಗೊಳಿಸತೊಡಗಿದ್ದ. ಅಷ್ಟರಲ್ಲಿ ಪ್ರಿನ್ಸಿಪಾಲರು ಪೊಲೀಸರಿಗೆ ಫೋನ್ ಮಾಡಿದ್ದರಿಂದ ಅವರೂ ಬಂದು ಸೇರಿದ್ದರು. ಎಲ್ಲವನ್ನು ಕೇಳಿದ ಬಳಿಕ ಸಾಕ್ಷಿ 'ನಾಪತ್ತೆ' ಎಂದು ಹೇಳಿದ ಇನ್‌ಸ್ಪೆಕ್ಟರ್ ಕುಲಕರ್ಣಿಯವರು ಪ್ರಿನ್ಸಿಪಾಲ್ ಮತ್ತು ವಾರ್ಡನ್ ಅವರ ಹೇಳಿಕೆ ಪಡೆದು, ದೂರಿನ ಪ್ರತಿ ತೆಗೆದುಕೊಂಡು ಸಾಕ್ಷಿಯ ತಂದೆಯತ್ತ ತಿರುಗಿ 'ನೀವು ಕೂಡ ನಮ್ಮ ಸ್ಟೇಷನ್‌ಗೆ ಬಂದು ಒಂದು ಕಂಪ್ಲೇಂಟ್ ಬರೆದುಕೊಡಿ, ಜೊತೆಗೆ ನಿಮ್ಮ ಮಗಳ ಒಂದು ಫೋಟೋ ಸಹ ಕೊಡಿ...' ಎಂದು ಹೇಳಿ, 'ಮತ್ತೆ ಅವಶ್ಯಕತೆ ಇದ್ದಾಗ ಇಲ್ಲಿಗೆ ಬರಬೇಕಾಗುತ್ತದೆ ಸರ್ ನೀವು ಸಹಕಾರ ನೀಡಬೇಕು...' ಎಂದು ಹೇಳಿ ಅಲ್ಲಿಂದ ತಾವು ಬಂದಿದ್ದ ಜೀಪ್‌ನಲ್ಲಿ ಹೊರಟು ಹೋದರು.

ಸಾಕ್ಷಿಯ ತಂದೆ ತಾಯಿ ಸಾಕ್ಷಿ ಪತ್ತೆಯಾಗುವವರೆಗೂ ಸಿಟಿಯಲ್ಲಿ ಲಾಡ್ಜ್ ಮಾಡಿಕೊಂಡು ಇರುತ್ತೇವೆ ಎಂದು ಶಿವಾನಂದನನ್ನು ಕರೆದುಕೊಂಡು ಹೋದರು. ವಾರ್ಡನ್ ಅವರು ಅಲ್ಲಿಂದ ಹೊರಟ ನಂತರ ಮಾನಸಿ ಮತ್ತು ಮೀರಾ ಕಾಲೇಜಿಗೆ ಹೋಗಲು ಮನಸ್ಸಾಗದೇ ಸೀದಾ ಹಾಸ್ಟೆಲಿಗೆ ಬಂದು ಬಿಟ್ಟರು.

ಸಾಕ್ಷಿ ನಾಪತ್ತೆಯಾಗಿದ್ದಳು. ಅವಳ ಶೋಧಕ್ಕಾಗಿ ಪ್ರಿನ್ಸಿಪಾಲರು ಪೊಲೀಸ್ ಇಲಾಖೆಯ ಸಹಾಯ ಕೋರಿದ್ದರು. ಪ್ರಿನ್ಸಿಪಾಲ್ ಅವರ ಛೇಂಬರಿನಲ್ಲಿ ನಡೆದ ಸುದೀರ್ಘವಾದ ಚರ್ಚೆಯಿಂದ ಮೀರಾ ಮತ್ತು ಮಾನಸಿ ಭೂಮಿಗಿಳಿದು ಹೋಗಿದ್ದರು. ಸಾಕ್ಷಿಯ



ಬಗ್ಗೆ ಮಾತನಾಡಲು ಏನೂ ಉಳಿದಿರಲಿಲ್ಲ. ಸಂಜೆಯೊಳಗೆ ಸಾಕ್ಷಿಯ ನಾಪತ್ತೆ, ಪೊಲೀಸಲು ಬಂದು ಹೋಗಿದ್ದು, ಇಡೀ ಕಾಲೇಜು ಆಸ್ಪತ್ರೆ, ವಾರ್ಡುಗಳು, ಹಾಸ್ಟೆಲಗಳಿಗೆಲ್ಲಾ ಬೆಂಕಿಯಂತೆ ಹರಡಿತು. ಎಲ್ಲಿ ಹೋದರೂ ಅದೇ ವಿಷಯದ ಬಿಸಿ ಬಿಸಿ ಚರ್ಚೆ.

ಇನ್‌ಸ್ಪೆಕ್ಟರ್ ಕುಲಕರ್ಣಿಯವರು ಪ್ರಿನ್ಸಿಪಾಲ್‌ರಿಗೆ ಸಾಕ್ಷಿ ಸ್ನಾತಕೋತ್ತರ ಪದವಿಗಾಗಿ ಓದುತ್ತಿದ್ದ ಪೆಥಾಲಜಿ ವಿಭಾಗ ಮತ್ತು ಸಾಕ್ಷಿಯ ಕೊನೆಯದಾಗಿ ಅನಾಟಮಿ ಬ್ಲಾಕ್ ಬಳಿ ಹೋಗಿದ್ದುದರಿಂದ ಆ ಎರಡೂ ವಿಭಾಗದಲ್ಲಿ ದೀರ್ಘವಾದ ಪತ್ತೆ ಕಾರ್ಯ ಹಾಗೂ ವಿಚಾರಣೆ ನಡೆಸಬೇಕಾಗುವುದೆಂದು ಹೇಳಿದರು. ಅದಕ್ಕಾಗಿ ಸಮ್ಮತಿ ಮತ್ತು ಸಹಕಾರ ಸಿಕ್ಕಿತು. ಆದಷ್ಟು ಬೇಗನೆ ಈ ಪ್ರಕರಣವನ್ನು ಭೇದಿಸುವುದಾಗಿ ಹೇಳಿದರು. ಕಾಲೇಜಿಗೆ ಅಥವಾ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕ್ಯಾಂಪಸ್‌ನಲ್ಲಿ ಗೊಂದಲ, ಗಲಾಟೆಗಳಾಗದಂತೆ ಶೋಧಕಾರ್ಯ ನಡೆಸಬೇಕೆಂದು ಪ್ರಿನ್ಸಿಪಾಲರು ಕೋರಿದ್ದರು. ಅದರಂತೆಯೇ ಕುಲಕರ್ಣಿ ತಮ್ಮ ಕೆಲಸವನ್ನು ಆರಂಭಿಸಿದ್ದರು.

ಎಲ್ಲವನ್ನೂ ನೋಡುತ್ತಾ ಕೇಳಿಸಿಕೊಳ್ಳುತ್ತಾ ಮೂಕ ಸಾಕ್ಷಿಗಳಾಗಿದ್ದರು ಮೀರಾ ಮತ್ತು ಮಾನಸಿ. ಅದರಂತೆ ಕುಲಕರ್ಣಿ ತಮ್ಮ ಕೆಲಸವನ್ನು ಆರಂಭಿಸಿದ್ದರು.

ಇನ್ಸ್‌ಪೆಕ್ಟರ್ ಕುಲಕರ್ಣಿ ಫೆಥಾಲಜಿ ವಿಭಾಗದ ಲೈಬ್ರರಿ ಲ್ಯಾಬೋರೇಟರಿ, ಶಿಕ್ಷಕರು ಸಾಕ್ಷಿಯ ಸಹಪಾಠಿಗಳ ಪರೀಕ್ಷೆ, ವಿಚಾರಣೆ ನಡೆಸಿದಾಗ ಯಾವ ರೀತಿಯ ಪ್ರಯೋಜನವೂ ಆಗಲಿಲ್ಲ. ಸಾಕ್ಷಿ ಒಳ್ಳೆಯವಳು. ಒಳ್ಳೆಯ ವಿದ್ಯಾರ್ಥಿನಿ ಎಂಬುದನ್ನು ಬಿಟ್ಟರೆ ಬೇರೆ ವಿವರಗಳು ಅವರ ಶೋಧಕಾರ್ಯಕ್ಕೆ ಸಹಾಯಕವಾಗಿರಲಿಲ್ಲ. ಇನ್ನು ಉಳಿದದ್ದು ಅನಾಟಮಿ ವಿಭಾಗ ಅಲ್ಲಿಯೂ ಇದಕ್ಕಿಂತ ಭಿನ್ನವಾಗಿರುವುದೇನೂ ಸಿಗಲಾರದು. ಸ್ನಾತಕೋತ್ತರ ಪೆಥಾಲಜಿ, ವಿಭಾಗದಲ್ಲಿರುವ ವಿದ್ಯಾರ್ಥಿಗಳಿಗೆ ಅಲ್ಲೇನು ಕೆಲಸವಿರಲಾರದು. ಒಂದು ಅನುಮಾನವೆಂದರೆ, ನಾಪತ್ತೆಯಾಗುವ ಮೊದಲು ಸಾಕ್ಷಿ ಅನಾಟಮಿ ಬ್ಲಾಕ್‌ಗೆ ಹೋಗಿದ್ದನ್ನು ಅವಳ ಸ್ನೇಹಿತೆ ಡಾಕ್ಟರ್ ಪೂರ್ಣಿಮಾ ನೋಡಿದ್ದು, ಅದಕ್ಕೆ ಪೂರಕವಾದ ಹೇಳಿಕೆಯನ್ನು ಡಾಕ್ಟರ್ ಶಿವಾನಂದ ಕೊಟ್ಟಿದ್ದರು. ಆದರೆ ಸಾಕ್ಷಿಯು ಅಲ್ಲಿಂದ ಹೊರಗೆ ಬಂದದ್ದನ್ನು ಯಾರೂ ನೋಡಿರಲಿಲ್ಲ!

ಕುತೂಹಲ ತಡೆಯಲಾರದೆ, ಮಾನಸಿ ಕುಲಕರ್ಣಿಯವರನ್ನು ವಿಚಾರಿಸಿದಳು.

"ಅದೇ ಡಾಕ್ಟರ್ ಸಾಕ್ಷಿಯವರು ಅಲ್ಲಿಂದ ಹೊರಗೆ ಬಂದಿದ್ದನ್ನು ನೋಡಿದವರು ಯಾರೂ ಇಲ್ಲ. ಸಾಕ್ಷಿಯವರು ಅನಾಟಮಿ ಹಾಲ್‌ನೊಳಗೆ ಹೋಗಿ ಡಾಕ್ಟರ್ ಶಿವಾನಂದರ ರೂಮಿನಲ್ಲಿ ಕುಳಿತಿದ್ದರು. ಎಂಬುದಕ್ಕೆ ಸಾಕ್ಷಿ ಸಿಕ್ಕಿಲ್ಲ. ಪೆಥಾಲಜಿ ವಿಭಾಗದ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳು ಒಮ್ಮೊಮ್ಮೆ ಅನಾಟಮಿ ವಿಭಾಗದ ಮ್ಯೂಸಿಯಂಗೆ ಹೋಗುತ್ತಿದ್ದರು. ಆದರೆ ರೆಗ್ಯುಲರ್ ಆಗಿ ಹೋಗುವುದಿಲ್ಲ. ಎಂದು ತಿಳಿಯಿತು ಹೌದಾ?' ಕುಲಕರ್ಣಿ ಕೇಳಿದರು.

'ಹೌದು ಸರ್, ಆಗಾಗ್ಗೆ, ಬೇಕಾದರೆ ಸ್ಪೆಸಿಮನ್ಸ್ ನೋಡಲು ಹೋಗ್ತಾರೆ' ಎಂದಳು ಮಾನಸಿ.



ನಮ್ಮಿಂದ ಏನಾದರೂ ಸಹಾಯ ಬೇಕಾದರೆ ಕೇಳಿ, ನಿಮ್ಮ ಯಾವುದೇ ಪ್ರಶ್ನೆಗಳಿಗೆ ನಮ್ಮಿಂದ ಬೇಕಾದ ಉತ್ತರ ಸಿಗಬಹುದು' ಎಂದ ಮಾನಸಿ. ತಟ್ಟನೆ ಯೋಜನೆಯೊಂದು ಹೊಳೆದಂತಾಗಿ ಸರ್ ಅನಾಟಮಿ ವಿಭಾಗದ ಹಾಲ್ ಬಳಿ ಸದಾ ಕಾವಲಿರುವ ವಾಚ್‌ಮನ್ ಇಲ್ಲವೇ ಜವಾನರ ಬಳಿ ನಮಗೆ ಬೇಕಾದ ಉತ್ತರಗಳು ಸಿಗಬಹುದೇನೋ?" ಎಂದಳು. ಅವಳ ಮಾತು ಕೇಳಿ ಕುಲಕರ್ಣಿಯವರ ತಲೆಯಲ್ಲೂ ಮಿಂಚು ಹೊಡೆದಂತಾಯಿತು.

'ಒಳ್ಳೆಯ ಸುಳಿವು ಕೊಟ್ಟಿರಿ... ಎಂದರು ನಗುತ್ತಾ.

'ನಾನು ಫಾರೆನ್ಸಿಕ್ ಮೆಡಿಸನ್ ಸ್ಟೂಡೆಂಟ್ ಸರ್' ಎಂದಳು ಮೃದುವಾಗಿ 'ಥ್ಯಾಂಕ್ಸ್' ಎಂದು ಕುಲಕರ್ಣಿ ಅಲ್ಲಿಂದ ಹೊರಟರು.

ರೂಮಿಗೆ ಬಂದ ಮಾನಸಿ ಮೀರಾಳಿಗೆ ಎಲ್ಲಾ ವಿಷಯ ತಿಳಿಸಿದಳು. ಅವಳ ಉತ್ಸಾಹ ಕಂಡ ಮೀರಾ. ನೀನು ಫಾರನ್ಸಿಕ್ ಮೆಡಿಸಿನ್ಸ್ ವಿಷಯ ತಗೊಂಡಿದ್ದು ಸಾರ್ಥಕವಾಯಿತು ಎಂದಳು.

ಆದರೆ ನಮ್ಮ ಸಾಕ್ಷಿ ಇನ್ನೂ ಪತ್ತೆಯಾಗಲಿಲ್ಲ ಮೀರಾ...' ಎಂದಳು ನಿರಾಶೆಯಿಂದ ಅವ್ಯಕ್ತ ನೋವು ಸ್ವರದಲ್ಲಿತ್ತು.

'ಪೊಲೀಸ್ ಡಿಪಾರ್ಟ್ ಮೆಂಟ್‌ಗೆ ಏನು ಸಾಕ್ಷಿಗಳು ಬೇಕಂತೆ?'

"ಸಾಕ್ಷಿ ಅಲ್ಲಿಗೆ ಹೋಗಿದ್ದಕ್ಕೆ, ಅಲ್ಲಿಂದ ಹೊರಗೆ ಬಂದಿದಕ್ಕೆ ಸರಿಯಾದ ಸಾಕ್ಷಿಗಳು ಬೇಕಂತೆ..."

ಅವರು ಗುಟ್ಟು ಮಾಡ್ತಾರೆ. ಅಷ್ಟೇ... ಎರಡೂ ಡಿಪಾರ್ಟ್‌ಮೆಂಟ್‌ನಲ್ಲಿ ಸಾಕ್ಷಿಗಳು ಸಿಗೋದೇನೂ ಕಷ್ಟವಿಲ್ಲಾಂತ ಅನ್ನಿಸೋಲ್ವಾ?"

"ಊಹೂಂ... ನಂಗೆ ಹಾಗನ್ನಿಸ್ತಾಯಿಲ್ಲ. ನಾವೂ ಯಾಕೆ ಪತ್ತೆ ಕಾರ್ಯ ಮಾಡಬಾರದು"

"ಸದ್ಯ ಪರೀಕ್ಷೆಗೆ ಓದೋಣ... ಅವರವರ ಕೆಲಸ ಅವರೇ ಮಾಡಿದ್ರೆ ಚಂದ. ನಾನೇನು ಒಂದು ಲೋಟಾ ಕಾಫಿ ಮಾಡಿ ಕೊಡ್ತೀಯಾಂತ ಹೊಗಳಿದ್ರೆ.. ನಿಜಾ ಅಂದ್ಕೊಂಡು ಬಿಟ್ಟೆಯಾ?' ಮೀರಾ ನಗುತ್ತಾ ಛೇಡಿಸಿದಳು.

"ನೀನು ಹೀಗೆ ನಗೋ ಬದಲು ಅತ್ತು ಬಿಡು ಮೀರಾ. ಪೊಲೀಸ್ನೋರ ಓಡಾಟ ನೋಡಿದ್ದೆ. ಖಂಡಿತಾ ಸಾಕ್ಷಿ ಸಿಗುತ್ತಾಳೆ. ಧೈರ್ಯವಾಗಿರು' ಮಾನಸಿಯ ಹತ್ತಿರ ಬಂದು ಹೇಳಿದಳು. ಮೀರಾಳಿಗೆ ನಿಜಕ್ಕೂ ಅಳು ಬಂದು ಬಿಟ್ಟಿತು. ಮಾನಸಿ, ಅವಳೇನು ತಪ್ಪು ಮಾಡಿದ್ದಾಳೆಂದು ಈ ಶಿಕ್ಷೆ?' ಗದ್ಗದ ಕಂಠದಿಂದ ಕೇಳಿದಳು.

"ಏನೂ ಆಗಿಲ್ಲ... ಖಂಡಿತಾ ಸಿಗ್ತಾಳೆ. ನಾಪತ್ತೆ' ಅಂದ ಕೂಡಲೇ ಹೆದರಿ ಬಿಟ್ಟಿದೀಯಲ್ಲೇ? ಅದು ಪೊಲೀಸ್ ಭಾಷೆ ಅಷ್ಟೇ ಬಿಡು. ಅವಳ ಕಣ್ಣೀರನ್ನೊರಸಲು ಮುಂದೆ ಬಂದಳು ಮಾನಸಿ.



'ಛೀ ದೂರ ಹೋಗೇ ಪೋಸ್ಟ್ ಮಾರ್ಟಂ ಹಾಲ್‌ನ ವಾಸನೆನೇ ಬಾಯಿದೆ...' ಮೃದುವಾಗಿ ಮೀರಾ ಅವಳನ್ನು ದೂರ ತಳ್ಳಿದಳು. ಮಾನಸಿ ನಗುತ್ತಾ ಸ್ನಾನಕ್ಕೆಂದು ಟವಲ್ ಬಟ್ಟೆ ಹಿಡಿದು ಓಡಿದಳು...

* * * *

ಇನ್‌ಸ್ಪೆಕ್ಟರ್ ಕುಲಕರ್ಣಿ ಅನಾಟಮಿ ವಿಭಾಗಕ್ಕೆ ಸಿಬ್ಬಂದಿಯೊಂದಿಗೆ ಬಂದಿಳಿದರು. ಪ್ರೊಫೆಸರ್ ಇಳಂಗೋವನ್ ಅವರಿಗೆ ಪ್ರಿನ್ಸಿಪಾಲ್ ವಿಷಯ ತಿಳಿಸಿದ್ದರು. ಇಳಂಗೋವನ್ ಅವರು, ಆ ಹುಡುಗಿ ನನ್ನ ಡಿಪಾರ್ಟ್‌ಮೆಂಟ್‌ಗೆ ಯಾಕೆ ಬಾರ್ತಾಳೆ? ಬಂದಿದ್ದರೂ ನೋಡಿಕೊಂಡು, ಶಿವಾನಂದ್ ಇಲ್ಲದ್ದರಿಂದ ಹೋಗಿದ್ದಾಳೆ. ಆ ವಿಷಯ ಯಾಕೆ ದೊಡ್ಡದು ಮಾಡ್ತೀರಾ" ಅಸಮಾಧಾನದಿಂದ ಹೇಳಿದರು.

'ಆ ಹುಡುಗಿ ಮೊಬೈಲ್ ನಂಬರನ್ನು ಸರ್ವಿಲೆನ್ಸ್ ಮಾಡಿದ್ದಾರೆ. ಆ ನಂಬರ್ ನಿಮ್ಮ ಡಿಪಾರ್ಟ್‌ಮೆಂಟ್ ತೋರಿಸಿತಂತೆ ನಂತರ ಮೊಬೈಲ್ ರಿಂಗಾಗುತ್ತಿರಲಿಲ್ಲವಂತೆ ನೋಡಲಿ ಬಿಡಿ. ಏನಾಗುತ್ತೆ?' ನೀವು ಸಹಕರಿಸಿ ಅಷ್ಟೇ ಪ್ಲಿಸ್' ಎಂದು ಮೃದುವಾಗಿ ಹೇಳಿದರೂ ಅಜ್ಞಾಪೂರ್ವಕವಾಗಿತ್ತು.

ಇಳಂಗೋವನ್ ಅಸಹನೆಯಿಂದಲೇ ಎದ್ದು ಹೋಗಿದ್ದರು. ಇನ್‌ಸ್ಪೆಕ್ಟರ್ ಕುಲಕರ್ಣಿ ತಮ್ಮ ಇಬ್ಬರು ಕಾನ್‌ಸ್ಟೇಬಲ್ ಜೊತೆ ಅನಾಟಮಿ ವಿಭಾಗಕ್ಕೆ ಬಂದಿಳಿದರು. ಅವರು ಅಣತಿಯಂತೆ ಎಲ್ಲವನ್ನೂ ತೋರಿಸುತ್ತಾ ಬಂದರು.

ಅನಾಟಮಿ ಹಾಲಿನಲ್ಲಿ ಹತ್ತು ದೊಡ್ಡ ಟೇಬಲ್‌ಗಳನ್ನು ಹಾಕಿದ್ದರು. ಪಾರ್ಮಾಲಿನ್ ದ್ರಾವಣದ ಘಾಟಿನಿಂದ ಎಲ್ಲರ ಕಣ್ಣುಗಳಲ್ಲಿ ಉರಿ ಕಾಣಿಸಿಕೊಂಡು ನೀರು ಬರುವಂತಾಯಿತು. ಪಾರ್ಮಾಲಿನ್ ದ್ರಾವಣ ತುಂಬಿದ್ದ ಅತಿ ದೊಡ್ಡ ಟ್ಯಾಂಕ್‌ನಲ್ಲಿ ಕರಕಲಾದ ಛೇದಿಸಿದ್ದ ಶವಗಳನ್ನು ಕೆಡದಂತೆ ಹಾಕಲಾಗಿತ್ತು. ದೊಡ್ಡ ಕಬ್ಬಿಣದ ರಾಡ್‌ನ ಕೊಂಡಿಯಂತಿದ್ದ ಭಾಗದಿಂದ ಡಿಸೆಕ್ಷನ್ ವೇಳೆಗೆ ಟೇಬಲ್‌ನ ಮೇಲೆ ಶವಗಳನ್ನು ಆದರಿಂದ ಎಳೆದು ತಂದು ಹಾಕುತ್ತಿದ್ದರು. ಆ ದಿನ ಹನ್ನೆರಡು ಗಂಟೆಗೇ ತರಗತಿ ಮುಗಿದು ಹೋದುದರಿಂದ ವಿದ್ಯಾರ್ಥಿಗಳಿರಲಿಲ್ಲ. ಸಿಬ್ಬಂದಿ ವರ್ಗದವರಿದ್ದರು. ಎಲ್ಲವನ್ನೂ ವೀಕ್ಷಿಸಿದ ಇನ್‌ಸ್ಪೆಕ್ಟರ್ ಕುಲಕರ್ಣಿ, ಮ್ಯೂಸಿಯಂ ಎಲ್ಲಿದೆ? ಎಂದು ಕೇಳಿದರು

ಮಹಡಿ ಮೇಲಿದೆ.. ಎಂದು ಇಳಂಗೋವನ್ ತಮ್ಮ ಲೆಕ್ಚರರ್ ಒಬ್ಬರನ್ನು ಕರೆದು, “ಇವರನ್ನು ಅಲ್ಲಿಗೆ ಕರೆದುಕೊಂಡು ಹೋಗು' ಎಂದು ಹೇಳಿ, ಇನ್‌ಸ್ಪೆಕ್ಟರ್ ಕಡೆ ತಿರುಗಿ, ಇವರು ತೋರಿಸ್ತಾರೆ, ನಿಮ್ಮ ಶೋಧ ಕೆಲಸ ಮುಗಿದ ನಂತರ ನನ್ನ ಛೇಂಬರಿಗೆ ಬನ್ನಿ...' ಎಂದು ಹೇಳಿ ಅಲ್ಲಿಂದ ಹೊರಟು ಹೋದರು.

ಮ್ಯೂಸಿಯಂನೊಳಗೆ ಕಾಲಿಡುತ್ತಿದ್ದ ಹಾಗೆಯೇ ಅಲ್ಲಿ ಹೊಸದಾಗಿ ಬಣ್ಣ ಬಳಿದುದ್ದರಿಂದ ಬಣ್ಣದ ವಾಸನೆ ಜೋರಾಗಿತ್ತು. ಗಾಜಿನ ದೊಡ್ಡ ದೊಡ್ಡ ಜಾರ್‌ಗಳಲ್ಲಿ ತುಂಬಿದ್ದ ಫಾರ್ಮಾಲಿನ್ ದ್ರಾವಣದಲ್ಲಿ ಮಾನವ ದೇಹದ ವಿವಿಧ ಅಂಗಗಳ ಭಾಗಗಳನ್ನು ಇಟ್ಟಿದ್ದರು. ಗೋಡೆಗೆ ಆತುಕೊಂಡಿಂತಿದ್ದ ದೊಡ್ಡ ಮರದ ಬೀರುಗಳಲ್ಲಿ ಮೂರು ಆಸ್ಥಿಪಂಜರಗಳು ನೇತಾಡುತ್ತಿದ್ದವು.

'ಈಗ ಯಾಕೆ ಪೇಯಿಂಟ್ ಮಾಡಿಸಿದ್ದಾರೆ' ಕುಲಕರ್ಣಿ ಕೇಳಿದರು.

'ಆಗಾಗ್ಗೆ ಹೀಗೆ ಮಾಡಿಸುತ್ತಾರೆ ಸರ್್ರ. ಇದರಿಂದ ಸ್ಕೈಲೆಟನ್‌ಗೆ ಕ್ರಿಮಿಗಳ ಹಾವಳಿ ತಪ್ಪುತ್ತದೆ ಎಂದರು ಹಿಂಬಾಲಿಸಿ ಬಂದಿದ್ದ ಲೆಕ್ಚರರ್..

"ಓ ಹಾಗಾ? ಎನ್ನುತ್ತಾ ಸುಮಾರು ಐವತ್ತಕ್ಕೂ ಹೆಚ್ಚಿದ್ದ ಜಾರ್‌ಗಳನ್ನು ನೋಡಿ, ಈ ಬಾಡಿ ಪಾರ್ಟ್ಸ್‌ಗಳನ್ನು ಎಲ್ಲಿಂದ ತರುತ್ತೀರಿ?' ಎಂದು ಕೇಳಿದರು

'ಸರ್ಜರಿ ಡಿಪಾರ್ಟ್‌ಮೆಂಟ್‌ನಿಂದ, ಸರ್ಜರಿ ಮಾಡಿ ಹೊರ ತೆಗೆದ ಪಾರ್ಟುಗಳು ಸರ್. ಇವು ಇವುಗಳಿಂದಾನೆ ನಾವು ಕಲಿಯುತ್ತೇವೆ. ಕಡಿಮೆ ಬಿದ್ದರೆ ಬೇರೆ ಮೆಡಿಕಲ್ ಕಾಲೇಜಿನಿಂದ ತರಿಸಿಕೊಳ್ಳುತ್ತಾರೆ. ಆದರೆ ನಮ್ಮ ಕಾಲೇಜಿನಲ್ಲೇ ಎಲ್ಲಾ ಇವೆ..' ಎಂದರು ಲೆಕ್ಚರರ್,

ಕುಲಕರ್ಣಿಯವರು ಎಲ್ಲಾ ನೋಡಿಕೊಂಡು ಬರುವಾಗ, ಆಸ್ಥಿಪಂಜರಗಳನ್ನು ಗಮನನಿಸುತ್ತ ಆ ಬೀರುಗಳನ್ನು ಅಲ್ಲಾಡಿಸಿ ನೋಡುತ್ತಾ ಬಂದರು. ಅಷ್ಟರಲ್ಲಿ ಬೀರುವಿನ ಹಿಂದಿನಿಂದ ಏನೋ ವಸ್ತುವೊಂದು ಬಿದ್ದಂತಾಗಿ ಕೆಳಗೆ, ಹಿಂದೆ ಎಲ್ಲಾ ಕಡೆ ಬಗ್ಗಿ ನೋಡಿ 'ರೀ.. ಅದೇನೊಂತ ನೋಡಿ. ತೆಗೆಯಿರಿ.' ಎಂದರು. ಅವರು ಕೈಹಾಕಿ ಬೀರುವಿನ ಕೆಳಗಿನಿಂದ ಒಡೆದು ಚೂರಾಗಿದ್ದ ಒಂದು ಮೊಬೈಲ್ ಫೋನನ್ನು ಹೊರ ತೆಗೆದು ಕುಲಕರ್ಣಿಯವರ ಕೈಗಿಟ್ಟು, 'ಇದು ಮೊಬೈಲ್ ಫೋನಿನ ಚೂರುಗಳು ಸರ್. ಇದು ಅದರ ಬ್ಯಾಟರಿ.. ಬೇರೆಯಾಗಿ ಬಿದ್ದಿತ್ತು. ಒಂದು ಭಾಗ ಚೂರು ಚೂರಾಗಿದ್ದೆ ಸಿಮ್ ಕಾರ್ಡ್ ಇರುವ ಭಾಗ ಇದು ಸದ್ಯ ಒಡೆದಿಲ್ಲ..' ಎಂದರು ಅವರ ಜೊತೆ ಬಂದಿದ್ದ ಕಾನ್‌ಸ್ಟೆಬಲ್‌ಗಳು

ಆಶ್ಚರ್ಯದಿಂದ ಲೆಕ್ಚರರ್ 'ಇದು ಯಾರದ್ದು ಹಿಂದೆ ಹೇಗೆ ಸಿಕ್ಕಿ ಹಾಕಿಕೊಂಡಿತ್ತು' ಎಂದರು.

"ಎಲ್ಲವನ್ನು ಕವರಿಗೆ ಹಾಕಿಕೊಳ್ಳಿ. ಇದು ಯಾರದ್ದು? ಹಿಂದೆ ಹೇಗೆ ಸಿಕ್ಕಿ ಹಾಕಿಕೊಂಡಿತ್ತು' ಯಾಕೆ?' ಎಂದು ಸಿಬ್ಬಂದಿಗೆ ಗದರಿಸಿ ಗೋಡೆ ಹಾಗೂ ಬೀರುವಿನ ಮಧ್ಯೆ ಸ್ವಲ್ಪ ಜಾಗವಿತ್ತಲ್ಲ. ಅದಕ್ಕೆ ಅಥರಾ ಬಿಸಿ ಎಸೆದ ರಭಸಕ್ಕೂ ಏನೋ ಅಲ್ಲಿಯೇ ಸಿಕ್ಕಂಡಿದೆ ಇರಲಿ ಬಿಡಿ. ಯಾರದ್ದೆಂದು ನಾವು ನೋಡುತ್ತೇವೆ' ಎಂದು ಕುಲಕರ್ಣಿಯವರು. ಥ್ಯಾಂಕ್ಸ್, ನಮಗೆ ಸಹಕಾರ ನೀಡಿದ್ದಕ್ಕೆ. ನಾವಿನ್ನು ಇಲ್ಲಿಂದ ಹೋಗೋಣವಾ?' ಎಂದರು. ಎಲ್ಲರೂ ಅಲ್ಲಿಂದ ಹೊರಟು ಪ್ರೊಫೆಸರ್ ಛೇಂಬರ್‌ಗೆ ಬಂದರು.

'ಏನಾದರು ಸುಳಿವು ಸಿಕ್ಕಿತಾ?' ಪ್ರೊಫೆಸರ್ ಕೇಳಿದರು

ಅಂಥಾದ್ದೇನು ಸಿಕ್ಕಿಲ್ಲ. ಆದರೆ ಮತ್ತೊಂದು ಬಾರಿ ಬರಬೇಕಾಗುತ್ತೆ..' ಎಂದರು ಕುಲಕರ್ಣಿ.

'ಯಾಕೆ?' ಉದ್ವೇಗದಿಂದ ಕೇಳಿದ ಪ್ರೊಫೆಸರ್ 'ಮತ್ತೆ ಮತ್ತೆ ನೀವು ವಿಚಾರಣೆಗೆ ಬಂದರೆ ನನ್ನ ಹೆಸರು ಹಾಳಾಗುತ್ತದೆ. ಅಷ್ಟಕ್ಕೂ ಆ ಹುಡುಗಿ ಈ ಡಿಪಾರ್ಟ್‌ಮೆಂಟಿಗೆ ಸೇರಿದವಳಲ್ಲ...' ಎಂದು ಅಸಹನೆಯಿಂದ ಹೇಳಿದರು.



'ನಾನು ಎಲ್ಲಾ ವರದಿಗಳನ್ನು ನೋಡಿದ ನಂತರ ಮತ್ತೆ ಬಂದರೂ ಬರಬಹುದು. ನೀವ್ಯಾಕೆ ಹೆದರಿಕೊಳ್ತಾ ಇದ್ದೀರಿ? ಒಂದು ಹುಡುಗಿಯ ನಾಪತ್ತೆ ಕೇಸು ಸಾರ್. ಅವಳು ಬದುಕಿದ್ದಾಳೋ ಇಲ್ಲವೋ ನಾಪತ್ತೇನೇ ಆಗಿದ್ದಾಳೋ ಅದೆಲ್ಲಾ ವಿವರಗಳು ಸಿಗಬೇಕಾಗಿದೆ. ಇದರಲ್ಲಿ ನಿಮ್ಮ ಮಾನ ಅಪಮಾನ ಮುಖ್ಯವಾಗಲ್ಲ... ನಾನಿನ್ನು ಬತ್ತೀನಿ' ಎಂದು ಎದ್ದು ಹೊರಗೆ ಬಂದರು.

ಪ್ರೊಫೆಸರ್ ವ್ಯಗ್ರರಾಗಿದ್ದರು.

* * * *

ಇನ್‌ಸ್ಪೆಕ್ಟರ್ ಕುಲಕರ್ಣಿ ತಾವು ಸಂಗ್ರಹಿಸಿದ ಎಲ್ಲಾ ಸಾಕ್ಷಿಗಳನ್ನು ಒಟ್ಟುಗೂಡಿಸಿದರು. ಅನಾಟಮಿ ಹಾಲ್‌ನ ಜವಾನ ಸೀನನ ಹೇಳಿಕೆಯನ್ನು ವಿಡಿಯೋ ರೆಕಾರ್ಡ್ ಮಾಡಲಾಯಿತು. ನಂತರ ಮ್ಯೂಸಿಯಂನಲ್ಲಿ ಮುರಿದಿದ್ದ ಮೊಬೈಲ್ ಫೋನು ಸಾಕ್ಷಿಯದೆಂದು ತಿಳಿದರೂ, ಬೇರಾವ ಮಹತ್ವದ ಸುಳಿವು ಕಾಣಿಸಿರಲಿಲ್ಲ. ನಾಪತ್ತೆಯಾದ ಸಾಕ್ಷಿ ಅನಾಟಮಿ ಹಾಲ್‌ನ ಒಳಗೆ ಹೋಗಿದ್ದಕ್ಕೆ ಎಲ್ಲಾ ದಾಖಲೆಗಳಿವೆ. ಆದರೆ ಅವಳು ಹೊರಗಡೆ ಬಂದದಕ್ಕೆ ಯಾವುದೇ ಸಾಕ್ಷಿಗಳು ಸಿಕ್ಕಿರಲಿಲ್ಲ. ಅನಾಟಮಿಯ ಹಾಲ್ ಮತ್ತು ಮ್ಯೂಸಿಯಂ ಎಲ್ಲಾ ಶೋಧಿಸಿದ್ದರೂ ಯಾವ ಸುಳಿವು ಸಿಕ್ಕಿರಲಿಲ್ಲ. ಹಾಗಾದರೆ ಸಾಕ್ಷಿ ಮಾಯವಾಗಿ ಬಿಟ್ಟಳಾ? ಇಲ್ಲ ಅವಳನ್ನೇನಾದರೂ ಕೊಂದು ಎಲ್ಲಾದರೂ ಹೂತು ಹಾಕಿದ್ದಾರಾ? ಬೇರೆ ವಿಭಾಗದ ವಿದ್ಯಾರ್ಥಿನಿಯರನ್ನು ಕೊಂದು ಹಾಕಲು ಯಾವುದೇ ಸೂಕ್ತ ಕಾರಣಗಳಿರಲಿಲ್ಲ. ಯಾರಾದರೂ ಅಪಹರಣ ಮಾಡಿದ್ದರೆ ಇಷ್ಟು ಹೊತ್ತಿಗೆ ಅಪಹರಣಕಾರರು ಏನಾದರೂ ಬೇಡಿಕೆ ಇಟ್ಟಿರುತ್ತಿದ್ದರು. ಅಂತಹುದು ನಡೆದಿರಲಿಲ್ಲ. ಆದರೆ ಸೀನನ ಸಾಕ್ಷಿಯಲ್ಲಿ ಪ್ರಮುಖ ಸುಳಿವು ಸಿಕ್ಕಿದರೂ ಕೊಲೆಗಾರ ಇವನೇ ಎಂದು ಹೇಗೆ ಹೇಳುವುದು? ಹೇಗಾದರಾಗಲಿ ಒಮ್ಮೆ ಮತ್ತೊಮ್ಮೆ ಅದೇ ಜಾಗಕ್ಕೆ ಆದರೆ ತಮಗೆ ಸಿಕ್ಕಿರುವ ಸಾಕ್ಷಿಗಳೊಂದಿಗೆ ಹೋಗೋಣವೆಂದುಕೊಂಡ ಕುಲಕರ್ಣಿ ತಟ್ಟನೆ ಎದ್ದು ಆ ವಿಡಿಯೋ ರೆಕಾರ್ಡ್ ಮಾಡಿದ್ದನ್ನು ಮತ್ತೆ ಮಾಡಬೇಕಾಗಿ ಬರಬಹುದೋ ಏನೋ ಸೀನ ಭಯದಿಂದ ಉಲ್ಟಾ ಹೊಡೆದರೂ ಹೊಡೆಯಬಹುದು. ಎಂದು ಕಾನ್‌ಸ್ಟೆಬಲ್‌ಗೆ ಹೇಳಿ ವಿಡಿಯೊ ರೆಕಾರ್ಡ್ ಮಾಡುವ ಪೇದೆಯನ್ನು ಕರೆದುಕೊಂಡು ಅವರು ಚಕ್ರವರ್ತಿ ಮೆಡಿಕಲ್ ಕಾಲೇಜಿನ ಆವರಣ ದಾಟಿ ಅನಾಟಮಿ ಹಾಲ್‌ಬಳಿ ಬಂದು ನಿಂತರು. ವಿದ್ಯಾರ್ಥಿಗಳೆಲ್ಲಾ ತರಗತಿಯೊಳಗಿದ್ದುದರಿಂದಲೋ ಏನೋ ಯಾರೂ ಓಡಾಡುತ್ತಿರಲಿಲ್ಲ. ಅನಾಟಮಿ ಹಾಲ್‌ನ ಒಳಗೂ ಯಾವ ವಿದ್ಯಾರ್ಥಿಯೂ ಇರಲಿಲ್ಲ. ಸ್ಟೀಲ್ ಟೇಬಲ್‌ಗಳ ಮೇಲೆ

ಸಾಲಾಗಿ ಅರ್ಧ ಕತ್ತರಿಸಿದಂತಿದ್ದ ಕಪ್ಪು ಬಣ್ಣಕ್ಕೆ ತಿರುಗಿದ್ದ ಶವಗಳು ಮಾತ್ರ ಕಂಡವು, ಮಧ್ಯಾಹ್ನ ಮೂರು ಗಂಟೆಯಾದುದರಿಂದ ಅನಾಟಮಿ ವಿಭಾಗದ ಶಿಕ್ಷಕರು ತಮ್ಮ ರೂಮುಗಳನ್ನು ಸೇರಿಕೊಂಡಿದ್ದರು.

ಇನ್‌ಸ್ಪಕ್ಟರ್ ಕುಲಕರ್ಣಿ ನೇರವಾಗಿ ಪ್ರೊಫೆಸರ್ ಛೇಂಬರಿನ ಬಾಗಿಲ ಬಳಿ ನಿಂತು. “ಸರ್ ಒಳಗೆ ಬರಬಹುದೇ?' ಎಂದು ಕೇಳಿದರು.



ಏನನ್ನೋ ಓದುತ್ತಿದ್ದ ಪ್ರೊಫೆಸರ್ ಇಳಂಗೋವನ್ ತಲೆ ಎತ್ತಿ ನೋಡಿದರು. ಅವರ ಮುಖದಲ್ಲಿ ಅಸಮಾಧಾನ ಮೂಡಿದ್ದನ್ನು ಕಂಡು 'ಏನ್ ಮಾಡಲಿ ಸರ್ ಅನುಮಾನದ ವಾಸನೆ ಬಂದರೆ ನಾವು ಬೇಟೆ ನಾಯಿಗಳ ತರಹ ಸುತ್ತಿ ಬಳಸಿ ಅದೇ ಜಾಗಕ್ಕೆ ಬರುತ್ತೇವೆ. ನಾನು ಒಳಗೆ ಬರಬಹುದಾ' ಎಂದು ಕೇಳಿದರು.

ಒಳಗೆ ಬಂದಾಗಿದೆಯಲ್ಲಾ? ಇನ್ನು ಕೇಳುವುದು ಏನಿದೆ ಬನ್ನಿ ಕೂತ್ಕೊಳ್ಳಿ. ಆ ಹುಡುಗಿಯ ಪತ್ತೆಯಾಯಿತಾ' ಎಂದು ಕೇಳಿದರು. ಪ್ರೊಫೆಸರ್ ಅವರ ಸ್ವರದಲ್ಲಿ ಕಂಡೂ ಕಾಣದಂತಹ ವ್ಯಂಗ್ಯವಿತ್ತು. ಪೊಲೀಸ್ ಇಲಾಖೆಯೆಂದರೆ ತಮಗೆ ಅಷ್ಟಕಷ್ಟೆ ಎಂಬುದನ್ನು ಸ್ಪಷ್ಟಪಡಿಸುವ ಹಾಗಿತ್ತು ಮೊದಲ ಬಾರಿಗೆ ವೀಕ್ಷಣೆಗೆಂದು ಬಂದಿದ್ದೆ. ಈ ಬಾರಿ ವಿಚಾರಣೆಗಾಗಿ ಬಂದಿದ್ದೇನೆ' 'ಹೋ! ಹೌದು ಅಪರಾಧಿ ಸಿಕ್ಕನಾ? ಹುಡುಗಿ ಸಿಕ್ಕಳಾ?”

“ನೀವು ಅಪರಾಧಿ ಅಂತ ಯಾಕೆ ಕೇಳಿದಿರಿ? ಹಾಗಾದ್ರೆ ನಮ್ಮ ಸಂಶಯ ನಿಜವಾಯಿತು?'

ಅಪರಾಧಿ ಅನ್ನೋದರಲ್ಲಿ ತಪ್ಪೇನಿದೆ? ಆ ಸಾಕ್ಷಿಯ ಅಪರಾಧಿ ನಾಪತ್ತೆಗೆ ಕಾರಣನಾದವನು ಅಪರಾಧೀನೆ ತಾನೆ?' ಪ್ರೊಫೆಸರ್ ಮೊದಲೆ ಗೊಂದಲಗೊಂಡಂತೆ ಕಂಡರೂ ತಕ್ಷಣ ಸಾವರಿಸಿಕೊಂಡು ಹೇಳಿದರು. ಕುಲಕರ್ಣಿಯವರ ಮುಖ ಗಂಭೀರವಾಯಿತು.

“ಸರ್... ಇನ್ನೂ ಈ ಕಣ್ಣು ಮುಚ್ಚಾಲೆಯ ಆಟವನ್ನು ನಿಲ್ಲಿಸಿ ನೇರವಾಗಿ ವಿಷಯಕ್ಕೆ ಬರೋಣ..” ಎಂದರು ಕುಲಕರ್ಣಿ,

ಇಳಂಗೋವನ್ ಕನ್ನಡಕದೊಳಗಿನಿಂದಲೇ ಗಂಭೀರವಾಗಿ ಕುಲಕರ್ಣಿಯವರನ್ನು ನೋಡುತ್ತಿದ್ದರು. ಅವರ ಮುಖ ಗಂಟಿಕ್ಕಿತ್ತು.

'ಮೊದಲು ಈ ವಿಡಿಯೊ ನೋಡಿ...' ಕುಲಕರ್ಣಿ ಸೀನನಿಂದ ಪಡೆದ ವಿಚಾರಣೆಯ ವಿಡಿಯೋ ಹಾಕಿದರು.

ಸೀನ ಹೇಳುತ್ತಿದ್ದ

'ಸಾಹೇಬ್ರು ಒಂದೊಂದ್ಸಾರಿ ರಾತ್ರಿನೂ ಉಳ್ಕೊತಾರೆ. ಆವತ್ತು ಭಾನುವಾರ ಬೆಳಗ್ಗೆನೇ ಬೇಗ ಬಂದಿದ್ದೆ. ಮನೆಗೆ ಹೋಗ್ಬೇಕಿತ್ತು. ಬೇಗ ನನ್ನ ಕೆಲ್ಸ ಮುಗ್ಸಿ ಹೋಗೋಣಾಂತ ಬಂದಿದ್ದೆ. ಮುಖ್ಯ ಬಾಗಿಲು ತೆರೆದಿದ್ರಿಂದ ಸಾಹೇಬ್ರು ಒಳಗೇ ಇರ್ಬೇಕೂಂತ ಅಂದ್ಕೊಂಡು ಹೆಣಗಳನ್ನು ಹೊರತೆಗೆದು ಆಯಾ ಟೇಬಲ್ ಮೇಲೆ ಹಾಕೋಣಾಂತ ಟ್ಯಾಂಕ್ ಹತ್ರ ಹೋದೆ. ಕಬ್ಬಿಣದ ರಾಡ್‌ನ ತುದಿಯಿಂದ ಎಳೆದು ಹಾಕಿಕೊಳ್ಳುತ್ತಿದ್ದೆ. ಬಾಡಿಗಳು ಸುಲಭವಾಗಿ ಹಗುರವಾಗಿ ಎಳೆದ ಕೂಡಲೆ ಮೇಲೆ ಬಂದು ಬಿಡುತ್ತಿದ್ದವು. ಎರಡು ಮೂರು ಬಾಡಿಗಳನ್ನು ಎಳೆದು ಹೊರಗೆ ಹಾಕಿದ್ಮೇಲೆ ಮತ್ತೊಂದು ತುಂಬಾ ಭಾರವಾಗಿರೋ ತರಹಾ ಅನ್ನಿಸ್ತು... ಎಳೆದು ಬಗ್ಗಿ ನೋಡಿದೆ. ಅದೊಂದು ಹುಡುಗಿಯ ಬೆತ್ತಲೆ ದೇಹವಾಗಿತ್ತು. ಸರ್, ಬೋರಲಾಗಿತ್ತು. ಹೆದರಿ ಅಲ್ಲಿಯೇ ಬಿಟ್ಟು ಓಡಿ ಬಂದು ಸಾಹೇಬ್ರಿಗೆ ಹೇಳ್ದೆ.. ಅದನ್ನು ನಂಬಲಿಲ್ಲ. ಹೋಗೋ...



ನೀನು ಕುಡಿದದ್ದು ಜಾಸ್ತಿಯಾಯ್ತು ಎಂದು ಗದರಿಸಿದ್ದರು. ನಾನು ವಾದಿಸಿದೆ ನನ್ನನ್ನು ಬೈದು ಹೊರಗೆ ಕಳುಹಿಸಿದ್ರು ಮತ್ತೆ ಸೋಮವಾರ ಬೆಳಿಗ್ಗೆ ಬಂದು ಸಾಯೇಬ್ರಿಗೆ ತೋರಿಸೋಣಾಂತ ಬಂದೆ. ಆದರೆ ಈ ಹುಡುಗಿ ಹೆಣ ಅಲ್ಲಿರಲಿಲ್ಲ! ನನಗೆ ಗಾಭರಿಯಾಯಿತು. ದೆವ್ವಗಿವ್ವ ಇರಬಹುದಾ ಅಂದ್ಕೊಂಡು ಹೆದರಿದ್ದೆ... ಸಾಹೇಬ್ರು ಅಲ್ಲಿಗೆ ಬಂದು ಎಲ್ಲೊ ಆ ಹುಡುಗಿ ಹೆಣ ಕುಡಿದು ಕೆಲಸಕ್ಕೆ ಬಂದ್ರೆ ಹೀಗೆ ಆಗೋದು ಮೊದ್ಲು ಮದ್ವೆ ಮಾಡ್ಕೋ ಹೋಗು' ಎಂದು ಗದರಿಸಿ ಕಳುಹಿಸಿದರು.

ಇನ್‌ಸ್ಪೆಕ್ಟರ್ ಕುಲಕರ್ಣಿ ವಿಡಿಯೋ ಸ್ವಿಚ್ ಆಫ್ ಮಾಡುವಂತೆ ಹೇಳಿ, ಅದರರ್ಥ ಏನು' ಎಂದು ಗಂಭೀರವಾಗಿ ಕೇಳಿದರು. ಇಳಂಗೋವನ್ ಅವರ ಬಣ್ಣ ಕಳೆದುಕೊಂಡಿತ್ತು ಆದರೂ ಅವರು 'ನಮ್ಮ ಡಿಪಾರ್ಟ್‌ಮೆಂಟ್ ಮುಂದೆ ಸ್ವಲ್ಪ ಕತ್ತಲಾದರೂ ಯಾರೂ ಓಡಾಡುವುದಿಲ್ಲ. ಇಲ್ಲಿ ಹೆಣಗಳನ್ನು ಕತ್ತರಿಸ್ತಾರೆ ದೆವ್ವಗಳು ಮೋಹಿನಿ ಕಾಟ ಇರುತ್ತದೆಂದು ಹೆದರುತ್ತಾರೆ. ಅವನು ಕುಡಿದಿದ್ದ... ಭ್ರಮೆ ಅಷ್ಟೆ'... ಎಂದರು.

'ನಾವು ಆ ಹುಡುಗಿ ಅಥವಾ ಸತ್ತೇ ಹೋಗಿದ್ದರೆ ಅವಳ ಬಾಡಿ ಸಿಗುವತನಕ ಹೀಗೆ ಅನುಮಾನ ಬಂದ ಕಡೆ ಬಾರ್‍ತಾನೇ ಇರ್ತೀವಿ... ಅದೇನೋಂತ ಸತ್ಯ ಹೇಳು ನಿಜಕ್ಕೂ ಟ್ಯಾಂಕ್‌ನಲ್ಲಿ ಕಂಡಿದ್ದ ಹುಡುಗಿ ಶವ ಯಾರದ್ದು? ಅದು ಇಲ್ಲಿಗೆ ಹೇಗೆ ಬಂತು? ಈಗ ಹೋಗಿದ್ದಾದರೂ ಎಲ್ಲಿಗೇ ಈ ಎಲ್ಲಾ ಪ್ರಶ್ನೆಗಳಿಗೆ ವಿಭಾಗದ ಮುಖ್ಯಸ್ಥರಾದ ನೀವೇ

ಉತ್ತರ ಕೊಡಬೇಕಾಗಿದೆ...' ಕುಲಕರ್ಣಿ ನೇರವಾಗಿ ಗಂಭೀರವಾಗಿ ಇಳಂಗೋವನ್ ಅವರನ್ನು ನೋಡುತ್ತಾ ಕೇಳಿದರು.

ಇಳಂಗೋವನ್ ನಿರ್ವಿಣ್ಣರಾದರು. ಮುಖದ ಮೇಲೆ ಬೆವರು ಮೂಡಿತು. ತುಟಿಗಳು ಕಂಪಿಸುತ್ತಿದ್ದವು. ಬಾಯಿ ಒಣಗಿ ಬಂದಂತಾಗಿ ಎದುರಿಗಿದ್ದ ನೀರಿನ ಲೋಟವನ್ನೆತ್ತಿ ಗಟಗಟನೆ ನೀರು ಕುಡಿದರು.

ಇನ್‌ಸ್ಪೆಕ್ಟರ್ ಕುಲಕರ್ಣಿ ಅವರನ್ನು ದಿಟ್ಟಿಸಿ ನೋಡುತ್ತಾ ಕುಳಿತಿದ್ದರು. ಸಾವರಿಸಿಕೊಂಡ ಪ್ರೊಫೆಸರ್ ಇಳಂಗೋವನ್, ವಿಭಾಗದ ಮುಖ್ಯಸ್ಥನಾದ ಮಾತ್ರಕ್ಕೆ ಎಲ್ಲದಕ್ಕೂ ನಾನ್ಹೇಗೆ ಜವಾಬ್ದಾರನಾಗ್ತೇನೆ. ಬೇರೆ ಯಾರಾದರೂ ಮಾಡಿರಬಹುದಲ್ಲ!' ಎಂದರು ತಮ್ಮನ್ನು ತಾವು ಸಮರ್ಥಿಸಿಕೊಂಡರೂ ಕಂಪನ ನಿಂತಿರಲಿಲ್ಲ.

'ನೀವು ಒಂದು ಸೊಳ್ಳೆಯನ್ನೂ ಕೂಡ ಒಳಗೆ ಬಿಡಲಾರಿರಿಂತ ಎಲ್ಲರಿಗೂ ಗೊತ್ತು. ಅಂತಹುದರಲ್ಲಿ ಬೇರೆ ಯಾರು ಬರಬಹುದು ಬೇರೆಯವರು ಬಂದು ಯುವತಿಯೊಬ್ಬಳ ಶವವನ್ನು ತಂದು ನಿಮ್ಮ ವಿಭಾಗದ ಆ ಟ್ಯಾಂಕ್‌ನಲ್ಲಿ ಹೇಗೆ ಹಾಕಿ ಹೋಗಲು ಸಾಧ್ಯ?'

'..........

'ಇನ್ನೊಂದು ಸಾಕ್ಷಿ ತೋರಿಸುತ್ತೇನೆ ನೋಡಿ ಈ ಮೊಬೈಲ್ ಫೋನ್ ಗುರುತಿಸುತ್ತೀರಾ?' ಎನ್ನುತ್ತಾ ಕುಲಕರ್ಣಿಯವರು ಬಟ್ಟೆಯಲ್ಲಿ ಸುತ್ತಿಟ್ಟುಕೊಂಡಿದ್ದ ಮೊಬೈಲ್ ಫೋನನ್ನು ತೋರಿಸಿದರು. ಪ್ರೊಫೆಸರ್ ಕಣ್ಣರಳಿಸಿ ನೋಡಿದರು. ಭಯ, ಗಾಭರಿಯಿಂದ ಅವರ ಮುಖ ವಿಕಾರವಾಗಿ ಕಂಡಿತು.

'ಇದರಿಂದಾಗಲೇ ಫಿಂಗರ್ ಪ್ರಿಂಟ್ಸ್ ತೆಗೆದುಕೊಂಡಿದ್ದೇನೆ. ಅದಕ್ಕೆ ಬ್ಯಾಟರಿ ಇರಲಿಲ್ಲ. ನಾವು ಹಾಕಿಸಿದೆವು. ಸಿಮ್ ಕಾರ್ಡ್ ಇದ್ದ ಭಾಗ ಒಡೆದಿರಲಿಲ್ಲ. ಸದ್ಯ...' ಎಂದು ಹೇಳುತ್ತಿದ್ದ ಕುಲಕರ್ಣಿಯವರ ಹೇಳಿಕೆಯನ್ನು ಅರ್ಧ ತಡದೆ ಇಳಂಗೋವನ್,

"ಅದು ನಾನು ಬೀಸಿ ಎಸೆದ ರಭಸಕ್ಕೆ ಚೂರು ಚೂರಾಗಿದೆ ಎಂದುಕೊಂಡಿದ್ದೆ ಅದನ್ನು ಎಸೆಯುವಾಗ ನಾನು ಅಮಲಿನಲ್ಲಿದ್ದೆ... ಆಮೇಲೆ ಮ್ಯೂಸಿಯಂ ಅನಾಟಮಿ ಹಾಲನ್ನು ಕ್ಲೀನ್ ಮಾಡಿಸಿ ಪೇಯಿಂಟ್ ಕೂಡಾ ಮಾಡಿಸಿದ್ದೆ... ಕಾತರ, ಗಾಬರಿಯಿಂದ ಹೇಳಿದರು. ಆತಂಕ, ಉದ್ವೇಗದಲ್ಲಿ ಅವರು ತಮ್ಮ ಅರಿವಿಗೆ ಬಾರದೆ ಹೇಳಿಬಿಟ್ಟರು.

ಕುಲಕರ್ಣಿಯವರ ತುಟಿಗಳಲ್ಲಿ ವಿಜಯದ ನಗು ಸುಳಿಯಿತು. 'ಸರಿ, ಹೇಳಿ ಮುಗಿಸಿಬಿಡಿ. ಸಾಕ್ಷಿಯನ್ನು ಯಾಕೆ ಕೊಲೆ ಮಾಡಿ ಫಾತ್ಮಾಲಿನ್ ಟ್ಯಾಂಕನಲ್ಲಿ ಹಾಕಿದಿರಿ? ನಂತರ ಆ ಶವವನ್ನು ಎಲ್ಲಿ ಹೂತು ಹಾಕಿದಿರಿ ಎಂದು ಹೇಳಿದರೆ ಈ ಪ್ರಕರಣ ಮುಗಿದುಹೋಗುತ್ತದೆ..' ಕುಲಕರ್ಣಿಯವರು ಗಂಭೀರವಾಗಿ ಹೇಳಿ ವಿಡಿಯೋ ರೆಕಾರ್ಡ್ ಮಾಡಲು ತಮ್ಮ ಸಿಬ್ಬಂದಿಯೊಬ್ಬನಿಗೆ ಸೂಚಿಸಿದರು.

ಪ್ರೊಫೆಸರ್ ಇಳಂಗೋವನ್ ಸಿಕ್ಕಿ ಹಾಕಿಕೊಂಡಿದ್ದರು. ಒಪ್ಪಿಕೊಳ್ಳದೇ ಬೇರೆ ದಾರಿಯೇ ಇರಲಿಲ್ಲ!

'ವಿಕೇಂಡ್‌ನಲ್ಲಿ ನನ್ನ ದಿನಗಳನ್ನು ನನ್ನ ಛೇಂಬರ್‌ನಲ್ಲಿ ಕಳೆಯುತ್ತೇನೆ. ಮಧ್ಯಪಾನ, ವ್ಯಭಿಚಾರ... ಎಲ್ಲವೂ ನೆಡಸುತ್ತಿದ್ದೆ. ಸಂಜೆಯಾದರೆ ಆ ಕಡೆ ಯಾರೂ ಸುಳಿಯುವುದಿಲ್ಲ. ಬೇರೆಯವರಿಗೆ ತಿಳಿಯುವುದೂ ಇಲ್ಲಾಂತ ಧೈರ್ಯವಿತ್ತು. ಕಾಲ್‌ಗರ್ಲ್ಸ್‌ಗಳು ಬಂದು ಹೋಗುತ್ತಿದ್ದರು. ಅದನ್ನೆಲ್ಲಾ ಡಿಪಾರ್ಟ್‌ಮೆಂಟಿನ ರೂಮಿನಲ್ಲಿ ನಡೆಸುತ್ತಿದ್ದುದು ತಪ್ಪು. ಅಪರಾಧವೆಂದು ಗೊತ್ತಿತ್ತು. ಹೀಗಾಗಿ ಆತಂಕವೂ ಇರುತ್ತಿತ್ತು...'

'ಆದರೆ ಆ ದಿನ ಆ ಹುಡುಗಿ ಅಂದರೆ ಡಾಕ್ಟರ್ ಸಾಕ್ಷಿ ಹೇಗೋ ಏನೋ ಒಳಗೆ ಬಂದು ನೋಡಿ ಬಿಟ್ಟಿದ್ದಳು. ನನಗೆ ಹೆದರಿಕೆಯಾಗಿತ್ತು. ಕೈಯಲ್ಲಿದ್ದ ಮೊಬೈಲ್ ಫೋನಿನಿಂದ ರೆಕಾರ್ಡ್ ಮಾಡಿ ಕೊಂಡಿದ್ದಾಳೆಂಬ ಭಯವೂ ಆಗಿತ್ತು. ನನ್ನ ಅನಾಚಾರಗಳಿಗೆ ಅವಳು ಸಾಕ್ಷಿಯಾಗಿ ಬಿಟ್ಟಿದ್ದಳು. ಅವಳನ್ನು ಹಾಗೆಯೇ ಬಿಡಲು ನನಗೆ ಧೈರ್ಯವಿರಲಿಲ್ಲ. ಅತಿಯಾಗಿ ಕುಡಿದಿದ್ದೆ ಸಿಟ್ಟೂ ಬಂದಿತ್ತು. ನನ್ನನ್ನು ಕಂಡು ಹೆದರಿ ಓಡಿ ತಪ್ಪಿಸಿಕೊಳ್ಳುವ ಪ್ರಯತ್ನ ನಡೆಸಿದ್ದಳು. ನಾನು ಆಕ್ರೋಶದಿಂದ ರಾಕ್ಷಸನಾಗಿದ್ದೆ. ಅವಳನ್ನು ಹಿಂಬಾಲಿಸಿ ಹೋಗಿ ಹಿಡಿದುಕೊಂಡಿದ್ದೆ. ಪ್ರತಿಭಟಿಸಿದ ಅವಳ ಕುತ್ತಿಗೆಯನ್ನು ಬಿಗಿಯಾಗಿ ಹಿಡಿದಿದ್ದೆ. ಅವಳನ್ನು ಇಲ್ಲವಾಗಿಸಿದರೆ ಈ ಯಾವುದೇ ರಹಸ್ಯ ತಿಳಿಯುವುದಿಲ್ಲವೆಂದುಕೊಂಡಿದ್ದೆ ಅವಳ ಮೊಬೈಲ್‌ನ್ನು ಬಿಸಿ ಎಸೆದಿದ್ದೆ. ನನ್ನ ಹಿಡಿತಕ್ಕೆ ಅವಳು ಯಾವಾಗಲೂ ಸತ್ತು ಹೋಗಿ ಬಿಟ್ಟಿದ್ದಳು. ಹೊರಗಡೆ ದೀಪದ ಬೆಳಕು ಮ್ಯೂಸಿಯಂನ ಗೋಡೆಯ ಕಿಟಕಿಗಳ ಮೂಲಕವಾಗಿ ಮಂದವಾದ ಬೆಳಕನ್ನು ಚೆಲ್ಲಿತ್ತು.

ಸದ್ಯಕ್ಕೆ ಎಲ್ಲಾದರೂ ಅಲ್ಲಿಯೇ ಬಚ್ಚಿಡಬೇಕಾಗಿತ್ತು. ಮರುದಿನ ಭಾನುವಾರವಾದ್ದರಿಂದ ಯೋಚಿಸಿದರಾಯ್ತು ಎಂದುಕೊಂಡು ಸಾಕ್ಷಿಯ ದೇಹದ ಮೇಲಿನ ಬಟ್ಟೆಗಳು ಅವಳ



ಹ್ಯಾಂಡ್ ಬ್ಯಾಗ್ ಎಲ್ಲವನ್ನೂ ಒಂದು ಕಡೆ ಗಂಟು ಕಟ್ಟಿ ಇಟ್ಟೆ. ಅವಳ ಶವವನ್ನು ಟ್ಯಾಂಕ್‌ನೊಳಗೆ ಹಾಕಿ ಬಿಟ್ಟೆ. ಸೀನ ಹೇಳಿದ್ದೆನೋ ನಿಜ ಅವನನ್ನು ಗದರಿಸಿ ಕಳಿಹಿಸಿದ ನಂತರ ನಾನು ಶವವನ್ನು ಹೇಗೆ? ಎಲ್ಲಿಗೆ ಸಾಗಿಸಬೇಕೆಂದು ಯೋಚಿಸತೊಡಗಿದೆ. ಸಂಜೆಯಾಗತೊಡಗಿತ್ತು. ನಾನೂ ಹೊರಗೆ ಹೋಗಿರಲಿಲ್ಲ. ಮುಖ್ಯದ್ವಾರವನ್ನು ಒಳಗಿನಿಂದಲೇ ಲಾಕ್ ಮಾಡಿಕೊಂಡು ಬಿಟ್ಟಿದ್ದೆ. ಬೆಳಗ್ಗೆಯಾದರೆ ಎಲ್ಲಾ ವಿದ್ಯಾರ್ಥಿಗಳು ಸ್ಟಾಫ್‌ಮೆಂಬರ್ಸ್ ಬರುವವರಿದ್ದರು, ಅಷ್ಟರಲ್ಲಿ ಪರಿಹಾರ ಹುಡುಕಬೇಕಿತ್ತು...' ಎಂದು ಯಾವ ಅಳುಕು ಇಲ್ಲದೆ ಹೇಳುತ್ತಿದ್ದವರು ಒಂದು ಕ್ಷಣ ನಿಲ್ಲಿಸಿದರು.

ಕುಲಕರ್ಣಿ ಮತ್ತವರ ಸಿಬ್ಬಂದಿ ಆಸಕ್ತಿಯಿಂದ ಕಣ್ಣರಳಿಸಿಕೊಂಡು ಕೇಳಿಸಿಕೊಳ್ಳುತ್ತಿದ್ದರು. ವಿಡಿಯೋ ರೇಕಾರ್ಡ್ ಆಗುತ್ತಿತ್ತು. 'ಮುಂದೆ ಹೇಳಿ ಮುಗಿಸಿಬಿಡಿ... ಇನ್ನೇನು ದಹನ ಕಾರ್ಯ ಮಾತ್ರ ಉಳಿದಿದೆ' ಎಂದರು ಕುಲಕರ್ಣಿ ಆಸಹನೆಯಿಂದ,

'ಹೇಳೊಕೇಂತ ನಿರ್ಧಾರ ಮಾಡಿದ್ದೀನಲ್ಲ? ನೇಣು ಹಾಕಿಸುವ ನೀವು ಅರ್ಧ ನೇಣನ್ನೇನು ಹಾಕಿಸೋಲ್ಲವಲ್ಲ? ಎಂದು ಹೇಳಿದ ಅವರ ಸ್ವರದಲ್ಲಿ ಪಶ್ಚಾತ್ತಾಪ. ನೋವಿನ ಛಾಯೆಯೇ ಇರಲಿಲ್ಲ. ಯಾವುದೋ ವರದಿಯನ್ನೊಪ್ಪಿಸುವಂತೆ ನಿರ್ವಿಕಾರವಾಗಿ ಹೇಳುತ್ತಿದ್ದರು ಪ್ರೊಫೆಸರ್ ಇಳಂಗೋವನ್.

ಇವರು ನಾರ್ಮಲ್ ಇರಲಾರರು. ವಿಕೃತ ಮನಸ್ಸಿನವರಿರಬೇಕು ಛೇ ಎಂದು ಪೂತ್ಕರಿಸಿತು ಕುಲಕರ್ಣಿಯವರ ಮನಸ್ಸು.

'ನಂತರ ಯೋಚನೆಯೊಂದು ಹೊಳೆಯಿತು. ತಟ್ಟನೆ ಕಾರ್ಯರೂಪಕ್ಕೆ ಹುಡುಗಿಯ ಶವ ಹಿಂದಕ್ಕಿಟ್ಟದನ್ನು ಎಳಕೊಂಡು ಬಂದು ಖಾಲಿಯಿದ್ದ ಟೇಬಲ್ಲಿನ ಮೇಲೆ ಡಿಸ್‌ಕ್ಷನ್ ಅಂದರೆ ಛೇದನವನ್ನು ಆರಂಭಿಸಿದೆ. ಮೈಮೇಲೆ ರಾಕ್ಷಸನ ಅವಾಹನೆಯಾಗಿತ್ತು. ಅವಳ ದೇಹದ ಎಲ್ಲಾ ಅಂಗಾಂಗಳನ್ನು ಕತ್ತರಿಸಿ, ಗ್ಲಾಸ್‌ಜಾರ್‌ಗೆ ಹಾಕಿದೆ. ನಂತರ ದೇಹದ ಎಲ್ಲಾ ಮಾಂಸವನ್ನು ಕತ್ತರಿಸಿ ತೆಗೆದು ಅಸ್ತಿಪಂಜರವನ್ನಾಗಿ ಮಾಡಿದೆ, ಕತ್ತರಿಸಿ ಕೆಳಗೆ ಹಾಕಿದ್ದ ಎಲ್ಲಾ ಮಾಂಸ, ಚರ್ಮದ ಜೊತೆ ಅವಳ ಉಡುಪುಗಳು, ಹ್ಯಾಂಡ್ ಬ್ಯಾಗ್ ಎಲ್ಲವನ್ನು ಹಿಂದಿರುವ ತ್ಯಾಜ್ಯ ವಸ್ತುಗಳನ್ನು ಹಾಕುವ ಗುಂಡಿಗೆ ಹಾಕಿ ಪೆಟ್ರೋಲ್ ಹಾಕಿ ಸುಟ್ಟುಬಿಟ್ಟೆ. ನಂತರ ಅಸ್ಥಿಪಂಜರಕ್ಕೆ ಕ್ರಿಮಿಗಳು ಬಾರದೆ ಇರಲು ಅದಕ್ಕೆಂದೇ ಇದ್ದ ದ್ರಾವಣವನ್ನು ಲೇಪಿಸಿದೆ ತಲೆಯ ಬುರುಡೆಯ ಮೇಲೊಂದು ತೂಗು ಕೊಂಡಿ ಹಾಕಿ, ಅದಕ್ಕೆಂದೇ

ಇಟ್ಟಿರುವ ಮರದ ಕೇಸ್‌ನೊಳಗೆ ತೂಗುಹಾಕಿ ಗಾಜಿನ ಬಾಗಿಲು ಹಾಕಿದೆ. ಮುಂದಿನ ದಿನ ಅನಾಟಮಿ ಹಾಲ್, ಮ್ಯೂಸಿಯಂಗೆ ಪೇಯಿಂಟ್ ಮಾಡಿಸಿ ಸ್ವಚ್ಛವಾಗಿ ತೊಳಸಿಬಿಟ್ಟೆ. ನಂತರ ಪೇಯಿಂಟ್ ಮಾಡಿಸಿದೆ. ಈ ಘಾಟು ವಾಸನೆಯಿಂದ ಬೇರೆ ಯಾವುದೇ ವಾಸನೆಗಳು ತಿಳಿಯೋದಿಲ್ಲ. ಆದರೆ ಆವೇಶದಲ್ಲಿ ಆ ಮೊಬೈಲ್ ಫೋನನ್ನು ಆ ಕತ್ತಲಲ್ಲಿ ಎಲ್ಲಿ ಎತ್ತಿ ಬಿಸಾಕಿದೆ ಎಂದು ಹುಡುಕಲು ಮರೆತು ಬಿಟ್ಟೆ. ಒಡೆದು ಚೂರಾಗಿದೇಂತ ಭಾವಿಸಿದ್ದೆ. ಆದರೆ... ಅದೇ ನನಗೆ ಮುಳುವಾಯಿತು' ಎಂದು ಹೇಳಿ ಮುಗಿಸಿದರು.



ಯಾವುದೋ ಮಹತ್ಕಾರ್ಯ ಮಾಡಿದವರಂತೆ ಹೇಳುತ್ತಿದ್ದ ಅವರನ್ನು ಕಂಡು ಇನ್‌ಸ್ಪೆಕ್ಟರ್ ಕುಲಕರ್ಣಿಯವರಿಗೆ ಒಮ್ಮೆ ನಡುಕ ಬಂದಂತಾಯಿತು. ಇವನು ನೋಡಲು ಮಾತ್ರ ಭಯಂಕರನಲ್ಲ ಮನಃಸ್ಥಿತಿಯೂ ಅಷ್ಟೇ ಭಯಂಕರ, ವಿಕೃತ. ವಿಕಾರವಾಗಿದೆ. ಇತಂಹವರು ಜನಗಳ ಮಧ್ಯೆ ಇರಲೇಬಾರದು. ಇದ್ದಷ್ಟು ಅಪಾಯಕಾರೀ!

ಇಳಂಗೋವನ್ ಅವರು ಸಾಕ್ಷಿಯ ಅಸ್ಥಿಪಂಜರವನ್ನು ಕರೆದುಕೊಂಡು ಹೋಗಿ ತೋರಿಸಿದರು. ಅಲ್ಲಿಯೇ ಹಿಂಬಾಲಿಸಿ ಬಂದಿದ್ದ ಲೆಕ್ಚರರ್ ಒಬ್ಬರನ್ನು ಕರೆದು ಪಂಚನಾಮೆ ಮುಗಿಸಿ, ಮಹಜರು ನಡೆಸಿದರು, ಸಾಕ್ಷಿಯ ಅಸ್ಥಿಪಂಜರವನ್ನು ಸಿಟಿಯ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಕಳುಹಿಸಿದರು. ಪ್ರಿನ್ಸಿಪಾಲರಿಗೆ ಫೋನಿನಲ್ಲಿ ಮಾತನಾಡಿ ನಂತರ ಭೇಟಿಯಾಗುವುದಾಗಿ ತಿಳಿಸಿ, ಪ್ರೊಫೆಸರ್ ಇಳಂಗೋವನ್ ಕೊಲೆ ಮಾಡಿದ ರೀತಿ, ತಾವೇ ಮಾಡಿದ್ದಾಗಿ ಒಪ್ಪಿಕೊಂಡಿದ್ದನ್ನು ವಿವರಿಸಿದರು. ಅವರನ್ನು ಬಂಧಿಸಿ ಪೊಲೀಸ್ ಸ್ಟೇಷನ್ ಕಡೆ ತನ್ನ ಜೀಪನ್ನು ತಿರುಗಿಸುವಂತೆ ಹೇಳಿದರು. ವಿಷಯ ಇಡೀ ಕಾಲೇಜು, ಕ್ಯಾಂಪಸ್‌ಗೆ ಬೆಂಕಿಯ ಜ್ವಾಲೆಯಂತೆ ಹರಡಿತು. ವಿಷಯದ ವಿವರ ಸಿಗದಿದ್ದರೂ ಪ್ರೊಫೆಸರ್ ಇಳಂಗೋವನ್ ಸಾಕ್ಷಿಯನ್ನು ಕೊಲೆ ಮಾಡಿದ್ದಾರೆಂದು ತಿಳಿದು ದಿಗ್ಭ್ರಾಂತರಾದರು! ಮಾನಸಿ ಮತ್ತು ಮೀರಾ ಬೆಚ್ಚಿ ಬಿದ್ದರು.

ಜೀಪು ಪೊಲೀಸ್ ಸ್ಟೇಷನ್ ಬಳಿ ಬಂದು ನಿಂತ ಕೂಡಲೇ ಇಳಂಗೋವನ್,

"ನನ್ನದೊಂದು ಕೋರಿಕೆ. ಆ ಹುಡುಗಿಯ ಮೊಬೈಲ್ ಫೋನಿನಲ್ಲಿರುವ ವಿಡಿಯೋವನ್ನು ದಯವಿಟ್ಟು ಡಿಲಿಟ್ ಮಾಡಿಬಿಡಿ...' ಎಂದು ಕೇಳಿಕೊಂಡರು.

'ಆ ಮೊಬೈಲ್ ಫೋನಿನಲ್ಲಿ ಯಾವ ವಿಡಿಯೋ ರೆಕಾರ್ಡ್ ಆಗಿರಲಿಲ್ಲ...' ಕುಲಕರ್ಣಿ ಶಾಂತವಾಗಿ ಹೇಳಿದರು.

## ಎಲ್ಲಿ ಹೋದಿ ಗಂಗಾಮಾಯಿ?

**- ಜಯಶ್ರೀ ದೇಶಪಾಂಡೆ**

'ಸೂರ್ಯಾಗ ಬ್ಯಾರೆ ಕೆಲಸಿಲ್ಲ, ಬಂದ ಬಂದ ಅನ್ನೂದರಾಗ ಅಲ್ಲಿ ನೆ ದಾಟಿ ಹೋಗೂ ತಯಾರಿ ಮಾಡಬಿಟ್ಟಿರ್ತಾನ.' ತಲೆಯ ಮೇಲೆ ಒಂದು, ಬಗಲಲ್ಲಿ ಒಂದು ಕೊಡ ಹೊತ್ತು ಭಿರಿ ಭಿರಿ ಹೆಜ್ಜೆ ಎತ್ತುತ್ತಿದ್ದ ಕಮಲಿಯ ತಲೆ ಇದೆಲ್ಲಾ ಯೋಚಿಸುತ್ತಿದ್ದರೂ ತಲೆ, ಬಗಲಿನ ಕೊಡಗಳು ಖಾಲೀ ಇದ್ದವಾಗಿ ಹೆಜ್ಜೆ ಒಜ್ಜೆಯಾಗದೆ ರಾಚಿದ ಬಿಸಿಲನ್ನೂ ಗಣಿಸದೆ ಬಯಲು ದಾಟಿದಳು. ಧಾವಂತ ಬೇರೆ, 'ಒಂದ್ ಗಂಗಾಳ ಸುದ್ದಾ ನೀರಿಲ್ಲ ಮನ್ಯಾಗ ಇಡೀ ರಾತ್ರಿ ಅವ್ವ ಭೇದಿ ಅಂತ ಒದ್ದಾಡಿ ಇದ್ದ ನೀರೆಲ್ಲಾ ಆಕೀಗೇ ಮುಗದಂಗಾತು. ಸಾವಂತ್ರಿ, ರಾಣವ್ವ, ಹುಲಿಗೆವ್ವ, ದಿನಾ ಹೋಗೂ ಹಂಗೇನೆ ಈಗ ಎರಡು ತಾಸಿನ ಹಿಂದೇ ಕೆರೀ ನೀರಿಘೋಗೂಣು ಅಂತ ಬಂದಿದ್ರು, ಆದರ ಅವ್ವ, ಇಕೀದೊಂದು ಘೋರ ಇದ್ದಿದ್ದಿಲ್ಲಂದ್ರ ಇಲ್ಲಂದ್ರ ಇಷ್ಟೊತ್ತಿಗೆ ಹತ್ತ ಕೊಡಾ ನೀರ್ ತಂದು ತುಂಬೇಬಿಟ್ಟಿರ್ತಿದ್ದೆ...

ಮನಸಿನಲ್ಲಿ ಹಿಂಡು ಹಿಂಡು ಚಿಂತೆಗಳ ಸುಗ್ಗಿ, ಸಂಗೂರ ಮಾದರಕೇರಿ ದಾಟ ಅರ್ಧಾ ಮೈಲು ನಡೆದಿರಬೇಕು. ಅತ್ತಿತ್ತ ಏನಿಲ್ಲ ಒಂದಿಷ್ಟು ಕಳ್ಳಿ, ಮತ್ತೊಂದಿಷ್ಟು ಜಾಲೀ ಗಿಡ ಎಲ್ಲಾ ಬಿಸಿಲಿಗೆ ಸೆಟೆದು ನಿಂತು ಚರಚರ ಅಂತಿವೆ. ಹೆಜ್ಜೆ ಒತ್ತಿದ ಜಾಗ ಎಬ್ಬಿಸಿದ ಹಿಡಿಮಣ್ಣಿನ ಧೂಳು ಒಣಗಿದ ನೆಲದ ಮುಖದಲ್ಲಿದ್ದ ಹಪ್ಪಳದ ಹಾಗೆ ಅಲ್ಲೊಂದಿಲ್ಲೊಂದು ಹರಕು, ಕಾಟುಗಿಡ ಒಣಗಿ ಹೊಟ್ಟೆ ಬೆನ್ನಿಗೆ ಹತ್ತಿ ಕರಿಕಡ್ಡಿಯಂಥ ಕಾಂಡದಲ್ಲೇ ಜೀವ ಹಿಡಿದಿವೆ. ಹಸಿ ಎಲೆ ಇರುವ ಜಾಗದಲ್ಲಿ ಅಲ್ಲೊಂದು ಇಲ್ಲೊಂದು ಹಳದೀ ಎಲೆ ಅಷ್ಟೇ. ಮಳೆ ಹೊತ್ತಿಗೆ ಸರಿಯಾಗಿ ಆಗಿದ್ದರೆ ಇಷ್ಟೊತ್ತಿಗೆ ಎಲ್ಲಾ ಗಿಡದ ಮುಖವೂ ಹಸಿರು ಹಚ್ಚಿಕೊಂಡೇ ಬಿಟ್ಟಿ ರುತ್ತಿದ್ದವು.ದೊಡ್ಡ ಮರಗಳು ಹಸುರು ಕೌದಿ ಹೊದ್ದು ಕೈ ಕಾಲು ಬೀಸುತ್ತ ತಣ್ಣಗಿನ ಗಾಳೀ ಊದುತ್ತಿದ್ದುವು. ಆದರೆ ಮೂರು ವರ್ಷ ಆಯ್ತು ಆಕಾಶ ಭೂಮಿಗೆ ಗಂಗವ್ವನ್ನ ಕಳಿಸಿ...

ಕಮಲಿ ಹೆಜ್ಜೆಗಳ ಸ್ಪೀಡು ಜಾಸ್ತಿ ಮಾಡಿದಳು. ರಟ್ಟೆಪ್ಪನ ಹೊಲದ ಏರೀ ಮೇಲಿಂದ ಹಾಸಿ ಹೋದರೆ ಬಾನಾತಿ ಕೆರೆ ಸ್ವಲ್ಪ ಹತ್ರ ಆಗುತ್ತದೆ, ಅಲ್ಲೇ ಸಧ್ಯಕ್ಕೆ ಒಂದಿಷ್ಟು ನೀರು ಉಳಿದಿದೆ. ಉಳಿದ ನಾಲ್ಕು ಹಳ್ಳಿ ಅಂದರೆ ರುದ್ರಾಳ, ಮಶಿಮನಾಳ, ಕರೆಡ್ಡಿ, ಮತ್ತು ಸೋಮನಾಳ ಅದು ಬಿಟ್ಟು ತಮ್ಮ ಸಂಗೂರು ಮತ್ತೆ ಮಾಸೂರು - ಈ ಎಲ್ಲಾ ಕಡೆ ಇದ್ದ ಸಣ್ಣ ಪುಟ್ಟ ಕೆರೆ, ಹಳ್ಳದಂಥಾ ನೀರಿನ ಒರತೆಗಳು ಬತ್ತಿ, ಒಣಗಿ, ಹೊಟ್ಟೆ ಒಡೆದು ಚಚೌಕ ಭೂಮಿ ಸೀಳು ಬಿಟ್ಟು ಅದರೊಳಗಿಂದ ಸುಡು ಸುಡೂ ಗಾಳಿ ಎದ್ದು

ದಂಡೆಗುಂಟ ಬೇಕೋ ಬೇಡವೋ ಅನ್ನುವ ಹಾಗೆ ಟಿಸಿಲೊಡೆದ ಗರಿಕೀ ಹುಲ್ಲು ಒಣಗಿ ಟೆಂಗಿನ ಕಸಬರಿಗಿ ಕಡ್ಡಿ ಆದದ್ದು ಕಂಡರೆ ಹೊಟ್ಟೆಯೊಳಗೆ ಸಂಕಟ ಉಕ್ಕಿ ಬರುತ್ತದೆ,

ಕಾಲ ಹತ್ತಿರ ಓಡಿದ್ದು ಏನದು? ಕಪ್ಪೆ? ಬಗ್ಗಿ ನೋಡಿದರೆ ಒತೀಕ್ಯಾತ...ಸಪ್ಪಗೆ ನಗು ಮೂಡಿತು.ಮಳೀನೇ ಇಲ್ಲ ಮೂರೊರ್ಶದಿಂದ ಮಳಿ ಆದರ ಕಪ್ಪಿ, ಇಲ್ಲಾಂದ್ರ ಇವೇ.?

ಎದುರಿನಿಂದ ಯಾರೋ ಬಂದ ಹಾಗೆ ಕಾಣಿಸಿ ಉರಿಬಿಸಿಲಿನ ಸೂರ್ಯನನ್ನು ಕೈ ಅಡ್ಡ ಮಾಡಿ ತಡೆಯುತ್ತಾ ನೋಡಿದರೆ ಅವರೇ-ಸಾವಂತ್ರಿ ರಾಣವ್ವರ ಪಾರ್ಟಿ.ತಾಸಿನ ಹಿಂದೆ ನೀರು ತರತೀವಿ ಅಂತ ಬಾನಾತೀ ಕೆರೆಗೆ ಹೋದ ಮಂದಿ..ಆದರಿದೇನಿದು ತಲೀಮ್ಯಾಲೆ ಬಗಲಾಗ ಇರಬೇಕಾದ ಒಜ್ಜಿ ಕೊಡಾ ಕೈಯಾಗ ಖಾಲೀ ಜೋತಾಡ್ತಾವ? ಆಶ್ಚರ್ಯ ಉಕ್ಕಿಬಂದು ಮಾತಾಡೋಕು ಅನ್ನುದರೊಳಗೇ ಸಾವಂತ್ರಿ ದೂರದಿಂದಲೇ "ಈಗ ಬಂದ್ಯೇನ ಕಮಲೀ ? ಬ್ಯಾಡ ನಡಿ, ಹೊಳ್ಳಿ ಹೋಗೂಣು" ಅಂದಳು.

"ಅಲ್ಲ ಯಾಕೆ ಹಿಂಗ್ಯಾಕ? ಏನಾತು?

"ರಾಣವ್ವ ಧಪಾ ಧಪಾ ಮುಂದ ಬಂದು ಏದುಸಿರಿನ ತನ್ನ ಎದೆ ಸಂಭಾಳಿಸಿಕೊಳ್ಳುತ್ತ "ಅವರು ನೀರೇ ಕೊಡಂಗಿಲ್ಲ ಅಂತಾರ ಕಮಲವ್ವಾ...ನೀರಾಗ ಕಾಲಿಡಲಿಕ್ಕೇ ಬಿಡವಲ್ರು" ಅನ್ನುತ್ತ ಇನ್ನೇನು ಅಳು ಇಳಿಯುವುದೊಂದೇ ಬಾಕಿ ಅವರ ಕಣ್ಣಲ್ಲಿ.

"ಯಾಕಂತ, ಇಷ್ಟ ದಿನಾ ಅಲ್ಲೇ ತರತಿದ್ವಿ ಅಲ್ಲೇನು? ಸುಮ್ಮಗೆ ಇರ್ತಿದ್ರು ಹಾಟ್ಯಾಗೋಳಿಗೆ ಇವತ್ತೇನಾತಂತ?" ನೀರಿಲ್ಲ ಅನ್ನುವ ಸಂಕಟಕ್ಕೆ ಅಸಹಾಯಕತೆ ಸಿಟ್ಟು ಎರಡೂ ಬೆರೆತವು.

"ಅದೇನೋ ಯಾರಿಗ್ಗೊತ್ತು, ಅಲ್ಲಿ ಮಾತ್ರ ಭರ್ಮ್ಯಾ, ಸಂಗೊಬಾ, ಇಂತಾವ್ರೆಲಾ ಕೋಲು ಹಿಡದು ನಿಂತಾರ ನೀರಾಗ ನಾವ್ಯಾರೂ ಕೊಡಾ ಇಳಸಬಾರ್ದಂತ.."

"ಯಾಕಂತ ನೀವು ಕೇಳಲಿಲ್ಲೇನು?"

"ಕೇಳಿದ್ವಿ... ನೀರಿಲ್ಲ ಅಂದ್ರ ನಾವೇನು ಮಾಡೂಣು ಅಂದರು... ಮಳೀ ನಿಂತು ಮೂರೊರ್ಸಾತು, ಇದ್ದೊಟು ನೀವು ಖಾಲೀ ಮಾಡ್ತೀರೇನು? ಜಗತ್ತಿಗೆಲ್ಲಾ ನೀರು ಹಂಚ್ಗೋತ ಹೊದರ ನಾವು ನೀರಿಲ್ಲೇ ಸಾಯಬೇಕೇನು? ಅಂತ ಝಾಡಿಸಿಬಿಟ್ರು..."

ಎಲ್ಲರ ತಲೆ ಗಿಮಿ ಗಿಮಿ ಅನ್ನತೊಡಗಿತ್ತು... ಇಷ್ಟು ದಿನಾ "ಇರ್ಲಿ ಬಿಡ್ರಿ ನೀವೂ ನಮ್ಮ ಕೆರೀ ನೀರು ಕುಡದ್ರೇನಾತು ತೊಗೋರಿ" ಅನ್ನುತ್ತಿದ್ದವರು ಈಗ ಹಿಂಗ...ಏನು ಗತಿ ತಂದ್ಯೋ ಶಿವನೇ..

* * * *

"ಏನಂತಾರ ಅವರೂ? " ಬಸಪ್ಪನ ಕಣ್ಣುಗಳು ಮೊದಲೇ ರಕ್ತಕೆಂಪು ಡಾಳಿಂಬ್ರೀ ಬೀಜದ ಹಂಗ, ಈಗ ಈ ಸುದ್ದಿ ಕೇಳಿ ಅದರಾಗಿಂದ ರಕ್ತ ಬರೂದೊಂದೇ ಬಾಕಿ, "ನೀರು ಕೊಡಂಗಿಲ್ಲಂತಾರೇನು?" ರುಮಾಲಿನ ಚುಂಗು ಸಿಗಿಸಿಕೊಳ್ಳುತ್ತ ಅವನು



ಎದ್ದು ನಿಂತ ರೀತಿಗೇ ಕಮಲಿ ಅಂಜಿದಳು. ಇಂವ ಅಣ್ಣ ಮದಲೇ ದೂರ್ವಾಸನ ಮರಿ ಇದ್ದಂಗಿದ್ದಾನ..ಚೂರು ಜಾಸ್ತ ಕಮ್ ಆದರ ಹಸದ ಹುಲೀ ಜಿಗದಂಗ ಜಿಗೀತಾನ...

ಸುದ್ದಿ ಹಬ್ಬಲಿಕ್ಕೆ ತಡ ಆಗಲಿಲ್ಲ, ಅಡಿಗೆ ಮನೆ ಹಿತ್ತಲು ಹೊರಬಾಗಿಲು ದಾಟಿ ಹರಿದೇ ಬಿಟ್ಟಿತು.ಮಾದೇವ, ರುದ್ರ ಅನ್ನುವಂಥಾ ಇನ್ನಿಬ್ಬರು ತಮ್ಮಂದಿರೂ ಈ ಸುದ್ದಿಗೆ ಜಿಗದೆದ್ದು ನಿಂತರು. ಅವ್ವಾ ಭೇದಿ ಹತ್ತಿ ಬೈಲ್ಕಡೆ ಹೋಗಲಿಕ್ಕೂ ತ್ರಾಣ ಇಲ್ಲದೇ ಒದ್ದಾಡೂವಾಗ ಇದು ಹೆಂತಾ ಸುದ್ದಿ?

"ಏನಂತೇನಂತ? ಅವರಿಗೇನು ಗರಾ ಬಡದಿಲ್ಲ ಹೌದಿಲ್ಲ? ನೀರು ಅವರಿಗೆ ಗುತ್ತಿಗೀ ಹಾಕಿ ಕೊಟ್ಟಾರಂತೇನು? ಏನೋ ರುದ್ರಾ ಇವರದ್ಯಾಕೋ ಮಿತಿಮೀರಿ ಹೊಂಟಂಗಾತಲಾ?

ಬಸಪ್ಪನ ಸಿಡ್ಲಿನಂಥಾ ಎತ್ತರದ ದನಿಗೆ ಆಸು ಪಾಸಿನ ನಾಕೆಂಟಾಳು ಮಂದಿ ಮನೀ ಬಾಗಲ ಬಿಟ್ಟು ಬುದೂ ಬುದೂ ಇಲ್ಲಿಗೇ ಬಂದರು. ಮಿಂಚು ಹರದಂತೆ ಊರಿಡೀ ಸುದ್ದಿ, 'ಬಾನಾತಿ ಕೆರೀ ನೀರು ನಮಗೆ ಇನ್ನ ಇಲ್ಲಂತ"

ಹೌಹಾರಿ ದಿಕ್ಕೆಟ್ಟು ಮುದುಕ ಮೂಟರಿರಲಿ ಹರಯದ ಹೆಣ್ಣು ಗಂಡು ಮಕ್ಕಳಿಗೂ ಕಾಲು ಥರಥರ ಅಂದದ್ದು ಸುಳ್ಳಲ್ಲ. ನಿಂತ ನಿಂತಂತೆ ಗಡಬಡಿಸಿ ತುರ್ತು ಸಭೆ ನಡೆದು ಎಲ್ಲಾರದ್ದೂ ಒಂದೇ ತಾರಕ.

"ಈಗಿಂದೀಗ ಹೋಗಿ ಒಳ್ಳೆ ಮಾತಿನ್ಯಾಗ ನಮಗ ನೀರು ಕೊಡತೀರೋ ಇಲ್ಲೋ ಅಂತ ಅವರನ್ನ ಕೇಳಬೇಕು" ಎನ್ನುವ ಠರಾವು ಪಾಸಾಗಿ ಬಸಪ್ಪನ ಮುಂದಾಳತ್ವ ಹಿಂದೆ ಇಬ್ಬರು ಅವನ ತಮ್ಮಂದಿರು, ಮತ್ತು ಕುಂಬಾರಗೇರಿಯ ಇಪ್ಪತ್ತರಿಂದ ನಲವತ್ತರ ಒಳಗಿನ ಯೋಳೆಂಟು ಗಂಡಾಳುಗಳ ಟೀಮು ಬಾನಾತಿ ಕಡೆ ಎದ್ದಿತು.

ತಲೆ ಅಲ್ಲಾಡುವ ತಲೆಗಳೂ ಇದ್ದು, ಅಲ್ಲಿ, ದುಮ್ಮದ್ರಿ ಅಜ್ಜ, ಕೋಲು ಕುಟ್ಟಿ ಹೇಳಿದ "ಆದಟು ಗುದ್ದ್ಯಾಟಕ್ಕೆ ನಿಂದರಬ್ಯಾಡ್ರೋ ತಮಗೋಳಾ.. ಸೋಯಿಗೋಯಿಲೇ ಮಾತಾಡ್ಸಿ ಅವರ್ನ ಒಪ್ಪಸರಿ.."

ರುಮುರುಮು ಬೀಸುವ ಗಾಳಿಯಲ್ಲಿ ಅವನ ಮಾತುಗಳು ಹಾರಿ ಹೋದುವು...ರೋಷ ಏರಿ ಬೀಸುವ ಹೆಜ್ಜೆಗಳಿಗೆ ಅಡ್ಡಕಟ್ಟು ಸಲೀಸಾಗಿ ಬಿದ್ದೀತೇ? ಈಗಂತೂ ಇದು ಅಂತಿಂಥ ಪ್ರಶ್ನೆ ಅಲ್ಲ, ತಮ್ಮ ಜೀವ ಉಳಿಯೂ ಪ್ರಶ್ನೆ...ಜೀವದ ಪ್ರಶ್ನೆ!

* * * *

ಈ ತನ್ನ ಅಣ್ಣ ತಮ್ಮರು ಅಂತಿಂಥವರಲ್ಲ, ಕಮಲಿ ಕಳವಳಿಸಿದಳು. ಎಲ್ಲಾ ನೆಟ್ಟಗಿದ್ದರ ಅವರಷ್ಟು ಮೆತ್ತನವರು ಮೂರು ಕೇರ್ಯಾಗೂ ಸಿಗಲಿಕ್ಕಿಲ್ಲ. ಆದರ ಹುಚ್ಚೆದ್ದರೂ ಅಂದರ ಉರಿಯೂ ಕೊಳ್ಳಿಗೋಳೇ ಖರೆ... ಬಾನಾತೀ ಮಂದಿನ್ನ ಹೆಂಗ ತಡವಿಕೋತಾರೋ ಏನೋ ? ಅಲ್ಲ, ತಲೀ ಉಪಯೋಗ ಮಾಡಿ ಅವರಿಗೊಂ 'ಅಪಾ, ಅಣ್ಣಗೋಳ್ಯಾ ಅಂತ ಮಾತಾಡಿದರ ಕರಗೂದಿಲ್ಲೇನು ಯಾರರೆ? ಇವತ್ತ ಒಳ್ಳೆ ಮಾತಿನೊಳಗ ನೀರಿನ ಬಾಬ್ತು ಮುಗಿಸಿಕೊಂಡು ಬಂದರ ಶಿವಾ ಕಾದ ಅಂತ



...ಇಲ್ಲಾಂದ್ರ..." ತಲೆ ಇಡೀ ಕಾಯ್ದು ಕುದಿಯುತ್ತಿದ್ದಾಗ ಅಂಬಾಯಿಯ ದನಿ ಕೇಳಿ ಎಲ್ಲೋ ಇದ್ದದ್ದು ಇಲ್ಲಿ ಬಂತು,

"ಏನಾತ ಕಮಲೀ ಇವರೆಲ್ಲಾ ಯಾಕ ಹಿಂಗ ದುರುಗವ್ವ ಮೈ ಮ್ಯಾಲೆ ಬಂದವರಂಗ ಓಡಿದರು? ಎಲ್ಲಿ ಏನಾಗೇದೇ?'

ಅವಳಿಗೆ ಪ್ರತಿಯೊಂದಕ್ಕೂ ಪೂರ್ಣ ಉತ್ತರ ಬೇಕು, ಇಲ್ಲಾಂದ್ರೆ ಸುಮ್ಮನಾಗುವ ಜಾತಿಯೇ ಅಲ್ಲ. ತೊಂಬತ್ತೈದಾದರೂ ಅಗಾಧ ಪಚನಶಕ್ತಿ, ಹಿತ್ತಲ ತನಕ ತಾನೇ ನಡೆಯುವ ಪ್ರಾಣ ಎರಡೂ ಇರುವ ಮುದಿಕೆ. ಅವಳ ನೆನಪಿನ ಭಂಡಾರಕ್ಕೆ ಬೆಳ್ಳಿ, ಬಂಗಾರದ ಬಹುಮಾನ ಕೊಟ್ಟರೂ ಕಡಿಮೆ. ಎಪ್ಪತ್ತೆಂಬತ್ತು ಅಲ್ಲಾ ಅದಕ್ಕೂ ಹಿಂದಿನ ವರ್ಷಗಳ ಹಿಂದಿನ ಸುದ್ದಿಗಳನ್ನೂ ಇಂದೇ ಕಂಡವರಂತೆ ಬಿಚ್ಚಿ ಹರವುತ್ತಾಳೆ.

'ಕೃಷ್ಣಾ ನದೀಗೆ ಮಹಾಪೂರ ಎಷ್ಟು ಸರತಿ ಬಂದಿತ್ತು? ಪಡಸಲಗೀ ಬ್ರಿಜ್ಜು ಎಷ್ಟು ಸಾರೆ ಮುಳುಗಿತ್ತು? ದೊಡ್ಡ ಬ್ರಿಜ್ಜಿನ ಕಂಠಮಟ್ಟ ನೀರು ಹೆಂಗ ಬಂದಿತ್ತು? ಹರಿಗೋಲು ಹಾಕಿ ನೀರಿಗಿಳಿದಾಗ ಮೀನ ಅಂತ ತಿಳದು ಹಾಂವು

ಹಿಡಿದದ್ದು ಯಾರು? ” ಎಲ್ಲಾ ಕಂಠಪಾಠ ಅಕೀಗೆ, 'ಅಂದಿನ ದಿನಾನೇ ಬ್ಯಾರೆ ಇದ್ದೂ ಯವ್ವಾ" ಎಂದು ನಿಟ್ಟುಸಿರು ಹಾಕುತ್ತಾಳೆ.

ಎಂತೆಂಥಾ ದೊಡ್ಡ ದೊಡ್ಡ ಬರಾ ಕಂಡೀನಿ ನಾ ನಿಮಗೇನು ಗೊತ್ತಾದ. ಅಂತ ಭೂತಕಾಲಕ್ಕೆ ಹೋಗಿ 'ಆಗಾ, ಬೆಂಕೀಯಂಥಾ ಬರಾ ಬಿದ್ದಾಗ ನಾ ಇನ್ನಾ ಕಥೀ ಮಿಳ್ಳೆ ಆಡೂ ವಯಸ್ಸಿನ್ಯಾಕಿ. ನಿಮ್ಮಜ್ಜ ಅಷ್ಟೊತ್ತಿಗಾಗಲೇ ನನ್ನಕೊಟ್ಟಾಗ ತಾಳಿ ಬಿಗದು ಬಿಟ್ಟಿದ್ದ.ಅಂವಗೂ ಎಂಟೊಂಬತ್ತು ಇದ್ದೀತು ಇನಾ, ಧೋತರ ಚುಂಗು ಕಳ್ಕೊಳಿಕ್ಕೆ ಬರತಿರಲಿಲ್ಲಾ. ಹಿಂದೆ ಮುಂದ ಎಲ್ಲಾ ತೋರಿಸಿಗೋತ ತಿರಗತಿದ್ದಾ" ಅಂತ ನಾಚುವಳು.

ಆಗ ಬಂದ ಬರಾ ಎಂಥಾದ್ದಂತಿ ಎಂದು ತನ್ನ ಕಣ್ಣುಗಳನ್ನು ಗುಂಡಗೆ ಮಾಡಿ ಗರಾ ಗರಾ ತಿರಿಗಿಸಿ ಹೇಳಿದರೆ ತಾವು ನಾಲ್ಕೂ ಮಕ್ಕಳು ಬೆಚ್ಚಿ ಬೆದರಿ ಎದೆ ಡವ ಡವಾ ಅಂದಬಿಡತಿತ್ತು, ನಾಯಿ, ದನಾ, ಕರಾ ಎಲ್ಲ, ನೀರಿಲ್ದೇ ಸತ್ತು ಕಾಲಿಟ್ಟಲ್ಲಿ ಎಲುಬಿನ ತುಕಡಿ ಬಿದ್ದ ಸುದ್ದಿ ಅದನ್ನ ಕಂಡು ಕಂದಮ್ಮಗಳು ಚಿಟೇ ಚಿಟ ಚೀರಿ ಅತ್ತವು ಅಂತ ಅವಳು ಹೇಳುವಾಗ ತಾವೆಲ್ಲ ಗಡ ಗಡ ನಡುಗಿ "ಶಿವನೇ ಭೂಮಿಗೆ ಯಾಕಿಂಥಾ ದಿವಸ ತರತೀಯೋ" ಅಂತ ಅತ್ತು ಆಗ ಇನ್ನೂ ಜೀವಂತ ಇದ್ದ ಅಪ್ಪನೇ ಮುದುಕಿಯನ್ನು ಬೈದು 'ಯಾಕವೇ ಸಣ್ಣ ಪಾರಗೋಳನ ಬೆದರ್ಸತೀದಿ ಸುಮ್ಮ ಕೂಡು” ಅಂತ ಗದರಿದರೆ

"ಯಾಕೋ, ಅದೇನಿಲ್ಲ ತಗೀ, ಇಂದ ನಾಳೀ ಮಕ್ಕಳಿಗಿ ತಮ್ಮ ಹಿರೇರು ಏನೇನು ಘಾತ ಉಂಡು ಬದಿಕ್ಯಾರ ಅಂತ ಗೊತ್ತಿರಬೇಕೋ ತಮಾ... ಬೇಕಂದ್ರ ಬೂದೀಹಾಳ ಅಜ್ಜನ್ನೂ ಕೇಳಿ ಬಾ," ಮುದುಕರ ವಾದ ವಿವಾದ ಬೆಳೀತಂದರೆ ಅವರ ಬಾಯಿ ಮುಚ್ಚಿಸೂದೂ ಮಾತ್ರ ಕಠಿಣ!

ತಾವೆಲ್ಲ ಮೆತ್ತಗೆ ಅಲ್ಲಿಂದ ಜಾರಿಹೋಗುವಾಗ ಅಂಬಾಯಿ ಆಡಿದ ಮಾತು ಮತ್ತೆ ಮತ್ತೆ ಮರುಗೊಳಿಸಿದಂತಾಗಿ 'ಬರಾ' ಅಂದರ ಹಿಂಗೇ ಇರತದೇನು' ಅನ್ನುವ ದಿಗಿಲು

ಮನಸ್ಸಿನ ಒಳಗೇ ಭದ್ರವಾಗಿ ಕೂತು ಅಂಜಿಸಿಬಿಡುತ್ತಿತ್ತು. ಈಗ ಮೂರ್ನಾಕು ವರ್ಷದಿಂದ ಸುತ್ತ ಮುತ್ತ ಹರದಾರಿ ನೆಲದೊಳಗಿನ ಊರು ಹಳ್ಳಿ, ತಾಲೂಕು, ಹೋಬಳಿ...ಇವಕ್ಕೆಲ್ಲಾ ಯಾವ ದೇವರ ಶಾಪ ಬಡದಿತ್ತೋ ? ಮಳೆ ಇಳಿಸುವ ಮುಗಿಲು ಈ ದಿಕ್ಕನ್ನೇ ಮರೆತು ಹೊಂಟೋಗಿಬಿಟ್ಟಿದ್ದುವು. ಹರದಾರಿಗಳ ಉದ್ದಗಲಕ್ಕೂ ಎಲ್ಲೆಲ್ಲೂ ಹನಿ ನೀರಿಲ್ಲ. ಭಯಂಕರ ಬರ ಅದು!ವಿಚಿತ್ರವೆಂದರೆ ಒಂದಲ್ಲಂತ ಮೂರು ನದಿ ಹಾದು ಹರಿದು ಹೋಗುವ ಭೂಮಿ ಇದು, ಆದರೂ ನಮ್ಮೂರಿನ ಕಡೆ ತಿರುಗುವ ಮನಸ್ಸು ಯಾವ ನದೀನೂ ಮಾಡಿಲ್ಲ, ಈ ನೆಲಕ್ಕ ನೀರು ಕುಡಿಸಿಲ್ಲ, ಇದ್ದಬದ್ದ ಕೆರೆ ಬಾವಿ, ಹಳ್ಳಗಳೂ ಸೂರ್ಯನ ಅಟಾಟೋಪಕ್ಕೆ ಗದಗುಟ್ಟಿ ನಡುಗಿ ಉಡುಗಿ ಬತ್ತಿ ಸತ್ತು ಹೋಗಿವೆ. ರೈತ ಮಕ್ಕಳು ಏನು ಮಾಡಿಯಾರು?

ನೆಲ ಚಚ್ಚೌಕ, ಪಂಚಕೋನ ಸೀಳಿ ಧಗಧಗ ಹೊಗೆ ಬಿಡುವಾಗ ಜೀವ ಉಳಿಸಿಕೋಬೇಕು ಎಂದು ಎದ್ದೆದ್ದು ಗುಳೇ ಹೊಂಟವರೆಷ್ಟೋ? ಈ ಬರ ಎಂದು ಬಿಟ್ಟೆತು? ತಾವು ಎಂದು ತಿರುಗಿ ಬಂದಾರು? ಒಂದೂ ತಿಳಿದಿಲ್ಲ ಅವಕ್ಕೆ ನೆತ್ತಿಯಿಂದ ಅಂಗಾಲತನಕ ಬಡತನ ಹೊತ್ತಿ ಮುಚ್ಚಿಕೊಂಡ ಜೀವಗಳು ಇಲ್ಲಿದ್ರೇನು...ಅಲ್ಲಿದ್ರೇನು? ಜೀತ ಅನ್ನೂದೇ ಜೀವನ, ಜೀವನ ಅಂದ್ರೆ ಜೀತ...ಹುಟ್ಟಿದ, ಹುಟ್ಟುವ ಎಲ್ಲಾ ಮಕ್ಕಳೂ ಜೀತದ ಕೂಸುಗಳೇ ಅರವತ್ತೆಪ್ಪತ್ತು ವರ್ಷ ಕಳೀತು ದೇಶಕ್ಕೆ ಸ್ವತಂತ್ರ ಬಂದು...ಸ್ವತಂತ್ರ? ಹಂಗಂದ್ರ ಏನು ಎಂದು ಕೇಳುವ ಕೂಸುಗಳು..ದುಷ್ಕಾಲ ಬಂದು ಇವರನ್ನೇ ಬಡಿದಿದೆ...ಮೊದಲೇ ರಕ್ತ ಕಾರಿ ಬಿದ್ದವನ ಎದೆ ಸೀಳಿದ ಹಾಗೆ!

ಕಮಲಿ, ಕಮಲಿಯಂಥ ಇನ್ನೂ ಹತ್ತಿಪ್ಪತ್ತು ಹೆಣ್ಣುಗಳದು ಇನ್ನೊಂದು ಪರಿ. ಹಾಗೆ ನೋಡಿದರೆ ಭಾಳ ಇದ್ದವರು ಏನಲ್ಲ ಆದರೆ ಇಲ್ಲದವರೂ ಅಲ್ಲ.ಸ್ವಲ್ಪ ಬೇರೆ ಪರಿಸ್ಥಿತಿ. ಬಡತನಕ್ಕೆ ಬಡವರಲ್ಲ, ಕೈ ತುಂಬ ದುಡ್ಡು ಕುಣಿಯುವವರೂ ಅಲ್ಲ. ಇಂಥ ಹೆಣ್ಣು ಜೀವಗಳೇ ಬೀಸುವ ಕಲ್ಲಿನ ನಡುವೆ ಸಿಕ್ಕು ತಿರುಗುವ ಜೋಳದ ಕಾಳಿನಂತೆ...ಇವರು ದುಡಿಮೆಗೆ ಕೈಯಿಡುವುದು ಆರೇಳು ವಯಸ್ಸಿಗೆ! ಮತ್ತೆ ಹದಿನಾರಾಗುವ ಹೊತ್ತಿಗೆ ಕೊರಳಿ ಗೊಂದು ತಾಳಿ ಬಿದ್ದು ಯೌವನ ಪೂರ್ಣ ಅರಳುವ ಮೊದಲೇ ತುಂಬಿ ನಿಲ್ಲುವ ಗರ್ಭಗಳು...ಅದರ ಮುಂದಿನದು ಸರ್ವವಿದಿತ. ಮಕ್ಕಳ ಹೇಲು, ಉಚ್ಚೆ, ಗಂಡನ ಏಟುಗೀಟು, ಹೊಲದಲ್ಲಿ ದುಡಿತದ ಬಾಳು ಇಷ್ಟಕ್ಕಿಂತ ಬೇರೆಯೂ ಇದ್ದೀತು ಅನಿಸುವುದೇ ಇಲ್ಲ ಅವರಿಗೆ

ಮೂರು ಗಂಡಿನ ಹಿಂದೆ ಹುಟ್ಟಿದ ಕಮಲಿಗೆ ಈಗ ಹದಿನಾರು ತುಂಬಿ ಎಂಟು ತಿಂಗಳು ವಯಸ್ಸು ಅವ್ವ ಶಿವನಿಂಗವ್ವ, ಹನ್ನೆರಡೆಕರೆ ಜಮೀನು ಅಪ್ಪನದು, ಮಕ್ಕಳಿಗೆ ಸಾಲ ಸೋಲ ಏನೂ ಬಿಡಲಾರದೆ ದೇವರ ಪಾದ ಸೇರಿದ್ದು ಅವನು ಮಾಡಿದ ಉಪಕಾರವೇ! ಬಸಪ್ಪ, ರುದ್ರ, ಮಾದೇಶರೆಂಬ ಅಣ್ಣಂದಿರಲ್ಲಿ ಮದುವೆ ಆದವರು ಇಬ್ಬರೇ ರುದ್ರ, ಬಸಪ್ಪ, ಅದರಲ್ಲಿ ರುದ್ರನ ಹೆಂಡತಿ ಸೋಡಚೀಟಿ ಇಸ್ಕೊಂಡು ಹೋಗಿಬಿಟ್ಟಿದ್ದಳು. ಬಸಪ್ಪನ ಹೆಂಡತಿ ನಾಲ್ಕನೇ ಮಗು ಹೆರಲಿಕ್ಕೆ ತವರಿಗೆ ಹೋಗಿ ಮನೆ ನೋಡಿಕೊಳ್ಳುವ ಕೆಲಸ ಇಡೀ ಕಮಲಿಯ ಕೊರಳಿಗೆ...

ಇದರ ನಡುವೆ ಎಂದೋ ಸೌಂದತ್ತಿ ಮ್ಯಾಳದಲ್ಲಿ ನೋಡಿ ನಕ್ಕು ಅವನ ಮನಸ್ಸು ತನಗೆ ಕೊಟ್ಟು ತನ್ನ ಮನಸ್ಸು ತನ್ನ ಎದೆಯೊಳಗೆ ತೆಗೆದುಕೊಂಡು ಹೋಗಿದ್ದ ರವಿ! ಅವನ ಕಣ್ಣು, ಮೂಗು, ಕಟದ ಕಲ್ಲಿನಂಥಾ ಬಿರುಸು ಮೈ, ಘಮಘಮ ಎಣ್ಣಿ ಹಚ್ಚಿ ತಿದ್ದಿ ತೀಡಿ ಬಾಚಿದರೂ ಗಾಳಿಗೆ ಥಲ್ಲಂತ ಹಾರ್ಯಾಡುವ ಕೂದಲು ಎಲ್ಲಕ್ಕಿಂತ ಹೆಚ್ಚು ಅವನ ಆ ನಗೆ... ಈ ಕಮ್ಮಿಯ ಎದೆಯೊಳಗೆ ಘಲ್ಲಂತ ಹೂವರಳಿಸಿದ ಅವನ ನಗಿ!

ಎಸ್ಸೆಲ್ಸಿ ಕಲಿತಿದ್ದ ರವಿ...ಬಾನಾತಿ ಊರಿಗೆ ತಾಲೂಕು ಹತ್ರ ಆಗಿದ್ದಕ್ಕೆ ಅಂದರ ಅಲ್ಲಿಗೆ ಒಂದು ಸರಕಾರೀ ಬಸ್ಸು ಓಡ್ಯಾಡ್ತಿತ್ತು, ಅದಕ್ಕೇ ಅಲ್ಲಿ ಹುಡುಗರು ಸಾಲೀ ಗೀಲೀ ಕಲ್ತು ಸುಧಾರಿಸಿದ್ದು ಆ ಊರಿನವರಿಗೆ ಕೋಡು ಬಂದು ಬಿಟ್ಟಿತ್ತು ..ಆದ್ರೂ ರವಿ ಏನು ಸೊಕ್ಕಿನ ಹುಡುಗ ಅಲ್ಲ, ತನ್ನಪ್ಪ ಅಣ್ಣಂದಿರಂದ್ರೆ ಭಯಾ ಭಕ್ತಿ. ಅದಕ್ಕೇ ಇನ್ನೂ ಬಸಪ್ಪನ ತನಕಾ ಸುದ್ದಿ ಹೋಗಿಲ್ಲ. ಹಂಗ ಅವರೂರಿಗೂ ತಮ್ಮೂರಿಗೂ ಭಾಳ ಹಿತ ಅಂತೇನಿಲ್ಲದಿದ್ರೂ ವೈರ ಮಾತ್ರ ಇರಲಿಲ್ಲ. ಆದ್ರೂ ತನ್ನ ಮನಸ್ಸು ರವೀ ಜೊತಿಗೂಡಿದ್ದು ಮಾತ್ರ ಈಗ ತಮ್ಮಿಬ್ಬರ ಎದೆಯೊಳಗೇ ಮುಚ್ಚಿಹೋದ ಮಾತಾಗಿತ್ತು, ಯಾಕಂದ್ರ ಬರ ಅನ್ನುವ ಹೆಮ್ಮಾರೀ ಸೆರಗು ಸುತ್ತಮುತ್ತಲಿನ ಹತ್ತೈವತ್ತು ಊರು, ಹಳ್ಳಿ, ಹೋಬಳಿಯೆಲ್ಲಾ ಹಾಸಿದ್ದಕ್ಕೆ ಎಲ್ಲೆಲ್ಲೂ ಹೆಣ್ಣಗಂಡುಗಳ ಮೈ ಅರಿಶಿನ ಹಚ್ಚಿಕೊಂಡಿರ್ಲೇ ಇಲ್ಲ.

ಶಿವನಿಂಗವ್ವ ಹಾಸಿಗೆ ಹಿಡಿದೇ ಆರು ವರ್ಷ ಆಗಿ ಸದ್ಯಕ್ಕಂತೂ ಒಂಟಿ ಹೆಣ್ಣಾಳಾಗಿ ಮನೀನೇ ಕೊರಳಿಗೆ ಬಿದ್ದ ಕಮಲಿಗೆ ರಾತ್ರಿಯ ಕರಾಳ ಒಣಹವೆಯೂ ಒಮ್ಮೊಮ್ಮೆ ಬೀಸಿ ಬರುವಾಗ ರವಿಯ ನೆನಪು ಅವನದೇ ಕನಸು ಎರಡನ್ನೂ ತರುವುದು ಅಪರೂಪ ಇರಲಿಲ್ಲ. ಬೆಳದಿಂಗಳು ಚೆಲ್ಲಿದ ಹಸಿರಾತ್ರಿ ತಾವಿಬ್ಬರೂ ತಮ್ಮ ಗೊಂಜಾಳದ ಹೊಲದಲ್ಲಿನ ಮಾವಿನ ಮರಕ್ಕೆ ಕಟ್ಟಿದ ಜೋಕಾಲಿಯಲ್ಲಿ ತೂಗಿ ತೂಗಿ ಮೇಲೇರಿ ಇಳಿದು ಬನರಾಗ ಹಾಡಿದ್ದು, ದುಂಡುಮಲ್ಲಿಗೆ ದಂಡೆ ತಂದು ತನ್ನ ಮೂಗಿನ ಬಳಿ ಆಡಿಸಿ ರವಿ ಕಾಡಿಸಿದಾಗ ಅದರ ಘಮಘಮ ವಾಸನೆಗೆ ನಶಾ ತುಂಬಿ ನಿದ್ದೆ ಬಂದಂಗಾಗಿದ್ದು, ತಾಬಾಣದಗಲದ ರೊಟ್ಟಿಯ ಮೇಲಿದ್ದ ಬೆಣ್ಣೆಯನ್ನು ಅವನು ತನ್ನ ತುಟಿಗಳಿಗೆ ತೀಡಿ ಮುಂದೆ ಬಾಗಿದ್ದು...ಕಮ್ಮ ...ಅಂತಂದಾಗ ತಮ್ಮಿಬ್ಬರ ತುಟಿಯಿಂದ ತುಟಿಗೆ ಅಮೃತನೇ ಸುರಿದು ಹರಿದಾಡಿ ಮೈ ಮನಸಿಗೆ ಥಣ್ಣನ್ನ ಬೆಂಕಿ! ಕೂದಲ ರಾಶಿಗೆ ಕೈಯಿಟ್ಟ ಅವನ ಎದೆಯ ಹರವು ಹಸಿ ಬಿಸಿ ಬೆಚ್ಚಗೆ ಕಚಗುಳಿಯಿಡುವಾಗ....

ತಟ್ಟನೆ ಕಚ್ಚಿದ ಇರುವೆ ಇತ್ತ ಕರೆತಂದು ಅಯ್ಯೋ ಈ ಕನಸುಗಳಿಗೆ ತಲಿ ನೆಟ್ಟಗಿಲ್ಲ ಯಾವಾಗಂದ್ರೆ ಆಗ ಬಿದ್ದು ಕಾಡುವುದೇ ಕೆಲಸ ಎಂದು ಮಗ್ಗುಲು ತಿರುಗಿದಾಗ ಅಪ್ಪನ ಏರುದನಿ, "ಏ ಕಮಲೀ ನೋಡಲ್ಲಿ ನೀರು ಹೆಂಗ ಸಳಾ ಮಳಾ ಕುದೀಲಿಕ್ಕತ್ತೇದ.. ಖಬರ ಎಲ್ಲ್ಯದ ನಿಂದು?"

ಗಡಬಡಿಸಿ ಎದ್ದು ಮರಳುತ್ತಿದ್ದ ನೀರು ರೊಟ್ಟಿ ಹಿಟ್ಟಿಗೆ ಸುರಿದು, ಇದ್ಯಾಕಿಂದು ಹಸಿವಿ ಅನ್ನೂದು ಪತ್ತೇನೆ ಇಲ್ಲ, ದಿನ್ನಾ ಕೆರಳಿ ಹುಲೀಗತೆ ಕಾಡತಿತ್ತು. ಇವತ್ತಿನ ಸುದ್ದಿ ಕೆಟ್ಟ ಸುಳ್ಳಾಗ ಶಿವನೇ ಅಂದುಕೊಳ್ಳುತ್ತ ಎತ್ತ ಏನೂ ನೋಡದೇ ಧಪಾ ಧಪಾ ರೊಟ್ಟಿ ಬಡಿದಳು. ಅವು ದಿನದಂಗೆ ತೆಳ್ಳಗೆ ಆದುವೋ ದಪ್ಪಾದವೋ ನೋಡೆ ಬಡಿದು

ಬುಟ್ಟಿಗೊಗೆದಳು...ಅಂಬಾಯಿ ಕೂತಲ್ಲಿಂದಲೇ "ಏ ಕಮಲೀ ಕರಕು ರೊಟ್ಟಿ ತಿನಸಾಕಿದ್ದೀಯೇನಿಂದ?" ಅಂತ ಪೂರಾಡಿದ್ದೂ ಕೇಳಿಸದಂತೆ ಮನಸ್ಸು ಬಾನಾತಿ ಊರು ಹೊಕ್ಕಿತ್ತು. ಏನು ನಡದಿರಬೇಕಲ್ಲಿ? ಈ ತನ್ನ ಅಣ್ಣಂದಿರಿಗೆ ಸಿಟ್ಟು ಬಂದರ ಅಂತಿಂಥಾದ್ದಲ್ಲದು.. ಸಿವನ ಕಣ್ಣಾಗಿನ ಬೆಂಕೀನೇ ಖರೆ.

ಹರದಾರಿಗಳು ಬೆಂಕೀ ಚೆಂಡಿನ ಕಾಲಕೆಳಗೆ ಸರಿದದ್ದು ಗೊತ್ತೇ ಆಗಿರಲಿಲ್ಲ. ಸೂರ್ಯನ ಎಲ್ಲಾ ಶಕ್ತಿನೂ ಇಲ್ಲೇ ಬೀಸಿ ಒಗದಂಗ ಬಂದು ಬಡಿಯುತ್ತಿತ್ತು ಬಿಸಿಲು. ನೀರಿನ ಸಲುವಾಗಿ ಹುಚ್ಚೆದ್ದು ಹೋಗಿರುವ ಈ ಹದನೈದು ಗಂಡಾಳಿನ ಗುಂಪಿಗೆ ಅದರ ಲೆಕ್ಕವೇ ಇಲ್ಲ. ಇದ್ದದ್ದೊಂದೇ ಬಾನಾತಿ, ಸರಪಂಚ ಮತ್ತ ಗೌಡ ಇಬ್ಬರೂ ಈಗ ತಮಗೆ ಸಿಗಬೇಕು.

” ಉಂಡು ನಿದ್ದೆ ಹೊಡೀತೀರೇನ್ರೀ ಸರಪಂಚರ, ಹೊರಗ ಬರ್‍ರಿ ನಿಮಗೂಡಾ ಮಾತಾಡೂದೈತಿ" ಮಾದೇಶನ ದನಿಗೆ "ಎಲಾ ಇವರ..ಸದಾ ಬಂದರ ಮೆಟ್ಟು ಹೊರಗೇ ಬಿಟ್ಟು ಏನಂತೀರಿ ಅಪ್ಪಾವ್ರ " ಅಂತ ಬಗ್ಗುತ್ತಿದ್ದ ಈ ಮಂದಿ ..ಏನಾತೀಗ? 'ಅನಿಸಿ ಜಂಬಣ್ಣ ಗೂಟಕ್ಕೆ ಸಿಗಿಸಿ ಇಟ್ಟಿದ್ದ ರುಮಾಲು ತೆಗೆದು ತಲೆಗಿಟ್ಟುಕೊಂಡು ಹೊರಗೆ ಬಂದು 'ಯಾಕೋ ಬಿಸಲಾಗ್ಯಾಕ ನಿಂತೀರಿ ಬರ್‍ರಿ ಒಳಗ" ಎಂದರು.

"ಇಲ್ರೀ ಒಳಗ ಬರಲಿಕ್ಕೆ ಬಂದವರಿ ನಾವು..."

'ಮತ್ತ ಅಲ್ಲಿಂದೇ ಹೊಳ್ಳಿ ಹೋಗಲಿಕ್ಕೆ ಬಂದೀರೇನು...ಹೋಗ್ರಿ ಹಂಗಾದ್ರ

"ನಮಗ ನ್ಯಾಯ ಕೊಡಸೀ, ಒಳಗ ಬರ್ತೀವಿ" ಬಸಪ್ಪ ಆದಷ್ಟು ಶಾಂತವಾಗೇ ಹೇಳಿದ.

"ಯಾಕ್ರಲೇ ನಿಮಗೇನು ಅನ್ಯಾಯಾತೀಗ" ಅವರ ಕೊಂಕಿನ ಹಿಂದಿರಬಹುದಾದ ಕಾರಣದ ಸುಳು ಹಿಡಿಯುವ ಚಕ್ರ ತಲೆಯೊಳಗೆ ತಿರುಗಿತ್ತವರಿಗೆ.

"ಮಲೀ ಚೇಪೂ ಕೂಸಿನಂಗ ಯಾಕ ಮಾತಾಡ್ತೀರಿ ಸರಪಂಚರ...ನಮಗ ಈ ಕೆರೀ ನೀರು ಯಾಕ ನಿಂದರಿಸೀರಿ ಅದನ್ನ ಮದಲ ಹೇಳಿ"

ಜಂಭಣ್ಣ ವಿಚಾರ ಮಾಡಿ "ನೋಡ್ರೆಪಾ ಇದೆಲಾ ನಂದೊಬ್ಬನ ಮಾತಲ್ಲ, ಇಡೀ ಊರ ಮಂದಿ ಕೂಡಿಕೊಂಡು ಮಾಡಿದ ನಿರ್ಣಯಾ.."

"ಅದ ಮಾತು ಕೇಳಲಿಕ್ಕೆ ಬಂದೀವಿ ನಾವು...ಇದ್ದಕ್ಕಿದ್ದಂಗ ನಮಗೆ ನೀರಿಲ್ಲ ಅಂದರ ನಾವೆಲ್ಲಿಗೆ ಹೋಗೂಣು? ಸುತ್ತ ಮುತ್ತ ಇಪ್ಪತ್ತ ಹರದಾರಿ ನೆಲಾ ಎಲ್ಲ ಸುಟ್ಟು ಮರಭೂಮಿ ಆಗಿಲ್ಲೇನು?” ರುದ್ರ ಎಗರಿ ಬಿದ್ದು ಒದರಿದ.

ಇಷ್ಟೊತ್ತಿಗೆ ಜಂಭಣ್ಣನ ಅಂಗಳಕ್ಕೆ ಅಲ್ಲಿ ಊರಿನ ಹತ್ತು ಮಂದಿ ಬಂದು ತುಂಬಿಕೊಂಡಿದ್ದರು. ಇವರು ಧಡಾಧಡಾ ಉಕ್ಕರಿಸಿ ಬಂದಂಗ ಏರೇರಿ ಬಂದ ಸುದ್ದಿ ಹಬ್ಬಲು ತಡ ಆಗಿರಲಿಲ್ಲ.

ಇವರೆಲ್ಲಾ ಬರಬಹುದು ಎನ್ನುವುದನ್ನು ಅವರೂ ಲೆಕ್ಕ ಹಾಕೇ ಇದ್ದರು.

"ಅದಕ್ಕೆ ನಾವೇನು ಮಾಡೂಣು ನೀವು ಹಗಲೂ ರಾತ್ರಿ ನೀರೊಯ್ದು ಕೆರೀ ಖಾಲೀ ಮಾಡಿದರ ನಾವೆಲ್ಲಾ ನಿರಡಿಸಿ ಸಾಯಬೇಕೇನು?" ಅದೇ ಗುಂಪಿನಿಂದ ಸಿಡಿದು ಬಂದಿತ್ತೊಂದು ದನಿ.



ಹಿಂದೆ ತಿರುಗಿ ನೋಡಿದವರಿಗೆ ಕಣ್ಣಿಗೆ ಬಿದ್ದವನು ರಾಜಾ. 'ಇಂವಾ ಯಾವಾಗ ಬಂದ? ಅಂದುಕೊಳ್ಳುತ್ತಲೇ ನೋಡಿದವರಿಗೆ ಇವ ರವೀ ತಮ್ಮ, ಅವನ ಹಂಗೇ ಒಂದಿಷ್ಟು ಸಾಲೀ ಪಾಲೀ ಕಲಿತಿದ್ದಕ್ಕೆ ಈಗ ತಮಗ ಮಾತಾಡೂ ಧೈರ್ಯಾ ಬಂತೇನು ಇವಗ?' ಅನಿಸಿಬಿಟ್ಟಿತು. ಸಾಲದ್ದಕ್ಕೆ ಅವನ ಭುಜದ ಮ್ಯಾಲೆ ರವೀ ಕೈ ಇಟ್ಟು ಬಾಜೂಕೇ ನಿಂತಿದ್ದ, ತಮ್ಮ ಮಾತು ಖರೇ ಅನ್ನುವ ಹಾಗೆ,

"ನೀವು ಹೋಗಿ ನಿಮ್ಮ ಎಮ್ಮೆಲ್ಲೇನ್ನ ಹಿಡದು ಸರಕಾರಕ್ಕೆ ಝಾಡಸೀ ಬಂದು ನಿಮ್ಮೂರಿಗೆ ಬೋರ್ ಭಾಂವೀ ಹಾಕಿ ಕೊಡಲಿ...ಅದನ್ನ ಬಿಟ್ಟು ಇಲ್ಲಿ ಧಾಂದಲೀ ಹಾಕ್ಲಿಕ್ಕೆ ಬಂದೀರೇನು?"

ಎದೀಗೇ ಒದ್ದಂಗ ಬಂದ ಮಾತು! ರುದ್ರ ಕೆರಳಲಿಕ್ಕೆ ತಡಾ ಇರಲಿಲ್ಲ ಆದರ ಬಸಪ್ಪ ಕೈ ಅಡ್ಡ ಹಿಡಿದ,

'ಅಲ್ಲರೀ ಗೌಡರ, ನಾವೇನು ಸರಕಾರಕ್ಕೆ ಹೋಗಿಲ್ಲೇನು? ನೂರು ಸರೆ ಎಡತಾಕೀವಿ, ಯಾರ್ಯಾರನ್ನ ಭೇಟ್ಯಾಗಬೇಕು ಎಲ್ಲಾನೂ ಮಾಡೀವಿ ಏನ್ ಮಾಡ್ಯಾರಂತೀರಿ? ನಾಕೆಂಟ ಆಫೀಸರ್ ಬರತಾರ ನೆಲಾ ಅಳದು, ದಿಕ್ಕು ಪಕ್ಕು ನೋಡಿ..ಹಾಳೀ ತುಂಬ ಪ್ರಶ್ನೆ ಕೇಳಿ ಏನೋ ಬರಕೊಂಡು ನಡೆದುಬಿಡ್ತಾರೆ.. ಮುಂದೇನದ? ಏನೇನಿಲ್ಲ..ಅವು ಕೊಟ್ಟಿದ್ರೆ ನಾವು ಇಲ್ಲಾ ಕ ಬರತಿದ್ದಿವಿ?" ಇದ್ದದ್ದರಲ್ಲೇ ಸಮಾಧಾನ ತೊಗೊಂಡು ಆಡಿದ ಮಾತು.

"ನಿಮ್ಮ ಮೈಯಾಗ, ಮುಕಳ್ಯಾಗ ದಮ್ಮಿಲ್ಲ ಅಂತ ಒಪ್ಪರಿ ಮದಲ...ನೂರು ಬಿಟ್ಟು ಎರಡ ನೂರು ಸರೆ ಹೋಗಬೇಕಾಗಿತ್ತು.... ಹಲ್ಲಿನ ಸಂದಿಯೊಳಗ ಸಿಕ್ಕ ತಂಬಾಕಿನ ಕಡ್ಡಿ ಇನ್ನೊಂದು ಕಡ್ಡಿಯಿಂದ ಚುಚ್ಚಿ ತೆಗೆಯುತ್ತ ಚಂದ್ಯಾ ಮಾತಾಡಿ ಇವರತ್ತ ತಿರಸ್ಕಾರದ ನಜರು ಬೀರಿದ.

ಮೈಯಿಡೀ ಉರಿಯಿತು ರುದ್ರನಿಗೆ ತಮ್ಮನ್ನ ಅಣಗಸತಾನ ಇಂವಾ, ತಮ್ಮ ರಕ್ತಕ್ಕೇ ಪ್ರಶ್ನೆ ಹಾಕ್ತಾನ...ಕುಡುಕ ಬೋ...ಮಗಾ..

"ನಾಲಿಗೀ ಬಿಗೀ ಹಿಡದು ಮಾತಾಡು ಚಂದ್ಯಾಭೂಮಿತಾಯಿ ಆಕಾಸಪ್ಪ ಒಂದಾಗಿ ಗಂಗಾಮಾಯಿ ಇಳದು ಬರತಾಳ ಇಲ್ಲಿಗೆ, ಆಕೀ ಕೊಟ್ಟ ನೀರು ನೀವಷ್ಟೇ ಉಂಡು ಮುಗಸವೇನು? ನಿಮ್ಮೂರ ದಂಡೀ ಕೆರೀ ಹೌದು, ಆದರ

ಆಚೇಕಡೆ ನಮ್ಮೂರಿಲ್ಲೇನು? ಎರಡು ಹರದಾರಿ ಅಲ್ಲಿದ್ರೇನು? ಇಲ್ಲಿದ್ರೇನು? ನಮ್ಮ ದನಾ ಕರಾ, ಹೆಂಡ್ರು ಮಕ್ಕಳು ಜೀವ ಅಲ್ಲೇನು? ಅವು ಬದಕಬ್ಯಾಡೇನು? ನಮಗೇನು ನೀರಿಲ್ದ  ಸಾಯಂತೀರೀ?"

ಚಂದ್ಯಾನ ಜೋಡಿ ಅಂತ ಶೇಕ್ರೂನೂ ಮಾತಾಡಲು ಬಾಯಿ ತೆರೆದಾಗ ಜಂಭಣ್ಣ ಒಂದಿಷ್ಟು ಸಂಭಾಳಿಸಲಿಕ್ಕೆ ನೋಡಿದರು "ಏ ಏ ರುದ್ರಾ..ನಿಂತ್ರಾಟಿಕೀಲೇ ನೆತ್ತಿ ಸಿಟ್ಟ ಏರಿಸಿಕೋಬ್ಯಾಡಲೆ...ಇಕಾ ಕೇಳಿಲ್ಲಿ ನಮ್ಮ ಬಾನಾತೀ ಕೆರೀ ದೊಡ್ಡದದ ಸುಳ್ಳಲ್ಲ, ಆದರ ನಾಕೊರ್ಶದಿಂದ ಮಳೀನೇ ಇಲ್ಲಂದ್ರ ಅದರ ಸೆಲೀ ಒಣಗೂದಿಲ್ಲೇನು? ಆರಾಳು ನೀರಿನ ಕೆರೀವಳಗ ಮೂರಾಳು ನೀರೂ ಉಳದಿಲ್ಲ ಈಗ ಆಕಾಶ ಹಿಂಗೇ ಸೆಟಗೊಂಡು ಕೂತ್ಯಂದ್ರ, ಇನ್ನು ಅದೂ ಖಾಲೀ ಆತಂದ್ರ ನಾವೂ ನೀರಿಲ್ದ ಪರದೇಶ್ಯಾಗಿ



ಗುಳೇ ಹೋಗಬೇಕೇನು?ನಿಮ್ಮ ಪರಿಸ್ಥಿತೀ ನೀವು ಹೆಂಗರೆ ಬಗೀಹರಿಸಿಗೋಬೇಕು ಅದ ಬಿಟ್ಟು ಇಲ್ಲದ್ದೆ ಕಾಲು ಕೆದರ್ಲಿಕ್ಕೆ ಬಂದೀರೆಲಾ ನಿಮ್ಮ ಬುದ್ದೀ ಎತ್ತಾಗಿದ್ದೀರಿ?' ಅಂದದ್ದು ಬಾಣ ಬಂದ ಹಾಗೆ ಬೀಸಿ ಬಂದು ಇವರೆಲ್ಲರ ಎದೆಗಳನ್ನು ತಿವಿಯಿತು.

ಇನ್ನೇನು ಮಾತಾಡೂದು, ಕೆರೀ ಅವರ ಊರಿಂದು.. ಇನ್ನೊಬ್ಬರ ನೀರಿನ ಮ್ಯಾಲೆ ತಮ್ಮ ಜಬರ್ ದಸ್ತಿ ನಡೆಯುವುದಿಲ್ಲ. ಬಸಪ್ಪ ಅವಡುಗಚ್ಚಿದ. ಆದರ ಸುಮ್ಮನ ಮಾರಿ ಮುಚ್ಚಿಕೊಂಡು ಹೊರಳಿ ಹೋದರೆ 'ದಮ್ಮಿಲ್ಲದ ಮಂದಿ' ಅಂತ ಅನಿಸಿಕೊಂಡದ್ದು ಖರೆ ಆದ ಹಂಗೆರ... , ಹತಾಸೆ- ನಿರಾಸೆ ಧುಮ್ಮಿಕ್ಕಿ ಬಂದು ಮುಂದೇನು? ಎಂಬ ಪ್ರಶ್ನೆ ಧುತ್ ಅಂದಿತು. ಮೊದಲೇ ಮುಂಜಾನಿಂದ ಖಾಲೀ ಹೊಟ್ಟೆ, ಅದರಲ್ಲಿ ಉಗ್ರಬಿಸಿಲಿನಲ್ಲಿ ಧಪ ದಪ ನಡೆದು ಬಂದದ್ದು ಇಲ್ಲಿ ನೀರು ಸಿಗೂ ಮಾತಿರಲಿ ಈ ರಾಜಾ, ರವೀ ಒಳ್ಳೆ ಆಫೀಸರ್ ಥರಾ ಧಿಮಾಕಿನ್ಯಾಗ ಪಾಯಿಂಟ್ ಹಾಕ್ತಾರ. ಏನು ಅಸ್ತ್ರ ಅದ ಇವರ ಕೈಯಾಗ? ಕೆರೀ ನೀರು ಅಷ್ಟೇ, ಆದರ ಗಂಗಾಮಾಯಿ ನಮ್ಮೂರಿನ ಮ್ಯಾಲೆ ಕರುಣಾ ಇಡಲಾರದಾಯತಲ್ಲ..

ಇಷ್ಟೊತ್ತಿಗಾಗಲೇ ಸಂಗೂರ ಟೀಮು ಬಂದು ಗದ್ಲಾ ಮಾಡೂ ಸುದ್ದಿ ತಿಳಿದು ಬಾನಾತಿಯ ಇನ್ನೊಂದಿಷ್ಟು ಪಡ್ಡೆಗಳು ಹಿಂದೆ ನಿಂತ ಅರಿವಿನಲ್ಲಿ ಹೊರಳಿ ನೋಡಿದರೆ ತನ್ನ ಜನ ಇನ್ನೇನು ಮುಗಿಬೀಳೂಣು ಅನ್ನುವ ಧಾಟಿಯಲ್ಲಿ ಕಣ್ಣು ಕೆಂಪು, ಮಾರಿಗೆ ರಕ್ತ ಚಂದನ ರುಬ್ಬಿ ಗೊಜ್ಜಿ ಸಿಕೊಂಡವರ ಧಾಟಿಯಲ್ಲಿ ಉರಿದುರಿದು ಬೀಳತೊಡಗಿದ್ದು ಕಂಡು ಬಸಪ್ಪ ಹಿಂಸೆಗೊಂಡ.ಕಡ್ಡಿ ಕೊರದರ ಹತ್ತಿ ಉರಿಯೂ ಬಣವೀ ಇವು...!!

ಅಷ್ಟರಲ್ಲಿ, ರುಮಾಲು ತಿದ್ದಿಕೊಳ್ಳುತ್ತ ಜಂಬಣ್ಣ "ತಮಾ ಇಲ್ಲೋಡ್ರಿ" ಅಂದದ್ದು ಕೇಳಿಸಿತು, 'ಹಟಕ್ಕೆ ಬಿದ್ದು ಹುಚ್ಚುಚ್ಚು ಮಾಡಬ್ಯಾಡ್ರಿ ಹೋಗ್ರಿ, ಹೋಗಿ ಅಲ್ಲಿ ಬೆಂಗ್ಯೂರಾಗ ಶೆರೆ ಕುಡದು ಐ ಬೀ ವಳಗ ಚೈನೀ ಹೊಡಕೋತ ಕೂತಿರ್ತಾನಲಾ ನಿಮ್ಮ ಎಮ್ಮೆಲ್ಲೆ ಅವನ ಕೊಳ್ಳಪಟ್ಟಿ ಜಗ್ಗಿ "ಇಲೆಕ್ಷನ್ ಬಂದಾಗ ಕಾಲ್ ನೆಕ್ಕಲಿಕ್ಕೆ ಬರ್ತೀಯಲ್ಲೋ ಸೂಳೀ ಮಗನ ಈಗ ನಮಗ ನೀರಿಲ್ದೆ ಸಾಯಂತೀಯೇನು ಅಂತ ಕೇಳಿ ಹೋಗ್ರಿ...ಹೋಗ್ರಿ.."

ಈ ಮಾತನ್ನು ಜಂಭಣ್ಣ ಸಮಾಧಾನ ಮಾಡ್ಲಿಕ್ಕೆ ಆಡಿದ್ದಾದರೂ ಅದು ಮೆಟ್ಟು ಶಾಲಿನೊಳಗೆ ಸುತ್ತಿ ಹೊಡೆದ ಏಟಲ್ಲದೇ ಇನ್ನೇನೂ ಅಲ್ಲ ಅನಿಸಿ ಒದ್ದಾಡಿದ ಬಸಪ್ಪ, 'ಇಲೆಕ್ಷನ್ ಬಂದಾಗ ರಾಜಕಾರಿಣಿಗಳು ನಾಯಿ ಹಂಗ ಬಾಲಾ ಅಳ್ಳಾಡಿಸಿಗೋತ ಬಂದು, ಜೊಲ್ಲು ಸುರಿಸಿ ಹೋಗಿ ಈಗ ಸಾಲಿಗೊಂದು ಹೆಣಾ ಬಿದ್ರೂ ಕೇಳಾವರಿಲ್ಲ...ಈಗ ಬಾನಾತೀ ಕೆರೀ ನೀರಿಲ್ಲ ಅಂದರ ನಾಳೆ ನಾಡೆದು ಅನ್ನೂದರಾಗ ಸಾವು ಬರೂದೇನು ಹೆಚ್ಚಲ್ಲ...ಆದರೆ ಇಷ್ಟು ಜಿದ್ದು ಬಿದ್ದವರ ಮುಂದೆ ಡೊಗ್ಗಿ ಹಿಂದ ಹೊದರ ನಮ್ಮ ಸಂಗೂರಿನ ಮಾರಿಗೆ ಮಸೀ ಗೊಜ್ಜಿದಂಗ..ಆ ಮ್ಯಾಲೆ ತನ್ನ ಮಾನದ ಗತಿ?' ಸುತ್ತಲಿಂದ ಚುಚ್ಚಿದ ಸಾವಿರ ಸೂಜಿಯ ಉರಿ ತಾಳಲಾರದೆ ಬಸಪ್ಪ ಹಲ್ಲು ಕಟಗರಿಸಿ, ಹುಬ್ಬು ಗಂಟು ಬಿಗಿದು "ಇಲ್ಲೋಡ್ರಿ ನಮಗ ನೀರು ಬೇಕೇ ಬೇಕು ...ನೀವದನ್ನ ತಡಿಬ್ಯಾಡ್ರಿ ಹೇಳಿಬಿಡ್ತೀನಿ." ಅಂದ ತೀಕ್ಷ್ಮವಾಗಿ .



ಅವರ್ಯಾರ ಉತ್ತರ ಬರ್ಲಿಕ್ಕೂ ಮೊದಲು ರಾಜಾ ತೋಳೆರಿಸಿ ಜಿಗಿದು ಬಂದ.

“ಈ ಕೆರೀ ಏನ್ ನಿಮ್ಮಪ್ಪಂದೇನಲೇ ... ತಟಗು ಹನೀನೂ ಕೊಡಂಗಿಲ್ಲ ಹೋಗು.”

“ಯೇ ರಾಜ್ಯಾ..ಹೆಚ್ಚ ಜಿಗೀಬ್ಯಾಡಲೇ ...ಈಗೇ ಹೇಳಿಡತೀನಿ” ರುದ್ರ ಹೂಂಕರಿಸಿದ.

“ಸರಕಾರಕ್ಕೆ ಹೋಗೇ ಹೋಗತೀವಿ, ನಮಗ ನೀರು ಕೊಡಬೇಕಂತ ಆರ್ಡರ್ ತಂದೇ ತರತೀವಿ..”

“ಆರ್ಡರ್ ತರತಾನಂತ..ಆರ್ಡರ್ ..ಹೋಗ್ ಹೋಗಲೇ, ಅಲ್ಲೀ ತನಕಾ ಉಚ್ಚ ಕುಡೀ ಹೋಗ್ರಿ..

ಉರಿ ಹತ್ತಿ ಉರಿರುದ್ರನಾದ ರುದ್ರ...'ಹುಚ್ಚ ಸೂಳೀಮಗನ ಏನಂದ್ಯಲೇ ನಮಗ? ಉಚ್ಚೆ ಕುಡ್ಯೂಣ? ಬಾರಲೇ ನಿನ್ನ ಚಂಡೊಡದು ಒಗೀತೀನಿ..ಗಂಡ್ಸಿದ್ರ ಬಾರಲೇ..." ಅಂತ ಆಕ್ರೋಶಿಸಿದ್ದು ಆಯಾಚಿತವಾಗಿ ಸುತ್ತ ಹರಡಿ ಎಲ್ಲರ ಕಿವಿಗಳಿಗೆ ಬಿಸಿ ಔಡಲೆಣ್ಣೆ ತುಂಬಿದಂಗಾಗಿ ಅರ್ಧಾ ಕ್ಷಣ ಸಂಗೂರಿನ ಮಂದಿ ಗರಾ ಬಡಿದವರ ಹಾಗೆ ಬೆಪ್ಪಾಗಿ "ಏನಿದು..ಇನ್ನ ಹೆಂಗ ಸಂಬಾಳಿಸಲೀ ಎಂಬ ಚಿಂತೆ ಬಸಪ್ಪನನ್ನು ಕಾಡುತ್ತ ಹಿಂದೆ ಮುಂದೆ ಹೊರಳಿದರೆ ಶಂಕ್ರಾ, ಚನಕೇಶಿ ಬಂಡೂ ಮೂರು ಮಂದಿನೂ ಧೋತರ ಕಚ್ಚೆ ಗಟ್ಟಿ ಮಾಡಿ ತೋಳೇ ಏರಿಸಿದ್ದು ಕಾಣಿಸಿತು. ಕೆಂಡಾಮಂಡಲ

ಭುಗಿಲೆದ್ದು ಶಂಕ್ರ್ಯಾ ಕ್ಷಣ ತುಂಬವುದರಲ್ಲಿ ರುದ್ರನನ್ನು ತೆಕ್ಕೆ ಬಡಿದು ಎಳೆದು ಢಬಾರನೇ ಎದೆಗೆ ಗುದ್ದಿದ...ರವಿ ನಡುವೆ ಬಂದು 'ಬಿಡೋ....ಬಿಡೋ ಶಂಕ್ರಾ ಹಿಂಗೆಲ್ಲಾ ಮಾಡಬ್ಯಾಡೋ ಅಂತ ಅಡ್ಡ ನಿಲ್ಲಲು ನೋಡಿದ್ದು ಯಾವ ಉಪಯೋಗಕ್ಕೂ ಬರದೇ ರುದ್ರನ ಎದೆಗೆ ಗುದ್ದು ಬಿದ್ದೇ ಬಿಟ್ಟಿತು ಮುಂದಿನ ಕ್ಷಣ ರುದ್ರನ ಕಾಲು ಎದ್ದು ಝಾಡಿಸಿ ಶಂಕ್ರನ ಹೊಟ್ಟೆಗೆ ರಪ್ಪಂತ ಒದಿಕೆ ಬಿತ್ತು...ಮಿಕ್ಕವರು ಮದ್ದಿನ ಕುಳ್ಳಿ ಎದ್ದ ರೀತಿ ಕಿಡಿ ಕಿಡಿ ಆಗಿ ಮುಂದೆ ಬಂದರು.

ಹೌ ಹಾರಿ ಜಂಬಣ್ಣ, ಮೂಲ್ಕಿ ಗೌಡ ಸರಸರ ಕಟ್ಟೆ ಇಳಿದು ಬಂದು ಎರಡೂ ತೋಳು ಹಿಗ್ಗಿಸಿ ಅಡ್ಡ ನಿಂತು 'ಯ್ಯೋ ...ನೀವೇನು ಮನಶಾರೋ ಹೈವಾನ್ರೋ? ಹಿಂತಾ ಅನರ್ಥ ಯಾಕ ಮಾಡ್ತೀರಿ.... ಇರ್ಲಿ ಹೊಗ್ರಿ ಏನಾರೆ ಮಾಡೂಣು, ಹಿಂಗ ಬಡದಾಡಿ ಸಾಯ್ತೀರೇನು?"ಅಂತ ಇಬ್ಬರನ್ನೂ ಒತ್ತಿ ನೂಕಿದರು.

ಎದೆ ಮುಟ್ಟಿ ನೋಡಿಕೊಳ್ಳುತ್ತಿದ್ದ ತಮ್ಮನ ಮುಖ ಬಸಪ್ಪನ ಗುಂಡಿಗೆಯನ್ನು ಹಿಂಡಿ ಮನಸ್ಸಿಡೀ ಭಗ್ಗೆಂದು ಉರಿದು ಹೋಗಿ ಇತ್ತ ದೊಡ್ಡ ಗೌಡರು, ಜಂಭಣ್ಣ ಆಡಿದ ಮಾತಿಗೆ ಬೆಲೆ ಕೊಡಬೇಕೋ ಅಥವಾ ತಮ್ಮ ತಿಂದ ಗುದ್ದಿಗೆ ಉತ್ತರ ಕೊಡಬೇಕೋ ವಿಚಾರ ಮಾಡುತ್ತ ಮೊದಲೇ ರುದ್ರನ ಮೇಲೇ ಜೀವ ಇಟ್ಟವನಿಗೆ ಅವನೆದಿಗೆ ಬಿದ್ದ ಗುದ್ದು ತನಗೇ ಬಿದ್ದ ಹಾಗೆನಿಸಿ ತಮ್ಮನನ್ನು ನೋಡಿದ. ಅವನ ಕಣ್ಣಲ್ಲಿ ಬೆಂಕಿ...ಬೆಂಕಿಯಲ್ಲ ಅದು ಮುಕ್ಕಣ್ಣನ ಕಣ್ಣು!

ಈರ್ಷ್ಯ ಪ್ರತೀಕಾರ, ಸೇಡುಗಳ ನೇರ ಸಂದೇಶ ಅಲ್ಲಿದ್ದದ್ದು ಛಕ್ಕಂತ ಹೊಳೆದು "ಬರ್ರ್ಯೋ ನಡೀರಿ ಜಂಭಣ್ಣ ಹೇಳಿದ ಮ್ಯಾಲೆ ಮುಗೀತು" ಎಂದ.



ಅವನ ತಂಡ ಸ್ವಲ್ಪ ಅನುಮಾನಿಸಿದರೂ ಬಸಪ್ಪ ಹೇಳಿದ ಮೇಲೆ ಅವರು ಇನ್ನೊಂದು ಮಾತಾಡಿದವರಲ್ಲ. ಮಾತಿಲ್ಲದೆ ಹಿಂದೆ ಹೊರಳುವಾಗ ತಮ್ಮನ ಕೈ ಹಿಡಿದ ಬಸಪ್ಪನ ಕೈ ಅವನಿಗೊಂದು ಸಂದೇಶ ರವಾನಿಸಿತ್ತು. "ಈಗೇ ತಿರಿಗಿ ಬೀಳೂದು ಹುಚ್ಚುತನ...ಇದಕ್ಕೆ ತಿರಿಗೇಟು ಕೊಡಲಿಕ್ಕೆ ಇನ್ನಾ ಐವತ್ತಾಳು ಬೇಕು. ಮದಲ ಊರಿಗೆ ಹೋಗಿ ಮಂದಿನ್ನ ಕೂಡಿಸಿ ಮುಂದಿನ ಮಾತು"

ರುದ್ರ ಮನಸ್ಸಿನಲ್ಲೇ ಪ್ರತಿಜ್ಞೆ ಮಾಡಿದ, 'ಶಂಕ್ರಾನ್ನ ಕೊಲ್ಲದಿದ್ರ ನಾ ಅಪ್ಪಗ ಹುಟ್ಟಿಲ್ಲಂತ ತಿಳ್ಕೊತೀನಿ"

* * * *

ಊರ ಹೊರಗಿರುವ ಹಣಮಪ್ಪನ ಗುಡಿ ಅಂತ ಅಲ್ಲ ಅದು, ಸಂಗೂರಿನವರು ಊರ ನಡುವೆಯೇ ಅವನಿಗೆ ಗುಡಿ ಕಟ್ಟಿ ಕೊಟ್ಟಿದ್ದರು, ಸಂಗೂರಿನ ಪ್ರತಿಯೊಂದು ಆಗುಹೋಗುಗಳ ಲೆಕ್ಕ ಇಟ್ಟವನು ಅವನೇ.. ಇವತ್ತೂ ಅಲ್ಲಿಯೇ

ಕಾಯುತ್ತಿದ್ದ ಊರಿನ ಎಂಟರಿಂದ ಎಂಬತ್ತರ ಹೆಣ್ಣು ಗಂಡು, ಮುದುಕಿ ಮೂಟರಾದಿಯಾಗಿ ಹಣಮಪ್ಪನನ್ನು ಪರಿಪರಿಯಿಂದ ಬೇಡಿಕೊಳ್ಳುತ್ತ ಬಾನಾತಿ ನೀರೊಂದೇ ಇವರು ತರಲಿ..ಹನಮೇಷಾ ಎಂದು ಎದೆಯೊಳಗಿನ ಕುದಿ ಬಾಯಲ್ಲಿ ತರುತ್ತ ಕಟ್ಟೆ ಮೇಲೇ ಕಾದಿದ್ದರು.

ಇವರೆಲ್ಲರಿಗಿಂತ ಹೆಚ್ಚಿನ ಸಂಕಟ ಕಮಲಿಯದು.'ಹುಟ್ಟಾ ನೋಡಿದ ಅಣ್ಣಂದಿರು ತನ್ನ ಮನೀ ಹುಡುಗರು. ಬಸಪ್ಪ ಹಿರಿಯಂತ ಹೌದು ಸಾದಾ ಸೀದಾ ಮನ್ಯಾ, ಆದರ ಸಿಟ್ಟು ಬಂದ್ರ ದೂರ್ವಾಸ, ಇನ್ನ ರುದ್ರ ಹೆಸರಿಗೆ ಮಾತ್ರ ಅಲ್ಲ ಜಿದ್ದಿನ್ಯಾಗೂ ಕಾಳರುದ್ರ, ಬೆಂಕೀ ನವಾಬ, ಯಾರರೆ ಅನ್ಯಾರಂಟೀ ಮಾಡಿದ್ರಂದ್ರ ಸುಟ್ಟುಬಿಡೂ ಜಾತಿ..ಯಾರರೆ ಅಲ್ಲಿ ಬಾನಾತಿ ಮಂದಿ ಇವರನ್ನ ಹುಚ್ಚಿಗೆಬ್ಬಿಸಿದ್ರ  ಏನ್ ಗತೀ...ರವೀ ಅಂತೂ ಎಷ್ಟೋ ದಿವಸ ಕಣ್ಣಿಗೆ ಬಿದ್ದಿಲ್ಲ, ಅವನ ಮುಂದ ಎಲ್ಲ ಹೇಳಿ ತನ್ನ ಮನಸು ಹಗುರ ಮಾಡಿಕೊಂಡೇನಂದ್ರ ಅದೂ ನಸೀಬದಾಗಿದ್ದಂಗಿಲ್ಲ. ಶಿವ ಶಿವಾ ಇಲ್ಲಿಗೊಂದಿಷ್ಟು ಮಳೀ ಬೀಸಿದ್ದರೆ ನಿಂದೇನು ಗಂಟು ಹೋಗತಿತ್ತೋ ಯಪ್ಪಾ..ನಮಗೆಲ್ಲಾ ಯಾವ ಪಾಪ ಜೀವಕ್ಕೆ ಇಷ್ಟು ಘೋರತನ ತಂದು ಇಟ್ಟೆತೋ ."

ಬಾಯಿ ತೆರೆದಾಡಲಾಗದೇ ಒಳಗೇ ನುಂಗಲಾಗದೇ ಸಂಕಟ ಹೆಚ್ಚಾಗಿ ಕಳವಳಿಸಿದಳು ಕಮಲಿ.

ರಣಗುಟ್ಟೆ ಹಾರುವ ಹದ್ದುಗಳು ಬಿಸಿಲಿಗೆ ಬೆದರುವುದಿಲ್ಲ. ಕೆಳಗೆ ಹಾಸಿಕೊಂಡಿರುವ ನೆಲವಿಸ್ತಾರದ ಕಡೆಗೆ ಆಕಾಶದಿಂದಲೇ ಕಣ್ಣಿಟ್ಟು ಆಗೊಮ್ಮೆ ಈಗೊಮ್ಮೆ ಸತ್ತುಬಿದ್ದ ದನಕರ, ನಾಯಿ, ಹಂದಿ, ನರಿ ಕುರಿಗಳ ಮಾಂಸಕ್ಕೆ ಹೊಟ್ಟೆ ತುಂಬದೇ ಇನ್ನೂ ದೊಡ್ಡ ಮೃಷ್ಟಾನ್ನಕ್ಕಾಗಿ ಹೊಂಚು ಹಾಕಿವೆ. ಹಾಕುತ್ತ ಅಲ್ಲೇ ಸುತ್ತಿವೆ. ನೀರಡಿಸಿ ಮೈಲುಗಟೇ ತಿರುಗಿದ ಮೂಕ ಪ್ರಾಣಿಗಳು ತಿರುಗಿ ಮನೆಯೋ ಕಾಡೋ ಸೇರುವ ಮೊದಲೇ ಜೊಲ್ಲು,ಬುರುಗು ಕಾರಿ ಸತ್ತು ಬೀಳುತ್ತವೆ. ಊರಿಗೂರೇ ಎದೆಯೊಡೆದುಕೊಂಡಾ" ಇಷ್ಟು ದಿನ ಮನೆಯೊಳಗಿನ ಮೂಕಜೀವಗಳಿಗೆ ಒಂದೆರಡು ಕೊಡ ನೀರು ಕೊಟ್ಟಿತ್ತು ಬಾನಾತಿ ಕೆರೆ..ಈಗ?

ಅದೇ ಯಕ್ಷಪ್ರಶ್ನೆ!!

ಬಸಪ್ಪನ ಮುಖ ಪ್ರಶ್ನೆ ಕೇಳ್ದೇನೇ ಇವರಿಗೆ ಎಲ್ಲಾ ಉತ್ತರ ಕೊಟ್ಟಿತ್ತು, ಅವನ ಮನಸ್ಸಿನ ಅನುಮಾನ ಸ್ಪಷ್ಟವಾಗಿ ಒಡೆದು ಕೂತಿತ್ತು ಕಣ್ಣುಗಳಲ್ಲಿ ತಮ್ಮ ಸಮಾಧಾನಕ್ಕಾಗಿ ಜಂಬಣ್ಣ 'ಏನಾರೆ ಮಾಡೂಣು ಹೋಗ್ರೀ" ಅಂದು ಕಳಿಸಿದ್ದು ಎಷ್ಟು ಖರೆ? ಎಂಬತ್ತು ದಾಟಿ ಹೋಗಿರುವ ಅವರ ಮಾತು, ಮೈಯಲ್ಲಿ ದಮ್ಮೆ ಇಲ್ಲದೆ ಶಾಸ್ತ್ರಕ್ಕೆ ಗೌಡನಾಗಿರುವ ಮೂಲ್ಕಿಯಜ್ಜ ಇವರ ಮಾತು ಉಳದ ರಾಕ್ಷಸರಂಥಾ ಭಂಟರು ನಡೀಗೊಡಲಿಕ್ಕಿಲ್ಲ ...ಅಂದರೆ ನಮ್ಮೂರಿಗೆ ನೀರಿಲ್ಲದ ಘೋರ ಕಟ್ಟಿಟ್ಟ ಮಾತು..ಇನ್ನೇನು ಹಂಗಾದ್ರ??

'ಕಾಯಿ ಹಣ್ಣಾಗಿಲ್ಲ' ಎಂಬ ಇವರ ಅನುಮಾನ ಖರೇ ಆಗಿತ್ತು. ದುಡು ದುಡು ಇವವರೆಲ್ಲರ ಸುತ್ತುವರಿಯಿತು ಸಂಗೂರು.

“ಏನಂತಾರ ಅವರು?”

ರುದ್ರ, ಬಸಪ್ಪ ಮಾತಾಡಲಿಲ್ಲ. ಕಚ್ಚಿದ ಹಲ್ಲು, ಬಿಸಿಯೇರಿ ಉಸಿರಾಡಿ ಹಿಗ್ಗಿದ ಮೂಗಿನ ಹೊಳ್ಳೆ ಅರ್ಧ ಕಥೆ ಹೇಳಿದ್ದುವು.

ದುಮದ್ರಿ ಅಜ್ಜ ಸಹನೆಯಿಂದಲೇ ಕೇಳಿದ "ಏನಂತಾರ್ರೆಲೇ, ನೀರು ಕೊಡಂಗಿಲ್ಲಂತೇನು ಅವರು?”

ಒಂದೇ ಗಳಿಗೆಯೊಳಗೆ ಸುದ್ದಿ ಬಿಚ್ಚಿಕೊಂಡು ರುದ್ರನ ಎದೆಗೆ ಬಿದ್ದ ಗುದ್ದು ಸಂಗೂರಿನ ಎದೆಗೇ ಬಂದು ಬಿದ್ದಿತ್ತು ಇದನ್ನ ಸಹಿಸೂದು ಅಂದ್ರ ಬಳೀ ತೊಟ್ಟವರ ಮಾತು. ಗಂಡಸ್ತನ ಸತ್ತವರ ಕತಿ...

ಬಾನಾತಿಯವರ ಸೊಕ್ಕು, ಶಂಕ್ರ್ಯಾ ತೋರ್ಸಿದ ಧಿಮಾಕು, ಅಳಬುರುಕ ಸರಪಂಚ! ಇನ್ನೇನು ಎಂಬ ಸಂಕಟ... ಎಲ್ಲಕ್ಕೂ ಭೂತಾಕಾರ ಬಂತು.

“ಇನ್ನ ಇವರನ ಬಿಟ್ರ ನಾವು ಸತ್ತಂಗೇ ಲೆಕ್ಕ, ನೀರಿಲ್ಲದಿದ್ರ ಉಚ್ಚೆ ಕುಡೀರಿ ಅಂತಾರಲಾ ಸೂ...ಮಕ್ಕು, ನೀರಲ್ಲ ಅವರ ರಕ್ತಾ ಕುಡೀತೀವಿ ಅಂತ ತೋರಿಸೇಬಿಡೂಣು"

ಗುಡಿಕಟ್ಟೆಯ ಹಿಂದೆ ಬೆನ್ನು ಹಚ್ಚಿ ನಿಂತ ಕಮಲಿಯ ನೆತ್ತಿಯಿಂದ ಕೆಳತನಕ ಬೆವರಿಂದ ತೋಯ್ದು ತಪ ತಪ ಆಯಿತು. "ಎಂಥಾ ಸೇಡಿಗೆ ಬಿದ್ರಲ್ಲ ಇವರು..ಏನೇನು ಮಾತಾಡಲಿಕ್ಕೆ ಹತ್ಯಾರ...ಕೊಡಲಿ, ಕುಡುಗೋಲು, ಹಾರೆ, ಮಚ್ಚು ಎಲ್ಲ ತಯಾರು ಮಾಡಿಕೋರಿ ಅಂತಾರಲ್ಲ...ಅದರಾಗ ಇಂದ ಕರೀಕೆಟ್ಟ ಅಮಾಸಿ... ಅಮಾಸಿ ಅಂದ್ರ ಅಂಥಾ ಇಂಥಾದ್ದಲ್ಲ, ಘೋರ ತರೂ ದಿನ ಅಲ್ಲೇನು..

ಕಮಲಿ ಕ್ಷಣದೊಳಗೆ ನಿರ್ಧಾರ ಮಾಡಿದಳು. 'ಇದನ್ನ ನಾ ತಡೀಬೇಕು...ತಡೀತೀನಿ, ರವೀ..ನಿನಗೇನೂ ಆಗಬಾರದು...ಆಗಂಗಿಲ್ಲ."

ಮೆತ್ತಗೆ ಹೆಜ್ಜೆ ಸರಿಸಿ ಗುಡಿ ಹಿಂದಿನಿಂದ ಮರೆಯಾದಳು. ಮೈಯೊಳಗಿನ ಶಕ್ತಿ ಎಲ್ಲಾನೂ ಕಾಲಿಗೆ ಇಳಿಸಿಕೊಂಡು ಓಡಿದಳು. ಕೆರೆಯ ಏರಿಗುಂಟ ಹೋದರೆ- ಕೆರೆ ಅಂದ್ರೇನು ಒಣಗಿ ಕರಟಿ ಹೊಪ್ಪಳೆದ್ದು ನಿಂತ ನೆಲದ ನಡುನಡುವಿನ ಬಂಡೆ ಕಲ್ಲುಗಳ ಹಾದಿಯದು... ಕಂಟಿ ಮುಳ್ಳುಗಳು, ಅಲ್ಲಿ ಹಾವು, ಚೇಳು, ಹುಳ ಹುಪ್ಪಡಿ ಸುಳಿದಾಡುವ



ದಾರಿ, ಅದಕ್ಕೆ ಜನ ಅಲ್ಲಿಂದ ದಾಟುವುದನ್ನು ತಪ್ಪಿಸಿ ಓಡಾಡುತ್ತಾರೆ..ಅಲ್ಲಿಂದಲೇ ಓಡಿದಳು ಕಮಲಿ..ಯಾಕೆಂದರೆ ಅದೇ ದಾರಿ ಹಾದು ಹೋದಾಗ ಮಾತ್ರ ಒಂದಿಷ್ಟು ಅಂತರ ಕಡಿಮೆ ಬಾನಾತಿಗೆ, ತಲೆಯೆತ್ತಿ ಆಕಾಶ ನೋಡಿದರೆ ಸೂರ್ಯ ಪಶ್ಚಿಮಕ್ಕೆ ಇನ್ನೇನು ಇಳೀಬೇಕು ಅಷ್ಟೇ. ಚೂಪುಗಲ್ಲಿನ ತುದಿಗಳು ಬರಿಗಾಲಿಡೀ ಚುಚ್ಚಿ ತಿವಿದು ಮಾಡಿದ ನೋವು ಗಾಯ ಲೆಕ್ಕಿಸದೇ ಓಡಿದಳು.ಮೈ ಮನಸ್ಸಿಡೀ ದಿಗಿಲು ಭುಗಿಲು'ಏನಾರೆ ಮಾಡಿ ಈ ಘಾತಾ ತಪ್ಪಸಬೇಕು ದೆವ್ವ ಹಿಡದಂಗಾಗದ ತನ್ನ ಅಣ್ಣಂದಿರಿಗೆ..ರುದ್ರ ಮದಲೇ ಶಿವನ ಮೂರನೇ ಕಣ್ಣಿಂದ ಹುಟ್ಟಿಬಂದವನಂಗ ಮಾಡತಾನ..ಅದರಾಗ ಈ ಬಸಪ್ಪ ಅವಂಗ ಬೆಂಬಲ ನಿಂತರ ಇನ್ನ ಗತೀ..ರವಿ.. ಅಯ್ಯೋ ರವೀಗೇನರ ಆದರ ಏನು ಮಾಡ್ಲಿ ನಾ...ಸಂಗೂರಿನ ಮಂದೀ ಎತ್ತಿ ಹೊಂಟರೂ ಹಾರಿ ಗುದ್ದಲೀ ಏಟಿಗೆ ಯಾರ್ಯಾರ ರಕ್ತ ಹರೀಬಹುದು? ಇಲ್ಲಾ..ಇಲ್ಲಾ.. ಈ ರಕ್ತದ ಹೊಳೀ ತಡಿಯೂದು ತನ್ನ ಜನ್ಮದ ರಿಣಾ ಆದರೂ ಚಿಂತಿಲ್ಲ ...ಈ ರಿಣಾ ತೀರಸ್ತೀನಿ"

ಓಡಿ ಓಡಿ...ಓಡಿ ಮೂಗಿನುಸಿರು ಬಂದಾಗಿ ಬಾಯಿಂದ ಧಾಪದ ಏದುಸಿರು ಹೊರಬೀಳುತ್ತಿತ್ತು..ಆದರೂ ಸೆರಗಿನಂಚು ಬಾಯಿಗೊತ್ತಿ ಒಣ ಧೂಳಿನ ನೆಲಸರಿಸಿ ಓಡಿದಳು ಕಮಲಿ. ಭಯದಿಂದ ಹರಿದ ಬೆವರಿಗೆ ತೊಟ್ಟ ಕುಪ್ಪಸ ಬೆನ್ನು ಎದೆಗಂಟಿ ನಾರತೊಡಗಿತ್ತು.

* * **

ರವಿಯ ಕಣ್ಣು ಹಿಗ್ಗಿ ಅತ್ತಲೇ ನೆಟ್ಟವು, ಯಾರಿವರು? "ಅಯ್ಯೋ ..ಕಮಲಿ... ಯೇ ..ಏನಿದು ಯಾಕ? ಕಮ್ಮಿ ಏನಾತು ಇದ್ಯಾಖಿಂಗ ಓಡಿ ಬಂದೀ..ಇದೇನವಸ್ಥೆ ನಿಂದು.."

ಸುಧಾರಿಸಿಕೊಳ್ಳಲಿಕ್ಕೆ ಟೈಮಿಲ್ಲ ಕಮಲಿಗೆ...ತುದಿಯೊತ್ತಿ ಏರೇರಿ ಬಂತು ಉಸಿರು. "ರು...ರು..ರುದ್ರ, ಆ ಆ ಮತ್ತ..ಮಾದೇಶ, ಬಸಪ್ಪಣ್ಣ ...ಸಂಗೂರಿನ ನಾಕಿಪ್ಪತ್ತು ಆಳು ತೊಗೊಂಡು ಹೊಂಟಾರಿಲ್ಲಿಗಿ..ಕೈಯಾಗ

ಹಾರಿ..ಬಡಿಗಿ., ಕುಡುಗೋಲು, ...ಕೊಡ್ಲಿ ಹಿಡದಾರ ನೀ..ನೀವು ನೀರ್ ಕೊಡಂಗಿಲ್ಲಂದ್ರ ನಿಮ್ಮ ತಲೀ ಒಡದು ಕೆಡಿವಿ ತೊಗೋತಾರಂತ...ಹಾ..ಹಾರಿ ಮಚ್ಚು ..ಎಲ್ಲಾ ತಂದಾರ..

ಕಮಲಿಯ ಮಾತಿನೊಳಗಿನಕ್ಕಿಂತ ಮುಖದಲ್ಲಿ ಅಷ್ಟೊತ್ತಿದ ಭೀತಿ ಪರಿಸ್ಥಿತಿಯ ಭೀಕರತೆಯನ್ನು ಒಡೆದು ಹೇಳಿತು.. ರವಿಯ ಹಿಂದೇ ಕೂತಿದ್ದ ಬಾಳಪ್ಪ, ಚನಕೇಶಿ.,ಸಂಗೋಬಾ, ರಾಜ್ಯಾ ದಂಗು ಬಡೆದಂತಾದರು.. ಏನೋ ಸರಪಂಚರು ಮಾತಾಡಿ ಅವರನ್ನ ಬೆನ್ನು ಕೈಯಾಡಿಸಿ ಕಳಿಸಿದರು ಅಂತ ನಿರುಮ್ಮಳ ಆಗಿದ್ದ ತಮಗೆ ಇಂಥ ಪರಿಣಾಮದ ನಿರೀಕ್ಷೆ ಇರಲಿಕ್ಕೆ ಸಾದ್ಯವೇ ಇಲ್ಲ.. ತಲಿ ಕೆಟ್ಟು ಅನರ್ಥದ ಹಾದಿ ಹಿಡದಾರ ಸಂಗೂರ ಮಂದಿ.. ಇಕೀ ಹೇಳೂದು ನೋಡಿದರ ಹೆಚ್ಚು ಟೈಮೂ ಇದ್ದಂಗಿಲ್ಲ..

ಎಪ್ಪತ್ತರ ಬಾಳಪ್ಪ ಚುರುಕಾಗಿ ತಲೆ ಓಡಿಸಿದ.. "ಅಪಾ.. ಈ ಬುದ್ಧಿಗೆಟ್ಟ ಮಂದಿ ಏನು ಮಾಡ್ಯಾರು ಹೇಳಲಿಕ್ಕೆ ಆಗೂದಿಲ್ಲ.. ಚನಕೇಶೀ, ಸಂಗ್ಯಾ ನೀವು ಇಕಾಡಿಂದ ಹಾಸಿ ಮದಲ ಗೌಡ್ರು, ಸರಪಂಚರಿಗೆ ಸುದ್ದಿ ಕೊಡ್ತೀ. ರಾಜ್ಯಾ ನೀ ಗಾಡಿ ತೊಗೊಂಡು



ತಾಲೂಕಿಗೆ ಹೋಗಿ ಠಾಣೆದಾಗ ಈ ಸುದ್ದಿ ಕೊಡು, ರವೀ, ಈ ಹುಡಿಗಿ ತನ್ನ ಜೀವದ ಹಂಗು ಬಿಟ್ಟು ಇಲ್ಲೀತನಕಾ ಓಡಿ ಬಂದಾಳ ಪೋರಿ..ಆಕೀಗೆ ಏನೂ ಆಗಬಾರದು..ನೀ ಹೋಗಿ ಕಮಲಿನ್ನ ಸುರಕ್ಷಿತ ಅವರ ಊರಿಗೆ ಮುಟ್ಟಿಸಿ ಬಾ.. ಇಲ್ಲಿಂದು ನಾವು ನೋಡಿಕೋತೀವಿ.."

ರವೀ ಕಮಲಿ ಒಬ್ಬರಿಗೊಬ್ರು ಮನಸು ಕೊಟ್ಟವರು ಎಂದು ಅಲ್ಲಿನ ಕೆಲವರಿಗೆ ಗೊತ್ತಿದ್ದ ಸುದ್ದಿ, ಪೋರಿ ತಮ್ಮನ್ನೇ ನಂಬಿ ಬಂದಾಳ ..ಪಾಪ ಅವರಿಬ್ಬರ ಜೀವನ ಕತ್ತರಿಸಿ ಹೋಗಬಾರದು.. ಮೂವರೂ ಹುಡುಗರು ಇಲ್ಲಿಗೆ ಬೆನ್ನು ಹಾಕಿ ಊರಿನ ಕಡೆ ನಡೆದರು..

ರವೀ ದಿಗಿಲಿನಿಂದಲೇ "ಹೆಂಗರೆ ಮಾಡಿ ಘಾತಾ ತಪ್ಪಸ್ರೆಲೆ" ಅಂದ.

"ಕಮಲೂ ಇಕಾ.. ನೀರು ಕುಡೀ ಹಿಂಗ್ಯಾಕ ಬೆದರ್ತೀ ನಾ ಇದ್ದೀನೆಲಾ.. ರವಿಯ ಮಾತು ಇವಳ ಕಣ್ಣೀರಿನ ಕಟ್ಟೆ ಒಡೆಯಿತು.. ಕಾಲು ಸೋತು ಸತ್ತಂತೆ ಅವನ ಭುಜಕ್ಕೆ ಜೋತು ಬಿದ್ದಳು ಹುಡುಗಿ.. ಪ್ರವಾಹವಾಗಿ ಹರಿಯಿತು ಅವಳ ಮನದೊಳಗಿನ ಅಂಜಿಕೆ. ಅವನ ಮನಸ್ಸಿಡೀ ಚಿಂತೆಗಳ ಗಂಟು ಕಗ್ಗಂಟು.. ಈ ವರ್ಷ ಮಳಿ ಆದರ ಕಮ್ಮಿ ಕೈ ಹಿಡೀಬೇಕಿತ್ತು ತಾನು... ಹಂಗ ಬಸಪ್ಪ ನ್ಯಾಯಾ ನ್ಯಾಯ ಇಲ್ಲದ ಮನಶಾ ಏನಲ್ಲ, ತಾನು ಕೇಳಿದರೆ ಕಮಲೀನ ತನಗ ಕೊಡಲಿಕ್ಕೆ ಇಲ್ಲ ಅಂತಿರಲಿಲ್ಲ... ಆದರ ಈಗ? ಸಧ್ಯ ಇಕಿನ್ನ ಸುರಕ್ಷಿತ ಊರು ಮುಟ್ಟಿಸಿ ಬಂದು ಪರಿಸ್ಥಿತಿ ಕೈ

ಮೀರಥಂಗ ಏನರೆ ಮಾಡ್ಲಿಕ್ಕೆ ಬೇಕು.. ಏನು ಮಾಡ್ಲಿ? ಅವನ ಮನ ಮಿಡಿಯಿತು. ಬಾಚಿ ಎದೆಗೊತ್ತಿಕೊಂಡು ಮುಖದ ಮೇಲೆ ಕೈಯಾಡಿಸಿ ಸಮಾಧಾನಿಸಿದ.

"ಇಕಾ.. ಕಮಲಾ. ಘಾಬರಿ ಆಗಬ್ಯಾಡ.. ನೀರು ಕೊಡಬ್ಯಾಡ್ರಿ ಅಂತ ಈ ಶಂಕ್ರ್ಯಾ ಕಿಡಿ ಹಚ್ಚಿ ಇಲ್ಲಿಗೆ ತಂದಿಟ್ಟಾನ ಪರಿಸ್ಥಿತೀ...ಇರ್ಲಿ ಶಿವಾ ಇದ್ದಾನ ಏನೂ ಆಗೂದಿಲ್ಲ, ಅಳಬ್ಯಾಡ ಸುಮ್ಮಿರು ಹುಡಿಗೀ, ನನಗ ನೀ ಅತ್ತರ ಸಂಕಟಾಗತದ ..ಬಿಡು, ನಡಿ ಇಲ್ಲಿಂದ ಮದಲ ಹೊಂಡೂಣು, ಗುಡ್ಡದ ಹಿಂದಿನ ಹಾದಿ ಹಿಡದು ಸಂಗೂರಿಗೆ ಹೋಗೂಣು ಅಲ್ಲಿ ಯಾರೂ ಬರಲಿಕ್ಕಿಲ್ಲ.."

ತನ್ನ ಮುಖದ ಕೆಳಗೆ ತನ್ನ ಬೊಗಸೆ ಇಟ್ಟ ರವಿಯನ್ನೇ ದಿಟ್ಟಿಸಿ ನೋಡಿದಳು ಕಮಲಿ, ಅವನ ಬೊಗಸೆಯಿಡೀ ತುಂಬಿತು ಅವಳ ಕಣ್ಣೀರು. ತನಗ ಇಷ್ಟು ಸಮಾಧಾನ ಮಾಡೂ ಇವನ ಮುಖಾ ಯಾಕಿಷ್ಟು ಕಂಗಾಲಾಗೇದ? ಏನು ಅನಾಹುತ ಇದು?' ಒತ್ತಿ ಅಪ್ಪಿಕೊಂಡಳು ಅವನನ್ನು.

"ಕಮ್ಲೀ.. ಲೇಯ್ ನಾಚಗ್ಗೇಡಿ ಸೂಳೀ..." ಗುಡುಗು ಸಿಡೀತೋ? ಸಿಡ್ಲು ಬಡೀತೋ? ಮಿಂಚು ಹೊಡೀತೋ? ಯಾವುದೂ ಅಲ್ಲ.. ಕಣ್ಣೆದುರಿಗೆ ಸಾಕ್ಷಾತ ರುದ್ರ!! ಅಲ್ಲ ಉರಿರುದ್ರ ...ಅವನ ಹಿಂದೆ ಬಸಪ್ಪ...ಗುರೆಡ್ಡಿ ಇನ್ನೂ ಯಾರ್ಯಾರೋ... ಭೂತ ನಿಂತವರಂಗ ಪ್ರತ್ಯಕ್ಷ ಆಗಿಬಿಟ್ಟಿದ್ರು... ಎಲ್ಲಾರ ಕಣೋಳಗೂ ರಕ್ತಕೆಂಪು..ಕೈಯಲ್ಲಿ ಒಂದಕ್ಕಿಂತಾ ಒಂದು ಹರತ ಕೊಡಲಿ, ಕುಡುಗೋಲು...ಕಮಲಿಯ ತಲೆ ಗಿಮಿಗಿಮಿ ಸುತ್ತಿತು,



ಅದು ಗುರೆಡ್ಡಿಯ ಯುದ್ಧದ ಪ್ಲಾನು, ''ಇಂದ ಹೆಂಗೂ ಅಮಾಸಿ ಕತ್ಲೀ.. ಇದನ್ನೇ ಸಾಧಸೂಣು... ಎಲ್ಲಾರೂ ಒಂದೇ ದಿಕ್ಕಿಲೇ ಹೋಗೂದು ಬ್ಯಾಡ ...ಮೂವತ್ತಾಳು ಹಳ್ಳಿ ಕೇರಿ ಮ್ಯಾಲಿಂದ ಹೋಗ್ರಿ, ಇಪ್ಪತ್ತಾಳು ಗುರಪ್ಪನ ಹೊಲದ ಮ್ಯಾಲಿಂದ ...ಉಳದವರು ಈ ಕಡೆ ಗುಡ್ಡದ ಹಿಂದಿಂದ ಹೊದರ ಇಡೀ ಊರು ಒಂದೇ ಸರತೀ ಬಡೀಬಹುದು... ಒಮ್ಮಿಗೀಲೆ ಸುತ್ತುಗಟ್ಟಿ ಹಣಿಯೂಣು ಅವರನ್ನ

ಅವನ ಈ ರೂಪುರೇಶಾ ಹಾಕಿದ ಯುದ್ಧದ ಪ್ಲಾನು ಎಲ್ಲರೂ ಒಪ್ಪಿದ್ದಕ್ಕೆ ಬಸಪ್ಪ, ರುದ್ರರ ಟೀಮು ಗುಡ್ಡದ ಹಿಂದಿನ ಹಾದಿ ಹಿಡಿದು ಬಂದಿತ್ತು... ಅಷ್ಟೇ!

ಆಕಾಶ ಕಣ್ಣು ಮುಚ್ಚಿಕೊಂಡು ಬಿಟ್ಟಿತು! ಕಂದೀಲು ಬೆಳಕಿನಲ್ಲಿ ಅವರೆದುರು ರವಿ.. ಅವನ ಬಗಲಿಗೆ ಜೋತು ಬಿದ್ದು ಹೆಜ್ಜೆ ಹಾಕುತ್ತಿದ್ದ ಕಮಲಿ! ಅಕೀ ಭುಜಾ ಹಿಡಿದು ನಡೆಸುತ್ತಿದ್ದ ರವೀ..

ಕನಸಿನಲ್ಲೂ ಅನಿಸಿರದ ಸಂಗ್ತಿ.

ಧಗ ಧಗ ಉರಿದು ಹೋದ ರುದ್ರ..ಕಾಳರುದ್ರ ನತ್ತಿ ಏರಿದ್ದ ಅವನಿಗೆ, 'ಬೆನ್ನಹಿಂದ ಇಕ್ಕಿದ ಚೂರಿ ಇದು.. ಎಂಥಾ ಮಸಲತ್ತು? ತನ್ನ ತಂಗಿನ್ನೇ ತೆಕ್ಕಿಯೊಳಗ ತೊಗೊಂಡಾನ ಈ ರಷ್ಯಾ...ನಮ್ಮನಿ ಹೆಣ್ಣು ಇವನ ಬಲಿಗೆ ಬಿದ್ದದ್ದು ಯಾವಾಗ? ಮೊದಲೇ ಕನಲಿದ್ದ ಮನಸ್ಸಿಗೆ ರೋಷಾವೇಶ ಏರಿ ಹುಚ್ಚೆದ್ದಿತು, ಬಸಪ್ಪನೂ ಹೆಚ್ಚು ಕಡಿಮೆ ಅದೇ ಸ್ಥಿತಿಯಲ್ಲಿದ್ದ.

"ಯೇನಲೇ ಹಡಬಿಟ್ಟಿ ಸೂಳೀ ಮಗನ? ನಮ್ಮನೀ ಹೆಣ್ಣಲೇ ಅಕೀ...ಏನಂತ ತಿಳದೀದಿ? ನನ್ನ ತಂಗ್ಯಲೇ ಅಕೀ...ನನ್ನ ತಂಗೀ..ಅಕೀ ಮೈ ಮುಟ್ಟತೀಯೇನೋ.. ನಿನ್ನ.. ನಿನ್ನಾ..." ಅಬ್ಬರಿಸಿದ ರುದ್ರ"

ಹೌ ಹಾರಿದ ರವಿ ಸಾವರಿಸಿಕೊಂಡು 'ಇಕಾ..ಅಣ್ಣಾ.. ಕೇಳ್ರೀ.. ನನ್ನ ಮಾತು ಒಂಚೂರು ಕೇಳ್ರೀ...ಏನಾತು ಹೇಳ್ತಿನಿ.."

ಅವನ ಮಾತು ಮುಗಿದಿಲ್ಲ ಅದರೊಳಗೆ "ಏನು ಹೇಳತೀಯಲೇ ನೀನೂ ? ನಮ್ಮನೀ ಹೆಣ್ಣು ನಿನ್ನ ಸೂಳಿ ಅಂತ ತಿಳದೇನು?"

ರವಿ ಬಾಯಿ ತೆರೆಯುವುದರೊಳಗೆ, ಬಸಪ್ಪ, ಮಾದೇಶ ಎರಡು ಹೆಜ್ಜೆ ಮುಂದಿಡುವುದರೊಳಗೆ.....ಕಣ್ಣೆವೆ ಮುಚ್ಚಿ ತೆರೆಯುವುದರ ಒಳಗೇ....ರುದ್ರ ನುಗ್ಗಿ ಬಂದ.

ಥರ ಥರ ನಡುಗುತ್ತಿದ್ದ ಕಮಲಿಯ ತುರುಬು ಹಿಡಿದು ಎಳೆದು ಬೀಸಿ ಅತ್ತಾಹೊಗೆದು ತನ್ನ ಮಚ್ಚು ಎತ್ತಿದ....ಹುಚ್ಚೆದ್ದ ಮಚ್ಚು ಬೀಸಿ ಬಂತು!

'ಖಸ್ಸ್...'ರವಿಯ ಕೊರಳನ್ನೇ ಹಾದು ಬಂದ ಮಚ್ಚಿನ ಸದ್ದಿಗೆ ಗುಂಡಿಗೆ ನಡುಗಿ ಕುಸಿದಳು ಕಮಲಿ...ಅವನ ರುಂಡದಿಂದಿಳಿದ ನೆತ್ತರು ಫಸ್ಸೆಂದು ಹಾರಿ ಬಂದು ಅವಳ ನೆತ್ತಿ ತೋಯಿಸಿತು...ಲಪ್ಪೆಂದು ಮುಖಕ್ಕಪ್ಪಳಿಸಿದ ಆ ಬಿಸಿನೆತ್ತರಿಗೆ ಜ್ಞಾನ ತಪ್ಪುತ್ತಿದ್ದ ಅವಳ ಹತ್ತಿರವೇ ತೂರಾಡುತ್ತ ಬಂದು ಕುಸಿಯಿತು ರವಿಯ ಮುಂಡ!! ಅಣ್ಣಂದ್ರ ಇವರು? ಅಪನಂಬಿಗೆ ..ಅಸಹ್ಯ ಆಕ್ರೋಶದಲ್ಲಿ ಕುಸಿದಳು ಕಮಲಿ...

ರುದ್ರ ...ಮಾದೇಶ ಕೆಳಗೆ ಬಿದ್ದಿದ್ದ ರವಿಯ ರುಂಡವನ್ನೊದ್ದು ಉಗುಳಿ ಬಾನಾತೀ ಕಡೆ ಓಡಿದರು.

* * * * *

ಎಷ್ಟು ಹೊತ್ತು ಕಳೆದಿತ್ತೋ ಏನೋ? ಕಮಲಿಗೆ ಎಚ್ಚರ ಬಂದದ್ದು ಕಾಲಿಗೇನೋ ಜೋರಾಗಿ ಕಚಕ್ಕನೆ ಕಚ್ಚಿದಾಗ ..ಅರೆಸ್ಮೃತಿ, ಅರೆತಿಳಿವಿನ ನಡುವೆ ಪ್ರಪಂಚದ ಜ್ಞಾನ ಬರುತ್ತಿದ್ದಂತೆ ಹೌ ಹಾರಿದ ಎದೆ ಮತ್ತೆ ಧಡ ಧಡ ಹೊಡೆದುಕೊಳ್ಳುತ್ತ ರವಿ...ರವೀ.. ಅನ್ನುತ್ತ ಹೊರಳಿ ನೋಡಿದರೆ ಅಲ್ಲೇನೂ ಇಲ್ಲ...ಇಲ್ಲ..ಅಂವ ಇನ್ನಿಲ್ಲ.. ಅಣ್ಣಂದ್ರು ಕತ್ತರಿಸಿ ಒಗದ್ದು ಅವನ್ನ...

ಇನ್ನ ತಾನೂ ಇದ್ದೇನು ಮಾಡ್ಲಿ? ಒದ್ದಾಡುತ್ತ ಎದ್ದು ನೋಡಿದರೆ ಕಾಲಿನಿಂದ ಇಳಿದ ನಾಕೆಂಟು ಹನಿ ರಕ್ತ.. ಕಡಿದಿದ್ದು ಹಾವೇ ಇರಬೇಕು...ಆದರೂ ಎದ್ದಳು, ತೂರಾಡುತ್ತಿದ್ದ ದೇಹವನ್ನು ಇದ್ದ ಬದ್ದ ಶಕ್ತಿ ಕೂಡಿಸಿ ಕೆರೆಕಡೆಗೆ ನಡೆದಳು... ಕತ್ತಲು ಗಾಢವಾಗಿ ಇಳಿದು ಕೆರೆಕಟ್ಟೆ ಸುತ್ತ ಏನೋ ದಟ್ಟ ವಾಸನೆ. ಎಲ್ಲೆಲ್ಲೂ ಏನೋ ಕರೀ ಕಲ್ಲು ಗಂಟುಗಳು ಗಪ್ಪ ದಪ್ಪಗೆ ಬಿದ್ದಂತೆ ಅನಿಸಿತು. ಸ್ಮಶಾನ ಮೌನದ ನಿಶ್ಯಬ್ದ, ಹಿಂದೇನೇ ರೋದನ ಕಿವಿಗಳ ಒಳಗಿಳಿದು, ಇದೆಲ್ಲಾ ಏನು ಎಂದು ಅರ್ಥ ಮಾಡಿಕೊಳ್ಳಲಾಗದೆ ಜೀವ ಕಳವಳಿಸಿ ಕಾಲಿನಿಂದ ಇಳಿದ ನೆತ್ತರಿನ ಹನಿಗಳನ್ನು ಒರೆಸಿಕೊಳ್ಳದೆ ಕಣ್ಣು ಪೂರಾ ಕತ್ತಲಿಟ್ಟು ಬರುವ ಮುನ್ನ ಕೆರೆಯಂಚು ಸೇರಿದಳು... ಏನೂ ಅರ್ಥ ಆಗುತ್ತಿಲ್ಲ ಇವರೆಲ್ಲರ ಹೋರಾಟ ಆಗೇಬಿಟ್ಟಿತೇ? ಅನಾಹುತ ನಡದೇ ಹೋತೇ? ಕೆರೆಯಂಚಿನಲ್ಲಿ ಏನೋ ಕಾಲಿಗೆ ತೊಡರಿದಂತಾಗಿ ತಡೆದೆಡವಿ ಕುಪ್ಪಳಿಸಿ ಬಿದ್ದಳು.ಬಾಗಿದ ಕೈಗೊಂದು ಮುಖ ಸಿಕ್ಕಿತು! ರವಿ ಇದ್ದಾನೇನು? ಚುಕ್ಕಿಗಳ ಮಂದ ಬೆಳಕಿನಲ್ಲಿ ಎತ್ತಿ ನೋಡಿದರೆ ರಕ್ತದೊಳಗೆ ಬಿದ್ದಿದ್ದ ರುದ್ರ! ಅಡರಾಸಿ ಅಳುತ್ತ ಅವನ ಮುಖ ಮೈ ಮುಖ ಸವರಿದರೆ ಅವನ ಎದೆಯ ಮೇಲಿದ್ದ ಚಕ್ರ ಪದಕ ...ಅಪ್ಪ ಹಾಕಿದ್ದು ಮನ್ನೆ ಮನ್ನೆ ಅವನ ಹುಟ್ಟಿದ ಹಬ್ಬಕ್ಕೆ!

ಎದೆಯೊಡೆದು ಅತ್ತಳು ಕಮಲಿ... ಬಿಕ್ಕಿ ಬಿಕ್ಕಿ ಅತ್ತಳು ಎಷ್ಟು ಹೊತ್ತು ಅತ್ತಳೋ ಯಾರಿಗೆ ಗೊತ್ತು? ಕತ್ತಲಿಗೆ ಕಣ್ಣು ಹೊಂದಿಸಿಕೊಂಡು ಹಿಗ್ಗಿಸುತ್ತ ಆಚೀಚೆ ನೋಡಿದರೆ ಇನ್ನೂ ಯಾರ್ಯಾರೋ ಬಿದ್ದಿದ್ದಾರೆ... ಯಾರೋ ನೆಳ್ಳುತ್ತಿದ್ದಾರೆ. ಎಲ್ಲಾ ಕಡೆ ಘೋರ ಅನ್ನುವುದು ತಾಂಡವ ಆಡಿ ಮುಗಿಸಿದ ಲಕ್ಷಣ...

ಕಾಲು ನೋವು ಭಯಂಕರವಾಗಿ ನುಗ್ಗಿ ಬಂದು ಸೆಳೆಯಲು ಹತ್ತಿತು. ಇಲ್ಲಿ ಬಿದ್ದ ದೇಹಗಳು ಎಷ್ಟು...ಯಾರ್ಯಾರದು.. ಅನ್ನುವುದೂ ಗೊತ್ತಾಗವಲ್ಲು. ಇನ್ನೂ ಮುಂದೆ ಸರಿದಾಗ ಅಲ್ಲಲ್ಲಿ ಕಂದೀಲಿನ ಕುರುಡು ಬೆಳಕಿನ ಸೂಚನೆ ಅಲ್ಲಿ ಯಾರ್ಯಾರೋ ಮಂದಿ...ಒಂದೆರಡು ಮೋಟಾರು ಗಾಡಿಗಳು, ಇನ್ನಷ್ಟು ದಾರಿ ಸವೆದರೆ ಅಳು.. ಬೈಗಳು..ಗಡಿಬಿಡಿ..ಗಂಡಸರ ದಪ್ಪ ದನಿಯ ಒದರಾಟ, ಹೆಣ್ಣುಮಕ್ಕಳ ಎದೆಬಡಿದು ಕೊಂಡಳುವ ಘೋರ ಎಲ್ಲಾ ಕಾಣಿಸತೊಡಗಿತು...ಲಕ್ಷಗಟ್ಟಲೇ ಕಣ್ಣೀರಿನ ಕೊಡಗಳಿಂದುದುರುತ್ತಿರುವ ನೀರು. ಕುರುಕ್ಷೇತ್ರದಲ್ಲಿ ಹೆಣ್ಣುಗಳು ಮಾಡಿದ ಆರ್ತನಾದದ ಪ್ರತಿಧ್ವನಿ...

ಅಕಸ್ಮಾತ್ ನುಗ್ಗಿ ಬಂದಿದ್ದ ಕರೀ ಮೋಡಗಳ ಹಿಂದೆ

ಅಡಗಿ ಬಚ್ಚಿಟ್ಟುಕೊಂಡಿದ್ದ ಸೂರ್ಯ ಎದ್ದು ಬರಲಿಕ್ಕೆ ತಡ ಮಾಡತೊಡಗಿದ್ದ.. ಕಾಲು ಪೂರ್ಣ ಸೆಳೆಯುತ್ತ ಬಂತು ಕಮಲಿಗೆ... ಮೈಯಿಡೀ ವಿಷ ಏರಿರಬೇಕು... ಹೊಟ್ಟೆಯಲ್ಲಿ ಭಯಾನಕ ಸಂಕಟ, ಬಾಯಿಗೇನೋ ಒತ್ತಿ ಒತ್ತಿ ಬರ್ತಿತ್ತು... ಹೊಲಸು ಕಹಿ ನೀರಿನ ಹಾಗೆ ಬುರುಗಿನ ಹಾಗೆ ಮೆದುಳು ಬಧಿರ ಆಗಹತ್ತಿತ್ತು...ಗೋಣು ಎತ್ತುವ ಶಕ್ತಿಯೂ ಇಲ್ಲ...ಬಿದ್ದಲ್ಲೇ ಬಿದ್ದು ಚುಕ್ಕಿಗಳತ್ತ ಕಣ್ಣು ಇಟ್ಟರೆ 'ಅಯ್ಯೋ ಏನಾತಿದು..ಚುಕ್ಕಿ ಎಲ್ಲಾ ಎಲ್ಲಿ ಹೋದುವು... ಆಕಾಶ ಇಷ್ಟು ಕರೀ ಬಣ್ಣ ಯಾಕಾತು?'

ಕಮಲಿಗೆ ಉತ್ತರ ಕೊಡಲು ಆಕಾಶ ತನ್ನ ಮೈ ತುಂಬ ಕರೀ ಮೋಡಗಳನ್ನು ಹೊತ್ತು ಬಂತು! ಕಮಲಿಯ ಜೊತೆ ತಾನೂ ಅತ್ತಿತು..ಟಪ್...ಟಪ್...ಟಪ್...ಗಜ್ಜುಗದ ಗಾತ್ರದ ಹನಿಗಳನ್ನು ಒಗೆಯಿತು. ಅಣ್ಣಾ, ರವೀ.. ಎದೆಬಿರಿದು ಅತ್ತಳು ಕಮಲಿ...ಹಣೆಯ ಮೇಲುದುರಿದ ಮಳೆ ನೀರು ಎಷ್ಟೋ ಕುಂಕುಮಗಳನ್ನು ಕಲಸಿ ತನ್ನೊಂದಿಗೆ ಹರಿಸಿಕೊಂಡೊಯ್ದು ನೆಲಕಚ್ಚಿತು.ಧೋ...ಧೋ..ಧೋ...ಸುರಿದ ಮಳೆಗೆ ನೆಲದ ಧೂಳು ಕೆಮ್ಮಣ್ಣು ಕಲಸಿಕೊಂಡು ಅಳುತ್ತಿದ್ದವರ ಮುಖಕ್ಕೆ ರಾಚಿತು..

ಕಣ್ಣು ಪೂರಾ ಕತ್ತಲಿಡುವ ಮೊದಲು ಕಮಲಿ ಆಕಾಶದ ಕಡೆ ಮುಖ ಹೊರಳಿಸುವ ಪ್ರಯತ್ನ ಮಾಡಿದಳು..ಕೈ ಕಾಲುಗಳೆಲ್ಲ ಸೆಟೆಯುವ ಲಕ್ಷಣ.. 'ಇನ್ನೇನು ಭಾಳೊತ್ತಿಲ್ಲ.. ಆದರ ಆಕಾಶರಾಜಾ ಯಾಕೋ ...ಯಾಕೋ ನೀ ಇಷ್ಟು ತಡೆದು ಬಂದ್ಯೋ..? ನಿನ್ನೆ ಯಾಕ ಬರ್ಲಿಲ್ಲೋ..? ಮನ್ನೆ ಯಾಕ ಬರ್ಲಿಲ್ಲೋ ...ಎಲ್ಲಾ ಮುಗದ ಮ್ಯಾಲೆ ಬಂದ್ಯಲ್ಲೋ..'

ಕಡೆ ಗಳಿಗೆಯ ಗಂಗವ್ವನ ಹನಿಗಳನ್ನು ಕಮಲಿಯ ಬಾಯಿಗೆ ಹಾಕಿ ಘುಡಘುಡಿಸಿ ನೀರಿನ ಕೊಡ ಖಾಲಿ ಮಾಡತೊಡಗಿತು ನಿರ್ದಯಿ ಆಕಾಶ!!

ಗಂಗಾಮಾಯಿ ಬಂದಿದ್ದಳು, ತುಂಬ ತಡವಾಗಿ!

# ಹೆಣ್ಣು ಹದ್ದಿನ ಸ್ವಯಂವರ

**- ಬಾನು ಮುಸ್ತಾಕ್**

೨೦೩೪ರ ನವೆಂಬರ್ ೧೮ ರ ಆ ದಿನ ಅವನ ಪಾಲಿಗೆ ವಿನೂತನ ಮತ್ತು ಅದ್ಭುತ ದಿನವಾಗಿತ್ತು. ಬದುಕಿನೊಡನೆ ಮುಖಾಮುಖಿಯಾದ ಅವನ ಅಸ್ತಿತ್ವಕ್ಕೊಂದು ವಿಶೇಷ ಮೆರುಗು ದೊರಕಿದ ಮತ್ತು ಅಷ್ಟೇ ತೀವ್ರ ನಿರಾಕರಣೆಯನ್ನು ಅನುಭವಿಸಿದ ಆ ಹೊತ್ತನ್ನು ಎದುರಿಸಲು ಅವನೊಡನೆ ಅಂದು ಯಾರೂ ಜೊತೆಗಿರಲಿಲ್ಲ. ಅವನೊಬ್ಬನೇ ಇದ್ದ ಮತ್ತು ಏಕಾಂಗಿಯಾಗಿದ್ದ. ಅವರಿವರ ನೆರವಿನ ಹಸ್ತವನ್ನು ಚಾಚುವ ದುರ್ಬಲನಾಗಿರಲಿಲ್ಲ ಅವನು. ಆದರೂ ತಾಯಿಯ ಆಸರೆಯ ನೆರಳು ಅವನಿಗೆ ಎಂದಿನಿಂದಲೂ ರಕ್ಷಣೆಯೊದಗಿಸುವ ಕೊಡೆಯಾಗಿತ್ತು. ಕಳೆದ ಹದಿಮೂರು ಗಂಟೆಗಳಿಂದ ಆತ ವಿಜೇತಾ ಹೈಟೆಕ್ ಆಸ್ಪತ್ರೆಯ ಲೇಬರ್ ವಾರ್ಡಿಗೆ ಹೊಂದಿಕೊಂಡಂತಿದ್ದ 'ಎಕ್ಸ್‌ಪೆಕ್ಟಂಟ್ ಫಾದರ್'ನ ಕೊಠಡಿಯಲ್ಲಿ ನೀರವವಾಗಿ ಒರಗಿದ್ದ. ಯಾರಾದರೂ ತನ್ನ ಜೊತೆಯಲ್ಲಿದ್ದಿದ್ದರೆ ಒಳ್ಳೆಯದಿತ್ತು ಎಂದು ಮೊದಲ ಬಾರಿ ಅವನಿಗನ್ನಿಸುತ್ತಿತ್ತು. ತಮ್ಮ ಬದುಕಿನ ಖಾಸಗೀತನವನ್ನು ಉಳಿಸಿಕೊಳ್ಳಬೇಕೆಂಬುದು ಅವನ ಮತ್ತು ನೀತಿಯ ಧ್ಯೆಯ ವಾಕ್ಯವಾಗಿತ್ತು. ಹೀಗಾಗಿ, ಅವರಿಬ್ಬರದೇ ವಿಭಿನ್ನ ಮತ್ತು ವಿಚಿತ್ರ ಜಗತ್ತಾಗಿತ್ತು. ಆದರೂ ಆ ಗಳಿಗೆಯಲ್ಲಿ ಅವನಿಗೆ ಉಸಿರಾಟದಂತೆ ಅವಶ್ಯಕವಾಗಿ ತನ್ನೊಡನೆ ಸಾಂತ್ವನದ ಶಕ್ತಿಯಾಗಿ ಇರಲೇಬೇಕಾಗಿದ್ದ ವ್ಯಕ್ತಿ ಎಂದರೆ ಆತನ ತಾಯಿ ವಸಂತಿಯಾಗಿದ್ದಳು. ತನ್ನ ಗೊಂದಲದ, ಆತಂಕದ ಮತ್ತು ನಿರೀಕ್ಷೆಯ ಸಂದಿಗ್ಧ ಪರಿಸ್ಥಿತಿಯಲ್ಲಿ ಅವಳ ನೆರವು ತನಗೆ ಅತ್ಯಗತ್ಯವಾಗಿ ಬೇಕಾಗಿದೆ ಎಂಬ ಭಾವ ಈಗ ಒಂದು ಗಂಟೆಯ ಹಿಂದೆ ಅವನ ಮನದಲ್ಲಿ ಜಾಗೃತವಾಯಿತು. ಉಸಿರು ಸಿಕ್ಕಿಕೊಂಡವನಂತೆ ಅವನು ಚಡಪಡಿಸಲಾರಂಭಿಸಿದ. ತನ್ನ ತಳಮಳವನ್ನೆಲ್ಲಾ ಅವಳ ಮಡಿಲಿಗೆ ಸುರಿದು ಅವಳ ಕೈಯನ್ನು ಹಿಡಿದು, ತಾನು ಬಾಲ್ಯದಲ್ಲಿ ನಿರಾತಂಕದಿಂದ ನಿದ್ದೆ ಹೋದಂತಹ ನಿಶ್ಚಿಂತೆ ದೊರಕಿದಲ್ಲಿ, ಇನ್ಯಾವ ಸುಪ್ಪತ್ತಿಗೆಯ ಅಗತ್ಯವೂ ತನಗಿಲ್ಲ ... ಹೀಗೆಂದುಕೊಂಡು ಅವನು ಕರೆ ಮಾಡಿದ ಕೂಡಲೇ, ಅವನ ಕರೆಯ ನಿರೀಕ್ಷೆಯಲ್ಲಿಯೇ ಇದ್ದಳೇನೋ ಎಂಬಂತೆ ಆಕೆ ಚೆನ್ನೈನಿಂದ ರೆಕ್ಕೆ ಕಟ್ಟಿಕೊಂಡು ಹಾರಿ ಹೊರಟಾಗಿತ್ತು.

ಅವನ ಪ್ರಾಣದ ಪ್ರಾಣ..... ಅವನ ಸಂಗಾತಿ... ಸಖಿ... ನೀತಿ ಹೆರಿಗೆಯ ಬೇನೆಯಲ್ಲಿದ್ದಳು. ಅವನ ಕಣ್ಣುಗಳು ತುಂಬಿ ಬಂದವು . ತನ್ನ ಸಂತತಿಯನ್ನು ಮುಂದುವರೆಸಲು ನೀತಿ ಅನುಭವಿಸುತ್ತಿರುವ ಯಾತನೆ, ಹೊರುತ್ತಿರುವ ಭಾರ... ಅದೆಲ್ಲವೂ ಏನು ಮಹಾ ಎಂಬಂತಹ ಅವಳ ಕಣ್ಣಿನ ವಿಲಕ್ಷಣವಾದ ಬೆಳಕು ! ದಿನೇ

ದಿನೇ ವೃದ್ಧಿಸುತ್ತಿದ್ದ ಬಸುರಿನೊಡನೆ ಯಾವ ಅಳತೆಗೂ ಸಿಗದಂತಹ ಅವಳ ಬಸಿರು..... ಏಳಲು ಕೂರಲೂ ಆಗದಂತಹ ಅವಳ ಅವಸ್ಥೆ.... ಇದಕ್ಕೇನಾ ತಾಯ್ತನ ಅನ್ನೋದು……..'ನೀತಿ..... ನಿ..... ಐ ಯಾಮ್ ಗ್ರೇಟ್‌ಫುಲ್ ಟು ಯೂ'. ಅವನ ಯಾವ ಭಾವೋದ್ರೇಕದ ಕೃತಜ್ಞತೆಯ ಮತ್ತು ಪ್ರೀತಿಯ ಸಿಂಚನದ ಮೊರೆ ತಲುಪುವಂತಹ ಸ್ಥಿತಿಯಲ್ಲಿ ಆಕೆ ಇರಲಿಲ್ಲ. ನೀತಿ ಲೇಬರ್ ವಾರ್ಡಿನಲ್ಲಿ ಮಂಚದ ಮೇಲೆ ಒರಗಿದ್ದಳು ಹಾಗೂ ಅವಳು ತಾಯಿಯಾಗುವ ಸುಂದರ ಕ್ಷಣವನ್ನು ತನ್ನೆಲ್ಲಾ ಪ್ರಜ್ಞೆಗಳೊಂದಿಗೆ ಅನುಭವಿಸಲು ಸಕಲ ಸಿದ್ಧತೆಯನ್ನು ನಡೆಸಿದ್ದಳು. ಆಕೆಯು ಹಿಂದೆ ತಪಾಸಣೆಗೆ ಬಂದಿದ್ದ ಸಂದರ್ಭದಲ್ಲಿ ಆಕೆಯ ವೈದ್ಯರು ಲೇಸರ್ ತಂತ್ರಜ್ಞಾನದ ಮೂಲಕ ನೋವುರಹಿತ ಹೆರಿಗೆಯ ವಿಧಾನದ ಬಗ್ಗೆ ಆಕೆಗೆ ಪೂರ್ಣ ಮಾಹಿತಿಯನ್ನು ನೀಡಿದ್ದರು. ಆದರೆ ಆಕೆಯು ಅದಕೊಪ್ಪದೆ ತನಗೆ ಪುರಾತನವಾದ ಸಾಂಪ್ರದಾಯಿಕ ಕ್ರಮದಲ್ಲಿಯೇ ನೋವಿನ ಸಹಿತ ಹೆರಿಗೆಯಾಗಬೇಕೆಂದು ಬಯಸಿದ್ದಳು. ಹೀಗಾಗಿ ಆಕೆಯ ವೈದ್ಯರಾದ ಡಾಕ್ಟರ್ ಪ್ರಶಾಂತ್ ಕೊನೆಯ ಹಂತದವರೆಗೂ ಆಕೆಗೆ ಸಹಜ ವಿಧಾನದ ಮೂಲಕವೇ ಹೆರಿಗೆಯಾಗುವಂತೆ ಶ್ರಮಿಸುವುದಾಗಿ ಕರಾರು ಒಪ್ಪಂದವನ್ನು ಮಾಡಿಕೊಂಡಿದ್ದರು. ಹಾಗೂ ಆಕೆಯ ಹೆರಿಗೆಯ ಸಂದರ್ಭದಲ್ಲಿ ಆಕೆಯ ಪತಿಯಾದ ಅಮರ್ ಉಪಸ್ಥಿತಿ ಇದ್ದು, ಆಕೆಯ ನೋವಿನಲ್ಲಿ ಸಹಭಾಗಿಯಾಗಲು ಕೂಡಾ ಅವಕಾಶ ಮಾಡಿಕೊಡುವುದಾಗಿ ತಿಳಿಸಿದ್ದರು. ಆದರೆ ಯಾವ ಕಾರಣಕ್ಕೂ ತನ್ನ ಹೆರಿಗೆಯ ಸಂದರ್ಭದಲ್ಲಿ ಅಮರ್ ಲೇಬರ್ ವಾರ್ಡಿನಲ್ಲಿ ಇರಕೂಡದೆಂದು ಆಕೆಯ ಕಟ್ಟಪ್ಪಣೆಯಾಗಿತ್ತು. ಅತ್ಯಂತ ಸೂಕ್ಷ್ಮ ಪ್ರವೃತ್ತಿಯ ಅಮರ್‌ಗೆ ಅಲ್ಲಿಯ ದೃಶ್ಯವನ್ನು ನೋಡಿ ಸಹಿಸುವ ಮನಃಸ್ಥಿತಿ ಇಲ್ಲವೆಂತಲೂ ಆತನ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮವಾಗುವುದೆಂತಲೂ ಆಕೆಯ ಖಚಿತ ಅಭಿಪ್ರಾಯವಾಗಿತ್ತು.

ಅವನ ಮನ ಹಿಂದಕ್ಕೋಡಿತು. ಆರಂಕಿಯ ಸಂಬಳದ ಸ್ಫುರದ್ರೂಪಿ ಯುವಕ ; ಕಾರು, ಬಂಗಲೆ ಜೊತೆಗೆ ಮೂವತ್ತೆರಡರ ಯೌವನ..... ಆದರೆ ನೆತ್ತಿಯ ಮೇಲೆ ತೆಳುವಾದ ಕೂದಲು. ಎಷ್ಟೊಂದು ವೃತ್ತ ಪತ್ರಿಕೆಗಳಲ್ಲಿ ಅವನು ಜಾಹೀರಾತನ್ನು ನೀಡಲಿಲ್ಲ..... ಎಷ್ಟೊಂದು ವೆಬ್‌ಸೈಟ್‌ಗಳಲ್ಲಿ ಅವನು ವಧುವಿನ ಅನ್ವೇಷಣೆಯನ್ನು ನಡೆಸಲಿಲ್ಲ..... ಹೇಳುತ್ತಾ ಹೋದರೆ ಅದೇ ಒಂದು ದೊಡ್ಡ ಕಥೆಯಾಗುತ್ತದೆ. ಯಾವ ಹುಡುಗಿಯಾದರೂ ಮೆಚ್ಚಿ ಮದುವೆಯಾಗಬಹುದಾದ ಘನ ವ್ಯಕ್ತಿತ್ವದ ಆತ ಈ ನಿಟ್ಟಿನಲ್ಲಿ ಅಸಹಾಯಕನಾಗಿದ್ದ. ಲೀಲಾಜಾಲವಾಗಿ ಉದ್ಯೋಗದ ಇಂಟರ್ ವ್ಯೂಗಳನ್ನು ಎದುರಿಸಿ ಜಯಶೀಲನಾಗಿದ್ದವ

. . . . ಮದುವೆಯ ಈ ಸಂದರ್ಶನಗಳಲ್ಲಿ ಸೋತು ಹೋಗುತ್ತಿದ್ದ.ಅಂತಹ ಸಂದರ್ಭಗಳಲ್ಲಿ ವಸಂತಿಯ ಆಸರೆಯ ಹಸ್ತ ಅವನ ನೆರವಿಗೆ ಇದ್ದೇ ಇರುತ್ತಿತ್ತು.ಅವಳ ಬೆರಳುಗಳು ಬಹು ಆಪ್ಯಾಯಮಾನದಿಂದ ಪ್ರೀತಿಯ ಮಹಾಪೂರವನ್ನೇ ಹರಿಸುತ್ತಿದ್ದವು ಹಾಗೂ ಅವನಿಗೆ ಬೇಕಾದ ಭದ್ರತೆಯನ್ನು ಕೂಡಾ ಒದಗಿಸುತ್ತಿದ್ದವು .

ಅವನೇನೂ ಸಮಾಜ ಶಾಸ್ತ್ರಜ್ಞನಾಗಿರಲಿಲ್ಲ . ಆದರೂ ತಂತಾನೇ ಕೆಲವು ವಿಷಯಗಳು ಅವನಿಗೆ ತಿಳಿದುಬಂದಿದ್ದವು. ತನ್ನ ಹಿಂದಿನ ತಲೆಮಾರಿನ ಗಂಡು ಕುಲವನ್ನು ಅವನು ಮನಸ್ವೀ ತೆಗಳುತ್ತಿದ್ದ. ಅವನೊಬ್ಬನೇ ಅಲ್ಲ.... 'ಷಂಡ ಬಡ್ಡಿ ಮಕ್ಕಳಾ..... ನಾವು ನಿಮ್ಮಿಂದ ಈ ಪಾಟಿ ಅನುಭವಿಸುತ್ತಿದ್ದೀವಲ್ಲಾ



"ಅಂತ. ಅವನ ಜೊತೆಗಾರ ಯುವಜನರೆಲ್ಲಾ ಬಹುತೇಕ ಅವನಂತೆಯೇ ಆಲೋಚಿಸುತ್ತಿದ್ದರು. ಅವರಾರಿಗೂ ತಮ್ಮ ಬೇರುಗಳ ಬಗ್ಗೆ ಅಭಿಮಾನವಿರಲಿಲ್ಲ. ಸುಮಾರು ಇಪ್ಪತ್ತೈದು ವರ್ಷಗಳ ಹಿಂದಿನ ಅಂಕಿ ಅಂಶದ ಪ್ರಕಾರವೇ ಅಂದಿನ ದಂಪತಿಗಳು ಹೆಣ್ಣು ಮಕ್ಕಳಿಗೆ ಜನ್ಮ ನೀಡಲು ಹಿಂಜರಿಯುತ್ತಿದ್ದಾರೆ ಎಂಬ ಅಂಶವು ನಿಚ್ಚಳವಾಗಿತ್ತು. ಆ ಏರು-ಪೇರು ಮುಂದುವರೆಯುತ್ತಲೇ ಹೋಯಿತು. ಸರ್ಕಾರವೇ ಆಗಲೀ ಅಥವಾ ಸಾಮಾಜಿಕ ಸಂಸ್ಥೆಗಳೇ ಆಗಲೀ ಇದೊಂದು ಸಮಸ್ಯೆ ಎಂದು ಪರಿಗಣಿಸಲೇ ಇಲ್ಲಾ. ಹೆಣ್ಣು ಮಕ್ಕಳ ಜನ್ಮ ಪ್ರಮಾಣ ದಯನೀಯವಾಗಿ ತಗ್ಗಿ ಹೋಗಿತ್ತು. ಮತ್ತು ಈ ಬಗ್ಗೆ ಸರ್ಕಾರವು ಲಿಂಗಾನುಪಾತದ ಜನಗಣತಿಯನ್ನು ನಡೆಸುವುದಕ್ಕೆ ಹಿಂದೇಟು ಹಾಕುತ್ತಿತ್ತು. ಆದರೂ ಜನರ ನಡುವೆ ಚಲಾವಣೆಯಾಗಿದ್ದ ಬಹಿರಂಗ ಸತ್ಯವೆಂದರೆ, ಒಂದು ಸಾವಿರ ಗಂಡು ಮಕ್ಕಳ ಸಂಖ್ಯೆಗೆ ಸಂವಾದಿಯಾಗಿ ಐನೂರು ಹೆಣ್ಣುಮಕ್ಕಳು ಇದ್ದಾರೆ ಎಂಬುದು. ಈ ಸಂಖ್ಯೆಗೆ ಅನುಗುಣವಾಗಿ , ಗಂಡು ಹೆಣ್ಣಿನ ಕೌಟುಂಬಿಕ ಹಾಗೂ ಸಾಮಾಜಿಕ ಸಂಬಂಧಗಳು ಅಗಾಧವಾಗಿ ಬದಲಾವಣೆಗೆ ಒಳಪಟ್ಟಿದ್ದವು .

ಹೀಗಾಗಿ, ಅವನು ಉದ್ಯೋಗವನ್ನು ಪಡೆದುಕೊಂಡ ನಂತರ ಅಕ್ಕ-ಪಕ್ಕದ ಮನೆಯ ಹೆಣ್ಣು ಮಕ್ಕಳ ಮೇಲೆ ಕಣ್ಣಾಡಿಸಿ, ಕಣ್ಣಿನಲ್ಲಿಯೇ ಸಂದೇಶಗಳನ್ನು ಕಳಿಸಿದ. ಆ ಹೆಣ್ಣು ಮಕ್ಕಳು ಕೂಲಾಗಿ ಆ ನಿವೇದನೆಗಳನ್ನು ಪಕ್ಕಕ್ಕೆ ಸರಿಸಿ, ಇವನಿಗಿಂತ ಉತ್ತಮ ವರನನ್ನು ಆಯ್ಕೆ ಮಾಡಿಕೊಂಡ ಮೇಲೆ ಅವನು ಸಹೋದ್ಯೋಗಿಗಳತ್ತ ಕಣ್ಣು ಹಾಯಿಸಿದ. ಅಬ್ಬಾ! ಅವರನ್ನು ಮಾತಾಡಿಸುವಂತೆಯೇ ಇಲ್ಲ. ಅವನು ಒಂದು ಕತ್ತನ್ನು ಓರೆಯಾಗಿ ತಿರುಗಿಸಿ, ನೆತ್ತಿ ಕಾಣದಂತೆ ಮತ್ತು ಕಿವಿಯ ಮೇಲ್ಭಾಗದ ಒಂದಿಷ್ಟು ಕ್ರಾಪ್ ಕಾಣಿಸುವಂತೆ ಗ್ಲಾಮರ್ ಫೋಟೋಗ್ರಾಫ್ ಮಾಡಿಸಿ ಅನೇಕ ಫೋಟೋಗಳನ್ನು ಎಲ್ಲೆಡೆ ಕಳಿಸಿ ವರ್ಷಾನುಗಟ್ಟಲೆ ಕಾದರೂ ಪರಿಣಾಮ ಮಾತ್ರ ಸೊನ್ನೆಯೇ ಆಗಬೇಕೇ? ಅವನ ತಾಯಿ ವಸಂತಿ ಕೂಡ ವಧುವನ್ನು ಅರಸಿ ತನ್ನ ಗೆಳತಿಯರ ಮನೆಗೆ ಎಡತಾಕಿದ್ದೇ ಬಂತು. ಎಂತಹ ಸ್ಪರ್ಧೆ ಇರಬಹುದು...... !

ಅದೊಂದು ಆಕಸ್ಮಿಕ ಅಂತಲಾದರೂ ಅನ್ನಬಹುದು. ಅಥವಾ ಅವನ ಅದೃಷ್ಟವೋ.... ಅವನ ಎಲ್ಲಾ ಊಹೆಗಳನ್ನೂ ಮೀರಿ........ ನಿರಾಶೆಗಳನ್ನು ಮೆಟ್ಟಿ ಬೆಳಗಿನ ಲವಲವಿಕೆಯ ಸೂರ್ಯ ಕಿರಣದಂತೆ ಅವನ ಕನಸಿನ

ಕನ್ಯ ನೀತಿ ಅಚಾನಕವಾಗಿ ಅವನ ಬಾಳನ್ನು ಪ್ರವೇಶಿಸಿದಳು. ಆ ಪ್ರವರವನ್ನು ಹೇಳುತ್ತಾ ಹೋದರೆ ತುಂಬಾ ಡೀವಿಯೇಟ್ ಆಗುತ್ತೆ......

ಆದರೂ ನೀತಿ ಎಂಬ ಹೆಸರಿನ ಹೆಣ್ಣು ಮಗಳು ವಿದ್ಯಾವಂತೆಯಾಗಿದ್ದಳು. ವೈದ್ಯಕೀಯ ಎಂಜಿನೀಯರಿಂಗ್ ವಿಭಾಗದಲ್ಲಿ ಸ್ನಾತ್ತಕೋತ್ತರ ಪದವೀಧರೆಯಾಗಿದ್ದ ಅವಳು ಅತೀವ ಸುಂದರಿಯೂ ಆಗಿದ್ದಳು. ಅವಳನ್ನು ವರಿಸಲು ಆಕಾಂಕ್ಷಿಗಳಾಗಿದ್ದವರ ಉದ್ದನೆಯ ಪಟ್ಟಿಯೇ ಇತ್ತು. "ನಾನೇನು ಕೂಡ ನಿನ್ನಿಂದ ಮುಚ್ಚುಮರೆ ಮಾಡಿರಲಿಲ್ಲ. ನನಗೆ ಡಯಾಬಿಟಿಸ್ ಎಂಬ ವಿಷಯ ನಿನಗೆ ನಾನು ವಿವಾಹ ಪೂರ್ವದಲ್ಲಿಯೇ ತಿಳಿಸಿದ್ದೆ. ಮತ್ತು ನನಗೆ ಅಕಾಲಿಕ ಬಾಲ್ಡ್‌ನೆಸ್ ಎಂಬ ವಿಷಯ ಕೂಡ ನಿನಗೆ ತಿಳಿಸಿದ್ದೆ ಈ



ಎರಡು ಸಮಸ್ಯೆಗಳು ಕೂಡ ನಮ್ಮ ಕುಟುಂಬದ ವಂಶವಾಹಿಗಳ ಕೊಡುಗೆ ಎಂತಲೂ ನಿನಗೆ ಹೇಳಿದ್ದೆ ಆದರೂ......ಆದರೂ ನೀನು ನನ್ನನ್ನು ಹೇಗೆ ಮೆಚ್ಚಿದೆ?"ಎಂದು ಅವನು ದೇವತೆಯಂತೆ ಕಾಣುತ್ತಿದ್ದ ಅವಳತ್ತ ಆರಾಧನಾ ದೃಷ್ಟಿಯನ್ನು ಬೀರುತ್ತಾ ಈ ಹಿಂದೆ ಅನೇಕ ಸಾರಿ ಕೇಳಿದ್ದಾನೆ ಆದರೆ ಪ್ರತಿ ಸಾರಿಯೂ ಪ್ರಸನ್ನವದನಳಾದ ಅವಳ ಮುಗುಳು ನಗೆಯೊಂದೇ ಅವನಿಗೆ ಉತ್ತರವಾಗಿತ್ತು.

ಮತ್ತೆ ಹೈಟೆಕ್ ಆಸ್ಪತ್ರೆಗೆ ಅಮರ್‌ನ ಬಳಿ ಬಂದರೆ........ ತನ್ನ ಮನದನ್ನೆಯ ಯಾತನಾಮಯ ಪರಿಸ್ಥಿತಿಯಿಂದ ಆತ ಸಹಜವಾಗಿಯೇ ಆತಂಕಕ್ಕೊಳಗಾಗಿದ್ದ. ತನ್ನ ಕಂಪೆನಿಯಲ್ಲಿ ಕಾಲಕಾಲಕ್ಕೆ ತರಬೇತಿ ನೀಡಿದ್ದ ಯೋಗಾಸನ, ರೇಖಿ, ಪ್ರಾಣಿಕ್ ಹೀಲಿಂಗ್, ಸೆಲ್ಫ್ ಹಿಪ್ನಾಟಿಸಂ- ಈ ಎಲ್ಲಾ ಪ್ರಾಕಾರಗಳನ್ನು ಬಳಸಿ ನೀತಿಗೆ ತನ್ನೆಲ್ಲಾ ಶಕ್ತಿಯನ್ನು ನೀಡಿ ಸುಖಕರ ಹೆರಿಗೆಯಾಗಲೆಂದು ಆಶಿಸುವುದರ ಜೊತೆಗೆ ಆ ಸ್ಟ್ರೆಸ್ ತನ್ನನ್ನು ದಿಕ್ಕುಗೆಡಿಸದಂತೆ ನೆಮ್ಮದಿಯನ್ನು, ಶಾಂತಿಯನ್ನು ಉಳಿಸಿಕೊಳ್ಳುವ ಪ್ರಯೋಗದಲ್ಲಿ ತಲ್ಲೀನನಾಗಿದ್ದ. ಏಕೆಂದರೆ.... ಮೊದಲೇ ಆತ ಡಯಾಬಿಟಿಕ್ ಆಗಿದ್ದ. ಈ ಕಾರಣದಿಂದ, ನೀತಿ ಆತನನ್ನು ತನ್ನ ಹೆರಿಗೆಯ ಆಘಾತಕಾರಿ ಪರಿಣಾಮದಿಂದ ದೂರವಿರಿಸುವ ಪ್ರಯತ್ನವನ್ನು ಮಾಡಿದ್ದಳು. ಅಲ್ಪ ಕಾಲದ ಪ್ರಾಜೆಕ್ಟ್‌ವೊಂದನ್ನು ಒಪ್ಪಿಕೊಂಡು ಆತ ಸ್ವೀಡನ್ನಿಗೆ ಹೋಗಬೇಕೆಂದು ಆಕೆ ಅವನ ಮನವೊಲಿಸಲು ನಿರಂತರ ಪ್ರಯತ್ನವನ್ನು ಮಾಡಿದ್ದಳು.

ಆದರೆ ಅವಳ ಪ್ರಯತ್ನವೆಲ್ಲಾ ವ್ಯರ್ಥವಾಗಿದ್ದು ಎರಡು ಕಾರಣಗಳಿಂದ. ಮೊದಲನೆಯದಾಗಿ ಅಮರ್ ಆ ಸಂದರ್ಭದಲ್ಲಿ ಅವಳಿಂದ ಯಾವುದೇ ಕಾರಣಕ್ಕೂ ದೂರವಿರಲು ಸಿದ್ಧನಿರಲಿಲ್ಲ. ತೀವ್ರ ಅಗತ್ಯದ ಆ ಹೊತ್ತಿನಲ್ಲಿ ಅವಳಿಂದ ದೂರವಾಗಿದ್ದು, ಅವಳಿಗೆ ದ್ರೋಹ ಬಗೆಯಲು ಅವನು ಮಾನಸಿಕವಾಗಿ ಸಿದ್ಧನಿರಲಿಲ್ಲ. ಅಷ್ಟೊಂದು ಪ್ರೀತಿ

ಅವಳ ಮೇಲೆ. ಅಷ್ಟೇ ಅಲ್ಲದೆ ತನ್ನ ಕುಡಿ ಚಿಗುರುವ ಆ ಸಂದರ್ಭವನ್ನು ಅವನು ತೀವ್ರ ಕಾತುರದಿಂದ ನಿರೀಕ್ಷಿಸುತ್ತಿದ್ದು, ಸ್ವತಃ ಆ ರೋಮಾಂಚಕ ಅನುಭವವನ್ನು ಎದುರು ನೋಡುತ್ತಿದ್ದ. ಎರಡನೆಯದಾಗಿ, ದಿ ಡೆಲಿವರಿ ಆಫ್ ಚೈಲ್ಡ್ (ಪ್ರೆಸೆನ್ಸ್ ಆಫ್ ಹಸ್ಬೆಂಡ್) ಆಕ್ಟ್ 2015ರ ರೀತ್ಯಾ ಹೆಂಡತಿಯ ಹೆರಿಗೆಯ ಸಂದರ್ಭದಲ್ಲಿ ಕಡ್ಡಾಯವಾಗಿ ಆತನ ಉಪಸ್ಥಿತಿ ಇರಲೇಬೇಕಿತ್ತು. ಪತಿಯ ಮರಣ ಅಥವಾ ತೀವ್ರ ಕಾಯಿಲೆ ಮುಂತಾದ ಕೆಲವು ಸಂದರ್ಭಗಳನ್ನು ಬಿಟ್ಟರೆ ಪತಿಯಾದವನು ಕೆಲಸದ ನೆಪ ಹೇಳಿ ಹೆರಿಗೆಯ ಸಂದರ್ಭದಲ್ಲಿ ಗೈರು ಹಾಜರಾಗುವುದು ಶಿಕ್ಷಾರ್ಹ ಅಪರಾಧವೆಂದು ಸರ್ಕಾರ ಪರಿಗಣಿಸಿತ್ತು . ಮೂರು ಲಕ್ಷ ರೂಪಾಯಿವರೆಗೆ ದಂಡ ಅಥವಾ ಮೂರು ವರ್ಷ ಕಾರಾಗೃಹ ಸಜೆ ಅಥವಾ ಇವೆರಡನ್ನೂ ಒಟ್ಟಿಗೆ ಶಿಕ್ಷೆಯ ರೂಪದಲ್ಲಿ ವಿಧಿಸಬಹುದಿತ್ತು. ಮತ್ತು ನ್ಯಾಯಾಂಗದಲ್ಲಿ ಕೂಡ ಬಹುತೇಕ ಮಹಿಳಾ ನ್ಯಾಯಾಧೀಶರೇ ತುಂಬಿ ತುಳುಕುತ್ತಿದ್ದು, ಅವರುಗಳು ಮುಲಾಜಿಲ್ಲದೆ ಹೆರಿಗೆಯ ಸಂದರ್ಭದಲ್ಲಿ ಹೆಂಡತಿಯ ನೆರವಿಗೆ ಬಾರದಿದ್ದ ಗಂಡನಿಗೆ ಕಾರಾಗೃಹ ಶಿಕ್ಷೆಯನ್ನೇ ವಿಧಿಸುತ್ತಿದ್ದರು.

ಆದರೆ ನೀತಿ ಈ ಎಲ್ಲಾ ಕಾನೂನನ್ನು ತಿಳಿದಿದ್ದು, ವಕೀಲರನ್ನು ಸಂಪರ್ಕಿಸಿ ಆ ಸಮಸ್ಯೆಗೆ ಪರಿಹಾರವನ್ನೂ ಕಂಡುಕೊಂಡಿದ್ದಳು. ತನ್ನ ಪತಿಯ ಬೋಳು ನೆತ್ತಿಗೆ



ಹೇರ್ ಟ್ರಾನ್ಸ್‌ಪ್ಲಾಂಟೇಷನ್ ಸಲುವಾಗಿ ಅಂದರೆ, ಅಗತ್ಯದ ವೈದ್ಯಕೀಯ ಕಾರಣಕ್ಕಾಗಿ ಆತ ಹೊರದೇಶಕ್ಕೆ ಹೋಗಬೇಕಾದುದು ಅಗತ್ಯವೆಂದು ದಾಖಲಾತಿಗಳನ್ನು ಸೃಷ್ಟಿಸಿದಳು. ಈ ಎಲ್ಲಾ ತಯಾರಿ ಮತ್ತು ನೀತಿಯ ಪ್ರೀತಿಯ ಒತ್ತಾಯ ಇದ್ದಾಗ್ಯೂ ಆತ ಸಾರಾ ಸಗಟಾಗಿ ನೀತಿಯ ಪ್ರಸ್ತಾವನೆಯನ್ನು ತಿರಸ್ಕರಿಸಿದ್ದು, ತಮ್ಮ ದಾಂಪತ್ಯ ಜೀವನದ ಅದ್ಭುತ ಸಂಭ್ರಮಾಚರಣೆಗಾಗಿ ಅವಳ ಜೊತೆಯಲ್ಲಿಯೇ ಉಳಿದಿದ್ದ. ಮತ್ತು ನೀತಿ ತನ್ನ ಮಗುವಿಗೆ ಜನ್ಮ ನೀಡುವ ಆ ಅದ್ಭುತ ಕ್ಷಣಕ್ಕಾಗಿ ಕಾಯುತ್ತಲೇ ಇದ್ದ...... ಕಳೆದ ಹದಿಮೂರು ಗಂಟೆಗಳಿಂದ ನಿರಂತರವಾಗಿ

ಅಮರ್‌ನೊಡನೆ ದಾಂಪತ್ಯ ಜೀವನವನ್ನು ಸಾಗಿಸುವುದು ನೀತಿಗೆ ಸಾಹಸದ ಕೆಲಸವೇ ಆಗಿತ್ತು. ಮದುವೆಗೆ ಮುಂಚೆ ಆಕೆಗೂ ತಾಳ್ಮೆ ಎಂಬುದು ತುಸು ಕಡಿಮೆ ಇತ್ತು. ಆದರೆ ಅವನೊಡನೆ ಕಳೆದ ಐದು ವರ್ಷಗಳು ಅವಳಿಗೆ ಅಪಾರ ಸಹನೆ ಮುಂದಾಲೋಚನೆ, ವಿವೇಚನೆ ಮತ್ತು ಸಂಯಮವನ್ನು ಬಳುವಳಿಯಾಗಿ ನೀಡಿದ್ದವು. ಯಾರ ಬಲವಂತವೂ ಇಲ್ಲದೆ ಸಂಸಾರದ ನೊಗವನ್ನು ಅವಳು ಹೆಗಲೇರಿಸಿಕೊಂಡಿದ್ದಳು. ಮತ್ತು ಯಾವಾಗಬೇಕಾದರೂ ಅವಳು ಮುಲಾಜಿಲ್ಲದೆ ತನ್ನ ಜವಾಬ್ದಾರಿಯನ್ನು ಕೊಡವಿಕೊಳ್ಳಬಹುದಿತ್ತು. ಆದರೆ ಆಕೆ ಹೀಗಾಗದಂತೆ ಶತಪ್ರಯತ್ನ ಮಾಡುತ್ತಿದ್ದಳು.

ಇಂದು ಕೂಡ.....ಹಾಗೆಯೇ ಆತನು ವಿಜೇತ ಹೈಟೆಕ್ ಆಸ್ಪತ್ರೆಯ ಎಕ್ಸ್‌ಪೆಕ್ಟೆಂಟ್ ಫಾದರ್ಸ್ನ ಐಶಾರಾಮಿ ಕೊಠಡಿಯೊಂದರ ಆರಾಮದಾಯಕ ಸುಖಾಸನದಲ್ಲಿ ಕಾಲು ಚಾಚಿದ್ದ. ನಿಯಮಿತವಾಗಿ ಆತನ ರಕ್ತದೊತ್ತಡ ಹಾಗೂ ಆತನ ದೇಹದ ಸಕ್ಕರೆಯ ಪ್ರಮಾಣವು ಪರೀಕ್ಷೆಗೆ ಒಳಪಡುತ್ತಿದ್ದವು. ಆತನ ಸೇವೆಗೆ ತಜ್ಞ ವೈದ್ಯರ ತಂಡವನ್ನೆ ನಿಯುಕ್ತಿಗೊಳಿಸಿದ್ದಳು. ತನ್ನ ಮಗುವಿನ ಬಗ್ಗೆ ನೀತಿ ಎಷ್ಟು ಕಾಳಜಿಯನ್ನು ಹೊಂದಿದ್ದಳೋ ಅಷ್ಟೇ ಅಕರಾಸ್ತೆಯಿಂದ ಅಮರ್‌ನ ಆರೋಗ್ಯದ ಬಗ್ಗೆ ಕಾಳಜಿಯನ್ನು ಹೊಂದಿದ್ದಳು. ಹೀಗಾಗಿ ತನ್ನ ಹೆರಿಗೆಗಾಗಿ ಆಕೆಯು ತನ್ನ ಪತಿಯಾದ ಅಮರ್‌ನನ್ನು ಒಳಗೊಂಡಂತಹ ವಿಶೇಷ ಮತ್ತು ದುಬಾರಿ ಪ್ಯಾಕೇಜನ್ನು ಪಡೆದಿದ್ದಳು.

ಅಮರ್ ಕಳೆದ ರಾತ್ರಿಯಿಂದ ತೀರ ಉತ್ಸಾಹ ಮತ್ತು ನಿರೀಕ್ಷೆಯಲ್ಲಿದ್ದ ಆಕೆಗೆ ಸಣ್ಣದಾಗಿ ನೋವು ಆರಂಭವಾಗುತ್ತಿದ್ದಂತೆಯೇ ಅವನು ತರಾತುರಿಯಲ್ಲಿ ಆಕೆಯನ್ನು ಕರೆತಂದು ಆಸ್ಪತ್ರೆಗೆ ಸೇರಿಸಿದ್ದ. ಆಕೆಗೆ ಮೂವತ್ತೈದು ದಾಟಿತ್ತು ಹೀಗಾಗಿ, ಆಕೆಗೆ ಸಹಜ ಮತ್ತು ನಾರ್ಮಲ್ ಹೆರಿಗೆ ಆಗುವುದರ ಬಗ್ಗೆ ವೈದ್ಯರಿಗೆ ಅನುಮಾನವಿತ್ತು. ಆದರೂ ಕೂಡ......ತಾಯಿ ಅಥವಾ ಮಗುವಿನ ಜೀವಕ್ಕೆ ಕುತ್ತು ಬರುವರೆಗೂ ನಾರ್ಮಲ್ ಹೆರಿಗೆಗಾಗಿ ಕಾಯಲು ಅವರು ಕರಾರಿಗೆ ಬದ್ಧರಾಗಿದ್ದರು.

ಈ ಯಾವ ಅಸಂಬದ್ಧತೆಗಳು ಕೂಡ ಅಮರ್‌ಗೆ ಬೇಕಿರಲಿಲ್ಲ ಕಾಲಕ್ಕೆ ಅನುಗುಣವಾಗಿ ಎಲ್ಲರಂತೆ ನಡೆದುಕೊಳ್ಳಬೇಕಾದುದು ಅಗತ್ಯವೆಂದು ಅವನು ನಂಬಿದ್ದ. ಬೇರೆ ಎಲ್ಲಾ ರೀತಿಯಲ್ಲಿಯೂ ಇಚ್ಛೆಯನ್ನರಿತು ನಡೆಯುವ ಸತಿಯಾಗಿದ್ದ ಅವಳು ಕೆಲವೊಂದು ವಿಚಾರಗಳಲ್ಲಿ ವಿಕ್ಷಿಪ್ತತೆಯನ್ನು ತೋರುತ್ತಾಳೆ ಎಂದು ಅವನಿಗೆ ಅನ್ನಿಸುವುದಿತ್ತು. ಅಂತಹ ಸಂದರ್ಭಗಳಲ್ಲಿ ಅವನಿಗೆ ತೀರ ಅಸಹಾಯಕತೆ ಎಂದೆನಿಸುತ್ತಿತ್ತು. ಆಗ ಅವನು ತೀರ ವ್ಯಗ್ರನಾಗುತ್ತಿದ್ದ ಹಾಗೂ ಹತಾಶ ಮನಃಸ್ಥಿತಿಯಲ್ಲಿ ಅವನ ಮನಸ್ಸಿನಲ್ಲಿ

ಅಲೋಚನೆಯೊಂದು ಹೊಳೆದು ಮಾಯವಾಗುತ್ತಿತ್ತು. 'ಹೆಣ್ಣಿನ ಮನಸ್ಸನ್ನು ಅರಿಯುವ ವಿಶೇಷ ಶಕ್ತಿ ತನಗೆ ಒದಗಿದ್ದರೆ.....' ಎಂಬ ಆಲೋಚನೆಯ ಹಿಂದೆ ಅವನು ತನ್ನದೇ ಲೋಕದಲ್ಲಿ ಕಳೆದು ಹೋಗುತ್ತಿದ್ದ .ಆಗ ಅವನು ತನ್ನ ಮನೋಗತವನ್ನು ವ್ಯಕ್ತಪಡಿಸುತ್ತಿದ್ದುದು ಅವನ ತಾಯಿ ವಸಂತಿಯೊಡನೆ ಮಾತ್ರ.

ಬಾಲ್ಯದಿಂದಲೂ ವಸಂತಿ ಅವನ ಬಾಳಿನ ಆಧಾರ ಸ್ಥಂಭವಾಗಿದ್ದಳು. ಅವನ ತಂದೆ ಮದುವೆಯಾದ ಆರು ತಿಂಗಳಲ್ಲಿಯೇ ತೀರಿ ಹೋದ ಎಂದು ಆಕೆ ಹೇಳುತ್ತಿದ್ದಳು. ತಂದೆಯ ಬಲಿಷ್ಠ ಬಾಹುಗಳ ಆಸರೆಯನ್ನು ಅವನು ಬಾಲ್ಯದಲ್ಲಿ ಬಯಸಿದ್ದ, ಅದು ಈಡೇರದ ಬಯಕೆಯಾಗಿ ಬೇತಾಳನಂತೆ ಬೆನ್ನು ಹತ್ತಿ ಕಾಡಿಸತೊಡಗಿತು. ಇಡೀ ಬದುಕಿನುದ್ದಕ್ಕೂ ಯಾವಾತನ ಹಂಬಲದಲ್ಲಿ ಕಳೆದಿದ್ದನೋ ಆತನು ಕಗ್ಗತ್ತಲ ನೆರಳಾಗಿಯೇ ಉಳಿದನೆಂಬ ಖೇದ ಅವನ ವ್ಯಕ್ತಿತ್ವದ ಭಾಗವಾಗಿತ್ತು. ತನ್ನ ತಂದೆಯ ಭಾವಚಿತ್ರವೂ ಕೂಡ ಅವನಿಗೆ ಲಭ್ಯವಾಗಲಿಲ್ಲ. ತಂದೆ ಎಂದರೆ ನಿಗೂಢತೆ, ರಹಸ್ಯ, ಒಡೆಯದ ಒಗಟು ; ತನ್ನ ಆತ್ಮದ ಆಳದಲ್ಲಿ ನೆಟ್ಟ ಕೂರಲಗು ಎಂಬುದೊಂದೇ ಅವನ ಅನುಭವ. ಅವನ ಮನದ ಕತ್ತಲನ್ನು ಓಡಿಸಲು ಸಮರ್ಥವಾಗಿದ್ದ ಅವನ ತಾಯಿ ವಸಂತಿಯ ಮೌನ ಅವನಿಗೆ ಅಸಹನೀಯವಾಗಿತ್ತು. ತನ್ನ ಬಾಳಿನುದ್ದಕ್ಕೂ ಆ ಮೌನದ ಚಿಪ್ಪನ್ನು ಒಡೆಯುವ ಪ್ರಯತ್ನದಲ್ಲಿ ಅಮರ್ ವಿಫಲನಾಗಿದ್ದ.

ಅವನ ಮಾನಸಿಕ ಲೋಕದ ಏರಿಳಿತಗಳನ್ನು ಕೂಡಾ ಅವಳು ಬಲ್ಲವಳಾಗಿದ್ದಳು. ಅವನು ಯಾವೊತ್ತಾದರೂ ತೀರಾ ಖಿನ್ನನಾಗಿದ್ದಾನೆ ಅಥವಾ ತನ್ನ ತಂದೆಯ ಕುರಿತು ಅಂತರ್ಯದಲ್ಲಿಯೇ ತುಡಿಯುತ್ತಿದ್ದಾನೆ ಎಂದು ಅವಳಿಗೆ ಅನಿಸಿದಾಗ, ಅವಳು ಮಂದ ಬೆಳಕಿನಲ್ಲಿ ಅವನೊಡನೆ ಕೂರುತ್ತಿದ್ದಳು ಹಾಗೂ ಅವನ ಹಣೆಯ ಮೇಲೆ ಮೆಲುವಾಗಿ ಕೈಯಾಡಿಸುತ್ತಿದ್ದಳು. ಅವನು ಅವಳ ತೊಡೆಯ ಮೇಲೆ ತನ್ನ ತಲೆಯನ್ನಿರಿಸಿ, ಅವಳ ಕಿಬ್ಬೊಟ್ಟೆಗೆ ತನ್ನ ಮುಖವನ್ನು ಆನಿಸಿ, ಅವಳ ಮಮತೆಯ ಕಾವಿನಲ್ಲಿ ಕರಗಿಹೋಗುತ್ತಿದ್ದ. ಆಗ ಅವನಿಗೆ ಮಂಪರು ನಿದ್ರೆ ಬಂದಂತಾಗಿ ವಿಚಿತ್ರ ಕನಸುಗಳು ಅವನನ್ನು ಆವರಿಸುತ್ತಿದ್ದವು. ಅಲ್ಲಿ ಅವನು ತನ್ನ ತಂದೆಯೊಂದಿಗೆ ಮುಖಾ ಮುಖಿಯಾಗುತ್ತಿದ್ದ. ಅವನೊಡನೆ ಆಡಿ ಹಾಡಿ ಕುಣಿದು ಕುಪ್ಪಳಿಸಿ ತನ್ನ ಲೋಕಕ್ಕೆ ಮರಳಿದಾಗಲೂ ಅವನ ಎದೆಯಲ್ಲಿ ಅತೃಪ್ತಿಯ ದಾವಾನಿಲ ಅಡಗಿರುತ್ತಿತ್ತು. ಮತ್ತೆ ಒಮ್ಮೊಮ್ಮೆ ಅವನು ಏಕಾಂತದಲ್ಲಿ ಒಂಟಿಯಾದಾಗ ಅವಳು ಅವನೊಡನೆ ದೂರದ ಹಾದಿಯಲಿ ನಡೆಯಲಾರಂಭಿಸುತ್ತಿದ್ದಳು. ಆಕೆಯ ಎಡಗೈಯಲ್ಲಿ ತನ್ನ ಪುಟ್ಟ ಬಲಗೈಯನ್ನು ಹಿಡಿದು ವಿಳಾಸವಿಲ್ಲದ ಬೀದಿಗುಂಟ ಅವನು ಹಲವಾರು ಸಾರಿ ಅಲೆದಾಡಿದ್ದಾನೆ. ಆದರೆ ಅವನ ಮನಕೆ ತಂಪಾಗುತ್ತಿರಲಿಲ್ಲ. ಅನಾಮಧೇಯ ಅಪ್ಪನ ಹುಡುಕಾಟದಲ್ಲಿ ಅವನು ಸೋತು ಹೋಗುತ್ತಿದ್ದ ಹಲವರು ಸಂದರ್ಭಗಳಲ್ಲಿ, ತಾಯಿಯ ಬಗ್ಗೆ ತೀವ್ರ ದ್ವೇಷದ ಭಾವವೊಂದು ಉಕ್ಕೇರಿ ಹಾಗೆಯೇ ಮರೆಯಾಗುತ್ತಿತ್ತು . ಅಮ್ಮ..... ನಿನ್ನನ್ನು ದ್ವೇಷಿಸಲು ಕೂಡಾ ನನಗೆ ಸಾಧ್ಯವಿಲ್ಲ. ಒಂದೇ ಒಂದು ಸಾರಿ ಆ ಕಗ್ಗಂಟನ್ನು ಬಿಡಿಸಮ್ಮ..... ಸಾಕು ನನಗೆ... ಮತ್ತೆ ಎಂದಿಗೂ ನಿನ್ನನ್ನು ಕಾಡಿಸುವುದಿಲ್ಲ. ಅವನ ಕಾಣದ ಬಿಕ್ಕಳಿಕೆಗಳನ್ನು ಅವಳು ಗ್ರಹಿಸುತ್ತಿದ್ದಳು ಮತ್ತು ತನ್ನ ಎಡಗೈಯ ಹಿಡಿತವನನು ಮತ್ತಷ್ಟು ಬಲ ಪಡಿಸುತ್ತಿದ್ದಳು. ಸಾಂತ್ವನ

ಕಾಣದ ಅವನು, ಮನದಲ್ಲಿಯೇ ನಿರ್ಧರಿಸುತ್ತಿದ್ದ ತನ್ನ ಮಗನೊಡನೆ ತನ್ನ ಆಟ ಪಾಟಗಳು ಒಲುಮೆ ಹೀಗೆ . . .ಹೀಗೆ ಇರುತ್ತವೆ.

ಮದುವೆಯಾದ ನಂತರ ಅವಳು ಇನ್ನಷ್ಟು ಕಗ್ಗಂಟಾದಳು. ನೀತಿ ಮತ್ತು ಅವಳ ನಡುವೆ ಸಾಂಪ್ರದಾಯಿಕ ಅತ್ತೆ-ಸೊಸೆಯಂದಿರ ವಿರಸವೇನೂ ಇರಲಿಲ್ಲ. ವಸಂತಿ ಕೂಡ ಕೌಟುಂಬಿಕ ಸಲಹೆಗಾರಳ ವೃತ್ತಿಯಲ್ಲಿ ತೊಡಗಿದ್ದು, ಆಳವಾಗಿ ಅಧ್ಯಯನ ಮಾಡಿ ತನ್ನ ಕ್ಷೇತ್ರದಲ್ಲಿ ಹೆಸರುವಾಸಿಯಾಗಿದ್ದವಳು. ಹೀಗಾಗಿ, ಅತ್ತೆ-ಸೊಸೆಯ ನಡುವೆ ಕೌಟುಂಬಿಕ ಬಾಂಧವ್ಯಕ್ಕಿಂತ ಹೆಚ್ಚಾಗಿ ಪರಸ್ಪರ ಗೌರವದ ಸಂಬಂಧವಿತ್ತು.ಒಬ್ಬರ ಮೇಲೊಬ್ಬರು ಹೇರಿಕೊಳ್ಳುವ ಮನಃಸ್ಥಿತಿಯಾಗಲೀ ಅಥವಾ ಅವನ ಮೇಲೆ ತಮ್ಮ ಹಕ್ಕು ಸಾಧನೆಗಾಗಿ ಮೇಲು ಬಿದ್ದು ಪೈಪೋಟಿಯಿಂದ ತಂತ್ರ ಪ್ರತಿ-ತಂತ್ರಗಳನ್ನು ಹೂಡುವುದಾಗಲೀ ಅವರಿಬ್ಬರ ಆಕ್ತಿದಾಯಕ ವಿಷಯವಾಗಿರಲಿಲ್ಲ. ಅವರಿಬ್ಬರ ಮದುವೆಯಾದ ನಂತರ ವಸಂತಿ ಅವರಿಬ್ಬರನ್ನು ಹನಿಮೂನ್‌ಗೆಂದು ಏರ್‌ಪೋರ್ಟಿನಲ್ಲಿ ಬೀಳ್ಕೊಟ್ಟು ತಾನು ತನ್ನ ಕಾರ್ಯಕ್ಷೇತ್ರಕ್ಕೆ ಮರಳಿದ್ದಳು. ಪ್ರತಿ ಬಾರಿಯೂ ಒಂದು ವಾರದ ಮಟ್ಟಿಗೆ ಅವರನ್ನು ಭೇಟಿಯಾಗಲು ಬಂದಾಗ, ಅವರ ಬಿಡುವನ್ನು ಮೊದಲೇ ಗೊತ್ತು ಪಡಿಸಿಕೊಂಡು ಬರುತ್ತಿದ್ದಳು ಹಾಗೂ ನೀತಿ ಕೂಡಾ ಆ ಸಂದರ್ಭದಲ್ಲಿ ರಜೆ ಪಡೆದು ಅವಳೊಡನೆ ಸೌಹಾರ್ದಯುತವಾಗಿ ಇರುತ್ತಿದ್ದಳು. ಆ ಭೇಟಿಯು ಕೂಡಾ ವರ್ಷಕ್ಕೆ ಒಂದು ಬಾರಿ ಎಂದು ನಿಯಮಿತವಾಗಿ ಇಬ್ಬರೂ ವ್ರತದಂತೆ ಪಾಲಿಸುತ್ತಿದ್ದರು. ನೀತಿ ಮತ್ತು ಅವಳ ನಡುವೆ ಆಗಾಗ್ಗೆ ಶುಭಾಶಯಗಳ ವಿನಿಮಯವಾಗುತ್ತಿತ್ತು. ಇನ್ನೂ ವಿಚಿತ್ರವೆಂದರೆ ಅವಳು ಎಂದಿಗೂ ಅವರಿಬ್ಬರಿಂದ ತನಗೊಂದು ಮೊಮ್ಮಗು ಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟಿರಲಿಲ್ಲ. ನೀತಿ ಗರ್ಭಿಣಿ ಆಗಿರುವಳೆಂದು ಖಚಿತವಾದ ನಂತರ ಅಮ ಆಕೆಗೆ ಫೋನಿನ ಮೇಲೆ ಸುದ್ದಿಯನ್ನು ಮುಟ್ಟಿಸಿದ್ದ. ಆಕೆಯ ದೀರ್ಘ ಉಸಿರಾಟ ಮಾತ್ರ ಅವನಿಗೆ ಕೇಳಿ ಬಂದಿತ್ತು. ಯಾವುದೇ ಪ್ರತಿಕ್ರಿಯೆಯನ್ನು ನೀಡದೆ, ಸಂತೋಷವನ್ನೂ ವ್ಯಕ್ತ ಪಡಿಸದೆ ಆಕೆ ಫೋನಿನ ಸಂಪರ್ಕವನ್ನು ಬಂದ್ ಮಾಡಿದ್ದಳು.

ಅಮರ್‌ನ ಆಲೋಚನಾ ಲಹರಿ ಯಾವುದೇ ಸೂತ್ರಕ್ಕೆ ಒಳ ಪಡದೆ, ತನಗೆ ಬೇಕಾದಂತೆ ಗತಕಾಲಕ್ಕೆ ಜಾರಿಕೊಂಡು ವರ್ತಮಾನಕ್ಕೆ ಹಟಾತ್ತಾಗಿ ಕೊಂಡಿಯನ್ನು ಬೆಸೆಯುತ್ತಿತ್ತು. “ತಂದೆಯ ನಿರೀಕ್ಷಣಾ ಕೊಠಡಿಯಲ್ಲಿ ಬೇಕಾದಷ್ಟು ಸವಲತ್ತುಗಳಿದ್ದವು. ಊಟ ಉಪಚಾರ, ಕಾಫಿ-ಟೀ, ಎಲ್ಲವೂ ಲಭ್ಯ ಇದ್ದವು. ಆದರೆ ಸಿಗರೇಟ್, ಮಾದಕ ದ್ರವ್ಯಗಳ ಸೇವನೆ, ಟಿ.ವಿ ಹಾಗೂ ಸೆಲ್‌ಫೋನ್‌ಗಳ ಬಳಕೆಗೆ ಅವಕಾಶವಿರಲಿಲ್ಲ. ಹೀಗಾಗಿ, ತಮ್ಮ ನವಜಾತ ಶಿಶುವಿನ ಆಗಮನದ ಕಾಯುವಿಕೆಯು ತಂದೆಯ ಆತ್ಮ ನಿರೀಕ್ಷಣೆಯ ಕ್ಷಣಗಳೂ ಕೂಡ ಆಗಿದ್ದವು. ಆ ನಿರೀಕ್ಷಣಾ ಕೋಣೆಯಲ್ಲಿ ಈ ಆಲೋಚನೆಗಳು ಕೂಡ ಅವನನ್ನು ಮುತ್ತುತ್ತಿದ್ದಂತೆಯೇ ಅವನು ತೀರಾ ಅಸ್ತವ್ಯಸ್ತನಾದ ಅವನ ದೇಹದ ಸಕ್ಕರೆ, ಉಪ್ಪು, ಮತ್ತಿತರೆ ಹಾರ್ಮೋನ್‌ಗಳು ಎಷ್ಟೆಷ್ಟು ಏರಿದವೊ ತಿಳಿಯದು. ವೈದ್ಯರ ತಂಡ ಕಣ್ಣುಗಳಲ್ಲಿಯೇ ಸಂವಾದ ನಡೆಸುತ್ತ ಆತನ ಖಾಸಗಿ ಕೋಣೆಯ ಏಕಾಂತತೆಯೊಳಗಿಂದ ಅವನನ್ನು ಹೊರತರಬೇಕೆಂದು ನಿರ್ಧರಿಸಿದರು.

ಅಂತೆಯೇ ನರ್ಸ್ ಒಬ್ಬಳು ಅವನನ್ನು ಹಾಲ್‌ಗೆ ಕರೆ ತರುವಲ್ಲಿ ಯಶಸ್ವಿಯಾದಳು. ಅಲ್ಲಿ ತಮ್ಮ ನವಜಾತ ಶಿಶುಗಳ ನಿರೀಕ್ಷೆಯ ಸಂಭ್ರಮದಲ್ಲಿದ್ದ ಇನ್ನೂ ಅನೇಕ ತಂದೆಯರು ಇದ್ದರು.

ಇರ್ಫಾನ್ ಖಾನ್ ಎಂಬ ಆ ವಕೀಲನು ನಲವತ್ತರ ಅಂಚಿನಲ್ಲಿದ್ದ. ಕಳೆದ ವರ್ಷದವರೆಗೂ ಅವನನ್ನು ಯಾವ ಹೆಣ್ಣು ಕೂಡ ಕಣ್ಣೆತ್ತಿ ನೊಡಿರಲಿಲ್ಲ. ಅವಿವಾಹಿತನಾಗಿಯೇ ಉಳಿದಿದ್ದ ಆತನ ಬದುಕಿನಲ್ಲಿ ತಿರುವಿ ಮೂಡಿದ್ದೇ ಆತನ ಸ್ನೇಹಿತನಾದ ಜಾಕೀರ್ ಆಪಘಾತದಲ್ಲಿ ಮೃತಪಟ್ಟಾಗ, ಆತನ ಪತ್ನಿ ನಸೀಮಾ ಅಪಘಾತದ ಪರಿಹಾರದ ಪ್ರಕರಣವನ್ನು ಅವನ ಕೈಗೊಪ್ಪಿಸಿದಾಗ ಮನಸ್ಸಿಟ್ಟು ಪ್ರಕರಣವನ್ನು ನಡೆಸಿದ ಮತ್ತು ಇನ್ನಷ್ಟು ಆಸಕ್ತಿ ವಹಿಸಿ ಅವಳನ್ನು ಒಲಿಸಿಕೊಂಡ. ಮೊದಲ ಪತಿಯಿಂದ ಈಗಾಗಲೇ ಒಂದು ಹೆಣ್ಣು ಮಗುವಿತ್ತು. ನಸೀಮಾಳನ್ನು ಮದುವೆಯಾದದ್ದೇ ಅವನ ಅದೃಷ್ಟ ಖುಲಾಯಿಸಿತು. ಮದುವೆಯಾದ ಕೂಡಲೇ ನಸೀಮಾ ಮತ್ತೊಮ್ಮೆ ಗರ್ಭಿಣಿಯಾದಳು. ಇರ್ಫಾನ್ ಅತೀವ ಚಿಂತೆಗೊಳಗಾದ. ದುರದೃಷ್ಟವಶಾತ್ ತನಗೆ ಗಂಡುಮಗುವಾದರೆ ಎಂಬ ಚಿಂತೆ ಅವನನ್ನು ಬಾಧಿಸತೊಡಗಿತು. ಅವನೊಂದು ಉಪಾಯವನ್ನು ಮಾಡಿದ. ಲೋಕಾಯುಕ್ತ ಪೊಲೀಸಿನವರು ಹೂಡಿದ್ದ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿಯಲ್ಲಿನ ಪ್ರಕರಣ ಒಂದರಲ್ಲಿ ಆರೋಪಿಯಾಗಿದ್ದ ವೈದ್ಯನೊಬ್ಬ ಅವನ ಕಕ್ಷಿದಾರರಾಗಿದ್ದ. ಆ ವೈದ್ಯನನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಳಾಂತರದಲ್ಲಿ ನಸೀಮಾಳ ಭ್ರೂಣದ ಲಿಂಗವನ್ನು ಪತ್ತೆ ಹಚ್ಚಿದ ಅವನಿಗೆ ಮಹದಾನಂದವಾಗಿತ್ತು. ನಸೀಮಾಳಿಗೆ ಹುಟ್ಟುವ ಮಗು ಹೆಣ್ಣು ಎಂದು ವೈದ್ಯರು ಗೌಪ್ಯವಾಗಿ ದೃಢೀಕರಿಸಿದ್ದರು. ಹೀಗಾಗಿ ಅವನು ನಿರಾಂತಕವಾಗಿದ್ದ ಮತ್ತು ಅಲ್ಲಿದ್ದ ಎಲ್ಲರ ನಡುವೆಯೂ ಧೀರೋದ್ದಾತ್ತವಾಗಿ ನಡೆದುಕೊಳ್ಳುತ್ತಿದ್ದ . ಮತ್ತು ಗಂಡಾಗಲಿ ಹೆಣ್ಣಾಗಲಿ ತಾನು ಸಮಾನಭಾವದಿಂದ ಸ್ವೀಕರಿಸುವುದಾಗಿಯೂ ಹಾಗೂ ತಾನು ಕೂಡ ಗಂಡಾದುದರಿಂದ ಹುಟ್ಟಲಿರುವ ಭಾವಿ ಗಂಡು ಮಗುವಿಗೆ ಸೂಕ್ತ ವಿದ್ಯಾಭ್ಯಾಸವನ್ನು ನೀಡಿ ಈ ಸಮಾಜದಲ್ಲಿ ಘನತೆಯಿಂದ ಬಾಳುವ ಅವಕಾಶವನ್ನು ಕಲ್ಪಿಸುವುದಾಗಿಯು ಘೋಷಿಸುತ್ತಿದ್ದ. ಅವನ ಈ ನಡವಳಿಕೆಯನ್ನು ಕಂಡು ಅಲ್ಲಿ ನೆರೆದಿದ್ದವರ ಪೈಕಿ ಅನೇಕರು ಒಂದಿಷ್ಟು ಧೈರ್ಯವನ್ನು ಪಡೆದುಕೊಂಡರು.

ಅಲ್ಲಿದ್ದ ವ್ಯಾಪಾರಿ ಜೀವರಾಜ್‌ಗೆ ಈಗಾಗಲೇ ಇಬ್ಬರು ಗಂಡು ಮಕ್ಕಳಿದ್ದರು . ಅವನಿಗೆ ಕಿರಿಯ ಮಗ ಹುಟ್ಟಿದಾಗ ಸುತ್ತ ಮುತ್ತಲಿನ ಜನ ಸಂತಾಪವನ್ನು ಮಾತಿನಲ್ಲಿ ಸೂಚಿಸಲಿಲ್ಲ ಬದಲಿಗೆ ಕೃತಿಯಲ್ಲಿ ಮತ್ತು ನಡವಳಿಕೆಯಲ್ಲಿ ತೋರಿದರು. ತನ್ನ ಗಂಡು ಮಕ್ಕಳ ಭವಿಷ್ಯದ ಬದುಕಿನ ಬಗ್ಗೆ ಯೋಚಿಸಿ ಅವನು ಅರೆಜೀವವಾಗಿದ್ದ. ಮೂರನೆಯ ಬಾರಿಗೆ ಗರ್ಭಿಣಿಯಾಗಿದ್ದ ಅವನ ಹೆಂಡತಿ ಒಂದು ಹೆಣ್ಣನ್ನು ಹಡೆದರೆ ಸಾಕೆಂದು ಅವನು ಅನೇಕ ಹರಕೆಗಳನ್ನು ಕಟ್ಟಿದ್ದ. ಹೀಗಾಗಿ ಅವನು ಅಪಾರ ಸಂಘರ್ಷದಲ್ಲಿದ್ದ ಮತ್ತು ತೋರಿಕೆಗಾದರೂ ನಿರ್ಲಿಪ್ತನಾಗಿರುವುದು ಅವನಿಗೆ ಸಾಧ್ಯವಿರಲಿಲ್ಲ.

ಗ್ರಾಮದಿಂದ ಬಂದಿದ್ದ ಕೃಷಿಕ ಕೇಶವನಿಗೆ ಈಗಾಗಲೇ ಇಬ್ಬರು ಹೆಣ್ಣು ಮಕ್ಕಳಿದ್ದರು. ಮೂರನೆಯ ಹೆರಿಗೆಯಲ್ಲಿ ಕೂಡ ಹೆಣ್ಣು ಮಗುವೇ ಜನಿಸಲಿ ಎಂಬುದು ಅವನ

ಆಂತರ್ಯದ ಪ್ರಾರ್ಥನೆಯಾಗಿತ್ತು. ಏಕೆಂದರೆ ಅವನು ಸಾಕಿದ್ದ ಅನೇಕ ಹಸುಗಳು ಕೂಡ ಹೆಣ್ಣುಗರುವನ್ನು ಈದಾಗ ಅವನಿಗೆ ದೊರಕುವ ಲಾಭದಂತೆ ಹೆಣ್ಣು ಕೂಸು ಹುಟ್ಟಿದಾಗ ಕೂಡ ತನಗೆ ದೊರೆಯುವ ಲಾಭದತ್ತ ಅವನ ಗಮನ ಕೇಂದ್ರೀಕೃತವಾಗಿರುತ್ತಿತ್ತು. ಹೆಣ್ಣು ಮಗಳು ಮನೆಯ ಮಹಾಲಕ್ಷ್ಮಿ ಎಂಬುದು ಅವನ ಪಾಲಿಗೆ ಅಕ್ಷರಶಃ ನಿಜವಾಗಿತ್ತು. ಹುಟ್ಟಿದಾರಭ್ಯ ಎಲ್ಲಾ ಕಡೆಗಳಲ್ಲಿಯೂ ಅವರಿಗೆ ಸಿಗುತ್ತಿದ್ದ ಸರ್ಕಾರಿ ಸವಲತ್ತುಗಳು, ಪ್ರಾಶಸ್ತ್ರ ಮತ್ತು ಗೌರವವು ಅವನ ಅಂತಸ್ತನ್ನು ಹೆಚ್ಚಿಸಿತ್ತು. ಅವರು ವಯಸ್ಸಿಗೆ ಬಂದರೆ ಸಾಕು ಗಂಡು ಹೆತ್ತವರ ಕ್ಯೂ ಅವನ ಮನೆ ಎದುರು ಸಾಲುಗಟ್ಟುತ್ತಿತ್ತು. ಈ ಸಂತೋಷ ಮತ್ತು ನಿರೀಕ್ಷೆಯಲ್ಲಿ ಅವನೂ ಕೂಡ ಯಾವುದೇ ಆತಂಕವಿಲ್ಲದೆ ಆರಾಮದಾಯಕವಾಗಿ ತನ್ನನ್ನು ತೊಡಗಿಸಿಕೊಂಡಿದ್ದ.

ಕಾಯಲು ಸಾಧ್ಯವಿಲ್ಲದ ನಿರೀಕ್ಷಣೆಯ ಕ್ಷಣಗಳ ಯಾತನೆಯ ನಿರ್ದಯ ಮೊನಚನ್ನು ಅಮರ್ ಎಷ್ಟು ಸಹಿಸಲು ಸಾಧ್ಯ. ಅಲ್ಲಿದ್ದ ಇತರೆಯವರು ತಮ್ಮ ಒಳತೋಟಿಯನ್ನು ಮರೆಮಾಚಿ ಸುಲಭವಾಗಿ ಸಂಭಾಷಣೆಯಲ್ಲಿ ತೊಡಗಿದ್ದರೂ ಅಮರ್ ಮಾತ್ರ ಹಟ ಹಿಡಿದವನಂತೆ ಮೌನವ್ರತವನ್ನು ತೊಟ್ಟಿದ್ದ. ಅವನನ್ನು ಮಾತಿಗೆಳೆಯುವ ಪ್ರಯತ್ನ ಮುಂದುವರೆದಿತ್ತು.

ಮ್ಯಾಗ್‌ಜೀನ್ ಒಂದರಲ್ಲಿ ಹುದುಗಿದ್ದ ರಿಚರ್ಡ್ ತೀರ ವಿಷಾದಕ್ಕೊಳಗಾಗಿದ್ದ, ನಿಯತಕಾಲಿಕವನ್ನು ಅವನು ಇರ್ಫಾನ್‌ನತ್ತ ಚಾಚಿದ ಮತ್ತು ಎಲ್ಲಾ ಕಹಿಯನ್ನು ಕಕ್ಕುತ್ತ “ನೋಡಿ ಸಾರ್........ ನಿಮ್ಮ ಕಾನೂನಿನ ಪರಿಯನ್ನು ಇವನು ಹೈದರ್ ಅಂತ. ಪಿಗ್ಮಿ ಏಜೆಂಟ್. ತನ್ನ ಹೆಂಡತಿಯ ಹೆರಿಗೆಯ ಸಂದರ್ಭದಲ್ಲಿ ಹಾಜರಿರಲಿಲ್ಲವೆಂದು ಅವನ ಮೇಲೆ ಕ್ರಿಮಿನಲ್ ಕೇಸನ್ನು ಹಾಕಿದ್ದಾರೆ. ಈಗ ತೀರ್ಪು ಹೊರ ಬಂದು ಅವನಿಗೆ ಆರು ತಿಂಗಳ ಕಾಲ ಜೈಲು ಶಿಕ್ಷೆಯಾಗಿದೆ.

“ಅರೆ! ಮತ್ತೇನು? ಕಾನೂನು ಎಂದರೆ ಏನೂಂತ ತಿಳಿದುಕೊಂಡಿದ್ದೀರಿ. ಕಾನೂನಿನ ಚಲಿಸುವ ಶಕ್ತಿ ಮಂದವಾಗಿರಬಹುದು ಆದರೆ ಒಮ್ಮೆಲೇ ಅದು ಕುತ್ತಿಗೆ ಹಿಡಿದರೆ ಯಾರೂ ಬಚಾವಾಗಲು ಸಾಧ್ಯವಿಲ್ಲ.” ಎಂದವನೇ ತನ್ನ ಕೈಯ್ಯಲ್ಲಿದ್ದ ವಾರಪತ್ರಿಕೆಯ ಕವರ್ ಪೇಜನ್ನು ಎತ್ತಿ ಹಿಡಿದು ವ್ಯಂಗ್ಯ ನಗೆಯೊಂದನ್ನು ಸೂಸಿದ. “ಅದು ಒತ್ತಟ್ಟಿಗಿರಲಿ ಇಲ್ಲಿ ನೋಡಿ.... ಸಮಾಜ ಬದಲಾಗುತ್ತೆ ನಿಜ. ಆದರೆ ಇಷ್ಟೊಂದು... ?” ಎಂದು ನುಡಿದವನೇ ಕುತೂಹಲ ಕೆರಳಿದ ಭಂಗಿಯಲ್ಲಿ ಆ ವಾರ ಪತ್ರಿಕೆಯ ಮುಖ ಪುಟವನ್ನು ಎತ್ತಿ ಹಿಡಿದ. ಅತ್ಯಂತ ಸುಂದರಿಯಾದ ಮತ್ತು ನೋಡಿದ ಕೂಡಲೇ ಉನ್ನತ ಹುದ್ದೆಯಲ್ಲಿ ಇರುವವಳು ಎಂದು ಗುರುತಿಸಬಹುದಾದ ಹೆಣ್ಣೊಬ್ಬಳು ಒಂದು ಹೆಣ್ಣು ಮಗುವನ್ನು ಅತ್ಯಂತ ಮಮತೆಯಿಂದ ಎದೆಗವಚಿ ಹಿಡಿದಿದ್ದ ಚಿತ್ರವದು. ಆ ಚಿತ್ರದ ಕೆಳಭಾಗದಲ್ಲಿ “ಡಿಜೈನರ್” ಎಂಬ ಶಬ್ದದ ಬಳಿ ಪ್ರಶ್ನಾರ್ಥಕ ಚಿಹ್ನೆಯೊಂದಿತ್ತು. ವಕೀಲ ಇರ್ಫಾನ್ ಮತ್ತೂ ಬಿಡದೆ ಇದು “ಡಿಜೈನರ್ ಕಣ್ರಪ್ಪ” ಎಂದ.

ಒಮ್ಮೆಲೇ ಅಮರ್ ಕಿವಿಗಳು ಚುರುಕಾದವು. ಆಯಾಚಿತವಾಗಿ ಅವನ ಬಾಯಿಂದ “ಅದರಲ್ಲಿ ಯಾವುದು ಡಿಜೈನರ್?” ಎಂದ.



“ಹೇಳಿ ನೋಡೋಣ, ಆಕೆ ತೊಟ್ಟಿರುವ ಸೂಟ್, ಆಭರಣಗಳು ಅಥವಾ ಆ ಮಗು......?” ಅಮರ್‌ಗೆ ತೀರಾ ನಾಚಿಕೆಯೆನಿಸಿತು. ಆಕೆಯನ್ನು ಅವನು ಗುರುತಿಸಬಲ್ಲವನಾಗಿದ್ದ. ಆಕೆ ಪ್ರಮುಖ ಕಂಪನಿಯೊಂದರ ಸಿಇಓ ಆಗಿದ್ದ ನಿಹಾರಿಕ ಎಂಬುದನ್ನು ಅವನು ದೂರದಿಂದಲೇ ಗುರುತಿಸಿದ. ಅವಳು ಜನ್ಮ ನೀಡಿದ್ದ ಡಿಜೈನರ್ ಬೇಬಿಯ ಬಗ್ಗೆ ಇಡೀ ಕಾರ್ಪೊರೇಟ್ ವಲಯ ಪಿಸುಗುಟ್ಟುತ್ತಿತ್ತು. ಆದರೆ ಜಗಜ್ಜಾಹಿರಾದದ್ದು ಈಗ ಮಾತ್ರ. ಅದರೊಡನೆ ಅವಳ ಪತಿ ನಿಖಿಲ್‌ನ ಸಂದರ್ಶನ ಬೇರೆ ಪ್ರಕಟವಾಗಿತ್ತು. ಅಮರ್ ಆ ಪತ್ರಿಕೆಯನ್ನು ಕಸಿದುಕೊಂಡು ಒಮ್ಮೆಲೇ ಕಣ್ಣಾಡಿಸಿದ. ವಕೀಲ ಇರ್ಫಾನ್ ಗಹಗಹಿಸಿ ನಗುತ್ತಾ, “ಓಹೋ ನೀನು ಕೂಡ ಈ ಗುಂಪಿಗೆ ಸೇರಿರಬಹುದು” ಎಂದು ತನ್ನ ಜೋಕಿಗೆ ತಾನೇ ಸಂತೋಷಪಟ್ಟ. ಆ ಸಂದರ್ಶನವನ್ನು ಓದಿ ಮುಗಿಸುವ ವೇಳೆಗೆ ಅಮರ್ ತೀರಾ ವ್ಯಗ್ರನಾಗಿದ್ದ. ತೀರಾ ಇಷ್ಟು ಸಮೀಪಕ್ಕೆ ಈ ಪಿಡುಗು ಬಂದಿದೆಯೇ? ನಿಹಾರಿಕಾಳ ಪತಿಯಾದ ನಿಖಿಲ್ ಆ ಸಂದರ್ಶನದಲ್ಲಿ ನುಡಿದಿದ್ದ,

“ನಾವು ಬದಲಾಗುತ್ತಿರುವ ಸಮಾಜದ ಗತಿಯೊಡನೆ ಹೆಜ್ಜೆ ಇಡಬೇಕು. ಆರೋಗ್ಯವಂತ ಮತ್ತು ಪ್ರತಿಭಾನ್ವಿತ ಪೀಳಿಗೆಗೆ ಜನ್ಮ ಕೊಡುವ ಜವಾಬುದಾರಿ ನಮ್ಮ ಮೇಲೆ ಇದೆ. ಈ ಮಗು ಹೆಣ್ಣಾಗಿರಬೇಕು, ಕಾಯಿಲೆಗಳಿಂದ ಮುಕ್ತವಾಗಿರುವ ಜೀನ್ಸ್ ಹೊಂದಿರಬೇಕು ಹಾಗೂ ಆಕೆ ಪ್ರತಿಭಾನ್ವಿತ ಲೇಖಕಿಯಾಗಲು ಅಗತ್ಯವಿರುವ ವಂಶವಾಹಿಯನ್ನು ಹೊಂದಿರಬೇಕೆಂದು ನಾನು ಮತ್ತು ನನ್ನ ಪತ್ನಿ ನಿಹಾರಿಕಾ ನಿರ್ಧರಿಸಿದ್ದೆವು. ಈ ನಮ್ಮ ಬಯಕೆಯು ಜೀವಂತವಾಗಿ ಸಾಕಾರಗೊಳ್ಳಲು ನೆರವು ನೀಡಿದ ವೈದ್ಯರ ತಂಡಕ್ಕೆ ನಾವಿಬ್ಬರೂ ಕೂಡ ಆಭಾರಿಗಳಾಗಿದ್ದೇವೆ.”

ಪತ್ರಿಕೆಯ ಮುಂದಿನ ವರದಿಯಲ್ಲಿ ವೈದ್ಯಕೀಯ ಪ್ರಯತ್ನದ ಪೂರ್ಣ ವಿವರಗಳನ್ನು ನೀಡಲಾಗಿತ್ತು. ನಿಹಾರಿಕಾಳ ಅಂಡವನ್ನೇ ವೈದ್ಯರ ತಂಡ ಆಯ್ಕೆ ಮಾಡಿದ್ದು, ವಿಶ್ವದ ಖ್ಯಾತ ಸಾಹಿತಿಯೊಬ್ಬ ಆ ಮಗುವಿನ ಜನನಕ್ಕೆ ವೀರ್ಯ ದಾನ ಮಾಡಿದ್ದು, ಆತನ ಹೆಸರನ್ನು ಗುಪ್ತವಾಗಿಡಲಾಗಿದೆ ಎಂದು ವೈದ್ಯರ ತಂಡವು ತಿಳಿಸಿತ್ತು. ಮುಖಪುಟ ಆಧಾರಿತ ಮುಖ್ಯ ವರದಿಯಾಗಿದ್ದು, ಆ ರೀತಿಯ ಜನ್ಮ ಕೊಡುವ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳಲಾದ ವೈದ್ಯಕೀಯ ತಂತ್ರಜ್ಞಾನ ಮತ್ತು ಜೆನೆಟಿಕ್ ಇಂಜಿನಿಯರಿಂಗ್‌ನ ವಿವಿಧ ಮಜಲುಗಳನ್ನು ವಿವರವಾಗಿ ತಿಳಿಸಲಾಗಿತ್ತು. ಅಷ್ಟೆ ಅಲ್ಲದೆ

ನಿಖಿಲ್ ತಾನು ಆ ಮಗುವಿನ ಜೈವಿಕ ತಂದೆ ಅಲ್ಲವಾಗಿದ್ದರೂ, ಅದರ ಕಾನೂನೀ ತಂದೆ ಎಂದೆನಿಸಿಕೊಳ್ಳಲು ತನಗೆ ವಿಪರೀತ ಹೆಮ್ಮೆಯಾಗುತ್ತದೆ ಎಂಬ ಮಾತನ್ನೂ ಕೂಡ ಸೇರಿಸಿದ್ದ.

ಅಮರ್‌ನ ಹಣೆಯ ಮೇಲೆ ಮತ್ತು ಬೋಳು ನೆತ್ತಿಯ ಮೇಲೆ ಬೆವರಿನ ಹನಿಗಳು ಮೂಡಲಾರಂಭಿಸಿದವು. ಯಾಕೋ ವಿಪರೀತ ನಿತ್ರಾಣವೆಂದೆನಿಸಿ ಕುಸಿದು ಹೋಗುತ್ತೇನೆ ಎಂದೆನಿಸಿದಾಗ ಅವನು ಕಾಲನ್ನು ಉದ್ದಕ್ಕೂ ನೀಡಿ ಪತ್ರಿಕೆಯನ್ನು ಪಕ್ಕದ ಟೀಪಾಯಿ ಮೇಲೆ ಇಟ್ಟ. ವಕೀಲ ಇರ್ಫಾನ್ ಬಿಡಬೇಕಲ್ಲ "ನೋಡಿ ಮಿಸ್ಟರ್ ಹೀಗೆ ಕೆಲವರು ಮಾತ್ರ ಬಹಿರಂಗವಾಗಿ ಹೇಳಿಕೊಳ್ಳುತ್ತಿದ್ದಾರೆ. ಈಗಾಗಲೇ ದುಡಿಯುವ ಮಹಿಳೆಯರಲ್ಲಿ ಇದೊಂದು ಟ್ರೆಂಡ್ ಆಗಿಬಿಟ್ಟಿದೆ." ಎಂದು ಆಲೋಚನಾ ಮಗ್ನನಾದ. ಕೃಷಿಕ ಕೇಶವ

ಆ ಐಶಾರಾಮಿ ರೆಸಾರ್ಟ್‌ನ ಹೊಗೆ ಹಿಡಿದಂತೆ ಪೇಂಟ್ ಮಾಡಿದ್ದ ಗೋಡೆಗಳ ಅಡಿಗೆ ಮನೆಯ ಸೌದೆ ಒಲೆಯಲ್ಲಿ ಅಡಿಗೆ ಮಾಡಲು ನೀತಿ ಊದು ಕೊಳವೆಯಲ್ಲಿ ಊದಿ ಸುಸ್ತಾದಳು. ಅವಳ ಯಾವ ರೆಸಿಪಿಯೂ ಕಾರ್ಯಗತವಾಗಲಿಲ್ಲ. ಹೊಗೆ ತುಂಬಿ ಕಣ್ಣಿನಲ್ಲಿ ನೀರು ಹರಿದದ್ದೇ ಹೆಚ್ಚು. ಅಂತೂ ಕೊನೆಗೆ ಅವರಿಗೆ ಹಿಂದಿನ ಕಾಲದ ಒಲೆಯ ಅಡಿಗೆಯ ಅನುಭವದೊಂದಿಗೆ ಹೊಟ್ಟೆ ತಾಳ ಹಾಕತೊಡಗಿತ್ತು. ಇವರ ಕಷ್ಟ ಮನಗಂಡಂತೆ ರೆಸಾರ್ಟ್‌ನ ವೇಟರ್ ಟಿಫಿನ್ ಕ್ಯಾರಿಯರ್‌ನಲ್ಲಿ ಊಟ ತುಂಬಿಸಿಕೊಂಡು ಬಂದು ಅವರಿಬ್ಬರಿಗೂ ನೀಡಿ ಹೋದ. ಯಾವ ಒಲೆಯಲ್ಲಿ ಆ ಅಡಿಗೆ ತಯಾರಾಯಿತೆಂದು ಕೇಳುವ ಗೋಜಿಗೆ ಹೋಗದೆ ಇಬ್ಬರೂ ಸಂತೃಪ್ತವಾಗಿ ಊಟ ಮಾಡಿದರು. ರೆಸಾರ್ಟ್‌ನವರು ಮರೆಯದೆ ಊಟದ ಜೊತೆಯಲ್ಲಿ ಇಟ್ಟಿದ್ದ ಪದರು ಪದರುಗಳ ಎಲೆ-ಅಡಿಕೆ ಚೀಲವನ್ನು ಬಿಚ್ಚಿ ಇಬ್ಬರೂ ಅದರಲ್ಲಿ ಮಡಿಚಿಟ್ಟಿದ್ದ ಬೀಡವನ್ನು ಬಾಯಿಗೆ ಹಾಕಿಕೊಂಡರು. ಬೀಡವನ್ನು ಮೆಲ್ಲುತ್ತಾ ಅವರಿಬ್ಬರೂ ಕೂಡ ಅಡಿಗೆ ಮನೆಯಲ್ಲಿದ್ದ ಚಾಪೆಯ ಮೇಲೆ ಉರುಳಿಕೊಂಡರು.

ನೀತಿ ತನ್ನದೇ ಆದ ಲಹರಿಯಲ್ಲಿ ಈಸುತ್ತಾ ತನ್ನ ಮಗುವಿನ ತೀಡಿ ಫೋಟೋವಿನ ಆಧಾರದ ಮೇಲೆ ತನ್ನ ಮಗುವಿನ ಕಲ್ಪನೆಯನ್ನು ಮಾಡಿಕೊಳ್ಳುತ್ತಾ ಆ ಆನಂದದ ಅನುಭವದಲ್ಲಿ ಮುಳುಗೇಳುತ್ತಿದ್ದಳು.

"ನಿನಗೆ ಗೊತ್ತಾ ನೀತಿ.... ನಿನ್ನ ಗೆಳತಿ ನಿಹಾರಿಕಾಗೆ ಡಿಜೈನರ್ ಬೇಬಿ ಹುಟ್ಟಿದೆಯಂತೆ?"

ನೀತಿ ಯಾವುದೇ ಉತ್ತರವನ್ನು ನೀಡದೆ ಇದ್ದರೂ ಆಂತರಿಕವಾಗಿ ಜ್ವಾಲಾಮುಖಿಯೊಂದು ಆಸ್ಫೋಟವಾಯಿತು. ಅವಳ ಮೋರೆಯ ಮೇಲೆ ಮೂಡಿ ಮಾಯವಾಗುತ್ತಿದ್ದ ಭಾವಗಳನ್ನು ಕಂಡು ಅವನು ಎಚ್ಚೆತ್ತುಕೊಂಡ.ಆದರೆ, ಮುತ್ತಿನ ಮಾಲೆ ಹರಿದಿತ್ತು. ಅವನ ಕಣ್ಣ ಮುಂದೆಯೇ ಮುತ್ತಿನ ಮಣಿಗಳು ಕೈ ಚೆಲ್ಲಿ ಜಾರಿ ಹೋದವು . ಆದ ಪ್ರಮಾದವನ್ನು ಸರಿಪಡಿಸುವ ಅವಕಾಶವನ್ನು ಕೂಡ ನೀಡದೆ, ಅವಳು ಮುಂದೆ ಒಂದೇ ಒಂದು ಮಾತನ್ನೂ ಕೂಡ ಆಡಲಿಲ್ಲ. ಮಹಾಮೌನದಲ್ಲಿ ಸ್ಥಿರವಾದಳು. ಕೊನೆಗೆ ಅಮರ್ ತಿಪ್ಪರಲಾಗ ಹಾಕಿದರೂ ಅವರಿಬ್ಬರ ನಡುವೆ ಮತ್ತೆ ಅನುಸಂಧಾನವೇರ್ಪಡಲಿಲ್ಲ.

"ಹೋಗಲಿ ಅವರಿವರ ವಿಷಯ ನಮಗ್ಯಾಕೆ ಬಿಡು.... ನಮಗೊಂದು ಸಹಜ ಮಗು ಆದರೆ ಸಾಕು.... ನನ್ನ ಕಣ್ಣು, ನಿನ್ನ ಮೂಗು, ನಿನ್ನ ಸೊಂಪಾದ ತಲೆಗೂದಲು ನನ್ನ ಒಳ್ಳೆಯತನ, ನಿನ್ನ ಆರೋಗ್ಯ....... ಇನ್ನೂ ಅವನ ಮಾತು ಮುಂದುವರೆಯುತ್ತಿತ್ತೇನೋ ನೀತಿ ಥಟ್ಟನೆ ಎದ್ದಳು. ಆಮೇಲೆ ಅವಳ ಮೂಡ್ ಎಷ್ಟು ಕೆಟ್ಟಿತೆಂದರೆ ಅವಳು ತನ್ನ ವಾಗ್ದಾನವನ್ನು ಮರೆತು ಟಿ.ವಿ. ಆನ್ ಮಾಡಿದಳು. ಸೆಲ್ ಫೋನ್‌ನ ಸಂಪರ್ಕ ಜಾರಿಯಾಯಿತು. ತನ್ನ ಒಳಜಗತ್ತನ್ನು ಪಕ್ಕಕ್ಕೆ ತಳ್ಳಿ ರೊಚ್ಚಿನಿಂದ ಎಂಬಂತೆ ಅವಳು ಹೊರ ಜಗತ್ತಿನೊಡನೆ ಸಂಪರ್ಕವನ್ನು

ಸಾಧಿಸತೊಡಗಿದಳು. ಆ ರೆಸಾರ್ಟ್‌ನಲ್ಲಿ ಉಳಿದದ್ದಷ್ಟು ಕಾಲವೂ ಕೂಡ ಆಕೆ ಅಮರ್‌ಗೆ ಅಭೇದ್ಯಳಾಗಿಯೇ ಉಳಿದಳು. ಅಮರ್ ಮಾತ್ರ ದಿಕ್ಕೆಟ್ಟವನಂತಾದ. ಹತ್ತಿರದಲ್ಲಿದ್ದರೂ ಆಕೆ ಸಪ್ತ ಸಮುದ್ರಗಳಾಚೆ



ಇದ್ದಂತಾಗಿದ್ದಳು. ಅವನು ತಮ್ಮ ರೆಸಾರ್ಟ್ ಮನೆಯ ಸಮೀಪವಿದ್ದ ಬಾಲವನದ ಬಳಿ ಹೋದ. ಆ ಬಾಲವನದಲ್ಲಿ ಮಕ್ಕಳ ಆಟದ ಬಹುತೇಕ ಸಾಧನಗಳಿದ್ದವು. ಒಂದು ವರ್ಷ ವಯೋಮಾನದಿಂದ ಹಿಡಿದು ಹತ್ತು ವರ್ಷ ವಯಸ್ಸಿನವರೆಗಿನ ಅನೇಕ ಮಕ್ಕಳು ಆ ಬಾಲವನದಲ್ಲಿ ಆಡುತ್ತಿದ್ದರು. ಆ ಮಕ್ಕಳ ತಂದೆ ತಾಯಿಯರ ನಿಗಾವಣೆಯ ನೋಟ ಆ ಮಕ್ಕಳು ಹೋದಲ್ಲೆಲ್ಲಾ ಹರಿದಾಡುತ್ತಿತ್ತು. ಆ ಮಕ್ಕಳನ್ನು ನೋಡಿ ಅಮರ್‌ಗೆ ಮಿಶ್ರ ಭಾವಗಳು ಕಾಡತೊಡಗಿದವು. ಸಹಿಸಲಸಾಧ್ಯವಾದ ವೇದನೆ ದೇಹದಲ್ಲೆಲ್ಲಾ ವ್ಯಾಪಿಸಿ ಎದೆಯಾಳದಿಂದ ಯಾತನೆಯ ದನಿಯೊಂದು ಹೊಮ್ಮುತ್ತಿದೆ ಎಂದೆನಿಸಿದಾಗ ಅವನು ತನ್ನ ಕುಟುಂಬ ಸಲಹೆಗಾರರನ್ನು ಸಂಪರ್ಕಿಸಿದ. ಅವರ ಬಹು ದಿನಗಳ ಯೋಜನೆಯ ಗಂಡ ಹೆಂಡತಿಯ ಆಟವು ದಯನೀಯವಾಗಿ ಸೋಲನ್ನಪ್ಪಿತು.

ಆದರೆ ಈ ಮಾತು ಅಲ್ಲಿಗೇ ನಿಲ್ಲಲಿಲ್ಲ. ಒಂದು ವಾರದ ನಂತರ ಆಕೆ ಒಮ್ಮೆಲೇ ಆಫೀಸಿನಿಂದ ಫೋನ್ ಮಾಡಿದಳು, “ಅಮರ್ ಈದಿನ ಸಂಜೆ ನಿಹಾರಿಕಾ ಮತ್ತು ನಿಖಿಲ್ ತೀರಾ ಆತ್ಮೀಯರಿಗೆ ಒಂದು ಪಾರ್ಟಿಯನ್ನು ಇಟ್ಟುಕೊಂಡಿದ್ದಾರೆ. ಆ ಮಗುವಿಗೆ ನಾವು ಒಂದು ಗಿಫ್ಟ್ ತಗೋಬೇಕಾಗುತ್ತೆ ನೀನು ಸಂಜೆ ಐದು ಗಂಟೆಗೆ ನನ್ನ ಆಫೀಸಿನ ಬಳಿ ಬಂದರೆ ನಾವಿಬ್ಬರೂ ಇಲ್ಲಿಂದಲೇ ಒಟ್ಟಿಗೆ ಹೋಗಬಹುದು.” ಅಮರ್ ತಟ್ಟನೆ ಫೋನ್ ಸ್ಥಗಿತಗೊಳಿಸಿದ. ನಿಹಾರಿಕಾಳ ನೆರಳೂ ಕೂಡ ಅವನಿಗೆ ಬೇಕಿರಲಿಲ್ಲ. ಅವನು ಹೋಗದೆ ಇದ್ದರೂ ನೀತಿ ಆ ಪಾರ್ಟಿಗೆ ಹೋಗಿದ್ದಳು. ತಡರಾತ್ರಿಯಲ್ಲಿ ಮನೆಗೆ ಮರಳಿದ ಅವಳು ಅಮರ್‌ನ ಮುನಿಸನ್ನೂ ಕೂಡ ಪರಿಗಣಿಸದೆ ಅವನು ಪಾರ್ಟಿಗೆ ಯಾಕೆ ಬರಲಿಲ್ಲ ಎಂಬುದನ್ನೂ ವಿಚಾರಿಸದೆ, ಆ ಮಗುವಿನ ಅಂದ- ಚೆಂದವನ್ನು ಅವನೆದುರಿಗೆ ವರ್ಣಿಸುತ್ತಾ ಯಾವಾಗಲೋ ನಿದ್ರೆಗೆ ಜಾರಿದ್ದಳು . ಅವಳ ಸಂಭ್ರಮವನ್ನು ಕಂಡು ಅವನಿಗೆ ಅಸೂಯೆಯುಂಟಾಯಿತು. ಅವನು ಮುನಿಸಿಕೊಂಡ. ಬಡವನ ಕೋಪ ದವಡೆಗೆ ಮೂಲ ಎಂದಂತಾಯಿತು .

ಒಂದರ ಹಿಂದೆ ಒಂದು ಪುಂಖಾನುಪುಂಖವಾಗಿ ಮೂಡಿ ಬಂದ ಘಟನಾವಳಿಗಳ 'ಮೆರವಣಿಗೆಯನ್ನು ಅಮರ್ ಅಪರಿಚಿತನಂತೆ ದೂರ ಕೈ ಕಟ್ಟಿಕೊಂಡು ನಿಂತು ವೀಕ್ಷಿಸಿದ. ಯಾವ ಯಾವುದೋ ಘಟನೆಗಳು ಒಂದಕ್ಕೊಂದು ವಿಶ್ರಣಗೊಂಡು, ಎಲ್ಲವೂ ಗೋಜಲಾಗಿ ಯಾವುದೇ ಚಿತ್ರಣವನ್ನು ಕೊಡದೆ, ಇನ್ನಷ್ಟು ಮತ್ತಷ್ಟು ಬಣ್ಣಗಳು ಅವನ ಮೋರೆಯ ಮೇಲೆ ರಾಚಿದವು . ಯಾರು ಎಸೆದರೋ ಯಾರು ಒರೆಸಿದರೋ..... ಈಗ ಯಾಕೆ ಅವುಗಳು ತನ್ನನ್ನು ಕಾಡಿಸುತ್ತಿವೆ..... "ನಿಲ್ಲಿ ' ಅವನು ಆದೇಶ ಮಾಡಿದ. ಹಾಗೆಯೇ ಹಿಂದಿನ ದೃಶ್ಯಾವಳಿಗಳು ಅವನ ಮನದ ಪರದೆಯಿಂದ ಕಣ್ಮರೆಯಾದವು.

ನಿಧಾನವಾಗಿ ಅವನು ಕಣ್ತೆರೆದಾಗ, ನಾಲಿಗೆಯ ಮೇಲೆ ಮುಳ್ಳುಗಳಿದ್ದಿರುವಂತೆ ಭಾಸವಾಯಿತು . ತೊದಲುತ್ತಾ, ಅವನು 'ನೀರು' ಎಂದ. ನರ್ಸ್ ಅವನ ಬಾಯಿಗೆ ನೀರಿನ ಲೋಟವನ್ನು ಹಿಡಿದಳು. ಆಗಲೇ ಅಲ್ಲಿಗೆ ಓಡು ನಡಿಗೆಯಲ್ಲಿ ಬಂದ ಇನ್ನೊಬ್ಬ ನರ್ಸ್ 'ಆಕೆಯ ಹೆರಿಗೆಯಾಯಿತು' ಎಂದಳು. ಆಕೋಣೆಯಲ್ಲಿದ್ದ ಪ್ರತಿಯೊಬ್ಬರೂ ಒಮ್ಮೆಲೇ ಜಾಗ್ರುತರಾದರು. ಆದರೆ ಯಾವ ಡಾಕ್ಟರು ಯಾವ ರೀತಿಯಲ್ಲಿ ಆಕೆಗೆ



ಏನು ಸನ್ನೆ ಮಾಡಿದರೋ ಅವಳ ದನಿ ಉಡುಗಿ ಆಕೆ ಬೊಂಬೆಯಂತಾದಳು. ಯಾರ ಮಗು.... ಯಾರಿಗೆ ಹೆರಿಗೆಯಾಯಿತು..... ಯಾವ ಮಾಹಿತಿಯೂ ದೊರಕಲಿಲ್ಲ. ಅಮರ್‌ನನ್ನು ವೈದ್ಯರು ಸುತ್ತುವರೆದರು. ಬಹುಶಃ ಅವನಿಗೆ ಆಹೊತ್ತಿನ ಆತಂಕವನನು ದೂರಮಡುವ ಔಷಧವನ್ನು ನೀಡಿದ್ದಿರಬಹುದು. ಅವನ ಕಣ್ಣೆವೆಗಳು ಎಳೆಯಲಾರಂಭಿಸಿದವು

ಆಕೆ ಒಂದು ಕಡ್ಡಿಯನೆತ್ತಿಕೊಂಡು ತನ್ನ ರೆಕ್ಕೆಗಳನ್ನು ಹರಡಿಕೊಂಡು ಗಾಳಿಯ ಎದೆಯನ್ನು ಸೀಳುತ್ತಾ ನಂತರ ಅದನ್ನು ಬೀಳಿಸುತ್ತಾಳೆ ಗಂಡು ಹದ್ದು ಆಕೆಯ ರೆಕ್ಕೆಗಳಡಿಯಲ್ಲಿ ಹಾರುತ್ತಾ ಆಕೆಯ ವಿನ್ಯಾಸ ಮತ್ತು ವೈಖರಿಗೆ ಹೊಂದುಕೊಳ್ಳುತ್ತಾ, ಆಕೆಯ ಜೊತೆಯಲ್ಲಿ ಸಂಯೋಜನೆ ಹೊಂದುವತ್ತ ಗಮನವನ್ನು ಕೇಂದ್ರೀಕರಿಸುತ್ತದೆ. ಆಗ ಹೆಣ್ಣು ಹದ್ದು ಆ ಕಡ್ಡಿಯನ್ನು ಮೇಲಿನಿಂದ ಕೆಳಗೆ ಬೀಳಿಸುತ್ತದೆ. ಎವೆಯಿಕ್ಕು ವಷ್ಟರಲ್ಲಿ, ಗಂಡು ಹದ್ದು ಆ ಕಡ್ಡಿಯನ್ನು ಹಿಡಿಯಬೇಕು. ಆ ಕಡ್ಡಿಯನ್ನು ಹಿಡಿಯುವ ತೀವ್ರಗತಿಯ ಸಾಮರ್ಥ್ಯ ಗಂಡಿಗೆ ಇರದಿದ್ದಲ್ಲಿ ಹೆಣ್ಣು ಹದ್ದು ಅದರತ್ತ ಕಣ್ಣೆತ್ತಿಯೂ ನೋಡುವುದಿಲ್ಲ ಅದರ ಗಮನಸೆಳೆಯಲು ಕಾದು ಕುಳಿತಿರುವ ಇನ್ನಿತರೆ ಗಂಡುಗಳತ್ತ ಅದು ದೃಷ್ಟಿ ಹಾಯಿಸುತ್ತದೆ.

ಯಾವುದೇ ಗಂಡು ಮೂರು ಬಾರಿ ಹೆಣ್ಣು ಹದ್ದು ಬೀಳಿಸಿದ ಕೋಲನ್ನು ಹಿಡಿಯುವಲ್ಲಿ ಸಫಲವಾದರೆ ಹೆಣ್ಣು ಹದ್ದು ಇನ್ನಷ್ಟು ಧೃಡ ಮನಸ್ಸಿನಿಂದ ಗರಿಕೆದರಿ ಆಕಾಶದ ನೆತ್ತಿಯತ್ತ ಹಾರಲು ಉದ್ಯುಕ್ತವಾಗುತ್ತದೆ....... ಆದರೆ, ಈ ಸಾರಿ ಅದಕ್ಕಿಂತಲೂ ಭಾರವಾದ ಕೋಲನ್ನು ಎತ್ತಿಕೊಂಡು ಅದು ನಭದತ್ತ ಚಿಮುತ್ತದೆ ಮತ್ತು ವೃತ್ತಾಕಾರದಲ್ಲಿ ತನ್ನ ಹಾರಾಟವನ್ನು ಮುಂದುವರೆಸುತ್ತದೆ. ಅಗೋ..! ಆ ಕೋಲನ್ನು ಕೂಡಾ ಹಿಡಿಯುವಲ್ಲಿ ಆ ಗಂಡು ಜಯಶಾಲಿಯಾದಲ್ಲಿ. ಇನ್ನೊಂದು ಕೋಲು ಗಾತ್ರದಲ್ಲಿ ದೊಡ್ಡದಾದ ಮತ್ತು ಭಾರವಾದ ಕೋಲು... ಹೀಗೆ ಆ ಹೆಣ್ಣು ಹದ್ದಿನ ಸಾಮರ್ಥ್ಯ ಪರೀಕ್ಷೆಯಲ್ಲಿ ಜಯಶಾಲಿಯಾದ ಗಂಡನ್ನು ಆ ಹೆಣ್ಣು ಹದ್ದು ತನ್ನ ಸಂಗಾತಿಯಾಗಿ ಆಯ್ಕೆ ಮಾಡುತ್ತದೆ.

ಇದೇತಕ್ಕೆ ಈ ಪರೀಕ್ಷೆ ಅಂತ ನಿನಗೆ ಅನಿಸುವುದಿಲ್ಲವೇ? ಆಕೆ ವೃಥಾ ತನ್ನ ಒಣ ಅಹಂಕಾರ ಪ್ರದರ್ಶನದ ಸಲುವಾಗಿ ಹೀಗೆ ಮಾಡುವುದಿಲ್ಲ . ಬದಲಿಗೆ ಆಕೆಗೆ ಒಂದು ನಿರ್ದಿಷ್ಟ ಗೊತ್ತು ಗುರಿ ಇರುತ್ತದೆ. ಅದಕ್ಕೆ ತನ್ನ ಮರಿಗಳ ಬಗ್ಗೆ ಇರುವ ವಿಷೇಶ ಕಾಳಜಿಗಾಗಿ ಆಕೆ ಮೊದಲೇ ಈ ಪರೀಕ್ಷೆಯನ್ನು ಒಡ್ಡಿ, ತನ್ನ ಸಂಗಾತಿಯ ಸಾಮರ್ಥ್ಯದ ಬಗ್ಗೆ

ಸಂಪೂರ್ಣ ವಿಶ್ವಾಸವನ್ನು ಹೊಂದಿದ ಮೇಲೆ ಆತನನ್ನು ವರಿಸುವುದು ಪ್ರತಿಯೊಂದು ಗಂಡು ಹದ್ದು ಕೂಡಾ ಆಕೆಯ ಸ್ವಂಯವರದ ಪಣವನ್ನು ಜಯಿಸಿದಾಗಲೇ ಅವನಿಗೆ ತಂದೆಯಾಗುವ ಅರ್ಹತೆ ದೊರಕುವುದು.

ಎತ್ತರದ ಮರದ ತ್ತುತತುದಿಯ ಕೊಂಬೆಯ ಮೇಲೆ ಅವಳ ಗೂಡು ಆಕೆಯ ತನ್ನ ಮೊಟ್ಟೆಗಳ ಮೇಲೆ ನಲವತ್ತು ದಿನಗಳ ಕಾಲ ಕಾವನ್ನು ಕೊಟ್ಟು ತನ್ನ ಎದೆ ಬಡಿತದ ಲಯವನ್ನು ರೆಕ್ಕೆಗಳ ರಕ್ಷಣೆಯನ್ನು ಮತ್ತು ಮಾತೃತ್ವದ ಪ್ರೀತಿಯನ್ನು ನೀಡುತ್ತಾಳೆ. ಅವು ಚಿಂವ್ ಚಿಂವ್ ಎನ್ನುತ್ತಾ ಮೊಟ್ಟೆಯೊಡೆದು ಹೊರಬಂದಾಗ, ನಿತ್ರಾಣವಾದ ತನ್ನ ಕಂಗಳಿಂದ ತನ್ನ ಕನಸಿನ ಹೂ ಮರಿಗಳನ್ನು ಕಂಡು ಅವುಗಳನ್ನು ಎದೆಗವಚಿ



ಕೊಳ್ಳುತ್ತಾಳೆ. ಎರಡು ಅಥವಾ ಮೂರುಮರಿಗಳಿರುತ್ತವೆ ಅಷ್ಟೇ... ಅವುಗಳನ್ನು ಅಪ್ಪಿ, ಮುದ್ದಾಡಿ, ಗಂಡು ತಂದಿಕ್ಕಿದ ಆಹಾರವನ್ನು ಗುಟುಕು ಗುಟುಕಾಗಿ ಅವುಗಳ ಬಾಯಿಗೆ ನೀಡಿದ ಮೇಲೆ ಸುಮಾರು ಹತ್ತು ದಿನಗಳಲ್ಲಿ ಅವುಗಳಿಗೆ ಸಾಕಷ್ಟು ಬಲಬಂದಿದೆ ಎಂದು ಅವಳಿಗೆ ಖಾತರಿಯಾಗುತ್ತದೆ. ಇನ್ನು ಅವುಗಳನ್ನು ಲೋಕಾರ್ಪಣೆ ಮಾಡಬೇಕು. ಈ ಕೆಲಸಕ್ಕೆ ಉದ್ಯುಕ್ತವಾಗಿ ಅದು ಢವಗುಟ್ಟುತ್ತಿರುವ ಎದೆಯನ್ನು ಮಡುಗಟ್ಟುತ್ತಿರುವ ದು:ಖವನ್ನು ಬದಿಗೊತ್ತಿ ಒಂದು ಮರಿಯನ್ನು ಹಿಡಿದು ತನ್ನ ಗೂಡಿನ ಬಾಯಿಯವರೆಗೂ ತರುತ್ತಾಳೆ. ಆ ಮರಿ ಭಯಗ್ರಸ್ಥವಾಗಿ ಅವಳನ್ನು ಅಂಟಿ ಕೊಳ್ಳುವ ವಿಫಲ ಪ್ರಯತ್ನವನ್ನು ಮಾಡುತ್ತಾ, ದಿಗ್ಭ್ರಮೆಯಿಂದ ನಿರುಕಿಸುತ್ತಾ ಓಹ್! ಅಮ್ಮ.. ನೀನೇ.. ಎಂದು ನಂಬಲಾಗದೆ, ರೆಕ್ಕೆಗಳನ್ನು ಬಿಚ್ಚಲಾರದೆ ಅಸಹಾಯಕತೆಯಿಂದ ಮುರುಗುತ್ತಿರುವಾಗಲೇ ಅಮ್ಮನ ಒತ್ತಡವನ್ನು ತಾಳದೆ, ಗೂಡಿನಿಂದ ಹೊರ ದಬ್ಬಿಸಿಕೊಂಡು ಮಕಾಡೆ ಬೀಳುತ್ತದೆ." ಅಯ್ಯೋ... ಅಯ್ಯೋ...ಇದೇನಾಗುತ್ತಿದೆ...? ಅಮ್ಮಾ ... ಅಮ್ಮಾ ..." ಎಂದು ಅದು ಚೀತ್ಕರಿಸುತ್ತಿರುವಷ್ಟರಲ್ಲಿಯೇ ಸರೆಂದು ಹಾರಿಬಂದ ಅಪ್ಪ ಹದ್ದು ಅದನ್ನು ಆಪ್ಯಾದಾ ಮಾನತೆಯಿಂದ ಪ್ರೀತಿಯಿಂದ ಕಚ್ಚಿ ಹಿಡಿದು ಗಿರೆಂದು ತಿರುಗಿಸುತ್ತಾ ಆ ಮರಿ ಸಹಜವಾಗಿ ರೆಕ್ಕೆ ಬಿಚ್ಚಿಕೊಳ್ಳುವಂತೆ ಉತ್ತೇಜಿಸುತ್ತಾ ಜೊತೆ ಜೊತೆಯಲ್ಲಿ ಅದರ ಭಯವನ್ನು ನಿವಾರಿಸುತ್ತಾ ಒಂದೆರಡು ದೊಡ್ಡ ಸುತ್ತು ಹಾಕುತ್ತಾ ತಂದು ಗೂಡಿನೊಳಗೆ ಸೇರಿಸಿ ಅಮ್ಮನ ಅಭಿರಕ್ಷೆಯಲ್ಲಿಟ್ಟು ಮತ್ತೆ ವಿಸ್ತಾರವಾಗಿ ಸುತ್ತು ಹೊಡೆಯುತ್ತದೆ .

## ದಿಂಡೀ

**- ಕಸ್ತೂರಿ ಖಾಲಿ**

ಆ ದಿನ ರಾತ್ರಿ ಪಂಢರಾಪುರದ ದಿಂಡೀ ಮ್ಯಾಳ ಬಿಜಾಪುರದ ಸಿಂದಗಿಯ ಅಲಮೇಲನಲ್ಲಿ ರಾತ್ರಿ ವಸ್ತಿ ಹಾಕಿತ್ತು. ಊರ ಹೊರಗಿನ ದ್ಯಾಮವ್ವನ ಗುಡಿಯ ಬೇವಿನ ಬಡ್ಡಿಯ ಗಾಳಿಗೆ ದಿಂಡೀ ಹೊಂಟ ಗಂಡಸರು ಒಂದು ತಾಡಪಾಲು ಹಾಸಿಕೊಂಡು, ಹಾರ್ಮನಿಯಂ, ಡಬರೆ ಬಾರಿಸುತ್ತ ಭಜನಿ ನಡೆಸಿದರೆ, ಇನ್ನೊಂದು ಬದಿಗೆ ದಾರಿ ನಡೆದು ಹೈರಾಣ ಅದ ಹೆಂಗಸರು ಮುಗಿಲಿಗೆ ಮಾರಿ ಮಾಡಿ ಕೈಕಾಲುಗಳನ್ನು ಅಡ್ಡಾದಿಡ್ಡಿ ಒಗೆದು, ನಕ್ಷತ್ರಗಳ ಮಿಣಿ ಮಿಣಿ ಕಣ್ಣಾಗ ತುಂಬಿಕೊಳ್ಳುತ್ತ ನಿದ್ರಿಗೆ ಜಾರುವ ಆರಾಮ ಕ್ಷಣಗಳಿಗೆ ಕಣ್ಣು ರೆಪ್ಪೆ ದಪ್ಪ ಮಾಡುತ್ತ ಮರದ ಎಲೆಗಳಿಗೆ ನೆರಳು ಹುಟ್ಟು ಹಾಕಿದ್ದವು. ಒಂಥರಾ ಕತ್ತಲೆ ಒಮ್ಮೆಲೆ ದ್ಯಾಮವ್ವನ ಎದೆಯಲ್ಲಿ ರೊಂಯ್ ಅನ್ನುವ ಸಪ್ಪಳ ಮಾಡುತ್ತ ಒತ್ತಿದಾಗ ದ್ಯಾಮವ್ವ ಮಾರಿ ಮ್ಯಾಗಿನ ಸೆರಗ ಅಡ್ಡ ತೆಗೆದು, ಉಸಿರು ಸಡಿಲ ಮಾಡಿಕೊಳ್ಳಲು ತನ್ನ ಕುಬಸದ ಗಂಟುಗಳನ್ನು ಬಿಚ್ಚಿದಳು. ಹೊಂದಿಗೆ ತೆಕ್ಕಿ ಬಿದ್ದ ಮಲಿಗಳು ಅತ್ಯಾಗ ಇತ್ಯಾಗ ಅಡ್ಡ ಬಿದ್ದವು. ಭಜನೆಯ ಹಾಡುಗಳು ಅವಳ ಕಿವಿಗೆ ದೂರದಿಂದ ಎಲ್ಲೋ ಕೇಳಿದ್ದಾಂಗ ಅನಿಸ್ತಿತ್ತು. ಅವಳು ತನ್ನಷ್ಟಕ್ಕೆ ತಾನೇ ಸಮಾಧಾನ ಮಾಡಿಕೊಳ್ಳೋ ರೀತೀಲಿ ಎಲ್ಲಾ ಆ ಪಾಂಡರಂಗ ನಡೆಸಿದ್ದಾಂಗ ಆಗಲಿ ನಾನು ಮಾಡಿ ಬಾಳೇ ಕಟ್ಟನಂದ್ರ ನನ್ನ ಖೋಡ ಏನ? ಎಲ್ಲಾ ಮ್ಯಾಗಿನವರ ಆಟ ನಾನು ನೆಪ ಮಾತ್ರ ಯಾರ ಬಾಗಿಲ ಬಂದ ಮಾಡಿದ್ರ ಏನು! ಆ ಪರಮಾತ್ಮ ಬಾಗಿಲ ತೆಗೆದಾಗ ಯಾಕ ಮನಸ್ಸಿಗೆ ಹಳವಂಡ ಅವಳು ಮಗ್ಗಲು ಬದಲಿಸಿ ಮತ್ತಷ್ಟು ಕಾಲು ಮುದುಡಿಸಿ ಕಣ್ಣು ಬಾಡಿಸಿಕೊಳ್ಳಲು ಪ್ರಯತ್ನಿಸಿದಳು. ಮತ್ತು ಮಕ್ಕಳು ಬಂಕದ ಇನ್ನೊಂದು ತುದಿಯಲ್ಲಿ ಜಾತ್ರಿಯ ನಾಟಕ ಎಬ್ಬಿಸಿದ್ದರು. ಬ್ಯಾಡ ಅಂದ್ರೂ ಅವರ ಸಂಭಾಷಣೆಗಳು ಅವಳ ಕಿವಿಗಳಲ್ಲಿ ಪ್ರತಿಧ್ವನಿಸಿದವು.

"ಯವ್ವಾ ಈ ಸಲ ಬನಶಂಕರಿ ಜಾತಿಯ್ಯಾಗ ಖಾನಾವಳಿ ಹಾಕಿದ್ರೆ ಅಣ್ಣ ಬರ್ಲಾಗಿಲ್ಲಂತ ಅವಗೆ ಅವನ ಹೆಣ್ತಿಗೆ ಭೂಮಿ ದಗದ ಬಹಳ ಆಗ್ತದಂತ. ಇನ್ನು ಆರು ತಿಂಗಳು ಅವ್ವನ ಬೆನ್ನ ಹಿಂದ ತಿರುಗಿದ್ರ ನಮಗೇನ ಲಾಭ ಅಂತ ಅಂದಾನ" ಅಂತ ಮಲ್ಲಪ್ಪ ರಾಗ ಎಳಿದ್ರ ಬಂಕದ ಇನ್ನೊಂದು ಭಾಗಕ್ಕ ಕುಳಿತ ಶರಣ್ಯಾ ಹಾಂ ಅನ್ನಲಿಲ್ಲ ಹೂ ಅನ್ನಲಿಲ್ಲ. ದ್ಯಾಮವ್ವ "ಹಂಗಾದ್ರ ಮಳೆ ಹೋಗ್ಯಾವ ಭೂಮಿಗೆ ಬಿತ್ತಿದ ಕಾಳು ಹೊಳ್ಳದಿದ್ದ ಕಾಲ ಐತಿ, ಕುಂತ ತಿಂದ್ರ ಕುಡಿಕೆ ಹೊನ್ನ ಸಾಲದು ಮೊದಲಿನ್ಹಾಂಗ ದುಡಿಯಾಕ ನನ್ನ ಮೈಯಾಗ ಖಸು ಏನು ಉಳಿದೈತಿ ನೀವುಗಳ ಬಂದ್ರ ಬಾದಾಮಿ ಜಾತ್ರಿ ಎಲ್ಲಮ್ಮ

ಗುಡ್ಡದ ಜಾತ್ರೆ ಶಿರಸಂಗಿ ಜಾತ್ರಿ ಎಲ್ಲವೂ ಮುಗಿದು ಆರು ತಿಂಗಳು ಕುಂತ ತಿನ್ನಾಕ ಹಾದಿ ಆಗ್ಯೆತಿ ನಿಮಗೆ ನನ್ನ ದುಡುಮಿ ಏನು ಸಣ್ಣದ ಕಂಡದೇನು? ನಾವೆಲ್ಲೆ. ನೀವಲ್ಲಿ ಅಂದ್ರ ನನ್ನ ಮೈಯಾಗ ಹರೆಯ ಹುಟ್ಟತೈದೆ ಏನ?" ಯಾಕೋ ಅವಳು ಸೋತ ಧ್ವನಿಯಲ್ಲಿ ಅಂದಾಗ, ಶರಣ್ಯಾ "ನಿನಗೆ ತಿಳಿದ್ದಾಂಗ ಮಾಡಬೇ ಯಾರ ಬ್ಯಾಡ ಅಂದ್ರು, ನಾಮಾತ್ರ ಬರೋಂವಲ್ಲ ನಾನು ಹೊಲದ ಮುಂದ ಮನೀ ಮುಂದ ಇರ್ತೀನಿ" ಅಂತ ಒತ್ತಿ ಹೇಳಿದಾಗ ದ್ಯಾಮವ್ವಗ ಮಗನ ಮುಖ ಅಪರಿಚಿತ ಅನಿಸತೊಡಗಿತು.

ಹೊಲದ ಕೆಲಸದಲ್ಲಿ ಅಪ್ಪನ ಜೊತೆ ಕೆಲಸ ಮಾಡುತ್ತಿದ್ದ ಶರಣ. ಅಪ್ಪನಿಂದ ಕೆಲವು ಸುಳ್ಳು ಕಳ್ಳತನಗಳನ್ನು ಮೈಗೂಡಿಸಿಕೊಂಡಿದ್ದ ನಾಲ್ಕು ಕೂರಿಗೆ ಜಮೀನಿನ ಒಡೆತನ ತಂದೊಬ್ಬನೇ ಅಂತ, ಯಮಕಿಲಿ ಮ್ಯಾರಿ ತಿರುವುತ್ತಿದ್ದ ಮಲ್ಲಪ್ಪ ದ್ಯಾಮವ್ವನ ಹಾಗೆ ವಿವೇಚೆಯಿಂದ ಕೆಲಸ ಮಾಡುತ್ತಿದ್ವ, ಸಾಲೀ ಮುಂದೆ ಹಾಯದಿದ್ದರೂ ದ್ಯಾಮವ್ವ ಎಲ್ಲಾ ಜಾಣ ವ್ಯವಹಾರದ ಗುಣಗಳನ್ನು ಮೈಗೂಡಿಸಿಕೊಂಡಿದ್ದಳು. ಹಳ್ಳಿಯಲ್ಲಿ ಕೆಟ್ಟ ಹೆಸರು ಬಾರದ ಹಾಗೆ ಬಾಳೀ ಮಾಡಬೇಕೆಂದಿದ್ದ ದ್ಯಾಮವ್ವಗೆ ಮೆಲ್ಲಗೆ ಗಂಡನ ಹೊರಗಿನ ಚಾಳಿ ತಲೆಯ ಮೇಲೆ ಚಿಂತಿಯ ಬುತ್ತಿ ಹೊರಸಿದ್ದವು. ಅವಳು ತನಗೆ ತಿಳಿಯದ ವಿವರಗಳನ್ನು ಅವರಿವರ ಬಾಯಿಂದ ಕೇಳಿ ತಿಳಿದುಕೊಂಡಿದ್ದಳು.

ಯಾವಾಗ ಅವಳಿಗೆ ಗಂಡನ ಚಾಳಿಯ ವಾಸನೆ ಇಡೀ ಹಳ್ಳಿಯ ಹವೆಯಲ್ಲಿ ಪೂರ್ತಿಯಾಗಿ ಅಡರಿಕೊಂಡಿತೋ ಅವಳು ಹೊಚ್ಚ ಹೊಸ ತಂತ್ರಗಳನ್ನು ಹುಡುಕಿದಳು. ಹ್ಯಾಂಗರ ಮಾಡಿ ಅವನ ತನ್ನ ಮನಿ ಬೇಲಿಯೊಳಗ ಕಟ್ಟಿ ಹಾಕಬೇಕು ಎಂದಳು. ಆರು ತಿಂಗಳ ಕಾಲ ಹಳ್ಳಿ ಬಿಡಿಸಿ ಉತ್ತರ ಕರ್ನಾಟಕದ ಎಲ್ಲಾ ದೊಡ್ಡ ಜಾತ್ರಿಯೊಳಗ ತಿಂಗಳ ತನಕ ಖಾನಾವಳಿ ನಡೆಸಿ, ಅವನನ್ನು ಗಲ್ಲೇ ಮ್ಯಾಗ ಕುಂದ್ರಸಬೇಕಂತ ವಿಚಾರ ಮಾಡಿದಳು.

"ಉರ್‍ಯಾಗ ಮಂದಿ ಒಂದೊಂದು ತರಹ, ಎಲ್ಲರೂ ತಮ್ಮ ತಮ್ಮ ಬಾಳೇ ಗಟ್ಟಿ ಮಾಡುಕೊಂತಾರೆ ಲಗ್ನ ಆಗಿ ಒಂದು ಪಟ್ಟ ಆತ. ಎರಡು ಗಂಡು ಮಕ್ಕಳೂ ಆದ್ದೂ ಇಟೆ ಒಂಟೆ ಕೋಲಿ ಮನ್ಯಾಗ ಎರಡು ಎಕ್ರೆ ಒಣ ಬೇಸಾಯದಾಗ ಹ್ಯಾಂಗ ಬದುಕು ನಡೆಸೋದು ನೀನು ಎಲ್ಲಾರ ದುಡಿಯಾಕ ಹೋಗು ಅಂದ್ರೂ ಜಟ್ಟಿ ಅನ್ನವಲ್ಲೀ. ನನ್ನ ತವರ ಮನ್ಯಾಗ ಏನೈತಿ ನಾನು ನಿನ್ನ ಏನಾರ ಬೇಡ್ತೀನೇನು? ನೆಟ್ಟಿಗೆ ಎರಡು ಹೊತ್ತು ಅಂಬಲಿ. ನನಗೂ ಹೊಂದಿಸಿ ಹೊಂದಿಸಿ

ಸಾಕಾಗ್ಯೈತಿ. ಹ್ಯಾಂಗರ ಮಾಡಿ, ಈ ಅರೆಮುಳ್ಳ ಬಾಳೇನ ಹಾದ್ಯಾಗ ತಂದ ನಿಲ್ಲಿಸಬೇಕಲ್ಲ. ನೀನು ಇದಕ ಏನ ಅಂತಿ" ಗಂಡ ಮಾತ್ರ ಗುಂಡಕಲ್ಲಿನ ಹಂಗ ಗಪ್ಪಗ ಅಲ್ಲಾಡದ ಕುಳಿತಿದ್ದ ದ್ಯಾಮವ್ವ ತನ್ನ ಅಕಲ ಗಂಡನಿಗೆ ತಿಳಿಬಾರದಂತ, ಮಲ್ಲಪ್ಪ ಶರಣ್ಯಾನ ಕರಕೊಂಡು ಎರಡು ದಿನ ತೌರ ಮನಿಗಿ ಹೋಗಿ ಬರ್ತಿನಿ ಅಂತ, ಬ್ಯಾಹಟ್ಟಿ ಬಸ್ ಹತ್ತಿದಳು.

ಯಾವುದಾದ್ರೂ ನಿಗದಿ ಕೆಲಸಕ್ಕೆ ನಿಶ್ಚಳ ಬಂಡವಾಳ ಬೇಕು ಎಂಬ ಅಂಶ ಅವಳ ತಲಿಯೊಳಗೆ ಇತ್ತು. ದ್ಯಾಮವ್ವನ ಸೋದರ ಮಾವ ಚೊಕ್ಕಟವಾಗಿ ಇಪ್ಪತ್ತೈದು ವರ್ಷದಿಂದ ಬ್ಯಾಹಟ್ಟಿ ಊರ ಒಳಗೆ ಲಿಂಗಾಯಿತರ ಖಾನಾವಳಿ ತೆಗೆದು, ಈಗ ವಯಸ್ಸಾಗ್ಯೈತಿ ಅಂತ ಮಕ್ಕಳಿಗೆ ಹೊಲಮನಿ ನೌಕರಿ ಅಂತ ದಾರಿ ಮಾಡಿ ಖಾನಾವಳಿ



ಬಂದು ಮಾಡಿದ್ದ ಅಂಗ್ಯೈ ಅಗಲ ಇದ್ದ ಅರವಿ ಬದುಕನ್ನು ಥಾನಗಟ್ಟಲೆ ನೇಯ್ದಿದ್ದ. ದ್ಯಾಮವ್ವಗ ಸೋದರ ಮಾವನ ವ್ಯವಹಾರ ಗುಣ ಅಂದ ಮಾಡುವ ಯೋಜೆಗಳು ರಕ್ತಗತವಾಗಿ ಮೂಡಿದ್ದವು. ಇಂತಹ ಪರಿಸ್ಥಿತಿಯೊಳಗೆ ಮಾವ ತನ್ನ ಕೈ ಬಿಡಲ್ಲ ಎಂಬ ಖಾತ್ರಿ ನಂಬಿಕೆಯಿಂದ ಅವಳು ಬ್ಯಾಹಟ್ಟಿ ಬಸ್ಸು ಹತ್ತಿ ಬಂದಿದ್ದಳು. ಓಡು ಓಡು ಎಂದು ಅವಳ ಮನಸ್ಸು ಪ್ರೇರೇಪಿಸಿತ್ತು. ಬಸ್ಸಿನಲ್ಲಿ ಕುಳಿತ ದ್ಯಾಮವ್ವಳಿಗೆ ಮರಗಳು ಹಿಂದೆ ಹಿಂದೆ ಓಡುತ್ತಿದ್ದ ಹಾಗೆ ತನ್ನ ಮನೆಯ ಓಣಿ ಗಲ್ಲಿ ಗಟಾರ, ರಸ್ತೆಯ ಕೆಸರು, ಕೆರೆಯ ದಂಡೆ ಕರಿಮಣ್ಣಿನ ವಾಸನೆ ಎಲ್ಲವೂ ಕಣ್ಣಿಗೆ ಹತ್ತದೇ ಸರಿದುಹೋಯ್ತು.

ನೀನು ಬಂದ ದಾರಿಯಲ್ಲಿ ಏನಿತ್ತೋ ಶಿವ

ನೀನು ಹೋದ ದಾರಿಯಲ್ಲಿ ಏನಹೋಯೋ ಶಿವ

ದೂರ ದೂರ ಓಡಿ ಬಂದವರೆಲ್ಲಾ ಹಾದಿ ಹೆಜ್ಜೆಗಳನ್ನು

ಬಿಟ್ಟರೋ ಶಿವ ಮಳೆ ಬಂದು ಹೊಳಿ ಹರದು

ಎಲ್ಲ ಮುಚ್ಚಿ ಹೋಯೋ ಶಿವ

ದಿಂಡೀ ಗುಂಪಿನವರು ತಾಳದೊಂದಿಗೆ ಹಾಡುವ ಹಾಡು ಅವಳ ಕಿವಿಗಳಿಗೆ ಇಂಪಾಗಿ ಕೇಳಿ ಮೆಲ್ಲಮೆಲ್ಲಗೆ ಹಾಯಾದ ನಿದ್ದೆ. ಅವಳ ಕೈ ಹಿಡಿದು ದಂಡಿನ ಬಯಲಾಗ ತಂದು ಮಲಗಿಸಿತು. ಆ ರಾತ್ರಿ ಅವಳ ಕನಸು ನಿಶ್ಚಳ ಬೆಳಕಿನ ಕಿರಣಗಳು ಮೂಡಿ ನಡೆದ ಕಲ್ಲು ಕಣಿವೆಗಳ ದಾರಿ ಮರೆತು ಅವಳು ಹಸಿರು ಹುಲ್ಲಿನ ಮೈದಾನದಲ್ಲಿ ಗಿಡದ ಕೆಳಗೆ ಕಣ್ಣಿನ ಆಯಾಸ ಹಿಂಗುವವರೆಗೆ ದೀರ್ಘ ನಿದ್ದೆಯಲ್ಲಿ ಜಾರಿದಳು.

“ಮಾವಾ ಹ್ಯಾಂಗರ ಮಾಡಿ ಬಂಡೀ ಜಗ್ಗೂ ಹಂಗ ಮಾಡು. ಬರದು (ಭೂಮಿ) ಕಟಗೊಂಡ ಹೀಂಗ ಹೊರಚಾಳಿ ಗಂಡನ ಇಟಗೊಂಡು ಬೆರಳುದ್ದ ಇದ್ದ ಮಕ್ಕಳನ್ನು ಹ್ಯಾಂಗ ಬೆಳಸಲಿ? ನೀನು ಹಿಂದ ಮಾಡಿದ ಖಾನಾವಳಿಯ ಪಾತ್ರಿ ಪಗಡಿಗಳಿದ್ದ ಕುರ್ಚಿ ಟೇಬಲ್‌ಗಳಿದ್ದ ಒಂದು ರೊಕ್ಕಕ್ಕ ಹೊಂದಿಸಿ ಕೊಡು ಹ್ಯಾಂಗರ ಒಂದು ಸುರಳಿತ ದಾರಿ ಸಿಕ್ಕಿತು ಸುತ್ತೂರು ಏಳು ಜಾತ್ರಾ ಗ ಖಾನಾವಳಿ ನಡೆಸ್ತೀನಿ. ನಿನ್ನ ಮಾಲಿಗೆ ರೊಕ್ಕದ ಮೋಸ ಮಾಡಲ್ಲ. ಹೊಂದಿಸಿ ವರ್ಷ ಒಪ್ಪತಿನಾಗ ತೀರಿಸ್ತೀನಿ. ನಿನ್ನ ನಂಬಿ ಬಂದೀನಿ. ಆಂವಂಗ ಹೇಳಿಲ್ಲ. ಅವನ್ನ ಹಾಂಗ ಸಡಿಲ ಬಿಟ್ರ, ಎರಡು ಎಕರಿ ಹೋಲನೂ ಆ ರಂಡಿ ಹೆಸರಿಗೆ ಬರೆದು ನಮ್ಮನ್ನು ಬೀದ್ಯಾಗ ನಿಲ್ಲಸ್ತಾನ ಎರಡು ಕಾಳ ಉಪ್ಪು ತರೋ ತಾಕತ್ತಿಲ್ಲ, ಹೆಂಗಸರನ್ನು ಆಳ್ತಾನಂತ ಧಿಮಾಕ ಕಿಸಿತಾನ. ಎಲ್ಲನೂ ನಿನ್ನ ಉಡಿಯಾಗ ಹಾಕೀನಿ. ನೀರಾಗಾದ್ರೂ ಹಾಕು ಇಲ್ಲಾ ದಾರಿಗೆ ತಂದು ನಿಲ್ಲಿಸು' ಅಂತ ರೊಂಯ್ ಅಂತ ಅತ್ತಬಿಟ್ಟಳು ದ್ಯಾಮವ್ವ

ಸೊಸಿ ಶಾಣ್ಯಾತನದ ಮ್ಯಾಗ ನಂಬಿಕೆ ಇದ್ದ ಮಾವ ಮರು ದಿವಸ ಬಂಡೀ ತುಂಬ ತಾನು ಭರಪೂರ ಇಪ್ಪತ್ತೈದು ವರ್ಷ ನಡೆಸಿದ್ದ ಖಾನಾವಳಿಯ ಎಣ್ಣೆ ಮಣಕ ಹತ್ತಿದ ಕರಿ ಕರಿ ಅಲ್ಯೂಮಿನಿಯಂ ಬಾಂಡೆಗೆ ಗುಂಡಿ ಪಲ್ಲೆ ಬಡಿಸುವ ನಾಲ್ಕು ಮೂಲಿ ಪಾತ್ರಿ.. ಗುಂಡಗಿನ ಸ್ಟೀಲಿನ ತಾಟುಗಳು, ಕೈಕಾಲು ಗಟ್ಟ ಇದ್ದ ನಾಲ್ಕು ಟೇಬಲ್ ತುಸು ಜಂಗ ಹಿಡಿದ ಆರು ಕುರ್ಚಿಗಳು, ಕಬ್ಬಿಣದ ಕಡಾಯಿ ನೀರು ತುಂಬುವ ಡ್ರಮ್ ಎಲ್ಲದಕ್ಕೂ ಒಂದು ರೇಟು ಜಡಿದು, ಪಲ್ಲ್ಯೆದ ವಾಸನೆ, ಸಾರಿನ ಮಣಕ ಹೊರ



ಸೂಸುವ ಇಡೀ ಖಾನಾವಳಿಯನ್ನು ಹೇರಿ ಕಳುಹಿಸಿದ. ಅದರಲ್ಲಿ 'ಶ್ರೀ ವೀರಭದ್ರೇಶ್ವರ ಲಿಂಗಾಯತ ಖಾನಾವಳಿ' ಅಂತ ಮಸುಕು ಅಕ್ಷಗಳನ್ನು ಹೊತ್ತ ನೀಲಿ ಬೋರ್ಡ್ ಒಂದು ಎರಡು ಜೂಂಡಾಗಳು ಕುಟುಂಬದೊಂದಿಗೆ ಸೇರಿತ್ತು. ದ್ಯಾಮವ್ವ ಬಸ್ಸ ಏರಿ ಊರು ಮುಟ್ಟಿ, ತಿರಸಟ್ಟ ಗಂಡಗ, ಮಾವ ದುಡುಕೊಂಡು ತಿನ್ನು ಅಂತ ಖಾನಾವಳಿಯ ಎಲ್ಲಾ ಮಾಲೂ ಕಳಿಸ್ಯಾನ, ಇನ್ನ ಮ್ಯಾಗ ಹಿಂಗಾರಿ ರಾಶಿ ಆದ ಕ್ಷಣ, ನಾಲ್ಕು ಊರ ಜಾತ್ರಿ ತಿರುಗೋಣ, ನೀ ಮಾಲ ತಂದು ಗಲ್ಲೀದ ಮೇಲೆ ಕುಂದ್ರು, ನಾನು ಒಳಗ ಅಡಗಿಮನಿ ಸಂಭಾಳಸ್ತೀನಿ ಅಂತ ಬಹಳ ಪ್ರೀತೀಲೇ ತಿಳಿ ಹೇಳಿದಾಗ, ಮೊದ ಮೊದಲು ಒಪ್ಪಿಗೆ ಸೂಸದ ಗಂಡ, “ಜಾತ್ರಿ ಬಂದಾಗ ವಿಚಾರ ಮಾಡೋಣ ಹೇಳು. ಈಗ್ಯಾಕ ಇಲ್ಲದ ಚಿಂತಿ” ಅಂತ ಜಾರಿಕೊಂಡ.

ಮರುದಿನ ಬ್ಯಾಹಟ್ಟಿಯಿಂದ ಖಾನಾವಳಿ ಸಾಮಾನು ಹೇರಿಕೊಂಡು ಬಂಡೀ ಮನಿ ಮುಂದ ನಿಂತಾಗ, ಹೊರಗ ಕಟ್ಟೆ ಮ್ಯಾಗ ತಗಡೀನ ಶೆಡ್ಡಿನಲ್ಲಿ ಎಲ್ಲ ಮಾಲು ಇರಿಸು ಅಂತ ಹೆಂಡ್ತಿ ಹೇಳಿದಾಗ, ಈಕಿ ಇನ್ನ ನನ್ನ ಸುಮ್ಮನೆ

ಬಿಡೋದಿಲ್ಲ. ಕೈ ಕಾಲು ಕಟ್ಟಿ ಹಾಕ್ತಾಳ ಅನ್ನೋ ವಿಚಾರಕ್ಕೆ ತಲೀ ಬಿಸಿ ಆಗಿ ಕಾದ ಹಂಚಿ ಆದಾಗ, ಧಡಧಡ ಸಾಮಾನುಗಳನ್ನು ಇಳಿಸಿ, ತನ್ನ ಪ್ರೇಯಸಿ ಚಂದ್ರವ್ವನ ಮನಿಯ ಕೇರಿಯ ಕಡೆಗೆ ಊಟ ಮಾಡದೇ ಹೆಜ್ಜೆ ಇರಿಸಿದ.

"ಎಲ್ಲ ಸಮಸ್ಯೆಗಳಿಗೂ ತಕ್ಷಣ ಪರಿಹಾರ ಸಿಗುವುದಿಲ್ಲ. ಕಿರು ದಾರಿ, ಸಂದಿ ಓಣಿ ದಾಟಿ, ಊರ ಅಗಸಿ ದಾಟಿ ಗಮ್ಯ ಮುಟ್ಟುವ ದಾರಿ ಹಿಡಿಯಬೇಕು. ಆಕಾಶದ ಚಿಕ್ಕಿಗಳಿಗೆ ಒಮ್ಮೆಲೇ ಏಣಿ ಹತ್ತಿ ಮುಟ್ಟಲಿಕ್ಕೆ ಆಗತೈತಿ ಏನು?"

ದ್ಯಾಮವ್ವ ಗಂಡನನ್ನು ರಮಿಸಿ ರಮಿಸಿ ಒಣ ಬೇಸಾಯದ ಸುಗ್ಗಿ ಮುಗಿದ ತಕ್ಷಣ ಎತ್ತಿನ ಬಂಡಿಗೆ ಕೊಲ್ಲಾರ ಕಟ್ಟಿಸಿ. ಕರಿ ಬಿಳಿ ಬೋಗುಣಿಗಳನ್ನೆಲ್ಲಾ ತುಂಬಿಸಿ, ಹೊಸ್ತಲ ಹುಣ್ಣಿಮಿಗೆ ಎಲ್ಲವ್ವ ಗುಡ್ಡದ ಮ್ಯಾಲೆ ತಟ್ಟಿ ಕಟ್ಟಿ ತಗಡುಗಳನ್ನು ಏರಿಸಿ ಶ್ರೀ ವೀರಭದ್ರೇಶ್ವರ ಲಿಂಗಾಯತ ಖಾನಾವಳಿ ಬೋರ್ಡನ್ನು ಜಡಿದೇ ಬಿಡುತ್ತಿದ್ದಳು. ಗಂಡ, ಚಂದ್ರವ್ವನ ಚೆಂದದ ಮಾರಿಗೆ, ಗುಂಡಗಿನ ಕೈಗಳಿಗೆ ಎಲ್ಲಾ ಜಾತ್ರೆಯಲ್ಲೂ ಚಿಕ್ಕೀ ಬಳಿ, ಸ್ನೋ, ಪೌಡರ ಗಲ್ಲೇದಾಗಿನ ರೊಕ್ಕ ತೆಗೆದು ತುಡಗೀಲಿ ಚೀಲ ತುಂಬಿಸಿ ಇಡುತ್ತಿದ್ದ. ದ್ಯಾಮವ್ವ ಆರು ತಿಂಗಳು ಹನ್ನೆರಡು ಜಾತ್ರಿ ತಿರುಗಾಡಿ, ಶರಣ್ಯಾ ಮಲ್ಲನ್ನ ಸಾಲೀ ಮುಂದೆ ಹಾಯಿಸಗೊಡದೇ, ಯಟ್ಟಿ ಗಂಡನ್ನ ಕಟಿಗೊಂಡು ತಿರುಗಾಡಿಯೇ ತಿರುಗಾಡಿದಳು.

ಮೈಯಾಗ ಕಸವು ಇದ್ದಾಗ ನಾಲ್ಕು ರೂಪಾಯಿ ಉಳಿಸಿಕೊಳ್ಳಬೇಕು. ಆಸ್ತಿ ಮಾಡಬೇಕು ಎನ್ನುವ ಹಠ ಅವಳಲ್ಲಿ ಗಟ್ಟಿಯಾಗಿತ್ತು. ಹೊರಗಿನ ವಿದ್ಯಮಾನಗಳು, ಜನರ ಚುಚ್ಚು ನುಡಿಗಳು, ಅವಳ ಹಟವನ್ನು ಹೆಚ್ಚಿಸುತ್ತ ಹೋದವು. ಅವಳು ಒಂದು ಎಕರೆ, ಎರಡ ಎಕರೆ ಜಮೀನುಗಳನ್ನು ಈ ಹದಿನೆಂಟು ವರ್ಷಗಳ ಓಟದಲ್ಲಿ ಗಳಿಸಿದಳು. ಗಂಡು ಮಕ್ಕಳು ದೊಡ್ಡವರಾದ ಹಾಗೆ ಹೊಲಗಳ ಸಂಖ್ಯೆ ಹೆಚ್ಚಾದ ಹಾಗೆ ದುಡಿಯಲಿಕ್ಕೆ ಸೋಮಾರಿತ ಮಾಡಿ, ಗಂಡ ಚಂದ್ರವ್ವನ ಮನೀನಿ ಖಾಯಂ ಆಗಿ ಹಿಡಿದುಕೊಂಡು ಬಿಟ್ಟ. ಗಂಡನ ಹರಗಾಟ ಹೆಚ್ಚಾದಾಂಗೆಲ್ಲಾ ದ್ಯಾಮವ್ವ ಗಂಡನಿಗೆ ನಿಷ್ಠಳಾಗದೇ, ಮಕ್ಕಳ ರಟ್ಟೇ ಬಲ ಹೆಚ್ಚಿಸುವುದರಲ್ಲಿ ಒಂದಾಗಿ ಬಿಟ್ಟಳು.



ಚಂದ್ರವ್ವನ ತೆಕೆಗೆ ಬಿದ್ದಗಂಡ ವಾಸಿಯಾಗದ ಖಾಯಿಲೆಯಿಂದ ತೀರಿಕೊಂಡಾಗ ಯಾವ ಭಾವೋದ್ವೇಗಕ್ಕೂ ಒಳಗಾಗದೇ, ಹೆಣಾ ತಂದು ಬಂಕದ ಗೂಟಕ್ಕೆ ಬಡಿದು, ಮಕ್ಕಳಿಬ್ಬರ ಕಡೆಯಿಂದ ಮಣ್ಣು ಮಾಡಿಸಿದ್ದಳು. ಗಂಡನ ಮಣ್ಣು ಮಾಡಿದ ದಿವಸ ದ್ಯಾಮವ್ವಗ ತಾನು ಸೋತು ಸುಣ್ಣವಾಗಿ ಅರಳಿದ ಹದಿನೆಂಟು ವರ್ಷಗಳ ಜಾತ್ರೆಗಳ ತಿರುಗಾಟ ವ್ಯರ್ಥ ಅನಿಸಿತು. ಅಂತಹ ಅನಿಶ್ಚಿತ ಸನ್ನಿವೇಶದಲ್ಲಿ ತನ್ನ ಮನಸ್ಸಿನ ಮೂಲ ಹೋರಾಟಗಳ ನೆನಪು ಆಗಿ, ಮೀಸೆ ಮೂಡುತ್ತಿದ್ದ ಮಲ್ಲಪ್ಪ ಶರಣ್ಯಾರ ಮಾರಿಮ್ಯಾಗಿನ ದಿಗಿಲು ನೆನಪಾಗಿ, ಅವಳು ಮತ್ತೆ ಹೊಲದೊಳಗಿನ ಕಲ್ಲುಮಣ್ಣುಗಳ ಜೊತೆ ಮಾತನಾಡತೊಡಗಿದಳು. ಜಾತ್ರೆಯ ಬಣ್ಣದ ಜಗತ್ತಿನ ಓಡಾಟದೊಳಗೆ ತನ್ನನ್ನು

ಒಂದಾಗಿಸಿಕೊಂಡಳು. ಹುಚ್ಚು ಹಿಡಿಸುವ ನಾಗರೀಕ ಜಗತ್ತಿನೊಳಗೆ ತನ್ನ ಒಂಟಿ ಗಾಲಿ ಬಂಡಿಯನ್ನು ಎಳೆಯಲು ಒಂಟೆತ್ತು ಆದಳು.

ಚಳಿಗಾಲದಲ್ಲಿ ಪ್ರಾರಂಭಿಸಿದ ಅವಳ ಜಾತ್ರೆಯ ತಿರುಗಾಟ, ಬಸವ ಜಯಂತಿ ದಿವಸ ಮರಳಿ ಊರಿಗೆ ಬಂದಾಗ ಕೊನೆಯಾಗುತ್ತಿತ್ತು. ಅಲೆಮಾರಿತನದ ಆಯಾಸ ಬರಿ ಬಿಸಿಲ ಝಳಕ್ಕೆ ಬೆವರು ಕರಗಿ ಕರಗಿ ಬಂಕದಲ್ಲಿ ದ್ಯಾಮವ್ವ ಉಳಿದ ಹಣವನ್ನು ಹೇಗೆ ನಿಭಾಯಿಸಬೇಕೆಂಬ ಯೋಚನೆಯಲ್ಲಿ ಕುಬಸಬಿಚ್ಚಿ ತಂಗಾಳಿಗೆ ಮೈಯೊಡ್ಡಿ ಮಲಗಿ ಯೋಚಿಸುತ್ತಿದ್ದಳು.

ರೊಕ್ಕದ ಗಂಟು ಮಾಡಿದರೆ ಹರೇದ ಮಕ್ಕಳು ತಿರುಪೋರೆ ಮಾಡಿ ಹಾಳು ಮಾಡ್ಯಾರು. ಇಬ್ಬರೂ ಓದಿಲ್ಲ ನಾಲ್ಕೆಕರೆ ಹೊಲ ಮಾಡಿದರೆ, ನಾಳೆ ಉಪವಾಸ ಬೀಳುವ ಗತಿ ಬರಲಿಕ್ಕಿಲ್ಲ. ಮುಂದಿನ ಜಾತ್ರೆಗಳ ಲಾಭದಲ್ಲಿ ಬೋರ ಹಾಕಿಸಿ ಕಾಯಿಪಲ್ಲೆ, ತಿಂಗಳ ಹೆಸರು, ಅಕ್ಕಡಿಕಾಳುಗಳ ಹಾಕಿದರೆ ಸ್ವಲ್ಪ ಕೈಯಾಗ ರೊಕ್ಕ ಆಡುತಾವ. ಸೂರ್ಯಪಾನ ಶೇಂಗಾಕ್ಕೆ ಧಾರಣೆ ಐತಿ, ನಾಲ್ಕು ಆಕಳ ಕಟ್ಟಿದರೆ ಬಂದ ಸೊಸೆಯರಿಗೆ, ಮನೀತನ ನಡೆಸಾಕ ಕೈಗಳು ಆಡುತ್ತವೆ. ಹಾಗಂತ ಅವಳು ಬ್ಯಾಂಕಿನಾಗ ರೊಕ್ಕ ಇಡಾಕ ಮನಸ್ಸು ಮಾಡಲಿಲ್ಲ. ಸಸ್ತಾದರದಾಗ ಎಕರಿ, ದೀಡ ಎಕರಿ ಹೊಲ ಖರೀದಿಸುತ್ತ ಹೋದಳು. ನಾಲ್ಕು ಕೂರಿಗಿ ಬಕ್ಕಳ ಹೊಲ ಒಟ್ಟಗೂಡಿದಾಗ ಬೋರತಗಿಸಿ ನೀರಾವರಿ ಬೆಳಿ ಶುರು ಮಾಡಿಯೇ ಬಿಟ್ಟಳು.

ನೋವು ದುಃಖ ಸಾವಿನಾಗ ಸಾಸಿವೆಕಾಳು

ಪಡೆದ ರಾತ್ರಿ ನೀವು ನೀವುತ್ತ ಸಾಗೈತ

ತಮ್ಮಾ

ನೀಡುತ್ತ ನೀಡುತ್ತ ನೀ ನಡಿ ಮುಂದ ಇಡೀ

ಆಯುಷ್ಯ

ಹಿಡಿಯುತ್ತ ಹಿಡಿಯುತ್ತ ಸಾಗತಾನ

ಪಾಂಡುರಂಗವಿಠಲ

ದಿಂಡೀ ಮ್ಯಾಳದ ಸ್ವರ ಕನಸಿನೊಳಗೆ ಇಳಿದಾಗ ರಾತ್ರಿ ಎರಡು ಪಹರೆ ಆಗಿತ್ತು. ದಿಂಡೀ ಮ್ಯಾಳದವರು ದಿನದ ಅಂತರಂಗದ ಆಕೃತಿಯೊಳಗೆ ಯಾವುದೇ ಸಾರ್ವಕಾಲೀನ ಜೀವನ ದೃಷ್ಟಿ ಸಂಕೇತಗೊಂಡು, ಅವರು ಪೇಟ ಡಮಕಿ ಎತ್ತಿಟ್ಟು ಹಾಸಿದ ಗುಂಡಾರದ

ಮ್ಯಾಗ, ಎಲ್ಲೆಂದರಲ್ಲಿ ಅಡ್ಡಾದರು. ಒಂದೇ ಹಾಸಿಗೆಯಲ್ಲಿ ಎಲ್ಲಿಂದಲೋ ಬಂದವರ. ದ್ಯಾಮವ್ವನ ಕನಸಿನ ತುಂಬ ಆ ರಾತ್ರಿ ಬರೀ ಬೆಳದಿಂಗಳ ಹೊಳೆದು-ಹರಿದ ನದಿ ಚಂದ್ರಭಾಗಾದೇವಿ, ಕಾಲಿನ ಹೆಬ್ಬರಳಿನಿಂದ ನೆತ್ತಿಯ ಕೊನೆಯ ಕೂದಲವರೆಗೂ ತಣ್ಣನೇ ನೀರು ಹಾಯಿಸಿತು. ಅವಳು ಆ ರಾತ್ರಿ ತೊಯ್ದು ಹೊಲವಾದಳು. ಅವಳು ಕನವರಿಸಿದಳು "ನಿನ್ನ ಬಳಿಯೇ ಮಾಡುವೆನು ಅಮರತ್ವದ ಪ್ರಾರ್ಥನೆಯನು ವಿಠಲಾ" .

ದಿಂಡೀ ಮ್ಯಾಳದ ಜೊತೆಯಲ್ಲಿ ಬಂದವರ ಜೊತೆ ಮಾತುಕತೆಯೇ ಸಾಧ್ಯವಾಗಿರಲಿಲ್ಲ ದ್ಯಾಮವ್ವಗ, "ಯಕ್ಕಾ ಯಾ ಕಡೀ?" ಅಂತ ಅಷ್ಟು ಕೇಳುತ್ತಿದ್ದಳು. ಮತ್ತ ಮುಂಜಾನೆ ಝಳಕ, ನಾಷ್ಟಾ, ದಿಂಡೀ ನಡಿಗೆ ಭಜನೆಯೊಂದಿಗೆ ಪ್ರಾರಂಭಿಸಿದಾಗ, ಸೂರ್ಯ ನೆತ್ತಿಗೇರುತ್ತಿದ್ದ. ಮುಂದಿನ ಊರಿಗೆ ಬೆಳಸುವ ತರಾತುರಿಯೊಂದಿಗೆ ಭಜನಿ ಮೇಳ, ಪೇನಪಟ್ಟಿಗೆ ಜೋರಾಗಿ ಪ್ರಾರಂಭಿಸಿದಾಗ ಒಡಲಲ್ಲಿ ಉಂಟಾದ ಕಂಪನಗಳು ಹೆಜ್ಜೆಗಳನ್ನು ಚುರುಕುಗೊಳಿಸಲು ಸಜ್ಜಾಗುತ್ತಿದ್ದವು. ನಡೆಯುವ ದಾರಿಗುಂಟ ಭಜನೆಯ ತಾಳಮೇಳದೊಂದಿಗೆ ಮನಸ್ಸಿನ ನೆರಳಿಕೆಗಳೂ ಒಡಗೂಡುತ್ತಿದ್ದವು.

ದ್ಯಾಮವ್ವಗ ಎದೆಯ ಹೊಳೆ ಬತ್ತಿತ್ತು. ಊರಿನ ಹೊಳೆ ಬತ್ತಿದರೆ ಬದುಕುಬಹುದು. ಮಾಯಾಜಿಂಕೆಯ ಬೆನ್ನುಹತ್ತಿ ಹೋದ ಗಂಡ ಅದೇ ದಾರಿಯಲ್ಲಿ ನಡೆಯಲು ಪ್ರಾರಂಭಿಸಿದ ಶರಣ್ಯ. ಊರವರ ಅಸಹ್ಯ ಮಾತುಗಳು, ದಿಂಡೀ ಮ್ಯಾಳದೊಂದಿಗೆ ನಡೆಯುವ ದ್ಯಾಮವ್ವಗ, ತನ್ನ ಎದೀ ಹೊಳಿಯನ್ನು ನಾನೇ ಆದ್ರ್ರಗೊಳಿಸಿ ತುಂಬಿ ಹರಿಸಬೇಕು ಎಂಬ ಕಟು ಸತ್ಯ ಹೊಳೆಯಿತು. ನವಲಗುಂದದಿಂದ ಸಿಂದಗಿಯವರೆಗಿನ ಹತ್ತು ದಿವಸದ ನಡುಗೆ ಬಿರುಬಿಸಿಲಿನಲ್ಲೇ ನಡೆದಿತ್ತು. ಎದೆಯೊಳಗೆ ಉರಿದ ಸೂರ್ಯ ಸುಟ್ಟ ಒಣಗಿದ ಪ್ರೀತಿಯ ಹೊಳೆ ಚುಮ್ಮುವ ಬಗೆ ಹೇಗೆ ಎಂಬುದು ದಿಂಡೀ ಮ್ಯಾಳದ ಪ್ರತಿಯೊಬ್ಬರಲ್ಲೂ ಇತ್ತು.

ಏನೋ ಒಂದು ಗುರಿ ಅಂತ, ಭಕ್ತಿ ಅಂತ, ಆಂತರಿಕ ಗಾಯಕ್ಕೆ ಮುಲಾಮು ಅಂತ ಮ್ಯಾಳದ ಪ್ರತಿಯೊಬ್ಬರು ತಮಗೆ ಹಿತ ಅನಿಸುವ ರೀತಿಯಲ್ಲಿ ಹೊಂಟಿದ್ದರು. ಆದರೆ ದ್ಯಾಮವ್ವನ ನಿರ್ಧಾರವೇ ಬೇರೆಯಾಗಿತ್ತು. ನಡೆದ ದಾರಿ ಕತ್ತಲದು. ಬೆಳಕು ಆಗಾಗ ಮೂಡಿದ್ದ. ಬರೀ ಬ್ಯಾಟರಿಯದ್ದು ಆಗಿತ್ತು. ನಡೆದ ದಾರಿಯ ಧೂಳಿನಲ್ಲಿ ಮೂಡಿದ ಬೆಳಕಿನ ಮಬ್ಬು ಆವರಿಸುತ್ತಿತ್ತು. ಮನೆಯ ಬಂಕದಲ್ಲಿನ ಮೌನ ಅವಳನ್ನು ಪ್ರಪಾತದ ಕಡೆ ಎಳೆಯದೊಡಗಿದಾಗ, ಅವಳು

ನಾಟಕ ಟೆಂಟುಗಳ ಜಾತ್ರೆಗಳ ಮೊರೆ ಹೋಗುತ್ತಿದ್ದಳು. ಗಂಡ ಮಾಡಿದ ವ್ಯಭಿಚಾರ, ಸಾಲ, ಸೂಜಿಮೊನೆಯಂತೆ ಅವಳೆದೆಯನ್ನು ಕೊರೆಯುತ್ತಿತ್ತು.

ಮನೆ ಮನೆಗೆ ಹಚ್ಚಿದ ಬಂಕ, ಎರಡೆಕರೆಗೆ ಮತ್ತೆ ಹದಿನೆಂಟು ಎಕರೆಗಳಷ್ಟು ಹೊಲ, ನೀರಾವರಿ ಎಲ್ಲವನ್ನೂ ಅವಳು ಅನುಭವದ ಮಂಟಪ ಎಂಬಂತೆ ಜಾತ್ರೆ, ಜಾತ್ರೆ ತಿರುಗಾಡಿ, ಏನೋ ತೀರ್ಮಾನಿಸಿದಂತೆ ಸಾಮಾನುಗಳನ್ನು ಬಂಡಿಯಲ್ಲಿ ಹೇರಿಕೊಂಡು ಹೊರಟು ನಿಂತವಳು. ಈ ಹದಿನೆಂಟು ವರ್ಷಗಳಲ್ಲಿ ಪುಟ್ಟ ಗುಬ್ಬಚ್ಚಿ ಗೂಡು ಹೆಣೆದಿದ್ದಳು. ಮಲ್ಲಪ್ಪ, ಶರಣ್ಯಾ ತನ್ನ ಒಲಿ ಮುಂದ ಕಳಿತ ಬಾಡಿಹೋದ ಬೋಳ ಕಣ್ಣುಗಳಿಗೆ ಬೆಳಕಿನ ಕಂದೀಲು ಆಗ್ತಾರ ಅಂತ ದೊಡ್ಡ ಕನಸು ಉಡಿಯಲ್ಲಿ



ಕಟ್ಟಿಕೊಂಡು ಅಕ್ಕಮಹಾದೇವಿಯಂತೆ ಬೆಳಕಿಗೆ ಅರಿಸಿಯೇ ಅರಸಿದಳು. ತನ್ನೊಳಗೆ ಅದಮ್ಯ ಉತ್ಸಾಹವನ್ನು ತುಂಬುತ್ತಿದ್ದ ರಾಜಕುಮಾರನ ಸಿನೆಮಾಗಳನ್ನು ರಾತ್ರಿ ಮೂರನೇ ಆಟವನ್ನು ಬನಶಂಕರಿ ಜಾತ್ರೆಯಲ್ಲಿ ಒಂದು ಚೂರು ತೂಕಡಿಕೆ ಇಲ್ಲದೇ ಕುಳಿತು ನೋಡಿ ಮತ್ತೆ ಮುಂಜಾನೆ ಖಾನಾವಳಿ ಒಲಿ ಹೊತ್ತಿಸುತ್ತಿದ್ದಳು. ತಾನು ಯಾವ ದಿಕ್ಕಿನಲ್ಲಿ ಹೋಗುತ್ತಿದ್ದೆ ಎಂಬುದನ್ನು ಗೊತ್ತು ಮಾಡಿಕೊಳ್ಳದೆ ನಡದೇ ನಡೆದಳು. ದಾರಿ ಇದ್ದಕ್ಕಿದ್ದ ಹಾಗೆ ಕೊನೆ ಮುಟ್ಟಿತ್ತು. ಮೊನ್ನೆಯ ಬನಶಂಕರಿ ಜಾತ್ರೆಯಲ್ಲಿ ಅವಳಿಗೆ ಒಮ್ಮೆಲೇ ತಾನು ಕೆಸರಿನಲ್ಲಿ ಹೂತುಹೋದಂತೆ ಆಗಿ ನರನರಗಳು ಮರಗಟ್ಟಿ ಹೋದವು. ಊಹೂ ಏಳಲಾರೆ ಎದ್ದು ನಿಲ್ಲಲಾರೆ, ಗಂಡ ಇದ್ದರೆ ತನ್ನನ್ನು ಎದ್ದು ನಿಲ್ಲಿಸುತ್ತಿದ್ದನೋ, ಇಲ್ಲ ಅವನು ಖಂಡಿತ ತನ್ನನ್ನು ಈ ರಾಡಿಯಿಂದ ಎಬ್ಬಿಸುತ್ತಿರಲಿಲ್ಲ. ಅವನೇ ಕಲಸಿಹಾಕಿದ ರಾಡಿಯ ಹೊಂಡವಿದು, ಜೋರಾಗಿ ಕೂಗಿಕೊಳ್ಳಬೇಕು, ದನಿಯೇ ಬರುತ್ತಿಲ್ಲ ತಾನು ಹೂತು ಹೋಗುತ್ತಿದ್ದೇನೆ ಸಾವಿನ ಕೂಪಕ್ಕೆ, ದಿಂಡೀ ಎಷ್ಟು ದೂರ ಐತಿ ಇನ್ನು? ನಾಲ್ಕ ಹೆಜ್ಜೆ. ದಾಂಡೀಗಾಗಿ ಬಡಿದಾಡಿದೆ ಏನೈತಿ ಈ ಜಗದೊಳಗೆ, ವಿಠಲಾ ನನ್ನನ್ನು ಮೇಲಕ್ಕೆ ಎಳಿಯೋ ದೇವ್ರ : ದ್ಯಾಮವ್ವ ಹಳವಂಡದಲ್ಲಿ ಜೋರಾಗಿ ಕೂಗಿದಳು. "ಬೇ... ಯಕ್ಕಾ ಯಾಕ ಕಿರುಚಿಕೊಂಡಿ, ಕೆಟ್ಟ ಕನಸಬಿತ್ತ ಏನು?".

ದಿಂಡೀಯೊಳಗೆ ಸೇರಿದ ನಿಂಗವ್ವ ದ್ಯಾಮವ್ವನ ಹೆಗಲಮುಟ್ಟಿ ಅಲ್ಲಾಡಿಸಿದಳು.

“ಇಲ್ಲ ಯಕ್ಕಾ ಮನಸ್ಸಿನ ಹಳವಂಡ. ಜಾತ್ರಿ ಗದ್ದಲ ನುಗ್ಗು ಹೈರಾಣ ಆಗಿನೀ. ಈ ಜೀವಕ್ಕೆ ಬಹಳ ಖಜೀಲ ಆಗೈತಿ. ಏನಮಾಡಿದ್ರ ಬರಬಾದ ಆಗಿ ಹೋಯ್ತು ಜನಮ. ಖೋಡಿ ಜನ್ಮ ಇನ್ನ ಎಷ್ಟು ದಿನ ಗುದ್ದಾಡಬೇಕೋ” ಅಷ್ಟು

ಹೇಳುವುದರಲ್ಲಿ ಅವಳ ಕಣ್ಣುಗಳು ಎಳೆದು ತುಂಬಿ ಬಂದು ಸೆರಗು ಮಾರಿಮ್ಯಾಗ ಎಳೆದುಕೊಂಡಳು. ಅವಳ ತಲೀ ತುಂಬ ಹುಳುಗಳು ಹರಿದಾಡಿದ್ದಾಂಗ ಆಯ್ತು, ಎಂತಹ ವಿಚಿತ್ರ ನಿರೀಕ್ಷೆ ಬೆಚ್ಚಗೆ ಮಕ್ಕಳಿಬ್ಬರನ್ನೂ ತಬ್ಬಿ ತನ್ನ ಗೂಡೊಳಗೆ ನಿದ್ದೆ ಹೋಗಬೇಕು, ಮೊಮ್ಮಕ್ಕಳ ತೊಡಿಮ್ಯಾಗ ಕೂರಿಸಿಕೊಂಡು ಕಥೆ ಹೇಳಬೇಕು. ಎಲ್ಲದಕ್ಕೂ ಜೊತಿಯಾಗುವ ಮಕ್ಕಳ ಮಾರಿಮ್ಯಾಗ ನಗು ತೇಲಿ ಮೂಡಬೇಕು.

ದ್ಯಾಮವ್ವ ಕಷ್ಟಪಟ್ಟು ಬಾಳೇ ಕಟ್ಯಾಳ, ಬಂದ ಸೊಸೆಯಂದಿರು ಹೊಂದುಕೊಂಡು ನಡೆದರೆ ಚೆನ್ನ ಅಂತ ಊರೊಳಗೆ ಮಂದಿ ಮಾತನಾಡುತ್ತಿದ್ದರು. ಕಡುಬೇಸಿಗೆಯಲ್ಲಿ ನವಲಗುಂದ ನರಗುಂದ ಊರಾಗಿಂದ ಒಂದೊಂದು ಹೆಣ್ಣು ಗೊತ್ತು ಮಾಡಿ ಇಡೀ ಊರಿಗೆ ಬುಂದೇ ಊಟ ಹಾಕಿಸಿದ್ದಳು.

ಸೊಸೆಯಂದಿರು ಎರಡೆರಡು ಮಕ್ಕಳ ಹಡೆದು ಹೊಲದ ದಗದ, ಜಾತ್ರೆ ತಿರುಗಾಟ ಅಂತ ಮನಿತನಕ್ಕೆ ಬಂದಾದರು. ಆರು ತಿಂಗಳು ಅವ್ವ ಸೊಸೆಯಂದಿರು ಜಾತ್ರೆ ಗುಳೇ ಹೋದಾಗ ಶರಣ್ಯಾ ತನ್ನಪ್ಪ ಅಡ್ಡಾಡಿದ ಅಂಗಳದಾಗ ತುಡಗ ಬೆಕ್ಕ ಹೊಕ್ಕಾಂಗ್ಹ ಹೊಕ್ಕಂಡ, ಚಂದ್ರವ್ವನ ಮಗಳ ಮೋಹಕ ಮುದ್ದು ಮುಖಕ್ಕೆ ಮಳ್ಳಾಗಿ ಚೆನ್ನದ ನಾಣ್ಯಗಳನ್ನು ತನ್ನ ಹೊಲದ ಮಾಲ ಮಾರಿ ತುಡಗೀಲಿ ಅವಳ ಅಂಗಳದಲ್ಲಿ ಸುರುವಿದ. ಹೋದ ಸರ್ತಿ ಸರದಿ ಜಾತ್ರಿ ಮುಗಿಸಿ ದ್ಯಾಮವ್ವ ಎಂಭತ್ತು ಸಾವಿರ ರೂಪಾಯಿಗಳನ್ನು ತಂದು ಸಂದುಕದಲ್ಲಿ ಕೀಲಿ ಹಾಕಿ ಇರಿಸಿ. ಇದೇ ವರ್ಷದ ಬಾಳೇದ ಸಂತಿ ತರಲಿಕ್ಕೆ



ಹುಬ್ಬಳ್ಳಿ ಪ್ಯಾಟಿಗೆ ಹೋದಾಗ, ಶರಣ್ಯಾ ನಕಲಿ ಚಾವಿಲೀ ಸಂದಕದ ಕೀಲಿ ತೆಗೆದು ಹತ್ತು ಸಾವಿರ ರೂಪಾಯಿ ತಗೊಂಡು ಸೀದಾ ಚಂದ್ರವ್ವನ ಮಗಳ ಕರಕೊಂಡು ಹುಬ್ಬಳ್ಳಿ ಪ್ಯಾಟಿಯೊಳಗೆ ಚೈನಿ ಮಾಡಿ ಬಂದ. ಈ ಸಲ ಬನಶಂಕರಿ ಜಾತ್ರಿಗೆ ಬಂಡಿ ತುಂಬ ಸಾಮಾನು ಹೇರಿಸಿ, ಕಿರಾಣಿ ಸಂತಿ ತರಲೆಂದು ಸಂದಕದ ಕೀಲಿ ತೆರೆದಾಗಲೇ ದ್ಯಾಮವ್ವಗೆ ಗೊತ್ತದದ್ದು. ಇಟ್ಟ ರೊಕ್ಕದಾಗ ಹತ್ತು ಸಾವಿರ ರೂಪಾಯಿ ಮಾತ್ರ ನಾಪತ್ತೆ ಆಗಿದ್ದು, ಅವಳಿಗೆ ಶರಣ್ಯಾನ ಮ್ಯಾಲೇ ಗುಮಾನಿ ಇತ್ತು. ಮೇಲಾಗಿ ಹೆಂಗಸರು ಹಸ್ಯಾಸಿ ಶರಣ್ಯಾ ಅಲ್ಲಿ ಇಲ್ಲಿ ತಿರುಗಾಡುವುದು, ಚೈನಿ ಮಾಡುವ ಸುದ್ದಿಯನ್ನು ಅವಳ ಕಿವಿಗೆ ತುಂಬಿದ್ದರು. ಅವಳು ಮಗನನ್ನು ಕರೆದು ತಿಳಿಹೇಳಲು ಪ್ರಯತ್ನಿಸಿದಳು. “ಶರಣ್ಯಾ ನೀನಿನ್ನು ಸಂಣಾವ ಏನ ನಿನ್ನ ಹೆಂಡತಿ ಮಕ್ಕಳು ಸಂಣಾವರಿದ್ದಾರೆ. ನಿಮ್ಮಪ್ಪ ಸೂಳಿ ಸಹವಾಸ ಮಾಡಿ ನಡಂತ್ರದಲ್ಲಿ ನಮ್ಮನ್ನು ಗುಡ್ಡಗೇಡಿ ಮಾಡಿಟ್ಟೆ ಹೋದ. ನೀನ ನಿಮ್ಮಪ್ಪನ ಹಾದ್ಯಾಗ ನಡೆದರೆ ನನಗೆ ಮೂರು ಮಳದ ಉರುಳೇ ಗತಿ, ನಾನು ಊರು ಊರು ತಿರುಗಿ ನಿದ್ರಿ ನೀರಡಕಿ ಬಿಟ್ಟು ದುಡದ ತಂದ ದುಡ್ಡ, ಹರಾಮಿಗೆ ಖರ್ಚು ಮಾಡಾಕ ನಾ

ಬಿಡಾಕಿಲ್ಲ. ಸಂದಕಾ ತೆಗೆದು ರೊಕ್ಕ ತೆಗೆದುಕೊಂಡು, ಏನ ಮಾಡಿದೀ ಖರೇ ಹೇಳು. ದುಡ್ಡೋ ಕಾಸೂ, ಬಕ್ಕಳ ಹತ್ತು ಸಾವಿರ ಗಪ್ಪ ಆಗ್ಯೆತಿ, ಸರಳ ರೊಕ್ಕ ವಾಪಸ್ಸು ತಂದು ಕೊಡು" .

ಶರಣ್ಯಾ ಅವನವ್ವನ ನಿರೀಕ್ಷೆಕ್ಕಿಂತ ಹೆಚ್ಚಾಗಿ ಮನಿ ಜಂತೀ ಹಾರ್ಯಾಡಿ ಹೋಗುವಂತೆ ಕೂಗಾಡಿದ. "ಏನ ಬೇ ಏನು ಮಾತನಾಡತಿ ನೀ, ನಿನ್ನ ರೊಕ್ಕ ತಗೊಂಡು ನಾನೇನ್ ಮಾಡ್ಲಿ. ಎರಡು ಮಕ್ಕಳ ಆದ್ದು ಹತ್ತು ಪೈಸದ ಸ್ವಾತಂತ್ರ್ಯ ಕೊಟ್ಟೇಯೇನಬೇ? ಹೆಂಡತಿಗೆ ಒಂದು ಸಿನೆಮಾಕ್ಕೂ ಕರೆದೊಯ್ಯಬೇಕಾದ್ರ ನಿನ್ನ ರೊಕ್ಕ ಕೇಳಬೇಕು ಎಲ್ಲಾ ಗಂಟು ಮಾಡುಕೊಂಡು ನಮ್ಮನ್ನ ಕುಣಿಸ್ಯಾಕ ಹತ್ತಿದೀ ನೀ., ನಮಗೂ ನಿನ್ನ ಜೋಡಿ ಗುದ್ದಾಡಿ ಸಾಕಾಗ್ಯೆತಿ, ಅದೇನೈತೋ ನಾವು ಬ್ಯಾರಾಗಿ ಇರುತ್ತೀವಿ. ನಮ್ಮ ಪಾಲ ಏನ ಐತಿ ನಮಗೆ ಕೊಟ್ಟು ಬಿಡು. ಎಷ್ಟು ದಿನಾ ಅಂತಾ ಭಿಡೆಗೆ ಬಿಟ್ಟು ಹಡಿಲಾರದೇ ಸಾಯೂದು, ಇವತ್ತು ಎರಡರಾಗ ಒಂದು ತಿಳಿದೇ ಬಿಡಲಿ" ಎಂದೂ ಇಲ್ಲದ ಮಗನ ಧಮಕಿ ಕೇಳಿ ದ್ಯಾಮವ್ವ ಬುಡು ಕಡೆದ ಬಾಳೆ ಗಿಡದಂಗ ಬಂಕದ ಕಂಬಕ್ಕೆ ಒರಗಿದಳು. ಹತ್ತು ನಿಮಿಷದ ನಂತರ ತನಗೆ ತಾನೇ ಸಂಬಾಳಿಸಿಕೊಳ್ಳುತ್ತ, ಯಾವ ಸಂಗತಿಗಳಿಂದ ಮಗನನ್ನು ದೂರ ಇಡಬೇಕೆಂದು ಬಯಸಿದ್ದಳೋ, ಅದೇ ಸಂಗತಿ ಈಗ ತನ್ನ ಮಗನನ್ನು ಗಟ್ಟಿಯಾಗಿ ಹೆಬ್ಬಾವು ಸುತ್ತಿದ ಹಾಗೆ ಸುತ್ತಿದ ವಿಷಯ ಅವಳ ಎದೆಯಲ್ಲಿ ಕಳವಳ ವಿಹ್ವಲತೆ ನಿರಾಸೆ ಎಲ್ಲವನ್ನೂ ಏಕಕಾಲಕ್ಕೆ ಶೂನ್ಯ ತುಂಬಿದಾಗ, ಅವಳು ಆಳವಾದ ನೋವಿನಿಂದ ಮಗನಿಗೆ ಹೇಳಿದಳು.

"ಶರಣ್ಯಾ ಮೈಲಿಗೆ ಹೆಚ್ಚಿಸಬ್ಯಾಡಲಾ, ನನಗೆ ಎಲ್ಲಾ ತಿಳಿದ್ಯೆತಿ. ನಿಮ್ಮಪ್ಪನ ಮನಸ್ಸಿನೊಟ್ಟಿಗೆ ಗುದ್ದಾಡಿ ಗುದ್ದಾಡಿ ಬಕ್ಕ ಬರಲಿ ಬಿದ್ದೇನಿ. ಇದ್ದ ಚೂರು ಮನಸ್ಸಿನ ಹಿತಕ್ಕ ಬೆಂಕಿ ಹಚ್ಚಿ ಬ್ಯಾಡಲಾ ನಮ್ಮ ಬದುಕು ನಮ್ಮದು. ನಮ್ಮ ಅಂಗಳದ ಚಂದಕ ನಾವು ಬೇಲಿ ಹಾಕುಬೇಕು. ನಾ ದುಡದುದ್ದ ಯಾರಿಗೇ ಇಷ್ಟ ಕುಂತ ಉಣ್ಣು ಹಂಗ ಆಸ್ತಿ ಮಾಡಿನೀ. ನಿಮ್ಮಪ್ಪ ಇದ್ದ ಎರಡು ಎಕ್ರೆ ಹೊಲನೂ ಆ ಸೂಳಿ ಸಲುವಾಗಿ ಒತ್ತಿ ಹಾಕಿದ್ದನಲ್ಲಾ



ಎರಡು ತಿಂಗಳ ನೀರು ಹಾಯಿಸಿದ್ರೆ ವರ್ಷಾನುಗಟ್ಟಲೆ ಕುಂತ ತಿನ್ನಾಕ ಕಾಳು ಬರುವ್ಹಂಗ, ನಾಲ್ಕು ಕೂರಿಗೆ ಜಮೀನ ನನ್ನ ರಟ್ಟೆ ದುಡುಮಿಮ್ಯಾಗ ಮಾಡಿನೀಲಾ. ಯಾರ ಸಲುವಾಗಿ ಹೇಳು ನಿನ್ನ ಬಗ್ಗೆ, ನಿನ್ನ ಚೈನಿ ಬಗ್ಗೆ ಜನಾ ಹೇಳಿದ್ದ ನಾನು ನಂಬಲಿಲ್ಲ. ಈಗ ರೊಕ್ಕ ಗಪ್ಪಾಗ್ಯೆತಿ. ನಿನ್ನ ಬಿಟ್ಟು ಯಾರೂ ತೆಗೆದುಕೊಂಡಿಲ್ಲ" .

ಗಾಳಿ ಗೋಪುರವು ಕಾಣಿರೋ ಸಂಸಾರದ

ಬಾಳೇ ಬಂಡಾಟ ಕಾಣಿರೋ

ಗಾಳಿಗಿಟ್ಟ ದೀಪದಂತೆ ಈ ಮೂಳೆದೇಹ

ಪೋಪುದಂತೆ ಯಾರಿಗಾದರಿಲ್ಲವಾಗಿದೆ

ಈ ಲೋಕವು ಮೂರು ದಿನದ ಸಂತೆಯಾಗಿದೆ

ನರಹರಿಯೆಂಬೀ ನಾಲ್ಕಕ್ಷರಗಳ

ಸರಣಿಯ ನರನೀ ನೆನೆಮನವೆ

ಸರಣಿಯನರಿತರೆ ಮರಣವುಯಿಲ್ಲವು

ಮರ್ಮವ ತಿಳಿನೀ ಎಲೆ ಮನವೇ

ಆಗುವನು

ಬ್ರಹ್ಮ ನಿನ್ನೊಳಗುಂಟು ತಿಳಿಯೋ ತಮ್ಮಾ

ದಿಂಡೀ ಮ್ಯಾಳದವರು ಅವಳೆದೆಯ ಕಳವಳಕ್ಕೆ ತಂಪೆರೆಯುವಂತೆ ಭಜನಿ ಹಾಡುತ್ತಿದ್ದರು. ಅವಳಿಗೆ ಆಕಾಶ ಒಂದೂ ಮೋಡ ಇಲ್ಲದೇ ಬರೀ ನೀಲಿಯಾಗಿ ಕಾಣಿಸಿತು.

ಅವಳ ಎದೆಯಲ್ಲಿ ತಾನೊಂದು ತಿಳಿನೀರಿನ ಕೊಳದಲ್ಲಿ ಮೀಯುತ್ತಿರುವಂತೆ ಅನಿಸಿತು. ಕ್ಷಮೆಯೊಂದೇ ಅಸ್ತ್ರ ಬತ್ತಳಿಕೆಯಲ್ಲಿ. ಕರುಳಕುಡಿ ಉರಿಸಿದರೂ ಹೆತ್ತೊಡಲು ಯಾರ ಮುಂದೆ ದೂರುವುದು? ನಾವು ಬೆಳೆದ ಎಲ್ಲಾ ಬೆಳೀನೂ ನಾವೊಬ್ಬರೇ ಕುಂತು ತಿನ್ನಲಿಕ್ಕೆ ಆಗುತ್ತದೆಯೇ. ಅವಳು ಶರಣ್ಯಾನ ಹೆಜ್ಜೆಗಳು ಅವರಪ್ಪ ಅಡ್ಡಾಡಿದ ಅಂಗಳದಲ್ಲೇ ಸ್ಥಾಪಿತಗೊಂಡಿದ್ದಕ್ಕೆ ಎದೆ ಒಳಗೆ ಹೇಳಲಾಗದ ದಗಿ ತುಂಬಿಕೊಂಡಿದ್ದಳು. ದೇವೇ ಇದು ಕಲಿಯುಗ, ಎಲ್ಲೈತಿ ನೀತಿ ನಿಯಮ. ಚಂದ್ರವ್ವನ ಮಗಳು ತನ್ನ ಗಂಡನಿಗೆ ಹುಟ್ಟಿದ್ದು ಅಂತ ಕೇರಿ ನೀಲವ್ವ ಒಮ್ಮೆ ಸಂತಿಯೊಳಗೆ ಸಿಕ್ಕಾಗ ಹೊಟ್ಟೆಕಿಚ್ಚಿನಿಂದ ದ್ಯಾಮವ್ವನ ಮುಂದೆ ಒದರಿದಾಗ, ಅವಳು ನಡು ಸಂತ್ಯಾಗ ನಿಂತು “ಯಾಂವಾಂಗ ಹುಟ್ಟಿದರೆ ನಂಗೇನು. ಅವಳ ಕರ್ಮಕ್ಕೆ ನನ್ನನ್ನೇಕೆ ತಡಿಯುತ್ತೀ ಬೇ. ಯಾರ ಗಂಡಂದಿರು ಸುದ್ದೇ ನನ ಗಂಡ, ಬಾಳೇಕ್ಕ ಬರದ ಉಪ್ಪು ಯಾರ ಇಟಕೊಂಡು ಉರಿಯೋದು ಏನು ಹೇಳ್ತೀ ನೀ” ಅಂತ ನೀಲವ್ವನ ಮಾರಿ ನೀರು ಇಳಿಯುವ್ಹಾಂಗ ಝಾಡಿಸಿದಳು. ಆದ್ರ ಎದೆಯಾಗ ನಟ್ಟ ಮುಳ್ಳಿನ ಕಡಿತ ದ್ಯಾಮವ್ವಗೆ ದಿನೇ ದಿನೇ ಹೆಚ್ಚಾಗುತ್ತಿತ್ತು ಹೊರತು ಕಮ್ಮಿ ಆಗಲಿಲ್ಲ. ಈ ಸಲ ಬನಶಂಕರಿ ಜಾತ್ರೆಗೆ ಖಾನಾವಳಿ ಸಂತೀ ಹೇರಿ. ರೊಕ್ಕದ ಗಂಟು ಸಂದಕದಾಗಿನಿಂದ ತೆಗೆದಾಗಲೇ ಮಗನ ಹುಚ್ಚಾಟ ನಜರಿಗೆ ಬಿದ್ದು, ಅಂವ ಜಾತ್ರಿ ಕೆಲಸಕ್ಕೆ ಬರೂದ ಇಲ್ಲ ಅಂತ ಕಡ್ಡಿ ಕೊರದಾಂಗೆ ಜಗಳ ತೆಗೆದು

ಹಂಡತಿ ಮಕ್ಕಳೊಂದಿಗೆ ಊರಾಗ ಉಳಿದುಬಿಟ್ಟ. ಮಗ ಮಲ್ಲಪ್ಪನೊಂದಿಗೆ ಸೊಸೆಯೊಂದಿಗೆ ಜಾತ್ರಿ ಸರಣಿ ತಿರುಗಾಟ ಪ್ರಾರಂಭಿಸಿದ ಮಲ್ಲವ್ವಗ ಈ ಸಲ ಜಾತ್ರಿ ಯಾತ್ರಿ ಸಸೂತ್ರ ನಡೆಯುವ ಹಾಂಗ ಕಾಣಲಿಲ್ಲ. ಬನಶಂಕರಿ ಜಾತಿಯೊಳಗೆ ಬೊಂಬಕಟ್ಟಿ ತಗುಡು ಏರಿಸಿ, ತಂದ ಸಾಮಾನ ಗಂಟುಕೂಡಾ ಬಿಚ್ಚದೇ ಅವಳು ಸುಮ್ಮನೆ ಜಾತ್ರಿ ತುಂಬ ಅಡ್ಡಾಡುವ ಅಂಗಡಿಕಾರರು ಜನರ ಕಾಲುಗಳನ್ನು ನೋಡುತ್ತ ಖಾನಾವಳಿ ಮುಂದಿನ ಸಣ್ಣ ಗೂಟ ಕಲ್ಲಿನ ಬಳಿ, ಗೂಟ ಬಡಿದ್ದಾಂಗ ಕುಳಿತುಬಿಟ್ಟಳು. ಮಲ್ಲಪ್ಪ. ಅವನ ಹೆಂಡತಿ, ಮಸಾಲಪುಡಿ, ಶೇಂಗಾ ಚಟ್ನಿಪುಡಿ, ಗುರೆಳ್ಳುಪಡಿ, ಪುಠಾಣಿ ಚಟ್ನಿಪುಡಿ ಎಲ್ಲವನ್ನೂ ದೊಡ್ಡ ಬಾಟಲಿ ಭರಣಿಯೊಳಗೆ ತುಂಬಿಸಿಟ್ಟು ಕಟಗಿ ತಂದು ತಾವೇ ಮೂರು ಮೂರು ಕಲ್ಲಿನ ಆರು ಒಲಿಗಳ ಹೂಡಿ ಪುಟ ಮಾಡಿದರು. “ಬೇ ಯವ್ವಾ ಯಾಕ ಹೈರಾಣ ಆವ್ಹಾಂಗ ಕುಳಿತಿಬೇ? ಏನಾರು ಒಂದೀಟೂ ಹೊಟ್ಟಿಗೆ ಹಾಕ್ಕೊಳ್ಳು, ದಾರಿ ಸವಿದು ದಣಿದೀ, ಕೈಕಾಲು ಮಾರಿ ತೊಳೆದುಕೋ ಬಾರಬೇ” ಮಲ್ಲಪ್ಪ ಕಳಕಳಿಯಿಂದ ಕರೆದಾಗ ಯಾಕೋ ಅವಳ ಕೊರಳ ತುಂಬ ದುಃಖ ತುಂಬಿ ಕಣ್ಣಾಗ ನೀರು ತಮ್ಮಷ್ಟಕ್ಕೆ ತಾವ ಪಟಪಟ ಉದಿರಿದವು. ಅವಳು ತಾನೇ ಸಂಭಾಳಿಸುತ್ತ ಸೆರಗಿನಾಗ ಮಾರಿ ಒರಿಸುತ್ತ ಒಳಗ ನಡೆದು ಬಂದಳು. ಅಡಗಿ ಮನಿಯೊಳಗೆ ಒಳ ಸೇರಿದ ಬೇವಿನ ಮರದ ಬಡ್ಡಿಯ ಬಳಿ ಸೊಸೆ ತಂದು ಕೊಟ್ಟ ಎರಡು ರೊಟ್ಟಿ, ಬದನೇಕಾಯಿ ಪಲ್ಲೆ ತಿಂದು ಚರಗಿ ನೀರು ಕುಡಿದು ಹಾಂಗ ಅಡ್ಡಾದಳು. ಅವಳ ಮೈಯ ನರನರಗಳಲ್ಲಿ ಭೀತಿ ಹರಡಿ ಅವಳು ಮತ್ತಷ್ಟು ಮುದುಡಿ ಮಲಗಿದಳು.

ದಿಂಡೀ ಸೊಲ್ಲಾಪುರದ ಸಿದ್ದರಾಮೇಶ್ವರ ಗುಡಿಯ ಪಾಳಿಯಲ್ಲಿ ರಾತ್ರಿ ವಸ್ತಿ ಇಳಿದಿತ್ತು. ಸುತ್ತಲೂ ಕೆರೆ ಮಧ್ಯ ದೇವಸ್ಥಾನದ ನೀರಿನ ಅಲೆ ಅಲೆಗಳಲ್ಲಿ ಹುಣ್ಣಿಮೆ ಚಂದಿರ ತೇಲುತ್ತಿದ್ದ. ಎಲ್ಲಾ ಹೆದ್ದಾರಿಯ ಬಸ್ಸುಗಳು ಸಿದ್ದರಾಮೇಶ್ವರ ಗುಡಿಯ ಮುಂದೆಯೇ ಪೊಂಯ್ ಪೊಂಯ್ ಎಂಬ ಸದ್ದು ಮಾಡುತ್ತ ಇಡೀ ರಾತ್ರಿ ಸರಿದು ಹೋದವು. ರಸ್ತೆಯ ಬಾಜುಗಳಲ್ಲಿ ಇರುವ ಎತ್ತರೆತ್ತರದ ದೊಡ್ಡ ದೊಡ್ಡ ಬಿಲ್ಡಿಂಗಗಳು ಶೆಟ್ಟರ್ ಎಳೆದು ದೊಡ್ಡ ದೊಡ್ಡ ಬೀಗ ಜಡಿದು ವ್ಯಾಪಾರಸ್ಥರು ಮನೆಗೆ ತೆರಳಿದ್ದರು. ದ್ಯಾಮವ್ವ ಮಗ ಸಂದಕಕ್ಕೆ ಹಾಕಿದ ಬೀಗ ಹೇಗೆ ತೆಗೆದ ಎಂಬ ಆಲೋಚನೆ ತಲೆಯೊಳಗೆ ಹೊಕ್ಕಿತು. ಇಕ್ಕಟ್ಟಾದ ಮನೆಯೊಳಗೆ ಒಬ್ಬರಲ್ಲಾ ಒಬ್ಬರು ಸಂದಕದ ಮೇಲೆಯೇ ಕಂಬಳಿ ಹಾಸಿ ಕೂಡುತ್ತಿದ್ದರು. ರಾತ್ರಿ ತಾನು ತಪ್ಪದೇ ಸಂದಕದ ಬದಿಯಲ್ಲಿಯೇ ಗುಡಾರ ಹಾಸಿ ಮಲಗಿಕೊಳ್ಳುತ್ತಿದ್ದು, ಶರಣ್ಯಾ ಯಾವ ಮೂಲೆಯಿಂದ ಹಣವನ್ನು ತೆಗೆದುಕೊಂಡಿರಬಹುದು, ಚಂದ್ರಿಯ ಮಗಳ ಗೆಳೆತನ ಅವನನ್ನು ಇತಂಹ

ಮಾರ್ಗಕ್ಕೆ ಎಳಿಯಿತೇ? ತಾನು ಮಾಡಿದ ಯಾವ ಕಾಳಜಿಗಳು ಸುಳ್ಳಾದವು. ಮಗ ಹೀಂಗ ಮೈಮೇಲೆ ಹುಲಿ ಎರಗಿದಂಗ ಏರಿ ಬಂದನಲ್ಲ! ನನ್ನ ಎದೆ ಹಾಲು ಅವಂಗ ವಿಷವಾಯೋ! ಅವಳು ಗೊಂದಲಗಳ ಮುಳ್ಳು ಕಂಟಿಯ ಮೇಲೆ ಮಲಗಿದ್ದಳು. ದಿಂಡೀ ಮ್ಯಾಳದವರ ಭಜನೆ ಯಾಕೋ ಅಬ್ಬರವಿಲ್ಲದೆ ಶಾಂತವಾಗಿ ಆ ಪ್ರಶಾಂತ ರಾತ್ರಿಯಲ್ಲಿ ನಡೆದಿತ್ತು.



ಮನದ ಕದವ ತೆರೆಯೋ ವಿಠ್ಠಲ

ಎದೆಯ ಕದವ ತೆರೆಯೋ ವಿಠ್ಠಲ

ಬಯಲು ಕದವ ತೆರೆಯೋ ವಿಠ್ಠಲ

ಮುಗಿಲ ಕದವ ತೆರೆಯೋ ವಿಠ್ಠಲ

ಪಟ ಪಟನೆ ಹಾರಿಸೋ ಗಾಳಿಪಟ ವಿಠ್ಠಲ

ಅವಳು ಒತ್ತಾಯದಿಂದ ಕಣ್ಣು ರೆಪ್ಪೆಗಳನ್ನು ಮುಚ್ಚಿದಳು. ಬನಶಂಕರಿ ಜಾತ್ರಿ ನಡೆದು ಹದಿನೈದು ದಿವಸಗಳಾಗಿದ್ದವು. ಕಡೀ ಜಾತ್ರಿಯ ಹೊತ್ತಿಗೆ ಮನೆ ದೇವರಿಗೆ ಕಾಯಿ ಒಡೆಸುವವರು, ಬಯಲ ಸೀಮೆಯ ನಾಟಕ, ಸಿನೇಮಾ, ಮನರಂಜನಿ, ಸಾಮಾನು ಖರೀದಿ ಅಂತ ಜನಜಾತ್ರೆ ಹೆಚ್ಚಾಗುತ್ತಿತ್ತು. ತೇರು ಎಳೆದು ಹದಿನೈದು. ದಿವಸದ ನಂತರ ಖಾನಾವಳಿಯ ಊಟಕ್ಕೆ ಬಹಳ ಬೇಡಿಕೆ ಬರುತ್ತಿತ್ತು. ಎರಡೆರಡು ಸಿನೆಮಾ ನಾಟಕ ನೋಡಿದ ಜನ ರಾತ್ರಿ ಒಂದು ಗಂಟೆಯಾದ್ರೂ ಖಾನಾವಳಿಗೆ ಹಸಿದ ಹೊಟ್ಟೆಗೆ ರೊಟ್ಟಿ ಕಾಣಿಸಲು ನೂಕೇ ನುಗ್ಗುತ್ತಿದ್ದರು. ಮೊದಲೇ ಮನೆಯಿಂದ ಹೊರಡುವಾಗ ರೊಕ್ಕ ತುಡುಗು ಮಾಡಿ ಜಗಳ ತೆಗೆದ ಶರಣ್ಯಾ. ಕಡೀ ಜಾತ್ರಿ ಹೊತ್ತಿಗೆ, ರಾತ್ರಿ ಹನ್ನೊಂದರ ಹೊತ್ತಿಗೆ ಚಂದ್ರವ್ವನ ಮಗಳ ಕರಕೊಂಡು ಶ್ರೀ ವೀರಭದ್ರೇಶ್ವರ ಲಿಂಗಾಯಿತ ಖಾನಾವಳಿಯೊಳಗ ಕಾಲಿಟ್ಟ ಕ್ಷಣ, ಅವರಿಬ್ಬರ ಮಾರಿ ನೋಡಿದ ದ್ಯಾಮವ್ವಗ, ಚಂದ್ರಿ ಮಗಳ ಮಾರ್‍ಯಾಗ ತನ್ನ ಗಂಡನ ಮುಖದ ಹೋಲಿಕೆ ಕಂಡು ಮೈಯಲ್ಲಾ ಭಗ್ ಅಂತ ಉರಿ ಹೊತ್ತುಕೊಂಡು ಬಿಟ್ಟಿತು. “ಲೇ ಶರಣ್ಯಾ ನೀನು ಇಷ್ಟೊಂದು ನೀಚಮಟ್ಟಕ ಇಳಿತಿಯಂತ ತಿಳಿದಿದ್ರೆ ನಿನ್ನ ಹಡದಾಗಲೇ ಕುತುಗಿ ಹಿಚುಕಿ ಬಿಡ್ತಿದ್ನಿ. ನಿಮ್ಮಪ್ಪನ ಬೀಜಕ್ಕ ಹುಟ್ಟಿದೊಳ ಸಂಗಡ ಚಲ್ಲಾಟ ಆಡ್ತಿಯೇನ ಸೂ... ಮಗನೇ ಖಾನಾವಳಿಯೊಳಗೆ ಕಾಲು ಇಟ್ಟ ನಿನ್ನ ಕಾಲು ಮುರಿದು ಕೈಗೆ ಕೊಟ್ಟು ಕಳಿಸ್ತೀನಿ ಬೋ... ಮಗನೇ.. ಇಂದಿನಿಂದ ನನಗ ನಿನಗ ಯಾವ ಸಂಬಂಧಾನೂ ಇಲ್ಲ. ನಡೀ ಆಚೆ ಹಡಬೆ ನಾಯಿ” ಊಟಕ್ಕ ಬಂದ ಎಲ್ಲಾ ಗಿರಾಕಿಗಳ ನಡುವೆಯೇ ಬಾಯಿಗೆ ಬಂದ ಬೈಗುಳನ್ನೆಲ್ಲಾ ಒದರಿಬಿಟ್ಟಳು.

ಅರ್ಧ ಅರ್ಧ ರೊಟ್ಟಿ ತಿಂದ ಗಿರಾಕಿಗಳು, ಖಾನಾವಳಿಯಾಗ ದೊಡ್ಡ ರಂಪಾಟ ಆಗೈತಿ ಅಂತ ತಿಳಿದು ಲಗೂಲಗೂನೇ ಊಟ ಮುಗಿಸಿ, ಕೈ ತೊಳೆದು ಗಲ್ಲೇದ ಮುಂದ ಇಟ್ಟ ಸೋಂಪಿನ ಕಾಳನ್ನು ಮರೆತು ಜಾತ್ರಿಯ ಗದ್ದಲದೊಳಗ ಸೇರಿ ಸರಕ್ಕೊಂಡುಬಿಟ್ರು. ಅವರವ್ವ ಅಷ್ಟು ಜೋರಾಗ ಬಾಯಿ ಮಾಡಿ ಒದರಾಡಿದರೂ ಶರಣ್ಯಾ ಕಿವಿಯಾಗ ಒಂದೂ ಮಾತು ಸೇರಿಸಿಕೊಳ್ಳದೇ ಹಾಂಗ ಬಂದು ಚಂದ್ರವ್ವನ ಮಗಳ ಕೂಡಾ, ಊಟದ ಟೇಬಲ್ ಮುಂದೆ ಕುಳಿತುಬಿಟ್ಟ, “ಯಾವ್ವಾ ನನಗೆ ಐದು ಸಾವಿರ ರೂಪಾಯಿ ಬೇಕು ಅರ್ಜೆಂಟ್” ಅಂದ. ದ್ಯಾಮವ್ವ ದುರ್ಗಿ ಅವತಾರ ತಳೆದು ಗಲ್ಲೇದ ಮೇಲಿದ್ದ ಮಲ್ಲಪ್ಪನ ಕೈಹಿಡಿದು ಎಳೆದು, “ಮೊದಲು ಅವನ್ನ ಒದ್ದು ಹೊರಗಾಕಲೇ ಮಲ್ಲ” ಅಂದಾಗ ಮಲ್ಲಪ್ಪ ಮೊದಲು ಹಿಂದೆ ಮುಂದ ನೋಡಿದ. ಆಮೇಲೆ “ಯಣ್ಣಾ ಈಗ ಊರಿಗೆ ವಾಪಸ್ಸು ಹೋಗು, ಜಾತ್ರಿ ಮುಗಿಸಿ ಅವ್ವ ತಿರುಗಿ ಬಂದಾಗ ವಿಚಾರಿಸುವಂತಿ” ಅಂತ ಸೂಕ್ಷ್ಮವಾಗಿ ಅಣ್ಣನನ್ನು, ಅಣ್ಣನೊಂದಿಗೆ ಬಂದ ತಂಗಿಯನ್ನು ಹೊರ ಕಳುಹಿಸಲು ಯತ್ನಿಸಿದ. ಆದರೆ ಶರಣ್ಯಾ ಗಟ್ಟಿಯಾಗಿ ನ್ಯಾಯ ತೆಗೆಯಲೇಬೇಕೆಂದು ಬಂದಿದ್ದ.



“ಯಾಂವಲೇ ನನ್ನ ಒದ್ದ ಹೊರಗ ಹಾಕಾಂವ, ತಾಕತ್ತಿದ್ದರೆ ಮೈ ಮುಟ್ಟಲಿ ನೋಡೋಣ. ನಮ್ಮಪ್ಪ ಮಾಡಿಟ್ಟು ಹೋದ ಆಸ್ತಿ ಐತಿ ನನಗೂ ಹಕ್ಕೈತಿ, ಈಕಿ ಊರೂರು ಅಡ್ಡಾಡಿ ಬರೀ ಗಂಟ ಮಾಡ್ಕೊತ ಹೋಗಲಿ, ನಾವಲ್ಲಿ ಹೊಲದಲ್ಲಿ ದುಡಿದು ಹೈರಾಣ ಆಗ್ತಿವಿ. ನಾಯೇನ ಊರಾಗ ಯಾರ ಮಾಡಿದ್ದದ್ದೇನು ಮಾಡಿಲ್ಲ. ನಮಗೂ ಮನಸ್ಸಿಗೆ ಖುಷಿ ಬೇಕು. ಹತ್ತ ಪೈಸಾ ಹಿರೀತನ ಕೊಟ್ಟಿಲ್ಲ ಎಗರಾಡ್ತಾಳ. ಏನು ಮಾಡ್ತಿಯೋ ನಾನು ನೋಡೇ ಬಿಡ್ತೀನಿ.” ಯಾವಾಗ ಶರಣ್ಯಾ ಅವ್ವನ ಧಮಕಿ ಮರೆತು ಮಾತನಾಡಿದನೋ ದ್ಯಾಮವ್ವ ಒಲೆ ಉರಿಯಲು ಇಟ್ಟ ಕಡಗೀ ರಾಶಿಯಿಂದ ಒಂದು ಕಡಗೀ ತುಂಡು ತೆಗೆದು ಶರಣ್ಯಾನ ಕಟೆಯಲು ಮುಂದಾದಳು. ಇದೇ ಸಂದರ್ಭ ಉಚಿತ ಎಂದು ಶರಣ್ಯಾ ಕಾಲಾಗಿನ ಚಪ್ಪಲಿ ತೆಗೆದು ಅವನವ್ವನ ಮಾರಿ ಮುಖ ನೋಡದೇ ನಾಲ್ಕು ಬಾರಿಸಿಯೇ ಬಿಟ್ಟ. ದ್ಯಾಮವ್ವ ಇದನ್ನು ಮನಸಿನ್ಯಾಗೋ ನೆನೆದಿರಲಿಲ್ಲ. ಅವಳು ಹೌಹಾರಿ ಕೈಯಾಗಿನ ಕಟಗಿ ತುಂಡು ಹಾಂಗ ನೆಲಕ್ಕೆ ಒಗೆದು ದಂಗಾಗಿ ಮೈಮ್ಯಾಗಿನ ಖಬರಿಲ್ಲದಾಂಗ ನಿಂತುಬಿಟ್ಟಳು. ಮಲ್ಲಪ್ಪಗೆ ಏನ ನಡೀತ ಎಂಬುದು ಗೊತ್ತಾಗುವ ಮೊದಲೇ ಶರಷ್ಯಾ ಚಂದ್ರವ್ವನ ಮಗಳ ಕೈ ಹಿಡಿದು ಖಾನಾವಳಿಯಿಂದ ಹೊರ ಬಂದು ಜಾತಿ ಗದ್ದಲದೊಳಗ ಒಂದಾಗಿ ಹೋದ.

ಮುಂದ ಸೊಸಿ ಬಂದು ಅತ್ತಿಯ ಮಾರಿಗೆ ನೀರು ಚಿಮಿಕಿಸಿದಳು, ಮಲ್ಲಪ್ಪ ಅವನ ಹೆಂಡತಿ ಇಬ್ಬರೂ ದ್ಯಾಮವ್ವನ ಎರಡೂ ಬಗಲಿಗೆ ಕೈ ಹಾಕಿ ಎತ್ತಿಕೊಂಡು ಬಂದು, ಅಡುಗೆ ಮನೆ ಮಾಡಿದ ಬೇವಿನ ಬಡ್ಡಿಗೆ ಹಾಸಿದ ಚಾಪಿ ಮೇಲೆ ಮೊಮ್ಮಕ್ಕಳ ಮಗ್ಗಲಿಗೆ ತಂದು ಮಲಗಿಸಿ, ಬಾಯಾಗ ನೀರು ಹಾಕತೊಡಿಗದರು. ದ್ಯಾಮವ್ವಗ ಆಘಾತದಿಂದ

ಚೇತರಿಸಿಕೊಳ್ಳಲು ಮೂರು ನಾಲ್ಕು ಗಂಟೆಯೇ ಬೇಕಾಯಿತು. ನಡೆದಿದ್ದು ನೆನಪಿಗೆ ಬಂದಾಗ ಇಡೀ ಬನಶಂಕರಿ ಹೊಂಡ ತುಂಬುವಷ್ಟು ಅವಳು ಕಣ್ಣೀರು ಸುರಿಸಿದಳು. ಸೊಸಿ ಮಗ ಏನ ಹೇಳಿದ್ರೂ ದ್ಯಾಮವ್ವ ಒಂದು ತುಣುಕು ರೊಟ್ಟಿ ಮುಟ್ಟಲೇ ಇಲ್ಲ. ಗಿರಾಕಿಗಳ ಗದ್ದಲ, ಅಡಗಿಮನಿ ಸಂಭಾಳಿಸುವುದು ಎಲ್ಲವೂ ಮಲ್ಲಪ್ಪನ ಹೆಂಡತಿಗೆ ಗೊಂದಲಗಳ ಇರಬಿ ಗೂಡು, ಸೆರಗಿಗೆ ಸೇರಿಕೊಂಡು ಬಿಟ್ಟಿತು. ಒಂದೆಡೆ ಅವ್ವ ಮಾತನಾಡದೇ ಮೂಕಿಯಂತೆ ಮಲಗಿದ್ದು, ಜಾತ್ರೆಯ ಗದ್ದಲ ಸಂಭಾಳಿಸುವುದು ಮಲ್ಲಪ್ಪನಿಗೆ ತಾನು ಒಂದು ಕಾಲು ಮುರಿದ ಕುರ್ಚಿ ಎನಿಸಿತು. ಗಂಡ ಹೆಂಡತಿ ರಮಿಸಿ ರಮಿಸಿ ಚಹಾ ಬ್ರೆಡ್ ತಿನ್ನಿಸುವ ಮಟ್ಟಕ್ಕೆ ಬಂದರು. ಪ್ರೀತಿಯ ಶರಣ್ಯಾ ಕಾಲುಮರಿ ತಕ್ಕೊಂಡು ತನ್ನ ಹೊಡದನಾ ಅಂತ ಈ ಎರಡು ದಿವಸಗಳ ಮೌನದಲ್ಲಿ ಸಾವಿರಾರು ಬಾರಿ ದ್ಯಾಮವ್ವ ತನ್ನನ್ನ ತಾನೇ ಕೇಳಿಕೊಂಡಳು. ಅವಳಿಗೆ ಅವಳ ಸ್ವಾಭಿಮಾನದ ಬದುಕಿಗೆ ಕೊಡಲಿ ಪೆಟ್ಟು ಬಿದ್ದು, ಅವಳು ನಂಬಿಕೆಗಳ ಮೂಲ ಬೇರುಗಳನ್ನು ಕತ್ತರಿಸಿಕೊಂಡು ಪ್ರಪಾತಕ್ಕೆ ಬಿದ್ದ ಮೂಕ ಮರವಾದಳು. ನೆಲದಲ್ಲಿ ಗಟ್ಟಿಯಾಗಿ ಹೆಜ್ಜೆಯೂರಿ ನಿಂತು ಎಲ್ಲವನ್ನು ಎದುರಿಸುವ ಹಂಚಿಕೊಳ್ಳುವ ಎಲ್ಲದಕ್ಕೂ ಜೊತೆಯಾಗುವ ತನ್ನೊಡಲು ಜೀವಗಳು ಎಂಬುದು ಅವಳ ಪ್ರತೀಕ್ಷೆಯಾಗಿತ್ತು. ಬದುಕಿನ ವಾಸ್ತವಗಳು ಅವಘಡಗಳು ತನ್ನನ್ನು ಹೀಗೆ ನುಗ್ಗು ನುಗ್ಗಾಗಿ ಹಣ್ಣು ಮಾಡುತ್ತವೆ. ಅಂತ ಅವಳು ಎಣಿಸಿರಲಿಲ್ಲ. ಇನ್ನು ಈ ಬದುಕಿನಲ್ಲಿ ಏನೂ ಸಾಧ್ಯವೇ ಇಲ್ಲ ಎಂಬಂತಹ



ಆಳದ ಹತಾಶೆ ಅವಳನ್ನು ಆವರಿಸಿತ್ತು. ಅವಳು ಆ ದಿನ ಯಾವ ಬಗೆಯ ಪ್ರೀತಿಯೂ ಸಂಸಾರದ ಬೆಚ್ಚಗಿನ ಭಾವವೂ ತನ್ನೊಡಲಿಗೆ ದಕ್ಕುವುದಿಲ್ಲ ಎಂಬ, ತೀರಾ ಹತಾಶೆ ಒಂಟಿಭಾವದಿಂದ ಜನಜಂಗುಳಿಯಿಂದ ತುಂಬಿದ ಜಾತ್ರೆಯಲ್ಲಿ ಯಾರೊಂದಿಗೂ ಹಂಚಿಕೊಳ್ಳಲಾರದೇ ಒಬ್ಬಳೇ ಒದ್ದಾಡಿದಳು.

ಅವಳಿಗೆ ಆ ರಾತ್ರಿ ನರನರಗಳಲ್ಲಿ ನಡುಕ ಚಳಿ ಏರಿತು. ಅದು ಮಗನನ್ನು ಕಳೆದುಕೊಂಡ ನಡುಕವೋ ಇಲ್ಲಾ ತಾನು ಒಂಟಿಯಾದ ನಡುಕವೋ, ಇಲ್ಲಾ ಬನದ ಹುಣ್ಣಿಮೆಯ ಚಳಿಯ ನಡುಕವೋ, ತನ್ನ ಸಾವಿನ ನಡುಕವೋ, ತಿಳಿಯದೇ ಹಲ್ಲು ಕಟ ಕಟ ಕಡಿಯುತ್ತ, ಕಂಬಳಿ ಹೊದ್ದು ಮಲಗಿದವಳು, ನಿಶ್ಚಲ ಒಂದು ವಾರ ಬೆಂಕಿಯಂತೆ ಸುಡುವ ಜ್ವರದ ತಾಪದಲ್ಲಿ ನರಳಿದ್ದಳು. ಮಲ್ಲಪ್ಪ ಜಾತ್ರೆಯಲ್ಲಿ ಟೆಂಟ್ ಹೊಡದ ಡಾಕ್ಟರನ್ನು ಕರೆದುಕೊಂಡು ಬಂದು ದಿನಾಲೂ ಎರಡು ಮೂರು ಸೂಜಿ ಚುಚ್ಚಿಸಿದ. ಡಾಕ್ಟರು ಮಲೇರಿಯಾ ಗುಳಗಿ ಹಾಕಿದರು. ಮಲ್ಲಪ್ಪ ಅವನ ಹೆಂಡತಿ ದ್ಯಾಮವ್ವನ ಸೇವೆ ಮಾಡುತ್ತ ಉಳಿದ ಹದಿನೈದು ದಿನ ಗುದ್ದಾಡಿ ಖಾನಾವಳಿ ನಡೆಸಿದರು. ಜಾತ್ರೆ ಮುಗಿಯುತ್ತ ಬಂದಾಗ ದ್ಯಾಮವ್ವನ ಜ್ವರ ನಿಧಾನವಾಗಿ ಇಳಿಯಿತು. ಬನಶಂಕರಿ ಜಾತ್ರೆ ಮುಗಿಯುತ್ತ ಬಂದ ಹಾಗೆ ಸ್ವಲ್ಪ ಚೇತರಿಸಿಕೊಂಡು ದ್ಯಾಮವ್ವ ಮಗ ಮಲ್ಲಪ್ಪ ಅವನ ಹೆಂಡತಿಗೆ ಹೇಳಿದಳು. “ಮಲ್ಲ ಜೀವಕ್ಕೆ ಬಹಳ ಹಳಹಳಿಯಾಗ್ಯೆತಿ ನೀವು ಮುಂದಿನ

ಜಾತ್ರಿಗೆ ಹೋಗೋದು ಬ್ಯಾಡ. ಪಂಡರಾಪುರಕ್ಕೆ ಹೋಗುವ ದಿಂಡೀ ಮ್ಯಾಳ ಬಂದದ ನಾಲ್ಕು ದಿವಸ ನಾನು ಅವರೊಟ್ಟಿಗೆ ಹೋಗಿ ಇದ್ದ ಬರ್ತಿನಿ, ಸ್ವಲ್ಪ ರೊಕ್ಕ  ನಾನು ತಗೊಂಡು ಹೋಗ್ತಿನಿ. ಉಳಿದ ರೊಕ್ಕ ತೆಗೆದುಕೊಂಡು ನೀವು ಊರಿಗೆ ಹೊಡಮಳ್ಳ ಹೋಗಿ, ಶರಣ್ಯಾಗ ನಿನಗ ಸರಿಪಾಲು ಹಂಚಿಬಿಡು ಅಂತ ಗೌಡ್ರು ಅಣ್ಣಾಗ ಹೇಳ್ತೀನಿ. ನಿಮ್ಮ ನಿಮ್ಮ ಬಾಳೇದಾಗ ನೀವು ಇರ್ರಿ.. ನಾನು ಏನ ಹದ್ದೀಗಿ ಬಂದಿನೀ. ಬರೀ ಎರಡು ಹೆಜ್ಜೆ ಉಳಿದಾವ ವಿಠಲನ ಪಾದಕ್ಕ. ನಾನು ಎಲ್ಲ ಮಾಡೀನಿ ಅಂದ್ರ ನನ್ನ ಖೋತಾ ಅಲ್ಲ. ಶರಣರು ಹೇಳಿದಾಂಗ "ಮುಂದಿನ ಪೂಜಿನ ದಾಟಿದವರಿಲ್ಲ ಈ ಸಂಸಾರಾದಾಗ ಅವನ ಪಾಡಿಗೆ ಅಂವನ್ನ ಕೈ ಬಿಟ್ಟು ಬಿಡಿ, ನಿಮ್ಮ ಬಾಳೇ ಹಾಳು ಮಾಡಿಕೊಳ್ಳಬ್ಯಾಡ್ರಿ"  ಇಷ್ಟು ಹೇಳುದ್ರೊಳಗೆ ದ್ಯಾಮವ್ವಗ ದುಃಖ ಒತ್ತರಿಸಿ ಬಂದು ಗೋಳೋ ಅಂತ ಮಾರಿ ಮುಚ್ಚಿ ಅಳತೊಡಗಿದಳು.

ಪಾತ್ರಿ ಪಗಡಿ ಕಟ್ಟುತ್ತಿದ್ದ ಸಣ್ಣ ಸೊಸಿ ಬಂದು "ಯತ್ತಿ ನೀವು ಅಳಬ್ಯಾಡ್ರಿ ನನಗೆ ಹೊಟ್ಯಾಗ ಸಕಟ ಆಗ್ಯೆತಿ. ನಾವೆಲ್ಲ ಸಂಭಾಳಿಸಿಸ್ಕೋತೀವಿ, ನೀವು ದಿಂಡೀ ಹೋಗಿ ಲಗೂನ ಹೊಳ್ಳಿ ಬರ್ರಿ. ನಿಮ್ ಸಣ್ಣ ಮಗಾ ನಿಮ್ಮನ್ನು ಎಂದಿಗೂ ದೂರಮಾಡಾಂವ ಅಲ್ಲಿ, ಬಹಳ ತ್ರಾಸ್ ಮಾಡಿಕೊಳ್ಳಬೇಡ್ರಿ, ನಾಲ್ಕು ಮಂದಿಯೊಂದಿಗೆ ಹೊರಗೆ ಯಾತ್ರಾ ಹೋದ್ರ ಮನಸ್ಸಿಗೆ ಸ್ವಲ್ಪ ಆರಾಮ ಆಗ್ಯೆತ್ರಿ ನೀವು ಆರಾಮ ಆಗಿ ಹೋಗಿ ಬರ್ರಿ"  ಅಂತ ಅಳುತ್ತ ತಾನೂ ಅತ್ತಿ ಮುಂದೆ ಅಳುತ್ತ ಕುಳಿತುಬಿಟ್ಟಳು. "ಯಾವ್ವಾ ನೀ ದಿಂಡೀ ಈಗ ಹೋಗಬೇಕೇನು, ಮುಂದಿನ ತಿಂಗಳು ಹೋದ್ರ ಆಗೋದ ಅಲ್ಲವೇನು. ಈಗ ಜ್ವರಾ ಬಂದು ಬಹಳ ಹೈರಾಣ ಆಗಿ, ಮೇಲಾಗಿ ಅಣ್ಣ ಹೀಂಗ ಮಾಡ್ಯಾನ. ನಿನಗೆ ತಡೆಯಕ್ಕೆ ಆಗ್ತೈತೇನ ಬೇ?" ಮಲ್ಲ ಕಳಕಳಿಯಿಂದ ಹೇಳಿದಾಗ ದ್ಯಾಮವ್ವ ಒಳಗೆ ಗಟ್ಟಿ ಮಾಡಿಕೊಂಡ ನಿರ್ಧಾರವನ್ನು ಮಗನ ಮುಂದೆ ಹೇಳದೇ



"ಇಲ್ಲಪ್ಪಾ ಮಲ್ಲಣ್ಣ, ದಿಂಡೀ ಮ್ಯಾಳದೊಂದಿಗೆ ದಿಂಡಿ ಮುಟ್ಟಿ ಬಂದು ಬಿಡ್ತೀನಿ, ಎಲ್ಲಾ ಪಾಗಳೂ ದೂರಾಗ್ತೈತಿ. ಹೊಟ್ಟೇಲೆ ಹುಟ್ಟಿದ ಮಗ ಚಪ್ಪಲ್ಲಾಗ ಹೊಡೆದಾನಂದ್ರ ಎಂತ ಕರ್ಮ ಐತಿ ನೀನ ತೀಳಕ್ಕೋ ಈ ಸಲ ನನ್ನ ತಡಿಬ್ಯಾಡ. ಇನ್ನ ನನ್ನ ಮನೀತನದ ವ್ಯವಹಾರದಾಗ ಉಳಿಸಬ್ಯಾಡಿ, ಒಂಟಿ ಗಾಲಿ ಬಂಡೀ ಎಳೆದು ನನಗೂ ಸಾಕಾಗೈತಿ. ಈ ಸಲ ನಾನು ದಿಂಡೀ ಹೊರಡುವಾಕಿ, ಮಕ್ಕಳು ಸಾಮಾನುಗಳನ್ನು ಕಟಗೊಂಡು ನೀವು ಊರಕಡಿ ಹೊರಡ್ರಿ, ಎಲ್ಲಾ ಅವನಿಚ್ಚೆ" . ಎಲ್ಲ ಬೇರುಗಳನ್ನು ಒಮ್ಮೆಲೆ ಮೇಲೆತ್ತಿದ ಸೇಂಗಾದ ಗಿಡದಂತೆ ದ್ಯಾಮವ್ವ ಬನಶಂಕರಿ ಜಾತ್ರಿಯಲ್ಲಿ ಎಲ್ಲಾ ಆಮೂಲ್ಯಗಳನ್ನು, ಕಷ್ಟಕೂಟಲೆಗಳನ್ನು ಮಕ್ಕಳ ಮೊಮ್ಮಕ್ಕಳ ಕರುಳ ಬಳ್ಳಿಯನ್ನು ನೀರ್ದಾಕ್ಷಿಣ್ಯವಾಗಿ ಕಿತ್ತು. ಇನ್ನು ಈ ರಾಡಿಯೊಳಗೆ ಸಿಲುಕಿ ಕಾಲು ಎತ್ತಿ ಹೆಜ್ಜೆ ಇಡದಡ್ಡಾಂಗ ಒದ್ದಾಡಬಾರದು ಎಂದು

ನಿಶ್ಚಯಿಸಿ ದಿಂಡೀ ಮ್ಯಾಳದೊಂದಿಗೆ ವಿಠ್ಠಲನ ದಂಡೀ ಯಾತ್ರಿಗೆ ಹೊಂಟುಬಿಟ್ಟಳು. ನಡೆದು ಬಂದ ದಾರಿಯನ್ನು ತಿರುಗಿ ನೋಡದೇ ಹಾಗೆಯೇ ನಡೆಯುತ್ತಲೇ ಸಾಗಬೇಕು. ಪಂಢರಾಪುರದಲ್ಲಿ ಭಕ್ತ ಜನರಿಗೆ ತನ್ನ ಕೈಲಾದ ಸೇವೆ ಮಾಡುತ್ತ, ಉಳಿದ ಜೀವನ ಸಾಗಿಸಬೇಕಂತ ಅವಳು ಮನಸ್ಸಿನ ದಾಂಡೀಕೋಲು ಹಿಡಿದು ಬಿಟ್ಟಳು.

ನಡೆದ ದಾರಿ ಸಾಗಿದಾಗಲೆಲ್ಲಾ ಮುಟ್ಟುವ ಗಮ್ಯ ಹತ್ತಿರವಾದ್ದಾಂಗೆಲ್ಲ ಹಿಂದಿನ ಹಳವಂಡ, ದುಃಖ, ನಿರಾಶೆ, ಹಂಬಲ ಎಲ್ಲವೂ ಮುಸುಕು ಮುಸುಕಾಗುತ್ತ ಹೋದವು. ದಾರಿಗುಂಟ ಭೆಟ್ಟಿಯಾದ ಮುಖಗಳು, ಹೊಲ ಬದುವುಗಳು, ಗಿಡಬಳ್ಳಿಗಳು ಎಲ್ಲವೂ ಎಲ್ಲಿಯದೋ ಚೈತನ್ಯ ಹೊತ್ತು ಚಲಿಸುವಂತೆ ಅವಳಿಗೆ ಅನಿಸತೊಡಗಿತು. ಅವಳಿಗೆ ತಾನು ದುಡಿದ ದುಡಿತ, ಮಾಡಿದ ಹೊಲಮನಿ ಬರೀ ಲೌಕಿಕ ಕಾರ್ಯಗಳು, ಯಥಾರ್ಥ ಹೆಚ್ಚುಗಾರಿಕೆ, ವೈಶಿಷ್ಟ್ಯ ಎಲ್ಲವೂ ಶುದ್ಧ ಮನಸ್ಸಿನಿಂದ ಹುಟ್ಟಬೇಕು. ಮನಸ್ಸು ಖಾಲಿಯಾಗಬೇಕು. ಐಹಿಕ ಕೆಲಸದಿಂದ ಅದನ್ನು ಹೊಂದಲು ಬರುವುದಿಲ್ಲ ಎಂಬುದು ಮನಸ್ಸಿಗೆ ಅನಿಸತೊಡಗಿತು. ಅವಳು ಭಜನೆಯ ರಾಗಗಳಲ್ಲಿ ಪೂರ್ಣ ಒಂದಾದಳು. ಪಂಢರಾಪುರಕ್ಕೆ ಬಂದಾಗ ಅವಳು ಪೂರ್ಣ ಗಾಳಿಯಲ್ಲಿ ತೇಲುವ ಹಕ್ಕಿಯಂತೆ ಹಗುರಾದಳು.

ದಿಂಡೀ ಭಜನ ಮ್ಯಾಳದೊಂದಿಗೆ ಅವಳು ಪಂಢರಾಪುರದ ವಿಠ್ಠಲನ ಗುಡಿಗೆ ಪ್ರವೇಶಿಸಬೇಕೆಂದು ಮೆಟ್ಟಿಲುಗಳನ್ನು ಏರುತ್ತಲೇ ದಂಗಾದಳು. ವಿಠ್ಠಲನ ಗುಡಿಯ ಸುತ್ತಲೂ ದಂಡ ಹಿಡಿದ ಪೊಲೀಸರ ದಂಡೇ ಕಾವಲಿಗೆ ನಿಂತಿತ್ತು.

ಅವನೇ ಇಲ್ಲ ಅಂದರೆ... ಅವಳು ದಿಂಡೀ ಮ್ಯಾಳದಲ್ಲಿ ಬೆಪ್ಪಾಗಿ ನಿಂತಿದ್ದಳು. ಚಂದ್ರಭಾಗಾ ನದಿಯ ದಂಡೆಯ ಮೇಲಿದ್ದ ಯಾತ್ರಿ ನಿವಾಸದ ಅಡುಗೆ ಮನೆಯಲ್ಲಿ ದ್ಯಾಮವ್ವ ಮತ್ತೆ ಮೂರು ಕಲ್ಲುಗಳನ್ನು ಇಟ್ಟು ಒಲೆ ಹೊತ್ತಿಸಿದ್ದಾಳೆ. ಬರುವ ಎಲ್ಲಾ ದಿಂಡೀ ಮ್ಯಾಳಕ್ಕೆ ಎರಡು ಹೊತ್ತು ರೊಟ್ಟಪಲ್ಲೇ ಸಿಗುವ "ಶ್ರೀ ವಿಠ್ಠಲ ಸಾರ್ವಜನಿಕ ಖಾನಾವಳಿ" ಅಂತ ಹೆಸರಿಟ್ಟು ಮತ್ತೆ ಖಾತೆ ತೆಗೆದಿದ್ದಾಳೆ ಒಬ್ಬಳೇ.

## ನೆನ್ನೆಗಳ ಹೊರೆ ಇಳಿಸಿ...

**- ನೇಮಿಚಂದ್ರ**

'ವಿಜೂ ಬೆಂಗಳೂರಲ್ಲಿ ಬಾಂಬ್ ಸಿಡಿದಿದೆ..' ಸಹ ಪ್ರಾಧ್ಯಾಪಕಿ ನಿಮ್ಮಿ ಮೊಬೈಲ್ ಹಿಡಿದುಕೊಂಡೇ ಓಡಿ ಬಂದಳು. ನಾನು ದಿಗ್ಭ್ರಾಂತಳಾದೆ. ಪುಣ್ಯಕ್ಕೆ ಶಾಲೆ ಬಿಟ್ಟು ಆಗಲೇ ಅರ್ಧ ಗಂಟೆ ಮೇಲಾಗಿತ್ತು, ಮಕ್ಕಳು ಮನೆ ಸೇರಿಕೊಂಡಿರುತ್ತವೆ. 'ಒಂದಲ್ಲ ನಾಲ್ಕು ಕಡೆ ಬಾಂಬ್ ಸಿಡಿದಿದೆ, ಬಸ್ ಸ್ಟಾಪ್, ಆಸ್ಪತ್ರೆ ಎಲ್ಲೆಲ್ಲೋ, ಈಗ ತಾನೇ ಎಸ್.ಎಮ್.ಎಸ್. ಬಂತು' ನಾನು ಮತ್ತಷ್ಟು ಗಾಭರಿಯಾದೆ. ಕಿರಣ್ ಎಲ್ಲಿದ್ದಾನೆ? ಐ.ಟಿ. ಕಂಪನಿಯಲ್ಲಿ ದುಡಿಯುತ್ತಿರುವ ಮಗಳು ಚೈತ್ರ ಸುರಕ್ಷಿತವಾಗಿದ್ದಾಳೆ ತಾನೆ? ನೂರು ಪ್ರಶ್ನೆಗಳು ಒಮ್ಮೆಲೆ ತಲೆಯಲ್ಲಿ ಸಿಡಿದವು. ಅಷ್ಟರಲ್ಲಿ ಭೂಗೋಳದ ಮಾಸ್ತರು ರಂಗರಾಜು 'ಸಂಜೆ ಮೇಲೆ ಕರ್ಫ್ಯೂ ಇರುತ್ತೆ ಎನ್ನುತ್ತಿದ್ದಾರೆ, ಬೇಗ ಹೊರಟು ಮನೆ ಸೇರಿಕೊಳ್ಳಿ' ಎಂದರು. ನಾನು ಗಡಿಯಾರ ನೋಡಿದೆ, ಗಂಟೆ ಮೂರು ಕಳೆದು ಹದಿನೈದು ನಿಮಿಷ, ದಡಬಡಿಸಿ ಮಗಳಿಗೆ ಫೋನ್ ಹಚ್ಚಿದೆ. 'ಹೌದಮ್ಮ ನೆಟ್ ಮೇಲೆ ಕುಳಿತಿದ್ದೇನೆ, ಆಗಲೇ ನಾಲ್ಕು ಬಾಂಬ್ ಸಿಡಿದಿವೆ. ಮಡಿವಾಳ ಬಸ್ ಸ್ಟಾಪ್, ಆಡುಗೋಡಿ, ಮೈಸೂರ್ ರಸ್ತೆ, ರಿಚ್ಮಂಡ್ ಸರ್ಕಲ್..' ಹೇಳುತ್ತಿದ್ದಂತೆ ನನ್ನ ಎದೆ ಕುಸಿದೇ ಹೋಯಿತು. ಕಿರಣ್ ಕಾರ್ಖಾನೆಯಿಂದ ಬೇಗ ಹೊರಟು, ಸೇಂಟ್ ಜಾನ್ಸ್ಗೆ ಅಡ್ಮಿಟ್ ಆಗಿರೋ ಸ್ನೇಹಿತರಾರನ್ನೋ ನೋಡಲಿದ್ದ. ಮಡಿವಾಳ ಅತ್ತಲೇ ಇರುವುದಲ್ಲವೆ.

ನಾನು ನಿಮ್ಮಿ ಇಬ್ಬರೂ ದಡಬಡಿಸಿ, ವ್ಯಾನಿಟಿ ಬ್ಯಾಗ್ ಹೆಗಲಿಗೇರಿಸಿ ಶಾಲೆಯಿಂದ ಹೊರಬಿದ್ದೆವು. ಹೊರಗೆ ಬಸ್ ಸ್ಟಾಪಿನಲ್ಲಿ ಹೆಚ್ಚೇನೂ ಜನರಿರಲಿಲ್ಲ. 'ನಾಗರಭಾವಿ'ಗೆ ಹೋಗೋ ಬಸ್ ನೋಡಿ ಇಬ್ಬರೂ ಹತ್ತಿದೆವು. ಮಧ್ಯಾಹ್ನದ ಈ ಹೊತ್ತು, ಮುಂದುಗಡೆಯ ಸೀಟುಗಳು ಖಾಲಿಯಿದ್ದವು. ಈ ಬಸ್ಸು ರಿಚ್ಮಂಡ್ ಸರ್ಕಲ್, ಮೈಸೂರು ರಸ್ತೆ ಮೇಲೇ ಹೋಗುವುದಲ್ಲವೆ. ನನಗೆ ಈಗ ನಾನು ಹೇಗೆ ಹೋಗುತ್ತಿರುವೆ ಎಂಬತ್ತ ಗಮನವಿರಲಿಲ್ಲ. ಮತ್ತೆ ಮತ್ತೆ ಮಗಳ ಮೊಬೈಲ್ ಪ್ರಯತ್ನಿಸಿದೆ, ಸಿಗುತ್ತಿಲ್ಲ. ನಿಮ್ಮಿ ಕೂಡಾ ಎದುರಿನ ಸೀಟಿನಲ್ಲಿ ಕೂತು ದಡಬಡಿಸಿ ಮೊಬೈಲ್ ಕೀಲಿ ಒತ್ತುತ್ತಿದ್ದಾಳೆ. ಅವಳ ಮುಖದಲ್ಲೂ ಭಯಂಕರ ಆತಂಕ. ಟಿಕೆಟ್ ಕೇಳಲು ಬಂದ ಕಂಡಕ್ಟರಿಗೆ, 'ಹೇಗೆ ಹೋಗ್ತಿರಾ? ರಿಚ್‌ಮಂಡ್ ಸರ್ಕಲ್, ಮೈಸೂರು ರಸ್ತೆ ಎಲ್ಲ ಕಡೆ ಬಾಂಬ್ ಸಿಡಿದಿದೆಯಂತೆ.. ಕೇಳಿದಾಗ ಆತ ಕಣ್ಣು ಕಣ್ಣು ಬಿಟ್ಟ.

'ನಮಗೆ ಅಂಥಾ ಯಾವ ಸುದ್ದಿನೂ ಬಂದಿಲ್ಲವಲ್ಲ' ಆತ ಹೇಳಿದ. ಡ್ರೈವರ್ ಹತ್ತಿರ ಹೋಗಿ ಏನೋ ಕೇಳಿದ, 'ಬೈಪಾಸ್ ಮಾಡಿದರೆ ಹೇಗೆ? ಇಲ್ಲ ನೇರ ಹೋಗಿ ನೋಡೋಣ, ಪೋಲೀಸರು



ಏನಾದರೂ ವ್ಯವಸ್ಥೆ ಮಾಡಿರುತ್ತಾರೆ. ಅಷ್ಟರಲ್ಲಾಗಲೆ ಬಸ್ಸಿನ ಜನ ಎಚ್ಚೆತ್ತರು, ಒಂದೇ ಸಮನೆ ಮೊಬೈಲ್‌ಗಳು ಬಾರಿಸಿದವು. ಹಾಗೆ ನೋಡಿದರೆ ಶುಕ್ರವಾರದ ಈ ಮರುಳು ಮಧ್ಯಾಹ್ನ ಬೆಂಗಳೂರು ಮಂಪರಿನಲ್ಲಿತ್ತು. ಗೃಹಿಣಿಯರಿನ್ನೂ ಮಧ್ಯಾಹ್ನದ ಕೊನೆಯಿಲ್ಲದ ಧಾರವಾಹಿಗಳಲ್ಲಿ ಮುಳುಗಿರುವ ಹೊತ್ತು, ನ್ಯೂಸ್ ಹಾಕಿ ಯಾರು ನೋಡಿರುತ್ತಾರೆ? ಆದರೆ ಈಗ ಕೆಲವೇ ಕ್ಷಣದಲ್ಲಿ ಕಾಡ್ಗಿಚ್ಚಿನಂತೆ ಸುದ್ದಿ ಹಬ್ಬಿತು. ಬೆಂಗಳೂರು ಸ್ಫೋಟಿಸಿತು. ಒಂದಲ್ಲ, ನಾಲ್ಕು ಬಾಂಬುಗಳು! 'ಇಲ್ಲ ಕಣೆ ವಿಜಿ, ಐದು. ನನ್ನ ಮಗ ಫೋನ್‌ನಲ್ಲಿದ್ದಾನೆ. ಲಾಂಗ್‌ಫರ್ಡ್ ರಸ್ತೆನಲ್ಲೂ ಬಾಂಬು ಸಿಡಿದಿದೆ. ವಿಶೂ ರಿಚ್ಮಂಡ್ ಸರ್ಕಲ್ ಕಡೆ ಹೋಗಬೇಡವೋ, ಈಗಲೇ ಹೊರಟು ಮನೆಗೆ ಬಂದು ಬಿಡು', ನಿಮ್ಮಿ ಸುತ್ತಲಿನ ಗಲಾಟೆ, ಬಸ್ಸಿನ ಗದ್ದಲದ ನಡುವೆ ಕಿರುಚಿ ಕಿರುಚಿ ಮಗನಿಗೆ ಹೇಳುತ್ತಿದ್ದಳು. ಸದ್ಯಕ್ಕೆ ಯಾರ ಸಂಭಾಷಣೆಯೂ ವೈಯಕ್ತಿಕವಾಗಿ, ಖಾಸಗಿಯಾಗಿ ಉಳಿದಿರಲಿಲ್ಲ 'ಲೇ ಅಲ್ಲೇ ಕಛೇರಿ ಒಳಗೇ ಇರು. ನಾನು ಬಂದು ಕರೆದುಕೊಂಡು ಹೋಗ್ತಿನಿ' ಮತ್ಯಾರೋ ತನ್ನ ಹೆಂಡತಿಗೆ ಹೇಳುತ್ತಿದ್ದ. ಬಸ್ಸಿಗೆ ಹತ್ತಿದಾಗ ನಾಲ್ಕು ಬಾಂಬು ಸಿಡಿದಿತ್ತು, ಈಗ ಐದು, ಆರು, ಏಳು... ನಿಮಿಷ ನಿಮಿಷಕ್ಕೆ ಏರಿದ ಸಂಖ್ಯೆ. 'ಮೈಸೂರು ರಸ್ತೆನಲ್ಲಿ ಗೋಪಾಲನ್ ಮಾಲ್ ಹತ್ತಿರ ಎಂಟನೆದು ಈಗಷ್ಟೆ ಸಿಡಿಯಿತಂತೆ' ಎಂದಾಗ ನನ್ನ ಎದೆ ಮತ್ತಷ್ಟು ಹೊಡೆದುಕೊಂಡಿತು. 'ಏನು ಗೋಪಾಲನ್ ಮಾಲಾ?' ಮತ್ಯಾರೋ ತಂದೆ ಗಾಭರಿಯಿಂದ ಕೇಳಿದ. 'ಹೌದಂತೆ, ಈಗಷ್ಟೆ ಸುದ್ದಿ ಬಂತು' ಇನ್ಯಾರೋ ಉತ್ತರಿಸಿದರು. 'ಬಡಕೊಂಡೆ ಕಾಲೇಜ್ ಬಿಟ್ಟ ತಕ್ಷಣ ಮನೆಗೆ ಬನ್ರೋ, ಸುಮ್ಮನೆ ಮಾಲ್‌ಗಳಲ್ಲಿ ಸುತ್ತಬೇಡ್ರೋ ಅಂತಾ. ಕೇಳಬೇಕಲ್ಲ, ಇವತ್ತೂ ಅಲ್ಲೇ ಹೋಗಿರ್ತಾನೆ' ಕಿಶೋರ ವಯಸ್ಸಿನ ಮಗನ ಬಗ್ಗೆ ಕೆರಳಿ ಕಳವಳಿಸಿದ ತಂದೆ. 'ಈ ಡ್ರೈವರ್ ಉದ್ದಕ್ಕೆ ಬಿಟ್ಟುಕೊಂಡು ಹೊರಟಿದ್ದಾನಲ್ಲ. ಈ ಬಸ್ಸು ಗೋಪಾಲನ್ ಮಾಲ್ ಮೇಲೆ ಮೈಸೂರು ರಸ್ತೆಯಲ್ಲಿಯೇ ಹೋಗಬೇಕು' ನನ್ನ ಚಿಂತೆ.

ಇನ್ನು ಮೊಬೈಲ್ ಹಚ್ಚುವಂತಿರಲಿಲ್ಲ. 'ನೆಟ್‌ವರ್ಕ್ ಜಾಮ್', ಸೀಟಿಗೆ ಒರಗಿ, ಕಣ್ಣು ಮುಚ್ಚಿದೆ. ಮುಚ್ಚಿದ ರೆಪ್ಪೆಗಳ ಅಡಿಯಲ್ಲಿ ಬೆಳಗಿನ ದೃಶ್ಯದ 'ರಿ-ರನ್'.

[ಕಿರಣ್‌ಗೆ ಸರಕಾರಿ ಕಾರ್ಖಾನೆಯಲ್ಲಿ ಕೆಲಸ, ಏಳು ಗಂಟೆಗೆ 'ಪಂಚ್' ಮಾಡಬೇಕು. ಸಿಟಿ ಬಸ್ ಹಿಡಿಯಲು, ಬೆಳಗ್ಗೆ ಐದೂಮುಕ್ಕಾಲಿಗೆ ಮನೆಯಿಂದ ಹೊರಡಬೇಕು. ಅಷ್ಟರಲ್ಲಿ ಅವನ ಬೆಳಗಿನ ತಿಂಡಿ, ಮಧ್ಯಾಹ್ನದ ಊಟ ಎಲ್ಲವೂ ತಯಾರಾಗಿ ಹಾಟ್ ಕೇಸಿನ ಕ್ಯಾರಿಯರ್‌ನಲ್ಲಿ ತುಂಬಿ, ಬಾಗಿಲ ಬಳಿಯ ಟೇಬಲ್ ಮೇಲೆ ಅವನು ಕೈಗೆ ಸಿಕ್ಕಿಸಿಕೊಂಡು ಓಡುವಂತಿರಬೇಕು.

'ವಿಜಿ ಲೇಟಾಯ್ತು ಬೇಗ ಕೊಡ್ತೀಯ.. ಪ್ಯಾಂಟಿನೊಳಗೆ ಶರಟು ತುರುಕಿಕೊಳ್ಳುತ್ತಾ ಅವಸರದಲ್ಲಿ ಕೂಗಿದ್ದ.

'ಸಾರಿಗೆ ಒಗ್ಗರಣೆ ಹಾಕ್ತಾ ಇದ್ದೀನಿ, ನೀನೇ ಬಂದು ಸ್ವಲ್ಪ ಕ್ಯಾರಿಯರ್ ತೆಗೆದಿಡು..'

'ನನಗೆ ಹೊತ್ತಾಯ್ತು, ನನ್ನ ಫೈಲ್ ಕೂಡಾ ಸಿಗ್ತಾ ಇಲ್ಲ.. ಮತ್ತಷ್ಟು ಅವಸರದಲ್ಲಿ ಕೂಗಿದ.



ಎಲ್ಲಿಂದಲೋ ಫೈಲ್ ಎತ್ತಿಕೊಂಡು ಬ್ರೀಫ್‌ಕೇಸಿನಲ್ಲಿ ತುರುಕಿಕೊಂಡು, ಬಾಗಿಲಿಗೆ ಬರುವಾಗ ಗಂಟೆ ಆರು ಆಗಿ ಹೋಗಿತ್ತು, ಮೇಜಿನ ಮೇಲೆ ಟಿಫಿನ್ ಕ್ಯಾರಿಯರ್ ಇರಲಿಲ್ಲ. ಕಿರಣ್ ಮತ್ತೆ ಕೂಗಿದ, ನಾನು ಕಿರುಚಿದೆ. 'ಒಂದು ನಿಮಿಷ ತಡಿ, ನನಗೇನು ನಾಲ್ಕು ಕೈ ಇದೆಯಾ, ಬೆಳಗ್ಗೆ ನಾಲ್ಕಕ್ಕೆ ಎದ್ದು ಮಾಡ್ತೀನಿ, ನಿದ್ದೆ ಅನ್ನುವುದಿಲ್ಲ..' ಅರೆನಿದ್ರೆಯ ಆಯಾಸದ ನನ್ನ ಬಾಯಲ್ಲೂ ಅಸಹನೆಯ ಬೆಟ್ಟ ಸ್ಫೋಟಿಸಿತ್ತು. ಅವಸರದಲ್ಲಿಯೇ ಬಿಸಿಬಿಸಿ ಚಕಮಕಿ ನಾಲ್ಕು ಮಾತು ನಮ್ಮ ನಡುವೆ ನಡೆದು ಹೋಗಿತ್ತು. ಕಡೆಯಲ್ಲಿ ಅವ ಹೇಳಿ ಹೋದ ಮಾತುಗಳು ಈಗ ಎದೆ ಗುದ್ದುತ್ತಿವೆ-

'ನಾಳೆಯಿಂದ ಏಳಲೂ ಬೇಡ, ಮಾಡಲೂ ಬೇಡ. ಎಲ್ಲಾದ್ರೂ ಹಾಳಾಗಿ ಹೋಗ್ತೇನೆ..” ಅತಿ ಕೋಪದಲ್ಲಿ ಕುಣಿದು 'ಬಸ್ಸು ಹೋಗೇ ಬಿಟ್ಟಿರುತ್ತೆ, ಈ ಬೆಳ್ಳಂಬೆಳಗ್ಗೆ ಆಟೋ ಕೂಡಾ ಸಿಗೋಲ್ಲ' ಕಿರಣ್ ಧಡಾರನೆ ಮುಂಬಾಗಿಲನ್ನು ಬಾರಿಸಿ ಹೊರಟು ಹೋಗಿದ್ದ. ಈಗಷ್ಟೆ ಎದೆಯ ಮೇಲೆ ಬಾಗಿಲು ಬಡಿದಂತೆ, ಬೆಚ್ಚಿ ಎಚ್ಚೆತ್ತೆ.]

ಎದೆ ಹೊಡೆದುಕೊಳ್ಳುತ್ತಿತ್ತು. ಕಿರಣ್ ಏಕೆ ಆಡಬಾರದ್ದು ಆಡಿದ, ದೇವರೆ ಕಿರಣ್‌ಗೆ ಏನೂ ಆಗದಿರಲಿ, ಮಡಿವಾಳ ಬಸ್ ಸ್ಟಾಂಡ್ 'ಸೇಂಟ್ ಜಾನ್ಸ್ ಆಸ್ಪತ್ರೆ' ಹತ್ತಿರವೇ ಇರುವುದಲ್ಲವೆ. ಮತ್ತೆ ಮೊಬೈಲ್ ಪ್ರಯತ್ನಿಸಿದೆ, ಉಹುಂ 'ದಿಸ್ ರೂಟ್ ಈಸ್ ಬಿಸಿ.. ಅದೇ ಯಾಂತ್ರಿಕ ಸಂದೇಶ!

[ಬದುಕು ಯಾವಾಗಲೂ ಹೀಗಿರಲಿಲ್ಲ. ಇಷ್ಟೊಂದು ಒತ್ತಡದಲ್ಲಿ, ಅವಸರದಲ್ಲಿ, ಮಿತಿ ಇರದ ವೇಗದಲ್ಲಿ, ಸಮಯವಿಲ್ಲದ ಕಿರಿಕಿರಿಯಲ್ಲಿ ನಲುಗಿರಲಿಲ್ಲ.

ಇಪ್ಪತ್ತೈದು ವರ್ಷಗಳ ಹಿಂದೆ ವಿವಾಹವಾಗಿ ಮೈಸೂರಿನಿಂದ ಬೆಂಗಳೂರಿಗೆ ಬಂದಾಗ, 'ಮೈಸೂರು-ಬೆಂಗಳೂರುಗಳ ನಡುವೆ ಅಂಥಾ ವ್ಯತ್ಯಾಸವಿರಲಿಲ್ಲ. 'ಪಿಂಚಣಿದಾರರ ಸ್ವರ್ಗ' ಎಂಬಂತೆ ತಣ್ಣನೆಯ ಬದುಕು ಇಲ್ಲಿತ್ತು. ಗಾಂಧಿಬಜಾರ್‌ನಲ್ಲಿ ಕಿರಣನ ಕೈ ಹಿಡಿದು ನಡುಬೀದಿಯಲ್ಲಿ ನಡೆಯುತ್ತಾ ವಿದ್ಯಾರ್ಥಿ ಭವನ್'ನಲ್ಲಿ ದೋಸೆ ತಿಂದದ್ದು ಈಗೇನೋ ಅನ್ನುವಂತೆ ನೆನಪಿದೆ. ಬೆಂಗಳೂರಿನ ಆ ಮೂಲೆಯಿಂದ ಈ ಮೂಲೆಗೆ ಆರಾಮವಾಗಿ ನಡೆಯಬಹುದಿದ್ದ

ಸಮಯ. ರಸ್ತೆಗಳ ಎರಡೂ ಬದಿಗೆ ಛತ್ರಚಾಮರವಾಗಿ ಹರಡಿದ ಮರಗಳು, ತಂಪಿನ ಹಾದಿಗಳು. ವಿಶಾಲವಾದ ಪಾದಚಾರಿಗಳ ರಸ್ತೆ. ಬೀದಿಯಲ್ಲೂ ಅಂತಹ ವಾಹನ ಸಂದಣಿ ಇರಲಿಲ್ಲ. ಎರಡು ಲಕ್ಷಕ್ಕೆ ಫ್ಲಾಟ್ ಕೊಂಡಾಗ, 'ಕಾರ್ ಪಾರ್ಕ್' ಕೊಂಡಿರಲಿಲ್ಲ. ನಮ್ಮ ಬದುಕಿನಲ್ಲಿ ಎಂದಾದರೂ ಕಾರು ಕೊಳ್ಳಬಹುದು ಎಂಬುದು ಆಗ ಊಹಿಸಲೂ ಸಾಧ್ಯವಿರಲಿಲ್ಲ, ಅದು ಅಷ್ಟು ಅಪರೂಪದ ಶ್ರೀಮಂತರ ವಾಹನವಾಗಿತ್ತು. ಎದುರುಗಡೆ ಮನೆಯ ಸೀತಾಬಾಯಿಯವರಿನ್ನೂ 'ನಮ್ಮ ಮನೆ ಹೆಣ್ಣು ಮಕ್ಕಳನ್ನ ಕೆಲಸಕ್ಕೆ ಕಳಿಸೋಲ್ಲಪ್ಪ' ಎನ್ನುತ್ತಿದ್ದ ಕಾಲ. ಎಂ.ಎಸ್ಸಿ. ಮಾಡಿ ಬಂದ ಸೊಸೆ ಪಕ್ಕದ ಬೀದಿಯ ಶಾಲೆಯಲ್ಲಿ 'ಕಲಿಸಲು ಹೋಗುತ್ತೇನೆ' ಎಂದು ಬೇಡಿದಾಗ 'ನಮ್ಮ ಮನೆ ಹೆಣ್ಣುಮಕ್ಕಳು...' ಎಂದು ಅದೇ ರಾಗ ಹಾಡಿದ್ದ ಕಾಲ. 'ಅದೇನು ಮೊಣಕಾಲ ಮೇಲೆ ಲಂಗ ಹಾಕಿಕೊಳ್ತೀರೇ, ಹೆಣ್ಣು ಮಕ್ಕಳ ಕಾಲು ಮುಚ್ಚಿರಬೇಕು', ಮೂಲೆ ಮನೆ ಬೋಡಜ್ಜಿ ಸ್ಕರ್ಟ್ ಹಾಕಿಕೊಂಡು



ರಸ್ತೆಯಲ್ಲಿ 'ರಿಂಗ್' ಆಡುತ್ತ ನೆಗೆವ ಮಕ್ಕಳನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದ ಕಾಲ.

ಅಗಿನ್ನೂ ಮಕ್ಕಳೆಲ್ಲ ಬೀದಿಯಲ್ಲಿ ಆಡುತ್ತಿದ್ದರು. ಹೆಂಗಳೆಯರು ಹೊರ ಕಟ್ಟೆಯ ಮೇಲೆ ಕುಳಿತು ಸಂಜೆ ಹರಟುತ್ತಿದ್ದರು. ಅಲ್ಲೊಂದು ಇಲ್ಲೊಂದು ಮನೆಯಲ್ಲಿ 'ಟಿವಿ' ಬಂದಿತ್ತು. ಇದ್ದ ಒಂದೋ ಎರಡೋ ದೂರದರ್ಶನದ ಚಾನೆಲ್‌ನಲ್ಲಿ 'ಬುನಿಯಾದ್', 'ಯೇ ಜೋ ಹೈ ಜಿಂದಗಿ' ನೋಡಲು ಅಗಲು ಬಗಲು ಮನೆಗಳಿಗೆ ಹುಡುಕಿ ಹೋಗುತ್ತಿದ್ದೆವು.

ತೊಂಬತ್ತರ ದಶಕ, ಬೆಂಗಳೂರು ನಿಧಾನವಾಗಿ ಬಣ್ಣ ಬದಲಿಸತೊಡಗಿತು. ಹೊಸ ಸಹಸ್ರಮಾನ ಆಗಮಿಸಿತು. ಎಲ್ಲವೂ ಅತಿ ವೇಗದಲ್ಲಿ ಗುರುತು ಸಿಗದಂತೆ ಮಾರ್ಪಾಡಾಯಿತು.

ಮೊದಲು ಐಟಿ, ಬಿಟಿ, ನಂತರ 'ಫ್ಯಾಷನ್'ನಿಂದ ಹಿಡಿದು 'ಏವಿಯೇಷನ್' ತನಕ ಜಗತ್ತಿನೆಲ್ಲ ಕಂಪನಿಗಳು ಬೆಂಗಳೂರಲ್ಲಿ 'ಅಂಗಡಿ' ತೆರೆದು ಕುಳಿತವು. ಇಲ್ಲೇ ಬೆಂಗಳೂರಿನಿಂದ ನಲವತ್ತು ಮೈಲಿ ದೂರದಲ್ಲಿ ಮಳೆ ಬಾರದೆ, ರೈತರು 50,000 ರೂಪಾಯಿ ಸಾಲ ತೀರಿಸಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ 'ಈ ಸರಕಾರಿ ಕೆಲಸದಲ್ಲೇನಿದೆ, ಖಾಸಗಿ ಕಂಪನಿಯಲ್ಲಿ ಒಂದು ಲಕ್ಷದ ಸಂಬಳ ಆಫರ್ ಮಾಡಿದ್ದಾರೆ' ಎಂದು ಕಿರಣನ ಸಹೋದ್ಯೋಗಿ ಕಾರ್ಖಾನೆ ಬಿಟ್ಟು ಹೋಗಿದ್ದ. 'ಬನದ್ದೋ ಬನ್ನಿ, ಕೆಲಸ ಕೊಡ್ತೀವಿ' ಎಂದು ಎಷ್ಟೋ ಸರಕಾರಿ ಕಾರ್ಖಾನೆಗಳು ಪ್ರತಿಷ್ಠಿತ ಕಾಲೇಜು ಕ್ಯಾಂಪಸ್‌ಗಳಿಗೆ ಹೋದರೆ ಆಸಕ್ತರೇ ಇಲ್ಲ. 'ಯು ಪೇ ಪೀನಟ್ಸ್, ಯು ಗೆಟ್ ಮಂಕೀಸ್. ಕಳ್ಳೆಕಾಯಿ ಕೊಟ್ಟರೆ ಕೋತಿಗಳಷ್ಟೇ ಬರುತ್ತವೆ" ಐಟಿ ಕಂಪನಿಯೊಂದರಲ್ಲಿ ಹಗಲೂ ರಾತ್ರಿ ದುಡಿಯುವ ಮೈದುನ ಹೇಳಿದ್ದ,

ಈಗ ಯಾರಿಗೂ ಯಾವುದಕ್ಕೂ ಬಿಡುವಿರಲಿಲ್ಲ. ಯಾರಿಗೂ ಯಾರ ಪರಿಚಯವಿಲ್ಲದ ಬದುಕು. ಅಗಲು ಬಗಲಿನ ಫ್ಲಾಟ್‌ನಲ್ಲಿ ಎರಡು ವರ್ಷ ಕೂಡಾ ಜನ ಉಳಿಯುತ್ತಿಲ್ಲ. 'ಇನ್ನೂ ಒಳ್ಳೆ ಸಂಬಳದ ಕೆಲಸ ಸಿಕ್ಕಿತು ಐಟಿಪಿಎಲ್

ಹತ್ತಿರ' ಎಂದು ಮಾರತ್‌ಹಳ್ಳಿಗೆ ಹೋದರೆ, ಮತ್ತೆ ಬಂದವರು ಆರು ತಿಂಗಳು ಕೂಡಾ ಉಳಿಯಲಿಲ್ಲ. 'ಕೆಲಸ ಬದಲಿಸುತ್ತಿದ್ದೇನೆ, ಒಟ್ಟಿಗೇ ೧೫,೦೦೦ದ ಜಂಪ್, ಹೊಸೂರು ಬಳಿ ಫ್ಲಾಟ್ ಹುಡುಕುತ್ತಿದ್ದೇವೆ' ಎಂದರು. ಈಗ ನಾನು ಬಗಲಲ್ಲಿ ಯಾರಿದ್ದಾರೆ ಎಂದು ನೋಡುವುದನ್ನೂ ಬಿಟ್ಟೆ. ಯಾರಿಗೂ ಪುರಸತ್ತೇ ಇಲ್ಲದ ಮೇಲೆ, ಯಾರೂ ಯಾರ ಮನೆಗೂ ಹೋಗುವುದಿಲ್ಲ ಎಂದ ಮೇಲೆ, ಬಗಲಲ್ಲಿ ಯಾರು ಬಂದರೇನು? ಎಲ್ಲವೂ ತಾತ್ಕಾಲಿಕ – ಮನೆ, ಕೆಲಸ, ಸ್ನೇಹ, ಸಂಬಂಧಗಳೂ ಕೂಡ. ಸ್ಥಿರವಾಗಿ, ಸುಭದ್ರವಾಗಿ ಕಾಲೂರಿ ಬೇರಿಳಿಸಿ ಬೆಳೆಯಲು ಯಾರಿಗೂ ವ್ಯವಧಾನವಿಲ್ಲ.

ಈಗ ಮಕ್ಕಳು ಬೀದಿಯಲ್ಲಿ ಆಡುವುದಿಲ್ಲ, ಹೆಂಗಳೆಯರು ಹರಟುವುದಿಲ್ಲ. ಮನೆ ಮನೆಗೆ ಟಿವಿ ಬಂದಿರುವುದಲ್ಲ! ಒಂದಲ್ಲ ನೂರು ಚಾನೆಲ್‌ಗಳು, ಯಾರಿಗೆ ತಾನೇ ಪುರಸತ್ತು ಇದ್ದೀತು. ವಾರಾಂತ್ಯ ಎಂದರೆ, 'ಮಾಲ್' ಮನೆಯಾಗುತ್ತದೆ, 'ಮಲ್ಟಿಪ್ಲೆಕ್ಸ್'ನಲ್ಲಿ ಕೊನೆಯಾಗುತ್ತದೆ. ಬದುಕು ಬಣ್ಣ ಬದಲಿಸಿತ್ತು.



ಸೀತಾಬಾಯಿಯ ಮೊಮ್ಮಕ್ಕಳೆಲ್ಲ ಈಗ ಕೆಲಸ ಮಾಡುತ್ತಿವೆ. ಹಿರಿಯ ಮಗಳು 'ಕಾಲ್ ಸೆಂಟರ್' ಕೆಲಸ ಮುಗಿಸಿ ಮಧ್ಯರಾತ್ರಿ ಯಾವಾಗಲೋ ಕ್ಯಾಬ್‌ನಿಂದ ಇಳಿಯುತ್ತಾಳೆ. ಕಿರಿಯ ಕಿಶೋರಿ, ಮೋಟು ಲಂಗದಲ್ಲಿ 'ರ್‍ಯಾಂಪ್' ಮೇಲೆ ನಡೆದಾಡುತ್ತಾ ರೂಪದರ್ಶಿಯಾಗುವ ಕನಸು ಕಾಣುತ್ತಿದ್ದಾಳೆ. ಬಗಲಲ್ಲಿ ಇದ್ದ ನೂರು ವರ್ಷದ ಬಂಗಲೆ, ಅಂಗಳದ ಸಂಪಿಗೆ ಮರ, ಮಾವಿನ ಮರ ಬೇವಿನ ಮರಗಳೆಲ್ಲ ನೆಲಸಮವಾಗಿವೆ. ಅಲ್ಲಿ ನಮ್ಮ ಏಳು ಮಹಡಿಯ ಫ್ಲಾಟ್ ಮೀರಿ, ಎದ್ದು ನಿಂತ ಕಟ್ಟಡ, ನಮ್ಮ ಬೆಡ್‌ರೂಮ್ ಅನ್ನು ಕತ್ತಲಾಗಿಸಿದೆ. ಅದೇ ಮನೆಯಲ್ಲಿ 'ತನ್ನ ತಾತ, ತಂದೆ ಬದುಕಿ ಬಾಳಿದ್ದು, ಇಲ್ಲಿವರೆಗೂ ತಾನು ಇದ್ದದ್ದು' ಎಂದು ನೆನಸಿಕೊಳ್ಳುತ್ತಿದ್ದಾರೆ ಒಂಟಿಯಾಗಿ ಎಪ್ಪತ್ತರ ಅಂಚಿನಲ್ಲಿ ಆರನೇ ಮಹಡಿಯಲ್ಲಿ ವಾಸ್ತವ್ಯ ಹೂಡಿದ ದೇಸಾಯಿ ದಂಪತಿಗಳು, ಹಾಂ, ಅವರಿಗೆ ಮಕ್ಕಳಿಲ್ಲ ಎಂದಲ್ಲ, ಮೊದಲನೇ ಮಗ ಸ್ಯಾನ್‌ಫ್ರಾನ್‌ಸಿಸ್ಕೋದಲ್ಲಿದ್ದಾನೆ, ಎರಡನೆಯವನು ಆಸ್ಟ್ರೇಲಿಯಾದಲ್ಲಿ. ಕೊನೆಯ ಮಗಳಿಗೆ ಇವರೇ ಲಂಡನ್‌ನಲ್ಲಿರೋ ಡಾಕ್ಟರ್ ಅನ್ನು ಹುಡುಕಿ ಮದುವೆ ಮಾಡಿದ್ದರು. ಜಾಗತೀಕರಣ, 'ಜಗತ್ತು ಕುಗ್ಗಿದೆ' ಎನ್ನುತ್ತಾರೆ, ಅಂತರ ಏಕೆ ಹಿಗ್ಗಿತೋ ಗೊತ್ತಿಲ್ಲ. ಆಗಾಗ್ಗೆ ಹೋಗಿ ಕುಳಿತು ಮಾತನಾಡಿ ಬರುತ್ತಿದ್ದ ನನಗೂ ಇತ್ತೀಚೆಗೆ ಸಮಯವಿಲ್ಲ, ಬಗಲಲ್ಲಿರುವ ಫ್ಲಾಟ್‌ಗೆ ಹೋಗಲು! 'ಕೋರಮಂಗಲದಲ್ಲಿ ವೃದ್ಧ ದಂಪತಿಗಳ ಕೊಲೆ, ಚಂದ್ರ ಲೇ ಔಟ್‌ನಲ್ಲಿ ಮನೆಗೆ ನುಗ್ಗಿ ದರೋಡೆ' ಎಂದು ಓದಿದಾಗಲೆಲ್ಲ ದೇಸಾಯಿಯವರು ಯಾವುದಾದರೂ ಒಳ್ಳೆ ವೃದ್ಧಾಶ್ರಮ ನೋಡಬೇಕು ಇನ್ನು' ಎನ್ನುತ್ತಾರೆ.

ಮನುಷ್ಯ ಸಂಬಂಧಗಳೆಲ್ಲ ಬದಲಾದ ಮೇಲೆ, ದೇವರೊಡನೆಯ ಸಂಬಂಧ ಹಾಗೆ ಉಳಿಯಲು ಎಲ್ಲಿ ಸಾಧ್ಯ? ದೇವರ ಮನೆಯಲ್ಲಿ, ಅಡಿಗೆ ಮನೆಯ ಗೂಡಿನಲ್ಲಿ ಪೂಜಿಸಲ್ಪಡುತ್ತಿದ್ದ ದೇವರುಗಳನ್ನು ಈಗ ಮನೆ ಮುಂದೆ ಮುಂಬಾಗಿಲಿನಲ್ಲಿ ಕಾವಲು ಕೂಡಿಸುತ್ತಿದ್ದಾರೆ. ಅದು ಸಾಲದೆಂಬಂತೆ, ಕಾಂಪೌಂಡಿನ ಉದ್ದಕ್ಕೆ ಉಚ್ಚೆ ಹೊಯ್ಯುವ ಜಾಗದಲ್ಲೆಲ್ಲ ದೇವರ ಚಿತ್ರದ ಟೈಲ್ ಅಳವಡಿಸಿ, 'ಈಗಲಾದರೂ ಹೊಲಸು ಮಾಡದಿರಲಿ' ಎಂದು ಆಶಿಸುತ್ತಾರೆ.

ಉದ್ಯಾನ ನಗರಿಯಲ್ಲಿ ಈಗ ಸ್ಲಮ್‌ಗಳು ಎಲ್ಲೇಲ್ಲೂ ಎದ್ದಿವೆ. ಹಳ್ಳಿಗಳು ಹಾಳುಬಿದ್ದು ಬರೀ ಬೆಂಗಳೂರು ಮಾತ್ರ ಬೆಳೆದರೆ ಅವರು ತಾನೆ ಏನು ಮಾಡುತ್ತಾರೆ? ಎಲ್ಲಿ ಹೋಗುತ್ತಾರೆ?

ಮನೆಯಲ್ಲೊಂದು ಕಾರಲ್ಲ, ಈಗ ಕೆಲವು ಮನೆಗಳಲ್ಲಿ ಎರಡೆರಡು ಕಾರುಗಳು. ರಸ್ತೆಗಳೆಲ್ಲ ಹಿಗ್ಗಿ ಅಗಲಿ, ಪಾದಚಾರಿಯ ಹಾದಿಗಳನ್ನು ಗಬಳಿಸಿ, ನೂರಲ್ಲ, ಸಾವಿರ ಮರಗಳು ಉರುಳಿ ಬಿದ್ದಿವೆ. ಬೆಂಗಳೂರಿನ ಆಸುಪಾಸಿನ ಬೆಟ್ಟಗುಡ್ಡಗಳೆಲ್ಲ, ಜೆಲ್ಲಿಕಲ್ಲುಗಳಾಗಿ ಕಾಂಕ್ರೀಟ್ ಕಟ್ಟಡಗಳು ಎದ್ದು ನಿಂತಿವೆ.

ಇಷ್ಟಾದರೂ ನಮ್ಮ ಬದುಕು ಹೆಚ್ಚೇನೂ ಬದಲಾಗಿರಲಿಲ್ಲ. ಕಿರಣ್ ಸರಕಾರಿ ಕಾರ್ಖಾನೆಯ ಕೆಲಸದಲ್ಲಿ ಸಂತುಷ್ಟನಿದ್ದು ಗೆಳೆಯರಿಂದ 'ಅಲ್ಪ ತೃಪ್ತ' ಎಂದು ಬೈಸಿಕೊಂಡರೂ ಕೆಲಸ ಬದಲಿಸಿರಲಿಲ್ಲ. ಮಗಳು ಕೈತುತ್ತು ತಿಂದು ಚಂದಾಮಾಮ ಕತೆಗಳನ್ನೆ ಕೇಳಿ, ಪ್ರತಿ ಭಾನುವಾರ ಲಾಲ್‌ಬಾಗ್‌ಗೆ ಹೋಗಿ ಜಿಂಕೆಗಳಿಗೆ ಕ್ಯಾರೆಟ್ ತಿನಿಸಿ, 'ಎಂ.ಟಿ.ಆರ್.'ನಲ್ಲಿ ಬೆಣ್ಣೆ ದೋಸೆ ತಿಂದು, ಪ್ರತಿ ಸಂಜೆ ಅಪ್ಪನ ಹೆಗಲೇರಿ 'ಕೂಸುಮರಿ'ಯಾಗಿ ಬೆಳೆದಿದ್ದಳು.



ವಿವಾಹವಾದ ಇಪ್ಪತ್ತು ವರ್ಷ ಬದಲಾಗದೆ ಇದ್ದ ನಮ್ಮ ಬದುಕು ಏಕಾಏಕಿ ಬದಲಾಗಿತ್ತು, ಎರಡು ವರ್ಷಗಳ ಹಿಂದೆ.

ಕಾರ್ಖಾನೆಯ ಕಾರು ಬರುವುದು ನಿಂತಿತು. ಈಗ ಕಿರಣ್ ಎರಡು ಬಸ್ಸು ಬದಲಾಯಿಸಿ, ಬೆಳಗ್ಗೆ ಏಳು ಗಂಟೆಗೇ, ಬೆಂಗಳೂರಿನ ಮತ್ತೊಂದು ಮೂಲೆಯಲ್ಲಿರುವ ತನ್ನ ಕಾರ್ಖಾನೆ ತಲುಪಬೇಕಿತ್ತು. ವಿಶ್ವವಿದ್ಯಾಲಯಕ್ಕೆ ಎರಡನೇ ಬ್ಯಾಂಕ್ ಪಡೆದು “ಟಾಟಾ ಇನ್‌ಸ್ಟಿಟ್ಯೂಟ್'ನಲ್ಲಿ ಸಂಶೋಧನೆಗೆ ಸೇರಿಕೊಂಡಾಗ, 'ಇಡೀ ತನ್ನ ಬ್ಯಾಚಿನಲ್ಲಿ ತನಗೆ ಮಾತ್ರ ಸೀ ಸಿಕ್ಕಿದ್ದು' ಎಂದು ಹೆಮ್ಮೆ ಪಟ್ಟಿದ್ದ. ಡಿಗ್ರಿ ಕೈಗೆ ಬರುವ ಮೊದಲೇ ಸರಕಾರಿ ಕಾರ್ಖಾನೆಯಲ್ಲಿ ಕೆಲಸ ಸಿಕ್ಕಿತ್ತು. ಆ ಕಾಲದಲ್ಲಿ ಸರಕಾರಿ ಕೆಲಸ ಸುಲಭದ್ದಿರಲಿಲ್ಲ. ಡಿಸ್ಟಿಂಕ್ಷನ್ ಬಾರದೆ, ಸರಕಾರಿ ಕಾರ್ಖಾನೆಯ ಲಿಖಿತ ಪರೀಕ್ಷೆ ಕೂಡಾ ಬರೆಯುವಂತಿರಲಿಲ್ಲ. ಉದ್ದುದ್ದನೆಯ ಪ್ರಶ್ನೆ, ಉದ್ದುದ್ದನೆಯ ಉತ್ತರಗಳ ಕಾಲ, 'ಡಿಸ್ಟಿಂಕ್ಷನ್' ಪರೀಕ್ಷೆ ಬರೆದವರಿಗೆಲ್ಲ ಬರುತ್ತಿರಲಿಲ್ಲ. ’ತನ್ನ ಇಡೀ ಬ್ಯಾಚಿನಲ್ಲಿ ಆರು ಜನಕ್ಕೆ ಮಾತ್ರ ಸರಕಾರಿ ಕೆಲಸ ಸಿಕ್ಕಿದ್ದು' ಎಂದು ಹೇಳಿದ್ದ.

ತನ್ನ ಹುದ್ದೆಯ ಒಂದೊಂದೇ ಮೆಟ್ಟಿಲನ್ನು ಏರಿದ ಕಿರಣ್, ಮ್ಯಾನೇಜರ್ ಆದೊಡನೆ, ಮನೆಗೆ ಬಂದು ಕಂಪನಿಯ ಕಾರು ಕರೆದೊಯ್ಯತೊಡಗಿತ್ತು. ನನಗೆ ಈ ರೀತಿ ನಾಲ್ಕು ಗಂಟೆಗೇ ಎದ್ದು ತಿಂಡಿ, ಅಡಿಗೆ ಮಾಡುವ ತಾಪತ್ರಯ ಕಾಲು ಶತಮಾನ ಇರಲೇ ಇಲ್ಲ. ಇಷ್ಟೂ ವರ್ಷಗಳು ಕಿರಣ ತನ್ನ ಕಾರ್ಖಾನೆಯ ಕ್ಯಾಂಟೀನ್‌ನಲ್ಲಿಯೇ ತಿಂಡಿ, ಕಾಫಿ, ಊಟ ಎಲ್ಲವನ್ನೂ ಮಾಡುತ್ತಿದ್ದದ್ದು. ಬಿಸಿ ಬಿಸಿಯಾಗಿ ಅಲ್ಲಿಯೇ ತಯಾರಾಗುತ್ತಿದ್ದ, ರುಚಿಕಟ್ಟಾದ ಊಟ ಕಿರಣ್‌ನ ನಾಲಿಗೆಗೆ ಮೈಗೆ ಚೆನ್ನಾಗಿ ಒಗ್ಗಿತ್ತು. “ನೀನು ನುಗ್ಗೆ ಕಾಯಿನ ತುಂಬಾ ಬೇಯಿಸಿ ಮೆದು ಮಾಡಿಬಿಡ್ತೀಯ, ನಮ್ಮ ಕ್ಯಾಂಟೀನ್‌ನಲ್ಲಿ..' ಎನ್ನುವ. 'ಹಾಗಲ ಕಾಯಿ ಗೊಜ್ಜು, ನಮ್ಮ ಕ್ಯಾಂಟೀನ್ ರುಚಿಯೇ ಬೇರೆ' ಎಂದು

ಚಪ್ಪರಿಸುವ. ಆಗಷ್ಟೆ ಬಿಸಿ ಬಿಸಿಯಾಗಿ ಲಟ್ಟಿಸಿ ಮಾಡಿದ ಎರಡು ಚಪಾತಿ, ಸೌತೇಕಾಯಿ, ಈರುಳ್ಳಿ, ಟೊಮ್ಯಾಟೋ ಸಲಾಡ್, ಮೊಳಕೆ ಕಟ್ಟಿದ ಕಾಳುಗಳು, ತರಕಾರಿ ತುಂಬಿ ತುಳುಕುವ ಬಿಸಿ ಬಿಸಿಯಾದ ಸಾರು, ಶುಂಟಿ, ಮೆಣಸಿನ ಕಾಳಿನ ಪರಿಮಳದ ರಸಂ- ಕಿರಣನ ಊಟ ತಿಂಡಿ ಎಲ್ಲವೂ ತಕರಾರಿಲ್ಲದೆ ಕಾರ್ಖಾನೆಯಲ್ಲಿಯೇ ಮುಗಿಯುತ್ತಿತ್ತು.

ಮೊದಲೆಲ್ಲ, ಕಿರಣ ಐದು ಗಂಟೆಗೆ ಎದ್ದವನು. ನನಗೂ ಕಾಫಿ ಮಾಡಿಟ್ಟು, ಆರು ಗಂಟೆಗೆ, ಕಾರ್ಖಾನೆಯ ಕಾರು ಬಂದು ಹಾರ್ನ್ ಮಾಡಿದಾಗ ನನ್ನನ್ನು ಎಬ್ಬಿಸಿ ಹೊರಡುತ್ತಿದ್ದ. ಚೈತ್ರ ಶಾಲೆಗೆ ಹೊರಡುತ್ತಿದ್ದುದು ಎಂಟೂವರೆಗೆ, ಅಷ್ಟರಲ್ಲಿ ಅಡಿಗೆ ಮಾಡಿಟ್ಟು ಮಗಳಿಗೆ ಕೊಟ್ಟು ನಾನೂ ಕಟ್ಟಿಕೊಂಡು ಬರುವುದೇನೂ ಕಷ್ಟವಾಗಿರಲಿಲ್ಲ.

ಅವೆಲ್ಲವೂ ಬದಲಾದವು ಏಕಾಏಕಿ. ಒಂದು ದಿನ ಕಿರಣನ ಕೈಗೆ 2500 'ಸೊಡೆಕ್ಸ್ ಮೂಡ್ ಕೂಪನ್ಸ್' ಇಟ್ಟರು. ಕಾರ್ಖಾನೆಯ ಕ್ಯಾಂಟೀನ್ ಮುಚ್ಚಿದರು. ಎಂಥದ್ದೋ ಒಂದು ಖಾಸಗಿ ಕ್ಯಾಟರರ್ ಬಂದು ಕುಳಿತ. ಹಿಂದಿನ ರಾತ್ರಿ ಎಲ್ಲೋ ಯಂತ್ರದಲ್ಲಿ ಒತ್ತಿಟ್ಟ ಹಳಸಲು ಚಪಾತಿ, ತರಕಾರಿಯ ಮುಖ ಕಾಣದ ಸಾಂಬಾರು, ಕಂಡ ತರಕಾರಿಯ ನಾರು ಬೇರು ತೆಗೆಯದೆ ತೊಳೆಯದೆ ಹಾಕಿತ್ತು. 'ಕಡಮೆ ಖರ್ಚು, ಅಧಿಕ ಲಾಭ'



ಎಲ್ಲರು ಜಪಿಸುವ ಮಂತ್ರ. 'ಅದಕ್ಕೆ ೧೫ ರೂಪಾಯಿ ದಂಡ, ತುತ್ತು ಬಾಯಿಗಿಡೋಕಾಗೋಲ್ಲ' ಕಿರಣ್ ಎಂದಾಗ, ನನಗೆ ಬೇಗನೆ ಎದ್ದು ಮಾಡುವುದು ಅನಿವಾರ್ಯವಾಯಿತು. ಅಷ್ಟು ದುಡಿಯೋ ವ್ಯಕ್ತಿಗೆ ಊಟ ನೆಟ್ಟಗಿಲ್ಲದಿದ್ದರೆ ಹೇಗೆ. ಬೆಳಗ್ಗೆ ಹೋದೋರು ಬರೋದು ರಾತ್ರಿ, ಕಷ್ಟಪಟ್ಟಾದರೂ ಎದ್ದು ಮಾಡತೊಡಗಿದ್ದೆ. ಅದು ಸುಲಭವಿರಲಿಲ್ಲ, ಬೆಳಗಿನಂತಹ ಗಡಿಬಿಡಿಗಳು ಆಗಾಗ್ಗೆ ನಡೆದು ಬಿಡುತ್ತಿದ್ದವು. ರಾತ್ರಿ ಯಾವುದೋ 'ಸೀರಿಯಲ್' ಒಂದಿಷ್ಟು ಹೆಚ್ಚು ಹೊತ್ತೇ ನೋಡಿಬಿಟ್ಟಾಗ, ಬೆಳಗ್ಗೆ ನಾಲ್ಕಕ್ಕೆ ಏಳುವುದು ವಿಪರೀತದ ತ್ರಾಸವಾಗುತ್ತಿತ್ತು.

ಕೈಗಿಟ್ಟ ಸೊಡೆಕ್ಸ್ ಕೂಪನ್‌ಗಳು ಏನೆಲ್ಲ ಬದಲಿಸುತ್ತವೆ ಎಂದು ಮೆಲ್ಲ ಮೆಲ್ಲನೆ ಅರಿವಾಯಿತು. ನೆನ್ನೆ ಮೊನ್ನೆಯವರೆಗೂ ನಳನಳಿಸುವ ತರಕಾರಿ ಹೊತ್ತು ತಳ್ಳುವ ಗಾಡಿಯಲ್ಲಿ ನೂಕಿಕೊಂಡು ಬರುವ ತಿಮ್ಮಪ್ಪನ ಹತ್ತಿರವೇ ತೆಗೆದುಕೊಳ್ಳುತ್ತಿದ್ದವಳು, ಕೂಪನ್ ಖರ್ಚು ಮಾಡಲೆಂದು 'ಫೂಡ್ ವರ್ಲ್ಡ್', 'ರಿಲೈಯನ್ಸ್ ಫ್ರೆಷ್'ಗೆ ಹೋಗಿ ಪ್ಲಾಸ್ಟಿಕ್ ಚೀಲದಲ್ಲಿ ಸುತ್ತಿಟ್ಟ ಬಾಡಿದ ತರಕಾರಿ ಹೊತ್ತು ತರುತ್ತಿದ್ದೆ. ಕೂಪನ್ಸ್ ದಂಡವಾಗಬಾರದಲ್ಲ. ಇಪ್ಪತ್ತು ವರ್ಷದಿಂದ ತಿಂಗಳ ಮೊದಲ ವಾರ, ದಿನಸಿ ಪಟ್ಟಿ ಬರೆದು ಕೊಟ್ಟರೆ ಮನೆಗೆ ತಂದು ಹಾಕುತ್ತಿದ್ದ 'ಮಂಜುನಾಥ ಸ್ಟೋರ್ಸ್' ಸಂಬಂಧವೂ ಕಳಚಿತ್ತು. ಅಪ್ಪ ಸೊಡೆಕ್ಸ್ ಕೂಪನ್ಸ್ ಕಾಫಿ ಡೇನಲ್ಲೂ ಬಳಸಬಹುದು' ಚೈತ್ರ ಖುಷಿಯಿಂದ ಒಂದು ದಿನ

ಕಂಡುಕೊಂಡಳು. 'ಹಾಂ ಒಂದು ಕಾಫಿಗೆ ನಲವತ್ತು ರೂಪಾಯಿ, ಬಳಸು ಬಳಸು. ಎದುರು 'ದರ್ಶಿನಿ'ಯಲ್ಲಿ ಐದು ರೂಪಾಯಿ ಕಾಫಿಗೆ ಸೊಡೆಕ್ಸ್ ಕೂಪನ್ ಹಿಡಿದು ಹೋಗೋಕೆ ಆಗೊಲ್ಲ' ಕಿರಣ್ ಗೊಣಗಿದ್ದ.

ಬದಲಾವಣೆ ಅಷ್ಟೇ ಇರಲಿಲ್ಲ. ಕಾರ್ಖಾನೆಯಲ್ಲಿ ಇಡೀ ಒಂದು ಟ್ರಾನ್ಸ್ ಪೋರ್ಟ್ ವಿಭಾಗವೇ ಇತ್ತು. ವಿಶಾಲವಾದ ಬಸ್ಸುಗಳು, ಕಾರುಗಳು, ಅವಕ್ಕೆ ಡ್ರೈವರ್, ಕ್ಲೀನರ್, ವರ್ಷ ವರ್ಷಗಳು ಅದೇ ಡ್ರೈವರ್, ಅದೇ ಹಾದಿ. ಪರಿಚಿತ ಸಂಬಂಧಗಳು ಹಿತವಾಗಿದ್ದವು. ಬೆಳಗ್ಗಿನಿಂದ ದುಡಿದ ಕಿರಣ್ ಸಂಜೆ ಕಾರು ಹತ್ತಿ ಕುಳಿತೊಡನೆ ನಿದ್ರೆಗೆ ಜಾರುತ್ತಿದ್ದ. ಒಂದು ಗಂಟೆಯ ಹಾದಿ, ಮನೆಗೆ ಬರುವ ಹೊತ್ತಿಗೆ ದೇಹ ಮನಸ್ಸು ಒಂದಿಷ್ಟು ವಿಶ್ರಾಂತಗೊಂಡು, ಶಾಂತವಾಗಿರುತ್ತಿದ್ದವು.

ಆದರೆ ಏಕಾಏಕಿ ಒಂದು ದಿನ, ಕಾರ್ಖಾನೆಯ ಸಾರಿಗೆ ವಿಭಾಗ ಮುಚ್ಚಿತು. ಸಾಲ ಕೊಡಲು ಸಾವಿರ ಸಂಸ್ಥೆಗಳು. 'ಕಾರು ಕೊಳ್ಳಿ, ಕನ್ವೇಯನ್ಸ್ ಅಲೋಯನ್ಸ್ ತಗೊಳ್ಳಿ ಹೇಳಿದರು. ಕಾರು ಕೊಳ್ಳುವುದೇನೂ ಕಠಿಣವಿರಲಿಲ್ಲ. ಆದರೆ ಅದನ್ನು ನಿಲ್ಲಿಸುವುದೆಲ್ಲಿ? ಫ್ಲಾಟ್ ಒಳಗಿನ ಕಾಂಪೌಂಡ್ ಎಂದೋ ತುಂಬಿ ತುಳುಕಿ ಎದುರಿನ ರಸ್ತೆ ಕೂಡಾ ಜ್ಯಾಮ್ ಆಗುವಷ್ಟು ಕಾರುಗಳು ಅದಾಗಲೆ ಅಲ್ಲಿ ನಿಂತಿವೆ. ಜೊತೆಗೆ ಬೆಳಗಿನಿಂದ ಸಂಜೆವರೆಗೆ ದುಡಿದು, ಈ ಅಸಾಧ್ಯ ಕಿರಿಕಿರಿಯ ಟ್ರಾಫಿಕ್‌ನಲ್ಲಿ ಡ್ರೈವಿಂಗ್ ಕಲಿತು ಓಡಿಸಿಕೊಂಡು ಬರುವುದು ಹೇಗೆ. ಹಾಗೆಂದು ಐದೋ, ಆರೋ ಸಾವಿರ ಕೊಟ್ಟು ಡ್ರೈವರ್ ಇಟ್ಟುಕೊಂಡು, ಈ ಏರಿದ ಪೆಟ್ರೋಲ್ ಬೆಲೆಯಲ್ಲಿ ಕಾರು ನಿಭಾಯಿಸುವಷ್ಟು ಸಂಬಳವಾಗಲಿ, ಅಲೋಯನ್ಸ್ ಆಗಲೀ ಹೆಚ್ಚಿರಲಿಲ್ಲ. ಉಳಿದ ದಾರಿ ಬಸ್ ಪಾಸ್ ಮಾಡಿಸಿ ಓಡಾಡುವುದು, ಕಿರಣ್ ಈಗ 'ಅಡಿಶನಲ್ ಜೆನರಲ್ ಮ್ಯಾನೇಜರ್' ಆಗಿದ್ದ.



ಆದರೆ ಬಸ್ಸಲ್ಲಿ ನೇತಾಡಿಕೊಂಡು ಹೋಗುವ ಪರಿಸ್ಥಿತಿ. ಸೌಲಭ್ಯಗಳನ್ನೆಲ್ಲ ತೆಗೆದು ಹಾಕಿದ್ದರು. ಕಣ್ಣಿಗೆ ಕಾಣದಿದ್ದ ತಿಂಡಿ ಊಟ ಕಾಫಿ, ಸಾರಿಗೆ ಸವಲತ್ತುಗಳನ್ನೆಲ್ಲ ಹಣವಾಗಿ ಪರಿವರ್ತಿಸಿ ಕೈಗಿಟ್ಟರು. ಈಗ ನಮ್ಮ ಸಂಬಳ ಎದ್ದು ಕಾಣುವಂತಾಗಿತ್ತು. ಒಂದಿಷ್ಟು ಐಟಿ ಜನರ ಸಂಬಳಕ್ಕೆ ಹೋಲುವಂತೆಯೂ ಇತ್ತು. ಈ ಮೂಲಕವಾದರೂ ಹೊರ ಜಾರುತ್ತಿರುವ ತಮ್ಮ ದುಡಿವ ಪ್ರತಿಭೆಗಳನ್ನು ಹಿಡಿದಿಡುವ ಪ್ರಯತ್ನ ಮ್ಯಾನೇಜ್‌ಮೆಂಟಿನದು.

ಕಾರಿಲ್ಲದವರೂ ಕಾರು ಕೊಂಡರು. 'ನಾಲ್ಕು ಗಾಲಿ, ಒಂದು ಬಾನೆಟ್ ಮನೆ ಮುಂದೆ ನಿಲ್ಲಿಸಿದರೂ ಸಾಕು ಐದು ಸಾವಿರ ಬರುತ್ತೆ', ಸಹೋದ್ಯೋಗಿ ಗೋಪಿ ಹಿಗ್ಗಿನಿಂದ ಹೇಳಿದ್ದ. ಆತ ಇದ್ದದ್ದು ಕಾರ್ಖಾನೆಯಿಂದ ಎರಡೇ ಕಿಲೋಮೀಟರ್ ದೂರದಲ್ಲಿ.

ಬದುಕು ಹಿಂದಕ್ಕೆ ಹೋಗುವಂತಿರಲಿಲ್ಲ. ಮುಂದಕ್ಕೆ ಸಾಗಬೇಕಿತ್ತು.

ಕಛೇರಿಯ ನೂರೆಂಟು ಸಮಸ್ಯೆಗಳು, ಇತ್ತೀಚೆಗೆ ಯಾರು ಯಾವಾಗ ಬಿಟ್ಟು ಹೋಗುತ್ತಾರೆ ಎಂದೂ ಗೊತ್ತಿಲ್ಲದ 'ಆಟ್ರಿಷನ್' ಸಮಸ್ಯೆ ಬೇರೆ. ಎಲ್ಲವನ್ನು ತಲೆಯಲ್ಲಿ ಹೊತ್ತು ಎರಡು ಬಸ್ಸು ಬದಲಿಸಿ ನೇತಾಡಿಕೊಂಡು ರಾತ್ರಿ ಮನೆಗೆ ಬಂದಾಗ ಕಿರಣ್ ಸಿಡಿಯುವಂತಿರುತ್ತಿದ್ದ. ಸಣ್ಣ ಪುಟ್ಟದ್ದಕ್ಕೂ ರೇಗುವ.

ದಿನದಿಂದ ದಿನಕ್ಕೆ ಒತ್ತಡಗಳು ಏರಿದವು. ಓಡಾಟವೇ ಬದುಕಾಯಿತು. ಎಗರಾಟವೇ ರೂಢಿಯಾಯಿತು. ಸಂವಾದವಿಲ್ಲದ ಸಂಬಂಧಗಳು, ಒಬ್ಬರಿಗೊಬ್ಬರು ಕ್ಷಣ ಕೂತು ಮಾತನಾಡಲೂ ಸಾವಧಾನ, ಸಮಾಧಾನ ಇಲ್ಲದ ಹಾಗಾಗಿತ್ತು. 'ಬದುಕಲೂ ಪರಸತ್ತಿಲ್ಲದ' ಬದುಕು! “ಅವರೆಲ್ಲ ಕಾರ್ಖಾನೆ ಹತ್ತಿರಾನೇ ಇದ್ದಾರೆ, ಒಂಬತ್ತು ಗಂಟೆಗೆ ಬರ್ತಾರೆ ಅಂತಾ ನೀನೇ ಹೇಳಿದ್ದೆ. ನೀನ್ಯಾಕೆ ಇಷ್ಟು ದೂರದಿಂದ ಏಳು ಗಂಟೆಗೇ 'ಪಂಚ್' ಮಾಡಲು ಓಡ್ತೀಯಾ? ಐದೂ ಮುಕ್ಕಾಲಿಗೆ ನನ್ನ ಪ್ರಾಣ ತಿನ್ತೀಯ' ಒಮ್ಮೆ ರೇಗಿದ್ದೆ. ಕಿರಣ್ ಶಿಸ್ತಿನ ಮನುಷ್ಯ. 'ಅವರು ಏನು ಮಾಡ್ತಾರೆ ಅದು ನನಗೆ ಬೇಡ. ಆ ಸೋಮನಾಥ ಟಿಫಿನ್ ಕ್ಯಾರಿಯರ್ ಹಿಡಿದು ಒಂಬತ್ತು ಗಂಟೆಗೆ ನೇರವಾಗಿ ಮೀಟಿಂಗ್‌ಗೆ ಬರ್ತಾನೆ. ನನಗೆ ಅವನಂಥವರ ಉದಾಹರಣೆ ಹೇಳಬೇಡ, ಒಂದು ವಿಭಾಗದ ಎ.ಜಿ.ಎಮ್ ನಾನು. ನಾನು ಸರಿಯಾದ ಸಮಯಕ್ಕೆ ಹೋಗಲಿಲ್ಲ ಎಂದರೆ ನನ್ನೊಡನೆ ಕೆಲಸ ಮಾಡೋ ಐವತ್ತು ಜನರಿಗೆ 'ಸಮಯ ಪ್ರಜ್ಞೆ' ಬಗ್ಗೆ ಹೇಳೋ ನೈತಿಕ ಹಕ್ಕು ನನಗಿರುತ್ತಾ?' ಎನ್ನುವ. ನನಗೂ ಕಿರಣನ ಶಿಸ್ತಿನ ಬಗ್ಗೆ, ಕಾರ್ಯನಿಷ್ಠೆಯ ಬಗ್ಗೆ ಹೆಮ್ಮೆ ಇತ್ತು. ಆದರೆ ಇತ್ತೀಚಿನ ದಿನಗಳಲ್ಲಿ, ದಿನದಿನದ ನೂರು ಹೋರಾಟದಲ್ಲಿ, ಬದಲಾದ ಬಣ್ಣಗೆಟ್ಟ ವಾಸ್ತವದ ನಡುವೆ, ಶಿಸ್ತು ನಿಷ್ಠೆ ನೈತಿಕತೆ ಎಲ್ಲವೂ ಇಲ್ಲದ ರಗಳೆಯಾಗಿ ಕಾಣತೊಡಗಿತ್ತು.]

ಗಕ್ಕನೆ ಬಸ್ಸಿನ ಬ್ರೇಕ್ ಹಾಕಿದ ರಭಸಕ್ಕೆ ಕಣ್ಣು ಬಿಟ್ಟೆ. ಬಸ್ಸು ರಿಚ್ಮಂಡ್ ಸರ್ಕಲ್‌ಗೆ ಬಂದಿತ್ತು. ಪೋಲೀಸರ ಬಿರುಸಿನ ಸೀಟಿ ಸದ್ದು, 'ಲೈವ್ ಬಾಂಬ್ ಅಂತೆ, ಲೈವ್ ಬಾಂಬ್' ಬಸ್ಸಿನಲ್ಲಿ ಗುಲ್ಲೋ ಗುಲ್ಲು. ಎಲ್ಲರೂ ಎದ್ದು ಬಲಗಡೆಗೆ ನೋಡುವವರೆ. ಅತ್ತ ತಿರುಗಿದೆ, ಮಲ್ಯ ಆಸ್ಪತ್ರೆಯ ಎದುರಿನ ಸಣ್ಣ ಟ್ರಾಫಿಕ್ ತ್ರಿಕೋನದ ಗಿಡಗಂಟೆಗಳ



ನಡುವಿನಲ್ಲಿ ಬಾಂಬ್ ಹುಡುಕುತ್ತಿದ್ದರು. 'ಮಲ್ಯ ರಸ್ತೆನಲ್ಲೇ ಅಂತೆ ನಾಲ್ಕನೇ ಬಾಂಬ್ ಸಿಡಿದದ್ದು' ಮತ್ಯಾರೋ ಹೇಳಿದರು. ಅಸಾಧ್ಯ ಜನ, ಬಾಂಬ್ ಸಿಡಿತಕ್ಕೂ ಜಗ್ಗದೆ ಮುತ್ತಿಕೊಂಡಿದ್ದರು. ಅವರ ನಡುವೆ ಐದಾರು ಟಿವಿ ಚಾನೆಲ್‌ನ ವರದಿಗಾರರು ಕ್ಯಾಮೆರಾ ಎದುರು, ಮೈಕ್ ಹಿಡಿದು ಉಸಿರುಕಟ್ಟಿ ವರದಿ ಮಾಡುತ್ತಿದ್ದರು.

ನನ್ನ ಎದೆ ಹೊಡೆದುಕೊಂಡಿತು. ಮತ್ತೆ ಮೊಬೈಲ್ ತಡಕಿದೆ. ಉಹುಂ ಅದೇ ಉರು ಹೊಡೆದಿಟ್ಟ ಸಂದೇಶ, 'ದಿಸ್ ರೂಟ್ ಈಸ್ ಬಿಸಿ'. ಕಿರಣನಿಗಿದ್ದ ಹಾದಿಗಳೆಲ್ಲ 'ಬಿಸಿ'ಯಾಗಿವೆ, ಮನದ ಹಾದಿಗಿದ್ದ ಮಾರ್ಗಗಳೆಲ್ಲ ಮುಚ್ಚಿವೆ.

ಈಗ ಬಸ್ಸು ಮಾರ್ಕೆಟ್ಟಿನ 'ಪ್ಲೈಓವರ್' ದಾಟಿ ಮೈಸೂರು ರಸ್ತೆ ಪ್ರವೇಶಿಸಿತ್ತು. ಹೊಸ ಗುಡ್ಡದಹಳ್ಳಿ ಬಳಿ ಗುಂಪು ಜನ, ಟ್ರಾಫಿಕ್ ಜಾಮ್. ಡ್ರೈವರ್ ಹೊರಗಿಣುಕಿ ವಿಚಾರಿಸುತ್ತಿದ್ದ. ಟ್ರಾನ್ಸ್‌ಫಾರ್ಮರ್ ಕೆಳಗೆ ಬಾಂಬ್ ಇಟ್ಟಿದ್ದು ಸಿಡಿಯಿತಂತೆ. 'ಸದ್ಯ ಮಾಲ್ ಒಳಗೆ ಸಿಡಿದಿಲ್ಲ, ನನ್ನ ಮಗ ಅಲ್ಲಿಗೆ ಹೋಗಿದ್ದ' ಈಗ ಬಸ್ಸಿನ ಎಲ್ಲ ಜನರೂ ಎಲ್ಲರಿಗೂ ಪರಿಚಿತರಾಗಿಬಿಟ್ಟಿದ್ದರು. ಒಬ್ಬರು ಇನ್ನೊಬ್ಬರಿಗೆ ತಮ್ಮ ತಮ್ಮ ದುಃಖ ದುಗುಡ, ದುಮ್ಮಾನ ಸಮಾಧಾನಗಳನ್ನು ಹೇಳಿಕೊಳ್ಳುವಷ್ಟು ಹತ್ತಿರವಾಗಿಬಿಟ್ಟಿದ್ದರು. ಬಸ್ಸು ಹತ್ತಿದೊಡನೆ ಕಿವಿಗೆ ಐಪಾಡ್' ಸಿಕ್ಕಿಸಿಕೊಂಡು ಕೂರುವ ಕಿಶೋರ ವಯಸ್ಸಿನವರೂ ಕಂಗಾಲಾಗಿ 'ಎಲ್ಲಿ ಸಿಡಿತಂತೆ ಆಂಟಿ? ರಾಜಾಜಿನಗರ ಸೇಫ್ ಆಗಿದೆಯಾ ಕೇಳಿ ಅಂಕಲ್?' ಮಾತನಾಡಲು ಆರಂಭಿಸಿದ್ದರು.

ಮತ್ತೆ ಎದೆಯಲ್ಲಿ ಕುಟ್ಟಿದ ಅವಲಕ್ಕಿ, ಹೊಟ್ಟೆಯಲ್ಲಿ ಸಂಕಟ. ಕಿರಣನ ಮೊಬೈಲ್‌ಗೆ ಕರೆ ಹೋಗುತ್ತಿಲ್ಲ. ಮಗಳ ಲ್ಯಾಂಡ್‌ಲೈನ್ ಸಿಕ್ಕಿತು. “ಅಪ್ಪ ಏನಾದರೂ ಫೋನ್ ಮಾಡಿದ್ರೇನೇ, ನನಗೆ ಸಿಗ್ತಾನೇ ಇಲ್ಲ' ಕೇಳಿದೆ. 'ಇಲ್ಲ ಅಮ್ಮ, ನಾನೂ ಟ್ರೈ ಮಾಡ್ತಾ ಇದ್ದೀನಿ. ಡೈರೆಕ್ಟ್ ಲೈನ್ ಅಪ್ಪ ಎತ್ತಿಕೊಳ್ತಾನೆ ಇಲ್ಲ'. 'ಇಲ್ಲ ಚೈತ್ರ, ಅಪ್ಪ ಇವತ್ತು ಕಾರ್ಖಾನೆಯಿಂದ ಬೇಗ ಹೊರಟು ಸೇಂಟ್ ಜಾನ್ಸ್ ಆಸ್ಪತ್ರೆಗೆ ಯಾರನ್ನೋ ನೋಡೋಕೆ.. ನನ್ನ ವಾಕ್ಯ ಮುಗಿಯುವ ಮೊದಲೇ ಫೋನ್ ಕಟ್ಟಾಯಿತು. ಕಿವಿಯಲ್ಲಿ ಮೊಬೈಲ್ ಹಿಡಿದ ನಿಮ್ಮಿ 'ಸೇಂಟ್ ಜಾನ್ಸ್ ಅಂದ್ಯಾ ವಿಜಿ, ಅಲ್ಲೇ ಮಡಿವಾಳ ಬಸ್‌ಸ್ಟಾಂಡ್‌ನಲ್ಲೇ ಬಾಂಬ್ ಸಿಡಿದು ಇಬ್ಬರೇನೋ ಸತ್ತಿದ್ದಾರಂತೆ ಕಣೇ....” ಚೀರಿದಳು. ನಾನು ಪೂರ್ಣ ಬಿಳುಚಿ ಹೋದೆ. ಇಳಿದು ಓಡ ಬಯಸಿದೆ. ಹಾದಿ ಪೂರಾ 'ಜಾಮ್' ಆಗಿದೆ.

['ರಿವೈಂಡ್ ಮಾಡಿ ಹಾಕಿದಂತೆ, ಮತ್ತೆ ಮತ್ತೆ ಬೆಳಗಿನ ದೃಶ್ಯ ಕಣ್ಣ ಮುಂದೆ ಹಾದು ಹೋಗುತ್ತಿದೆ. ಮುಂಬಾಗಿಲು ಬಡಿಯುತ್ತಿದೆ. 'ನೀನೇನೂ ಏಳಬೇಡ...” ಅವೇ ಮಾತುಗಳು ಕೇಳುತ್ತಿವೆ. 'ಹಾಳಾಗಿ ಹೋಗ್ತಿನಿ, ಹಾಳಾಗಿ ಹಾಳಾಗಿ' ಟಿವಿ ಧಾರವಾಹಿಗಳಲ್ಲಿ ಪ್ರತಿಧ್ವನಿಸುವಂತೆ ನನ್ನ ಕಿವಿಯಲ್ಲಿ ಧ್ವನಿಸುತ್ತಿವೆ. ಯಾವ ಬಾಯಲ್ಲಿ ಕಿರಣ್ ನುಡಿದು ಹೋದ. ಕಿರಣ್‌ಗೆ ಏನಾದರೂ ಆಗಿದ್ದರೆ? ಒಂದೂವರೆಗೇನೋ ಮಡಿವಾಳದಲ್ಲಿ ಆಸ್ಫೋಟಿಸಿದ್ದಂತೆ, ತಕ್ಷಣ ಒಂದು ಫೋನ್ ಮಾಡಬಹುದಿತ್ತಲ್ಲ. ಒಂದು 'ಮೆಸೇಜ್' ಆದರೂ ಕಳುಹಿಸಬಹುದಿತ್ತು. ಇಲ್ಲ ಇನ್ನೂ ಬೆಳಗಿನ ಕೋಪದ ಬಿಗುವೆ, ಬಿಗುಮಾನವೆ? ಕಣ್ಣಲ್ಲಿ ನೀರು ತುಳುಕಿಯೆ ಬಿಟ್ಟಿತು. 'ದೇವರೆ, ಕಿರಣ್‌ಗೆ ಏನೂ ಆಗಿರದಿರಲಿ' ಮನಸ್ಸಿನಲ್ಲೇ ಪ್ರಾರ್ಥಿಸಿದೆ.

ಈಗಲೇ ಏಕೆ ನೆನಪಾಗಬೇಕು, ಓರಗಿತ್ತಿ ನಿಶಾ? ಅದೊಂದು ಮುಂಜಾನೆ. ಯಾವುದೋ ಸಣ್ಣ ಕಿರಿಕಿರಿ ಗಂಡ ಹೆಂಡಿರ ನಡುವೆ ಸಿಡಿದಿತ್ತು. ನಿಶಾ ಕೂಗಾಡಿದ್ದಳು, ಕಾರಿನ ಕೀಲಿ ಹಿಡಿದು ಭುಸುಗುಟ್ಟುತ್ತ ಹೊರಗೆ ಹೊರಟ ರಾಜು ಬಾಗಿಲು ಧಡಾರನೆ ಬಡಿದು ಹೋಗಿದ್ದ. ಅವ ಹೋಗಿ ಒಂದು ಗಂಟೆ ಇನ್ನೂ ಆಗಿರಲಿಲ್ಲ, ಅಪಘಾತದ ಸುದ್ದಿ ಬಂದಿತ್ತು. ಶಶಿ ಗರಬಡಿದವಳಂತೆ ನಿಂತಿದ್ದಳು. ಎದುರು ಬಂದ ಟ್ರಕ್ ರಾಜುವಿನ ಕಾರನ್ನು ಗುದ್ದಿತ್ತು. ನಿಶಾ ಎದೆಯಲ್ಲಿ ಕುದಿದ ಪಾಶ್ಚಾತ್ತಾಪ, ತಾನು ಅವತ್ತು ಬೆಳಗ್ಗೆ ಸಮಾಧಾನದಿಂದ ಮಾತನಾಡಿದ್ದರೆ, ಬಹುಶಃ ರಾಜುವಿನ ಗಮನ ರಸ್ತೆಯ ಮೇಲಿರುತ್ತಿತ್ತು. 'ಉಹುಃ ರಾಜು ಸರಿಯಾಗಿಯೇ ಓಡಿಸುತ್ತಿದ್ದ, ಬ್ರೇಕ್ ಫೇಲ್ ಆದ ಟ್ರಕ್ ಬಂದು ಗುದ್ದಿತು' ಯಾರು ಏನು ಹೇಳಿದರೂ, ಅವಳ ಎದೆಯಲ್ಲಿ ಕೊರೆದಿಟ್ಟ ಪಾಪಪ್ರಜ್ಞೆಯನ್ನು ಅಳಿಸಲಾಗಿರಲಿಲ್ಲ. ತಮ್ಮ ಇಪ್ಪತ್ತು ವರ್ಷದ ವೈವಾಹಿಕ ಬದುಕಿನ ಅದೆಷ್ಟೋ ಸುಮಧುರ ಕ್ಷಣಗಳೆಲ್ಲ ಕ್ಷಣದಲ್ಲಿ ಕರಗಿ, ಅವಳಿಗೆ ನೆನಪಿನಲ್ಲಿ ಉಳಿದದ್ದು ಅದೊಂದೇ ಕ್ಷಣ, ಕೊನೆಯ ಕ್ಷಣ. ಮುಂಬಾಗಿಲು ಧಡಾರನೆ ಮುಚ್ಚಿದ ಕ್ಷಣ. ಇಂದಿಗೂ ನಿಶಾ ತನ್ನನ್ನು ತಾನು ಕ್ಷಮಿಸಿಕೊಂಡಿಲ್ಲ.

ಎಷ್ಟು ನಶ್ವರದ ನಾಜೂಕಾದ ಬದುಕು. ಅನಿಶ್ಚಿತ, ಅಸ್ಥಿರದ ಒತ್ತಡದ ಬದುಕು. ಆದರೂ ಏನೀ ಧಾವಂತ, ಗುದ್ದಾಟ. ಹಣ ಕೊಂಡುಕೊಡುವ ಎಲ್ಲವೂ ಇದೆ, ಆದರೆ ಏನೂ ಇಲ್ಲದ ಖಾಲಿತನ. ಇರಬೇಕಾದ್ದೇನೋ ಇಲ್ಲದ ಅಭಾವ. ಅಮೂಲ್ಯವಾದ ಏನನ್ನೋ ಕಳೆದುಕೊಂಡ ಅಂತರ್ಭಾವ.

'ಕಿರಣ್‌ಗೆ ಏನಾದರೂ ಆದರೆ ನಾನು ನನ್ನನ್ನು ಹೇಗೆ ಕ್ಷಮಿಸಿಕೊಳ್ಳಬಲ್ಲೆ? ಮನದ ಒಳಗೆಲ್ಲ ಮುಲುಕಾಟ. ಉಂಡು ಮಲಗಿದ ಮೇಲೆ ಮುಗಿಯಬೇಕಾದ ಗಂಡ ಹೆಂಡಿರ ಜಗಳ ಇತ್ತೀಚೆಗೆ ಮುನಿಸಿಕೊಂಡೇ ಮುಂದುವರೆಯುತ್ತಿದೆ. ಏಕೋ ಓಟದ ಬದುಕಿನಲ್ಲಿ ಓಡಿ ಓಡಿ ತೀರಾ ಆಯಾಸಗೊಂಡಿದ್ದೇವೆ. ಕ್ಷಣ ನಿಲ್ಲಬೇಕಿದೆ ಇಬ್ಬರೂ.

ಮತ್ತೆ ಮತ್ತೆ ಅವೇ ಪದಗಳು ಕಿವಿಯಲ್ಲಿ ಗುಂಜಿಡುತ್ತಿವೆ- 'ಹೋಗ್ತಿನಿ, ಹಾಳಾಗಿ ಹೋಗ್ತಿನಿ'.

ಮನೆಯಿಂದ ಹೊರಗೆ ಹೋಗುವಾಗ ಕಡ್ಡಾಯವಾಗಿ 'ಬರ್ತೀನಿ' ಅಂತಲೇ ಹೇಳಬೇಕಾದ ನಿಯಮ. ಅದು ಚಿಕ್ಕ ವಯಸ್ಸಿನಿಂದ ರೂಢಿಯಾಗಿತ್ತು. 'ಹೋಗ್ತಿನಮ್ಮ ಎಂದಾಗೆಲ್ಲ ಅಮ್ಮ 'ಬಿಡ್ತು ಅನ್ನು, ಬರ್ತೀನಿ ಅನ್ನಬೇಕು. ಇಲ್ಲ ಹೋಗ್ಬರ್ತೀನಿ ಅನ್ನಬೇಕು' ತಿದ್ದಿ ಬೆಳೆಸಿದ್ದು, ಅದೆಷ್ಟು ಪ್ರಜ್ಞೆಯ ಆಳದಲ್ಲಿ ಇಳಿದಿತ್ತು ಎಂದರೆ 'ಹೋಗ್ತಿನಿ" ಅನ್ನುವುದೊಂದು ಅಪಶಕುನದ ಪದವಾಗಿತ್ತು ನಮ್ಮ ಮನೆಯಲ್ಲಿ. ಇಂದು ಕಿರಣ ಬರೀ 'ಹೋಗ್ತಿನಿ' ಅಂದಿರಲಿಲ್ಲ, 'ಹಾಳಾಗಿ ಹೋಗ್ತಿನಿ' ಅಂದಿದ್ದ. ಮುಂಜಾನೆಯ ಕ್ಷಣಗಳು ರಣರಂಗವಾಗಿದ್ದವು.]

ಕಿಟಕಿಯ ಹೊರಗೆ ನೋಡಿದೆ, ಜನರೋ ಜನರು. 'ಟ್ರಾನ್ಸ್‌ಫಾರ್ಮರ್ ಏನಾದರೂ ಸಿಡಿದಿದ್ದರೆ, ದೊಡ್ಡ ಅನಾಹುತವಾಗ್ತಾ ಇತ್ತು. ಮೊದಲೇ ಕಿಕ್ಕಿರಿದ ಕಿರಿದು ರಸ್ತೆ ಇದು ಯಾರೋ ಉದ್ಗರಿಸಿದರು. ಈಗ ಇಲ್ಲಿದ್ದವರು ಮರುಕ್ಷಣ ಇಲ್ಲವಾಗಬಹುದು. ಇಲ್ಲಿ



ಈಗ ನಕ್ಕು ನಲಿದ ಜೀವ, ಮರುಕ್ಷಣ ನಂದಬಹುದು. ಅರೆ ಕ್ಷಣದಲ್ಲಿ ಬದುಕು ಸಾವುಗಳ ನಿರ್ಣಯ' ಯೋಚಿಸುತ್ತಿದ್ದಂತೆ, ಎದೆಯಲ್ಲಿ ತಣ್ಣನೆಯ ಚೂರಿ ಇಳಿದಂತಹ ಭಾವ.

ಇಷ್ಟು ಕ್ಷಣಿಕ ಬದುಕಿನಲ್ಲಿ ಶಾಶ್ವತವಾದ ಸಿಟ್ಟು ಸೆಡವು ಮುನಿಸುಗಳೇಕೆ? ಈ ದಿನ ನಾವು ಅಗಲಿದರೂ ಪಾಶ್ಚಾತ್ತಾಪವಿಲ್ಲದ ಹಾಗೆ ಅಗಲಬಹುದೆ? ಈ ರಾತ್ರಿ ಹೊರಳಿ ನರಳದ ಹಾಗೆ ಮಲಗಬಹುದೆ?

ಕಿರಣ್ ಇನ್ನೂ ಫೋನ್ ಮಾಡಿಲ್ಲ. ಅವನ ಮೊಬೈಲ್ ಸಿಗುತ್ತಿಲ್ಲ. ಮಗಳೇನೋ ಕಛೇರಿಯಲ್ಲಿ ಸುರಕ್ಷಿತವಿದ್ದಾಳೆ. ಆಚೆ ಬೀದಿಯಲ್ಲಿರೋ ಸುರೇಶನ ಜೊತೆಗೆ ಗದ್ದಲ ಎಲ್ಲ ನಿಂತ ಮೇಲೆ ಬರುತ್ತೇನೆ ಎಂದಳು. ಆದರೆ ಕಿರಣ್? ಎಲ್ಲಿಂದಾದರೂ ಒಂದು ಫೋನ್ ಮಾಡಬಾರದೆ. 'ನನಗೇನೂ ಆಗಿಲ್ಲ' ಇಷ್ಟು ಹೇಳಿದ್ದರೆ ಸಾಕಿತ್ತು. ಬೆಳಗಿನ ಬಿಗುಮಾನದ ಕತ್ತಿಯನ್ನು ಈ ಹೊತ್ತಲ್ಲೂ ಮಸೆಯಬೇಕೆ? ಅಥವಾ ಕಿರಣ್‌ಗೆ ಏನಾದರೂ ಆಗಿರಬಹುದೆ?

ಅಂತೂ ಬಸ್ಸು ಹೊರಟಿತು. ಪೋಲೀಸರ ಸೀಟಿಗಳ ನಡುವೆ, ಹಾದಿ ಒಂದಿಷ್ಟು ತೆರೆದಿತ್ತು. ಮೈಸೂರು ರಸ್ತೆಯ 'ಸ್ಯಾಟಲೈಟ್ ಬಸ್ ಸ್ಟಾಂಡ್' ಬಂದೊಡನೆ, ಕೆಳಗೆ ಜಿಗಿದು 'ಸೇಂಟ್ ಜಾನ್ಸ್ ಕಡೆಗೆ ಹೋಗುವ ಬಸ್ಸಿಗಾಗಿ ತಾರಾಡಿದೆ. ಅತ್ತ ಕಡೆಗೆ ಬರಲು ಆಟೋಗಳು ಸಿದ್ಧವಿಲ್ಲ. ಕಡೆಗೂ ಬಸ್ನೊಂದರಲ್ಲಿ ಹತ್ತುತ್ತೇನೆ, ಮತ್ತೊಂದು ಬದಲಿಸಿ ಸೇಂಟ್ ಜಾನ್ಸ್ ಆಸ್ಪತ್ರೆಯ ಎದುರು ನಿಂತಿದ್ದೇನೆ.

ಅದೇ ಬಸ್ ಸ್ಟಾಂಡ್, ರಸ್ತೆಯಲ್ಲಿ ರಕ್ತ, ಯಾರನ್ನೋ ವಿಚಾರಿಸುತ್ತೇನೆ. 'ಹಾಂ ಹೆಣ ಇಲ್ಲೇ ಇತ್ತು'. ಆಸ್ಪತ್ರೆಯ ಒಳಗೆ ಧಾವಿಸುತ್ತೇನೆ. 'ತುರ್ತುಚಿಕಿತ್ಸಾ' ವಿಭಾಗ, 'ತೀವ್ರ ನಿಗಾ' ವಿಭಾಗ ಎಲ್ಲೆಡೆ ತಾರಾಡುತ್ತೇನೆ. ಆತ್ಮಹತ್ಯೆ, ಅಪಘಾತ, ಸ್ಫೋಟ. ಬದುಕು- ಸಾವಿನ ನಡುವೆ ಜೀಕುತ್ತಿರುವ ಎಷ್ಟೊಂದು ಮುಖಗಳು ಇಲ್ಲಿ, ಈ ಲೋಕದಿಂದ

ಹೊರಗಿರುವ ನಾವು ಪುಣ್ಯವಂತರು ಎಂದು ಅರಿವಾಗುವುದು, ಬಹುಶಃ ಇಲ್ಲೊಮ್ಮೆ ಭೇಟಿಕೊಟ್ಟಾಗ, ಉಹುಂ ಅಲ್ಲೆಲ್ಲೂ ಕಿರಣನಿರಲಿಲ್ಲ. 'ಸುಮ್ಮನೆ ಗಾಭರಿಯಾಗಬೇಡಿ ಇಲ್ಲಿ ಸತ್ತಿದ್ದು ಒಬ್ಬ ಹೆಣ್ಣುಮಗಳು ಮಾತ್ರ ಬೆಂಗಳೂರು ತುಂಬಾ ಆಸ್ಫೋಟ ಆದರೂ, ಒಂದೇ ಸಾವು ಅಷ್ಟೆ' ಯಾರೋ ನುಡಿದರು. 'ಎಲ್ಲ ತುಸ್ ಪಟಾಕಿ' ಚೂಯಿಂಗ್ ಗಮ್ ಜಗಿಯುತ್ತಿದ್ದ ಯುವಕನೊಬ್ಬ ನಿರಾಶೆಯಿಂದೆಂಬಂತೆ ಹೇಳುತ್ತಿದ್ದಾನೆ! ಅಷ್ಟೆ, ಒಂದು ಸಾವು ಅಷ್ಟೆ, ಬೆಂಗಳೂರಿನ ಆರು ಮಿಲಿಯ ಜನಸಂಖ್ಯೆಯಲ್ಲಿ ಒಂದು ಸಾವು ದೊಡ್ಡದಲ್ಲ. ಆ ಒಂದು ಸಾವು ಉಸಿರುಗಟ್ಟಿ ಓಡುತ್ತಿರುವ ಜಗತ್ತಿನ ಗಮನಕ್ಕೆ ಬಾರದು. ಇಂದು ಸಾವುಗಳೂ ಸಾಮಾನ್ಯವಾಗಿವೆ. ಅಲ್ಲಿ ಇಸ್ರೇಲಿನಲ್ಲಿ, ಇರಾಕಿನಲ್ಲಿ, ಆಫ್ಘಾನಿಸ್ತಾನದಲ್ಲಿ, ಪಾಕಿಸ್ತಾನದಲ್ಲಿ. ಕಾಶ್ಮೀರದಲ್ಲಿ, ಪಂಜಾಬಿನಲ್ಲಿ, ಅಸ್ಸಾಮಿನಲ್ಲಿ, ಗುಜರಾತಿನಲ್ಲಿ, ಮೊನ್ನೆ ತಾನೆ ಜಯಪುರದಲ್ಲಿ, ಸಾವಿನ ಸಂಖ್ಯೆ ದೊಡ್ಡದಿಲ್ಲದಿದ್ದರೆ ಸುದ್ದಿ ಕೂಡಾ ಆಗದು. ಒಂದು ಸಾವು ಜಗತ್ತಿಗೆ ದೊಡ್ಡದಲ್ಲ. ಆದರೆ ಆ ಒಂದು ಸಾವು ನಮ್ಮವರದಾಗಿದ್ದಾಗ ನಮ್ಮ ಪ್ರಪಂಚವೇ ಮುಳುಗುವುದಲ್ಲ!



ಆದರೂ ಒಂದೇ ಸಾವು' ಎಂದ ಆ ವಾಕ್ಯ, ಎದೆಗೆ ಒಂದಿಷ್ಟು ಸಮಾಧಾನ ಕೊಟ್ಟಿತ್ತು. ಕಿರಣ್ ಇಷ್ಟು ಹೊತ್ತಿಗೆ ಮನೆಗೆ ತಲುಪಿರಬಹುದೆ, ಕಾಯಿನ್ ಬಾಕ್ಸ್ ಹುಡುಕಿ ಮನೆಗೆ ಫೋನ್ ಮಾಡಿದೆ. ಉಹುಂ ಯಾರೂ ಎತ್ತುತ್ತಿಲ್ಲ. ಈಗ ಏನು ಮಾಡುವುದು, ಕಿರಣನನ್ನು ಎಲ್ಲಿ ಹುಡುಕುವುದು? ಮತ್ತೆ ನನ್ನ ಓಟ, ಯಾರಿಗೆ ಗೊತ್ತು, ಎಲ್ಲಿಯಾದರೂ ಕಿರಣ್ ಗಾಯಗೊಂಡು ಬಿದ್ದಿದ್ದರೆ, ಸರಿಯಾದ ಸಮಯಕ್ಕೆ ವೈದ್ಯ ಚಿಕಿತ್ಸೆ ಸಿಗದೆ ಸತ್ತವರೆಷ್ಟು, ಬೀದಿಯಲ್ಲಿ ಬಿದ್ದವರನ್ನು ಎತ್ತಲೂ ಪುರಸತ್ತಿಲ್ಲದೆ ಓಡುವ ವಾಹನಗಳನ್ನು ತಾನು ದಿನವೂ ಕಂಡಿಲ್ಲವೆ, ಈ ಮಹಾನಗರದ ಹೃದಯಹೀನ ಕ್ಷಣಗಳಲ್ಲಿ, ಮತ್ತೆ ಎದೆಯೊಳಗೇ ಗುದ್ದುವ ಪ್ರಶ್ನೆ ಇದೇ ಮಹಾನಗರದ ಒಂದು ಭಾಗ ನೀನೂ ಕೂಡ ಅಲ್ಲವೆ, ನೀನೇನು ಮಾಡಿರುವೆ ದೂರುವುದನ್ನು ಬಿಟ್ಟು?'

ಯೋಚಿಸಲು ಇದು ಸಮಯವಲ್ಲ, ಮತ್ತೆ ಓಡುತ್ತೇನೆ. ಎಲ್ಲೆಲ್ಲಿ ಆಸ್ಫೋಟವಾಯಿತು ವಿಚಾರಿಸುತ್ತೇನೆ. ಆ ಹಾದಿಯ ಉದ್ದಕ್ಕೂ ಅಲೆದಾಡುತ್ತೇನೆ. ಪ್ರತಿ ಆಸ್ಪತ್ರೆ, ನರ್ಸಿಂಗ್ ಹೋಂ ಒಳ ನುಗ್ಗಿ ಇಣುಕುತ್ತೇನೆ. ಅಲ್ಲಿ ಒಳಗೊಂದು ಪ್ರಪಂಚವಿತ್ತು... ನೊಂದವರ, ಬೆಂದವರ, ಬದುಕು ಬೇಡಾದವರ, ಬದುಕು ದೂರಾದವರ ಜಗತ್ತು.

ಉಹುಂ ಎಲ್ಲೂ ಕಿರಣನ ಸುಳಿವಿಲ್ಲ. ಯಾವ ಆಸ್ಪತ್ರೆಯಲ್ಲೂ ಅವನಿಲ್ಲ. ಒಂದು ಕಡೆ ಮನಸ್ಸಿಗೆ ತುಸು ನೆಮ್ಮದಿ, ಬಹುಶಃ ಅವನಿಗೇನೂ ಆಗಿಲ್ಲ. ಆದರೆ ಅನಿಶ್ಚಯದ ಮೌನದಲ್ಲಿ ಎದೆಯ ಬಡಿತ ಇಳಿದಿಲ್ಲ. ಆಟೋಗೆ ಕೈ ತೋರಿಸುತ್ತೇನೆ. 'ವಿಜಯನಗರ' ಎಂದೊಡನೆ 'ಬರಲ್ಲ, ಅಲ್ಲಿ ಮೈಸೂರು ರಸ್ತೆನಲ್ಲಿ ಎರಡು ಬಾಂಬ್ ಸಿಡಿದಿದೆ' ಎಂದೇನೋ ಹೋಗಿಬಿಟ್ಟರು. ಮತ್ತೆ ಮತ್ತೆ ಕೈ ತಡೆದು ನಿಲ್ಲಿಸಿದೆ. ಕಡೆಗೂ ಒಬ್ಬ ಆಟೋದವ ನಿಲ್ಲಿಸಿದ. ಆತಂಕದಲ್ಲಿ, ಆಯಾಸದಲ್ಲಿ, ಮೈ ಮನಸ್ಸುಗಳು ಕುಸಿದು ಹೋಗಿವೆ. ಆಟೋದಲ್ಲಿ ಕುಳಿತಂತೆ ಮತ್ತೆ ಬಿಕ್ಕಳಿಸುತ್ತೇನೆ. 'ಏನಾಯ್ತು

ಮೇಡಂ?' ತಿರುಗಿ ನೋಡಿದ ಡ್ರೈವರ್‌ಗೆ 'ನಮ್ಮ ಮನೆಯವರು ಇಲ್ಲಿಗೆ ಬಂದಿದ್ದರು. ಅವರಿಂದ ಸುದ್ದಿಯೇ ಇಲ್ಲ' ಎಂದೆ. 'ಅರೆ ಗಾಭರಿಯಾಗೋಡಿ ಒಂದೇ ಸಾವು, ಆಯಮ್ಮಂದು. ಎಲ್ಲೋ ಈ ಟ್ರಾಫಿಕ್‌ನಲ್ಲಿ, ಮಳೆನಲ್ಲಿ ಸಿಕ್ಕಿಕೊಂಡಿರ್ತಾರೆ' ಸಮಾಧಾನ ಹೇಳುತ್ತಾನೆ. ಆಟೋದವ ಕೂಡಾ ಈಗ ಹತ್ತಿರವಾಗಿಬಿಟ್ಟಿದ್ದಾನೆ. ಈ ದಿನ ಎಲ್ಲರೂ ಹತ್ತಿರವಾಗಿ, ನಮ್ಮವರಾಗಿದ್ದಾರೆ. ನಮ್ಮ ನಮ್ಮ ನಡುವೆ ನೋವಿನ ಸಂಬಂಧವೊಂದು ಬೆಸೆದುಕೊಂಡಿದೆ. 'ಸಾವಿನ' ಸಾಧ್ಯತೆಯ ಈ ಕ್ಷಣ, ಕ್ಷುಲ್ಲಕ ಕಾರಣಗಳಲ್ಲಿ ಬದುಕು ಸೋರಿ ಹೋಗುತ್ತಿರುವುದು ಅರಿವಾಗುತ್ತಿದೆ. ಬದುಕದೆ ಬಿಟ್ಟ ಕ್ಷಣಗಳು, ಬದುಕದೆ ಕಳೆದ ನಿಮಿಷಗಳು ಎದೆಯಲ್ಲಿ ಹೊರೆಯಾಗಿವೆ.

ಮನೆಯೆದುರು ಆಟೋ ನಿಲ್ಲುತ್ತದೆ. ಇಳಿದಾಗ, ಮೀಟರ್ ನೋಡುತ್ತೇನೆ. ಐವತ್ತೆರಡು ರೂಪಾಯಿ. ಆತನ ಕೈಗೆ ಐವತ್ತರ ನೋಟು ಇಟ್ಟು, ಎರಡು ರೂಪಾಯಿಯ ಚಿಲ್ಲರೆಗಾಗಿ ತಡಕಾಡುತ್ತೇನೆ. 'ಇರಲಿ ಬಿಡಿ ಮೇಡಂ. ನಿಮ್ಮ ಮನೆಯವರು ಬಂದಿರ್ತಾರೆ ಹೋಗಿ ಎನ್ನುತ್ತಾನೆ. 'ಥ್ಯಾಂಕ್ಸ್' ಎನ್ನುವ ಮೊದಲೇ ಆಟೋ ಓಡಿಸಿ ನಡೆದಿದ್ದಾನೆ. ಆಟೋದ ಬೆನ್ನಿಗೆ 'ಮೆಕ್ಕಾ ಮದೀನಾ'ದ ಹಸಿರು ಸ್ಟಿಕರ್ ಅಂಟಿಸಿದ್ದು ದೂರಕ್ಕೂ ಕಾಣಿಸುತ್ತದೆ.

ಮನೆಯೊಳಗೆ ಬರುತ್ತೇನೆ, ಕಾತುರದಿಂದ ಬೆಲ್ ಬಾರಿಸುತ್ತೇನೆ. ಕಿರಣ್ ಈಗ ಬಂದಿರಬಹುದೆ? ಉಹುಂ ಕರೆಗಂಟೆಗೆ ಉತ್ತರವಿಲ್ಲ, ತೆರೆದ ಬಾಗಿಲಿಲ್ಲ. ಮನಸ್ಸಿನ



ಬಾಗಿಲೂ ಮುಚ್ಚಿಬಿಟ್ಟಿದೆಯೆ? ಕೀಲಿ ತಿರುಗಿಸಿ ತೆಗೆಯುತ್ತೇನೆ, ಒಳಗೆಲ್ಲ ಕತ್ತಲು, ದೀಪ ಹಚ್ಚಿಲ್ಲ, ಕಿರಣ್ ಬಂದಿಲ್ಲ. ಕುಸಿದು ಕುಳಿತೆ. ಮತ್ತೆ ಬಿಕ್ಕ ತೊಡಗಿದೆ. ಏನು ಮಾಡಬೇಕೆಂದು ತೋರುತ್ತಿಲ್ಲ. ಇನ್ನೆಲ್ಲಿ ಹೇಗೆ ಕಿರಣನನ್ನು ಹುಡುಕಲಿ ತಿಳಿಯುತ್ತಿಲ್ಲ. ಕಣ್ಣು ಕತ್ತಲಿಟ್ಟಿತು.

ಎದೆ ನೋವಿನ ಮಡು. ನನಗೆ ಕಿರಣ್ ಬಿಟ್ಟರೆ ಈ ಪ್ರಪಂಚದಲ್ಲಿ ಯಾರಿದ್ದಾರೆ? ಅಮ್ಮ ಅಪ್ಪ ಎಂದೋ ತೀರಿಕೊಂಡರು. ಇದ್ದೊಬ್ಬ ಅಣ್ಣ ಅಮೆರಿಕ ಸೇರಿ ಇದ್ದೂ ಇಲ್ಲವಾದ.

[ಎದೆಯಲ್ಲಿ ಎಷ್ಟೊಂದು ಹಗೆ, ಬೆಂಕಿಯನ್ನು ಇಟ್ಟುಕೊಂಡು ನಡೆದಾಡುತ್ತೇವೆ ಅಗ್ನಿಪರ್ವತದಂತೆ. ಎಂದೋ ಘಟಿಸಿದ ಘಟನೆಗಳನ್ನು ಟಿವಿಯ ರಿ-ರನ್ ಧಾರವಾಹಿಗಳಂತೆ 'ರಿ-ಕ್ಯಾಪ್' ಮಾಡುತ್ತಾ ಮತ್ತೆ ಮತ್ತೆ ಮೆಲುಕು ಹಾಕುತ್ತೇವೆ, ನೋಯುತ್ತೇವೆ, ನವೆಯುತ್ತೇನೆ.

ನನ್ನ ಮದುವೆ ಆಗಿ ಮೂರು ವರ್ಷ. ಗಟ್ಟಿಮುಟ್ಟಾಗಿದ್ದ ಅಪ್ಪ ಒಂದು ದಿನ ಧಿಡೀರನೆ ಹೃದಯಾಘಾತಕ್ಕೆ ಒಳಗಾದರು. ಅಣ್ಣನಿಗೆ ಬರಲಾಗಲಿಲ್ಲ, ಅಮೆರಿಕೆಗೆ ಅವ ಹೋಗಿ ಒಂದೋ ಎರಡೋ ವರ್ಷ ಆಗಿತ್ತು, 'ಇಲ್ಲಿಂದ

ಹೊರಟು ಬರುವಷ್ಟರಲ್ಲಿ, ಅಪ್ಪನ ಮುಖ ಕೂಡಾ ಸಿಗುವುದಿಲ್ಲ' ಎಂದೇನೋ ಹೇಳಿದ್ದ. ನನಗೆ ಶುದ್ಧ ಸಬೂಬಾಗಿ ಕಂಡಿತ್ತು ಅವನು ಕೊಟ್ಟ ಕಾರಣಗಳೆಲ್ಲ. ಮತ್ತೆ ಅವ ಬಂದದ್ದು ಅಮ್ಮ ಮಣ್ಣಾದ ಮೂರು ದಿನಕ್ಕೆ.

“ಯಾವ ನರ್ಸಿಂಗ್ ಹೋಂಗೆ ಸೇರಿಸಿದ್ದು?' ಕೇಳಿದ್ದ.

“ಇಲ್ಲೇ ಮೂರನೇ ಬ್ಲಾಕ್‌ನಲ್ಲಿದೆಯಲ್ಲ..' ಹೆಸರು ಹೇಳಿದೆ.

“ಅಷ್ಟು ಸಣ್ಣ ನರ್ಸಿಂಗ್ ಹೋಂಗೆ ಯಾಕೆ ಸೇರಿಸಿದೆ? ಸರಿಯಾದ ಕಡೆ ತೋರಿಸಬಾರದಿತ್ತೆ, ಬಾಂಬೆಗೆ ಹೋಗಿದ್ದರೆ ಅಮ್ಮ ಉಳಿಯುತ್ತಿದ್ದಳು. ಹಣ ಬೇಕಿದ್ರೆ ನಾನು ಕೊಡುತ್ತಿದ್ದೆ..” ಎಂದೇನೋ ಅವನು ಅವಘಡ ಹೇಳುತ್ತಾ ಹೊರಟಾಗ, ನನ್ನ ಪಿತ್ತ ನೆತ್ತಿಗೇರಿತ್ತು. ಅಪ್ಪ ಅಮ್ಮನ ಹೊರೆಯೆಲ್ಲ ನನ್ನ ಹೆಗಲಿಗೇರಿಸಿ ಅಮೆರಿಕಗೆ ಹೋಗಿ ಕುಳಿತವ, ಹಿಂತಿರುಗಿರುವುದು ಅವರಿಬ್ಬರೂ ಸತ್ತು ಸ್ವರ್ಗ ಸೇರಿದ ಮೇಲೆ. ಈಗ ಕುಳಿತು ಉಪದೇಶ ಮಾಡುತ್ತಿದ್ದಾನೆ. ಅವನು ಆಡಿದ ಮಾತನ್ನು ನಾನು ಉದಾಸೀನವಾಗಿ ಅತ್ತ ಒಗೆದು ಸುಮ್ಮನಾಗಬಹುದಿತ್ತು. ಉಹುಂ ಹಾಗಾಗಲಿಲ್ಲ.

'ಅಪ್ಪ ಅಮ್ಮನ ಮೇಲೆ ಅಷ್ಟು ಕಾಳಜಿ ಇದ್ದೋನು ಅಮೆರಿಕೆಗೆ ಏಕೆ ಹೋಗಿ ಕುಳಿತೆ. ಇಲ್ಲಿದ್ದು ನೋಡಿಕೋ ಬೇಕಿತ್ತು. ಇಲ್ಲ ಅಲ್ಲಿಗಾದರೂ ಕರೆದುಕೊಂಡು ಹೋಗಬೇಕಿತ್ತು. ಕೊನೆಗಾಲಕ್ಕೆ ಕೂಗಿದರೂ, 'ಮಗ ಮಗ' ಅಂತ ಹಂಬಲಿಸಿದರೂ ಬರದೆ, ಮಣ್ಣಾದ ಮೂರು ದಿನಕ್ಕೆ ಬಂದು ಇಳಿದು ಈಗ ಉಪದೇಶ ಕೊಡಬೇಡ' ಸಿಡಿದು ರೇಗಿ ಬಿಟ್ಟೆ.

“ಅಲ್ಲಿ ನನ್ನ ಕೆಲಸ ಹಾಗಿದೆ. ಏಕಾಏಕಿ ಬಿಟ್ಟು ಬರೋವಂಥದ್ದಲ್ಲ..' ಅವನೂ ಏನೇನೋ ಕೂಗಿದ. ನಾನು ರೇಗಿ ಕುಣಿದೆ. ಸಾವಿನ ಮನೆ ರಣರಂಗವಾಯಿತು. ಸಂತಾಪ ಸೂಚಿಸಲು ಬಂದ ನೆಂಟರು, ಇಷ್ಟರು ಒಂದಿಷ್ಟು ಸಮಾಧಾನ ಮಾಡಲು



ನೋಡಿದರು. ಹರಿದ ಸಂಬಂಧಕ್ಕೆ ಮುಂದಿನ ಒಂದು ವಾರ ತೇಪೆ ಹಾಕಿ ಓಡಾಡಿದೆವು. ಹದಿಮೂರನೆ ದಿನದ ಶಾಸ್ತ್ರ ಮುಗಿದೊಡನೆ ಹೊರಟು ಹೋದ ಅಣ್ಣ ಮತ್ತೆ ಭಾರತಕ್ಕೆ ಬರಲಿಲ್ಲ. ಇರುವೊಬ್ಬ ತಂಗಿಯನ್ನು 'ಹೇಗಿದ್ದೀಯಾ?' ಎಂದು ಕೇಳಲಿಲ್ಲ. ಬಿಗಿ, ಬಿಗುಮಾನದಲ್ಲಿ ನಾನೂ ಎಂದೂ ಒಂದು ಫೋನ್ ಮಾಡಲು ಹೋಗಲಿಲ್ಲ. ಒಂದೇ ರಕ್ತ ಹಂಚಿ ಹುಟ್ಟಿದ ಅಣ್ಣ-ತಂಗಿಯರ ನಡುವೆ ಮೌನದ ಪರದೆ ಇಳಿಯಿತು. ಸಪ್ತ ಸಮುದ್ರಗಳು ನಮ್ಮ ನಡುವೆ ಹಿಗ್ಗಿ ಹರಡಿ ನಿಂತವು. ಅಣ್ಣನ ವಿಷಯ ಬಂದಾಗೆಲ್ಲ ಎದೆ ಕುದಿದು ಹೋಗುತ್ತಿತ್ತು. ಮತ್ತೆ ನಮ್ಮ ನಡುವೆ ಮಾತು ಸಂಪರ್ಕ ಏನೂ ಉಳಿಯಲಿಲ್ಲ.

"ಮಗ, ಗಂಡು ಮಗ, ಅಖಂಡವಾಗಿ ಓದಬೇಕು' ಅಪ್ಪನ ಆಸೆ. ಸೆಕೆಂಡ್ ಅಣ್ಣ ಕ್ಲಾಸಿನಲ್ಲಿ ಪಾಸಾದಾಗಲೂ ಅಪ್ಪನಿಗೆ ವಾಸ್ತವ ಕಂಡಿರಲಿಲ್ಲ. ಲಕ್ಷ ಲಕ್ಷ ಸಾಲ ಮಾಡಿ ಡೊನೇಷನ್ ಕೊಟ್ಟು ಮೆಡಿಕಲ್‌ಗೆ ಸೇರಿಸಿದ್ದರು. ಅಣ್ಣ ಅಂತೂ ಇಂತೂ ಪಾಸಾಗಿ ಡಾಕ್ಟರ್ ಆಗಿದ್ದ. ಒಂದು ಖಾಸಗಿ ನರ್ಸಿಂಗ್ ಹೋಂನಲ್ಲಿ ಸಣ್ಣ ಸಂಬಳದ ಸದಾ ರಾತ್ರಿ ಡ್ಯೂಟಿಯ ಕೆಲಸ ಸಿಕ್ಕಿತ್ತು. ಕೆಲವು ವರ್ಷಗಳು ದುಡಿದ ಅಣ್ಣ ಅಮೆರಿಕದ ಕನಸು ಕಂಡ. ಆಗಲೇ ಅವನಿಗೂ ಮದುವೆ ಆಗಿತ್ತು. ಅವನು ಮತ್ತು ಅತ್ತಿಗೆ ಇಲ್ಲಿಂದ ಹೊರಟದ್ದು ಆರು ತಿಂಗಳ 'ಟೂರಿಸ್ಟ್ ವೀಸಾ'ದ ಮೇಲೆ. ಅಲ್ಲೇ ಹೇಗೆ ತಳವೂರಿದರೋ ತಿಳಿಯದು, ಅಂತೂ ಅಮೆರಿಕದಲ್ಲಿ ನೆಲೆಸಿದರು.

ಪಿಯುಸಿ ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳನ್ನು ತೆಗೆದ ನಾನೂ ಮೆಡಿಕಲ್ ಸೇರುವುದಾಗಿ ಹಟ ಹಿಡಿದಿದ್ದೆ. ಖರ್ಚು ವೆಚ್ಚ ಗುಣಿಸಿದ ಅಪ್ಪ 'ಸಾಧ್ಯವಿಲ್ಲ' ಎಂದು ಗುಡುಗಿದ್ದರು. 'ಹೆಣ್ಣು ಮಕ್ಕಳು ಎಂದಿದ್ದರೂ ಪರರ ಮನೆ ಸೇರೋರು' ಅಮ್ಮನೂ ದನಿಗೂಡಿಸಿದ್ದಳು. ಡಾಕ್ಟರ್ ಆಗುವ ನನ್ನ ಆಸೆ ಅಲ್ಲಿಗೆ ಮುಗಿದಿತ್ತು. ಡಿಗ್ರಿ ಮಾಡಿ ಶಾಲೆಯಲ್ಲಿ ಪ್ರಾಧ್ಯಾಪಕ ವೃತ್ತಿ ಹಿಡಿದಿದ್ದೆ. ಮತ್ತೆ ಮದುವೆ, ಮಗಳು.

ಅಪ್ಪ ಸತ್ತು ಎಷ್ಟೋ ವರ್ಷ ಕಳೆದಿತ್ತು. ಅಮ್ಮನಿಗೆ ಕ್ಯಾನ್ಸರ್ ಎಂದು ತಿಳಿದಾಗ ಆಕಾಶ ಕಳಚಿ ಬಿತ್ತು. ಇರುವೊಬ್ಬ ಮಗಳು ನಾನು, ಅಮ್ಮನಿಗೆ ಇನ್ನಾರಿದ್ದರು. ವರ್ಷ ವರ್ಷಗಳು ಮೈಸೂರು-ಬೆಂಗಳೂರುಗಳ ನಡುವೆ ಎಡತಾಡಿದೆ. ಅಪ್ಪ ಸತ್ತ ಮೇಲೆ ಒಂಟಿಯಾದ ಅಮ್ಮ, ಇಲ್ಲೇ ನಮ್ಮೊಂದಿಗೆ ಬಂದು 'ಮಗಳ ಮನೆಯಲ್ಲಿ' ಇರಲು ಸಂಕೋಚಿಸಿದ್ದಳು.

ಆಸ್ಪತ್ರೆ, ಆಪರೇಷನ್, ಕೀಮೋತೆರಪಿ ನಡುವೆ ಒಬ್ಬಳೇ ಎಡತಾಡಿದ್ದೆ. ಆ ಆರು ತಿಂಗಳು ಕೆಲವೊಮ್ಮೆ ದೇಹ ತೀರಾ ದಣಿದಾಗ, ಹಣ ಕೂಡಾ ಬಿಗುವಾದಾಗ ಅಣ್ಣನ ಬಗ್ಗೆ ಎಲ್ಲಿಲ್ಲದ ಕೋಪ ಕೆರಳುತ್ತಿತ್ತು. 'ಮೈತುಂಬಾ ಸಾಲ ಮಾಡಿ ಓದಿಸಿದ ಗಂಡು ಮಗ ಹಾಯಾಗಿ ಅಮೆರಿಕದಲ್ಲಿದ್ದಾನೆ. ಇಲ್ಲಿ ಅಪ್ಪ ಅಮ್ಮನ ಸೇವೆಗೆ ನಾನು' ಎಂದು ಮನಸ್ಸು ಕುದಿಯುತ್ತಿತ್ತು. ಕೆಲವೊಮ್ಮೆ ಆಡಬಾರದ ಮಾತುಗಳು ನನ್ನ ಬಾಯಿಂದಲೂ ಹೊರಬಿದ್ದು ಬಿಡುತ್ತಿದ್ದವು. 'ಗಂಡು ಮಗ ಕೊನೆಗಾಲಕ್ಕೆ ಆಗೋನು. ಹೆಣ್ಣು ಮಕ್ಕಳೇನು ಪರರ ಮನೆ ಸೇರುತ್ತವೆ ಅಂತಾ ನನ್ನ ಡಾಕ್ಟರ್ ಓದಿಸಲಿಲ್ಲ, ಈಗ ಅನುಭವಿಸಿ' ಎಂದು ಕೂಗಿದ್ದ ದಿನಗಳಿದ್ದವು.



ಕಡೆಯ ಮೂರು ತಿಂಗಳು ನಾನು ಅಮ್ಮನ ಮನೆಯಲ್ಲಿಯೇ ಸಂಪೂರ್ಣವಾಗಿ ಉಳಿದು ಬಿಟ್ಟಿದ್ದೆ. ಆಗೆಲ್ಲ ಮಧ್ಯೆ ಅಣ್ಣ ಫೋನ್ ಮಾಡಿ ಅಮ್ಮನ ಆರೋಗ್ಯ ವಿಚಾರಿಸಿದಾಗ ನೀನು ಅಲ್ಲಿ ಕುಳಿತು ಪುರಾಣ ಕೇಳಬೇಡ, ರಜೆ ಹಾಕಿ

ಬೇಗ ಬಾ ಎಂದು ರೇಗುತ್ತಿದ್ದೆ. 'ಅಷ್ಟು ಸುಲಭ ಇಲ್ವೇ..' ಏನೋ ಸಬೂಬು ಕೇಳಿಬರುತ್ತಿತ್ತು. ಅದು ಸತ್ಯವಿದ್ದರೂ ನಾನು ಕೇಳುವ ಸ್ಥಿತಿಯಲ್ಲಿರಲಿಲ್ಲ. ಸುಸ್ತಾಗಿದ್ದೆ, ಆಯಾಸವಾಗಿತ್ತು. ಅಂದು ಅಮ್ಮನ ಮಣ್ಣು ತೀರಿಸಿ ಹೋದ ಅಣ್ಣ ಇಂದಿನವರೆಗೂ ತಿರುಗಿ ನೋಡಿಲ್ಲ. ಅವನ ಬಗ್ಗೆ ನೆನೆಸಿಕೊಂಡಾಗೆಲ್ಲ ಮನಸ್ಸು ಕುದಿದು ಹೋಗುತ್ತದೆ.

ನಿನ್ನೆಗಳ ನೆನಪಲ್ಲಿ ಕಣ್ಣು ಮತ್ತೆ ಒದ್ದೆಯಾಗಿತ್ತು. ಯಾಕೋ ಈ ಕ್ಷಣ ನನಗೆ ಕೋಪಿಸಿಕೊಳ್ಳಲೂ ಆಗದಷ್ಟು ದುಃಖ, ಆತಂಕ, ನೋವು, ನಿತ್ರಾಣ. ಮತ್ತೆ ವಾಸ್ತವಕ್ಕೆ ಬಂದಿದ್ದೆ. ಕಿರಣ್ ಎಲ್ಲಿ? ದೇವರೆ ಕಿರಣ್ ಸುರಕ್ಷಿತವಾಗಿರಲಿ. ಎದ್ದು ದೀಪ ಹಚ್ಚುತ್ತೇನೆ.

ಧಡಾರನೆ ಬಾಗಿಲು ತೆಗೆಯುತ್ತದೆ, ತಲೆ ಕೆದರಿ ಕಂಗೆಟ್ಟು ಒಳ ಬಂದ ಕಿರಣ್! ನನ್ನನ್ನು ನೋಡಿದೊಡನೆ ಕೂಗಿದ 'ಮೂರು ಗಂಟೆಗೇ ನೀನು ಶಾಲೆ ಬಿಟ್ಟೆ ಅಂದ್ರು, ಅದೆಲ್ಲಿ ಹೋಗಿದ್ದೆ? ಎಲ್ಲೆಲ್ಲಿ ಅಂತ ಹುಡುಕಾಡಬೇಕು..?' ರೇಗಾಡಿದ. 'ನೀನೊಂದು ಮೆಸೇಜ್ ಕಳಿಸೋಕೂ ಆಗ್ತಿರಲಿಲ್ಲವೆ...' ನಾನೂ ಚೀರಿದೆ. ಅತ್ತು ಊದಿದ ಕಣ್ಣು, ಇನ್ನೂ ಬದಲಿಸದ ಬಟ್ಟೆ, ಸೋಫಾ ಮೇಲೆ ಎಸೆದ ವ್ಯಾನಿಟಿ ಬ್ಯಾಗ್ ನನ್ನ ಕತೆ ಹೇಳಿತ್ತು. ಕಿರಣ್ ಕುರ್ಚಿಯಲ್ಲಿ ಕುಸಿದು ಕುಳಿತ. ಈಗ ನನ್ನ ಮೊಬೈಲ್ ಮುಲುಕಿತು. ಎತ್ತಿ ನೋಡಿದರೆ ಕಿರಣನ ಮೆಸೇಜ್ 'ಐ ಆಮ್ ಫೈನ್. ಬಿ ಅಟ್ ಸ್ಕೂಲ್, ಐ ಆಮ್ ಕಮಿಂಗ್'! 'ಈಗ ಬಂತು ನೋಡು ನಿನ್ನ ಮೆಸೇಜ್' ಮೆಲ್ಲನೆ ಮನಸ್ಸು ಹಗುರಾದಂತೆ ಮುಗುಳಕ್ಕೆ, ಅವನ ಮುಖದಲ್ಲೂ ಆತಂಕದ ಕಾರ್ಮೋಡಗಳು ಸರಿದು ಬಿರಿದ ಬೆಳದಿಂಗಳು.

ಮಗಳು ಚೈತ್ರ ಬಂದು ತಲುಪಿದಳು. ಒಂದು ನಿಟ್ಟುಸಿರು. ಈ ದಿನ ಬದುಕು ನಮ್ಮತ್ತ ಅನಂತ ಕೃಪೆಯನ್ನು ತೋರಿತ್ತು.

ಟಿವಿ ಹಾಕುತ್ತೇವೆ, ಎಲ್ಲಾ ಚಾನೆಲ್‌ಗಳಲ್ಲಿ 'ಬ್ರೇಕಿಂಗ್ ನ್ಯೂಸ್', ಮತ್ತೆ ಮತ್ತೆ ಆಡುಗೋಡಿಯ ಬಸ್ ನಿಲ್ದಾಣದಲ್ಲಿ ಅಂಗಾತ ಬಿದ್ದ ಆ ಮಹಿಳೆಯ ಚಿತ್ರ

ಕಿರಣ್ ಹೇಳಿದ-

“ಆಕೆ ನನ್ನ ಬಗಲಿಗೇ ನಿಂತಿದ್ದಳು. ಹಳದಿ ಸೀರೆ, ನೀಲಿ ಸ್ವೆಟರ್. ಕೊಂಚ ತೋರ, ದುಂಡು ಮುಖದ ಮಧ್ಯ ವಯಸ್ಸಿನ ಮಹಿಳೆ, ಮೆಜೆಸ್ಟಿಕ್ ಬಸ್ ಬಂದಾಗ ತುಂಬಿ ತುಳುಕುತ್ತಿತ್ತು. 'ಮುಂದಿನದಕ್ಕೆ ಹೋಗಲೆ?' ಅರೆ ಕ್ಷಣ ಯೋಚಿಸಿದ್ದೆ. 'ಅರೆ ಮಳೆ ಬರೋ ಹಾಗಿದೆ, ಛತ್ರೀನೂ ತಂದಿಲ್ಲ, ಹೋಗಿ ಬಿಡೋಣ' ಎಂದು ಆ ಬಸ್ಸಿಗೇ ನುಗ್ಗಿ ನೇತಾಡಿದೆ. ಕೆಲವೇ ಕ್ಷಣಗಳು ಬಿಟ್ಟು ಬಂದ ಬಸ್ ನಿಲ್ದಾಣದಲ್ಲಿ ಸ್ಫೋಟ. ಆ ಕ್ಷಣ ಈ ಬಸ್ಸು ನನ್ನನ್ನು ಸಾವಿನ ಗಲ್ಲಿಯಿಂದ ಬದುಕಿಗೆ ಕರೆದೊಯ್ದಿತ್ತು ಎಂದು ತಿಳಿದಿರಲಿಲ್ಲ'.

ಬದುಕಿದವರು ಗೇಲಿ ಮಾಡಿ ತಮಾಷೆ ಮಾಡಿದ್ದರು. 'ಎಂಟು ಬಾಂಬು ಸಿಡೀತು. ಒಂದೇ ಸಾವು, ಎಲ್ಲಾ ತುಸ್ ಪಟಾಕಿ ತಾವು ಆ ಆಸ್ಫೋಟದ ಕೇಂದ್ರವಾಗದಿದ್ದರೆ

ದೂರ ನಿಂತು ನೋಡಲು ಎಂತಹ ತವಕ. ಕೇವಲ ಒಂದು ಸಾವು! ಈ ದಿನ ನಾವು 'ಕೇವಲ ಒಂದು ಸಾವಾಗದೆ' ಮನೆಗೆ ಹಿಂತುರುಗಿದ್ದೆವು. ಬದುಕು ನಮಗೆ ಮತ್ತೆ ಅವಕಾಶ ಕೊಟ್ಟಿತ್ತು ಬೆಳಗಿನ ಸಿಟ್ಟು ಸೆಡವು ಬಿಸಾಟು ಮತ್ತೆ ಮುಗುಳಗುವ ಅವಕಾಶ. ಮುನಿದ ಮಡದಿಯನ್ನು ತಣಿಸಿ ಪ್ರೀತಿಸುವ ಅವಕಾಶ. ಇದೊಂದು ಬಾರಿ ಬದುಕು ನಮಗೆ ಅವಕಾಶ ನೀಡಿತ್ತು. ಬಾರಿ ಬಾರಿಗೂ ಅದೃಷ್ಟ ನಮ್ಮೊಡನಿರುತ್ತದೆ ಎಂದು ಏನು ಗ್ಯಾರಂಟಿ. ಹೊತ್ತಿ ಉರಿಯದೆ, ಒಂದಿಷ್ಟು ಹೆಣ ಬೀಳದೆ ಅದು ಸುದ್ದಿಯಾಗುವುದಿಲ್ಲ. ನಾವು 'ಸುದ್ದಿಯಾಗದೆ' ಮನೆಗೆ ಹಿಂತಿರುಗಿದ್ದೆವು.

ರಾತ್ರಿ ಕಿರಣನಿಗೆ ಒತ್ತಿ ಮಲಗಿದೆ. ಈ ದಿನ ನನ್ನವರೆಲ್ಲ ಮನೆಗೆ ಬಂದಿದ್ದರು. ಏಕೋ ತಟ್ಟನೆ ಅನಿಸಿಬಿಟ್ಟಿತು, ನಾಳೆಯಿಂದ ತಿಮ್ಮಪ್ಪನ ಕೈಗಾಡಿಯಿಂದಲೇ ತರಕಾರಿ ಕೊಳ್ಳಬೇಕು. ಮತ್ತೆ ಕಣ್ಣು ಮುಚ್ಚಿ ಮಲಗಲು ಪ್ರಯತ್ನಿಸಿದೆ. ಏಕೋ ನಿದ್ದೆ ಬಾರದು. ಬೆಂಗಳೂರು ಬದಲಾಯಿತು, ಜನ ಬದಲಾದರು, ರಸ್ತೆ ಅಗಲವಾಯಿತು, ಮರ ಕಡಿದರು - ದೂರುತ್ತಲೇ ಎಷ್ಟು ಕಾಲ ಕಳೆಯುವುದು. ಏಕೋ ಅನಿಸಿತು, ಎದುರು ರಸ್ತೆಯಲ್ಲಿ ನಾಲ್ಕು ಮರಗಳನ್ನಾದರೂ ನೆಡಬೇಕು. ಮಲಗದ ಮನಸ್ಸು, ಹಾಸಿಗೆಯಲ್ಲಿ ಹೊರಳುತ್ತದೆ.

ಗಂಟೆ ಹನ್ನೆರಡು, ಫೋನಿನ ಸದ್ದು, ಯಾರು ಇಷ್ಟು ಹೊತ್ತಿನಲ್ಲಿ? ನಮ್ಮ ಸ್ನೇಹಿತರಿಗೆ, ಸಂಬಂಧಿಕರಿಗೆ ಏನೂ ಆಗಿಲ್ಲ ತಾನೆ. ಮಂಚದಿಂದ ಜಿಗಿದು ಎದ್ದು ಹಾಲಿನಲ್ಲಿದ್ದ ಫೋನ್ ಎತ್ತಿಕೊಂಡೆ.

“ಹಲೋ..' ನನ್ನ ಸ್ವರಕ್ಕೆ ತಕ್ಷಣ ಉತ್ತರವಿಲ್ಲ. ಇದ್ಯಾರು ಮಧ್ಯರಾತ್ರಿ 'ಬ್ಲಾಂಕ್ ಕಾಲ್' ಕೊಡುವವರು? ಮತ್ತೆ 'ಹಲೋ' ಕೂಗಿದೆ.

'ಚೆಲ್ಲೂ...' ಅಣ್ಣನ ಸಣ್ಣ ದನಿ, ಸಾವಿರ ಸಾವಿರ ಮೈಲಿಯಾಚೆನ ಟೆಕ್ಸಾಸ್‌ನಿಂದ ಕೇಳಿಬಂತು. ದಿಗ್ಮೂಢಳಾದೆ!

ಏಕೋ ತಡೆದ. ತೂಗಿ ತೊನೆದು ಮೆಲ್ಲನೆ ಹೇಳಿದ 'ಚೆಲ್ಲೂ ಬೆಂಗಳೂರಲ್ಲಿ ಬಾಂಬ್ ಬ್ಲಾಸ್ಟ್ ಅಂತ ನೆಟ್‌ನಲ್ಲಿ ನೋಡಿದೆ, ಗಾಭರಿಯಾಯಿತು. ಹೇಗಿದ್ದೀಯಾ..?" ತಡವರಿಸಿದ ಅವನ ದನಿಯಲ್ಲಿ ದಶಕಗಳ ಮೌನದ ಮುಜುಗರವಿತ್ತು. ಈಗ ಈಗಷ್ಟೆ ಅವನೊಡನೆ ಕಿತ್ತಾಡಿದಂತೆ ಕಹಿ ನೆನಪುಗಳು ಹಸಿಯಾಗಿ ಬಿಗುವಾಗಿ ಕಮಟದ ಹೊತ್ತು. ಒಳಗಿನಿಂದ ಉಕ್ಕಿ ಬಂದ ಉತ್ತರ ಇದ್ದೀನಿ, ಇನ್ನೂ ಸತ್ತಿಲ್ಲ' ಚೀರಬೇಕೆನಿಸಿತು. ಮರುಕ್ಷಣ ನನ್ನೊಳಗಿನ ಆಕ್ರೋಶ ಹತ್ತು ವರ್ಷವಾದರೂ ಆರಿಲ್ಲ ಎಂದು ನನಗೇ ಅಚ್ಚರಿ. ನಾಳೆಯ ಗ್ಯಾರಂಟಿ ಇಲ್ಲದ ಈ ಬದುಕಿನಲ್ಲಿ, ಏಕಿಷ್ಟು ವರ್ಷ ವರ್ಷಗಳ ಸಿಟ್ಟು ಸೆಡವು ಅಸಮಾಧಾನಗಳನ್ನು ಗುಡ್ಡೆ ಹಾಕಿಕೊಂಡಿರುವೆ? ಪ್ರಯಾಸದಿಂದ ಕೋಪವನ್ನು ನುಂಗಿಕೊಂಡೆ. ಇಂದು ಬದುಕು ನಮ್ಮತ್ತ ಕರುಣೆ ತೋರಿತ್ತು. ಇಂದು ನಾನು ಉದಾರವಾಗಲು ಸಿದ್ಧಳಾದೆ. ಉಸಿರೆಳೆದುಕೊಂಡೆ ಒಗರಾಗಲಿದ್ದ, ಒರಟಾಗಲಿದ್ದ ದನಿಯನ್ನು ಪ್ರಯತ್ನಪೂರ್ವಕವಾಗಿ ನಿಯಂತ್ರಿಸಿ ಮೆಲ್ಲನೆ ಹೇಳಿದೆ 'ಚೆನ್ನಾಗಿದ್ದೇನೋ, ನಮಗೇನೂ ಆಗಲಿಲ್ಲ ಪುಣ್ಯಕ್ಕೆ'. ನನ್ನ ಶಾಂತ ಪ್ರತಿಕ್ರಿಯೆ ಅವನಿಗೂ ಅಚ್ಚರಿ



ತಂದಿರಬಹುದು. ಜೊತೆಗೆ ಸಮಾಧಾನ. ಒಂದಿಷ್ಟು ಮುಂದೆ ಮಾತನಾಡುವ ಧೈರ್ಯ ಕೂಡಾ ಕೊಟ್ಟಿರಬೇಕು. ಎಲ್ಲೆಲ್ಲಿ ಬಾಂಬ್ ಸಿಡಿತೇ, ಮೈಸೂರು ರಸ್ತೆನಲ್ಲಿ ಎರಡು ಕಡೆ ಬಾಂಬ್ ಇಟ್ಟಿದ್ದರು ಅಂತ ಓದಿದೆ. ನಿನ್ನ ಮನೆ ಆ ಕಡೆನೇ ಅಲ್ಲವಾ..' ಆಗ ನೆನಪಾಯಿತು, ಹೌದು ಒಡಹುಟ್ಟಿದ ಅಣ್ಣ ನನ್ನ ಮನೆ ಕೂಡಾ ನೋಡಿಲ್ಲ!

ಮತ್ತೆ ಬಂದು ಮಲಗಿದೆ. ನಿದ್ರೆ ಬರುತ್ತಿಲ್ಲ. ಕ್ಷಣದಲ್ಲಿ ಇಲ್ಲವಾಗಬಲ್ಲ ಬದುಕಿನ ಅನಿಶ್ಚಯತೆ, ನನ್ನೊಳಗೆ ಏನೆಲ್ಲ ಮಥಿಸುತ್ತಿದೆ. ಏಕೆ ಈ ರಾತ್ರಿ ಕಳೆದುಕೊಂಡ ಎಲ್ಲರೂ ನೆನಪಾಗುತ್ತಿದ್ದಾರೆ, ಅಣ್ಣನೂ ಸೇರಿದಂತೆ, ಎಷ್ಟು ಕ್ಷುಲ್ಲಕ ಕಾರಣಗಳಿಗೆ ಮುನಿಯುತ್ತೇವೆ, ಕತ್ತಿ ಮಸೆಯುತ್ತೇವೆ, ಸಿಡಿಯುತ್ತೇವೆ, ಸ್ಫೋಟಿಸುತ್ತೇವೆ. ಎದೆಯಲ್ಲಿ ಹೊತ್ತ ಹಗೆ ಸುಟ್ಟಿತ್ತು, ಮೊದಲು ನನ್ನನ್ನೇ, ಉಳಿಸಿಕೊಳ್ಳಬಹುದೆ ಸ್ನೇಹಗಳ, ಪ್ರೀತಿಗಳ, ಸಂಬಂಧಗಳ? ನಾಳೆ ಅಗಲಿದರೂ ಎದೆಯಲ್ಲಿ ಗಾಯವಾಗದೆ, ಪಾಶ್ಚಾತ್ತಾಪದ ಬೆಂಕಿಯಲ್ಲಿ ಬೇಯದೆ ಬೀಳ್ಕೊಡಬಲ್ಲಂಥಾ ಸಂಬಂಧಗಳ,

ಹೊರಗಿನ ಆಸ್ಫೋಟಗಳು ಕಿವಿಗಡಚಿಡುವಂತೆ ಕೇಳುತ್ತವೆ. ೨೪ ಗಂಟೆಯೂ ಚೀರಿಡುವ ಟವಿ ಚಾನಲ್‌ಗಳಲ್ಲಿ 'ಬ್ರೇಕಿಂಗ್' ಸುದ್ದಿಗಳಾಗುತ್ತವೆ, ಪತ್ರಿಕೆಗಳಲ್ಲಿ ದಪ್ಪ ದಪ್ಪ ಅಕ್ಷರಗಳಲ್ಲಿ ಮುಖಪುಟದಲ್ಲಿ ಕಣ್ಣಿಗೆ ರಾಚುತ್ತವೆ.

ಕೆಲವು ಆಸ್ಫೋಟಗಳುಂಟು ಅಂತರಂಗದಲ್ಲಿ, ಆತ್ಮೀಯರ ಮನಸ್ಸು ಮಿದುಲುಗಳಲ್ಲಿ ಆದ ಸದ್ದಿಲ್ಲದ ಸುದ್ದಿಯಾಗದ ಆಸ್ಫೋಟಗಳು. ಹರಿದ ಹಗ್ಗದಂತೆ ತುಂಡರಿಸಿದ ಸ್ನೇಹ ಸಂಬಂಧಗಳು, ಆ ಕ್ಷಣಕ್ಕೆ ಆಸ್ಫೋಟಿಸಿ ಮುಗಿದವಲ್ಲ, ಒಳಗೊಳಗೆ ವರ್ಷ ವರ್ಷಗಳು ಉರಿಯುತ್ತಾ ನಮ್ಮನ್ನು ಸುಡುತ್ತಾ ಅವರ ಮನಸ್ಸನ್ನೂ ಕರಕಲಾಗಿಸುವ ಆಸ್ಫೋಟಗಳು. ಮನೆಯಲ್ಲಿ, ಶಾಲೆಯಲ್ಲಿ, ಕಛೇರಿಯಲ್ಲಿ, ರಸ್ತೆಯಲ್ಲಿ, ಬಸ್ಸಲ್ಲಿ, ಬೀದಿಯಲ್ಲಿ ಎಲ್ಲೆಲ್ಲಿ, ಏನಕ್ಕೆಲ್ಲ ಸಿಡಿಯುತ್ತೇವೆ.

ನಾನೇಕೆ ಅಣ್ಣನ ಬಗ್ಗೆ ಇಷ್ಟು ದಿನ ಕುದಿಯುತ್ತಿದ್ದೆ. ಏಕೋ ಇಂದು ಮನಸ್ಸು ನೋಯುತ್ತಿದೆ. 'ಗಂಡು ಮಗ ಕೊನೆಗಾಲಕ್ಕೆ ಆಗೋನು ಅವನು ಅಂತ ಸಾಲ ಮಾಡಿ ಓದಿಸಿದಿರಿ. ಈಗೆಲ್ಲಿ ನಿಮ್ಮ ಗಂಡು ಮಗ?' ಅದೆಷ್ಟು ಸಲ ಒಳಗಿನ ಲಾವಾರಸವನ್ನು ಹೊರ ಉಗುಳಿದ್ದೆ. ಅಪ್ಪ ಅಮ್ಮ ಅಜ್ಞಾನದಲ್ಲಿ ಮಾಡಿದ ಒಂದು ತಪ್ಪಿಗೆ ನಾನೇಕೆ ಹಾರಾಡಿದ್ದೆ, ವರ್ಷ ವರ್ಷಗಳು ಎದೆಯಲ್ಲಿ ಅಸಮಾಧಾನದ ಹೊಗೆ ಹೊತ್ತು ವಿಷ ಕಾರಿದ್ದೆ? ಹಿಡಿದ ಹಾದಿಯಲ್ಲಿ ಇಷ್ಟು ದೂರ ಬಂದು ತಲುಪಿದ್ದಾಗಿದೆ, ಹಿಂತಿರುಗಿ ನೋಡುವುದೇಕೆ? ಕೆಲವೊಮ್ಮೆ ಕ್ಷಮಿಸಬೇಕಾಗುತ್ತದೆ ದೊಡ್ಡವರನ್ನೂ, ಅವರ ಸಣ್ಣತನಗಳನ್ನೂ.

ಅಣ್ಣ 'ಚಿಲ್ಬೂ' ಎಂದು ಕರೆದಿದ್ದ. ಅದೇ ಅಲ್ಲವೆ ನನ್ನವರೆಲ್ಲ ಕರೆಯುತ್ತಿದ್ದ ಮುದ್ದಿನ ಹೆಸರು. ಮದುವೆಯಾದ ಮೇಲೂ ಅದು ಮುಂದುವರೆದು, ಕಿರಣ್ ಕೂಡಾ ಅದನ್ನೇ ಬಳಸತೊಡಗಿದ್ದ. ನಿನ್ನೆ ಮೊನ್ನೆಯವರೆಗೂ ಮಗಳು ಅಷ್ಟೆತ್ತರ ಬೆಳೆದಿದ್ದರೂ, ಮುಂಬಾಗಿಲ ಬಳಿಯಲ್ಲಿ ಅರೆಕ್ಷಣ ನಿಂತು ' ಚಿಲ್ಬೂ ನಾನು ಬರ್ತೀನಿ..' ಎಂದವನು ಬಾಗಿಲನ್ನು ಮೆಲ್ಲನೆ ಎಳೆದುಕೊಳ್ಳುವ ಮೊದಲು ' ಚಿಲ್ಬೂ ಪೂ..' ಎಂದು ಗಾಳಿಯಲ್ಲಿ ಮುತ್ತೊಂದನ್ನು



ತೇಲಿಬಿಡುತ್ತಿದ್ದ. ಅಲ್ಲೆಲ್ಲೋ ಅಡಿಗೆ ಮನೆಯಲ್ಲಿ ಏಗಾಡುತ್ತಲೇ 'ಸಂಜೆ ಬೇಗ ಬಾ ಎಂದು ನಾನು ಕೂಗಿರುತ್ತಿದ್ದೆ. ಅವ ಪ್ರತಿ ಸಂಜೆ ಕಾರ್ಖಾನೆಯ ಕಾರಿನಲ್ಲಿ ಅದೇ ಸಮಯಕ್ಕೆ ಬರುತ್ತಾನೆ ಎಂದು ತಿಳಿದಿದ್ದರೂ.

ಇತ್ತೀಚಿನ ದಿನಗಳಲ್ಲಿ ಅಷ್ಟಕ್ಕೆಲ್ಲ ಪುರಸತ್ತಿರಲಿಲ್ಲ. ಬೆಳಗಿನ ಹೊತ್ತು ಸಿಡಿವ ಅಗ್ನಿಕುಂಡ. ಅವೇನೂ ಕಿತ್ತು ಹೋಗುವಂತಹ ಜಗಳಗಳಲ್ಲ, ಬೀದಿಗೆ ಬಂದ ಬಡಿದಾಟಗಳಲ್ಲ, ಕೋರ್ಟು ಕಛೇರಿ ಹತ್ತಿ ವಿಚ್ಛೇದನ ಕೇಳಿದವಲ್ಲ, ಆದರೆ ಒಳ ಚುಚ್ಚಿದ ಮುಳ್ಳುಗಳು. ಬದುಕಿನ ಖುಷಿಯನ್ನು, ಉಲ್ಲಾಸವನ್ನು, ಉತ್ಸಾಹವನ್ನೆಲ್ಲ ಕದ್ದೊಯ್ದ ಕ್ಷಣಗಳು. ಬೆಳಗಿನ ಸಿಟ್ಟು ಸೆಡವು ಇಡೀ ದಿನ ಇಬ್ಬರ ಮನಸ್ಸಲ್ಲೂ ಅನೇಕ ಬಾರಿ ಕುದಿಯುವುದು. ಕೆಲವೊಮ್ಮೆ ತಣ್ಣಗಾಗಲು ಎರಡು ಮೂರು ದಿನ ಹಿಡಿಸುವುದು. ಅಷ್ಟರಲ್ಲಿ ಮತ್ತೊಂದು ಆಸ್ಫೋಟ.

ಮತ್ತೆ ಫೋನ್ ಹೊಡೆದುಕೊಳ್ಳುತ್ತಿದೆ. ಅರೆ ಈಗ ಯಾರದು?

ಮತ್ತೆ ಅಣ್ಣನ ದನಿ!

“ಚಿಲ್ಬೂ ನಿದ್ದೆ ಬಂದಿತ್ತಾ?' ಕೇಳಿದ. ದನಿ ಮೃದುವಾಗಿತ್ತು.

'ಇಲ್ಲ ಹೇಳೋ..' ಅಂದೆ. ಈ ಬಾರಿ ನಾನು ಪ್ರಯತ್ನಪೂರ್ವಕವಾಗಿ ಕೋಪವನ್ನು ದಮನಿಸಬೇಕಿರಲಿಲ್ಲ. ಬದುಕು ನನ್ನತ್ತ ಅನಂತ ಕೃಪೆತೋರಿದ ಈ ಕ್ಷಣ, ನಾನು ಎಲ್ಲರನ್ನೂ ಕ್ಷಮಿಸಲು ಸಿದ್ಧವಿದ್ದೆ, ನನ್ನನ್ನೂ ಸೇರಿದಂತೆ.

' ಚಿಲ್ಬೂ.. ಯಾಕೋ ನಿನಗೆ ಇವತ್ತು ಹೇಳಬೇಕು ಅನಿಸಿದೆಯೇ...' ಅಣ್ಣ ತಡೆದ, ತಡವರಿಸಿದ. ಮತ್ತೆ ಮೆಲ್ಲನೆ ಹೇಳತೊಡಗಿದ ನನಗೆ ತಿಳಿದಿರದ ಅವನ ಕತೆಯನ್ನು, ಟೂರಿಸ್ಟ್ ವೀಸಾದ ಮೇಲೆ ಹೋದ ಅಣ್ಣ ಅಲ್ಲೇ ತಳವೂರಲು

ಪಡಬಾರದ ಪಾಡು ಪಟ್ಟಿದ್ದ. “ನಾನು ಇಲ್ಲಿಗೆ ಬಂದ ಏಳು ವರ್ಷ ಪ್ರಯತ್ನಿಸಿದೆ, ಅಮೆರಿಕದಲ್ಲಿ ಮೆಡಿಕಲ್ ಪ್ರಾಕ್ಟಿಸ್ ಮಾಡಲು ಬೇಕಾದ ಪರೀಕ್ಷೆ ಪಾಸು ಮಾಡುವುದು ನನ್ನ ಕೈಯಲ್ಲಿ ಆಗಲೇ ಇಲ್ಲವೆ. ಮೊದಲ ಬಾರಿಗೆ ಹೇಳುತ್ತಿದ್ದ. ಕೊಂಚ ತಡೆದ, ತನ್ನೊಳಗೆ ಅಡಗಿಸಿಕೊಂಡ ತನ್ನ ಸೋಲಿನ ಕತೆಗಳನ್ನು ತೆರೆದಿಡುವಾಗ ನಾನು ಅವಕ್ಕೆ ಹೇಗೆ ಪ್ರತಿಕ್ರಿಯಿಸುತ್ತೇನೋ ಎಂಬ ಅಳುಕಿನಲ್ಲಿ. ಮತ್ತೆ ಅವನನ್ನು ಆಡಿ ಒಗೆಯುವೆನೇನೋ ಇನ್ನೂ ಆರದ ಅನುಮಾನದಲ್ಲಿ.

ಆದರೆ ನಾನಿಂದು ಸಿಡಿಯಲಿಲ್ಲ. ಸುಡುವ ಮಾತುಗಳಿರಲಿಲ್ಲ. ನಾನು ನನ್ನೊಳಗೆ ತಣ್ಣಗಾಗಿದ್ದೆ. ಆಸ್ಫೋಟಿಸಲು ಕಾದ ಲಾವಾರಸವಿರಲಿಲ್ಲ. ನನ್ನ ಸುತ್ತ ಬಾಂಬುಗಳು ಸಿಡಿದಂತೆ, ಒಳಗಿನ ಬಿಸಿ ತಣ್ಣಗಾಗಿತ್ತು. ಬದುಕಿನ ನಶ್ವರತೆಯನ್ನು ಈ ಸ್ಮಶಾನ ವೈರಾಗ್ಯದ ಕ್ಷಣದಲ್ಲಿ ನೆನಪಿಸಿತ್ತು. ಅಣ್ಣನ ಮಾತುಗಳನ್ನು ಕಟಕದೆ, ಕುಟುಕದೆ ಆಲಿಸಲು ನಾನು ಇಂದು ಸಿದ್ಧವಾಗಿದ್ದೆ.

ನನ್ನ ಮೌನ ಅವನಿಗೇನು ಅನಿಸಿತ್ತೂ ' ಚೆಲ್ಲೂ ಕೇಳ್ತಾ ಇದ್ದೀಯ..' 'ಹೂಂ ಹೇಳೋ' ಎಂದೆ. ಮತ್ತದೇ 'ಬಾರೋ ಹೋಗೋ ಹೇಳೋ ನಮ್ಮ ಹಳೆಯ ಸಂಬಂಧದ ಕೊಂಡಿಗಳು ಮೆಲ್ಲಮೆಲ್ಲನೆ ಕೂಡಿಕೊಂಡವು, ಸಾವಿರ ಸಾವಿರ



ಮೈಲಿಯಾಚೆಗೆ ಕೈಚಾಚಿ, “ಕೊನೆಗೆ ಹೊಟ್ಟೆ ತುಂಬಿಸಿಕೊಳ್ಳೋಕೆ ಎಂ.ಬಿ.ಬಿ.ಎಸ್. ಓದಿದ ನಾನು ದೊಡ್ಡ ದೊಡ್ಡ ಮಾಲ್‌ಗಳಲ್ಲಿ, ಪೀಜಾ ಅಂಗಡಿಗಳಲ್ಲಿ ಕೌಂಟ ಬಾಯ್ ಆಗಿ ಕೆಲಸ ಮಾಡಿದೆ ಕಣೆ... ಇಷ್ಟೆಲ್ಲ ಪಾಡು ಏಕೆ ಪಡಬೇಕಿತ್ತು. ತೆಪ್ಪಗೆ ಭಾರತಕ್ಕೆ ಬಂದರೆ ಆಗುತ್ತಿರಲಿಲ್ಲ, ನನ್ನೊಳಗೆ ಗುದ್ದಿದ ಪ್ರಶ್ನೆಗಳನ್ನು ಹತ್ತಿಕ್ಕಿದೆ. ಕೊನೆಗೆ ಡಾಕ್ಟರ್ ಆಗಬೇಕು ಅನ್ನೋ ಆಸೆ ಬಿಟ್ಟೆ ಕಣೆ, 'ಮೋಟೆಲ್' ಉದ್ಯಮಕ್ಕೆ ಇಳಿದೆ. ಅದರಲ್ಲಿ ಮುಂದುವರೆದೆ, ಈಗ ಕೈತುಂಬಾ..' ಅಣ್ಣ ಹೇಳುತ್ತಿದ್ದ. ನನ್ನ ಮನಸ್ಸು ಎತ್ತೆತ್ತಲೋ ತೇಲುತ್ತಿತ್ತು.

ಈ ದಿನ, ಈ ಮಧ್ಯರಾತ್ರಿ ಇಷ್ಟು ವರ್ಷಗಳ ಅಂತರದಲ್ಲಿ ಅಣ್ಣ ಏಕೆ ಇದನ್ನೆಲ್ಲ ನನಗೆ ಹೇಳುತ್ತಿದ್ದಾನೆ. ಅಥವಾ ಅವ ಹೇಳಲು ಅಂದೂ ಬಯಸಿದ್ದಿರಬಹುದು. ನಾನು ಕೇಳಲು ಸಿದ್ಧವಿರಲಿಲ್ಲವೆ. ನಾನು ಆಲಿಸಿದ ದಿನ ಅವನ ಮಾತುಗಳು ಕೇಳುತ್ತಿವೆಯೆ? ನಾವು ಆಡದೆ, ಆಲಿಸದೆ ಎಷ್ಟೆಲ್ಲ ಆಸ್ಫೋಟಗಳಿಗೆ ಕಾರಣವಾಗುತ್ತೇವೆ. ಈ ಹೊರಗಿನ ಗದ್ದಲವಲ್ಲ ನಮ್ಮನ್ನು ಕಿವುಡಾಗಿಸಿರುವುದು, ನಮ್ಮೊಳಗಿನ ಗದ್ದಲ.

ನಾನು ಇಲ್ಲಿಯವರೆಗೂ ಕೇಳಿರಲಿಕ್ಕಿಲ್ಲ ಅಲ್ಲವಾ? ಅವನ ಆ ಅಹಂಕಾರವಾಗಿ ಕಂಡ ಮಾತುಗಳು ಬಹುಶಃ ಅವನೊಳಗಿನ ಅಳುಕು, ಪಾಶ್ಚಾತ್ತಾಪಕ್ಕೆ ಹೊದಿಸಿದ ಹುಸಿಕವಚವಾಗಿತ್ತು. ಜೊತೆಯಲ್ಲಿ ಹುಟ್ಟಿದವರು ನಾವು. 'ಸಾಕು

ಕಣೋ ನಿನ್ನ ಉಪದೇಶ ಎಂದು ತಂಗಿಯ ಹಕ್ಕಿನಲ್ಲಿ ತುಸು ದಬಾಯಿಸಿ ಮುಗಿಸಿಬಿಡಬಹುದಿತ್ತು. ಅಷ್ಟು ಆಕ್ರೋಶದಲ್ಲಿ ಕೆರಳಿದ್ದೇಕೆ? ಅಣ್ಣನಿಗೆ ಅವನ ಅರ್ಹತೆ ಮೀರಿದ ಅವಕಾಶ ಸಿಕ್ಕಿತು ಎಂಬ ಅಸೂಯೆ ನನ್ನೊಳಗೆಲ್ಲೋ ಕರಗದೆ ಕುಳಿತು ಬಿಟ್ಟಿತ್ತೆ? ಅಮ್ಮ ಅಪ್ಪನ 'ಹೊರೆ' ಎಲ್ಲ ನನ್ನೊಬ್ಬಳ ಮೇಲೆ ಹೇರಿ, ಅವ ಅಮೆರಿಕೆಯಲ್ಲಿ ಹಾಯಾಗಿದ್ದಾನೆ ಎಂಬ ಆಕ್ರೋಶ ಕೂಡಾ. ನಾನೇಕೆ 'ಅಪ್ಪ ಅಮ್ಮನ ಜವಾಬ್ದಾರಿ ನನ್ನದಲ್ಲ' ಎಂದುಕೊಳ್ಳಬೇಕಿತ್ತು. ನನ್ನ ಭಾವನೆಯಲ್ಲೂ ತಪ್ಪಿತ್ತಲ್ಲವೆ.

“ಹೋಗಲಿ ಬಿಡೋ ಎಂದೋ ನಡೆದದ್ದು ಇವತ್ಯಾಕೆ ನೆನೆದು ನೋಯೋದು. ನೀನು ಈಗ ಚೆನ್ನಾಗಿದ್ದೀಯಲ್ಲ ಅಷ್ಟು ಸಾಕು..” ಸಮಾಧಾನದಿಂದ ಹೇಳಿದೆ. ಅವನಿಗೂ ಮನಸ್ಸು ಹಗುರಾದಂತೆ ಇತ್ತು. 'ನಿನ್ನ ಕೆಲಸ ಹೇಗಿದೆ? ಚೈತ್ರಾಗೆ ಗಂಡು ಎಲ್ಲಾದರೂ ನೋಡಿದ್ದೀಯ..' ಒಂದಿಷ್ಟು ಅದೂ ಇದೂ ಮಾತಾಡಿದ. ನಡುವೆ ನಿಂತ ಹಗೆಯಾಗಿ, ಹೊಗೆಯಾದ ಉಸಿರು ಕಟ್ಟಿದ ವರ್ಷಗಳು ಮೆಲ್ಲನೆ ಕರಗಿದ್ದವು. 'ವಿಜಿ, ಒಂದಿಷ್ಟು ದಿನ ರಜೆ ಹಾಕಿ ಕಿರಣ್, ಚೈತ್ರಾನಾ ಕರಕೊಂಡು ಬಾರೆ. ಒಂದು ಸುತ್ತು ಅಮರಿಕ ಸುತ್ತಿಸಿ ಕಳಿಸ್ತೇನೆ' ಅಂದ. 'ಬರೋಣೇಳೋ ಏನು ಅವಸರ, ನೀನು ಬಾ, ಭಾರತಕ್ಕೆ ಬಂದು ಎಷ್ಟು ವರ್ಷ ಆಯಿತು ಹೇಳು..'

ಹೆಪ್ಪುಗಟ್ಟಿದ ಮೌನ ಮುರಿದಿತ್ತು, ಮಾತಾಗಿ ಹರಿದಿತ್ತು, ಸಂವಾದವಾಗಿತ್ತು. ಮತ್ತೆ ನನ್ನ ಅಣ್ಣನ ನಡುವೆ ಕಹಿ ನೆನಪುಗಳ ತೆರೆ ಸರಿದು ಮನಸ್ಸು ಮಗುವಾಗಿತ್ತು, ಬಾಲ್ಯದ ಗಲ್ಲಿಗಳಲ್ಲಿ ಅಣ್ಣನ ಕೈ ಹಿಡಿದು ಓಡಿತ್ತು.



ಕಾಯ್ದುಕೊಳ್ಳದ ಸಂಬಂಧಗಳು ಸದಾ ಆಸ್ಫೋಟಿಸಬಲ್ಲವು. ಸುಡುವ ಬೆಂಕಿಯಾಗಿ, ಒಣ ಹುಲ್ಲ ಮೆದೆಯಾಗಿ, ಸಣ್ಣ ಕಡ್ಡಿ ಗೀರಿಟ್ಟರೂ ಸಾಕು ಸ್ಫೋಟಿಸಿ ಕಾಡ್ಗಿಚ್ಚಾಗಬಲ್ಲವು.

ಕಾಯ್ದುಕೊಳ್ಳದ ಸಂಬಂಧಗಳು ನನ್ನ ಕಿರಣನ ನಡುವೆ, ಅಪ್ಪ ಮಕ್ಕಳ ನಡುವೆ, ಅಣ್ಣ ತಂಗಿಯರ ನಡುವೆ. ಅದರಾಚೆಗೆ ಮನುಷ್ಯ ಮನುಷ್ಯನ ನಡುವೆ, ಜಾತಿ ಜಾತಿಗಳ ನಡುವೆ, ಧರ್ಮ ಧರ್ಮಗಳ ನಡುವೆ. ಮಾತಾಗದ, ಸಂವಾದವಿಲ್ಲದ ಸಂಬಂಧಗಳು ಎದೆಯಲ್ಲಿ ಹಗೆಯಾಗಿ, ಕುದಿದು ಹಬೆಯಾಡುತ್ತವೆ, ಸಿಡಿಯುತ್ತವೆ ಮೂಲೆ ಮೂಲೆಗಿಟ್ಟ ಬಾಂಬುಗಳಾಗಿ,

ಅಣ್ಣನೊಡನೆ ಮಾತನಾಡಿ ಬಂದು ಹಾಸಿಗೆಯ ಮೇಲೆ ಮಲಗಿದಾಗ, ಪ್ರಕ್ಷುಬ್ಧ ಮನಸ್ಸು ಶಾಂತವಾಗಿತ್ತು. ಮನಸ್ಸಿನಲೆಲ್ಲ ಮೊದೆಯಾಗಿ ಮೆದೆಯಾಗಿ ಎದ್ದ ಕಳೆ ಕಿತ್ತು ಕೊಳೆ ತೊಳೆದು ನಿಚ್ಚಳವಾದ ಭಾವ. ಹೊಸದೊಂದು ಸಸಿ ನೆಟ್ಟ ಹಸನಾದ ಹಗುರಾದ ಭಾವ.

* * * *

ಮತ್ತೊಂದು ಬೆಳಗು, ಕತ್ತಲೆಯಲ್ಲೇ ಆರಂಭವಾದ ದಿನ ನನ್ನದು. ಮತ್ತೆ ತಡವಾಗುತ್ತಿತ್ತು. ಇವತ್ತು ಕಿರಣ್ ಬೇಗ ಎದ್ದ ಅನಿಸಿತು. ನಾನು ಸಾರು ಇಳಿಸುತ್ತಿದ್ದಂತೆ, ಆರಿಸಲು ಪಾತ್ರೆಗೆ ಹಾಕಿ ಹೊರಗೆ ಮೇಜಿನ ಮೇಲೆ ಇಟ್ಟ. ಹೊರಟವ ಬಾಗಿಲ ಬಳಿ ಒಂದು ಕ್ಷಣ ತಡೆದ, ಇನ್ನೂ ಅಡಿಗೆ ಮನೆಯಲ್ಲಿದ್ದ ನನ್ನತ್ತ ತಿರುಗಿದ ' ಚೆಲ್ವೂ.. ಕೂಗಿದ. ಎಷ್ಟೋ ವರ್ಷಗಳ ನಂತರ ಮತ್ತೆ ಅವನ ಬಾಯಲ್ಲಿ ನನ್ನ ಹೆಸರು! ಅಚ್ಚರಿಯಿಂದ ತಿರುಗಿದೆ, ಮೆಲ್ಲನೆ ಮುಗುಳ್ನಕ್ಕೆ ಬರ್ತೀನಿ..' ಹೇಳುತ್ತಾ ನಿಧಾನವಾಗಿ ಬಾಗಿಲನ್ನು ಮುಂದಕ್ಕೆ ಎಳೆದುಕೊಂಡು ಹೊರ ನಡೆದ.

ನಿನ್ನೆಗಳ ಹೊರೆ ಇಳಿಸಿ ಹೊರಟಿದ್ದೆವು, ನಾಳೆಗಳಿಗೆ ಕಾಲಿಟ್ಟು,

## ಇತಿಹಾಸದ ಪುಟಗಳೂ ವಿಯಟ್ನಾಂನ ಆ ಹೆಣ್ಣುಮಗಳೂ...

**- ಜಯಶ್ರೀ ಕಾಸರವಳ್ಳಿ**

ಆ ಅರೆಗತ್ತಲಲ್ಲಿ ನನ್ನ ಮುಖವನ್ನು ಅವಳಿಗೊಪ್ಪಿಸಿ ಕುಳಿತಿದ್ದೆ. ಅವಳು ನನ್ನೆದುರು ನಾ ಮರೆತ ಇತಿಹಾಸದ ಪುಟಗಳನ್ನು ಮಗುಚುತ್ತಿದ್ದಳು. ಕೋಳಿ ಕೆದಕಿದಂತೆ ಬೆದಕಿ, ಮಣ್ಣಿನಡಿ ಹುಗಿದುಹೋಗಿದ್ದ ಗತವನ್ನು ದೊಗೆದು ಅವಶೇಶದಡಿಯಲ್ಲುಳಿದ ಅಳಿದುಳಿದ ಬದುಕನ್ನು ಕೆತ್ತಿ ನನ್ನೆದುರು ಪಿರಮಿಡ್ ಕಟ್ಟುತ್ತಿದ್ದಳು.

ಮದರಾಸಿನಲ್ಲಿ ಮೇ ತಿಂಗಳ ಆರ್ಭಟ, ಜೀವವಿರುವ ಪ್ರತಿಯೊಂದನ್ನೂ ವಿನಾ ಕಾರಣ ಬೇಯಿಸುವುದೇ ತನ್ನ ಕರ್ತವ್ಯವೆಂಬಂತೆ ದಿನವಿಡೀ ಕೆಂಡದಂತೆ ಹೊತ್ತುರಿಯುವ ಪ್ರಖರ ಸೂರ್ಯನ ದಗೆ ಹೊಟ್ಟೆಯೊಳ ಸೇರಿ ನಮ್ಮನ್ನೇ ಉರಿಸಿಬಿಡಬಹುದೆನ್ನುವಷ್ಟು ಬದುಕು ನಿಜಕ್ಕೂ ದುಸಾಧ್ಯವೆನ್ನಿಸುತ್ತಿದ್ದಂತಹ ಗಳಿಗೆ, ಮದರಾಸಿಗರು ಕತ್ತಿರಿ ಮಾಸದಲ್ಲಿ ಬರುವ ಈ ಇಪ್ಪತ್ತಾರು ದಿನಗಳ 'ಕತ್ತಿರಿವೇಯಿಲ್ ಬಿರು ಬಿಸಿಲನ್ನು ಬೆಚ್ಚಿ ಬೀಳುವಂತೆ ವರ್ಣಿಸುವ ಅಗ್ನಿ ನಕ್ಷತ್ರಂನ ಹಾವಳಿ ಅಷ್ಟರಲ್ಲಾಗಲೇ ವಾತಾವರಣದಲ್ಲಿ ದಾಳಿಯಿಟ್ಟಾಗಿತ್ತೆಂದು ಕಾಣುತ್ತದೆ. ಅದರ ಸೂಚನೆಯೆಂಬಂತೆ ಈಗೊಂದೆರಡು ದಿನಗಳಿಂದ ನಲವತ್ತರ ಗಡಿ ದಾಟಿದ ತಾಪಮಾನದಲ್ಲಿ ಕೊತಕೊತ ಕುದಿಯುತ್ತಿರುವ, ಮದರಾಸಿಗೇ ವಿಶೇಷವೆನ್ನಿಸುವ ಬೇಸಿಗೆಯ ಒಂದು ಮಧ್ಯಾಹ್ನವದು. ಏಸಿ ಕೆಟ್ಟು ಕುಳಿತಿತ್ತು. ಸಾಲದಕ್ಕೆ ಅದೇ ಸಮಯಕ್ಕೆ ಕರೆಂಟೂ ಕೈ ಕೊಟ್ಟಿತ್ತು. ಜನರೇಟರ್ ಸಹಾಯದಿಂದ ತಿರುಗುತ್ತಿದ್ದ ಫ್ಯಾನ್ ತನ್ನ ಹೊಟ್ಟೆಯಾಳದಲ್ಲಿ ಮಡುವುಗಟ್ಟಿದ್ದ ಓಬಿರಾಯನ ಕಾಲದ ದುಃಖವನ್ನೆಲ್ಲಾ ಹೊರದಬ್ಬುವಂತೆ ಭಯಂಕರ ಸದ್ದು ಮೂಡಿಸುತ್ತಾ ಚರಿತ್ರೆಯಲ್ಲಿ ತಟಸ್ಥಗೊಂಡ ವಿಷಯಗಳನ್ನೆಲ್ಲಾ ಗಾಳಿಗೆ ಹಾರಿಸುತ್ತಿತ್ತು.

ನನ್ನ ಮುಖಕ್ಕೆ ಮಾತ್ರ ಪ್ರಖರ ದೀಪ ಬಿಟ್ಟು, ಬೇರೆ ಯಾವ ದೀಪವೂ ಇರದೇ ಸುತ್ತಲೂ ಢಾಳ ಕಪ್ಪು ತುಂಬಿದ ಆ ಕತ್ತಲ ಕೂಪದಲ್ಲಿ ಅವಳ ಮುಖ ಸರಿಯಾಗಿ ಕಾಣುತ್ತಿರಲಿಲ್ಲ. ಅಥವಾ ಹೊತ್ತಲ್ಲದ ಹೊತ್ತಿನಲ್ಲಿ ಪಾರ್ಲರ್ ಒಳ ಹೊಕ್ಕು, ಗಂಟೆಗಟ್ಟಲೆ ಕರೆಂಟಿಗಾಗಿ ವಿನಾ ಕಾರಣ ಬೆವರುತ್ತಾ ಕೂತಿದ್ದ ನಂಗೆ ಕೋಣೆಯೊಳಗೆ ಹೋಗುವಷ್ಟೊತ್ತಿಗೆ ಯಾರ ಮುಖವನ್ನಾಗಲಿ ನೋಡುವ ಇರಾದೆ ಸಂಪೂರ್ಣ ಬತ್ತಿ ಹೋಗಿತ್ತೋ ಏನೋ! ಅತಿ ಹೆಚ್ಚು

ಬೆಳಕಿನಲ್ಲಿ ಕಣ್ಣು ಕಿರಿದುಗೊಳಿಸಿ ಮಗ್ಗುಲು ಹೊರಳಿ ನೋಡಿದಾಗ ಒಂದು ಚಪ್ಪಟೆ ಮುಖವಷ್ಟೇ ಕಂಡಂತೆ ಈಗ ನೆನಪು. ಅದೂ ಕೆಲವು ಕ್ಷಣಗಳಷ್ಟೇ. ತನ್ನ ಕಾರ್ಯ ಶುರು ಮಾಡುವುದಕ್ಕೆ ಮೊದಲೇ ಅವಳು ನನ್ನ



ಕಣ್ಣಿಗೆ ಕೊರೆಯುವ ಕಾಟನ್ ಬ್ಯಾಂಡ್ ಇಟ್ಟಿದ್ದರಿಂದ ಕಿವಿ ಮಾತ್ರ ಮುಖ್ಯ ಸಂಮೋಹಿನಿಯಾಗಿತ್ತು.

ಟ, ಡ, ತ, ಸಕಾರಗಳನ್ನೆಲ್ಲಾ ವಿಚಿತ್ರವಾಗಿ ಉಲ್ಲೇಖಿಸುತ್ತಾ ತನ್ನದೇ ಆದ ಒಂದು ಇಂಗ್ಲೀಷಿನಲ್ಲಿ ಅವಳು ಮಾತನಾಡುತ್ತಿದ್ದಳು. ಭೂತ ಹೊದ್ದ ಕೌದಿಯೊಳಗೆ ಮಕಾಡೆ ಮಲಗಿದ್ದ, ಎಲ್ಲೂ ದಾಖಲಾಗದ ಗಾಢ ವಿಷಾದದ ರಕ್ತದಲ್ಲಿ ಅದ್ದಿದ್ದ ಚರಿತ್ರೆಯ ಹಾಳೆಗಳನ್ನು ನಿರ್ಲಿಪ್ತವಾಗಿ ಬಿಚ್ಚುತ್ತಿರುವಾಗ, ಅದಕ್ಕೆ ಹೇಗೆ ಪ್ರತಿಕ್ರಿಯಿಸಬೇಕೆಂದೇ ತಿಳಿಯದೆ ಮಾತು ಮರೆತವಳಂತೆ ಕುಳಿತಿದ್ದೆನೆಂದು ಅಸ್ಪಷ್ಟ ನೆನಪು. ಮತ್ತು ಇದೇ ಕತೆಯನ್ನು ತನ್ನ ಮುಂದೆ ಮುಖವೊಡ್ಡಿ ಕೂರುವ ಪ್ರತಿ ಗಿರಾಕಿಗೂ ಹೇಳಿ ಅವಳು ಅದೆಷ್ಟು ನಿರ್ಭಾವುಕಳಾಗಿದ್ದಳೆಂದರೆ, ಆ ಮೆಲುದನಿ ಕಿವಿ ಹೊಕ್ಕು ಭಾವನೆಯೊಡನೆ ಬೆರೆಯುವುದಕ್ಕಿಂತ ಹೆಚ್ಚಾಗಿ ನೇರ ಹೃದಯ ಸೇರಿ ಹೆಪ್ಪುಗಟ್ಟುತ್ತಿತ್ತು ಆಗಲೇ ಮಂದವಾಗುತ್ತಾ ಬಂದ ಎಂದಿನದ್ದೋ ಗಾಯದ ದಪ್ಪ ರಕ್ತ ಬಿದ್ದ ಬಿದ್ದಲೆಲ್ಲಾ ಗಟ್ಟಿಯಾಗಿ ಹುಂಡುಂಡು ಕಲೆಯುಳಿಸಿ ಹೋಗುವಂತೆ!

ಪ್ರಾಯಶಃ ಅವಳನ್ನು ಅಂತಹ ಒಂದು ಅನಿರೀಕ್ಷಿತ ಸ್ಥಳದಲ್ಲಿ ಸಂಧಿಸಿದ್ದಕ್ಕೋ ಏನೋ, ಮೊದಲ ಬಾರಿ ಅವಳನ್ನು ಕಂಡಾಗ ಬೇರೆ ದೇಶದ ಹೆಣ್ಣಿನಂತೆ ಅವಳಂತೂ ನನ್ನ ಕಣ್ಣಿಗೆ ಕಂಡಿರಲಿಲ್ಲ. ಮಸುಕು ಬೆಳಕಿನಲ್ಲಿ ಅರೆಕೊರೆಯಾಗಿ ಕಂಡ, ಸುಲಭವಾಗಿ ಟಿಬೇಟಿಯನ್ನರೆಂದು ಗುರುತಿಸಿಬಿಡುವ ಚಹರೆಯಿದ್ದ ಆಕೆಯನ್ನು ಭಾರತದ ಮತ್ತುಳಿದ ಪ್ರಾಂತ್ಯದಿಂದ ಹೊರ ಉಳಿದುಬಿಡುವ ಉತ್ತರ ಈಶ್ಯಾನದ ಹುಡುಗಿಯೆಂದು ಸಾಮಾನ್ಯವಾಗಿ ಎಲ್ಲರೂ ಅಂದುಕೊಳ್ಳುವಂತೆ ನಾನೂ ಭಾವಿಸಿಬಿಡುತ್ತಿದ್ದೆನೇನೋ! ಅವಳ ಅಸಹಜ ರೀತಿಯ ಸ್ವರೋಚ್ಚಾರ, ಅಸ್ಕಲಿತ ತಪ್ಪು ಭಾಷೆ, ಅಪರೂಪದ ಹೆಸರು, ಅಪರಿಚಿತ ಊರು ಕೇರಿಗಳನ್ನು ಹೇಳಿಕೊಳ್ಳದಿದ್ದರೆ, ನಮ್ಮವರೇ ಯಾರೋ ಎಂದುಕೊಂಡು ನಾನೂ ಆಕೆಯೊಡನೆ ಮಾತಿನ ಗೊಡವೆಗೆ ಹೋಗುತ್ತಿರಲಿಲ್ಲವೇನೋ!

ಎಂತಾ ವಿಚಿತ್ರವಲ್ಲವೇ? ಗಂಟೆಗಟ್ಟಲೆ ನಮ್ಮ ಕೈ ಕಾಲುಗಳನ್ನು ತಮ್ಮ ಕೈಯಲ್ಲಿ ಹಿಡಿದು ಅದಕ್ಕೊಂದು ಸ್ವರೂಪ ಕೊಡುವವರನ್ನೂ, ಮುಖವನ್ನು ಉಜ್ಜಿ ಉಜ್ಜಿ ತಿಕ್ಕಿ ಹೊಳಪು ತರುವವರನ್ನೂ, ಕೇಶವನ್ನು ಕತ್ತರಿಸಿ,

ತರಹೇವಾರಿ ವಿನ್ಯಾಸವನ್ನು ನೀಡಿ ನಮ್ಮ ಸೌಂದರ್ಯವನ್ನು ವೃದ್ಧಿಸುವವರನ್ನೂ ನಮ್ಮ ಜೀವನಪರ್ಯಂತ ಅನಾಮಧೇಯರಾಗಿಯೇ ಕಂಡು, ನಮ್ಮ ಬದುಕಿನಾಚೆಯೇ ಇಟ್ಟುಬಿಡುತ್ತೇವೆ.

'ನನ್ನ ಹೆಸರು ಹ್ಯಾಂಗ್! Huong! ನನ್ನ ಭಾಷೆಯಲ್ಲಿ ಹೂ, ರೋಜಾ ಹೂ. ತಿಳಿಗುಲಾಬಿ ಬಣ್ಣದ ರೋಜಾ ಹೂ ಎಂದರ್ಥ! ವಾತ್ ಯುವರ್ ನೇಮ್ ಮಿಷ್?' ಎಂದು ಮಾತಿಗೆ ಮೊದಲಿಟ್ಟವಳು ಅವಳೇ.

ಹೇಳಿದೆ.

'ವಾತ್ ಯೂ ದೂಂಯಿಂಗ್ ಮಿಷ್?'

ಮದರಾಸಿನ ಒಂದು ಶಾಲೆಯಲ್ಲಿ ಶಿಕ್ಷಕಿಯಾಗಿ ನಾನು ಕಾರ್ಯ ನಿರ್ವಹಿಸುತ್ತಿದ್ದೆ. ಮರುದಿನ, ಸೋಮವಾರ ನಮ್ಮ ಶಾಲೆಯಲ್ಲಿ ಒಂದು ವಿಶೇಷ ಕಾರ್ಯಕ್ರಮವಿತ್ತು.



ಅವತ್ತಿನ ಬೆಳಗ್ಗಿನ ಸೆಷನ್‌ನಲ್ಲಿ ನನಗೊಂದು ಪೇಪರ್ ಪ್ರೆಸೆಂಟೇಷನ್ ಮಾಡುವ ಕಾರ್ಯಭಾರವನ್ನು ನನ್ನ ಮೇಲ್ವಿಚಾರಕಿ ವಹಿಸಿದ್ದಳು. ಸ್ವಲ್ಪ ಚಂದ ಕಾಣುವ ಆಸೆಯಿಂದ, ಮದರಾಸಿನ ಬಿಸಿಲಿಗೆ ಕಪ್ಪೆತ್ತಿ ಹೋದ ಮುಖವನ್ನು ಒಂಚೂರು ಸುಂದರಗೊಳಿಸುವ ಉದ್ದೇಶದಿಂದ ಭಾನುವಾರ ಊಟದ ನಂತರ, ಬೀದಿ ಬೀದಿ ಅಲೆದು, ಉರಿ ಮಧಾಹ್ನದಲ್ಲಿ ತೆರೆದ ಅದೊಂದೇ ಪಾರ್ಲರನ್ನು ಹೊಕ್ಕಿದ್ದೆ. ನಿಜ ಹೇಳಬೇಕೆಂದರೆ, ಬೀದಿ ಬೀದಿ ಅಲೆದು ಬಿಸಿಲಿಗೆ ಬಸವಳಿದು ಹೋಗಿದ್ದ ನಂಗೆ ಮಾತು ಬೇಕಿರಲಿಲ್ಲ. ಅಡ್ಯಾರ್‌ನ ಒಂದು ಶಾಪಿಂಗ್ ಕಾಂಪ್ಲೆಕ್ಸ್‌ನ ಒಳಗೆಲ್ಲೋ ಸಂಧಿಮೂಲೆಯಲ್ಲಿದ್ದ ಆ ಬ್ಯೂಟಿ ಪಾರ್ಲರ್ ಮುಖ್ಯ ರಸ್ತೆಗೆ ಕಾಣದೇ ಸಾಕಷ್ಟು ನನ್ನನ್ನು ಕಂಗೆಡಿಸಿತ್ತು.

ಗಲ್ಲದ ಮೇಲೆ ಕುಳಿತ ಪಾರ್ಲರ್ ಒಡತಿ ನಾನು ಮಾಡಿಸಿಕೊಳ್ಳಲು ಹೊರಟ ಶೋಡಷೋಪಚಾರದ ಉದ್ದ ಪಟ್ಟಿ ನೋಡಿದ್ದೇ, 'ನೋ ಪವರ್ ಮೇಡಂ, ನೀವಿನ್ನೂ ಅರ್ಧ, ಮುಕ್ಕಾಲು ಗಂಟೆ ಕಾಯಬೇಕು. ಈಗಾಗಲೇ ಕಾಯುತ್ತಿರುವ ಕಸ್ಟಮರ್ಸ್ ನಾಲ್ಕೈದು ಜನರಿದ್ದಾರೆ. ಕಾಯಲು ತಯಾರಿದ್ದರೆ ವೈಟ್ ಮಾಡಿ, ಅರ್ಜೆಂಟ್ ಇದ್ರೆ ಬೇರೆಲ್ಲಾದ್ರೂ ಹೋಗಿ!' ಎಂದು ಶುದ್ಧ ಇಂಗ್ಲೀಷ್‌ನಲ್ಲಿ ತನ್ನ ವ್ಯಾವಹಾರಿಕ ಪಾಂಡಿತ್ಯವನ್ನು ತೋರಿದ್ದಳು.

ಮದರಾಸ್ ನನಗಿನ್ನೂ ಹೊಸತು. ಈ ಒಂದು ಪಾರ್ಲರ್‌ಗಾಗಿಯೇ ಬಿಸಿಲಿನಲ್ಲಿ ಸಾಕಷ್ಟು ಅಲೆದಿದ್ದ ನನಗೆ ಮತ್ತೊಂದು ಪಾರ್ಲರ್ ಹುಡುಕಿಕೊಂಡು ಹೋಗುವ ವ್ಯವಧಾನವಿರಲಿಲ್ಲ. ಅಲ್ಲದೆ ಈಗೊಂದು ಇಪ್ಪತ್ತೈದು, ಮೂವತ್ತು ವರುಷಗಳ ಹಿಂದೆ ಬೆಂಗಳೂರಿನ ಗಲ್ಲಿ ಗಲ್ಲಿಗಳಲ್ಲಿ ಇರುವಂತೆ ಮದರಾಸ್‌ನ ಸಂದಿಮೂಲೆಗಳಲ್ಲೇನೂ ಬ್ಯೂಟಿ

ಪಾರ್ಲರ್‌ಗಳಿರಲಿಲ್ಲ. ಹುಡುಕಿಕೊಂಡು ಹೋದರೂ ಇರುವ ಬೆರಳೆಣಿಕೆಯ ಪಾರ್ಲರ್‌ಗಳು ನಮ್ಮ ಬೇಡಿಕೆಗಳನ್ನು ಕ್ಷಣಾರ್ಧದಲ್ಲಿ ಈಡೇರಿಸುವುದಕ್ಕೇನೂ ತಯಾರಾಗಿ ನಿಂತಿರುತ್ತಿರಲಿಲ್ಲ.

ಅವಳ ಕಡಕ್ ಮಾತಿನಿಂದ ಇರುಸುಮುರಿಸಾದರೂ ಗತಿಯಿಲ್ಲದೆ ಕಾಯುತ್ತಾ ಕುಳಿತೆ. ಒಂದು ಗಂಟೆ, ಇಪ್ಪತ್ತೆಂಟು ನಿಮಿಷ, ಹದಿನಾರು ಸೆಕೆಂಡಿನ ನಂತರ 'ಇನ್ನೂ ಕರೆಂಟ್ ಬಂದಿಲ್ಲ. ಜನರೇಟರ್ ಆನ್ ಆಗಿದೆ. ರೂಮ್ ಲೈಟ್ ಹಾಕ್ಕೋಕ್ಕಾಗಲ್ಲ. ಏಸಿ ಕೆಟ್ಟಿದೆ. ಫ್ಯಾನ್ ಇದೆ. ಫೇಶಿಯಲ್ ಬೇಕಾದ್ರೆ ಮಾಡಿಸಿಕೊಳ್ಳಬಹುದು. ಅದೂ ಹರ್ಬಲ್ ಫೇಶಿಯಲ್ ಆದ್ರೆ ಮಾತ್ರ..' ಎಂದು ಒಡತಿ ಟಪಟಪ ನುಡಿದಾಗ, ನನಗೆ ಅಷ್ಟೆಲ್ಲಾ ಆಯ್ಕೆ ಪ್ರಶ್ನೆಗಳಿರಲಿಲ್ಲವಾದ್ದರಿಂದ ಅವಳು ಹೇಳಿದ್ದಕ್ಕೆಲ್ಲಾ ತಲೆಯಾಡಿಸಿ ಒಳ ನಡೆದಿದ್ದೆ. ಆಗಲೇ ಒಂದಿಬ್ಬರು ಗಿರಾಕಿಗಳು ಕಾದು ಕಾದು ಎದ್ದು ಹೋಗಿದ್ದರು.

ಒಳಗೋ ಕತ್ತಲೋ ಕತ್ತಲು. ಗಾಳಿಯಾಡದ ಕೋಣೆಯೊಳಗೆ ಮಣಕಲು ವಾಸನೆ. ಅಸ್ಪಷ್ಟವಾಗಿ ಗೋಚರಿಸುತ್ತಿದ್ದ ಕುರ್ಚಿ, ಕನ್ನಡಿಗಳು, ತೆರೆ ಇಳಿಬಿಟ್ಟ ಕಿಟಕಿಗಳು, ನನ್ನ ಹಿಂದೇ ಗಪ್ಪಂತ ಮುಚ್ಚಿಕೊಂಡ ಬಾಗಿಲು, ಹಬೆಯಲ್ಲಿ ಉಬ್ಬೆ ಹಾಕಿದಂತಿರುವ ಕೋಣೆಯೊಂದಕ್ಕೆ ಕಣ್ಣು ಕಿರಿದುಗೊಳಿಸಿ ಕತ್ತಲಿಗೆ ಹೊಂದಿಕೊಳ್ಳುತ್ತಿದ್ದಂತೆ ಫಕ್ಕನೆ ಮುಖದ ಹತ್ತಿರ ಒಂದು ದೀಪ ಹತ್ತಿಕೊಂಡಿತ್ತು, ಮರುಕ್ಷಣ ಗಡಗಡ ಸದ್ದಿನೊಂದಿಗೆ ಫ್ಯಾನ್ ತಿರುಗತೊಡಗಿತು.



'ವಣಕ್ಕಂ! ವಾತ್ ಯೂ ವಾಂತ್ ಮೀ ದೂ ಮಿಷ್?' ಒಂದು ಕ್ಷೀಣ ದನಿ ಕತ್ತಲು ಸೀಳಿಕೊಂಡು ಬಂದಿತ್ತು. ತದ ನಂತರ ಬೆವರಿನಲ್ಲಿ ಮುದ್ದೆಯಾಗಿ ನಿಂತ ಆಕೆಯ ಪುಟಾಣಿ ಆಕೃತಿ ಗೋಚರಿಸಿತ್ತು. ನಾನಿನ್ನೂ ಸುಧಾರಿಸಿಕೊಂಡು ಉತ್ತರಿಸುವಷ್ಟರಲ್ಲಿ ಅವಳ ಮತ್ತೊಂದು ಪ್ರಶ್ನೆ....

ಶಾಲೆಯಲ್ಲಿ ಟೀಚರ್ ಎಂದೆ. ಅವಳ ಕುತೂಹಲ ಇಮ್ಮಡಿಯಾದಂತೆ ಅನ್ನಿಸಿತು.

'ವಾತ್ ದೂ ತೀಚ್ ಮಿಷ್!' ಕುರ್ಚಿ ತೋರಿ ಕೂರಲು ಹೇಳುತ್ತಾ ಕೇಳಿದಳು. ಸಣ್ಣ ಧ್ವನಿಯಲ್ಲಿ ಕೀಚ್ ಕೀಚೆನ್ನುವಂತೆ ಹೊರಡುತ್ತಿದ್ದ ಅವಳ ಮಾತು ನನಗೆ ತಕ್ಷಣ ಅರ್ಥವಾಗುತ್ತಿರಲಿಲ್ಲ. ಅದನ್ನು ಅರ್ಥೈಸಿಕೊಂಡು ನಾನು ಉತ್ತರಿಸುವುದರೊಳಗೆ ಅವಳು ಮುಂದಿನ ಪ್ರಶ್ನೆಗೆ ಜಾರುತ್ತಿದ್ದಳು. ಶಾಲೆಯ ಹೆಸರು, ಅದು ಎಲ್ಲಿ ಬರುತ್ತೆ, ಸಿಬಿಎಸ್ಸಿ ಯಾ ಸ್ಟೇಟ್ ಸಿಲಬಸ್ಸಾ, ಒಂದೊಂದು ತರಗತಿಯಲ್ಲಿ ಎಷ್ಟು ಮಕ್ಕಳು, ಸಂಬಳವೆಷ್ಟು...

ಮುಖವನ್ನು ಸರಿಯಾಗಿ ಬೆಳಕಿಗೆ ತಿರುಗಿಸಿಕೊಳ್ಳುತ್ತಾ ವಿಚಾರಿಸುತ್ತಿದ್ದಳು. ಅವಳ ವಿಚಿತ್ರ ಉಚ್ಚಾರಣೆ, ಕ್ರಿಯಾಪದರಹಿತ, ವ್ಯಾಕರಣರಹಿತ, ವಿಭಕ್ತಿರಹಿತ ಇಂಗ್ಲೀಷ್ ನೇರ ತಲೆಯೊಳಗೆ ನಾಟದೆ ಎಲ್ಲೆಲ್ಲೋ ಚಲಿಸಿ, ಯಾರೋ ನನ್ನ ಹೊಟ್ಟೆಯೊಳಗೆ ಕೈ ಹಾಕಿ ತಿರುಚಿದಂತಾಗುತ್ತಿತ್ತು.

ಅದ್ಯಾಕೋ ನನಗೂ ಬ್ಯೂಟಿ ಪಾರ್ಲ್ರಗಳಿಗೂ ಮೊದಲಿನಿಂದಲೂ ಆಗಿಬರುತ್ತಿರಲಿಲ್ಲ. ಈ ಹಿಂದೆಂದೂ, ಯಾವತ್ತೂ ಬ್ಯೂಟಿ ಪಾರ್ಲ್ರಗಳಿಗಾಗಿ ಅಷ್ಟಾಗಿ ಅಲೆದಿರದ ನನ್ನ ದೃಷ್ಟಿಯಲ್ಲಿ, ಪಾರ್ಲಗಳಲ್ಲಿ ಕೆಲಸ ಮಾಡುವವರೆಲ್ಲಾ ನಾವು ಕೊಡುವ ಭಾರೀ ಮೊತ್ತವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುವವರಾದ್ದರಿಂದ ಅವರು ತಮ್ಮನ್ನು ಹುಡುಕಿಕೊಂಡು ಬರುವ ಪ್ರತಿ ಗಿರಾಕಿಯನ್ನೂ ಅತ್ಯಂತ ನಯವಾಗಿ ಮಾತನಾಡಿಸಿ ಓಲೈಸಿಕೊಳ್ಳಲು ಪ್ರಯತ್ನಿಸುತ್ತಾರೆನ್ನುವುದು ನನ್ನ ಅಭಿಪ್ರಾಯ. ನಾವು ಬದುಕಿರುವವರೆಗೂ ಬೇರೆ ಯಾವ ಪಾಲರ್‌ಗಳಿಗೂ ಅಲೆಯದೇ ತಮ್ಮನ್ನಷ್ಟೇ ಹುಡುಕಿಕೊಂಡು ಬರಬೇಕೆಂಬ ಮುಂದಾಲೋಚನೆಯಿಂದಲೇ ಅವರು ಅಷ್ಟೊಂದು ಆಪ್ತರೆನ್ನುವಂತೆ ನಮ್ಮೊಡನೆ ಒಡನಾಡುವರೆಂಬ ಗುಮಾನಿ ಬೇರೆ. ಆದ್ದರಿಂದ ಅತ್ಯಂತ ಸಹಜವಾಗಿ ಎಷ್ಟೋ ವರುಷದ ಆತ್ಮೀಯಳಂತೆ ನಿರಾಯಾಸವಾಗಿ ನನ್ನೊಡನೆ ಅವಳು ಮಾತಿಗಿಳಿದರೂ ನಾನು ಅನುಮಾನದಿಂದ ಎಂದಿನ ಅದೇ ಲೆಕ್ಕಾಚಾರದಲ್ಲಿ ಅವಳ ಮುಂದೆ ಸ್ವಲ್ಪ ಬಿಗಿಯಾಗಿಯೇ ಕುಳಿತಿದ್ದೆ.

ಅಲ್ಲದೆ ಅವಳ ಬಾಯಿಂದ ವಿಪರೀತ ದುರ್ನಾತ ಬೇರೆ ಬರುತ್ತಿತ್ತು. ಆಕೆ ಬಾಯಿ ತೆರೆಯದೆಯೂ ಬರುತ್ತಿದ್ದ ಆ ಪುರಾತನ ಕಮಟು ನಾತ ಎಂದೋ ನನ್ನ ಕಬೋರ್ಡ್‌ನಲ್ಲಿ ಸತ್ತು, ಕೊಳೆತ ಸ್ಥಿತಿಯಲ್ಲಿ ದೊರೆತ ಇಲಿಯ ಕಳೇಬರದ ನೆನಪನ್ನು ದಬಕ್ಕನೇ ತಂದಿತ್ತು. ನಾನು ಮಾತನಾಡಿದರೆ ಅವಳು ಮತ್ತಷ್ಟೂ ಮಾತನಾಡುತ್ತಾ ಹೋಗಬಹುದೆನ್ನಿಸಿ, ಆ ವಾಸನೆಯಿಂದ ಹೊಟ್ಟೆ ತೊಳಿಸಿದಂತಾಗಿ ಬಾಯಿ ತೆರೆಯುವುದೂ ಧುಸಾಧ್ಯವಾಗಿ ಹೆಚ್ಚು ಮಾತಿಲ್ಲದೇ ಕುಳಿತಿದ್ದೆ. ಕೆಲವು ಪ್ರಶ್ನೆಗಳಿಗೆ ಉತ್ತರಿಸಲೇಬೇಕಾದಾಗ ಅನ್ಯಮನಸ್ಕಳಾಗಿ ಉತ್ತರಿಸುತ್ತಿದ್ದೆ. ಆದರೆ ಅವಳು ಅದನ್ನೆಲ್ಲಾ ಗಮನಿಸಿದಂತೆ ಅನ್ನಿಸಲಿಲ್ಲ. ಮುಂದೆ ತಾನು ಹೇಳಲಿರುವ ಐತಿಹಾಸಿಕ ಕತೆಗೂ ಮತ್ತು ಮನು ಕುಲದ ನಶ್ವರ ದೇಹದ



ಅಸಾಧ್ಯ ವಾಸನೆಗೂ ಯಾವುದೋ ಸುರಿಮಳೆಯೇ ಇತ್ತು. ಸಂಬಂಧವಿರುವಂತೆ ಅವಳ ಬಳಿ ಮಾತಿನ

ಪ್ರತಿ ಮಾತಿಗೂ 'ಆಂ! ಆಂ!' ಎಂದು ಎರಡೆರಡು ಸಲ ಕೇಳುತ್ತಿದ್ದವಳು, ಆನಂತರ ಅವಳಿಗೇನೋ ಮಾತನಾಡುವ ತುರ್ತಿದೆಯೆಂದು ಅರ್ಥವಾಗಿದ್ದೇ ಸುಮ್ಮನಾದೆ. ಅವಳೂ ಅಷ್ಟೆ, ನನ್ನ ಉತ್ತರಕ್ಕಾಗಿ ಕಾಯುತ್ತಿರಲಿಲ್ಲವೆಂದು ಈಗ ಅನ್ನಿಸುತ್ತಿರುವ ವಿಚಾರ.

ಆನಂತರ ಸ್ವಗತವೆಂಬಂತೆ ಅವಳು ಹೇಳುತ್ತಾ ಹೋದಳು. ನಾನು ಕೇಳುತ್ತಾ ಹೋದೆ....

'ನಾನು ವಿಯಟ್ನಾಂ ದೇಶದವಳು. ಸೌತ್ ವಿಯಟ್ನಾಂನ ಒಂದು ಚಿಕ್ಕ ಹಳ್ಳಿಯಿಂದ ಬಂದವಳು. ವಿಯಟ್ನಾಂ ಬಗ್ಗೆ ಗೊತ್ತಾ?' ಕೇಳಿದಳು.

ನಿಜ ಹೇಳಬೇಕೆಂದರೆ ವಿಯಟ್ನಾಂ ಬಗ್ಗೆ ನಂಗೆ ಹೆಚ್ಚೇನೂ ಗೊತ್ತಿರಲಿಲ್ಲ. ಕಾಲೇಜ್ ದಿನಗಳಲ್ಲಿ ಇತಿಹಾಸ ಓದಿದ್ದರೂ ಅದ್ಯಾಕೋ ಅಕ್ಷರಗಳ ನಡುವೆ ಸಿಕ್ಕಿಕೊಂಡ ಚರಿತ್ರೆಯನ್ನು ಮತ್ತೆ ಬೆದಕಿ ನೋಡುವ ಮನಸ್ಸಾಗಿರಲಿಲ್ಲ. ವಿಯಟ್ನಾಂ ಬಗ್ಗೆಯಿರಲಿ, ಯಾವುದೇ ಚಾರಿತ್ರಿಕ ಹಿನ್ನಲೆಯಿರುವ, ಇತಿಹಾಸದ ಪುಟಗಳಲ್ಲಿ ದಪ್ಪ ದಪ್ಪ ಅಕ್ಷರಗಳಲ್ಲಿ ಮೂಡಿ ಚರಿತ್ರೆಯನ್ನು ಸುವರ್ಣಾಕ್ಷರದಲ್ಲಿ ಕೊರೆಸಿಕೊಂಡ ನಗರ, ನಾಗರಿಕತೆಯನ್ನು ಓದಿದ ಕುರುಹಾಗಲೀ, ನೆನಪಾಗಲೀ ಇರಲಿಲ್ಲ.

ಭಾರತಕ್ಕೆ ಟಿವಿಯನ್ನೂ ಹೊಸ ಅವಿಷ್ಕಾರವಾಗಿದ್ದರಿಂದ ಆಗಿನ್ನೂ ಇಪ್ಪತ್ತನಾಲ್ಕು ಗಂಟೆ ಸುದ್ದಿ ಸಮಾಚಾರಗಳು ಪ್ರಸಾರವಾಗುತ್ತಿರಲಿಲ್ಲ. ಜೊತೆಗೆ ಮದರಾಸಿನಲ್ಲಿ ಕಾಸ್(Cas) ಇದ್ದುದರಿಂದ, ಸೆಟ್ ಟಾಪ್ ಬಾಕ್ಸ್ ಹಾಕಿಸಿಕೊಳ್ಳದಿದ್ದರೆ ಬೇರೆ ಚಾನಲ್ಲುಗಳೂ ಬರುತ್ತಿರಲಿಲ್ಲವಾದ್ದರಿಂದ, ಬರೀ ತಮಿಳು ಸೀರಿಯಲ್ ನೋಡಲು ಬೇಜಾರಾಗಿ ನಾನು ಅಷ್ಟಾಗಿ ಟಿವಿಯನ್ನೂ ನೋಡುತ್ತಿರಲಿಲ್ಲ. ಆದ್ದರಿಂದ ಅವಳು ವರ್ತಮಾನದ ವಿಯಟ್ನಾಂ ಬಗ್ಗೆ ಕೇಳುತ್ತಿದ್ದಾಳೋ, ಭೂತಗಾಲದ್ದೋ ಗೊತ್ತಾಗದೇ ಅಡ್ಡಡ್ಡ ತಲೆಯಾಡಿಸಿದೆ.

“Fall of Saigon' ಕೇಳಿದ್ದೀಯಾ?' ಕೇಳಿದಳು. ಯಾಕೋ ನನ್ನ ಚರಿತ್ರೆಯ ಜ್ಞಾನವನ್ನು ಅವಳು ವಿಪರೀತ ಪರೀಕ್ಷಿಸುತ್ತಿದ್ದಾಳೆ ಅನ್ನಿಸಿತು. ಕೇಳಿರಲಿಲ್ಲವಾದ್ದರಿಂದ ಸಣ್ಣಗೆ ಚಡಪಡಿಸುತ್ತಲೇ ನಾನು ಮತ್ತೊಮ್ಮೆ ಮೌನವಾಗಿ ಅಡ್ಡಡ್ಡ ತಲೆಯಾಡಿಸಿದೆ.

“ಸಾವಿರದೊಂಬೈನೂರ ಎಪ್ಪತ್ತೈದು, ಎಪ್ಪತ್ತಾರರ ಸಮಯವದು, ಮಿಷ್. ನಾನಿನ್ನೂ ಹತ್ತು ವರುಷದ ಹುಡುಗಿ, ನಮ್ಮದೇ ಆದ ಒಂದು ಚಿಕ್ಕ ಫಾರ್ಮ್ ಇತ್ತು. ನಾವೂ ನಿಮ್ಮಂತೆ ಅಕ್ಕಿ ಬೆಳೆಯುವವರು. ನಾನು, ಅಪ್ಪ, ಅಮ್ಮ ಇಬ್ಬರು ಅಕ್ಕಂದಿರು, ಒಬ್ಬ ಅಣ್ಣ, ನಾನೇ ಚಿಕ್ಕ ಹುಡುಗಿ, ಎಲ್ಲರ ಮುದ್ದಿನವಳು.”

ಮಾತು ಮುಗಿಸಿ ಒಂದು ಕ್ಷಣ ಮೌನಳಾದಳು. ನಾನು ಕೇಳಿಸಿಕೊಳ್ಳುತ್ತಿರಬಹುದೆ ಎಂದು ಗಮನಿಸುತ್ತಿದ್ದಾಳೆಯೇ ಅನುಮಾನವಾಯಿತು. ನನ್ನ ಕಣ್ಣಿಗೆ ಅವಳೇ ಹತ್ತಿಯಿಟ್ಟು ಮುಚ್ಚಿದ್ದರಿಂದ ನಂಗೆ ಅವಳ ಮುಖಭಾವ ಗೊತ್ತಾಗುತ್ತಿರಲಿಲ್ಲ.

"ಎದುರಿಗೆ ಅದೇ ಬೆಟ್ಟದ ಸಾಲು, ಪಕ್ಕದಲ್ಲೇ ಜುಳು ಜುಳು ನಿನಾದದೊಂದಿಗೆ ಹರಿಯುತ್ತಿರುವ ತೊರೆ, ಕೈಗೆಟುಕುವಷ್ಟು ಸಮೀಪದಲ್ಲೇ ಪಿಸುಗುಟ್ಟುತ್ತಿರುವ ಬಾಲ್ಯದ ಅದೇ ದಟ್ಟ ಕಾಡು, ಗದ್ದೆ ಮಧ್ಯೆ ಕಾಣುತ್ತಿದೆಯಲ್ಲಾ ಆ ಪುಟ್ಟ ಮನೆ...! ಮಿಷ್, ಅದೇ ನಮ್ಮನೆ...!'

ಅವಳು ಯಾವುದೋ ಲೋಷನ್ ಎತ್ತಿ ತನ್ನ ಕೈಗೆ ಸುರಿದುಕೊಂಡು ನನ್ನ ಮುಖಕ್ಕೆ ಧಾರಾಳವಾಗಿ ಬಳಿಯುತ್ತಾ ಮಸಾಜ್ ಮಾಡತೊಡಗಿದಳು.

'ವೆನ್ ಏ ತಿಂಗ್ ವಾತ್ ಹ್ಯಾಪಿನ್ಸ್ ಏ ರಿಮೆಂಬ್ರ್ ದಿಷ್! ನನ್ನ ಬದುಕಿನ ಅತ್ಯಂತ ಸಂತೋಷದ ಕ್ಷಣವದು, ಮಿಷ್. ಆಗ ಅನ್ನಿಸುತ್ತಿದ್ದ ಒಂದು ಸುಭದ್ರ ಬದುಕಿನ ಕಲ್ಪನೆ ಆನಂತರ ನನ್ನ ಬದುಕಿನಲ್ಲಿ ಬರಲೇಯಿಲ್ಲಾ ಮಿಷ್, ನನ್ನ ಅಪ್ಪನದು ಪುಟ್ಟ ಆಕೃತಿ. ಆದರೆ ಪ್ರೀತಿ ಅವರ ಕಣ್ಣಿನಲ್ಲಿ ಸೋರಿ ಹೋಗುತ್ತಿತ್ತು. ಕರುಣೆ ತುಂಬಿದ ಅವರ ಕಣ್ಣಿನಲ್ಲಿ ನಮ್ಮ ಬಗ್ಗೆ ಪ್ರೀತಿ ತುಂಬಿ ತುಳುಕುತ್ತಿತ್ತು. ಅಮ್ಮನನ್ನು ಅದೆಷ್ಟು ಮುಚ್ಚಟೆಯಾಗಿ ಪ್ರೀತಿಸುತ್ತಿದ್ದರು. ನಾವು ಕೃಷಿಕರು. ಕಷ್ಟಪಟ್ಟು ಜೀವನ ಮಾಡಬೇಕು. ಬೆಳಿಗ್ಗೆಯಿಂದ ಸಂಜೆವರೆಗೆ ದುಡಿಮೆ. ಆದರೆ ಎಂತಹ ನೆಮ್ಮದಿಯ ಜೀವನ...!'

ಮೊದಲಿನ ಅವಳ ಬಾಯಿ ವಾಸನೆ, ಹಾಕಿಕೊಂಡ ಬಟ್ಟೆಯ ಬೆವರಿನ ದುರ್ನಾತ, ಹಿತವಾದ ಆ ಮಸಾಜ್‌ನೊಂದಿಗೆ ಕ್ರಮೇಣ ಕ್ಷುಲಕವೆನ್ನಿಸಿ, ನನ್ನನ್ನು ನಾನೇ ಅವಳಿಗೆ ಅರ್ಪಿಸಿಕೊಳ್ಳುತ್ತಾ ಮುಚ್ಚಿದ ಕಣ್ಣಿನ ಏಕಾಂತದಲ್ಲಿ ಅವಳು ಬಿಚ್ಚಿದ ನೆನಪಿನಲ್ಲಿ ನನ್ನ ಬಾಲ್ಯಗಾಲದ ಅಜ್ಜನ ಮನೆಯನ್ನು ತಡಕಾಡುತ್ತಾ ಆ ಕಗ್ಗತ್ತಲಲ್ಲಿ ಅವಳು ಹುಡುಕುತ್ತಿರುವ ಆಪ್ತ ಕೊಂಡಿಯ ಎಳೆಯ ಅರಿವೂ ಇಲ್ಲದೆ ನಾನು ಮುದಗೊಳ್ಳತೊಡಗಿದೆ ಅನ್ನಿಸುತ್ತದೆ.

ಏಕೆಂದರೆ ನನ್ನ ಕಣ್ಣ ಮುಂದೆ ಸಮೃದ್ಧವಾದ ನನ್ನಜ್ಜನ ಮನೆಯ ಚಿತ್ರ ಮೂಡುತ್ತಿತ್ತು! ಹಸಿರಿನಿಂದಾವೃತ್ತವಾದ ಆ ಒಂದು ಒಂಟಿ ಮನೆ. ಅಂಗಳದ ತುಂಬಾ ಲಕಲಕಿಸುವ ತರಹಾವಾರಿ ಹೂವಿನ ಗಿಡಗಳು...!

“ಆಗಲೇ ಗೆರಿಲ್ಲಾ ಯುದ್ಧಗಳು ನಡೆಯುತ್ತಿದ್ದವು. ವಿಯಟ್ನಾಂನಲ್ಲಿ ಆಂತರಿಕ ಕಲಹಗಳು, ಗೆರಿಲ್ಲಾ ಯುದ್ಧಗಳು ನಡೆಯುತ್ತಿದ್ದರೂ, ನೆಲೆಸಲು ತಲೆಯ ಮೇಲೊಂದು ಸೂರು, ಪ್ರೀತಿಸಲು ಅಪ್ಪ, ಅಮ್ಮ, ತಿನ್ನಲು ಅನ್ನ ಸಿಗುವವರೆಗೂ ನಮ್ಮ ದೇಶದಲ್ಲಿ ಏನಾಗುತ್ತಿದೆ ಎಂಬುದು ನಂಗೆ ಗೊತ್ತಿರಲಿಲ್ಲ ಮಿಷ್...

'ಈ ಯುದ್ಧಗಳಾದರೂ ಯಾಕೆ ಆಗುತ್ತವೆ, ಮಿಷ್? ಯಾವತ್ತಿನಿಂದ ಯುದ್ಧ ಕುರಿತು ನಾನು ಇಷ್ಟೊಂದು ಗಂಭೀರವಾಗಿ ಯೋಚಿಸಲು ಶುರು ಮಾಡಿದೆ? ನಂಗೇ ಗೊತ್ತಿಲ್ಲ. ಬಹುಷಃ ನಂಗದು ರಕ್ತಗತವಾಗಿ ಬಂದಿರಬೇಕು. ಅದಕ್ಕೇ ಇವತ್ತಿಗೂ ಯುದ್ಧದ ಬಗ್ಗೆ ಯೋಚಿಸುವುದನ್ನು ನಾನು ನಿಲ್ಲಿಸಿಲ್ಲ...

'ಯುದ್ಧ ಇವತ್ತು ನಿಲ್ಲುತ್ತೆ, ನಾಳೆ ನಿಲ್ಲುತ್ತೆಯೆಂದು ಮನೆ ಹಿರಿಯರು ಹೇಳುವುದನ್ನೇ ಕೇಳುತ್ತಾ, ನಮ್ಮ ಸುತ್ತಲೂ ಕಪ್ಪಗಿನ ದಟ್ಟ ಹೊಗೆ ಏಳುವುದನ್ನು ಆತಂಕದಿಂದ ನೋಡುತ್ತಾ ನಾವು ನೆಚ್ಚಿಕೊಂಡ ಬದುಕು ಬದಲಾದ ಆ ಕ್ಷಣಗಳು ಯಾವುದು ಮತ್ತು ಎಂದಿನಿಂದ ಎನ್ನುವುದು ನಿಖರವಾಗಿ ಹೇಳಲು ನಂಗೆ ತಿಳಿಯದಿದ್ದರೂ, ನಾನು



ಬೆಳೆಯುತ್ತಿದ್ದಂತೆ ನಾನು ಅಂದುಕೊಂಡಂತೆ ಎಲ್ಲವೂ ಸುಂದರವಾಗಿಲ್ಲ ಅನ್ನುವುದನ್ನು ಕ್ರಮೇಣ ಪ್ರಪಂಚವೇ ಸ್ಪಷ್ಟವಾಗಿ ನನ್ನೆದುರು ಕೊರೆದಿಟ್ಟಂತೆ ಗೋಚರಿಸುತ್ತಿದ್ದಂತಹ ಗಳಿಗೆಗಳವು...'

ತನ್ನ ನೆನಪಿನಂಗಳದಲ್ಲಿ ಸಿಕ್ಕಿಕೊಂಡ ಯಾವುದೋ ದುರ್ಗಮ ರಸ್ತೆಯಲ್ಲಿ ಸಾಗಲು ಒಂದು ಸುಧೀರ್ಘ ಉಸಿರನ್ನು ಅವಳು ತೆಗೆದುಕೊಂಡಿದ್ದು ಗಮನಕ್ಕೆ ಬಂತು. ಮತ್ತು ಆ ಒಂದು ಮೌನ, ತಾನು ಸಾಗಲಿರುವ ಮುಂದಿನ ದುರ್ಗಮ ಹಾದಿಯ ತುಂಬಾ ಇರಬಹುದಾದ ಕಲ್ಲು ಮುಳ್ಳುಗಳ ಸಣ್ಣ ಸುಳಿವನ್ನು ಬಿಟ್ಟು ಕೊಟ್ಟಂತೆನ್ನಿಸಿ, ನನ್ನ ಮನಸ್ಸು ನನಗರಿವಿಲ್ಲದೇ ಜಾಗೃತಗೊಳ್ಳುತ್ತಿತ್ತು. ತಾನು ಹೇಳುವ ಕತೆ ಕೇಳಲಿಕ್ಕಾಗಿಯೇ ನನ್ನನ್ನವಳು ತಯಾರುಗೊಳಿಸುತ್ತಿರುವಂತೆಯೂ, ಅದಕ್ಕೆ ಬೇಕಾದ ಎಲ್ಲಾ ಮುನ್ನೆಚ್ಚರಿಕೆಯನ್ನು ಅವಳೂ ತೆಗೆದುಕೊಳ್ಳುತ್ತಾ ಪದಗಳ ಜೋಡಣೆಯಲ್ಲಿ ನಿರತಳಾದಂತೆಯೂ ಯಾಕೋ ಅನ್ನಿಸತೊಡಗಿತು.

“ಎಲ್ಲಿಗೇ ಹೋದರೂ ನಾವು ಒಟ್ಟಿಗೇ ಹೋಗುತ್ತಿದ್ದೆವು. ಒಟ್ಟಿಗೇ ಬರುತ್ತಿದ್ದೆವು. ಮನೆಯಲ್ಲೂ ಒಟ್ಟಿಗೇ! ಒಂದು ಕ್ಷಣವೂ ಒಬ್ಬರನೊಬ್ಬರು ಬಿಟ್ಟು ಅಗಲುತ್ತಿರಲಿಲ್ಲ! ಯಾವುದೋ ಕರಾಳ ಬದುಕಿನ ಮುನ್ಸೂಚನೆ ಸಿಕ್ಕವರಂತೆ ಪ್ರತಿಕ್ಷಣ ಒಬ್ಬರನ್ನೊಬ್ಬರು ತಡವಿಕೊಳ್ಳುತ್ತಾ, ಎಲ್ಲರೂ ಜೀವಂತವಿದ್ದೇವೆಂದು ನಮ್ಮನ್ನೇ ನಂಬಿಸಿಕೊಳ್ಳುತ್ತಾ, ಅರ್ಥವಾಗದ ಮತ್ಯಾವುದಕ್ಕೋ ಕಾಯುತ್ತಾ ದಿನವಿಡೀ ಚಡಪಡಿಸುತ್ತಿದ್ದಂತಹ ಕಾಲವದು...

'ಸುಮಾರು ಇಪ್ಪತ್ತು ವರುಷ ನಮ್ಮ ದೇಶವನ್ನು ಸಂಪೂರ್ಣ ಹಾಳುಗೆಡವಿ ಛಿದ್ರಗೊಳಿಸಿದ ನಂತರ ಅಮೆರಿಕದವರೇನೋ ತಮ್ಮ ದೇಶಕ್ಕೆ ಮರಳಿ ಹೋದರು. ಅದರೆ ನಾವೆಲ್ಲರೂ ನಮ್ಮ ಮನೆ ಮಠ ಕಳೆದುಕೊಂಡು ಬೀದಿಗೆ ಬಿದ್ದಿದ್ದೆವು. ಬೀದಿಯಾದರೂ ಎಂತಾ ಬೀದಿ? ಎಲ್ಲೆಲ್ಲೂ ಛಿದ್ರಗೊಂಡ ಸತ್ತವರ, ಅರೆ ಸತ್ತವರ ಚೀತ್ಕಾರ ಹೊತ್ತ ಬೀದಿ...!

“ಯೂ ಅಲೇರ್ಜಿಗ್  ಅಸ್ಟ್ರೀಂಜಿಂತ್ ಮಿಷ್? ಸಮ್ ಅಲೇರ್ಜಿಗ್ ಅಸ್ಟ್ರೀಂಜಿಂತ್. ಯೂ ಅಲೇರ್ಜಿತ್ ಎನೀತಿರೆಗ್ ತೆಲ್ ಫಸ್ಟ್ ಮಿಷ್, ಏ ದೊಂನ್ಸ್ ಅಷ್ಟೆ..'

ಇತಿಹಾಸದ ಪುಟದಲ್ಲಿ ನಿಶ್ಚಲಗೊಂಡ ಘಟನೆಗಳನ್ನೆಲ್ಲಾ ಉದ್ದೀಪಿಸಿ ವರ್ತಮಾನಕ್ಕೆ ಎಳೆದು ತರುತ್ತಿದ್ದವಳು ಸಟ್ಟನೇ ವಾಸ್ತವಕ್ಕೆ ಬಂದು, 'ಆಸ್ಟ್ರೀಂಜೆಂಟ್ ನಿಂಗೆ ಅರ್ಲಜಿಯೇ?' ಎಂದು ವಿಚಾರಿಸಿದಾಗ ಒಂದೆರಡು ನಿಮಿಷ ಏನೂ ಅರ್ಥವಾಗದೇ ಗಲಿಬಿಲಿಗೊಂಡೆ.

ಬಾವಿಯ ಆಳದಲ್ಲೆಲ್ಲೋ ಶತಮಾನದಿಂದ ಹುಗಿದುಹೋಗಿದ್ದ ಕೊಡವನ್ನು ನೋವಿನ ಹಗ್ಗದಲ್ಲಿ ಕುಣಿಕೆ ಹಾಕಿ ಪ್ರಯಾಸದಿಂದ ದಂಡೆಗೆ ಎಳೆದು ತರುತ್ತಿರುವಾಗ ಮಧ್ಯೆ ಅನಾವಶ್ಯಕ ಬೇರೆ ವಿಷಯ ಎಳೆದು ತಂದ್ದೋ, ಕಾರಣವಿಲ್ಲದೇ ವಿಷಯಾಂತರ ಗೊಳಿಸುವುದೋ ಕಿರಿಕಿರಿಯೆನ್ನಿಸಿದರೂ, ಅದನ್ನು ಬಾಯಿ ಬಿಟ್ಟು ವ್ಯಕ್ತ ಪಡಿಸದೇ ಮತ್ತೊಮ್ಮೆ ಜೋರಾಗಿ ಗೋಣು ಅಲ್ಲಾಡಿಸಿದೆ.

ಅವಳು ನನ್ನ ಮುಖಕ್ಕೆಲ್ಲಾ ಆಸ್ಟ್ರಿಜೆಂಟ್ ಬಳಿದು ಹತ್ತಿಯಿಂದ ಶುದ್ಧ ಮಾಡಿ ಮತ್ತೆಲ್ಲೋ ಸದ್ದಿಲ್ಲದೇ ಹೊರಟುಹೋದಳು. ಯಾವದೋ ಹರ್ಬಲ್‌ನ್ನು ಬೆರೆಸುತ್ತಿದ್ದಿರಬೇಕು. ಗಾಢವಾದ ಹಸಿ ವಾಸನೆ ನನ್ನ ಮೂಗಿನವರೆಗೂ ಬಂತು.



“ಏನದು?' ಕೇಳಿದೆ.

'ದಿಷ್ ಹರ್ಬಲ್ ಮಿಕ್ಸ್ ಮಿಘ್.' ಮುಖದ ಮೇಲೆ ತಣ್ಣಗೆ ಏನನ್ನೋ ಬಳಿಯತೊಡಗಿದಳು.

'ವಾತ್ ತೆಲ್ಲಿಂಗ್ ಮಿಷ್?' ಎಂದು ಕೇಳಿ, ಒಂದು ಕ್ಷಣ ಕಳೆದು ನೆನಪಿಸಿಕೊಂಡಂತೆ ಮತ್ತೆ ಶುರು ಮಾಡಿದಳು.

'ಒಂದು ದಿನ ನಮ್ಮಪ್ಪ, ದೋಣಿ ರೆಡಿಯಾಗಿದೆ. ನಾವೆಲ್ಲರೂ ರಾತ್ರಿ ಈ ಜಾಗ ಬಿಟ್ಟು ಹೊರಡುತ್ತಿದ್ದೇವೆ ಎಂದು ನನ್ನ ತಾಯಿಯ ಹತ್ತಿರ ಹೇಳಿದರು. ನಮ್ಮ ಅಕ್ಕಪಕ್ಕದವರಲ್ಲಿ ಅನೇಕರು, ಮನೆ ಮಠ ಇದ್ದರೂ, ಇಲ್ಲದಿದ್ದರೂ,

ಎಂದೋ ಜಾಗ ಖಾಲಿ ಮಾಡಿ ಹೆಚ್ಚುಕಮ್ಮಿ ಪ್ರತಿಯೊಬ್ಬರೂ ಎಲ್ಲೆಲ್ಲೋ ಕಣ್ಮರೆಯಾಗಿ ಹೋಗಿದ್ದರು. ಇದೀಗ ನಮ್ಮ ಸರದಿ ಎಂದಷ್ಟೇ ನಾವು ಮಕ್ಕಳು ಅರ್ಥಮಾಡಿಕೊಂಡೆವು. ಎಲ್ಲಿಗೆ ಎಂದು ನಾವು ನಮ್ಮ ತಂದೆಯನ್ನು ಕೇಳಲಿಲ್ಲ, ಅವರೂ ಹೇಳಲಿಲ್ಲ. ನಾವು ಏನೇನು ಸಿಗುತ್ತೋ ಎಲ್ಲವನ್ನೂ ಗಂಟುಮೂಟೆ ಕಟ್ಟಿಕೊಂಡು, ರಾತ್ರಿಯಾಗುವವರೆಗೂ ಕಾದೆವು...

'ಮಧ್ಯರಾತ್ರಿಯಲ್ಲಿ ಯಾರದ್ದೋ ಒಂದು ನೆರಳು ನಾವಿದ್ದ ಬಿಡಾರದ ಹತ್ತಿರ ಸುಳಿದ ಹಾಗೆ ಆಯಿತು. ನಮ್ಮ ತಂದೆ ಹೊರಡಿಯೆಂದು ನಮ್ಮನ್ನೆಲ್ಲಾ ಹೊರಡಿಸಿಕೊಂಡು ಹೋದರು. ನಾವು ಮಾತಿಲ್ಲದೆ, ನಮ್ಮೊಡನೆ ಇರುವವರು ಯಾರೆಂದೂ ಅಷ್ಟಾಗಿ ಗಮನಿಸಿದೆ ಕಳ್ಳ ಹೆಜ್ಜೆಯಲ್ಲಿ ಆತನನ್ನು ಹಿಂಬಾಲಿಸಿ ಮರೆಯಲ್ಲಿದ್ದ ದೋಣಿ ಏರಿದೆವು. ನಮ್ಮ ಹಾಗೇ ಇನ್ನೂ ಬಹಳಷ್ಟು ಜನರು ಅಲ್ಲಿ ನೆರೆದಿದ್ದರು. ಗಂಡಸರು, ಹೆಂಗಸರು ಮಕ್ಕಳು ಮರಿ ಎಂದು ಸುಮಾರು ಎಪ್ಪತ್ತೆಂಭತ್ತು ಜನರು...

"ಅಂದು ರಾತ್ರೋ ರಾತ್ರಿ ಹಾಗೆ ಊರು ಬಿಟ್ಟಾಗ ನಾವು ನಮ್ಮ ದೇಶ ಬಿಟ್ಟು ಹೋಗುತ್ತಿದ್ದೇವೆಂದು ನಂಗೆ ಗೊತ್ತಿರಲಿಲ್ಲ ಮಿಷ್. ಒಂದು ವೇಳೆ ಗೊತ್ತಿದ್ದರೂ ನಾನೇನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಆಕಾಶದಲ್ಲಿ ಕಿತ್ತಳೆ ಬಣ್ಣದ ದೊಡ್ಡ ಚಂದಿರನಿದ್ದ. ಕೆಳಗೆ ಬೆಳ್ಳಿ ಚುಕ್ಕಿಯಂತೆ ಹೊಳೆವ ಕಡಲಿತ್ತು. ಅಮ್ಮನ ಮಡಿಲಿಗೊರಗಿ ಕತ್ತಲಲ್ಲಿ ಕಂಡ ಅವರೆಲ್ಲರ ಕಳಾಹೀನ ಮುಖ ನೋಡುತ್ತಾ ಯಾವಾಗ ನಿದ್ದೆ ಹೋದೆನೋ..?

'ಬೆಳಿಗ್ಗೆ ಎದ್ದಾಗಲೂ ಸಮುದ್ರದಲ್ಲೇ ಇದ್ದೆ. ಎರಡು ದಿನ ಕಳೆದರೂ ನಾವಿನ್ನೂ ಸಮುದ್ರದ ಮೇಲೇ! ಹೀಗೆ ತೇಲುತ್ತಾ ನಾವು ಹೋಗುತ್ತಿರುವುದಾದರೂ ಎಲ್ಲಿಗೆ? ಅಮ್ಮನನ್ನು ಕೇಳಿದೆ. 'ಹುಷ್!' ಎಂದು ಅಮ್ಮ ನನ್ನ ಬಾಯಿ ಮುಚ್ಚಿದರು. ಒಂದು ಸಣ್ಣ ಶಬ್ದ ಕೂಡಾ ನಾವು ಗುಟ್ಟಾಗಿ ಪ್ರವೇಶಿಸ ಹೊರಟ ಹೊಸ ಜಗತ್ತನ್ನು ಅಲ್ಲೋಲಕಲ್ಲೋಲಗೊಳಿಸಿಬಿಡಬಹುದೆನ್ನುವ ಮುನ್ನೆಚ್ಚರಿಕೆಯಂತೆ ಅಗಾಧ ಮೌನದಲ್ಲಿ ನಾವೆಲ್ಲರೂ ದೋಣಿಯಲ್ಲಿ ಕುಳಿತು ಮಹಾನ್ ಅಲೆಗಳ ನಡುವೆ ತೇಲುತ್ತಿದ್ದೆವು. ನಮ್ಮೆಲ್ಲರ ಹತ್ತಿರ ತುಂಬಾ ಕಡಿಮೆ ಆಹಾರವಿತ್ತು. ಅದನ್ನೇ ದಾರಿಯುದ್ದಕ್ಕೂ ಚೂರು ಚೂರೇ ತಿನ್ನುತ್ತಿದ್ದೆವು..!'

ಸಟ್ಟನೇ ಮಾತು ನಿಂತು ಮೂಡಿದ ಮೌನ. ಅವಳ ಡ್ರೆಸ್ ನನ್ನ ಕೈಗೆ ತಾಗುತ್ತಿದ್ದರೂ ಅವಳು ಹಂದಾಡದೇ ನನ್ನ ಮಗ್ಗುಲಲ್ಲಿ ನಿಂತಂತೆ ಅನ್ನಿಸುತ್ತಿತ್ತು.

'ದೆಸ್ತಿನಿ ಮಿಷ್! ಎವ್ರಿಥಿಂಗ್ ಗಾದ್ ಮೇದ್ ದೆಷ್ತಿನಿ! ನಮ್ಮ ಕೈಲೇನಿದೆ ಮಿಷ್?

'ನನ್ನ ಅಕ್ಕಂದಿರಿಬ್ಬರೂ ನೋಡಲು ಸುಂದರವಾಗಿದ್ದರು. ಸಮುದ್ರದ ಮಧ್ಯದಲ್ಲಿ ನಮ್ಮ ದೋಣಿಯ ಮೇಲೆ ಕಡಲ್ಗಳ್ಳರು ಆಕ್ರಮಣ ಮಾಡಿದರು. ನನ್ನ ಅಕ್ಕಂದಿರಿಬ್ಬರನ್ನೂ ರೇಪ್ ಮಾಡಿ, ನಮ್ಮ ಹತ್ತಿರವಿದ್ದಿದ್ದನ್ನೆಲ್ಲಾ ದೋಚಿಕೊಂಡು ಅಕ್ಕಂದಿರನ್ನೂ, ಮತ್ತೊಂದಿಷ್ಟು ಹೆಣ್ಣು ಮಕ್ಕಳನ್ನೂ ತಮ್ಮೊಂದಿಗೆ ಕರೆದುಕೊಂಡು ಹೋದರು. ಅಪ್ಪ ಪ್ರತಿಭಟಿಸಿದರು. ಜೊತೆಗೆ ತಮ್ಮ ಮಕ್ಕಳನ್ನು ಕಳೆದುಕೊಂಡ ಬೇರೆ ಗಂಡಸರೂ. ಆದರೆ ಅವರನ್ನೆಲ್ಲಾ ಚೆನ್ನಾಗಿ ಥಳಿಸಿ, ಕಡಲ್ಗಳ್ಳರು ತಮ್ಮ ಹಡಗನ್ನೇರಿ ಹೊರಟು ಹೋದರು. ಅಮ್ಮ ಎಷ್ಟು ಕಿರಿಚಿದರೂ ಏನೂ ಆಗಲಿಲ್ಲ...!

ಅಂದು ಕಿರಿಚಲು ಶುರು ಮಾಡಿದ ನನ್ನಮ್ಮ ಆನಂತರ ಇಡೀ ದಿನ ಕಿರುಚುತ್ತಲೇ ಇದ್ದರು. ಅಕೆಯ ಬಾಯಿ ಮುಚ್ಚಿಸಲು ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಸಮುದ್ರಯಾನ ಶುರು ಮಾಡಿ ಅದೆಷ್ಟು ದಿನಗಳು ಸರಿದು ಹೋದವೋ ಗೊತ್ತಿಲ್ಲ. ಒಂದು ದಿನ ಕಗ್ಗತ್ತಲಲ್ಲಿ ನೀರಿಗೆ ಯಾರೋ ದುಢುಂ ಎಂದು ಹಾರಿದ್ದು ಕೇಳಿಸಿತು. ಬಹುಷಃ ನನ್ನ ಮನಸ್ಸಿನಲ್ಲಿ ಸ್ಥಿರವಾಗಿ ನೆಲೆಸಿದ ಆ ಕಟ್ಟ ಕಡೇ ಸದ್ದಿನ ಗಾಥ ನೆನಪೇ ನನ್ನಮ್ಮನ ನೆನಪಿನ ಕೊಂಡಿಯಾಗಿ ಈಗ ನನ್ನ ಬಳಿ ಉಳಿದಿರುವುದು ಮಿಷ್!'

ಮತ್ತೊಂದು ಸುದೀರ್ಘ ಮೌನ, ಬಹುಶಃ ಮಗುಚಿದರೆ ಇತಿಹಾಸದ ಪ್ರತಿಯೊಂದು ಪುಟದುದ್ದಕ್ಕೂ ಮಲಗಿ ನಿದ್ರಿಸುತ್ತಿರುವ ಅದೆಷ್ಟೋ ಪುರಾತನ ಕತೆಗಳಲ್ಲೂ, ಈಗ ಅವಳು ಹೇಳ ಹೊರಟ, ಎಲ್ಲೂ ದಾಖಲಾಗದ ಇಂತಹ ಸಹಸ್ರಾರು ಕತೆಗಳ ಮತ್ತೊಂದಿಷ್ಟು ಮಗ್ಗುಲುಗಳು ದೊರೆಯಲು ಸಾಧ್ಯವಿರಬಹುದೇ? ನಾನು ನನ್ನದೇ ಅಲೋಚನೆಯಲ್ಲಿ ಮುಳುಗಿದ್ದೆ.

"ಆದರೂ ತಲುಪಬೇಕಾದ ಗಮ್ಯ ನಾವಿನ್ನೂ ತಲುಪಿರಲಿಲ್ಲ, ಮಿಷ್. ಇನ್ನೂ ಎಷ್ಟು ದಿನ ಪಯಣ ಎಂದು ಯಾರಿಗೂ ಗೊತ್ತಿರಲಿಲ್ಲ. ಮೊದಲೇ ಹೆಚ್ಚು ಮಾತಾಡದ ಅಪ್ಪ ಬರುಬರುತ್ತಾ ಮೌನಿಯಾದ. ದೋಣಿಯಲ್ಲಿದ್ದರೂ ಎತ್ತಲೋ ದಿಟ್ಟಿಸುತ್ತಾ ಕುಳಿತಿರುತ್ತಿದ್ದ...

'ಅಣ್ಣನಿಗೆ ಇದ್ದಕಿದ್ದಂತೆ ಮುಗಿಯದ ನೀರಿನ ಪಯಣದಿಂದಲೋ ಏನೋ ವಾಂತಿ ಹಿಡಿದುಕೊಂಡಿತು. ಬೆಳಿಗ್ಗೆಯೆಲ್ಲಾ ವಾಂತಿ, ರಾತ್ರಿ ಸುಸ್ತಾಗಿ ಮಲಗಿರುತ್ತಿದ್ದ. ಬರು ಬರುತ್ತಾ ಯಾಕೋ ಅವನೂ ತುಂಬಾ ನಿತ್ರಾಣನಾಗತೊಡಗಿದ...

'ಅಷ್ಟರಲ್ಲಿ ಮಲೇಶಿಯಾದ ಸಮೀಪ ಬಂದಿದ್ದೆವು. ಇದ್ದಕಿದ್ದಂತೆ ದೋಣಿಯಲ್ಲಿ ಉಳಿದವರಲ್ಲಿ ಹೊಸ ಜೀವ ಸಂಚಲನವುಂಟಾಯಿತು. ಎಲ್ಲರೂ ಹರ್ಷೋದ್ಗಾರ ಮಾಡುತ್ತಾ ದಡದಲ್ಲಿದ್ದವರ ಗಮನ ಸೆಳೆಯುವುದರಲ್ಲಿ ನಿರತರಾಗಿದ್ದರೆ, ಸತ್ತಂತೆ ಬಿದ್ದಿದ್ದ ಅಣ್ಣನ ಪಕ್ಕದಲ್ಲಿದ್ದ ನಂಗೆ ಯಾವುದೂ ಅರ್ಥವಾಗುತ್ತಿರಲಿಲ್ಲ. ಸಮುದ್ರ ಕಿನಾರೆಯಲ್ಲಿದ್ದ ಒಂದಷ್ಟು ಬೆಸ್ತರು ಓಡಿ ಬಂದು ಸಹಾಯ ಮಾಡಿದರು. ನಾವು ಮತ್ತೊಂದು ದೇಶದ ದಡ ಮುಟ್ಟುವುದಕ್ಕೂ ಅಣ್ಣ ಅಸುನೀಗುವುದಕ್ಕೂ ತಾಳೆಯಾಗಿ ಬಂತು...!'

ಹೊರಗೆ ಬಾಗಿಲು ತಟ್ಟಿದ ಸದ್ದಾದಂತೆ ಅನ್ನಿಸಿತು. ಅವಳು ಸರಕ್ಕನೆ ಬಾಗಿಲ ಬಳಿ ಸರಿದು, ಮೆಲುದನಿಯಲ್ಲಿ ಯಾರೊಡನೆಯೋ ಪಿಸುಗುಟ್ಟಿ, ಮತ್ತೆ ನನ್ನ ಬಳಿ ಬಂದಳು. ಧ್ವನಿಯನ್ನು ಮತ್ತಷ್ಟು ಸಣ್ಣದು ಮಾಡಿ ಕತೆ ಮುಂದುವರಿಸಿದಳು.



'ಮಲೇಶಿಯಾದ ರೆಫ್ಯುಜಿ ಕ್ಯಾಂಪ್ ಸೇರುವಾಗ ನಾವು ಉಳಿದಿದ್ದು ಕೇವಲ ಮೂವತ್ತಾರು ಜನರು. ಎಲ್ಲರನ್ನೂ ಕಳೆದುಕೊಂಡು ಅಪ್ಪ ಮತಿಭ್ರಮಣೆಗೆ ಒಳಗಾಗಿದ್ದ. ಆದರೆ ನನ್ನ ಗುರುತು ಅವನಿಗೆ ಸರಿಯಾಗಿಯೇ ಇತ್ತು. ಅವನ ಕಣ್ಣಿನಿಂದ ನಾನು ಸ್ವಲ್ಪ ಆಚೀಚೆಯಾದರೂ ಕಿರಿಚಿಕೊಳ್ಳುತ್ತಿದ್ದ. ಕ್ಯಾಂಪಿನ ಶಾಲೆಗೆ ಸೇರಿಕೊಂಡೆ. ಓದಿ ಬರೆಯುವುದನ್ನು ಕಲಿತೆ. ಒಂದು ವರುಷವಾಗುವುದರಲ್ಲಿ ಅಪ್ಪ ತೀರಿಕೊಂಡ...!”

ನನ್ನ ಕಿವಿ ಹತ್ತಿರ ಕೇಳಿಯೂ ಕೇಳಿಸದಷ್ಟು ಸಣ್ಣಗೆ ಹೊರಟ ಒಂದು ನಿಡುಸಿರು...

“ಮಿಸ್, ನನ್ನ ಹೆಸರು ಹ್ವಾಂಗ್, ನನ್ನ ಭಾಷೆಯಲ್ಲಿ ಹ್ವಾಂಗ್ ಅಂದರೆ ರೋಜಾ ಹೂ, ತಿಳಿ ಗುಲಾಬಿ ಬಣ್ಣದ ರೋಜಾ ಹೂ. ಆದರೆ ಹೂ ಹೇಗಿರುತ್ತೆ ಎನ್ನುವುದನ್ನು ನಾನು ಇವತ್ತಿನವರೆಗೂ ಸರಿಯಾಗಿ ನೋಡಲಿಲ್ಲ. ಅಪ್ಪನನ್ನು ಕಳೆದುಕೊಂಡ ನಂತರ ನನ್ನದೇ ಇತಿಹಾಸವನ್ನೂ ಮತ್ತು ಅಂತಹದ್ದೇ ವಿಧಿಯನ್ನೂ ಹಂಚಿಕೊಂಡಿದ್ದ ಮತ್ತುಳಿದ ನಮ್ಮವರು ನನ್ನನ್ನು ಚೆನ್ನಾಗಿಯೇ ನೋಡಿಕೊಂಡರು. ಆದರೂ...

ಮತ್ತೆ ಕವಿದ ಮೌನ.

ನನ್ನ ಮನದಲ್ಲಿ ವಿದ್ಯಾರ್ಥಿ ಜೀವನದಲ್ಲಿ, ಪರೀಕ್ಷೆಗೆ ಇನ್ನೇನು ಕೆಲವೇ ದಿನಗಳಿವೆ ಎನ್ನುವಾಗ ಇತಿಹಾಸದ ಪುಸ್ತಕ ಹಿಡಿದು ಉದಾಸೀನದಿಂದ ಪುಟ ತಿರುವುತ್ತಾ ಓದುತ್ತಿದ್ದ ದಿನಗಳು ಮೆಲ್ಲಗೆ ತೆರೆದುಕೊಳ್ಳುತ್ತಿದ್ದವು. ಆ ರಕ್ತಸಿಕ್ತ ಪುಟಗಳನ್ನು ಗಟ್ಟಿಯಾಗಿ ಹಿಡಿದರೂ ಕೈಗೆಲ್ಲಿ ರಕ್ತ ಅಂಟುತ್ತೋ ಅನ್ನುವ ಹಾಗೆ ಮೂರೇ ಬೆರಳುಗಳಲ್ಲಿ ನಿರ್ಭಾವುಕರಾಗಿ ಮಗುಚಿ, ರಾತ್ರಿ ಹತ್ತರ ನಂತರ ಉರು ಹಚ್ಚಿ, ಮಾರನೇ ದಿನ ಬಿಳಿ ಹಾಳೆಗೆ ದುಂಡು ಅಕ್ಷರದಲ್ಲಿ ಚೊಕ್ಕವಾಗಿ ಅಷ್ಟೋತ್ತಿಸಿದ ನಂತರ, ಇತಿಹಾಸದೊಂದಿಗಿನ ನನ್ನ ಭಾವನಾತ್ಮಕ ಸಂಬಂಧ ಮುಗಿದ ಹಾಗೇ ಎಂದುಕೊಳ್ಳುತ್ತಿದ್ದ ಸಂದರ್ಭಗಳವು. ಯಾವ ಕಾಲದ,

ಯಾವ ದೇಶದ ಎಂತಹ ಮಾರಣ ಹೋಮದ ಕತೆಯೂ ಇತಿಹಾಸದ ಹಿಂದಿನ ಬದುಕಾಗಿ ನನಗೆಂದೂ ಗೋಚರಿಸಿರದ ಕ್ಷಣಗಳವು....

'ಯುದ್ಧ ಮುಗಿದು ಅಮೆರಿಕನ್ನರು ವಿಯಾಟ್ನಾಂ ಬಿಟ್ಟು ತಮ್ಮ ತಾಯ್ನಾಡಿಗೆ ಮರಳಿ ಹೋದ ಮೇಲೆ ರೆಫ್ಯುಜಿ ಕ್ಯಾಂಪ್‌ನಲ್ಲಿದ್ದ ಆನೇಕರು ನಮ್ಮ ದೇಶಕ್ಕೆ ವಾಪಾಸಾದರು, ಮಿಷ್. ನಾನೂ ಹೋಗಬಹುದಿತ್ತು. ಆದರೆ ಅಷ್ಟರಲ್ಲೇ ನಾನೊಬ್ಬನ ಪ್ರೇಮ ಪಾಶದಲ್ಲಿ ಸಿಕ್ಕಿಕೊಂಡಿದ್ದೆ. ಒಂದು ದಿನ ನಮ್ಮ ಬ್ಯಾರಕ್‌ನಲ್ಲಿ ಕೆಲಸ ಮಾಡುತ್ತಿದ್ದ ಶ್ರೀಲಂಕಾದ ಹುಡುಗನ ಪರಿಚಯವಾಯಿತು...

'ಹೆಸರು ಪಾರ್ಥಿಬನ್ ಜಯರತನ್, ಶ್ರೀಲಂಕಾದಲ್ಲಿ ನೆಲೆಸಿದ್ದ ತಮಿಳ್ ಕ್ರಿಶ್ಚಿಯನ್ ಒಂದು ದಿನ ನಾವಿಬ್ಬರೂ ಮದುವೆಯಾಗೋಣವಾ ಅಂದ. ರೆಫ್ಯುಜಿ ಕ್ಯಾಂಪ್‌ನಲ್ಲಿದ್ದ ಬಹಳಷ್ಟು ಜನರು ಹಿಂದಿರುಗಿದ್ದರು. ಉಳಿದವರು ತಮ್ಮ ಬದುಕನ್ನು ತಾವೇ ಕಂಡುಕೊಂಡಿದ್ದರು. ನನಗೂ ಎಲ್ಲಾದರೂ ನೆಲೆ ನಿಲ್ಲಬೇಕೆನ್ನುವ ಆಸೆ. ನಾನೊಬ್ಬಳೇ ವಿಯಟ್ನಾಂಗೆ ಹೋಗಿ ಮಾಡುವುದಾದರೂ ಏನು? ನನ್ನೂರಿಗೆ ಬರಲು ಅವನು ತಯಾರಿರಲಿಲ್ಲ. ಅವನು ವಾಪಾಸು ಶ್ರೀಲಂಕಾಗೆ ಹೋಗುವವನಿದ್ದ.



'ಮದುವೆಯ ನಂತರ ಇಬ್ಬರೂ ಶ್ರೀಲಂಕಾಗೆ ಬಂದೆವು. ಜಾಫ್ನಾದ ಹತ್ತಿರ ಅವನ ಊರು. ಅಲ್ಲೂ ಗಲಾಟೆ. ಆದರೂ ಒಂದಷ್ಟು ಪ್ರೀತಿಯನ್ನು ಕಂಡ ದಿನಗಳವು. ಈ ಮಧ್ಯೆ ನನಗೊಂದು ಗಂಡು ಮಗುವಾಯಿತು. ದಿನ ಕಳೆದಂತೆ ಶ್ರೀಲಂಕಾದಲ್ಲಿರುವ ತಮಿಳರ ಸ್ಥಿತಿ ವಿಪರೀತ ಬಿಗಡಾಯಿಸಲು ಶುರುವಾಯಿತು. ಆ ಪ್ರಕ್ಷುಬ್ಧ ವಾತಾವರಣದಲ್ಲಿ ನಾನು ಮತ್ತು ಮಗು ಅಲ್ಲಿರುವುದು ಬೇಡವೆಂದು ಒಂದು ರಾತ್ರೋರಾತ್ರಿ ನಮ್ಮನ್ನು ದೋಣಿಯಲ್ಲಿ ಕೂರಿಸಿ ಗುಟ್ಟಾಗಿ

ರಾಮೇಶ್ವರಕ್ಕೆ ಕರೆದುಕೊಂಡು ಬಂದು ತನ್ನ ನೆಂಟರ ಮನೆಯಲ್ಲಿ ಬಿಟ್ಟು, ಅರ್ಜೆಂಟ್ ಕೆಲಸದ ಮೇಲೆ ಅವನು ವಾಪಾಸು ಶ್ರೀಲಂಕಾಗೆ ಮರುಳಿದ.

'ವಾಂತ್ ದ್ರಿಂಕ್ ಕ್ಯೂಸ್ ಮಿಷ್?'

ಯಾರಾದರೂ ಜ್ಯೂಸ್ ತಂದು ಕೊಟ್ಟರೆ? ಅಥವಾ ಸುಮ್ಮನೆ ಕೇಳುತ್ತಿದ್ದಾಳೆಯೇ? ಅವಳು ಕತೆ ಹೇಳುವುದರಲ್ಲಿ ತಲ್ಲೀನಳಾಗಿರಬೇಕಾದರೆ ಮೆಲ್ಲಗೆ ಮತ್ತೊಮ್ಮೆ ಬಾಗಿಲು ಜಡಿದು ಯಾರೋ ಒಳ ಬಂದಂತೆ ನಂಗೆ ಅನ್ನಿಸಿತ್ತು. ನನ್ನ ಕಣ್ಣಿನ ಮೇಲೆ ಇನ್ನೂ ಕಾಟನ್ ಬ್ಯಾಂಡ್ ಇದ್ದುದ್ದರಿಂದ ಯಾರು ಎಂದು ಗೊತ್ತಾಗಲಿಲ್ಲ. ಗಲ್ಲದ ಮೇಲಿನ ಒಡತಿಯೇ ಇರಬಹುದು. ಪ್ರಾಯಶಃ ಸಮಯ ಜಾರುತ್ತಿದೆ ಎಂದು ಎಚ್ಚರಿಸಿ ಹೋಗಿರಬಹುದು. ಇನ್ನೂ ಸುಮಾರು ಜನರು ಕಾಯುತ್ತಿದ್ದಾರೆ, ಬೇಗ ಮುಗಿಸು ಎಂದು ಆಜ್ಞಾಪಿಸಿಯೂ ಹೋಗಿರಬಹುದು.

ಆದರೆ ನಾನಿನ್ನೂ ಅವಳು ತೆರೆದ ಇತಿಹಾಸದ ಪುಟಗಳಲ್ಲೇ ಮುಳುಗಿ ಹೋಗಿದ್ದೆ. ಘಟನೆಗಳ ಮಹತ್ವ ಕಳೆದುಕೊಳ್ಳುತ್ತಿರುವ ವರ್ತಮಾನದ ಬದುಕಿನಲ್ಲಿ ಸಿಲುಕಿರುವ ನಮಗ್ಯಾರಿಗೂ ಭೂತದ ಗರ್ಭದಲ್ಲಿ ಹುಗಿದ ಗತಗಾಲದ ವಿಷಯಗಳು ಯಾಕೆ ವಿಶೇಷವೆನ್ನಿಸುವುದಿಲ್ಲವೆಂಬ ನನ್ನದೇ ಗೊಂದಲದಲ್ಲಿ.... ಪ್ರಾಯಶಃ ಇದು ಇತಿಹಾಸವನ್ನು ದಾಖಲಿಸುವವರ ತಪ್ಪೂ ಅಲ್ಲ, ಅದನ್ನು ಓದುವವರ ತಪ್ಪ ಅಲ್ಲ. ಮುಗಿದು ಹೋದ ಅಧ್ಯಾಯಗಳಲ್ಲಿ ಮಾನವನ ನೋವು-ನಲಿವಿನೊಂದಿಗೆ ಬೆರೆತ ಜೀವನ ಯಾರಾರೋ ಕಾಲ್ತುಳಿತಕ್ಕೆ ಸಿಕ್ಕ ಚೆಂಡಿನಂತೆ ಎಲ್ಲೆಂದರಲ್ಲಿ ಚೆಲ್ಲಾಪಿಲ್ಲಿಯಾಗಿ ಹಂಚಿ ಹರಿದು ಹೋಗಿರುವುದನ್ನು, ಹೆಚ್ಚೆಂದರೆ ಒಂದು ನಿಟ್ಟುಸಿರಿನೊಂದಿಗಷ್ಟೇ ಓದುತ್ತಿರುವ ನಮ್ಮಲ್ಲೇ ಏನಾದರೂ ಐಬಿರಬಹುದೆ? ನನ್ನ ಮನಸ್ಸು ಕಲಸುಮೇಲೋಗರವಾಗಿತ್ತು.

ಬಹುಶಃ ನನ್ನ ಫೇಶಿಯಲ್ ಮುಗಿದಿರಬೇಕು. ಅವಳು ನನ್ನ ಕಣ್ಣಿನ ಹತ್ತಿಯುಂಡೆ ತೆಗೆಯುತ್ತಿದ್ದಳು. ಅವಳನ್ನು ಸರಿಯಾಗಿ ನೋಡುವ ಕುತೂಹಲದಿಂದ ನಾನು ಸಟ್ಟನೆ ಕಣ್ಣು ಬಿಟ್ಟೆ. ಆದರೆ ಮುಖದ ಹತ್ತಿರವಿದ್ದ ಅತಿ ಬೆಳಕು ಚುಚ್ಚಿದಂತಾಗಿ ಮತ್ತೆ ಕಣ್ಣು ಮುಚ್ಚಿಕೊಂಡೆ. ಅವಳ ಕತೆ ಮುಗಿಯಿತೋ ಇಲ್ಲವೋ ತಿಳಿಯಲಿಲ್ಲ.

'ವಾಂತ್ ಏಬ್ಲೋಸ್?' ಕೇಳಿದಳು. ಹೌದೆಂದು ತಲೆಯಾಡಿಸಿ, ಇನ್ನೂ ಕತೆ ಬಾಕಿಯಿದ್ದುದರಿಂದ, ಕೇಳುವ ಆಸಕ್ತಿಯಲ್ಲಿ ಮತ್ತೆ ನನ್ನ ಮುಖವನ್ನು ಅವಳಿಗೊಡ್ಡಿ ಕುಳಿತೆ.

ಅವಳು ಇಲ್ಲಿಯವರೆಗೂ ತಾನು ಮಾತನಾಡಿದ್ದು ಸುಳ್ಳೇ ಅನ್ನುವವಳಂತೆ ಮೌನವಾಗಿ ನನ್ನ ಹುಬ್ಬು ಕೀಳತೊಡಗಿದಳು. ನನ್ನ ಕುತೂಹಲವೇ ಕೆಟ್ಟದೇನೊ?

"ಇಲ್ಲಿಗೆ ಹೇಗೆ ಬಂದೆ?' ಎಂದು ಕೇಳಿದೆ.

"ಅನದರ್ ಬಿಗ್ ಸ್ಟೋರಿ, ಮಿಸ್.' ಎಂದು ಮತ್ತೆ ಶುರು ಮಾಡಿದಳು.

ನನ್ನ ಗಂಡ ರಾಮೇಶ್ವರದಲ್ಲಿ ಅವರ ನೆಂಟರ ಮನೆಯಲ್ಲಿ ನನ್ನನ್ನು ಬಿಟ್ಟು ಹೋದವನು, ಸುಳಿವಿಲ್ಲದೆ ಹಾಗೆ ಹೋಗಿಬಿಟ್ಟ. ಒಂದು ವರುಷವಾಯಿತು, ಎರಡು ವರುಷವಾಯಿತು, ನಾಲ್ಕು ವರುಷವಾದರೂ ಹೋದವನು ಬರಲೇಯಿಲ್ಲ. ಅವನೆಲ್ಲಿದ್ದಾನೆ ಎಂಬುದೇ ಯಾರಿಗೂ ತಿಳಿಯಲಿಲ್ಲ. ಅವನ ಸಂಬಂಧಿಕರ ಮನೆಯಲ್ಲಿ ಎಷ್ಟು ದಿನಾಂತ ಇರಲು ಸಾಧ್ಯ? ಅವನೆಲ್ಲೋ ಎಲ್‌ಟಿಟಿಇಯವರ ಕೈಗೆ ಸಿಕ್ಕು ಸತ್ತಿರಬೇಕು. ನಿನ್ನ ಜೀವನ ನೀನು ನೋಡಿಕೊ ಎಂದು ಅವನ ಸಂಬಂಧಿಕರು ಸ್ವಲ್ಪ ಹಣ ಕೊಟ್ಟು, ಮದರಾಸಿಗೆ ಹೋಗು, ದೊಡ್ಡ ನಗರ, ಹೇಗಾದರೂ ಅಲ್ಲಿ ಬದುಕಬಹುದೆಂದು ಇಲ್ಲಿಗೆ ಕರೆದುಕೊಂಡು ಬಂದು ಬಿಟ್ಟರು...

'ಒಂದು ವರುಷ ತುಂಬಾ ಕಷ್ಟವಾಯಿತು, ಮಿಷ್. ಈಗ ನಾಲ್ಕು ವರುಷದಿಂದ ಇಲ್ಲಿ ಕೆಲಸ ಮಾಡುತ್ತಿದ್ದೇನೆ. ನಾಲ್ಕು ಸಾವಿರ ಕೊಡುತ್ತಾರೆ. ಬ್ರೈಡಲ್ ಮೇಕಪ್, ಅದೂ ಇದೂಂತ ಹೊರಗೆ ತಿಂಗಳಿಗೆ ಮೂರ್‍ನಾಲ್ಕು ಸಾವಿರ ಸಿಗುತ್ತೆ. ಮಗನಿಗೀಗ ಹತ್ತು ವರುಷ. ಸಿ.ಬಿಎಸ್.ಸಿ ಸ್ಕೂಲಿನಲ್ಲಿ ಚೆನ್ನಾಗಿ ಓದುತ್ತಿದ್ದಾನೆ, ಮಿಷ್.'

ಸ್ವಲ್ಪ ಹೊತ್ತು ಸುಮ್ಮನಿದ್ದು, 'ಮಿಷ್, ಯೂ ದೂ ಒನ್ ಸ್ಮಾಲ್ ಹೆಲ್ಪ್?' ಎಂದು ಕೇಳಿದಳು. ನನ್ನ ಮನಸ್ಸು ಫಕ್ಕನೇ ಜಾಗೃತಗೊಂಡಿತು. ಇಲ್ಲಿನವರೆಗಿನ ಅವಳ ಕತೆ ಈ ಒಂದು ಬೇಡಿಕೆಗೇ ಪೂರ್ವಭಾವಿಯಾಗಿ ಬಂದದ್ದು ಎನ್ನುವುದು ತಕ್ಷಣ ಹೊಳೆದು ಕಿರಿಕಿರಿಯಾಯಿತು. ಇದೂ ಒಂದು ರೀತಿಯ ಎಮೋಷನಲ್ ಬ್ಲಾಕ್‌ಮೇಲೇ? ಅವಳು ಹೇಳಿದ ಕತೆಯಲ್ಲಿ ನಿಜವೆಷ್ಟು, ಸುಳ್ಳೆಷ್ಟು?

'ಮಿಷ್, ಈ ಸಲದ ಎಲೆಕ್ಷನ್‌ನಲ್ಲಿ ಅಮ್ಮಗೇ ಓಟು ಹಾಕಿ!"

ಎತ್ತಣ ಇಮಾಮಿ ಸಾಬ್, ಎತ್ತಣ ಗೋಕುಲಾಷ್ಟಮಿ?

ನನ್ನದೇ ಮನಸ್ಸಿನ ಮಂಥನದಲ್ಲಿ ಮುಳುಗಿಹೋಗಿದ್ದ ನನಗೆ ಅವಳ ಮಾತಿನ ತಲೆಬುಡ ಅರ್ಥವಾಗಲಿಲ್ಲ. ಇನ್ನು ಕೆಲವೇ ದಿನಗಳಲ್ಲಿ ನಡೆಯಲಿರುವ ಎಲೆಕ್ಷನ್‌ಗೆ ಇವಳೇನಾದರೂ ಎಐಎಡಿಎಂಕೆ ಪರ ಪ್ರಚಾರಕ್ಕೆ ನಿಂತಿದ್ದಾಳೆಯೆ? ಕೈ ತುಂಬಾ ಅವಳಿಗೆ ದುಡ್ಡು ಕೊಟ್ಟು ಹೀಗೆ ಕತ್ತಲ ಕೋಣೆಯಲ್ಲಿ ಕೂಡಿ ಹಾಕಿ ಅಮ್ಮನನ್ನು ಹಾಡಿ ಹೊಗಳಿ ಪ್ರಭಾವಿಸುವುದಕ್ಕೆ ಸಾಕಷ್ಟೇ ದುಡ್ಡು ವಸೂಲು ಮಾಡಿರುವಳೆ? ಅಮಾಯಕರಂತೆ ಕಾಣುವವರನ್ನೇ ಎಐಎಡಿಎಂಕೆ ತನ್ನ ಪ್ರಚಾರಕ್ಕೆ ಬಳಸಿಕೊಳ್ಳುತ್ತಿರಬಹುದೇ ಇಂತಹ ಹಲವು ಗೊಂದಲಗಳ ಮಧ್ಯೆಯೇ, 'ಏಕೆ?' ಎಂದು ಕೇಳಿದೆ.

“ಮಿಷ್, ಡಿಎಂಕೆ ಮತ್ತೆ ಅಧಿಕಾರಕ್ಕೆ ಬಂದರೆ ಸ್ಕೂಲು, ಕಾಲೇಜಿನಲ್ಲಿ ತಮಿಳು ಭಾಷೆಯನ್ನು ಕಡ್ಡಾಯ ಮಾಡುತ್ತಾರೇಂತಾ ನಮ್ಮ ಮನೆ ಹತ್ತಿರ ಪ್ರಚಾರಕ್ಕೆ ಬಂದ ಎಐಎಡಿಎಂಕೆ ಕಡೆಯವರು ಹೇಳಿದರು. ನನ್ನ ಮಗನ ಸ್ಕೂಲ್‌ನಲ್ಲೂ ಹಾಗೇ ಹೇಳಿದರಂತೆ ಮಿಷ್. ಇಲ್ಲೂ ಎಲ್ಲಾ ಹಾಗೇ ಮಾತನಾಡಿಕೊಳ್ಳುತ್ತಿದ್ದಾರೆ ಮಿಷ್. ನಂಗೆ ತಿಂಗಳಿಗೆ ಏಳೆಂಟು ಸಾವಿರವಷ್ಟೆ ಸಂಪಾದನೆ. ತಮಿಳು ಕಡ್ಡಾಯವಾದರೆ ಮಗನಿಗೆ ಟ್ಯೂಷನ್‌ಗೆ



ಹಾಕಲು ನನ್ನ ಹತ್ತಿರ ದುಡ್ಡಿಲ್ಲ ಮಿಷ್, ಪ್ಲೀಜ್, ಅಮ್ಮನಿಗೇ ಓಟ್ ಹಾಕಿ ಮಿಷ್!' ಕೈ ಮುಗಿದು ಅತ್ಯಂತ ದೈನ್ಯದಿಂದ ಕೇಳಿಕೊಂಡಳು.

ಎಂತಹ ವಿಲಕ್ಷಣ ಬೇಡಿಕೆ? ಎಐಎಡಿಎಂಕೆ ಬಂದರೆ ತಮಿಳು ಕಡ್ಡಾಯ ಮಾಡುವುದಿಲ್ಲವೆಂದು ಹೇಳಿದವರಾರು? ಅರ್ಧ ಪ್ರಪಂಚ ಸುತ್ತಿದರೂ, ಜೀವನ ಪೂರ್ಣ ದುರಂತದಲ್ಲೇ ಕಳೆದರೂ, ಎಂತಹ ಮುಗ್ಧ ನಂಬಿಕೆಯಲ್ಲಿ ಅಂಗಲಾಚುತ್ತಾ ನಿಂತಿದ್ದಾಳಲ್ಲಾ...!

ಒಂದು ಕ್ಷಣ ವಿಚಲಿತಳಾದೆ. ನಂಬಿಕೆಯೇ ಬದುಕಿನ ಅಡಿಪಾಯದ ಮೊದಲ ಇಟ್ಟಿಗೆ ಅನ್ನುವುದು ನಿಜವಾದರೂ ಹುಟ್ಟಿನಂದಿನಿಂದಲೂ ಗುದ್ದಾಡುತ್ತಲೇ ಏಗುತ್ತಾ ಬದುಕು ಕಟ್ಟಿಕೊಳ್ಳುದರಲ್ಲೇ ಜೀವನಪೂರ್ಣ ಹೈರಾಣಗುತ್ತಾ ಕಳೆದರೂ, ಅವಳಲ್ಲಿನ್ನೂ ಹೋರಾಡುವ ಮನೋಭಾವ, ಅಪಾರ ಮುಗ್ಧತೆ, ಅಚಲ ನಂಬಿಕೆ ಉಳಿದಿರುವುದು ಕಂಡು ದಂಗಾದೆ. ಧರ್ಮ, ನೆಲ, ಜಲ, ಭಾಷೆಯೆಂದು ಬಹುತ್ವದ ನೋವಿನಲ್ಲಿ ದಾಸ್ಯವಾಗಿ ಸದಾ ಒಂದಲ್ಲಾ ಒಂದು ಜಂಜಡದಲ್ಲಿರುವ ಒಂದು ದೇಶದಲ್ಲಿ ಕನಸು ಕಾಣುವುದನ್ನು ಮರೆತವರ ನಡುವೆ ಕನಸು ಕಾಣುವ ಅವಳ ಅಗಾಧ ಶಕ್ತಿ ಮಾತ್ರ ನನ್ನನ್ನು ತಟ್ಟಿದ್ದು ಸುಳ್ಳಲ್ಲ.

ಕಾಲ ಬದಲಾದರೂ ಇತಿಹಾಸ ಬದಲಾಗುವುದಿಲ್ಲ ಅನ್ನುವುದು ಇದಕ್ಕೇ ಏನು? ಇತಿಹಾಸಕ್ಕೆ ಅಗಾಧ ಸಂಪತ್ತಿನ ವಿಷಯಗಳಿವೆ, ಅದು ಕಾಲಕ್ಕೆ ತಕ್ಕಂತೆ ವೃದ್ಧಿಸುತ್ತಲೇ ಇರುತ್ತೆ, ಪ್ರತಿಯೊಂದು ಪ್ರಮುಖ ಘಟನೆಯೂ ಕಾಲಗರ್ಭದಲ್ಲಿ ಹುಗಿದು ಹೋಗಲೇಬೇಕಷ್ಟೆ? ತನ್ನ ಅಸಾಧ್ಯ ಒಡಲಲ್ಲಿ ಪೇರಿಸಿಟ್ಟುಕೊಳ್ಳುವ ಅಸಂಖ್ಯ ವಿಪನ್ಯಾಸಗಳಲ್ಲಿ ದೇಶ, ಜನ, ವರ್ಣ, ಜಾತಿ, ಕುಲ, ಗೋತ್ರಗಳೆಲ್ಲಾ ಒಂದೇ. ಒಟ್ಟಿನಲ್ಲಿ ಅವೆಲ್ಲವೂ ಮನುಕುಲದ ಕತೆ, ಅರಾಜಕತೆಯಿಂದಾಳಿದ ರಾಜನ ಮೂರ್ಖತನವೋ ನಿರಂಕುಶಾಧಿಕಾರಿಯ ಅಟ್ಟಹಾಸವೋ, ಮೂಲದಲ್ಲಿ ಬಲಿಯಾಗುವವರು ಆ ಕಾಲಕ್ಕೆ ಒದಗಿ ಬರುವ ಅಮಾಯಕರಷ್ಟೇ....!

ಗಲ್ಲದ ಮೇಲೆ ಕುಳಿತ ಒಡತಿ ಹೇಳಿದಷ್ಟು ದುಡ್ಡನ್ನು ಪಾವತಿಸಿ, ಪಾರ್ಲರ್‌ನಿಂದ ಹೊರ ಬಂದು ಮುಖ್ಯರಸ್ತೆಗೆ ಇಳಿಯುತ್ತಿದ್ದಂತೆ, ಎಲೆಕ್ಷನ್ ಯಾವಾಗ ಎಂದು ನೆನಪಿಸಿಕೊಳ್ಳುತ್ತಿದ್ದಂತೇ, ಅರೆ, ನಾನಿನ್ನೂ ಮದರಾಸಿನಲ್ಲಿ ಓಟರ್ಸ್ ಕಾರ್ಡ್ ಮಾಡಿಸಿ ಕೊಂಡಿಲ್ಲವಲ್ಲ ಎಂದು ನೆನಪಾಯಿತು.

## ಧಣಿಗಳ ಬೆಳ್ಳಿಲೋಟ

**- ಎಚ್. ನಾಗವೇಣಿ**

ಆ ಮಾನಗೇಡಿ ಹೊಳೆಗೆ ಒಂದಿಷ್ಟು ಉಗುರೆಡೆಲ್ಲಾದರೂ ನಾಚಿಕೆಯೆಂಬುದು ಇದ್ದಿದ್ದರೆ, ಒಂದಾ ಆ ಪರಿಯ ಬೈಗಳಿಗೆ ಅದು ತಟ್ಟನೆ ಇಂಗಿಹೋಗುತ್ತಿತ್ತು ಅಥವಾ ಸರ್ರೆಂದು ನುಗ್ಗಿ ಬಂದು ಆಕೆಯನ್ನು ನುಂಗಿಬಿಡುತ್ತಿತ್ತು. ಅದೆಂತದ್ದೂ ಇಲ್ಲದೆ ಅದು “ಊದು ದಾಸಯ್ಯ ನನ್ನ ಬಾಲಕ್ಕೆ ಇನ್ನಷ್ಟು ಶಂಖ' ಎಂಬಂತೆ ಕಸಕಡ್ಡಿಗಳನ್ನು ಹೊತ್ತು ಹರಿಯುತ್ತಲೇ ಇತ್ತು. ಅತ್ತ ಕಡಲತ್ತ.

ಮುಂಜಾನೆ ಚೆನ್ನಮ್ಮ ಎಂದಿನಂತೆ ಹೊಳೆಯ ಸೆರಗಲ್ಲಿ ಮುಸುರೆ ಪಾತ್ರೆಗಳನ್ನು ರಾಶಿ ಹಾಕಿ ಕೂತು. ಪಕ್ಕದಲ್ಲಿ ಬೂದಿಯ ಗೆರಟೆಯನ್ನಿರಿಸಿಕೊಂಡು ಹೊಳೆಯ 'ಗುಣವಾಚನ'ಕ್ಕೆ ತೊಡಗಿದ್ದಳು. ಹೊಳೆಯುವ ಹೊಳೆಯ ಮೈಗೆ ಆ ಪರಿಯ ಬೈಗಳ ಪೆಟ್ಟು ತಗಲುತ್ತಿದ್ದಂತೆ, ಅದರ ದಡದಲ್ಲಿ ನಿಂತು ಮರಿಮೀನುಗಳ ತಪಾಸಣೆಯಲ್ಲಿದ್ದ ಆಸಂಖ್ಯ ಕೊಕ್ಕರೆ-ಕೊಂಗ್ರು-ಮಿಂಚುಳ್ಳಿಗಳೆಲ್ಲ ಆಕೆಯ ಬೈಗಳ ಪಾಲು ತಮಗೆಂದೂ ಬೇಡವೆಂಬಂತೆ ಸರನೆ ಆಚೆ ದಡಕ್ಕೆ ತಟ್ಟನೆ ಹಾರಿ ಹೋದವು.

ಆ ಹೊಳೆಯೇನು ಬೇಕು ಬೇಕೆಂದೇ ಚೆನ್ನಮ್ಮನ ಕುಟುಂಬಕ್ಕೆ ಅಂತಹ ಅಪವಾದವನ್ನು ಎಳೆದು ತಂದುಹಾಕಿದೆಯೇ? ಅದಕ್ಕೂ ಚೆನ್ನಮ್ಮನ ಪುಟ್ಟ ಸಂಸಾರದ ಬಗ್ಗೆ ಅದೆಷ್ಟು ಪ್ರೀತಿ ವಾತ್ಸಲ್ಯ, ಕಾಳಜಿ, ಅನುಕಂಪವಿಲ್ಲ!

ಇಲ್ಲದಿದ್ದಲ್ಲಿ ಆ ಹೊಳೆ ಯಾಕಾಗಿ ಚೆನ್ನಮ್ಮನ ಗಂಡ ಕುದುಪನ ಗಾಳದ ಬಾಯಿಗೆ ಅಂತಹ ಹೊಡೆಯುವ ಮಳೆಗಾಲದಲ್ಲೂ ದಿನವೂ ಒಂದಷ್ಟು ತರುಮೀನುಗಳನ್ನು ಸಿಲುಕಿಸಬೇಕು! ಹಾಗೆ ತಾನು ಹರಿದು ಬರುವಾಗಲೆಲ್ಲಾ ತನ್ನ ಸೆರಗಂಚಿನಲ್ಲಿರುವ ತೋಟಗಳಿಂದ ಆಗ್ಗಾಗ್ಗೆ ಅಷ್ಟಿಷ್ಟು ತೆಂಗಿನಕಾಯಿ. ಸೌದೆ, ಕಟ್ಟಿಗೆಗಳನ್ನು ತಂದು ಕುದುಪನ ದಿಟ್ಟಿಗೆ ಅವನ್ನೆಲ್ಲ ಬೀಳಿಸುತ್ತಿಲ್ಲವೇ! ಆಟಸೋಣ ಕಾಲದ ಮಳೆಗಾಲದಲ್ಲಂತೂ ಕೇಳುವುದೇ ಬೇಡ. ಅಲ್ಲಿ ಇಲ್ಲಿಂದ ಪಾತ್ರೆಪಗಡಿ, ಸೌದೆ. ಕಟ್ಟಿಗೆ, ಕೋಳಿ-ಕುರಿ, ಏಣಿ-ದೋಣಿ, ರೀಪು-ಪಿಕ್ಕಾಸುಗಳನ್ನು ಹೊತ್ತು ತಂದು ಚೆನ್ನಮ್ಮ ಕುದುಪರ ಮಡಲಿಗೆ ಸುರಿಯುವುದು ಮಾಮೂಲು ಚೆನ್ನಮ್ಮನ ಕುಟುಂಬದ ಜತೆ ಈ ಹೊಳೆಗೆ ಅಷ್ಟೊಂದು ಒಡನಾಟವಿದ್ದರೂ, ಮೊನ್ನೆಯ ಶ್ರಾವಣ ಮಾಸದ ನಾಕರಂದು ಇದೇ ಹೊಳೆ ಆಕೆಯ ಕುಟುಂಬದ ಮೇಲೆ ದೊಡ್ಡ ಅಪವಾದವೊಂದನ್ನು ಹೊರಿಸಿ ಇಡಿಯ ಕುಟುಂಬದ ಉಗ್ರಕೋಪ-ಅಸಹನೆಗೆ ಬಲಿಯಾಗಬೇಕಾಯಿತು.

ಅದದ್ದಿಷ್ಟೆ ಕಳೆದ ಶ್ರಾವಣ ಮಾಸದ ನಾಕನೇ ದಿನ ಚೆನ್ನಮ್ಮನ ಏಕೈಕ ಮಗ ಗುಡ್ಡ. ಆ ಪರಿಯಲ್ಲಿ ತುಂಬಿ ಹರಿಯುತ್ತಿದ್ದ ಶಾಂಭವಿ ಹೊಳೆಯ ದಡದಲ್ಲಿ ಕೂತು ಧಣಿ



ಮನೆಯ ಮುಸುರೆ ಪಾತ್ರೆಗಳನ್ನು ತಿಕ್ಕುತ್ತಿದ್ದ. ಆಷಾಢ-ಶ್ರಾವಣ-ಭಾದ್ರಪದ ಮಾಸದಲ್ಲಿ ನದಿಯ ಒಡಲೆಂದರೆ ಎಂಥದ್ದು! ಕಾವಿಗೆ ಕೂತ ಹೇಂಟೆಯಂತೆ ವಡಲು ಯಾವತ್ತೂ ವ್ಯಗ್ರ ಪ್ರಕ್ಷುಬ್ಧ ಹತ್ತಿರ ಬಂದವರನ್ನು ಕುಕ್ಕಿ ಮುಕ್ಕುವ ಸಿಡುಕು, ಹುಟ್ಟುವ ಘಟ್ಟದಲ್ಲಿ ಆ ಹೊಳೆಯ ದೇಹ-ಒಡಲು ಮನಸ್ಸು ಪ್ರಫುಲ್ಲ. ಶಾಂತ, ನಿರ್ಮಲವಾಗಿದ್ದರೂ ಅದು ಸಾಗಿ ಬರುವ ದಾರಿಯೇನು ಸುಲಭದ್ದೇ, ಕಡಲ ಸಂಗಮಕ್ಕಾಗಿ ರಭಸದಿಂದ ಹಾತೊರೆದು ಬರುವಾಗ ದಾರಿಯಲ್ಲಿ ತುಂಬಿ ಹರಿವ ಅನೇಕ ಕೆರೆ ತೋಡು ಹಳ್ಳ ಕೊಳ್ಳಗಳನ್ನು ತನ್ನೊಡಲೊಳಗೆ ಬಾಚಿಕೊಂಡು ಸಾಗಿ ಬರಬೇಕಲ್ಲವೆ! ಇಂತಹ ವಿಕ್ಷಿಪ್ತ ಮನಃಸ್ಥಿತಿ ಪರಿಸ್ಥಿತಿಯಲ್ಲಿ ಆ ಶಾಂಭವಿ ಹೊಳೆ ಇರಬೇಕಾದರೆ, ಚೆನ್ನಮ್ಮನ ಮಗ ಎಂಟುವರ್ಷದ ಗುಡ್ಡ ಧಣಿಗಳ ಮುಸುರೆ ಪಾತ್ರೆಯಲ್ಲಿ ಮರಿಮೀನುಗಳನ್ನು ಹಿಡಿಯುವ ಆಟವನ್ನಾಡುತ್ತಾ.. ತನ್ನದೇ ಲೋಕದಲ್ಲಿ ವಿಹರಿಸುತ್ತಾ ಪಾತ್ರೆ ಉಜ್ಜುತ್ತಿದ್ದ.

ನಿಜಕ್ಕೂ ಧಣಿ ವೆಂಕಪ್ಪಯ್ಯನವರ ಮಾತಿನಂತೆ ಹೇಳುವುದಾದರೆ ಗುಡ್ಡ ಪಾತ್ರೆ ಉಜ್ಜುತ್ತಿದ್ದುದು ಹೊಳೆಯ ಸೆರಗಲ್ಲಿ ಅಲ್ಲವೇ ಅಲ್ಲ. ಆತ ಉಜ್ಜುತ್ತಿದ್ದುದು ವೆಂಕಪ್ಪಯ್ಯನವರ ತೆಂಗಿನ ತೋಟದ ಅಂಚಿನಲ್ಲಿ ಮಳೆಗಾಲದಲ್ಲಿ ಈ ಹೊಳೆ ಆಡಿದ್ದೇ ಆಟ, ಹೂಡಿದ್ದೇ ಹೂಟ... 'ಮಳೆಗಾಲ ಬಂದರೆ ಸಾಕು ಈ ಬಿಕನಾಸಿ ಹೊಳೆ ಉರಿಡೀ ತನ್ನ ಸೆರಗನ್ನೇ ಹಾಸಿಬಿಡುತ್ತದೆ. ಎಷ್ಟಗಲ ಸೆರಗು ಹಾಸಿದರೂ ಇನ್ನಷ್ಟು ದೂರಕ್ಕೆ ಹಾಸಬೇಕೆಂಬ ಚಟ ಇದಕ್ಕೆ...' ಎಂದು ಧಣಿಗಳು ಯಾವತ್ತೂ ಹೊಳೆಯನ್ನು ಮೂದಲಿಸುವುದು ಇದ್ದೇ ಇದೆ. ಹೊಳೆಗೂ ಬಾಯೇನಾದರೂ ಬರುತ್ತಿದ್ದರೆ 'ಎಲವೋ ಹುಲು

ಮಾನವ ವೆಂಕಪ್ಪಯ್ಯ, ಸುತ್ತಲ ನಾಕೂರಲ್ಲಿರುವ ಯಾವನೇ ಶ್ಯಾನುಭೋಗ ಉಗ್ರಾಣಿಯನ್ನಾದರೂ ಕರೆತಂದು ನನ್ನೆದುರು ಸರಪಳಿ ಎಳೆಸು.ಅವೆಲ್ಲವೂ ನನ್ನದಲ್ಲದಿದ್ದರೇ ಕೇಳು ಮತ್ತೆ... ಎಂದು ಮರು ಉತ್ತರ ಕೊಡುತ್ತಿತ್ತೇನೋ! ಬಾಯಿ ಇಲ್ಲದಿದ್ದರೇನಂತೆ... ಮಳೆಗಾಲ... ಬಂದೊಡನೆ ಬರಿ ಕ್ರಿಯೆಯಲ್ಲೇ ತನ್ನ ವ್ಯಾಪ್ತಿ, ತನ್ನ ಪರಿಹಾರ, ತನ್ನ ಬಲ ಎಷ್ಟೆಂಬುದನ್ನು ಧಣಿಗಳಿಗೆ ಮನವರಿಕೆ ಮಾಡಿ ಅವರಿಗೆ ಕಿರಿಕಿರಿ ಎಬ್ಬಿಸುವುದರಲ್ಲಿ ಹೊಳೆಯೇನು ಹಿಂದೆ ಬಿದ್ದಿಲ್ಲ. ಹೊಳೆಯ ಈ ಉಪಟಳ ತಾಳಲಾರದೆ ಧಣಿಯವರು ಪ್ರತಿವರ್ಷವೂ ಹೊಳೆ ಸೊರಗುವ ಕಾಲಕ್ಕೆ ತನ್ನ ಮೇಲುಸ್ತುವಾರಿಯಲ್ಲಿ ನದಿ ಸೆರಗನ್ನು ಒಂದಷ್ಟು ಆತ್ತಾಗೆ ದೂಡುವಂತೆ ಪಾದೆಕಲ್ಲು-ಮುರಕಲ್ಲಿನ ಗಟ್ಟಿ ಅಡಿಪಂಚಾಂಗ ಹಾಕಿಸಿ ನದಿಯ ಸೆರಗಿಗೂ ತೋಟಕ್ಕೂ ನಡುವೆ ಧರೆ ಎಬ್ಬಿಸಿ ಎತ್ತರಿಸುವುದಿದೆ. ಈ ವರ್ಷ ಹೊಳೆಯ ಮೈಯಿಂದ ತೋಟವನ್ನು ನಾಕಡಿ ಎತ್ತರಿಸಿದ್ದರೆ, ಮುಂದಿನ ವರ್ಷ ಐದಡಿ ಎತ್ತರಿಕೆ. ಆದರೆ ಆ ಬಿರುಬೇಸಗೆಯಲ್ಲಿ ನಿತ್ರಾಣ ಸ್ಥಿತಿಯಲ್ಲಿರುವ ಹೊಳೆಯಂತೂ ತನ್ನ ನಿಶ್ಚಕ್ತ ಸ್ಥಿತಿಯಲ್ಲಿ ಧಣಿಗಳ ಆಕೃತ್ಯವನ್ನು ಕಂಡುಕಾಣದಂತು ಇತ್ತು. ಗದ್ದೆಯಲ್ಲಿ ಬಿತ್ತುವುದನ್ನು ಮರಳ ದಿಣ್ಣೆಯ ಮೇಲೆ ಬಿತ್ತಿದೆಯಲ್ಲವ ಮಾರಾಯ...?' ಎಂದು ಧಣಿಯವರ ಪೆದ್ದುತನದ ಬಗ್ಗೆ ಮನಸಲ್ಲೇ ನಗುತ್ತಾ ಆ ಧರೆಯನ್ನು ಕೆಡವಲು ಕೊಂಚು ಹಾಕುತ್ತಿರುತ್ತದೆ. ಅನಾದಿ ಕಾಲದಿಂದಲೂ ಅಲ್ಲೇ ಇರುವ ಹೊಳೆಗೇನು ತಿಳಿದಿಲ್ಲವೆ... ಇವ ಧನಿಕ ಮಹಾಶಯ ತನ್ನ ಸೆರಗನ್ನೇ ಒತ್ತರಿಸಿಕೊಂಡು ತೋಟಮಾಡಿದ್ದಾನೆ ಎನ್ನುವ ಸತ್ಯ ಅಂತು ಮಳೆಗಾಲ ಕಾಲಿಟ್ಟು ಆಟಿ ತಿಂಗಳ ನಾಲ್ಕು ಜಡಿಮಳೆ ಹೊಡೆದರೆ ಸಾಕು ಧಣಿಗಳು ಕಟ್ಟಿದ ಧರೆ ಬುಡದಿಂದಲೇ ಲಯ ಹೊಳೆ ತಟ್ಟನೆ ಧಣಿಯವರ ತೋಟದೊಳಗೆ ನುಗ್ಗಿ ಅದನ್ನೀಡಿ ಕಡಲು ಮಾಡಿ ಸೇಡು ತೀರಿಸಿಕೊಳ್ಳುತ್ತದೆ.



ಹೀಗೆ ಧಣಿ ಹಾಗೂ ಹೊಳೆಯ ನಡುವೆ ಇನ್ನೂ ಸಮರ ನಡೆಯುತ್ತಿದ್ದ ಆ ಶ್ರಾವಣಮಾಸದ ಮುಂಜಾನೆ ಬಾಲಕ ಗುಡ್ಡ ತೋಟದ ಅಂಚಲ್ಲಿ ಕೂತು ಬೂದಿಯಿಂದ ತಿಕ್ಕಿದ ಪಾತ್ರೆಗಳನ್ನು ಹೊಳೆಯ ನೀರಲ್ಲಿ ಜಾಲಾಡಿಸುತ್ತಿದ್ದ ಹೊಳೆಯ ನೀರು ವಾರಗಟ್ಟಲೇ ಅಲ್ಲೇ ನಿಂತು ಧಣಿಗಳ ತೋಟದ ಅಂಚು ತುಳುವ ಹಲಸಿನಂತೆ ಮೆತ್ತಗಾಗಿದೆ. ಎಂಬುದು ಆ ಪುಟ್ಟ ಬಾಲಕನಿಗೆ ಅದ್ಹೆಗೆ ತಿಳಿದೀತು? ಹಿಂದಿನ ದಿನ ರಾತ್ರಿ ಊರ ವಿಷ್ಣುಮೂರ್ತಿ ದೇವಳದಲ್ಲಿ ನಡೆದ ಹರಿಕಥಾ ಕಾಲಕ್ಷೇಪದಲ್ಲಿ ಹರಿದಾಸರು ಹೇಳಿರುವ ಉಪಕತೆಗಳನ್ನು ನೆನಪಿಸಿಕೊಂಡೇ ನಗುತ್ತಾ ಪಾತ್ರೆ ಬೆಳಗುತ್ತಿದ್ದ ಆ ಬಾಲಕನಿಗೆ ಕಾಲಡಿಯ ಮಣ್ಣು ಕುಸಿಯಬಹುದೆನ್ನುವ ಅಂದಾಜು ಇಲ್ಲ... ಪರಿಜ್ಞಾನವೂ ಇಲ್ಲ ಕಾಲಡಿ ಮಣ್ಣು ಮೆಲುವಾಗಿ ಕುಸಿದು ಹೊಳೆಗೆ ಜಾರಿತು! ಕ್ಷಣಮಾತ್ರದಲ್ಲಿ ಗುಡ್ಡನ ಜತೆ ಧಣಿಗಳ ಮನೆಯ ಪಾತ್ರೆ ಸೌಟು, ಕೊಳಗ ತಪ್ಪಲೆಗಳೆಲ್ಲವೂ ನೀರು ಪಾಲಾದವು! ಗುಡ್ಡನೇನು ಸಾಮಾನ್ಯದ ಪೋರನೆ? ಆತನ ಈಜಿಗೆ ಮೀನುಗಳೇ ನಾಚಬೇಕು ಈಜಿ ಮೇಲೆ ಬಂದವ ನೇರ ಧಾವಿಸಿದ್ದು ಅಪ್ಪ ಕುದುಪನತ್ತ ಧಣಿಗಳ ತೋಟದಲ್ಲಿ ತೆಂಗಿನಬುಡ ಬಿಡಿಸುವ

ಕಾಯಕದಲ್ಲಿ ಮಗ್ನನಾಗಿದ್ದ ಕುದುಪನಿಗೆ ಮಗನ ಮಾತು ಕೇಳಿ ಎದೆ ಬಡಿತ ಸ್ತಬ್ದಗೊಂಡಂತಾಯಿತು. ಬಂದು ನೋಡುತ್ತಾನೇನು ಮುಸುರೆ ಪಾತ್ರೆಗಳೆಲ್ಲವೂ ಹೊಳೆಯ ಪಾಲಾಗಿವೆ. ಧಣಿಗಳಿಗೇನಾದರೂ ಈ ಸುದ್ದಿ ತಲುಪಿಸಿದರೆ ಅವರ ಸಿಟ್ಟಿನ ಭರಕ್ಕೆ ತಾವೆಲ್ಲರೂ ಹೊಳೆಪಾಲುಗುವುದು ಖಂಡಿತ ಎಂದು ಅಲೋಚಿಸಿದವನೆ ತಟ್ಟನೆ ಮೈಯ ಬಟ್ಟೆಬರೆಗಳನ್ನೆಲ್ಲ ಜಾರಿಸಿ ಅತ್ತೆಸೆದು ಕೋಮಣಾಲಂಕೃತನಾಗಿ ಹೊಳೆಯಲ್ಲಿ ಮುಳುಗಿ ನೆಲಕಚ್ಚಿರುವ ಪಾತ್ರೆಗಳಿಗಾಗಿ ಜಾಲಾಡತೊಡಗಿದ್ದ. ಕುಸಿದ ಮಣ್ಣಡಿಯಲ್ಲಿ ಸಿಗುವಷ್ಟು ಪಾತ್ರೆಗಳು ಸಿಕ್ಕವು ಇನ್ನೆಷ್ಟು ಪಾತ್ರೆಗಳು ಸಿಗಬೇಕು? ಕುದುಪನಿಗೆ ಅಂದಾಜಿಲ್ಲ. ಮುಸುರೆ ಪಾತ್ರೆಗಳ 'ಒಡೆಯ' ಮಗನನ್ನು ಕೇಳಿದರೆ ಆತ ತೋರುಬೆರಳನ್ನು ಬಾಯೊಳಗಿರಿಸಿಕೊಂಡು ಮೌನಮುದ್ರೆಯಲ್ಲಿದ್ದಾನೆ. ಹೇಗೂ ಚಡ್ಡಿ ಒದ್ದೆ ನೀರಾಗಿದೆ. ಮತ್ತೊಮ್ಮೆ ತಾನು ಈ ತುಂಬಿದ ಹೊಳೆಯಲ್ಲಿ ಯಾಕೆ ಈಜಬಾರದು? ಅಪ್ಪನಲ್ಲಿ ಕೇಳುವದೋ.... ಬಿಡುವುದೋ.... ಎಂಬ ಯೋಚನೆಯಲ್ಲಿದ್ದ ಗುಡ್ಡನಲ್ಲಿ

'ಏಯ್ ಮೂರಾಸಿನ ಹಡಬೆ... ಇಷ್ಟೇನಾ ಪಾತ್ರೆ... ಇನ್ನಾವುದಾದರೂ ಮುಳುಗಿದ್ದನಾ...?'

ಅವನ ಪ್ರಶ್ನೆಗೆ ಮಗ ಯೋಚನೆಯ ಕೋಟೆಯಿಂದ ಹೊರಬಂದ

ಉಹುಂ... ಮಗ ಗುಡ್ಡನಿಗೆ ಇನ್ಯಾವ ಪಾತ್ರೆಗಳು ನೆನಪಿಗೆ ಬರುತ್ತಿಲ್ಲ. ಮಾಮೂಲಾಗಿ ದಿನವೂ ಇರುವಂತಹ ಎರಡು ಕಂಚಿನ ಕೊಳಗ, ಎರಡು ಹಿತ್ತಾಳೆ ಗಿಂಡೆ.. ಹತ್ತು ಹಿತ್ತಾಳೆ ಲೋಟ, ಎರಡು ಚೊಂಬು, ಆರು ಮರದ ಸೌಟು, ಎರಡು ಹಿತ್ತಾಳೆ ಸೌಟು, ಹತ್ತು ಕಂಚಿನ ಬಟ್ಟಲು, ಎಂಟು ಹಿತ್ತಾಳೆ ತಟ್ಟೆ. ಒಂದು ಬಾಣಲೆ... ಇವೆಲ್ಲವೂ ಇದೆ ಮತ್ಯಾವುದು ಕಾಣಿಸುತ್ತಿಲ್ಲ? ಮಗ ಗುಡ್ಡನಿಗೂ ತಿಳಿಯುತ್ತಿಲ್ಲ. ಅಪ್ಪನಿಗೂ ಅಷ್ಟೇ ಅಪ್ಪ ಮಗನನ್ನು ಅದೆಷ್ಟು ಕಾಡಿದರೂ ಬೇಡಿದರೂ ಬಾಲಕ ಗುಡ್ಡನಿಗೆ ಉತ್ತರಿಸಲು ಕಿವಿ ಬಾಯಿ ಏನೂ ತೋಚುತ್ತಿಲ್ಲ ಧಣಿಯವರ ಒಡತಿ ದಿನವೂ ಹೊರಗೆ ಸುರಿಯುವ ಮುಸುರೆ ಪಾತ್ರೆಗಳನ್ನು ಹೊತ್ತು ತಂದು ಅದನ್ನು ಉಜ್ಜುವುದಷ್ಟೇ ಆತನ ಕೆಲಸ. ಎಷ್ಟು



ಪಾತ್ರೆ. ಯಾವುದು ಏನು ಎತ್ತ ಯಾಕಿಷ್ಟು ಎಂದು ವಿಚಾರಿಸಿದರೆ, ಧಣಿ ಪತ್ನಿಗೆ ಮಜ್ಜಿಗೆ ಕಡೆಯುವ ಕಡೆಗೋಲಲ್ಲೆ ತಲೆ ಸೀಳಿಬಿಟ್ಟಾರು!

ಅಪ್ಪನ ಕಾಡುವಿಕೆಗೆ ಕೊನೆಗೂ ಯೋಚಿಸಿ ಯೋಚಿಸಿ ಹಣ್ಣಾದ ಗುಡ್ಡನಿಗೆ ತಟ್ಟನೆ ನೆನಪಿಗೆ ಬಂದದ್ದು ಆ ಬೆಳ್ಳಿಲೋಟ ಮುಂಜಾನೆ ರೇಜಿಗೆ ಹಿಡಿಸುವಷ್ಟು ಬಾರಿ ಧಣಿ ಪತ್ನಿಯವರು 'ಈ ಬೆಳ್ಳಿಲೋಟ ಜಾಗ್ರತೆ ಮಾರಾಯ ನನ್ನ ಮದುವೆಯಲ್ಲಿ ನನ್ನಪ್ಪ ಕೊಟ್ಟಿದ್ದು... ಅಪ್ಪಯ್ಯ ಕುಡ್ಲದ ರಥಬೀದಿಯಲ್ಲಿರುವ ನರಸಿಂಹಾಚಾರಿಯಲ್ಲಿ ಮಾಡಿದ್ದು ಅದರ ಮೈಮೇಲಿನ ಹೂಬಳ್ಳಿಯನ್ನು ಈ ಕಾಲದಲ್ಲಿ ಯಾವ ಆಚಾರಿ ತಾನೆ ಮಾಡಿಯಾನು...' ಎಂದು ಹೇಳಿಯೇ ಮುಸುರೆ

ಪಾತ್ರೆಯ ಜತೆಗೆ ಅದನ್ನೂ ಸೇರಿಸಿ ಇಟ್ಟಿದ್ದನ್ನು ಗುಡ್ಡ ಇದೀಗ ನೆನಪಿಸಿಕೊಂಡ ಅದರೇನು ಆತ ನೆನಪಿಸಿಕೊಂಡದ್ದೆ. ಬಂತು ಕುದಪ ಅದೆಷ್ಟು ಬಾರಿ ಹೊಳೆಯೊಳಗೆ ಮುಳುಗಿ ಮೇಲೆದ್ದರೂ ಬೆಳ್ಳಿಲೋಟವನ್ನು ಬಿಟ್ಟು ಕೊಡುತ್ತಿಲ್ಲ. ಅಂತೂ ಬೆಳ್ಳಿಲೋಟ ಹೊಳೆಯ ಒಡಲಿಂದ ಹೊರಬರಲಿಲ್ಲ. ಅಪ್ಪ ಮಗ ಇಬ್ಬರೂ, ಆಗ ತಾನೆ ಅಲ್ಲಿಗೆ ಬಂದ ಚೆನ್ನಮ್ಮನ ಜತೆ ಸೇರಿ ಸಾಕಷ್ಟು ಕಣ್ಣೀರನ್ನು ಹೊಳೆಯ ನೀರಿಗೆ ಸೇರಿಸಿದರೂ ಹೊಳೆಯಿಂದ ಬಂದ ಉತ್ತರ ಒಂದೇ- ಬೆಳ್ಳಿಲೋಟ ಇಲ್ಲ ಎಂಬುದೇ ಭೂಮಿ ಆಕಾಶ ಒಂದಾಗುವಂತೆ ಮತ್ತೆ ಮಳೆ ಜಡಿಯತೊಡಗಿದಾಗ ಕುದುಪ ಅಸಹಾಯಕನಾಗಿ ಧಣಿಗಳ ಅಂಗಳಕ್ಕೆ ಬಂದು ಬೆಳ್ಳಿಲೋಟದ ವಿಷಯ ತಲುಪಿಸಿದ್ದ. ಮಳೆಯ ಅರ್ಭಟದ ಜತೆ ಧಣಿಯರ ಅರ್ಭಟವೂ ಏರಿತು. ಆ ಆರ್ಭಟದ ಜತೆಗೆ ಕುದುಪನ ಕುಟುಂಬವೆ ಬೆಳ್ಳಿಲೋಟವನ್ನು ಲಪಟಾಯಿಸಿದ್ದು ಎಂಬ ಅಪವಾದವೂ ಬೀಸಿಬಂದು, ಕುದುಪ ಧಣಿಗಳ ಕೈಕಾಲು ಹಿಡಿದು ನಡೆದ ನಿಜಸ್ಥಿತಿ ವಿವರಿಸಿದರೂ ಅವರು ಒಪ್ಪಲೊಲ್ಲರು. ಧಣಿಯವರು ಎಂದಾದರೂ ಒಕ್ಕಲ ಮಕ್ಕಳನ್ನು ನಂಬಿದ್ದುಂಟೆ?

'ಇದೆಲ್ಲ ಸಾಕು ಮಾರಾಯ ಯಾವತ್ತೂ ನಮ್ಮ ಮುಸುರೆ ಪಾತ್ರೆಗಳನ್ನು ನುಂಗದ ಹೊಳೆ ಇವತ್ತು ನನ್ನಪ್ಪ ಮದುವೆಯಲ್ಲಿ ಕೊಟ್ಟ ಬೆಳ್ಳಿಲೋಟವನ್ನು ನುಂಗಿತನಾ...' ಎಂದು ಒಳಮನೆಯ ದಾರಂದಕ್ಕೆ ಆತು ನಿಂತು ಧಣಿಪತ್ನಿಯವರು ಚೀರಿದಾಗ ಕುದುಪನ ಬಾಯಿ ಕಟ್ಟಿಹೋಗಿತ್ತು.

ಧಣಿಗಳು ಗುಡ್ಡನ ಬಾಯಿ ಬಿಡಿಸಲು ಆತನ ಮೈ ಮೇಲಿನ ಚರ್ಮ ಸುಲಿಯುವುದೊಂದೇ ಬಾಕಿ, ಅಂಗಳದ ಹೊಂಗಾರೆ ಮರಕ್ಕೆ ಆತನನ್ನು ಬಿಗಿದು ಆ ಮಳೆಯಲ್ಲೇ ತೆಂಗಿನ ಕೊತ್ತಳಿಗೆಯಲ್ಲಿ ಬಡಿದೇ ಬಡಿದರು. ಚೆನ್ನಮ್ಮನಿಗೆ ತನ್ನ ಕರುಳ ಕುಡಿಯ ಚೀರಾಟ ನರಳಾಟ ನೋಡಲಾಗಲಿಲ್ಲ ತಟ್ಟನೆ “ನಮ್ಮ ಊರ ಕೋಡಬ್ಬು ದೈವದ ಆಣೆಯಿದೆ... ಇನ್ನು ನನ್ನ ಮಗನ ಮೇಲೆ ಕೈ ಮಾಡಿದಲ್ಲಿ...” ಎಂದು ಅಸಹಾಯಕತೆಯಿಂದ ಕಿರಿಚುತ್ತ ಧಣಿಗಳ ಕಾಲಿಗಡ್ಡ ಬಿದ್ದು, ತಾನು ಆ ಬೆಳ್ಳಿಲೋಟದ ಹಣವನ್ನು ವರ್ಷಾನುಗಟ್ಟಲೆ ಪಡಿಯಿಲ್ಲದೆ ನಿಮ್ಮಲ್ಲಿ ದುಡಿದು ತೀರಿಸುವೆನೆಂದು ಅಳುತ್ತಾ ಬೇಡಿಕೊಂಡಳು. ಧಣಿಗಳ ಕೈಯಿಂದ ಕೊತ್ತಳಿಗೆ ಕೆಳಗುರುಳಿತು, ಮುಂದಿನ ಮೂರು ಬೇಸಿಗೆವರೆಗೆ ಚೆನ್ನಮ್ಮನ ದುಡಿತಕ್ಕೆ ಪಡಿಯಿಲ್ಲ. ಎಂಬ ಕರಾರಿನನ್ವಯ ಗುಡ್ಡ ಬಂಧಮುಕ್ತನಾದ.



ಧಣಿಗಳ ಬೆಳ್ಳಿಲೋಟವನ್ನು ಎಂದು ಆ ಹೊಳೆ ನುಂಗಿತ್ತೋ ಅಂದಿನಿಂದ ಚೆನ್ನಮ್ಮ ಒಂಥರಾ ಹುಚ್ಚಳಾಗಿದ್ದಾಳೆ. ಆ ಘಟನೆ ನಡೆದು ಇಂದಿಗೆ ನವಮಾಸಗಳು ಉರುಳಿವೆ. ಬೆಂಕಿಯುಗುಳುವ ವೈಶಾಖ ಮಾಸ ಕಾಲಿಟ್ಟಿದೆ.

ಇಂದು ವೈಶಾಖ ಮಾಸದ ಮೂರನೇ ದಿನ. ಮುಂಜಾನೆ ಚೆನ್ನಮ್ಮ ಎಂದಿನಂತೆ ಹೊಳೆ ಅಂಚಿನಲ್ಲಿ ಕೂತು ಪಾತ್ರೆ ತಿಕ್ಕುತ್ತಾ ಹೊಳೆಯ ಮನೆ ಹಾಳು ಬುದ್ಧಿಯನ್ನು ನಿಂದಿಸುತ್ತಿದ್ದಾಳೆ. ಅಷ್ಟರಲ್ಲಿ ಧಣಿಗಳು ಕುದುಪನ ಜತೆಗೂಡಿ ಬಂದು ಆ ದಿನದ ಕೆಲಸ ಕಾರಗಳ ಮಾತೆತ್ತಿದ್ದಾರೆ. ಕುದುಪ ಸೊಂಟದಲ್ಲಿನ ಕರಿದಾರಕ್ಕೆ ಕೋಮಣದ ತುಂಡೊಂದನ್ನು ಸಿಲುಕಿಸಿ, ತಲೆಗೊಂದು ಎಳೆವಸ್ತ್ರ ಬಿಗಿಯುತ್ತಾ ಧಣಿಗಳಿಂದ ಉದುರುವ ಮಾತುಗಳನ್ನು ಹೆಕ್ಕಿಕೊಳ್ಳುವ ಭಂಗಿಯಲ್ಲಿ ನಿಂತಿದ್ದಾನೆ. ಕಾದು ಬತ್ತಿರುವ ಹೊಳೆಯಿಂದ ಹೂಳೆತ್ತಿ ತಂದು ತೆಂಗಿನ ತೋಟಕ್ಕೆ ಹಾಕಬೇಕೆಂದು ಧಣಿಗಳು ಕುದುಪನಿಗೆ ಸೂಚನೆ ನೀಡುತ್ತಿದ್ದರು. ಧಣಿಗಳ ಮಾತು ಚೆನ್ನಮ್ಮನ ಕಿವಿಗೂ ತಲುಪುತ್ತಿದೆ. ಆದರೆ ಅದು ತನಗಲ್ಲ ತನ್ನ ಕಿವಿ ಬೀಳಿನ ಬುಗುಡಿಗೆ ಎಂಬಂತೆ ತಾನು ಧಣಿಗಳ ಮನೆಯ ಮುಸುರೆ ಪಾತ್ರೆ ತಿಕ್ಕುತ್ತಾ ಹೊಳೆಯ ಬಗ್ಗೆಯೇ ತಲೆ ಕೆಡಿಸಿಕೊಳ್ಳುತ್ತಿದ್ದಳು.

ಚೆನ್ನಮ್ಮ ಕೊನೆಗೂ ಮುಸುರೆ ಕೆಲಸವನ್ನೆಲ್ಲ ಮುಗಿಸಿ ತನ್ನ ಗುಡಿಸಿಲಿನಲ್ಲಿ ಒಣ ಮೀನಿನ ಚಟ್ನಿಯಲ್ಲಿ ತಂಗಳನ್ನು ಉಂಡು ಬಂದು ಹೂಳು ಹೊರುವ ಕೆಲಸದಲ್ಲಿ ತೊಡಗಿಕೊಂಡಳು. ಸುಡುವ ಸೂರನಡಿ ಹೊಳೆತ್ತುತ್ತಾ ತಾನು ಕರಟುತ್ತಿರುವಾಗ ತೋಟದ ನೆರಳಲ್ಲಿ ಕುಳಿತು ಧಣಿಯವರು ಕೊಡುವ ಸೂಚನೆಗಳಿಂದ ಚೆನ್ನಮ್ಮನ ಸಿಟ್ಟಿನುರಿಗೆ ಮತ್ತಷ್ಟು ತುಪ್ಪ ಸುರಿದಂತಾಗುತ್ತಿತ್ತು. ಚೆನ್ನಮ್ಮ ಅಸಹನೆಯಿಂದ ಕನಲುತ್ತಾ, ನೆತ್ತಿ ಮೇಲೆ ಬೆಂಕಿಯುಗುಳುತ್ತಿದ್ದ ಸೂರನನ್ನೂ ಧಣಿಯನ್ನು ಶಪಿಸುತ್ತಾ ಹೂಳು ಹೊರುತ್ತಿದ್ದಳು ಕುದುಪ ಹೂಳು ತುಂಬಿ ಕೊಡುತ್ತಿದ್ದ ಚೆನ್ನಮ್ಮ ಅದನ್ನು ಹೊತ್ತುತಂದು ತೆಂಗಿನ ಬುಡಕ್ಕೆ ಎಸೆಯುತ್ತಿದ್ದಳು.

ಹೂಳೆತ್ತುವ ಕೆಲಸ ಹಾಗೆಯೇ ಮುಂದುವರಿದಿತ್ತು ಮೂಳೆ ಮುರಿದು ಹೋಗುವಂತಹ ಕೆಲಸವದು ಕುದುಪ ಸುಸ್ತಾದ. ಒಂದರೆಕ್ಷಣ ಅಲ್ಲೇ ನೀರೊಳಗೆ ಕುಸಿದು ಕುಳಿತ ನೆರಳಲ್ಲಿದ್ದ ಧಣಿಗಳಿಗೆ ಸಿಟ್ಟಿನಿಂದ ಪಿತ್ತವೆರಿದಂತಾಯ್ತು. “ಎದ್ದೇಳೋ ಮೂರಾಸಿನವ.. ಪಡಿ ಅಳೆಯುವಾಗ ಪಾವಕ್ಕಿ ಕಮ್ಮಿ ಮಾಡಿದರೆ ಸುಮ್ಮನೆ ಇದ್ದೀಯೇನೋ ನೀನು?” ಎಂದು ಸಿಡುಕಿದರು. ಚೆನ್ನಮ್ಮನಿಗಂತೂ ಪಡಿಯಿಲ್ಲದೆ ಈ ದುಡಿತದ ಬಗ್ಗೆ ಇನ್ನಿಲ್ಲದಂತಹ ಅಸಮಾಧಾನವಿದೆ. ಒಂದೆಡೆ ಕಳ್ಳತನದ ಅಪವಾದ, ಮತ್ತೊಂದೆಡೆ ಕಠಿಣ ಶ್ರಮದ ದುಡಿತಕ್ಕೂ ಬೆವರಿಗೂ ಪ್ರತಿಫಲವಿಲ್ಲ ಚೆನ್ನಮ್ಮ ತನ್ನ ಬಾರದ ಒಡಲನ್ನು ಕಣ್ಣೀರು ಜಿನುಗಿಕೊಂಡು ಮೆದುಗೊಳಿಸಿಕೊಂಡಳು. ಕುದುಪ ಧಣಿಯವರ ಸಿಡುಕು ಬೈಗಳಿಗೆ ಬೆದರಿ ಎದ್ದು ನಿಂತ ಮತ್ತೆ ಕೆಲಸದಲ್ಲಿ ಮಗ್ನನಾದ. ಗಂಡ ಹೆಂಡರಿಬ್ಬರೂ ಹೊಳೆಗೆ ಬೆವರಿನ ಮಳೆ ಸುರಿಸಿದರು. ಕುದುಪನಂತೂ ಆ ಬಿರುಬಿಸಿಲಿನ ಝಳಕ್ಕೆ ಕುಸಿಯುವಂತಾದ, ಆದರೂ ಧಣಿಗಳ ಭಯದಿಂದ ಕುಸಿಯದಾದ ದೇಹದ ಮೂಲೆಮೂಲೆಗಳಿಂದ ಒಂದಷ್ಟು ತಾಕತ್ತನ್ನು ಸೋಸಿ ತಂದು ಮತ್ತೆ ಬುಟ್ಟಿಗೆ ಹೂಳು ತುಂಬತೊಡಗಿದ. ಬುಟ್ಟಿ ತುಂಬತೊಡಗಿತು. ಇನ್ನೇನೂ ಹೂಳು ತುಂಬಿದ್ದ ಬುಟ್ಟಿಯನ್ನು ಚೆನ್ನಮ್ಮನ ತಲೆಗೇರಿಸಬೇಕೆನ್ನುವಷ್ಟರಲ್ಲಿ ನೋಡುತ್ತಾನೇನು! ಅವ ಮೂರ್ಛ ಬೀಳುವಂತಾದ.

ನವಮಾಸಗಳ ಕಾಲ ಹೊಳೆಯ ಉದರದಲ್ಲಿ ಅಡಗಿದ್ದ ಧಣಿಗಳ ಬೆಳ್ಳಿಲೋಟದ ಮಂಕು ಮೂತಿ ಕಾಣಿಸುತ್ತಿದೆ! ತಾನೀ ದಂಪತಿಗಳನ್ನು ಅಪವಾದದ ಕುಣಿಕೆಯೊಳಗೆ ಸಿಲುಕಿಸಿ ನದಿಯ ಉದರದಲ್ಲಿ ಅಡಗಿ ಕೊಂಡನೆಲ್ಲಾ, ಎಂಬ ಪಶ್ಚಾತ್ತಾಪದಲ್ಲದು ಮುಖ ಮರೆಮಾಡಿಕೊಂಡಿದೆಯೇನೋ ಎಂಬಂತೆ ಕೆಸರೊಳಗೆ ದೇಹ ಹುದುಗಿಸಿ ಕೊಂಡಿದ್ದ ಬೆಳ್ಳಿಲೋಟವನ್ನು ಕುದುಪ ನಿಧಾನಕ್ಕೆ ಬುಟ್ಟಿಯಿಂದ ಹೊರಗೆಳೆದ ಇನ್ನೂ ಸೂತಕಕಳೆಯಿಂದ ಹಸಿ ಮಗುವನ್ನು ಮೀಯಿಸುವಂತೆ ನಿಧಾನಕ್ಕೆ ಹೊಳೆಯ ನೀರಲ್ಲಿ ಆ ಬೆಳ್ಳಿಲೋಟವನ್ನು ತೊಳೆಯ ತೊಡಗಿದ ಈ ಲೋಟದಿಂದಾಗಿ ತಾನೆಷ್ಟು ಅಪಮಾನದ ಮಾತುಗಳನ್ನು ಆ ಧಣಿಪತ್ನಿಯವರ ಕೊಳಕು ಬಾಯಿಂದ ಕೇಳಿಬಿಟ್ಟೆ.. ಎಂದು ಕುದುಪ ಹನಿಗಣ್ಣಾಗಿಯೇ ಆ ಲೋಟ ತೊಳೆದ ಹೂಳೆಯ ಹೂಳೊಳಗೆ ಅವಿತು ತನ್ನ ಬಣ್ಣ ಗಾಂಭೀರ ಕಳೆದುಕೊಂಡಂತಿದ್ದ ಬೆಳ್ಳಿಲೋಟಕ್ಕೆ ಇದೀಗ ಕುದುಪನಿಂದಾಗಿ ಜೀವ ಬಂದಂತಾಯ್ತು.

ತೋಟದಂಚಿನ ನೆರಳಲ್ಲಿ ಕುಳಿತು ಒಕ್ಕಲ ಮಕ್ಕಳ ಬೆವರಧಾರೆಯನ್ನೇ ದಿಟ್ಟಿಸುತ್ತಿದ್ದ ಧಣಿಗಳನ್ನು ಬೆಳ್ಳಿಲೋಟವು ಗಮನಿಸಿತು. ಧಣಿಗಳು ಮಾತ್ರ ಆ ಲೋಟವನ್ನು ಗಮನಿಸುವಂತಿರಲಿಲ್ಲ. ಅವರು ಚೆನ್ನಮ್ಮನ ಹಣೆಯಿಂದ ಕುಂಕುಮದೊಂದಿಗೆ ಕೆಳಗಿಳಿಯುತ್ತಿದ್ದ ಬೆವರಿನ ದಾರಿಯನ್ನೇ ಗಮನಿಸುತ್ತಿದ್ದರು. ಕುದುಪ ಹೂಳು ತುಂಬಿದ ಬುಟ್ಟಿಯನ್ನೆತ್ತಿ ಚೆನ್ನಮ್ಮನ ತಲೆಗೇರಿಸದೆ ನೀರೊಳಗೇ ನಿಂತು.. ಕೂತು ಕಾಲ ಕಳೆಯುವ ಇನ್ನೇನ್ನೋ ಮಸಲತ್ತು ನಡೆಸುತ್ತಿರುವುದನ್ನು ಕಂಡು ಧಣಿಗಳು ಸಿಟ್ಟ ಆದರು, ಆದರೂ ಇದೇನು ಮಸಲತ್ತು ಇರಬೇಕೆಂದು ಕಣ್ಣು ಕಿರಿದುಗೊಳಿಸಿ ಆತನತ್ತಲೆ ದಿಟ್ಟ ನೆಟ್ಟರು.

ಕುದುಪ ಯಾವುದೋ ಒಂದು ಕುಲಗೆಟ್ಟ ಲೋಟವನ್ನು ನೀರೊಳಗೆ ಅದ್ದಿ ತೆಗೆದು ಮಣಗಟ್ಟಲೆ ಕೊಳೆಗಟ್ಟಿದ್ದ ತನ್ನ ಎಲೆ ವಸ್ತ್ರದಲ್ಲಿ ಒರಸಿ ಚೆನ್ನಮ್ಮನ ಕೈಗೆ ಕೊಡುವುದನ್ನು ಧಣಿಗಳು ಮೌನವಾಗಿಯೇ ದಿಟ್ಟಿಸಿದರು. ಮಾನಗೆಟ್ಟ ಈ ಹುಚ್ಚು ಹೊಳೆ ಯಾವುದೋ ಮಳೆಗಾಲದಲ್ಲಿ ಯಾರದ್ದೋ ಮನೆ, ಮಠ ಮುಳುಗಿಸಿ ಹೊತ್ತುತಂದಿರುವ ಲೋಟವಿರಬೇಕದು ಎಂದು ಯೋಚಿಸಿದ ಧಣಿಗಳು, ಆ ಹಾಳು ಲೋಟದ ಜಗತ್ತಲ್ಲೇ ಮುಳುಗಿ ಹೋದ ಗಂಡ ಹೆಂಡಿರ ಚಲನವಲನವನ್ನು ಕಿರಿದು ಕಣ್ಣಿಂದ ಮತ್ತಷ್ಟು ಗಮನಿಸಿತೊಡಗಿದರು. ನಿಧಾನಕ್ಕೆ ಕೂತಲ್ಲಿಂದ ಎದ್ದು ಬಂದರು. ಹಾಗೆ ಸದ್ದಿಲ್ಲದೆ ಬಂದ ಧಣಿಗಳು ನೆರಳಲ್ಲೇ ನಿಂತು ತನ್ನೆದುರು ನಡೆಯುತ್ತಿದ್ದ ವ್ಯಾಪಾರವನ್ನು ಕಿರುಗಣ್ಣಿನಿಂದ

ಗಮನಿಸುತ್ತಿದ್ದಂತೆ ಅವರ ಎದೆ ಬಡಿತದ ಲಯ ತಪ್ಪತೊಡಗಿತು. ಅವರ ಒಡಲ ಸಮಸ್ತ ವ್ಯವಹಾರಗಳು ಒಂದರೆಗಳಿಗೆ ಸ್ತಬ್ಧಗೊಂಡಂತಾಯ್ತು. ಚೆನ್ನಮ್ಮ ತನ್ನ ಕೈಯಲ್ಲಿದ್ದ ಲೋಟ ತಿರುಗಿಸುತ್ತಿದ್ದಂತೆ ಅವರನ್ನೇ ಆಕೆ ತಿರುಗಿಸಿದಂತಾಯ್ತು ಕಂಠದಲ್ಲಿ ಬಳ್ಳಿ ಬಿಟ್ಟ ಆ ಬೆಳ್ಳಿಲೋಟ ಧಣಿಯವರಿಗೆ ನಿಧಾನಕ್ಕೆ ತನ್ನ ಪರಿಚಯ ಮಾಡಿಸತೊಡಗಿತ್ತು. ಹೌದು! ಅದೇ ಬೆಳ್ಳಿಲೋಟ ಅದರ ಕಂಠ ಏಳು ಎಸಳುಗಳ ದೊಡ್ಡ ಹಾವಿನಂತಿದೆ. ಧಣಿಗಳಿಗೆ ಲೋಟದ ಪರಿಚಯ ಪೂರ್ಣವಾಯ್ತು ಎಷ್ಟೆಂದರೂ ಕಳೆದ ನಲವತ್ತು ವಸಂತಗಳಿಂದ ಆ ಬೆಳ್ಳಿಲೋಟ ಧಣಿಗಳ ಒಡನಾಟದಲ್ಲಿರಲಿಲ್ಲವೇ ಧಣಿಗಳ ದಾಂಪತ್ಯ ಜೀವನದ ಎಲ್ಲ ಪ್ರಮುಖ ಹಂತಗಳಲ್ಲೂ ಅದು ಮೂಕಸಾಕ್ಷಿಯಾಗಿರಲಿಲ್ಲವೆ?



ಧಣಿಗಳು ಆ ಬೆಳ್ಳಿಲೋಟವನ್ನೇ ದಿಟ್ಟಿಸಿದರು, ಚೆನ್ನಮ್ಮಳೂ ಲೋಟವನ್ನು ಹಾಗೆ ತಿರುಗಿಸಿ ನೋಡುತ್ತಲೇ ಅದರ ಪರಿಚಯ ಮಾಡಿಕೊಂಡಳು. ಆಕೆಯೂ ಆ ಬೆಳ್ಳಿಲೋಟವನ್ನು ಅದೆಷ್ಟು ಬಾರಿ ನೊರೆಕಾಯಿಂದ ಮೀಯಿಸಿಲ್ಲ ಹಾಗೆ ಮೀಯಿಸುವಾಗಲೆಲ್ಲ ಅದರ ಮೈಮೇಲೆ ಬಿಟ್ಟಿರುವ ಬಳ್ಳಿಯ ಚಂದವನ್ನು ಅದೆಷ್ಟು ಬಾರಿ ಧಣಿಪತ್ನಿಯವರಲ್ಲಿ ಹೊಗಳಿಲ್ಲ ಹೌದು. ಅದೇ... ಕಂಠದಲ್ಲೆಲ್ಲ ಬಳ್ಳಿ ಬಿಟ್ಟ ಚಂದದ ಲೋಟ ಚೆನ್ನಮ್ಮನಿಗೆ ಆ ಲೋಟವನ್ನು ಅದೆಷ್ಟು ನೋಡಿದರೂ ಸಾಲದು. ಧಣಿಗಳಿಗೆ ಕಾಣುವಂತೆಯೇ ಎತ್ತರಿಸಿ ಹಿಡಿದು ನೋಡಿಯೇ ನೋಡಿದಳು.

ಕುದುಪನೂ ಆ ಬೆಳ್ಳಿಲೋಟವನ್ನೇ ಗಮನಿಸುತ್ತಿದ್ದ. ಆತನಿಗಂತೂ ಆ ಲೋಟದ ದರ್ಶನವಾದೊಡೆ ಬಿಸಿಲಿನಿಂದ ಜೀವ ಕಳೆದುಕೊಂಡಂತಿದ್ದ ದೇಹಕ್ಕೆ ಮತ್ತಷ್ಟು ಹೊಸ ಚೈತನ್ಯ ಬಂದಂತಾಗಿತ್ತು. ನೆತ್ತಿ ಮೇಲೆ ಬಿಸಿಲು ಕಾರುತ್ತಿರುವ ಸೂರ ಇನ್ನಷ್ಟು ಬೇಕಿದ್ದರೆ ಕಾರಲಿ.. ಎಂಬ ಉಡಾಫೆಯು ಆತನಲ್ಲಿ ಮೈತಳೆದು ಬಂದಂತ್ತಿತ್ತು. ಆತ ಚೆನ್ನಮ್ಮನ ಕೈಯಲ್ಲಿದ್ದ ಬೆಳ್ಳಿಲೋಟವನ್ನೊಮ್ಮೆ ಧಣಿಯವರ ಪರಿಧಿಗೆ ಒಪ್ಪಿಸಲು ಕಾತುರನಾಗಿ ಆ ಲೋಟ ಚೆನ್ನಮ್ಮನಿಂದ ತನ್ನ ಕೈಗೆ ಹಸ್ತಾಂತರಗೊಳ್ಳುವ ಕ್ಷಣಕ್ಕಾಗಿ ಕಾಯುತ್ತಿದ್ದ.

ಹಾಗೆ ಕಾಯುವ ಪ್ರತೀಕ್ಷಣವೂ ಆತನಿಗೆ ಅತೀ ದೀರ್ಘವಾಗಿ ಪರಿಣಮಿಸತೊಡಗಿತ್ತು. ಕ್ಷಣಕ್ಷಣಕ್ಕೂ ಆತನ ಚಡಪಡಿಕೆ ಏರುತ್ತಿದ್ದರೂ ಆ ಬಗ್ಗೆ ಚೆನ್ನಮ್ಮನಿಗೆ ಲಕ್ಷ್ಯವಿಲ್ಲ ಲೋಟದ ಚಂದವನ್ನು ಆಕೆ ಮತ್ತೆ ಮತ್ತೆ ತಿರುಗಿಸಿ ನೋಡುತ್ತಿದ್ದಂತೆ... ಆಕೆಯ ಒಡಲಲ್ಲೂ ಅದೆಷ್ಟೋ ಭಾವನೆಗಳು ಗಿರಕಿ ಹೊಡೆಯತೊಡಗಿದ್ದವು. ಇದೇ ಲೋಟವಲ್ಲವೆ.. ತನ್ನ ಬೆವರಿನ ಬೆಲೆ ಕಳೆದದ್ದು... ಕಳ್ಳತನದ ಕೀರಿಟವನ್ನು ತನ್ನ ಮುರುಕಲು ಗುಡಿಸಲ ಚಾವಣಿಗೆ ಜೋಡಿಸಿದ್ದು ಹೂ ಬೆಳ್ಳಿಯದ್ದಾದರೇನಂತೆ.. ಬುದ್ಧಿ ಮಣ್ಣಿಗಿಂತಲೂ ಬುರ್ನಾಸು. ಮೂರಾಸಿನದ್ದು! ಪಟ್ಟದ ಮೇಲಿನ ಕತ್ತಿಗೆ ಚಟ್ಟದಲ್ಲಿರುವವನ ಮೇಲೆ ದಿಟ್ಟಿ ಎಂದಿಗೂ ಸಲ್ಲ. ಜಾತಿಹಾವಿಗ್ಯಾಕೆ ಎರೆಹುಳದಂತೆ ಕೆಸರು ಕೆದಕುವ ಕೆಲಸ!

ಈ ಬೆಳ್ಳಿಲೋಟದಿಂದಾಗಿ ತನ್ನ ಕುಟುಂಬ ಇದುವರೆಗೆ ಉಂಡ ನೋವು. ಅವಮಾನ ಪಟ್ಟಪಾಡು ಪರಿತಾಪಗಳೆಲ್ಲ ಚೆನ್ನಮ್ಮನ ಚಿತ್ತದಿಂದ ದಿಗಿಣ ತೆಗೆದು ಮೇಲೆದ್ದು ಬಂದು ಆಕೆಯ ಯೋಚನಾಶಕ್ತಿ ವಿವೇಚನಾ ಶಕ್ತಿಯನ್ನೇ ಕ್ಷಣಕಾಲ ಕಸಿದುಕೊಂಡವು. ಒಡಲ ಪಿತ್ತ ಒಂದರೆಕ್ಷಣ ಕೆರಳಿದಂತಾಯಿತು. ಆ ಸಂಕಟವುಂಡ ಜೀವಕ್ಕೆ ಏನನಿಸಿತೋ ಆ ಕ್ಷಣ! ಚೆನ್ನಮ್ಮ ತಟ್ಟನೆ ಪೂರ್ವಾಭಿಮುಖವಾಗಿ ನಡೆದಳು. ಆ ಹೊಳೆಯಲ್ಲಿ ಹತ್ತು ಹೆಜ್ಜೆ ಹಾಕಿ ಹನ್ನೊಂದನೇ ಹಜ್ಜೆಯಡಿ ನಿಂತವಳು... ಅತ್ತ ದೂರದಲ್ಲಿದ್ದ ಹೊಳೆಯ ಆಳ ಮಡುವತ್ತ ಬೆಳ್ಳಿಲೋಟವನ್ನು ಎಸೆದೇ ಬಿಟ್ಟಳು! ಕಂಠದಲ್ಲಿ ಬಳ್ಳಿ ಹೊತ್ತ ಆ ಬೆಳ್ಳಿಲೋಟ ತೋಟದಂಚಿನ ನೆರಳಲ್ಲಿ ನಿಂತು ತನ್ನನ್ನೇ ದಿಟ್ಟಿಸುತ್ತಿದ್ದ ಧಣಿಯವರ ಮೋರೆಯ ಅಸಂಖ್ಯ ಭಾವನೆಗಳನ್ನು ಓದುತ್ತಾ ಆಳದ ಮಡುವಲ್ಲಿ ನಿಧಾನಕ್ಕೆ ಮುಳುಗಿ ಹೋಯ್ತು. ಚೆನ್ನಮ್ಮ ಹೊಳೆಯ ನೀರಲ್ಲೊಮ್ಮೆ ಸಂಪೂರ್ಣ ಮುಳುಗಿ ಮತ್ತೆ ಎದ್ದು ನಿಂತಳು. ನೆರಳಲ್ಲಿದ್ದ ಧಣಿಯವರು ತಾನು ಹೊದ್ದುಕೊಂಡಿದ್ದ ವಲ್ಲಿಯಿಂದ ಮುಖಕ್ಕೆ ಗಾಳಿ ಬೀಸಿಕೊಂಡರು.

## ನೆರೆಹಾವಳಿ

**- ಬಿ.ಟಿ. ಜಾಹ್ನವಿ**

'ಹಾಯ್ ಡುಮ್ಸ್ ವೇರ್ ಆರ್ ಯೂ'.. ಅಂತ ಮನು ಮಸೇಜ್ ಬಂದಾಗ ನಾನು ಆಗ್ತಾನೆ ಕ್ಲಾಸ್ ಮುಗ್ಸಿ ಕಾಲೇಜಿಂದ ಹೊರಬರ್ತಿದ್ದೆ. ಅವ್ನ ಮೆಸೇಜ್ ನೋಡಿದ್ದೇ ನಿನ್ನೆ ಅವ್ನು ಹೇಳಿದ ವಿಷ್ಯ ನೆನಪಾಯ್ತು. ಅವನ ಸ್ನೇಹಿತ ಗೋಪಾಲ್ ಸರ್ಕಾರಿ ಜ್ಯೂನಿಯರ್ ಕಾಲೇಜಿನಲ್ಲಿ ಕನ್ನಡ ಲೆಕ್ಚರರ್ ಅಂತೆ. ವಾರದ ಹಿಂದೆ ಪಿ.ಯು.ಸಿ. ಮಕ್ಕಳಿಗೆ ನೆರೆ ಹಾವಳಿ ಬಗ್ಗೆ ಪ್ರಬಂಧ ಬರೆಯೋಕೆ ಕೊಟ್ಟಿದ್ದಂತೆ. ಅನಿತಾ ಅನ್ನೋ ಹುಡುಗಿಯೊಬ್ಬು 'ನೆರೆ ಹಾವಳಿ ಎಂದರೆ ನೆರೆಹೊರೆಯ ಹಾವಳಿ, ಅದು ಬಲಿಷ್ಠರ, ಶ್ರೀಮಂತರ ಹಾವಳಿ, ಅದು ಹಸಿವಿನ, ಆಸೆಗಳ ಹಾವಳಿ' ಅಂತ ಬರೆದಿದ್ದಳಂತೆ. ಇಷ್ಟೇ ಎರಡೇ ಸಾಲು. ತುಂಬಾ ಕುತೂಹಲ ಹುಟ್ಟಿ ಗೋಪಾಲ್ ಆ ಪೇಪರನ್ನು ರೂಂಗೆ ತಂದು ಇನ್ನಿಗೂ ಹೋದಾಗ ತೋರಿಸಿದ್ದಂತೆ. ಅದನ್ನು ನೋಡಿದಾಗಿನಿಂದ ಡಿಸ್ಟರ್ಬ್ ಆಗಿಟ್ಟಿದ್ದನೇನೋ ಓದಿದಾಕ್ಷಣ ಓಡಿ ಬಂದಿದ್ದ ನನ್ನ ಬಳಿಗೆ.

'ಸ್ವಲ್ಪ ಜಾಸ್ತಿ ತಲೆ ಓಡಿಸ್ತಿಯಲ್ಲೇ ನೀನ್ಯಾವಾಗ್ಲು....' ಅಂತ ಬೈದಿದ್ದೆ ನಾನು ಅವ್ನ ಮಾತು ಕೇಳಿ.

ಅವನ ಪ್ರಕಾರ ಆ ಹುಡುಗಿಗೆ ಏನೋ ತೊಂದ್ರೆಯಿದೆ. ಯಾವ್ದೋ ಕಷ್ಟಕ್ಕೆ ಸಿಲುಕಿದ್ದಾಳೆ ಅಂತ. ಇದು ನೆರೆಯ ಅರ್ಥ ಗೊತ್ತಿಲ್ದೇ ಸುಮ್ನೆ ಏನೇನೋ ಬರಿದ್ದಾಳೆ ಅಂತ ಕಡೆಗಾಣಿಸೋ ಹಗುರವಾದ ಸಂಗತಿ ಅಲ್ಲ ಅನ್ನೋದೇ ಅವನ ವಾದ.

“ಅವಳ ಆ ಬರಹದಲ್ಲಿ ಇರೋ ಹಾಗೇ ನೆರೆಹೊರೆ, ಬಲಿಷ್ಠ, ಶ್ರೀಮಂತ, ಆಸೆ, ಹಸಿವು ಇವೆಲ್ಲಾ ತುಂಬಾ ಕಾಡ್ತಿದರ್ಬ್ವಿ ಅಮ್ಮನ್ನ ಯಾವ್ದೊ ರೀತಿ...' ಅಂದಿದ್ದ.

ನಾನದನ್ನು ಅಷ್ಟು ಸೀರಿಯಸ್ಸಾಗಿ ತಗಂಡಿರ್ಲಿಲ್ಲ. 'ಈ ಹುಡುಗೀರು ಯಾವ್ಯಾವ್ದೊ ಕೆಟ್ಟ ಕೆಟ್ಟ ಸಿನಿಮಾ ನೋಡ್ತಾರೆ. ಪ್ರತಿದಿನ ಟಿವಿಯಲ್ಲಿ ಆ ದರಿದ್ರ, ಕೊಳೆತೋಗಿರೋ ಕೆಟ್ಟ ಸೀರಿಯಲ್‌ಗಳನ್ನು ನೋಡ್ತಿದ್ದಾರೆ. ಅಂತಹ ಯಾವುದೋ ಪ್ರಭಾವದಿಂದ್ಲೇ ಇಂತಹ ದೊಡ್ಡ ಪದಗಳನ್ನು ಜೋಡಿಸಿ, ಏನೋ ಒಂದು ಹೆಣೆಯೋಕೆ ಪ್ರಯತ್ನಿಸಿ ಕೈಬಿಟ್ಟಿದ್ದಾಳೆ...' ಅಂದಿದ್ದೆ.

ಆದರನ್ನು ಅಷ್ಟು ಸುಲಭಕ್ಕೆ ಬಿಡೋ ಆಸಾಮಿಯಲ್ಲ. 'ಆಯ್ತಪ್ಪ ಬೆಟ್ಟೂ, ನಿಮ್ಮ ಮಾತಲ್ಲಿ ನಿಜ ಇತ್ತು ಅಂದ್ರ 'ನಾನು ನಿಮ್ಮನ್ನ ಕರ್‍ಕೊಂಡೋಗಿ ನಿಮ್ಮ ಫೇವರೆಟ್ ಬಿರಿಯಾನಿ ಕೊಡಿಸ್ತೀನಿ. ನನ್ನ ಮಾತು ಸತ್ಯ ಅಂತಾದ್ರೆ ನೀವು ನನಗೆ ಗ್ರೀನ್ ಪಾರ್ಕ್‌ನಲ್ಲಿ



ಟೀಟ್ ಕೊಡಿಸ್ಬೇಕು. ನಾನು ಗೋಪಾಲಂಗೆ ಹೇಳ್ತಿನಿ ನಾವೇ ಹೋಗಿ ಆ ಹುಡುಗೀನ ಮಾತಾಡ್ಸನ. ಏನಂತೀರಿ ಓ.ಕೆ.ನಾ...?' ಅಂತ ಒಂದೇ ಪಟ್ಟು ಹಿಡಿದು ಲಂಚದ ಆಸೆ ತೋರಿಸಿಯಾದರೂ ನನ್ನ ಒಪ್ಪಿಸುವ ಹುನ್ನಾರ.

“ಹೇ ವೈ ಯಾ ನೋ ರಿಪ್ಲೈ..... ಹೊಟ್ಟೆ ಹಸೀತಿದೆ....' ಅಂತ ಇನ್ನೊಂದು ಮೆಸೇಜು ಬಂದಾಗ್ಲೆ ನಂಗೇ ನೆನಪಾದ್ದು ಅವ್ನಿಗೆ ರಿಪ್ಲೈ ಮಾಡಿಲ್ಲಾಂತ, ಫೋನೇ ಮಾಡಿದೆ.

“ಯಾಕೆ ಕೋತಿ ನಿಮ್ಮ ಕಟ್ಟೆ ಕ್ಯಾಂಟೀನು ಬಂದಾ...?' ಅಂದೆ ಅಲ್ಲಾಗಿಂದ ಧಮಕಿ,

'ಯಾಕೆ ಏನು? ಏನ್ ಮಹಾ ಸಿಗುತ್ತಲ್ಲೀ... ಮಾಮೂಲು ಒಂದು ಪ್ಯಾಕ್ ಬಿಸ್ಕತ್ತು. ನಾಲ್ಕು ಕೋಡುಬಳೆ, ಎರಡು ಚಕ್ಲಿ, ನಾಲ್ಕು ಬಾಳೆಹಣ್ಣು...'

ನಾನು ಮಧ್ಯಕ್ಕೆ ಬಾಯಿ ಹಾಕಿ 'ಎಷ್ಟೊತ್ತಾಯ್ತು ತಿಂದೂ....' ಅಂದೆ'

'ಹಹಹತ್ತು... ನಿಮಿಷ ಅಂತ ಏನೋ ಮಹಾ ಬಹಳ ಹೊತ್ತಾಗಿದೆ ಅನ್ನೋ ಹಾಗೆ ಹತ್ತನ್ನ ಎಳೆದೆಳೆದು ಒತ್ತೊತ್ತಿ ಅವ್ರು ಹೇಳ್ದಾಗ ನಾನೂ ಅದೇ ದಾಟೀಲಿ 'ಹೌದಾ ಹಹಹತ್ತು ನಿಮಿಷ ಆಯ್ತಾ...' ಅಂದು ನಗ್ತಾ 'ಅದೇನು ಹೊಟ್ಟೆನೋ ಏನೋ ಮಾರಾಯ ಒಂದು ಪ್ಯಾಕ್ ಬಿಸ್ಕತ್ ತಿಂದ್ರೆ ಹೊಟ್ಟೆ ಪ್ಯಾಕ್ ಆಗೋಗುತ್ತೆ. ನಿನಗಿನ್ನೂ ಜಾಗ ಉಳಿದೈತಲ್ಲಾ ಆಶ್ಚರ್ಯ.....' ಅಣಕಿಸಿದೆ.

"ಅಲ್ಲ ನೀವೇಳೋದೇನೋ ಸರೀನೆಪ. ಆದ್ರೆ ಒಂದು ಮಿಸ್ಟೇಕ್ ಮಾಡ್ಬಿಟ್ಟೆ, ನಾನು ಮೊದ್ಲು ನಾಲ್ಕು ಬಾಳೇಹಣ್ಣು ತಿಂದ್ನಾ. ಆಮೇಲೆ ಉಳಿದಿದ್ದೆಲ್ಲಾ ತಿಂದದ್ದೆ ಬಂತು ನೋಡ್ರಿ....' ಅಂದ. 'ಅಲೆ ಇವ್ನ  ಅದುಕ್ಕೇನಾತು...' ಕೇಳಿದೆ ಆಶ್ಚರ್ಯದಿಂದ.

"ಅಯ್ಯೋ ಬಾಳೆಹಣ್ಣು ಜಾರಲ್ವೇನ್ರಿ.... ಮೊದ್ಲು ಬಾಳಿ ಹಣ್ಣು ತಿಂದು ಆಮೇಲೆ ಬಿಸ್ಕತ್ತು ತಿಂದಿದ್ದಕ್ಕೆ ಎಲ್ಲಾ ಸರ್ರಂತ ಕೆಳಕ್ಕೆ ಜಾರ್ಬಿಟ್ಟೆದಪ...' ಅವನ ಮಾತು, ಹೇಳಿದ ಧಾಟಿಗೆ ನಗು ತಡೆಯಲಿಲ್ಲ.

'ಥ ಕೋತಿ ಇದಕ್ಕೇನು ಕಮ್ಮಿಯಿಲ್ಲ' ಅಂದು ನಗ್ತಿದ್ದೆ 'ಸರಿ...' ಅಂದು ಎಲ್ಲಿರುವೆ ಮನವ ಕಾಡುವ ರೂಪಸಿಯೇ...?' ಹಾಡಿನ ಧಾಟಿಯಲ್ಲೇ ನಾನೆಲ್ಲಿದ್ದೀನಿ ಅಂತ ಕೇಳಿದ.

'ಲೇ ಕೋತಿ ಅಲ್ಲಿ ಅಕ್ಕಪಕ್ಕ ಯಾರು ಇಲ್ಲ ತಾನೆ ಈಗ ಹೊರಟೆ ಕಾಲೇಜಿನಿಂದ. ಇನ್ನರ್ಧ ಗಂಟೆ ಬಿಟ್ಟು ಬಾ ಮನೆಗೆ ಆಯ್ತಾ..' ಅಂದೆ. 'ತೆರೆದಿದೆ ಮನೆ ಓ ಬಾ ಅತಿಥಿ...' ಬೇರೆ ಹಾಡು ಶುರು ಮಾಡಿದ.

'ಹೇ ಮಂಗ ಇಡು ಫೋನು....' ಅಂತನೇ ಸ್ವಲ್ಪ ದೂರ ಹಾಗೆ ನಡೆದು ಆಟೋ ಕರೆದು 'ಎಸ್ಎಸ್ ಲೇಔಟ್ ಬರ್ತೀರಾ...? ಕೇಳ್ದೆ.

"ಉಹೂಂ ಬರಲ್ಲ...' ಅಂದ ಹಾಡು ನಿಲ್ಲಿಸಿ, 'ಕಪಿ ಸ್ವಲ್ಪ ಸುಮ್ನಿರು...' ಅಂದು ಮತ್ತೆ ಕೇಳಿದ ಡ್ರೈವರ್‌ಗೆ

"ಉಹೂಂ ಬರಲ್ಲ ಅಂತ ಹೇಳಿಲ್ವಾ...' ಅವನ್ದೇ ದನಿ ಹೆಂಗ ನ ದಾಟಿಯಲ್ಲಿ.

ಡ್ರೈವರ್ ನಕ್ತಾ ಇದ್ದದ್ದು ನೋಡಿ ಯಾಕೋ ಅನುಮಾನ ಬಂದು ತಲೆಯೆತ್ತಿದರೆ ಅವರ ಪಕ್ಕದಲ್ಲೇ ಇನ್ನೊಂದು ಬದೀಲಿ ಬೈಕ್ ಮೇಲೆ ಕೂತಿದ್ದ ಅತ್ತ ಕಡೆಯಿಂದ ಆಟೋದೊಳಕ್ಕೆ ಮುಖ ತೂರಿಸಿ,

ಹಣೆ ಚಕ್ಕೊಂಡು 'ಸ್ಸಾರಿ ನಿಮ್ಮನ್ನ ಸುಮ್ನೆ ನಿಲ್ಲಿಸ್ಥೆ..' ಅಂತ ಡ್ರೈವರ್‌ಗೆ ಹೇಳಿ ಅವನತ್ತ ಹೊರಟೆ. 'ಲಕ್ಷಣವಾಗಿ ಬರ್ತೀನಿ ಕಾಯ್ತಿ ಅಂತ ಹೇಳಿದ್ರೆ ಆಗ್ತಿರಿಲ್ವೇನೋ...' ಹುಸಿಮುನಿಸಿನಿಂದ ಅಂದು ಬೈಕ್ ಹತ್ತಿದೆ.

'ಲಕ್ಷಣವಾಗಿ ಹೇಳಿದ್ದೆ ಈ ಖುಸಿ ಸಿಗ್ತಿತ್ತೇನೋ...” ನನ್ನೆ ಅನುಕರಿಸಿ ಹೇಳಿ 'ನಾನೀಗ ಎಲ್ಲಿಗೊರ್‍ಟಿನ್ ಹೇಳಿ ನೋಡನ...' ಅಂದ ಅವು. 'ನಮ್ಮನೆಗೆ....' ಅಂದೆ. 'ಅಲ್ಲಿಂದ....' ಅಂದ. 'ನಿಮ್ಮನೆಗೆ' ಅಂದೆ.

'ಹೂಂಪ್ಪ ಗೊತ್ತಾತು ನಿಮ್ಮನ್ ಬಿಟ್ಟಂಗೆ ಹೋಗ್ತಿನ್ ಬಿಡ್ರೀ ತಿಂಡಿ ಕಾಫಿ ಅಂತ ಕುಂದ್ರಲ್ಲ ನಮ್ಮನಿಗೆ ಹೋಗ್ತಿನಿ..' ಅಂತ ಶುರು ಹಚ್ಕಂಡ ಕೊರಕೊರ. 'ಆತು ಸರ್ ಗೊತ್ತಾತು ತಮ್ಮದನ್ನು ತಿಂಡಿ ಕಾಫಿ ಆಗಿಲ್ಲ ಅಂತ ಗೊತ್ತಾತು. ಈಗ ತಾವು ವಿಷಯಕ್ಕೆ ಬಂದು ಎಲ್ಲಿಗೆ ತೊಲಗ್ತಿರಿ ನೇರವಾಗಿ ಹೇಳ್ಬಟ್ರೇ...' ಅಂತ ನಾನು ಮುಖ ಕೆಡಿಸಿಕೊಂಡರೆ ಅವನು 'ಹ್ಹಿ.. ಹ್ಹಿ... ಹ್ಹಿ .....' ಅಂತ ಕಿಸಿಯುತ್ತಾ ಹೊಟ್ಟೆ ಸವರಿಕೊಳ್ಳುತ್ತಾ 'ಅನಿತ ಮನೆಗೆ...' ಅಂದು ಒಮ್ಮೆಲೆ ಗಂಭೀರವಾಗಿ 'ಆ ಹುಡುಗೀನ ಒಮ್ಮೆ ಮಾತಾಡಿಸೋಕು ನೋಡೋಕು ಅನಿಸ್ತಿದಪ ಯಾಕೋ ನಂಗೆ' ಅಂದ. 'ಭಾಳ ಮನಸ್ಸಿಗೆ ಹಚ್ಕಂಡಿಲೆ ನೀನು...' ಅಂತಿದ್ದೆ 'ತಪ್ಪಾ...' ಅಂತ್ಕೇಳ್ದ ಮಧ್ಯಕ್ಕೆ 'ತಪ್ಪು ಅಂತ ಅಲ್ವೊ ಅನಾವಶ್ಯ ತಲೆ ಕೆಡಿಸ್ಕಂತದಿ ಅನ್ಸಕತ್ತೇತಿ...' ಅಂತ ಮಾತಿಗೆ ಹೇಳಿದ್ರೂ ಅವು ಹೇಳಿದಾಗಿಂದ ಆ ವಿಷಯ ಒಳಗೇ ಕೊರಿಯಕೆ ಶುರು ಮಾಡೇತಿ ಅಂತ ಮೆಲ್ಲಗೆ ಮನವರಿಕೆ ಆಗ್ತಿತ್ತು ನಂಗೂ.

'ನಮ್ಗೆ ಕಾಣ್ಸದು ಕಾಣಸ್ಥೆ ಇರದು ಎಲ್ಲನೂ ಅನಾವಶ್ಯ ಅಂತ ನಮ್ ಪಾಡಿಗೆ ನಾವು ಏನೂ ನಾಟಿಸ್ಕಳ್ದೆ ಇದ್ದಿದ್ರೆ ಇಲ್ಬಿದ್ದಿರೋ ಕಲ್ಲು ಮಣ್ಣು ಕಸಕಡ್ಡಿಗೂ ನಮ್ಗೂ ಏನ್ ವ್ಯತ್ಯಾಸರಿ, ಹೋಗ್ಲಿ ಹಾಗಾದರ್‍ರೆ ನಮ್ಗೆ ಏನ್ ಅವಶ್ಯನಪ...' ಮನು ಇಷ್ಟು ಗಂಭೀರವಾಗಿ ಮಾತಾಡ್ಡಹುದು. ಯೋಚಿಸ್ಬಹುದು ಅಂತ ಈ ಒಂದು ವರುಷದ ನಮ್ಮ ಒಡನಾಟದಲ್ಲಿ ಮೊದಲ ಸಲ ಬಂತು ಅನುಭವಕ್ಕೆ ಈ ಹೊಸ ಮನು ನನ್ ತಪ್ಪಿನ ಅರಿವು ಮಾಡಿಸಿದ ನಂಗೆ.

ಅವನೆಷ್ಟು ಗಂಭೀರವಾಗಿ ಈ ವಿಷಯ ಪ್ರಸ್ತಾಪಿಸಿದ್ಯೋ ಅಷ್ಟೇ ಉಡಾಫೆಯಿಂದ ಅದನ್ನ ನಾ ತಳ್ಳಿ ಹಾಕ್ತಿದ್ದೆ. ಒಪ್ಗಂಡೆ.

'ಹೊಂನ್ಲೆ ನಿನ್ನ ಮಾತು ನಿಜ. ಅಕ್ಷರಮಟ್ಟಿಗೆ ಅದು ನನ್ನ ಸ್ವಾರ್ಥ ಮತ್ತೆ ಸ್ವಾರ್ಥಮಗ್ನತೆ. ಮತ್ತೆಲ್ಲೂ ನಾನು ತುಂಬಾ ಸ್ವಾಕ್ರಮಿತಳಾಗೀನಿ. ಅದಕ್ಕೆ ನನ್ನ ಹೊರತು ಅನ್ಯ ವಿಷಯ ಏನೇ ಇಲ್ಲಿ ಒಂದೋ ಅದು ತುಂಬಾ ಹಗುರವಾಗಿ ಕಾಣ್ತೇತಿ ಇಲ್ಲಾ ಅದು ನಂಗೆ ಲೆಕ್ಕಕ್ಕೆ ಇಲ್ಲ ಅಂತಾಗೇತಿ. ಅದಕ್ಕೆ ಇಷ್ಟು ಉಢಾಫೆ. ಸ್ಸಾರಿಲೇ ನೀ ಹೋಗಿ ಏನಂತ ತಿಳ್ಕೊಂಡ್ಯಾ.. ವಿಷಯ ತಿಳಿದ್ಮೇಲೆ ವಿಚಾರ ಮಾಡನ' ಅಂದೆ. ಅವ್ನು ಮಾತಾಡ್ಲಿಲ್ಲ.



"ಓ ನನ್ನ ಚೇತನ ಆಗು ನೀ ಅನಿಕೇತನ....' ಅಂತ ಹಾಡಾಕತ್ತಿದ.

ಪಟ್ಟಂತ ತಲೆಗೆ ಒಂದು ಬಿಟ್ಟೆ 'ಯಾಕೋ ಸ್ವಲ್ಪ ಜಾಸ್ತಿ ಆತು...' ಅಂತ. ತಕ್ಷಣ ಪೂರ ಹಿಂದಕ್ಕೆ ವಾಲುತ್ತ 'ಸನಜರೇ ಜೂಟ್ ಮತ್ ಬೋಲೋ' ಅಂತ ಶುರು ಹಚ್ಕಂಡ. 'ಏಯ್ ಡಿಸ್ಟೆನ್ನನ ಮೇನ್‌ಟೇನ್ ಮಾಡು ಜನತಪ್ ತಿಳ್ಕೊಂತರೆ....' ಅಂದೆ ನಾನು. "ಓಹ್ ಸಾರಿ ಮೇಡಂ...' ಅಂದವನೇ ಸೀದಾ ಮುಂದೆ ಜಾರಿ ಟ್ಯಾಂಕಿನ ಮೇಲೆ ಹೋಗಿ ಕುಂತ, ಈಗ ಜನ ನಿಜವಾಗಲು ನೋಡೋಕೆ ಶುರು ಮಾಡಿದರು. ಮುಂದೆ ಬಗ್ಗಿ ಅವನ ಕಾಲರಿಡಿದು ಹಿಂದಕ್ಕೆಳೆಯುತ್ತ 'ಹಿಂದಕ್ಕೆ ಬಾರೋ ಕಪಿ ಅಸಹ್ಯ ಮಾಡ್ಬೇಡ ಪ್ಲೀಸ್....' ಗೋಗರೆದೆ ನಾನು. ಬೇಡಪ್ಪ ಜನ ತಪ್ ತಿಳ್ಕಂತರೆ' ಅಂದ ಮಳ್ಳನಂಗೆ. "ಆತೋ ತಪ್ಪಾತು ಹಿಂದಕ್ಕೆ ಬಾ..' ಅಂದೆ ಎಳೆಯುತ್ತಾ 'ಲೋಕವ ಮೂಟೆ ಕಟ್ಟು.... ಯಾತಕೆ ದೂಸರ ಮಾತು... ಎಲ್ಲಾ. ಟೈಮ್ ವೇಸ್ಟ್....' ಅಂತ ಹಾಡುತ್ತಾ ಹಿಂದಕ್ಕೆ ಬಂದು 'ಈಗ ದೂಸರ ಮಾತಾಡದೆ ನೀವೂ ಬರ್ಬೇಕು ಅನಿತ ಮನೆಗೆ ನನ್ಜತಿಗೆ ಅಷ್ಟೆ' ಅಂದ.

* * * *

'ಲೋಕವ ಮೂಟೆ ಕಟ್ಟು.... ಯಾತಕೆ ದೂಸರ ಮಾತು.... ಎಲ್ಲಾ ಟೈಮ್ ವೇಸ್ಟ್...'

ಈ ಮನು ಹಾಗೇನೆ ತಲೆಗೇನಾದ್ರೂ ಬಂತಂದ್ರೆ ಪಟ್ಟು ಹಿಡಿದು ಮಾಡದೆ ಬಿಡೋನಲ್ಲ. ಅಷ್ಟೇ ಜಲ್ಲೀನೂ ಯಾವಾಗ್ಲೂ. ಅವನು ಹೋದಲ್ಲೆಲ್ಲಾ ನಗುವಿನ ಬುಗ್ಗೆ, ಅವನಿದ್ದಲ್ಲೆಲ್ಲಾ ಗದ್ದಲ. ಖುಷಿ, ಸಂಭ್ರಮ ಯಾವತ್ತೂ, ಸಾಮಾನ್ಯ ನಾವಿಬ್ರೂ ಬೈಕ್ನಲ್ಲಿ ಹೊರಟರೆ ತನಗಿಷ್ಟವಾದ ಸಿನಿಮಾದ್ದೋ ಇಲ್ಲ ನಾಟಕದ್ದೋ ಡೈಲಾಗ್ಸ್ ಹೇಳ್ತಿರ್ತಾನೆ. ಇಲ್ಲಾಂದ್ರೆ ಆಯಾ ಸಿಚುಯೇಷನ್‌ಗೆ ತಕ್ಕನಾಗಿ ಹಾಡ್ತಾ ಇರ್ತಾನೆ, ಅದೂ ಇಲ್ಲ ಅಂದ್ರೆ ದಾರೀಲಿ ಹೋಗೋ ಬರೋರ್ನೆಲ್ಲಾ ಕಾಡೋಕೆ ಶುರು ಮಾಡ್ತಾನೆ. ಇದ್ಯಾವ್ದೂ ಇಲ್ಲಾಂದ್ರೆ ಅವನ ಗರ್ಲ್‌ಫ್ರೆಂಡ್‌ನ ಫೋನಲ್ಲಿ ಬೈತಿರ್ತಾನೆ ಇಲ್ಲ ನನ್ಜೂತೆ ಜಗಳ ಆಡ್ತಿರ್ತಾನೆ, ಒಟ್ಟಾರೆ ಸದಾ ಎಂಗೇಜ್ ಆಸಾಮಿ,, ಹಾಡಂದ್ರೆ ಪ್ರಾಣ, ಸಂಗೀತ ಗೊತ್ತಿಲ್ಲ. ಆದರೆ ಹಾಡುವ ಹಂಬಲಕ್ಕೆ ಕೊರತೆಯಿರ್ಲಿಲ್ಲ. ನನಗೋ ಹಾಡೆಂದರೆ ಹುಚ್ಚು. ಈ ಹುಚ್ಚಿಗೇ ಅವನು ಹುಟ್ಟಿದಂತಿದ್ದ. ನಾಟಕದಿಂದ ಅಂಟಿದ ನಂಟು ಇದಾಗಿದ್ರೂ ನಾವಿಬ್ರೂ ಆಪ್ತರಾದ್ದು ಹಾಡಿನಿಂದಲೇ. ನಮ್ಮ ಮೊದಲ ಪರಿಚಯದ ಸನ್ನಿವೇಶವೇ ತುಂಬಾ ತಮಾಷೆಯಾಗಿತ್ತು. ಅವನ ಬಗ್ಗೆ ಕೇಳಿದ್ದೆ ಅಷ್ಟೆ, ಎಂ.ಟೆಕ್ ಮಾಡಿ ಅದೇ ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ರೂ ಸೈತ ನಾಟಕದ ಗೀಳು ಬಿಟ್ಟಿಲ್ಲ. ಒಳ್ಳೆಯ ಆರ್ಗನೈಸರ್, ಕಾಡ್ಸ್ಟೂಮ್ಸ್ ನಿಂದ ಹಿಡಿದು ನಟ-

ನಟಿಯರನ್ನು ಹೊಂದಿಸುವುದರಲ್ಲೂ ಒಳ್ಳೆ ನಿಪುಣ ಅಂತ. ವರುಷದ ಹಿಂದೆ ನಮ್ಮ ನಾಟಕಕ್ಕೆ ತುರ್ತಾಗಿ ಒಬ್ಬ ಹುಡುಗಿ ಬೇಕಿತ್ತು. ನಾಟಕದ ಐದು ಸಣ್ಣ ಸಣ್ಣ ಪಾತ್ರದಲ್ಲಿ ಮಾಡ್ತಿದ್ದಾಕೆ ಏನೋ ಕಾರಣಕ್ಕೆ ಅಸಮಾಧಾನಗೊಂಡು ಇನ್ನು ಶೋ ಐದು ದಿನ ಇರೋವಾಗ `ಬರಕಾಗಲ್ಲ ಅಂತ ಬಿಟ್ಟಿದ್ದು. ಏನು ಬೇಕಾದ್ರೂ ನಾಟಕಕ್ಕೆ ಹೊಂದಿಸ್ಬಹುದು. ಆದ್ರೆ ಒಬ್ಬ ಹುಡುಗಿಯನ್ನ ಪಾತ್ರಕ್ಕೆ ಹೊಂದಿಸುವಷ್ಟರಲ್ಲಿ ಹೆಣ ಬಿದ್ದೋಗತ್ತೆ. ಇಂತಹ ಸಂಕಷ್ಟದ ಸಮಯದಲ್ಲೇ ಮನು ನಂಬರ್ ಅವನ ತಂಡದ ಒಬ್ಬ ಸದಸ್ಯನಿಂದ ಸಿಕ್ಕಿತ್ತು. ಅವತ್ತೆ ರಾತ್ರಿ ಹನ್ನೊಂದಾಗಿದ್ರೂ ಹಿಂದೆ ಮುಂದೆ ನೋಡದೆ



ಫೋನ್ ಮಾಡೇಬಿಟ್ಟಿದ್ದೆ. ತಗೊಂಡ ಸಧ್ಯ! ನಾನ್ಯಾರಂತ ಹೇಳಿದ್ದೇಲೆ ಏನ್ ಮೇಡಂ ಇಷ್ಟೊತ್ನಲ್ಲಿ ಏಷ್ಯ' ಅಂದ. “ರೀ ಮನೋಜ್ ನಂಗೆ ಅರ್ಜೆಂಟಾಗಿ ಒಬ್ಬ ಹುಡುಗಿ ಬೇಕ್ರಿ ಈಗ...' ಅಂದಿದ್ದೆ ಒಂದೇ ಆತುರದಲ್ಲಿ, 'ಹಾಂ!' ಅನ್ನೋ ಬೆಚ್ಚಿ ಬಿದ್ದ ಉದ್ಗಾರದೊಂದಿಗೆ ಏನು ಮೇಡಂ ಏನ್ಬೇಕು ಅಂದ್ರಿ....' ಅಂತ ಮತ್ತೆ ಅವ್ರು ಕೇಳಿದಾಗ್ಲೂ ನಾನಷ್ಟೇ ಆತುರದಿಂದ ಮತ್ತೆ ಅದನ್ನೇ ಹೇಳಿದಾಗ ಅವ್ರು ಜೋರಾಗಿ ನಕ್ಕಿದ್ದ. ನಾನು ಪೆಚ್ಚಾಗಿ 'ಯಾಕ್ರಿ ಮನೋಜ್ ತುಂಬಾ ಅರ್ಜೆಂಟಿತ್ತು ರೀ ಪ್ಲೀಸ್' ಅಂದಿದ್ದೇ ಮೆತ್ತಗೆ. ಕಷ್ಟಪಟ್ಟು ನಗು ತಡೆಯುತ್ತಾ 'ಅಲ್ರೀ ಮೇಡಂ ರಾತ್ರಿ ಹನ್ನೊಂದಕ್ಕೆ ಫೋನ್ ಮಾಡಿ ಅರ್ಜೆಂಟ ಹುಡುಗಿ ಬೇಕ್ರಿ ಅಂತ ನನ್ನ ಕೇಳಿದ್ರೆ ಹೆಂಗಪ್ಪ... ನಿಮ್ಮ ಅಕ್ಕ ಪಕ್ಕ ಯಾರೂ ಇಲ್ಲ ತಾನೇ? ಹೊಂನಪ್ಪ ಮತ್ತೆ ನನ್ನ ಬಗ್ಗೆ ತಪ್ಪು ತಿಳ್ಕೊಂತ...' ಅಂತ ಅವ್ರು ಹೇಳಾಗಲೇ ನಾನು ಆತುರದಲ್ಲಿ ಏನು ಮಾತಾಡಿದೀನಿ ಅಂತ ಅರಿವಾಗಿದ್ದು. ಆಮೇಲೆ ನನ್ನಿಂದಾನೂ ನಗು ತಡೆಯೋಕಾಗ್ಲಿಲ್ಲ. ಇಬ್ರೂ ನಕ್ಕು ಸಾಕಾದ್ಮಲೆ ವಿಷಯವನ್ನು ಅವನಿಗೆ ವಿವರಿಸಿದ್ದೆ. ಮರುದಿನ ಬೆಳಿಗ್ಗೆನೆ ಒಬ್ಬ ಹುಡುಗಿಯೊಡನೆ ಹಾಜರು ಅವನು. ಅವತ್ತಿನಿಂದ ಹಾಗೆ ನಮ್ಮ ತಂಡದ ಓರ್ವ ಸದಸ್ಯನೇ ಆಗಿಹೋಗಿದ್ದ. ದಿನವೂ ಬರಿದ್ದ ಹಾಗಾಗಿ ನಮ್ಮ ಪ್ರಾಕ್ಟಿಸ್‌ನ್ನು ಮಾನಿಟರ್ ಮಾಡ್ಲಿಕ್ಕೆ ಅವನಿಗೆ ಹೇಳಿದಿವಿ. ತುಂಬಾ ಶಿಸ್ತು ಕಮಕ್ ಕಿಮಕ್ ಅನ್ನೋಕೆ ಬಿಡ್ತಿಲ್ಲಲ್ಲ ನಮ್ಮನ್ನ, ಹಾಗಾಗಿ ನಾವೂ ಸೀರಿಯಸ್ಸಾಗಿ ಇನ್ವಾಲ್ ಆಗ್ತಿದ್ವಿ, ನನ್ನ ಮನೆಗೆ ಹತ್ತಿರ ಅವನ ಮನೆ ಆದ್ದರಿಂದ ದಿನವೂ ಮನೆಗೆ ಬಿಡ್ತಿದ್ದ ಅವನ ಬೈಕ್ನಲ್ಲಿ, ಮನೆ ತಲುಪುವ ತನಕ ಹಾಡಿದ್ದೇ ಹಾಡಿದ್ದು ದಾರಿಯುದ್ದಕ್ಕೂ, ಮೊದಮೊದಲು ಒಬ್ಬನೇ ಬರಬರುತ್ತಾ ಅವನ ಜೊತೆಗೆ ನಾನೂ, ಹಾಗೆ ಶುರುವಾಯಿತು ಒಟ್ಟಿಗೆ ಊಟ, ಸುತ್ತಾಟ. ಅದು ಮುಂದುವರೆದು ಗಟ್ಟಿಗೊಂಡ ಸ್ನೇಹ, ನನಗಿಂತಲೂ ಹದಿನೈದು ವರ್ಷ ಚಿಕ್ಕವನಾದ್ರೂ ಒಂದೇ ಓರಗೆಯವರು ಅನ್ನಿಸುವಷ್ಟು ಚೆನ್ನಾಗಿ ನಮ್ಮ ಫ್ರಿಕ್ವೆನ್ಸಿ ಮ್ಯಾಚ್ ಆಗ್ತಿತ್ತು. ನೋಡೋಕೆ ಒರಟನಂತೆ ಕಂಡರೂ ಹೆಂಗರುಳಿನವ. ಅವನೊಂದಗಿರುವಾಗ ನನ್ನ ವಯಸ್ಸು, ಸ್ಥಾನಮಾನ, ಹೆಸರು ಎಲ್ಲ ಮರಿತ್ತಿತ್ತು ನನಗೇನೇ ಸಹಾಯ ಬೇಕಿದ್ದರು ನಾನೆಲ್ಲೇ ಹೋಗ್ಬೇಕಿದ್ದರು ಎಷ್ಟೊತ್ತಿನಲ್ಲಾದರೂ ಅವನು ಸದಾ ಸಿದ್ಧ. ಅವನೊಂದಿಗೆ ಎಷ್ಟೊತ್ತಿನಲ್ಲಾದ್ರೂ, ಎಲ್ಲಿಗೆ ಬೇಕಾದ್ರೂ ಹೋಗುವಷ್ಟು ನಂಬಿಕೆ, ವಿಶ್ವಾಸ, ಧೈರ್ಯ ನನಗೂ ಅವನಲ್ಲಿ. ಆದರೆ ಈ ಸ್ನೇಹ ಇತರರಿಗೆ ಬಿಸಿ ತುಪ್ಪ, ಬಲು ಕೌತುಕ, ಒಂದು ಮಿತಿಯೊಳಗೆ ಇರುಕಿಸಿಕೊಂಡು ಅದರಾಚೆಗೆ

ಯೋಚಿಸದ ಮನಸ್ಸುಗಳು. ನಮಗದರ ಪರಿವೆಯಾಗಲಿ ಅಂಥವರ ನಡೆ ನುಡಿಯ ಕಾಳಜಿಯಾಗಲಿ ಇರ್ಲಿಲ್ಲ. ಅಂತೆಯೇ ನಮ್ಮನ್ನು ಅಣುಕುವ, ಕಾತರದಿಂದ ಕಾಯುವ ಕಣ್ಣುಗಳಿಗೆ ಸದಾ ಸಲ್ಲುವವರು ನಾವು.

ಎಂದಿನಂತೆ ಹಾಡ್ಕಂತ ನಲ್ಕಂತ ಅನಿತಳ ಸಣ್ಣ ಗ್ರಾಮ ಬಟ್ಟಲಕಟ್ಟೆನ್ನೆ ನಾವು ತಲುಪಿದಾಗ ಮಧ್ಯಾಹ್ನ ಒಂದೊವರೆ, ಅದೊಂದು ಕುಗ್ರಾಮ, ಸಣ್ಣ ತಿಪ್ಪೆಗುಂಡಿಯಂತೆ ಇತ್ತು. ಪ್ರಾರಂಭಕ್ಕೆ ಮತ್ತೆ ನಡು ಊರಿನಲ್ಲಿ ಒಂದ್ನಾಕು ದೊಡ್ಡ ಹಂಚಿನ ಮನೆ ಇದ್ದುವಷ್ಟೆ, ಗೋಪಾಲ್ ಕೊಟ್ಟಿದ್ದ ವಿಳಾಸ ಹಿಡಿದು ಅನಿತ ಮನೆ ಹುಡ್ಕಂಡು ಹೊರಟ್ವಿ, ಚರಂಡಿನೇ ಇರದ ಕಾರಣ ಕಾಲ್ಕಾಲಲ್ಲೇ ಕೊಚ್ಚೆ ರಾಡಿ. ಅದರಲ್ಲಿ ಬಿದ್ದು ಉಲ್ಡಾಡ್ತಿದ್ದ



ವಿವಿಧ ಸೈಜಿನ ಹಂದಿಗಳು. ಅವುಗಳ ಪಕ್ಕಕ್ಕೆ ಕುಂತು ಕೈಯಲ್ಲಿ ರೊಟ್ಟಿ ಚೂರು ಹಿಡಿದ ಮಕ್ಕಳು. ನಗ್ಗಿನಗ್ಗಿ ಹೋಗಿ ಅಲ್ಲಿನ ಜನಜೀವನದ ಪ್ರತೀಕವೋ ಎಂಬಂತಿದ್ದ ಹರಕಲು ಮುರುಕಲು ಆಕಾರ ವಿಕಾರಗೊಂಡಿದ್ದ ಸಿಲುವಾರದ ತಟ್ಟೆಯಲ್ಲಿ ಆರಿ ಕುಳ್ಳಾಗಿ ಸೆಟಗಂಡಿದ್ದ ರಾಗಿ ಮುದ್ದೆಯ ಗುಕ್ಕುಗಳೊಂದಿಗೆ ಆಡ್ಕಂಡು ಕುಂತಿದ್ದ ಚಡ್ಡಿಯಿಲ್ಲದ ಕೆದರಿದ ತಲೆಯ ಸಿಂಬಳಬುರುಕ ಮಕ್ಕಳು ಕೇಕೆ ಹಾಕ್ತಿದ್ದು ಅವರನ್ನೆಲ್ಲಾ ಸೂಪರ್ವೈಸ್ ಮಾಡ್ತಿದ್ದ. ಚೂರು ದೊಡ್ಡ ಮಕ್ಕಳು ನಮ್ಮನ್ನ ನೋಡಿದವರೆ ಸಜ್ಜಾದಂತೆ ಎದ್ದು ಕಾದು ನಿಂತರು. ಅವರಲ್ಲಿ ದೊಡ್ಡವಳೊಬ್ಬಳನ್ನು ಕರೆದು 'ಇಲ್ಲಿ ಅನಿತ ಅಂತ...' ಅಂತಿದ್ದೆ ಅಷ್ಟರಲ್ಲಿ “ಅಗೋ ಆ ನೆರಪಕ್ಕದಗಿರ ಗುಡ್ಲು...' ಅಂದಳಾಕೆ. ಒಂದು ನಾಲ್ಕು ಮಂದಿ ಕಾಲುಚಾಚಿ ಮಲಗುವಷ್ಟು ಜಾಗವಿತ್ತು ಒಳಗಡೆ ಅಷ್ಟೆ ಹೊಗೆ ಸುತ್ತಿಕೊಂಡಂತೆ ಒಳಗೆಲ್ಲಾ ಘಾಟು. ಹೊರಗೆ ಪಕ್ಕಕ್ಕೆ ನಾಕು ಕೋಲು ನೆಟ್ಟು ದುಪಡಿ ಕಟ್ಟಿ ಟೆಂಟಿನಂಗೆ ಮಾಡಿಕಂಡಿದ್ದರು. ಗೋಡೆಯ ಪಕ್ಕಕ್ಕೆ ನಾಕು ಕೋಲು ನೆಟ್ಟು ದುಪಡಿ ಮುದುಕನೊಬ್ಬ ಮುದುರಿ ಮಲಗಿದ್ದ. ಪಕ್ಕದಲ್ಲೇ ಅರೆಪ್ರಜ್ಞಾವಸ್ಥೆಯಲ್ಲಿ ಮೈಮೇಲಿನ ಬಟ್ಟೆ ಅಸ್ತವ್ಯಸ್ತಗೊಂಡಿದ್ದರೂ ಎಚ್ಚರವಿಲ್ಲದಂತೆ ಕುಂತು ಏನೋ ಬಡಬಡಾಯಿಸಿದ್ದ ಮುದುಕಿ. ಆಕೇನ ನೋಡಿದ್ದೇ “ಓ ಅಜ್ಜಿ ಆಗ್ಲೆ ದೇವಾಳರೀ...' ಅಂದ ಮನು. ಇನ್ನೊಂದು ಮೂಲೇಲಿ ಹತ್ತು ಹನ್ನೆರಡು ವರ್ಷದ ಹುಡುಗನೊಬ್ಬ ಗೋಣಿ ತಟ್ಟಿನ ಮೇಲೆ ದುಪಡಿಯೊಳಗೆ ಕವಚಿ ಮಲಗಿದ್ದ ಕಣ್ಣು ಪಿಳಿಪಿಳಿ ಬಿಟ್ಕಂಡು. ಇನ್ನಾರೂ ಕಾಣ್ಲಿಲ್ಲ ಅಲ್ಲಿ. ನಮ್ಮನ್ನೆ ನೋಡ್ತಿದ್ದ ಆ ಹುಡುಗ ಕಡೆಗೂ ಬಾಯ್ಬಿಟ್ಟು ಕೇಳಿದ 'ಯಾರೇ....' ಅಂತ. 'ಅನಿತ ಇಲ್ಲೇನಪ್ಪ....' ಕೇಳಿದ ಮನು. ಬೆಳಿಗ್ಗೆ ವೋದಕಿ ಇನ್ನ ಬಂದಿ....' ಅಂದ ಹುಡುಗ. 'ಇವರಾರು..?” ಅಂತ ಆ ಮುದುಕ ಮುದುಕಿನ ತೋರಿಸಿ ಕೇಳಿದೆ ನಾನು. 'ನಮ್ಮಜ್ಜ ನಮ್ಮಜ್ಜಿ.....' ಅಂದ ಹುಷಾರಿಲ್ಲವಾ ಅವ್ರಿಗೆ....?' ಕೇಳಿದೆ ನಾನು ಮುದುಕನತ್ತ ಕೈ ಮಾಡಿ. 'ಅವ್ನಿಗೇನಾಗೆತಿ ಥಾಡಿ ಕುಡ್ದು ಬಿದ್ದನಂಗೆ...' ಅಂತ ಅವ್ನು ಮಲಗಿದ್ದಲ್ಲಿಂದ ಮಿಸುಗದೆ ಹೇಳಿದ. “ಎದ್ದು ಕುತ್ಗಳ ಏನ್ ಮಕ್ಕಂಡೆ ಮಾತಾಡ್ತಿ....' ಅಂದು ಮನು 'ಅಮ್ಮ

ಎಷ್ಟೊತ್ತಿರರೆ....?' ಅಂತ ಕೇಳಿದ. 'ಒಮ್ಮೆಟ್ಟಿಗೆ ರಾತ್ರಿಕೆ.....' ಮಲ್ಕಂಡೆ ಹೇಳ್ದ  ಅವು ಮತ್ತೆ 'ಅಪ್ಪ...' ಅಂತ ಕೇಳಿದ್ರೆ ಗೊತ್ತಿಲ್ಲ....” ಅಂದ. ಮನು ಮುಖ ನೋಡಿದೆ. ಚೂರು ರೇಗಿತ್ತು ಅವನಿಗೆ. 'ಹೌದೋ ನಿನಿಗೇನಾಗೆ.....? ಏನ್ ಖಾಯ್ಲೆ....?' ಅಂತ ಕೇಳ್ದ, ಅದಕ್ಕೂ ಅವನು ಮಾತಾಡ್ಲಿಲ್ಲ. ಆದರೆ ಮೈಮೇಲಿನ ಹೊದಿಕೆಯನ್ನ ಸರಕ್ಕನೆ ಸರಿಸಿದ. ನಾವಿಬ್ರೂ ಹೌಹಾರಿ ನಿಂತುಬಿಟ್ಟೆ. ಮೊಣಕಾಲಿನವರೆಗೆ ಎರಡೂ ಕಾಲುಗಳನ್ನ ಕತ್ತರಿಸಿ ತಗೆದಿದ್ದರು. 'ಆಕ್ಸಿಡೆಂಟ್ನಗೆ ವೋದ್ವು ಅಂಕಲ್ ಎರಡು ಕಾಲು....' ಅಂದ ಆ ಹುಡುಗ ಯಾವುದೇ ಏರಿಳಿತ ಇಲ್ಲದೆ. ಮನು ಅಲ್ಲೆ ಕುಂತುಬಿಟ್ಟ ಅವನ ಪಕ್ಕದಲ್ಲಿ ಕಾಲು ಮೆಲ್ಲನೆ ನೇವರಿಸುತ್ತ, ಕೊರಳು ಕಟ್ಟಿ ಮಾತುಗಳು ಮೂಕವಾದ್ವು. ಅವನ ಕೈಯಲ್ಲಿ ಒಂದಷ್ಟು ದುಡ್ಡು ಇಟ್ಟು ತಿರುಗಿ ಬಂದುಬಿಟ್ವೆ ಇಬ್ರೂ

ಮರುದಿನ ಹನ್ನೆರಡರ ನಂತರ ಅನಿತಾ ಮತ್ತು ಗೋಪಾಲ್ ಕರಂಡು ಮನೆಗೇ ಬಂದ್ದಿಟ್ಟಾ ಮನು, ಎತ್ತರಕ್ಕೆ ಸ್ವಲ್ಪ ಕಪ್ಪೇ ಎನ್ನಿಸುವ ಚೂಟಿಗಣ್ಣಿನ, ಎರಡು ಜಡೆಯ, ಕಡ್ಡಿ ಎನಿಸುವಷ್ಟು ತೆಳ್ಳಗಿನ ದೇಹ ಅನಿತಾಳದ್ದು, ಬಿಗಿದ ಮುಖ ಅವಳಿಗೆ ಮೆಕ್ಯೂ



ಕಳೆ ಕೊಟ್ಟಿತ್ತು. ನಮ್ಮನ್ನ ಪರಿಚಯಿಸಿದ ಗೋಪಾಲ್ 'ನೋಡಿ ಮೇಡಂ ನೆರೆ ಅಂದ್ರೆ ಅಕ್ಕ ಪಕ್ಕ ಸುತ್ತ ಮುತ್ತ ಅಂತನೂ ಆಗತ್ತೆ. ನಾನ್ ಬರ್ದಿರದೆ ಸರಿ ಅಂತಳೆ ಇವ್ನ.....' ಅಂದ್ರು, ಕಾತರದ ನೋಟ ನನ್ನತ್ತ ಎಸೆದು ಕಾಯುತ್ತಿದ್ದಳು. ಆ ಹುಡುಗಿ ನನ್ನ ಉತ್ತರಕ್ಕೆ. 'ಹೌದು, ಅವ್ನು ಹೇಳೋದು ಸರೀನೆ ಇದೆ' ಅಂದು ನೆಮ್ಮದಿಗೊಂಡ ಅವಳ ಭಾವ ಗಮನಿಸುತ್ತಾ 'ಬಾ ಇಲ್ಲಿ ಕುತ್ಕೊ' ಅಂತ ಪಕ್ಕದಲ್ಲಿ ಕೂರಿಸ್ಕಂಡು 'ನಿನ್ನೆ ನಿಮ್ಮನೆಗೆ ಬಂದಿದ್ವಿ...' ಅಂದೆ.

'ಹೂಂ ಮಿಸ್ ಯೇಳ್ದ  ನನ್ ತಮ್ಮ...' ಅಂದು ಸುಮ್ನಾದ್ಲು.

ನಾನೇ ಮಾತಾಡಿದೆ 'ಅಪ್ಪ ಏನ್ಮಾಡ್ತಾರೆ...?' ಅಂತ ಕೇಳಿದೆ.

ಅಮ್ಮ ಮನಿ ಕೆಲ್ಸ ಮಾಡ್ತಾರೆ ಮಿಸ್. ಇಲ್ಲಿಗೆ ಬಾರ್ತಾರೆ ದಿನಾಲು, ನಾಲಕ್ಮ ನಿ ಮಾಡ್ತಾರೆ. ಒಂದೂವರೆ ಸಾವ್ರ ಸಿಗ್ತತೆ. ಅಜ್ಜ ಇದ್ದಾರೆ. ಅವ್ರ ಖರ್ಚಿಗೆ ಅವ್ರ ನೋಡ್ಕಂತರೆ. ಅಜ್ಜಿ ಸೊಪ್ಪಾರ್ತಾಳೆ. ಅಜ್ಜ ಹಣ್ಣು ಮಾರ್ತನೆ. ಅವು ದುಡ್ಡಿದ್ದು ದಿನಾಲು ಅವ್ರ ಪಾಕೆಟ್ಟಿಗೆ, ಉರಿದ ಮೀನು, ಮೊಟ್ಟೆಗೆ ಆಕತಿ. ನಾವು ಒಟ್ಟು ಆರು ಜನ ಮಿಸ್ ಮಕ್ಳು' ಅಂತ ತನ್ನ ಮನೆ ಡೀಟೆಲ್ಸ್‌ನ ಬಡಬಡಾಂತ ಹೇಳಿದ್ಲಾಕೆ, ತನ್ನಪ್ಪನೊಬ್ಬನ ಹೊರತು. ಮತ್ತೆ ಅವನ ಬಗ್ಗೆ ಕೇಳೋಕೆ ಬಾಯ್ಬರ್ತಿಲ್ಲ ನನಗೆ. ಪ್ರತಿ ಮನೆಗಳಲ್ಲೂ ಈಗ ಹೆಣ್ಮಕ್ಕಳು ದುಡೀತಾ ಇದ್ದರೂ ಕೆಲವೆಡೆ ಅದೇ ಪ್ರಧಾನ ಆಗಿರೋದು

ಸಾಮಾನ್ಯವಾಗಿದ್ದರು. ಇವತ್ತ ಗಂಡಿನ ದುಡಿಮೆ, ಅವನ ಕೆಲಸಕ್ಕೇ ಮೊದಲ ಆದ್ಯತೆ ನೀಡುವ ರೂಢಿಗೆ ನಾವೂ ಎಷ್ಟರಮಟ್ಟಿಗೆ ಬದ್ಧರಾಗಿದ್ದೇವಲ್ಲಾ ಎನಿಸಿ ಪೆಚ್ಚೆನಿಸಿತು. ಅವಳು ಉತ್ತರಿಸಿದ ರೀತಿಗೆ

ಅದನ್ನ ಮರೆಮಾಚಲು 'ಹೋಗ್ಲಿ ಬಿಡು ಇಂಥ ಕಷ್ಟದಲ್ಲೂ ನಿನ್ನ ಓದಿಸ್ತಿದಾಳಲ್ಲ ನಿಮ್ಮಮ್ಮ, ತುಂಬಾ ಖುಷಿ ಆಯ್ತು' ಅಂದೆ. 'ಉಹೂಂ ನಾನೋದ್ತಿದ್ದೀನಿ ನಂದೇ ಸಂಪಾದ್ನೆಲಿ...' ಅಂದಳಾಕೆ. ಅದುವರೆಗೂ ಇರದ ಸೆಡವು ಇದ್ದಕ್ಕಿದ್ದಂಗೆ ಕಾಣಿಸಿತ್ತು ಅವಳ ಮಾತಲ್ಲಿ. ನಾನು ಅದನ್ನ ಗಮನಿಸದವಳಂತೆ ಅದೇ ಧಾಟಿಯಲ್ಲಿ 'ಓ ವೆರಿಗುಡ್ ವೆರಿಗುಡ್ಡ' ಅಂದು ಏನ್ಮಾಡ್ತಿ...' ಅಂತ ಕೇಳ್ದೆ. ತಟ್ಟನೆ ಹೇಳಿದಳು 'ವ್ಯಾಪರ' ಅಂತ.

ನಾನು ನಕ್ಕೇ 'ಗೊತ್ತಾಯ್ತು ಬಿಡು ಅಜ್ಜಿ ಸೊಪ್ಪು ಮಾಡ್ತಾರೆ, ಅಜ್ಜ ಹಣ್ಣು ಮಾರ್ತಾರೆ, ನೀನೇನು ಮಾರ್ತಿ....?

"ಮೈಯ್ಯ..." ತುಂಬಾ ನಿರ್ಲಿಪ್ತಾವಾಗಿ, ಅಷ್ಟೇ ಸಲೀಸಾಗಿ, ಬಹಳ ಸಹಜವಾಗಿ, ತಣ್ಣಗೆ ಬಂದ ಉತ್ತರ ನನ್ನ ಎತ್ತಿ ಕುಕ್ಕಿ ಬಿಸಾಡಿತು. ಇದ್ದಂತೆ ಇದ್ದಲ್ಲೇ ಹಾಗೇ ಸ್ಥಿಲ್ಲಾದೆ, ಬಾಯಿನ ತೇವ ಆರಿ ಹೋದಂತಾಗಿ ಗಂಟಲು ಒಣಗಿ ಉಸಿರು ಸಿಕ್ಕಿಕೊಂಡ ಅನುಭವ. ಕಣ್ಣು ಬಾಯಿಬಿಟ್ಟು ಸುಮ್ಮನೇ ಕೂತುಬಿಟ್ಟೆ ನಮ್ಮಿಬ್ಬರನ್ನೇ ಅಲ್ಲಿ ಬಿಟ್ಟು ನಮ್ಮ ಮಾತುಗಳನ್ನು ಅಲಿಸುತ್ತಾ ಒಳಗಿನ ಕೋಣೆಯಲ್ಲಿ ಕೂತಿದ್ದ ಗೋಪಾಲ್ ಮತ್ತು ಮನು ಇಬ್ರೂ ಒಂದೇಟಿಗೆ ಓಡಿ ಬಂದು ಅಲ್ಲಾಡದೆ ನಿಂತುಬಿಟ್ಟರು ಅವಳ ಹಿಂದೆ ಹಾಗೆ.

ಒಂದು ಚೂರೂ ಅಳುಕು, ಭಯ, ಯಾವ ಭಾವೋದ್ವೇಗವೂ ಇಲ್ಲದ ಅವಳ ಇರುವು ನನ್ನೊಳಗೆ ಚಳಿ ಹುಟ್ಟಿಸತೊಡಗಿತು. ನನ್ನ ಸ್ಥಿತಿ ಅರ್ಥವಾಯಿತೋ ಎಂಬಂತೆ ಅವಳೇ ಮಾತಾಡಿದಳು. 'ನಮ್ಮನಿ ಹತ್ರ ಇರೋ ಶಾಲೆನಗೆ ನಮ್ಮಮ್ಮನ್ನೂಡ ಮನಿ ಕೆಲ್ಸ



ಮಾಡ್ಕಂತನೆ ಎಳ್ನೆ ಕ್ಲಾಸ್‌ವರ್ಗೂ ವೋದ್ದೆ ಮಿಸ್. ಅಮ್ಯಕ್ನಂಗ ಮನಿ ಕೆಲ್ಸ ಅಂದ್ರೆ ಆಗ್ಬರ್ದಂಗಾತು. ನಮ್ಮವ್ವಗೆ ನಾನುಂದಕ್ಕೆ ವೋದದು ಆಗ್ಬರ್ಲಿಲ್ಲ. ನಮ್ಮಮ್ಮಗೆ ನನ್ನ ವರಗ್ಕಳ್ಸದೆ ಇಷ್ಟಿಲ್ಲ. ಆಕಿಗೆ ಯದ್ರಿಕಿ. ದನದ್ಬಡ್ದಂಗೆ ಬಡಿತಿದ್ಲು ದಿನಾಲು ಮನಿ ಕೆಲ್ಸಕ್ಕೆ ಬಾ ಅಂತ.. ನಾನೋಗ್ತಿದ್ದಿಲ್ಲ. ಒಂದ್ವರ್ಷ ಹಂಗೇ ಮನ್ಯಾಗೆ ಸುಮ್ನೆ ಕುಂತೇ ಕಳ್ದೆ, ಉಪವಾಸ ಕೆಡವಿದ್ಲು. ವಡದ್ಲು ಯಾವುದಕ್ಕೂ ಜಗ್ಗಲಿಲ್ಲ ನಾನು. ನೀನು ಸಾಯ್ದಡದ್ರೂ ಮನಿಕೆಲ್ಸ ಮಾಡಲ್ಲ. ನಾನು ವೋದ್ಬೇಕು ಅಂತ ನಂದೂ ವಂದೇ ಹಟ.

ಇದನ್ನೆಲ್ಲಾ ನೋಡ್ತಾನೆ ಇತ್ತು ನಾಗರಾಜಪ್ಪ ಅಂತ ನಮ್ಮೂರ್ನಗೈತೆ ಒಬ್ಬಾತ. ಬರ್ತಿ ದುಡ್ಡವೆ ಮಿಸ್, ಬಡ್ಡಿ ಕೊಡ್ತತೆ ಯಲ್ರಿಗೂ, ನಮ್ಮವ್ವಗೂ ಕೊಟ್ಟತೆ. ಅವ್ನತಕೆ ವಮ್ಮೆ ಸಾಲ ಮಾಡುದ್ರೆ ಅದು ಸಾಯಮಟ ತೀರಂಗಿಲ್ಲ.

ಕೊಟ್ಕೊಟ್ಟಂಗೂ ಬಡ್ಡಿ ಬೆಳಿತನೇ ಇರ್ತತಿ. ಅವ್ನೇಣ್ತಿಗೆ ಯಂತದೋ ಖಾಯ್ಲೆ. ಅವಕ್ಕ ಯಾವಾಗ್ನೋಡ್ಲಿ ಹಾಸ್ಗೆಗೆ ಬಿದ್ಕಂಡಿರ್ತತೆ. ಅವಕ್ಕನ್ನ ನಾನೋಗಿ ದಿನಾಲು ನೋಡ್ಕಂಡ್ರೆ ದುಡ್ಡ ಕೊಟ್ಟು, ಬಡ್ತೀನು ಬಿಡ್ತೀನಿ ಅಂತ ನಮ್ಮಪ್ಪಗೆ ಆಸೆ ಹುಟ್ಟುಸ್ತು.

ಅದೇ ವತ್ನಗೆ ನನ್ನ ತಮ್ಮಗೆ ಆಕ್ಸಿಡೆಂಟಾಗಿ ಕಾಲೇ ಮುರೀತು. ನಾನು ಅವ್ನ  ಮನಿ ಸೇರ್ದೆ, ಮೊದ್ಲು ಬರೀ ಅವಕ್ಕನ್ನು ನೋಡಬೇಕಿತ್ತು. ಅದುನ್ನೇ ಮಾಡತ್ತಿದ್ದೆ. ಒಂದಿನ ನಾನೇ ಕೇಳ್ದೆ ಮಿಸ್. ನೀವೇನು ಕೆಲಸ ಹೇಳಿದ್ರೂ ಮಾಡ್ತೀನಿ ನನ್ನ ಶಾಲೆಗೆ ಕಳಿಸ್ರಿ ಅಂತ.

“ಏನಂದ...' ನಾನು ಕಾರತದಿಂದ ಕೇಳಿದೆ ಮಧ್ಯಕ್ಕೆ ತಡೆದು.

“ಅವತ್ತೇನೂ ಹೇಳ್ಲಿಲ್ಲ. ಎರಡ್ದಿನ ಬಿಟ್ಟು ನಾನು ಕರ್ದಂಗೆಲ್ಲಾ ಬಂದು ನನ್ಜತೆ ಮಕ್ಕಂತೀಯಾ ಶಾಲೆಗೆ ಸೇರಿಸ್ತೀನಿ ಅಂತ ಕೇಳ್ತು' ನಾನು ಥಟ್ಟನೆ 'ನೀನೇನಂದೇ?' ಅಂತ ಕೇಳಿದೆ.

ನನಗೆ ಗೊತ್ತಗುವಷ್ಟು ನನ್ನ ದನಿ ನಡುಗಿತ್ತು.

“ಹೂಂ ಅಂದೆ. ಆ ಅವಕಾಶ ಬಿಟ್ರೆ ನಂಗ್ಮತ್ತೆ ವೋದಕ್ಕೆ ಛಾನ್ಸ್ ಇರ್ಲಿಲ್ವಲ್ಲ ಮಿಸ್. ಅವಳ ಉತ್ತರ ಕೇಳಿದ್ದೆ ಮನು ಕುರ್ಚಿಯಲ್ಲಿ ಕುಸಿದು ಕೂತ.

“ಅಮ್ಮಾ..?' ಕೇಳಿದೆ ನಾನು ಕಷ್ಟಪಟ್ಟು ಸಾವರಿಸಿಕೊಂಡು 'ಏನ್ಮಾಡ್ತಳೆ ಮಿಸ್ ಆಕಿ ಪಾಪ, ಅವ್ನ  ತರೋ ದುಡ್ದು ನಮ್ಮ ಅರವಟ್ಟಿಗೂ ಸಾಲ್ದು, ಜತಿಗೆ ಆಸ್ಪತ್ರೆ ಖರ್ಚು ಬ್ಯಾರೆ. ಈವಪ್ಪ ಒಂದೀಟು ಕೈ ಬಿಚ್ಚಿ ಕೊಡ್ತಿತ್ತ ಅಂಗೂ ಯಿಂಗೂ ಅದಕ್ಕೆ ಕಂಡೂ ಕಾಣ್ದಳಂಗೆ ಇತ್ಬಿಟ್ಲು.

ತಡೀಲಾರದೆ ಮನು ಎದ್ದು ಬಂದು ನನ್ನ ಪಕ್ಕಕ್ಕೆ ಕೂತು 'ನೀನೇ ದೊಡ್ಡವಳಾ...? ಹೌದು, ನಿನ್ನ ಹೊರಗ್ಕಳ್ಸಕೆ ನಿಮ್ಮಮ್ಮಂಗೆ ಯಾಕೆದ್ರಿಕೆ....?' ಅಂತ ಕೇಳಿದ.

“ಇಲ್ಲ. ಅಕ್ಕ ಒಬ್ಬಿದ್ಲು ಸರ್. ಅವಳಿಂದನೇ ನಮ್ಮಮ್ಮ ನಮ್ಮ ವರಗ್ಕಳ್ಸಕೆ ಯದರ್ತಿದ್ದು. ಅಂದಳು.

'ಈಗೆಲ್ಲಿದಳೆ ಯಾಕೆ ಏನಾತು..? ಕುತೂಹಲದಿಂದ ಮನು.

'ಇಲ್ಲಾ ಸರ್ ಅವ್ಳೆಲ್ಲಿದ್ದಳೋ ಗೊತ್ತಿಲ್ಲ. ಸುನೀತ ಅವ ಹೆಸರು. ನಮ್ಮವ್ವಂಗೆ

ಕೆಂಪಗೆ ನೋಡಕೆ ಚೆನ್ನಾಗಿದ್ಲು ಸರ್. ನಾಕೈದು ವರ್ಷದೊಳಗೆ ಆದ್ಕತೆ ಸರ್ ಇದು. ನಮ್ ಓಣಿನಗೊಬ್ಬು ಹೆಂಗ್ಸಿದ್ಲು, ಅವ್ರ ಜತಿಗೆ ಭತ್ತದ ಮಿಲ್ಲಿಗೋಗಿದ್ದು ಸುನೀತ. ಒಂದ್ರಿಂಗ್ಳಾಗಿತಟೆ. ನಮ್ ಸುನೀತನು, ಆ ಹೆಂಗ್ಸು ಇಬ್ರೂ ಎತ್ತಾಗೋ ವೋಗ್ಬಿಟ್ರು ವಂದಿನ ಏಟುಡ್ಕಿದ್ರೂ ಸಿಗ್ಲಿಲ್ಲ. ಪೋಲೀಸ್ ಕಂಪ್ಲೇಂಟೂ ಕೊಟ್ಲು ಅಮ್ಮ.

ಒಂದೆಂಟು ತಿಂಗ್ಳಾಗಿತ್ತೇನೋ ವಂದಿನ ರೇಲ್ವೆ ದಾಟಿ ಆ ಕಡಿಗೆ ವೊಗತ್ಲೆ ಮರೆ ಆಗ್ಬಿಟ್ಲಿಂತೆ. ಸರೋತ್ತಿನನ ವುಡುಕ್ಯಾಡಿ ಬಂದ್ಲು ಅಮ್ಮ ಆವತ್ತು ಆಕೀದು ಪತ್ತೇನೆ ಇಲ್ಲಂತ್ ಸರ್, ಆದಾಗಿ ಮೂರ್ತಿಂಗ್ಳಿಗೆ ನಮ್ ಓಣಿಯರೊಬ್ರು ಬಂದು ನಿಮ್ಮ ಮಗು ಯಳೇಮಗಿನಕ್ಕೆಂಡು ಅಂಡರ್ಬ್ರಿಡ್ಜತ್ರ ಫುಟ್ ಪಾತ್ನಗೆ ಬಿಕ್ಷೆ ಬೇಡ್ತಿದ್ದು ಬೆಳಿಗ್ಗೆ ಅಂತ ಯೇಳಿದ್ರು, ಎದ್ವೊ ಬಿದ್ವೊ ಅಂತ ಮನಿಮಂದ್ಯಲ್ಲಾ ವೋಡಿದ್ವಿ, ನಾವೊಗವತ್ಗೆ ಅಲ್ಯಾರೂ ಇರ್ಲಿಲ್ಲ. ಅದೇ ಕೊನಿ ಸರ್ ಆಮ್ಯಾಲಿಂದ ಆಕಿ ಸುದ್ದೀನೇ ಇಲ್ಲ ಅದಕ್ಕೆ ಆವಾಗಿಂದ ನಮ್ಮಮ್ಮಗೆ ನಮ್ಮೂ ವರೆಗೆ ಕಳ್ಸಕೆದ್ರಿಕಿ.

ಒಳಗಿಂದೆಲ್ಲಾ ಖಾಲಿ ಆದಂತೆ ಅನಿತಾ ಸುಮ್ನೆ ಕೂತಿಟ್ಟಳು ಅಷ್ಟು ಹೇಳಿ. ನನಗೇನಾದ್ರೂ ಬಿಸಿ ಬೇಕನಿಸಿ ಹೋಗಿ ಟೀ ಮಾಡಿ ತಂದೆ, ಕುಡಿದು ಮುಖ ಕಿವುಚಿದ ಮನು. ಯಾಕೆ ಅನ್ನುವಂತೆ ಅವನತ್ತ ನೋಡಿದೆ. ಯಾಕೋ ಬಾಯೆಲ್ಲಾ ಕಹಿ ಅಂದ. ಇಷ್ಟು ಗಂಭೀರವಾಗಿ ಅವ್ನಿದ್ದದ್ದು ಮೊದಲ ಬಾರಿಗೆ ನೋಡ್ತಿದ್ದೆ ನಾನು.

ಅದುವರೆಗೂ ಸುಮ್ಮನಿದ್ದ ಗೋಪಾಲ್ ಎಷ್ಟು ದಿವಸಂತ ಹೀಗೆ ಇರ್ತೀಯಮ್ಮಾ' ಅಂತ ಕೇಳಿದ್ರು.

"ಗೊತ್ತಿಲ್ಲ ಸರ್' ಅಂದ್ಲು ತಲೆ ತಿರುವುದತ್ತಾ

"ಹೌದು ನಾಳೆ ಏನಾದ್ರೂ ಹೆಚ್ಚು ಕಮ್ಮಿ ಆದ್ರೆ..? ಅವ್ನಿಂದೇನಾದ್ರೂ ತೊಂದ್ರೆಗಿಂದ್ರೆ ಅದ್ರೆ ಏನ್ಮಾಡ್ತೀ...? ಗೋಪಾಲ್ ಮತ್ತೆ ಕೇಳಿದ್ರು.

'ತೊಂದ್ರೆ ಯಾಕ್ಕಾಡ್ತತ್ತೆ ಸರ್ ಸುಮ್ ಸುಮ್ನೆ ನಾನೇನು ಮೋಸ ಮಾಡಲ್ವಲ್ಲಾ... ಮತ್ ನನಿಗೇನು ಆಗತ್ತೇ ಸರ್ ಅತ್ನೆ ಯಚ್ಚುಕಮ್ಮಿ ಆಗ್ಬೇಕಟೆ. ಆಗ್ಲೆ ಐವತ್ತೊರ್ಷ ಮ್ಯಾಲಾಗ್ಯೆತೆ. ಇನ್ನೆಷ್ಟು ದಿನ ಬದುಕೀತು. ವಂದ್ವೇಳೆ ಬದುಕಿದ್ರೂ ನನ್ನೇನು ಮಾಡಂಗ್ಯೆತೆ. ನಾನೇನು ಆತ ಕಟ್ಕಂಡಿರ ಯೆಣ್ತಿ ಅಲ್ವಲ್ಲಾ ಕಟ್ಟಾಕಕೆ' ಅಂತ ಒಳ್ಳೆ ಜಬರದಸ್ತಿನಿಂದಲೇ ಅನಿತ ಹೇಳಿದಾಗ ಅವಳ ಮನೋಭಾವ. ಅವಳ ಧೈರ್ಯ ನನಗೊಂಥರ ಗಾಬರಿ ಹುಟ್ಟಿಸಿದವು ಯಾಕೋ.

"ಅದೋನೋ ಸರಿ ಬಿಡು ಆಯ್ತು ಈ ವಿಷ್ಯ ಯಾರ್ಗೂ ಗೊತ್ತಿಲ್ವಾ...? ಮನು ಕೇಳ್ದ. "ಇಲ್ಲ ಅಂತ ನಾವಂದ್ಕಂಡಿದೀವಿ ಸರ್ ಯಾರಿಗೊತ್ತು?" ಅಂದ್ಲಾಕೆ ಅದೇ ತಣ್ಣನೆ ದನಿಯಲ್ಲಿ

ಯಾರಾದ್ರೂ ಎಂಥವರಾದ್ರೂ ಒಮ್ಮೆ ಮೈ ಕೊಡವಿ ಗಾಬರಿಗೊಳ್ಳುವಂಥ ಅಸಹಿಸಿಕೊಳ್ಳುವಂತ ಸಂಗತಿಯನ್ನು ಆಕೆ ಅರಗಿಸಿಕೊಂಡಿರುವ ರೀತಿಯೇ ಒಂದು ವಿಸ್ಮಯ. ಏನನ್ನಾದರೂ ಮಾಡಿಸಿ, ಎಲ್ಲಾನೂ ಕಲಿಸಿ

ಯಾವುದನ್ನ ಬೇಕಾದ್ರೂ ಅರಗಿಸಿ ಕೊಳ್ಳುವಂತ ಗುಣ ಈ ಬಡತನಕ್ಕಲ್ಲದೆ ಬೇರೆಲ್ಲಿದ್ದೀತು ಅಂದುಕೊಂಡೆ ನಿಟ್ಟುಸಿರಿಟ್ಟು,



"ಅದೇನೋ ಸರಿ ನಾಳೆ ನಿನ್ನ ಯಾರು ಮದ್ದೆ ಆಗ್ತಾರೆ ಹೀಗಾದ್ರೆ' ಮನು ಹೇಳಿದ ಅವನ ದನಿಯಲ್ಲಿ ನಿಜಕ್ಕೂ ಕಳಕಳಿಯಿತ್ತು.

'ಮದ್ವೆ ಆಗದೊಂದೇ ಉದ್ದೇಶ ಏನ್ಸಾರ್ ಜೀವ್ನಕ್ಕೆ...?" ಅವನಿಗೆ ಮರುಪ್ರಶ್ನೆ ಹಾಕಿದಳು ಅನಿತ. ಮನು ಅಂತ ಮನುನೇ ತಡವರಿಸಿದ ಮಾತಿಗೆ

'ಮದ್ವೆ ಆಗತೇ ಅಂತ ನಾನು ಶುದ್ಧವಾಗಿದ್ದು, ಮನೆಕೆಲ್ಸ ಮಾಡ್ಕಂಡು ಒಂದು ಇನ್ನೂರ್ರೋ ಮುನ್ನೂರ್ರೋ ಕತ್ತೆ ಚಾಕರಿ ಮಾಡ್ಕಂಡಿದ್ರೆ ನಂದೂ ನಮ್ಮಮ್ಮನ ಕಥೇನೇ ಆಗ್ತೈತಿ ಸರ್, ಕೊನಿಗೆ ಯಾವನನ ಒಬ್ಬ ಕೂಲಿನೋ ಹಮಾಲಿನೋ ಕುಡುಕನೋ ಜೂಜುಕೋರನೋ ನನ್ನ ಗಂಡ ಆಗ್ತಾನೆ. ಒಂದೈದಾರು ಮಕ್ಳೂ ಆಗ್ತವೆ. ಅಷ್ಟಕ್ಕೆ ನಾನುಟ್ಟಿದ್ದು ಸಾರ್ಥಕಾತು ಅಂತ ಪಡಬಾರ್ದು ಪಾಡ್ಪಟ್ಟು ಜೀವ್ನಯೀಡಿ ನರಕದಾಗ ಕೊಳೆಯಕೆ ನನಗಿಷ್ಟ ಇಲ್ಲ ಸರ್. ನಾನೊದ್ತೀನಿ ಸರ್ ಅಷ್ಟಕ್ಕೂ ನಾನು ಈಗ ಮಾಡ್ತಿರದ ಮದ್ವೆಯಾದ್ಮೇಲೂ ಮಾಡದಲ್ವಾ ಸರ್ ಏನು ವ್ಯತ್ಯಾಸ...?" ಅಂದು ನಮ್ಮೊಳಗೊಂದು ಸಮರವನ್ನೇ ಸಾರಿ ತಾನು ಮಾತ್ರ ಶಾಂತವಾಗಿ ಕೂತು ಬಿಟ್ಟಳಾಕೆ...

ಮದುವೆ ಮತ್ತು ಅದಕ್ಕೆ ಬೇಕಾದ ಹೊಂದಾಣಿಕೆಯನ್ನೇ ಗುರಿಯಾಗಿಟ್ಕಂಡು ಹೆಣ್ಣು ಜನ್ಮ ತಾಳಿದ ಕ್ಷಣದಿಂದ ಅದಕ್ಕೆ ತಕ್ಕನಾದ ನಡೆನುಡಿ, ಓದುಬರಹ, ಸಂಸ್ಕಾರದಿಂದ ಆಕೆನ ಕಡೆದು ಕೆತ್ತುವ ಒಪ್ಪಿತ ರೂಢಿತ ವ್ಯವಸ್ಥೆಗೆ ಎದುರಾಗಿ ನಿಂತಿದ್ದಳಾಕೆ. ಈ ವಯಸ್ಸಿಗೆ ಇವಳಲ್ಲಿ ಈ ಗಟ್ಟಿತನ ಒಟ್ಟಾಗಿ ಮೈಗೂಡಿಕೊಳ್ಳುವ ನಿಟ್ಟಿನಲ್ಲಿ ಈಕೆ ಒಳಗೊಂಡಿರಬಹುದಾದ ಸಂಘರ್ಷ ನಡೆಸಿರಬಹುದಾದ ಹೋರಾಟ ಕಲ್ಪನೆಗೆ ನಿಲುಕದ್ದು ಹೌದು ದಿನಬೆಳಗಾದರೆ ಬಡವರಿಗೆ ಉಚಿತ ಶಿಕ್ಷಣ. ಎಲ್ಲರಿಗೂ ಶಿಕ್ಷಣ ಕಡ್ಡಾಯ ಅಂತ ಸಂಬಂಧಪಟ್ಟವರೆಲ್ಲ ಬಡ್ಕಂತನೆ ಇರ್ತರೆ. ಅವರುಗಳಿಗೆ ಇಂಥವರೇಕೆ ನಿಲುಕುವುದಿಲ್ಲ. ಸಹಜವಾಗಿ ಸಿಗಬೇಕಾದ್ದನ್ನು ಪಡೆಯೋಕೆ ಎಳೆಯ ಮನಸೊಂದು ಜೀವವೊಂದು ಹೀಗೆ ನಲುಗಿ ವಿಲವಿಲ ಒದ್ದಾಡುವ ಪರಿಸ್ಥಿತಿಗೆ ಏನು ಹೊಣೆ? ಯಾರು ಹೊಣೆ? ಯೋಚಿಸುತ್ತಲೇ ಮನಸೊಂದು ನಿರ್ಧಾರಕ್ಕೆ ಬರುತ್ತಿತ್ತು. ಹೇಳಬೇಕೆನ್ನುವಷ್ಟರಲ್ಲಿ ಮನು ನನ್ನತ್ತ ಬಾಗಿ ಕಿವಿಯೊಳಗೆ

“ನಮ್ಮ ಅನುಕಂಪ ಉಪದೇಶ ಯಾವ್ದುಕ್ಕೂ ಅವಕಾಶನೇ ಇಲ್ದಂಗೆ ಇದೆಯಲ್ವಾ ಇವ್ಳ ಮಾತುಕತೆ... ಸ್ವಲ್ಪನಾದ್ರೂ ಗೊಂದಲ ಗಲಿಬಿಲಿ ಇದ್ದಿದ್ರೂ ನಾಲ್ಕು ಮಾತು ಹೇಳ್ಬಹುದಿತ್ತು. ಹೋಗ್ಲಿ ಸ್ವಲ್ಪ ಅಳುಕು ಭಯ... ಊಹೂಂ ಅದೂ ಇಲ್ಲ. ಪ್ರಶ್ನೆನು ಹಾಕಿ ಉತ್ತರನೂ ಅವಳೇ ಹೇಳ್ತಿದ್ದಾಳೆ... ಅಂತ ಪಿಸುಗುಟ್ಟಿದ.

“ಮನು ಅವ್ಳ ಪ್ರಜ್ಞೆಯಿಟ್ಕಂಡೇ ಎಲ್ಲಾ ಮಾಡ್ತಿದಾಳೆ ಪ್ರಜ್ಞೆ ಕಳ್ಕಂಡಲ್ಲ ಮತ್ತೆ ಯಾಕ್ಮಾಡ್ತಿದಾಳೆ ಆಕಿಗೇನ್ ಬೇಕು ಅದರ ಸ್ಪಷ್ಟ ಅರಿವೂ ಇದೆ ಎಚ್ಚರಿಕೇನೂ ಇದೆ. ಅದಕ್ಕೆ ಅಲ್ಲಿ ಯಾವ ಕನ್‌ಫ್ಯೂಷನ್ನು ಇಲ್ಲ ಕನ್‌ಫೆಷನ್ನೂ ಇಲ್ಲ...” ಅಂದು ನನ್ಜೊತೆ ಬಂದು ಇರ್ತೀಯಾ ನೀನು' ಅಂತ ಕೇಳ್ದೆ ಅನಿತನ್ನ...

“ಏನಂದ್ರಿ ಮಿಸ್...! ನಿಜವಾಗ್ಲೂ...! ನಿಜವಾಗ್ಲೂ... ಇಟ್ಗಂತೀರ ಮಿಸ್ ಕಣ್ಣರಳಿಸಿ ಎದ್ದು ಓಡಿ ಬಂದು ನನ್ನ ಕೈ ಹಿಡಿದು ಸಣ್ಣ ಹುಡುಗಿಯಂತೆ ಮುದ್ದಾಗಿ ಕೇಳಿದಳಾಕೆ.



ಈಗ ಬೇರೆಯೇ ಅನಿತನ್ನ ನೋಡುತ್ತಿದ್ದೆ ನಾನು, ಒಮ್ಮೆಲೆ ಕಣ್ಣಲ್ಲಿ ಆ ಎಳೆತನ, ಜೀವಸಂಚಾರವಾದಂತೆ ದೇಹದಲ್ಲಿ ಲವಲವಿಕೆ ಮಾತಲ್ಲಿ ಮುಗ್ಧತೆ, “ಮಿಸ್, ಕವಿತ ನೋಡಕೂ ತುಂಬಾ ಚೆನ್ನಾಗಿದ್ದಾಳೆ. ಬೆಳ್ಳಗಿದ್ದಾಳೆ. ತುಂಬಾ ಒಳ್ಳೆವ್ಳು ಮಿಸ್ ನೀವೆಂಗೇಳ್ತೀರೋ ಹಂಗ್ಕೇಳ್ತಾಳೆ. ಮಿಸ್ ಅವ್ಳನಾ...” ಅಂದು ಮಾತು ನಿಲ್ಲಿಸಿ ನನ್ನ ಮುಖ ನೋಡಿದಳು.

ಅದುವರೆಗೂ ಕಾಣದ ದೈನ್ಯತೆ ಇತ್ತು ಆ ನೋಟದಲ್ಲಿ ಮಾತು ಅಷ್ಟೇ ಮೆದು. ಅವಳ ಇಂಗಿತ ನಾನರಿತೆ. ಅವಳ ಬಗ್ಗೆ ಒಮ್ಮೆಲೇ ಎಲ್ಲಿಲ್ಲದ ಅಕ್ಕರೆ, ಗೌರವ ಉಕ್ಕಿ ಬಂದರು ನನ್ನಲ್ಲಿ.

ಅಮ್ಮನತ್ರ ಮಾತಾಡು ನೀನ್ಯಾವಾಗ ಬೇಕಾದ್ರೂ ಕರ್ಕಂಡು ಬಾ” ಅಂದೆ.

“ನೋ...ನೋ..ನೋ' ಅಂತ ಮನು ಮದ್ಯ ಪ್ರವೇಶಿಸಿದ ಅಪ್ಪ, ಅಮ್ಮ ಹಳ್ಳಿಲಿ ಇದ್ರೆ ಇರ್ತಾರೆ. ಅಪ್ಪ ತೋಟಕ್ಕೋದ್ರೆ ಅಮ್ಮ ಒಬ್ಳೆ ಅಮ್ಮನ್ನತೆ ಕವಿತ ಇರ್ತಾಳೆ. ಮನೆಯದುರ್ಗೆ ಶಾಲೆನೂ ಇದೆ. ಅಲ್ಲೇ ಕಲೀತಾಳ ಡನ್ನಾ... ಅಂದ ಹೆಬ್ಬಟ್ಟೆತ್ತಿ.

“ಓ ಡನಾಡನ್' ಅಂತ ಜೋರಾಗಿ ಚಪ್ಪಾಳೆ ತಟ್ಟುತ್ತಾ ಏನನಿತಾ' ಅಂತ ಅವಳ ಕಡೆ ತಿರುಗಿದೆ.

ಅವಳು ಓಡಿಬಂದು ಸಣ್ಣ ಮಗುವಂತೆ ನನಗೆ ತೆಕ್ಕೆ ಬಿದ್ದಳು. ಮತ್ತೆ ನೀನು...?”ಅಂದೆ.

ಇಲ್ಲ ಮಿಸ್ ನಂದೇನ್ ತಲಿ ಕೆಡಿಸ್ಕಾಬ್ಯಾಡ್ರಿ ನಾನ್ ಮನಿ ಬಿಟ್ ಇರಕೆ ಬರಂಗಿಲ್ಲ ಮಿಸ್. ನೀವೇ ನೋಡಿರಲ್ಲ ನಮ್ಮ ಪರಿಸ್ಥಿತಿ. ಮತ್ ನಾಗರಾಜಪ್ಪನ ಯೇಣ್ತಿನೂ ನಾನೆ ನೋಡ್ಬೇಕು. ಮಿಸ್ ನೀವು ಸರ್ರು ನನ್ ಜತೆಗೆ ಇರ್ತಿರಲ್ಲ. ಮಿಸ್...' ಅಂತ ಸಣ್ಣ ಮಗುವಂತೆ ನನ್ನ ಕೊರಳು ತಬ್ಬಿ ಮುದ್ದಾಗಿ ಆಕೆ ಕೇಳಿದಾಗ ಉಕ್ಕಿ ಬಂದ ಆಳುವನ್ನು ಕಷ್ಟಪಟ್ಟು ತಡೆದು ಮಾತಾಡದೆ ಬಿಗಿಯಾಗಿ ಅವಳನ್ನ ನನೆದೆಗವಚಿಕೊಂಡು ಮನುವಿನಿತ್ತ ನೋಡಿ ಹ್ಯಾಟ್ಸ್ ಆಫ್' ಅಂದೆ ಸನ್ನೆಯಲ್ಲೇ. ಅವನು ಕಣ್ಣಂಚಲಿ ಜಿನುಗಿದ ನೀರು ಒರೆಸುತ್ತ ನಗುತ್ತ 'ಗ್ರೀನ್ ಪಾರ್ಕ್..' ಅಂತ ಪಿಸುಗುಟ್ಟಿದ.

## ಮೃತ್ಯೂವು ಮತ್ತವನ ಹೆಂಡತಿಯೂ

**- ಎಂ.ಎಸ್. ವೇದ**

ಮೃತ್ಯೂ ತೀರ್ಕಂಡ್ ಬುಟ್ನಂತೆ ಹೊತ್ತು ಹಟ್ಟುವುದಕ್ಕೆ ಮುಂಚೆಯೇ ಈ ಒಂದು ವಾಕ್ಯ ಆ ಹಳ್ಳಿಯ ಓಣಿ ಓಣಿಗಳಲ್ಲಿ ವಾಲಾಡಿ, ತೇಲಾಡಿ, ಎದ್ದೂ ಬಿದ್ದೂ ಜಗುಲಿ, ಹಟ್ಟಿ, ಅಂಗಳ, ಊರು-ಕೇರಿಗಳನ್ನು ತುಂಬಿ, ತುಳುಕಾಡಿ ಮುಂದಕ್ಕೆ ಸಾಗಲು ತಾವಿಲ್ಲವಾಗಿ ಮತ್ತೆ ಮತ್ತೆ ಅಲ್ಲಲ್ಲಿಯೇ ಸುತ್ತು ಹಾಕತೊಡಗಿತ್ತು. ಆ ವಾಕ್ಯ ಹುಟ್ಟಲು ಕಾರಣಕರ್ತರಾದ ತೀರ್ಥರೂಪರು ಗಾರೆ ಸೀನಣ್ಣನವರ ಕೈನಾಗೆ ಶೋಭಿಸುತ್ತಿದ್ದ ಮೊಬೈಲಿನಲ್ಲಿ ಅವಿತು ಕೊಂಡಿದ್ದರು.

ಗಾರೆ ಸೀನಣ್ಣನವರರು ತಮ್ಮ ದುಬಾರಿ ಎನ್ನಿಸುವ ಚಟ, ಶೋಕಿಗಳಿಂದಾಗಿ ಅಪ್ಪನೋರು ಬುಟ್ಟುಹೋದ ಆಸ್ತಿಗಳನ್ನೆಲ್ಲಾ ಕಳಕೊಂಡವರಾಗಿ ಅಬ್ಬೇಪಾರಿಗಳಾಗಿದ್ದವರು. ಇದೀಗ ಉಳಿದಿದ್ದ ಹಳೇ ಸೈಕಲ್ಲಿನಾಗೆ ಮೈಸೂರಿನ ಹಾದಿ ಹಿಡಿದು ನಾಕಾರು ರಸ್ತೆಗಳು ವಂದುಗೂಡುವ ಸರ್ಕಲ್ಲುಗಳಲ್ಲಿ ನಿಂತು. ಯಾವಾನಾದರೂ ಮಧ್ಯವರ್ತಿ ಗೂಡ್ಸ್ ಆಟೊ ಏರಿಸಿಕೊಂಡರೆ ಏರಿ, ಗಾರೆ ಕೆಲಸ ಮಾಡಿ ಮತ್ತೆ ಹಳ್ಳಿಗೆ ಮರಳುವವರಾಗಿದ್ದರು. ಕೆಲಸ ಸಿಗದ ದಿನ ಒಂದು ಬನ್ನು ತಿಂದು ಟೀ ಕುಡಿದು ಹ್ಯಾಪುಮೋರೆ ಹಾಕಿಕ್ಕಂಡು ಹಳ್ಳಿಗೆ ವಾಪಸಾಗುತ್ತಿದ್ದರು. ಇಂಥ ಸೀನಣ್ಣನವರು ದಿನವೂ ಮೈಸೂರು ನಗರವ ದರ್ಶನ ಮಾಡಿಕೊಂಡು ಬರುತ್ತಾರೆ. ವಂದಷ್ಟು ಹಸಿಬಿಸಿ ಸುದ್ದಿಗಳನ್ನು ತರುತ್ತಾರೆ. ಅವರ ಕೈನಾಗೆ ಅಂಗೈ ಅಗಲದ್ದೊಂದು ಮೊಬೈಲು ರಾರಾಜಿಸುತ್ತಿರುತ್ತದೆ. ಈ ಇಂಥ ಕೆಲವು ಕಾರಣಗಳಿಗಾಗಿ ಸೀನಣ್ಣನೋರು ಹಳ್ಳಿಯಲ್ಲಿ ಬಹಳ ಗ್ರಾಸ್ತರೇ ಹೌದು.

ಮೊದಲೇ ಬರ ಬೇಸಿಗೆಯ ಕಾಲ, ಭೂತಾಯಿ ಉರಿದು ಉರಿದು ಕೆಂಡವಾಗಿದ್ದಳು. ಕೆಂಡದಂಥ ನೆಲದ ಮೇಲೆ ಮಲಗಿ ಹೋದಿಗೆ ಹೊದ್ದುಕೊಳ್ಳಲಾಗದೆ ಸೊಳ್ಳೆಗಳ ಕಾಟಕ್ಕೆ ಅವುಗಳ ತೆಗೆದೆಸೆಯಲೂ ಆಗದೆ ಇಡೀ ರಾತ್ರಿ ಹೊರಳಾಡಿ ಹೊರಳಾಡಿ ಬೆಳಗಿನ ಜಾವದಾಗೆ ವಂದಷ್ಟು ಕಣ್ಣು ಕೂಡಿದಂತಾಗಿದ್ದ ಜನ ಸಾವಿನ ಸುದ್ದಿ ಕಿವಿಗೆ

ಬೀಳುತ್ತಿದ್ದಂತೆಯೇ ಜೀವ ಬಂದಂತವರಾಗಿ ಪಟಕ್ಕನೆ ಕಣ್ಣು ತೆರಕೊಂಡವರಾಗಿದ್ದರು. ಜಿಬರೆಗಣ್ಣು, ಜೊಲ್ಲಿನ ಗೆರೆಗಳ ಕಟವಾಯಿ, ಬೆವೆತು ಎಣ್ಣೆ ಕುಂತ ಮುಖಗಳನ್ನು ಹೊತ್ತುಕೊಂಡು ತಮ್ಮ ತಮ್ಮ ಹಟ್ಟಿಗಳಿಂದ ಹೊರಬರತೊಡಗಿದ್ದರು.



"ಚಂದಗಂದಾನಾಗೆ ಇದ್ದನಲ್ಲ, ವಾದಸಲ ಬಂದಾಗ, ಇದ್ದಕಿದ್ದಂಗೇ ಏನಾಗೋಯ್ತು ಅವುನ್ನಗೆ" ಏಳಲಾಗದೆ ಜಗುಲಿಗಂಟಿಕೊಂಡೇ ಮನಗಿದ್ದ ರುದ್ರಜ್ಜ ಹಂಗಂಗೇ ಜರುಗಿ, ಮಗ್ಗುಲಾಗಲೆತ್ನಿಸುತ್ತಾ ವತ್ತರಿಸಿ ಬರುತ್ತಿದ್ದ ಗೂರಲು ಕೆಮ್ಮಿನೊಡನೆಯೇ ಕೇಳಿತ್ತು. ರುದ್ರಜ್ಜ ಹೇಳಿದ 'ವಾದಸಲ' ಎಂಬೊಂದು ಪದಕ್ಕೆ ಹೆಚ್ಚು ಕಡಿಮೆ ಅವನು ಹೋದಂದಿನಿಂದ ಇವತ್ತಿನವರೆಗೆ ಎಂದೇ ಅರ್ಥವಿರುವುದು. ಕುಂತಲ್ಲೇ ಕುಂತು ಬಿಟ್ಟು ಶಿವನ ಕರೆಗಾಗಿ ಕಾಯುತ್ತಿದ್ದ ರುದ್ರಜ್ಜನಿಗೆ ಅದು ನೆನ್ನೆಮೊನ್ನಿನ ವಿಷಯದಂತೆಯೇ ಇತ್ತು. ಆ ದಿನದ ನೆನಪು ರುದ್ರಜ್ಜನಲ್ಲಿ ಹಸಿರಾಗಿಯೇ ಕುಂತದೆ. ಹೆಗಲಿಗೊಂದೆ ಬ್ಯಾಗ್ ಏರಿಕೊಂಡು ಹಾದಿಗುಂಟ ಹೋಗುತ್ತಿದ್ದ ಮೃತ್ಯೂನನ್ನು ಅಜ್ಜ ಬಲವಂತವಾಗಿಯೇ ಮಾತಿಗೆ ನಿಲ್ಲಿಸಿಕೊಂಡಿತು. "ಮೃತ್ಯೂ ಅಲ್ಲವೇನ್ಲಾ ಮಗಾ? ಚೆನ್ನಾಗಿದ್ದೀಯಾ? ಚೆನ್ನಾಗೇ ಇದ್ದಿ, ಬುಡು. ಇರ್ದೆ ಏನಂತೆ. ಲಗ್ಣ ಆಯ್ತಲ್ಲವಾ? ಹೆಂಗೋಳೆ ನಿನ್ನ ಹೆಂಡ್ರು? ನಿನ್ ಹೆಡ್ತಿಯಾ ಚೆನ್ನಾಗಿ ಬಾಳಿಸ್ತಾ ಇದ್ದಿಯಾ ಹೆಂಗೆ? ಕಣ್ಣು ಮಿಟುಗಿಸುತ್ತಾ ಕೇಳಿತ್ತು. ಹಿರಿತಲೆಯೆಂದು ಕೈ ಹಿಡಿಸಿಕೊಂಡು ನಿಂತಿದ್ದ ಅವನು ಕೈಕಿತ್ತುಕೊಂಡು ಭರಭರ ಹೊಂಟು ಇಟ್ಟಿದ್ದ ಅದೆಲ್ಲವಾ ಸೆನ್ಸಾರ್ ಮಾಡಿಕೊಂಡಿದ್ದ ಅಜ್ಜ, "ಇಕಾ ತಗಾ ಅಜ್ಜ ತಿನ್ನಂತ ಕೈ ತುಂಬಾ ಹಣ್ಣುಗೋಳಾ ಪೊಟ್ಟಣ ಕೊಟ್ಟಿದ್ದ, ನಾಕು ತುಂಡು ಬೆಡ್ಡ ಕೊಟ್ಟಿದ್ದ ಅಂತೀನಿ" ಸುಖಾಸುಮ್ಮನೆ ಮೃತ್ಯೂನನ್ನು ಮೇಲಕ್ಕೇರಿಸಲು ಕಥೆ ಕಟ್ಟಲು ತೊಡಗಿತ್ತು. "ತ್ಚು ತ್ಚು ತ್ಚು ದೇವ್ರಂಥ ಮನ್ಸಾ, ದೇವ್ರಂಥ ಮನ್‌ಸಾ" ಯಾರು ಕೇಳಲಿ ಬಿಡಲಿ ತನ್ನ ಶ್ರದ್ಧಾಂಜಲಿಯ ದಿವೀನಾಗಿ ಅರ್ಪಿಸಿಯೇ ಬುಟ್ಟು ತನ್ನ ಕೆಲಸ ಮುಗಿತೆಂಬಂತೆ ಗೋಡೆಗಾತು ಕುಂತುಬಿಟ್ಟಿತ್ತು.

"ದಿಟವೇನ್ಲಾ ಸೀನಣ್ಣ' ಶಿವಯ್ಯ ವಿಚಾರಣೆ ಆರಂಭಿಸಿದ್ದ, ದೇವ್ರಾಣೇಗೂ ನಿಜ ಕಣಪ್ಪಾ ಮೃತ್ಯೂ ಸಾಯ್ತನೆ ಅಂದರೆ ನನ್ಗೆ ಬರಾ ಐಬೋಗವೇನು? ಆರಂಭಿಸಿದ್ದ, 'ದೇವ್ರಾಣೇಗೂ ನಿಜ ಕಣಪ್ಪಾ ಬಳಸದೆ ತನ್ನ ಸುದ್ದಿಯ ಪ್ರಾಮಾಣ್ಯ ತನ್ನ ಮೊಬೈಲೇ ಎಂಬಂತೆ ಮೊಬೈಲ ಮುಂದೆ ಒಡ್ಡಿದ್ದ ಸೀನಣ್ಣ, ಜನವೀಗ ಮಾಯಾಪೆಟ್ಟಿಗೆ ನೋಡಲು ಮುಗಿಬೀಳುವಂತೆ ಅವನ ಮೇಲೆ ಬಿದ್ದಿದ್ದರು ಯಾವ ಆಸ್ಪತ್ರೆಯೋ ಏನೋ?! ಆರಡಿ ಉದ್ದದ ಮೃತ್ಯೋನಾ ದೊಡ್ಡ ದೇಹ ಬಿಳಿಯ ಬಟ್ಟೆಯನ್ನು ಸುತ್ತಿಕೊಂಡು ಬಿದ್ದುಕೊಡಿತ್ತು. ಬಿಳಿಯ ಬಟ್ಟೆಯಲ್ಲಿ ಕಾಣುತ್ತಿದ್ದದ್ದು, ಕಪ್ಪುಮೋರೆಯೊಂದೇ? ಅದು ಅವನ ಸಾವನ್ನು ನೆರೆದವರೆದುರು ಅಧಿಕೃತಗೊಳಿಸುವಂತೆ ರಾರಾಜಿಸುತ್ತಿತ್ತು. ಥತ್‌ಥೈರಿ. ಹೆಣದ ಮೂಖಾ ಎಲ್ಲಾದರೂ ರಾರಾಜಿಸೀತಾ? ತಲೆಕೊಡವಿಕೊಂಡ ಗುಂಪು ಸಾವಿನ ಸುದ್ದಿ ಬರೇ ಪ್ರಾಮಾಣ್ಯದ ಮಟ್ಟದಲ್ಲೇ

ನಿಂತುಬಿಟ್ಟ ಕಾರಣವಾಗಿ ಅವನ ಸಾವಿಗೆ ರುದ್ರಜ್ಞನಂತಪ್ಪಾದರೂ ಸುಳ್ಳಿನ ಶ್ರದ್ಧಾಂಜಲಿ ಸಲ್ಲಿಸಲೂ ಸಾಧ್ಯವಿಲ್ಲದವರಾಗಿ ತ್ಚು ತ್ಚು ಪಾಪ ಗಳ ಉದ್ಗಾರಗಳ ಹೊರಡಿಸುತ್ತಾ ಮೃತ್ಯೂವಿಗೆ ಸಂಬಂಧಪಟ್ಟ ಎರಡು ಹೆಣ್ಣುಮಕ್ಕಳಿದ್ದ ಹಟ್ಟಿಯತ್ತ ತಮ್ಮ ಪಾದಗಳನ್ನು ಬೆಳೆಸಿತ್ತು. ಮೃತ್ಯೂ ಸತ್ತ ಸುದ್ದಿ ಖಚಿತವಾಗುತ್ತಿದ್ದಂತೆಯೇ ಹಟ್ಟಿ ಮುಂದಿನ ಸಣ್ಣ ಪುಟ್ಟ ಕೆಲಸಕಾರ್ಯಗಳಲ್ಲಿ ಬೇಕಾಬಿಟ್ಟಿಯಂತೆ ತೊಡಗಿಸಿಕೊಂಡಿದ್ದ ಹೆಣ್ಣ ಮಕ್ಕಳೂ ತಮ್ಮ ಸೆರಗುಗಳಿಗೆ ಕೈ ಒರೆಸಿಕೊಳ್ಳುತ್ತಾ ಗಂಡಸರ ಪಾದಗಳೊಂದಿಗೆ ತಮ್ಮ ಪಾದಗಳನ್ನು ಬೆಳಿಸಿದ್ದರು.



ಸತ್ತ ಮೃತ್ಯೂನಾ ಪೂರಾ ಹೆಸರು ಮೃತ್ಯುಂಜಯ ಸ್ವಾಮಿ ಎಂದು ಎಲ್ಲದರಲ್ಲೂ ತುಂಡ್ಹಾಕುವ ಪ್ರವೃತ್ತಿಯಲ್ಲಿದ್ದ ಹಳ್ಳಿಜನ ಅವನನ್ನು 'ಮೃತ್ಯೂ ಮೃತ್ಯೂ' ಎಂದೇ ಕರೆಯುತ್ತಿದ್ದರು. ಊರಿಗೆ ಅಪ್ಪಂಥವರು ಎನ್ನಿಸಿಕೊಂಡಿದ್ದ ಮಾಲಿಂಗಪ್ಪನೋರ ಕಿರಿಯ ಪುತ್ರನವ, ಅವರ ಹೆಂಡಿರು ಅಕಾಲಿಕವಾಗಿ ಗರ್ಭ ಹೊತ್ತು ಹೊಟ್ಟೆನಾಗಿದ್ದ ಕೂಸಿಗೆ ಏಳು ತಿಂಗಳಿಗೇ ಭಲೂಕವ ತೋರಿಸಿ ಅವನ ಹೆರಿಗೆಯಾಗೇ ಶಿವುನ ಪಾದ ಸೇರಕ್ಕಂಡಿದ್ದರು. ಅವ್ವ ಕಳಕಂಡು ದಿಕ್ಕೆಟ್ಟಿದ್ದ ಈ ಕೂಸು ಮತ್ತದರ ಅಪ್ಪನಿಗೆ ದಿಕ್ಕಾಗಿ ಬಂದವಳು ಪಾರೋತವ್ವ. ಈ ಪಾರೋತವ್ವ ಮಾಲಿಂಗಪ್ನೋರ ಹಿರೇಮಗಳು. ಇದ್ದೊಬ್ಬ ಮಗಳು ಗಂಡನನ್ನು ಕಳಕೊಂಡು ದಿಕ್ಕೆಟ್ಟು ಕುಂತಿದ್ದಳು. ಅವಳನ್ನೇ ತಮ್ಮಟ್ಟಿಗೆ ಕರೆತಂದಿದ್ದರು. ಮಗಳೊಂದಿಗೆ ಮೊಮ್ಮಗಳು ಗೌರಿಯೂ ಬಂದಿತ್ತು. ಅದಾಗ ನಾಕು ತಿಂಗಳ ಕೈಗೂಸಿರಬಹುದು.

ಏಳು ತಿಂಗಳಿಗೇ ಪುಟ್ಟ ಅವ್ವನನ್ನೂ ಕಳಕಂಡು, ಅವ್ವನೊಂದಿಗೇ ತಿಕೇಟು ತೆಗೆದುಕೊಳ್ಳುವ ಆತುರದಾಗಿದ್ದ ಕೂಸಿಗೆ ಕಂಡ ಕಂಡ ದೇವರು ದಿಂಡರಿಗೆಲ್ಲ ಕೈಮುಗಿದು ಶಾಸ್ತ್ರ ಪಾಸ್ತ್ರ ಕೇಳಿ. ಹತ್ತಾರು ಹರಕೆಗಳ ಕಟ್ಟಿಕೊಂಡು 'ಮೃತ್ಯುಂಜಯಸ್ವಾಮಿ' ಎಂದು ಹೆಸರು ಕಟ್ಟಿ ಆ ಕೂಸ ಬದುಕಿಸಿಕೊಂಡವಳು ಅಕ್ಕ ಪಾರೋತಕ್ಕ ಈ ಮೃತ್ಯೂನಾ ದೆಸೆಯಿಂದಾಗಿಯೇ ಗೌರಿ ಅವ್ವನ ದೃಷ್ಟಿಯಿಂದ ಅರುಗಾಗಿಬಿಟ್ಟಿದ್ದಳು. ನ್ಯಾನೆಯಲ್ಲಿ ಮಲಗಿ ಕಿರ್ರೋ ಎಂದು ಅಳುವಾಗಿನಿಂದ ಹಿಡಿದು ಈತನಕ ಗೌರಿ ಪಾರೋತಕ್ಕನಿಗೆ ಕಾಣಿಸಿಕೊಳ್ಳಲೇ ಇಲ್ಲ. ಆ ಹೆಣ್ಣು ಕಣ್ಣೀರು ಸಿಂಬಳಗಳ ಸುರಿಸುತ್ತಾ, ತಲೆಯನ್ನೂ ಕೀಚುವವರಿಲ್ಲದೆ. ಏನು ಎತ್ತ ಎಂದು ವಿಚಾರಿಸುವವರಿಲ್ಲದೆ ಒಂಟಿಯಾಗಿ ಜಗುಲಿಮ್ಯಾಲೆ ಕೂತಿರುತ್ತಿದ್ದು, ಆ ಕೂಸ ಕಡೆ ಮಾಲಿಂಗಪ್ನೋರೇ ಮಗಳ ಗಮನ ಸೆಳೆಯಬೇಕು. “ಆ ಕೂಸ್ ಕಡೇನೂ ವಸಿ ನೋಡವ್ವಾ ಹೆಂಗೆ ಒಣೀಕಂಡದೆ ನೋಡು” .

ಮೃತ್ಯೂ ಉಳಿಕೊಂಡ, ಬೆಳೆದೇ ಬೆಳೆದ, ಪಾರೋತವ್ವನ ಹೆಣ್ಣು ಸೀದುಕೊಂಡು ನಿಂತಿತ್ತು. ಊರವರ ನಗೆಸಾರ ಆರಂಭವಾಗಿತ್ತು. ಒಂದೇ ಹಟ್ಟಿಯಲ್ಲಿದ ಅಕ್ಕ, ಅಕ್ಕನ ಮಗಳು. ಸಂಬಂಧ ಬೆಸೆದೇ ಬಿಟ್ಟಿದ್ದರು. 'ಮೃತ್ಯೂನ

ಹೆಂಡತಿ' ಎಂದು ಜನ ಆ ಕೂಸ ಗೌರಿ ಎಂದು ಕರೆದದ್ದೇ ಕಡಿಮೆ. ಅದ ಕೇಳಿಸಿಕೊಂಡು ಪಾರೋತವ್ವ ಸುಖಿಸುವಳು. ನಗುವಳು, ಆ ಎಣ್ಣು ಏನೂ ಅರ್ಥವಾಗದಿರಲು ತನ್ನ ಬೆಳುಗೊಂಡ ಕಣ್ಣ ಪಿಳಿಪಿಳಿ ಬಿಡುವುದು. ಸಾಯುತ್ತಿದ್ದ ಕೂಸ, ಬೀಳುತ್ತಿದ್ದ ಹಟ್ಟಿಯ ಉಳಿಸಿಕೊಟ್ಟ ಮಗಳಲ್ಲಿ ಮಾಲಿಂಗಪ್ಪನೋರು ವಿಶೇಷ ಖುಣಿಗಳಾಗಿದ್ದರು.

ಮೃತ್ಯೂನಾ ಮೈ ಬೆಳೆದಿದ್ದಷ್ಟೇ ಬುದ್ಧಿ ವಿದ್ಯೆ ಬೆಳೆಯುವುದು ಕಷ್ಟ ಎಂಬುದಾಗಲೇ ಕಾಣಿಸಿಕೊಳ್ಳಲಾರಂಭಿಸಿತ್ತು. ಅವನಿಗಿಂತ ವಯಸ್ಸಿನಲ್ಲಿ ಬಹಳವೇ ಹಿರಿಯರಾಗಿದ್ದ ಅವರ ಇಬ್ಬರು ಅಣ್ಣಂದಿರು ಓದು, ಬರಹವಾ ಕಲಿತು ಎದೆಗೆ ಬಿದ್ದ ಅಕ್ಷರಗಳ ಅರಳಿಸಿಕೊಂಡು ಯಥೋಚಿತ ಸ್ಥಾನಮಾನಗಳಲ್ಲಿ ಪ್ರತಿಷ್ಠಾಪಿತ ರಾಗಿರುವಂತ ಕಾಲದಾಗೆ ಮೃತ್ಯೂ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಮಣ್ಣು ಹೊರುತ್ತಿದ್ದ ಜೊತೆಯಲ್ಲಿ ಗೌರಿಯೂ



ಗೌರಿ ಚೆನ್ನಾಗಿಯೇ ಓದುತ್ತಿದ್ದ ಕೂಸು, ಅವಳಿಗೆ ಪಾಠ ಹೇಳುವ ಮೇಡಂಗಳೇ ಹಟ್ಟಿತನಕ ಬಂದು ಅವಳ ವಿದ್ಯೆಬುದ್ಧಿಯ ಗುಣಗಾನ ಮಾಡಿದ್ದರು. ಪಾರೋತಕ್ಕ ಮಾತ್ರ, “ನಮ್ ಮೃತ್ಯೂ ಹೆಂಗೆ ಓದ್ದನು” ಆಸಕ್ತಿಯಿಂದ ವಿಚಾರಸಿಕೊಳ್ಳುತ್ತಿದ್ದಳು. “ಸ್ವಲ್ಪ ವೀಕು. ಗೌರಿಗೆ ಊಟಗೀಟ ಚೆನ್ನಾಗಿ ಕೊಡಿ” ಮೇಡಂಗಳು ಹೇಳಿಹೋಗಿದ್ದು ಆಕೆಗೆ ಏನೇನೂ ಸರಿಕಂಡಿರನಿಲ್ಲ. ಮೃತ್ಯೂನಾ ಬಿಟ್ಟು ಗೌರಿ ವಿಷ್ಯವನ್ನೆ ಅವರು ಮಾತಾಡುವುದು ಪಾರೋತಕ್ಕನಿಗಾಗದ ವಿಷಯವೇ ಅಷ್ಟು ಪ್ರೀತಿ, ಕಕ್ಕುಲಾತಿ, ಅಭಿಮಾನಗಳು ತಮ್ಮನನ್ನು ಕಂಡರೆ! ಮೃತ್ಯೂವಾದರೂ ಅಷ್ಟೇ! ಯಾರೊಂದಿಗೂ ಬೆರೆಯದವ, ಅಪ್ಪನೆದುರು ನಿಂತು ನಾಕು ಮಾತಾಡದವ! ಅಷ್ಟೋ ಇಷ್ಟೋ ಅವನು ಮಾತನಾಡುವುದು ತನ್ನಕ್ಕನ ಬಳಿಯಲ್ಲಿಯೇ! 'ಮೃತ್ಯೂ ಬದುಕಿದ್ದೇ ಪಾರೋತಕ್ಕನಿಂದ' ಎಂಬ ಮಾತೇ ಎಲ್ಲೆಲ್ಲೂ ಅವನಿಗೆ ಕೇಳಿಬರುವುದು. ಆ ಜನಜನಿತ ಮಾತ ಕೇಳಿಕೊಂಡೂ ಅಕ್ಕನನ್ನು ನೆಗ್ಲೇಟು ಮಾಡಲು ಅವನಿಗೆ ಆಗುವುದಿಲ್ಲ. ಅವನಿರಿವಿನಲ್ಲಿಯೂ ಅವಳ ಹಿರಿತನದ ಅರಿವು ಹಿರಿದಾಗಿಯೇ ಇದೆ. ಊರವರೆಲ್ಲ ಅವನನ್ನು ಕಿಯ, ದೂಣಪ, ಧಾಂಡಿಗ, ಉಂಡಾಡಿಗುಂಡ, ಮೃತ್ಯೂ ಎಂದೆಲ್ಲಾ ತಮ್ಮನನ್ನು 'ಮೃತ್ಯೂ' ಎನ್ನುವಾಗೆಲ್ಲ ಅವಳು ಬೇಜಾರಿಗೂ ಒಳಗಾಗುತ್ತಾಳೆ. ಯಾಕಾದರೂ ತಾನು ಆ ಹೆಸರಿಟ್ಟೆನೆಂದು.

ಎಸ್ಸೆಸ್ಸೆಲ್ಸಿಯಲ್ಲಿ ಮೃತ್ಯೂನಾ ಹೆಂಡತಿ ಪಾಸಾಗಿ, ಮೃತ್ಯೋ ಫೇಲಾಗಿಬಿಟ್ಟಿದ್ದು ಆ ಊರಿನಾಗೆ ದೊಡ್ಡ ಸುದ್ದಿಯಾಗಿಬಿಟ್ಟಿತ್ತು. 'ಮೃತ್ಯೂ ನಿನ್ನೆಂಡ್ತಿ ಪಾಸಂತಲ್ಲೋ. ಮೃತ್ಯೂಗೆ ಕೇಳಿ ಕೇಳಿ ಸಾಕಾಗಿಹೋಗಿತ್ತು. ಸೀದ ಕಡ್ಡಿಯ ಹಾಗಿರುವ ಗೌರಿಯಲ್ಲಿ ಅವನಿಗೆಂದೂ ಆದರದ ನೋಟವೇ ಇಲ್ಲ. ಹಟ್ಟಿಯಲ್ಲಾಗಲೀ ಶಾಲೆಯಲ್ಲಾಗಲಿ “ಇವಳ್ಯಾವಳು ಇವಳು ಯಃಕಶ್ಚಿತ್ ಜೀವಿ' ಎಂದು ಕೊನೆಗಣ್ಣೂ ಬೀರದವ, ಇದೀಗ ಮಾತ್ಸರ್ಯದ ನೋಟವ ಗೌರಿಯತ್ತ ಹರಿಸಿದ್ದ. ಅವನ ನೋವು ಅಕ್ಕನೆದುರು ಕಣ್ಣೀರಾಗಿ ಹರಿದು ನಿಂತಿತ್ತು. ಪಾರೊತಕ್ಕ ಮಗಳ ಓದನ್ನು ಅಲ್ಲಿಗೇ ನಿಲ್ಲಿಸಿಬಿಟ್ಟಳು.

ಯಾರ ಮಾತುಗಳೂ ಅವಳ ಕಿವಿ ತಾಗಲಿಲ್ಲ. ಒಂದೊರುಷ ಊರುಗೀರು ಸುತ್ತುಗಂಡು ಅದು ಹೇಗೋ ಎಸ್ಸೆಸ್ಸೆಲ್ಸಿ ಪಾಸು ಮಾಡಿದ್ದ ಮೃತ್ಯೂ ಪಿಯುಸಿಗೆ ಸೇರಿದಾಗಲೇ ಪಾರೋತಕ್ಕ ಹಗುರಾದದ್ದು. ಪಾರೋತಕ್ಕ ಏನು ಹರಕೆ ಹೊತ್ತರೂ ಅವನಿಗೆ ಪಿಯುಸಿ ದಾಟಲಾಗಲೇ ಇಲ್ಲ.

ಮಾಲಿಂಗಪ್ಪ ಮಗನ ಭವಿಷ್ಯವ ಕಣ್ಣಲ್ಲಿ ಕಂಡವರಾಗಿ ಇಲ್ಲೇ ಇದ್ದು ಹೊಲ, ಗದ್ದೆಗಳನ್ನು ಮಾಡಿಸುತ್ತಾನೆಂದು ನಿರ್ಧರಿಸಿಕೊಂಡಿದ್ದರು. ಕಣ್ಣುಮುಚ್ಚುವ ಮೊದಲು ಮಗನ ಲಗ್ಗವ ಮಾಡಿಬಿಡಲೂ ತೀರ್ಮಾನಿಸಿದ್ದರು. ಮೃತನಾ ಬದುಕು ಉಳಿಸಿಕೊಟ್ಟು, ಅವನಲ್ಲಿ ಅಪಾರ ಪ್ರೀತಿ ಅಭಿಮಾನಗಳ ಹರಿಸುವ ಪಾರೋತಿ, ಅವಳ ಮಗಳು ಗೌರಿಯ ಮುಖಗಳೇ ಅವರ ಕಣ್ಣಮುಂದೆ ಮೂಡಿ ನಿಂತದ್ದು. ಊರೆಲ್ಲ ಆದಿಯಿಂದಲೂ ಗೌರಿಯನ್ನು 'ಮೃತ್ಯೂ ಹೆಂಡತಿ' ಎಂದೇ ಕರೆಯುತ್ತಾ ಬಂದಿದೆ. ಈ ಲಗ್ಗದಿಂದಾಗಿ ಎಲ್ಲರೂ ಪರಸ್ಪರ ಆಸರೆಗಳೊಳಗೆ ಬದುಕು ಮುಂದುವರೆಸಬಹುದು.



ಸಿಟಿ ಸೇರಿಕೊಂಡುಬಿಟ್ಟ ಮೊದಲೆರಡು ಮಕ್ಕಳ ನೆಚ್ಚಿಕೊಳ್ಳುವಂತಿಲ್ಲ. ಮೃತ್ಯೂವಿಗೆ ಪಾರೋತಕ್ಕನಷ್ಟು ಪ್ರೀತಿ ಹಂಚಿದ ಜೀವ ಮತ್ತೊಂದಿಲ್ಲ. ಅವಳು, ಅವಳ ಮಗಳಿಗಾದರೂ ಆಸರೆ ಬೇಕಲ್ಲವೇ ಮಗಳ ಮುಂದೆ ಮಗನ ಲಗ್ಗದ ವಿಚಾರ ಮಾತನಾಡಿದರು. ಪಾರೋತಕ್ಕ ಮೋಡಗಳ ನಡುವೆ ತೇಲಾಡುವಂತಾದಳು. ಜನ ಈಡುಜೋಡಿಲ್ಲದ ಜೊತೆಗಾಗಿ ನಗೆಸಾರ ಮಾಡಿದರು. ಮೃತ್ಯೂವಾದರೋ ಮಾಂಸ ಪರ್ವತ. ಗೌರಿಯಾದರೋ ಸೀದ ಕಡ್ಡಿ! ತಕ್ಕಂಗೂ ಮುಕ್ಕಂಗೂ ಜೋಡಿ ಚೆನ್ನಾಗಿಯೇ ಇದೆಯೆಂದು ಹಿಂದೆ ಮಾತನಾಡಿಕೊಂಡರು. ಜೋಡಿ ಕಟ್ಟಿದವರೂ ಜನವೇ ಆಡಿಕೊಂಡು ನಕ್ಕವರೂ ಜನವೇ, ತೇಲಾಡುತ್ತಿದ್ದ ಪಾರೋತಕ್ಕನನ್ನು ಗೌರಿ ಕೇಳಿಸಿಕೊಂಡು ನಾಲ್ಕು ಮಾತನಾಡಲು ಹತ್ತಾರು ಬಾರಿ ಯತ್ನಿಸಿದ್ದಳು. ಅವ್ವ ಕೆಳಗೆ ಸಿಗದಷ್ಟು ಎತ್ತರದಲ್ಲಿದ್ದಳು.

ಮೃತ್ಯೂವಿನ ನೋಟದ ಅರ್ಥ ಗೌರಿಗೆ ದಿನದಿನವೂ ಆಗುವಂಥದ್ದೆ. ಒಂದು ಜೀವವಿದು ಎಂಬೊಂದು ಸಣ್ಣ ಕರುಣೆ, ಮರುಕಗಳೂ ಅವನಲ್ಲಿ ಕಾಣಲು ಸಾಧ್ಯವಿರಲಿಲ್ಲ. ಗೌರಿ ಮನೆಯಲ್ಲಿದ್ದಾಳೆ ಎಂಬೋದು ಲೆಕ್ಕ ಅವನಲ್ಲಿಲ್ಲ. ಅದೆಂಥ ದಿವ್ಯ ನಿರ್ಲಕ್ಷ್ಯ ಅವನದು. ಎಲ್ಲಕ್ಕೂ ಅಕ್ಕನನ್ನೇ ಕರೆಯುತ್ತಾನಾತಾ! ಎಣೇಲಿ ಸೊಣೇಲಿ ಅವ್ವ ಕೈ ಬಿಡುವಿಲ್ಲದೆ ಕೊಟ್ಟು ಬಂತು ಗೌರಿ' ಎಂದು ಕೊಡುವ ಒಂದು ಲೋಟ ನೀರನ್ನೂ ಅವಾ ಅವಳ ಕೈಯಿಂದ ತೆಗೆದುಕೊಳ್ಳಲಾರ. ಉರಿಗಣ್ಣು ಬಿಟ್ಟು ತಾನೇ ಮತ್ತೊಂದು ಲೋಟದಲ್ಲಿ ನೀರು ತಗೊಂಡು ಕುಡಿದು ಪಟ್ಟೆಂದು ಸದ್ದಾಗುವಂತಿಟ್ಟು ಹೊಂಟು ಬಿಡುತ್ತಾನೆ. ಇದೆಲ್ಲ ಅವ್ವ ಮತ್ತು ತಾತಾನಿಗ್ಯಾಕೆ ಅರ್ಥವಾಗುತ್ತಿಲ್ಲ. ಗೌರಿ ಬಹಳವೇ ನೊಂದುಕೊಳ್ಳುತ್ತಾಳೆ.

"ನಂಗೆ ಈ ಲಗ್ನ  ಬ್ಯಾಡ ಕವ್ವ' ಅರ್ಧರಾತ್ರಿಯಲ್ಲಿ ಪಕ್ಕದಲ್ಲಿ ಮಲಗಿದ್ದ ಅವ್ವನ ಅಲ್ಲಾಡಿಸಿ ಎಚ್ಚರ ಮಾಡಿ ಗೌರಿ ಸಣ್ಣ ಧ್ವನಿಯಲ್ಲಿ ನುಡಿದು ಕುಸುಕುಸು ಅಳತೊಡಗಿದ್ದಳು. ಪಾರೋತಕ್ಕ ಮೊಕದ ತುಂಬಾ ಹೊದಿಕೆ ಎಳದು ಕೈಯಿಂದ ಬಾಯಿ ಮುಚ್ಚಿದ್ದಳು. "ಕರದು ಹೆಣ್ಣು ಕೊಟ್ರೆ ಮೊಲ್ಲಾಗರ' ಅಂದಾಗೆ ಆಯ್ತು. ನಿಂಗೂ ನಂಗೂ ಯಾ ದಿಕ್ಕಿದ್ದಾರತ್ವ ಗೌರಿ. ನಾ ಇರಾ ತಂಕಾ ಸರಿ. ಅಮ್ಯಾಕ್ಕೆ. ನಾ ಸತ್ತೆ ಅಂದ್ರೆ ಮೃತ್ಯೂ ನಿನ್ನ ಅಷ್ಟೆ ಕಡಿದು ಎಲೆ ಹಾಕ್ಕಳ ತಂಕನಾರೂ ಇಲ್ಲಿ ಇರಿಸಿಗಂಡಾನಾ? ನಂಗೂ ಎಲ್ಲ ಗೊತ್ತಾಯ್ತದೆ. ದೇವು ನಮಗೆ ಇಂಥ ಸ್ಥಿತೀಲಿ ಇಟ್ಟೋನೆ. ವಳ್ಳೇದು ಮಾಡ್ತಾನೆ ಸುಮ್ಕಿರು. ತಾಳಿ ಅನ್ನಾದು ಒಂದು ಕುತ್ಗೆಗೆ ಬಿದ್ರೆ ಮೃತ್ಯೂ ಈಗ ನಡಕಳ್ಳ ಹಂಗೆ ನಡ್ಕಂಡಾನಾ, ಎಲ್ಲ ಸರಿಯಾಯ್ತದೆ. ಹುಡುಗು ಬುದ್ದೀಲಿ ಹಂಗಾಡನೆ ಅಷ್ಟೇಯಾ? ಇದ್ಯಾ ಅನ್ನೋರಿಲ್ಲ ಸತ್ತಾ ಅನ್ನೋರಿಲ್ಲ. ಈ ಬದುಕ್ಕೇ ಅಂಟಿಸಿಕೊಂಡು ಕೊನೇಗಂಟಾ ಏಗಬೇಕು. ಕಣವ್ವಾ ಗೌರಿ, ಬೇಕು ಬ್ಯಾಡಾ ಅನ್ನಾ ಅಕ್ಕು ಎಲ್ಲಿದ್ದದು ನಮ್ಗೆ, ಮೃತ್ಯೂನೂ ಒಳ್ಳೆಯೋನೆ. ಒಳ್ಳದಾಯ್ತದೆ ಸುಮ್ಕಿರು."

ಹೊಂದಿಕೆಯೊಳಗಿನ ಗುಸುಗುಸು ಪಿಸಪಿಸದ ಮಾತುಗಳು ಒಂದಕ್ಕೊಂದು ಸಂಬಂಧವಿಲ್ಲದ ಜೋಡಣೆಗಳಂತೆ ಕಿವಿಯನ್ನು ಕೊರೆದಿದ್ದಷ್ಟೆ!



ಇತ್ತ ಮೃತ್ಯೂವಾದರೂ 'ಮೃತ್ಯೂವಿನ ಹೆಂಡ್ತಿ' ಎಂದು ನಗೆಸಾರ ಮಾಡುತ್ತಿದ್ದುದ್ದನ್ನೇ ಸಹಿಸದವ. ಈಗ ಮನೆಯಲ್ಲೆ ಲಗ್ನದ ಮಾತಾಡುತ್ತಿದ್ದಾರೆ ಎಂದಾಗ ಅವನಲ್ಲಿ ಅಸಹ್ಯದ ವಾಕರಿಕೆಯೇ ಮೂಡಿತ್ತು. ಇವಳೇ ತನ್ನ ಹೆಂಡತಿಯಾಗಿ ಬಡುತ್ತಾಳಾ? ಅವನು ಮುಖ ತಿರುಗಿಸಿದ್ದ. ಅಲ್ಲಿ ದೈನೇಸಿ ಮುಖಹೊತ್ತು ಕುಂತ ಪಾರೋತಕ್ಕ ಕಂಡಿದ್ದಳು. ಲಗ್ನದ ಮಾತುಗಳು ಅವಳ ಕಣ್ಣಲ್ಲಿ ದೀಪವಾಗಿದ್ದವು. ಮೃತ್ಯೂ ತಲೆಕೆಟ್ಟವನಂತೆ ಹೊರಬಂದು ಬಿಟ್ಟಿದ್ದ. ಮೃತ್ಯೂವಿನ ಲಗ್ನ ಗೌರಿಯೊಂದಿಗೆ ಆಗಿಯೇ ಹೋಗಿತ್ತು. ಜೋಡಿ ನೋಡಿ ಪಿಸು ಮಾತನಾಡಿ ಮುಸಿಮುಸಿ ನಕ್ಕವರೇ ಹೆಚ್ಚು. ಅಣ್ಣಂದಿರ ಕುಟುಂಬಗಳು ಬಂದು ಬಲವಂತದ ಮಾಘಸ್ನಾನ ಮಾಡಿ ಹೋಗಿದ್ದವು. ಮೃತ್ಯೂನಂಥ ಉಂಡಾಡಿಗುಂಡ ದಿಕ್ಕು ತಪ್ಪಿ ಬಂದ ಅಕ್ಕ ಮತ್ತವಳ ಮಗಳು - ಇವೆಲ್ಲ ಅವರ ಬದುಕುಗಳಲ್ಲಿ ಮಾನ ಮರ್ಯಾದೆಗೆ ಕುತ್ತು ತರುವ ವಿಚಾರಗಳೇ ಹೌದು. ಉಂಡು ಕೈ ತೊಳೆದ ನೀರು ಆರುವ ಮುನ್ನ ಕೆಲಸಗಳ ನೆಪ ಹೇಳಿ ಮರಳಿ ಬಿಟ್ಟಿದ್ದರು. ಮೃತ್ಯೂವಿನ ಹೆಂಡತಿ ಎಂದು ನಗೆಸಾರಕ್ಕೆ ಊರವರು ಆಡುತ್ತಿದ್ದ ಮಾತುಗಳು ನಿಜವಾಗಿ ಮೃತ್ಯೂವಿನ ಹೆಂಡತಿಯಾಗಿದ್ದಳು ಗೌರ

ಲಗ್ನ ಮಾಡಿ ಅಪ್ಪಾ - ಮಗಳು ಮೃತ್ಯುನ ಸಂಸಾರ ಆರಂಭವಾಯಿತೆಂದರು. "ಸ್ವಾಮಿ ಉಣ್ಣು ಬಾಪ್ಪ, ಸ್ವಾಮಿ ತಿನ್ನು ಬಾಪ್ಪಾ ಲೇಟಾಯ್ತು ಮನೀಕಾ ಹೋಗಪ್ಪಾ ಸ್ವಾಮಿ" ನಿತ್ಯವೂ ಮೃತ್ಯುವನ್ನು ಅಪಾರ ಅಕ್ಕರೆಯಿಂದಲೇ ಸಲಹುತ್ತಿದ್ದ ಪಾರೋತಕ್ಕನ ಧ್ವನಿಯಲ್ಲಿಗ ಬೇರೆ ಬಗೆಯ ಸೂಚನೆಗಳೇ ಕಾಣುತ್ತವೆ. ಅವನು ಹೋದ ಮರುಕ್ಷಣವೇ ಗೌರಳತ್ತ ನೋಡುತ್ತಾಳೆ; "ಹೋಗು ಕೂಸು. ಉಳದ ಕೆಲಸ್ ನಾ ಮಾಡಕಂತೀನಿ" ಮಗಳನ್ನು ಕಳುಹಿಸುತ್ತಾಳೆ. ಕೋಣೆಯ ಕದ ಹಾಕಿಕೊಂಡುಬಿಟ್ಟರೆ ಹಜಾರದಲ್ಲಿ ಮೈಚೆಲ್ಲಿ ಮಲಗುವ ಪಾರೋತಕ್ಕನಿಗೆ ಆಕಾಶದಲ್ಲಿನ ಚಿಕ್ಕಿ ಚಂದ್ರಮರು ಮಾತ್ರ ಕಾಣುತ್ತಾರೆ. ಹೊತ್ತಾರೆ ಗೌರಿ ಏಳುತ್ತಿದ್ದಂತೆಯೇ ಮಗಳ ಮೈ ಮೋರೆಗಳ ನೋಡುವುದೇ ಅವಳ ದೊಡ್ಡ ಕಾರ್ಯ. "ಇದ್ಯಾಕವ್ರ ಹುಟ್ಟಾಗಿಂದ ನೋಡೇ ಇಲ್ಲ ಅನ್ನಂಗೇ ನನ್ನ ನೋಡ್ತಯಿ. ಹೋಗತ್ತಗೆ" ಅವ್ವನ ನೋಟವ ಸೈಸಲಾರದೆ ಆ ಹೆಣ್ಣು ಅವ್ವನನ್ನೇ ರೇಗುತ್ತದೆ.

ಅವ್ವನನ್ನಲ್ಲದೆ ಆ ಹೆಣ್ಣು ಇನ್ನಾರನ್ನಾದರೂ ಯಾಕೆ ರೇಗೀತು? ಕಣ್ಣು ಬಿಟ್ಟು ಬುದ್ಧಿ ತಿಳಿದಾಗಿನಿಂದ ಕಂಡದ್ದು, ಅನುಭೋಗಿಸಿದ್ದು ಆಶ್ರಯದ ಬದುಕು. ಪಡೆದುಕೊಂಡ ಆಶ್ರಯಕ್ಕೆ ಋಣ ಸಂದಾಯವೋ ಎಂಬಂತೆ ಅವ್ವ ಆ ಹೆಣ್ಣನ್ನೇ ಕಡೆಗಣಿಸಿ ತಮ್ಮ ಮತ್ತು ಅಪ್ಪನನ್ನು ಜತನವಾಗಿ ಸಲಹುತ್ತಾ ಬಂದಿದ್ದಳು. ಅವರಿದ್ದರೆ ತಾವು ಎಂಬುದವಳ ಮನಃಸ್ಥಿತಿ ಎಷ್ಟೇ ಆದರೂ ಅದು ಅವಳ ತವರು. ಆದರೆ ಈ ಹೆಣ್ಣಿಗೆ ಅಪ್ಪ, ತವರು ಎಂಬುದೆಲ್ಲ ಕನಸಿನ ಮಾತು. ಅವ್ವನೇ ತನ್ನವಳಾಗಲು ಹಿಂಜರಿದು ನಿಲ್ಲುತ್ತಾಳೆ ಎಂದರೆ ಆ ಹೆಣ್ಣಿನ ದುಃಖ ಆಲಿಸುವವರು ಯಾರು? ಅದು ಬರುಬರುತ್ತಾ ಮೌನಿಯಾಗತೊಡಗಿತ್ತು. ಓದು ಬರಹವ ಹಚ್ಚಿಕೊಂಡಿತ್ತು. ಶಾಲೆಯಲ್ಲಾದರೂ ಉಸಿರಾಡಲು ತೊಡಗಿತ್ತು. ತಮ್ಮನ್ನೇ ಕಾರಣವಾಗಿ ಅವ್ವ ಅವಳನ್ನು



ಓದಿನಿಂದ ಬಿಡಿಸಿಬಿಟ್ಟಿದ್ದಳು. ಮೃತ್ಯುವಿನೊಂದಿಗೆ ಲಗ್ನವನ್ನು ಯಾವ ತೆರನಾಗಿಯೂ ನಿಲ್ಲಿಸಲು ಅವಳಿಗೆ ಸಾಧ್ಯವೇ ಇರಲಿಲ್ಲ. "ಪ್ರಪಂಚದ ಯಾವ ಜೀವಿಯನ್ನೂ ಯಾರ ಋಣದಲ್ಲೂ ಇರಿಸಬ್ಯಾಡಪ್ಪ ಶಿವನೇ" ಗೌರಿ ನಿಟ್ಟುಸಿರು ಬಿಡುತ್ತಾ ಕೇಳಿ ಕೊಳ್ಳುವುದೊಂದೇ ದೇವರಲ್ಲಿ, ಮೃತ್ಯುವನ್ನಪ್ಪಿಕೊಂಡಿದ್ದ ಅವ್ವಾ ಅವಳನ್ನು ದೂರ ಮಾಡಿದ್ದಳು. ತಾತಾ ವರ ಮನೆ, ಮಕ್ಕಳುಗಳ, ಉದ್ಧಾರದ ಮಾತಲ್ಲೇ ಇರುತ್ತಿದ್ದದ್ದು. ಊರವರು ಮೃತ್ಯುನಾ ಹೆಂಡತಿ' ಎಂದು ನಗೆಸಾರ ಮಾಡುತ್ತಿದ್ದರು. ಮದುವೆಯಾದಗಲೂ ಗೇಲಿಯ ನೋಟವನ್ನೇ ಹರಿಸಿದ್ದ! ಇಷ್ಟೆಲ್ಲದರ ನಡುವೆಯೂ ಅವಳು ಬದುಕಲೇಬೇಕು. ಅವ್ವ ಹೇಳಿದಂತೆ ಹೋಗಲೆಲ್ಲೂ ಎಡೆಯಿಲ್ಲ. ಅವ್ವ, ಋಣದ ಭಾರವನ್ನು ಸ್ವಲ್ಪ ಹಿಂದೂಡಿ ತನ್ನನ್ನು ಓದಲು ಬಿಟ್ಟಿದ್ದರೆ ಆಗಿತ್ತು. ಹೋಗಲಾರದರೂ ಒಂದು ಎಡೆ ಹುಡುಕಿಕೊಳ್ಳಬಹುದಿತ್ತು. ಆದರೆ ಅದೆಲ್ಲ ಈಗ ಕನಸ ಮಾತು. ಮೊದಲೇ ಮೌನಿಯಾಗಿದ್ದ ಗೌರಿ ಅವ್ವನ ಮಾತುಗಳಿಗೂ ಮೌನಿಯಾಗಿಬಿಟ್ಟಿದ್ದಳು.

'ಮೃತ್ಯೂ ಹೆಂಡ್ತಿ ನೀರ್ ನಿಂತಕಂತಾ' ಅಕ್ಕಪಕ್ಕದ ಹೆಂಗಳೆಯರು ಪಾರೋತಕ್ಕನ ಬಳಿ ಕೇಳಲು ಆರಂಭಿಸಿದ್ದ ದಿನಮಾನಗಳವು ನಿಜವೋ ಸುಳ್ಳೋ! ಮೃತ್ಯೂವಿಗೆ ನಗರದಲ್ಲಿ ಕೆಲಸ ಸಿಕ್ಕ ಸುದ್ದಿ ಹಬ್ಬಿಕೊಂಡಿತ್ತು. ಕಣ್ಣು ಮುಚ್ಚಿ ಬಿಡುವಷ್ಟರಲ್ಲಿ ಮೃತ್ಯೂ ಹೆಗಲಿಗೊಂದು ಬ್ಯಾಗೇರಿಸಿಕೊಂಡು ಯಾರಿಗೂ ಹೇಳದೇ ಕೇಳದೆ. ಏನು? ಎತ್ತ? ಎಲ್ಲಿ? ಎಂಬ ಪ್ರಶ್ನೆಗಳನ್ನು ಉಳಿಸಿ ಕೈ ಬೀಸಿ ನಡೆದು ಬಿಟ್ಟಿದ್ದನ್ನು ಆಗ ಬರುತ್ತಾನೆ. ಈಗ ಬರುತ್ತಾನೆ. ಹಬ್ಬಕ್ಕೆ ಬರುತ್ತಾನೆ. ಜಾತ್ರೆಗೆ ಬರುತ್ತಾನೆ ಒಂದೊಂದಕ್ಕೂ ಕಾದದ್ದೇ ಬಂತು. ಹಟ್ಟಿಯವರ ಮೇಲೆ ಅವನಿಗೆ ಅದಾವ ಬಗೆಯ ಅಸಹನೆ. ಸಿಟ್ಟುಗಳಿತ್ತೋ, ನಿರಾಕರಣೆಯ ಭಾವಗಳಿತ್ತೋ ಹಳ್ಳಿಯತ್ತ ಮುಖ ಮಾಡಲೇ ಇಲ್ಲ. ಕಿಂಗಳುಗಳು ಉರುಳಿದ್ದವು. ಮಾಲಿಂಗಪ್ಪ ಮೌನವಾಗಿ ಹಾಸಿಗೆ ಹಿಡಿದ್ದರು. ಪಾರೋತವ್ವನ ಗೋಳಾಟ ಹೇಳತೀರದಾಗಿತ್ತು. ಮೃತ್ಯೂ ಹಾಗೆ ಹೇಳದೆ ಕೇಳದೆ ಹೋಗುವಲ್ಲಿ ತಮ್ಮ ತಪ್ಪೇನಾದರೂ ಇತ್ತೆ? ಹುಡುಕತೊಡಗಿದ್ದಳು. ಸುತ್ತಿ ಬಳಸಿಯೂ ಅವಳ ಆಲೋಚನೆ, ಮಗಳ ಮೇಲೆಯೇ ಗೂಬೆ ಕೂರಿಸತೊಡಗಿತ್ತು.

ಮೃತ್ಯೂ ಹಟ್ಟಿ ಬಿಟ್ಟು ಹೋದಾಗಿನಿಂದ ಗೌರಿ ಜೀವ ಬಂದವಳಂತೆ ಬದುಕತೊಡಗಿದ್ದಳು. ತಾತ, ಅವ್ವರ ಬೇಕು ಬೇಡಗಳನ್ನು ತಾನೇ ವಹಿಸಿಕೊಂಡು ನೋಡಿಕೊಳ್ಳತೊಡಗಿದ್ದಳು. ಅವರಿಬ್ಬರೂ ಕಂಗೆಟ್ಟು ಕೂತಗಾ ಇಡೀ ಹಟ್ಟಿಯ ಜವಾಬ್ದಾರಿಯನ್ನು ಅವಳು ತನ್ನ ಹೆಗಲಿಗೇರಿಸಿಕೊಂಡಿದ್ದಳು. ಅಪ್ಪಾ, ಮಗಳು ಗೌರಿಯ ಕಡೆ ಬುಟ್ಟಗಣ್ಣು ಬುಟ್ಟ ಹಾಗೆ ನೋಡಿದ್ದರು. ವಳ ಕಣ್ಣುಗಳು ತಮ್ಮ ಭಾವ ಬಿಟ್ಟುಕೊಟ್ಟಿರಲಿಲ್ಲ. ಮುಖದ ದಿವ್ಯಮೌನ ಅರ್ಥವನ್ನು ಬಿಟ್ಟುಕೊಟ್ಟಿರಲಿಲ್ಲ.

ವರುಷಗಳು ಉರುಳಿದ್ದವು. ಮಾಲಿಂಗಪ್ಪ ವಯೋಸಹಜ ಮರಣವಪ್ಪಿದರು. ದೊಡ್ಡ ಮಾವಂದಿರು ಬಂದರು ಮೃತ್ಯೂವಿನ ಸುಳಿವೇ ಇಲ್ಲ. ಸಾಂಗವಾಗಿ 'ಒಪ್ಪ ನಡೆದಿತ್ತು. ಹಿಂದಿನಿಂದಲೇ ಆಸ್ತಿ ಹಂಚಿಕೆಯೂ ನಡೆದುಹೋಗಿತ್ತು. ಅಣ್ಣಂದಿರಿಗೆ, ಅಪ್ಪನ ಸಾವಿಗೂ ಬಾರದ ಮೃತ್ಯೂ ಸತ್ತದ್ದು ಒಂದು ಲೆಕ್ಕವೇ! ಆ ಮಾತು ಕೇಳಿ



ಪಾರೋತಕ್ಕ ಕಂಗಾಲಾಗಿದ್ದಳು. ಮೃತ್ಯೂ ವನ್ನು ವಹಿಸಿ ಮಾತನಾಡಲು ಬೇಕಾದ ಒಂದೇ ಒಂದು ಸಂಗತಿಯಾಗಲಿ. ಅವರೆದುರು ಮಾತನಾಡುವ ಧೈರ್ಯವಾಗಲಿ ಈಗ ಅವಳಲ್ಲಿ ಇರಲಿಲ್ಲ. ಎಲ್ಲವನ್ನೂ ಹಂಚಿಯಾದ ಮೇಲೆ ಅದೊಂದು ಬಗೆಯ ಧರ್ಮಾರ್ಥವೋ ಎಂಬಂತೆ, ಅವರಿಗೆ ಬೇಕಿಲ್ಲವಾದ ಕಾರಣವೂ ಸೇರಿಕೊಂಡಂತೆ ಅವರಿದ್ದ ಮನೆ, ಎರಡು ಹಸು, ಎರಡೆಕರೆ ಹೊಲವನ್ನು ಅವ್ವ, ಮಗಳಿಗೆಂದು ಬಿಟ್ಟು ತಮ್ಮ ಊರುಗಳಿಗೆ ಮರಳಿದ್ದರು. ಮತ್ತೆ ಆರು ತಿಂಗಳಲ್ಲಿ ತಮ್ಮ ಪಾಲಿನ ಆಸ್ತಿಯನ್ನು ಮಾರಿ. ಈ ಅವ್ವ ಮಗಳ ಸಂಬಂಧವನ್ನು ಹರಿದುಕೊಂಡುಬಿಟ್ಟಿದ್ದರು.

ಅಲ್ಲಿಂದಾಚೆಗೆ ಮೃತ್ಯೂ ವನ್ನು ಕುರಿತಾದಂತೆ ಯಾವ ಸುದ್ದಿಗಳೂ ಅವ್ವ, ಮಗಳಿಗೆ ಸಿಕ್ಕಿರಲಿಲ್ಲ. ನಗರಕ್ಕೆ ಹೋಗಿಬರುತ್ತಿದ್ದ ಅವರಿವರು. "ಅಲ್ಲಿ ಕಂಡಂಗಾಯ್ತು ಇಲ್ಲಿ ನೋಡಿದಂಗಾಯ್ತು" ಎಂಬ ಕಾಲ್ಪನಿಕವಾದ ಸುದ್ದಿಗಳನ್ನೇ ತರುತ್ತಿದ್ದದ್ದು. ಅವೆಲ್ಲ ಬಾಯತೀಟೆಗಾಗಿ ಎಂಬುದು ಅವರಿಗೆ ಗೊತ್ತು. ಕಾದು ಸುಸ್ತಾಗಿ ಕಲ್ಲಿನಂತಾಗಿದ್ದ ಪಾರೋತವ್ವ ತಮ್ಮನ ಮೇಲಿನ ಆಸೆಯನ್ನೇ ಬಿಟ್ಟುಕೊಟ್ಟಂತೆ ಇದ್ದು ಬಿಟ್ಟಿದ್ದಳು. ತಮ್ಮನಿಗಾಗಿ ತಾನು ಪಟ್ಟ ಪಡಿಪಾಟಲುಗಳ ಒಮ್ಮೊಮ್ಮೆ ನೆನೆಯುವಳು ಈಗೀಗ ಅದನ್ನೂ ಬಿಟ್ಟುಕೊಟ್ಟಂತೆ ಇರತೊಡಗಿದ್ದಳು. ನಾಲ್ಕು ಅಕ್ಷರ ಬಲ್ಲ ಗೌರಿಗೆ ಮೃತ್ಯೂವನ್ನು ಹುಡುಕಿಸುವ ದಾರಿ ಗೊತ್ತಿತ್ತು. ಬೇಡವೆಂದು, ಒಂದೂ ಮಾತಿಲ್ಲದೆ ಸಂಬಂಧ ಹರಿದುಕೊಂಡು ಹೋದವನಿಗಾಗಿ ಹುಡುಕಾಟವಾದರೂ ಯಾಕೆಂಬ ಪ್ರಶ್ನೆಗೆ ಉತ್ತರ ಸಿಗದೆ ಘನವಾಗಿ ತನ್ನ ಬದುಕು ಸಾಗಿಸುವುದರಲ್ಲಿ ಮಗ್ನಳಾಗಿಬಿಟ್ಟಿದ್ದಳು.

ಗೌರಿಗೀಗ ದುಡಿತವೇ ಚೈತನ್ಯ, ಪಾಲಿಗೆ ಬಂದಿದ್ದ ಎರಡು ಹಸುಗಳೀಗ ಹತ್ತಾಗಿದ್ದವು. ಎರಡೆಕರೆ ಹೊಲದಲ್ಲಿ ಬರೇ ಹುಲ್ಲನ್ನು ಮಾತ್ರ ಬೆಳೆಯುತ್ತಾಳವಳು. ಹೈನುಗಾರಿಕೆ ಅವಳ ಕೈ ಹಿಡಿದಿದೆ. ಡೈರಿಯಲ್ಲಿ ಅತಿ ಹೆಚ್ಚಿನ ಲೀಟರ್ ಹಾಲು ಬೀಳುವುದು ಗೌರಿ ಹಟ್ಟಿಯಿಂದಲೇ, ಹೈನುಗಾರಿಕೆ ಸಂಬಂಧಿಸಿದಂತೆ ನಾಲ್ಕಾರು ಪುಸ್ತಕಗಳು ಅವಳ ಹಟ್ಟಿಯಲ್ಲಿ ಬಂದು ಕೂತಿವೆ. ಮೀಸೆಮಿಂಡಾಳುಗಳು ಇಲ್ಲದಾಗಲೂ ಹಟ್ಟಿ ಅಚ್ಚುಕಟ್ಟಾಗಿಯೇ ನಡೆಯುತ್ತಿರುವುದು ಕಂಡು ಪಾರೋತವ್ವ ದಂಗಾಗಿದ್ದಾಳೆ. ಆದರೂ ಮೃತ್ಯೂ, ಮೃತ್ಯೂವಿನ ಹೆಂಡತಿಯಾಗಿ ತನ್ನ ಮಗಳು... ಪ್ರಶ್ನೆಗಳೂ ಹಾಗೇ ಉಳಿದುಕೊಂಡಿವೆ. ಮಗಳಿಗೆ ಕಾಣದಂತೆ ಅವಳು ಕಣ್ಣೀರು ಮಿಡಿಯುವುದು ನಿರಂತರವಾಗಿಯೇ ಇದೆ. ಯಾಕಾಗಿ ಮೃತ್ಯೂ ಹೀಗೆ ಕಣ್ಮರೆಯಾಗಿ ಹೋಗಿಬಿಟ್ಟನೆಂಬ ನೋವು ಅವಳನ್ನು ನಿತ್ಯವೂ ಕಾಡುವಂಥದ್ದೆ.

ಹೀಗಿದ್ದ ದಿನಮಾನಗಳಲ್ಲಿಯೇ ಗಾರೆ ಸೀನಣ್ಣ ಬಸ್ ಸ್ಟಾಂಡಿನಾಗೆ ಮೃತ್ಯೂವನ್ನು ನೋಡಿದ ಸಂಗತಿಯನ್ನು ತಂದಿದ್ದು, ಅದೂ ಅವನ ನಾಲಿಗೆಯ ತೀಟೆಯೇ ಇರಬಹುದೇ? ದಿಟ್ಟಿಸಿ ನೋಡಿದ್ದಳು ಪಾರೋತವ್ವ "ನನ್ನ ಕಣ್ ಆಣೆಗೂ ದಿಟ ಕಣವ್ವಾ, ಅವನೇ ಹೋಟ್ಲಿಗೆ ಕರ್ಕಂಡೋಗಿ ಉಣ್ಣಿಸಿದ್ನಾ. ಕುಡಿಸಿದ್ನಾ? ಎಲ್ಲಿ ಮನೆ ಮಾಡಿದ್ದೀಯಣ್ಣೋ ಅಂದ ತಕ್ಷಣ ಆಟೊ ಹಿಡ್ಕಂಡು ಕಂಡ್ರೂ ಕಾಣಲಿಲ್ಲ. ಅನ್ನಂಗೆ ಹೊಂಟುಬಿಟ್ಟ" ಪಾರೋತವ್ವ ಇರಬಹುದೆಂದು ನಂಬಿದಳು. ಬದುಕಿನಾಗೆ ನಂಬಿಕೆ ಬಹಳ ದೊಡ್ಡದಲ್ಲವೆ?

ಅಲ್ಲಿಂದಾಚೆಗೆ ಗಾರೆಸೀನಣ್ಣ ಪಾರೋತಕ್ಕನಿಗೆ ಮೃತ್ಯೂವಿನ ಸುದ್ದಿಯ ತರುವ ವಕ್ತಾರನಾಗಿಬಿಟ್ಟಿದ್ದ ಅವನಿಂದಲೇ ಮೃತ್ಯೂ ಕುರಿತಾದ ವಿಷಯಗಳು ತಿಳಿಯತೊಡಗಿದ್ದವು. ಅದರಲ್ಲಿ ಬಹಳ ಮುಖ್ಯವಾದ್ದು ಮೃತ್ಯೂ ಇನ್ನೊಂದು ಹೆಂಗಸನ್ನು ಇಟ್ಟುಕೊಂಡು ಬದುಕು ಸಾಗಿಸುತ್ತಿದ್ದಾನೆಂಬುದು. ಪಾರೋತವ ಸಿಡಿದು ಬಿದ್ದಿದ್ದಳು. "ನಾ ಸಾಕಿದ್ ಮಗಾ ಮೃತ್ಯೂ, ನಿನ್ನ ನಾಲ್ಗೆ ಏನ್ ಎಕ್ಕಡವಾ ಸೀನ. ಮೃತ್ಯೂ ಬಗೆ ಇಂಥ ಮಾತಾ ಆಡಾದು" ರಾಂಗಾಗಿ ಸೀರೆ ವದರಿಕೊಂಡು ಎದ್ದುಬಿಟ್ಟಿದ್ದಳು. "ಅವ್ವಾ ನಂಗೆ ಕಂಡ ಸತ್ಯವಾ ಹೇಳೀವ್ನಿ. ನಂಬಿದ್ರ ನಂಬವ್ವಾ ಬುಟ್ರೆ ಬುಡವ್ವಾ" ಆತನೂ ಕೋಪಗೊಂಡು ಎದ್ದು ಹೋಗಿದ್ದ. ಪಾರೋತಕ್ಕನ ತಲೆ ಕುಲಗೆಟ್ಟು ಹೋಗಿತ್ತು. ಅವನೂ ಗಂಡಸೇ ಅಲ್ಲವಾ? ಹೆಂಗಸು ಬೇಕಲ್ಲ. ಇನ್ನೊಂದು ಲಗ್ಣವಾದರೂ ಮಾಡಿಕಂಡಿದ್ದರೆ ಚೆನ್ನಾಗಿತ್ತ. ಇಟ್ಟುಕೊಂಡವನಂತೆ ಅವನಿಗೇನು ಬಂದಿತ್ತು ದೊಡ್ಡರೋಗ, ತಮ್ಮ ವಂಶದಲ್ಲಿ ಯಾರೂ ಇವನಂಗೆ ಇರಲಿಲ್ಲ. ಇವನ ಅವತಾರ ನೋಡಲು ಸದ್ಯ ಅಪ್ಪನಿಲ್ಲವಲ್ಲ. ಅವನ ಅಣ್ಣಂದಿರು ಅವನ ಮೂಸಿ ನೋಡದೆ ತಮ್ಮ ಪಾಡಿಗೆ ತಾವಿರುವುದು ಸರಿಯಾದ್ದೇ ಇಂಥ ದರಿದ್ರದೋನ ಜೆತೆ ಅಪ್ಪಂಥೋರು ಸಂಬಂಧ ಉಳಿಸಿಕೊಳ್ಳಾಕೆ ಆದಾತಾ? ಮೃತ್ಯೂವಿನ ಬಗ್ಗೆ ಕೋಪಗೊಂಡಿದ್ದಳು. ಮನಸು ಮಗಳತ್ತ ತಿರುಗಿತ್ತು. 'ಪಾಪಿ ನನ್ಮಗ, ಅನ್ಯಾಯಕಾರ, ನನ್ನ ಮಗಳ ಹಾಳ್ ಮಾಡಿಬುಟ್ಟ, ನಾನೂ ಪಾಪಿಯೇ ಅನ್ಯಾಯಕಾರನಿಗಾಗಿ ನನ್ನ ಮಗಳ ಬುಟ್ಟುಕೊಟ್ಟೆ ಪಾರೋತವ್ವನ ಮನ ವಿಲವಿಲ ಒದ್ದಾಡಿಕೊಂಡಿತ್ತು. ಲಗ್ಣವಾದ ವರ್ಷದೊಳಗೇ ಗಂಡನನ್ನು ಕಳಕೊಂಡಿದ್ದಳು. ತನಗೆ ಗಂಡಸು ಬೇಕೆನ್ನಿಸಲಿಲ್ಲ. ಲಗ್ಣವಾದ ಮೂರು ತಿಂಗಳಿಗೇ ಮೃತ್ಯೂ ಮಗಳನ್ನು ಬಿಟ್ಟು ಹೋಗಿಬಿಟ್ಟದ್ದ. ಅವಳಿಗೂ ಗಂಡಸು ಬೇಕೆನ್ನಿಸಲಿಲ್ಲ. ಇವನಿಗೆ ಮಾತ್ರ ಹೆಂಗಸು ಬೇಕಿತ್ತಲ್ಲವಾ? ಮನ ಎತ್ತೆತ್ತಲೋ ಓಡುತ್ತಿತ್ತು. ತನ್ನ ಮಗಳು ಮತ್ತು ಅವನ ನಡುವೆ ಅದೆಂಥ ಸಂಗತಿ ನಡೆದಿರಬಹುದು. ಮೃತ್ಯೂ ಕಣ್ಮರೆಯಾಗಿಬಿಟ್ಟಿದ್ದಾನೆ. ಸೀನ ಹೇಳುವುದು ಎಷ್ಟು ದಿಟವೋ ಸಟೆಯೋ ಮನಸ್ಸಿಗೆ ಗೊಂದಲವಿದೆ. ಮಗಳ ಬಳಿಯಲ್ಲಿ ಏನಾದರೂ ಕೇಳಲು ಸಾಧ್ಯವಾ? ತಾನವಳ ವಿಷ್ಯದಲ್ಲಿ ಅಪರಾಧಿಯಾಗಿ ಬಿಟ್ಟು ಹೋಗಿ ಕೇಳುವ ಧೈರ್ಯವೆಲ್ಲಿದೆ?.

ಈಗ ನೋಡಬೇಕು ಮಗಳು ದೊರೆಸಾನಿಯಂತೆ ಬದುಕು ಸಾಗಿಸುತ್ತಿದ್ದಾಳೆ. ಮಗಳನ್ನ ಕಂಡರೀಗ ಪಾರೋತವ್ವನಿಗೆ ಎಲ್ಲಿಲ್ಲದ ಕಕ್ಕುಲಾತಿ. ಹಿಂದೆ ಕೊಡದ ಆದರ ಪರೀತಿಗಳನ್ನೆಲ್ಲ ಬಡ್ಡಿ ಸಹಿತ ಕೊಡುವಂತೆ ಮಗಳೆಡೆಗೆ ಅವಳ ಮನಸು ಹರಿಯುತ್ತಿದೆ. ಗಾರೆಸೀನಣ್ಣನ ಮಾತು ಕೇಳಿ ಊರವರು ಮೃತ್ಯೂನ ಮಾತಾಡಲು ಅವಳ ಜಗುಲಿಗೆ ಬರುವುದಿದೆ. ಪಾರೋತವ್ವನಿಗೆ ಅದರ ಬಗೆಗೆ ಆಸಕ್ತಿಯಿಲ್ಲ. "ಬುಟ್ಟು ಹೋದೋನ ಬಗೆಗೆ ಎಂಥ ಮಾತು ತಗಳಪ್ಪಾ. ಆಡಾಕೆ ಬೇಕಾದಂಗದೆ ಬೇರೆ ಮಾತುಗೋಳು" ನಿಸೂರಾಗಿ ತುಂಡಿರಿಸಿಬಿಡುತ್ತಾಳೆ.

ಈ ನಡುವೆ ಗಾರೆಸೀನಣ್ಣ ಮೃತ್ಯೂವಿಗೆ ದೊಡ್ಡದೊಂದು ಮಾರಣಾಂತಿಕವಾದ ಅಪಘಾತವಾಗಿದ್ದ ಸುದ್ದಿಯನ್ನು ತಂದು ಪಾರೋತವ್ವನ ಮುಂದೆ ಸುರಿದಿದ್ದ.

ಪಾರೋತವ್ವ ಮೌನವಾಗಿಬಿಟ್ಟಿದ್ದಳು. ಈ ಎಲ್ಲ ವಿಷಯಗಳೂ ಗೌರಿಗೆ ಗೊತ್ತಿರುವಂಥದೇ. ಅವಳೆಂದೂ ಅವ್ವ ಮತ್ತು ಮೃತ್ಯೂವಿನ ನಡುವಿನ ಪ್ರೀತಿಗೆ ಮಧ್ಯೆ ಬಂದವಳಲ್ಲ. ನಿಜವೋ ಸುಳ್ಳೋ ಸೀನಣ್ಣನ ಮೂಲಕ ಮೃತ್ಯೂವಿನದೊಂದು ಲೋಕ ಅವ್ವನೆದುರು ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ ತೆರೆದುಕೊಳ್ಳುತ್ತಿದೆ. ಅವ್ವ ಮಾತುಗಳಲ್ಲಿಯಾದರೂ ಅವನನ್ನು ಅನುಭವಕ್ಕೆ ತಂದುಕೊಳ್ಳುವ ಸುಖಕ್ಕೆ ತಾನು ಯಾಕಾದರೂ ಅಡ್ಡಿಯಾಗಬೇಕು? ಗೌರಿ ಮೃತ್ಯೂವಿನ ಯಾವ ವಿಷಯವೂ ತನಗೆ ಗೊತ್ತಿಲ್ಲವೆಂಬಂತೆಯೇ ಸುಮ್ಮನಿದ್ದು ಬಿಟ್ಟಿದಳು. ಗೌರಿ 'ಹೋದಯವ್ವಾ ನಿನ್ನ ತಮ್ಮನ್ ನೋಡಾಕೆ.... ಯವಸ್ಥೆ ಮಾಡ್ತಾ...” ಸಣ್ಣಗಿನ ಧ್ವನಿಯಲ್ಲಿ ನಿರ್ವಿಕಾರ ಭಾವದೊಡನೆ ಕೇಳಿದ್ದಳು. ಪಾರೋತವ್ವ ಮಾಲು ಸಮೇತ ಸಿಕ್ಕ ಕಳ್ಳನಂಗೆ ಗಾಬರಿಗೊಂಡಿದ್ದಳು. ಅಗಳಿಗಾಗಲೆ ಎಲ್ಲ ವಿಷಯವು ತಿಳಿದದೆ. “ಯಾಕಾ ಗೌರ ಇಂಥ ಮಾತ ಕೇಳಯಿ ನನ್ನ ಅಂಥಾ ಅಡೀನಾ ನಾನು ಯಾವತ್ತು ಅವ್ರು ಹೇಳೆ ಕೇಳೆ ಸಂಬಂಧ ಹರ್ಕಂಡು ಹೋದ್ರೆ ಅವೊತ್ತೆ ನಮ್ಮ ಸಂಬಂಧಕ್ಕೆ ಎಳ್ಳು ನೀರು ಬುಟ್ಟ್ಬಿಟ್ಟಿದ್ದಿ ಕವ್ವ, ಸೀನ ಯಾರದ್ದೋ ಒಂದು ಯಿಷ್ಯ ಹೇಳ್ತಾ ಅವೆ ಅಂತ ಮಾತ್ರ ಕೇಳಿಸ್ಕಂಡಿ ಅಷ್ಟೆ. ದಿಟವಾಗೂ ನನ್ನ  ನಾತ್ನಿಗಿರಾದು ಅಷ್ಟೆಯಾ. ಎದೆಯಾಗೆ ಇರಾದೂ ಅಷ್ಟೆಯಾ ಶಿವುನ ಪ್ರಮಾಣವಾಗೂ”  ಗೌರಿ ಮುಂದೆ ಮಾತನಾಡ ಹೋಗಿರಲಿಲ್ಲ.

ಎಲ್ಲ, ಎಲ್ಲವನ್ನೂ ಮರತಂತೆ ಬದುಕುತ್ತಿದ್ದ ಆ ಹಟ್ಟಿಯ ಮುಂದೆ ಬೆಳ್ಳಂಬೆಳಗ್ಗೆಯೇ ಉರಿಯುತ್ತಿದ್ದ ಸೂರ್ಯನ ಮುಂದಿಟ್ಟುಕೊಂಡವರಂತೆ ಒಂದಷ್ಟು ಊರ ಮಂದಿ ಪ್ರಪಂಚದ ಬಹಳ ದೊಡ್ಡ ಸುದ್ದಿಯನ್ನು ಅರುಹುತ್ತಿರುವ ಉತ್ಸಾಹದಲ್ಲಿ ಬಾಯಿಬಿಟ್ಟು ನಿಂತಿತ್ತು. ಪಾರೋತಪ್ಪ ಜಗುಲಿ ಮೇಲೆ ಕುಸಿದು ಕುಂತಿದ್ದಳು. ಎಷ್ಟಾದರೂ ಕಳ್ಳುಬಳ್ಳಿಯ ಸಂಬಂಧ. ಸುತ್ತ ಕುಂತ ಜನ ಮೃತ್ಯೂವಿನ ಸಾವ ಬಗೆಗೆ ಹತ್ತಾರು ಬಗೆಯ ಮಾತುಗಳ ಆಡತೊಡಗಿದ್ದರು. ಮೃತ್ಯೂವಿನ ಭೂತ, ವರ್ತಮಾನಗಳೂ ಅಲ್ಲಿ ಬಿಚ್ಚಿ ಹರಿಡಿಕೊಳ್ಳುಲಾರಂಭಿಸಿದವು. 'ಸತ್ತವನ ಕಣ್ಣು ಬಟ್ಟಲಗಣ್ಣು' ಎನ್ನುವರಂತೆ. ಅಂಥಂಥ ಅಂಥಂಥ ಮಾತುಗಳೇ ಅವರಾಡುತ್ತಿದ್ದದ್ದು. ಪಾರೋತವನಿಗೆ ಯಾಕೋ ಅವೆಲ್ಲ ಪಡವೋಶೀತನದ, ತಿರುಬೋಕಿತಲೆಯ ಹರಟೆಗಳಂತೆ ಕೇಳಿಸಹತ್ತಿದ್ದವು. ಗೌರಿ ಅದೇ ತಾನೇ ಸ್ನಾನ ಮುಗಿಸಿ ಹೊರ ಬಂದಿದ್ದಳು. “ಅಯ್ಯೋ ಗಂಡನ್ನ ತಿಂದುಕೊಂಡು ಬುಟ್ಕಾ ನನ್ನವ್ವ”  ಅಜ್ಜಿಯೊಂದು ಅವಳ ಮೊಖವಾ ತನ್ನ ಒರಟಾದ ಕೈಗಳಿಂದ ಜೋರಾಗಿಯೇ ತಿಕ್ಕಿ ನುಡಿದಿತ್ತು. ಪೆಚ್ಚಾದ ಗೌರಿ ಅವ್ವನತ್ತ ನೋಡಿದರೆ ಅವಳು ಕಣ್ಣೀರು ತುಂಬಿ ಕಾಣದಂತಿದ್ದ ಕಣ್ಣುಗಳಿಂದ ಮಗಳತ್ತ ಭಾವವಿಲ್ಲದ ನೋಟ ಬೀರುತ್ತಾ ಕುಂತಿದ್ದಾಳೆ. ಅವ್ವನ ಕುಂದಿದ ಶಕ್ತಿ ನೋಡಿ, “ಅವ್ವಾ ವಂದಷ್ಟು ಹಾಲ್ ಕಾಯಿಸಿಕೊಡಲಾರೆ? ಗೌರಿ ಕೇಳಿದ ಪ್ರಶ್ನೆ ಊರವರಿಗೆ ವಿಚಿತ್ತಾಗಿ ಕೇಳಿತ್ತು. “ಇದೇನಾ ಇದು ಗೌರಿ ನಿನ್ಗಂಡ ಮೃತ್ಯೂ ಸತ್ತೋದ್ನಂತೆ ಅಂತ ಸುದ್ದಿ ಕೊಟ್ಟಿರೋವಾಗ ಅವ್ವಂಗೆ ಆಲ್ ಕೊಡಲಾ ಅಂತ ಕೇಳ್ತಾ ಇದ್ದಯಿ. ಯೆಷ್ಟೇ ಆದ್ರೂ ಅಂವ ನಿನ್ಗಂಡನಲ್ಲವಾ?” ಅಜ್ಜಿ ಭೋಬೇಸರದಿಂದ ನುಡಿದಿತ್ತು. ಗೌರಿ ಎದ್ದು ಹೋದವಳು ಹಾಲು ಕಾಯಿಕಿಕೊಂಡೇ ತಂದಿದ್ದಳು.

ದೊಡ್ಡದೊಂದು ಬೋಸಿ, ಹತ್ತಾರು ಲೋಟಗಳು, "ಹತ್ರ ಇದ್ದೋರು, ಹತ್ರವಾಗಿದ್ದೋರು ಸತ್ತು ಅಂದ್ರೆ ದುಕ್ಕವಾಯ್ತದೆ. ಏನೂ ಅಲ್ಲೆ ಇರೋರು ಸತ್ರೆ ದುಕ್ಕ ಎಲ್ಲಿಂದ ಬಂದಾತು. ತಗಳ್ಳಿ ಹಾಲ್ ಕುಡ್ಕಂಡು ಹಟ್ಟಿಗ್ಹೋಗಿ."

ಗೌರಿಯ ಮಾತುಗಳಿಗೆ ಗುಂಪು ದಂಗಾಗಿ ನಿಂತು ಬಿಟ್ಟಿತ್ತು. ಮರುಮಾತು ಹೂಡಲು ಅವರೆಲ್ಲರಿಗೂ ಬಾಯಿ ಬಂದಿರಲಿಲ್ಲ.

ಸೂರ್ಯ ಧಗಧಗನೆ ಉರಿವಾಗ, ಗೌರಿ ಕೊಟ್ಟ ಹದೆಯಾಡುವ ಹಾಲು ಕುಡಿವುದು ಅಲ್ಲಿದ್ದ ಜನಕ್ಕೆ ಕಷ್ಟವೇ ಅನ್ನಿಸಿತ್ತು. ಒಳಗೂ ಧಗೆ, ಹೊರಗೂ ಧಗೆ, ಅರ್ಥವಾದ ಧಗೆ, ಅರ್ಥವಾಗದ ಧಗೆ ಬೆವರುತ್ತಾ, ಇನ್ನೇನೋ ಹಾಲ ಕುಡಿದು ಮುಗಿಸಿ ಮೇಲೆದ್ದೋ ಎನ್ನುವಾಗ ಹಟ್ಟಿಯ ಮುಂದೆ ದೂಳೆಬ್ಬಿಸಿಕೊಂಡು ಕಾರೊಂದು ಬಂದು ನಿಂತಿತ್ತು. ಬಂದ ಮೂರು ಜನ ಮೃತ್ಯೂನ ಗೆಳೆಯರಂತೆ ಅವರು ಅವನ ಸಾವಿನ ಸುದ್ದಿಗೆ ಅಧಿಕೃತ ಮುದ್ರೆ ಒತ್ತಿದ್ದರು. ಅವರ ಬಳಿ ಇನ್ನೂ ಒಂದಷ್ಟು ವಿವರಗಳಿದ್ದವು. ಮೃತ್ಯೂ ನೆನ್ನೆಯೇ ಹೃದಯಾಘಾತದಿಂದ ಸತ್ತನಂತೆ. ಈ ಮೂರು ಜನರ ಬಿಟ್ಟರೆ ಯಾರೂ ಅವನನ್ನು ನೋಡಲು ಬರಲಿಲ್ಲವಂತೆ. ಅಣ್ಣಂದಿರು ತಮಗೂ ಅವನಿಗೂ ಸಂಬಂಧವೇ ಇಲ್ಲವೆಂದು ಕೈಯಾಡಿಸಿಬಿಟ್ಟು ಕಳುಹಿಸಿಬಿಟ್ಟರಂತೆ. ಇಟ್ಟುಕೊಂಡಿದ್ದ ಹೆಂಗಸು. "ನಾ ಯಾವ ಜವಾಬ್ದಾರಿ ತಗಲ್ನಲ್ಲಣ್ಣ ಹೇಳಿ ಕೇಳಿ ಒಂಟಿ ಹೆಂಗ್ಸು ನಾನು, ಅವರ ಮನೆಯೋರು ನನ್ನ ಸುಮ್ನೆ ಬುಟ್ಟಾರಾ" ಎಂದು ಹೆದರಿಕೊಂಡು ಅತ್ತಳಂತೆ "ಮೃತ್ಯೂನಾ ಅಕ್ಕಾ ಹೆಂಡತಿ ಇರುವಾಗ ತಾವು ಯಾಕೆ ಅಬ್ಬೇಪಾರಿಯಂತೆ ಹೆಣ ಎತ್ತಬೇಕು. "ಹೆಂಗಾದರೂ ಆಗಲಿ, ಸುದ್ದಿ ಕೊಟ್ಟು ಬಿಡೋಣವೆಂದು ಬಂದೆವು" ಬಂದವರು ದೇವರು, ಧರ್ಮ, ಕರ್ಮ, ಸಂಪ್ರದಾಯ ಆಚಾರ, ವಿಚಾರ ಎಂಬಿತ್ಯಾದಿ ದೊಡ್ಡ ದೊಡ್ಡ ಪದಗಳ ತಮ್ಮ ಮಾತುಗಳೊಳಗೆ ಬೇಕಾಬಿಟ್ಟಿ ತೂರಿಸುತ್ತಾ ನುಡಿಯುತ್ತಲೇ ಹೋಗಿದ್ದರು. ಅವರ ಮಾತುಗಳ ಅರ್ಥ ಏನೆಂದು ಎಲ್ಲರಿಗೂ ಚೆನ್ನಾಗಿಯೇ ಗೊತ್ತಾಗಿತ್ತು ಬಹಳ ಹೊತ್ತು ಅಲ್ಲಿ ಮೌನವೇ ತಾಂಡವವಾಡಿತ್ತು.

"ಮೃತ್ಯೂ ಅನ್ನೋನ ಅಕ್ಕ, ಹೆಂಡತಿ ಇದ್ರೂ ಕಪ್ಪಾ, ಈಗಿಲ್ಲ. ನೀವುಗೊಳ ಅವನ್ಗೆ ಏನ್ ಗತಿ ಕಾಣಿಸಬೇಕೋ ಕಾಣಿಸಿಬುಡಿ. ಸಿಟಿಯಿಂದ ಇಲ್ಲಿಗ್ ಬರಾತೊಂದ್ರೆ ಯಾಕ್ ತಗಂಡ್ರಿ ಅಂತೀನಿ" ಪಾರೋತಕ್ಕ ಖಡಾಖಂಡಿತದ ಧ್ವನಿಯಲ್ಲಿ ನುಡಿದು ಹಟ್ಟಿ ವಳಕ್ಕೆ ನಡೆದಿದ್ದಳು. ಜನರ ಗುಂಪು ಒಳಕ್ಕೂ ಚಿತ್ತೈಸಿತ್ತು. ಇದೇನಾ ಇದು ಪಾರೋತವ್ವ ಮಕ್ಕಳಂಗೆ ಈ ಐಲಾಟ. ಸತ್ತೋಯ್ತು ಇದ್ದ ಕೂಸ ಬದುಕಿಸಿಕೊಂಡೋಳು ನೀನು. ಅಂವ ಸತ್ತಾಗ ವಪ್ಪ ಮಾಡಲ್ಲ ಅಂತೀಯಲ್ಲ. ಧರ್ಮವಾ ಇದು. ಅವ್ನೇನೋ ನೀಸ್‌ಕಂಡಾ, ತಪ್ಪು ಮಾಡಿರಬೋದು. ಹಂಗಂತ ಹೆಣಾನಾ ಕಾಡ್ ಹೆಣಾ ಮಾಡಾಕಾದಾತಾ? ಹಂಗಂದು ಅನ್ಯಾಯಕಾತಿ ಅದೀಯಾ?" ಊರೋರ ಮಾತುಗಳ ಒಟ್ಟರ್ಥ ಇದಾಗಿತ್ತು.

“ಅನ್ಯಾಯಕಾತಿ ಅದೀನೋ ಬುಟ್ವೆನೋ ಕಾಣಿ. ಅಷ್ಟರ ಮ್ಯಾಲೆ ಇಚ್ಛೆ ಇರಾರು ತಾವೇ ಮುಂದೆ ನಿಂತು. 'ವಪ್ಪ ಮಾಡ್ಕಳ್ಳಲಿ. ನನ್ನಟ್ಟಿ ಮುಂದೆ ಹೆಣ ತರಾದು ಬ್ಯಾಡಿ”



ಪಾರೋತವ್ವ ಚಂಡಿ ಹಿಡಿದವಳಂತೆ ನುಡದು, ಎದುರಿನವರು ನುಡಿಯಲು ತಾವಿಲ್ಲದಂತೆ ಕ್ವಾಣೆ ಸೇರಿ ಕದವಿಕ್ಕಿಕೊಂಡಿದ್ದಳು. ಇದೊಳ್ಳೆ ಚೆಂದವಾಯಿತಲ್ಲ. ಗೌರಿ ಹಿಂಗೆಲ್ಲ ಆಡಿದ್ದರೆ ಅದಕ್ಕೊಂದು ಲೆಕ್ಕವಿರುತ್ತಿತ್ತು. ಮೃತ್ಯುವಿಗೆ ಅವ್ವನಂತಿದ್ದು ಅವ್ವನೇ ಆಗಿದ್ದ ಪಾರೋತವ್ವನೇ ಹಿಂಗೆ ಹಟವಿಡಿದರೆ ಗತಿಯೇನು?

ಮತ್ತೆ ಮೃತ್ಯುವಿನ 'ವಪ್ಪ'ದ ವಿಚಾರ ಎಲ್ಲರ ಬಾಯಿಗಳಲ್ಲಿ ಚರ್ಚೆಯಾಗತೊಡಗಿತ್ತು. ಪಾರೋತವ್ವನಿಗೆ ಬುದ್ಧಿ ಹೇಳಲು ಯಾರ ಬಾಯಿಗಳೂ ಏಳದಾದವು. ಗೌರಿಯಂತೂ ಅದಾಗಲೇ ಸುಡುವ ಹಾಲು ಕುಡಿಸಿ ಗಂಗೆಯಂತೆ ತಂಪಾಗಿ ಕುಳಿತಿದ್ದಾಳೆ. ಇಬ್ಬರ ವಿಷಯದಲ್ಲೂ ಮೃತ್ಯು ಮಾಡಿದ್ದ ತಪ್ಪು ಅಂತಿಂಥದ್ದಲ್ಲ. ಹಾಗೆಂದು ಮೃತ್ಯುವಿನ ಹೆಣವನ್ನು ಕಾಡು ಹೆಣದಂತೆ ಹಾಗೇ ಬಿಡಲಾದೀತೆ? ಎಷ್ಟೇ ಆದರೂ ಅವನು ಊರ ಮಗನಲ್ಲವೇ? ಹಟ್ಟಿಗೆ ಇಷ್ಟು ರೂಪಾಯಿ ಅಂತ ಚಂದಾ ಎತ್ತಿಯಾದರೂ ಅವನ ವಪ್ಪವ ಮಾಡಿ ಮುಗಿಸಲೇಬೇಕು.

ಗೌರಿ ಅವರಂದುಕೊಂಡಂತೆ ಅಲ್ಲೇ ತಣ್ಣಗೆ ಕುಂತಿದ್ದಳು. ಅವಳ ಒಳಗೆ ಆರಿಸಲಾರದ ದಾವಾನಲವೊಂದು ಭಗಭಗ ಉರಿಯುತ್ತಿತ್ತು. ಇಂಥದ್ದೊಂದು ಅಂತ್ಯದ ಕ್ಷಣ ಬದುಕಲ್ಲಿ ಯಾಕಾದರೂ ಎದುರಾಗಬೇಕಿತ್ತು? ಈ ಬಗೆಯಲ್ಲಿ ಆತ ನೆನಪಾಗಬಹುದೆಂದು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲವಲ್ಲ. ಮೃತ್ಯುವೇನೂ ಸುಂದರನಲ್ಲ. ವಿದ್ಯಾವಂತನಲ್ಲ. ಬುದ್ಧಿವಂತನಲ್ಲ. ದುಡಿದವನಲ್ಲ, ಸಂಪಾದಿಸಿದವನೂ ಲ್ಲ, ಅದು ಯಾಕೆ ತನ್ನನ್ನ ಆ ಬಗೆಯಲ್ಲಿ ನಿಕೃಷ್ಟವಾಗಿ ನೋಡಿ ಕೈಬೀಸಿ ನಡೆದು ಬಿಟ್ಟಿದ್ದನು. ಒಂದೇ ಹಟ್ಟಿಯಲ್ಲಿದ್ದರೂ ಹತ್ತಾರು ವರ್ಷಗಳು ಜತೆಯಲ್ಲಿ ಕಳೆದಿದ್ದರೂ ಒಂದು ನೋಟ ಸೇರಿಸಲಿಲ್ಲ. ಇದೊಂದು ಜೀವಿ ಎಂದು ಎರಡು ಮಾತನಾಡಿಸಲಿಲ್ಲ. ಬಲವಂತವೆನ್ನಿಸಿಕೊಂಡ ಲಗ್ನಗಳು ಸುತ್ತಮುತ್ತ ಎಷ್ಟಿರಲಿಲ್ಲ. ವಾರ ಒಪ್ಪತ್ತು ಕಳೆಯುವಲ್ಲಿ ಒಪ್ಪಿತವಾಗಿ ಸಲೀಸಾಗಿ ಅವರ ಸಂಸಾರಗಳು ನಡೆದೇ ನಡೆದವಲ್ಲ. ಹಾಗೆ ನೋಡಿದರೆ ತನಗೂ ಅದು ಬಲವಂತದ ಲಗ್ನವೇ? ಆದರೂ ಒಪ್ಪಿದ್ದು, ಬಾಳಬೇಕೆಂದು ಅದೆಂಥ ಹೊಂದಾಣಿಕೆ. ಪ್ರಾಣವನ್ನು ಒತ್ತೆ ಇಟ್ಟು ಮಾಡಿಕೊಂಡಂಥ ಹೊಂದಾಣಿಕೆ.

ಅವ್ವ ನೂರು ದೀಪಗಳ ಕಣ್ಣಲ್ಲಿ ಉರಿಸುತ್ತಾ ಎಲ್ಲವೂ ಸರಿಯೇ ಆಗಿಬಿಡುತ್ತದೆಂದು ನಂಬಿಕೊಂಡಿದ್ದಳು. ಒಳಗೆ ನಡೆದದ್ದು ಕಾರ್ಕೋಟಕ ವಿಷದ ನಮನ ಅವನ ನಾಲಿಗೆಯಲ್ಲಿ ಅದು ಹೇಗೆ ಅಷ್ಟು ನಂಜು ತುಂಬಿತ್ತು. ಅಷ್ಟು ನಂಜು ತುಂಬಿಕೊಂಡವರು ಬದುಕುಲುಂಟೇ? ಇಡೀ ದೇಹವು ಇಂಚು ಇಂಚಾಗಿ ಅವನ ಮಾತುಗಳ ನಂಜು ಆವರಿಸಿ

ನುಂಗಿಕೊಂಡಂಥ ನೆನಪುಗಳು ಬತ್ತಲೆಯಾಗಿಸದೆಯೂ ಬತ್ತಲೆಯಾದ ಅಖಂಡ ನೋವು ಯಾರೇನು ರೂಪ ವಿಭ್ರಮಗಳನ್ನು ಬ್ರಹ್ಮನಲ್ಲಿ ಕೋರಿ ತುಂಬಿಕೊಂಡು ತರುತ್ತಾರೆಯೇ? ಹಾಗಾದರೆ ರೂಪ ಎಂದರೇನು? ಅವನಿಗಿದ್ದ ರೂಪವಾದರೂ ಏನು? ಗಂಟುಗಂಟುಗಳಿದ್ದ ಕಪ್ಪು ಮೈ ಮಾಂಸಪರ್ವತವೇ ಎನ್ನುವಂತಿದ್ದ ಅಕರಾಳ ವಿಕರಾಳ ಶರೀರ, ವಲ್ಲೆ ಎನ್ನುವಂಥ ಐಬು ತನ್ನಲ್ಲಾದರೂ ಏನಿತ್ತು. ಇಡೀ ರಾತ್ರಿ ಅವನ ಸಣ್ಣಧ್ವನಿಯ ಮಾತುಗಳು. ಮನದ



ಮೇಲೆ ಭಯಂಕರ ಪರಿಣಾಮ ಬೀರುತ್ತಿದ್ದ ಮಾತುಗಳು ಎದ್ದು ಅವನ ತಲೆಯ ಭಯಂಕರ ಪರಿಣಾಮ ಬೀರುತ್ತಿದ್ದ ಮಾತುಗಳು. ಎದ್ದು ಅವಮನ ತಲೆಯಮ ಮೇಲೆ ಗುಂಡುಕಲ್ಲು ಹಾಕಿಬಿಡಬೇಕೆನ್ನಿಸುತ್ತಿತ್ತು. ಹೊರಬಂದು ಅವ್ವನನ್ನು ಸೀಳಿ ಬಿಡಬೇಕೆನ್ನಿಸುತ್ತಿತ್ತು. ಆದರೂ ತಾಳಿದಳು. ಬಾಳಿದಳು ಆದರೂ ಪ್ರಯೋಜನವಿಲ್ಲ. ಸದ್ಯ ಮೃತ್ಯೂವಿನ ನಿರ್ಗಮನದಲ್ಲಿ ಅವಳ ಬದುಕು ಹುಟ್ಟಿಕೊಂಡಿತ್ತು. ಉಳಿದುಕೊಂಡಿತ್ತು.

ಮೂರು ತಿಂಗಳುಗಳ ರಾತ್ರಿಯ ಮಾತುಗಳು ನಿಂತಿದ್ದವು. ಅವನ ನಿರ್ಗಮನದಲ್ಲಿ ನೆಮ್ಮದಿಕಂಡಳು ಗೌರಿ. ಮೃತ್ಯವಿಗಾಗಿ ಅವಳೆಂದೂ ಒಂದು ಹನಿ ಕಣ್ಣನೀರು ಉದುರಿಸಲಿಲ್ಲ. ಮುಗಿದೇ ಹೋದ ಸಂಬಂಧವೆಂದುಕೊಂಡರೆ ಮೃತ್ಯೂವೀಗ ಹೆಣವಾಗಿಯೂ ಕಾಡಲು ಬಂದನೇ? ಅವನ 'ವಪ್ಪ'ವೂ ಒಂದು ಚರ್ಚಿತ ವಿಷಯವೇ? ಆ ಚರ್ಚೆ ತಮ್ಮೆದುರೇ ನಡೆಯಬೇಕೆ?

“ಚಂದಾ ಎತ್ತುತ್ತಾರಂತೆ” ಆ ಎರಡು ವಾಕ್ಯಗಳು ಕಿವಿಗೆ ಬೀಳುತ್ತಿದ್ದಂತೆಯೇ ವಿಕ್ಷಿಪ್ತತೆಯಲ್ಲಿ ಮುಳುಗಿದ್ದ ಗೌರಿ ಬೆಚ್ಚಿ ಬಿದ್ದಿದ್ದಳು. “ಇನ್ನೇನು ಮಾಡಾದವ್ವ ಗೌರಿ, ಅವನ ಹೆಣಾನಾ ಅನಾಥ ಮಾಡಕ್ಕಾದಾತಾ? ಊರ ಹಿರಿಯರು ಸಮಜಾಯಿಷಿ ಕೊಟ್ಟಿದ್ದರು. ಅದು ಅವನಲ್ಲ, ಅದು ಅವನ ಹೆಣ. ಅದು ಮೃತ್ಯೂವಲ್ಲ. ಮೃತ್ಯೂವಿನ ಹೆಣ. ಹೆಣಕ್ಕೆ ನಾಲಿಗೆ, ನಂಜುಗಳ ನೆಂಟಸ್ತಿಕೆ ಎಲ್ಲಿಂದ ಬರಬೇಕು. ದಿಟ ಆ ಹೆಣ ಕಾಡು ಹೆಣವಾಗಬಾರದು. ಆ ಹೆಣ ಅನಾಥವಾಗಬಾರದು. ಗೌರಿಯ ತಲೆಯಲ್ಲಿ ಬೆಳಕು ಹೊತ್ತಿಕೊಂಡಿತ್ತು. ಅದರೊಡನೆ ತನಗೂ ತನ್ನವ್ವನಿಗೂ ಸಂಬಂಧವಿತ್ತೆಂದು ಎಲ್ಲರೂ ಅನ್ನುತ್ತಿದ್ದಾರೆ. ಆ ಸಂಬಂಧಕ್ಕೊಂದು ಗೌರವ ಬದುಕಿರುವ ತಾವಾದರೂ ಕೂಡಲೇ ಬೇಕಲ್ಲವೇ?

ಗೌರಿ ಎದ್ದು ಹೊರಬಂದಿದ್ದಳು. ಕಾರಲ್ಲಿ ಬಂದಿದ್ದ ಮೂವರೂ ಜಗಲಿ ಮೇಲೆ ಜಾತಕ ಪಕ್ಷಿಗಳಂತೆ ಕಾಯುತ್ತಿದ್ದರು. ಗೌರಿ ಅವರ ಕೈಗೆ ವಂದಷ್ಟು ಹಣ ತುರುಕಿದ್ದಳು. “ಹೆಣ ತರಾಕೆ ವ್ಯವಸ್ಥೆ ಮಾಡಿ ಅದೇ ತಾನೇ

ಕೋಣೆಯ ಕದ ತೆರೆದು ಹೊರಬರುತ್ತಿದ್ದ ಪಾರೋತವ್ವ ಆ ಮಾತುಗಳ ಕೇಳುತ್ತಿದ್ದಂತೆ 'ಗೌರಾ' ಎಂದು ಮಗಳನ್ನಪ್ಪಿ ಭೋರಾಡಿ ಅಳತೊಡಗಿದ್ದಳು.

## ನಾಡ ದೇವಿಯೂ ಕಾಡಿನ ಮಗನೂ

**– ಸವಿತಾ ಶ್ರೀನಿವಾಸ**

ಅವರಿಬ್ಬರು ತಲೆಯ ಮೇಲೆ ಕಟ್ಟಿಗೆಯ ಹೊರೆ ಹೊತ್ತುಕೊಂಡು ಬೆಟ್ಟದ ತಪ್ಪಲಿನಲ್ಲಿದ್ದ ತಮ್ಮ ಪುಟ್ಟ ಮರದ ಮನೆಯತ್ತ ಸಾಗುವಾಗ ಮುಸ್ಸಂಜೆಯ ಗೋಧೂಳಿಯ ಸಮಯವಾಗಿತ್ತು. ಒಂದೆರಡು ನಾಯಿಗಳು ತೆಪ್ಪಗೆ ಮಲಗಿದ್ದುದು ಪರಿಚಿತರನ್ನು ಕಾಣುತ್ತಲೇ ಉತ್ಸಾಹ ತುಂಬಿದಂತೆ ಬಾಲವನ್ನಾಡಿಸುತ್ತಾ ಅವರ ಹಿಂದೆ ಮುಂದೆ ಓಡಾಡಿದವು.

ಕಟ್ಟಿಗೆಯನ್ನು ಆ ಪುಟ್ಟ ಮನೆಗೆ ಅಂಟಿಕೊಂಡಂತಿದ್ದ ಕೊಟ್ಟಿಗೆಯಲ್ಲಿ ಹಾಕಿ ಇವರು ಮನೆ ಸೇರಿಕೊಂಡರೆಂದರೆ ಹೊರ ಬರುತ್ತಿದ್ದುದು ಬೆಳಗಿನ ಸೂರ್ಯ ತನ್ನ ಪೂರ್ಣ ರೂಪ ಧರಿಸಿ ಕಿರಣಗಳಿಂದ ಕದ ತಟ್ಟಿದಾಗಲೇ, ಮತ್ತೆ ಎಂದಿನ ಯಾಂತ್ರಿಕ ದಿನಚರಿಯಂತೆ ಆಕಾಶದೆಡೆ ದೃಷ್ಟಿಸಿ ಮೋಡಗಳ ತುಣುಕಿನ ಸುಳಿವು ಸಿಗುವುದೇನೋ ಎಂಬ ಆಸೆಯಿಂದ ಕಣ್ಣರಳಿಸಿ ನೋಡುವುದಾಯ್ತು.

ಕೆಳಗಿನ ನೆಲ ನೀರಿಗಾಗಿ ಬಾಯ್ದೆರೆದುವುದನ್ನು ಕಣ್ಣಾರೆ ಕಂಡೂ ಅಸಹಾಯಕತೆಯಿಂದ ಮರುಗಿ ಮುಖದ ಮೇಲೆ ಸೂರ್ಯನ ಶಾಖ ಮೂಡಿಸಿದ ಬೆವರ ಹನಿಯನ್ನು ಒರೆಸಿಕೊಳ್ಳುತ್ತಾ ಹೆಂಗಸು ತನ್ನೊಡನೆ ಇದ್ದಾತನನ್ನು ಊಟಕ್ಕೆ ಕರೆದಿದ್ದಳು.

ಅವಳು ಆತನ ಜೊತೆಗಾರ್ತಿಯೆಂಬುದು ಅವರಿಬ್ಬರ ಸಾಂಗತ್ಯದಿಂದ ಮನವರಿಕೆಯಾದರೂ ವಯಸ್ಸಿನ ಅರಿವು, ಆಯಾಸ ಅವರಿಬ್ಬರಿಗಾದಂತೆ ಕಾಣಲಿಲ್ಲ. ಅವರ ಮುಖದ ಮೇಲಿನ ಸುಕ್ಕುಗಳು ಕಾಲ ಮಾಗಿದಂತೆ ಆಳಕ್ಕೆ ಇಳಿದು ವಯಸ್ಸಿನ ಸುಳಿವು ನೀಡಿದಾಗಲೂ ಎಳೆಯರ ಗೈರು ಹಾಜರಿಯಲ್ಲಿ ಹೋಲಿಸಿ ನೋಡುವ ಪ್ರಮೇಯವೇ ಮೂಡಿರಲಿಲ್ಲ. ಹೀಗಾಗಿ ವರ್ಷಗಳು ಸರಿದಂತೆ ಒಬ್ಬರಿನೊಬ್ಬರ ಸಾನಿಧ್ಯದಲ್ಲಿ ಬಿಟ್ಟಿರಲಾಗದ ಅನುಬಂಧ ಏರ್ಪಟ್ಟು ಆ ಪುಟ್ಟ ಮನೆಯ ಚಿಪ್ಪಿನೊಳಗೆ ಬಿಮ್ಮನೆ ಜೀವನ ಸಾಗಿಸುತ್ತಿದ್ದರು.

ಒಂದೆಡೆ ಗೋಡೆಯ ಮೇಲೆ ದಿನಗಳು ಕಳೆದಂತೆ ಒಂದೊಂದು ಗೆರೆಯನ್ನೆಳೆಯುವುದು ನಿತ್ಯದ ಕ್ರಿಯೆಯಾಗಿತ್ತು. ಆ ಗೋಡೆ ಪೂರ್ತಿ ಈ ಕಿರುಗೆರೆಗಳೇ ತುಂಬಿಕೊಂಡಾಗ ಮೈಲಾರಪ್ಪ ಮತ್ತು ಕುವೇರಮ್ಮ ತಾವು ಈ ತಾಣಕ್ಕೆ ಬಂದು ಇಷ್ಟೊಂದು ಸಮಯವಾಯ್ತು ಎಂದು ಅಚ್ಚರಿಯಿಂದ ಕಣ್ಣರಳಿಸಿ ನೋಡಿದರು.

ಮೈಲಾರಪ್ಪ ತನ್ನ ಸಂಗಾತಿಯೆಡೆ ನೋಡುತ್ತಾ ಏನೋ ನೆನಪಾದಂತೆ ಒಣ ಹುಲ್ಲು ಕಡ್ಡಿಯೊಂದನ್ನು ತಂದು ನೆರೆದಿದ್ದ ಆಕೆಯ ಕೂದಲು ಬಳಿ ಹಿಡಿದು ಕಿಸಕ್ಕನೆ ನಕ್ಕ. ಆಕೆ



ಆ ಕಡ್ಡಿ ಕಿತ್ತುಕೊಂಡು ಮುಖ ಊದಿಸಿ ಗೋಡೆಗೆ ಆತುಕೊಂಡಳು. ಆದರೆ ಇದ್ದಕ್ಕಿದ್ದಂತೆ ಯಾವುದೋ ಕಾಲದಲ್ಲಿ ಜರುಗಿದ ಘಟನೆಯೊಂದು ಮೆದುಳಿಗೆ ಬಡಿದಂತೆ ಆಕೆಯ ಮುಖ ವಿವರ್ಣವಾಗಿತ್ತು. ಅಚಾನಕ ಅವಳಲ್ಲಾದ ಪರಿವರ್ತನೆಗೆ ಮೈಲಾರಪ್ಪ ಗಾಬರಿಯಾದರೂ ಕ್ರಮೇಣ ಅವಳ ದುಃಖದಲ್ಲಿ ಭಾಗಿಯಾದಂತೆ ಅವನು ಪೆಚ್ಚು ಮೋರೆ ಹಾಕಿಕೊಂಡು ನೆಲದ ಮೇಲೆ ಕುಕ್ಕರಬಡಿದ.

ಅವಳು ಕಣ್ಣೀರು ಹಾಕುವುದು ಅಪರೂಪವಾದರೂ ಹೀಗೆ ಎಂದಾದರೊಂದು ದಿನ ಆಗಿ ಹೋದ ಘಟನೆ ನೆನಪಿಗೆ ಬರುತ್ತಿರುವಂತೆಯೇ ಅವಳ ದುಃಖ ಶಮನವಾಗಲು ಕೆಲದಿನಗಳಾದರೂ ಬೇಕಾಗುತ್ತಿತ್ತು.

“ಮುನೇಲಾ. ಮುನೇಲಾ...”ಎಂದು ಕನವರಿಸುತ್ತಾ ರಾತ್ರಿ ಕಳೆದಾಗ ಮೈಲಾರಪ್ಪ ಅವಳನ್ನು ಸಂತೈಸುವ ಪರಿ ತಿಳಿಯದೆ ತಾನೂ ಕಣ್ಣೀರ್ಗರೆದ. ಅವರ ಕಣ್ಣ ಕೆಂಪನ್ನೇ ಮುಳುಗುವ ಸೂರ್ಯನೂ ಪ್ರತಿಬಿಂಬಿಸಿದ್ದ.

ಮುನೇಲಾ ಬೇರಾರೂ ಆಗಿರದೆ ಚಿಕ್ಕಂದಿನಲ್ಲೇ ಕಳೆದು ಹೋದ ಅವರ ಸ್ವಂತ ಮಗನಾಗಿದ್ದ. ಅವನೆಲ್ಲಿರುವನು, ಹೇಗಿರುವನು ಎಂಬ ಆತಂಕ ಆಗಿನಿಂದ ಅವರನ್ನು ತಿನ್ನತೊಡಗಿ ಅವನನ್ನು ಹುಡುಕುತ್ತಾ ಅಲೆಮಾರಿಗಳಂತೆ ಕಾಡು ಮೇಡು ದಾಟಿ ಇನ್ನು ಮುಂದೆ ಸಾಗಲಾರೆ ಎಂದು ಕಾಲುಗಳು ನಿತ್ರಾಣಗೊಂಡ ತಾಣದಲ್ಲೇ ನಿವಾಸವೊಂದು ಜನ್ಮ ತಾಳಿತ್ತು. ಆ ಪ್ರದೇಶವೆಲ್ಲಾ ಅವರ ಕೈಚಳಕದಿಂದ ಕಳೆಗಟ್ಟಿ ಮರಗಿಡಗಳು ಹಣ್ಣು ಬಿಡಲಾರಂಭಿಸಿದ್ದವು. ತಮಗೆ ಮುಂದೆ ಮಗುವನ್ನು ಪಡೆಯುವ ಭಾಗ್ಯವಿಲ್ಲವಾದರೂ ಮರಗಳು ಬಿಡುವ ಹಣ್ಣನ್ನೇ ಆಸೆಯಿಂದ ಕಣ್ಣುಂಬಿಸಿಕೊಂಡು ಸಾಧ್ಯವಾದಷ್ಟು ಹೊಟ್ಟೆ ಹೊರೆದುಕೊಂಡಿದ್ದರು.

ಅಂದು ತಮ್ಮ ಮುಂದಿನ ಪೀಳಿಗೆಯ ಅಂತ್ಯದಲ್ಲಿ ತಮ್ಮ ಆಸ್ತಿತ್ವವನ್ನು ಮರೆಯಬೇಕಾಗಬಹುದೆಂಬ ಕಟು ವಾಸ್ತವ ಅವರಿಬ್ಬರ ಎದೆ ಹಿಂಡಿತ್ತು. ಬಂದ ದಾರಿಗೆ ಸುಂಕವಿಲ್ಲದಂತೆ ತಾವು ಎಲ್ಲಿಂದ ಬಂದೆವೋ ಅಲ್ಲಿಗೇ ಹಿಂದಿರುಗಿ ಊರ ಜನರ ಮಧ್ಯೆ ಜೀವನ ಸಾಗಿಸಬಹುದೆಂದು ಅನೇಕ ಬಾರಿ ಯೋಚಿಸಿದ್ದಿದೆ ಆದರೆ ಮಗನನ್ನು ಕಳೆದುಕೊಂಡ ಬಳಿಕ ಊರ ಜನ ಇವರನ್ನು ಹೊಲಸು ಮಾತುಗಳಿಂದ ಹಿಂಡಿ ಹಿಪ್ಪೆ ಮಾಡಿದ್ದನ್ನು ಮರೆಯುವುದೆಂತು.

ಹೊರಗೆ ಬಾನೂ ಇವರೊಂದಿಗೆ ಕಣ್ಣೀರ್ಗರೆಯತೊಡಗಿತ್ತು. ಭೂಮಿಯನ್ನು ಸೀಳಿ ಬಿಡುವಂತೆ ಮಿಂಚು ಗುಡುಗು ಮೊಳಗಿದ್ದವು. ಆಕಾಶದಲ್ಲಿ ತೂತು ಬಿದ್ದಂತೆ ಧಾರಾಕಾರವಾಗಿ ಸೂರಿನಿಂದ ನೀರು ಸೋರಿದಂತೆ ಮಳೆ

ಸರಿಯುತ್ತಿತ್ತು. ಅನೇಕ ತಿಂಗಳುಗಳೇ ಕಳೆದಿದ್ದುವೇನೋ ಇಂಥಹ ಭಾರಿ ಮಳೆ ಕಂಡು. ಆದರೆ ಈ ಮಳೆಯೂ ಅವರ ಸುಟ್ಟ ಒಡಲಿಗೆ ತಂಪು ನೀಡಲು ವಿಫಲವಾಗಿತ್ತು.

ಅವರು ಹಾಕಿದ ಕಣ್ಣೀರು ನೋಡ ನೋಡುತ್ತಿದ್ದಂತೆಯೇ ಒಂದು ಏರಿಯಾಗಿ ಬಾಗಿಲ ಸಂದಿನಿಂದ ಹೊರಗೆ ದಾರಿ ಕಂಡುಕೊಂಡು ಮಳೆಯ ನೀರಿನಲ್ಲಿ ಬೆರೆತು ಸಣ್ಣ ಕೊಳವಾಗಿತ್ತು. ಆತನಿಗೆ ಆಕೆ ತಾಯಿಯಾದೊಡೆ ಆತ ಆಕೆಯ ಕೂಸಾಗಿದ್ದಂತೂ



ಪ್ರಕೃತಿ ಹಾಕಿದ ನಿಯಮವಾಗಿತ್ತೇನೋ. ಒಬ್ಬರನ್ನೊಬ್ಬರು ಸಂತೈಸುತ್ತಾ ಅಂದು ರಾತ್ರಿ ಕಳೆದು ಬೆಳಕು ಹರಿಯುವಷ್ಟರಲ್ಲಿ ಹೊರಗಿನ ತೋಟ ಅರ್ಧ ಧ್ವಂಸವಾಗಿ ಇನ್ನರ್ಧ ಮಳೆಯ ಪ್ರಹಾರವನ್ನೆದುರಿಸಲು ಗಟ್ಟಿ ಬೇರುಗಳನ್ನು ಬಿಟ್ಟು ಹಸಿರಿನಿಂದ ಕಂಗೊಳಿಸುತ್ತಿತ್ತು.

ತಮಗಿನ್ನು ಇದನ್ನೆಲ್ಲಾ ಸರಿಪಡಿಸಲು ಐದಾರು ದಿನಗಳಾದರೂ ಬೇಕಾಗಬಹುದೆಂದು ಲೆಕ್ಕ ಹಾಕುತ್ತಾ ಕಾರ್ಯಕ್ಕೆ ತೊಡಗುವಾಗ ಮನೆಯ ಮುಂದಣದ ಕೊಳವನ್ನು ನೋಡಿ ಮಳೆರಾಯನ ಕೃಪೆಗೆ ಕೈ ಮುಗಿದರು.

ಆ ಕೊಳದ ನೀರನ್ನೇ ತೋಟಕ್ಕೆಲ್ಲಾ ಹಾಯಿಸಬಹುದೆಂದು ಆ ಕೂಡಲೇ ಸಮಪಾತಳಿ ಬದುವಿನ ನಿರ್ಮಾಣಕ್ಕೆ ತೊಡಗಿದ್ದರು. ಮಳೆ ಬಾರದ ದಿನಗಳಂದು ಈ ಕೊಳದ ನೀರೇ ತೋಟಕ್ಕೆ ಸಂಜೀವಿನಿ.

ಕೆಲವು ತಿಂಗಳುಗಳೇ ಕಳೆದಿರಬಹುದೇನೋ ಮೈಲಾರಪ್ಪ ಎಂದಿನಂತೆ ನಾಯಿಗಳಿಗೆ ಕೂಳನ್ನು ನೀಡುತ್ತಿರುವಾಗ ದೂರದ ಕ್ಷಿತಿಜದಿಂದ ಹೊರ ಬಂದಂತೆ ಗುಡ್ಡವೊಂದರ ಮೇಲೆ ಯಾವುದೋ ಚಲಿಸುವ ವಸ್ತುಗಳು ಕಣ್ಣಿಗೆ ಬಿದ್ದಿತ್ತು.

"ಇದೇನಪ್ಪಾ" ಎಂದು ಕಣ್ಣು ಬಾಯಿ ತೆರೆದುಕೊಂಡು ವೀಕ್ಷಿಸುತ್ತಿದ್ದಂತೆಯೇ ಅವುಗಳು ಹತ್ತಿರ ಸಮೀಪಿಸಿತ್ತು. ಮೈಲಾರಪ್ಪ ಅನೇಕ ವರ್ಷಗಳ ಬಳಿಕ ಬೇರೆ ಮನುಷ್ಯರನ್ನು ಕಾಣುತ್ತಿದ್ದೇನೆಂಬ ಸಂತಸದತಿರೇಕದಲ್ಲಿ ಅವರನ್ನು ಬರಮಾಡಿಕೊಂಡ. ಅವರು ಅನ್ಯಭಾಷಿಕರಾಗಿದ್ದು ಕೆಲಸವನ್ನರಸಿಕೊಂಡು ಬಂದಿದ್ದರು. ದೂರದ ಪ್ರದೇಶದಲ್ಲಿ ಅತಿಥ್ಯ ಸಿಗುತ್ತಿರುವುದಕ್ಕೆ ಖುಷಿಗೊಂಡು ಆ ಪುಟ್ಟ ಮನೆಯೊಳಗೆ ಸೇರಿಕೊಂಡಿದ್ದರು.

ಕುವೇರಮ್ಮನಿಗೆ ಅಲ್ಲಿಗೆ ಆಗಮಿಸಿದ ಐದು ಮಂದಿ ದೇವತಾ ಮನುಷ್ಯರಂತೆ ಗೋಚರಿಸಿ ಹಣ್ಣು ಹಂಪಲುಗಳ ವಿಫುಲ ಸೇವೆಯನ್ನೇ ಮಾಡಿದ್ದಳು. ಕೈ ಬಾಯಿ ಆಡಿಸುತ್ತಾ, ಕೆಲವೊಮ್ಮೆ ಅಪ್ಪಿ ತಪ್ಪಿ ತಮ್ಮ ಭಾಷೆಯಲ್ಲೇ

ಮಾತಾಡುತ್ತಾ ಸಂಭಾಷಣೆಗೆ ಜರುಗಿತ್ತು. ನಂತರ ಆ ಇಬ್ಬರು ಗಂಡ ಹೆಂಡತಿ ಜೋಡಿ ಹಾಗೂ ಒಂದು ಗಂಡು ಮಗು ದೀರ್ಘ  ಪಯಣದ ಆಯಾಸದಿಂದಾಗಿ ಅಲ್ಲೇ ವಿಶ್ರಮಿಸಿಕೊಂಡರು.

ದಿನಗಳುರುಳಿದಂತೆ ಅವರು ಅಲ್ಲಿಂದ ನಿರ್ಗಮಿಸುವ ಸೂಚನೆಗಳೇ ಕಂಡು ಬರದೆ ಆ ಪುಟ್ಟ ಮನೆಗೆ ಸ್ವಲ್ಪ ದೂರದಲ್ಲೇ ಮತ್ತೊಂದು ಮನೆ ಎದ್ದಿತ್ತು. ಅದರ ಬದಿಯಲ್ಲೇ ಮಗದೊಂದು 'ನಾವಿತ್ತ, ನೀವುತ್ತ ' ಎಂದು ತಮ್ಮೊಳಗೇ ಸಂವಾದ ನಡೆಸಿದ ಆ ಜೋಡಿಗಳು ಆ ಹೊಸ ಗೂಡುಗಳನ್ನು ಸೇರಿ ಬೆಚ್ಚಗೆ ಮಾಡಿದ್ದವು. ಮೈಲಾರಪ್ಪ ದಂಪತಿಗಳ ಮನದಲ್ಲಿ ತಮಗೆ ನೆರೆ ಹೊರೆಯವರು ಸಿಕ್ಕದರೆಂಬ ಸಂತೋಷ ಮನೆ ಮಾಡಿದರೂ ತಮ್ಮ ತೋಟವನ್ನೇ ಅವರು ಆಹಾರ ಇತ್ಯಾದಿಗಳಿಗೆ ಅವಲಂಬಿಸುವುದು ಇರಿಸು ಮುರಿಸು ತಂದಿತ್ತು. ರಾತ್ರಿ ಛಾದರ ಹಾಸಿದಾಗಲಾಯ್ತು ಮೂರೂ ಮನೆಗಳ ದೀಪ ನಂದಿ ಕತ್ತಲ ಧೂಪವನ್ನು ಹಚ್ಚಿದಂತಹ ಸಮಯದಲ್ಲಿ ಈ ಈರ್ವರೂ ಮನೆಯ ಹೊರ ಬಂದು ತಮ್ಮ ಮನೆ ಹಾಗೂ ತೋಟದ ಸುತ್ತ ಆಚಂದ್ರನ ತನಕ ಬೇಲಿ ಹಾಕತೊಡಗಿದ್ದರು.



ಬೆಳಗಾನೆದ್ದು ನೇಸರು ಕಿಸಕ್ಕನೆ ನಕ್ಕಿದ್ದ. ಅದು ತಮ್ಮ ಚಟುವಟಿಕೆಗಳಿಗೆ ಮೊದಲ ಪ್ರೇಕ್ಷಕನಾಗಿದ್ದು ಕದ್ದು ಮುಚ್ಚಿ ನಡೆಸಿದ ಕಾರ್ಯಕ್ಕೆ ಆಶ್ಚರ್ಯಪಟ್ಟು 'ಮುಂದೇನು? ಎಂದು ಮರುದಿನ ತರುವ ಬೆಳವಣಿಗೆ ನೋಡಲು ಕುತೂಹಲದಿಂದ ಆಕಾಶದಲ್ಲಿ ಪಯಣಿಸಿದ್ದಂತಿತ್ತು.

ನೆರೆಹೊರೆಯ ಹುಡುಗ ತೀರಾ ಧಾಂದಲೆ ಎಬ್ಬಿಸುವವ. ನಾಯಿಗಳೊಂದಿಗೆ ಆಗಲೇ ಸ್ನೇಹ ಬೆಳೆಸಿದ್ದ ಅವನು ಅದರೊಂದಿಗೆ ಆಟವಾಡುವ ಎಂದು ಮನೆಯ ಹೊರ ಬಂದಾಗ ಕಂಡಿದ್ದೇನು? ಕೂಡಲೇ ತನ್ನ ತಂದೆ ತಾಯಿಯರನ್ನೆಬ್ಬಿಸಿ ಅವರನ್ನು ಹೊರ ಕರೆತಂದ,

ಈ ಜೋಡಿ ಮುಖ ಮುಖ ನೋಡಿಕೊಳ್ಳುವುದೊಂದೇ ಬಾಕಿ. ಅಲ್ಲೇ ವಾಸ್ತವ್ಯ ಹೂಡಬೇಕೆಂದರೆ ತಾವೇ ಪ್ರತ್ಯೇಕವಾಗಿ ಊಟಕ್ಕೆ ಒಂದು ದಾರಿ ಕಂಡು ಕೊಳ್ಳಬೇಕಾಗುವುದು ಎಂಬ ಸತ್ಯ ಒಡನೆಯೇ ಅರಿವಾಗಿತ್ತವರಿಗೆ, ಅವಶ್ಯಕತೆ ತಲೆದೋರಿದಾಗ ಅಗತ್ಯಗಳನ್ನು ಪೂರೈಸುವ ಸಲಕರಣೆಗಳು ತನ್ನಂತಾನೇ ಅಭಿವೃದ್ಧಿಯಾಗುವುದೆಂಬ ಪ್ರತೀತಿಯಂತೆ ಆ ಜೋಡಿಗಳೆರಡು ತಮ್ಮ ಮನೆಯ ಮುಂದಿನ ಆವರಣದಲ್ಲಿ ತೋಟದ ನಿರ್ಮಾಣಕ್ಕೆ ಕೈ ಹಾಕಿದ್ದವು.

ನೆಲದ ಮರೆಯ ನಿಧಾನದಂತೆ ಆ ಪ್ರದೇಶವೆಲ್ಲವೂ ತನ್ನ ಬರಿದಾದ ಕಂಬಳಿ ತೆಗೆದು ಒಳಗಿನ ಹಸಿರನ್ನು ಚಿಗುರಿಸಿತ್ತು. ನೀರಿಗಾಗಿ ಮಾತ್ರ ಮೈಲಾರಪ್ಪನ ಕೊಳವನ್ನೇ ಅವಲಂಬಿಸಬೇಕಾಗಿ ಅಲ್ಲಿಂದ ಈ ತೋಟಗಳಿಗೆ ನಾಲೆಗಳನ್ನು ನಿರ್ಮಿಸಲಾಯಿತು.

ಈತನ್ಮಧ್ಯೆ ಈ ಜೋಡಿಗಳಿಗೂ ಐದಾರು ಮಕ್ಕಳಾಗಿ ವಸಂತಗಳು ಉರುಳಿದಂತೆ ಇವರುಗಳಲ್ಲೇ ಮದುವೆಯೂ ಆಗಿ ಸಮೀಪದಲ್ಲೇ ಇನ್ನೂ ಕೆಲವು ಮನೆಗಳು ಎದ್ದಿದ್ದವು.

ಕಾಲಕ್ರಮೇಣ ಮೈಲಾರಪ್ಪ ಮತ್ತು ಕುವೇರಮ್ಮ ಕಾಲಪುರುಷನ ಸೆಳತಕ್ಕೆ ಸಿಕ್ಕಿ ತಾವು ಕೆಸರು ಮಾಡಿಕೊಂಡ ಭೂಮಿಯಲ್ಲೇ ಮಣ್ಣಾಗಿ ಹೋದರು.ಆ ಪ್ರದೇಶಕ್ಕೂ 'ಮೈಲಾರಳ್ಳಿ' ಎಂದು ಹೆಸರು ಬಂದಿತ್ತು. ನೇಸರು ಈ ಪ್ರದೇಶ ಶೀಘ್ರವಾಗಿ ಅಭಿವೃದ್ಧಿಯಾಗುವುದನ್ನು ನೋಡುತ್ತಾ ಸಂತೃಪ್ತಿಯ ನಗೆ ಚೆಲ್ಲಿದ.

* * * *

ಅವನು ಅದು ಹ್ಯಾಗೆ ಅಲ್ಲಿಗೆ ಆಗಮಿಸಿದನೋ ಆ ಮೇಲಾರಳ್ಳಿಯ ಊರಿನ ಜನಕ್ಕೆ ತಿಳಿಯಲಿಲ್ಲ. ಅವನು ಅಂದು ಊರಿನ ಅರಳೀ ಮರದ ಕಟ್ಟೆಯ ಮೇಲೆ ಆಯಾಸದಿಂದ ತಲೆಗೆ ಕೈಕೊಟ್ಟು ನಿದ್ರಿಸುವಾಗ ಇದ್ದಕ್ಕಿದ್ದಂತೆ ಮೈಮೇಲೆ ಬಾಣಗಳ ಪ್ರಹಾರವಾದಂತಾಗಿ ಬೆಚ್ಚಿ ಎಚ್ಚೆತ್ತ. ಮೊದಲೇ ಮೈಯಲ್ಲೆಲ್ಲಾ ಅಲ್ಲಲ್ಲಿ ಬಾಸುಂಡೆಗಳೆದ್ದಂತೆ ಗಾಯಗಳು ಅವನ ಚರ್ಮ ತಿಂದಿದ್ದವು. ಅದರ ಮೇಲೆ ವಿಕಾರಗೊಂಡ ಆಕಾರವನ್ನು ಮತ್ತಷ್ಟು ವಿರೂಪಗೊಳಿಸಲು ಈ ಕಲ್ಲುಗಳ ತೂರಾಟ ಬೇರೆ.

"ಅಯ್ಯಯ್ಯೋ..." ಎಂದು ಉರಿ ತಾಳಲಾರದೆ ವಿದ್ರಾವಕವಾಗಿ ಅರಚಿ ಕೊಂಡ ಅಕ್ಕಪಕ್ಕದ ಮನೆಯ ಮಂದಿ ಕುತೂಹಲದಿಂದ ಹೊರಗೆ ಬಂದು ನೋಡುವಷ್ಟರಲ್ಲಿ



ಅವನು ತನ್ನ ಮೈ ಮೇಲೆ ಬಿದ್ದ ಕಲ್ಲುಗಳನ್ನು ಹೆಕ್ಕಿಕೊಂಡು ಹಾಕಿದವರ ಮೇಲೆ ತಿರುಗಿ ಬೀಸಲಾರಂಭಿಸಿದ್ದ.

ಕೀಟಲೆ ಸ್ವಭಾವದ ಹುಡುಗರು ಕೂಡಲೇ ಅಲ್ಲಿಂದ ಕಾಲ್ಕಿತ್ತರೂ ದೂರದಿಂದಲೇ ಅಣಕವಾಡುತ್ತಾ ರೇಗಿಸತೊಡಗಿದ್ದರು.

"ಹುಚ್ಚಾ. ಕಾಡು ಮನುಷ್ಯ" ...

ಅವನು ಖಂಡಿತ ಕಾಡಿನಿಂದ ನಾಡಿಗೆ ಬಂದವನೇ ಆಗಿರಬೇಕು. ಇಲ್ಲದಿದ್ದರೆ ಇಷ್ಟೆಲ್ಲಾ ಊಣಗಳಿಟ್ಟುಕೊಂಡು ಯಾವುದೇ ಚಿಕಿತ್ಸೆಗೆ ಒಳಗಾಗದೆ ಹಾಗೇ ಇರುವನೆಂದರೆ...

ಆದಿಬದಿಯಲ್ಲಿ ಪಿಸು ಮಾತುಗಳೆದ್ದಿದ್ದವು.

ತರಲೆ ಹುಡುಗರು ದೂರ ಹೋಗುತ್ತಲೇ ಈ ಅಪರಿಚಿತ ತನ್ನ ಮೈಯ ಮೇಲಿದ್ದ ಒಂದು ತುಂಡು ಬಟ್ಟೆಯಲ್ಲೇ ಅವರನ್ನು ಅರಸುತ್ತಾ ಸಿಟ್ಟಿನಿಂದ ಹೂಂಕರಿಸುತ್ತಾ ಧಾವಿಸಿದ. ತನ್ನನ್ನು ತನ್ನ ಪಾಡಿಗೆ ಬಿಡದೆ ವೃತಾ ಕಿರುಕುಳ ನೀಡಲು ಈ ಮಂದಿಗೆ ಎಷ್ಟು ಧೈರ್ಯ ಆ ಹುಡುಗರು ಯಾವ ದಿಕ್ಕಿಗೆ ಹೋದರೆಂದು ಕಣ್ಮರೆಯಾದವರನ್ನು ಹುಡುಕುತ್ತಾ ಅಂದಾಜಿನ ಮೇಲೆ ಸಂದಿಗೊಂದಿಗಳನ್ನು ಹಾದು ಹೊರಟ

ಅವನು ಆ ಊರಿಗೆ ಬಂದ ವಿಷಯ ಕಾಳ್ಗಿಚ್ಚಿನಂತೆ ಆ ಊರಲ್ಲೆಲ್ಲಾ ಹರಡಿ ಜನ ಮಂದೆಯಾಗಿ ಅವನನ್ನು ನೋಡಲೋಸುಗವೇ ಬಂದು ಸುತ್ತಲೂ ನೆರೆದಿದ್ದರು.

ಅವನು ಕಣ್ಣು ಕಿರಿದುಗೊಳಿಸಿ ನೋಡಿದ, ಬಹಳ ಹಿಂದೆ ದೂರದಿಂದ ಈ ನಾಡಿನ ಮನುಷ್ಯರನ್ನು ನೋಡಿದ್ದುಂಟು. ತನ್ನಂತೆ ಎರಡು ಕೈ ಕಾಲು ಹೊಂದಿರುವ ಇವರ ಸಂಗ ಮಾಡಬೇಕೆಂಬ ಬಯಕೆ ಉಮ್ಮಳಿಸಿದರೂ ಅವರು ತನ್ನನ್ನು ನೋಡಿ ಹ್ಯಾಗೆ ಸ್ವೀಕರಿಸುವರೋ ಎಂದು ಹೆದರಿ ಮರದ ಹಿಂದೆ ಮರೆಯಾಗಿದ್ದ. ಅವರುಗಳು ಮಾತಾಡುತ್ತಿದ್ದ ಭಾಷೆ ಅರ್ಥವಾಗಲ್ಲೊಲ್ಲದು, ಕಾಡಿನ ಪ್ರಾಣಿಗಳ ಸಂಪರ್ಕ ಭಾಷೆಯೇ ಹೆಚ್ಚು ಅರ್ಥವತ್ತಾಗಿ ತೋರಿತ್ತವನಿಗೆ.

ಆದರೆ ರಾತ್ರಿ ಅದು ಹೇಗೋ ಕಾಡಿನ ಮಧ್ಯೆ ನಡೆಯುತ್ತಿದ್ದ ಕಾಲು ಅಪ್ಪಿತಪ್ಪಿ ನಾಡಿನ ದಾರಿ ಹಿಡಿದಿತ್ತು ತನ್ನನ್ನು ವಿಚಿತ್ರ ಪ್ರಾಣಿಯೆಂಬಂತೆ ದಿಟ್ಟಿಸಿ ನೋಡುತ್ತಿದ್ದ ಇವರುಗಳಿಂದ ತಪ್ಪಿಸಿಕೊಳ್ಳುವುದ್ದೇಗೆಂದು ಸುತ್ತಲೂ ಚಕ್ರವ್ಯೂಹದಂತೆ ಆವರಿಸಿದ್ದ ಜನರನ್ನು ಒಮ್ಮೆ ಅವಲೋಕಿಸಿದ, ಸರಕ್ಕನೆ ಕ್ಷಣಾರ್ಧದಲ್ಲಿ ಅವರನ್ನು ಭೇದಿಸಿ ಹೊರ ಓಡಿದ ಕುಂಟುತ್ತಲೇ ಕಾಲೆಳೆದೆಡೆ ನಡೆವಾಗ ಅಣೆಕಟ್ಟೆಯೊಂದು ಎದುರಾಗಿತ್ತು. ಬೃಹತ್ತಾಗಿ ಎತ್ತರದ ಗೋಡೆಯಂತಿದ್ದ ಈ ಅಣೆಕಟ್ಟೆ ಕೆರೆಯ ನೀರನ್ನು ತಡೆಹಿಡಿದಂತೆ ತನ್ನ ದುಃಖ ನೋವೂ ಹೊರ ಹೊಮ್ಮದಂತೆ ಅದುಮಿ ಹಿಡಿದಂತೆನಿಸಿತು. ಆ ಕೆರೆಯನೀರಿನಲ್ಲಿ ಮುಖ ಕೈ ಕಾಲೆಲ್ಲಾ ತೊಳೆದುಕೊಳ್ಳುತ್ತಿದ್ದಂತೆ ಹಾಯೆನಿಸಿತು ತನ್ನ ದಾಹವನ್ನು ಹಿಂಗಿಸಿದಂತೆ ತನ್ನ ಒಡಲ ಉರಿಯನ್ನೂ ತಂಪುಗೊಳಿಸಿದ ಈ ನೀರು ನಿಜಕ್ಕೂ ಅಮೃತವೆನಿಸಿತು.

ಅಷ್ಟರಲ್ಲಿ ಹಿಂದಿನಿಂದ ಒಂದಿಬ್ಬರು ಬಂದು ಅವನನ್ನು ಸರಪಳಿಯಿಂದ ಬಿಗಿದಿದ್ದರು. ಅದರಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿದರೂ ವ್ಯರ್ಥವಾಗಿ ಅವರು ಎಳೆದುಕೊಂಡು

ಹೋದೆಡೆ ನಡೆದ. ಎದುರಿಗೆ ನಾಲ್ಕೈದು ಮಂದಿ ಹಿರಿಯ ಜೀವಿಗಳು ಇವನ ಬರುವಿಕೆಗಾಗಿ ಕಾಯುತ್ತಿರುವಂತೆ ಮರದ ಕಟ್ಟೆಯೊಂದರ ಮುಂದೆ ಕುಳಿತುಕೊಂಡಿದ್ದರು.

ಇವನು ಬರುತ್ತಲೇ "ಶುರು ಮಾಡುವಾ" ಎಂದು ಪ್ರಶ್ನೆಗಳ ಬಾಣಗಳನ್ನೇ ಅವನ ಮೇಲೆ ಬಿಡಹತ್ತಿದ್ದರು.

"ಎತ್ತಣದ ದಿಕ್ಕಿನಿಂದ ಬಂದೆಯೋ.' ಎಂದು ಪೂರ್ವಾಪರವನ್ನೆಲ್ಲಾ ಜಾಲಾಡಿಸಿದಾಗ ಅದಕ್ಕೆ ಬ.......ಬಾ...' ಎಂಬುದೇ ಉತ್ತರವಾಗಿತ್ತು. ಅವನ ಮೈ ಮೇಲಿನ ಗಾಯಗಳು, ಎಷ್ಟೋ ವರ್ಷಗಳವರೆಗೂ ಕೂದಲನ್ನು ಬಾಚಿಲ್ಲದಿರುವುದು ಕ್ಷೌರ ಮಾಡದೆ ಹಾಗೇ ಬೆಳೆಯಲು ಬಿಟ್ಟ ಉದ್ದ ಗಡ್ಡಮೀಸೆಯನ್ನೆಲ್ಲಾ ನೋಡಿ ಪಂಚಾಯಿತಿಯಲ್ಲಿ ಕುಳಿತಿದ್ದ ಹಿರಿಯರು ತಮ್ಮಲ್ಲೇ ಮಾತುಕತೆಗೆ ತೊಡಗಿದ್ದರು. ಅವರ ಬಾಯೊಳಗೆ ಹೊರಳುತ್ತಿದ್ದ ನಾಲಿಗೆ ಆ ಅಪರಿಚಿತನಿಗೆ ವಿಷಕಾರಿ ಹಾವಿನಂತೆ ಕಾಣತೊಡಗಿತ್ತು.

'ಇವನನ್ನು ಊರ ಹೊರಗೆ ಒಂದೆಡೆ ಬಂಧಿಸಿಟ್ಟರೆ... ಕಾಡಿಗೇ ಮರಳಿ ಕೊಂಡ್ಯೊಯ್ದು ಬಿಟ್ಟರೆ... ನಮ್ಮ ಹೊಲಗದ್ದೆಗಳನ್ನು ಉಳಲಿಕ್ಕೆ ಇವ ಸರಿ ಹೋಗಬಹುದು..."

ಒಂದೆಡೆ ಅವನನ್ನು ತಮ್ಮ ಜೊತೆ ಸೇರಿಸಿಕೊಂಡರೆ ಅವನ ಕಾಯಿಲೆ ತಮಗೂ ಬರಬಹುದೆಂದೂ, ತಮ್ಮ ಮೇಲೆ ಆಕ್ರಮಣ ಮಾಡಬಹುದೆಂಬ ಅಂಜಿಕೆಯೂ ಮನೆ ಮಾಡಿದ್ದು ಸ್ಪಷ್ಟವಾಗಿತ್ತು.

ಕಡೆಗೆ ಆ ಅಪರಿಚಿತನನ್ನು ಒಬ್ಬ ಪಂಚಾಯ್ತಿಯ ಸದಸ್ಯನೊಬ್ಬನಿಗೆ ಗಂಟು ಹಾಕಿ ಇತರರು ನಿರಾಳ ಮನಸ್ಸಿನಿಂದ ತೆರಳಿದ್ದರು. ಆ ಅಪರಿಚಿತ ತನ್ನ ಮೈ ಮೇಲಿನ ಸರಪಳಿಯಿಂದ ಬಿಡಿಸಿಕೊಳ್ಳುವ ಭಾಗ್ಯವನ್ನೇ ಪಡೆದಿರಲಿಲ್ಲವೇನೋ. ಒಂದು ದಿನ ಎತ್ತುಗಳ ಬದಲಿಯಾಗಿ ಹೊಲಗದ್ದೆ ಉಳಲು ಕರೆದೊಯ್ಯಲಾಗಿತ್ತು. ಅತಿರಕ್ಷ ಪರಿಸ್ಥಿತಿಯಲ್ಲಿ ಮೈ ಮೇಲಿನ ಗಾಯಗಳು ವಾಸಿಯಾಗುವ ಮುನ್ನವೇ ಹೆಗಲಿಗೊಂದು ಭಾರ. ಸಂಜೆಯಾದೊಡನೆ ಮರವೊಂದಕ್ಕೆ ಕಟ್ಟಿ ಹಾಕಲು ಮರೆಯಲಾರರು.

"ಉಣ್ಣಲಿಕ್ಕೆ ಗಂಜಿಯಾದರೂ ನೀಡಿ, ತುಂಡು ರೊಟ್ಟಿಯಾದರೂ ನೀಡಿ... ತಡ ಮಾಡಬ್ಯಾಡಿ... ಹೊಟ್ಟೆ ಕೇಳಬೇಕಲ್ಲಾ... ಎಂದು ಮನಸ್ಸು ಆಕ್ರಂದನ ಮಾಡಿದರೂ ನಾಲಿಗೆ ಹೊರಳದಾಗಿತ್ತು. ಅವನ ದೇಹದ ಸತ್ವ ಹಿಂಗುತ್ತಿರುವಾಗಲೇ ಮನೆಯ ಯಜಮಾನ ಕೊಬ್ಬಿ ಗೂಳಿಯಂತೆ ಮೈ ಬೆಳೆಸಿಕೊಂಡಿದ್ದ. ಅಪರಿಚಿತನಿಗೆ ಮರದ ರೆಂಬೆ ಕೊಂಬೆಯೇ ವಾಸ ಸ್ಥಾನವಾಯಿತು. ಅಲ್ಲಿಂದ ದೂರದ ಆಗುಹೋಗುಗಳ ನೋಟವೂ ಸಿಕ್ಕಿ ಏಕಾಂಗಿತನದ ಬೇಸರ ನೀಗಿಸುತ್ತಿತ್ತು. ಅವನು ಕುಳಿತಲ್ಲೆಡೆಯಿಂದ ಮನೆಯ ಕಿಟಕಿಯ ಮೂಲಕ ತನ್ನ ಯಜಮಾನನ ಮನೆಯೊಳಗಿನ ಕೆಲವು ಬೆಳವಣಿಗೆಗಳಿಗೂ ಮೂಕ ಸಾಕ್ಷಿಯಾಗತೊಡಗಿದ್ದ. ಮನೆಯ ಯಜಮಾನಿಯ ಪರಿಚಯ ಈಗಾಗಲೇ

ಅವನಿಗಾಗಿತ್ತು. ಅಂಥದ್ದರಲ್ಲಿ ಆಕೆ ಮನೆಯೊಳಗಿಲ್ಲದ ಸಮಯದಲ್ಲಿ ಯಜಮಾನ ಅದ್ಯಾರೋ ಒಂದಿಬ್ಬರು ಮಹಿಳೆಯರ ಸಂಗ ಮಾಡುವುದನ್ನು ದೃಷ್ಟಿಗೆಟುಕಿದಷ್ಟನ್ನು ಕುತೂಹಲದಿಂದ ನೋಡಿ ತಲೆ ಕೆಡಿಸಿಕೊಳ್ಳತೊಡಗಿದ.

ಮನೆಯವರು ಕಾವಲು ಕಾಯುವ ನಾಯಿಗಳಿಗೆ ಕೂಳನ್ನು ನೀಡುವಾಗ ಜ್ಞಾಪಕಕ್ಕೆ ಬಂದಂತೆ ಇವನಿಗೂ ಒಂದಿಷ್ಟು ಉಣ್ಣಲು ನೀಡುತ್ತಿದ್ದರು.



ದಿನಗಳು ಕಾಂಚನ ಮೃಗದಂತೆ ಜಿಗಿದವು. ಒಂದು ದಿನ ಬೆಳಗ್ಗೆ ಮನೆಯ ಯಜಮಾನ ತನ್ನ ಹಾದರಗಿತ್ತಿಯ ತೋಳ್ತೆಕ್ಕೆಯಿಂದ ಬಿಡಿಸಿಕೊಂಡು ಮುಖಮಾರ್ಜಾನ ಇತ್ಯಾದಿ ಮುಗಿಸಲೆಂದು ಮನೆಯ ಹಿತ್ತಲಿನ ಬಾವಿಯೆಡೆ ಸಾಗಿದ ನೀರು ಸೇದಲೆಂದು ಹಗ್ಗವನ್ನು ಬಿಂದಿಗೆಗೆ ಸುತ್ತಿ ಬಾವಿಯೊಳಗಡೆ ಇಳಿ ಬಿಡುತ್ತಾ ನೋಡುತ್ತಾನೆ. ಅದು ನೀರನ್ನು ಸಮೀಪಿಸುತ್ತಿರುವಂತೆಯೇ ಇವನ ದೃಷ್ಟಿಯೂ ನೀರಿನಲ್ಲಿ ಬಿದ್ದ ಪ್ರತಿಬಿಂಬದೆಡೆ ಸಾಗಿತ್ತು. ಆಶ್ಚರ್ಯ ಆಘಾತಕ್ಕೊಳಗಾಗಿ ತನ್ನ ಕಣ್ಣುಗಳನ್ನು ತಾನೇ ನಂಬದಾಗಿ ಆದಿಬದಿ ಕಣ್ಣಾಡಿಸಿದ. ಅದು ಬೇರಾದರೂ ಆಗಿರಲಿಕ್ಕೆ ಸಾಧ್ಯವಿಲ್ಲವೆಂದು ಮನವರಿಕೆಯಾಗುತ್ತಲೇ ಮನೆಯೊಳಗಡೆ ಓಡಿ ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಂಡ ಹೌದು ಅದು ತನ್ನದೇ!!

ಮುಖದಲ್ಲಿ ಹಲ್ಲುಗಳು ಉಬ್ಬಿದ್ದು, ಕಿವಿಗಳು ಇನ್ನಷ್ಟು ಅಗಲವಾಗಿ ಹುಬ್ಬುಗಳು, ಮೀಸೆ ದಪ್ಪವಾಗಿತ್ತು. ಮೊದಲೇ ಒರಟಾಗಿದ್ದ ಮುಖದಲ್ಲಿ ಈ ಪರಿಯ ಬೆಳವಣಿಗೆ ಮತ್ತೂ ಭಯಂಕರವಾಗಿ ತೋರಿ ನೋಡುಗರಿಗೆ ಹೆದರಿಕೆ ಮೂಡಿಸುವಂತಿತ್ತು.

ಈತನನ್ನು ಹುಡುಕಿಕೊಂಡು ಬಂದ ಹಾದರಗಿತ್ತಿಗೂ ಅವನ ಗುರುತು ಹಿಡಿಯಲಿಕ್ಕೆ ಸಾಧ್ಯವಾಗದೆ ಈ ಮನೆಯ ತನ್ನ ರಹಸ್ಯ ಆಗಮನದ ವಿಷಯ ಬಹಿರಂಗವಾಗಬಹುದೆಂಬ ಎಚ್ಚರಿಕೆಯನ್ನೂ ಮರೆತು ಬೊಬ್ಬೆ ಇಡತೊಡಗಿದಳು. ಇಡೀ ಊರೇ ಅಲ್ಲಿ ನಿಮಿಷಗಳಲ್ಲಿ ಜಮಾಯಿಸಿತ್ತು. ಮನೆಯ ಯಜಮಾನ ಬಾಯ್ಬಿಟ್ಟು ಮಾತಾಡತೊಡಗಿದಾಗಲೇ ಅವನ ಮೂಲ ಅಸ್ತಿತ್ವ ಮನವರಿಕೆಯಾಗತೊಡಗಿತ್ತು.

ವಿಷಯ ತಿಳಿದು ತೌರಿಗೆ ಹೋಗಿದ್ದ ಅವನ ಹೆಂಡತಿ ಓಡೋಡಿ ಬಂದಿದ್ದಳು. ಒಂದೆಡೆ ಗಂಡನ ಈ ಭಯಂಕರ ಸ್ವರೂಪ ಹೆದರಿಕೆ, ದುಃಖ ಮೂಡಿಸಿದರೆ ಮತ್ತೊಂದೆಡೆ ಅವನು ಮತ್ತೋರ್ವ ಹೆಣ್ಣಿನ ಸಂಗ ಮಾಡುತ್ತಿದ್ದ ವಿಷಯ ಕ್ರೋಧ ಉಕ್ಕಿಸಿತ್ತು.

ಈ ವಿಚಿತ್ರ ಬೆಳವಣಿಗೆಗೆ ಏನು ಕಾರಣವಿರಬೇಕೆಂದು ಊರಿನ ಮಂದಿ ತಮ್ಮಲ್ಲೇ ಅವಲೋಕಿಸತೊಡಗಿದ್ದರು. ದೇವರು, ದಿಂಡರು, ದೆವ್ವದ ಕೆಲಸ ಇತ್ಯಾದಿ ಊಹಾಪೋಹಗಳು ರೆಕ್ಕೆ ಬಿಚ್ಚಿದ್ದವು. ಮನೆಯ ಯಜಮಾನನಿಗಾದ ದುರ್ಗತಿಯ ಕರಿ ಛಾಯೆ ಹಸಿಯಾಗಿರುವಾಗಲೇ ಊರಿನ ಪಂಚಾಯಿತಿ ಕಟ್ಟೆಯಲ್ಲಿ ಕುಳಿತುಕೊಳ್ಳುವ ಹಿರಿಯ ಮಂದಿಯಲ್ಲೂ ಇದೇ ತೆರನಾದ ಬೆಳವಣಿಗೆ ಕಂಡು ಬರತೊಡಗಿತ್ತು.

ಈ ಪ್ರಕರಣ ಈಗ ಗಂಭೀರ ತಿರುವು ಪಡೆದು ಊರಿನ ಮಂದಿ ಕಾಣದ ಕೈ ಕುರಿತು ವಿಚಾರ ಮಾಡತೊಡಗಿದರು. ಗುಡಿಯಲ್ಲಿ ಎಂದಿಗಿಂತ ಹೆಚ್ಚಿಗೆ ಪೂಜೆ, ಪುನಸ್ಕಾರ, ಹರಕೆಗಳು ನಡೆಯತೊಡಗಿತ್ತಾದರೂ ಪರಿಸ್ಥಿತಿ ಉತ್ತಮಗೊಳ್ಳುವ ಸೂಚನೆ ಕಾಣದೆ ಇಡೀ ಊರಿಗೆ ಊರೇ ಈ ಪರಿವರ್ತನೆಗೆ ಬಲಿಯಾಗತೊಡಗಿತ್ತು.

ಒಬ್ಬಾತನಿಗೆ ಇದ್ದಕ್ಕಿದ್ದಂತೆ ತಮ್ಮ ಊರೊಳಗಿದ್ದ ಕಾಡು ಮನುಷ್ಯನ ನೆನಪಾಗಿ ಈ ಎಲ್ಲಾ ಅವಾಂತರಕ್ಕೆ ಕಾರಣಕರ್ತ ಅವನೇ ಇರಬೇಕೆಂದು ಬೀಜ ನೆಟ್ಟ. ಅವನು ಮೊದಲು ಈ ಊರಿಗೆ ಬಂದಾಗ ಮೈಲಾರಳ್ಳಿ ಕೆರೆಯ ನೀರನ್ನು ಕುಡಿದು ಮೈ ತೊಳೆದುಕೊಂಡು ಆ ನೀರನ್ನು ಮೈಲಿಗೆ ಮಾಡಿದ ನೆನಪಿನ್ನೂ ಎಲ್ಲರ ಮನದಲ್ಲಿ



ಹಸಿರಾಗಿತ್ತು. ಅವನಿಗಂಟಿದ ರೋಗ ಕೆರೆಯ ನೀರು ಕುಡಿದ ಈ ಊರಿನ ಜನಕ್ಕೆಲ್ಲಾ ಹಬ್ಬಿರಬೇಕೆಂದು ಒಮ್ಮತಕ್ಕೆ ಬಂದರು. ಅನುಮಾನದ ಬೀಜ ಜನರ ನರನಾಡಿಗಳಲ್ಲಿ ಹರಿದು, ಮರವಾಗಿ ಮೆದುಳಿನಲ್ಲಿ ಹಣ್ಣು ಬಿಡತೊಡಗಿತ್ತು.

ಕಾಡು ಮನುಷ್ಯನಿಗೆ ಕೂಡಲೇ ಒಂದು ಗತಿ ಕಾಣಿಸಬೇಕೆಂದು ನಿರ್ಧರಿಸಿ ಅಂದಿನ ರಾತ್ರಿ ಚರ್ಚೆಗೆ ವಿರಾಮವಿತ್ತು. ಮರುದಿನ ಕಾರ್ಯಗತಗೊಳಿಸಲು ಅಣಿಯಾದರು.

ಈ ಎಲ್ಲಾ ಆಗುಹೋಗುಗಳು ಅಪರಿಚಿತನಿಗೆ ಅರ್ಥವಾಗದಿದ್ದರೂ ಯಾವುದೋ ಕೇಡಿನ ಸಂಕೇತದ ವಾಸನೆ ಮೂಗಿಗೆ ಬಡಿಯತೊಡಗಿತ್ತು.

ಇನ್ನು ತಡೆಯಲಾರೆ ಎಂಬಂತೆ ಆ ಅಪರಿಚಿತ ತನ್ನನ್ನು ಸರಪಳಿಯಿಂದ ಕಟ್ಟಿದ ಮರವನ್ನೇ ಹತ್ತಿ ಕಾಡಿನ ನರಿಗಳು ಊಳಿಟ್ಟಂತೆ ದೀರ್ಘವಾಗಿ ರೋದಿಸಹತ್ತಿದ. ಗಾಣದೆತ್ತಿನಂತೆ ದುಡಿದು ಅವನ ಮೈ ಮೂಳೆಗಳು ಮುರಿದು ಹೋಗಿದ್ದುವೇನೋ. ಮನೆಯ ಒಡೆಯ ನೀಡುತ್ತಿದ್ದ ರೊಟ್ಟಿಯ ಚೂರು ಅವನ ಹಸಿವನ್ನು ಹಿಂಗಿಸಲು ವಿಫಲವಾಗಿತ್ತು. ಎಷ್ಟು ತಡೆಯಲು ಪ್ರಯತ್ನಿಸಿದರೂ ಮೈ ಉರಿ ಸಹಿಸಲಸಾಧ್ಯವಾಗಿತ್ತು.

ಅವನ ಕೂಗು ಆ ಮೈಲಾರಳ್ಳಿಯ ಮನೆಗಳ ಗೋಡೆ ಗೋಡೆಯಲ್ಲೂ ಪ್ರತಿಧ್ವನಿಸಹತ್ತಿತ್ತು. ಕಂಪನದ ಅಲೆಗಳು ಅಣೆಕಟ್ಟನ್ನೂ ತಟ್ಟಿ ಬಿರುಕು ಬಿಡಲಾರಂಭಿಸಿತ್ತು. ಈ ಕೂಗು ವಿಚಿತ್ರವಾಗಿ, ಯಾವುದೋ ಅಪಶಕುನದ ಸೂಚನೆ ಯಂತೆ ತೋರಿ ಮನೆಗಳೊಳಗಿನ ಮಂದಿ ಹೊರ ಓಡಿ ಬಂದಿದ್ದರು.

ವೆಂಕ, ಶೀನ, ನಾಣಿ ಯಾವ ನಸುಗನಸಿನಲ್ಲಿ ಮುಳುಗಿ ತಮ್ಮ ಪತ್ನಿಯರ ತೋಳ್ಕೆಯಲ್ಲಿ ಸಿಹಿ ನಿದ್ದೆ ಕಾಣುತ್ತಿದ್ದರೋ, ಅವರೆಲ್ಲಾ ಬೆಚ್ಚಿ ಉಟ್ಟ ಬಟ್ಟೆಯಲ್ಲೇ ಧ್ವನಿ ಬಂದೆಡೆ ಅರಸಿಕೊಂಡು ಹೋದರು. ಗುಸುಗುಸು ಮಾತುಗಳ ಮಧ್ಯೆ 'ಏನಾಯ್ತಂಬ ವಿಚಾರ ವಿನಿಮಯ ನಡೆಯತೊಡಗಿತ್ತು.

ಇತ್ತ ಆ ಅಪರಿಚಿತನಿದ್ದ ಮನೆಯ ಒಡೆಯ ಅವನನ್ನು ಕೆಂಡಾಮಂಡಲ ಬೈಯ ಹತ್ತಿದ್ದನು. ಆತನ ಬೈಯ್ದುಳು ನಿರರ್ಗಳವಾಗಿ ಹರಿದಷ್ಟೂ ಅಪರಿಚಿತನ ಅಳಲು ಜೋರಾಗಿತ್ತು. ಮನೆಯ ಒಡೆಯ ಕಿವಿ ಮುಚ್ಚಿಕೊಂಡು ನಾಯಿಗಳನ್ನು ಹೊಡೆಯಲಿಟ್ಟುಕೊಂಡಿದ್ದ ದೊಣ್ಣೆಗಾಗಿ ಅರಸಿದ.

ಒಂದೆರಡು ಕ್ಷಣವಷ್ಟೇ ಅಂಬೋ' ಎಂದು ನೀರಿನ ಅಲೆಗಳು ನುಗ್ಗಿ ಆ ಮನೆಯನ್ನು ತನ್ನೊಂದಿಗೆ ಕರಗಿಸಿಕೊಂಡು ಮನೆಯ ಒಡೆಯನನ್ನೂ ಕೊಚ್ಚಿ ಕೊಂಡು ಹೋಗಿತ್ತು. ಏತನ್ಮಧ್ಯೆ ಜರುಗಿದ ಈ ಕ್ರಿಯೆಗೆ ಮರದ ಮೇಲಿನ ಅಪರಿಚಿತ ಮೂಕ ವಿಸ್ಮಿತನಾಗಿ ಬಿಟ್ಟ ಬಾಯನ್ನು ಹಾಗೇ ಬಿಟ್ಟುಕೊಂಡು ವೀಕ್ಷಿಸಿದ.

ಮೈಲಾರಳ್ಳಿ ಕೆರೆಯ ನೀರು ಬೃಹದಾಕಾರ ತಾಳಿ ತಿಮಿಂಗಲದಂತೆ ಮುಂದಿನ ಆಕೃತಿಗಳನ್ನು ಭಕ್ಷಿಸುತ್ತಿದೆ. ಅದರ ಎದುರಿಗೆ ಎಂಥಹ ಗಟ್ಟಿ ಮನೆಗಳೂ ನಿಲ್ಲದಾಗಿ ಮನೆಯೊಳಗಿನ ವಸ್ತುಗಳು ರಭಸಕ್ಕೆ ಕೊಚ್ಚಿಕೊಂಡು ಹೋಗುತ್ತಿದ್ದವು. ಇದೇನು ಸಮುದ್ರವೋ ಇಲ್ಲಾ ಕೆರೆಯೋ ಎಂಬ ಅನುಮಾನ ಹುಟ್ಟುವಂತೆ ಅದರ ಉದ್ದ ಬಾಹುಗಳಲ್ಲಿ ಸಿಕ್ಕಿ ಮನುಷ್ಯರು, ಪ್ರಾಣಿಗಳೆಂಬ ಭೇದ ಭಾವವಿಲ್ಲದೆ ಎಲ್ಲರೂ ಒಟ್ಟಿಗೇ ತೇಲಿ ಮುಳುಗತೊಡಗಿದ್ದರು.

ಈಜು ಬಾರದವರು ಕೈ ಕಾಲು ಆಡಿಸುತ್ತಾ ತೇಲಲು ವಿಫಲ ಪ್ರಯತ್ನ ನಡೆಸಿದ್ದರು. ಹಾವುಗಳು ಅವರಿಗೆ ಸಂಗ ನೀಡಿದ್ದವು. ನೀರಿನ ಬೃಹತ್ ಸ್ವರೂಪದ ದರ್ಶನವಾಗುತ್ತಲೇ ಅದು “ಮುನೇಲಾ... ಮುನೇಲಾ...' ಎಂದು ಅರ್ಭಟಿಸಿದಂತೆಯೂ ತನ್ನನ್ನು ಕರೆಯುತ್ತಿದ್ದಂತೆಯೂ ಭಾಸವಾಗತೊಡಗಿತ್ತು.

ಸ್ವಲ್ಪ ಎತ್ತರದ ದಿಣ್ಣೆಯ ಮೇಲಿನ ಮರದ ಮೇಲೆ ಕುಳಿತು ನೋಡುತ್ತಿದ್ದ ಈತನಿಗೆ ಕೆಲಗಂಟೆಗಳ ಬಳಿಕ ನೋಡಿದ್ದು ಸಾಕಾಯ್ತೆಂಬಂತೆ ಆಯಾಸದಿಂದ ಕಣ್ಮುಚ್ಚಿದ್ದ.

ಮೂರು ದಿನಗಳು ಇಡೀ ಹಳ್ಳಿಯೇ ನೀರಿನಿಂದ ಆವೃತ್ತವಾಗಿ ನಂತರ ನಿಧಾನವಾಗಿ ಬಿಸಿಲಿಗೆ ನೀರು ಹಿಂಗತೊಡಗಿದಾಗ ಎತ್ತರದ ಪ್ರದೇಶಗಳು ದ್ವೀಪಗಳಂತೆ ತೋರತೊಡಗಿತ್ತು.

ಅಪರಿಚಿತನಿಗೆ ಈಗ ಸ್ವಲ್ಪ ಧೈರ್ಯ ಮೂಡಿತು. ತನ್ನನ್ನು ಬಿಗಿದಿದ್ದ ಸರಪಳಿ ಅದನ್ನು ಕಟ್ಟಿದ ಮರದೊಂದಿಗೇ ಮುರಿದು ಬಿದ್ದಿತ್ತು. ಸುತ್ತಲೂ ಒಮ್ಮೆ ಹಳ್ಳಿಯ ಪ್ರದಕ್ಷಿಣೆ ಹಾಕಿದಾಗ ಯಾವ ನರಪಿಳ್ಳೆಯೂ ಬದುಕಿರುವ ಸೂಚನೆಗಳು ಕಂಡು ಬಂದಿರಲಿಲ್ಲ.

ಈಗವನಿಗೆ ಹೊಟ್ಟೆ ತನ್ನ ಆಸ್ತಿತ್ವವನ್ನು ತೋರಿಸತೊಡಗಿತ್ತು. ಅವನು ಆಹಾರವನ್ನರಸುತ್ತಾ ನಾಡ ದಾರಿ ಬಿಟ್ಟು ಕಾಡನ್ನು ಮರಳಿ ಸೇರಿದ...

# ಉರಿವ ಬೆಂಕಿಗೆ ಮೈಯೆಲ್ಲ ಬಾಯಿ

- ಡಾ. ಪತ್ನಿನಿ ನಾಗರಾಜು

"ನಾಗ ಬನಕ್ಕೆ ಹೋಗಿ ಒಂದು ಕೊಡಪಾನ ನೀರಾಕಿ ಬಾ ಮಾಣಿ" ಎಂದ ಅಪ್ಪನ ಮಾತಿಗೆ ನಾಣಿ ಏನೂ ಮಾತಾಡದೆ ಮಡಿ ಪಂಚೆಯನ್ನು ಎತ್ತಿಕಟ್ಟಿ ಬಾವಿಯಿಂದ ನೀರು ಸೇದಿ ನಾಗಬನದ ಕಡೆ ನಡೆದ. 'ಮಾಣಿ, ಹಂಗೆ ಹೂ ಬಿಡಿಸಿ ನಾಗಪ್ಪನಿಗೆ ಏರಿಸಿ ಬಾ' ಎಂದ ಅಮ್ಮನ ಮಾತಿಗೂ ಕತ್ತಾಡಿಸಿ ನಾಣಿ ಹೆಜ್ಜೆ ಹಾಕಿದ. ಅವನ ಮನೆಯ ಪಕ್ಕವೇ ನಾಗಬನವಿದ್ದದ್ದು. ಪೂರ್ವಿಕರು ನಡೆಸಿಕೊಂಡು ಬಂದಿದ್ದ ಸ್ವಂತ ಮನೆತನದ್ದು ಈ ನಾಗಬನ, ನಾರಾಯಣ ವೈದ್ಯನ ಮುತ್ತಾತ ಕೇರಳದಿಂದ ಬಂದವರಂತೆ. ಅವನಜ್ಜ ನರಹರಿ ವೈದ್ಯ ಕೋಟಾ ಬಳಿಯ ಬೆಟ್ಟಲಕ್ಕಿಯಲ್ಲಿ ನೆಲೆನಿಂತು ಅಲ್ಲಿಯ ಗಣಪತಿ ದೇವಸ್ಥಾನದ ಅರ್ಚಕರಾಗಿದ್ದವರು. ಜೊತೆಗೆ ಅಪ್ಪನಿಗೆ ಗೊತ್ತಿದ್ದ ಜೋತಿಷ್ಯವೂ ಕೈಹಿಡಿದು ನಾಣಿಯ ಅಪ್ಪ ಶ್ರೀಪಾದ ವೈದ್ಯರ ಜೀವನ ಸುಗಮವಾಗಿ ಸಾಗುವಂತಾಗಿತ್ತು. ದೇವಾಲಯ ನೋಡಿಕೊಳ್ಳುವ ಅರ್ಚಕರ ಬದುಕು ಸಾರಾಗವಾಗಿ ಸಾಗಲು ಆ ಊರಿನ ಮುಖ್ಯಸ್ಥರಾದ ಕಾರಂತರು ಮನೆ ಕೊಟ್ಟು, ಒಂದು ಎಕರೆ ಜಮೀನನ್ನು ನೀಡಿ ಶ್ರೀಪಾದರ ಕುಟುಂಬ ಬೇರೆಲ್ಲೂ ಹೋಗದಂತೆ ನೋಡಿಕೊಂಡಿತ್ತು.

ಶ್ರೀಪಾದ ವೈದ್ಯರಿಗೆ ನಾಗ ದೇವತೆಯ ಆರಾಧನೆಯು ಅಪ್ಪನಿಂದ ಬಂದದ್ದು. ಅಪ್ಪ ಮನೆಯ ಪಕ್ಕ ಇದ್ದ ಸಣ್ಣ ಕಾಡಲ್ಲಿ ನಾಗ ಕಲ್ಲುಗಳನ್ನು ಪ್ರತಿಷ್ಠಾಪಿಸಿ ದಿನಾ ಪೂಜೆ ಮಾಡುತ್ತಾ, ಮಡಿ, ಜಪ-ತಪಗಳನ್ನು ಮಾಡುತ್ತಿದ್ದದ್ದನ್ನು ನೋಡಿ ಬೆಳೆದದ್ದರಿಂದ ನಾಗಬನದ ಬಗ್ಗೆ ಭಯ-ಭಕ್ತಿ ಜಾಸ್ತಿಯೇ ಇತ್ತು. ಅಪ್ಪ ಷಷ್ಠಿ, ಪಂಚಮಿಯಲ್ಲಿ ಮಡಿಯಿಂದ ಬನಕ್ಕೆ ಹೋಗಿ ಹೂ, ಹಣ್ಣು, ಸೀಯಾಳ ಮತ್ತು ಅಕ್ಕಿ ನೈವೈದ್ಯಕ್ಕಿಟ್ಟು ಭಕ್ತಿಯಿಂದ ತನ್ನ ಮನೆತನವನ್ನು ಕಾಯುವಂತೆ ಕೇಳಿಕೊಳ್ಳುತ್ತಿದ್ದದ್ದನ್ನು ಶ್ರೀಪಾದ ನೋಡಿಯೇ ಬೆಳೆದದ್ದು. ಒಮ್ಮೆ ಹುಡುಗಾಟಿಕೆಗೆ ಕೇಳಿಯೂ ಇದ್ದ 'ಇದೆಲ್ಲಾ ಮಾಡದಿದ್ದರೆ ಏನಾಗುತ್ತೆ?' ಅಂತ. ಅದಕ್ಕೆ ಅಪ್ಪ 'ನೋಡು ಮಾಣಿ, ನಮ್ಮಪ್ಪನ ಮನೆತನದಲ್ಲಿ ಯಾರೋ ನಾಗಪ್ಪನನ್ನು ಸಾಯಿಸಿದರು ಅಂತ ಅವರ ಕುಟುಂಬದಲ್ಲಿ ಆರು ಜನ ಅಣ್ಣ ತಮ್ಮಂದಿರಿಗೆ ಮಕ್ಕಳಾಗದಿದ್ದಾಗ ದೈವವನ್ನು ಕೇಳಿದ್ರಂತೆ, ಅದು ನಾಗ ದೋಷದ ಬಗ್ಗೆ ಹೇಳಿತಂತೆ, ಅಲ್ಲಿಂದ ನಮ್ಮಪ್ಪನ ಮನೆತನದವರು ನಾಗದೋಷ ಹೋಗಲಾಡಿಸಲು ಕೇರಳಕ್ಕೆ ಹೋಗಿ ಅಲ್ಲಿನ ಪುರೋಹಿತರ ಮೂಲಕ ಢಕ್ಕೆಬಲಿ ಮಾಡಿಸಿದರಂತೆ. ಅದಾದ ಮೇಲೆ ನೋಡು ನಮ್ಮ ಮನೆತನದವರಿಗೆ ಮಕ್ಕಳಾಗಿದ್ದು, ನಾಗದೋಷ ಚಂದ್ರೆ

ಸುಮ್ಮನೆಯಾ? ರಾತ್ರಿ ನಿದ್ದೆಯಲ್ಲೂ ಕಾಣಿಸಿಕೊಳ್ಳುತ್ತೆ ಕಾಂಬು' ಎಂದ ಅಪ್ಪನ ಮಾತಿಗೆ ಶ್ರೀಪಾದ ಬೆಚ್ಚಿ ಬಿದ್ದಿದ್ದ.

ಒಮ್ಮೆ ಶ್ರೀಪಾದ ನಾಗಬನಕ್ಕೆ ಮಡಿಯಿಂದ ನೀರಾಕಲು ಹೋಗಿದ್ದಾಗ ಇದ್ದಕ್ಕಿದ್ದಂತೆ ನಾಗರ ಹಾವೊಂದು ಮರಗಳ ಮರೆಯಿಂದ ಹೊರಬಂದು "ಬುಸ್" ಎಂದಾಗ ಶ್ರೀಪಾದ ತಾಮ್ರದ ಕೊಡಪಾನವನ್ನು ಅಲ್ಲಿಯೇ ಬಿಸಾಕಿ ಓಡಿ ಬಂದಿದ್ದ. ಅಪ್ಪ ವಿಷಯ ತಿಳಿದು ನಾಗ ಬನಕ್ಕೆ ಬಂದು ಕೈ ಮುಗಿದು ನೀ ಕಾಣಿಸಿಕೊಂಡಿದಿ ಅಂದ್ರೆ ನಮ್ಮಿಂದ ಏನೋ ಅಪಚಾರ ಆಗಿರಬೇಕು. ಅದೇನು ಅಂತ ನೀ ತಿಳಿಸು ತಂದೆ ಸರಿ ಮಾಡ್ತಿನಿ' ಎಂದು ನಾಗರ ಕಲ್ಲಿನ ಮುಂದೆ ಬೇಡಿಕೊಳ್ಳುತ್ತಿದ್ದ ಅಪ್ಪನನ್ನು ಅಮ್ಮ ಸಮಾಧಾನಿಸಿ ಕರೆತಂದಿದ್ದಳು. ಶ್ರೀಪಾದನಿಗೆ ಅಂದು ಬಂದ ಜ್ವರ ಹದಿನೈದು ದಿನವಾದರೂ ಕಡಿಮೆ ಆಗಿರಲಿಲ್ಲ. ಅಪ್ಪ ಮಾಡಿಸಿದ ಉಪಚಾರಕ್ಕೂ ಜ್ವರ ಬಗ್ಗದೆ ಇದ್ದಾಗ ದೈವ ಇನ್ನು ಮುಂದೆ ನಿನ್ನ ಮಗನನ್ನು ನಾಗಕನ್ನಿಕೆಯಾಗಿ ನನಗೆ ಮೀಸಲಿಡು ಎಂದು ಹೇಳಿದ್ದನ್ನು ಶ್ರೀಪಾದನ ಅಪ್ಪ ಜಾಚೂ ತಪ್ಪದಂತೆ ಪಾಲಿಸುವ ಮಾತು ನೀಡಿದನಂತೆ. ಹಾಗಾಗಿ ಅಂದಿನಿಂದ ಶ್ರೀಪಾದ ನಾಗಕನ್ನಿಕೆಗೆ ಬೇಕಾಗುವ ಮಂತ್ರ, ಹಾಡುಗಳನ್ನು ಕಲಿತು ಸುತ್ತ ಊರಿನಲ್ಲಿ ಪ್ರಸಿದ್ಧಿಯಾಗಿದ್ದ.

ಶ್ರೀಪಾದನ ನಂತರ ಆ ವಿದ್ಯೆ ನಾರಾಯಣ ವೈದ್ಯನಿಗೂ ಮುಂದುವರೆದಿತ್ತು. ಚಿಕ್ಕಂದಿನಿಂದ ನಾಣಿಗೆ ಅಪ್ಪ ನಾಗಮಂಡಲಗಳಿಗೆ ನಾಗಕನ್ನಿಕೆಯಾಗಿ ಢಕ್ಕೆಯನ್ನು ಬಡಿಯುತ್ತಾ ಹೋಗುತ್ತಿದ್ದದ್ದು ಯಾಕೋ ಇಷ್ಟವಾಗದಿದ್ದರೂ ತಾನೂ ಅದನ್ನು ಮುಂದುವರೆಸಲೇಬೇಕೆಂಬ ನಿಜಸತ್ಯ ಗೊತ್ತಾಗಿತ್ತು. ಅಕ್ಕ ಮದುವೆಯಾಗಿ ಗಂಡನ ಮನೆ ಸೇರಿದ್ದಳು. ಇದ್ದೊಬ್ಬ ಗಂಡು ಸಂತಾನ ನಾಣಿ ಮನೆತನದ ಈ ಆರಾಧನೆಯನ್ನು ಮುಂದುವರೆಸದಿದ್ದರೆ ಹೇಗೆ? ಹಾಗಾಗಿ ಶ್ರೀಪಾದ ತನ್ನ ಮಗನಿಗೆ ಮಾಮೂಲಿ ಶಾಲೆ ಕಾಲೇಜಿಗೆ ಕಳಿಸುವುದರ ಜೊತೆಗೆ ಸಂಸ್ಕೃತ ಪಾಠಶಾಲೆಗೂ ಕಳುಹಿಸುತ್ತಿದ್ದ. ಉಡುಪಿಗೆ ಕಾಲೇಜಿಗೆ ಸೇರಿದ ನಾಣಿ ಪಂಚೆ, ಜುಟ್ಟಿನೊಂದಿಗೆ ಹೋಗುವುದಕ್ಕೆ ಮುಜುಗರ ಪಡುತ್ತಿದ್ದದ್ದನ್ನು ಗಮನಿಸಿ 'ನೋಡು ಮಾಣಿ, ಪ್ರತಿಯೊಬ್ಬರಿಗೂ ಅವರದ್ದೇ ಆದ ರೀತಿ-ರಿವಾಜು ಇರುತ್ತೆ. ಎಲ್ಲಾ ಮನೆತನಕ್ಕೂ ಪೂಜೆ ಮಾಡುವ ಸೌಭಾಗ್ಯ ಸಿಗುವುದಿಲ್ಲ. ನಾಗಬನಕ್ಕೆ ನೀರೆರೆಯುವುದಕ್ಕೂ ಪುಣ್ಯ ಬೇಕು. ನಾಗಬನದ ಕಲ್ಪನೆಯನ್ನೇ ನೋಡು ನಮ್ಮ ಪೂರ್ವಿಕರು ಎಷ್ಟು ಮುಂದಾಲೋಚನೆಯಿಂದ ನಾಗಗಳನ್ನು, ಕಾಡನ್ನು ಉಳಿಸಲು ಯೋಚಿಸಿದ್ರು ಅಂತ ನೀನು ಈ ಕಾಲದಲ್ಲಿ ನಿಂತು ನೋಡು. ರೈತಾಪಿ ಜನಕ್ಕೆ ಇಲಿಗಳದ್ದೇ ಕಾಟ. ಅವನ್ನು ತಿನ್ನುವ ಹಾವುಗಳು ರೈತರ ಮಿತ್ರ ಎಂದರೆ ತಪ್ಪಲ್ಲ. ಅಂತಹ ಹಾವುಗಳನ್ನು ಕೊಂದಾಕಿದ್ರೆ ಇಲಿಗಳು ಬೆಳೆ ಹಾಳುಮಾಡುವುದನ್ನು ತಡೆಯಲು ನಾಗಬನ ಮಾಡಿದ್ರು, ಹತ್ತಿರದ ಪುಟ್ಟ ಕಾಡುಗಳನ್ನು ಉಳಿಸಿಕೊಳ್ಳುವ ಯೋಚನೆಯೂ ಎಂತಹ ಅದ್ಭುತ ನೋಡು. ಮೊದಲೆಲ್ಲಾ ನಾಗ ಕೆತ್ತನೆಯ ಕಲ್ಲು ಇರುತ್ತಿರಲಿಲ್ಲ. ಒಂದು ಕಲ್ಲನ್ನು ಅಲ್ಲಿ ನೆಟ್ಟು ದಿನ ನೀರಾಕಿ, ದೀಪ ಹಚ್ಚಿಟ್ಟು ಬರುವುದನ್ನು ಭಕ್ತಿಯಿಂದ ಶುರು ಮಾಡಿದ್ರು ಮಾಣಿ ನೀ ಹೇಳು...ನೀರಾಕಿದ್ರಿಂದ ಗಿಡ ಬೆಳಿತು, ಕಾಡು ಉಳಿತು.

ನಾಗಪ್ಪನ ಹೆದರಿಕೆಯಿಂದ ಅಲ್ಲಿ ಯಾರೂ ಮರ ಕತ್ತರಿಸ್ತಾ ಇರಲಿಲ್ಲ. ಈಗೆಲ್ಲಾ ವನಮಹೋತ್ಸವ ಅಂತೆಲ್ಲಾ ಆಚರಿಸ್ತಾರಲ್ಲ ಅದು ನಮ್ಮ ದೈನಂದಿನಲ್ಲೇ ಇತ್ತು. ಇಂತಹ ಪವಿತ್ರ ಕಾರ್ಯ ನಮ್ಮ ಮನೆತನದ್ದು. ಇದು ನಿನಗೆ ಮುಜುಗರ ತಂದರೆ, ಅವಮಾನ ಅನ್ನಿಸಿದ್ರೆ ಮಾಡಬೇಡ. ನಾನು ನಾಗಪ್ಪನಿಗೆ ನನ್ನ ಕೊನೆ ಉಸಿರಿನ ತನಕ ನಿನ್ನ ಪೂಜೆ ಮಾಡ್ತಿನಿ ಆಮೇಲಿಂದು ನಿನ್ನ ಇಚ್ಛೆ ಅಂತ ಕೈ ಮುಗಿತಿನಿ' ಅಂತ ಕಣ್ಣಲ್ಲಿ ನೀರು ತುಂಬಿ ಹೇಳಿದ್ದು ಯಾಕೋ ನಾಣಿಗೆ ಸರಿ ಅನಿಸದೆ ಅಪ್ಪನಿಗೆ ಏನೊಂದು ಜವಾಬು ನೀಡದೆ ಹೊರ ಬಂದಿದ್ದ.

ಬಹಳಷ್ಟು ಯೋಚಿಸಿದ ಮೇಲೆ ನಾಣಿಗೆ ತನ್ನ ಪೂರ್ವಿಕರು ನಡೆಸಿಕೊಂಡು ಬಂದಿದ್ದ ಆಚರಣೆ ಬಗ್ಗೆ ಹೆಮ್ಮೆ ಮೂಡಿತ್ತು. ಪ್ರತಿದಿನ ಅಪ್ಪ ಹೇಳದಿದ್ದರೂ ನಾಗಬನಕ್ಕೆ ಹೋಗಿ ಮಡಿಯಿಂದ ಒಂದು ಕೊಡಪಾನ ನೀರಾಕಿ ಅಲ್ಲಿ ಸ್ವಲ್ಪ ಹೊತ್ತು ಕುಳಿತು ಬರುತ್ತಿದ್ದ. ಅವನ ಮನೆಯ ಹತ್ತಿರವೇ ಇದ್ದ ನಾಗಬನದ ಸುತ್ತ ಸಣ್ಣ ಕಾಪೊಂದು ಹಾಕಲಾಗಿತ್ತು. ಅದಕ್ಕೊಂದು ಸಣ್ಣ ಗೇಟು. ಅದನ್ನು ಸರಿಸಿ ಹೋದರೆ ಹತ್ತಾರು ನಾಗಪ್ಪನ ಕಲ್ಲುಗಳು. ಜೋಡಿ ನಾಗರ ಕಲ್ಲು, ಒಂಟಿ ನಾಗರ ಕಲ್ಲುಗಳು, ಅವುಗಳ ಹಿಂಭಾಗಕ್ಕೆ ಸಣ್ಣ ಕಾಡು, ಸಾಗುವಾನಿ, ಅರಳಿ, ಆಲ, ಬೇರೆ ಬೇರೆ ಜಾತಿಯ ನೂರಾರು ಮರಗಳು ಒತ್ತಟ್ಟಿಗೆ ಸೇರಿದ್ದ ಬನ. ಅಲ್ಲಿದ್ದ ಕಟ್ಟೆಯ ಪಕ್ಕದ ದಾಸವಾಳದ ಗಿಡದಲ್ಲಿನ ಹೂವನ್ನು ಕಿತ್ತು ನಾಗರ ಕಲ್ಲಿನ ಮೇಲಿಟ್ಟು, ಸಣ್ಣ ಗೂಡಲ್ಲಿದ್ದ ಮಣ್ಣಿನ ಹಣತೆಯನ್ನು ಹಚ್ಚಿ ಕೈಮುಗಿದು ಕಟ್ಟೆಯಲ್ಲಿ ಸುಮಾರು ಹೊತ್ತು ಕುಳಿತುಕೊಳ್ಳುವುದು ನಾಣಿಯ ದಿನಚರಿಯಾಗಿತ್ತು. ಹತ್ತಾರು ಹಕ್ಕಿಗಳ ಕಲರವ, ನುಣ್ಣಗೆ ಬೀಸುವ ತಂಗಾಳಿ, ಮರದ ಶಬ್ದ ಒಂದು ರೀತಿಯ ಆಹ್ಲಾದ ವಾತವರಣಕ್ಕೆ ನಾಣಿ ಕಾಲೇಜನ್ನೇ ಮರೆತು ಕುಳಿತು ಬಿಡುತ್ತಿದ್ದ. ಆಗೆಲ್ಲಾ ಅಮ್ಮ ನೀರು ದೋಸೆ ತಣ್ಣ ಆಯ್ತು ಎಂತ ಮಾಡ್ತಿದಿಯೋ ಅಂದಾಗಲೇ ನಾಣಿ ಹೊರಟು ಬರುತ್ತಿದ್ದ.

'ನಾಣಿ, ನಿನ್ನಮ್ಮನಿಗೆ ನನ್ನನ್ನು ಕಾಯುವುದು ಬೇಡ ಅಂತ ಹೇಳು. ನಾನು ಬರೋದು ತಡ ಆಗಬಹುದು' ಇನ್ನು ಮಾತೇ ಮುಗಿದಿರಲಿಲ್ಲ ಸರಸಮ್ಮ ಪಕ್ಕದ ಮನೆಯಿಂದ ಹೂಬತ್ತಿ ಬುಟ್ಟಿ ಹಿಡಿದೇ ಒಳಬಂದು ಏನ್ ಕೆಲಸವೋ ಎಂಬಂತೆ ಗಂಡನಿಗೆ ಕೈ ತಿರುಗಿಸಿದಳು. ನಾಣಿ ತನ್ನ ಮೊಬೈಲ್ ನೋಡುತ್ತಾ ಕುಳಿತಿದ್ದರೂ ಅವನ ಕಿವಿಯೆಲ್ಲಾ ಅಪ್ಪ ಅಮ್ಮನ ಸಂಭಾಷಣೆ ಕಡೆಗೆ ಇತ್ತು. 'ಮುಂದಿನ ತಿಂಗಳು ಕುಂದಾಪುರದಲ್ಲಿ ನಾಗಮಂಡಲ ಇದೆ. ಯಾರೋ ಮುಂಬೈ ಕಡೆಯವರಂತೆ ಅಡಿಗರು. ಅದಕ್ಕೆ ಮಾತುಕತೆ ಹೋಗಿ ಬರುವೆ' ಎಂದ ಅಪ್ಪನಿಗೆ ಅಮ್ಮ ಇತ್ತೀಚೆಗೆ ನಾಗಸೇವೆ ಮಾಡಿಸೋರು ಜಾಸ್ತಿ ಆಗಿದ್ದಾರೆ ಅಲ್ವಾ?' ಎಂದು ಪ್ರಶ್ನಿಸಿದಳು. 'ಜಗತ್ತಲ್ಲಿ ಪಾಪ ಹೆಚ್ಚಾದಂತೆ ದೈವದ ಮೊರೆ ಹೋಗೋದು ಜಾಸ್ತಿ ಆಗಿದೆ. ಇವತ್ತು ಮಾತುಕತೆ ಮುಗಿಸಿ ಅಡ್ವಾನ್ಸ ತಗೊಂಡು ಬರ್ತಿನಿ' ಎಂದು ಅಪ್ಪ ತನ್ನ ಜುಟ್ಟು ಗಂಟು ಕಟ್ಟುತ್ತಾ 'ಮಾಣಿ ನೀನೂ ಈ ಸಲ ಕುಂದಾಪುರಕ್ಕೆ ಬಾ ಮುಂದಿನ ಸಲದಿಂದ ನೀನೇ ಸೇವೆ ಮಾಡುವಿಯಂತಿ, ನನಗೂ ವಯಸ್ಸಾತು. ಮೈಕೈ ನೋವು. ಹಾರ್ಟ ಅಪರೇಷನ್ ಆದ ಮೇಲೆ ಮೊದಲಿನಂಗೆ

ಇಡೀ ರಾತ್ರಿ ನಿದ್ದೆಗೆಡುವುದು ಕಷ್ಟ ಆಗ್ತಾ ಇದೆ' ಎಂದು ನಾಣಿಯ ಪ್ರತಿಕ್ರಿಯೆಗೂ ಕಾಯದೆ ಹೊರ ಹೊರಟ.

ಕುಂದಾಪುರಕ್ಕೆ ಹೋಗಲು ಮೂರು ದಿನ ಮುಂಚೆಯಿಂದಲೇ ಅಪ್ಪನ ಅನುಷ್ಠಾನ ಪ್ರಾರಂಭವಾಗಿತ್ತು. ಒಂದು ಹೊತ್ತು ಮಾತ್ರ ಊಟ ಮಾಡುವುದು, ಗಾಯತ್ರಿ ಮಂತ್ರ, ಯಕ್ಷಿ ಕೃಪೆ, ಜೊತೆಗೆ ಮಡಿಯೂ ಹೆಚ್ಚು. ಆಗೆಲ್ಲಾ ಅಮ್ಮನ ಜೊತೆ ಅಪ್ಪ ಮಲಗುತ್ತಲೂ ಇರಲಿಲ್ಲ. ಮನೆಯಲ್ಲಿ ಮುಟ್ಟು ಮೈಲಿಗೆ ಆಗುವಂತಿರಲಿಲ್ಲ. ವಾಕ್ ಸಿದ್ಧಿ, ಮೇದಾ ಸಿದ್ಧಿಗಾಗಿ ಮೂರೂ ದಿನವೂ ಅಪ್ಪ ತಪ್ಪಸ್ಸಿನಂತೆ ನಾಗಕನ್ನಿಕೆಯ ತಯಾರಿಯಲ್ಲಿರುತ್ತಿದ್ದ. ಇದನೆಲ್ಲಾ ಚಿಕ್ಕಂದಿನಿಂದ ನೋಡಿ ಬೆಳೆದಿದ್ದ ನಾಣಿಗೆ ಹೊಸದೇನೂ ಅನ್ನಿಸುತ್ತಿರಲಿಲ್ಲ. 'ನಾಣಿ ಹೊರಡುವಾ? ಕಾ ಬಂತಾ ನೋಡು' ಎಂದ ಅಪ್ಪನಿಗೆ "ಇನ್ನೂ ಇಲ್ಲ' ಎನ್ನುತ್ತಲೇ ಅಪ್ಪನ ನಾಗಕನ್ನಿಕೆಯ ವಸ್ತ್ರ, ಆಭರಣದ ಸೂಟ್‌ಕೇಸನ್ನು ಪಕ್ಕಕ್ಕೆ ತಂದಿಟ್ಟು ರಸ್ತೆಯ ಕಡೆ ದೃಷ್ಟಿ ಹಾಯಿಸಿದ. `ನಾಣಿ ನಾನು ಬನಕ್ಕೆ ಹೋಗಿ ಈಗ ಬರುವೆ" ಎಂದ ಅಪ್ಪ ಬಿರಬಿರನೆ ಗಾಳಿಯಂತೆ ಹೋಗಿಬಂದ. ಮುಖವೆಲ್ಲಾ ಆಯಾಸದಿಂದ ಬೆವರಿಳಿಯುತ್ತಿದ್ದದ್ದನ್ನು ತನ್ನ ಶಲ್ಯದಿಂದ ಒರಸಿಕೊಂಡು 'ನಡಿ ಹೊರಡುವಾ' ಎಂದು ಕಾರು ಹತ್ತಿದ.

ಅಲ್ಲಿಗೆ ತಲುಪುವುದರಲ್ಲಿ ನಾಗಬನದ ಬಳಿಯೇ, ಎತ್ತರದಲ್ಲಿ ಕಟ್ಟುತ್ತಲ್ಲಿದ್ದ ಆಕರ್ಷಕ ಮಂಟಪ ಗಮನ ಸೆಳೆಯಿತು. ಕಾರಿನ ಬಾಗಿಲು ತೆಗೆದ ಅಡಿಗರಿಗೆ 'ಇವ ನನ್ನ ಮಗ ನಾರಾಯಣ, ಉಡುಪಿಯಲ್ಲಿ ಕಾಲೇಜು ಕಲಿತಾ ಇದ್ದಾನೆ' ಎನ್ನುತ್ತಾ ಕೈಮುಗಿದು ಕೆಳಗಿಳಿದ ವೈದ್ಯರಿಗೆ ಅಡಿಗರು ಕಾಲುಮುಟ್ಟಿ ನಮುಸ್ಕಾರ ಮಾಡಿದರು. ಈ ಕಡೆ ಇಳಿದ ನಾಣಿಗೂ ಅವರ ಕುಟುಂಬದವರು ಬಂದು ಕಾಲಿಗೆರಗಿದ್ದು ಮುಜುಗರ ಉಂಟಾಯಿತು. "ಅಯ್ಯೋ ಇದೆಲ್ಲಾ ನನಗೇಕೆ' ಎನ್ನುತ್ತಾ ಹಿಂದೆ ಸರಿದ ನಾಣಿಯನ್ನು ಬಿಡದೆ ಅಡಿಗರ ಕುಟುಂಬದವರು ಚಿಕ್ಕವರು ದೊಡ್ಡವರು ಎನ್ನದೆ ಕಾಲು ಮುಟ್ಟಿ ನಮಸ್ಕರಿಸಿದರು. ಇವಳು ಮೀನಾ ಅಮೇರಿಕಾದಿಂದ ಇದಕ್ಕಾಗೇ ಬಂದಿದ್ದಾಳೆ' ಎಂದು ಅಡಿಗರು ಶ್ರೀಪಾದರಾಯರಿಗೆ ಪರಿಚಯಿಸಿದರು. ನಾಣಿ ಆಶ್ಚರ್ಯದಿಂದ ಅವಳನೊಮ್ಮೆ ನೋಡಿದ. ಸ್ಲಿವ್‌ಲೇಸ್ ಚೂಡಿದಾರ ಹಾಕಿ, ಬಾಜ್ ಮಾಡಿದ ಮಹಿಳೆ ದೂರದಿಂದಲೇ ಹಾಯ್ ಎಂದು ಕೈಯಾಡಿಸಿದಳು. ರಾಯರ ಕಾಲಿಗೆ ಬೀಳುವಂತೆ ಕಣ್ಣಸನ್ನೆಯನ್ನು ಆಕೆ ತಿರಸ್ಕರಿಸದೆ ದೂರದಿಂದಲೇ ನಮಸ್ಕರಿಸುವ ಶಾಸ್ತ್ರ ಮಾಡಿದಳು. ರಾತ್ರಿ ಪ್ರಾರಂಭವಾಗಲಿದ್ದ ನಾಗಮಂಡಲಕ್ಕೆ ಅಡಿಗರ ಕುಟುಂಬದಿಂದ ತುಂಬಾ ಜನ ಬಂದಿದ್ದರು.

'ಅಪ್ಪ ಈ ಸೂಟ್ಕೇಸ್ ಎಲ್ಲಿ ಇಡಲಿ' ನಾಣಿ ಪ್ರಶ್ನೆಗೆ 'ಅಲ್ಲೇ ಶ್ಯಾಮಭಟ್ಟರ ಮನೆಗೆ ಕೊಡು' ಎಂದ ವೈದ್ಯರು ಬನದ ಕಡೆ ಮುಖ ಮಾಡಿದರು. ಇಡೀ ವಾತಾವರಣ ಜಾತ್ರೆಯ ಸಡಗರ. ಮೈಕ್‌ನಲ್ಲಿ "ಮೂಷಿಕ ವಾಹನ ಮೂಜಗ ಸತ್ಯ....'ಹಾಡು ತೇಲಿ ಬರುತ್ತಿತ್ತು. ಅಪ್ಪ ಜನಜಂಗುಳಿಯಲ್ಲಿ ಮರೆಯಾಗಿದ್ದರು. ನಾಣಿಗೆ ಏನೂ ಮಾಡಲು ತೋಚದೆ ಮಂಟಪದ ಬಳಿ ಹೋದ. 'ಹೋಮ್ ನೀ ಶ್ರೀಪಾದ ವೈದ್ಯರ ಮಗ ಅಲ್ಲೋ' ಎನ್ನುವ ಮಾತಿಗೆ ತಲೆ ಅಲ್ಲಾಡಿಸಿ ಅಲ್ಲೆ ಕುಳಿತ, ವಿವಿಧ ಬಣ್ಣಗಳಲ್ಲಿ

ನಾಗಮಂಡಲದ ರಂಗೋಲಿ ಅಂತಿಮ ಹಂತ ತಲುಪುತ್ತಿತ್ತು. ಹದಿನಾರು ಪವಿತ್ರ ಗಂಟುಗಳನ್ನು ರಂಗೋಲಿಯಲ್ಲಿ ಕಲಾತ್ಮಕವಾಗಿ ಬಿಡಿಸುವ ಪುರೋಹಿತ ವರ್ಗವೇ ಅಲ್ಲಿತ್ತು. ಅಷ್ಟರಲ್ಲಿ ನಾಗಪಾತ್ರಿ ಬಂದು ನಾಗಮಂಡಲವನ್ನೇ ನೋಡುತ್ತಾ ನಿಂತರು. ಸುತ್ತ ಹೊರೆ ಕಾಣಿಕೆಗಳನ್ನು ಸರಿಯಾಗಿ ಇರಿಸಿದ್ದಾರಾ? ಕಳಸಗಳು ಸರಿ ಇವೆಯಾ ಎಂದು ಪರಿಶೀಲಿಸುತ್ತಿದ್ದರು. ಚೂಪಾದ ಮೂಗು, ತೀಕ್ಷ್ಣ ಕಣ್ಣು, ಅಗಲ ಹಣೆ, ಉದ್ದ ಕೂದಲಿನ ನಾಗಪಾತ್ರಿ ಹಿಂಗಾರವನ್ನು ಮುಖಕ್ಕೆ ಒತ್ತಿಕೊಂಡಾಗ ನಿಜವಾದ ಹಾವಂತೆ ಬುಸುಗುಟ್ಟುತ್ತಾ ನ ಚಲನೆ, ವೇಗ, ಸುತ್ತಲ ಸಂಗೀತಕ್ಕೆ ಹಾವೇ ಬರುವ ದೃಶ್ಯವನ್ನು ಕಣ್ಣ ಮುಂದೆ ತಂದುಕೊಂಡ ನಾಣಿ, ಬಂದಂತೆ

“ನಾಣಿ ಆ ಬಟ್ಟೆ ತೆಗೆದುಕೊಡು' ಎಂದ ಅಪ್ಪನಿಗೆ ಸೂಟ್‌ಕೇಸ್‌ನಿಂದ ನಾಗಕನ್ನಿಕೆಯ ವಸ್ತ್ರಗಳನ್ನು ಒಂದೊಂದಾಗಿ ತೆಗೆದುಕೊಡಲಾರಂಭಿಸಿದ. ಕೆಂಪು ಬಣ್ಣದ ಮಿರುಗುವ ಪಂಚೆ ಅದಕ್ಕೊಂದು ಕಲಾಪತ್ತು, ಮೇಲಿನ ಶರ್ಟು ಕೂಡ ಚಿನ್ನದ ಬಣ್ಣದ ಮಿರುಗುವಂತದ್ದೆ. ತಲೆಗೊಂದು ಪೇಟ, ಅದಕ್ಕೊಂದು ಚಿನ್ನದ ಪದಕ. ಸಣ್ಣ ನವಿಲುಗರಿಯೊಂದನ್ನು ಇತ್ತೀಚಿಗೆ ಸಿಗಿಸಿಕೊಳ್ಳುತ್ತಿದ್ದ. ಸೊಂಟಕ್ಕೊಂದು ಬೆಳ್ಳಿಯ ಡಾಬು, ಎರಡೂ ಕೈಗೆ ಎಡೆ ಎತ್ತಿದ ನಾಗರ ಹಾವಿನ ತೋಳುಬಂಧಿ, ಕೊರಳಿಗೆ ನಾಲ್ಕೈದು ಸರಗಳನ್ನು ಹಾಕಿಕೊಂಡ. ಕಾಲಿಗೆ ಗೆಜ್ಜೆ, ಮುಂಗೈಗೆ ತೋಡವನ್ನು ಹಾಕಿಕೊಂಡು ಸರಿ ಇದೆಯಾ ಎಂಬಂತೆ ನೋಡಿದ. ಅಲ್ಲಿದ್ದ ಸಣ್ಣ ಕನ್ನಡಿ ನಾಗಕನ್ನಿಕೆಯನ್ನು ಹಿಡಿದಿಡಲು ಸೋತಿತ್ತು. ಮುಖಕ್ಕೆ ಅಪ್ಪನೇ ಅರ್ಧಚಂದ್ರವನ್ನು ಕೆಂಪಿನಲ್ಲಿಟ್ಟು, ಕೆಳಗೆ ಬಿಳಿಯ ಚುಕ್ಕೆ, ಅದರ ಕೆಳಗೆ ಮತ್ತೊಂದು ಕೆಂಪಿನ ಸಣ್ಣ ಕುಂಕುಮವಿಟ್ಟು ಮತ್ತೊಮ್ಮೆ ಅಂಗೈ ಅಗಲದ ಕನ್ನಡಿಯಲ್ಲಿ ತೃಪ್ತನಾಗಿ ನೋಡಿಕೊಂಡ. ಮಂಟಪದಿಂದ ಮೇಳದ ಇಂಪಾದ ಗಾನ ಕೇಳಿ ಬರುತ್ತಿತ್ತು. ಎಲ್ಲಾ ಸರಿ ಇದೆಯಾ ಪರೀಕ್ಷಿಸಿದ ಅಪ್ಪ ಢಕ್ಕೆಯನ್ನು ಬಲಗೈಯಲ್ಲಿ ಹಿಡಿದು ಒಮ್ಮೆ ಬಾರಿಸಿ ನೋಡಿದ. ಅದರ “ದಬ್ ದಬ್' ಶಬ್ದ ಸರಿ ಇಲ್ಲದನ್ನು ನೋಡಿ ಸುತ್ತಲ ದಾರಗಳನ್ನು ಸರಿ ಮಾಡಿ ಮತ್ತೆ ಮತ್ತೆ ಸರಿಪಡಿಸಿದ.

ನಾಗಮಂಡಲದ ಮಂಟಪದ ಸುತ್ತ ಸಾವಿರಾರು ಜನ ಜಾಗ ಹಿಡಿದು ಕುಳಿತಿದ್ದರು. ಅಪ್ಪ ಗಣಪತಿ ಗುಡಿಗೆ ಹೋಗಿ ನಮಸ್ಕಾರ ಮಾಡಿ ಬಂದು, ಬನಕ್ಕೆ ಹೋಗಿ ಹತ್ತು ನಿಮಿಷ ಧ್ಯಾನಸ್ಥನಾಗಿ ಮಂಡಲಕ್ಕೆ ಬರುವ ಮುಂಚೆ ನಾಣಿಯನ್ನು ಕರೆದು “ಈ ಸಲ ಚೆನ್ನಾಗಿ ನೋಡಿಕೊ. ಮುಂದಿನ ಸಲದಿಂದ ನಾಗಕನ್ನಿಕೆ ವೇಷ ನೀನೇ ಹಾಕಬೇಕು. ನನಗೂ ವಯಸ್ಸಾಯ್ತು. ಮುಂದಿನದೆಲ್ಲಾ ನಿನ್ನದೇ ಎಂದು ಹೇಳಿದ್ದು ನಾಣಿಗೆ ಕಿವಿಯಲ್ಲಿ ಗುಂಜಿಸುತ್ತಿರುವಂತೆಯೇ ನಾಗಪಾತ್ರಿ, ನಾಗಕನ್ನಿಕೆ ಸಜ್ಜಾಗಿದ್ದಾರೆಂದು ತಿಳಿಸಲು ವಾಲಗದವರ ವಾದನ ಪ್ರಾರಂಭವಾಯಿತು. ಅಡಿಗರ ಕುಟುಂಬ ಹೋಗಿ ದೈವದ ಮುಂದೆ ತಮ್ಮ ಸಂಕಷ್ಟವನ್ನು ಹೇಳಿಕೊಂಡು ಅದನ್ನು ನಿವಾರಿಸಿಕೊಡುವಂತೆ ಕೇಳಿಕೊಂಡು ಕೈ ಮುಗಿದು ಬಂದು ಕುಳಿತರು. ನಾಗಪಾತ್ರಿ ಪ್ರಾರ್ಥನೆ ಸಲ್ಲಿಸುತ್ತಿದ್ದಂತೆ, ಪುರೋಹಿತ ವರ್ಗವೆಲ್ಲಾ ಭಕ್ತಿಯಿಂದ ನಮಿಸಿದರು. ನಾಗಪಾತ್ರಿಯ ಕೈಯಲ್ಲಿ ಪುರೋಹಿತರು ಅಡಿಕೆ ಹೂಗಳನ್ನು ಇಟ್ಟರು. ಮತ್ತೊಬ್ಬರು ತೀರ್ಥವನ್ನು ಸಿಂಗಾರದ

ಮೇಲಾಕಿದರು. ಮಂತ್ರ ಜಪಿಸುತ್ತಾ ಪಾತ್ರಿ ಸಿಂಗಾರವನ್ನು ಮುಖಕ್ಕೆ ಉಜ್ಜಿಕೊಂಡು ಮತ್ತೆ ಕೈಚಾಚಿದಾಗ ಮತ್ತೆ ಸಿಂಗಾರ ಕೈಗಿಟ್ಟರು ಪಾತ್ರಿ ಮುಖಕ್ಕೆ ಮತ್ತಷ್ಟು ಬಲವಾಗಿ ಉಜ್ಜಿಕೊಂಡರು. ಅವರ ಕಣ್ಣಿನ ಸುತ್ತ, ಹಣೆ, ಮೂಗು ಸಿಂಗಾರದ ಅಲಂಕಾರದಿಂದ ವಿಶೇಷವಾಗಿ ಕಾಣಲಾರಂಭಿಸಿತ್ತು. ಬಿಚ್ಚಿದ ಕೂದಲು ಅದಕ್ಕೆ ಮೆರಗು ನೀಡುತ್ತಿತ್ತು. ನಾಗಮಂಡಲದ ಜಗಲಿಗೆ ನಾಗಪಾತ್ರಿ ಮತ್ತು ಕನ್ನಿಕೆ ಪ್ರವೇಶ ಆಗುತ್ತಲೇ ಜನ ಕಾತರ `ಭಯದಿಂದ ನೋಡಲಾರಂಭಿಸಿದರು. ನಾಣಿ ಇದನ್ನು ಚಿಕ್ಕಂದಿನಿಂದ ನೋಡಿದ್ದನಾದ್ದರಿಂದ ಮಂಟಪದಿಂದ ದೂರ ಹೋಗಿ ನಿಂತ.

ದೂರದಲ್ಲಿ ನಿಂತರೂ ಢಕ್ಕೆ ಶಬ್ದ ಸಣ್ಣಗೆ ಕೇಳುತ್ತಲೇ ಇತ್ತು. ಅಲ್ಲೇ ಇದ್ದ ಕಟ್ಟೆ ಮೇಲೆ ಕುಳಿತವನಿಗೆ ರಾತ್ರಿ ಕಳೆಯುವುದು ಹೇಗೆ ಎಂದು ತಿಳಿಯದೆ ಸುತ್ತಲ ಆಕಾಶ ನೋಡಿದ. ನೀಲಾಕಾಶದ ತುಂಬೆಲ್ಲಾ ಮಿನುಗುವ ನಕ್ಷತ್ರ, ಸುಂದರ ಚಂದಿರ, ತಾರಾಮಂಡಲ...ಆಕಾಶ ಕಾಯಗಳ ಬಗ್ಗೆ ಚಿಕ್ಕಂದಿನಿಂದ ಕುತೂಹಲವಿದ್ದ ನಾಣಿ ಸೈನ್ಸ ತಗೋತಿನಿ ಅಂದಿದ್ದಕ್ಕೆ ಅಪ್ಪ ಅದೆಲ್ಲಾ ಎಂತ ಬೇಡ ಬಿ.ಎ. ಸಂಸ್ಕೃತ ಮಾಡು, ಬೇಕಾದ್ರೆ ಎಂ.ಎ.ನೂ ಮಾಡು ಅಂತ ಅವನ ಆಸೆಯ ಗಾಳಿಪಟದ ಸೂತ್ರ ಕಿತ್ತಿದ್ದರು.

'ಯೂ ಸಿ ಜಾನು, ನಾನು ಯು.ಎಸ್.ನಿಂದ ಬರಲ್ಲ ನನಗೆ ಇದರಲೆಲ್ಲಾ ನಂಬಿಕೆ ಇಲ್ಲ ಅಂತ ಅಂದ್ರು ಅಮ್ಮ ಕೇಳಲಿಲ್ಲ. ಅದೇನೋ ನಾಗದೋಷವಂತೆ...ಬುಲ್‌ಶಿಟ್. ಇದನಲ್ಲಾ ನೀನು ನಂಬ್ತಿಯಾ?' 'ನಂಬುವುದು ಬಿಡುವುದು ಪರ್ಸನಲ್ ಮೀನಾ ಎಂದ ಜಾನಕಿಗೆ, 'ನೋಡು ಅಲ್ಲಿ ಬಿಡಿಸಿದ್ದ ರಂಗೋಲಿ ಆರ್ಟ ಬ್ಯೂಟಿಫುಲ್, ಅಲ್ಲಿ ಕುಣಿತ್ತಿದ್ದಾರಲ್ಲಾ ಅದೂ ಚಂದವೇ. ಆರ್ಟ ಅಂದ್ರೆ ನಮ್ಮದೇ. ಆದ್ರೆ ಅದನ್ನು ನೋಡಿ ಖುಷಿ ಪಡಬೇಕೆ ವಿನಹಃ ಹೆದರಿಸೋದಲ್ಲಾ ನಿನೇನಂತಿ?' 'ನನಗೆ ಅದೆಲ್ಲಾ ಗೊತ್ತಿಲ್ಲ ನಿಮ್ಮ ದೊಡ್ಡಮ್ಮನ ಸ್ವಭಾವ ನಿಂಗೇ ಗೊತ್ತಲ್ಲ? ಬರದಿದ್ರೆ ಹಂಗಾಗುತ್ತೆ ಹಿಂಗಾಗುತ್ತೆ ಅಂತ ಹೆದರಿಸಿದ್ರು ಅದಕ್ಕೆ ಬಂದೆ. ನನಗೆ ಕಂಪನಿಯಲ್ಲಿ ರಜ ಕೂಡ ಸರಿ ಸಿಗಲ್ಲ. ಇದೆಲ್ಲಾ ಹೇಳಿದ್ರೆ ಇವರಿಗೆ ಅರ್ಥ ಆಗಲ್ಲ' ಎಂದ ಜಾನಕಿಗೆ ನಮ್ಮ ಅಮ್ಮನ ಪ್ರಕಾರ ನನಗೆ ಮದುವೆ ಆಗದೆ ಇರಲು ನಾಗನದ್ದೇ ಕಾಟ ಅಂತೆ. ಮೂವತ್ತು ಮದುವೆ ವಯಸ್ಸಲ್ಲ ಅಂತ ನಾನು, ಮುದುಕಿ ಆಗ್ತಿದ್ದೀ ಅಂತ ಅವಳು. ನಾನು ವರ್ಜಿನಿಯಾದಲ್ಲಿ ಲಿವಿಂಗ್ ಟು ಗೆದರ್ ಇದ್ದೀನಿ. ನನ್ನ ಬಾಯ್‌ಫ್ರೆಂಡ್ ಸಿಜುಗೂ ಮದ್ದೆಯ ಬಂಧ ಬೇಡ, ಅದು ನನಗೂ ಬೇಡ, ಬೇಕಾದಾಗ ದೇಹ ಸೇರ್ತಾವೆ ಹಾವಿನಂತೆ, ಬೇಡಾದಾಗ ಗೆಳೆಯರಂತೆ ತಬ್ಬಿ ಮಲಗ್ತಿವಿ. ಮಕ್ಕಳ ಯೋಚನೆ, ಮದುವೆಯ ಬಂಧನ, ಗಂಡ- ಹೆಂಡತಿಯ ನಿಷ್ಠೆ, ಯಾವುದೂ ಇಲ್ಲ. ನನಗೆ ಬೇಕಾದ್ರೆ ವೀಕೆಂಡ್‌ಗೆ ಬೇರೊಬ್ಬನೊಂದಿಗೆ ಸಮಯ ಕಳೆದು ಬರ್ತಿನಿ ಅದಕ್ಕೆ ಅವನದೂ ಅಕ್ಷೇಪಣೆ ಇಲ್ಲ. ನನ್ನದೂ ಇಲ್ಲ. ಇದೆಲ್ಲಾ ಅಮ್ಮನಿಗೆ ಬಿಡಿಸಿ ಹೇಳುವುದು ಹೇಗೆ? ಮದುವೆಯಾದ್ರೆ ಮಾತ್ರ ಹೆಣ್ಣಿಗೆ ಮುಕ್ತಿ ಅಂತ ತಿಳಿದಿರೋ ಜೀವ ಅದು. ಅದನ್ನು ಇಲ್ಲ ಅನ್ನೋಲ್ಲ, ತಪ್ಪು ಅನ್ನೋಲ್ಲ. ಆದ್ರೆ ನನ್ನ ಬದುಕು ನನ್ನ ದಾರಿ. ಮದುವೆ ಆಗಬೇಕು ಅಂದ್ರೆ ಆಗ್ತಿನಿ. ಮಕ್ಕಳು ಬೇಕು ಅಂದ್ರೂ ಮಾಡಕೋತಿನಿ ಅದಕ್ಕೆ ಮದುವೆನೇ ಆಗಬೇಕು ಅಂತ ಏನಿಲ್ಲ. ನೀನೆಂತಿ?'

ಎಂದ ಅವಳ ಮಾತಿಗೆ 'ನಾನೇನೆಳಲಿ? ಅವರುಗಳ ಯೋಚನೆನೇ ಬೇರೆಯದು. ಅವರಿಗೆ ಇದೆಲ್ಲಾ ಬಿಡಿಸಿ ಹೇಳುವುದು ಹೇಗೆ?' ಇವರಿಬ್ಬರು ಮಾತಾಡುವಾಗಲೇ ಮೊಬೈಲ್ ರಿಂಗಾಯಿತು. “ಅಮ್ಮ ಅಲ್ಲಿ ಬೋರು ಅಂತ ನಾನು, ಜಾನು ಇಲ್ಲಿ ದೂರದಲ್ಲಿ ಇದ್ದೀವಿ. ಆಯ್ತು ಬರ್ತಿವಿ ಫೋನ್ ಇಡು' ಎಂದು ಮೀನಾ ಅಮ್ಮನ ಬಳಿ ಸ್ವಲ್ಪ ಒರಟಾಗಿಯೇ ಮಾತನಾಡಿ 'ಜಾನು ಹೋಗುವ ನಡಿ ಇಲ್ಲದಿದ್ರೆ ಅಮ್ಮ ಭೂಮಿ ಆಕಾಶ ಒಂದು ಮಾಡ್ತಾಳೆ' ಎಂದು ಹೊರಟರು.

ಆಕಾಶ ಕಾಯಗಳ ಬಗ್ಗೆ ಯೋಚಿಸುತ್ತಾ ಕತ್ತಲೆಯಲ್ಲಿ ಕುಳಿತಿದ್ದ ನಾಣಿಗೆ ಅನತಿ ದೂರದಲ್ಲಿ ಯಾರೂ ಇಲ್ಲ ಎಂಬಂತೆ ಮಾತನಾಡುತ್ತಿದ್ದ ಹೆಂಗಸರಿಬ್ಬರ ಮಾತುಗಳು ಹೊಸ ಲೋಕವೊಂದನ್ನೆ ತೆರೆದಿಟ್ಟಿತ್ತು. ಮದುವೆಯಿಲ್ಲದೆ ಗಂಡು-ಹೆಣ್ಣು ಜೊತೆಯಿರುವುದು, ಮದುವೆಯಾಗದೆ ಮಕ್ಕಳನ್ನು ಮಾಡಿಕೊಳ್ಳುವುದು ಇದೆಲ್ಲಾ ಅವನ ಪರಿಧಿ ಆಚೆಯ ವಿಚಾರಗಳಾಗಿದ್ದವು. ಸಂಪ್ರದಾಯ ನೆಲೆಯ ನಾಣಿ ಈ ಮಾತುಗಳನ್ನು ಕೇಳಿಸಿಕೊಳ್ಳುತ್ತಲೇ ಇಂದಿನ ಹೆಣ್ಣುಗಳ ಮನೋಭಾವವೂ ಬದಲಾಗುತ್ತಿದೆ ಎಂದು ಯೋಚಿಸಿ ಕಾಲ ಕೆಟ್ಟೋಯ್ತು ಎಂದುಕೊಳ್ಳುತ್ತಾ ಅಲ್ಲಿಂದ ಹೊರಟ.

'ನಾಣಿ ಮುಂದಿನ ವಾರ ಬೈಂದೂರಿನಲ್ಲಿ ಹಾಲಿಟ್ಟು ಸೇವೆ ಇದೆಯಂತೆ. ನೀನೆ ಬರ್ತಿ ಅಂತ ಪಾತ್ರಿಗೆ ಹೇಳಿನಿ ಹೋಗಿಬಾ' ಎಂದ ಅಪ್ಪನ ಮಾತಿಗೆ ನಾಣಿ 'ನಾನ...'ಎಂದು ರಾಗವೆಳೆದ. 'ಮಾಣಿ...ಅದೇನು ನಾಗಮಂಡಲ ಅಲ್ಲಾ, ಢಕ್ಕೆಬಲಿ, ಒಂದು ಪವಿತ್ರ ಗಂಟನ್ನು ಬಿಡಿಸೋದು. ಬಹಳ ಹೊತ್ತೇನೂ ಆಗಲ್ಲ. ರಾತ್ರಿ ಎಂಟಕ್ಕೆ ಶುರು ಆಗಿ ಹನ್ನೆರಡಕ್ಕೆ ಮುಗಿಯುತ್ತೆ ನಾನೆಲ್ಲಾ ಮಾತಾಡಿದ್ದೀನಿ, ಇಪ್ಪತ್ತು ಸಾವಿರ ಕೊಡ್ತಾರೆ ಹೋಗಿ ಬಾ' ಎಂದ ಅಪ್ಪನ ಮಾತಿಗೆ ಎದುರಾಡದೆ ಆಯ್ತು' ಎಂದ. ಅನುಷ್ಠಾನದಲ್ಲಿದ್ದು ಬೈಂದೂರಿಗೆ ಹೋದಾಗ ಅಲ್ಲಿನ ಹಿರಿಕಿರಿಯರೆಲ್ಲಾ ಕಾಲಿಗೆ ಬಿದ್ದಾಗ ಹೇಗೆ ಹೇಗೋ ಆದರೂ ಅಪ್ಪನೇ ನಿಂತು ಕನ್ನಿಕೆ ರೂಪ ನೀಡಿ ಧೈರ್ಯ ಹೇಳಿದ್ದ. 'ಮಾಣಿ ಈ ಕಡೆ ಒಂದೆರೆಡು ಮನೆತನದವರು ಮಾತ್ರ ಕನ್ನಿಕೆ ಮಾಡೋದು. ಎಲ್ಲರಿಗೂ ಇಂತಹ ಪುಣ್ಯ ಲಭಿಸಲ್ಲ. ಯಾವ ಜನ್ಮದ ಪುಣ್ಯವೋ ನಾಗರ ಸೇವೆ ಮಾಡಲು ನಮ್ಮ ಮನೆತನದವರಿಗೆ ಸಿಕ್ಕಿದೆ. ಭಕ್ತಿ ಇರಲಿ, ನಾನು ಎಂಬ ಅಹಂಕಾರ ಬೇಡ, ಭಕ್ತಿ ಇದ್ದರೆ ಶಕ್ತಿ ತಾನಾಗೇ ಬರುತ್ತೆ ಅಂತಹ ಶಕ್ತಿ ಕೊಡು ಅಂತ ಗಣಪತಿಗೆ ನಮಸ್ಕರಿಸಿ ಪ್ರಾರಂಭಿಸು' ಎಂದ ಅಪ್ಪನ ಮಾತಿಗೆ ತಲೆಯಲ್ಲಾಡಿಸಿದ. ತನ್ನ ಅಲಂಕಾರ ಪೂರ್ಣಗೊಂಡ ಮೇಲೆ ದೊಡ್ಡ ಕನ್ನಡಿಯಲ್ಲಿ ನಾಣಿ ತನ್ನನ್ನು ನೋಡಿಕೊಂಡ. ಯಾಕೋ ತಾನು ಸ್ತ್ರೀರೂಪ ಧರಿಸಿ ಹೆಣ್ಣಿನಂತಾಗುವೆನಾ ಎಂಬ ಭಯ ಆವರಿಸಿತು. ಅಪ್ಪ ಒಮ್ಮೊಮ್ಮೆ ನಡೆಯುವ, ಕೈಮಾಡುವ ವಯ್ಯಾರವನ್ನು ಊರಲ್ಲಿ ಕೆಲವರು ಆಡಿಕೊಳ್ಳುತ್ತಿದ್ದದ್ದನ್ನು ಕಿವಿಯಾರೆ ಕೇಳಿದ್ದ ನಾಣಿಗೆ ತಾನೂ ಅಪ್ಪನಂತೆ ಆಗಬಾರದು ಎಂದುಕೊಂಡ.

'ನೋಡು ನಾಣಿ ನಾಗಪಾತ್ರಿ ಗಂಡು ನಾಗನಾದರೆ, ನೀನು ನಾಗಕನ್ನಿಕೆ, ಹೆಣ್ಣಿಗೆ ಒಲಿಯದವರಾರೂ ಇಲ್ಲ. ನಿನ್ನ ವಯ್ಯಾರ, ಒನಪು, ಮಾತಿನಿಂದ ಗಂಟು ಬಿಚ್ಚುವ ಕೈಂಕರ್ಯ ಮಾಡಬೇಕು. ಅದು ಬರೀ ನಾಗರಹಾವಿನ ಗಂಟಲ್ಲ, ಅದು ಯಾರು

ಪೂಜೆ ಮಾಡಿಸುತ್ತಾರೋ ಅವರ ಕರ್ಮದ ಗಂಟನ್ನು ಬಿಚ್ಚುವ ಪವಿತ್ರ ಕೆಲಸ ಎಂಬುದನ್ನು ತಿಳಿ' ಎಂದ ಅಪ್ಪನ ಮಾತಿಗೆ ಹೂಂಗುಟ್ಟಿದ. ಒಳಗೆ ಭಯವಿದ್ದರೂ ತೋರ್ಪಡಿಸಿಕೊಳ್ಳದೆ ಅಪ್ಪನ ಜೊತೆ ನಾಗಮಂಡಲದ ಚಪ್ಪರಕ್ಕೆ ಬಂದ. ಅಲ್ಲಿ ಇಬ್ಬರ ಕೊರಳಿಗೂ ಮಾಲೆಯನ್ನು ಹಾಕಿ ಕೈಮುಗಿಯಲಾಯಿತು.

ಎಲ್ಲಾ ವಿಧಿ ವಿಧಾನಗಳು ಮುಗಿದ ಮೇಲೆ ಪ್ರಾರ್ಥನೆಯ ನಂತರ ನಾಗಪಾತ್ರಿ ಸಿಂಗಾರವನ್ನು ಕೈಲಿಡಿದು ಎರಡು ಭುಜಗಳನ್ನಾಡಿಸುತ್ತಾ ಮುಖವನ್ನು ಮುಂದಕ್ಕೆ ಹಿಂದಕ್ಕೆ ಕುಣಿಸುತ್ತಾ ಹಾವಿನಂತೆಯೇ ಭುಸುಗುಡುತ್ತಾ ಚಲಿಸಲಾರಂಭಿಸಿದ. ನಾಗಮಂಡಲದ ಸುತ್ತ ಪೇರಿಸಿದ್ದ ಸಿಂಗಾರವನ್ನು ಅಲ್ಲಿದ್ದ ನಾಲ್ಕೈದು ಜನ ಪುರೋಹಿತರು ಪಾತ್ರಿ ಮೈ ನಡುಗಿಸುತ್ತಾ ಕೈಚಾಚುತ್ತಿದ್ದಂತೆ ಕೈಯಲ್ಲಿಟ್ಟು ತೀರ್ಥವನ್ನು ಹಾಕುತ್ತಿದ್ದರು. ಇಡೀ ಸಿಂಗಾರವನ್ನು ಮುಖ, ಮೈ ಮೇಲೆ ತಿಕ್ಕಿಕೊಳ್ಳುತ್ತಾ ಮಂದಸ್ಥಾಯಿಯಲ್ಲಿ ಪ್ರಾರಂಭವಾದ ವಾದನ ನಿಧಾನಗತಿಯಿಂದ ತೀವ್ರಸ್ಥಾಯಿಗೆ ಏರುತ್ತಿದ್ದಂತೆ ಚಪ್ಪರವನ್ನು ಪ್ರವೇಶಿಸಿದ ನಾಗಪಾತ್ರಿಯನ್ನು, ನಾಗಕನ್ನಿಕೆ ಮಂಡಲದ ಸುತ್ತ ವಯ್ಯಾರದಿಂದ ಕುಣಿಯುತ್ತಾ, ವೃತ್ತಾಕಾರದಲ್ಲಿ ನರ್ತಿಸುತ್ತಾ ನಾಗನನ್ನು ಆಹ್ವಾನಿಸುತ್ತಿದ್ದಳು. ಆಕೆಯ ಒನಪು, ನೃತ್ಯದ ಮೋಡಿಗೆ ಸಿಲುಕಿ ನಾಗ, ಕನ್ನಿಕೆಯ ಸೊಂಟ ಹಿಡಿದು ನರ್ತನ ಮಾಡಲಾರಂಭಿಸಿದ. ಜೋಡಿಯಾಗಿದ್ದ ಅವರು ಮತ್ತೆ ಬೇರೆಯಾಗಿ ನಿಂತು ಮತ್ತೆ ಸಿಂಗಾರವನ್ನು ಮೈಗೆಲ್ಲಾ ಹಾಕಿಕೊಳ್ಳುವಾಗ ಥಕ್ಕೆಯೊಂದಿಗೆ ನಾಗಕನ್ನಿಕೆ ದೂರ ನಿಂತು ನಾಗನನ್ನು ಕೆಣಕಲಾರಂಭಿಸಿದಳು. ಸಿಂಗಾರದ ರಾಶಿಯಲ್ಲಿ ಮುಳುಗಿದ್ದ ನಾಗ ಮತ್ತೆ ಹೊರಬಂದು ಕಣ್ಣುಗಳನ್ನು ಹೊರಳಿಸುತ್ತಾ, ನಾಲಿಗೆಯನ್ನು ಚಾಚುತ್ತಾ ಹಾವಿನಂತೆ ಚಲಿಸುತ್ತಾ ಹಿಂದು ಮುಂದು ಮಾಡುತ್ತಿದ್ದಾಗ ಕ್ಷಣಕಾಲ ಕನ್ನಿಕೆಯ ನಾಣಿ ಗಾಭರಿಯಾಗಿದ್ದೂ ನಿಜ. ದೂರದಲ್ಲಿ ನೋಡಿದಕ್ಕೂ ತಾನೇ ಭಾಗವಾದಾಗ ಆಗುತ್ತಿರುವ ಅನುಭವವು ಅವನನ್ನು ಅಲೌಕಿಕ ಲೋಕವೊಂದಕ್ಕೆ ನೂಕಿತ್ತು. ಢಮರುಗ ಹಿಡಿದು ನಾಗಪಾತ್ರಿಯನ್ನು ಆಹ್ವಾನಿಸುವ, ಮುನ್ನಡೆಸಿ ಕೋಪ ಕೆರಳಿಸುವ, ಶಾಂತಗೊಳಿಸುವ, ಮೋಹಕ ನೃತ್ಯ ಮಾಡುತ್ತಾ ನಾಣಿ ತನ್ನನ್ನು ತಾನು ಮರೆತು ಕನ್ನಿಕೆಯಾಗಿ ಮೈದುಂಬಿದ. ಅಲ್ಲಿದ್ದವರೆಲ್ಲಾ ನಮ್ಮ ನಾಣಿಯಾ? ಎಂತ ಕುಣಿತ...ಭಲೇ ಭಲೇ ಎಂದು ಹೊಗಳುತ್ತಿದ್ದರೆ ವೈದ್ಯರಿಗೆ ಕಣ್ಣತುಂಬಾ ಮಗನ ಕುಣಿತವೇ ಮೈತುಂಬಿತ್ತು.

ರಾತ್ರಿಯ ಅಲೌಕಿಕ ಕನ್ನಿಕೆಯಾಗಿ ಎಲ್ಲರಿಂದ ಹೊಗಳಿಸಿಕೊಂಡ ನಾಣಿಗೆ ಮರುದಿನ ಹಾಸಿಗೆ ಬಿಟ್ಟು ಹೇಳಲೇ ಆಗದ ಮೈಕೈ ನೋವು. ಅದಕ್ಕಿಂತ ಹೊಸ ಅನುಭವವೊಂದು ಅವನನ್ನು ಮತ್ತೆ ಹಾಸಿಗೆಯಲ್ಲೇ ಹೊರಳಾಡುವಂತೆ ಮಾಡಿತ್ತು. ನಾಗಪಾತ್ರಿಯನ್ನು ತಬ್ಬಿ ಹಿಡಿದು ಮಿಲನವನ್ನು ತೋರಿಸಿ ಆ ಮೂಲಕ ಹೊರ ಬಂದು ಗಂಟು ಬಿಚ್ಚುವ ಪ್ರಕ್ರಿಯೆ ಅವನನ್ನು ಕಾಡಿಸಲಾರಂಭಿಸಿತ್ತು. ಮೀನಾ ಹೇಳಿದ ಗಂಡು-ಹೆಣ್ಣಿನ ಮಿಲನಕ್ಕೆ ಹೊಸ ಅರ್ಥ ಹೊಳೆದಂತಾಗಿತ್ತು. ದೂರದಲ್ಲಿ ಇದನ್ನೆಲ್ಲಾ ನೋಡಿದ್ದರೂ ಅದನ್ನು ತಾನೇ ಅನುಭವಿಸಿದಾಗ ಆದ ಸುಖದ ಹಿತಕ್ಕೆ ನಾಣಿ ಹಾಸಿಗೆಯಲ್ಲೇ ನರಳಾಡಿದ.

* * * *

'ಹೇ ನಿಂಗ, ಮುಂದಿನ ತಿಂಗಳು ಇಪ್ಪತ್ತನೇ ತಾರೀಖು ನಾಗಮಂಡಲ ಇದೆ. ನೀನು ಇನ್ನೊಂದಿಬ್ಬರು ಆಳನ್ನ ಕರಕಂಡು ಬಂದು ಚಪ್ಪರ ಹಾಕಿಬಿಡು. ನೋಡು ಒಂದು ಇಪ್ಪತ್ತು ಸಾವಿರ ಜನ ಕುಳಿತುಕೊಳ್ಳುವಂತದ್ದು, ಅಡಿಗೆ ಸಾಲೆಗೆ ಇನ್ನೊಂದು, ಒಟ್ಟು ಮೂರೂ ಚಪ್ಪರ ಆಗ್ತಾವಲ್ವಾ?' 'ಆಗುತ್ತೆ ಒಡೆಯಾ ಅಡ್ವಾನ್ಸ್ ಕೊಟ್ಟುಬಿಡಿ ಗಳ ಎಲ್ಲಾ ತಂದು ಶುರು ಮಾಡ್ತಿನಿ' ಎಂದ ನಿಂಗ. 'ಈ ಕೆಲಸಕ್ಕೆ ನಿನ್ನ ಮಗನ್ನೂ ಕರಕ್ಕೊ "ಎಲ್ಲಿ ನನ್ನೊಡೆಯಾ...ಅವ ಮಂಗಳೂರಿಗೆ ಕಲಿಯಕ್ಕೆ ಅಂತ ಹೋದಾವಾ ಇನ್ನು ಮುಗಿದಿಲ್ಲಂತೆ. ಊರಿಗೆ ಬಂದ್ರು ಇಂತದೆಲ್ಲಾ ಮಾಡಾನಾ?' 'ಸರಿ ನಿನ್ನ ತಲೆಬಿಸಿ ಎಂದು ಹೇಳಿ ಹತ್ತು ಸಾವಿರ ಕೈಗಿಕ್ಕಿ 'ಚೆನ್ನಾಗಿ ಚಪ್ಪರ ಹಾಕು, ಕೆಲಸ ಆದಂತೆ ಕೈಗೆ ಕಾಸು ಕೊಡುವೆ' ಅಂತ ಹೇಳಿ ಶ್ರೀಪಾದ ಒಳಬಂದ, ನಾಣಿ ಕುಂದಾಪುರ, ಉಡುಪಿ ಸುತ್ತಮುತ್ತ ನಾಗಕನ್ನಿಕೆಯಾಗಿ ಪ್ರಸಿದ್ಧಿ ಪಡೆದ ಮೇಲೆ ಶ್ರೀಪಾದರಾಯರಿಗೆ ಕೆಲಸ ಇಲ್ಲದಂತಾಗಿ ಇತ್ತೀಚೆಗೆ ಚಪ್ಪರ, ಅಡಿಗೆ ಕಂಟ್ರಾಕ್ಟನ್ನು ವಹಿಸಿಕೊಂಡಿದ್ದರು. ಮಗನ ಒಂದು ನಾಗದರ್ಶನಕ್ಕೆ ಒಂದು, ಒಂದುವರೆ ಲಕ್ಷ ಫಿಕ್ಸ್ ಮಾಡಿ ಕೈಯಲ್ಲಿ ದುಡ್ಡುಕಾಸು ಓಡಾಡಲು ಶುರುವಾದ ಮೇಲೆ ಮನೆ ಹೊಸ ರೂಪ ತಳೆದು ನಗರದ ಎಲೆಕ್ಟ್ರಾನಿಕ್ ಉಪಕರಣಗಳೆಲ್ಲಾ ಬಂದು ಸೇರಿದ್ದವು. ಹೊಸ ಕಾರೊಂದು ಮನೆ ಮುಂದು ಬಂದು ನಿಂತಾಗ ವೈದ್ಯರಿಗಾದ ಸಂತೃಪ್ತಿ ಇಮ್ಮಡಿಗೊಂಡಿತ್ತು. ನಾಣಿ ಅಪ್ಪನ ಮಾತನ್ನು ಗೆರೆ ದಾಟದ ಲಕ್ಷ್ಮಣನಂತೆ ಪಾಲಿಸುತ್ತಾ ಅಪ್ಪನ ಕೈಗೆ ಯಜಮಾನಿಕೆ ಕೊಟ್ಟು ಕನ್ನಿಕೆಯಾಗಿ ಓಡಾಡುತ್ತಿದ್ದ.

'ರೀ ಅನಂತ ವೈದ್ಯರ ಮಗಳು ಚಂದ ಇದ್ದಾಳಂತೆ. ಅವರೂ ಮಗಳಿಗೆ ಮದುವೆ ಮಾಡ್ತಾರಂತೆ. ಮೊನ್ನೆ ಸಾಲಿಗ್ರಾಮದಲ್ಲಿ ನಮ್ಮ ಮಾಣಿಯ ನಾಗಕನ್ನಿಕೆ ಅವರಿಗೆ ಬಾಳ ಮೆಚ್ಚಿಗೆಯಾತಂತೆ' 'ಕನ್ನಿಕೆ ಮೆಚ್ಚಿಗೆಯಾಯ್ತಾ? ನಾಣಿ ಮಚ್ಚಿಗೆಯಾದ್ನಾ?' ಗಂಡನ ಮಾತಿನ ವ್ಯಂಗ್ಯಕ್ಕೆ ಏನು ಹೇಳುವುದು ತಿಳಿಯದೆ ನಿಮ್ಮದೊಂದು ಅದಕ್ಕೂ ಇಪ್ಪತ್ತಾರು, ಮದ್ವೆ ಮಾಡೋ ಯೋಚನೇ ಇದೆಯಾ ಇಲ್ಲವಾ?' ಎಂದ ಹೆಂಡತಿಗೆ `ನಾ ಎಂತ ಜವಾಬ್ದಾರಿ ಇಲ್ಲದೆ ಕೂತಿನೀ ಅಂತ ತಿಳಿದಿಯಾ? ಹೋದಲ್ಲಿ ಬಂದಲೆಲ್ಲಾ ಕಣ್ಣ ಹಾಯಿಸಕಂತ ಬರ್ತೆ...ನೀ ಕಂಡೆಯಾ?' ಎಂದ. 'ನೀವ್ ಕಣ್ಣ ಹಾಕೋದು ನಾ ನೋಡಿನಿ. ಈ ಮುದಿ ವಯಸ್ಸಲ್ಲಿ ಮಗನಿಗಾಗಿ ಒಂದು ಕೂಸು ನೋಡಿ ಅಂದದ್ದು, ನಿಮಗಲ್ಲ!' 'ಆಯ್ತು ಮಾರಾಯ್ತಿ ನೀ ನಿರಮ್ಮಳ ಇರು ನಾ ತರ್ತಿನಿ' ಎಂದು ವೈದ್ಯರು ನಡುಮನೆಯ ಸೋಫದಿಂದ ಹೊರಗೆ ಬಂದು ತಮ್ಮ ಮೊಬೈಲ್‌ನಲ್ಲಿ ವೈದ್ಯರಿಗೆ ಫೋನ್ ಹಾಯಿಸಿದರು.

ನಾಣಿ ತನ್ನಪ್ಪ ತೋರಿಸಿದ ವೈದ್ಯರ ಮಗಳನ್ನು ಬೇಡ ಬೇಕು ಎನ್ನದೆ ಮದುವೆಯಾದ, ಗಾಯತ್ರಿ ನೋಡಲು ಚಂದದ, ಚುರುಕು ಹೆಣ್ಣು. ಮಾತು ಅಷ್ಟೆ ನಯ, ನಾಜೂಕು, ಬೆಟ್ಟಲಕ್ಕಿಗೆ ಬಂದ ಹೊಸತರಲ್ಲಿ ಚಪ್ಪೆಯಾಗಿರುತ್ತಿದ್ದ ಗಾಯತ್ರಿ ಕೆಲವೇ ದಿನಗಳಲ್ಲಿ ಹೊಂದಿಕೊಂಡಳು. ಅತ್ತೆ-ಮಾವನೂ ಗಾಯತ್ರಿಯನ್ನು ಮಗಳಿಗಿಂತ ಹೆಚ್ಚಾಗಿ ನೋಡಲಾರಂಭಿಸಿದರು. ಮಗ-ಸೊಸೆ ಮನೆ ನೋಡಿಕೊಳ್ಳಲ್ಲಿ ಎಂದು ಶ್ರೀಪಾದ

ದಂಪತಿಗಳು ಬದರಿ ಯಾತ್ರೆಗೆ ಹೋಗಿ ಬರುವುದಾಗಿ ಹೋದವರು ಬಸ್ ಅಪಘಾತದಲ್ಲಿ ಸಾವನ್ನಪ್ಪಿ ಶವವಾಗಿ ಹಿಂತಿರುಗಿದರು. ನಾಣಿ ದಿಕ್ಕು ತೋಚದಾದ. ಇಡೀ ಮನೆಯ ವ್ಯವಹಾರವನ್ನು ಮಗ ಚಿಕ್ಕವನು ಎಂದು ವಹಿಸಿಕೊಡದೆ ನೋಡಿಕೊಳ್ಳುತ್ತಿದ್ದ ಅಪ್ಪನ ಶ್ಯೂನತೆ ನಾಣಿಯನ್ನು ಆವರಿಸಿಕೊಂಡಿತು.

ವರ್ಷದ ಮೇಲೆ ನಾಣಿಗೆ ಕುಂದಾಪುರಕ್ಕೆ ಕನ್ನಿಕೆಗಾಗಿ ಕರೆ ಬಂದಿತು. ಅಲ್ಲಿಯವರೆಗೆ ಕೂಡಿಟ್ಟ ಹಣವನ್ನು ಕರಗಿಸಿದ್ದ ನಾಣಿಗೆ ಮನೆ, ಸಂಸಾರ ನಡೆಸುವ ಜವಾಬ್ದಾರಿ ಗಮನಿಸಿ ಬಿಟ್ಟೇ ಬಿಡಬೇಕು ಎಂದು ನಿರ್ಧರಿಸಿದ್ದ ಕನ್ನಿಕೆಯ ವೇಷವನ್ನು ಕಟ್ಟುವ ಅನಿವಾರ್ಯ ಬಂದೊದಗಿತ್ತು. ಅವನು ನಾಗಕನ್ನಿಕೆಯಾಗುವುದನ್ನು ಬಿಡಬೇಕೆಂದು ಕೊಂಡಿದ್ದಕ್ಕೆ ಕಾರಣವೂ ಇತ್ತು.

* * * *

ಅಂದು ಮೊದಲ ರಾತ್ರಿ ಗಾಯತ್ರಿ ಚಂದದ ನೀಲಿ ಸೀರೆಯಲ್ಲಿ ಅಲಂಕಾರವಾಗಿ ರೂಮಿಗೆ ಬಂದಿದ್ದಳು. ಮದುವೆ ಮನೆಯ ನೂರಾರು ಜನರ ಕಣ್ಣು ತಪ್ಪಿಸಿ ಗಾಯತ್ರಿಯನ್ನು ಸಂಪೂರ್ಣವಾಗಿ ನೋಡಿದ್ದು ಆಗಲೇ. ಕೆನ್ನೆಗೆ ದಿನಾ ಹರಿಶಿನ ಹಚ್ಚಿದ ಹಾಲುಗಲ್ಲಗಳು, ಚಂಚಲ ಕಣ್ಣು, ಯೌವ್ವನದ ಮೇರು ಪರ್ವತವೇ ತನ್ನ ಮುಂದೆ ಬಂದು ನಿಂತಂತೆ ನಾಣಿ ಪುಳಕಿತಗೊಂಡ. ಹೂವಿನ ಅಲಂಕಾರದ ಮಂಚ, ಸುತ್ತಲೂ ಪರಿಮಳ ಸೂಸುವ ಹೂ ಗಂಧದ ಪರಿಮಳ, ವಿವಿಧ ತಿಂಡಿ, ಹಣ್ಣುಗಳ ಕಡೆಗೆ ದೃಷ್ಟಿಯೂ ಹಾಯಿಸದಂತೆ ಬಾಗಿಲಲ್ಲಿ ಬೆಳ್ಳಿ ಗ್ಲಾಸಿನಲ್ಲಿ ಹಾಲಿಡಿದು ಬಂದ ಗಾಯತ್ರಿ ಮದನಿಕೆಯೋ, ಯಕ್ಷಿಯೋ, ದೇವಕನ್ನಿಕೆಯೋ ಒಂದೂ ಅರ್ಥವಾಗದ ಭಾವವೇಶದಲ್ಲಿ ನಾಣಿಯಿದ್ದ. ಇಪ್ಪತ್ತಾರು ವರ್ಷಗಳಲ್ಲಿ ಹೆಣ್ಣಿನ ಅಗಾಂಗ ಸ್ಪರ್ಶವೂ ಇಲ್ಲದೆ ನಾಣಿ ಸಂಗಮವಾಗಲು ಕಾತರನಾಗಿದ್ದ. ಗಾಯತ್ರಿ ನಿಧಾನವಾಗಿ ಬಂದು ಮಂಚದ ತುದಿಗೆ ಕುಳಿತಳು. ಅವಳ ಉದ್ವೇಗದ ಉಸಿರು ನಾಗಮಂಡಲದ ಪಾತ್ರಿಯ ಉಸಿರನ್ನು ಜ್ಞಾಪಿಸಿತು. ನಾಣಿ ಹಾಲನ್ನು ಕುಡಿದು ಕೊಟ್ಟ ಅವಳೂ ಉಳಿದ ಹಾಲು ಕುಡಿಯುವ ಶಾಸ್ತ್ರ ಮಾಡಿ ಗ್ಲಾಸನ್ನು ಪಕ್ಕಕ್ಕೆ ಇಡಲು ಹೋಗುತ್ತಿದ್ದಂತೆ ನಾಣಿ ಅವಳ ಕೈಯನ್ನು ಮೃದುವಾಗಿ ಅಮುಕಿದ. ಅದು ಗಂಡಿನ ಸ್ಪರ್ಶದಂತಿರಲಿಲ್ಲ. ಅವನ ವಯ್ಯಾರದ ನೋಟ, ನಗು ಗಂಡನ್ನು ನೆನಪಿಸಲಿಲ್ಲ. ಅವನು ಅವಳನ್ನು ಬಳಸಿ ಅವಳ ಕೆನ್ನೆಗೆ ಹೂ ಮುತ್ತೊಂದನ್ನಿಟ್ಟ. ಅವನ ಹಿಡಿತ ಕೋಮಲ ಹೆಣ್ಣನ್ನು ತಬ್ಬುವಂತಿರಲಿಲ್ಲ. ಅವಳಿಗೆ ಅಸಹನೆಯಾಗಲಾರಂಭಿಸಿತು. ಗಂಡಿನ ಬಿಸುಪಿನ ಬಿಗಿತವನ್ನು ಬಯಸಿದ್ದ ಅವಳಿಗೆ ಭ್ರಮನಿರಸವಾಗಿತ್ತು. ನೀವು ಇಲ್ಲಿಯೂ ಕನ್ನಿಕೆಯಾ?' ಹಾಸ್ಯಕ್ಕೆ ಅವಳೆಂದದ್ದು. ಕನ್ನಿಕೆಯ ಹೆಸರೆಳುತಿದ್ದಂತೆ ನಾಣಿ ತನ್ನ ಕೈ ಸಡಿಲಿಸಿದ. ಅವನ ಮೈಬಿಸಿ ತಣ್ಣಗಾಯಿತು. ಗಾಯತ್ರಿಯೇ ಬೆತ್ತಲಾದರೂ ನಾಣಿ ತೃಪ್ತಿ ಪಡಿಸದಾದ. ಗಾಯತ್ರಿ ಅತೃಪ್ತಳಾದಳು.

ಹೀಗಾದದ್ದು ಮೊದಲ ರಾತ್ರಿ ಮಾತ್ರವಲ್ಲ. ಪ್ರತಿ ರಾತ್ರಿಯೂ ನಾಣಿ ಗಾಯತ್ರಿಯ ಮುಂದೆ ಸೋಲಲಾರಂಭಿಸಿದ. ಅವನ ನೋಟ, ವಯ್ಯಾರ, ಎಲ್ಲವೂ ಕನ್ನಿಕೆಯಂತೆಯೇ ಆಗಿದ್ದು ಅವನ ಗಮನಕ್ಕೆ ಬಂದಿದ್ದರೂ ಹಾಸಿಗೆಯಲ್ಲಿ ಸೋಲುತ್ತಾನೆ ಎಂದು



ಕೊಂಡಿರಲಿಲ್ಲ. ಆ ಸೋಲು ಅವನನ್ನು ಗಾಯತ್ರಿಯ ಮುಂದೆ ನಿಸ್ಸಾಯಕನನ್ನಾಗಿ ಮಾಡಿತ್ತು. ಅವನ ಮನೋಬಲವೇ ಕುಸಿದಿತ್ತು.

ಗಾಯತ್ರಿ ನೂರಾರು ಕನಸು ಹೊತ್ತು ಬಂದಿದ್ದಳು. ನಾಣಿ ಹಾಸಿಗೆಯಲ್ಲಿ ದಿನನಿತ್ಯ ಪ್ರಾರಂಭಿಸುತ್ತಿದ್ದ ಆಟ ಅವಳ ಮೈಬಿಸಿಯೆರಿಸುತ್ತಿತ್ತು. 'ಗಾಯು ಬಾಯಿಲ್ಲಿ' ಎಂದು ಬಳಸಿ ಅವಳನ್ನು ತಬ್ಬಿ ಹೂಮುತ್ತನಿಡುತ್ತಿದ್ದ. ತುಟಿಗೆ ತುಟಿ ಸೇರಿದಾಗ ಅವರಿಬ್ಬರ ದೇಹದಲ್ಲೂ ವಿದ್ಯುತ್ ಸಂಚಾರ...ಕೈಗಳು ಸೊಂಟವನ್ನು ತಬ್ಬಿ ಅವನ ಬಿಸಿಯುಸಿರು ಅವಳ ಬಿಸಿಯುಸಿರಿನಲ್ಲಿ ಬೆರೆತು, ಕೈಗಳೆರೆಡು ಇಡೀ ದೇಹದ ಅಂಗಾಗವನ್ನು ತಬ್ಬಿ ಹಿಡಿದಾಗ ಅಮಲು ಆಕಾಶವಾಗುತ್ತಿತ್ತು. ಆ ದೇಹಗಳ ಬಿಸಿಗೆ ಕರಗಿ ಬೆತ್ತಲಾಗುತ್ತಿದ್ದಂತೆ ನಾಣಿಯು ಹೊಸ ಲೋಕದ ಕನಸನ್ನು ನನಸು ಮಾಡುವನೆಂದು ನಂಬಿದ್ದ ಗಾಯತ್ರಿಗೆ ಭ್ರಮನಿರಸನವಾಗುತ್ತಿತ್ತು. ಅವಳೇ ಮತ್ತೆ ಮತ್ತೇರಿಸಿ ಮತ್ತೆ ಶುರು ಮಾಡಿದರೂ ನಾಣಿಗೆ ತನ್ನ ಸೋಲಿನಿಂದ ಆಚೆ ಬರಲಾಗುತ್ತಿರಲಿಲ್ಲ. ಅವನು ಮಾನಸಿಕವಾಗಿ ಕುಗ್ಗಿ ಹೋಗುತ್ತಿದ್ದ.

ಹೊಸತರಲ್ಲಿ ಗಾಯತ್ರಿ ಇದೆಲ್ಲಾ ಸಹಜವೆನೋ ಮುಂದೆ ಸರಿ ಹೋಗಬಹುದು ಎಂದು ಸಮಾಧಾನಗೊಳ್ಳುತ್ತಿದ್ದಳು. ದಿನವಿಡಿ ಕೆಲಸದಲ್ಲಿ ಮುಳುಗಿರುತ್ತಿದ್ದಳು. ಇಡೀ ಮನೆಯಲ್ಲಿ ಇಬ್ಬರೇ ಇರುವಾಗ, ಟಿವಿ ನೋಡುವಾಗ, ರೂಮಿನಲ್ಲಿದ್ದಾಗ ಪಕ್ಕದಲ್ಲಿ ಕುಳಿತು ಅವನ ಕೈಗಳನ್ನು ತನ್ನ ಕೈಗಳಲ್ಲಿ ತಂದುಕೊಂಡು ಮುತ್ತಿನ ಮಳೆ ಸುರಿಸುತ್ತಿದ್ದಳು. ಮೊದಮೊದಲು ಸ್ಪಂದಿಸುತ್ತಿದ್ದ ನಾಣಿ ಕೊನೆಯ ಸೋಲಿಗೆ ಹೆದರಿ ನೀನು ಈಗೆಲ್ಲಾ ಎಲ್ಲಿ ಅಂದ್ರೆ ಅಲ್ಲಿ ಬಂದು ಒತ್ತರಸಿ ಕುಳಿತುಕೋ ಬೇಡ. ನನಗೆ ಸರಿ ಹೋಗಲ್ಲ. ಮಡಿ ಮೈಲಿಗೆ ಒಂದೂ ಇಲ್ಲ' ಎಂದು ಅವಳನ್ನು ಗದರಿ ಕಳುಹಿಸುತ್ತಿದ್ದ. ಕಣ್ಣಲ್ಲಿ ನೀರಾಕಿ ಒಳಕೋಣೆಗೆ ಹೋಗಿ ಬಾಗಿಲು ಹಾಕಿಕೊಳ್ಳುತ್ತಿದ್ದ ಗಾಯತ್ರಿಯನ್ನು ನೋಯಿಸ ಬೇಕೆಂಬುದು ನಾಣಿಯ ಇಚ್ಚೆ ಆಗಿಲ್ಲದಿದ್ದರೂ ಅವನ ಅಸಹಾಯಕತೆ ಅವನನ್ನು ಈ ರೀತಿ ಮಾತನಾಡಿಸುತ್ತಿತ್ತು.

ಮದುವೆಯಾದ ಹೊಸತರಲ್ಲಿ ಮಾವ-ಅತ್ತೆಯ ಮುಂದೆ ಒಳ್ಳೆಯ ಸೊಸೆಯಂತೆ ಮನೆಯ ಪ್ರತಿ ಕೆಲಸವನ್ನೂ ಶ್ರದ್ಧೆಯಿಂದ ಮಾಡುತ್ತಿದ್ದ ಗಾಯತ್ರಿ ಕೆಲವೇ ದಿನಗಳಲ್ಲಿ ಸಪ್ಪೆಯಾಗಿ ಕಂಡದ್ದನ್ನು ಸೂಕ್ಷ್ಮವಾಗಿ ಸರಸಮ್ಮ

ಗಮನಿಸಿದ್ದರು. ಒಮ್ಮೆ ಕೇಳಿಯೂ ಇದ್ದರು 'ತವರೆನಾದ್ರೂ ಜ್ಞಾಪಕ ಆಗ್ತಾ ಇದೆಯಾ ಕೂಸು? ಸ್ವಲ್ಪ ದಿನ ಹೋಗಿ ಬಾ. ಮನೆಯಿಂದ ದೂರ ಇದ್ದೀಯಲ್ಲಾ ಅದಕ್ಕೆ ಬೇಜಾರಾ?' ಎಂದಾಗ, ಗಾಯತ್ರಿ 'ಇಲ್ಲ ಆತ್ತೆ ಹಾಗೇನೂ ಇಲ್ಲ' ಎಂದು ಬಾರದ ನಗುವನ್ನು ಮುಖದ ಮೇಲೆ ಅರಳಿಸಿದ್ದಳು. 'ನಾಣಿ ನಿನ್ನ ಸರಿಯಾಗಿ ನೋಡಕೋತಾ ಇದ್ದಾನೆ ತಾನೇ? ಅಂತಾದೇನಾದ್ರೂ ಇದ್ರೆ ನಂಗೆ ಹೇಳು. ಬೆತ್ತ ಬೀಸಿ ಬುದ್ಧಿ ಕಲಿಸ್ತೆ' ಎಂದ ಮಾತಿಗೆ ಗಾಯತ್ರಿ ಏನೆಂದು ಹೇಳಿಯಾಳು?

ಅತ್ತೆ ಇದ್ದಾಗ ಕೇಳಲ್ಲಿಕ್ಕಾದರೂ ಇದ್ರು, ಅವರಿಬ್ಬರೂ ಹೋದ ಮೇಲೆ ನಿಜಕ್ಕೂ ಗಾಯತ್ರಿ ಅನಾಥಳಾದಳು. ಮನೆಯ ಕೆಲಸಕ್ಕೆ ಬರುತ್ತಿದ್ದ ಸಾಮು 'ಅವ್ವಾ ಮನಸ್ಸು ಸರಿ



ಇಲ್ವಾ? ಯಾಕ ಹಿಂಗಿದ್ದೀರಿ?' ಅಂತ ಕೇಳ್ತಿದ್ದ. ಅದನ್ನು ಮನೆಗೆ ಬರುವವರೆಲ್ಲಾ ಕೇಳುವವರೆ. ಒಮ್ಮೆ ಉಪ್ಪಿನಂಗಡಿಯಿಂದ ಬಂದಿದ್ದ ನಾಣಿ ಚಿಕ್ಕಮ್ಮನೂ ಹೀಗೆ ಕೇಳಿದ್ದರು “ಎಂತ ನಾಣಿ ಐದು ವರ್ಷ ಆತು ಮದ್ದೆ ಆಗಿ. ಈ ಮನೆಗೆ ದೊಡ್ಡವರು ಅಂತ ಯಾರಿಲ್ಲ. ನಿನ್ನ ಹೆಂಡ್ತಿ ಬಸುರಿಯಾಗೋದು ಯಾವಾಗ? ಮಕ್ಕಳು ಮರಿ ನಾನು ನೋಡೋದು ಯಾವಾಗ? ಒಂದು ಸಲ ಡಾಕ್ಟರಿಗಾದ್ರೂ ಅವಳನ್ನು ತೋರಿಸು. ಕುಕ್ಕೆ ಸುಬ್ರಮಣ್ಯಕ್ಕೆ ಕರಕೊಂಡು ಹೋಗಿ ಸೇವೆ ಮಾಡಿಸಿ ಬಾ. ಅಲ್ಲಿ ಹುತ್ತದ ಮಣ್ಣನ್ನ ತಿಂದ್ರೆ ಎಂತವರಿಗೂ ಮಕ್ಕಳಾಗ್ತವೆ. ಇದೆಲ್ಲಾ ನಿಂಗೆ ಗೊತ್ತಿರೋದೆ ನಾನೇನು ಹೇಳಬೇಕಿಲ್ಲ ಎಂದ ಮಾತಿಗೆ 'ಚಿಕ್ಕಮ್ಮ, ನೀನು ನಿನ್ನ ಮನೆ ಸಂಸಾರ ನೋಡ್ಕೋ ಊರ ಉಸಾಬರಿಯೆಲ್ಲಾ ಏಕೆ?' ಎಂದು ತನ್ನ ಅಸಾಹಯಕತೆಯನ್ನು ಮುಚ್ಚುವಂತೆ ಜೋರಾಗಿ ಕೂಗಾಡಿದ. ಇಂತಹ ಮಾತನ್ನು ನಿರೀಕ್ಷಿಸದಿದ್ದ ಚಿಕ್ಕಮ್ಮ ಒಂದು ಕ್ಷಣ ಸ್ತಬ್ಧಳಾದಳು. 'ಏನೋ ಈ ಮನೆಯ ಸಂಬಂಧ ನನಗಿದೆ ಎಂಬ ಅಧಿಕಾರದಿಂದ ಮಾತನಾಡಿದೆ. ನಮ್ಮ ವಸ್ತುನೇ ಹೋದ ಮೇಲೆ ನಾನು ಯಾರು ಈ ಮನೆಗೆ?' ಎಂದು ಸೆರಗಿನಿಂದ ತನ್ನ ಕಣ್ಣನ್ನು ಒರೆಸಿಕೊಂಡಾಗ ನಾಣಿಗೆ ತಾನೆಂತ ತಪ್ಪು ಮಾತನಾಡಿದೆ ಎಂಬ ಅರಿವಾಗಿದ್ದು, ಇದನ್ನೆಲ್ಲಾ ನೋಡುತ್ತಿದ್ದ ಗಾಯತ್ರಿ, 'ನೀವೇನು ಚಿಕ್ಕತ್ತೆಗೆ ಆಗಾ ಮಾತಾಡೋದು?' ಎಂದು ಜೋರು ಮಾಡಿದಳು. ಅದೆಲ್ಲಿತ್ತೋ ಕೋಪ, ನಾಣಿ 'ನೋಡು... ಇದು ನಮ್ಮಿಬ್ಬರ ವಿಷಯ ನೀನು ತಲೆ ಹಾಕಬೇಡ. ಇದಕ್ಕೆಲ್ಲಾ ನೀನೆ ಕಾರಣ ನೀನು ಹೀಗಿರುವುದಕ್ಕಲ್ಲಾವಾ ಇವರೆಲ್ಲಾ ನಿನಗೆ ಏನೋ ಆಗಿದೆ ಅಂತ ಇಂತದೆಲ್ಲಾ ಮಾತನಾಡೊದು' ಎಂದು ಕೂಗಾಡಿ ಅವಳೇನೋ ಹೇಳಲು ಬರುತ್ತಿದ್ದಂತೆ ಕೆನ್ನೆಗೊಂದು ಬಾರಿಸಿ ಹೊರಗಡೆ ಬಿರುಗಾಳಿಯಂತೆ ಹೊರಗಡಿಯಿಟ್ಟ. ಚಿಕ್ಕಮ್ಮನೇ ಬಂದು ಸಮಾಧಾನಿಸಿದರೂ ಗಾಯತ್ರಿ ತನ್ನದಲ್ಲದ ತಪ್ಪಿಗೆ ಎಲ್ಲರ ಮುಂದೆ ಅವಮಾನಿತಳಾದಳು.

ಊರಲೆಲ್ಲಾ ನಾಣಿ-ಗಾಯತ್ರಿಯದೇ ಮಾತು.ಮಕ್ಕಳಾಗದಕ್ಕೆ ನಾಗದೋಷವಿರಬೇಕು ಎಂದು ನಾಣಿಯ ಅಪ್ಪನ ಸಂಬಂಧಿಕರು ಸಲಹೆಯಿತ್ತರು. ದೈವವನ್ನು ಕೇಳುವಂತೆ ಸಲಹೆ ನೀಡಿದರು. ಹಿಂದೆ ಅವರ ವಂಶದಲ್ಲಾದ ಘಟನೆಯನ್ನು ಜ್ಞಾಪಿಸಿದರು. ತನ್ನದೇ ದೋಷವನ್ನು ಅವರಿಗೆ ಹೇಳುವುದು ಹೇಗೆಂದು ತಿಳಿಯದೆ ಮೊದಮೊದಲು ಅವರ ಸಲಹೆಗಳನ್ನು ಸಮಾಧಾನದಿಂದ ತೆಗೆದುಕೊಳ್ಳುತ್ತಿದ್ದವನು ನಂತರ ಸಿಡಿಮಿಡಿಗೊಂಡು ಅಲ್ಲಿದ್ದರಲ್ಲವೇ ಮಾತೆಂದು ಜಾಗ ಖಾಲಿ ಮಾಡುತ್ತಿದ್ದ. ಹೊರಗಿನಿಂದ ಬಂದ ನಾಣಿ ತನ್ನ ಕೋಪವನ್ನು ಗಾಯತ್ರಿ ಮೇಲೆ ತೀರಿಸಿಕೊಳ್ಳುತ್ತಿದ್ದ. ಒಮ್ಮೆ ಹೀಗೆ ಮಾತಿಗೆ ಮಾತು ಬೆಳೆದಾಗ ಮನೆ ಕೆಲಸದ ಸಾಮ ಅಲ್ಲಿಯೇ ಇದ್ದ. ಅವನ ಮುಂದೆಯೇ ನಾಣಿ, ಮುಖ ಮೂತಿ ನೋಡದೆ ಬೈಯ್ಯಲಾರಂಭಿಸಿದ. ಗಾಯತ್ರಿ ಸಾಮನ ಮುಂದೆ ಹೀಗಾಗಲೇ ಕೆನ್ನೆಗೆ ಹೊಡೆಸಿಕೊಂಡು ಅವಮಾನಿತಳಾಗಿದ್ದಳು. ಮತ್ತೊಮ್ಮೆ ಅವಳಿಗೆ ಅಂತಹ ಘಟನೆ ಮರುಕಳಿಸುವುದು ಸರಿಯಲ್ಲವೆಂದೆನಿಸಿ ಮೌನವಹಿಸಿದಳು. ಗಾಯತ್ರಿ ಮೌನವಹಿಸುತ್ತಿದ್ದಂತೆ ನಾಣಿಯ ಮಾತುಗಳು ಬಿರುಸಾಗುತ್ತಿದ್ದವು. ಅಸಹನೆಯ ಕಟ್ಟೆ



ಹೊಡೆಯುತ್ತಿದ್ದಂತೆ ಗಾಯತ್ರಿ ನಿಮ್ಮ ಷಡಂತನವನ್ನು ಮುಚ್ಚಿಕೊಳ್ಳಲು ನನ್ನ ಮೇಲೆ ಏಕೆ ಕೂಗಾಡುತ್ತೀರಿ' ಎಂದಳು ಅಷ್ಟೇ. ಅದೆಲ್ಲಿತ್ತೋ ಕೋಪ ನಾಣಿ ಅಲ್ಲಿಯೇ ಇದ್ದ ಬಿದುರಿನ ಸಿಬ್ಬೆಯಿಂದ ಗಾಯತ್ರಿಯ ಮುಖ ಮೂತಿ ನೋಡದೆ ಬಾರಿಸಿ 'ಸಾಯಿ ರಂಡೆ' ಎಂದು ಬುಸುಗುಡುತ್ತಾ ಹೊರಗೆ ಹೋದ. ಗಾಯತ್ರಿ ಇನ್ನು ಅವಮಾನ ಸಾಕೆಂದು ಬಗೆದು ಮನೆಯ ಹಿಂದಿನ ಬಾವಿಯಲ್ಲಿ ಬೀಳಲು ಓಡಿ ಹೋದಳು. ಇನ್ನೇನು ಬೀಳಬೇಕು ಮರೆಯಲ್ಲಿ ನಿಂತು ಎಲ್ಲದಕ್ಕೂ ಸಾಕ್ಷಿಯಾಗಿದ್ದ ಸಾಮ ಓಡಿಬಂದು ಗಾಯತ್ರಿಯ ರಟ್ಟೆ ಹಿಡಿದು ಎಳೆದು 'ಅವ್ವಾ ಎಂತ ಕೆಲಸ ಮಾಡ್ತಿದ್ದೀರಿ. ನೀವು ಸಾಯೋದು ಅಂದ್ರೇನು? ನಿಮ್ಮ ಯಾವ ತಪ್ಪಿಗೆ ನೀವು ಸಾಯಬೇಕು' ಎಂದು ಆಕೆಯನ್ನು ಎಳೆಯುತ್ತಿದ್ದಂತೆ ಗಾಯತ್ರಿ ಸಾಮನ ಹರವಾದ ಎದೆಗೆ ಮುಖವಿಟ್ಟು ಗೋಳಾಡಲಾರಂಭಿಸಿದಳು. ಸಾಮನಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಅವಳನ್ನು ಹೇಗೆ ಸಮಾಧಾನಿಸಬೇಕೆಂದು ತಿಳಿಯದೆ 'ಅವ್ವಾ ಬಿಡಿ ನಾಣಿಯಣ್ಣೋರು ನೋಡಿದ್ರೆ ಅನಾಹುತ ಆತಾದೆ. ನಡೀರಿ ಒಳಿಕ್ಕೆ' ಎಂದು ಆಕೆಯನ್ನು ಬಾವಿಯ ಬಾಯಿಂದ ತಪ್ಪಿಸಿ ಒಳಕೋಣೆಗೆ ಬಿಟ್ಟು ತನ್ನ ಮನೆಕಡೆ ಹೆಜ್ಜೆ ಹಾಕಿದ.

ಸಾಮ ಹೆಜಮಾಡಿಯವನು. ಚಿಕ್ಕ ವಯಸ್ಸಿನಲ್ಲಿಯೇ ಅಪ್ಪ ಸತ್ತ ಮೇಲೆ ಅವ್ವನೊಂದಿಗೆ ಅವಳ ತವರಾದ ಬೆಟ್ಟಲಕ್ಕಿಗೆ ಬಂದಿದ್ದ. ಶಾಲೆಯ ಮುಖವನ್ನೇ ನೋಡದ ಸಾಮ ಅವರವ್ವ, ಅಜ್ಜಿಯೊಂದಿಗೆ ಅವರಿವರ ಮನೆ ಕೆಲಸ

ಮಾಡುತ್ತಿದ್ದವನನ್ನು ನಾಣಿಯ ಅಪ್ಪ ತನ್ನ ತೋಟ, ಮನೆ ಕೆಲಸ ಮಾಡಲು ಹರೆಯದ ಸಾಮನನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದ. ನಾಣಿಗಿಂತ ಮೂರು ನಾಲ್ಕು ವರ್ಷಕ್ಕೆ ಚಿಕ್ಕವನಾದ ಸಾಮ ಅವರ ಮನೆಯ ಎಲ್ಲಾ ಚಾಕರಿಯನ್ನು ಮಾಡುತ್ತಾ ತಂಗಳು ತಿನ್ನುತ್ತಾ ಬೆಳೆದುಬಂದವನು. ಸಾಮ ಹರೆಯದ ಕಟ್ಟು ಮಸ್ತಾದ ಆಳು. ಅದುವರೆಗೂ ದೂರದಿಂದ ನೋಡಿದ್ದ ಬ್ರಾಹ್ಮರ ಹೆಣ್ಣು ಮಕ್ಕಳನ್ನು ತನ್ನ ತೋಳ ತೆಕ್ಕೆಯಲ್ಲಿ ಅಷ್ಟು ಹತ್ತಿರದಿಂದ ನೋಡಿದ್ದು ಅವತ್ತೆ, ಹಾಲವಾಗೇ ಹುಟ್ಟೋಳೆನೋ ಅನ್ನಂಗೆ ಇದ್ದರಲ್ಲವಾ ಆಕೆ. ಅದೆಂತ ಚೆಲುವು. ಇಷ್ಟೊರ್ಷ ಆದ್ರೂ ಒಂದು ಹುಳನೂ ಹುಟ್ಟಿಲ್ಲ ಆ ವಯ್ಯನಿಗೆ ಅಂತ ಹಟ್ಟಲಿ ಮಾತಾಡದನ್ನು ಸಾಮ ಮತ್ತೊಮ್ಮೆ ಜ್ಞಾಪಿಸಿಕೊಂಡ.

ಸಾಮನ ತೆರೆದೆದೆಯ ಮೇಲೆ ಬಿದ್ದ ಆ ಕ್ಷಣ ಗಾಯತ್ರಿ ಗಂಡಿನ ದೇಹವೆಂದರೆ ಇದೆಲ್ಲಾವಾ ಎಂದುಕೊಂಡಿದ್ದು ಸತ್ಯ. ಅವ ಕೆಳ ಜಾತಿಯವನು. ಅವನು ಅವಳನ್ನು ಬೀಳದಂತೆ ತನ್ನ ಬಲಿಷ್ಟ ಒರಟಾದ ಕೈಗಳಿಂದ ಅವಳನ್ನು ಹಿಡಿದ ಹಿಡಿತ, ಮುಖದಲ್ಲಿನ ಅಚ್ಚರಿ, ಮುಗ್ಧತೆ ಎಲ್ಲವೂ ಮನಸ್ಸಿನಲ್ಲಿ ಸಕ್ಕರೆಯ ಅಚ್ಚಿನಂತೆ ನಿಂತಿದೆಯಲ್ಲಾ ಅನ್ನಿಸಿದ ಕ್ಷಣ ನಿಟ್ಟುಸಿರೊಂದು ತನಗೆ ತಾನೆ ಹೊರಬಂತು. ಗಂಡನ ಮೃದುತ್ವಕ್ಕೂ, ಸಾಮನ ಗಡಸುತನಕ್ಕೂ ಗಾಯತ್ರಿ ತಾಳೆ ಹಾಕಲಾರಂಭಿಸಿದಳು. ಯಾಕೋ ತಾಳ ತಪ್ಪುತ್ತಿದೆ ಎಂದು ಗೊತ್ತಾಗುತ್ತಲೇ ಕ್ಷಣಕಾಲ ಬೆಚ್ಚಿದಳು. ತಾನು ಮಾಡದ ತಪ್ಪಿಗೆ ಈ ಶಿಕ್ಷೆ ಇನ್ನೆಷ್ಟು ದಿನ? ಪ್ರಶ್ನೆಗೆ ಉತ್ತರವೆಲ್ಲಿ? ಇತ್ತೀಚೆಗೆ ಮಗುವಿನ ತೊಟ್ಟಿಲಿಗೂ ಅವಳನ್ನು ಹೊರಗಿಟ್ಟಿರುವ ಸಂಬಂಧಿಕರನ್ನು ನೆನೆದು ಕಣ್ಣು ತುಂಬಿಕೊಂಡಳು. ತನ್ನ ಗಂಡ



ಗಂಡಸೇ ಅಲ್ಲ ಅವನೊಬ್ಬ ಹೊರಗೆ ಮಾತ್ರವಲ್ಲ ಹಾಸಿಗೆಯಲ್ಲೂ ಕನ್ನಿಕೆಯೇ ಎಂದು ಜೋರಾಗಿ ಕಿರುಚಿ ಜಗತ್ತಿಗೆ ಹೇಳಬೇಕೆಂದ ಮಾತುಗಳನ್ನು ಗಂಟಲಲ್ಲಿಯೇ ನುಂಗಿಕೊಂಡಿದ್ದಳು. ತನ್ನ ದುಃಖವನ್ನು ಅಮ್ಮನ ಬಳಿ ಸೂಕ್ಷ್ಮವಾಗಿ ತೋಡಿಕೊಂಡಾಗ ಅವಳಮ್ಮ 'ನೋಡು, ನಾಣಿ ಸುತ್ತಲ ಊರಲೆಲ್ಲಾ ಪ್ರಸಿದ್ಧಿ ಪಡೆದ ನಾಗಕನ್ನಿಕೆ. ಅವನ ಮನೆತನದ ಮರ್ಯಾದೆಯನ್ನು ಕೇವಲ ದೇಹದ ಸುಖ ಸಿಗ್ತಿಲ್ಲ ಅಂತ ತೆಗಿಬೇಡ. ಇಂದಲ್ಲಾ ನಾಳೆ ಸರಿಹೋಗಬಹುದು. ಹೆಣ್ಣಿಗೆ ತಾಳ್ಮೆ ಮುಖ್ಯ. ಗಂಡ ಹೆಂಡತಿ ಸಂಬಂಧ ಕೇವಲ ದೈಹಿಕವಾದದ್ದಲ್ಲ' ಎಂದು ಬುದ್ಧಿ ಹೇಳಿದ್ದಳು. ಅಪ್ಪನ ಮೈಸುಖ ಅನುಭವಿಸಿದ ಅಮ್ಮನಿಗೆ ತನ್ನ ಕಷ್ಟ ಅರ್ಥವಾಗುತ್ತದೆ ಎಂಬ ಭರವಸೆಯೂ ಜಾರಿದಾಗ ಗಾಯತ್ರಿ ತನ್ನ ನೋವನ್ನೆಲ್ಲಾ ತನ್ನಲ್ಲೇ ಅಡಗಿಸಿಕೊಳ್ಳಲಾರಂಭಿಸಿದಳು.

ನಾಣಿ ಅಂದು ಒಳ್ಳೆಯ ಮೂಡಿನಲ್ಲಿದ್ದ. ಗಾಯು ಎಂದು ತಬ್ಬಿ ಮತ್ತೇರಿಸುವವನಂತೆ ಅವಳ ಬಳಿ ಬಂದ. ಗಾಯತ್ರಿಗೆ ಇತ್ತೀಚೆಗೆ ಅವನು ಹತ್ತಿರ ಬರುವುದೇ ಕಿರಿಕಿರಿಯಾಗಲಾರಂಭಿಸಿತ್ತು. ಹಾಸಿಗೆಯಲ್ಲಿ ಅಪರಿಚಿತರಂತೆ ಬೆನ್ನು ಹಾಕಿ ಮಲಗುವುದನ್ನು ರೂಢಿಸಿಕೊಂಡಿದ್ದರು. ನಾಣಿಯೂ ಅನುಷ್ಠಾನದ ನೆಪ ಹೇಳಿ ತಿಂಗಳಲ್ಲಿ ಇಪ್ಪತ್ತು ದಿನ

ಬೇರೆ ರೂಮಿನಲ್ಲಿ ಮಲಗುತ್ತಿದ್ದ. ಗಾಯತ್ರಿ ತನ್ನ ಹರೆಯದ ದೇಹದ ಒತ್ತಡವನ್ನು ಬಗೆಹರಿಸಲು ಮೊಬೈಲ್‌ನಲ್ಲಿನ ಸೆಕ್ಸ್ ವಿಡಿಯೋಗಳನ್ನು ನೋಡಿ ಪರಿಹಾರ ಕಂಡುಕೊಳ್ಳಲಾರಂಭಿಸಿದ್ದಳು. ಅದು ತಾತ್ಕಾಲಿಕ ಪರಿಹಾರ ಎಂಬುದು ಅವಳಿಗೂ ಅರ್ಥವಾಗಿತ್ತು. ಇಪ್ಪತ್ತೊಂದು ವರ್ಷದಿಂದ ಕಾಪಾಡಿಕೊಂಡು ಬಂದಿದ್ದ ಕನ್ಯತ್ವದ ಪೊರೆ ಕಳಚದೆ, ತನ್ನ ಒಕ್ಕುಳಲ್ಲಿ ನೆರಿಗೆಗಳು ಕಾಣದೆ, ಬಿಗಿದ ಮೊಲೆಗಳು ಸಡಿಲಾಗದೆ ಎಂತಹದೋ ಅವ್ಯಕ್ತ ನೋವನ್ನು ನುಂಗಲಾಗದೆ ಯಾರಲ್ಲೂ ಹೇಳಿಕೊಳ್ಳಲಾಗದೆ ಗಾಯತ್ರಿ ನಿಟ್ಟುಸಿರಿಟ್ಟಳು. ನಾಣಿ ಬಳಿಬಂದು ಅವಳನ್ನು ಬಳಸುತ್ತಿದ್ದಂತಯೇ ಗಾಯತ್ರಿ “ನೋಡಿ...ನಿಮ್ಮದೇನೂ ದೊಡ್ಡ ಕಾಯಿಲೆ ಅಲ್ಲ ಮಣಿಪಾಲಕ್ಕೆ ಹೋಗಿ ತೋರಿಸಿ ಬರುವಾ' ಎಂದು ಅಂಜುತ್ತಲೇ ಪೀಠಿಕೆ ಹಾಕಿದಳು. ಅವನ ಮೌನವನ್ನು ಸಮ್ಮತಿ ಎಂದುಕೊಂಡು ಮುಂದುವರೆಸಿ 'ಇಲ್ಲಿನ ವಿಡಿಯೋಗಳನ್ನಾದರೂ ನೋಡಿ ಸೆಕ್ಸ್ ಹೇಗೆ ಮಾಡಬೇಕೆನ್ನುವ ಪಾಠಗಳಿವೆ' ಎಂದು ತನ್ನ ಮೊಬೈಲ್‌ನಲ್ಲಿ ತೋರಿಸಲು ಬರುತ್ತಿದ್ದಂತೆ ಪುರುಷಾಂಹಕಾರದ ನಾಣಿಗೆ ಇಂತದೆಲ್ಲಾ ನೋಡ್ತಿ..ಅಸಹ್ಯ' ಎಂದಿದ್ದ. “ಅಸಹ್ಯ ಎಂತ? ಇಂತಹದ್ದು ಮಾಡೇ ಮಕ್ಕಳಾಗೋದು. ನಾಗಮಂಡಲ ಮಾಡ್ತಿರಲ್ಲ ಅಲ್ಲಿ ಸಂತಾನಕ್ಕಾಗಿಯೇ ಪೂಜೆ ಮಾಡಿಸುವವರು ಎಷ್ಟು ಮಂದಿ ಬರಲ್ಲಾ? ನಾಗನ ಶ್ಲೋಕ ಹೇಳುವಾಗ ನಾಗನನ್ನು “ಉದಾರ ವೀರ್ಯಂ” ಎಂದು ಕರಿತಿರಲ್ಲಾ. ಮಕ್ಕಳಿಲ್ಲದವರಿಗೆಲ್ಲಾ ನಾಗ ದೇವತೆ ಉದಾರವಾಗಿ ವೀರ್ಯ ನೀಡುವನು ಎಂದರ್ಥವಲ್ಲವಾ?' ಎಂದು ಸವಾಲು ಹಾಕಿದ್ದಳು. ನಾಣಿ ನಿರುತ್ತರನಾದ. ಮೊದಮೊದಲು ಅಪ್ಪ-ಅಮ್ಮನನ್ನು ಕಳೆದುಕೊಂಡ ದುಃಖದಿಂದ ಹೀಗೆ ಎಂದುಕೊಂಡಿದ್ದ ಸಮಸ್ಯೆ ವರ್ಷಗಳಲ್ಲಿ ಮುಂದುವರೆದಾಗ ಗಾಯತ್ರಿ ಯಾರ ಬಳಿಯೂ ಹೇಳಿಕೊಳ್ಳದ ಸಮಸ್ಯೆಗೆ ಪರಿಹಾರ ತಿಳಿಯದೇ ಗಂಟಾದಳು.

ನಾಣಿ ಹಾಸಿಗೆಯ ಸೋಲನ್ನು ಒಪ್ಪಿಕೊಳ್ಳುವ ಮನಸ್ಥಿತಿಯಲ್ಲಿರಲಿಲ್ಲ. ನಾಗಕನ್ನಿಕೆಯಾಗಿ ಸಾವಿರಾರು ಜನರ ಶಹಬಾಸಗಿರಿ ಪಡೆಯುವ, ಭಕ್ತಿಯಿಂದ ಜನ ಬಂದು ಕಾಲು ಮುಗಿಯುವಾಗ ತಾನು ಸೋಲುವುದು ಎಂದರೇನು ಎಂಬ ಅಹಂಕಾರ ಅವನಲ್ಲಿ ಹೆಡೆಯೆತ್ತುತ್ತಿತ್ತು. ಆದರೆ ವಾಸ್ತವದಲ್ಲಿ ಅವನು ಗಾಯತ್ರಿಯನ್ನು ಸುಖಪಡಿಸಲಾಗದ ಕಟುಸತ್ಯದ ಅರಿವಾಗಿದ್ದರೂ ಒಪ್ಪಿಕೊಳ್ಳಲು ಗಂಡಸೆಂಬ ಅಹಂ ಅಡ್ಡ ಬರುತ್ತಿತ್ತು. ಗಾಯತ್ರಿಯ ಸುಂದರ ಮುಖ, ಮುಗ್ಧತೆ, ಅವನ ಯೌವ್ವನದ ದೇಹ ಅವಳ ದೇಹ ಬಳಸಿದರೂ ಯಾಕೋ ಸಹಕರಿಸುತ್ತಿರಲಿಲ್ಲ. ಮಿಲನದ ಮುಂಚಿನ ಬಿಸುಪು ಮುಗಿಲೆತ್ತರವೇರಿದರೂ ತಕ್ಷಣ ಸೂಜಿ ಚುಚ್ಚಿದ ಬಲೂನು ನೆಲಕಚ್ಚುವಂತೆ ಅವನ ಪರಿಸ್ಥಿತಿಯಾಗಿತ್ತು. ಬೆಂಗಳೂರಿಗೆ ಯಾರಿಗೂ ಗೊತ್ತಾಗದಂತೆ ವೈದ್ಯರನ್ನು ಕಂಡು ತನ್ನ ಸಮಸ್ಯೆ ವಿವರಿಸಿದ್ದ. ಸಂತಾನವಿಲ್ಲದವರಿಗೆ ನಾಗಪೂಜೆ ಮಾಡಿಸುವಂತೆ ನೂರಾರು ಜನರಿಗೆ ಸಲಹೆ ನೀಡುವ ತನಗೇ ಸಮಸ್ಯೆಯಿದೆ ಎಂಬುವುದನ್ನು ಒಪ್ಪಿಕೊಳ್ಳುವ ಮನಸ್ಥಿತಿ ಅವನದ್ದಾಗಿರಲಿಲ್ಲ. ಅವರ ಸಲಹೆಗಳನ್ನು ಪ್ರಯೋಗಿಸಲು ಮುಂದಾಗದೆ ತನ್ನ ಸುತ್ತಲೇ ಹುತ್ತವೊಂದನ್ನು ಕಟ್ಟಿಕೊಂಡು ತನ್ನ ಸೋಲನ್ನು ಮುಚ್ಚಿಕೊಳ್ಳಲು ಗಾಯತ್ರಿಯ ಮೇಲೆ ಕೂಗಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದ.

* * *

'ನಾ ಕುಂದಾಪುರಕ್ಕೆ ಹೋಗಿ ಬರ್ತೆ, ನೀ ಬಾಗಿಲು ಹಾಕಿ ಮಲಗು' ಎಂದ ಗಂಡನಿಗೆ ಅಲ್ಲಿನ ಹದಿನಾರು ಪವಿತ್ರ ಗಂಟುಗಳಲ್ಲಿ ಅಷ್ಟ ಗಂಟನ್ನು ರಾತ್ರಿಯೆಲ್ಲಾ ತೆಗಿತಿರಿ. ನನ್ನದೊಂದು ಗಂಟು ಬಿಡಿಸಲು ಆಗಲಿಲ್ಲವೇ ಎಂದು ಕೇಳಬೇಕಾದ ಮಾತನ್ನು ಗಂಟಲಲ್ಲೇ ನುಂಗಿ ಬಾಗಿಲು ಭದ್ರಪಡಿಸಿ ಟಿವಿ ಹಾಕಿದಳು. ನಾಣಿ ಮೊದಲಿಗಿಂತಲೂ ಹೆಚ್ಚು ಬ್ಯುಸಿಯಾಗಿದ್ದ. ಸುತ್ತಮುತ್ತಲಲ್ಲಿ ನಾಗಕನ್ನಿಕೆ ಎಂದರೆ ನಾರಾಯಣ ವೈದ್ಯ ಎಂದು ಪ್ರಸಿದ್ಧಿ ಪಡೆದಿದ್ದ. ಒಂದೇ ಸೂರಿನ ಕೆಳಗಿದ್ದರೂ ಅವರಿಬ್ಬರು ಅಪರಿಚಿತರಂತೆ ಬದುಕು ನಡೆಸುತ್ತಿದ್ದರು. ಗಾಯತ್ರಿ ತನ್ನನ್ನು ತಾನು ಮನೆಕೆಲಸದಲ್ಲಿ ತೊಡಗಿಸಿಕೊಂಡರೂ ರಾತ್ರಿಗಳು ಅವಳನ್ನು ಕೊಲ್ಲುತ್ತಿದ್ದವು. ಸುತ್ತಮುತ್ತಲಿನ ಹೆಂಗಸರ ಪ್ರಶ್ನೆಗಳ ಬಾಣಗಳು ಅವಳನ್ನು ಚುಚ್ಚುತ್ತಿದ್ದವು. ಮೊದಮೊದಲು ಅವಳ ಬೆನ್ನಹಿಂದೆ ಬಂಜೆ' ಎಂದು ಮಾತನಾಡುತ್ತಿದ್ದ ಮಾತುಗಳು ಅವಳ ಕಿವಿಗೆ ಬೀಳುವಂತೆ ಕೇಳಿಸಿ ಅವ್ಯಕ್ತ ಆನಂದ ಪಡೆಯುತ್ತಿದ್ದ ಅಗ್ರಹಾರದ ಹೆಂಗಸರಿಗೆಲ್ಲಾ 'ನಾನಲ್ಲ ಬಂಜೆ, ಅವನು ಷಂಡ' ಎಂದು ಕೂಗಿ ಹೇಳಬೇಕೆಂದ ಮಾತುಗಳನ್ನು ನುಂಗಿ ಬತ್ತಿ ಒಸೆಯುತ್ತಿದ್ದಳು.

“ಅವ್ವಾ..ನಾಣಿ ಅಣ್ಣಾರು ಹೊರೆ ಕಾಣಿಕೆ ಸಲ್ಲಿಸುವುದಕ್ಕೆ ಜನ ಬರ್ತಿದ್ದಾರೆ ಮನೆಗೆ ಸಂಜೆಗೆ ಬರ್ತಿನಿ ಅಂತ ಹೇಳ್ ಬಾ' ಅಂದ್ರು ಅಂತ ಸಾಮ ಬಾಗಿಲಲ್ಲಿ ನಿಂತು ಕೂಗಿದ. ಗಾಯತ್ರಿ ತಡಮಾಡದೆ ಬಾಗಿಲು ತೆಗೆದು ಸಾಮನ ಕಣ್ಣುಗಳನ್ನೇ ನೋಡಿದಳು. ಅದೇ ಚಂಚಲ ಕಣ್ಣುಗಳು. 'ಬಿಸಲಲ್ಲಿ ಬಂದಿ...ಹಿಂದಿನ ಬಾಗಿಲಿಗೆ ಬಾ ಕುಡಿಯಲು ತಣ್ಣಗೆ ಪಾನಕ ಕೊಡ್ತಿ' ಎಂದಳು. ಬೇಡ ಎನ್ನಬೇಕು ಎಂಬ ಮಾತನ್ನು ಹಾಗೇ ನುಂಗಿದ ಸಾಮ ಪುಂಗಿಯ ನಾದಕ್ಕೆ ಮನಸೋತ ಹಾವಂತೆ ಹಿಂದಿನ ಬಾಗಿಲಿಗೆ

ಬಂದು ನಿಂತ. ಒಳಗಿನಿಂದ ಬಂದ ಆಕೆ 'ಪಾನಕ ತಣ್ಣಗಿದೆ ತಗೋ' ಎಂದು ಅವನ ಗ್ಲಾಸಿಗೆ ಮೇಲಿನಿಂದ ಹಾಕುತ್ತಾ ಅವನ ಮುಂಗೈಯನ್ನು ಹಾಗೆ ಹಿಡಿದುಕೊಂಡಳು. ಸಾಮನಿಗೆ ಏನು ಮಾಡಬೇಕೆಂದು ತೋರದೆ ಪಿಳಿಪಿಳಿ ಕಣ್ಣುಬಿಟ್ಟ. ಗಾಯತ್ರಿ ಅವನ ತೆರೆದೆದೆಯಲ್ಲಿನ ಕೂದಲಿನ ಮೇಲೆ ಕೈಯಾಡಿಸಿ 'ಸಾಮ ನಾಳೆ ರಾತ್ರಿ ಈ ಬನದಲ್ಲಿ ನಾನು ಮಲಗಬಹುದಾ?' ಎಂದು ಆಸೆಯ ಕಣ್ಣಲ್ಲಿ ಪ್ರಶ್ನಿಸಿದಳು. ಸಾಮನಿಗೆ ಎಂತ ಮಾಡುವುದೋ ತಿಳಿಯದಾಯಿತು.

ಅವನೂರಿನಲ್ಲಿ ಮೇಲವರ್ಗದ ಗಂಡಸರು ತನ್ನ ಹಟ್ಟಿಯ ಹೆಣ್ಣುಗಳ ಜೊತೆ ಕೂಡಿದ್ದು ಅವರಿಗಾದ ಮಕ್ಕಳಿಗೆ ಶ್ರೀನಿವಾಸ, ಕೃಷ್ಣ ಅಂತ ಹೆಸರಿಟ್ಟದ್ದು ನೆಪ್ಪಲ್ಲಿ ಇತ್ತು. ಒಡತಿಯರು ಕರೆದು ಹಾಸಿಗೆಗೆ ಎಳೆದದ್ದು ಅಲ್ಲಿ ಇಲ್ಲಿ ಕಿವಿಗೆ ಬಿದ್ದಿತ್ತು. ಅಂತ ಗಂಡಸರನ್ನು ಗಡಿಪಾರು ಮಾಡಿದ, ಇಲ್ಲವೇ ಅವರ ಹೆಣಗಳು ಅನಾಥವಾಗಿ ಹೊಳೆಯಲ್ಲಿ ತೇಲಾಡಿದ್ದರ ಬಗ್ಗೆ ಹಟ್ಟಿಯಲ್ಲಿ ಮಾತಾಡುತ್ತಿದ್ದದ್ದನ್ನು ನೆನಪು ಮಾಡಿಕೊಂಡ ಸಾಮ ಬೇಡ ಒಡ್ತಿ ಅಂತ ಏನೋ ಹೇಳಲು ಬಾಯಿ ತೆರೆದವನನ್ನು ಗಾಯತ್ರಿ ತನ್ನ ಕೈಯಿಂದ ಬಾಯಿ ಮುಚ್ಚಿ ಅವನ ತುಟಿಗೊಂದು ಮುತ್ತಿಟ್ಟು 'ನಾಳೆ ಕಾಯ್ತಿರುವೆ ರಾತ್ರಿ ಮರಿಬೇಡ ಹಿತ್ತಲ ಬಾಗಿಲು ಹೀಗೆ ತೆರೆದಿರುತ್ತೆ' ಎಂದೆಳೆ ಒಳಕೋಣೆಗೆ ಬಂದು ನಿಂತಳು. ಅವಳ ಎದೆಬಡಿತ ಅವಳಿಗೆ ಕೇಳುವಷ್ಟು ಜೋರಾಗಿ ಬಡಿಯುತ್ತಿತ್ತು.

ಮರುದಿನ ಬೆಳಗ್ಗೆಯೇ ನಾಣಿ ತನ್ನ ಅನುಷ್ಠಾನ ಪ್ರಾರಂಭಿಸಿ, ಪೂಜೆ, ಮಂತ್ರದಲ್ಲಿ ಮುಳುಗಿದ್ದ. ನಾಗನನ್ನು ಆರಾಧಿಸುವ, ನೇಮ-ನಿಷ್ಠೆ ಮಾಡುವ ಈ ಕುಟುಂಬದ ಮರ್ಯಾದೆಯನ್ನು ತಾನು ಹಾಳು ಮಾಡಿದಂತಾಗುತ್ತದಾ? ಒಂದು ವೇಳೆ ಸಾಮನೊಂದಿಗೆ ಸೇರಿದ್ದೇ ಆದರೆ ನಾಗದೇವ ತನ್ನನ್ನು ಸುಮ್ಮನೆ ಬಿಡುವುದೇ? ನಾಗನ ಕೋಪದ ಅರಿವಿದ್ದೂ ತಾನು ಇಡುತ್ತಿರುವ ಹೆಜ್ಜೆ ಸರಿಯಿದೆಯೇ? ದೈವದ ಶಾಪಕ್ಕೆ ಗುರಿಯಾದರೇ? ನನ್ನದಲ್ಲದ ತಪ್ಪಿಗೆ ದಿನವೂ ಇಂಚಿಂಚು ಸಾಯುವ ಬದಲು ಒಮ್ಮೆಲೇ ಸತ್ತು ಬಿಡಲೇ? ನಾನೇಕೆ ಸಾಯಬೇಕು? ಹೀಗೆ ಮನಸ್ಸಿನ ತಾಕಲಾಟದಲ್ಲಿ ಸಿಕ್ಕಿಕೊಂಡವಳು ದೇವರಿಗೆ ಕೈ ಮುಗಿದು ರೂಮಿಗೆ ಬಂದಳು.

ತಾನು ಮಾಡುತ್ತಿರುವುದು ಸರಿಯೋ ತಪ್ಪೋ ಎಂಬ ಲೆಕ್ಕವನ್ನು ಮೀರುವ ಧೃಡ ನಿರ್ಧಾರ ಮಾಡಿದಳು. ಅವಳ ದೇಹ ಗಂಡಿನ ಸಂಗದಿಂದ ಮಾತ್ರ ತಣಿಯಬಲ್ಲದು ಎಂಬ ಸತ್ಯದ ಅರಿವಾಗಿತ್ತು. ಅದು ತನ್ನ ಗಂಡನಿಂದ ಸಾಧ್ಯವಿಲ್ಲ ಎಂಬ ಸತ್ಯದರ್ಶನವನ್ನು ಎದೆಯಲ್ಲಿಯೇ ಅದುಮಿಟ್ಟುಕೊಂಡದ್ದು ಸಾಕಾಗಿ ಸಾಮನ ಬಳಿ ವ್ಯಕ್ತಪಡಿಸಿದ್ದಳು. ಅವಳ ಅಂತರ್ಯಕ್ಕೆ ಸಾಮ ನಿರಾಸೆ ಮಾಡಲಾರನೆಂಬ ಭರವಸೆ. ಇಳಿಸಂಜೆಯಲ್ಲಿ ನಾಣಿ ತನ್ನ ನಾಗಕನ್ನಿಕೆಯ ವೇಷ ಧರಿಸಿ ಕಾರಿನಲ್ಲಿ ಹೋಗುವುದನ್ನೇ ನೋಡುತ್ತಿದ್ದ ಗಾಯತ್ರಿ ರಾತ್ರಿ ಸಾಮನಿಗಾಗಿ ಕಾಯುತ್ತಲಿದ್ದಳು.

“ಐದು ತಿಂಗಳಾಗಿದೆ. ಮಗು ತಾಯಿ ಚೆನ್ನಾಗಿದ್ದಾರೆ' ಹೊಟ್ಟೆ ನೋವೆಂದ ಗಾಯತ್ರಿಯನ್ನು ಉಡುಪಿಯ ಆಸ್ಪತ್ರೆಗೆ ಕರೆತಂದ ನಾರಾಯಣ ವೈದ್ಯನಿಗೆ ಹೇಗೆ ಪ್ರತಿಕ್ರಿಯಿಸಬೇಕೆಂದು ತೋರದೆ ಪೇಲವ ನಗೆ ನಕ್ಕ. ಲೇಡಿ ಡಾಕ್ಟರ್ ಮುಂದಿನ



ತಿಂಗಳ ಡೇಟ್ ಗುರುತಿಸಿ, ಮಾತ್ರೆ, ಟಾನಿಕ್ ಬರೆದು ತೆಗೆದುಕೊಳ್ಳುವಂತೆ ಹೇಳಿ ಕಳುಹಿಸಿದರು. ನಾಣಿ ಕಾರಿನಲ್ಲಿ ಕುಳಿತವನೇ 'ನೀ ಬಸುರಿಯಾಗಿರುವುದು ನನ್ನಿಂದಂತೂ ಅಲ್ಲ. ಯಾರವನು ಬೋಸುಡಿ ಮಗ?' ಎಂದು ಗಂಟಲವರೆಗೆ ಬಂದ ಮಾತನ್ನು ಹಾಗೇ ನುಂಗಿಕೊಂಡು ಗಾಯತ್ರಿಯೆಡೆಗೆ ಕನ್ನಿಕೆಯ ಅಸಹಾಯಕ ನೋಟವನ್ನೊಮ್ಮೆ ಬೀರಿದ.

# ನೀರ ಮಣಿಗಳ ಮಾಲೆ

**- ಸುನಂದಾ ಪ್ರಕಾಶ ಕಡಮೆ**

ಜಿಟಿಜಿಟಿ ಮಳೆ ಸುರಿಯುತ್ತಿದ್ದ ಒಂದು ಸಂಜೆಯ ಹೊತ್ತಿನಲ್ಲಿ ತಮ್ಮ ಬೈಕನ್ನೇರಿ ವಿಳಾಸ ಹುಡುಕುತ್ತ ಬಂದ, ವಿಶ್ವನಾಥ ಮಂಜುಳಾ ದಂಪತಿ ಕೊಂಚ ಭಯಮಿಶ್ರಿತ ಖುಷಿಯ ಸಂಭ್ರಮದಲ್ಲೇ ಸಂಜೀವಿನಿ ಕಟ್ಟಡದ ಮೂರನೇ ಅಂತಸ್ತಿನ ಗ್ರಾನೈಟಿನ ಅಗಲ ಮೆಟ್ಟಿಲುಗಳನ್ನು ಏದುಸಿರು ಬಿಡುತ್ತಲೇ ಏರತೊಡಗಿದರು. ಮಳೆಯಲ್ಲಿ ತೊಯ್ದು ರಂಗುಗೆಡುವ ಬಿಸಾಟೂ ಇಲ್ಲದೇ ಮಂಜುಳಾ ತನ್ನ ಅಣ್ಣನ ಮಗನ ಮದುವೆಗೆ ಕೊಂಡ ಜರತಾರಿ ಸೀರೆಯನ್ನೇ ಉಟ್ಟುಕೊಂಡಿದ್ದಳು. ಯಾತಕ್ಕಾದರೂ ಇರಲಿ, ನಮಗೆ ಬಹುಮಾನ ಬಂದಿದೆಯಂತೆ, ಅದನ್ನು ತೊಗೊಳ್ಳಲು ಸಾದಾ ಸೀರೆ ಉಟ್ಟು ಯಾಕೆ ಬರುವದು, ಪತ್ರಿಕೆಯವರು ಟೀವಿಯವರು ಯಾರ್‍ಯಾರು ಬರುತ್ತಾರೆ ಗೊತ್ತಾಗುವುದಿಲ್ಲ, ನಾಳಿನ ಪತ್ರಿಕೆಯಲ್ಲಿ ಬಂದ್ರೂ ಬರಬಹುದು ಅಲ್ವೇನ್ರೀ? ಎನ್ನುತ್ತ ಗಂಡನಿಗೂ ಒಪ್ಪುವ ನೀಲಿ ಬಣ್ಣದ ಫುಲ್‌ಶರ್ಟು ತೊಡಲು ಹೇಳಿ ಕರೆತಂದಿದ್ದಳು.

'ಸಂದೇಶ್ ಅಂತ, ನಾವು ಕಂಟ್ರಿಕ್ಲಬ್‌ನಿಂದ ಮಾತಾಡ್ತಿರೋದು, ಬಿಗ್ ಬಜಾರಿನಲ್ಲಿ ನೀವು ಫಿಲ್‌ಅಪ್‌ದ ಕೂಪನ್; ಲಾಟರಿಎತ್ತಿದಾಗ ನಿಮ್ಮ ಫೋನ್ ನಂಬರ್‌ಗೆ ಬಹುಮಾನ ಬಂತು, ನಿಮಗೊಂದು ಗಿಫ್ಟ್ ಇದೆ, ಇಂಥ ದಿನ ಇಂಥ ಸಮಯ, ಬರಲೇಬೇಕು ನೀವು ಪತ್ನಿ ಸಮೇತರಾಗಿ' ಅಂತ ಹೇಳಿದ ಆ ಮಧುರವಾದ ಫೋನಿನ ದನಿ ಇನ್ನೂ ವಿಶ್ವನಾಥನ ಕಿವಿಯಲ್ಲಿ ಅನುರಣಿಸುತ್ತಿತ್ತು. ಆಗಲೇ ಸಂದೇಶ್ ಲಾಟರಿ ಅಂತ ಆ ನಂಬರನ್ನು ವಿಶ್ವನಾಥ ತನ್ನ ಮೊಬೈಲ್‌ನಲ್ಲಿ ಫೀಡ್ ಸಹ ಮಾಡಿಕೊಂಡಿದ್ದ. ಅದೇಧ್ಯಾನದಲ್ಲಿ ವಿಶ್ವನಾಥ ತಲೆಗೆ ಹಾಕಿದ ಹೆಲ್ಮೆಟ್ ತೆಗೆಯುವದನ್ನೇ ಮರೆತುಬಿಟ್ಟಿದ್ದ. ಈಗ ಒಮ್ಮೆಲೇ ತಲೆ ಬೆವೆತ ಅನುಭವವಾಗಿ ನಿಧಾನ ಗದ್ದದ ಬಳಿಯ ಬಕ್ಕಲ್ ಕಳಚಿ ಹೆಲ್ಮೆಟ್ ತೆಗೆದು ಹಿಡಿದುಕೊಂಡಾಗ; ಅದರ ಮುಂಭಾಗಕ್ಕೆ ನೀರ ಮಣಿಗಳ ಮಾಲೆಕಟ್ಟಿ ನಿಂತಿತ್ತು. ಅದು ವಜ್ರದ ಹರಳಿನಂತೆ ಥಳ ಥಳ ಹೊಳೆಯುತ್ತಿತ್ತು. ಅದನ್ನು ಹಾಗೇ ತೋರು ಬೆರಳಲ್ಲಿ ಒರೆಸಿ ಪಕ್ಕದ ಗೋಡೆಗೆ ಸಿಂಪಡಿಸಿದ. ಗೋಡೆಯಿಂದ ಕೆಳಗಿಳಿದ ಹನಿಗಳು ತೊಯ್ದು ಒಂದೆರಡು ಗೆರೆ ಮೂಡಿಸಿದವು.

ಮೇಲೇರಿದ ಕೊನೆಯ ಮೆಟ್ಟಿಲಿಂದ ಹೆಜ್ಜೆ ತೆಗೆದು ಮುಂದಿಡುವಷ್ಟರಲ್ಲಿ ಬಿಳೀಶರ್ಟು ನೀಲಿ ಪ್ಯಾಂಟಿನ ಸಮವಸ್ತ್ರದಲ್ಲಿರುವ ಒಬ್ಬ ಯುವಕ 'ಹೆಲೋ ಸರ್, ಹೆಲೋ ಮ್ಯಾಡಂ, ಕಂಟ್ರಿ ಕ್ಲಬ್‌ಗೆಸ್ಟ್ ಅಲ್ವೇ? ಬನ್ನಿ' ಅಂತ ಸೆಲ್ಯೂಟ್ ಹೊಡೆದಿದ್ದ. ಆತ ಕತ್ತಿಗೆ ಬಿಗಿದುಕೊಂಡ ಟೈ ಗಾಳಿಗೆ ತುಸುವೇ ತುದಿ ಮಡಚುತ್ತ ಹಾರಾಡುತ್ತಿತ್ತು. ತಮ್ಮನ್ನು ಆಹ್ವಾನಿಸಿದ ಕಂಟಕ್ಲಬ್ಬಿನ ಸಿಕ್ಕಾ ಇರುವ ಟೈ ಅದು, ವಿಶ್ವನಾಥ ಅದರೊಳಗಿನ ಬರಹವನ್ನು ಸೂಕ್ಷ್ಮವಾಗಿ ಗಮನಿಸಿದ. ಆ ಯುವಕ ಎದುರಾದ ಒಂದು ಗಾಜಿನ ಬಾಗಿಲನ್ನು ದೂಡಿ ಒಳಕರೆದು ಒಂದು ಮೆತ್ತನೆಯ ಸೋಫಾದಲ್ಲಿ ಇಬ್ಬರನ್ನೂ ಕೂಡಿಸುತ್ತ ಅಲ್ಲೇ ಇರುವ ಗಾಜಿನ ಕೌಂಟರಿನತ್ತ ಮುಖ ಮಾಡಿ ಸಣ್ಣ ಸನ್ನೆ ಮಾಡಿ ಹೊರ ಹೊರಟ. ಕೈಯಲ್ಲಿರುವ ತೊಯ್ದ ಹೆಬ್ಬೆಟ್ಟು ಎಲ್ಲಿಡುವುದೆಂದೇ ತಿಳಿಯದ ವಿಶ್ವನಾಥ ಕೊಂಚ ಅನುಮಾನಿಸುತ್ತ ಎದುರಿನ ಗಾಜಿನ ಟೀಪಾಯಿಯ ಮೇಲೆ ಇರಿಸಿದ.

ಆಫೀಸು ಕೋಣೆಯಂತಿರುವ ಆ ಗಾಜಿನ ಚೇಂಬರಿನಿಂದ ಇನ್ನೊಬ್ಬ ಯುವಕ ಅವಸರದಲ್ಲಿ ಹೊರ ಬಂದು'ಮಿಸ್ಟರ್ ವಿಶ್ವನಾಥ್ ? ಮಿಸೆಸ್ ಮಂಜುಳಾ ಅಲ್ಲವೇ?' ಅಂತ ಅತ್ಯಂತ ವಿನಯತುಂಬಿದ ದೇಹ ಭಾಷೆಯಲ್ಲಿ ಕೇಳಿದ್ದ. ಒಂದೇ ತರಹದ ಅವರ ಯೂನಿಫಾರ್ಮನ್ನು ದಿಟ್ಟಿಸುತ್ತ 'ಹೌದು' ಎನ್ನುತ್ತ ಎದ್ದು ನಿಂತ ವಿಶ್ವನಾಥನನ್ನು ಕೈ ಹಿಡಿದು ಕೂಡಿಸುತ್ತ 'ಅಯ್ಯೋ ಕೂಡಿ ಕೂಡಿ' ಎನ್ನುತ್ತ ಆ ತರುಣ ತನ್ನ ಕೈಯಲ್ಲಿರುವ ಫೈಲಿನಲ್ಲಿದ್ದ ಒಂದು ಹಾಳೆ ತೆಗೆದು 'ಇಲ್ಲಿ ನಡೆವ ಮೀಟಿಂಗು ಅಟೆಂಡ್ ಮಾಡಿ ನಿಮ್ಮ ಒಂದು ಗಂಟೆ ಅವಧಿಯ ಟೀಟ್‌ನಲ್ಲಿ ಪಾಲ್ಗೊಳ್ಳುತ್ತೇವೆ' ಎಂಬ ಒಕ್ಕಣೆಯಿರುವ ಅದರ ಕೆಳಗಡೆ ಸಹಿ ಹಾಕಲು ಹೇಳಿದ. ವಿಶ್ವನಾಥ ಓದಿಕೊಂಡು ವೋಟು ದೊಡ್ಡದೇ ಇರಬೇಕು' ಮನಸ್ಸಿನಲ್ಲೇ ಲೆಕ್ಕ ಹಾಕುತ್ತ ಸಹಿ ಹಾಕಿದ. ಇವಳದೂ ಸಹಿ ಬೇಕೋ?' ಕೇಳಿದಕ್ಕೆ ಆ ಯುವಕ ಇರಲಿ ಬೇಡ, ನಿಮ್ಮದು ಸಾಕು, ಒಂದೇ ಫೆಮಿಲಿ ಅಲ್ವೇ' ಅಂತ ಸಣ್ಣಗೆ ನಗುತ್ತ ಒಳಹೋಗಿದ್ದ. ಆಗ ಅಲ್ಲಿಂದಲೇ ಒಂದು ಸುಂದರವಾದ ಹುಡುಗಿ ಹೊರಬಂದು ಮತ್ತೆ 'ಹಾಯ್ ಸರ್, ಹೆಲೋ ಮ್ಯಾಡಂ' ಹೇಳುತ್ತ ಎದುರು ಕುರ್ಚಿಯಲ್ಲಿ ಕೂತು 'ಹತ್ತು ನಿಮಿಷ ಅಷ್ಟೇ, ಒಂದು ಸೆಷನ್ ಇದೀಗ ಮುಗೀತು, ನೆಕ್ಸ್ಟ್ ನೀವೇ' ಅಂದಳು. ಆಯ್ತು ಎನ್ನುತ್ತ ವಿಶ್ವನಾಥ ಹೆಂಡತಿಯ ಮುಖ ನೋಡಿದ. ನಸುನಗುವಿನ ಆ ಯುವತಿ ಕೂಡ ಯುವಕರ ಶೈಲಿಯ ಅಂಥದೇ ಸಮವಸ್ತ್ರ ತೊಟ್ಟಿದ್ದಳು.

'ಮ್ಯಾಡಂ ಏನು ಸರ್ವಿಸ್‌ನಲ್ಲಿದ್ದೀರಾ?' ಅಂತ ಅವಳು ಮಂಜುಳೆಯೊಂದಿಗೆ ಮಾತಿಗಾರಂಭಿಸಿದಾಗ ವಿಶ್ವನಾಥ ಕೋಣೆಯಲ್ಲೆಲ್ಲ ಕಣ್ಣಾಡಿಸುತ್ತ ಕುಳಿತಿದ್ದ, ಎಲ್ಲೆಡೆ ಸುಮ್ಮಸುಮ್ಮನೇ ವಿದ್ಯುದ್ದೀಪಗಳು ಉರಿಯುತ್ತಿದ್ದವು. ಅದೇಕೆ ಈ ರೀತಿ ಲೈಟ್‌ಗಳನ್ನೆಲ್ಲ

ಹಚ್ಚಿಡುತ್ತೀರಿ ಅಂತ ಅವನಿಗೆ ಆ ಕ್ಷಣ ಕೇಳಿಯೇ ಬಿಡಬೇಕೆನಿಸಿದರೂ ಅಲ್ಲೇ ಸುಮ್ಮನಾದ. ಮಂಜುಳಾ 'ನಾನು ನೌಕರಿ ಇಲ್ಲ, ಇವರು ಮಾಡುತ್ತಾರೆ, ನಾನು ಮನೆಯಲ್ಲೇ ಪ್ರೈಮರಿಯವರಿಗೆ ಟ್ಯೂಷನ್ನು ಕೊಡುತ್ತೇನೆ' ಎಂತೇನೋ ಹೇಳುತ್ತಿದ್ದುದಕ್ಕೆ ಇರಲಿ ಬಿಡಿ, ನಾನು ಮನೆಯಲ್ಲೇ ಅಂತ ಸಣ್ಣ ಮುಖ ಮಾಡಿಯಾಕೆ ಹೇಳುತ್ತೀರಿ? ಅವರಿಗೆ ಸರ್ವಿಸ್ ಮಾಡಲು ಶಕ್ತಿ, ನಿಮ್ಮ ಅಡುಗೆ ಮನೆಯಿಂದಲೇ ಹೋಗಬೇಕಲ್ಲವೇ?' ಅಂತೇನೋ ಸಮಜಾಯಿಸಿ ಕೊಡುತ್ತಿದ್ದಳು. ಆಗ ಮಂಜುಳೆಯೇ 'ಯಾಕೆ ನೀವು ಇಷ್ಟೆಲ್ಲ ಲೈಟುಗಳನ್ನು ಅದೂ ಹಗಲಿನ ವೇಳೆಯಲ್ಲಿ ಹಚ್ಚಿಟ್ಟಿದ್ದೀರಿ?' ಅಂತ ಕೇಳಿಯೇ ಬಿಟ್ಟಿದ್ದಳು. ಆ ತರುಣಿ ಅದೇ ನಸುನಗುವಿನಲ್ಲೇ 'ಸೋಲಾರ್ ಸಿಸ್ಟೆಮ್ ಇದೆ ಮ್ಯಾಡಂ, ಜಾಸ್ತಿ ಎಲೆಕ್ಟ್ರಿಸಿಟಿ ಬಿಲ್ ಬರುವುದಿಲ್ಲ, ನಿಮ್ಮ ಹಾಗೆ ಗಿಫ್ಟ್ ಪಡೆಯಲು ನೂರಾರು ಜನ ಬಾರ್ತಾರೆ, ಅವರನ್ನು ಹೇಗೆ ಕತ್ತಲಲ್ಲಿ ಕೂಡಿಸುವದು?' ವಿಶ್ವನಾಥನ ಕಿವಿ ಇದ್ದಲ್ಲೇ ನಿಚ್ಚಳವಾಗಿತ್ತು. ಆಗಲೇ ಗೊತ್ತಾದದ್ದು ಅವನಿಗೆ ತಮ್ಮಂತೆಯೇ ಇನ್ನೂ ತುಂಬ ಜನ ಗೆಸ್ಟ್ ಬರುವವರಿದ್ದಾರೆ ಎಂದು. ಎಲ್ಲಿ ನಡೀತದೆ ಫಂಕ್ಷನ್?' ಅಂತ ಕಣ್ಣರಳಿಸಿದ್ದಳು ಮಂಜುಳಾ ಇಲ್ಲೇ ಪಕ್ಕದ ಎಡಿಟೋರಿಯಂನಲ್ಲಿ ಸಂಭಾಷಣೆ ಹೀಗೆ ಸಾಗಿದ್ದಾಗಲೇ ಗ್ಲಾಸಿನಲ್ಲಿ ಆರೇಂಜ್‌ಜ್ಯೂಸ್ ಬಂತು. ವಿಶ್ವನಾಥ ಕುಡಿದ, ಮಂಜುಳಾ ತನಗೆ ಶೀತ ಅನ್ನುತ್ತ ನಿರಾಕರಿಸಿದ್ದಳು.

'ಫಂಕ್ಷನ್‌ಗೆ ಗೆಸ್ಟ್ ಯಾರು ಬರುತ್ತಾರೆ?' ಅಂತ ಯಾವುದೋ ಲಹರಿಯಲ್ಲಿ ವಿಶ್ವನಾಥ ಆ ತರುಣಿಯೆಡೆ ತಿರುಗಿಕೇಳಿಯೇ ಬಿಟ್ಟ. 'ನಮ್ಮ ಕಂಪನಿಯ ಚೇರ್ ಪರ್ಸನ್ ಇರ್ತಾರೆ, ನಿಮ್ಮ ಹಾಗೆ ಗಿಫ್ಟ್ ಪ್ಯಾಕ್ ಪಡೆದ ಇನ್ನೂ ಇಪ್ಪತ್ತು ಜನ ಬಂದಿರುತ್ತಾರೆ' 'ಓಹ್ ಹಾಗಾದರೆ ಇನ್ನೂ ಇಪ್ಪತ್ತು ಜನರಿಗೆ ಗಿಫ್ಟ್ ಬಂದಿದೆಯೇ?' 'ಹೌದು, ಅವರೆಲ್ಲ ಬರುತ್ತಾರೆ, ನೀವೂ ಅವರೆಲ್ಲರ ಪರಿಚಯ ಮಾಡಿಕೊಳ್ಳಬಹುದು, ನೋಡಿ ಈ ರೀತಿಯ ಫಂಕ್ಷನ್ ನಲ್ಲಿ ಪಾಲ್ಗೊಳ್ಳುವುದರಿಂದ ಬೇರೆ ಬೇರೆ ಜನರ ಪರಿಚಯ ಆಗ್ತದೆ, ಮತ್ತು ಯೋಚನೆಗಳು ಎಕ್ಸಾಂಡ್ ಆಗ್ತವೆ, ಮತ್ತು ಬೇರೆ ಬೇರೆ ನಾಲೇಡ್ಜ್ ಬರ್ತದೆ 'ಅಂತೆಲ್ಲ ತನಗೆ ಕಂಪನಿ ಕಲಿಸಿದ ವಿದ್ಯೆಯನ್ನು ಹೊರ ಹಾಕತೊಡಗಿದಳು. ಅಷ್ಟರಲ್ಲಿ ಇನ್ನೊಂದು ಜೋಡಿ ಬಂತು. ಅವರೂ ಎಂಥದೋ ಅಪರಿಮಿತ ಸಂಭ್ರಮದಲ್ಲಿದ್ದಂತೆ ಕಂಡರು ವಿಶ್ವನಾಥನಿಗೆ ಅವರಿಗೂ ಥೇಟು ಇದೇ ರೀತಿಯ ಆತಿಥ್ಯ, ಏನು ಮಾಡುತ್ತಿದ್ದಾರೆ ಇವರು? ಕಾರಣವಿಲ್ಲದೇ ಯಾಕೆ ಇಂಥ ಒಳ್ಳೆಯ ಟ್ರಿಟ್ ಕೊಡುತ್ತಾರೆ? ಎಂಬ ಯೋಚನೆಗಳು ಬಂದು ಹೋದರೂ ಕಾದು ನೋಡುವಾ ಅಂತ ಸುಮ್ಮನೇ ಅತ್ತಿತ್ತ ಕಣ್ಣು ಹಾಯಿಸುತ್ತ ಮೊಬೈಲಿನಲ್ಲಿ ಒಮ್ಮೆ ಸಮಯ ನೋಡಿದ. ಚೇಂಬರಿನ ಕೌಂಟರ್ ಕಡೆ ಎದ್ದು ಹೋಗಿ ನಮಗೆ ಸ್ವಲ್ಪ ಬೇರೆ ಕೆಲಸವಿತ್ತು, ಎಷ್ಟೊತ್ತು ಇನ್ನೂ?' ಕೇಳಿದ. 'ಎರಡೇ ಎರಡು ನಿಮಿಷ, ಕೂತ್ಕೊಳ್ಳಿ ಸಾರ್' ಎನ್ನುವ ಉತ್ತರ ಅಲ್ಲಿ ತೀರಾ ಧೈನ್ಯತೆಯಿಂದ ಬಂತು.

ವಿಶ್ವನಾಥ ಆ ವ್ಯಕ್ತಿಯನ್ನೂ ಮಂಜುಳಾ ಆ ಹೆಂಗಸನ್ನೂ ಒಮ್ಮೆ ಕಣ್ಣು ಹೊರಳಿಸಿ ನೋಡಿ ನಗಬೇಕೋ ಬೇಡವೋ ಎಂಬ ಸಂದೇಹದಲ್ಲೇ ಕೊನೆಗೂ ಮುಗುಳು ನಕ್ಕರು. ಅಷ್ಟರಲ್ಲೇ ಹೊರಗಿನಿಂದ ಬಂದ ಇನ್ನೊಬ್ಬ ತರುಣ 'ಹಲೋ ಐ ಯಾಮ್ ಸಂದೇಶ್, ಬನ್ನಿ 'ಎನ್ನುತ್ತ ಇಬ್ಬರು ಗಂಡಸರಿಗೂ ಶೇಕ್ ಹ್ಯಾಂಡ್ ಮಾಡಿ ಪಕ್ಕದ ಸಂಭಾಂಗಣಕ್ಕೆ ಕರೆದೊಯ್ದು. ವಿಶ್ವನಾಥನಿಗೆ ಹೆಲ್ಮೆಟ್ ತೊಗೊಳ್ಳುವದೋ ಇಲ್ಲೇ ಇಡುವುದೋ ಮತ್ತೆ ಅನುಮಾನಕಾಡಿತು. ಆಗ ಬಂದತರುಣನೇ ನಿಮ್ಮತಲೆ ನಿಮ್ಮ ಬಳಿಯೇ ಇಟ್ಟುಕೊಳ್ಳಿ 'ಅಂತದೊಡ್ಡಜೋಕು ಮಾಡಿದವನಂತೆ ತಾನೇ ನಕ್ಕಿದ್ದ. “ಹೌದು ಅದೇ ಸರಿ' ಅಂದನಾದರೂ ವಿಶ್ವನಾಥ ಮನಸ್ಸಿನಲ್ಲೇ ನಮ್ಮ ತಲೆ ನಮ್ಮ ಬಳಿಯೇ ಉಂಟು' ಅಂದು ಕೊಳ್ಳುತ್ತಲೇ ಅವನನ್ನು ಹಿಂಬಾಲಿಸಿದ್ದ. 'ಫೋನ್ ಮಾಡಿದ್ದು ನೀವೇ ಅಲ್ಲವೇ?”ಅಂತ ಕೇಳುತ್ತಲೇ ವಿಶ್ವನಾಥ, ಲಾಟರಿ ಸಿಸ್ಟೆಮ್ಮಿನ ಕುರಿತು ಕೇಳಲಾರಂಭಿಸಿದ್ದೇ ಸಂದೇಶ್ ಎಲ್ಲ ಹೇಳುತ್ತೇವೆ, ಇದೀಗ ಎಲ್ಲ ಹೇಳುತ್ತೇವೆ 'ಅಂತ ಯಾವ ಮಾತನ್ನೂ ಮುಂದುವರೆಸಲಿಲ್ಲ.

* * *

ಅಂತಸ್ತಿನ ಇಡಿಯಾಗಿ ಹರಡಿಕೊಂಡಿರುವ ಹವಾನಿಯಂತ್ರಿತ ಸಭಾಂಗಣವದು. ಅಲ್ಲೊಂದು ಇಲ್ಲೊಂದು ಹೀಗೆ ಗೋಲಾಕಾರದಲ್ಲಿ ನೀಟಾಗಿ ಜೋಡಿಸಿದ ಟೇಬಲ್ಲು ಕುರ್ಚಿಗಳು. ಅದರ ಮೇಲೆ ಹಾಸಿದ ಬಿಳಿಯ ಮಕಮಲ್ಲಿನ ವಸ್ತ್ರ. ಒಂದು ಟೇಬಲ್ಲಿನಲ್ಲಿ ಆ ಗಂಡ ಹೆಂಡತಿಯೂ ಇನ್ನೊಂದು ಟೇಬಲ್ಲಿಗೆ ಈ ಗಂಡ ಹೆಂಡತಿಯೂ ಕುಳಿತರು. ಇನ್ನೂ ಹತ್ತು ಹನ್ನೆರಡು ಟೇಬಲ್ಲುಗಳು ಖಾಲಿ ಬಿದ್ದಿದ್ದವು. ಹದಿನೈದು ನಿಮಿಷ ಆ ಸಭಾಂಗಣದ ಶ್ರೀಮಂತಿಕೆಯನ್ನು ಸವಿಯುತ್ತ ಕೂತಿರುತ್ತಿ ದ್ದಂತೆಯೇ ಇನ್ನೂ ನಾಲ್ಕು ಜೋಡಿಗಳು ಅದೇ ಗತ್ತಿನಲ್ಲಿ ಬಂದು ಕೂತವು. ಒಟ್ಟೂ ಆರು ಜೊತೆ ದಂಪತಿಗಳಲ್ಲಿ ತನ್ನ ಪರಿಚಯದವರಾರಾದರೂ ಇದ್ದಾರೋ ಅಂತ ವಿಶ್ವನಾಥನೂ ಮಂಜುಳೆಯೂ ಅವರೆಲ್ಲರ ಬದಿ ಒಮ್ಮೆ ಕಣ್ಣಾಡಿಸಿದರು. ಆ ಜೋಡಿಗಳೂ ಹಾಗೆಯೇ ಬೇರೆ ದಂಪತಿಗಳನ್ನೇ ದಿಟ್ಟಿಸುತ್ತಿದ್ದರು.

'ಲೇಡೀಸ್ ಆಂಡ್ ಜಂಟಲ್ ಮ್ಯಾನ್'ಅಂತ ಆರಂಭಿಸಿದ ಒಬ್ಬ ವ್ಯಕ್ತಿ ಎಲ್ಲರನ್ನುದ್ದೇಶಿಸಿ ಇಂಗ್ಲೀಷ್ ಹಾಗೂ ಹಿಂದಿಯಲ್ಲಿ ದೂರದಲ್ಲೇ ನಿಂತು ಭಾಷಣ ಮಾಡಿದ. ಎಲ್ಲರೂ ತಮಗೆ ಅರ್ಥವಾದವರಂತೆ ಮುಖದಲ್ಲಿ ನಗು ಅರಳಿಸಿಕೊಂಡು ಚಪ್ಪಾಳೆ ಹೊಡೆದರು. ಲಾಟರಿ ಹೊಡೆದು ಬಹುಮಾನ ಗೆದ್ದ ಪುರಸ್ಕೃತರಲ್ಲವೇ ಎಂಬ ಹಮ್ಮುಬಿಮ್ಮು ಎಲ್ಲ ಗಂಡ ಹೆಂಡಿರ ಮುಖದಲ್ಲೂ ಎದ್ದು ಕಾಣುತ್ತಿತ್ತು. ಎಲ್ಲ ಟೇಬಲ್ಲಿನಲ್ಲೂ ಸರ್ವಾಲಂಕೃತ ಪತ್ನಿಸಮೇತರಾಗಿ ಬಂದುಕೂತ ದಂಪತಿಗಳು, ಸುತ್ತಲೂ ಝಗಮಗಿಸುವ ವಿದ್ಯುದ್ದೀಪಗಳ ಬೆಳಕು. ಹೊರಗೆ ಕತ್ತಲೆ ಆವರಿಸಿದ್ದೇ

ಮಂಜುಳೆಗೆ ತಿಳಿಯಲಿಲ್ಲ. ವಿಶ್ವನಾಥ ಪದೇ ಪದೇ ತನ್ನ ಪುಟ್ಟ ಮೊಬೈಲನ್ನು ಶರ್ಟಿನ ಜೇಬಿನಿಂದ ತೆಗೆದು ಸಮಯ ನೋಡುತ್ತಿದ್ದ. ತಮ್ಮ ನಿಯಮಗಳನ್ನು ಕಾಮನ್ ಆಗಿ ಎಲ್ಲರಿಗೂ ಹೇಳಿ ಮುಗಿದ ನಂತರಎಲ್ಲ ದಂಪತಿಗಳ ಟೇಬಲ್ಲಿಗೂ ಒಬ್ಬೊಬ್ಬರು ಸಮವಸ್ತ್ರ ತೊಟ್ಟಯುವಕರು ನಡೆದು ಬಂದರು. ಆ ಯುವಕರ ಹಿಂದೆಯೇ ಹಬೆಯಾಡುವಬ್ರೂ ಇನ್ಸಟಂಟ್ ಕಾಫಿ ಬಂತು. ವಿಶ್ವನಾಥ ಕಾಫಿ ಹೀರುತ್ತ `ಇದೇನುಕಾಫಿ ಸಿಸ್ಟೆಮ್ ನಿಮ್ಮದು? ಈ ಕಡೆಯೆಲ್ಲ ನಾವು ಹಾಚದವರು' ಅಂತೇನೋ ಮಾತಿಗಿಳಿದಿದ್ದ.

'ಹಾಯ್, ನಮಸ್ಕಾರ' ಎನ್ನುತ್ತ ಮಂಜುಳೆಯ ಟೇಬಲ್ಲಿಗೆ ಬಂದು ವಿನಯಶೀಲನಾಗಿ ಕೈಕುಲುಕಿ ಎದುರು ಕುರ್ಚಿಯಲ್ಲಿ ಆಗಲೇ ಆಸೀನನಾಗಿದ್ದ ಯುವಕ ತನ್ನ ಹೆಸರು ಚೇತನ್ ಎಂದು ಪರಿಚಯಿಸಿಕೊಂಡಿದ್ದ. ವಿಶ್ವನಾಥನ ಕಾಫಿ ಮತ್ತು ಚಹದ ವಿಷಯವನ್ನು ಅವನು ಕೇಳಿಸದಂತೆ ನಟಿಸಿದ. ಇವರೂ 'ಹಾಯ್ ಹೆಲೋ' ಹೇಳಿ ಹಲ್ಲು ಗಿಂಜುತ್ತ ಆ ಹುಡುಗನ ಜೊತೆ ಆಪ್ತ ಸಮಾಲೋಚನೆಯಲ್ಲಿ ತೊಡಗಿದರು. ವಿಶ್ವನಾಥ 'ನೀವು ಇಲ್ಲಿ ಎಷ್ಟು ವರ್ಷದಿಂದ ಕೆಲಸಕ್ಕಿದ್ದೀರಿ? ಎಷ್ಟು ಸಂಬಳ ಕೊಡುತ್ತಾರೆ? ನಿಮ್ಮ ಮನೆಯೆಲ್ಲಿ? ನೀವು ಕಲಿತದ್ದೆಷ್ಟು? ಅಂತೆಲ್ಲ ಆ ಹುಡುಗನ ಪೂರ್ವಾಪರ ವಿಚಾರಿಸಿಕೊಳ್ಳತೊಡಗಿದ್ದೇ ಚೇತನ ಇದ್ದಲ್ಲೇ ಚೇತರಿಸಿಕೊಂಡು 'ಓಕೆ ಇಲ್ಲಿ ನನ್ನದು ಮುಖ್ಯವಲ್ಲ, ಈವತ್ತು ನೀವು ನಮ್ಮಗೆಸ್ಟ್, ನಿಮ್ಮ ಬಗ್ಗೆ ಹೇಳಿ' ಅನ್ನುತ್ತ ಟೈ ಸರಿ ಮಾಡಿಕೊಳ್ಳುತ್ತ ನೆಟ್ಟಗೆ ಕೂತು ಬೇರೆ ವಿಷಯ ತೆಗೆದು ವಿಚಾರಣೆಗೆ ಸಿದ್ಧಗೊಂಡಿದ್ದ. ಆ ಯುವಕನ ಹಣೆಯಲ್ಲಿಜಾರಿ ಬೀಳುತ್ತಿದ್ದ ತಲೆಗೂದಲು ಆತ ಮೇಲೆ ಮಾಡಿಕೊಂಡ ತಕ್ಷಣ ಪುನಃ ಅಲ್ಲೇ ಬೀಳುತ್ತಿತ್ತು. 'ನೋಡಿ ಸಾರ್, ನೀವು ಹುಟ್ಟಿ ಬೆಳೆದದ್ದು ಎಲ್ಲೋ, ನಾನು ಹುಟ್ಟಿ ಬೆಳೆದದ್ದು ಎಲ್ಲೋ, ಆದರೂ ಈಗ ನಾವು ಒಬ್ಬರಿಗೊಬ್ಬರು ಆತ್ಮೀಯರಾಗಿದ್ದೇವೆ, ಇವೆಲ್ಲ ಋಣಾನುಬಂಧ' ಹುಡುಗತನ್ನ ವಯಸ್ಸಿಗೆ ಮೀರಿದ ಮಾತಾಡುತ್ತಿದ್ದಾನೆ ಅನ್ನಿಸಿತು ವಿಶ್ವನಾಥನಿಗೆ.

ವಿಶ್ವನಾಥತನ್ನ ನೌಕರಿಯ ಸಂಗತಿ, ಮನೆಯಲ್ಲಿರುವ ನಾಲ್ಕನೇ ಕ್ಲಾಸಿನಲ್ಲಿ ಓದುತ್ತಿರುವ ಹತ್ತು ವರ್ಷದ ಮಗ ಆಕಾಶ್‌ನ ಕುರಿತು, ಹೆಂಡತಿ ಮನೆಯಲ್ಲಿ ಪ್ರೈಮರಿ ಮಕ್ಕಳಿಗೆ ಟ್ಯೂಷನ್ ಹೇಳುವ ವಿಷಯವೆಲ್ಲವನ್ನೂ ಹೇಳುತ್ತ ತಾವಿನ್ನೂ ಬಾಡಿಗೆ ಮನೆಯಲ್ಲಿದ್ದು ಒಂದು ಸರಿಯಾದ ಅಪಾರ್ಟಮೆಂಟಿನ ಸಿಂಗಲ್ ಬೆಡ್ ರೂಂಕಿಚನ್ ಹೊಂದಿದ ಮನೆಯೊಂದನ್ನು ಹುಡುಕುತ್ತಿರುವುದಾಗಿ ಹೇಳಿಬಿಟ್ಟಿದ್ದ. ಎದುರು ಕೂತ ಚೇತನ್‌ಗೆ ಇದ್ದಲ್ಲೇ ಜೀವ ಬಂದಂತಾಯಿತು. “ನೀವು ಹೇಳುತ್ತಿರುವುದು ಸರಿ, ಮನುಷ್ಯನಾದವನಿಗೆ ಒಂದು ದೊಡ್ಡ ಕನಸಿರಬೇಕು, ಕನಸಿದ್ದರೆ ಬದುಕಿನಲ್ಲಿ ತುಂಬಾ ಮುಂದೆ ಬರಬಹುದು, ನಿಮ್ಮ ಕನಸುಗಳನ್ನು ಸಾಕಾರ ಮಾಡಲಿಕ್ಕಾಗಿಯೇ ನಮ್ಮ ಕಂಪನಿ ಹಗಲೂ ರಾತ್ರಿದುಡಿಯುತ್ತಿದೆ' “ಓಹೋ, ನಿಮ್ಮ ಕಂಪನಿಯ ಮೂಲ ಊರುಯಾವುದು?' 'ಬೆಂಗಳೂರು ಸಾರ್ 'ಇಲ್ಲಿ ಈ ಶಾಖೆ ಶುರುವಾಗಿ ಒಂದು ವರ್ಷ ಆಯ್ತು' ವಿಶ್ವನಾಥ ಮಂಜುಳೆ ದಂಪತಿಗಳಿಬ್ಬರೂ ಮಂತ್ರಮುಗ್ಧರಾಗಿ ಕೇಳಿದರು.

ಮತ್ತೆ ಚೇತನ್‌ನೇ ಮುಂದುವರೆದ. 'ನಿಮಗೆ ಎಲ್ಲವೂ ನಿಗದಿತ ಸಮಯಕ್ಕೆ ಆಗಿದೆ, ಈಗ ಒಂದು ಸೈಟು ಕೊಳ್ಳುವ ಬರೀ ಒಂದೇ ಕೆಲಸ ಬಾಕಿ ಉಳಿದಿರುವುದು, ನಮ್ಮ ಕಂಪನಿಯ ಹಿಡಿತದಲ್ಲಿ ನಾಲ್ಕು ಸೈಟುಗಳಿವೆ' ನೀವು ಇಷ್ಟಪಟ್ಟರೆ ಇಂದೇ ನೀವು ಒಂದು ಸೈಟಿನ ಮಾಲಿಕರಾಗುತ್ತೀರಿ. 'ಹೌದೇ? ಎಲ್ಲಿದೆ ಅದು?' 'ಬೆಂಗಳೂರಿನಲ್ಲಿ 'ಬೆಂಗಳೂರಿನಲ್ಲಾದರೆ ನಮಗೆ ಕಷ್ಟವೇ 'ಯಾಕೆ ಕಷ್ಟ? ಮುಂದೆ ಮಗ ಎಂಜಿನಿಯರೋ ಡಾಕ್ಟರೋ ಆದರೆ ಅಲ್ಲಿಯೇ ಸೈಟು ಬೇಕಲ್ಲವೇ? ಅರೆ, ಯಾರು ಹೇಳಿದರು ಅವ ಎಂಜಿನಿಯರ್ ಡಾಕ್ಟ್ರು ಆಗ್ತಾನೆ ಅಂತ?' 'ಯಾರೆಯಾಕೆ ಹೇಳೋಕು ಸಾರ, ನಿಮ್ಮನ್ನು ನೋಡಿದರೆ ಗೊತ್ತಾಗತ್ತೆ, ನಿಮ್ಮ ಮನೆಯವರ ಸ್ಪಂದನೆ ನೋಡಿದರೆ ಗೊತ್ತಾಗತ್ತೆ, ನಿಮ್ಮ ಮಗ ದೊಡ್ಡ ಹುದ್ದೆಗೆ ಹೋಗಲೇಬೇಕು' 'ಆದರೂ ಅವನಿಗೆ ಅಂತ ಈಗಲೇ ಅಲ್ಲಿ ಸೈಟು ಖರೀದಿಸಿಡುವಷ್ಟು ನನ್ನ ಬಳಿ ಬಜೆಟ್ ಇಲ್ಲ, ಮತ್ತು ಹಾಗೆ ಮಾಡುವುದರಲ್ಲಿ ಅರ್ಥವೇನಿದೆ?' 'ಇರಲಿ ಬಿಡಿ ಸಾರ್ ಒಂದು ಸೈಟು, ಇಷ್ಟು ಸೋವಿ ರೇಟಿಗೆ ಇಷ್ಟು ಸುಲಭಕ್ಕೆ ನಿಮಗೆ ಎಲ್ಲಿಯೂ ಸಿಗುವುದಿಲ್ಲ, ನೋಡಿ ಇಲ್ಲಿಕೂತ ಹದಿಮೂರು ಜೋಡಿಗಳಲ್ಲಿ ಯಾರಾದರೂ ನಾಲ್ವರು ತೊಗೊಂಡು ಬಿಟ್ಟರೆ, ಆಮೇಲೆ ನೀವು ಎಷ್ಟು ಬೇಸರ ಪಟ್ಟರೂ ಅದು ಸಿಗುವುದಿಲ್ಲ, ದೊಡ್ಡ ಮನಸ್ಸು ಮಾಡಿ ಸಾರ್' 'ಹೌದೇ, ಇಷ್ಟು ಒತ್ತಾಯ ಮಾಡುತ್ತೀರೆಂದರೆ ತೋರಿಸಿ ನೋಡ್ತಾ, ಯಾವ ಏರಿಯಾ, ಎಷ್ಟು ದರ ಅಂತಲಾದರೂ ತಿಳಿಸಿ ಆ ತರುಣ ಅತ್ಯುತ್ಸಾಹದಲ್ಲಿ ಕೈಯಲ್ಲಿದ್ದ ಫೈಲ್ ತೆರೆದು 'ನೋಡಿ ಸಾರ್, ದೇವನಹಳ್ಳಿಯ ವಿಮಾನ ನಿಲ್ದಾಣದ ಹತ್ತಿರ ಇರುವ ಸೈಟು, ತುಂಬಾ ಬೆಲೆ ಬಾಳುವ ಸೈಟು, ಅವರಿಗೆ ಏನೋ ಸ್ವಲ್ಪ ಹಣದ ತೊಂದರೆಯಿಂದ ಇದನ್ನು ಮಾರುತ್ತಿದ್ದಾರೆ' 'ಹೌದೇ, ಎಷ್ಟಿದೆ ಅಳತೆ?' 'ನಲವತ್ತು ಬಾಯ್ ಮೂವತ್ತರ ಎರಡು, ಐವತ್ತು ಬಾಯ್ ಮೂವತ್ತರ ಎರಡು ಸೈಟುಗಳು' ಅನ್ನುತ್ತ ಕಾಗದದ ಮಡಿಕೆ ಬಿಚ್ಚಿ ಅದರ ನಕಾಶೆಯಲ್ಲಿ ಕೈ ಬೆರಳಾಡಿಸಿ ತೋರಿಸಲಾರಂಭಿಸಿದ.

“ಅಲ್ಲ, ನೀವು ನಮಗೆ ಕರೆದದ್ದು ಗಿಫ್ಟ್ ಕೊಡುತ್ತೇವೆ ಬನ್ನಿ ಅಂತ, ಇಲ್ಲಿ ನಡೆಯುತ್ತಿರೋದು ಏನು?' ಎಂಬ ರೀತಿಯಲ್ಲಿ ವಿಶ್ವನಾಥ ಬೇಸರ ವ್ಯಕ್ತಪಡಿಸಿದ್ದಕ್ಕೆ, “ನೋಡಿ ಸಾರ್, ಇಂಥ ಸೈಟು ನಿಮಗೆ ಜೀವಮಾನದಲ್ಲಿ ಸಿಗುವುದಿಲ್ಲ, ಮ್ಯಾಡಂ ನೀವಾದರೂ ಸ್ವಲ್ಪ ಹೇಳಿ' ಅನ್ನುತ್ತ ಚೇತನ್ ದುಂಬಾಲು ಬಿದ್ದ. 'ಹೋಗಲಿ, ರೇಟೆಸ್ಟು?' 'ಮೂವತ್ತು ನಲವತ್ತರ ಸೈಟಿಗೆ ಕೇವಲ ಹನ್ನೆರಡು ಲಕ್ಷ, ಈಗಲೇ ಎಲ್ಲ ಕಟ್ಟಿಬಿಡುವದಲ್ಲ, ಅಡ್ವಾನ್ಸ್ ಅಂತ ಕೇವಲ ಇಪ್ಪತ್ತು ಸಾವಿರ ಕಟ್ಟಿದರೆ ಆಯಿತು' 'ಉಳಿದದ್ದು?' 'ಕಂತಿನ ಮೇಲೆ ಒಂದೊಂದೇ ಲಕ್ಷ ತುಂಬುವುದು' ಪಕ್ಕದ ಟೇಬಲ್ಲಿನಲ್ಲಿ ಎಂಥದೋ ಗದ್ದಲ ಕೇಳಿತು. ಅದೇನು ಅಂತ ಎಲ್ಲರೂ ಅತ್ತ ಲಕ್ಷ್ಯ ಕೊಟ್ಟರು.

ಆ ಟೇಬಲ್ಲಿನ ಯುವಕ ಎದ್ದು ನಿಂತು 'ನೋಡಿ ಈ ರೇವಣ್ಕರ್ ದಂಪತಿ ಸೈಟ್ ಬುಕ್ ಮಾಡಿದ್ದಾರೆ ಇಪ್ಪತ್ತು ಸಾವಿರದ ಚೆಕ್ ನೀಡಿ' ಎನ್ನುತ್ತ ಚೆಕ್ಕನ್ನು ಎತ್ತಿ ತೋರಿಸಿದ. ಅವರನ್ನು ಎದ್ದು ನಿಲ್ಲಿಸಿ ಎಲ್ಲರಿಂದ ಅಭಿನಂದನಾಪೂರ್ವಕ ಚಪ್ಪಾಳೆ ಹೊಡೆಸಿದ. ಎಲ್ಲ ಟೇಬಲ್ಲಿನ ದಂಪತಿಗಳು ಆ ದಂಪತಿಗಳನ್ನು ಸ್ವಲ್ಪ ಅಸೂಯೆಯ ದೃಷ್ಟಿಯಿಂದ ನೋಡಿ

ಪುನಃ ಮಾತಿಗೆ ಕುಳಿತರು. 'ನೋಡಿ ಮ್ಯಾಡಂ, ಈಗ ಉಳಿದಿರೋದು ಬರೀ ಮೂರೇ ಮೂರು ಸೈಟುಗಳು, ನೀವು ಈಗಲೇ ಮನಸ್ಸು ಮಾಡದಿದ್ದರೆ ಅದು ಬೇರೆಯವರ ಪಾಲಾಗುತ್ತದೆ. ಬರೀ ಹತ್ತು ಲಕ್ಷಕ್ಕೆ ಅದೂ ಬೆಂಗಳೂರಿನಂಥ ಕಡೆಯಲ್ಲಿ ಸೈಟುಗಳು ಸಿಗುವುದೇ ಇಲ್ಲ' ವಿಶ್ವನಾಥನಿಗೆ ಒಮ್ಮೆಲೇ ತಲೆ ಗಿರಿಕ್ ಅಂತು. “ನಿಮಗೇನು ತಲೆಗಿಲೆ ಕೆಟ್ಟಿದೆಯೇನ್ರೀ, ನಾವು ಇಲ್ಲಿಯವರು, ಬೆಂಗಳೂರಿನಲ್ಲಿ ಯಾಕೆ ಸೈಟು ತೊಗೋಬೇಕು? ನೀವು ಈ ಹಿಂಸೆ ಯಾಕೆ ಕೊಡುತ್ತಿದ್ದೀರಿ ಅಂತ ನನಗೆ ಗೊತ್ತಾಗುತ್ತಿಲ್ಲ' ಕೋಪದಿಂದಲೇ ಸಿಡಿದೆದ್ದ ವಿಶ್ವನಾಥ. 'ಅಲ್ಲ ಸಾರ್, ದೊಡ್ಡ ಮನಸ್ಸು ಮಾಡಿ, ನೋಡಿ ಅವರು ಹ್ಯಾಗೆ ಕೂತಲ್ಲೇ ಒಂದು ಸೈಟು ಹೊಡೆದುಕೊಂಡುಬಿಟ್ಟರು, ಜಾಣ ದಂಪತಿಗಳು ಅವರು, ನೀವೂ ಜಾಣರಾಗಿ' ಜಾಣತನದ ಸುದ್ದಿ ಬಂದದ್ದೇ ವಿಶ್ವನಾಥನಿಗೆ ಪಿತ್ತ ಸರಕ್ಕನೆ ನೆತ್ತಿಗೇರಿತ್ತು. 'ಎಲ್ಲ ಗೊತ್ತರೀ, ಆ ದಂಪತಿ ನಿಮ್ಮವರೇ, ನಮ್ಮ ಮುಂದೆ ನಾಟಕ ಮಾಡಬೇಡಿ, ಸೈಟಂತೆ, ಚೆಕ್‌ಅಂತೆ, ನಮಗೆ ಸುಮ್ಮನೇ ಮೋಸದಜಾಲ ಹೆಣೆಯಲು ನಿಮ್ಮದೇ ಕುತಂತ್ರ ಇದು 'ಅಂತೆ ಕೂಗಾಡ ಹತ್ತಿದ ವಿಶ್ವನಾಥ.

'ಹಾಗಲ್ಲ ಸರ್' ಅನ್ನುತ್ತ ಮೂರ‍್ನಾಲ್ಕು ಹುಡುಗರು ವಿಶ್ವನಾಥನನ್ನು ಸಂಭಾಳಿಸಲು ಬಂದಿದ್ದರು. ಬೆಂಗಳೂರನಲ್ಲಿ ಬೇಡವಾದರೆ, ಇಲ್ಲಿಯೇ ಯಶಸ್ವಿ ಡೆವಲಪರ್ಸ್ ಅನ್ನುವ ಕಂಪನಿ ಧಾರವಾಡದಲ್ಲಿ ಹೈಕೋರ್ಟ ಹತ್ತಿರ ಸೈಟುರೆಡಿ ಮಾಡುತ್ತಿದೆ, ಅದನ್ನಾದರೂ ನೋಡಿ 'ಅಂದದ್ದೇ ಅಷ್ಟು ಹೊತ್ತು ಸುಮ್ಮನೇ ಕೂತ ಮಂಜುಳಾ 'ಹೌದೇ? ಇಲ್ಲಿಯೇ ಇದೆಯೇ?' ಎನ್ನುತ್ತ ಅವರಂದದ್ದನ್ನು ಆಸಕ್ತಿಯಿಂದ ಕೇಳುತ್ತ ವಿಶ್ವನಾಥನಿಗೆ 'ರೀ, ಇಲ್ಲೇ ಇದೆಯಂತೆ, ಇದಾದರೂ ನೋಡಬಾರದೇ?' ಅಂತ ರಮಿಸಿದ್ದೇ ತಡ ವಿಶ್ವನಾಥ 'ಹೆಂಡಿರನ್ನು ಬೇರೆ ಜೊತೆಯಲ್ಲಿ ಕರೆಸುತ್ತೀರಿ, ನಿಮ್ಮ ಮೋಸ ಗೊತ್ತಾಗದೇ ಅವರು ಒತ್ತಾಯ ಮಾಡಲಿ ಎಂಬುದಕ್ಕಾಗಿ, ದಂಪತಿಗಳಲ್ಲಿ ಜಗಳ ಹಚ್ಚಿಡುವರೀತಿಯಲ್ಲಿ ನಿದ್ದು, ನೀವು ಉದ್ಧಾರವಾಗುವುದಿಲ್ಲ' ದೊಡ್ಡದಾಗೇ ಬಾಯಿ ತೆಗೆದ ಅದನ್ನೂ ಮೀರಿ ಅವರೆಲ್ಲ ಸುತ್ತುವರೆದು ಒಮ್ಮೆಲೇ ನಿಮ್ಮದುಡ್ಡು ಬೇಡ, ಇಲ್ಲಿ ಮೋಸ ಗೀಸ ಏನೂ ಇಲ್ಲ, ಈಗ ಕೇವಲ ಹತ್ತು ಸಾವಿರಕೊಡಿ ಅಷ್ಟೇ' 'ಒಂದು ನೈಯಾ ಪೈಸೆಯೂಕೊಡುವುದಿಲ್ಲ' 'ಹಾಗೇಕೆ ಬೀಪಿ ಹೆಚ್ಚಿಸಿಕೊಂಡಿದ್ದೀರಿ? ನಾವು ನಿಮ್ಮ ಒಳ್ಳೆಯದಕ್ಕೆ ಹೇಳಿದ್ದು' ನಮ್ಮ ಸಂಬಂಧಗಳೇ ನೀವು? ನಮ್ಮ ಒಳ್ಳೆಯದನ್ನು ಬಯಸಲಿಕ್ಕೆ?' 'ಅಯ್ಯೋ ಒಳ್ಳೆಯದು ಬಯಸಲು ಸಂಬಂಧಿಗಳೇ ಆಗಬೇಕೆ? ನೊಡಿ ನಿಮ್ಮ ಮಿಸೆಸ್‌ಗೆ ಮನಸ್ಸಿದೆ, ಕಮೀಟ್ ಆಗಿಬಿಡಿ'

ವಿಶ್ವನಾಥನಿಗೆ ಸಹನೆಯ ಕಟ್ಟೆಯೊಡಯತೊಡಗಿತ್ತು. 'ನೀವು ನಮ್ಮನ್ನು ಕರೆಸಿದ್ದು ನಿಮ್ಮ ಫೋನ್ ನಂಬರಿಗೆ ಲಾಟರಿ ಹತ್ತಿದೆ, ಬಹುಮಾನ ಗಳಿಸಿದ್ದೀರಿ ಬನ್ನಿ ಅಂತ, ಸುಮ್ಮನೇ ನಮ್ಮ ಬಹುಮಾನ ನಮಗೆ ಕೊಟ್ಟು ನಂತರ ಮಾತಾಡಿ, ನಾವು ನಮ್ಮ ಕೆಲಸ ಬೊಗಸೆ ಎಲ್ಲ ಬಿಟ್ಟು ಇಲ್ಲಿ ಬಂದಿದ್ದೇವೆ, ಕಂಪ್ಲೇಂಟು ಕೊಡ್ತೇನೆ ಕಂಪ್ಲೆಂಟು' ಅಂತ ಎದ್ದು ನಿಂತು ದೊಡ್ಡ ದನಿಯಲ್ಲಿ ಕೂಗಾಡತೊಡಗಿದ್ದೇ, ಅಲ್ಲಿಯ ವ್ಯವಸ್ಥಾಪಕರು

ಕಸಿವಿಸಿಗೊಂಡರು. ಈಗ ಅಲ್ಲಿದ್ದ ಬೇರೆ ಬೇರೆ ದಂಪತಿಗಳು ಇವರನ್ನೇ ಮಿಕಿ ಮಿಕಿ ನೋಡಲಾರಂಭಿಸಿದರು. ಇಡೀ ವಾತಾವರಣವೇ ಕಲುಷಿತವಾದದ್ದು ಕಂಡು ಸಂಘಟಕರು ಇಬ್ಬರನ್ನೂ ಎದ್ದು ನಿಲ್ಲಿಸಿ ಒಂದು ಗಿಫ್ಟ್ ಪ್ಯಾಕ್ ಕೊಟ್ಟು ಎಲ್ಲರಿಂದ ಚಪ್ಪಾಳೆ ಹೊಡೆಸಿದ್ದರು. ವಿಶ್ವನಾಥನಿಗೆ ಅದೇ ವಿನಯದಿಂದ ಶೇಖ್ ಹ್ಯಾಂಡ್ ಮಾಡಿದ ಚೇತನ 'ಥ್ಯಾಂಕ್ಯು ಸಾರ್, ನೀವು ಬಂದದ್ದು ನಮಗೆ ತುಂಬಾ ಸಂತೋಷ, ಪುನಃ ಬನ್ನಿ' ಎಂದು ರೂಢಿಯಂತೆಯೇ ಹೇಳಿಬಿಟ್ಟಿದ್ದ. 'ಮತ್ತೇನು ಬರುವುದು ಇಲ್ಲಿ? ಸಾರ್ವಜನಿಕರಿಗೆ ಮೋಸ ಮಾಡುತ್ತೀರಿ, ನಮ್ಮ ವೇಳೆ ಹಾಳು ಮಾಡುತ್ತೀರಿ ನೀವು, ಒಂದು ಜ್ಯೂಸು ಒಂದು ಕಾಫಿ ಬಿಟ್ಟಿಕೊಟ್ಟ ಹಾಗೆ ಮಾಡಿ ನಮ್ಮನ್ನು ಸಾಲದಲ್ಲಿ ನರಳುವ ಹಾಗೆ ಮಾಡ್ತೀರಿ ನೀವು' ಅನ್ನುತ್ತ ವಿಶ್ವನಾಥ ಕಣ್ಣು ಇನ್ನಷ್ಟು ಕೆಂಪು ಮಾಡಿಕೊಂಡು ರಭಸದಲ್ಲೇ ಹೊರಬಂದಿದ್ದ. ಇದೆಲ್ಲ ಕಾಮನ್ ಇವೆಲ್ಲಾ ಕಾಮನ್' ಎನ್ನುತ್ತ ಸಂಘಟಕರು ಉಳಿದವರನ್ನು ಸಮಾಧಾನಪಡಿಸುತ್ತಿದ್ದರು.

ಹೆಂಡತಿಯನ್ನು ಜಗ್ಗಿಕೊಂಡು ಹೊರಬಂದ ವಿಶ್ವನಾಥ ಮೆಟ್ಟಿಲಿಳಿಯುತ್ತಿದ್ದಂತೆಯೇ ಗಿಫ್ಟ್ ಪ್ಯಾಕ್ ಒಡೆದು ನೋಡಿದ, ಆರು ಗಾಜಿನ ಬೌಲುಗಳಿದ್ದವು. ‘ಇದಾದರೂ ಯಾತಕ್ಕಾದರೂ ಬಳಕೆಯಾಗ್ತದೆ ಬಾ, ಇಷ್ಟು ಹೊತ್ತು ನಮ್ಮ ಟೈಮ್ ವೇಸ್ಟ್ ಮಾಡಿದ್ದಕ್ಕೆ ಇದು ಗಿಫ್ಟ್ ಅಂತ ತಿಳಿಯುವ, ಯಾರಾದರೂ ಗೆಸ್ಟ್ ಬಂದಾಗ ಜಾಮೂನು ಮಾಡಿದರೆ ಇದರಲ್ಲೇ ಹಾಕಿ ಕೊಡುವಿಯಂತೆ' ಅಂತ ಮಾತಾಡಿಕೊಳ್ಳುತ್ತ ಇಬ್ಬರೂ ದಡದಡ ಬೈಕಿನೆಡೆಗೆ ಬರುವಷ್ಟರಲ್ಲಿ ಮನಃ ಜಿಟಿಜಿಟಿ ಮಳೆ ಶುರುವಾಯ್ತು. ತೊಯ್ದವೆಂದರೂ ಪೂರ್ತಿ ತೋಯಿಸದ ಮಳೆ ಅದು. ಭ್ರಮಾಧೀನ ಪೊರೆ ಕಳಚುವ ಸಂದರ್ಭದ ಘಟನೆಗಳು ಮತ್ತೆ ಮತ್ತೆ ದೃಶ್ಯವಾಗಿ ಮೂಡಿ, ಇಬ್ಬರ ಪ್ರಜ್ಞೆಯೇ ಆಳದಲ್ಲೆಲ್ಲೋ ತಮ್ಮ ನಂಬಿಕೆಗೇ ಕೊಡಲಿಯೇಟು ಬಿದ್ದಂತೆ ಚಡಪಡಿಸಿ ಹೋದರು. ಇಬ್ಬರ ಮನಸೂ ಎಲ್ಲ ಖಾಲಿಖಾಲಿ ಅನ್ನುವಂಥ ಒಂದು ಬಗೆಯ ಅನುಭೂತಿಯಲ್ಲಿ ಮೀಯುತ್ತಿತ್ತು. ಏನೂ ತಿಳಿಯಲಿಲ್ಲ ಅಂದು ಕೊಂಡರೂ ಎಲ್ಲವೂ ತಿಳಿದುಹೋಗಿತ್ತು. ತಮಗರಿವಿಲ್ಲದೇ ನಿತಾಂತ ಮೌನಕ್ಕೆ ಶರಣಾಗಿದ್ದರು.

ಬರುವಾಗ ಇದ್ದ ಹುಮ್ಮಸ್ಸು ಇಬ್ಬರಲ್ಲೂ ಹೀಗೆ ಮರಳುವಾಗ ಉಳಿದಿರಲಿಲ್ಲ. ಮಂಜುಳಾ ಸಣ್ಣ ಮಳೆಗೆ ಸೆರಗನ್ನೇ ತಲೆಯ ಮೇಲೆ ಮರೆ ಮಾಡಿಕೊಂಡಳು. ಜರತಾರಿ ಸೀರೆಯ ಸೆರಗು ನೆಂದು ತೊಪ್ಪೆಯಾಗತೊಡಗಿ ಇದ್ದಲ್ಲೇ ಜರಿಗಳೆಲ್ಲ ಮುದುಗಿ ಹೋಗಿದ್ದವು. ವಿಶ್ವನಾಥ ತನ್ನ ಕಂಕುಳಲ್ಲಿದ್ದ ಹೆಲ್ಮೆಟ್ ಧರಿಸಿದ. ತುಂತುರು ತುಂತುರು ಮಳೆ, ಮನೆಗೆ ಬಂದು ಸೇರುವ ಹೊತ್ತಿಗೆಲ್ಲ ಮನಃ ಹೆಟ್ಟಿನ ಮುಂಭಾಗಕ್ಕೆ ನೀರ ಹನಿಗಳ ಮಾಲೆ ಕಟ್ಟಿ ನಿಂತಿತ್ತು. ಶಹರದ ರಸ್ತೆಯ ವಿದ್ಯುದ್ದೀಪಗಳು ಅದರಲ್ಲಿ ಝುಗಮಗ ಪ್ರತಿಫಲಿಸಿ, ವಿಶ್ವನಾಥನ ಕಣ್ಣಿಗೆ ಅವು ಒಮ್ಮೆಲೇ ಚೆನ್ನದ ಬಣ್ಣದ ಹನಿಗಳಂತೆ ಕಂಡವು.

## ಆ ಕ್ಷಣಗಳಲ್ಲಿ ಅದೆಂಥ ನಿಗೂಢತೆ

**ಸುಮಂಗಲಾ**

"ಸರ್ ನಿಮಗೆ" ಎಂದು ರೇಖಾ ಕೈಗಿತ್ತ ಫೋನ್ ಅನ್ನು ಎಂದಿನ ಆರಾಮದ ಭಾವದಲ್ಲೇ ಹಿಡಿದು ಹಲೋ ಎನ್ನಬೇಕು,ಅಷ್ಟರಲ್ಲಿ ಆ ಕಡೆಯಿಂದ ತಮ್ಮನ ಗಾಭರಿಯ ಧ್ವನಿ.

"ಅಣ್ಣಾ, ಇನ್ನು ಎಚ್ಚರ ತಪ್ಪಿಬಿಟ್ಟಿದಾಳೆ.. ಬೇಗ ಬಾ, ನಮ್ಮ ಡಾಕ್ಟ್ರಿಗೂ ಫೋನ್ ಮಾಡು, ನಾನೂ ಮಾಡ್ತೀನಿ, ನಂಗೇನೂ ತೋಚ್ತಾನೆ ಇಲ್ಲ ಅಣ್ಣ" ಕಡೆಯಲ್ಲಿ ತಮ್ಮನ ಧ್ವನಿ ನಡುಗುತ್ತ ಅಳು ಧ್ವನಿಯಲ್ಲಿ ಹೇಳಿದಾಗ ಕೃಷ್ಣಮೂರ್ತಿಗೆ ಅರೆಕ್ಷಣ ಏನೂ ಹೊಳೆಯದೇ ಕಣ್ಣು ಕತ್ತಲೆ ಇಟ್ಟಂತಾಗಿ... ಮುಖವೆಲ್ಲ ಬಿಳುಚಿಕೊಂಡು... ಪಕ್ಕದಲ್ಲಿದ್ದ ರೇಖಾಗೂ ಏನೋ ಅವಘಢವಾಗಿದೆಯೆಂದು ಅನ್ನಿಸಿ... ಸರ್ ಸರ್ ಎಂದು ಅವರ ಭುಜ ಹಿಡಿದವಳು, ತಾನೇ ಅವರ ಕೈಯಿಂದ ಫೋನ್‌ತೆಗೆದುಕೊಂಡು, ರಿಸೀವರ್ ಕಿವಿಗಿಡುವಷ್ಟರಲ್ಲಿ ಆ ಕಡೆ ಕಟ್ ಆಗಿತ್ತು.

"ನಮ್ಮ ಸುಜಾತಾಗೆ ಎಚ್ಚರ ತಪ್ಪಿದೆಯಂತೆ.. ಈ ನಂಬರ್ ತಗೋ ಡಾಕ್ಟರಿಗೆ ಫೋನ್ ಮಾಡು. ನೀನೇ ಚೂರು ಮನೆಗೆ ಡ್ರಾಪ್ ಮಾಡ್ತೀಯಮ್ಮಾ" ಕೃಷ್ಣಮೂರ್ತಿ ಬಡಬಡಿಸಿದರು. ಮತ್ತೆ ಐದೇ ನಿಮಿಷದಲ್ಲಿ ರೇಖಾಳ ಹಿಂದೆ ಕುಳಿತು ಮನೆಗೆ ಬರುವಾಗಲೂ ಕೃಷ್ಣಮೂರ್ತಿಯವರಲ್ಲಿ ಸಣ್ಣಗೆ ನಡುಕವಿದ್ದೇ ಇತ್ತು. ಅರೆ ಬೆಳಗ್ಗೆ ಅಷ್ಟೆಲ್ಲ ಚೆನ್ನಾಗಿಯೇ ಇದ್ದಳಲ್ಲ...ಎಂದಿನಂತೆ ತಾನು ಹೊರಡುವಾಗ 'ಇನ್ನೊಂಚೂರು ಕಾಫಿ ಕೊಡ್ತಾ ಭಾವ' ಎಂದು ಕೇಳಿ, ಕೊಟ್ಟವಳು, "ಮತ್ತೆ ಆಫೀಸ್‌ನಲ್ಲಿ ಅವರಿವರು ವಿಸಿಟರ್ ಜೊತೆ ಹೆಚ್ಚು ಕಾಫಿ ಕುಡೀಬೇಡಿ" ಎಂದು ಎಂದಿನ ಅಕ್ಕರಾಸ್ತೆಯಿಂದಲೇ ಹೇಳಿದವಳು, ಈಗ ತಮ್ಮನ ಬಾಯಲ್ಲಿ ಎಚ್ಚರ ತಪ್ಪಿದ್ದಾಳೆ ಎಂಬ ಸ್ಥಿತಿಯಲ್ಲಿದ್ದಾಳೆ ಎಂದರೆ...

ಕೃಷ್ಣಮೂರ್ತಿ ಮನೆಗೆ ಬರುವಷ್ಟರಲ್ಲಿ ಡಾಕ್ಟರ್ ಬಂದಿದ್ದರು. ಒಳ ರೂಮಿನ ಕೊಠಡಿಯಲ್ಲಿ ಮಲಗಿಸಿದ್ದ ಸುಜಾತಾ, ಪಕ್ಕದಲ್ಲಿದ್ದ ಡಾಕ್ಟರ್ "ಬ್ರೈನ್ ಹೆಮರೇಜ್ ಅನ್ಸುತ್ತೆ. ಆಸ್ಪತ್ರೆಗೆ ಕರ್ಕೊಂಡು ಹೋದ್ರೂ..." ಮುಂದಿನದನ್ನು ಹೇಳಲೋಬೇಡವೋ ಎಂಬಂತೆ ನಿಂತಿದ್ದಾರೆ. ಕಣ್ಮುಚ್ಚಿದ ಸುಜಾತಾನ ಮುಖದಲ್ಲಿ ಇದೇ ಈಗ ಅಪಾರ ನೋವು ಅನುಭವಿಸಿದ್ದಾಳೆ ಎಂಬ ಭಾವವಿದೆ... ಡಾಕ್ಟರ್ ಅಷ್ಟು ಹೇಳಿದ್ದೇ ಇಷ್ಟು ಹೊತ್ತಿನವರೆಗೂ ಸುಜಾತನ ಒಳಗೆಲ್ಲೋ ಚೂರು ಉಸಿರು ಮಿಡಿಯುತ್ತಿದೆ, ಆಸ್ಪತ್ರೆಗೆ

ಹೋದರೆ ಏನೋ ಆಗುತ್ತೆ ಎಂಬ ಭರವಸೆಯನ್ನು ತುಂಬಿಕೊಳ್ಳಲೆತ್ನಿಸುತ್ತ ನಿಂತಿದ್ದ ಕೃಷ್ಣಮೂರ್ತಿ ತಮ್ಮ ರಮೇಶ ಇದೀಗ ಹೆಂಡತಿಯ ಕಾಲ ಬುಡದಲ್ಲಿ ಕೂತು ಮುಖ ಮುಚ್ಚಿಕೊಂಡು ಸಣ್ಣಗೆ ಅಳಲಿಕ್ಕೇ ಶುರು ಮಾಡಿದ.

"ನೋಡಿ, ಯಾವುದೂ ನಮ್ಮ ಕೈಯಲ್ಲಿ ಇರಲ್ಲ, ಸ್ವಲ್ಪ ರಕ್ತದೊತ್ತಡ ಬಿಟ್ರೆ ಮತ್ತೇನೂ ಸಮಸ್ಯೆ ಇರ್ಲಿಲ್ಲ, ಕಳೆದ ಬಾರಿ ಬಂದಾಗ ಎಲ್ಲ ಸರಿಯಾಗಿ ಚೆಕ್ ಅಪ್ ಮಾಡಿದ್ದೆನಲ್ಲ, ಉಳಿದಿದ್ದೆಲ್ಲ ನಾರ್ಮಲ್ ಇತ್ತು, ಕೆಲವು ಸಲ ಇದ್ದಕ್ಕಿದ್ದ ಹಾಗೆ ಏನಾಗುತ್ತೆ ಅಂತ್ಲೇ ಹೇಳಕ್ಕಾಗಲ್ಲ..." ಡಾಕ್ಟರ್ ಮೆತ್ತಗೆ ಸಂತೈಸುವ ಧ್ವನಿಯಲ್ಲಿ ಹೇಳುತ್ತಿದ್ದಾರೆ.

ಕೃಷ್ಣಮೂರ್ತಿ ಮುಖ ಬಿಳಿಚಿಕೊಂಡು, ಮಾತೇ ಇಲ್ಲದೇ ನಿಂತಿದ್ದನ್ನು ಗಮನಿಸಿದ ಡಾಕ್ಟರ್ ಅವರನ್ನು ಮೆತ್ತಗೆ ರೂಮಿನಿಂದ ಹೊರಗೆ ಕರ್‍ಕೊಂಡು ಬಂದರು. "ನಾನು ಬಂದಾಗ್ಲೆ ಉಸಿರಾಟ ನಿಂತು ಹೋಗಿತ್ತು.... ಎದೆ ಒತ್ತಿದೆ, ಬಾಯಿಗೆ ಉಸಿರುಬಿಟ್ಟು ನೋಡಿದೆ, ಕೃತಕ ಉಸಿರಾಟ ಸಾಧ್ಯವೇ ಇರ್ಲಿಲ್ಲ, ತೀರಾ ಸಣ್ಣಗೆ ಉಸಿರಾಡ್ತಿದ್ರೂ ಏನೋ ಮಾಡಬಹುದಿತ್ತು... ಆದರೆ ಉಸಿರೇ ನಿಂತುಹೋಗಿದ್ದರೆ ಏನು ಮಾಡಲಿಕ್ಕಾಗುತ್ತೆ ಹೇಳಿ.. ಮುಂದಿನ ಕೆಲಸ ನೋಡಿ... ಮಗಂಗೆ ಫೋನ್ ಮಾಡಿದೀರ..."ಎನ್ನುತ್ತ ಅಲ್ಲೇ ಇದ್ದ ಕುರ್ಚಿಯ ಮೇಲೆ ಕುಳಿತರು.

ತಾನಿರಲೋ ಹೋಗಲೋ ಎನ್ನುವುದು ತಿಳಿಯದೇ ಅಯೋಮಯಳಾಗಿ ನಿಂತಿದ್ದ ರೇಖಾಗೆ "ನೀನು ಮನೆಗೆ ಹೋಗಿಬಿಡಮ್ಮ, ಮತ್ತೆ ಆಫೀಸ್‌ನಲ್ಲಿ ಯಾರಿಗೂ ಹೇಳಬೇಡ, ನಾನು ನೋಡ್ಕೋತೇನೆ" ಎಂದು ಅವಳಿಗೆ ಜೋಪಾನ ಹೋಗಮ್ಮ ಎಂದು ಮತ್ತೊಮ್ಮೆ ಎಚ್ಚರಿಸಿದ ಕೃಷ್ಣಮೂರ್ತಿ ತಮ್ಮನನ್ನು ಸಮಾಧಾನಿಸಲು ರೂಮಿನೊಳಗೆ ಹೋದರು. ಡಾಕ್ಟರ್ ಅವರ ಹಿಂದೇ ಬಂದರು. ತಮ್ಮನ ಭುಜದ ಮೇಲೆ ಕೈಯಿಟ್ಟು, ಮೆತ್ತಗೆ ಅಮುಕಿ, "ಸಮಾಧಾನ ಮಾಡ್ಕೋ,ಏನಾಯ್ತು ಹೇಳು" ಎನ್ನುತ್ತಿದ್ದವರಿಗೆ ವಾರ್ಡ್‌ರೋಬ್ ಬಾಗಿಲು ತೆರೆದಿದ್ದು ಲಕ್ಷ್ಯಕ್ಕೆ ಬಂತು.

ಶನಿವಾರ ರಮೇಶ ಮಧ್ಯಾಹ್ನದ ಊಟಕ್ಕೆ ಬಂದಿದ್ದಾನೆ, ಎಂದಿನಂತೆ ಊಟ ಮಾಡಿ, ಸುಜಾತಾಗೆ ತಟ್ಟೆ ತೆಗೆದಿಡಲು ಸಹಾಯ ಮಾಡಿದ್ದಾನೆ. ಆಕೆ ಮಲಗಲು ರೂಮಿಗೆ ಹೋಗಿದಾಳೆ, ಇವನಿಗೆ ನಿದ್ದೆ ಬಂದಿಲ್ಲ ಅಂತ ಟಿವಿಯಲ್ಲಿ ಕ್ರಿಕೆಟ್ ಮ್ಯಾಚ್ ನೋಡ್ತಾ, ಎಷ್ಟೋ ಹೊತ್ತಿನ ಮೇಲೆ ಜೋರಾಗಿ ನಿದ್ರೆ ಆವರಿಸಿಕೊಂಡಿದೆ. ಆಮೇಲೆ ಯಾರೋ ಕಿರುಚಿದಂತೆ ಅನ್ನಿಸಿ, ಅರೆ ಕ್ರಿಕೆಟ್‌ನಲ್ಲಿ ಗೆದ್ದುಗಿದ್ದು ಬಿಟ್ರಾ ಎಂದು ಕಣ್ಣು ತೆರೆದು ನೋಡಿದರೆ ಕರೆಂಟ್ ಇಲ್ಲ ಟಿವಿ ಆಫ್ ಆಗಿದೆ, ಮತ್ತೊಮ್ಮೆ ಆ ಅಂತ ನರಳಿದ ಸದ್ದು ಹೆಂಡತಿ ಮಲಗಿದ ರೂಮಿನಿಂದ ಬರಿದೆ ಎಂದು ನಿದ್ದೆಗಣ್ಣಿನಲ್ಲಿ ಗ್ರಹಿಕೆಗೆ ಸಿಕ್ಕೊಡನೆ ತಟ್ಟನೆ ಎದ್ದು ರೂಮಿಗೆ ಧಾವಿಸಿದ್ರೆ ಸುಜಾತಾ ವಾರ್ಡ್‌ರೋಬ್ ಹತ್ರ ಕುಸಿದು ಕೂತಿದ್ದಾಳೆ, ತಲೆ ಗಟ್ಟಿಯಾಗಿ ಹಿಡಿದಿದ್ದಾಳೆ, ಇವನು ಓಡಿ ಹೋಗಿ ಅವಳನ್ನು ಹಿಡಿದುಕೊಂಡು, ಏನಾಯ್ತು ಅನ್ನುವಷ್ಟರಲ್ಲಿ ಕ್ಷೀಣವಾಗಿ ಮತ್ತೊಮ್ಮೆ ನರಳಿ, ವಾರ್ಡ್‌ರೋಬ್ ತೋರಿಸುತ್ತ ಏನೋ ಹೇಳಬೇಕಂದು ಬಾಯಿ ತೆರೆದವಳು ಹಾಗೇ ಧ್ವನಿ ಹೊರಡದೇ ಕಣ್ಮುಚ್ಚಿದವಳು, ಕೈಚೆಲ್ಲಿದವಳು.... ರಮೇಶ ತುಂಡು ತುಂಡು

ವಾಕ್ಯಗಳಲ್ಲಿ ಇದೀಗ ನಡೆದಿದ್ದನ್ನು ವಿವರಿಸುವಾಗಲೂ ಅವಳು ಕೈಚೆಲ್ಲಿದ್ದು,ಕಣ್ಮುಚ್ಚಿದ್ದು ಭ್ರಮೆಯಾಗದೇ ಖರೇ ಖರೇ ನಡೆದೇ ಬಿಟ್ಟಿದೆ ಎಂಬುದನ್ನು ಆ ವಿವರಗಳಲ್ಲಿ ಮತ್ತೆ ಗಟ್ಟಿಮಾಡಿಕೊಳ್ಳುವವಂತೆ ಹೇಳುತ್ತಿದ್ದ.

ಇವನು ಹೇಳುವಾಗಲೇ ಮಗ, ಸೊಸೆಯೂ ಬಂದಿದ್ದಾರೆ... ಪಕ್ಕದ ಮನೆಯಾಕೆಯೂ ಬಂದಿದ್ದಾಳೆ...

"ವಾರ್ಡ್‌ರೋಬ್‌ನಲ್ಲಿ ಏನೋ ಇಟ್ಟಿದ್ದನ್ನು ಅಥವಾ ಏನೋ ಬೇಕು ಅಂತ ನಿಮಗೆ ಹೇಳಲಿಕ್ಕೆ ಹೊರಟಿದ್ರೇನೋ..." ಎನ್ನುತ್ತ ಬಹಳ ವರ್ಷಗಳಿಂದ ಮನೆಮಂದಿಯ ಕಾಯಿಲೆಗಳಷ್ಟೇ ಚೆನ್ನಾಗಿ ಈ ಮನೆಯ ಹೊಕ್ಕುಬಳಕೆ ಇದ್ದ ಡಾಕ್ಟರ್ ತಾವೇ ಅರೆತೆರೆದಿದ್ದ ವಾರ್ಡ್‌ರೋಬ್ ಬಳಿ ಹೋದರು. ಬಾಗಿಲು ಪೂರ್ಣವಾಗಿ ತೆರೆದರು. ಈಗ ಸೊಸೆ ರಮಾಳೂ ಅವರ ಪಕ್ಕಕ್ಕೆ ಹೋಗಿ ನಿಂತವಳು, ಅತ್ತೆ ಅಷ್ಟು ಓರಣವಾಗಿ ಜೋಡಿಸಿಟ್ಟಿದ್ದ ಸೀರೆ ಬಟ್ಟೆ ನಡುವೆ ಒಮ್ಮೆ ಕೈಯಾಡಿಸಿದಳು. ಬಿಳಿ ಮಲ್‌ಪಂಚೆ ತುಂಡಿನಲ್ಲಿ ಎತ್ತಿಟ್ಟಿದ್ದ ಅತ್ತೆಯ ಮದುವೆ ಸೀರೆ, ಜರಿ ಹೋಗಿದ್ದರೂ, "ಇದೊಂದು ಹಂಗೇ ಇರಲಿ ಕಣೇ" ಎಂದು ಮೊನ್ನೆಯೂ ಎತ್ತಿಟ್ಟ ಅತ್ತೆ... ರಮಾಳಿಗೆ ಕಣ್ಣಾಲಿ ತುಂಬಿ ಬರುತ್ತ... ಅರೆ.. ಈ ಬಟ್ಟೆ ಗಂಟಿನ ಕೆಳಗೆ ಏನೋ ಬಿಳಿ ಕಾಗದ ಇದೆಯಲ್ಲ... ಈಚೆ ತೆಗೆದಳು.... ಅತ್ತೆ ಹೀಗೆ ಇದ್ದಕ್ಕಿದ್ದಂತೆ ಕಣ್ಮುಚ್ಚಿಯೇಬಿಡಬಹುದು ಎಂಬ ಒಂದಿಷ್ಟು ಸುಳಿವೂ ಇಲ್ಲದೇ ನಿಜಕ್ಕೂ ಕಣ್ಮುಚ್ಚಿರುವ ಕಟು ವಾಸ್ತವದೆದುರು ಇನ್ನು ಈ ಬಿಳಿ ಕಾಗದ ಮತ್ತೇನು ಹುದುಗಿಸಿಟ್ಟುಕೊಂಡಿದೆಯೋ ಎನ್ನಿಸಿದ್ದೇ ಅದನ್ನು ತೆರೆಯುವುದಕ್ಕೂ ಆಗದೇ ನಡಗುವ ಕೈಗಳಿಂದ ಕೃಷ್ಣಮೂರ್ತಿಯ ಕೈಗೆ ಕೊಟ್ಟಳು.

ಮೊನ್ನೆ ಮೊನ್ನೆ ಮೊಮ್ಮಗನಿಗೆ ಅಕ್ಷರ ಹೇಳಿಕೊಡುವಾಗ "ನೀನೂ ದಿನಾ ಕಾಪಿ ಬರೆದು ಚೂರು ಅಕ್ಷರ ಸುಧಾರಿಸ್ಕೋ" ಎಂದು ತಮ್ಮನೊಂದಿಗೆ ಸೇರಿ ತಾನೂ ತಮಾಶೆ ಮಾಡಿದ ಸುಜಾತನ ಕಾಗೆಕಾಲು ಗುಬ್ಬಿ ಅಕ್ಷರಗಳು.

"ನನ್ನ ಅಂತಿಮ ಸಂಸ್ಕಾರ ಕ್ರಮೆಟೋರಿಯಂನಲ್ಲಿ ಮಾಡಿ, ಯಾವ ಕಾರಣಕ್ಕೂ ಯಾವುದೇ ರೀತಿಯ ಕ್ರಿಯಾಕರ್ಮ ಮಾಡಬೇಡಿ.ಯಾರೇ ಒತ್ತಾಯಿಸಿದರೂ ಕ್ರಿಯಾಕ್ರರ್ಮ ಮಾಡಬಾರದು ಅನ್ನೋದೆ ನನ್ನ ಅಂತಿಮ ಇಚ್ಛೆ, ನನ್ನದು ಅಂತ ಯಾವ ಆಸ್ತಿನೂ ಇಲ್ಲ. ಕೈಲಿರೋ ನಾಲ್ಕು ಬಳೆಗಳಲ್ಲಿ ಮಗಳಿಗೆ ಎರಡು, ರಮಾಳಿಗೆ ಎರಡು ಕೊಟ್ಟು ಉಳಿದಂತೆ ನನ್ನ ಮೈಮೇಲಿರೋ ಬಂಗಾರವನ್ನು, ಒಳಗಿಟ್ಟಿರೋ ನನ್ನ ಚೂರುಪಾರು ಬಂಗಾರವನ್ನು ಮಾರಿ ಆ ದುಡ್ಡನ್ನ ಭಾವ ಹೋಗ್ತಿರೋ ಕಲಿಕಾ ಕೇಂದ್ರದ ಮಕ್ಕಳಿಗಾಗಿ ನಿಮಗೆ ಸರಿಕಂಡತೆ ಉಪಯೋಗಿಸಿ." ಬರೆದಿದ್ದ ದಿನಾಂಕ ಇರಲಿಲ್ಲ. ಕೊನೆಯಲ್ಲಿ ಮತ್ತು ಮೊದಲಿಗೆ ತಾನು ಇದನ್ನು ತನ್ನ ಪೂರ್ಣಪ್ರಜ್ಞೆಯಿಂದ ಬರೆಯುತ್ತಿರ್ದ್ದೇನೆ, ತ ಯಾರದ್ದೇ ಒತ್ತಾಯದಿಂದ ಅಲ್ಲ ಎಂದು ಬರೆದಿದ್ದಳು. ಅದನ್ನು ನಡುಗುವ ಧ್ವನಿಯಲ್ಲೇ ಓದಿ ಮುಗಿಸಿದ ಕೃಷ್ಣಮೂರ್ತಿಗೆ ತಟ್ಟನೆ ನೆನಪಾಯಿತು, ತಿಂಗಳ ಹಿಂದೆ ಯಾರೋ ಮಹಾನುಭಾವರೊಬ್ಬರು ತೀರಿಕೊಳ್ಳುವಾಗ ಬರೆದ ಉಯಿಲಿನ ಕುರಿತು ಪತ್ರಿಕೆಯಲ್ಲಿ ಬಂದಿದ್ದನ್ನು ಓದಿ, ತಾವಿಬ್ಬರು ಮಾತನಾಡಿಕೊಂಡಿದ್ದು.ಆ ದಿನದ ಎಲ್ಲ ವಿವರಗಳು

ಕೃಷ್ಣಮೂರ್ತಿಗೆ ನೆನಪಿದೆ.

## ಆ ಕ್ಷಣಗಳಲ್ಲಿ ಅದೆಂಥ ನಿಗೂಢತೆ



ಆ ದಿನ ಮಗ, ಸೊಸೆ ಇನ್ನೂ ಕೆಲಸದಿಂದ ಬಂದಿರಲಿಲ್ಲ. ಅದೇ ಮನೆಗೆ ಬಂದಿದ್ದ ತಮ್ಮ ಮುಖ ತೊಳೆಯಲು ಹೋಗಿದ್ದ. ಆ ದಿನ ಕೃಷ್ಣಮೂರ್ತಿ ಸ್ವಲ್ಪ ಬೇಗನೆ ಬಂದವರು ಸುಜಾತಾ ಕೊಟ್ಟ ಕಾಫಿ ಕುಡಿಯುತ್ತ, ಡೈನಿಂಗ್ ಟೇಬಲ್ ಮೇಲೆ ಪೇಪರ್ ಬಿಡಿಸಿಟ್ಟುಕೊಂಡು ಓದುತ್ತಿದ್ದವರು ದೊಡ್ಡ ವ್ಯಕ್ತಿಯೊಬ್ಬರು ತಮ್ಮ ಉಯಿಲಿನಲ್ಲಿ ತಾವು ಸತ್ತ ನಂತರ ಕ್ರಿಯಾಕರ್ಮಾದಿ ಮಾಡಬಾರದು, ತಮ್ಮ ದೇಹವನ್ನು ಆಸ್ಪತ್ರೆಗೆ ದಾನ ಮಾಡಬೇಕು ಎಂದೆಲ್ಲ ಬರೆದಿದ್ದನ್ನು ಸುಜಾತಾಗೂ ಓದಿ ಹೇಳಿದ್ದರು. ಎಂತಾ ದೊಡ್ಡ ವ್ಯಕ್ತಿ ಭಾವ ಎಂದು ಕಣ್ಣರಳಿಸಿ ಪ್ರತಿ ವಿವರವನ್ನೂ ಇವರಿಂದ ಕೇಳಿದವಳು, ಮುಖ ತೊಳೆದು ಬಂದು ಟಿವಿ ಮುಂದೆ ಪ್ರತಿಷ್ಠಾಪಿತನಾದ ಗಂಡನಿಗೆ ಟೀ ಕೊಟ್ಟವಳು, ಮತ್ತೆ ಏನೆನ್ನಿಸಿತೋ ಒಳಗಿನಿಂದ ತನ್ನ ಕನ್ನಡಕ ತಂದು, ಹಾಕಿಕೊಂಡು, ತಾನೂ ಒಮ್ಮೆ ಆ ಸುದ್ದಿಯನ್ನು ಓದಿದ್ದಳು.

ಇದಾಗಿ ಸರಿಯಾಗಿ ನಾಲ್ಕು ದಿನಗಳ ನಂತರ ಮತ್ತೊಮ್ಮೆ ಮನೆಯಲ್ಲಿ ಯಾರೂ ಇಲ್ಲದಿದ್ದಾಗ ಇವರೊಡನೆ ಲೋಕಾಭಿರಾಮವಾಗಿ ಮಾತನಾಡುತ್ತ ಉಯಿಲು ಹೇಗೆ ಮಾಡ್ತಾರೆ, ಅದಕ್ಕೆ ವಕೀಲರು ಬೇಕೇಬೇಕಾ ಎಂದೆಲ್ಲ ಕೇಳಿದಳು. ಆ ಕ್ಷಣಕ್ಕೆ ಎಷ್ಟು ಸಹಜವಾಗಿ ಏನೋ ಮಾಹಿತಿ ಕೇಳುವಂತೆ ಕೇಳಿದ್ದಳಲ್ಲ... ಹಾಗೆ ಅವಳು ತನಗೆಷ್ಟೋ ವಿಷಯ ಕೇಳಿ ತಿಳಕೊಳ್ಳೋಳು, ಅದೆಂತಹ ಕುತೂಹಲ ಇವಳಿಗೆ ಎಲ್ಲದರ ಬಗ್ಗೆ ಎಂದು ತನಗೆ ಮೊದಲಿನಿಂದ ಸುಜಾತನ ಬಗ್ಗೆ ಆಳದ ಒಂದು ಅಭಿಮಾನ ಉಳಿದೇಬಿಟ್ಟದೆ... ತಿಳಕೊಳ್ಳಕ್ಕೆ ಕೇಳಿದಾಳೆ ಎಂದುಕೊಂಡು ಉಯಿಲಿನ ಕುರಿತ ಎಲ್ಲ ಕಾನೂನು ಸಂಬಂಧಿತ ವಿವರಗಳನ್ನೆಲ್ಲ ಅವಳಿಗೆ ಹೇಳುವಾಗ ನಿಜವೆಂದರೆ ಆ ಕ್ಷಣಕ್ಕೆ ಅರೆ, ಇನ್ನು ತಾನು ತಡ ಮಾಡದೇ ಒಂದು ಉಯಿಲು ಮಾಡಿಬಿಡಬೇಕು ಎನ್ನಿಸಿತ್ತು. ಈ ಮನೆ ಇಬ್ಬರ ಹೆಸರಿನಲ್ಲೂ ಇರಲಿ ಎಂದು ತಮ್ಮ ಹೇಳಿದ್ದರೂ ಬೇಡೋ, ನನಗೇನು ಮತ್ತೇ ಮರಿಯೇ, ಸಾಯೋವರೆಗೆ ಈ ಮನೇಲಿದ್ದು ಹೋಗ್ತಿನಿ ಅಷ್ಟೆ, ನಿನ್ನ ಹೆಸರಲ್ಲೇ ಇರಲಿ ಬಿಡು, ಇಬ್ರು ಹೆಸರಲ್ಲಿ ಅಂದರೆ ಆಮೇಲೆ ಎಲ್ಲ ರಗಳೆ ಎಂದು ಮನೆ ಕಟ್ಟುವಾಗಲೇ ಅವನ ಹೆಸರಿಗೆ ಮಾಡಿಯಾಗಿತ್ತು, ತಾನು ಬ್ಯಾಂಕಿನಲ್ಲಿ ಕೂಡಿಟ್ಟಿರೋ ಚೂರು ಪಾರು ಹಣದ ಬಗ್ಗೆ, ಅಂತಿಮ ಸಂಸ್ಕಾರದ ಬಗ್ಗೆ ಸರಿಯಾಗಿ ಒಂದು ಉಯಿಲು ಮಾಡಬೇಕು, ವಕೀಲರಿಗೆ ಫೋನ್ ಮಾಡೋಣ ಎಂದುಕೊಳ್ಳುತ್ತಲೇ ದಿನ ಉರುಳಿತ್ತು.

'ಬರೀ ಒಂದು ಬಿಳಿ ಹಾಳೆ ಮೇಲೂ ಬರೀಬಹುದಾ, ಹೇಗೆ ಬರೀಬಹುದು, ಅದು ಮಾನ್ಯ ಆಗುತ್ತ ಭಾವಾ' ಎಂಬೆಲ್ಲ ವಿವರಗಳನ್ನು ಅವಳು ಕೇಳುವಾಗಲೂ ಮಾಹಿತಿಯೊಂದನ್ನು ಕೇಳುವಾಗಿನ ಸಹಜ ಕುತೂಹಲವಿತ್ತು ಎಂದು ತನಗನ್ನಿಸಿತ್ತೇ ಹೊರತು ಎಲ್ಲಿಯೂ ಇಂಥದೊಂದು ಸುಳಿವೂ ತಮಗೆ ಹೊಳೆಯಲೇ ಇಲ್ಲವಲ್ಲ... ಪ್ರಾಯಶಃ ತಮ್ಮಿಂದ

ಆ ವಿವರಗಳನ್ನೆಲ್ಲ ಕೇಳಿಕೊಂಡ ನಂತರ ಒಂದೆರಡು ದಿನಗಳಲ್ಲೇ ಬರೆದಿರಬೇಕು. ಅದನ್ನು ವಾರ್ಡ್‌ರೋಬ್‌ನಲ್ಲಿ ಜರಿಸೀರೆ ಕೆಳಗೆ ಇಟ್ಟಿದ್ದಾಳೆ.. ರಮೇಶ ಹೇಳಿದಂತೆ ಊಟ ಮಾಡಿ ಮಲಗಿದವಳಿಗೆ, ಪ್ರಾಯಶಃ ಇದ್ದಕ್ಕಿದ್ದಂತೆ ತಲೆಯಲ್ಲಿ ಸ್ಫೋಟಗೊಂಡಂತೆ ನೋವುಅನ್ನಿಸಿ, ವಾರ್ಡ್‌ರೋಬ್‌ನಲ್ಲಿದ್ದ ಆ ಕಾಗದ ತೆಗೆದುಕೊಳ್ಳಲು ಹೋದಳೇನೋ...



ಕೃಷ್ಣಮೂರ್ತಿ ಅದರಲ್ಲಿದ್ದದ್ದನ್ನು ಓದಿ ಹೇಳಿದ ನಂತರ ರೂಮಿನಲ್ಲಿ ಅಳುವ ಸದ್ದೂ ಇಲ್ಲದೇ ಅಸಹನೀಯ ಮೌನ ಆವರಿಸಿತು. “ಅಲ್ಲ... ಸುಜಾತನ ಕಡೇವ್ರು, ಬೇರೆ ನೆಂಟ್ರು ಎಲ್ಲ ಏನಂತಾರೋ ಏನೋ...” ರಮೇಶ ಮೆತ್ತಗೆ ಹೇಳಿದ, “ಅಪ್ಪಾ... ಅಮ್ಮ ಆ ಕೊನೇಘಳಿಗೆಯಲ್ಲಿ ಏನು ಅನುಭವಿಸಿದ್ಳೋ ಏನೋ, ನಾವೆಲ್ಲ ಇದ್ರೂ ಅವಳ ಕೊನೇ ಘಳಿಗೆಯಲ್ಲಿ ಏನೂ ಮಾಡ್ಲಿಕ್ಕೆ ಆಗ್ಲಿಲ್ಲ, ಕೊನೇ ಪಕ್ಷ ಈ ಕಾಗದದಲ್ಲಿ ಏನು ಬರೆದಿದಾಳೆ ಹಂಗೇ ನಡ್ಕೊಳಣ, ಅವು ಹೇಳ್ತಾರೆ ಇವು ಹೇಳ್ತಾರೆ ಅಂತ ನಾವು ಬಾಳ್ವೆ ಮಾಡಕ್ಕಾಗಲ್ಲಪ್ಪ” ಎಂದು ಮಗ ಮೆತ್ತಗೆ, ದೃಢವಾದ ಧ್ವನಿಯಲ್ಲಿ ಮಾತನಾಡಿದ.

“ನೋಡು, ಅವಳು ಇಷ್ಟು ಚಿಕ್ಕದಾಗಿ, ಪತ್ರ ಬರೆದಿಟ್ಟಂತೆ ಕಾಗದದ ಮೇಲೆ ಬರೆದಿದ್ದಾಳೆ ಅಂದರೆ ತಾನು ಕಣ್ಮುಚ್ಚಿದ ಮೇಲೂ ಅವಳ ಮಾತನ್ನು ನಾವು ನಡೆಸಿಯೇ ನಡೆಸ್ತೀವಿ ಅಂತ ಅವಳಿಗೆ ಆಳವಾದ ನಂಬಿಕೆ ಇತ್ತು... ಬೇರೆ ಯಾವಕ್ಕೆ ಅಲ್ಲಿದ್ರೂ ಆ ನಂಬಿಕೆಗೆ ಅರ್ಹರಾಗಿ ನಡ್ಕೊಳೊಣ” ಕೃಷ್ಣಮೂರ್ತಿ ಈ ವಿಚಾರದಲ್ಲಿ ಇದೇ ಕಡೇ ಮಾತು ಎಂಬಂತೆ ಹೇಳಿದ್ರು. ಮನೆಯಲ್ಲಿ ಈಗ ಹಿರಿಯರಾಗಿದ್ದ ಕೃಷ್ಣಮೂರ್ತಿಯ ಮಾತನ್ನು ಇಂಥ ಸಮಯದಲ್ಲಿ ಮೀರುವ ಧೈರ್ಯ ಯಾರಿಗೂ ಇರಲಿಲ್ಲ. ಸುಜಾತ ಬರೆದಂತೆ ತುಂಬ ಜನರಿಗೆ ತಿಳಿಸಲಿಕ್ಕೆ ಹೋಗಲಿಲ್ಲ. ಮೊಮ್ಮಗುವನ್ನು ಪಕ್ಕದ ಮನೆಯಾಕೆ ಕರೆದುಕೊಂಡು ಹೋದರು.ಕ್ರಮೆಟೋರಿಯಂಗೆ ಹೋದವರು ಮೈಸೂರಿನಿಂದ ಬಂದಿದ್ದ ಮಗಳು, ಅಳಿಯ, ಸುಜಾತನ ಅಣ್ಣ ತಂಗಿ, ಅಕ್ಕಪಕ್ಕದ ಒಂದೆರಡು ಮನೆಯವರು, ರಮೇಶನ, ಮಗನ ಗೆಳೆಯರು ನಾಲ್ಕಾರು ಜನರು, ಕೃಷ್ಣಮೂರ್ತಿಯವರ ಹತ್ತಿರದ ಒಂದಿಬ್ಬರು ಸ್ನೇಹಿತರು, ಎಲ್ಲ ಸೇರಿ ಇಪ್ಪತ್ತೈದು ಮೂವತ್ತು ಜನ ಮಾತ್ರ.

ಮತ್ತೆ ಎಂದಿನಂತೆ ಬೆಳಗು ಸಂಜೆಗಳಾಗುತ್ತಿವೆ. ಡೈನಿಂಗ್ ಟೇಬಲ್ ಎದುರಿನ ಗೋಡೆಯಲ್ಲಿ ನೇತುಹಾಕಿದ ಕಪ್ಪು ಬಿಳುಪು ಫೋಟೋದಲ್ಲಿ ನಸುನಗುತ್ತಿರುವ ಸುಜಾತ ಆ ಯಾವ ರಾತ್ರಿಯಲ್ಲೂ ಕಣ್ಮುಚ್ಚಿ ನಿದ್ರಿಸಿ, ಯಾವ ಬೆಳಗಿನಲ್ಲೂ ಕಣ್ಣು ತೆರೆಯುತ್ತಿಲ್ಲ, ಚಿರನಗುವನ್ನು ಅಂಟಿಸಿಕೊಂಡು, ಸದಾ ಕಣ್ಣು ತೆರೆದುಕೊಂಡು ಫೋಟೋದಲ್ಲಿದ್ದಾಳೆ

ಎಂಬುದನ್ನು ಬಿಟ್ಟರೆ ಮತ್ತೆಲ್ಲ ಮಾಮೂಲಿಗೆ ತಿರುಗುತ್ತಿದೆ. ಅಳಿಯ ರಜೆಯಿಲ್ಲ, ಹೇಗೂ ಏನೂ ಕ್ರಿಯಾಕರ್ಮಾದಿ ಕೆಲಸಗಳಿಲ್ಲವಲ್ಲ ಎಂದು ಮರುದಿನವೇ ಹೋದ.ಮಗಳು ನಾಲ್ಕು ದಿನದ ನಂತರ ಹೋದಳು.

ಅವಳು ಹೋಗುವ ಮೊದಲು ನಡೆದ ಘಟನೆ ಮಾತ್ರ ತಕ್ಷಣಕ್ಕೆ ಮರೆಯುವಂಥದಲ್ಲ. ಅವಳು ಹೋಗುವ ಹಿಂದಿನ ರಾತ್ರಿ ರಮೇಶ ಸುಜಾತಾನ ಎರಡು ಬಳೆಗಳನ್ನು ಒಳಗಿನಿಂದ ತಂದವ, “ನಿಮ್ಮಮ್ಮನ ಕೊನೆಯಾಸೆ” ಎಂದು ಕೈಗಿಡಲು ಹೋದ. ಅವಳು ತಟ್ಟನೆ ಕೈ ಹಿಂದಕ್ಕೆ ಸರಿಸಿಕೊಂಡವಳೇ, “ಇದ್ನಾರೂ ಯಾಕೆ ಕೊಡಬೇಕು... ನಂಗೇನು ಅಷ್ಟು ಗತಿಯಿಲ್ವಾ..., ಬೇರೆದೆಲ್ಲ ದಾನ ಮಾಡಕ್ಕೆ ಹೇಳಿದಾಳಲ್ಲ ಅಮ್ಮ, ಹಂಗೇ ಇದನ್ನೂ ದಾನ ಮಾಡಿ” ಎಂದಳು. ತನ್ನ ಮಗಳದಲ್ಲವೇ ಅಲ್ಲ ಎಂಬಷ್ಟು ಅಪರಿಚಿತವಾಗಿದ್ದ ಗೊಗ್ಗರು ಸ್ವರ ಕೇಳಿದ ರಮೇಶ ದಿಗಿಲಿನಿಂದ ನಿಂತಲ್ಲೇ ಆ ತಂಪುಹೊತ್ತಿನಲ್ಲೂ ಬೆವರಿದ. ಟಿವಿ ಆಫ್ ಮಾಡಿ ಮಲಗಲು ಹೊರಟಿದ್ದ ಕೃಷ್ಣಮೂರ್ತಿ ಕೂಡ ಅರೆ



ಇವಳೂ ಹೀಗೆಲ್ಲ ಮಾತಾಡಬಲ್ಲಳೇ ಎಂಬುದನ್ನು ಅರಗಿಸಿಕೊಳ್ಳಲಿಕ್ಕಾಗದೇ ಮಾತನಾಡುವ ತ್ರಾಣವೇ ಇಲ್ಲದಂತೆ ಸೋಫಾದ ಮೇಲೆ ಕುಸಿದು ಕೂತರು. ಕೆಲಸದಿಂದ ಸುಸ್ತಾಗಿ ಬಂದಿದ್ದ ಮಗ ಮಲಗಲೆಂದು ಮಹಡಿಯ ಮೇಲೆ ಹೋಗಿಯಾಗಿತ್ತು.ಅಡುಗೆ ಮನೆ ದೀಪ ಆರಿಸಿ ಹಾಲ್‌ಗೆ ಕಾಲಿಟ್ಟಿದ್ದ ರಮಾಳಿಗೂ ಅರೆಕ್ಷಣ ಮಾತು ಹೊರಡಲಿಲ್ಲ.

“ಅತ್ತಿಗೆ, ಬೇಕಿದ್ರೆ ಆ ನಾಲ್ಕೂ ಬಳೆ ನೀವೇ ತಗೋಳಿ, ನಂಗೆ ಬೇಕೇ ಬೇಕು ಅಂತ ಈಗ ಅನ್ನಿಸ್ತಿಲ್ಲ, ಅತ್ತೆ ನಮಗೆ ಕೊಟ್ಟಿರೋದು ಗತಿ ಇಲ್ಲ ಅಂತಲ್ಲ, ಅವರ ಪ್ರೀತಿ ಅದು. ಅಲ್ಲೆ ಬದುಕಿಡೀ ಮನೆ ಸಂಭಾಳಿಸೋ ಕೆಲಸದಲ್ಲಿಯೇ ಕಳೆದ ಅತ್ತೆಗೆ ತಮಗೆ ಸೇರಿದ ಒಡವೆಯನ್ನ ಹ್ಯಾಗೆ ವಿನಿಯೋಗಿಸ್ಬೇಕು ಅಂತ ನಿರ್ಧರಿಸೋ ಚಿಕ್ಕ ಹಕ್ಕೂ ಇರಲ್ವಾ... ಅವತ್ತು ಬೆಳಗ್ಗೆ ಇದೇ ಬಳೆಗಳನ್ನು ಹಾಕಿದ್ದ ಕೈಯಲ್ಲಿ ನಂಗೆ, ಇವಿಗೆ ಡಬ್ಬಿಗೆ ಚಪಾತಿ ಪಲ್ಯ ಕಟ್ತಾ ಇದ್ರು... “ಇನ್ನೇಲೆ ಚೂರು ಬೇಗ ಏಳಮ್ಮ.ಯಾಕೋ ನಂಗೆ ಮೊದ್ದಿನಷ್ಟು ಬೇಗೇಗ ಕೆಲಸ ಮಾಡಕ್ಕಾಗಲ್ಲ”  ಅಂತ ಹೇಳ್ತಾನೆ ಸೆರಗಿನಿಂದ ಬೆವರೊರೆಸಿಕೊಂಡರು, ಮೊದ್ಲಲ್ಲ ಆದ್ರೆ ಅವರು ಹಂಗೆ ಹೇಳಿದಾಗ “ನಿಮಗ್ಯಾರು ಅಷ್ಟೆಲ್ಲ ಕುಣಕೊಂಡು ಕೆಲಸ ಮಾಡಿ ಅಂತಾರೆ, ನಾನು ರೆಡಿಯಾದ ಮೇಲೆ ನಂಗೇನು ಬೇಕೋ ನೋಡಿ ಡಬ್ಬಿಗೆ ಹಾಕ್ಕೋತೀನಿ, ನೀವೇ ಯಾಕೆ ಎಲ್ಲ ಕೆಲಸಾನ ಮೈಮೇಲೆ ಹಾಕ್ಕೊತಿರಿ”  ಅಂತೆಲ್ಲ ರೇಗಿಬಿಡ್ತಿದ್ದೆ, ಆದ್ರೆ ಆ ದಿನ ನನಗೆ ತೀರಾ ನಾಚಿಕೆ ಅನ್ನಿಸಿಬಿಡ್ತು, "ಆಯ್ತತ್ತೆ" ಅಂದೆ, ಸೆರಗಿಗೆ ಕೈಒರೆಸಿಕೊಂಡು ಕೈ ಹೀಗೆ ಕೆಳಗೆ ಇಳಿಬಿಟ್ಟರಲ್ಲ, ನಾಲ್ಕೂ ಬಳೆ ಮುಂಗೈವರೆಗೆ ಬಂದಂತೆ ಅನ್ನಿಸ್ತು, ಸ್ವಲ್ಪ ತೆಳ್ಳಗಾಗಿದ್ದಾರೆ ಅತ್ತೆ ಅನ್ನಿಸಿತು, ಹಾಗೆ ಅನ್ನಿಸಿದ್ರೂ ಒಂದೇ ಒಂದು ಮಾತು ನಾನು ಕಕ್ಕುಲಾತಿಯಿಂದ ಏನೂ ಹೇಳಲಿಲ್ಲ... ನಾನು ಸಂಜೆ ಬರೋ ಅಷ್ಟರಲ್ಲಿ ಕೈಯಿಂದ ಬಳೆ ತೆಗೆಯೋ ಸನ್ನಿವೇಶ ಬಂದಿದೆ

ಅಂದರೆ..." ಹೇಳಹೇಳುತ್ತಲೇ ರಮಳ ಕಣ್ಣಿಂದ ನೀರು ಇಳಿಯುತ್ತ, ಮೆಲ್ಲಗೆ ಬಿಕ್ಕತೊಡಗಿದಳು. ಉಮಾಳಿಗೆ ಯಾಕೋ ತಾನು ವಿಪರೀತ ಕೆಟ್ಟದಾಗಿ ಮಾತಾಡಿದೆ ಎನ್ನಿಸತೊಡಗಿತು...

ಕಣ್ಮರೆಸಿಕೊಂಡ ರಮಾ, "ನೋಡಿ ಅತ್ತಿಗೆ, ಬೇಕಿದ್ರೆ ನಾಲ್ಕೂ ತಗೊಳ್ಳಿ, ಆದ್ರೆ ಬೇಡ ಅನ್ನಬೇಡಿ" ಮೆಲ್ಲಗೆ ರಮೇಶನ ಕೈಗಳಿಂದ ಬಳೆ ಇಸಿದುಕೊಂಡು ಉಮಾಳ ಕೈಯಲ್ಲಿಟ್ಟಳು.ಕೃಷ್ಣಮೂರ್ತಿ ತುಟಿಪಿಟಕ್ಕನ್ನೆದೆ ತಮ್ಮ ರೂಮಿನೊಳಗೆ ಹೋದರು. ರಮೇಶನಿಗೆ ಉಮಾ ಹುಟ್ಟಿದ ಕ್ಷಣಗಳು, ಅವಳ ಬಾಲ್ಯದ ಹುಡುಗಾಟ, ಆಗ ಇಷ್ಟೆಲ್ಲ ಹಣಕಾಸಿನ ಅನುಕೂಲತೆಗಳಿರಲಿಲ್ಲ. ಅವಳಿಗೊಂದು ರೇಷ್ಮೆ ಲಂಗ ಕೊಡಿಸಲು ತಾನೊಮ್ಮೆ ಓವರ್‌ಟೈಮ್ ಕೆಲಸ ಮಾಡಿದ್ದು, ಅವಳ ಕೈಹಿಡಿದು ಪಾರ್ಕ್‌ಗೆ ಕರೆದೊಯ್ದಿದ್ದದ್ದು ಏನೆಲ್ಲ ನೆನಪಾಗುತ್ತ ಅವಳು ಹೀಗೆ ಮಾತನಾಡಬಲ್ಲಳು ಎನ್ನುವುದನ್ನು ಅರಗಿಸಿಕೊಳ್ಳಲೇ ಆಗಲಿಲ್ಲ. ಸದ್ಯ, ರಮಾಳಾದರೂ ಇಷ್ಟು ಘನತೆಯಿಂದ ನಡೆದುಕೊಂಡಳಲ್ಲ ಎಂದು ಆ ಕ್ಷಣಕ್ಕೆ ಸಮಾಧಾನ ಕೂಡ. ಅರೆಕ್ಷಣ ಅಲ್ಲಿಯೇ ನಿಂತಿದ್ದ ಸೊಸೆ, ರಮೇಶ ಕೂಡ ತಮ್ಮ ತಮ್ಮ ರೂಮಿಗೆ ಹೊರಟು ಹೋದರು. ಉಮಾ ತುಂಬ ಹೊತ್ತಿನವರೆಗೆ ಒಬ್ಬಳೇ ಕುಳಿತಿದ್ದಳು.ತುಸು ಹೊತ್ತಿನ ನಂತರ ಕೃಷ್ಣಮೂರ್ತಿ ಮಲಗಿದ್ದ ರೂಮಿಗೆ ಬಂದ ಉಮಾ ಅವರ ಮಂಚದ ಕೆಳಗೆ ತನ್ನ ಹಾಸಿಗೆ ಬಿಡಿಸಿದಳು.ಅವಳೊಬ್ಬಳೇ



ಊರಿಗೆ ಬಂದಾಗೆಲ್ಲ "ದೊಡ್ಡಪ್ಪ ನಿನ್ನ ರೂಮಲ್ಲಿ ಮಲಗ್ತಿನಿ" ಎಂದು ಮಲಗುವುದು ಎಂದಿನ ವಾಡಿಕೆ.

ಕೃಷ್ಣಮೂರ್ತಿಯವರಿಗೆ ನಿದ್ರೆ ಸುಳಿಯಲಿಲ್ಲ.

"ಸಿಟ್ಟಾ ದೊಡ್ಡಪ್ಪ"

ಉಮಾ ಕೇಳಿದಾಗ ಕೃಷ್ಣಮೂರ್ತಿ ಅರೆಕ್ಷಣ ಮಾತಾಡಲಿಲ್ಲ. ನಂತರ ಮೆಲ್ಲಗೆ "ನೋಡು ಉಮಾ, ನೀನು ಹಾಗೆ ಹೇಳಿದ್ದಲ್ಲ, ನಿನ್ನ ಧ್ವನಿ ನಮಗೆ ಈವರೆಗೆ ನಿನ್ನದಲ್ಲದ ಧ್ವನಿಯಂತೆ, ಅಪರಿಚಿತವೆನ್ನಿಸ್ತು. ಒಂದು ಸಲ ಕಣ್ಮುಚ್ಚಿ ನಿನ್ನ ಆ ಎರಡು ವಾಕ್ಯವನ್ನು ನೀನೇ ಇನ್ನೊಮ್ಮೆ ಆಲಿಸು, ಒಳಗಿವಿಯಿಂದ ಆಲಿಸು, ಆಗ ನಿಂಗೇ ಗೊತ್ತಾಗುತ್ತೆ, ಆ ಧ್ವನಿ ನಿಂಗೂ ಎಷ್ಟು ಅಪರಿಚಿತ ಅಂತ... ಸುಜಾತಾ ಹ್ಯಾಗೆ ತಣ್ಣಗೆ ಎದ್ದು ಹೋಗಿಬಿಟ್ಟಳಲ್ಲ, ಅದು ಕೂಡ ಒಂದು ಅರಿವಿನ ದೀಪವನ್ನ ನಮ್ಮೊಳಗೆ ಹೊತ್ತಿಸಲಿಲ್ಲ ಅಂದರೆ..." ಉಮಾ ಸುಮ್ಮನಿದ್ದಳು. ಸ್ವಲ್ಪ ಹೊತ್ತಿನ ನಂತರ ಮೆಲ್ಲಗೆ "ನಂಗೂ ಈಗ ಅದೇ ಆಶ್ಚರ್ಯ ದೊಡ್ಡಪ್ಪ, ಹ್ಯಾಗೆ ನಮ್ಮೊಳಗೆ ಒಂದು ಕತ್ತಲೆ ಕೂಪ ಇದ್ದುಬಿಟ್ಟರುತ್ತದೆ, ಮೇಲೆ ಮತ್ತೇನೋ ಮುಸುಗು ಹಾಕ್ತೀವಿ, ಇಂಥಾ ಸಮಯದಲ್ಲಿ ಅದು ತನ್ನ ನಿಜರೂಪ ತೋರಿಸಿಯೇ ಬಿಡುತ್ತೆ ಅಲ್ವಾ.. ಛೇ.. ಅತ್ತಿಗೆಗೆ ಹೊಳೆದಷ್ಟೂ ನನಗೆ ಹೊಳೆಯಲಿಲ್ಲವಲ್ಲ" ತನ್ನೊಳಗೆ ಎಂಬಂತೆ ಹೇಳಿಕೊಂಡಳು.

ಕೃಷ್ಣಮೂರ್ತಿ ಮತ್ತೆ ಮಾತು ಮುಂದುವರೆಸಲಿಲ್ಲ. ಎಷ್ಟೋ ಹೊತ್ತಿನ ಮೇಲೆ ಇಬ್ಬರಿಗೂ ನಿದ್ರೆ ಹತ್ತಿತ್ತು.ಬೆಳಗ್ಗೆ ಕೃಷ್ಣಮೂರ್ತಿ ಏಳುವುದನ್ನೇ ಕಾಯುತ್ತಿದ್ದವಳಂತೆ "ದೊಡ್ಡಪ್ಪಾ, ಅಮ್ಮನ ನೆನಪಿಗೆ ಅಂತ ನಂಗೆ ಒಂದು ಬಳೆ ಸಾಕು, ಉಳಿದ ಬಂಗಾರ ಯಾವ ರೀತಿ ವಿನಿಯೋಗಿಸ್ತೀರ ಅದರ ಜೊತೆಗೆ ಈ ಇನ್ನೊಂದನ್ನು ಸೇರಿಸಿಕೊಳ್ಳಿ" ಎಂದು ಕೊಟ್ಟಳು. ಆ ಒಂದು ಬಳೆಯನ್ನು ತನ್ನ ಕೈಗೇರಿಸಿಕೊಂಡು, "ನಾನು ಬೇಗ ಹೋದೆ ಅಂತ ಅಪ್ಪಂಗೆ ನೀವೇ ಹೇಳಿ ಆಯ್ತಾ.."ಎಂದು ನಸುನಕ್ಕ ಉಮಾ ಮಾತ್ರ ಎಂದಿನ ಉಮಾ ಆಗಿದ್ದಳು.

ಈಗ ಮಗ ಕೆಲಸಕ್ಕೆ ಹೋಗುತ್ತಿದ್ದಾನೆ. ಮನೆಯಲ್ಲಿರುವ ರಮೇಶ, ಕೃಷ್ಣಮೂರ್ತಿಯೊಂದಿಗೆ ರಮಾಳೂ ಎಂಟು ಹತ್ತು ದಿನ ರಜೆ ಹಾಕಿದ್ದಾಳೆ.

ಈ ಮೊದಲು ರಮಾ ಅಡುಗೆಗೆ ಸಹಾಯ ಮಾಡುತ್ತಿದ್ದರೂ ಸುಜಾತಾ ಹೆಚ್ಚಿನ ಎಲ್ಲ ಕೆಲಸ ತಾವೇ ಮಾಡಿಬಿಡುತ್ತಿದ್ದರು. ಭಾನುವಾರದಂದು ಸೊಸೆಗೆ "ನೀನೇ ಅಡುಗೆ ಮಾಡ್ತಿದ್ರೆ ಮಾಡಮ್ಮ, ನಂಗೆ ನನ್ನ ಕೈಅಡುಗೆ ತಿಂದೂ ತಿಂದೂ ನಾಲಿಗೆ ಜಡ್ಡುಕಟ್ಟಿದೆ" ಎಂದು ಅಡುಗೆ ಮನೆ ಬಿಟ್ಟುಕೊಟ್ಟರೂ ಇನ್ನುಳಿದಂತೆ ತರಕಾರಿ, ಸಾಮಾನು ತರುವುದರಿಂದ ಹಿಡಿದು ಅಡುಗೆಯ ಸಕಲ ಜವಾಬ್ದಾರಿಯೂ ಸುಜಾತಾನದು. ಚಿಕ್ಕ ಪುಟ್ಟ ವಿಷಯಕ್ಕೆ ಏನಾದರೂ ಭಿನ್ನಾಭಿಪ್ರಾಯ ಬಂದರೂ ಸುಜಾತಾ ಕೂಡ ಅದನ್ನು ಹೆಚ್ಚು ಬೆಳೆಸುತ್ತಿರಲಿಲ್ಲ. ಕಂಪನಿಯೊಂದರ ಎಚ್‌ಆರ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ರಮಾಳಿಗೆ ಜನರನ್ನು ಸಂಭಾಳಿಸುವ ಬಗ್ಗೆ ಹೇಳಿಕೊಡುವುದೇ ಬೇಕಿರಲಿಲ್ಲ. ಅತ್ತೆಯೊಂದಿಗೆ ಚೆನ್ನಾಗಿದ್ರೆ ಮಗುವನ್ನು ನೋಡಿಕೊಳ್ಳೋದು ಸುಲಭ ಎನ್ನುವುದು ಅವಳಿಗೆ ತನ್ನ

ಸಹೋದ್ಯೋಗಿಗಳ ಅನುಭವ ಕಲಿಸಿತ್ತು. ಇದೆಲ್ಲ ಮದುವೆಯಾದ ಹೊಸತರಲ್ಲಿ. ಬರಬರುತ್ತ ಸ್ವಭಾವತಃ ಅಕ್ಕರಾಸ್ಥೆ ತೋರುವ, ಸೂಕ್ಷ್ಮ ಗ್ರಹಿಕೆಯ ಅತ್ತೆಯೊಂದಿಗೆ ಸುಖಾಸುಮ್ಮನೆ ಯಾಕೆ ಕಿರಿಕಿರಿ ಮಾಡಿಕೊಂಡಿರಬೇಕು ಎನ್ನಿಸಿದ್ದೇ ವ್ಯಾವಾಹರಿಕ ಲಾಭವನ್ನೂ ಮೀರಿದ ಆಪ್ತ ಸಂಬಂಧ ತಾನೇತಾನಾಗಿ ಹುಟ್ಟತೊಡಗಿತ್ತು.ಮೊಮ್ಮಗ ಹುಟ್ಟಿದ ಈ ಮೂರು ವರ್ಷಗಳಿಂದ ಅಂತೂ ಆ ಮನೆಯಲ್ಲಿದ್ದ ಬೆಚ್ಚನೆಯ ಆಪ್ತಭಾವ ತಟ್ಟನೆ ಯಾರಿಗಾದರೂ ಹೊಟ್ಟೆಕಿಚ್ಚು ಬರಿಸುವಂತಿತ್ತು.ಸುಜಾತನ ಗೈರು ಹಾಜರಿ ಎಲ್ಲದರಲ್ಲಿ ಎದ್ದು ಕಾಣತೊಡಗಿದೆ.ಅವಳು ನಮ್ಮೆಲ್ಲರ ಕೆಲಸ ಕಾರ್ಯಗಳಿಗೆ ಇಷ್ಟೆಲ್ಲ ಅನುಕೂಲ ಮಾಡಿಕೊಡ್ತಿದ್ದಳು ಎಂದು ಅವಳನ್ನು ಇಷ್ಟು ಕಳೆದುಕೊಂಡ ಭಾವನೆ ಕಾಡುತ್ತಿದ್ದೆಯೇ... ಹಾಗೆ ಇರದಿದ್ದರೆ ತಾವೆಲ್ಲ ಸ್ವಲ್ಪ ಪಂಚೆ ಜಾಡಿಸಿಕೊಂಡು ಎದ್ದುಬಿಡುವಂತೆ ಎದ್ದು ದೈನಂದಿನ ಬದುಕಿನಲ್ಲಿ ಮುಳುಗುತ್ತಿದ್ದೆವೇ ಎಂದು ಕೃಷ್ಣಮೂರ್ತಿಗೆ ಅನ್ನಿಸುತ್ತಿತ್ತು.

ಆ ದಿನ ರಮೇಶ ಹೊರಗೆ ಹೋಗಿದ್ದ. ಮಗ ಇನ್ನೂ ಕೆಲಸದಿಂದ ಬಂದಿರಲಿಲ್ಲ.

ಕೃಷ್ಣಮೂರ್ತಿಯವರು "ನಾಳೆಯಿಂದ ನಾನೂ ಹೋಗ್ತಿನಮ್ಮ, ಅಲ್ಲಿ ಏನೇನೋ ಹೆಚ್ಚು ಕಡಿಮೆ ಮಾಡಿಬಿಟ್ಟಿದ್ದಾರೆ..." ಅನ್ನುತ್ತಿರುವಂತೆ ರಮಾ ಮೆತ್ತಗೆ "ಮಾವಾ.. ಅತ್ತೆ ಯಾವಾಗೂ ಒಂದು ಅಥವಾ ಎರಡನೇ ತಾರೀಕಿಗೆ ಆ ಡಿಪಾರ್ಟ್‌ಮೆಂಟಲ್ ಸ್ಟೋರ್‌ನಿಂದ ಸಾಮಾನು ತರಿಸ್ತಿದ್ರು, ಎಷ್ಟೋ ಸಲ ನಾನು ಹೋಗುವಾಗ ಚೀಟಿ ಕೊಟ್ಟು ಹೋಗಿರಿದ್ದೆ, ಆಮೇಲೆ ಮಧ್ಯಾಹ್ನ ಅವನು ಕಳಿಸ್ತಿದ್ದ...." ಎಂದಳು.

ಅವಳು ಏನು ಹೇಳಹೊರಟಿದ್ದಾಳೆ ಕೃಷ್ಣಮೂರ್ತಿಗೆ ಅರ್ಥವಾಗಲಿಲ್ಲ. "ಸಾಮಾನೆಲ್ಲ ಮುಗಿದುಹೋಗಿದ್ಯಾ... ತರಬೇಕೇನಮ್ಮ...?

"ಇಲ್ಲ... ಅದೇ ಹೇಳಕ್ಕೆ ಹೊರಟಿದ್ದೆ... ಅವ್ರು ತೀರಿಕೊಂಡಿದ್ದು ಮೂವತ್ತಕ್ಕೆ ಅಲ್ವಾ ಈ ಸಲ ಅವ್ರು ಅದಕ್ಕಿಂತ ಮುಂಚೆ ಎಲ್ಲಸಾಮಾನು ತರಿಸಿರೋ ಹಾಗಿದೆ, ಬೇಳೆ, ಸಕ್ಕರೆ, ಎಲ್ಲ ಡಬ್ಬಿಗಳೂ ತುಂಬಿದೆ, ಯಾವುದೋ ಒಂದೆರಡು ಸಾಮಾನು ಮುಗಿದು ಹೋಗಿದ್ದು ತಂದಿದಾರೇನೋ ಅಂತ ನೋಡಿದ್ರೆ ಎಲ್ಲ ಸಾಮಾನು ತರಿಸಿ, ಹಸನು ಮಾಡಿ, ತುಂಬಿಟ್ಟಿದಾರೆ.ಅವ್ರು ಕೆಲಸದ ಸಣ್ಣಮ್ಮನೂ ಹೇಳ್ತಿದ್ಲು, ಎರಡು ದಿನ ಮುಂಚೆ ಡಬ್ಬಿ ಎಲ್ಲ ತೊಳ್ಕೊಡು ಅಂತ ತೊಳಸ್ಕೊಂಡಿದ್ರು ಅಂತ. ಆ ಡಿಪಾರ್ಟ್‌ಮೆಂಟಲ್ ಸ್ಟೋರ್ ರಸೀದಿಯೂ ಕಪಾಟಲ್ಲೇ ಇತ್ತು, ಇಪ್ಪತ್ತೊಂಬತ್ತನೇ ತಾರೀಕಿಗೆ ತಂದುಕೊಟ್ಟಿದಾನೆ... ಪ್ರತಿಸಲ ದಿನಸಿ ಸಾಮಾನು ಬಿಲ್ ಮಾತ್ರ ನಾನು ಕೊಡ್ತಿದ್ದೆ ಅಲ್ಲವಾ.. ಉಳಿದಿದನ್ನ ನೀವೂ ಮೂರು ಜನ ಕೊಡ್ತಿದ್ರಿ... ಈ ಸಲ ಅವರೇ ತಮ್ಮ ಹತ್ರ ಉಳಿಸಿದ ಹಣಾನ ಕೊಟ್ಟುಬಿಟ್ಟಿದ್ದಾರೆ.. ಆ ಕಾಗದ ಅದೇ ಉಯಿಲನ್ನೂ ಮೊದ್ದೇ ಬರಿದ್ದಾರೆ ಅಂದ್ರೆ ಹಿಂಗಾಗಬಹುದು ಅಂತ ಅತ್ತೆಗೇನಾದ್ರೂ ಒಳಗೊಳಗೇ ಅನ್ನಿಸಿಬಿಟ್ಟಿತ್ತಾ ಅಂತ..." ರಮಾ ಮೆಲ್ಲಗೆ ಹೇಳುತ್ತ ಎಷ್ಟೇ ಪ್ರಯತ್ನಿಸಿದರೂ ಸ್ವರದಲ್ಲಿಯ ನಡುಕವನ್ನು ಅಡಗಿಸಲಾಗಲಿಲ್ಲ.

ಕೃಷ್ಣಮೂರ್ತಿಗೆ ಮಾತೇ ಹೊರಡಲಿಲ್ಲ. ಯಾಕೋ ತಟ್ಟನೆ ತಮ್ಮನ್ನು ಸಾವು ಯಾವ ಮರೆಯಲ್ಲಿ ಹೊಂಚು ಹಾಕುತ್ತಿದೆಯೋ ಅನ್ನಿಸಿದ್ದೇ ಬೆನ್ನ ಹುರಿಯುದ್ದಕ್ಕೂ ಎದ್ದ ಚಳಕು.



ಮರುದಿನ ಕೃಷ್ಣಮೂರ್ತಿ ಆಫೀಸ್‌ಗೆ ಬಂದರು. ಹಾಗೆ ನೋಡಿದರೆ ಅರವತ್ತೆರಡು ದಾಟಿದ ಈ ವಯಸ್ಸಿನಲ್ಲಿ ದುಡಿಯುವ ಅಗತ್ಯವೇನೂ ಇರಲಿಲ್ಲ ಅವರಿಗೆ ಕಾಲಕ್ಷೇಪಕ್ಕೆಂದೂ ಹಚ್ಚಿಕೊಂಡಿದ್ದಲ್ಲ. ನಾಲ್ಕೆಂಟು ಕಡೆ ಕೆಲಸ ಮಾಡಿದ ಮೇಲೆ ಈಗ ವಿಭಿನ್ನ ಅಸಾಮರ್ಥ್ಯವಿರೋ ಮಕ್ಕಳಿಗೆ ಸೂಕ್ತವಾಗೋ ಕೌಶಲಗಳನ್ನು ಹೇಳಿಕೊಡೋ ಈ ಕೇಂದ್ರದಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದಾರೆ. ಅಡ್ಮಿನ್ ಸಂಬಂಧಿಸಿದ ಕೆಲಸಕ್ಕೆ ಅಂತ ಸೇರಿಕೊಂಡಿದ್ದರೂ ಏನೇನೊ ಬೇರೆ ಕೆಲಸಗಳನ್ನೂ ನೋಡಿಕೊಳ್ತಿದ್ರು, ವಯಸ್ಸಿಗೆ ತಕ್ಕ ಘನತೆಯೊಂದಿಗೆ ನಡೆದುಕೊಳ್ತಿದ್ದ, ಕೇಂದ್ರದ ನಾಲ್ಕಾರು ಜವಾಬ್ದಾರಿ ವಹಿಸಿಕೊಂಡಿದ್ದ ಕೃಷ್ಣಮೂರ್ತಿ ಬಗ್ಗೆ ಕೆಲವು ಸಲ ಎಷ್ಟು ಮಾತಾಡರಪ್ಪ, ಇಷ್ಟಾಕೆ ಕೊರೀತಾರಪ್ಪ ಎನ್ನಿಸಿದರೂ ಅವರಿಗಿಂತ ಚಿಕ್ಕ ಪ್ರಾಯದ ಸಹೋದ್ಯೋಗಿಗಳಿಗೆ ಆದರದ ಭಾವನೆ ಇದ್ದಿದ್ದು ಸುಳ್ಳೇನಲ್ಲ.

ಅವರು ಬಂದ ಸ್ವಲ್ಪ ಹೊತ್ತಿಗೆ ಬಂದ ಫ್ರೆಂಟ್ ಆಫೀಸ್ ನೋಡಿಕೊಳ್ಳುವ ರೇಖ "ಅಬ್ಬ, ನೀವಿಲ್ದೇ ನಮಗೆಲ್ಲ ಕೈಕಾಲೇ ಆಡ್ತಿರಲಿಲ್ಲ ಸ' ಎಂದು ಅಭಿಮಾನದಿಂದ ಹೇಳುತ್ತ, 'ಮನೇಲಿ ಈಗ ಬೇಜಾರಾಗಿರಬೇಕು ಅಲ್ವಾ ಸರ್' ಎನ್ನುತ್ತಲೇ "ಇಂಥಾ ಸಾವು ನೋಡಿದಾಗ ಒಂಥರಾ ನಡುಕ ಹುಟ್ಟಿಬಿಡುತ್ತೆ ಅಲ್ವಾ ಸರ್" ಎಂದಳು.

ಮತ್ತೆ ಅದೂ ಇದೂ ಮಾತನಾಡುತ್ತ, "ಅವತ್ತು ಅದೇ ಏನೋ ಸ್ಟಡಿಗೆ ನಮ್ಮ ಹತ್ರ ಒಂದಿಷ್ಟು ವಿವರ ಬೇಕು ಅಂತ ಬಂದಿದ್ದಳಲ್ಲ ಸರ್, ಸ್ಮಿತಾ ಅಂತ ಹುಡುಗಿ, ಅವಳು ಮೊನ್ನೆ ಫೋನ್ ಮಾಡಿದ್ದು, ನಿಮ್ಮನ್ನ ಕೇಳಿದ್ಲು, ನಾನು ಹೀಗೆ ನೀವು ರಜೆ ಮೇಲಿದ್ದೀರ, ಎರಡು ದಿನದ ನಂತರ ಬರ್ತೀರ ಅಂದೆ. ಈ ಕಡೆ ಯಾವಾಗಾದ್ರೂ ಬಂದಾಗ ನಿಮ್ಮನ್ನ ಬಂದು ನೋಡ್ತೇನೆ ಅಂದ್ಲು ಸರ್" ಎಂದಳು.

ಕೃಷ್ಣಮೂರ್ತಿಗೆ ತಟ್ಟನೆ ಆ ದಿನ ಬಂದ ಸ್ಮಿತಾನ ನೆನಪಾಗಿ ತುಟಿಯಂಚಿನಲ್ಲಿ ಕಿರುನಗೆ ಮೂಡಿತು.ಹಾಗೆ ಆಗೀಗ ಮೀಡಿಯಾದವರು ಅಥವಾ ಮತ್ತೇನೋ ಅಧ್ಯಯನ ಮಾಡುವವರು ಇವರ ಕೇಂದ್ರಕ್ಕೆ ಬಂದು ಮಾಹಿತಿ ಪಡೆಯುವುದಿತ್ತು. ಹಾಗೆ ಯಾರಾದ್ರೂ ಬಂದಾಗ ಅವರನ್ನು ನಿಭಾಯಿಸುವುದು ಕೃಷ್ಣಮೂರ್ತಿಯವರೇ. ಹೀಗೆ ಅಸಾಮರ್ಥ್ಯವುಳ್ಳ ಮಕ್ಕಳಿಗೆ ಸೂಕ್ತ ಕಲಿಕಾ ವಾತಾವರಣವಿದ್ದಾಗ ಹ್ಯಾಗೆ ಸ್ವಂತ ಕಾಲ ಮೇಲೆ ನಿಂತುಕೊಳ್ಳುತ್ತಾರೆ, ಅವರು ಎದುರಿಸೋ ಸವಾಲುಗಳು, ಅವರೊಂದಿಗೆ ಸದಾ ಇರೋ ನಿಮ್ಮ ಮುಂದಿರೋ ಸವಾಲುಗಳು ಹೀಗೆ ಹತ್ತು

ಹಲವು ಪ್ರಶ್ನೆಗಳನ್ನಿಟ್ಟುಕೊಂಡು ಹುಡುಗಿ ಬಂದಿದ್ದು.ಮೂವತ್ತರ ಆಜೂಬಾಜೂ ಇರುವಂತೆ ಕಾಣುತ್ತಿದ್ದ ಹುಡುಗಿ ಕೇಂದ್ರದಲ್ಲಿದ್ದ ಎಲ್ಲ ಹುಡುಗ, ಹುಡುಗಿಯರನ್ನು ಮಾತನಾಡಿಸಿದಳು. ಕೃಷ್ಣಮೂರ್ತಿಯವರಿಗೆ ಏನೇನೋ ಅಧ್ಯಯನ ಮಾಡುವ, ಎಲ್ಲೆಂದರಲ್ಲಿ ಹೀಗೆ ನಿರ್ಭಯವಾಗಿ ಓಡಾಡುವ, ಆತ್ಮವಿಶ್ವಾಸ ತುಂಬಿತುಳುಕುವ ಹುಡುಗಿಯರೆಂದರೆ ಏನೋ ಒಂಥರ ಅಚ್ಚುಮೆಚ್ಚು. ಹಾಗೆ ಅಂಥವರನ್ನು ನೋಡಿದಾಗೆಲ್ಲ ಮನೆಗೆ ಹೋದಮೇಲೆ ಸುಜಾತನಿಗೆ ಆ ಕಥೆಯನ್ನೆಲ್ಲ ಹೇಳದಿದ್ದರೆ ಸಮಾಧಾನವೇ ಇರಲಿಲ್ಲ. ಹಾಗೆ ಸ್ಮಿತಾ ಮಧ್ಯಾಹ್ನದ ಸುಮಾರಿಗೆ ಬಂದವಳು ಸಂಜೆ ನಾಲ್ಕರವರೆಗೂ ಇದ್ದು ಏನೇನೋ ಪ್ರಶ್ನೆ ಕೇಳಿ ಮಾಹಿತಿ ತಗೊಂಡವಳು ಕೃಷ್ಣಮೂರ್ತಿಯವರೊಂದಿಗೆ ತಾನು ಹೇಗೆ ಹೈದರಾಬಾದ್‌ನಿಂದ



ಇಲ್ಲಿಗೆ ಬಂದೆ, ಚೂರುಪಾರು ಕನ್ನಡ ಹೇಗೆ ಕಲಿತೆ, ಈಗ ಬರೆಯಕ್ಕೆ, ಓದಕ್ಕೆ ಅಲ್ಲದಿದ್ದರೂ ಮಾತಾಡಲು ಚೆನ್ನಾಗಿ ಬರುತ್ತೆ, ಅದರಲ್ಲೂ ಆಟೋದವರ ಜೊತೆ ಏಗುವುದರಲ್ಲಿ ತಾನು ಹೇಗೆ ಎಕ್ಸ್‌ಪರ್ಟ್ ಆಗಿದ್ದೇನೆ ಎಂಬೆಲ್ಲ ತನ್ನ ವೈಯಕ್ತಿಕ ವಿಚಾರವನ್ನೂ ತುಸು ತುಸು ಹೇಳಿಕೊಂಡಳು.

ಅವಳು ಹೊರಡುವ ಮೊದಲು ಟೀ ಕುಡಿಯುತ್ತಿದ್ದಾಗ ಕೃಷ್ಣಮೂರ್ತಿ ಮೊದಲೆಲ್ಲ ಎಲ್ಲಿ ಕೆಲಸ ಮಾಡ್ತಿದ್ದದ್ದು ಎಂದು ವಿಚಾರಿಸಿದಳು. ಅವರು ಒಂದೊಂದೇ ಕೆಲಸದ ಕುರಿತು ಹೇಳುತ್ತಿರುವಂತೆ

"ದೇವ್ರೇ... ಇಷ್ಟೆಲ್ಲ ಕೆಲಸ ಬದಲಿಸ್ತಾ ಇದ್ರಲ್ಲ, ಮನೆಯಲ್ಲಿ ಆಂಟಿ ಜಗಳ ಮಾಡ್ತಿರಲಿಲ್ಲ ತಾನೆ" ಎಂದು ನಕ್ಕಳು.

"ಆಂಟಿ ಇದ್ರೆ ತಾನೆ ಜಗಳಕ್ಕೆ....ಇವರೂ ನಕ್ಕರು.

"ಅರೆ ನೀವು ಮದುವೆಯಾಗಲೇ ಇಲ್ವಾ..."

ಮತ್ತೆ ಅವಳ ಕಣ್ಣಲ್ಲಿ ಅಚ್ಚರಿ. ಬರಿದೇ ತಲೆಯಲ್ಲಾಡಿಸಿದ ಇವರು ಏನಾದ್ರೂ ಹೇಳುವ ಮೊದಲೇ ತುಂಟಕಣ್ಣಿನಿಂದ ಇವರನ್ನೊಮ್ಮೆ ನೋಡಿ

"ಬಟ್ ಯು ಆರ್ ನಾಟ್ ಲುಕಿಂಗ್ ಲೈಕ್ ಎ ಗೇ ಆಲ್ಲೋ" ಎಂದು ಇವರತ್ತ ಬಾಗಿ ಮೆಲ್ಲಗೆ ಹೇಳಿದಳು.ಕೃಷ್ಣಮೂರ್ತಿಗೆ ಆ ಕ್ಷಣಕ್ಕೆ ಅವಳ ತುಂಟಕಣ್ಣುಗಳನ್ನು ನೋಡುತ್ತ, ಅವಳು ಇನ್ನೇನು ತನ್ನ ಕೈ ತಟ್ಟಿಬಿಡುತ್ತಾಳೆ ಎಂಬಂತೆ ತನ್ನತ್ತ ತುಸು ಬಾಗಿ, ಹೇಳಿದ ರೀತಿಗೆ ನಗು ತಡೆಯಲಾಗದೇ ಜೋರಾಗಿ ನಕ್ಕರು.

“ಒಹ್ ನೋ... ನೋ... ನಾಟ್ ಅಟ್ ಆಲ್” ಎನ್ನುತ್ತ ಸುಖವಾಗಿ ಕುರ್ಚಿಗೊರಗಿ, ಹಿತವಾಗಿ ಮತ್ತೆ ನಕ್ಕರು. ಅವಳೂ ನಕ್ಕಳು. ಹೀಗೆ ಮುಕ್ತವಾಗಿ, ಸರಳವಾಗಿ ಮನಸ್ಸಿನಲ್ಲಿದ್ದದ್ದನ್ನು ಹೊರಹಾಕುವ ಹುಡುಗಿ, ಹುಡುಗರನ್ನು ನೋಡಿದಾಗೆಲ್ಲ ಕೃಷ್ಣಮೂರ್ತಿಗೆ ತಮ್ಮ ಕಾಲದಂತೆ ಅಲ್ಲ ಇವರು, ಹಾಗಿರಬೇಕಾದ ಅಗತ್ಯವೂ ಇಲ್ಲ, ಇದು ಇವರ ಯುಗ ಎನ್ನಿಸುತ್ತಿತ್ತು. ತಾನು ಇವರಿಗೆ ತೆರೆದುಕೊಳ್ಳದಿದ್ದರೆ ಕಳೆದುಕೊಳ್ಳುವುದು ತಾನೇ ಎಂಬುದು ಎಂದೋ ಅರಿವಾಗಿತ್ತು. ಕೃಷ್ಣಮೂರ್ತಿ ಇಂಥ ಮನೋಭಾವ ಬೆಳೆಸಿಕೊಂಡಿದ್ದರಿಂದಲೇ ಸ್ಥಿತಾಳೊಂದಿಗೆ ಆ ದಿನ ಮನಸಾರೆ ನಗಲು ಸಾಧ್ಯವಾಗಿದ್ದು,

“ಅಲ್ಲ, ನೀವ್ಯಾಕೆ ಮದುವೆಯಾಗಲಿಲ್ಲ ಸರ್..ಅಂದ್ರೆ ನಂಜೊತೆ ಹೇಳ್ಕೊಬಹುದು ಅನ್ನಿಸಿದರೆ ಹೇಳಿ. ಇಲ್ಲದಿದ್ದರೆ ಬೇಡ” ಒತ್ತಾಯಿಸಲಾರೆ, ಆದರೂ ನೀವು ಹಂಚಿಕೊಂಡರೆ ಸಮಾಧಾನ ಎಂಬ ಧ್ವನಿಯಲ್ಲಿ ಕೇಳಿದ ಅವಳು ಇದೀಗ ತಾನೆ ತುಂಟಕಣ್ಣಿನಿಂದ ನಕ್ಕವಳು ತಾನಲ್ಲ ಎಂಬ ಚಹರೆಯಲ್ಲಿ ಕೂತಿದ್ದಳು.

“ಹೇಳದೇ ಇರೋ ಅಂಥದೇನಿಲ್ಲ... ಅದೆಲ್ಲ ದೊಡ್ಡ ಕತೆ... ಹ್ಹಾ ಹ್ಹಾ” ಎಲ್ಲಿಂದ ಶುರು ಮಾಡಬೇಕು ಅಥವಾ ಅಸಲಿಗೆ ಇದೇ ಈಗ ಪರಿಚಯವಾದ ಈ ಹುಡುಗಿಗೆ ಹೇಳಬೇಕಾ ಎಂಬ ಭಾವ ಸುಳಿದು ಹೋಗುವಾಗ “ಓ... ಹೌದಾ...” ಹೇಳಿ ಕೇಳೋಣ ಎಂಬಂತೆ ಅವಳು ಕಥೆ ಕೇಳುವ ಭಂಗಿಯಲ್ಲಿ ಎರಡೂ ಮೊಣಕೈಯನ್ನು ಟೇಬಲ್ ಮೇಲೆ ಊರಿ ಕಣ್ಣುಗಳಲ್ಲಿ ಕುತೂಹಲ ತುಳುಕಿಸುತ್ತ ಕುಳಿತಳು.



“ನಾನು, ನಮ್ಮಣ್ಣ ಬಹಳ ಚಿಕ್ಕವರಿದ್ದಾಗಲೇ ರಾಮಕೃಷ್ಣ ಆಶ್ರಮಕ್ಕೆ ಹೋಗ್ತಾ ಇದ್ವಿ, ಅವರ ವಿಚಾರಧಾರೆಗಳಿಂದ ತುಂಬಾ ಪ್ರಭಾವಿತರಾಗಿದ್ವಿ, ಬ್ರಹ್ಮಚಾರಿಯಾಗಿರ್ತೇನೆ ಅಂತ ನಿರ್ಧಾರ ಮಾಡಿದ್ದ ನಮ್ಮಣ್ಣ ನನ್ನ ಮನಸ್ಸಲ್ಲೂ ಅದನ್ನೇ ತುಂಬಿದ. ನಮ್ಮದು ದೊಡ್ಡ ಕುಟುಂಬ ಬೇರೆ, ಅಪ್ಪ ಬಹಳ ಬೇಗ ತೀರಿಕೊಂಡಿದ್ರು, ನಾವಿಬ್ರೂ, ಒಬ್ಬ ತಮ್ಮ. ಜೊತೆಗೆ ಒಬ್ಬು ಅಕ್ಕ, ಮೂವರು ತಂಗಿಯಂದಿರಿಗೆ ಮದುವೆ ಬೇರೆ ಮಾಡಬೇಕಿತ್ತು... ಅಪ್ಪನ ಅಣ್ಣ, ತಮ್ಮ ಮೋಸ ಮಾಡಿದ್ರು, ಆಸ್ತಿಯಲ್ಲೂ ಸಮಾ ಪಾಲು ಸಿಗಲಿಲ್ಲ... ಹಿಂಗೇ ಆಗೆಲ್ಲ ಏನೇನೋ ಕುಟುಂಬದ ತಾಪತ್ರಯಗಳು. ಹಣದ ಸಮಸ್ಯೆ ಆಮೇಲೆ ಅಣ್ಣನಿಗೆ ಪುಣೆಯಲ್ಲಿ ಕೆಲಸ ಸಿಕ್ಕು, ಅಕ್ಕ ಮತ್ತು ಒಬ್ಬಳು ತಂಗಿಯ ಮದುವೆ ಆಗಿತ್ತು. ಆಮೇಲೆ ಅದೇನಾಯೋ ಗೊತ್ತಿಲ್ಲ, ನಮ್ಮಣ್ಣ ಗೃಹಸ್ಥಾಶ್ರಮ ಸೇರಿಬಿಟ್ಟ, ಅಲ್ಲೇ ಅವನ ಸ್ನೇಹಿತರೊಬ್ಬರ ತಂಗಿಯನ್ನ ಮದುವೆಯಾದ. ಪಾಪ ಅವನೂ ಅಂಥಾ ದೊಡ್ಡ ಕೆಲಸದಲ್ಲೇನೂ ಇರಲಿಲ್ಲ, ಅವನಿಗೂ ಮದುವೆ, ಮಕ್ಕಳು ಆದ ಮೇಲೆ ನಮಗೆ ದುಡ್ಡಿನ ಸಹಾಯ ಮಾಡೋ ಸ್ಥಿತಿಯಲ್ಲಿ ಇಲ್ಲಿಲ್ಲ. ತಮ್ಮನ ಓದು, ಇನ್ನೂ ಇಬ್ರು ತಂಗಿಯಂದಿರ ಮದುವೆ, ಅವರ ಬಾಣಂತನಗಳು, ಅಷ್ಟರಲ್ಲಿ ಅಮ್ಮಂಗೆ ಕ್ಯಾನ್ಸರ್, ಹೀಗೆ ಒಂದಾದ ಮೇಲೊಂದಕ್ಕೆ

ದುಡ್ಡು ಹೊಂದಿಸೋದೆ ಆಯ್ತು ನಂಗೆ... ಅಮ್ಮ ತೀರ್ಕೊಳೋ ಹೊತ್ತಿಗೆ ನಂಗೆ ನಲವತ್ತೆರಡು... ಮದುವೆ ವಯಸ್ಸು ದಾಟಿರೋ ನನಗೆ ಯಾರೂ ಹೆಣ್ಣು ಕೊಡಲು ಮುಂದಾಗಲೂ ಇಲ್ಲ... ಆಮೇಲೆ ತಮ್ಮನಿಗೆ ಮದುವೆ ಮಾಡಿದೆ... ತಮ್ಮನಿಗೆ, ನನಗೆ ಅಂತಹಾ ಮಹಾ ಭಿನ್ನಾಭಿಪ್ರಾಯಗಳೇನೂ ಈವರೆಗೆ ಬರಲಿಲ್ಲ, ಹೀಗಾಗಿ ತಮ್ಮನ ಸಂಸಾರದ ಜೊತೆಗೆ ಖುಷಿಯಾಗಿಯೇ ಇದೀನಿ..."ಕೃಷ್ಣಮೂರ್ತಿ ನಿಡಿದಾಗಿ ಉಸಿರೆಳೆದುಕೊಂಡಿದ್ದರು.

ಅವಳ ಕಣ್ಣಿನಲ್ಲಿ ಕೇಳಬೇಕಾದ ಪ್ರಶ್ನೆ ಇನ್ನೂ ಇದೆ ಎಂಬ ಭಾವವಿತ್ತು.ನಂತರ ಹೆಚ್ಚು ಮಾತನಾಡದೇ ತನಗೆ ಏನಾದ್ರೂ ಅನುಮಾನಗಳಿದ್ರೆ, ಮತ್ತೇನಾದ್ರೂ ಮಾಹಿತಿ ಬೇಕಾದ್ರೆ ಅವರಿಗೆ ಕೇಳ್ತೇನೆ ಎಂದು ಹೇಳಿಹೋಗಿದ್ದಳು.ಹಾಗಿದ್ದರೆ ಇನ್ನೇನಾದ್ರೂ ಮಾಹಿತಿಗೆ ಕೇಳಲು ಬರುತ್ತಿದ್ದಾಳೇನೋ ಎಂದುಕೊಂಡರು.

ಅಂದು ಕಛೇರಿಯ ಕೆಲಸದಲ್ಲಿ ಮುಳುಗಿದ ಕೃಷ್ಣಮೂರ್ತಿಗೆ ಮತ್ತೆ ಅವಳ ನೆನಪಾಗಿದ್ದು ರೇಖಾ ಮಧ್ಯಾಹ್ನದ ಸುಮಾರಿಗೆ "ಸರ್, ನಿಮಗೆ ಆ ಹುಡುಗಿ ಫೋನ್" ಎಂದು ಕರೆದಾಗಲೇ ನಿಮ್ಮ ತಮ್ಮನ ಹೆಂಡತಿ ತೀರಿಕೊಂಡ ವಿಚಾರ ತಿಳಿಯಿತು, ಸೋ ಸ್ಯಾಡ್" ಎಂಬೆಲ್ಲ ಔಪಚಾರಿಕ ಮಾತುಕತೆ ಮುಗಿಸಿದವಳು ತನ್ನ ಸ್ಟಡಿ ಕೊನೆಯ ಹಂತದಲ್ಲಿದೆ ಎಂದವಳು ಇನ್ನೂ ಹೇಳುವುದು ಇದೆ ಎಂಬಂತೆ ಮಾತು ಮುಂದುವರೆಸ್ತಿದಾಳೆ. ಆ ಕ್ಷಣಕ್ಕೆ ಕೃಷ್ಣಮೂರ್ತಿಗೆ ಬಹಶಃ ಅವಳು ಏನೋ ಹೇಳಬೇಕೆಂದು ಕೊಂಡಿದಾಳೆ ಅನ್ನಿಸಿತು. "ಈ ಕಡೆ ಬಂದ್ರೆ ಬಾಮ್ಮ, ಆರಾಮಾಗಿ ಕೂತು ಮಾತಾಡಬಹುದು" ಎಂದರು.ಅವರು ಹೇಳೋದನ್ನೇ ಕಾಯುತ್ತಿದ್ದವಳಂತೆ "ಸಂಜೆ ಫ್ರೀ ಇದೀರ ಅಂಕಲ್, ನೀವು ಸ್ವಲ್ಪ ಬಿಡುವಾಗಿದ್ದರೆ ಬರ್ತೀನಿ" ಎಂದಳು. ಸರ್ ಹೋಗಿ ಅಂಕಲ್ ಎಂದಿದ್ದು ಸಹಜವಾಗಿ ಮಾತ್ರವಲ್ಲ, ತಾನು ವೈಯಕ್ತಿಕ ವಿಚಾರ ಮಾತಾಡಲಿಕ್ಕೆ ಬರ್ರಿದ್ದೇನೆ ಎಂಬುದನ್ನು ಸೂಚಿಸುವಂತೆಯೂ ಇತ್ತು. ಹೇಳಿದಂತೆ ನಾಲ್ಕು ಗಂಟೆಗೆ ಹಾಜರಾದಳು.

ಟೀ ಜೊತೆ ಅದೂ ಇದೂ ಲೋಕಾಭಿರಾಮ ಹರಟೆಯ ನಂತರ ಅವಳ ತಂದೆತಾಯಿ ಬಗ್ಗೆ ತಾನು ಏನೂ ಕೇಳಲೇ ಇಲ್ಲವಲ್ಲ ಎಂದುಕೊಂಡು ವಿಚಾರಿಸಿದರು.

“ಅಪ್ಪ ಒಂದು ಟ್ರೈನ್ ಆಕ್ಸಿಡೆಂಟ್‌ನಲ್ಲಿ ತೀರ್ಕೊಂಡು ಬಹಳ ವರ್ಷವಾಯ್ತು. ನಾನು ಹೈಸ್ಕೂಲ್‌ಲ್ಲಿದ್ದೆ, ತಮ್ಮ ಏಳನೇ ಕ್ಲಾಸ್‌ನಲ್ಲಿದ್ದ. ಅಮ್ಮ ಟೀಚರ್ ಕೆಲಸ ಮಾಡ್ತಾ ಓದಿಸಿದ್ದು. ತುಂಬಾ ಕಷ್ಟಪಟ್ಟಳು. ಅಪ್ಪನ ಸಾವಿನ ಪರಿಹಾರನೂ ಸರಿಯಾಗಿ ಸಿಗಲಿಲ್ಲ. ತಮ್ಮ ಈಗ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಆಸ್ಟ್ರೇಲಿಯಾಗೆ ಹೋಗಿದ್ದಾನೆ. ಅಮ್ಮಂಗೆ ಡಯಾಬಿಟಿಸ್ , ಜೊತೆಗೆ ವರ್ಷದ ಹಿಂದೆ ಪೆರಾಲಿಸಿಸ್ ಸ್ಟ್ರೋಕ್ ಆಗಿ ಎಡಗಡೆ ಸ್ವಾಧೀನವೇ ಇಲ್ಲ . ಗಾಲಿ ಖುರ್ಚಿ ಮೇಲೆ ಕೂತ್ಕಂಡು ಮನೆಯಲ್ಲಿ ಚೂರು ಓಡಾಡ್ತಾಳೆ. ಅಮ್ಮ ನನ್ನನ್ನ ತುಂಬಾ ಹಚ್ಚಿಕೊಂಡಿದಾಳೆ. ಪೆರಾಲಿಸಿಸ್ ಆದಮೇಲೆ ನನ್ನ ಜೊತೆಗೇ ಇರಕ್ಕೆ ಅಂತ ಕಸರ್ಕೊಂಡುಬಂದೆ.” ಎಂದಳು. ಅವಳಿಗೆ ಹೇಳಬೇಕಿರುವುದನ್ನೆಲ್ಲ ಹೇಳಿಬಿಡಲಿ ಎಂದುಕೊಂಡು ಹೌದಾ, ಐಸೀ ಎನ್ನುತ್ತ ಕೃಷ್ಣಮೂರ್ತಿ ಸುಮ್ಮನೆ ಕೂತರು.ರೇಖಾಗೆ ಸ್ವಲ್ಪ  ಹೊತ್ತು ಯಾರನ್ನೂ ಒಳಗೆ ಕಳಿಸಬೇಡ ಎಂಬ ಸೂಚನೆಯನ್ನು ಮೊದಲೇ ಕೊಟ್ಟಾಗಿತ್ತು. ಮೊನ್ನೆ ಮೊನ್ನೆ ಆದ ಈ ಪರಿಚಯದಲ್ಲಿ ಸ್ವಲ್ಪ ಅಪರಿಚಿತತೆಯ ಮಧ್ಯೆ ಮಾತ್ರ ಸಾಧ್ಯವಾಗುವ ಹೀಗೆ ತಟಕ್ಕನೆ ಏನಾದ್ರೂ ಕೇಳಿದ್ರೆ ತಪ್ಪು ತಿಳ್ಕೊಂಡ್ರೆ ಎಂಬ ಹಂಗಿಲ್ಲದೇ ಮಾತಾಡುವುದು ಸಾಧ್ಯವಾಗುತ್ತೇನೋ ಎಂದು ಕೃಷ್ಣಮೂರ್ತಿ ಯೋಚಿಸುತ್ತಿರುವಾಗ ಸ್ಮಿತಾನ ಮಾತು ತೂರಿಬಂತು.

“ಅಂಕಲ್, ನಿಜಾ ಹೇಳಿ... ನಿಮಗೆ ಯಾರನ್ನೂ ಮದುವೆಯಾಗಬೇಕು ಅಂತ್ಲೇ ಅನ್ನಿಸಲಿಲ್ಲವಾ... ಅಂದರೆ ಬರೀ ಲೈಂಗಿಕ ಬಯಕೆ ಅಂತ್ಲೂ ನಾನು ಹೇಳ್ತಿಲ್ಲ ಅಥವಾ ಸೆಕ್ಸ್ ಅನ್ನು ಹೊರತುಪಡಿಸಿ ಅಂತ್ಲೂ ಹೇಳ್ತಿಲ್ಲ... ಅಂದ್ರೆ ಒಂದು ಜೀವಸ್ಪರ್ಶ ಬೇಕು ಅಂತ ಒಳಗೇ ತಹತಹ ಇರುತ್ತಲ್ಲ... ಬ್ರಹ್ಮಚರವನ್ನ ನಿಮ್ಮ ತಲೇಲಿ ತುಂಬಿದ ನಿಮ್ಮಣ್ಣನೇ ಮದುವೆಯಾದ, ಮನೇಲಿ ಎಲ್ಲದ್ದೂ ಮದುವೆಯಾಯ್ತು, ನಿಮಗೆ ಯಾವತ್ತೂ ಬಯಕೆ ಕಾಡ್ಲೆ ಇಲ್ಲವಾ ಅಂಕಲ್...” ಸ್ಮಿತಾ ಕೂತು ಕೇಳಿದ ರೀತಿ ತಟ್ಟನೆ ಸುಜಾತಾ ಕೇಳುತ್ತಿದ್ದ ರೀತಿಯನ್ನು ನೆನಪಿಸಿತು.

“ಅಣ್ಣ ಮದುವೆಯಾದನಲ್ಲ, ನಂಗೆ ಆಗ ಬಹಳ ಕೋಪ ಬಂದಿತ್ತು, ಒಳಗೊಳಗೇ ಅವನ ಮೇಲೆ ಒಂಥರಾ ಕ್ರೋಧ, ದ್ವೇಷ ಅಥವಾ ಒಂಥರಾ ಮಾತ್ಸರ್ಯ ಅಂದ್ಕೋ, ಆದರೆ ಎಲ್ಲ ನನ್ನ ಕೊರಳಿಗೆ ಬಿದ್ದಿತ್ತು, ಮದುವೆಯಾಗದೇ ಇರಲು ನಿರ್ಧಾರ ಮಾಡಿದ್ದಕ್ಕೆ ಇನ್ನೊಂದು ಕಾರಣವೂ ಇತ್ತು.ನಾವು ಏಳು ಜನ ಮಕ್ಕಳು. ಆಗಿನ ಕಾಲದ ಯಾವುದೋ ಒಂದು ಆಫೀಸಿನಲ್ಲಿ ಸಣ್ಣದೊಂದು ಕಾರಕೂನಿಕೆ ಕೆಲಸ ನಮ್ಮಪ್ಪಂಗೆ, ಮೂರು ಹೊತ್ತು ಊಟಕ್ಕೆ ತತ್ವಾರ.. ಅಂಥಾದ್ರಲ್ಲಿ ಇಷ್ಟು ಮಕ್ಕಳು ಬೇರೆ, ಅದು ನಮ್ಮಂಥವರಿಗೆ ಒಂಥರದ ಕೆಟ್ಟ ಕಾಲ ಅಂಸ್ಕೋ, ತಮಗಿಂತ ಚಿಕ್ಕ ವಯಸ್ಸಿನ ಹೆಂಗಸರಿನ್ನ ಮದುವೆಯಾಗೋದು, ಹೀಗೆ ಒಂದು ಹತ್ತು ಮಕ್ಕಳನ್ನ ಹುಟ್ಟಿಸೋದು, ಅಷ್ಟರಲ್ಲಿ ಅವರಿಗೆ ಒಂದು ಐವತ್ತೊ ಅರವತ್ತೋ ವರ್ಷವಾಗಿತ್ತಲ್ಲ, ಈ ಅಪ್ಪಂದಿರು ಸತ್ತು ಹೋಗೋರು, ಈ ವಿಧವೆ ತಾಯಿ, ಅಷ್ಟೆಲ್ಲ ಮಕ್ಕಳು, ಜೊತೆಗೆ ಆ ಇಲ್ಲದ ಮಡಿಹುಡಿ ಸಂಪ್ರದಾಯಗಳು ಬೇರೆ,

ನಮ್ಮ ಮನೆಯಲ್ಲಷ್ಟೇ ಇಂಥ ಸಮಸ್ಯೆ ಇದ್ದದ್ದು ಅಲ್ಲ, ಎಲ್ಲೋ ಅಲ್ಲೊಂದು ಇಲ್ಲೊಂದು ಒಳ್ಳೆ ಅನುಕೂಲಸ್ಥರನ್ನು ಬಿಟ್ಟರೆ ಇನ್ನು ಹೆಚ್ಚಿನಂಶ ನಮ್ಮಂಥ ಬದುಕು ಮೂರಾಬಟ್ಟೆಯಾಗಿರೋ ಕುಟುಂಬಗಳೇ ಹೆಚ್ಚು, ಇದನ್ನೆಲ್ಲ ನೋಡಿ, ಈ ಮದುವೆ, ಮಕ್ಕಳನ್ನು ಹುಟ್ಟಿಸೋದು ಎಲ್ಲ ಒಂಥರಾ ರೇಜಿಗೆ ಹುಟ್ಟಿಸಿತ್ತು. ನಮ್ಮೆಲ್ಲರಲ್ಲಿ ನಮ್ಮಣ್ಣ ಓದಲಿಕ್ಕೆ ಬಹಳ ಎಂದರೆ ಬಹಳ ಮುಂದಿದ್ದ, ಅಂಥವನು ಲೋವರ್ ಸೆಕೆಂಡರಿಯಲ್ಲಿ ಆ ವಲಯಕ್ಕೆ ಮೊದಲಿಗನಾಗಿದ್ದರೂ ಅಪ್ಪ ಸತ್ತೋದ ಅಂತ ಯಾವುದೋ ಸಣ್ಣ ಕೆಲಸಕ್ಕೆ ಸೇರಿಕೊಳ್ಳಬೇಕಾಯ್ತು. ಆಮೇಲೆ ನಾನೂ ಕೂಡ ಬಿಎ ಪೂರ್ಣ ಮುಗಿಸದೇ ಕೆಲಸಕ್ಕೆ ಸೇರಿಕೊಂಡೆ, ಯಾಕಂದ್ರೆ ಅಕ್ಕನ ಮದುವೆಗೆ ಸಾಲ ತೀರಿಸಬೇಕಿತ್ತು.ಅಕ್ಕನ ಮದುವೆಯ ಸಾಲ ಇನ್ನೂ ತೀರಿಲಿಲ್ಲ, ಅಷ್ಟರಲ್ಲಿ ಅವಳ ಬಸಿರು, ಬಾಣಂತನ, ಈ ಜನಕ್ಕೆ ಮದುವೆಯಾಗೋದು, ಮಕ್ಕಳನ್ನ ಹುಟ್ಟಿಸೋದು ಬಿಟ್ಟು ಬೇರೆ ಕೆಲಸವೇ ಇಲ್ಲವೇ ಅನ್ನಿಸಿಬಿಡೋದು. ಅವಳ ಒಂದು ಬಾಣಂತನ ಮುಗಿಯುತ್ತಿದ್ದಂತೆ ತಂಗಿಯ ಮದುವೆ ಮಾಡಿದ್ವಿ, ಮತ್ತೆ ಅವಳ ಬಸಿರು ಬಾಣಂತನ, ಅಷ್ಟರಲ್ಲಿ ಮತ್ತೆ ಅಕ್ಕ ಎರಡನೆಯದಕ್ಕೆ ಸಿದ್ಧ... ನನಗಿಂತ ಅಣ್ಣನಿಗೆ ಬಹಳ ರೇಜಿಗೆ ಹುಟ್ಟಿತ್ತು ಕಾಣುತ್ತೆ, ಕೆಲವು ಸಲ ಅಮ್ಮನಿಗೆ ಕೇಳೋ ಹಾಗೆ “ಇವರ ಚಟಕ್ಕೆ ನಮ್ಮನ್ನೆಲ್ಲ ಹುಟ್ಟಿಸಿ, ಈಗ ಗೋಳು ಹೊಯ್ಕೋತಾರೆ... ಇಷ್ಟೆಲ್ಲ ಮಕ್ಕಳನ್ನ ಯಾಕೆ ಮಾಡಿಕೊಬೇಕಿತ್ತು...”ಅಂತೆಲ್ಲ ಗೊಣಗೋನು. ಪಾಪ ನಮ್ಮಮ್ಮನದೇನು ತಪ್ಪು.. ಅವಳೂ ಆ ಒಟ್ಟಾರೆ ವ್ಯವಸ್ಥೆಯಲ್ಲಿ ಬಲಿಗಂಬಕ್ಕೆ ಕಟ್ಟಿದ ಕುರಿ ತರಾ ತಾನೆ. ಇವನು ಹೀಗೆಲ್ಲ ಗೊಣಗಾಡಬೇಕಿದ್ರೆ ಅಮ್ಮ ಅಡುಗೆ ಮನೆ ಬಿಟ್ಟು ಈಚೆ ಬರಿರಲಿಲ್ಲ.. ಹೆತ್ತ ಮಕ್ಕಳಿಂದ ಹೀಗೆ ಅನ್ನಿಸಿಕೊಳ್ಳೋ ಸಂಕಟ ಹೇಗಿದ್ದಿರಬಹುದು ಅಂತ ಈಗ ನೆನಪಾದ್ರೆ ಯಾಕೋ ಈ ಹೊತ್ತಿಗೂ ಕರಳು ರುಮ್ ಅನ್ನುತ್ತೆ.ಆಮೇಲೆ ಇಲ್ಲಿಗಿಂತ ಸ್ವಲ್ಪ ಒಳ್ಳೆ ಕೆಲಸ ಸಿಕ್ಕಿದ್ದೇ ಪುಣೆಗೆ ಹೊರಟು ಹೋದ. ಆದರೇನು ಮಾಡೋದು. ಅವನೂ ಮದುವೆಯಾಗಿಬಿಟ್ಟ... ಆದರೆ ಇವರ ಹಾಗೆ ಮಾಡಿಕೊಳ್ಳಲಿಲ್ಲ, ಹೊರಗೆ ಹೋಗಿದ್ದನಲ್ಲ, ಪ್ಲಾನಿಂಗ್‌ನಿಂಗ್ ಬಗ್ಗೆ ತಿಳ್ಕೊಂಡಿದ್ದ ಕಾಣುತ್ತೆ, ಮದುವೆಯಾಗಿ ಮೂರು ವರ್ಷ ಮಕ್ಕಳು ಮಾಡಿಕೊಳ್ಳಲಿಲ್ಲ, ಆಮೇಲೆ ಒಂದು ಮಗಳಾಗ್ತಿದ್ದಂತೆ ಆಪರೇಶನ್ ಮಾಡಿಸಿಕೊಂಡ. ಇಲ್ಲೇ ಇದ್ದ ನನಗೆ ಜವಾಬ್ದಾರಿ ಅನ್ನೋದು ಕೊರಳಿಗೆ ಉರುಳಾಗಿಬಿಟ್ಟಿತ್ತು... ಹೋಗ್ಲಿ... ತಂಗಿಯಂದಿರಾದ್ರೂ ಸ್ವಲ್ಪ ಅರ್ಥ ಮಾಡ್ಕೊತಾರ ಅಂದ್ರೆ ಅವರಿಗೆ ಅವರ ಗಂಡಂದಿರ ಮನೆಗಳಲ್ಲಿ ಏನೋ ಗೋಳಾಟ, ಅವಳಿಗೆ ಅದು ಕೊಟ್ರೆ ನಂಗೆ ಕೊಡ್ಲಿಲ್ಲ ಅಂತ ಯಾವುದೋ ಬೆಳ್ಳಿಯ, ಬಂಗಾರದ ವಸ್ತುವಿಗೆ ಅವರವರಲ್ಲೇ ಕಿತ್ತಾಟ... ಅಮ್ಮ ತೀರಿಕೊಂಡ ಮೇಲೆ ಸ್ವಲ್ಪ ಇವರುಗಳ ಕಾಟವೆಲ್ಲ ತಪ್ಪಿ, ನಾನು ತಮ್ಮ ಇಬ್ರೇ ಸ್ವಲ್ಪ ನೆಮ್ಮದಿಯಿಂದ ಇರೋ ಹಾಗೆ ಆಗಿದ್ದು... ಆ ಎಲ್ಲದರ ಮಧ್ಯೆ ಎಲ್ಲಿಯ ಬಯಕೆ... ಆ ಕಾಲದಲ್ಲಿ ಬಹಳ ಮನೆಗಳಲ್ಲಿ ಹೀಗೇ. ಎಷ್ಟೋ ಹೆಣ್ಣುಮಕ್ಕಳಿಗೆ ಬಾಲ್ಯದಲ್ಲೇ ಮದುವೆ ಮಾಡಿ, ಹನ್ನೆರಡು ಹದಿಮೂರು ವರ್ಷಕ್ಕೆ ಗಂಡನನ್ನು ಕಳೆದುಕೊಂಡು ಬಾಲವಿಧವೆಯರೂ ಆಗಿ, ಜೀವಮಾನದಲ್ಲಿ ಒಮ್ಮೆಯೂ ಗಂಡಸನ್ನು ಮುಟ್ಟದೇ ಇರೋ ವಿಧವೆಯರೂ ಸಾಕಷ್ಟು ಇದ್ರು, ಹಂಗೇ ಅಲ್ಲೊಂದು ಇಲ್ಲೊಂದು ಕುಟುಂಬದಲ್ಲಿ ಅಪ್ಪ ಸತ್ತ ಮೇಲೆ ಹಿರಿ ಮಗ ಸಂಸಾರದ

ಭಾರವನ್ನೆಲ್ಲ ಹೊತ್ತುಕೊಂಡು, ಕೆಲವು ಸಲ ಮದುವೆಯಾಗದೇ, ಕೆಲವು ಸಲ ಯಾವುದೋ ಒಂದು ಒಟ್ಟಿನಲ್ಲಿ ಹೆಣ್ಣು ಎಂಬುವಳನ್ನು ಮದುವೆಯಾಗಿದ್ದದ್ದು ಸಾಮಾನ್ಯವಾಗಿತ್ತು. ಥತ್... ಯಾಕೋ ಕೆಲವು ಸಲ ಈ ಜೀವವಿರೋಧಿ ಸಂಪ್ರದಾಯಗಳು, ಕಟ್ಟಳೆಗಳು ಎಲ್ಲ ನೆನಪಾದ್ರೆ ಇನ್ನಿಲ್ಲದ ಸಂಕಟ ಸುತ್ತಿಕೊಳ್ಳುತ್ತೆ... ಕೃಷ್ಣಮೂರ್ತಿ ನಿಧಾನವಾಗಿ ಹೇಳಿದರು.

ಸ್ಮಿತಾ ಮಾತಾಡಲಿಲ್ಲ. ಮೊನ್ನೆ ಮೊನ್ನೆ ಪರಿಚಯವಾದ ಈ ಹುಡುಗಿಯೆದುರು ತನಗೆ ಎಷ್ಟೋ ವರ್ಷಗಳ ಹಿಂದಿನ ಸಂಕಟವನ್ನೆಲ್ಲ ಹೇಳಿಕೊಳ್ಳಲು ಸಾಧ್ಯವಾಗುತ್ತಿದೆ... ಈವರೆಗೆ ಆಗೀಗ ತಮ್ಮನೊಂದಿಗೆ, ಸುಜಾತಾಳೊಂದಿಗೆ ಬಿಟ್ಟರೆ ಮತ್ತಾರಲ್ಲೂ ಈ ನೋವಿನ ಹುತ್ತ ಕೆದಕಿದ್ದೇ ಇಲ್ಲ... ಕೃಷ್ಣಮೂರ್ತಿಗೆ ಅರೆಕ್ಷಣ ಅರೆ ತಾನು ನಿಜಕ್ಕೂ ಇಷ್ಟೆಲ್ಲ ಮಾತನಾಡಿದೆನೇ ಎಂದೂ ಅನ್ನಿಸಿತು. ಕೆಲವು ಸಲ ವ್ಯಾವಹಾರಿಕ ಪರಿಚಿತ ಸಂಬಂಧಗಳಿಲ್ಲದೇ, ಹೀಗೆ ಸುಮ್ಮನೆ ಪರಿಚಯವಾದ ನಿಷ್ಕಾರಣ ಸಂಬಂಧವೊಂದು ಇಂಥ ಮಾತುಕತೆಯಲ್ಲಿ ಹೇಳುವುದನ್ನು ಸುಮ್ಮನೆ ಆಲಿಸಲು ಸಾಧ್ಯಮಾಡುತ್ತದೆಯೇನೋ ಎಂಬ ಸಾಧ್ಯತೆಯ ಎಳೆಯೊಂದು ಮನಸ್ಸಿನಲ್ಲಿ ಹಾದು ಹೋಗುತ್ತಿರುವಾಗಲೇ ಈ ಹುಡುಗಿ ಹೇಳಿಕೊಳ್ಳಲು ಬಂದಿದ್ದು ತನ್ನ ವಿಚಾರವನ್ನು... ತಾನೇ ಮಾತಾಡ್ತಿದ್ದೇನೆ ಅನ್ನಿಸಿದ್ದೆ “ಅದ್ದರಿ... ನೀನು ಹೀಗೆ ಹೊರಗೆ ಕೆಲಸಕ್ಕೆ ಬಂದಾಗ ಅಮ್ಮ ಒಬ್ರೇ ಇರ್ತಾರ..."ಎಂದು ಶುರು ಮಾಡಿದರು.

“ಹೂಂ... ಎಲ್ಲ ಟೇಬಲ್ ಮೇಲೆ ಇರುತ್ತೆ, ನಿಧಾನಕ್ಕೆ ಗಾಲಿಕುರ್ಚಿಯಲ್ಲಿ ಹೋಗಿ ಊಟ ಮಾಡಿ ಮಲ್ಕೋತಾಳೆ, ಟಿವಿ ನೋಡ್ತಾಳೆ, ಬಲಗೈ ಚೆನ್ನಾಗಿದೆಯಲ್ಲ, ಹಿಂಗಾಗಿ ಈಗೂ ನಮ್ಮ ರಸ್ತೆಯ ಏಳೆಂಟು ಮಕ್ಕಳಿಗೆ ಸಂಜೆ ನಾಲ್ಕರ ಮೇಲೆ ಗಾಲಿ ಕುರ್ಚಿ ಮೇಲೆ ಕೂತ್ಕಂಡೇ ಪಾಠ ಹೇಳಿಕೊಡ್ತಾಳೆ, ತುಂಬಾ ಚೆನ್ನಾಗಿ ಹೇಳಿಕೊಡ್ತಾಳೆ... ಹುಡುಗ್ರು ಮನೇಗೇ ಬರ್ತಾರೆ. ನೀವು ನಾಲ್ಕರಿಂದ ಏಳು ಗಂಟೆವರೆಗೆ ನೋಡಬೇಕು ಅವಳನ್ನ... ಏನು ಉತ್ಸಾಹದಿಂದ ಪಾಠ ಮಾಡ್ತಾಳೆ ಗೊತ್ತಾ.... ಗಣಿತ, ಇಂಗ್ಲಿಷ್, ಹಿಂದಿ ಹೇಳಿಕೊಡ್ತಾಳೆ. ಹಾಡು ಹೇಳಿಕೊಡ್ತಾ, ಬಲಗೈಯಿಂದಲೇ ಕೂತಲ್ಲೇ ಡಾನ್ಸ್ ಕೂಡ ಹೇಳಿಕೊಡ್ತಾಳೆ. ನಾಲ್ಕರಿಂದ ರಾತ್ರಿವರೆಗೆ ನಮ್ಮ ಮನೆಯಲ್ಲಿ ಎಂಥಾ ಸಂಭ್ರಮ, ನಗು ತುಂಬಿರುತ್ತೆ ಗೊತ್ತಾ, ಅಪ್ಪ ತೀರಿಕೊಂಡ ಆರಂಭದ ದಿನಗಳಲ್ಲಿ ಅಮ್ಮ ಒಬ್ಬಳೇ ಹ್ಯಾಗೆ ಎಲ್ಲ ನಿಭಾಯಿಸಿದ್ಯೋ ಅಂತ ಈಗೂ ನಂಗೆ ಆಶ್ಚರ್ಯ ಆಗುತ್ತೆ... ಆದರೆ ಪಾಪ ಅವಳೇನೂ ಸೂಪರ್‌ವುಮನ್ ಅಲ್ಲ ನೋಡಿ, ಆಗೀಗ ಇದ್ದಕ್ಕಿದ್ದ ಹಾಗೆ ಖಿನ್ನತೆಗೆ ಜಾರಾಳೆ, ನಾನು ಅವಳನ್ನ ಅವಳ ಪಾಡಿಗೆ ಬಿಡ್ತೀನಿ, ಆಗೀಗ ತುಂಬಾ ಜಾಸ್ತಿ ಅನ್ನಿಸಿದರೆ ಮಾತ್ರೆ ತಗೋತಾಳೆ, ಮತ್ತೆ ತಾನೇ ಚೇತರಿಸ್ಕೋತಾಳೆ. ಅವಳೊಂತರಾ ಗಿಡದ ಹಾಗೆ... ಎಲ್ಲೋ ಚೂರು ನೀರು ಸಿಕ್ಕರೂ ಸಾಕು, ತನ್ನ ಬೇರನ್ನು ತಾನೇ ಚಿಗುರಿಸ್ಕೊಂಡು ಹಸಿರಾಗ್ತಾಳೆ...”

ಸ್ಮಿತಾ ಎಲ್ಲ ವಿವರಿಸುವಾಗಲೋ ಸಮಸ್ಯೆ ಬೇರೇನೋ ಇದೆ ಎಂಬಂತೆ ಮುಖಭಾವವಿದೆ.ಕೃಷ್ಣಮೂರ್ತಿ ಸುಮ್ಮನೆ ಹೂಂಗುಡುತ್ತ ಕುಳಿತರು.

“ತಮ್ಮನಿಗೆ ನೀನು ಕರ್ಕೊಂಡು ಹೋಗು ಅಂತ ಹೇಳಕ್ಕೆ ಆಗಲ್ಲ, ಅಮ್ಮಂಗೂ ಎಲ್ಲಿ ನಾನು ಅವಳನ್ನು ಕಳಿಸಿಬಿಡ್ತೀನಾ ಅಂತ ಭಯವಿದ್ದ ಹಾಗಿದೆ.ಈಗ ಅವಳಿಗೆ ಸ್ನಾನ



ಮಾಡ್ಲಿ, ಬಟ್ಟೆ ಬದಲಿಸಲಿಕ್ಕೆ ನಾನು ಬೇಕೇ ಬೇಕು.ಅಮ್ಮಂಗೂ ಒಂತರಾ ತಾನು ನಂಗೆ ಉರುಳಾಗ್ತಿದೀನಿ ಅನ್ನಿಸ್ತಿದೆ ಕಾಣುತ್ತೆ, ಕೆಲವು ಸಲ ತುಂಬಾ ಬೇಜಾರು ಮಾಡ್ಕೊತಾಳೆ. ಕಳೆದ ವರ್ಷ ನಾನು ರವಿ ಮದುವೆಯಾಗೋದು ಇನ್ನೇನು ನಿರ್ಧಾರ ಆಗಬೇಕಿತ್ತು, ಅಷ್ಟರಲ್ಲಿ ಅಮ್ಮನಿಗೆ ಪೆರಾಲಿಸ್ ಸ್ಟ್ರೋಕ್, ಅವನಿಗೆ ಸಿಂಗಾಪುರದ ಕೆಲಸದ ಆಫರ್ ಬಂತು, ನಾನು ಅಮ್ಮನನ್ನು ಕರ್ಕೊಂಡು ಬಂದೆ, ಅವನು ಅಲ್ಲಿಗೆ ಹೋದ...” ನೀವು ಮದುವೆಯಾದ್ರೂ ಅಮ್ಮನನ್ನು ಜೊತೆಗೆ ಇಟ್ಟುಕೋಬಹುದಲ್ಲ, ನೀವು ಅಲ್ಲಿಯೇ ಏನಾದ್ರೂ ಕೆಲಸ ಹುಡುಕ್ಕೋಬಹುದಲ್ಲ ಇತ್ಯಾದಿ ಆಯ್ಕೆಗಳು ಕೃಷ್ಣಮೂರ್ತಿಯ ಬಾಯಿತುದಿಯಲ್ಲಿದ್ದವು. ಯಾವ ಆಯ್ಕೆಯೂ ಯಾಕೋ ಸರಿಹೋಗಿಲ್ಲವೇನೋ ಎಂದುಕೊಂಡು ಸುಮ್ಮನಾದರು.

“ಮದುವೆಯಾಗೋಣ ಅಂತ ನಾನು, ರವಿ ಹ್ಯಾಗೂ ನಿರ್ಧಾರ ಮಾಡಿದ್ದೆವಲ್ಲ.. ಆಗೀಗ ಒಟ್ಟಾಗೂ ಇರ್ತಿದ್ವಿ, ಅಂಕಲ್ ತಪ್ಪು ತಿಳೀಬೇಡಿ, ಇದೆಲ್ಲ ಈಗ ಕಾಮನ್. ಎಷ್ಟೋ ರಾತ್ರಿ ಅವನು ನಮ್ಮನೆಗೆ ಬಂದು ಉಳಿಯೋನು. ಒಂದೆರಡು ಸಲ ಔಟಿಂಗ್ ಹೋಗಿದ್ವಿ. ಪ್ರಾಯಶಃ ಅಮ್ಮಂಗೆ ಪೆರಾಲಿಸಿಸ್ ಆಗಿರದಿದ್ದರೆ ನಾನು ಅಲ್ಲಿಗೆ ಹೋಗ್ತಿದೆನೋ ಏನೋ, ಆದರೆ ಈಗ ಅಮ್ಮನನ್ನೂ ಕರ್ಕೊಂಡು ಪರದೇಶದಲ್ಲಿ ಕೆಲಸವೂ ಇಲ್ದೇ ಇರೋದು ನಂಗ್ಯಾಕೋ ಬೇಡ ಅನ್ನಿಸಿತು, ಕೆಲಸ ಸಿಗೋವರೆಗೆ ಒಬ್ರ ದುಡ್ಡಿನಲ್ಲೇ ಮೂರು ಜನ ಬದುಕೋದು, ಅವನೇನೋ ಹೇಳಿದ ನಿಮ್ಮಮ್ಮ ನಂಗೂ ಅಮ್ಮ ಇದ್ದ ಹಾಗೆ ತಾನೆ, ಈಗ ಬಂದುಬಿಡಿ ಎರಡು ವರ್ಷ ತಾನೆ ಈ ಕಾಂಟ್ರಾಕ್ಟ್, ಆಮೇಲೆ ವಾಪಸು ಹೋಗೋಣ ಅಂತೆಲ್ಲ. ಆದ್ರೆ ಯಾಕೋ ಗೊತ್ತಿಲ್ಲ ಅಂಕಲ್, ಎಷ್ಟೆಲ್ಲ ಪಾಡು ಪಟ್ಟು ನಮ್ಮಮ್ಮ ನಮ್ಮನ್ನ ಓದಿಸಿದ್ದಾಳೆ, ಅವಳು ಇನ್ನು ಮುಂದೆ ನನ್ನ ಹೊರತು ಬೇರೆಯವರ ಜೊತೆಗೆ ಹಂಗು ಎಂಬ ಭಾವದಲ್ಲಿ ಬದುಕೋದು ಬೇಡ ಅನ್ನಿಸ್ತು, ಎರಡು ವರ್ಷ ಕಾಯ್ತಿನಿ, ನೀನು ವಾಪಸು ಬಂದ ಮೇಲೆ ಮದುವೆಯಾಗೋಣ ಅಂತೇಳಿ ಕಳಿಸಿದೆ. ಈಗ ಯಾಕೋ ಕೆಲವು ಸಲ ತಪ್ಪು ಮಾಡಿದೆನಾ ಅಂತ್ಲೂ ಅನ್ನಿಸುತ್ತೆ... ರವಿಯೂ ಹೆಚ್ಚು ಫೋನ್ ಮಾಡ್ತಿಲ್ಲ, ಇ-ಮೇಲ್ ಕೂಡ ಕಡಿಮೆಯಾಗಿದೆ, ಕೆಲಸದ ಒತ್ತಡ ಅಂತ ಸಮಧಾನಿಸಿಕೊಂಡೂ ಎಲ್ಲೋ ದೂರ ಸರೀತಿದ್ದಾನಾ ಅನ್ನಿಸಲು ಶುರುವಾಗುತ್ತೆ... ವಾರದ ಹಿಂದೆ ಫೋನ್ ಮಾಡಿದಾಗ ಅದೂ ಇದೂ ಮಾತಾಡ್ತಾ ಸ್ಥಿತಿ, ಅಲ್ಲೇ ಯಾರಾದ್ರೂ ಒಳ್ಳೇವು, ನಿನ್ನ ಮನಸ್ಸಿಗೆ ಒಪ್ಪಿಗೆಯಾಗೋವು ಇದ್ರೆ ಮದುವೆಯಾಗಿಬಿಡೇ ಅಂತ, ತಮಾಶೆಗೆ ಹೇಳಿದನೋ ಏನೋ ಗೊತ್ತಿಲ್ಲ, ನಾನು ಮಾತ್ರ ಬೆವೆತು ಹೋದೆ, ನಿಂಗೆ ಹಾಗೆ ಆಗಲಿಕ್ಕೆ ಸಾಧ್ಯವಾಗುತ್ತಾ ಕೇಳಿದೆ, ಗೊತ್ತಿಲ್ಲ, ಮುಂದೆ

ಹ್ಯಾಗೆ ಹೇಳೋದು ಅಂತ ಅವನೆಂದ... ನಾನು ಒಂದೇ ಮಾತು ಹೇಳಿದೆ, ನೋಡು, ನಂಗೆ ನಿನ್ನ ಜೊತೆ ಸಂಬಂಧ ಅಂದರೆ ಮನಸ್ಸಿನ ಜೊತೆಗೆ ದೇಹದ ಕೋಶಕೋಶವನ್ನೂ ಒಳಗೊಂಡಿರೋ ಸಂಬಂಧ, ಬೇರೆ ಒಂದು ದೇಹ, ಮನಸ್ಸಿನ ಜೊತೆಗೆ ಇಂಥದೊಂದು ಸಂಬಂಧ ಸಾಧ್ಯವಾಗುತ್ತೆ ಅನ್ನಿಸಲ್ಲ, ನಿಂಗೆ ಸಾಧ್ಯವಾದ್ರೆ ಮಾಡಿಕೋ, ನಾನು ಸದ್ಯಕ್ಕಂತೂ ಕಾಯ್ತಿನಿ ಅಂದೆ. ಅಮ್ಮಂಗೆ ಇನ್ನೆಲ್ಲ ಹೇಳಲಿಲ್ಲ, ಸರಿ ಅಲ್ವಾ ಅಂಕಲ್ ನಾನು ಹೇಳಿದ್ದು...” ಸ್ಮಿತಾ ಜೋರಾಗಿ ಉಸಿರೆಳೆದುಕೊಂಡಳು.



ಮನಸ್ಸಿನ ಜೊತೆ ದೇಹದ ಕೋಶಕೋಶವನ್ನೂ ಒಳಗೊಂಡ ಸಂಬಂಧ... ತಮ್ಮಲ್ಲೇ ಯಾವುದೋ ಗುಂಗಿನೆಂಬಂತೆ ಕೃಷ್ಣಮೂರ್ತಿ ಗುನುಗಿಕೊಂಡರು. ನಿಜ... ಆ ಹುಡುಗಿಯೊಂದಿಗೆ ತನ್ನ ಸಂಬಂಧವೂ ಹಾಗೆ ಇತ್ತಲ್ಲವೇ... ಆ ವಯಸ್ಸಿನಲ್ಲಿ ತನಗೂ ಹೀಗೆ ಜೀವಸ್ಪರ್ಶದ ತಹತಹ ಇತ್ತಲ್ಲವೇ. ಆಗ ಎಲ್ಲ ತಂಗಿಯಂದಿರ ಮದುವೆಯಾಗಿ, ಕೊನೆಯವಳೊಬ್ಬಳ ಬಸಿರು ಬಾಣಂತನ ಬಿಟ್ಟರೆ ಮಿಕ್ಕವರದೆಲ್ಲ ಮುಗಿಯುತ್ತ ಬದುಕು ಒಂದು ಹಂತಕ್ಕೆ ತಲುಪಿತು ಎನ್ನುವ ಸಂದರ್ಭದಲ್ಲಿ ಆ ಹುಡುಗಿ ಪರಿಚಯವಾಗಿದ್ದು, ತನಗಿಂತ ಬಹಳ ಚಿಕ್ಕವಳು. ಆಗ ಕೆಲಸ ಮಾಡುತ್ತಿದ್ದ ಸಂಸ್ಥೆಗೆ ಹೊಸದಾಗಿ ಸೇರಿದ್ದಳಾಕೆ. ಚಿಕ್ಕ ವಯಸ್ಸಿಗೇ ವಿಧವೆಯಾಗಿದ್ದಳು. ಪರಿಚಯ ಸ್ನೇಹಕ್ಕೆ ತಿರುಗಿ, ಸ್ನೇಹ ನಿಧಾನಕ್ಕೆ ಪ್ರೇಮವಾಗಿ, ಅವರ ಮನೆಗೂ ಆಗೀಗ ಹೋಗಿಬರತೊಡಗಿದ್ದೆ. ಮನೆಯಲ್ಲಿ ಅವಳಮ್ಮ, ತಮ್ಮ ಇಬ್ಬರೇ.ಬೇರೆ ಊರಿನಲ್ಲಿ ಕೆಲಸದಲ್ಲಿದ್ದ ಅಪ್ಪ ಹದಿನೈದು ದಿನಕ್ಕೊಮ್ಮೆ, ತಿಂಗಳಿಗೊಮ್ಮೆ ಬರಿದ್ದರು. ಹಾಗೊಮ್ಮೆ ಅವಳನ್ನು ಸಂಜೆ ಮನೆಗೆ ಬಿಟ್ಟು ಬರಲು ಹೋದಾಗ, ಮನೆಯಲ್ಲಿ ಯಾರೂ ಇರಲಿಲ್ಲ, ಅವಳಮ್ಮ, ತಮ್ಮ ಯಾರದೋ ಮದುವೆಗೆ ಹೋಗಿದ್ದರು. ರಾತ್ರಿ ತಾನಲ್ಲೇ ಉಳಿದಿದ್ದು... ನಂತರ ಮತ್ತೆ ಹಾಗೆ ಆಗೀಗ ಯಾರೂ ಇಲ್ಲದಿದ್ದಾಗ ಕದ್ದುಮುಚ್ಚಿ ಸೇರುವುದು ನಡೆದೇ ಇತ್ತು... ಮದುವೆಯಾದರೆ ಇವಳನ್ನೇ ಎಂದು ನಿರ್ಧರಿಸಿದ್ದಾಗಿತ್ತು. ಅಷ್ಟರಲ್ಲಿಯೇ ಅಮ್ಮನಿಗೆ ಕ್ಯಾನ್ಸರ್ ಶುರುವಾಗಿದ್ದು. ಆಗೆಲ್ಲ ವಿಧವೆಯನ್ನು ಮದುವೆಯಾಗುವುದು ಎಂದರೆ ಈಗಿನಂತೆ ಇರಲಿಲ್ಲ, ಅಮ್ಮ ಹೇಗೋ ಒಪ್ಪಿದರೂ ಅಕ್ಕ, ತಂಗಿಯಂದಿರು, ಅವರ ಗಂಡಂದಿರು ಎಲ್ಲರೂ ಹಾರಾಡುವುದು ಖಂಡಿತವಿತ್ತು, ಅಮ್ಮ ಸ್ವಲ್ಪ ಚೇತರಿಸಿಕೊಳ್ಳಲಿ, ವಿಷಯ ತಿಳಿಸಿ ಮದುವೆಯಾಗೋಣ ಎಂದು ಕಾಯುತ್ತಿರುವಾಗಲೇ ಆ ಅವಘಢ ಆಗಿದ್ದು. ಅವಳಮ್ಮ, ಅವಳು ಇಬ್ಬರೂ ಒಮ್ಮೆ ಅವರಪ್ಪನನ್ನು ಕಾಣಲೆಂದು ಮೈಸೂರಿಗೆ ಹೊರಟಿದ್ದು. ಮೈಸೂರು ರಸ್ತೆಯಲ್ಲಿ ನಡೆದ ಭೀಕರ ಆಕ್ಸಿಡೆಂಟ್‌ನಲ್ಲಿ ಸ್ಪಾಟ್‌ಡೆತ್ ಆದವರ ಪಟ್ಟಿಯಲ್ಲಿ ಮರುದಿನ ಇವರ ಹೆಸರೂ ಇತ್ತು. ಅವಳು ಸತ್ತ ಕೆಲ ದಿನಗಳಲ್ಲಿಯೇ ತನ್ನ ಅಮ್ಮನೂ ಸತ್ತಳು.ನಂತರ ಮತ್ತೆಂದೂ ಹೆಣ್ಣಿನ ಸಂಗ ಮಾಡಬೇಕೆಂದು ಅನ್ನಿಸಲೇ ಇಲ್ಲ. ಹೊರಗೆ ತೋರ್ಪಡಿಸಿ ಕೊಳ್ಳದಿದ್ದರೂ ಒಳಗೊಳಗೇ ವಿಚಿತ್ರ ವಿರಕ್ತ ಭಾವನೆ ಬೆಳೆದಿತ್ತು.

ಇದನ್ನು ಸ್ಮಿತಾನೆದುರು ಹೇಳಿಕೊಳ್ಳಲಿಲ್ಲ. ಇದು ತೀರಾ ತನ್ನ ಖಾಸಗಿ ಭಾವನೆ, ಖಾಸಗಿ ಕ್ಷಣಗಳು... ಆ ಹುಡುಗಿಗೆ ಮತ್ತು ತನಗಷ್ಟೇ ಗೊತ್ತಿದ್ದ ಒಂದು ಸಂಬಂಧ, ತನ್ನೊಡನೇ ಮಣ್ಣಾಗಿಬಿಡಲಿ... ಇವರು ಹೀಗೆ ಧ್ಯಾನಸ್ಥ ಭಂಗಿಯಲ್ಲೆಂಬಂತೆ ಕುಳಿತಿದ್ದನ್ನು ನೋಡಿದ ಸ್ಮಿತಾ ಮತ್ತೆ ಮಾತಾಡಲಿಲ್ಲ. ಸ್ವಲ್ಪ ಹೊತ್ತು ಕೂತಿದ್ದು, ಬೇರೆ ಮಾತನಾಡಿ ಹೊರಟಳು.

ಮತ್ತೆ ನಾಲ್ಕಾರು ದಿನದ ನಂತರ ಸಂಜೆ ಐದೂವರೆಗೆ ಎಲ್ಲರೂ ಹೊರಡಲು ಸಿದ್ಧರಾಗುತ್ತ, ಕೃಷ್ಣಮೂರ್ತಿಯವರೂ ಇನ್ನೇನು ಹೊರಡಬೇಕು ಎನ್ನುವಷ್ಟರಲ್ಲಿ ರೇಖಾ "ನಿಮ್ಮ ತಮ್ಮ ಫೋನ್ ಮಾಡಿದ್ರು ಸರ್, ಅವರು ಬಂದು ನಿಮ್ಮನ್ನ ಪಿಕ್ ಮಾಡ್ತಾರಂತೆ, ಇಲ್ಲೇ ಕಾಯಬೇಕಂತೆ" ಎಂದಳು. ಮತ್ತೆ ತಾನು ಹೋಗುವಾಗ "ಅರ್ಧಗಂಟೆ ತಡ



ಆದ್ರೂ ಬಂದೇ ಬರ್ತಾರಂತೆ ಸರ್, ನೀವು ಮತ್ತೆ ಆಟೋ ಹತ್ತಿಕೊಂಡು ಹೋಗಿಬಿಡಬೇಡಿ" ಎಂದು ನೆನಪಿಸಿ ಹೋದಳು.

ಯಾವಾಗಾದ್ರೂ ಈ ಕಡೆಯಿಂದ ಹಾದು ಹೊರಟಿದ್ದರೆ ಆತ ಇವರನ್ನು ಕರೆದುಕೊಂಡು ಹೋಗುವುದಿತ್ತು. ಸರಿಎಂದುಕೊಂಡು ಕೃಷ್ಣಮೂರ್ತಿ ಕೇಂದ್ರದಲ್ಲಿಯೇ ಉಳಿದುಕೊಳ್ಳುವ ಎಂಟು ಹತ್ತು ಮಕ್ಕಳೊಂದಿಗೆ ಅದೂ ಇದೂ ಹರಟುತ್ತ ಕುಳಿತರು.ಅರ್ಧಗಂಟೆ ಕಾಯುವಷ್ಟರಲ್ಲಿ ತಮ್ಮ ಬಂದ.ಗೇಟ್‌ನಲ್ಲಿ ಸಂಜೆಯ ನಸುಗತ್ತಲಿನಲ್ಲಿ ತಮ್ಮನನ್ನು ದೂರದಿಂದ ನೋಡಿದ್ದೇ 'ಅರೆ ಇನ್ನೂ ರಿಟೈರ್‌ಮೆಂಟಿಗೆ ಎರಡು ವರ್ಷ ಇರೋ ತಮ್ಮ, ತನಗಿಂತ ಆರೇಳು ವರ್ಷಕ್ಕೆ ಚಿಕ್ಕವನು ಈ ಹದಿನೈದು ಇಪ್ಪತ್ತು ದಿನದಲ್ಲಿ ಎಷ್ಟು ಇಳಿದುಹೋದ ಹಾಗೆ ಕಾಣಿಸ್ತಾನಲ್ಲ' ಎನ್ನಿಸಿದ್ದೇ ಎದೆ ಭಾರವಾಗಲು ಶುರು.

ಹೊರಡಾಣ್ವಾ ಎನ್ನುತ್ತಲೇ ಬಂದ ರಮೇಶ ಆ ಹುಡುಗರೊಂದಿಗೆ ಸ್ವಲ್ಪ ಹೊತ್ತು ಕುಳಿತು ಮಾತನಾಡಿದ. ನಂತರ ಇಬ್ಬರೂ ಹೊರಟರು.

ಮನೆಗಿಂತ ಸ್ವಲ್ಪ ಹಿಂದೆ ಸಿಗುತ್ತಿದ್ದ ಪಾರ್ಕ್ ಬಳಿ ಸ್ಕೂಟರ್ ನಿಲ್ಲಿಸಿದ ರಮೇಶ "ಸ್ವಲ್ಪ ಹೊತ್ತು ಇಲ್ಲಿ ಕೂತು ಹೋಗೋಣ" ಎಂದು ಇವರತ್ತ ನೋಡದೇ ಹೆಜ್ಜೆ ಹಾಕಿದ. ಅವನೊಂದಿಗೆ ನಡೆದರು. ಕತ್ತಲು ನಿಧಾನಕ್ಕೆ ಕವಿಯಲಾರಂಭಿಸಿದ್ದರಿಂದ ಪಾರ್ಕ್‌ನಲ್ಲಿ ಹೆಚ್ಚು ಜನರಿರಲಿಲ್ಲ. ಕಲ್ಲು ಬೆಂಚಿನ ಮೇಲೆ ಕೂತಾಗಲೂ ಇಬ್ಬರ ಮಧ್ಯೆ ಮಾತುಗಳಿರಲಿಲ್ಲ. ಪಕ್ಕದಲ್ಲಿ ಕೂತಿದ್ದ ತಮ್ಮನನ್ನೇ ವಾರೆಗಣ್ಣಿನಿಂದ ನೋಡುತ್ತಿದ್ದ ಕೃಷ್ಣಮೂರ್ತಿಗೆ ಸುಜಾತಾಳ

ಸಾವಿನಿಂದ ಇವನು ಚೇತರಿಸಿಕೊಳ್ಳೋದು ಕಷ್ಟವಿದೆ ಎನ್ನಿಸಿತು.ಯಾವುದೋ ವಿಚಾರಕ್ಕೆ ಆಳದಲ್ಲಿ ತಮ್ಮ ಹೆದರಿಬಿಟ್ಟಿದ್ದಾನೆ ಎನ್ನಿಸಿದ್ದೇ ಸುಜಾತಾ ಹೋದಮೇಲೆ ನೀನು ತುಂಬ ಹೆದರಿರೋ ಹಾಗೆ ಕಾಣೀಯ”  ಎಂದರು.

“ಆ ದಿನ ಅವಳ ಜೊತೆಗೆ ನಾನು ಮನೇಲೆ ಇದ್ದೆ... ಪ್ರತಿ ಶನಿವಾರಕ್ಕಿಂತ ಬೇಗ ಬಂದಿದ್ದೆ... ಒಂದೂವರೆಗೆ ಊಟ ಮುಗಿಸಿದ್ವಿ. ಮಾಮೂಲಾಗೆ ಅವಳು ಇತ್ತೀಚೆಗೆ ಮಧ್ಯಾಹ್ನ ಕಡಿಮೆ ಊಟ ಮಾಡ್ತಿದ್ದಳಲ್ಲ, ಹಂಗೆ ಸ್ವಲ್ಪನೇ ಊಟ ಮಾಡಿದ್ರು, ಡಯಟ್ ಮಾಡ್ತೀದೀಯೆನೆ ಅಂತ ತಮಾಶೆನೂ ಮಾಡಿದ್ದೆ...

“ನೀನು ಟಿವಿ ನೋಡ್ತಾ ಮಲಕ್ಕೊಂಡೆ, ಅವಳು ಒಳಗೆ ಹೋಗಿ ಮಲಗಿದಳು... ಅಷ್ಟು ಹೊತ್ತೂ ಜೊತೆಗಿದ್ರೂ ಹಿಂಗಾಗುತ್ತೆ ಅಂತ ಅರಿವಿಗೇ ಸಿಕ್ಕಲಿಲ್ಲವಲ್ಲ ಅಂತ ನಿನ್ನ ನಡುಕ ಅಲ್ವಾ... ” ಕೃಷ್ಣಮೂರ್ತಿ ತಮ್ಮನ ಭುಜ ತಟ್ಟಿದರು.

“ಹಂಗಲ್ಲಣ್ಣ... ಹ್ಯಾಗೆ ಶುರು ಮಾಡಬೇಕೋ ಗೊತ್ತಾಗ್ತಿಲ್ಲ... ಊಟ ಆದ ತಕ್ಷಣವೇ ಮಲಗಿಬಿಡಲಿಲ್ಲ” ರಮೇಶ ಮೆಲ್ಲಗೆ ಹೇಳಿದ.

“ಅಯ್ಯೋ ರಾಮ.. ಏನಾದ್ರೂ ವಿಚಾರಕ್ಕೆ ಜಗಳಗಿಗಳ ಮಾಡ್ಕೊಂಡ್ರೋ ಹ್ಯಾಗೆ” ಕೃಷ್ಣಮೂರ್ತಿಯವರಲ್ಲಿ ಸಣ್ಣದಾಗಿ ಅನುಮಾನ ಹಾದುಹೋಗುವಷ್ಟರಲ್ಲಿ ರಮೇಶ ಮೆತ್ತಗೆ ಹೇಳತೊಡಗಿದ.



“ನಿನ್ನ ಹತ್ರಾನೂ ಹೇಳ್ಕೊಳ್ಳಲಿಲ್ಲ ಅಂದ್ರೆ ಈ ಭಾರಕ್ಕೆ ನಾನು ಒಳಗೊಳ್ಗೇ ಕುಸಿದುಹೋಗ್ತಿನಿ. ಅವತ್ತು ಬೇಗ ಬಂದಿದ್ದೆ ಅಂದ್ನಲ್ಲ... ಊಟ ಮಾಡಿದ ಮೇಲೆ ಅವಳ ಕೆಲಸ ಬೇಗ ಮುಗೀಲಿ ಅಂತ ನಾನು ಡೈನಿಂಗ್ ಟೇಬಲ್ ಮೇಲಿರೋದನ್ನೆಲ್ಲ ಎತ್ತಿಟ್ಟೆ, ಅವಳು ಉಳಿದಿದ್ದನ್ನೆಲ್ಲ ಮುಚ್ಚಿಟ್ಟು, ಮುಸುರೆ ಪಾತ್ರೆಯನ್ನೆಲ್ಲ ಸಿಂಕ್ ಕೆಳಗಿಟ್ಟಿರೋ ಟಬ್‌ನಲ್ಲಿಟ್ಟು ಜೋಡಿಸಿದಳು, ನಿಂಗೊತ್ತಲ್ಲ, ಎಷ್ಟು ಅಚ್ಚುಕಟ್ಟು ಅವಳು ಅಂತ... ಆಮೇಲೆ ನಾನು ಉದ್ದ ಸೋಫಾ ಮೇಲೆ ಕೂತು ಟಿವಿ ಹಾಕಿದೆ, ಅವಳೂಬಂದು ಕೂತ್ಕಂಡಳು, ಒಂದು ಹದಿನೈದು ಇಪ್ಪತ್ತು ನಿಮಿಷ ಟಿವಿ ನೋಡಿದ್ವಿ, ನಂಗೆ ಇದ್ದಕ್ಕಿದ್ದಂತೆ ಒಂಥರಾ ಬಯಕೆಅನ್ನಿಸ್ತು. ಬಾಗಿಲು, ಕರ್ಟನ್ ಎಲ್ಲ ಹಾಕಿತ್ತು, ಸ್ವಲ್ಪ ಕತ್ತಲೆ ಇತ್ತು, ಟಿವಿನೂ ಆಫ್ ಮಾಡಿದೆ, ನೀವೆಲ್ಲ ಮನೆಗೆ ಬರೋದುಸಂಜೆ, ಯಾರೂ ಇಲ್ವೇ ಅಂತೇಳ್ತಾ ತಮ್ಕೊಂಡೆ, ಆಮೇಲೆ ಹಂಗೇ ಒಳಗೆ ರೂಮಿಗೆ ಹೋದ್ವಿ, ಅವಳು ಮದುವೆಯಾದ ಇಷ್ಟು ವರ್ಷಗಳಲ್ಲಿ ಹಾಗೆ ಮೊದಲನೇ ಸಲ ಏನೂ ಕೊಸರಾಡೇ ಹಗಲು ಹೊತ್ತು ಏನ್ರಿ ನಿಮ್ಮದು ಅಂತನ್ನದೇ ತಾನೂ ತಡ್ಕೊಂಡಿದ್ದು, ಎಲ್ಲ ಮುಗಿದ ಮೇಲೆ ಅರೆಕ್ಷಣ ತಲೆ ಹಿಡ್ಕೊಂಡಳು, ಯಾಕೆ ಏನಾಯ್ತಿ ಅಂತ ನಾನು ಗಾಭರಿಯಾದೆ. ಏನಿಲ್ಲ,ಯಾಕೋ ಸ್ವಲ್ಪ ಎಡಗಡೆ ತಲೆ ಸಳ್ ಅಂತ ನೋವು ಅಂದ್ಲು, ಬಟ್ಟೆ ಹಾಕ್ಕೊಳಕೆ ಮುಂಚೆ ಇನ್ನೊಂದೈದು ನಿಮಿಷ ಹಿಂಗೇಮಲಗ್ರಿ ಅಂತ ನನ್ನನ್ನ ಒತ್ತಿ ಹಿಡಿದ್ಲು, ಸುಮಾರು ಅರ್ಧ

ಗಂಟೆ ಹಂಗೇ ಒಬ್ರಿಗೊಬ್ಬರು ಉಸಿರಾಟ ಕೇಳ್ತಾ ಮಲಗಿದ್ವಿ, ಎಷ್ಟೋ ಸಲ ಹಂಗೆ ಮಲಕ್ಕೊಂಡಾಗ ನಂಗೆ ಅವಳ ಚರ್ಮ ಮುಟ್ಟಿದ್ರೆ ಅದು ನನ್ನದೇ ಚರ್ಮ ಅನ್ನಿಸೋದು, ಅವಳ ಉಸಿರಾಟ ನನ್ನದೇ ಅನ್ನಿಸೋದು, ಅವತ್ತೂ ಹಂಗೇ ತೀವ್ರವಾಗಿ ಅನ್ನಿಸ್ತು, ಅವಳ ಬೆನ್ನು ಕುತ್ತಿಗೆ ಸವತ್ತಾ ಇದ್ರೆ ಸುಕ್ಕಾಗ್ತಿರೋ ನನ್ನ ಕುತ್ತಿಗೆ ಬೆನ್ನನ್ನೇ ಸವರಾ ಇದೀನಿ ಅನ್ನಿಸೋದು, ಆಮೇಲೆ ನಿಧಾನಕ್ಕೆ ಎದ್ದು ಸೀರೆ ಸರಿಯಾಗಿಉಟ್ಟುಕೊಂಡು ಮಲಗಿದಳು, ನಾನೂ ಬಚ್ಚಲಿಗೆ ಹೋಗಿಬಂದು ಅವಳ ಪಕ್ಕದಲ್ಲೇ ಮಲಗಿದೆ, ಇಬ್ರಿಗೂ ನಿದ್ರೆ ಬರಲಿಲ್ಲ, ಚೂರು ಅದೂ ಇದೂ ಮಾತಾಡಿದ್ವಿ, ಮೂರು ಗಂಟೆ ಆಗಿತ್ತೇನೋ, ಅವಳು ಮಾತು ನಿಲ್ಲಿಸಿದಳು, ಬಹುಶಃ ನಿದ್ರೆ ಬರಿದೆಯೇನೋ ಅಂಡ್ಕೊಂಡು ಸುಮ್ಮನಾದೆ, ಅವಳು ಆ ಕಡೆ ತಿರುಗಿ ಮಲಗಿದಳು. ನಂಗೆ ಅಷ್ಟು ಹೊತ್ತಿಗೆ ಕ್ರಿಕೆಟ್ ಮ್ಯಾಚ್ ಇರೋದು ನೆನಪಾಯ್ತು, ನಿದ್ರೆ ಮಾಡ್ತಿದಾಳೇನೋ ಅಂತ ಸದ್ದು ಮಾಡದೇ ಹಾಲಿಗೆ ಬಂದು ಟಿವಿ ಹಾಕಿದೆ. ಅವಾಗ ಮೂರೂವರೆ ಆಗಿತ್ತು... ಮಲಕ್ಕೊಂಡು ನೋಡ್ತಿದ್ದೆನಲ್ಲ, ಹಂಗೇ ನಿದ್ರೆ ಹತ್ತೇ ಬಿಡ್ತು ಕಾಣುತ್ತೆ... ಆಮೇಲೆ ನೋಡಿದ್ರೆ ಎಚ್ಚರವಾಗಿದ್ದು ಅವಳು ಕೂಗಿದಾಗಲೇ... ಅವಳು ಜೀವ ಬಿಡೋ ಸಮಯಕ್ಕೆ ಸರಿಯಾಗಿ ನಂಗೆ ಅಷ್ಟು ಜೋರು ನಿದ್ರೆತಗೋಬೇಕೆ... ಛೇ" ರಮೇಶ್ ಎರಡೂ ಕೈಗಳಿಂದ ತಲೆ ಹಿಡಿದುಕೊಂಡ.

ಕೃಷ್ಣಮೂರ್ತಿಗೆ ಮಾತನಾಡಲು ಪದಗಳೇ ಹೊಳೆಯಲಿಲ್ಲ.

"ಸ್ವಲ್ಪ ಹೊತ್ತಿನ ಮೊದಲಷ್ಟೇ ಅವಳ ಚರ್ಮದ ಸ್ಪರ್ಶ ನನ್ನ ಕೈಯಲ್ಲಿತ್ತು... ಅವಳ ಉಸಿರಿನ ಬಿಸಿ ನನ್ನ ಕಿವಿಗೆ ಬಡೀತಿತ್ತು... ಅಷ್ಟಾದ್ರೂ, ಅಷ್ಟೆಲ್ಲ ಹತ್ತಿರಕ್ಕೆ ಅಂಟಿಕೊಂಡಿದ್ರೂ ಹೀಗೆ ಅವಳ ಸಾವು ಅದಾಗಲೇ ಪಕ್ಕದಲ್ಲೇ ಇದೆ ಅನ್ನೋದು ಒಂದಿಷ್ಟೂ ನಂಗೆ

ಗೊತಾಗ್ಲೆ ಇಲ್ಲ ನೋಡು... ನನಗೆ ಇದೇ ಒಂಥರಾ ಭಯ ಹುಟ್ಟಿಸಿಬಿಟ್ಟಿದೆ." ರಮೇಶ ಮತ್ತೆ ಗಟ್ಟಿಯಾಗಿ ತಲೆ ಒತ್ತಿಕೊಂಡ.

"ನೀನು ನಂಬ್ತೀಯೋ ಇಲ್ವೋ ಅಣ್ಣಾ... ಎರಡು ಮೂರು ದಿನದಿಂದ ರಾತ್ರಿ ನನಗಂಟಿಕೊಂಡೇ ಮಲಗಿದ್ದಳು... ನನಗೇ ವಿಚಿತ್ರ ಅನ್ನಿಸಿತ್ತು. ಒಂದೊಂದೂ ನೆನಪಾದರೆ.. ಛೇ.. ಅವಳನ್ನ ಸೂಕ್ಷ್ಮವಾಗಿ ಗಮನಿಸಿದ್ದರೆ ಉಳಿಸಿಕೋಬಹುದಿತ್ತೇನೋ ಅಂತ್ಲೇ ಅನ್ನಿಸಿಬಿಡುತ್ತೆ"

"ಆ ಭಯವನ್ನ ಮೀರು ಅಂತ ನಾನು ಉಪದೇಶ ಕೊಡಲ್ಲ, ಯಾಕಂದ್ರೆ ನಂಗೂ ಗೊತ್ತಾಗ್ತಿಲ್ಲ ಹ್ಯಾಗೆ ಮೀರೋದು ಅಂತ... ಸ್ವಲ್ಪ ಹೊತ್ತಿನ ಹಿಂದೆ ಅಷ್ಟೆಲ್ಲ ಹತ್ತಿರಕ್ಕೆ ಅಂಟಿಕೊಂಡಿದ್ರೂ ಅವಳ ಸಾವು ಪಕ್ಕದಲ್ಲೇ ಇದೆ ಅನ್ನೋದು ಒಂದಿಷ್ಟೂ ನಂಗೆ ಗೊತಾಗ್ಲೆ ಇಲ್ಲ ಅಂದ್ಮೇಲೆ ಅದು ಸಾವು ಎನ್ನೋದು ಬದುಕಿದ್ದವರಿಗೆ ತೆರೆದಿಡೋ ವಾಸ್ತವ ಅನ್ನಿಸುತ್ತೆ. ಇನ್ನು ಇಷ್ಟೆ... ಈ ವಾಸ್ತವವನ್ನ ಅರಗಿಸಿಕೊಂಡು ನಮ್ಮ ಕೊನೇ ಉಸಿರಿನವರೆಗೆ ಮುನ್ನಡೆಯೋದು..."ಕೃಷ್ಣಮೂರ್ತಿ ಮೃದುವಾಗಿ ಹೇಳಿ ಮತ್ತೊಮ್ಮೆ ಅವನ ಭುಜ ಒತ್ತಿದರು.

"ಅದೇ ಅಣ್ಣ... ಈ ವಾಸ್ತವವನ್ನ ಅರಗಿಸಿಕೊಳ್ಳೋದೆ ಹ್ಯಾಗೆ ಅಂತ. ಯಾರನ್ನಾದ್ರೂ ಪೂರ್ಣ ಅರಿತುಕೊಂಡಿದ್ದೇವೆ ಅನ್ನೋದು ಎಷ್ಟು ಅವಾಸ್ತವ ಅಂತ ಈಗ ಅರ್ಥ ಆಗ್ತಿದೆ... ಮದುವೆಯಾದ ಮೊದಲಿಗೆ ನಂಗೆ ಅವಳ ಮೇಲೆ ಆಗಾಗ ವಿನಾಕಾರಣ ಸಿಟ್ಟು ಬರೋದು. ಅದಕ್ಕೆ ಕಾರಣ ನೀನು..."

ಕೃಷ್ಣಮೂರ್ತಿ ಈಗ ಹಾರಿಬಿದ್ದರು. ಆ ಸಮಯದಲ್ಲಿ ಇವರ ಮನೆ ಪರಿಸ್ಥಿತಿ ಇನ್ನೂ ಅಷ್ಟು ಸುಧಾರಿಸಿರಲಿಲ್ಲ. ತುಸುಮಟ್ಟಿಗೆ ಅನುಕೂಲಸ್ಥರಾಗಿದ್ದ ಸುಜಾತಾಳ ಮನೆಯವರನ್ನು ಒಪ್ಪಿಸಿ, ನಿಂತು ಮದುವೆ ಮಾಡಿಸಿದ್ದೇ ತಾನು... ಸುಜಾತಾಳ ಅಣ್ಣ ಈಗಲೂ ಆಗೀಗ ಆ ಸಂದರ್ಭವನ್ನು ಹೇಳಿ, ಕೃಷ್ಣಮೂರ್ತಿಯವರನ್ನು ಅಭಿಮಾನದಿಂದ ನೋಡುತ್ತಿದ್ದ.ತನ್ನ ಕಾರಣದಿಂದ ಇವರ ಮಧ್ಯೆ ಮನಸ್ತಾಪವಾಗಿತ್ತೇ...

"ನೀನು ಈ ಮದುವೆ ನಿಂತು ಮಾಡಿಸಿದ್ದು ಅಂತ ನಿನ್ನ ಮೇಲೆ ಎಂಥ ಅಭಿಮಾನವಿತ್ತಲ್ಲ ಆಕೆಗೆ... ಭಾವ ಭಾವ ಅಂತ ಏನೇನೋ ತನಗೆ ತಿಳಿಯದ ವಿಚಾರಗಳನ್ನೆಲ್ಲ ನಿನಗೆ ಕೇಳೋಳು. ನೀನು ಅಷ್ಟೇ ಅವಳು ಕೇಳಿದ್ದೆ ಸಾಕು ಎಂಬಂತೆ ಎದುರಿಗೆ ಕೂಡಿಸಿಕೊಂಡು ಸ್ಟುಡೆಂಟ್‌ಗೆ ಕ್ಲಾಸ್ ತಗೊಂಡಂತೆ ತಗೋತಿದ್ದೆ. ಮದುವೆಯಾದ ಹೊಸದರಲ್ಲಿ ಕೆಲವು ಸಲ ರಾತ್ರಿ ನಾನು ಅವಳು ಈಗ ಬಾಳೆ ಅಂತ ಕಾಯ್ತಾ ಇದ್ರೆ ನೀನು ಅವಳಿಗೆ ಕ್ಲಾಸ್ ತಗೊಂಡಿರಿದ್ದೆ..."

"ಓ ಅದಾ" ಎಂದು ಕೃಷ್ಣಮೂರ್ತಿ ಕೊಂಚ ಹಗುರಾಗಿ ನಕ್ಕರು. ತಾವು ಓದುತ್ತಿದ್ದ ಪುಸ್ತಕಗಳ ಬಗ್ಗೆ ಏನೇನೋ ಕೇಳೋಳು. ಚಿಕ್ಕ ಹುಡುಗಿಯ ಮುಗ್ಧತೆ, ಅದಮ್ಯ ಕುತೂಹಲ ಅವಳಲ್ಲಿ. ಪುಟ್ಟ ಗೆಳತಿಯೊಬ್ಬಳು ಸಿಕ್ಕಿದಂತೆ ಅನ್ನಿಸಿತ್ತು ಕೃಷ್ಣಮೂರ್ತಿಗೆ

ರಮೇಶನೂ ಈಗ ಚೂರು ನಕ್ಕ. ಅವಳು ನನ್ನ ಹತ್ರ ಕೇಳಲಿಕ್ಕೆ ಬಂದ್ರೆ ನಾನು ಗಂಡನೆಂಬ ಅಹಂನಿಂದ ಉತ್ತರಿಸ್ತಿದ್ದೆ, ನಿನ್ನ ಹಾಗೆ ವಿವರಿಸಿ, ತಿಳಿಸಿಕೊಡ್ತಿರಲಿಲ್ಲ,



ಅದಕ್ಕೆ ಅವಳಿಗೆ ನನ್ನ ಹತ್ರ ಯಾವ ವಿಷಯವನ್ನೂ ಚರ್ಚೆ ಮಾಡೋ ಮನಸ್ಸೇ ಹುಟ್ಟಲಿಲ್ಲ, ಇದೆಲ್ಲ ಮೊದಲು ಮೊದಲಿಗೆ ಅಂತಿಟ್ಕೋ, ಇಬ್ಬರು ಮಕ್ಕಳಾದ ಮೇಲೆ ನನಗೆ ನಾನು ಯಾಕೆ ಇಷ್ಟೆಲ್ಲ ಅವಳ ಮೇಲೆ ಅಧಿಕಾರ ಚಲಾಯಿಸ್ತಿದೀನಿ ಅಂತ ಸ್ವಲ್ಪ ನಾಚಿಕೆ ಅನ್ನಿಸಲಿಕ್ಕೆ ಶುರುವಾಯ್ತು, ನೀನು ಗಮನಿಸಿರಬಹುದು, ಇಬ್ರು ಮಕ್ಕಳು ಸ್ಕೂಲಿಗೆ ಹೋಗಲಿಕ್ಕೆ ಶುರುವಾದ ಮೇಲೆ ನನ್ನ ಸ್ವಭಾವದಲ್ಲಿ ಎಷ್ಟು ಬದಲಾವಣೆ ಆಯ್ತು ಅಂತ... ಅವಳನ್ನ ಅರಿತುಕೊಳ್ತಾ ಹೋದ ಹಾಗೆ ನಂಗೆ ಅವಳ ಜೊತೆ ಮಲಗಿದ್ದಾಗ ಅವಳ ಚರ್ಮ ಮುಟ್ಟಿದ್ರೆ ನನ್ನದನ್ನೇ ಮುಟ್ಟಿಕೊಳ್ತಾ ಇದ್ದೇನೆ ಎಂಬಂಥ ತಾದಾತ್ಮ್ಯದ ಸಂಬಂಧ ಶುರುವಾಗಿದ್ದು,ಆದ್ರೆ ನೋಡು ಕಡೇ ಘಳಿಗೆಯಲ್ಲಿ ಮಾತ್ರ ಪ್ರಾಯಶಃ ಅವಳ ದೇಹ ನಂಗೆ ಪರಿಚಿತ ಭಾವದಲ್ಲೇ ಸ್ಪಂದಿಸ್ತಾ ಇದೆ ಅಂತ ನಾನಂದುಕೊಂಡಿದ್ರೂ ಅದು ಪೂರ್ಣ ಅಪರಿಚಿತವಾಗಿಬಿಟ್ಟಿತ್ತು ಅಂತ..." ರಮೇಶ ಮತ್ತೆ ಭಾರವಾದ.

ಪ್ರಾಯಶಃ ಸುಜಾತಾ ಹೋದ ದಿನದಿಂದ ಇವನು ಸರಿಯಾಗಿ ನಿದ್ರೆಯನ್ನೂ ಮಾಡಿದಂತಿಲ್ಲ, ಇವತ್ತು ಇಷ್ಟು ಹೇಳಿಕೊಂಡು ಹಗುರಾಗಿದ್ದಾನೆ.... ತಾನು ಇವತ್ತೇ ಏನಾದ್ರೂ ಮಾತನಾಡಿ ಮತ್ತಷ್ಟು ಭಾರವಾಗಿಸುವುದು ಬೇಡ, ನಾಲ್ಕು ದಿನ ನಿದ್ರೆ ಮಾಡಿದ್ರೆ ಸರಿಹೋಗ್ತಾನೆ, ಡಾಕ್ಟರಿಗೆ ಹೇಳಿ ಸದ್ಯಕ್ಕೆ ಕಾಂಪೋಸ್ ಮಾತ್ರೆ ಬೇಕಿದ್ರೆ ಕೊಟ್ಟರಾಯ್ತು... ಆಮೇಲೆ ಎದುರಿನ ವಾಸ್ತವವನ್ನು ಒಪ್ಪಿಕೊಂಡು ಹೋಗೋದು ಅಷ್ಟೆ ಎಂದು ತಿಳಿ ಹೇಳೋಣ ಎಂದುಕೊಂಡ ಕೃಷ್ಣಮೂರ್ತಿ "ನೋಡು, ಬೇರೆಯವರ ದೇಹ ಮಾತ್ರವಲ್ಲ, ನಮ್ಮ ದೇಹವೇ ನಮಗೆ ಅಪರಿಚಿತವಾಗಿರುತ್ತೆ... ಈಗ ಹೀಗೆ ಇಬ್ರೂ ಇಲ್ಲಿ ಮಾತಾಡ್ತಾ ಕೂತಿದೀವಲ್ಲ ನಮ್ಮ ದೇಹದಲ್ಲಿ ಯಾವ ರೋಗದ ಬೀಜ ಒಳಗೆ ಅಡಗಿಕುಳಿತಿದೆಯೋ ಯಾರಿಗೆ ಗೊತ್ತು.. ಎಲ್ಲವೂ ನಮಗೆ ಪರಿಚಿತವಾಗಬೇಕೆಂಬ ಹಟ ಬಿಟ್ಟು, ಎಲ್ಲ ನಾವಂದುಕೊಂಡಂತೆ ನಡೀಬೇಕು ಎಂದಾಗ್ಲೆ ಅಥವಾ ನಡಿಯುತ್ತೆ ಅಂತ ನಿರೀಕ್ಷೆಯನ್ನಾಗಲಿ ಇಟ್ಟುಕೊಳ್ಳೋ ಯಾವ ಕ್ಷಣ ಹ್ಯಾಗೆ ತೆರೆದುಕೊಳ್ಳುತ್ತೋ ಹಾಗೆ ಅದನ್ನು ಎದುರುಗೊಳ್ತಾ ಹೋಗೋದು ಅಷ್ಟೆ..."ಎಂದರು.

“ಅದೇ ಅಣ್ಣಾ... ವರ್ತಮಾನದ ಕ್ಷಣಕ್ಕೆ ಈಗ ನಾನು ಎದುರಾಗಬೇಕಿದ್ರೆ, ಆಗೆಲ್ಲ ಅವಳಿದ್ದಳು ಜೊತೆಯಲ್ಲಿ, ಎಂಬ ಹಿಂದಿನ ನೆನಪು, ಈಗ ಅವಳಿಲ್ಲ, ಒಬ್ಬನೇ ಅನ್ನೋ ಸಂಗತಿ ಯಾತನೆ ಕೊಡ್ತಿರುತ್ತಲ್ಲ, ಅದನ್ನು ಭರಿಸೋದು ಹ್ಯಾಗೆ ಅನ್ನೋದೆ ನಂಗೆ ಭಯ ಹುಟ್ಟಿಸಿದೆ..."

ಕೃಷ್ಣಮೂರ್ತಿ ಮಾತನಾಡಲಿಲ್ಲ. ಸ್ಥಿತಾಳೊಂದಿಗಿನ ಮಾತುಕತೆ ನೆನಪಾಯಿತು, ಅವಳು ತನ್ನ ಸಲಹೆ ಕೇಳಲು ಬಂದಿರಲಿಲ್ಲ ,

ಪ್ರಾಯಶಃ ತನ್ನ ಉತ್ತರ ತಾನು ಕಂಡುಕೊಳ್ಳುವ ಹಾದಿಯಲ್ಲಿದ್ದ ಹುಡುಗಿ, ಆಲಿಸುವ ತನ್ನಂಥ ಹಿರಿಯರೊಬ್ಬರು ಬೇಕಿದ್ದರು ಎಂಬಂತೆ ಅವಳು ಕುಳಿತಿದ್ದಳು. ಗಾಲಿ ಖುರ್ಚಿಯ ಮೇಲೆ ಕುಳಿತು, ಹಾಡು ಹೇಳಿಕೊಡ್ತಾ ಬಲಗೈಯಿಂದಲೇ ಡಾನ್ಸ್ ಹೇಳಿಕೊಡುವ ತನ್ನಮ್ಮನನ್ನು ಮಾತಿನಲ್ಲೇ ಚಿತ್ರವತ್ತಾಗಿಸಿದ್ದು ನೆನಪಾಗಿ, ಅರೆ, ಅವಳು ಎಷ್ಟು ತಾದಾತ್ಮ್ಯದಿಂದ



ವರ್ಣಿಸಿದ್ದಳು ಎಂದರೆ ಈಗ ಹೀಗೆ ಕಣ್ಮುಚ್ಚಿದರೆ ಗಾಲಿ ಖುರ್ಚಿಯನ್ನು ಅತ್ತಿತ್ತ ಸರಿಸಾಡುತ್ತ ಬಲಗೈಯಲ್ಲಿ ಅಭಿನಯ ಹೇಳಿಕೊಡ್ತಿರುವ ಹೆಂಗಸಿನ ಚಿತ್ರವೊಂದು ತನ್ನೊಳಗೂ ಮೂಡುತ್ತಿದೆಯಲ್ಲ ಎನ್ನಿಸಿದ್ದೇ ಕೃಷ್ಣಮೂರ್ತಿ ಭಾರವಾದ ಈ ಘಳಿಗೆಯನ್ನು ಆ ಚಿತ್ರವೇ ಸ್ವಲ್ಪ ಹಗುರಾಗಿಸಲಿ ಎಂದುಕೊಂಡರು. ಅವರವರ ಉತ್ತರ ಅವರೇ ಕಂಡುಕೊಳ್ಳಬೇಕೆ ವಿನಾ ಎಲ್ಲರಿಗೂ ಒಂದೇ ಉತ್ತರ ಲಭ್ಯವಿಲ್ಲ ಎನ್ನಬೇಕೆನ್ನಿಸಿತು. ತೀರಾ ತತ್ವಶಾಸ್ತ್ರದ ಮಾತಿನಂತೆ ಕೇಳಿಸಿದರೆ ಎಂದು ಸುಮ್ಮನಾದರು. ತಮ್ಮನೂ ಇಂಥದೊಂದು ಉತ್ತರ ತಾನೇ ಕಂಡುಕೊಳ್ಳುವೆ ಎಂಬಂತೆ ಮೆಲ್ಲಗೆ ಎದ್ದು ನಿಂತು,

“ಹೋಗಣ ನಡಿ, ಇಬ್ರೂ ಅಜ್ಜಾ ಇನ್ನೂ ಬಂದೇ ಇಲ್ಲ ಅಂತ ಪಾಪು ಕಾಯ್ತಿರುತ್ತೆ. ರಮಾನೂ ಗಾಭರಿಯಾಗಿರ್ತಾಳೆ.ಇರು, ಮನೆಗೊಂದು ಫೋನ್ ಮಾಡಿಬಿಡ್ತೀನಿ”  ಅಂದು ಮೊಬೈಲ್ ಜೇಬಿನಿಂದ ಹೊರತೆಗೆದು ಗುಂಡಿ ಒತ್ತತೊಡಗಿದ.

ಮೊಬೈಲ್‌ನ ನೀಲಿಪ್ರಭೆಯಲ್ಲಿ ಮನೆಯ ನಂಬರ್ ಮಿನುಗುತ್ತಿತ್ತು.

# ಪಾಣಿ

**- ವಿಜಯಾ ಮೋಹನ್**

ಬಿಸಿಲು ಝಳ ಝಳ ಅನುತಿತ್ತು, ಮರ ಗಿಡಗಳ ಮೈಯೊಳಗಿನ ಗಾಳಿ ತಾಣಕ್ಕೆ ಸಿಗದಂಗೆ ನಿತ್ರಾಣವಾಗಿತ್ತು. ಭೂಮಿಯೆಂಬ ಭೂಮಂಡಲದ ಮ್ಯಾಲೆ, ಅಲ್ಲಲ್ಲಿ ಮನೆಗಳಲ್ಲಿ ಹೊರಗಡೆಯಲ್ಲಿ ಕುಂತು ನಿಂತವರ ಮೈ ಮ್ಯಾಲೆ ಸೆಕೆಯ ಝಳ ಅಂಬೋದು ಮೀಸೆ ತೀಡುತ್ತಿತ್ತು. ಅವನ ಕಣ್ಣಿಗೆ ಕಾಣದ ಯಾರನ್ನು ಯಾವುದನ್ನು ಬಿಡದಂಗೆ. ಸುರು ಸುರನೆ ಕಾವು ಹೊತ್ತಿಸಿ ಕಣ್ಣಗಲಿಸಿ ನೋಡುತ್ತಿದ್ದ ಸೂರ್ಯಪರಮಾತುಮನೆಂಬೋನ ಕೆಳಗೆ ನಿಂತಿದ್ದ ತಿಮ್ಮರಾಯಿಯ ಶರೀರದ ಕೆಳಗಿದ್ದ ಎರಡು ಜೋಡಿ ಕಾಲುಗಳು ಕಳಿ ಕಳಿಯೆಂದು ಬಾದೆ ಬೀಳುತ್ತಿದ್ದವು. ಅವನು ಬೆಳ್ಳಂಬೆಳಗ್ಗೆ ಏಳು ಗಂಟೆಯೊತ್ತಿಗೆಲ್ಲ, ತಾಲ್ಲೋಕು ಆಫೀಸಿನ ಹತ್ತಿರಕ್ಕೆ ಬಂದು ನಿಂತಿರುವ ನರಮನುಷ್ಯರ ಮದ್ಯೆ ಮನುಷ್ಯನಾಗೆ ನಿಂತ್‌ಕಂಡಿದ್ದ. ಅವನು ಆ ಜಾಗಕ್ಕೆ ಬಂದು ನಿಂತಾಗ ಸೂರ್ಯ ನೆಟ್ಟಗೆ ಕಣ್ಣು ಬಿಟ್ಟೇ ಇರಲಿಲ್ಲ, ಈಗ್ ನೋಡುದ್ರೆ ಅವನು ಬಲಿಯುತ್ತ ಬಲಿಯುತ್ತ ಕವ ಕವನೆಂಬ ಕಾವು ಕಕ್ಕುತ್ತಿರುವ ಸಮೇವಿನೊಳಗೆ ಯಣ ಈ ಬ್ರಹ್ಮಾಂಡ್ಲಾಗಿ ನಿಂತಿರೋ ಜನವೆಲ್ಲ ಕರಗೊಹೊತ್ತಿಗೆ, ನನ್ ಕಾಲೆರೆಡು ಬಿದ್ದೋಗ್‌ತ್ತಾವ್‌ಕಣಲ. ಎಂದು ಅವನ ಮುಂದೆ ನಿಂತಿದ್ದ ಪರಸಣ್ಣನ ಬುಜ ಹಿಡುಕೊಂಡು ಬಾದೆ ಬೀಳುತ್ತಿದ್ದ ತಿಮ್ಮರಾಯಿ ಬೆಳಗ್ಗೆ ಹಿಟ್ಟು ನೀರು ಮುಟ್ಟುದಂಗೆ. ಎದ್ದ ಮಕನಾಗೆ ಎದ್ದು ಬಂದು ನಿಂತಿದ್ದವನ ಶರೀರವೆಂಬ ಶರೀರವೆಲ್ಲವು. ಮದ್ಯಾನ ಹನ್ನೆರೆಡು ಗಂಟೆಯ ಝಳ ಝಳ ಬಿಸಿಲಿಗೆ ತುತ್ತಾಗಿ, ತಾಲ್ಲೋಕು ಆಫೀಸಿನ ಆವರಣದಲ್ಲಿ ಪಹಣಿ ವಿತರಣ ಕೇಂದ್ರದೊಳಗೆ, ಸಾಲಾಗಿ ನಿಂತಿದ್ದ ಜನಸ್ತೋಮದ ಮದ್ಯೆ ನಿಂತಿದ್ದ ತಿಮ್ಮರಾಯಿ ಅವನ ಪಾಲಿಗೆ ಬಂದಿದ್ದ ಮೂರು ಎಕರೆ ದಿನ್ನೆ ಹೊಲ, ಹತ್ತು ಕುಂಟೆ ಹಡ್ಲು ನೆಲಕ್ಕೆ ವಾರಸುದಾರನಾಗಿದ್ದವನು, ತಂದೆಗೆ ತಲೆ ಮಗನಾಗಿ ಹುಟ್ಟಿದವನ ಬೆನ್ನಿಂದೆ ಮೂರುಜನ ತಂಗಿಯರು, ಮೂರುಜನ ತಮ್ಮಂದಿರು ಹುಟ್ಟಿ, ಆವತ್ತಿಗೆ ಯತೇಚ್ಚವಾಗಿ ಬೆಳೆದು ಉಣ್ಣುತ್ತಿದ್ದ ಕಾಲವೊಂದಿತ್ತು.

ಇವರೆಲ್ಲ ಇನ್ನು ಸಣ್ಣ ವಯಸ್ಸಿನ ಹುಡುಗರು, ಮನೇಲಿ ಬೇಕಾದ್ದು ಬ್ಯಾಡವಾದ್ದು ತುಂಬಿ ತುಳುಕಾಡ್‌ರುವ ಕಾಲವಾಗಿತ್ತು. ಅಪ್ಪ ಕಂಬಳಿ ವ್ಯಾಪಾರಕ್ಕೆಂದು ಒಂದುಸಲ ನೇಯ್ದ ಕಂಬಳಿಗಳನ್ನೆಲ್ಲ ಜೋಡಸ್‌ಕೊಂಡು ವ್ಯಾಪಾರಕ್ಕಾಗಿ ಮಲೆನಾಡಿನ ಕಡೆ ಹೊರಟ ಅಂದರೆ, ಇನ್ನು ಆರು ತಿಂಗಳಿಗೊ? ವರುಷಕ್ಕೊ? ಊರಿಗೆ ವಾಪಾಸ್ಸಾಗುತ್ತಿದ್ದ. ಇಂತ ಸಮೇವಿನೊಳಗೆ ತಿಮ್ಮರಾಯಿಯ ಅಮ್ಮನೊಬ್ಬಳೆ, ಬದುಕು

ಬೇಸಾಯ, ಮಕ್ಕಳು ಮರಿ, ಅನುತ ಒಳಗು ಹೊರಗು ಒಬ್ಬಳೆ ನಿರುವಾಕಿಲ್ಲದ ಕೆಲಸ ಮಾಡಿ ಮಾಡಿ ಐರಾಣವಾಗುತಿದ್ಲು. ತಿಮ್ಮರಾಯಿ ಮತ್ತು ಅವನ ತಮ್ಮ ತಂಗಿಯರಿಗೆ ಸಣ್ಣ ಹುಡುಗರಲ್ಲಿ ಇದ್ದ ಮನೆಯೆಂದ್ರೆ, ಹೊರಗೆ ಹಜಾರ ಹಟ್ಟಿಬಯಲು, ಒಳಗೆ ದೊಡ್ಡ ಕಣಜದ ರೂಮುಗುಳು, ಕಬ್ಬಿಣದ ಪೆಟ್ಟಿಗೆಗಳು, ಅಳತೆಗು ಮೀರಿ ಕುಂತಿರುವ ಜೋಡಗಳು, ದೊಡ್ಡ ದೊಡ್ಡ ಕೊಳಗಗಳು, ತಾಮ್ರದ ಹಂಡೆಗುಳು, ಇಷ್ಟೆ ಅಲ್ಲ ಅವನ ಅವ್ವ ಎಲ್ಲಾದ್ರು ಮದುವೆಗಳಿಗಾಗಿ ಹೊರಟು ನಿಂತರೆ, ಅಪ್ಪನೆ ಮುಂದೆ ನಿಂತು ಮಂಕರಿಗಟ್ಟಲೆ ಒಡವೆಗಳನ್ನ ತಕ್ಕೊಡುತ್ತಿದ್ದ. ಅದ್ಯಾಕೊ ಏನೊ? ಅಂಗೆ ಬೇಕಾದ್ದ ಒಡವೆಗಳನ್ನ ಹಾಕೊಂಡು ಮದುವೆಗಳಿಗೆ ಹೋಗಿ ಬಂದ ಅವ್ವ ಆ ಗಳಿಗೇಲೆ ಮೈ ಮ್ಯಾಲೆ ಒಂದು ವಡವೆ ಇರದಂಗೆ ದೂಸುರ ಮಾತಾಡ್‌ದಂಗೆ. ನುಣ್ಣಗೆ ಬಿಚ್ಚಿ ಅಪ್ಪನ ಕೈಗೆ ಕೊಡುತ್ತಿದ್ದ ಅವ್ವ ಒಂದು ದಿನಾವಾದ್ರು, ಅಂದರೆ ಮೊನ್ನೆ ಮೊನ್ನೆ ಅವಳು ತೀರಿಕೊಂಡು ಇಷ್ಟು ದಿನವಾದರು. ಅಪ್ಪನ ಮೇಲೆ ಅಷ್ಟಾಗಿ ಚಾಡಿ ಹೇಳಿದವಳೆ ಅಲ್ಲ, ಅದರೊಳಗಾಗಿ ತಿಮ್ಮರಾಯಿಯ ಅಪ್ಪನಿಗೆ ಮನೆಯ ಹಿಂದೆಯೆ ಒಬ್ಬಳು ಸೂಳೆಯಿದ್ದಳೆಂದು. ಅವಳಿಗೆ ಅವ್ವನನ್ನು ಹೋಲಿಸಿಕೊಂಡು, ಮೂವತ್ತು ಮೂರುಗಳಿಗೇಲು ಅಪ್ಪ ಬೈಯ್ಯುತ್ತಿದ್ದುದ್ದನ್ನ, ತಂದಿಗೆ ತಲೆಮಗನಾದ ತಿಮ್ಮರಾಯಿ ಬೇಕಾದಷ್ಟು ಸಲ ಗಮನಿಸಿದ್ದ, ಸಂಜೆ ಬೆಳಗ ಅವನ ಅಪ್ಪ ಉಣ್ಣಲು ಕುಂತಾಗ, ಅವ್ವನ ಕೈಯ್ಯಯ ಸಾರನ್ನು ಸುತಾರಾಂ ಬಿಡಿಸಿ ಕೊಳ್ಳುತ್ತಿರಲಿಲ್ಲ. ಲೇ ಇದ್ಯಾತರ್ ಸಾರಂತ ಮಾಡಿದ್ದೀಯೆ? ನಮ್ಮ ಹಜಾರ್‌ದಲ್ಲಿ ಮಲಗಿರೊ ನಾಯಿಯು ಮೂಸ್ ನೋಡಲ್ಲವಲ್ಲ? ಹೋಗೆ ಹೋಗೆ ಮನೆಯಿಂದ ಸರೋಜಿ ಮನಿಯಾಗೆ ಒಂದು ಲೋಟ ಸಾರ್ ಈಸ್ಂಡು ಬರೋಗು" ಎಂದು ಗುರಾಯಿಸ್‌ಕಂಡು ಆಜ್ಞೆ ಮಾಡುತ್ತಿದ್ದ.ಅವ್ವ ಅವನ ಮಾತನ್ನ ಕಿವಿಗಾಣದಂಗೆ ಏನಾದ್ರು ಇದ್ರೆ ನೀನು ಅವಳ ಮನೆಯಿಂದ ಸಾ ತರಾಗಂಟ ನಾನು ಹಿಟ್ಟೆ ಮುರಿಯಲ್ಲವೆಂದು, ಮೂರುದಿನವಾದ್ರು ಉಣ್ಣದಂಗೆ ಹಠಮಾಡ್ಕೊಂಡು ಕುಂತು ಬಿಡುತ್ತಿದ್ದ. ಇಂತ ಘಳಿಗೆಯೊಳಗೆಲ್ಲ ಅವನ ಸೂಳೆಯ ಮನೆಯಿಂದ ಸಾರು ತರುವ ಅವಮಾನದೊಳಗೆ, ಕಟ್ಟಿಕೊಂಡ ಹೆಣುತಿಗಿಂತ ಕಂಡೋರ್ ಮನೆಯವಳ ಸಾಂಬಾರುನ್ನೆ ಹೊಗಳಿ ಹೊಗಳಿ ಉಣ್‌ತಾನಲ್ಲ. ಎನ್ನುವ ದುಃಖದ ಕಟ್ಟೆಯೆನ್ನುವುದು ತಿಮ್ಮರಾಯಿಯ ಅವ್ವನ ಎದೆಯಾಗೆ ಆಗಾಗ ಹೊಡೆದುಕೊಳ್ಳುತ್ತಿತ್ತು. ಇಂತ ಗೋಳಿನೊಳಗೆ ಕಾಲ ತಳ್ಳುತ್ತಿದ್ದ ಅವ್ವನಿಗೆ ತಂಗಿಯೊಬ್ಬಳು, ಅಂದರೆ ತಿಮ್ಮರಾಯಿಗೆ ಸೂಗೂರಿನ ಚಿಗವ್ವನೆಂಬುವವಳು ಆಗಾಗ ಊರಿಗೆ ಬರುತ್ತಿದ್ದಳು. ಅಂತ ಸಮೇವಿನೊಳಗೊಂದು ಸಾರಿ ಚಿಕ್ಕಮ್ಮ ಬಂದಿದ್ದಾಗ ಅವಳ ಅಕ್ಕನ ಸಂಕಟವನ್ನ ಅರ್ಥ ಮಾಡಿಕೊಂಡವಳು. "ಯಕ ನೀನು ಮಾಡೊ ಸಾರುನ್ನೆ ಅವನಿಗೆ ಕಾಣದಂಗೆ ಎಲ್ಲಾದ್ರು ಹೊರಗಡೆ ಬಚ್ಚಿಟ್ಟು, ಅವನು ಬಂದಮ್ಯಾಲೆ ಸರೋಜಿ ಮನೆಕಡೆ ಹೋಗೊಳಂಗೆ ಹೋಗಿ, ನೀನು ಮಾಡಿರೊ ಸಾರುನ್ನೆ ಇದು ಸರೋಜಿ ಮನೆ ಸಾರೆ ಕಣಪ್ಪ ಅಂತ ತಗಂಡು ಬಂದು ಉಂಬಾಕಿಕ್ಕೆ. ಇಂತ ಲುಚ್ಚಾನನ್‌ಮಕ್ಕಳಿಗೆಲ್ಲ ಅಂತ ಹುಚ್ಚು ಪಾಠ ಕಲಿಸೀರೆನೆ ತೆಪ್ಪಗಾಗಾದು. ಅವನು ಚಾಪೆ ಕೆಳಗೆ ತೂರೀರೆ ನೀನು ರಂಗೋಲಿ ಕೆಳಗ್ ತೂರ್‌ಬೇಕಕ್ಕ" ಅಂತ ಹೇಳಿ ಹೋದ ಚಿಕ್ಕವ್ವನ ಮಾತಿಗೆ ಅವ್ವ ಒಂದಿಷ್ಟು ದೈರ್ಯ ಮಾಡ್ಕೊಂಡು, ಊರ ಮುಂದಲ ಅರಳಿ

ಕಟ್ಟೆ ಮೇಲೆ ಕುಂಡಿ ಸವೆಸುತ್ತ ಕುಂತಿದ್ದ ಅಪ್ಪ ಎದ್ದು ಬರುವ ಮುಂಚೆಯೆ, ಹೊಲೆ ಮ್ಯಾಲೆ ತಪ್ಪಲೆಯೊಳಗೆ ಕುದಿಯುತ್ತಿದ್ದ ಎರಡು ಮೂರು ಸೌಟು ಸಾರು ತೋಡಿ ಬಳ್ಕೊಳಕ್ಕೆ ಬಗ್ಗಿಸಿಕೊಟ್ಟರೆ. ಹಟ್ಟಿ ಬಯಲಲಿದ್ದ ಬಚ್ಚಲಿನ ಕಲ್ಲು ಗೂಡಿನೊಳಕ್ಕೆ ತಿಮ್ಮರಾಯಿಯೆ ಬಚ್ಚಿಟ್ಟು ಬರ್ತ್ತಿದ್ದ. ಅವನ ಅಪ್ಪ ಕೈಕಾಲು ಮುಖ ತೊಳಕೊಂಡ್ ಬಂದು ಉಣ್ಣಲು ಕುಂತಾಗ, ಅವ್ವ ಮುಂದಿನ ಬಾಗ್‌ಲಿಂದ ಹೋಗಿ ಬಚ್ಚಲಿನ ಗೂಡಲ್ಲಿದ್ದ ಸಾರಿನ ಬಟ್ಟಲನ್ನು ಎತ್ತಿಕೊಂಡು. ಹಿಂದಿನ ಬಾಗ್‌ಲಿಂದ ಬಂದು ಅಪ್ಪನಿಗೆ ಉಣ್ಣಲು ಇಕ್ಕಿದಾಗ, "ಯವ್ವ ಸಾರು ಅಂದ್ರೆ ಸಾರು ಕಣೆ ಒಳ್ಳೆ ಅಮೃತವಿದ್ದಂಗೈತೆ, ಸರೋಜಿ ಅಂದ್ರೇನು? ಸರೋಜಿ ಕೈಯ್ಯಾಗಳ ಸಾರಂದ್ರೇನು? ನೋಡು ನೀನು ಇದ್ದೀಯಾ ಯಾತುಕ್ಕೊ? ಹೆಂಗಸು ಅಂತ, ಹೋಗು ಅವಳ ಕಾಲ್‌ಕೆಳಗೆ ತೂರ್ ಬರೋಗು" ಎಂದು ಬಾಯಿ ಚಪ್ಪರಿಸಿಕೊಂಡು ಗಂಗಳದೊಳಗೆ ಹಬೆಯಾಡುತ್ತಿದ್ದ ಮುದ್ದೆಯನ್ನ ಖಾಲಿ ಮಾಡ್ತಿದ್ದ. ಅಂತ ಅಪ್ಪನ ಅದ್ವಾನದ ಬದುಕಿನೊಳಗೆ, ತಿಮ್ಮರಾಯಿ ಮತ್ತು ಅವನ ಬೆನ್ನಿಂದಲ ಹುಡುಗರಾರು ನೆಟ್ಟಗೆ ಇಸ್ಕೂಲಿಗೋಗ್‌ತ್ತಿರಲಿಲ್ಲ. ಅದೊಳಗೆ ಯಾವ ದೇವರು ಬುದ್ದಿ ಕೊಟ್ಟಿದ್‌ನೊ ಏನೊ? ತಿಮ್ಮರಾಯಿಯ ದೊಡ್ಡ ತಮ್ಮ ಗಂಗರಾಜನೆಂಬೋನು. ಮೂರೊತ್ತು ಇಸ್ಕೂಲು, ಇಸ್ಕೂಲು, ಅಂತ ಅಂಬಲಿಸುತ್ತಿದ್ದ ಹುಡುಗ. ಒಂದು ದಿನವು ತಪ್ಪಿಸಿಕೊಳ್ಳದಂಗೆ ಇಸ್ಕೂಲಿಗೋಗುತ್ತಿದ್ದ. ಅಂತ ನಿಷ್ಟೆಯೊಳಗೆ ಹೋಗುತ್ತಿದ್ದ ಗಂಗರಾಜನನ್ನ, ಅವರ ಅಪ್ಪ ಆ ಜನುಮದ ಶತ್ರುವೇನೊ? ಅನ್ನುವಂತೆ ನೋಡ್ಕೊತ್ತಿದ್ದ, ಸಂಜೆಯಾಯಿತಂದ್ರೆ ಅವನು ಜೋರಾಗಿ ಓದುವ ಶಬುದಕ್ಕೆ, "ಲೇ ತಿಮ್ಮ ಆ ಗಂಗುನ್ ಗ್ವಾಮಾಳ ಗೀಮಾಳೆ ಇಸಗಾಕಲ. ಏನು ಈ ದೊಡ್ಡ ಮನುಷ್ಯ ಓದಿ ಬೂದಿ ಉಯ್ಯಾದೇನು ಬ್ಯಾಡ? ಇವನು ಇಂಗೆ ಓದ್‌ತಾ ಕುಂತುಕಂಡ್ರೆ, ದನಾ ಕರಾ ಬದುಕು ಬೇಸಾಯ ಅಂಬೊ, ನಮ್ ವಕ್ಕಲುತನವನ್ನ ಇವನು ಉದ್ದಾರ ಮಾಡ್‌ದಂಗೆ ಕಣಲ" ಎಂದು ಬೈಯ್ಯುತ್ತಿದ್ದ ಅಪ್ಪನ ಮಾತು ನೆಚ್ಚಿಕೊಂಡ ತಿಮ್ಮರಾಯಿ ಗಂಗನ ಪುಸ್ತಕಗಳನ್ನ ಮೂರು ದಿನವಾದ್ರು ಕೈಯಿಗೆ ಸಿಗದಂಗೆ ಬಚ್ಚಿಟ್ಟು ಬಿಡುತ್ತಿದ್ದ. ಸಂಜೆ ಗಂಗ ಓದಲು ಕುಂತ್ರೆ ಅವನ ಕಣ್ಣ ಮುಂದೆ ಉರಿಯುತ್ತಿದ್ದ. ಸೀಮೆ ಎಣ್ಣೆಯ ಪುಡಿಯನ್ನ ಮಂಗ ಮಾಯ ಮಾಡ್‌ಬಿಡತ್ತಿದ್ದ. ಅಣ್ಣ ತಿಮ್ಮರಾಯಿ ಕೊಡ್‌ತ್ತಿದ್ದ ಇಂತ ಕಷ್ಟಗಳಿಗೆಲ್ಲ ಗಂಗರಾಜ ಗೋಳಾಡ್‌ತಾ ಕುಂತಾಗ, ಅವನ ಗೋಳನ್ನ ಕೇಳಿಸಿಕೊಂಡವರು ಯಾರು ಅಷ್ಟಾಗಿ ಓದಲು ಬೆಂಬಲ ಕೊಟ್ಟವರಿರಲಿಲ್ಲ. ಜೊತಿಗೆ ತಿಮ್ಮರಾಯಿಯ ಮನೆಯ ಆಳುಗಳು ಕೂಡ ಗಂಗನಿಗೆ ಓದುವ ವಿಚಾರದಲ್ಲಿ ಕಿರುಕುಳ ಕೊಡ್ತಿದ್ರು, ಆದರೆ ಅವನ ಅವ್ವ ನರಸಮ್ಮನೆಂಬ ಪುಣಾತ್‌ಗಿತ್ತಿ ಮಾತ್ರ. ಗಂಗ ಅತ್ತಾಗಲೆಲ್ಲ ಅವನ ಬೆನ್ನು ತಟ್ಟಿ ಕಣ್ಣೀರೊರಸಿ, ಪ್ರತಿ ದಿವಸ ಸಂಜೆಯ ಹೊತ್ತಿನೊಳಗೆ ಬೇರೆಯವರ ಮನೆಗಳಲ್ಲಿ ಅವನನ್ನ ಮತ್ತೆ ಅವನ ಪುಸ್ತಕಗಳನ್ನ ಬಚ್ಚಿಕ್ಕಿ ಓದಿಸುತ್ತಿದ್ಲು. ಗಂಗರಾಜ ಇಂಗೆ ಕದ್ದುಮುಚ್ಚಿ ಓದ್‌ಕೊಂಡು ಅಂಗು ಇಂಗು ಪಿ.ಯು.ಸಿಗೆ ಬಂದ್‌ಮೇಲೆ, ಅವನ ಅಮ್ಮ ಮನೇಲಿದ್ದ ರಾಗಿಯನ್ನೆ ಮೇಷ್ಟ್ರುಗಳಿಗೆ ಅಳೆದುಕೊಟ್ಟು ಟ್ಯೂಷನ್ನಿಗೆ ಕಳಿಸುತ್ತಿದ್ಲು. ಅವಳ ಸಹಾಯವನ್ನ ಪಡೆದುಕೊಂಡು ನಾನು ಓದೇ ತೀರ್‌ಬೇಕು ಒಳ್ಳೆ ಕೆಲಸಕ್ಕೆ ಸೇರ್‌ಳಬೇಕು ಎಂಬ ಅಂಬಲದಲ್ಲಿದ್ದ ಗಂಗರಾಜನಿಗೆ. ಸಿ.ವಿ.ಲ್ ಇಂಜಿನಿಯರು ಸೀಟು ಸಿಕ್ಕಿತ್ತು, ಅಂತ

ಸಾಹಸ ಪಟ್ಟುಕೊಂಡು ಓದಿರುವ ಪುಣಾತುಮ ಇವತ್ತು ಇಂಜಿನಿಯರ್ ಆಗಿ ತುಮಕೂರಿನಲ್ಲಿ ನೆಲೆ ನಿಂತವನೆ. ಆವತ್ತು ಅವನಿಗಿದ್ದ ಬುದ್ಧಿ ನನಗಿದ್ದಿದ್ರೆ ನಾನು ಓದ್‌ದ್‌ನೇನೋ?ಇವತ್ತು ನಾನೊಂದು ಗೌರ್‌ಮೆಂಟು ಕೆಲಸ ಗಿಟ್ಟಿಸಿಕೊಂಡು, ನೆರಳು ಮರೆಯಲ್ಲಿ ದಿಲ್‌ದಾರಾಗಿರುತ್ತಿದ್ದನೇನೋ? ಎಂದು ಯಾವಾಗಲು ಮೂರೊತ್ತು ಮನಸ್ಸಿನೊಳಗೆ ಮಂಡಿಗೆ ತಿನ್ನುವ ತಿಮ್ಮರಾಯಿಯ ಮೈಯ್ಯ ಮನಸ್ಸು ಬಲಿಯುವ ವೊತ್ತಿಗಾಗಲೆ. ಅಪ್ಪನ ಆಡಳಿತದಲ್ಲಿದ್ದ ಜೋಡ, ಕೊಳಗ, ಮಂಕರಿಗಟ್ಟಲೆಯಂತಿದ್ದ ಚಿನ್ನ, ಬೆಳ್ಳಿಯೆನ್ನುವ, ಸಂಪತ್ತೆಲ್ಲವು ಅವ್ವನ ಅರಿವಿಗೆ ಬರ್‌ದಂಗೆ ಅದು ಯಾವಾಗ್ಲೋ ಮಂಗ ಮಾಯವಾಗಿತ್ತು. ಆರುತಿಂಗಳು ಊರಲ್ಲಿದ್ರೆ ಇನ್ನಾರು ತಿಂಗಳು ಮಲೆನಾಡಿನಲ್ಲಿರುತ್ತಿದ್ದ ಅಪ್ಪನಿಗೆ, ಸೂಳೆಯರ ಪಾರುಪತ್ಯವು ಜಾಸ್ತಿಯಾಯಿತೆಂದು, ಅಮ್ಮ ಅದೇ ಸೂಗೂರಿನ ಚಿಕ್ಕಮ್ಮನ ಕೂಟೆ ಆಗಾಗ ಹೇಳಿಕೊಂಡು ಕಣ್ಣೀರಿಡುತ್ತಿದ್ದವಳ ಮುಂದೆ. ಅಪ್ಪನಿಗೆ ಅದೆಂತದ್ದೂ ಕಾಯಿಲೆಯಟ್ಟಿಕೊಂಡಿತ್ತು, ಅದು ಹೇಳಲು ಹೆಸರಿಲ್ಲದ ಇಂಗ್ಲೀಷ್ ಕಾಯಿಲೆಯಂತೆ ಯಾವ ಆಸ್ಪತ್ರೆ ಔಷದಿಗಳಿಗು ಜಗ್ಗದಂಗಾಗಿ, ಒಂದು ದಿನ ಕೊನೆಯುಸಿರೆಳೆದಿದ್ದ,

ತಿಮ್ಮರಾಯಿ ತನ್ನ ಬಾಲ್ಯದಲ್ಲಿ ತಮ್ಮ ಗಂಗರಾಜನ ಓದಿಗೆ, ತರಾವರಿಯ ಕಿರುಕುಳಗಳನ್ನ ನೀಡಿ ಅವನನ್ನ ಅದ್ವಾನ ಮಾಡುತ್ತಿದ್ದ ಗಳಿಗೆಗಳನ್ನ ನೆನೆಸಿಕೊಂಡು. ತಮ್ಮನಿಗೆ ನೆಟ್ಟಗೆ ಮುಖ ತೋರಿಸದಂಗಾದ,ಆದರೆ ಗಂಗರಾಜ ಶ್ರಮ ಪಟ್ಟು ಓದಿದ್ದ ಫಲಕ್ಕಾಗಿ ಮೊಟ್ಟ ಮೊದಲಿಗೆ ದಾವಣಗೆರೆಯಲ್ಲಿ ಇಂಜಿನಿಯರ್ ಕೆಲಸ ಸಿಕ್ಕಿತ್ತು. ಪುಣಾತುಮ ಒಂದಿಷ್ಟು ದೌಲು ದುರಹಂಕಾರವು ಪಡದಂಗೆ. ತಿಮ್ಮರಾಯಿಕೊಟ್ಟ ಎಲ್ಲ ಕಿರುಕುಳಗಳನ್ನ ಮರೆತುಬಿಟ್ಟಿದ್ದ . ಅವನಿಗು ಅವನ ಅಣ್ಣ ತಮ್ಮಂದಿರಿಗೆ, ನಾಕು ಜನ ತಂಗಿಯರಿಗೆಲ್ಲ ಮದುವೆ ಮಾಡಿ. ಕೊನೆಯಲ್ಲಿ ಅವನು ಮದುವೆಯಾಗಿ ಒಳ್ಳೆ ಬದುಕು ಕಟ್ಟಿಕೊಂಡ. ಆಸ್ತೀಲಿ ಮನೇಲಿ ಪಾಲಾಗುವಾಗಲು ಅಷ್ಟೆ. ಯಾವುದನ್ನು ಮುಟ್ಟದ ಗಂಗರಾಜ ಯಣ ನಾನು ಗೌರ್‌ಮೆಂಟು ಕೆಲಸದಲ್ಲಿದ್ದೀನಿ, ಎಲ್ಲಾ ಇವರೆ ಅನುಬೋಗುಸ್ ಬಿಡ್ರಣ ನನಗ್ಯಾವುದು ಬ್ಯಾಡ? ಅಂದು ಬುಟ್ಟ, ನ್ಯಾಯಸ್ತರು ಅವನ ಅಂತರಾತ್ಮದಿಂದ ಬಂದ ಆ ದಾರಾಳದ ಮಾತಿಗೆ ಆನಂದ ಪಟ್ಟುಕೊಂಡ್ರು, ನ್ಯಾಯ ತೀರ್ಮಾನವೆಲ್ಲ ಮುಗುದು ಎದ್ದು ಹೋಗುವಾಗ, ಊರಿನಲ್ಲಿ ಅತಿ ಶ್ರೀಮಂತರಾಗಿದ್ದ ಅಮೀರ್ ಸಾಬಿ ಎನ್ನುವವರು ಎದ್ದು, ಯತ್ನ ನಿಯತ್, ನನ್ನ ಬರ್‌ಕತ್ ಕಣೋ ಗಂಗ, ಅದಿಕ್ಕೆ ದೇವರು ನಿನ್ನನ್ನ ಚೆನ್ನಾಗಿಟ್ಟವನೆ ಎಂದು ಗಂಗರಾಜನ ಬೆನ್ನು ತಟ್ಟಿ ಹೋಗಿದ್ದರು. ಅಲ್ಲಿ ಕುಂತಿದ್ದವರು ಕೂಡ ಲೇ ಗಂಗಾ ನಿನ್ನಂತವರು ಈ ಪರ್‌ಪಂಚದ ಮ್ಯಾಲೆ ಹತ್ತುಕ್ಕೊಬ್ಬರು ಇರಾದಿಕ್ಕೆ ಕಣಲ. ಹೊತ್ತೊತ್ತಿಗೆ ಮಳೆ ಬೆಳೆ ಅಂಬೋದಾಗ್ ತಿರೋದು ಎಂದು ಮನಸ್ಸು ಪೂರ್ತಿಯಾಗಿ ಮಾತಾಡಿಸಿ ಹೋಗಿದ್ದರು.

ಹೀಗೀಗ ಅಂದ್ರೆ ತಿಮ್ಮರಾಯಿಯ ಬದುಕು ಬಲಿಯುತ್ತಾ, ಅವನಿಗೆ ಮಕ್ಕಳು ಮರಿಗಳಾಗಿ ಇದ್ದ ಅಣ್ಣ ತಮ್ಮಂದ್ರು ಅವರವರ ಪಾಡಿಗೆ ಅವರು ನೆಲ ಗೇಯಿದು ಉಣ್ಣುತ್ತಿದ್ರು. ಆದ್ರೆ ಬಿತ್ತಿದ್ದೆಲ್ಲ ಬಾಯಿಗೆ ಬರದಂತ ಈ ಅಬಾವದ ದಿನಗಳಲ್ಲಿ ತಿಮ್ಮರಾಯಿಯ ಬದುಕು ಏರು ಪೇರಾಗಾಕಿಡುಕೊಂತು. ಆವತ್ತು ಎಲ್ಲರಿಗು

ಸಮಪಾಲಾದ ದಿನ ತಿಮ್ಮರಾಯಿಯ ಪಾಲಿಗೆ ಎರಡು ಎಕರೆ ಅಡ್ಲು, ಮೂರು ಎಕರೆ ದಿನ್ನೆ ಇವನ ಪಾಲಿಗೆ ಬಂದಿತ್ತು, ಇರೋದ್ರಲ್ಲಿ ಪ್ರತಿ ವರ್ಷವು ತಪ್ಪದಂಗೆ ಗೇಯಿದು ಅಸನು ಮಾಡಿ ಬೆಳೆ ಇಕ್ಕೀರೆ, ಆ ಬೆಳೆ ಬರೊವೊತ್ತಿಗೆ ಈ ಗೊಬ್ಬರ, ಗೋಡು, ಆಳು ಕಾಳು, ಅಂತ ಕೈಯ್ಯಲ್ಲಿದ್ದ ಕಾಸೆಲ್ಲ ಖಾಲಿ ಆಗುತ್ತಿತ್ತೇ ವಿನಃ, ನೆಟ್ಟಗೆ ಮಳೆಉಯಿದು ಬೆಳೆ ನೋಡೋದು ಅಂದರೆ ಏಸೊ ವರ್ಷಗಳಾಗಿ, ಅವನೂರಿನ ಎಲ್ಲ ರೈತರು ಆ ಬೆಳೆ ಬರೊಹೊತ್ತಿಗೆ ಪರದಾಡ್ತಿದ್ರು, ಅಂತೆಯೆ ತಿಮ್ಮರಾಯಿಯು ಮೊನ್ನೆ ಹಿಂಗಾರು ಮಳೆ ಹೊತ್ತಿಗೆ, ಮಿಲ್ ಶೇಕರಪ್ಪನತ್ರ ಎರಡು ಕ್ವಿಂಟಾಲ್ ಬೀಜದ ಕಡ್ಲೆಕಾಯಿ ತಂದು. ಇದ್ದ ಆ ಮೂರು ಎಕರೆ ದಿನ್ನೆ ಹೊಲಕ್ಕೆ ಹಾಕ್‌ಸಿದ್ದ, ಅಂಗೆ ಬೀಜ ಬಿತ್ತನೆ ಮಾಡಿದ್ದ ಹದಿನೈದು ದಿವಸಕ್ಕೆ, ಮಳೆ ಬಂದು ಹುಟ್ಟಿದ ಕಡ್ಲೆ ಗಿಡಗಳು, ಒಳ್ಳೆ ಕಳ ಕಳನೆಂದು ಬೆಳೆದು ನಿಂತಿದ್ದವು. ಆ ಬೆಳೆ ಬಂದು ಕೈ ಸೇರಿದರೆ ಈಸಲ ಮೂವತ್ತು ಚೀಲ ಕಡ್ಲೆ ಕಾಯಿ ಗ್ಯಾರೆಂಟಿ ನೋಡ್ತೀನಿ ಎಂದು ಲೆಕ್ಕಾಚಾರವಾಕುತ್ತಿದ್ದ ಆಸೆ ಕನಸಲ್ಲಿ ಇದ್ದ ನೂರಾರು ರೈತರ ಮುಂದೆ ಮುಂಗಾರಿನಲ್ಲಿ ಒಂದನಿ ಮಳೆ ಇಲ್ಲದಂಗಾಗಿ ಮೋಡ ತೇಲಿ ತೇಲಿ ಹೋಗಾಕಿಡೀತು. ಅಂಗೆ ನಿಗಿ ನಿಗಿಯೆನ್ನುತ್ತಿದ್ದ ಗಿಡಗಳೆಲ್ಲ ತಲೆ ಜೋಲಿಕ್ಕತೊಡಗಿದವು. ಮನೇಲಿ ನೋಡೀರೆ ಗಂಡುಮೊಗ ಬೇಕು, ಗಂಡುಮೊಗ ಬೇಕು ಅಂತ ಹಂಬಲಿಸಿ ಹಡೆದ ಹೆಂಡತಿಗೆ, ಒಂದರಿಂದ ಒಂದು ಮೂರುಹೆಣ್ಣು ಮಕ್ಕಳಾಗಿದ್ದವು, ಅಂತ ಹೆಣ್ಣು ಮಕ್ಕಳು ವರುಷಕ್ಕೊಂದೊಂದರಂತೆ ಹೆಣ್ಣಾಗ್‌ನಿಂತುಬುಟ್ಟುವು. ಇನ್ನು ಮನೇಲಿ ಎಲ್ಲರನ್ನು ಸಾಲಾಗಿಟ್ಟುಕೊಂಡ್ರೆ ಅವರನ್ನೆಲ್ಲ ಒಂದೊಂದು ದಾರಿ ಮಾಡಾದು ಯಾವಾಗೆಂದು ಅವನ ಹೆಣುತಿಯ ಅಣ್ಣನ ಮಗನಿಗೆ ಹಿರೇ ಮಗಳನ್ನ ಕೊಟ್ಟು ಲಗ್ನ ಮಾಡಿ ಈಗಿನ್ನ ಆರು ತಿಂಗಳಾಗಿತ್ತು, ಅದು ಊರ್‌ನವರೆಲ್ಲ ಸೈ ಎಂದ ಮದುವೆ ಅಂತ ಮದುವೆಯ ಸಾಲವಿನ್ನ ತೀರಿರ್‌ಲಿಲ್ಲ, ಇನ್ನು ನಡುಮದ್ಯದ ಹೆಣ್ಣು ಮಗಳು ಕಮಲ ಎಂಬುವವಳು ಪಿ.ಯು.ಸಿವರಗು ಚೆನ್ನಾಗಿ ಓದುತ್ತಿರುವ ಹುಡುಗಿ. ಅವಳನ್ನ ಎಂಗಾದ್ರು ಮಾಡಿ ಓದುಸ್‌ಬೇಕೆಂಬ ಹಂಬಲ ಗಂಡ ಹೆಣುತಿ ಗಿಬ್ಬರಿಗು ಇತ್ತು. ಇನ್ನು ಸಣ್ಣ ಹುಡುಗಿ ಈಗಿನ್ನ ನಾಕನೆ ತರಗತಿಗೆ ಇದ್ದೂರಿನ ಇಸ್ಕೂಲಿಗೊಗುತ್ತಿದ್ದು. ತಿಮ್ಮರಾಯಿಯ ಹೆಣುತಿ ಯಾವತ್ತು ಎಂದು ಬೇರೆಯವರ ಹೊಲಗಳಿಗೆ, ಕೆಲಸ ಕೂಲಿ ಅನುತ ಹೋದವಳೆ ಅಲ್ಲ. ಮನೇಲಿ ಕರಾವಿಗಂತ ಕಟ್ಟಿಕೊಂಡಿರುವ ಮೂರು ಎಮ್ಮೆಗಳು. ಒಂದು ಹಸುವಿನ ಕರ, ಅವುಗಳನ್ನೆ ಓಡಾಡಿಸಿ ಮೇಯಿಸಿಕೊಂಡು ಬಂದು. ಹೊತ್ತೊತ್ತಿಗೆ ಹಿಟ್ಟು ಸೊಪ್ಪು, ಕಸ ಮುಸುರೆ, ಅನುಕೊಂಡು ಇದ್ದವಳಿಗೆ ಯಾಕೊ ಈ ವಾರ್‌ದಿಂದ ಬಿಟ್ಟು ಬಿಟ್ಟು ಜ್ವರ ಬರಲಾರಂಬಿಸಿತ್ತು. ಈಗಾಗ್ಗೆ ತಿಮ್ಮರಾಯ ಹೆಂಡತಿಯನ್ನ, ಎರಡು ಸಲ ಆಸ್‌ಪತ್ರೆಗೆ ಕರ್‌ಕೊಂಡೋಗಿ ತೋರಿಸಿಕೊಂಡು ಬಂದಿದ್ದ. ಆ ಡಾಕ್ಟ್ರು ನೋಡಪ್ಪ ನಿಮ್ಮೆಂಗಸರಿಗೆ ಬ್ಲಡ್ ಕಡಿಮೆ ಐತೆ, ನಾಳೆ ನಾಡಿದ್ದರಲ್ಲಿ ಬಂದು ರಕ್ತ ಪರೀಕ್ಷೆ ಮಾಡಿಸು. ಜೊತೆಗೆ ಆಯಮ್ಮನಿಗೆ ಸ್ವಲ್ಪ ರೆಷ್ಟು ಕೊಡ್‌ಬೇಕಯ್ಯ, ಅನುತ ಹೇಳಿ ಕಳಿಸಿದ್ರು, ಬೇಸಾಯದ ಜೊತೇಲಿ ನೆಚ್ಚಿಕೊಂಡಿದ್ದ ಮೂಗು ಜೀವದನಗಳನ್ನ ಮೇಯಿಸು ತಿಕ್ಕುತೊಳೆ ಹುಲ್ಲು ಸೊಪ್ಪು, ಅನ್ನುವಂತ ಕೆಲಸಗಳೆಲ್ಲ ತಿಮ್ಮರಾಯಿಯ ಎದೆ ಮೇಲೆ ಬಿದ್ದವು, ಇವು ಇಂಗೆ ಬಂದ್ರೆ ಒಂದ್ರಿಂದೆ ಒಂದು ನಿರುವಾಕಿಲ್ಲದಂಗೆ ಬರ್‌ತ್ತಾನೆ ಇರ್‌ತ್ತಾವೆ ಕೈಯ್ಯಿಗೆ ಬಂದದ್ದು ಬಾಯಿಗೆ

ಬರದಂಗಾತಲ್ಲೊ ಪುಟ್ಲಿಂಗ, ಅನುತ ತಿಮ್ಮರಾಯಿ ತಲೆ ಜೋಲಿಕ್ಕಿದ್ದ ಕಡ್ಲೆ ಗಿಡಗಳನ್ನ ನೋಡುತ್ತ ಪಕ್ಕದೊಲದ ಪುಟ್‌ಲಿಂಗನತ್ರ ಹೇಳ್ಕೊಂಡಾಗ್ಲೆಲ್ಲ, ಯಣ ನಿಮ್ಮ ಗಿಡಗಳಿಗೆ ಈವಾರ್‌ದಲ್ಲಿ ಮಳೆ ಬಂದ್ರು ಜೀವ ಉಳಿತಾವ್ ಕಣಪ್ಪ. ನನ್ ಗಿಡುಗಳನ್ನ ನೋಡಣ ಸೀದೇ ಹೋದ್‌ವಲ್ಲಣ? ಎಂದು ಸಮ ದುಖಿಗಳು ಮೇಯ್‌ಬೇಕಾಗಿರೋ ಜೀವದನಗಳನ್ನ, ಬಟಾಬಯಲಿಗೆ ಹೊಡಕೊಂಡೋಗಿ ನೆಟ್ಟಗೆ ನಿಗಾ ಮಾಡಿನೋಡ್‌ತ ಕುಂಡ್ರೆ ಎಂತೋರಿಗು ಹೊಟ್ಟೆ ಬಗ್ ಎಂದು ಉರಿಯುವಂತ ಸಂಕಟ ಪಡ್‌ತ್ತಿರುವಾಗ, ತಿಮ್ಮರಾಯಿಯ ತಾಲೋಕನ್ನ ಕೃಷಿಸಚಿವರು ಬರ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿಬಿಟ್ಟರು. ರೈತರಿಗೆ ಬೆಳೆ ಪರಿಹಾರ ನೀಡುವುದಾಗಿ ಸರ್ಕಾರ ಪ್ರಕಟಿಸಿದ ಕೂಡ್ಲೆ. ಆ ಪರಿಹಾರಕ್ಕಾಗಿ ಬೇಕಾಗಿರುವ ಪಹಣಿಗಳನ್ನ ತೆಗಳುವ ಸಲುವಾಗಿ, ಮನೆಯ ದನಕರ ಕೆಲಸ ಕಾರ್ಯಗಳನ್ನೆಲ್ಲ ಬಿಟ್ಟು ಆಯಾಯ ನಾಡ ಕಚೇರಿಗೆ ಇದ್ ಬದ್ ರೈತರೆಲ್ಲ ಮುತ್ತಿಗೆ ಹಾಕಿದ್ರು, ತಿಮ್ಮರಾಯಿಯು ಕೂಡ ಅವನ ಊರಿಗೆ ಸಂಬಂದಪಟ್ಟ ನಾಡ ಕಚೇರಿಗೆ ಈಗ್ಗೆ ಐದಾರು ದಿನದಿಂದ ಅಲೆಯಾಕಿಡುಕೊಂಡಿದ್ದ. ಅಲ್ಲಿದ್ದ ಪಿ.ಡಿ ಓ.ಗಳು ಅದೇನೊ ನೆಟ್ಟೆ ಸರಿಯಿಲ್ಲ, ನೆಟ್ಟೆ ಸರಿಯಿಲ್ಲ, ನೆಟ್ಟು ವರ್ಕೆ ಆಗುತ್ತಿಲ್ಲ ಅಂತ ಹೇಳಿ ಹೇಳಿ ಬಂದ ಜನಗಳನ್ನ ವಾಪಸ್ಸು ಕಳಸ್‌ದ್ರು. ಇದರ ಸಲುವಾಗಿ ತಾಸಿಲ್‌ದಾರರಿಗೆ, ಉಪತಾಸಿಲ್‌ದಾರರಿಗೆ, ಜೂನಿಯರ್ ಇಂಜಿನಿಯರ್ ಸುಂದರ ಮೂರ್ತಿಗೆ, ಇದ್ ಬದ್‌ರೆಲ್ಲ ಅಂದ್ರೆ ಇಸ್ಕೂಲು ಹುಡುಗುರು, ಕುಂಟು ಕುರುಡು, ಗಂಡ್‌ಸತ್ತವರು, ತಿಮ್ಮರಾಯಿಯ ವಾರಿಗೆ ರೈತ್ರು ಕಂಪ್ಲೇಂಡು ಕೊಟ್ಟು ಕಾಯ್ತಿದ್ರು. ನೋಡಿ ನೋಡಿ ಸಾಕಾಗಿ ಇಲ್ಲೆ ಕಾಯ್‌ದ್ರೆ ಕೆಲಸ ಕೆಡಸ್‌ಕಂಡಂಗೆ ಅಂತೇಳಿ, ನೆನ್ನೆ ಮನ್ನೆಯಿಂದ ಆಫೀಸಿಗೆ ಬಂದು ಬಂದು, ಹಳ್ಳಿ ಹಳ್ಳಿಯ ರೈತರೆಲ್ಲ ಪರ್‌ದಾಡಂಗಾಗಿತ್ತು. ಈ ಪಹಣಿ ತಕಳಾಕ್ ಬಂದು ಕ್ಯೂ ನಿಂತ ರೈತ್ರ ಮದ್ಯೆ, ಕಾಯ್ತಾ ನಿಂತಿದ್ದ ತಿಮ್ಮರಾಯಿಯ ತಲೆ ಕಣ್ಣುಗಳೆಲ್ಲ ಇವತ್ತು ನೋಯುವಂತ ನಿಗಿ ನಿಗಿ ಬಿದ್ದೊಳಗೆ ನಿಂತು ನಿಂತು ಅವನ ಕಾಲುಗಳು ಕಳಿ ಕಳಿಯೆಂದು ಕೀಳಂಗಾಗಿದ್‌ವು. ಇಂತ ತಾಲ್ಲೋಕಾಪೀಸಿಗೆ ಬಂದುನಿಂತು ತಿಮ್ಮರಾಯಿಯ ಪಾಣಿಯೆನ್ನೋದು ಹೊತ್ತಿಗೆ ಸರಿಯಾಗಿ ಸಿಕ್ತಲ್ಲ. ಅದ್ಯಾಕೆಂದ್ರೆ ಈ ನಾಡ್ ಕಚೇರಿಯೊಳಗೆ ಇಂಗೆ ಬಂದು ನಿಂತಿರೋ ರೈತರ ಪೈಕಿ. ಒಬ್ಬೊಬ್ಬನಿಗೆ ನಾಕು ಐದು ಪಾಣಿ ತಕ್ಕೊಡುತ್ತಿರೋದ್ರಿಂದ. ಇನ್ನು ನಿಂತಿರುವವರೆಲ್ಲ ನಿಂತೆ ಇರಬೇಕಾದ ಗಳಿಗೆಯಾಗಿ, ತಿಮ್ಮರಾಯಿಯನ್ನ ನೆಚ್ಚಿಕೊಂಡಿರುವ ಮೂಗು ಜೀವದನಗಳು, ಮೇವು ನೀರಿಲ್ಲದೆ ಕಣ್ಣು ಬಿಡುತ್ತಾನೆಂಬ ಒಂದು ಚಿಂತೆಯಾದರೆ. ಈ ವಾರದಿಂದ ಬಿಟ್ಟು ಬಿಟ್ಟು ಬರುತ್ತಿರುವ ಜ್ವರದ ಹೆಂಡತಿ. ಮಾತ್ರೆಗಳನ್ನ ನುಂಗಿ ನುಂಗಿ ಮಲಗುತ್ತಿರುವುದು ಕೂಡ ಅವನಿಗೆ ದೊಡ್ಡ ತಲೆನೋವಾಗಿ ಕಾಡುತ್ತಿತ್ತು, ನೆನ್ನೆಗಿಂತ ಇವತ್ತು ಬೇಗನೆ ಬಂದು ತಾಲ್ಲೋಕಾಫೀಸೀನ ಮುಂದೆ ಕಾಯಬೇಕೆಂದುಕೊಂಡವನ ಕಣ್ಣ ಮುಂದಾಗಲೆ, ನೂರಾರು ಜನ ಸರತಿ ಸಾಲಲ್ಲಿ ನಿಂತು ಕಾಯುತ್ತಿದ್ದರು. ಹೊತ್ತು ಏರ್‌ತಾ ಏರ್‌ತ ಬಲಿಯುತ್ತಿದ್ದ, ಸೂರ್ಯಪರಮಾತುಮನೆಂಬೋನ ಬಾಯೊಳಗಿನ ಕಾವು ಜಾಸ್ತಿಯಾಗಿ. ಯಾರೊ ಒಬ್ಬ ಪುಣಾತುಮ ಲೇ ನನ್ ಚಪ್ಲಿ ಇಲ್ಲೆ ಇರಲಿ ಕಣ್ರಲ. ನಿಂತು ನಿಂತು ಸಾಕಾಗೈತೆ ಕಣ್ರೊ ಇನ್ನುಮುಂದೆ ನಿಂತ್ ಕಣಾಕ್ ನನ್ ಕೈಲಾಗತಿಲ್ಲ, ಅಂತೇಳಿ

ಅವನ ಕಾಲಲ್ಲಿದ್ದ ಚಪ್ಪಲಿಯನ್ನ ಸರತಿ ಸಾಲಲ್ಲಿ ಬಿಟ್ಟು. ಪಕ್ಕದಲ್ಲಿದ್ದ ಶಟರ್ ಒಳಕ್ಕೋಗಿ ಕುಂತು ಬುಟ್ಟ. ಇದನ್ನೆ ನೋಡುತ್ತಿದ್ದವರೆಲ್ಲ ಒಬ್ಬರನ್ನ ನೋಡಿ ಒಬ್ಬರು, ಅಲ್ಲೆ ಸಾಲಾಗಿ ಚಪ್ಪಲಿಯನ್ನ ನಿಲ್ಲಿಸಿ ನೆರಳನ್ನಾಶ್ರಯಿಸಿಕೊಂಡೋಗಿ ಕುಂತು ಬಿಟ್ಟರು. ನರಮನುಷರ ಪಾದಗಳನ್ನ ನಂಬಿಕೊಂಡು ಕಚ್ಚಿಕೊಂಡಿದ್ದ ಚಪ್ಪಲಿಗಳೆಲ್ಲ. ಹಣ್ಣು ಬಿಡಿಸಿದ ಸಿಪ್ಪೆಗಳಂತೆ ತರಾವರಿಯ ಬಣ್ಣಗಳಾಗಿ ಮೈ ಕುಗ್ಗಿಸಿ ಮಲಗಿಕೊಂಡವು. ಅವು ಸಣ್ಣ ಸೈಜಿನವು, ದೊಡ್ಡಸೈಜಿನವು, ಬೆಲ್ಲು ಚಪ್ಪಲಿ, ಉಮ್ಮುಟದ ಚಪ್ಪಲಿ, ಹಳೆಯ ಚಪ್ಪಲಿ, ಹೊಸ ಚಪ್ಪಲಿ, ಇಂತ ತರ ತರದ ಚಪ್ಪಲಿಗಳ ಸಾಲನ್ನೆಲ್ಲ ದಿಟ್ಟಿಸಿ ನೋಡುತ್ತಿದ್ದ. ತಿಮ್ಮರಾಯನ ಮುಂದೆ ಯಾರೊ ಒಬ್ಬ ರೈತ, ಇದ್ಯಾತುರ್ ಕಾನೂನೊ? ಇದ್ಯಾತ ಪಾಣಿನೊ ಕಣ್ರೆ? ನೆಟ್ಟಗೆ ಹಿಟ್ಟು ನೀರಿಲ್ಲದಂಗೆ ಈಗ್ ನಾಕ್ ದಿವಸ್‌ದಿಂದ ಅಲೀತಿದ್ದೀವಿ. ಅಂದವನ ಮಾತಿಗೆ, ಯಪ ನೀನು ನಾಕ್ ದಿವಸ್‌ದಿಂದ ಅಂದ್ರೆ, ನಾವು ಈ ವಾರ್‌ದಿಂದ ನಮ್ಮ ಕಲ್ಲೂರಿನ ಹೋಬಳಿಯೊಳಗೆ, ಅಲದು ಅಲದು ಸಾಕಾಗಿ ಇಲ್ಲಿಗ್ ಬಂದಿದ್ದೀವ್ ಕಣಿ, ಅಲ್ಲಿ ನಾಡ್‌ಕಚೇರಿಗೆ ಹೋದಾಗ್‌ಲೆಲ್ಲ ನೆಟ್ ಸರಿಯಿಲ್ಲ. ಅದೆಂತಾದ್ದೂ ನೆಟ್ ಸರಿಯಿಲ್ಲ ಅಂತ, ಹೋದಾಗ್‌ಲೆಲ್ಲ ಹೇಳೇಳಿ ಕಳಸ್‌ಬುಟ್ಟು ಕಥೆ ಎಂದ ತಿಮ್ಮರಾಯಿಯ ಊರಿನವರ ಮಾತಿಗೆ, ಊ ಈ ಭೂಮಿ ಮ್ಯಾಲೆ ಜೀವವಿರುವ ಏಸೋ ಜನುಕ್ಕೆ ನೆಟ್ಟೆ (ಪ್ರಜ್ಞೆ) ಇರಲ್ಲ. ಇನ್ನು ಆ ಜೀವ ಇಲ್ಲದಿರೊ ಮಿಷನ್ನುಗಳಿಗೆ ಎಲ್ ನೆಟ್ಟಿರುತ್ತೈತ್ರಿ? ಎಂದ ಮೂಗನಳ್ಳಿ ರೈತ ಮಾಲಿಂಗನೆಂಬೋನ ಮಾತಿಗೆ, ಅಲ್ಲಿದ್ದವರೆಲ್ಲ ಗೊಳ್ಳಂತ ನಕ್ಕು ಬುಟ್ರು, ಆ ನಗುವಿನ ಕುಲುಕಾಟಗಳು ನೆಟ್ಟಗೆ ನಿಲ್ಲುವ ಮುಂಚೆಯೆ, ಊನ್ರಿ ಈ ನಾಕೈದು ದಿವಸದ ಮುಂಚೆ ಇದೇ ಪಂಚಾಯಿತಿಯೊಳಗೆ ಎಲ್ಲ ಅಧಿಕಾರಿಗಳನ್ನು ಮೀಟಿಂಗ್ ಕರೆಸಿ, ಇದೇ ತಾಸಿಲ್ದಾರು ಮರಿತಿಮ್ಮೆಗೌಡ್ರು, ಈ ತಿಂಗಳೊಳಗೆ ಬೆಳೆ ನಷ್ಟದ ವರದಿಗಳನ್ನ ತಯಾರು ಮಾಡ್‌ಕಳಿ. ಅಂತ ಟೈಮೊಳಗೆ ರೈತರು ಏನೇನು ಕೊಡಬೇಕು. ನೀವು ಏನೇನ್ ಮಾಡ್‌ಬೇಕು ಅಂತ ಹೇಳುವಾಗ, ರೈತರ ಈ ಬೆಳೆ ನಷ್ಟದ ಪರಿಹಾರಕ್ಕಾಗಿ, ಪಹಣಿ ಬೇಕೆ ಬೇಕು ಅಂತೇನು ಒತ್ತಾಯ ಮಾಡ್ ಬ್ಯಾಡಿ? ಅಂತ ಎಪ್ಪತ್ತಾರುಸಲ ಹೇಳವರೆ ಕಥೆ, ಅವರು ಅಷ್ಟುಸಲ ಹೇಳಿದ್ರು ಈ ನನಮಕ್ಕಳು ಕೇಳ್‌ತಾನೆ ಇಲ್ಲ? ನೋಡುಬನ್ನಿ ಬೆಳೆ ನಷ್ಟದ ಪರಿಹಾರಕ್ಕೆ ಪಹಣಿ ಅವಶ್ಯಕತೆಯಿಲ್ಲ ಅಂತ. ತಾಸಿಲ್ದಾರೆ ಆದೇಶ ಹೊರಡಿಸಿ ಆ ಪಕ್ಕದ ಗೋಡೆಗೆ ಅಂಟೆಸವರೆ ಕಿಣಿ, ಅಂಗಾದ್ರು ಈ ಬಿಲ್ ಕಲೆಕ್ಟುಗಳು ಈ ಪಿ.ಡಿ.ಓ ಗಳು ಪಾಣಿಗಳನ್ನ ತಂದುಕೊಟ್ರೆ ಮಾತ್ರವೆ ಪರಿಹಾರ ಕೊಡೋದು ಅಂತ ಪಟ್ಟಿಡದವರೆ. ಈ ನನಮಕ್ಕಳನ್ನ ಹೇಳೋವರಿಲ್ಲ ಕೇಳೋವರಿಲ್ಲ? ಅಂಗಾದ್ರೆ ತಾಸಿಲ್‌ದಾರು ಮಾತಿಗೆ ಬೆಲೆನೆ ಇಲ್ಲ ಅಂದು ಮ್ಯಾಲೆ ಇವರೆಲ್ಲ ಇನ್ನಾರು ಮಾತು ಕೇಳ್ತಾರಿ? ಅಂತ ಅಲ್ಲಿದ್ದವರಿಬ್ಬರು ದನಿ ಗೂಡಿಸಿದ ಮಾತಿಗೆ, ಅದಿಕ್ಕೆ ಕಣಪ್ಪೋ ನಾನಾಗ್ಲೆ ಹೇಳಿದ್ದು ಜನಗುಳಿಗೆ ಸರಿಯಾದ್ ನೆಟ್ಟಿಲ್ಲ. ಇನ್ನು ಮಿಷನ್ನುಗಳಿಗೆ ಎಲ್ಲಿ ನೆಟ್ಟಿರುತ್ತೈತೆ? ಎಂದು ಇನ್ನೊಂದು ಸಲ ಅದೇ ಮಾತನ್ನ ಕೇಳಿಸಿ ಕೊಳ್ಳುತ್ತಿದ್ದ. ತಿಮ್ಮರಾಯಿಯ ಸರದಿ ಬಂತೆಂದು ದಡನೆ ದಡನೆ ಓಡೋಗಿ ತನ್ನ ಚಪ್ಪಲಿ ಮೆಟ್ಟಿಕೊಂಡು ಹೋದವನು. ಅವನ ಮೂರು ಪಾಣಿಗಳನ್ನು ತಗಂಡು ಈಚೆ ಬಂದು ನಿರಾಳವಾದ.

ಎಂಗೊ ಈ ಪಾಣಿಗಳಿಗಾಗಿ ಈಸ್ ದಿನ ಒದ್ದಾಡಿದ್ದಾಯಿತು, ಅಲ್ಲಿ ಮನೇಲಿ ಮೇವು ನೀರಿಲ್ಲದ ಜೀವದನಗಳು ಏನಾದವೊ? ಏನೊ? ಎಂಗೊ ರಾತ್ರಿಯಿಂದ ಅಂಗು ಇಂಗು ಎದ್ದು ಓಡಾಡುತ್ತಿದ್ದ ಹೆಂಡತಿಯ ಮೈಮ್ಯಾಲೆ, ಜ್ವರ ಇದಾವೊ? ಬಿಟ್ಟಾವೊ? ಎನ್ನುವ ಗೆಪುತಿಯೊಳಗೆ ಮನೆ ಬಾಗಿಲಿಗೆ ಹೋದ ತಿಮ್ಮರಾಯಿಯ ಮುಂದೆ ಬಸಬಸನೆ ಉಸಿರುಕಕ್ಕುತ್ತಿದ್ದ ಜೀವದನಗಳು ಒದ್ದಾಡುತ್ತಿದ್ದವು. ಮನೆಯಲ್ಲಿನ ಕದ ಮುಚ್ಚಿದ್ದು ಮುಚ್ಚೇ ಇತ್ತು. ಅಲ್ಲೆ ಪಕ್ಕದ ಬಣವೆಯಲ್ಲಿದ್ದ ಒಂದಿಷ್ಟು ಒಣ ಮೇವುನ್ನ ಇರಿದು ದನಗಳ ಮುಂದೆ ಹರಡಿದ. ಹಟ್ಟಿ ಬಯಲಿಗಂಟಿಕೊಂಡಿದ್ದ ತೊಟ್ಟಿಯೊಳಗಿನ ನೀರನ್ನ ತುಂಬಿ ತುಂಬಿ ದನಗಳಿಗೆ ಕುಡಿಸಿದ, ಮುಚ್ಚಿದ್ದ ಕದವನ್ನ ಹಿಂದೆ ಸರಿಸಿಕೊಂಡು ಒಳಕ್ಕೊಗಿ ಗಮನಿಸಿದ ಗೌರಮ್ಮನ ಮೈಮ್ಯಾಲಿನ ಕಾವು ಜಾಸ್ತಿಯಾಗಿತ್ತು, ಹರ ಶಿವ ಎನ್ನದೆ ಮಲಗಿದ್ದವಳನ್ನ ಹಣೆ ಕತ್ತಿನ ಬಾಗಕ್ಕೆ ಕೈಯಿಟ್ಟು ನೋಡಿ ಗಾಬರಿಗೊಂಡ. ಲೇ ಇವಳೆ, ಲೇ ಇವಳೆ, ಎಂದು ಅವಳ ಮೈ ಮ್ಯಾಲೆ ಕೈ ಇಟ್ಟು ಉರುಳಿಸಿ ನೋಡಿ ಗೌರಿ ಗೌರಿ ಅಂತ ಮಾತಾಡಿಸಿ ನೋಡ್ದ. ಅವಳು ಕಮಕ್ ಕಿಮಕ್ ಎನಲಿಲ್ಲ ಅವನಿಗು ಕೈಕಾಲು ಆಡದಂತ ಗಾಬರಿಯಾಯಿತು, ಹೊರಗಡೆ ಓಡಿಬಂದವನು ಪಕ್ಕದ ಮನೆಯವರತ್ತಿರ ಯಕ ಯಾಕೊ ನಮ್ಮ ಗೌರಿ ಬಿದ್ದ ಕಂಡ್ ಮಕನಾಗೆ ಬಿದ್ದವಳೆ ಕಣಕ್ಕ ಎಷ್ಟು ಕೂಗೀರು ಮಾತಾಡ್‌ತಿಲ್ಲಕ್ಕ ನನಗ್ಯಾಕೊ ಎದೆ ತುಂಬ ಎದಾರ್ ಸುತ್ತುಕಂಡೈತೆ ಅಂದವನ ಬೆನ್ನಿಂದೆಯೇ ಆ ಕೇರಿಯ ಹೆಂಗಸರು ಸರ ಸರನೆ ಒಳಕ್ಕೋದರು. ಮೂರು ನಾಕು ಜನ ಕೂಗಿ ನೋಡಿದರು ಗೌರಿ ಕದಲಲಿಲ್ಲ, ಊನಲ ತಿಮ್ಮಯ್ಯ ಗೌರಮ್ಮನಿಗೆ ಬಾಯಿ ಮಾತೆ ಇಲ್ಲದಂಗಾಗ್ಯೆತೆ. ಎಂಗಾದ್ರು ಸರಿ ಈಗ್ಲೆ ಅರ್ಜಂಟಾಗಿ ಆಸ್ಪತ್ರೆಗೆ ಎತ್ತಲ ಎಂದವರ ಮಾತಿಗೆ ಒಂದು ನಿಮಿಷ ಏನೂ ತೋಚದಂಗೆ ಕುಂತೆ ಬುಟ್ಟ. ಅಷ್ಟರಲ್ಲಾಗಲೆ ಊರೊಳಗೆ ಡಿಗ್ರಿ ಓದಿದ್ದ ಉಮೇಶನೆನ್ನುವ ಹುಡುಗ ಆಂಬುಲೆನ್ಸ ಒಂದಕ್ಕೆ ಸೋನುಮಾಡಿದ್ದ.

ಮನೆಯ ಮುಂದೆ ಬಂದು ನಿಂತ ಆಂಬುಲೆನ್ಸಿನೊಳಕ್ಕೆ ಒಂದೈದಾರು ಹೆಂಗಸರು ಸೇರಿ ಗೌರಮ್ಮನನ್ನ ಎತ್ತಿ ಮಲಗಸೀರು. ಆ ಆಂಬುಲೆನ್ಸು ಇಡೀ ಊರಿನ ಶಬುದವನ್ನ ಕೊಯ್ಯುವಂತೆ. ಕುಡೊ ಕುಯೊನೆಂದು ಕೂಗಾಡಿಕೊಂಡು ಹೋದ ಬೆನ್ನನ್ನು ಜನ ದಿಟ್ಟಿಸುತ್ತಲೆ ಇದ್ದರು. ಈವಯ್ಯ ಈಸು ದಿನ ಪಾಣಿ ಪಾಣಿ ಅಂತ ಒದ್ದಾಡುತ್ತಿದ್ದ. ಆವಮ್ಮ ಜ್ವರ ಜ್ವರ ಅಂತ ಮಲಿಕ್ಕಂಡೆ ಬುಟ್ಟು. ಅದೇನಾಯಿತೊ? ಏನೊ? ಈಗ್ ನೋಡೀರೆ ಗೌರಮ್ಮನಿಗೆ ಬಾಯಿಮಾತೆ ಇಲ್ಲ ಎಂದ. ಎದರು ಮನೆಯ ಸಣ್ಣಿಂಗನ ಹೆಂಡತಿಯ ಮಾತುಗಳನ್ನ ಕೇರಿಯೊಳಗಿನ ಕಿವಿಗಳೆಲ್ಲ ಕೇಳಿಸಿ ಕೊಳ್ಳುತ್ತಿದ್ದವು.

# ಒಂದು ಬಾಗಿಲು ಮತ್ತು ಮೂರೂ ಚಿಲ್ಲರೆ ವರ್ಷಗಳು

**- ಶಾಂತಿ ಕೆ. ಅಪ್ಪಣ್ಣ**

ತೆಯ್ಯು ತಾಹಿ, ನಾನು ಹೊರಗೆ ವರಾಂಡದಲ್ಲಿ ಕುಳಿತಿದ್ದಾಗ ಒಳಗೆ ಅವಳ ಕಾಲ್ಗೆಜ್ಜೆ ಸದ್ದು, ಮಕ್ಕಳಿಗೆ ನೃತ್ಯ ಕಲಿಸುತ್ತಿದ್ದ ಅವಳ ತಾಳಬದ್ಧ ದನಿ, ಕಿವಿಯನ್ನು ತಾಕುತ್ತಿತ್ತು. ಮುಚ್ಚಿದ್ದ ಬಾಗಿಲಿಗೆ ಅಂಟಿಸಿದ್ದ ಅವಳದೇ ಚಿತ್ರ ಎಷ್ಟು ಭಾವುಕ ಭಂಗಿ, ಒಂದು ಕೈ ಮೇಲೆತ್ತಿ ಗಗನಕ್ಕೆ ಚಾಚಿ, ಏನನ್ನೋ ಕೇಳುತ್ತಿದೆ, ಹೇಳುತ್ತಿದೆ, ಮತ್ತೊಂದು ಕೈ ಅದಕೆ ತುಸು ಕೆಳಗೆ ಅದೇ ಆಸೆಗೆ ಒತ್ತಾಸೆಯಾಗಿ ನಿಂತ ಹಾಗೆ ಇದೆ. ಕಾಲೊಂದನು ಮಡಿಚಿ ಭಾವಕ್ಕೆ ತೀವ್ರತೆ ತುಂಬಿದೆ, ಮತ್ತೊಂದು ಕಾಲು ತೀರ ಹೆಬ್ಬೆರಳಿನಾಸರೆಯಲ್ಲಿಯೇ ನಿಂತು ಇಡೀ ಸನ್ನಿವೇಶಕ್ಕೊಂದು ವೇಗ ತಂದಿದೆ. ಅವಳ ಕಣ್ಣುಗಳು ಮುಗಿಲತ್ತ ನೆಟ್ಟು ಏನನ್ನೋ ಧೇನಿಸುತ್ತಿರುವಂತೆ ಕಾಣುತ್ತಿದೆ. ಅವಳನ್ನು ಹಾಗೆ ನೋಡುವಾಗ ಅವಳು ತನ್ನ ಹೃದಯದೊಳಗೆ ಕಡಲೊಂದನ್ನೇ ಹುಗಿತಿಟ್ಟುಕೊಂಡಿದ್ದಾಳೋ ಎಂದೆನಿಸುತ್ತದೆ. ಆಗಸದ ನೀಲಿ ಕರಗಿ ಅವಳ ಕೈಯೊಳಗೆ ಇಳಿದು ಬಿಡುವುದೋ ಎಂದೆನಿಸುತ್ತದೆ. ಕಾಲಡಿಯ ಮಣ್ಣು ಕೊನರಿ ಹೂವಾಗಿಬಿಡುವುದೋ ಎಂದೆನಿಸುತ್ತದೆ, ಅವಳ ಸೊಂಟದ ತಿರುವಿನಲಿ, ಎದೆಯ ಏರಿಳಿತದಲ್ಲಿ ಬೀಸುಗಾಳಿ ಕೂಡ ತುಸು ನಿಧಾನಿಸಿ ತಂಗಿ ಹೋಗುವುದೋ ಎಂದೆನಿಸುತ್ತದೆ..

ಅನಿಸುತ್ತದೆ ಅಷ್ಟೇ!

ನಿಜದಲ್ಲಿ ಅವಳನ್ನು ಬೆಂಕಿಯ ಕೆನ್ನಾಲಗೆಗಳು ನೆಕ್ಕಿ ಹೋಗುತ್ತಿದ್ದವು. ಹೆಜ್ಜೆಯೂರಿದಲೆಲ್ಲಾ ಕೂರಂಬುಗಳು ಮೊಳೆತು ಅವಳ ಕಾಲಿನ ರಕ್ತದಲ್ಲಿ ಮೀಯುತ್ತಿದ್ದವು. ಅವಳು ತೀರದ ದಾಹವೊಂದನು ಗಂಟಲಿನಲ್ಲಿ ಸಿಲುಕಿಸಿಕೊಂಡು ಅನುಕ್ಷಣವೂ ಅದರೊಂದಿಗೆ ಹೋರಾಡುತ್ತಿದ್ದಳು. ಹಗಲಿರುಳೆನ್ನದೆ ನಿತ್ಯವೂ ನೆತ್ತಿ ತೋಯಿಸುವ ಬಿಸಿಲಿನ ಝಳದಲ್ಲಿ ಆಕ್ಷೇಪವನೇ ಎತ್ತದೆ ನಿಂತ ಹೂವಾಗಿದ್ದಳು ಅವಳು.

ಅವಳು ಅಭಿರಾಮಿ, ಅವಳು ಅರವಾಣಿ.

ಬಹುಶಃ ಈಗ ಬಾಗಿಲಿಗೆ ಅಂಟಿಸಿರುವ ಚಿತ್ರ ಇತ್ತೀಚಿನದಿರಬೇಕು, ಹೆಚ್ಚೇನೂ ಬದಲಾಗಿಲ್ಲ, ಹಾಗೆಲ್ಲ ಕಾಲದ ಧಾಳಿಗೆ ಸುಲಭದಲಿ ಶರಣಾಗುವ ನಾಜೂಕಿನ ಚೆಲುವಲ್ಲ ಅವಳದ್ದು.ಸರಿದು ಹೋದ ಈ ಮೂರೂ ಚಿಲ್ಲರೆ ವರ್ಷಗಳಲ್ಲಿ ಅಭಿರಾಮಿಯನ್ನು ಒಂದು ದಿನವಾದರೂ ಮರೆತಿರಲಿಕ್ಕಿಲ್ಲ ನಾನು, ನನ್ನ ನೆನಪಿನಲ್ಲಿ ಉಳಿದ ಅದೇ ಅಭಿರಾಮಿ ಅಷ್ಟೂ ಚೆಲುವಿನೊಂದಿಗೆ ಅರಳಿ ನಿಂತಂತೆ ಇತ್ತು.

ಅಭಿರಾಮಿಯನ್ನು ನಾನು ಮೊದಲು ಭೇಟಿ ಮಾಡಿದ್ದು ನನ್ನ ಪತ್ರಿಕೆಯ ಮೂಲಕ. ಅವಳ ಕುರಿತು ಒಂದು ಸ್ಟೋರಿ ಮಾಡಬೇಕಿತ್ತು. ಬಹುಶಃ ಅವೊತ್ತು ನಿವೇದ ಡ್ಯೂಟಿಗೆ ಬಂದಿರುತ್ತಿದ್ದರೆ ನಾನಂತೂ ಅಭಿರಾಮಿಯನ್ನು ಯಾವ ಕಾಲಕ್ಕೂ ಭೇಟಿ ಮಾಡಿರಲಿಕ್ಕಿಲ್ಲವೇನೋ ಆದರೆ ಕೆಲವೊಂದು ಸಂಗತಿಗಳು ನಮಗೆಂದೇ ಯಾರೋ ಮೊದಲೇ ನಿಗದಿ ಪಡಿಸಿಟ್ಟಿರುತ್ತಾರೋ ಎಂಬಂತೆ ಹೂವು ಬಿರಿದಷ್ಟೇ ಸಹಜವಾಗಿ, ಸರಳವಾಗಿ ನಮ್ಮನ್ನು ಅಲ್ಲಿಗೆ ತಲುಪಿಸಿಬಿಡುತ್ತವೆ.ಅಗಮ್ಯ ಗಮ್ಯಕೆ. ಇದೂ ಹಾಗೆಯೇ! ಇಲ್ಲವಾದರೆ ಯಾವತ್ತೂ ಕೈಗೆತ್ತಿಕೊಂಡ ಅಸೈನೆಂಟ್ ಪಕ್ಕಾ ಮಾಡಿ ಮುಗಿಸುವ ನಿವೇದ ಕಡೇ ಘಳಿಗೆಯಲಿ ಕೆಲಸಕ್ಕೆ ಬಾರದೆ ಯಾಕೆ ಉಳಿಯಬೇಕು? ಎಂದೂ ಆಫೀಸಿಗೆ ಟೈಮಿಗೆ ಹೋಗದ ನಾನು ಅಂದೇಕೆ ಟೈಮಿಗೆ ಮೊದಲೇ ಹೋಗಬೇಕು? ಅಷ್ಟು ಜನರಿರುವ ಆಫೀಸಿನಲಿ ಬಾಸ್ ನನಗೇ ಯಾಕೆ ಫೋನ್ ಹಚ್ಚಿ ಈ ಅಸೈನ್ಮೆಂಟ್ ಮುಗಿಸಿಕೊಡೆಂದು ಕೇಳಬೇಕು.ಅವೊತ್ತು ನನಗೂ ಬೇಕಷ್ಟು ಕೆಲಸಗಳಿದ್ದವು ಆದರೂ ನಾನು ನಿವೇದಳ ಕೆಲಸ ಎತ್ತಿಕೊಂಡು ಅಭಿರಾಮಿಯನ್ನು ಭೇಟಿ ಮಾಡಲು ಯಾಕೆ ಹೋಗಬೇಕು? ಹೌದು ಅವೊತ್ತು ಬಾಸ್ ಕೆಲಸ ಹೇಳಿದಾಗ ನಾನು ಮರುಮಾತಾಡದೆ ಒಪ್ಪಿಕೊಂಡು ಹೊರಟಿದ್ದೆ. ಅಭಿರಾಮಿಯೆಂಬ ನೃತ್ಯಗಾತಿಯನ್ನು ಸಂದರ್ಶಿಸಲು,

ಮರೀನಾ ಕ್ಯಾಂಪ್, ದೊಡ್ಡದಾದ ಬೋರ್ಡ್ ಹೊತ್ತು ನಿಂತ ಆ ಕ್ಯಾಂಪಸ್ ಚೆನ್ನೈ ಸ್ಲಮ್ ಕ್ಲಿಯರೆನ್ಸ್ ಬೋರ್ಡಿನವರು ಕಟ್ಟಿದ್ದಾಗಿತ್ತು. ಕಡಲತಡಿಗೆ ಮುಖ ಮಾಡಿ ನಿಂತ ಅನೇಕ ಮನೆಗಳ ಅಡುಕುಮಾಡಿಯ ಆ ಕ್ಯಾಂಪಸ್ಸಿನೊಳಗೆ ಕಾಲಿಟ್ಟಾಗ ಎಣ್ಣೆ ಕಾಣದ ಮುಖದ ಅನೇಕ ಸಣ್ಣ ಮಕ್ಕಳು ಬಂದು ಮುತ್ತಿಕೊಂಡಿದ್ದವು.ಯಾರು ಬೇಕು ನಿಮಗೆ? ಯಾಕಿಲ್ಲಿ ಬಂದಿದೀರ, ಏನು ಬೇಕು? ಮೀನು ಬೇಕಾ? ಪ್ರೆದೆ, ಈಗ ಹಿಡಕೊಂಡು ಬಂದದ್ದಷ್ಟೇ, ಒಂದ್ ಹತ್ರುಪಾಯಿ ಕೊಡಿ ಸಾಕು ಒಳ್ಳೆ ಒಳ್ಳೆ ಕಡೆ ಕೊಡಿಸ್ತೀನಿ ಇಂಥ ಹಲವು ಒಪ್ಪಂದಗಳನು ಮುಂದಿಡುತ್ತ ಸುತ್ತುವರಿದ ಮಕ್ಕಳನು “ಅಭಿರಾಮಿ ಮೇಡಂ ಮನೆ ಎಲ್ಲಿ?”ಎಂದು ಕೇಳಿದರೆ ಅವು ಹೊಟ್ಟೆ ಹಿಡಿದುಕೊಂಡು ನಗತೊಡಗಿದ್ದವು. ಒಬ್ಬ ಹುಡುಗನಂತೂ ವಿಚಿತ್ರ ದನಿಯಲಿ ಕೇಕೆ ಹಾಕಿ, “ಮೇಡಮ್ಮಾ??? “ಎಂದು ಉರುಳುರುಳಿ ನಕ್ಕಿದ್ದ. ಅವನ ಈ ಚರ್ಯೆ ಉಳಿದ ಹುಡುಗರಲಿ ಮತ್ತಷ್ಟು ನಗೆ ಉಕ್ಕಿಸಿ,ಅವು ನಗುತ್ತ ಚದುರಿ ಹೋಗಿದ್ದವು. ಒಬ್ಬ ಹುಡುಗ ಮಾತ್ರ ಗುಂಪಿನಿಂದ ಮೆಲ್ಲಗೆ ಕಳಚಿಕೊಂಡು ಹೊರಬಂದು "ಯಾಕ್ಸಾರ್ ನೋಡೋಕು? ಸರಿ ಹಣ ಕೊಡಿ ತೋರಿಸ್ತೀನಿ" ಎಂದು ಪಿಸುಗುಟ್ಟಿದ್ದ. ಈ ರೀತಿಯ ಸನ್ನಿವೇಶವನ್ನು ಊಹಿಸಿಕೊಂಡಿರದೇ ಇದ್ದ ನನಗೆ ಈ ಆಭಿರಾಮಿ ಯಾರಾಗಿರಬಹುದು, ಒಂದು ವೇಳೆ ತಪ್ಪಾದ ಅಡ್ರೆಸಿಗೆ ಬಂದುಬಿಟ್ಟೆನೋ ಎಂದು ಒಳಗೊಳಗೆ ಸಣ್ಣಗೆ ದಿಗಿಲಾಗಿತ್ತು.ಇನ್ನೇನು ಬಾಸ್‌ಗೆ ಫೋನ್ ಹಚ್ಚಿ ವಿಷಯ ಕನ್ನರ್ ಮಾಡ್ಕೊಳ್ಳುವಾಂತ ಯೋಚಿಸುವಷ್ಟರಲಿ ಪಕ್ಕದಲ್ಲೇ ಕುಳಿತು ಬೀಡಿ ಸೇದುತ್ತ ನಮ್ಮ ತಮಾಷೆ ನೋಡುತ್ತ ಕುಳಿತಿದ್ದ ವೃದ್ಧನೊಬ್ಬ "ಏನಪ್ಪ ಯಾರು ಬೇಕಿತ್ತು, ಏನು ನಿನ್ನ ಸಮಸ್ಯೆ' ಎಂದು ಕುಳಿತಲ್ಲಿಂದಲೇ ಕೇಳಿದ್ದ. ಅವನ ದನಿ ,ಮುಖ ಎರಡೂ ಒರಟಾಗಿತ್ತು ."ಅಯ್ಯ ಅಭಿರಾಮಿ

ಅನ್ನೋರನ್ನ ನೋಡಬೇಕಿತ್ತು ಅವರ ಮನೆ ಎಲ್ಲಿದೆ? ಬಿ ಬ್ಲಾಕ್ ಅಂತ ಹಾಕಿದಾರೆ ಡೋರ್ ನಂ ಹಾಕಿಲ್ಲ. ನಾನು ಮೆತ್ತಗೆ ಕೇಳಿದ್ದೆ.



ಯಾಕೆ? ಯಾಕೆ ನೋಡ್ಬೇಕು ನೀನು?" ಅವನ ದನಿ ಈಗ ಮೊದಲಿಗಿಂತ ಒರಟಾಗಿತ್ತು. "ಅಯ್ಯ ನಾನು ಕಲ್ಯಾಣಿ ಪೇಪರಿನಿಂದ ಬಂದಿದೀನಿ, ಅವರ ಮನೆ ಎಲ್ಲಿ ಹೇಳಿ, ನಾನು ಮಾತಾಡ್ಕೊತೀನಿ "ನಾನೂ ಈ ಬಾರಿ ತುಸು ಒರಟಾಗಿಯೇ ಹೇಳಿದ್ದೆ. "ಎಂಥದೋ ಮಾಡ್ಕೊಂಡು ಹೋಗಿ,ಮೊದಲೇ ಇಂಥವಕ್ಕೆಲ್ಲ ಕಾಲು ನೆಲದ ಮೇಲಿರೋದಿಲ್ಲ, ನೀವು ಬಂದು ಹಾರಾಡೋಕೆ ರೆಕ್ಕೆನೇ ಕಟ್ಟಿಕೊಟ್ಟು ಬಿಡಿ, ನಮ್ಮ ತಲೆ ಮೇಲೆ ಹಾರಾಡಲಿ, ಎಲ್ಲ ನೋಡಬೇಕಾಗಿರೋದು ನನ್ನ ಕರ, ಹೋಗು, ಮೂರನೇ ಫ್ಲೋರು, ಮನೆ ನಂ. ಆರು ಹೋಗಿ ನೋಡೋಗು ಅಂದಿದ್ದ. ಹಾಗೆ ಹೇಳುವಾಗ ಅವನ ಮುಖದಲ್ಲಿ ಕಾಣುತ್ತಿದ್ದ ಹೇವರಿಕೆಯ ತಾಪ ನನ್ನ ಮುಖಕ್ಕೆ ರಪ್ಪನೆ ರಾಚಿತ್ತು. ಸುಮ್ಮನೆ ಇದರಲ್ಲಿ ಸಿಲುಕಿದೆನಲ್ಲ, 'ಹಾಳಾದವಳು ನಿವೇದ, ಯಾವಾಗಲೂ ಹೀಗೇ ಏನಾದರೊಂದು ವಿಶೇಷವಾದ್ದನ್ನೇ ಆರಿಸಿಕೊಳ್ತಾಳೆ, ಆರಿಸಿಕೊಂಡೊಳು ಸ್ವತಃ ತಾನೇ ಮಾಡಿ ಮುಗಿಸೋದು ತಾನೆ? ನನ್ನ ತಲೆಗೆ ತಂದಿಟ್ಟಿದ್ದಾಳೆ.' ಎಂದು ಅವಳ ಮೇಲೆ ಒಳಗೊಳಗೇ ಸಿಡುಕುತ್ತ ಹೋಗಿ ಮೆಟ್ಟಿಲೇರಿದವನಿಗೆ ಎರಡನೇ ಫ್ಲೋರು ಏರುವಾಗಲೇ ಸುಸ್ತು ಹೊಡೆದಿತ್ತು. ಇರುಕಾದ ಕಡಿದಾದ ಕಿರಿಯ ಮೆಟ್ಟಿಲುಗಳು, ಗುಡಿಸದೆ ತೊಳೆಯದೆ ಗಲೀಜಾಗಿದ್ದವು. ಒಂದೊಂದು ಮನೆಯನ್ನು ಹಾದುಹೋಗುವಾಗಲೂ ಅದರೊಳಗಿನ ಟಿವಿ ಯ ಸದ್ದು ಎದುರು ಮನೆಯಲ್ಲಿ ಧ್ವನಿಸುತ್ತಿರುವಂತೆ ಒಟ್ಟು ಎರಡೂ ಕಡೆಯೂ ವಿಪರೀತ ಗದ್ದಲ. ನನ್ನನ್ನು ಸುತ್ತುವರಿದಿದ್ದ ಮಕ್ಕಳ ಗುಂಪು ಈಗ ಮತ್ತೆ ಕೇಕೆ ಹಾಕುತ್ತ ಮೆಟ್ಟಿಲಿನ ಮೇಲೆ ಓಡಿ ಹಿಡಿಯಾಟವಾಡುತ್ತಿದ್ದವು,ಮನೆಯ ಮುಂದಿನ ಕಿರಿದಾದ ಖಾಲಿ ಸ್ಥಳದಲ್ಲಿ ಬಟ್ಟೆ ಒಣಹಾಕಿ ಅದೊಂದು ಬಗೆಯ ಮುಗ್ಗು ವಾಸನೆ ರಾಚುತ್ತಿತ್ತು. ಅಲ್ಲಿದ್ದ ಬಹುತೇಕರ ಮನೆ ಮೀನು ಹಿಡಿಯುವುದೊಂದು ಮುಖ್ಯ ಕಸುಬಾದ ಕಾರಣ,ಮೀನಿನ ವಾಸನೆ ಎಲ್ಲವನ್ನೂ ಹೀರಿಕೊಳ್ಳುತ್ತ ಬಿರಿಯುತ್ತಿತ್ತು. ನೊಣಗಳು ಜೊಂಪೆಜೊಂಪೆಯಾಗಿ ಹಾರಾಡುತ್ತ ತಾರಾಡುತ್ತ ಬೆಳಗಿನ ಬಿಸಿಲಿಗೆ ಹೊಳೆಯುತ್ತಿದ್ದವು. ಅದೆಲ್ಲದರ ನಡುವೆ ಎಲ್ಲರ ಮನೆಯೊಳಗೂ ಒಂದು ನಗು, ಅಬ್ಬರ, ಜೋರು ಮಾತುಕಥೆ,ಹಾಡು ಕೇಕೆ!

ಅವರು ಹೃದಯವನು ಒಳಗೆಲ್ಲೋ ಬೈತಿಟ್ಟರಲಿಲ್ಲ,ಬದಲಿಗೆ ಬಾಯಿಗೆ ಕಟ್ಟಿಕೊಂಡಿದ್ದರು. ಯಾವೊಂದು ನಾಜೂಕಿನ ಮುಸುಕನ್ನೂ ಹೊಚ್ಚದೆ ಬಿಸಿಲು ಮಳೆ ಚಳಿಗೆ ಇರುವಂತೆಯೇ ಒಡ್ಡಿಕೊಂಡಿದ್ದರು, ಥೇಟ್ ಕಡಲಿನಂತೆ, ಅದರ ಮೊರೆತ ಇಳಿತ ಭರತ ಎಲ್ಲವೂ ತನ್ನಿಷ್ಟದಂತೆ, ಮೊದಲಿಗೆ ಬೇಸರ ಹುಟ್ಟಿಸಿದ್ದ ಅದೇ ಸ್ಥಳ ಈಗ ಮೆಲ್ಲಗೆ ಕೌತುಕ ಹುಟ್ಟಿಸುತ್ತ, ಅವರ ಅಪಾರ ಜೀವಂತಿಕೆ ಹೃದಯಕ್ಕೆ ಅಪ್ಯಾಯಮಾನ ವೆನಿಸತೊಡಗಿತ್ತು. ಎಲ್ಲವನೂ

ಕಣ್ಣಮೊನೆಯಲ್ಲೇ ತೂಗುತ್ತ ಮೆಟ್ಟಿಲೇರಿ ಮೂರನೇ ಸ್ಟೋರ್ ತಲುಪಿದಾಗ ನನ್ನ ಹಣೆಯ ಮೇಲೆ ಸಣ್ಣಗೆ ಬೆವರಾಡಿ ಸುಸ್ತು ಕಾಡಿತ್ತು. ಹೇಗೂ ಬಂದಿದ್ದಾಗಿತ್ತು. ಆದಷ್ಟು ಬೇಗ ಕೆಲಸ ಮುಗಿಸಿ ಹೊರಬಿದ್ದರೆ ಸಾಕೆಂದುಕೊಂಡು ಬಾಗಿಲು ಬಡಿದರೆ, ಬಾಗಿಲು ತೆರೆದದ್ದೊಬ್ಬ ದೇವತೆ !.

ಅವಳ ತುಂಬಿಗಳಂಥ ಕಪ್ಪು ಕಂಗಳು ನನ್ನನ್ನು ಸುಳಿಯಂತೆ ಸರಕ್ಕನೆ ಸೆಳೆದು ಬಂಧಿಯಾಗಿಸಿದವು.ನಾನೊಂದು ಚೆಲುವಿನ ಕಡಲೊಳಗೆ ಮುಳುಗುತ್ತಿರುವಂತೆ ಭ್ರಾಂತ



ನಗುವಿನೊಂದಿಗೆ ಅವಳ ಮನೆಯನ್ನು ಹೊಕ್ಕೆ. ಬಹುಶಃ ಅದಾಗಲೇ ನಿವೇದ ಫೋನಿಸಿ ನಾನು ಬರುತ್ತಿರುವ ವಿಚಾರ ಹೇಳಿದ್ದಿರಬೇಕು ಅವಳು ಯಾವ ಪ್ರಶ್ನೆಯನ್ನೂ ಹಾಕದೆ ವಿಶಾಲ ನಗುವಿನೊಂದಿಗೆ ನನ್ನನ್ನು ಬರಮಾಡಿಕೊಂಡಿದ್ದಳು. ಅವಳ ಸಿಂಗಲ್ ಬೆಡ್ರೂಮಿನ ಆ ಸಣ್ಣ ಫ್ಲ್ಯಾಟು ಅವಳ ಹಾಗೆಯೇ ತಿದ್ದಿ ತೀಡಿದಂತೆ ಅಚ್ಚುಕಟ್ಟಾಗಿತ್ತು. ಕಡಲಿಗೆ ತೆರೆದುಕೊಂಡ ಅವಳ ಮನೆಯ ಕಿಟಕಿಗಳಿಂದ ಕಡಲಮೇಲಿನ ಗಾಳಿ ಬಿಸಿಲ ಕೋಲುಗಳೊಂದಿಗೆ ಧಾರಾಳವಾಗಿ ಒಳನುಗ್ಗುತ್ತಿತ್ತು. ಕಿಟಕಿಯಿಂದ ಸ್ವಲ್ಪ ಮುಂದೆ ಬಿಸಿಲು ಬೀಳುವ ಸ್ಥಳದಲ್ಲಿ ಸಣ್ಣದೊಂದು ತುಳಸಿಯ ಬೃಂದಾವನ ಇಟ್ಟು, ಮಲ್ಲಿಗೆಯ ದಂಡೆಯಿಂದ ಸಿಂಗರಿಸಿ, ಅದರ ಗೂಡಿನಲಿ ದೀಪ ಮುಟ್ಟಿಸಿ, ಅಗರಬತ್ತಿ ಹಚ್ಚಿದ್ದಳು. ಬೃಂದಾವನದ ಮುಂದೆ ನಾಲ್ಕೆಳೆಯ ರಂಗೋಲಿ, ರಂಗವಲ್ಲಿಯ ಅಳತೆ ಮೀರದ ಎಳೆಗಳು ಅವಳ ಯೋಚನೆಯ ನಿಖರತೆಗೆ ಸಾಕ್ಷಿಯಂತಿದ್ದವು. ಅದಷ್ಟೇ ಅಲ್ಲ,ಅವಳ ಮನೆಯ ಅಚ್ಚುಕಟ್ಟುತನ, ಹೊರಗಿನ ಅಷ್ಟೂ ಗದ್ದಲಗಳನ್ನು ದಾಟಿಯೂ ಉಳಿಸಿಕೊಂಡಿರುವ ಮೌನ,ಮನೆಯ ಗೋಡೆಗಳಲ್ಲಿ ತೂಗಿದ್ದ ಅಪರೂಪದ ಪೇಂಟಿಂಗ್‌ಗಳು, ಗೋಡೆಯ ಬದಿಯಲ್ಲಿ ಸಣ್ಣ ಟೇಬಲಿನ ಮೇಲೆ ಜೋಡಿಸಿದ್ದ ನಟರಾಜ ಪ್ರತಿಮೆ,ಅದರ ಬದಿಗೆ ಪೇರಿಸಿಟ್ಟ ಕಾಲ್ಗೆಜ್ಜೆ, ತಾಳ, ತಬಲ, ಕೊಳಲು, ಒಂದಷ್ಟು ಪುಸ್ತಕಗಳು, ಧ್ಯಾನಸ್ಥ ಬುದ್ಧನ ಮಣ್ಣಿನ ಪ್ರತಿಮೆ.. ಎಲ್ಲವೂ ಅವಳ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತಿದ್ದವು. ಅವಳ ಪರಿಚಯವಾಗಿದ್ದು ಹಾಗೆ.

"ನಿಮ್ಮ ಪರಿಚಯ ಹೇಳಿಕೊಳ್ಳಿ, ಬಾಲ್ಯ ಬದುಕು..." ನಾನು ಮಾತು ಶುರು ಮಾಡಿದ್ದೆ. ಹೆಚ್ಚೇನೂ ಹಿಂಜರಿಯದೆ, ದೀರ್ಘಾಲೋಚನೆಯಲ್ಲಿ ಬೀಳದೆ ಏರುಪೇರುಗಳಿಲ್ಲದ ಮೆಲು ದನಿಯಲ್ಲಿ ಅಭಿರಾಮಿ ಮಾತು ಶುರು ಮಾಡಿದ್ದಳು. 'ನಮ್ಮಪ್ಪ ಅಮ್ಮನಿಗೆ ನಾನೊಂದೇ ಮಗು ಸರ್. ನಾನು ಹುಟ್ಟಿ ಕೆಲವು ವರ್ಷಗಳಲ್ಲಿ ಅಪ್ಪ ಕಡಲಿಗೆ ಹೋದವನು ಮರಳಿ ಬಾರದೇ ಹೋಗಿದ್ದ. ಉಳಿದದ್ದು ಅಮ್ಮ, ನಾನು ಇಬ್ಬರೇ. ಅಪ್ಪ ಇಲ್ಲದೆ ನಾನು ಎಲ್ಲ ಅಪ್ಪನಿಲ್ಲದ ಮಕ್ಕಳ ಹಾಗೆ ಕಷ್ಟ ಪಟ್ಟೆ, ಅದು ದೊಡ್ಡ ವಿಷಯವಲ್ಲ ಯಾಕೆಂದರೆ ನನ್ನ ಬದುಕಿನ ಮೊದಲ ಹದಿನೈದು ವರ್ಷಗಳಲ್ಲಿ ನಾನು ಪಡೆದುಕೊಂಡಿದ್ದು ಅಪಾರ. ಮುಖ್ಯವಾಗಿ ಅಮ್ಮನ ಅಕ್ಕರೆ ಮತ್ತು ಪ್ರೀತಿ, ಅವಳಿಗೆ ಅದಿನ್ನೇನೋ ತನ್ನ ಮಗು

ಎಲ್ಲವನ್ನೂ ಕಲಿಯಬೇಕು ಅನ್ನುವ ಆಸೆ. ಅಪ್ಪ ಇಲ್ಲದ ಮಗು, ಮುಂದೆ ಇದರಲ್ಲಿ ಯಾವುದಾದರೂ ಒಂದು ಉಪಯೋಗಕ್ಕೆ ಬರುತ್ತೆ ಅಂದುಕೊಂಡಳೋ, ಇಲ್ಲ, ಅವಳು ಬಹುಬೇಗ ನನ್ನನ್ನು ಬಿಟ್ಟುಹೋಗಿ ಬಿಡುತ್ತಾಳೆಂದು ಎಣಿಸಿ ಇಟ್ಟಿದ್ದಳೋ ಅವಳಿಗೇ ಗೊತ್ತು. ಅಂತೂ ಅವಳು ಸಣ್ಣದಿರುವಾಗಲೇ ನನ್ನನ್ನು ವೆಸ್ಟನ್ ಡ್ಯಾನ್ಸ್ ಕಲಿಯಲು ಕಳಿಸಿದ್ದಳು ಆದರೆ ನಂಗೆ ಭರತನಾಟ್ಯವೇ ಇಷ್ಟವಾಗಿತ್ತು. ಅಮ್ಮನ ಬಳಿ ಹೇಳದೆ, ವೆಸ್ಟನ್ ಬದಲು ಭರತಂ ಕಲಿತೆ. ಮನೆಯ ಪಕ್ಕದಲೇ ಚರ್ಚಿತ್ತು. ಅದರ ವಿಶಾಲ ಅಂಗಳದಲ್ಲಿ ಆಡುವುದೊಂದು ಖುಷಿಯಿತ್ತು, ಅಲ್ಲಿ ಹಾಡುತ್ತಿದ್ದ ಏಸುವಿನ ಹಾಡುಗಳ ಮೇಲೆ ಪ್ರೀತಿಯಿತ್ತು. ಹಾಗೇ ಹಾಡ್ತಾ ಹಾಡ್ತಾ ರಾಗ ಕೂಡಿತು.  ಪಕ್ಕದ ಮನೆಯ ಅಣ್ಣ ಪೇಂಟಿಂಗ್ ಮಾಡುತ್ತಿದ್ದರು. ಕಾಂಪೋಂಡ್ ವಾಲ್‌ಗಳ ಮೇಲೆ ಚಿತ್ರ ಬರೆಯೋದು, ಬೋರ್ ಬರೆಯೊದು, ನಾಟಕದ ಪರದೆ ಬರೆಯುವುದು ಹೀಗೆ



ಏನೇನೋ ಮಾಡೋರು.ಅವರ ಜೊತೆ ಸೇರಿ ನಾನೂ ಪೇಂಟಿಂಗ್ ಕಲಿತೆ. ಅವರ ಬಳಿ ಆಟೋ ಇತ್ತು ಹಾಗಾಗಿ ಆಟೋ ಓಡಿಸಲು ಕಲಿತೆ. ನಾನು ಕಲಿಯುತ್ತಿದ್ದೆನೋ ಇಲ್ಲವೋ ಅಮ್ಮ ಯಾವಾಗಲೂ ಅದು ಇದು ಕಲಿ ಎಂದು ದುಂಬಾಲು ಬೀಳುತ್ತಲೇ ಇರುತ್ತಿದ್ದಳು. ಅವಳು ಯಾವತ್ತಿಗೂ ನನ್ನನ್ನು ಬೈದ ನೆನಪೇ ಆಗುವುದಿಲ್ಲ. ಅಂಥ ಅಮ್ಮ, ನಾನು ಹತ್ತನೇ ಕ್ಲಾಸು ಎಕ್ಸಾಂ ಮುಗಿಸಿ ರಜೆಯಲ್ಲಿ ತುಂಬ ಸಂತೊಷವಾಗಿದ್ದಾಗ, ಹೀಗೇ ಚರ್ಚಿನಲ್ಲಿ ಆಟವಾಡುತ್ತ ಇದ್ದ ಒಂದು ಸಂಜೆ ಇದ್ದಕ್ಕಿದ್ದಂತೆ ಸತ್ತು ಹೋಗಿದ್ದಳು. ಅವಳಿಗೆ ಮೂರಾಲ್ಕು ದಿನಗಳಿಂದಲೇ ಜ್ವರವಿತ್ತು ಆದರೂ ಕೆಲಸಕ್ಕೆ ಹೋಗಿದ್ದಳು. ಅಮ್ಮನಿಗೆ ಆಗಾಗ ಜ್ವರ ಬರುವುದು ಹೋಗುವುದು ಹೊಸತಂತೂ ಆಗಿರಲಿಲ್ಲ, ಆದರೆ ಆ ಸಾವು ನಾನು ಎಂದೂ ಊಹಿಸಿಯೇ ಇರದ ಒಂದಾಗಿತ್ತು. ಅಮ್ಮ ಸತ್ತ ಮೇಲೆ ನನಗೆ ಯಾರಿದ್ದರು? ಆಮೇಲೆಯೇ ನನ್ನ ಅತ್ಯಂತ ಕಷ್ಟದ ದಿನಗಳು ಶುರುವಾದದ್ದು. ಅಮ್ಮ ಸತ್ತ ಮೇಲೆ ನಾನು ಒಂಟಿಯಾದೆ, ಅಕ್ಷರಶಃ ಒಂಟಿ. ಆಗೆಲ್ಲ ಅಮ್ಮನ ನೆನಪಿನಲ್ಲಿ ಅಮ್ಮನ ಸೀರೆಯನ್ನು ಹೊದ್ದು ಮಲಗುತ್ತಿದ್ದೆ. ಆಮೇಲೆ ಅದನ್ನು ಉಟ್ಟೆ ಕಳ್ಳತನದಿಂದ. ನಿಧಾನಕ್ಕೆ ತಿಳಿಯಿತು. ಒಳಗೆ ಅಭಿರಾಮಿ ಅಡಗಿದ್ದಳು. ಸಣ್ಣ ವಯಸಿನಿಂದಲೇ ನನ್ನ ಬಿಳೀ ಮುಖ, ಕಪ್ಪು ಕಣ್ಣು, ಮಾತುಮಾತಿಗೆ ನಾಚುವುದನ್ನೆಲ್ಲ ನೋಡಿ ಓರಗೆಯ ಮಕ್ಕಳು ಹೆಣ್ಣಪ್ಪಿ ಎಂದು ರೇಗಿಸುತ್ತಿದ್ದುದ್ದಕ್ಕೆ ಹೊಸ ಅರ್ಥ ಸಿಕ್ಕಂತೆ ಬದುಕಿನ ದಿಕ್ಕು ಬದಲಾಗಿ ಬಿಟ್ಟಿತ್ತು. ಆಮೇಲಿನಿಂದ ಪಟ್ಟಿದ್ದು ಅಲ್ಪಸ್ವಲ್ಪ ಕಷ್ಟವಲ್ಲ ಸರ್, ನನಗೊಬ್ಬ ಮಾವನಿದ್ದ. ಅಮ್ಮನ ಅಣ್ಣ. ಅವನು ಮೊದಲೆಲ್ಲ ನಮ್ಮನ್ನು ಏನು ಅಂತಲೂ ಕೇಳದವನು, ಅಮ್ಮ ಸತ್ತ ಕೆಲದಿನಗಳ ಮೇಲೆ ಬಂದು ನನ್ನ ಜೊತೆ ಸೇರಿಕೊಂಡಿದ್ದ. ನನ್ನನ್ನು ಬಲಾತ್ಕಾರ ಮಾಡಿದ ಮೊದಲ ವ್ಯಕ್ತಿ ಅವನೇ, ಅದೂ ಸಾಲದೆಂಬಂತೆ ಆಗಾಗ ಅವನ ಗೆಳೆಯರನ್ನೂ ಮನೆಗೆ ಕರೆತಂದು ಬಿಡುತ್ತಿದ್ದ. ಅವನಿಂದಾಗಿ ನಾನು ಬಹಳವೇ ಕಷ್ಟಪಟ್ಟೆ, ಅವನಿಂದಾಗಿ ಆದ ಒಂದೇ ಒಂದು ಉಪಯೋಗವೆಂದರೆ, ಸರಕಾರ ನಾವಿದ್ದ ಗುಡಿಸಲುಗಳನ್ನ ಕೆಡವಿದಾಗ ಅವನ ಹೆಸರಿನಲ್ಲಿ ಹೊಸ ಮನೆ

ಕಟ್ಟಿಕೊಟ್ಟರು, ಹೊಸಮನೆಯಲ್ಲಿ ಮೂರು ದಿನ ಕೂಡ ಅವನು ಉಳಿಯಲಿಲ್ಲ, ಹಾಗಾಗಿ ಮನೆ ನನ್ನ ಪಾಲಿಗೆ ಬಂತು. ಒಂದು ವೇಳೆ ಮನೆಯೊಂದು ಇಲ್ಲದೆ ಇದ್ದರೆ ನನಗೆ ಬಹಳ ಕಷ್ಟವಾಗಿರೋದು. ಈವಾಗ ನಾನು ಬೆಳಗ್ಗೆ ಪಾರ್ಥಸಾರಥಿ ದೇವಸ್ಥಾನದ ಬಳಿ ಹೂ ಮಾರುತ್ತೇನೆ. ನಾಟಕದ ಪರದೆ ಬರೆವ ಕೆಲಸವೋ, ಬೋ ಬರೆವ ಕೆಲಸವೋ ಸಿಕ್ಕಿದರೆ ತೆಗೆದುಕೊಳ್ತೇನೆ. ಆಗೀಗ ಮೀನೂ ಮಾರುತ್ತೇನೆ. ಇನ್ನು ಮನೆಯಲ್ಲಿ ಒಬ್ಬಳೇ ಇರುತ್ತೀನಲ್ಲ ಆಗ, ಬೇಸರಾದಾಗ ನರ್ತಿಸುತ್ತೇನೆ. ಮೊದಲು ಕೆಲವು ಮಕ್ಕಳಿಗೆ ಇಲ್ಲೇ ಡ್ಯಾನ್ಸ್ ಹೇಳಿಕೊಡಲು ಟ್ರೈ ಮಾಡಿದೆ ಆದರೆ ಎಲ್ಲಿ ಸರ್, ನಮ್ಮ ಹತ್ರ ಎಲ್ಲ ಕಳಿಸೋಕೆ ಜನ ಹಿಂದೆಮುಂದೆ ನೋಡ್ತಾರೆ ಅದೇ ಕಷ್ಟ. ಆದ್ರೂ ಕೆಲವು ಮಕ್ಕಳು ಬರ್ತಾರೆ ಆಗೀಗ ಅಷ್ಟೇ. ನಂದು ಅಭಿಪ್ರಾಯ ಇಷ್ಟೇ, ನಮ್ಮನ್ನು ಕೂಡ ಈ ಸಮಾಜ, ನಿಜವಾದ ನಾಗರಿಕ ಮನಸ್ಥಿತಿಯಿಂದ ನಾವಿರುವಂತೆ ಒಪ್ಪಿಕೊಳ್ಳಬೇಕು." ಅಂದಿದ್ದಳು...



ಅವಳು ಮಾಡಿಕೊಟ್ಟ ಕಾಫಿ ಗುಟುಕರಿಸುತ್ತಾ ಅವಳ ಮಾತುಗಳನ್ನು ರೆಕಾರ್ಡ್ ಮಾಡಿಕೊಳ್ಳುತ್ತ ಅವಳ ಕೈಯ್ಯಾಡಿಸುತ್ತ ಕಣ್ಣರಳಿಸುತ್ತ ಮಾತಾಡುವುದನ್ನು ಕಣ್ತುಂಬಿಕೊಳ್ಳುತ್ತ ಅವಳಿಗೆ ನಿಧಾನಕ್ಕೆ ಶರಣಾಗತೊಡಗಿದ್ದೆ.

ಅವಳು ಕಿಟಕಿಯ ಪಕ್ಕ ಕುಳಿತಿದ್ದಳು.ಅದೇ ಮಿಂದು ಬಂದ ಅವಳ ಕೂದಲು ಇನ್ನೂ ಒದ್ದೆಯಾಗಿತ್ತು. ಬಿಸಿಲು ಅವಳ ಕೆನ್ನೆಯ ಪಾರ್ಶ್ವವನ್ನು ಬೆಳಗಿಸಿತ್ತು ಕೊನೆಯ ಮಾತುಗಳನ್ನು ಹೇಳುವಾಗ ಅವಳ ಕೈಗಳು ಕಿಟಕಿಯ ಸರಳುಗಳನ್ನು ಬಿಗಿದವು. ನಾನು ಒಡನೇ ಕ್ಯಾಮೆರಾ ಕ್ಲಿಕ್ಕಿಸಿದ್ದೆ. ನಂತರ ಕೆಲವು ನೃತ್ಯದ ಭಂಗಿಗಳಲ್ಲಿ ನಿಲ್ಲಿಸಿ ಹಲವು ಕೋನಗಳಲ್ಲಿ ಫೋಟೋಗಳನ್ನು ತೆಗೆದುಕೊಂಡು ಹೊರಟವನಿಗೆ ದಾರಿಯುದ್ದಕ್ಕೂ ಅವಳದ್ದೇ ನೆನಪು ಕಾಡಿತ್ತು. ಅವಳ ನಸುನಗು, ದನಿಯನ್ನು ಆದಷ್ಟೂ ತಗ್ಗಿಸಿ ಮಾತಾಡುವ ಪರಿ, ಮಾತಾಡುತ್ತ ಕೈಬೆರಳುಗಳನ್ನು ಮಾಟವಾಗಿ ತಿರುಗಿಸುತ್ತಿದ್ದ ರೀತಿ, ಅವಳು ಕತ್ತು ಕೊಂಕಿಸಿದಾಗೆಲ್ಲ ಅಲ್ಲಾಡುತ್ತ ಶ್ರದ್ಧೆ ಕೆಡಿಸುತ್ತಿದ್ದ ಅವಳ ಕಿವಿಯ ಝುಮುಕಿ, ಮುಖಕ್ಕೆ ಮುತ್ತುತ್ತಿದ್ದ ಒದ್ದೆ ಮುಂಗುರುಳು... ಅವಳ ಕುರಿತು ಬರೆಯುತ್ತ ಕೂತಾಗ, ಅವಳೇ ಎದುರು ಬಂದು ಕೂತಂತೆ ಅನಿಸಿತ್ತು. ಅಕ್ಕರೆಯಿಂದ ಆಸ್ಥೆಯಿಂದ ಬರೆದ ಲೇಖನ, ನಿಜಕ್ಕೂ ಸದ್ದು ಮಾಡಿತ್ತು. ನಡು ನಡುವೆ ಅದೂ ಇದು ಸಂದೇಹ ಕೇಳಲೆಂಬಂತೆ ಅವಳಿಗೆ ಕರೆ ಮಾಡುತ್ತ, ಕಡೆಗೆ ಲೇಖನ ಪ್ರಕಟವಾದುದರ ಕುರಿತು ಹಂಚಿಕೊಳ್ಳುತ್ತ ಅವಳಿಗೆ ಹತ್ತಿರವಾಗುವ ಒಂದೇ ಒಂದು ಅವಕಾಶವನ್ನೂ ತಪ್ಪಿಸಿಕೊಳ್ಳದಂತೆ ನಾನು ನೋಡಿಕೊಂಡಿದ್ದೆ. ನಾನು ಮೊದಲಿಗೆ ಅಭಿರಾಮಿಯ ಚೆಲುವಿಗೆ ಬೆರಗಾಗಿದ್ದೆ, ಆಮೇಲೆ ನಿಧಾನಕೆ ಕರಗತೊಡಗಿದ್ದೆ, ಆದರೆ ಅವಳ ಮಾತು ನಡೆ ನುಡಿ ನಗು ಮತ್ತು ಪ್ರೇಮಮಯ ಹೃದಯಕ್ಕೆ ಸೋತು ಶರಣಾಗತೊಡಗಿದ್ದೆ. ಲೇಖನ ಪ್ರಕಟವಾದ ಮೇಲೆ ಅವಳ ಕುರಿತಾಗಿ ವಿಚಾರಿಸಿ ಅನೇಕ ಫೋನುಗಳು ಬಂದಿದ್ದವು, ಕೆಲವರು ತಮ್ಮ ಮಕ್ಕಳನ್ನು ಅವಳ ಬಳಿ ನೃತ್ಯ ಕಲಿಕೆಗೆ

ಕಳಿಸಲು ಮುಂದೆ ಬಂದಿದ್ದರು.ಅದಕ್ಕಾಗಿ ನಾನೇ ಮುಂದೆ ನಿಂತು ಸ್ಥಳವೊಂದನ್ನು ಗೊತ್ತು ಮಾಡಿಕೊಟ್ಟಿದ್ದೆ. ಅದರ ಜೊತೆಗೆ ಶ್ರೀಕೃಷ್ಣ ದೇವಸ್ಥಾನದ ರಥೋತ್ಸವದಂದು ದೇವಸ್ಥಾನದಲ್ಲಿ ಬಂದು ನರ್ತಿಸುವಂತೆ ಅವಳಿಗೊಂದು ಸದಾವಕಾಶವೂ ಒದಗಿಬಂದಿತ್ತು.ಅಭಿರಾಮಿಯ ಬದುಕು ಸಣ್ಣಗೆ ಕವಲೊಡೆದು ಕುಡಿಯೊಡೆಯತೊಡಗಿತ್ತು. ಜೊತೆಗೆ ನಾನೂ.

ಅಭಿರಾಮಿ, ಎಂದೂ ಯಾವುದಕ್ಕೂ ನನ್ನನ್ನು ಆಗ್ರಹಿಸಲೇ ಇಲ್ಲ. ತನಗಾಗಿ ಏನನ್ನೂ ಕೇಳಲಿಲ್ಲ ಅವಳ ಆಸೆಗಳಾದರೂ ಅದೆಷ್ಟು ಸಣ್ಣವಿದ್ದವು ಆದರೆ ಅದನ್ನು ಪೂರೈಸಲಿಕ್ಕೂ ನನಗೆ ಬಹಳಷ್ಟು ಬಾರಿ ಹಿಂಜರಿಕೆ ಕಾಡುತ್ತಿತ್ತು. ಮೊದಲನೇ ತಡೆ ಆಫೀಸಿನಿಂದಲೇ ಶುರುವಾಗಿತ್ತು."ಏನಪ್ಪ,ಇತ್ತೀಚೆಗೆ ಒಂದೇ ಏರಿಯಾನ ಜಾಸ್ತಿ ಕವರ್ ಮಾಡ್ತಾ ಇರೋ ಹಾಗಿದೆ "ಎಂದು ಸಣ್ಣ ರೇಗಿಸುವಿಕೆಯೊಂದಿಗೆ ಶುರು ಮಾಡಿದ ಗೆಳೆಯರು, “ಏನೋ ಇದು ಎಲ್ಲ ಬಿಟ್ಟು? ಆರ್ ಯು......" ಎಂದು ರಾಗವೆಳೆದಿದ್ದರು. "ಎ ಜಸ್ಟ್ ಫ್ರೆಂಡ್ ಕಣೋ, ಯಾಕೆ ಹಾಗಿರಬಾರೇನು? ರೇಗಿದ್ದೆ ನಾನು. ಆದರೆ ನನ್ನ ಬೆನ್ನ ಹಿಂದೆ ಶುರುವಾದ ಗುಸುಗುಸು ಮಾತುಗಳೂ, ಎದುರೆದುರೇ ನಿಲ್ಲಿಸಿ ಪ್ರಶ್ನೆ



ಕೇಳತೊಡಗಿದ ಗೆಳೆಯರು, ಸುಮ್ಮನೆ ಕುತೂಹಲದ ನೋಟವೊಂದನ್ನು ನನ್ನೆಡೆಗೆ ಹಾಯಿಸುತ್ತಿದ್ದ ಇನ್ನೂ ಕೆಲವರು.. ಅಂತೂ ಇವ್ಯಾವುವೂ ನನ್ನನ್ನು ಅಭಿರಾಮಿಯ ಮೇಲಿನ ಸೆಳೆತದಿಂದ ಹಿಂತರಲಾರದೇ ಉಳಿದಿದ್ದವು.ಆದರೆ ಅವಳು ಆಸೆ ಪಟ್ಟಂತೆ ಬೀಚಿನಲ್ಲಿ ಕೈ ಹಿಡಿದು ನಡೆಯುವುದು, ಬೈಕಿನಲಿ ಬೆನ್ನು ತಬ್ಬಿ ಕೂತು ನಿರಾಳವಾಗಿ ಎಲ್ಲ ಪ್ರೇಮಿಗಳಂತೆ ಸುತ್ತುವುದು, ಸಿನಿಮಾಕೆ ಒಟ್ಟಿಗೇ ಹೋಗುವುದು.. ಉಹೂಂ ಇದ್ಯಾವುದನ್ನೂ ನನ್ನಿಂದ ಅವಳು ಬಯಸಿದಷ್ಟು ಮಾತ್ರೆಯಲ್ಲಿ ನೆರವೇರಿಸಲಾಗಲೇ ಇಲ್ಲ. ಅಪರೂಪಕ್ಕೊಮ್ಮೆ ಅವಳನ್ನು ಡ್ಯಾನ್ಸ್ ಸ್ಕೂಲಿನ ತನಕ ಡ್ರಾಪ್ ಮಾಡುವುದು ಬಿಟ್ಟರೆ ನಾವು ಒಟ್ಟಿಗೆ ಒಂದೇ ಬೈಕಿನಲಿ ಸುತ್ತುತ್ತಲೇ ಇರಲಿಲ್ಲ. ಯಾವಾಗಾದರೊಮ್ಮೆ ಮುಸ್ಸಂಜೆ ದಾಟಿ ಬೀಚಿಗೆ ಹೋಗಿ ಅಲ್ಲಿನ ಒದ್ದೆ ಮರಳಿನ ಮೇಲೆ ಕುಳಿತು ಕತ್ತಲಾಗುವುದನ್ನು ಕಾಯುತ್ತ ಕೂರುವುದು, ಕತ್ತಲಿನ ಮೌನದಲಿ ಕಡಲ ಅಲೆಗಳ ಮೊರೆತವನ್ನು ಕೇಳುತ್ತ ಸುಮ್ಮನೆ ಕೂರುವುದು ಅಭಿರಾಮಿಗೆ ತುಂಬ ಇಷ್ಟವಾಗುತ್ತಿತ್ತು. ಅದೇ ರೀತಿ ಕೂತಿದ್ದ ಒಂದು ರಾತ್ರಿ ಯಾರೋ ಒಬ್ಬಾತ, ದೊರೆ, ನಿಂದಾದ ಮೇಲೆ ಕಳಿಸ್ತೀಯಪ್ಪ ನಮ್ಮಕಡೆ " ಎಂದು ವಿಕೃತ ನಗೆಯೊಂದಿಗೆ ಕೇಳಿದ್ದ. ಅದೇ ಆಗಿನ್ನೂ ಕಾಲುತೋಯಿಸಿದ ಕಡಲ ತೆರೆಗಳನ್ನು ನೋಡಿ

"ಈ ದಡದ ಮೇಲೆ ಎಷ್ಟು ಪ್ರೀತಿಯಿರಬೇಕು ಇವಕ್ಕೆ, ಮತ್ತೆ ಮತ್ತೆ ಬರ್ತಾನೇ ಇವೆ ನೋಡು” ಎಂದು ಉದ್ಗರಿಸಿ ಕುಳಿತಿದ್ದ ಅಭಿರಾಮಿ ಅವನ ಮಾತಿಗೆ ಮುಖ ಸಣ್ಣದು ಮಾಡಿಕೊಂಡು "ಆದರೆ ಇದೇ ನೋಡು ನಮ್ಮ ಜಗತ್ತು "ಎಂದು ಸಣ್ಣಗೆ ಭಾರವಾದ ದನಿಯಲ್ಲಿ ಹೇಳಿದ್ದಳು. ಆದರೆ ಆ ಅವನನ್ನು ಎದ್ದು ಬಯ್ಯಲೋ ಅಥವಾ

ಮತ್ತೇನೋ ಅನ್ನಲೋ ನಾನೇಕೆ ಮುಂದಾಗಲಿಲ್ಲವೆಂದು ಇವತ್ತಿಗೂ ನನಗೆ ತಿಳಿಯುವುದಿಲ್ಲ. ಬದಲಾಗಿ ನಾನು "ನಡಿ ಅಭಿರಾಮಿ, ಅದಕ್ಕೇ ಹೇಳೋದು ನಿಂಗೆ ಇಲ್ಲೆಲ್ಲ ಸೇಫಾದ ಸ್ಥಳ ಅಲ್ಲ ಅಂತ "ಎಂದು ಎದ್ದು ಹೊರಡಿಸಿದ್ದೆ. ಅಭಿರಾಮಿ ಮಾತಾಡಿರಲಿಲ್ಲ. ಇನ್ನು ಅವಳ ಮನೆಗೂ ಹೋಗುವಂತಿರಲಿಲ್ಲ. ಅಲ್ಲಿಗೆ ಹೋದರೆ ಅಕ್ಕಪಕ್ಕದ ಮನೆಯವರು ತಗಾದೆ ಎತ್ತುವುದಿತ್ತು.ಹಾಗಾಗಿ, ನಮಗೆ ಒಟ್ಟಿಗೇ ಕೂತು ಕಳೆಯಲೊಂದಿಷ್ಟು ಸ್ವಂತ ಸಮಯವೆಂಬುವುದು ದೊಡ್ಡ ಸವಾಲಿನ ವಿಷಯವಾಗಿತ್ತು. ನಮಗಿದ್ದ ಒಂದೇ ಆಸರೆ ಫೋನ್. ಕೆಲಸದ ನಡುವಿನ ಬಿಡುವಿನ ವೇಳೆ ಅವಳ ಜೊತೆ ಮಾತಾಡ ಬಹುದಿತ್ತು ಉಳಿದಂತೆ ಅವಳು ನನಗೆ ದಂಡಿ ದಂಡಿ ಮೆಸೆಜು ಕಳಿಸುತ್ತಿದ್ದಳು. ಜೋಪಾನ, ಹೊರಗೆ ಬಿಸಿಲು, ನೀರು ಕುಡಿ, ಜ್ಯೂಸ್ ಕುಡಿ, ಹೆಲೆಟ್ ಹಾಕ್ಕೋ, ಗಾಡಿಲಿ ಜೋಪಾನ ಇಂಥವೇ ತಾಯ್ಕರುಳಿನ ಮೆಸೇಜುಗಳು. ತನಗಾಗಿ ಅವಳು ಕೇಳಿದ್ದೆಂದರೆ ನನ್ನದೊಂದಿಷ್ಟು ಸಮಯ ಮಾತ್ರವೇ. ಆದರೆ ಅದುವೇ ದುಬಾರಿಯೆನಿಸುತ್ತಿತ್ತು. ಹೀಗೆ ಸಮಯ ಕಳೆಯುತ್ತಾ ಅಷ್ಟರಲ್ಲಾಗೇ ನಮ್ಮ ಭೇಟಿಯಾಗಿ ಮೂರಾಲ್ಕು ತಿಂಗಳು ಕಳೆದಿದ್ದವು. ಈ ಅವಧಿಯಲಿ ಇಬ್ಬರ ನಡುವೆ ಹೇಳ ತಿಳಿಯದ ಸೆಳೆತ ಬೆಳೆದಿತ್ತು. ನಾವಿಬ್ಬರೂ ಬೆಂಕಿಯಂತೆಯೂ, ಗಾಳಿಯಂತೆಯೂ ಒಬ್ಬರಿಗಾಗೊಬ್ಬರು ತುಡಿಯುತ್ತಿದ್ದೆವು ಆಗ ಬಂದಿತ್ತು ಚಿತ್ರಾಪೌರ್ಣಮಿಯ ಕೂವಗಂ ಜಾತ್ರೆ,



"ಅಭಿರಾಮಿ,ನಾವು ಕೂವಗಂ ಫೆಸ್ಟ್ ನೋಡಲು ಹೋಗೋಣವೇ?" ನಾನು ಅವಳನ್ನು ಡ್ಯಾನ್ಸ್ ಕ್ಲಾಸಿನಲ್ಲಿ ಭೇಟಿಯಾಗಿ ಕೇಳಿದ್ದೆ. ಅದನ್ನು ಕೇಳಿದ್ದೇ ಅವಳ ಕಾಲುಗಳಿಗೆ ಎಲ್ಲಿಲ್ಲದ ಹುರುಪು ತುಂಬಿ ಆಕೆಯ ನಡೆಯೇ ನೃತ್ಯದ ಲಾಘವ ಪಡೆದಿತ್ತು, ಕೆನ್ನೆಗಳು ಕೆಂಪಡರಿ, ಕಂಗಳು ಬೆಳಗಿದ್ದವು.ಅವಳ ಆ ಸಂಭ್ರಮವನ್ನು ಮನಸಾ ಸಂಭ್ರಮಿಸಿದ್ದೆ. ನಾನು ಮೊದಲೇ ನಿರ್ಧರಿಸಿಯೇ ಬಂದಿದ್ದೆ. ನನಗೆ ಅವಳೊಡನೆ ಯಾವ ತಕರಾರಿಲ್ಲದೆ ಸಮಯ ಕಳೆಯಬಹುದಿತ್ತು ಮತ್ತು ನನಗೂ ಕೂವಗಂ ಫೆಸ್ಟಿವಲ್‌ನ ಬಗ್ಗೆ ಒಂದೊಳ್ಳೆ ಸ್ಟೋರಿ ಮಾಡಬಹುದಿತ್ತು. ಹಾಗೆ ನಾವಿಬ್ಬರೂ ಚೆನ್ನೈನಿಂದ ಪಾಂಡಿಚೆರಿಯ ಕಡೆ ಹೊರಟಾಗ ಅಭಿರಾಮಿ ಮತ್ತಷ್ಟು ಸಂಭ್ರಮಿಸಿದ್ದಳು. ಅದೂ ಶುದ್ಧ ಮಗು ಸಂಭ್ರಮ. ಅವಳ ಒಂದೊಂದು ಚಲನೆಯಲ್ಲೂ ಅದು ಢಾಳಾಗಿ ವ್ಯಕ್ತವಾಗುತ್ತಿತ್ತು. ಯಾಕೆಂದರೆ ಅದು ನಾವು ಕೈಗೊಂಡ ಮೊದಲನೇ ದೂರ ಪ್ರಯಾಣವಾಗಿತ್ತು. ಅವಳಿಗೆ ಕೂವಗಂ ಜಾತ್ರೆಗೆ ಹೋಗಬೇಕೆಂಬ ಆಸೆಯೇನೂ ಇರಲಿಲ್ಲ, ಆದರೆ ಅದು ಕೂವಗಂ ಅಲ್ಲ, ಬೇರೆಲ್ಲಿಗೇ ಆಗಿದ್ದರೂ, ಕಡೆಗೆ ಸಾಯಲಿಕ್ಕೇ ಆಗಿದ್ದರೂ ಅಭಿರಾಮಿ ಇಷ್ಟೇ ಸಂಭ್ರಮದಿಂದ ನನ್ನೊಡನೆ ಬರುತ್ತಿದ್ದಳೆಂಬುವುದರಲ್ಲಿ ಸಂದೇಹವಿರಲಿಲ್ಲ. ಅವಳ ಬಹುದೊಡ್ಡ ಆಸೆಯಾಗಿತ್ತದು. ಹೀಗೆ ನನ್ನೊಡನೆ ಕೇಳುವವರ ಹಂಗಿಲ್ಲದೆ, ಕೆಲವು ಸಮಯ ಯಾವ ಗಡಿಬಿಡಿಯಿಲ್ಲದೆ ಅವಳಷ್ಟಕೆ ಅವಳಾಗಿ ಇರುವ ಸಮಯ. ಅದಕ್ಕಾಗಿ ಅಭಿರಾಮಿ ಹಂಬಲಿಸಿ ಕಾದಿದ್ದಳು, ಹಾಗಾಗಿ ಈ ಸಣ್ಣದೊಂದು ದೂರ ಪ್ರಯಾಣಕ್ಕೆ ಅಷ್ಟೊಂದು ಬೆಲೆಯಿತ್ತು. ಅದೇ ಮೊದಲ ಬಾರಿ ಅಭಿರಾಮಿ ನನ್ನನ್ನು ಒತ್ತಿದಂತೆ ಕುಳಿತುಕೊಂಡಿದ್ದಳು. ಅವಳ ತಲೆ ಸಣ್ಣಗೆ ವಾಲಿ ನನ್ನ ತೋಳಿನ ಮೇಲೆ ಒರಗಿದ

ಹಾಗೆ ಇತ್ತು. "ರಾಸ, ಈ ಪ್ರಯಾಣ ಮುಗಿಯಲೇಬಾರದೆಂದು ನನಗೆ ಅನಿಸುತ್ತಿದೆ. ನನ್ನ ಬಹು ದಿನಗಳ ಆಸೆ ಇದು,ಹೀಗೆ ನಿನ್ನೊಂದಿಗೆ ನಿನ್ನ ರಾಸಾತಿಯಾಗಿ ಹೀಗೊಂದು ಪ್ರಯಾಣ ಮಾಡುವುದು. ನಿಜಕ್ಕೂ ನಾ ಅಂದುಕೊಂಡೇ ಇರಲಿಲ್ಲ, ನೀ ನನ್ನ ಹೀಗೆ ಕರಕೊಂಡು ಬರಬಹುದು ಅಂತ.ತುಂಬ ಥ್ಯಾಂಕ್ಸ್ ರಾಸ, ಇದಕ್ಕೆ ಮತ್ತು ಎಲ್ಲದಿಕ್ಕೂ...." ಅಭಿರಾಮಿ ಹೀಗನ್ನುವಾಗ ಅವಳ ದನಿ ಕಟ್ಟಿ ಗೊಗ್ಗರಾಯ್ತು. ಮೊದಲಬಾರಿ ಹೀಗೆ ಒಮ್ಮೆ ಥ್ಯಾಂಕ್ಸ್ ಹೇಳಿದಾಗ ಇದ್ದ ಅದೇ ತೀವ್ರತೆ ಬಹುಶಃ ಅದಕ್ಕೂ ಹೆಚ್ಚಿನದೆನ್ನಬೇಕು ಈಗಲೂ ಇತ್ತು. ಅವಳಿಗೆ ನನ್ನ ಮೇಲೆ ಪ್ರೇಮದಷ್ಟೇ ನನ್ನಿಯಿತ್ತು.

ಅಭಿರಾಮಿ ನನ್ನನ್ನು ಪ್ರೇಮದಿಂದ ರಾಸ ಅನ್ನುತ್ತಿದ್ದಳು. ಅಭಿರಾಮಿ ಹಾಗನ್ನುವಾಗ ನಾನು ನನ್ನ ಭುಜಕ್ಕೆ ವಾಲಿಕೊಂಡಿದ್ದ ಅವಳ ತಲೆಯನ್ನು ನೇವರಿಸಿದ್ದೆ. ಅವಳು ಅತೀವ ತೀವ್ರತೆಯೊಂದಿಗೆ ನನ್ನ ತೋಳನ್ನು ಒತ್ತಿದ್ದಳು. ಆಗ ಅವಳ ಕಂಗಳು ಆರ್ದ್ರವಾಗಿದ್ದವು. ಈ ನಾಲ್ಕು ತಿಂಗಳಲ್ಲಿ ನಾವು ಆಗೀಗ ಕೆಲವು ಸಂಜೆಗಳನ್ನು ಒಟ್ಟಿಗೆ ಕಳೆಯುತ್ತ, ಫೋನಿನಲ್ಲಿ ಮಾತಾಡುತ್ತ, ಮೆಸೇಜು ಮಾಡುತ್ತ, ಪರಸ್ಪರ ನೆನಪಿನಲಿ ಕಳೆದುಹೋಗುತ್ತ ಮೊದಲೇ ಅದು ಅಲ್ಲಿ ಇತ್ತು, ನಮ್ಮ ನಡುವೆ ಯಾವಾಗಲೋ ಇತ್ತು ಎಂಬಂತೆ ಪ್ರೇಮದ ತೆರೆಯೊಳಗೆ ಮರೆಯಾಗುತ್ತ ಸಾಗಿದ್ದೆವು. ಇನ್ನು ಅವಳೋ. ಅವಳ ಬದುಕಿನಲ್ಲಿ ಖರ್ಚಾಗದೇ ಉಳಿದ ಅಷ್ಟೂ ಪ್ರೇಮ ನನ್ನೆಡೆಗೆ ಸ್ಫುರಿಸಿ ಅದು ಅವಳ ಹೃದಯದಲಿ ಜಮೆಗೊಳ್ಳುತ್ತ, ಜಮೆಗೊಳ್ಳುತ್ತ, ಅವಳ ಪ್ರತಿಯೊಂದು ಮಾತಿನಲಿ,



ಮೌನದಲಿ, ಅವಳ ಪ್ರತಿ ಚಲನೆಯಲ್ಲೂ ಪ್ರಕಟಗೊಳ್ಳುತ್ತ ಅಭಿರಾಮಿ ನನ್ನನ್ನು ಜೀವದಂತೆ ಅಥವಾ ಜೀವಕ್ಕೂ ಮಿಗಿಲಾಗಿ ಪ್ರೀತಿಸತೊಡಗಿದ್ದಳು. ಅವಳು ನನ್ನನ್ನು ಉಸಿರಿನಲಿ ಹೊಸೆದುಕೊಂಡು ಬಿಟ್ಟಿದ್ದಳು. ಅವಳ ಸುತ್ತಲಿನ ಜಗತ್ತೆಲ್ಲ ಅವಳ ಕಂಗಳಿಂದ ಮರೆಯಾಗಿ ಅವಳು ಒಂದು ವೃತ್ತದೊಳಗೆ ಬಯಸಿ ಬಯಸಿ ಬಂಧಿಯಾಗಿದ್ದಳು.ಅವಳ ಮನಸು, ಹೃದಯ,ಬದುಕು ಎಲ್ಲವೂ ನನ್ನ ಸುತ್ತಲೇ ಸುತ್ತತೊಡಗಿತ್ತು. "ನೀ ನನ್ನ ಉಸಿರಂತೆ ರಾಸ" ಎಂದು ಅವಳು ಹೇಳುವಾಗೆಲ್ಲ ಅದರಲ್ಲಿ ಯಾವ ಉತ್ಪ್ರೇಕ್ಷೆಯೂ ಕಾಣುತ್ತಿರಲಿಲ್ಲ. ಬಹುಶಃ ಇದಕ್ಕೇ ನನಗೆ ಭಯವಾಗುತ್ತಿತ್ತು. ಅವಳು ತನ್ನ ಹೃದಯದೊಳಗೆ ಅದಿನ್ನೆಷ್ಟು ಕನಸುಗಳನ್ನು ಹುಗಿದಿರಿಸಿದ್ದಳೋ ಏನೋ, ನಾನು ತಿಳಿದೋ ತಿಳಿಯದೆಯೋ ಅವಳ ಕನಸಿನ ತಿಜೋರಿಗೆ ಕೈಯಿಟ್ಟಿದ್ದೆ. ಅವಳು ಗಂಧರ್ವಲೋಕದ ಶಾಪಗ್ರಸ್ಥ ಅಪ್ಸರೆಯಂತೆ ಎಲ್ಲಿಗೂ ಸಲ್ಲದವಳಾಗಿ, ಒಂದು ಸಾಮಾನ್ಯ ಬದುಕಿನ ಕನಸೇ ಒಂದು ಅಸಾಮಾನ್ಯವಾದ, ಕೈಗೆಟುಕಲಾರದ ಕನಸಾಗಿ ಬಿಟ್ಟ ದುರಂತವನ್ನು ಎದೆಯೊಳಗೆ ಬೈತಿರಿಸಿಕೊಂಡು ಸುಮ್ಮನೆ ಬದುಕುತ್ತಿದ್ದವಳು. ಅವಳ ಹೃದಯದ ಬಾಗಿಲನು ತಟ್ಟುವುದು ಮತ್ತು ಅಲ್ಲಿ ಬೆಳಕು ಹಚ್ಚುವ ಮಾತಾಡುವುದು ಎರಡೂ ಅವಳ ಪಾಲಿಗೆ ಅಪಾರವಾದದ್ದು.

ನನ್ನಪಾಲಿಗೂ ಸಹಾ.

ಅಭಿರಾಮಿಯನ್ನು ನಾನು ಪ್ರೀತಿಸಬಾರದಿತ್ತು.

ತನ್ನ ಏಕಾಂತದೊಡನೆ ರಾಜಿಮಾಡಿಕೊಂಡಿದ್ದವಳ ಮೌನ ಮುರಿದವನು ನಾನು ಈಗ ಅವಳ ಸಣ್ಣ ಪುಟ್ಟ ಕನಸುಗಳನ್ನೂ ಈಡೇರಿಸಲಾರದೇ ತಪ್ಪಿಸಿಕೊಳ್ಳುವುದು ಎಂಥ ದೊಡ್ಡ ಅಪರಾಧ. ಅವಳ ಬದುಕಿನ ಎಲ್ಲ ದುರಂತಗಳಿಗಿಂತ ದೊಡ್ಡ ದುರಂತ ಇದೇ ಇರಬೇಕು, "ರಾಸ, ನನಗೆ ಏನು ಆಸೆ ಗೊತ್ತಾ, ನಮ್ಮನ್ನು ಕೇಳುವವರಿಲ್ಲದೆ ನಾವು ಒಬ್ಬರ ಕೈಯೊಬ್ಬರು ಹಿಡಿದುಕೊಂಡು ಬೀಚಿನಲ್ಲಿ ಸುತ್ತಾಡಬೇಕು. ನಿನ್ನ ಜೊತೆ ಒಟ್ಟಿಗೆ ಬೈಕಿನಲಿ ತೋಳು ಬಳಸಿ ಹಿಡಿದು ಕೂತು ಲಾಂಗ್ ರೈಡ್ ಹೋಗಬೇಕು,ನಿನ್ನ ತೋಳು ತಬ್ಬಿಕೊಂಡು ಕುಳಿತು ಸಿನಿಮಾ ನೋಡಬೇಕು, ಮ್...ಮತ್ತೇ, ನೀನು ಕೆಲಸ ಮುಗಿಸಿ ಮನೆಗೆ ಬರುವಾಗ ನಾನು ನಿಂಗೋಸ್ಕರ ಕಾಯ್ತಾ ಇರಬೇಕು,ನಿನ್ನ ಆಫೀಸಿಗೆ ಕಳಿಸೋಕೆ ನಿನ್ನ ಡ್ರೆಸ್ ಎಲ್ಲ ನಾನೇ ರೆಡಿ ಮಾಡಿ ಕೊಟ್ಟೇಕು, ಮ್..ರಾತ್ರಿ ನಿನ್ನ ಕೆಲಸದ ದಣಿವೆಲ್ಲ ನೀಗೋ ಹಾಗೆ ಕೈಕಾಲೆಲ್ಲ ಒತ್ತಿ, ಆಮೇಲೆ ...ಆಮೇಲೆ... ಅವಳು ಹಾಗೇ ಮಾತಾಡುತ್ತ ಮಾತಾಡುತ್ತ ಉದ್ವೇಗಕ್ಕೊಳಗಾಗುತ್ತಿದ್ದಳು. "ರಾಸ, ನಿಂಗೆ ಹೀಗೆಲ್ಲ ಆಸೆಯಿಲ್ಲ? "ಮಾತಿನ ನಡುವೆಯೇ ಅವಳು ತಟ್ಟನೆ ನನ್ನತ್ತ ತಿರುಗುತ್ತಿದ್ದಳು. "ನಂಗೂ ಇಷ್ಟ ರಾಸಾತಿ". ನಾನು ಅವಳ ಮಾತಿಗೆ ಸಣ್ಣಗೆ ನಗುತ್ತಿದ್ದೆ.

"ಮ್..ಮತ್ತೆ? " ಅವಳು ತುಂಟ ನಗುವಿನೊಂದಿಗೆ ಕಣ್ಣರಳಿಸುತ್ತಿದ್ದಳು.

"ಲವ್ ಯು" ನಾನನ್ನುತ್ತಿದ್ದೆ.

"ತುಂಬ......"ಅವಳು ತೋಳುಚಾಚಿ ಆಗಸವನ್ನೇ ತುಂಬಿಕೊಳ್ಳುವಂತೆ ಹಿಂದಕ್ಕೆ ವಾಲಿ ಕಣ್ಣು ಮುಚ್ಚಿ ತುಟಿಯುಬ್ಬಿಸುತ್ತಿದ್ದಳು.

"ಭಗವಂತ ಎಷ್ಟು ಚೆಲುವೆ! "ಚೆಲುವೆ!" ನಾನು ಅವಳನ್ನು ನೋಡುತ್ತ ಉದ್ಗರಿಸುತ್ತಿದ್ದೆ.

ಅವಳು ಒಡನೇ ಸುಳ್ಳ ನೀನು'ಎಂದು ನಿರಾಕರಿಸುತ್ತಿದ್ದಳು.

ಅಭಿರಾಮಿಯ ಆಸೆಗಳು ಎಷ್ಟು ಸಣ್ಣವಿದ್ದವು. ಒಬ್ಬ ಹೆಂಡತಿ ತನ್ನ ಗಂಡನಿಗೆ ಮಾಡಬಹುದಾದ ದಿನನಿತ್ಯದ ಕೆಲಸಗಳು. ಕಾಲಾಂತರದಲ್ಲಿ ರೇಜಿಗೆಯೆನಿಸಿ ಬಿಡಬಹುದಾದ ಅವವೇ ನಿತ್ಯಕರ್ಮಗಳು! ಅವನ್ನೇ ಅಷ್ಟು ಅಮೂಲ್ಯವೆಂಬಂತೆ ಉದ್ಧರಿಸಿ ಉಚ್ಚರಿಸುತ್ತಾಳೆ. ಅವಳ ಅಸೀಮ ಪ್ರೇಮಕೆ ಬದಲಾಗಿ ನನ್ನಿಂದ ಏನನ್ನಾದರೂ ತಿರುಗಿ ಕೊಡಲಾದೀತೆ ಅಂದರೆ ಏನನ್ನು? ಅಭಿರಾಮಿಯ ಮೇಲೆ ನನಗೂ ಪ್ರೇಮವಿತ್ತು,ಅವಳಷ್ಟೇ ಪ್ರೇಮವಿತ್ತು ಆದರೆ ನನ್ನ ಜಗತ್ತು ಬೇರೆಯದೇ ಇತ್ತು...

ಅವಳ ಪ್ರೇಮದ ಮಾತುಗಳಿಗೆ, ಅವಳ ಪುಟ್ಟ ಪುಟ್ಟ ಕನಸುಗಳಿಗೆ,ಅವಳ ಮಕ್ಕಳಂಥ ಸರಾಸರಿ ಬೇಡಿಕೆಗಳಿಗೆ ಅವಳು ಬಯಸಿದಂತೆ ಸ್ಪಂದಿಸಲು ಎಂದಿಗೂ ನನ್ನಿಂದ ಆಗಿರಲಿಲ್ಲ. ಅವಳು ಧಾರಾಳಿ, ಅವಳು ನನ್ನ ಮೇಲಿನ ಪ್ರೀತಿಯನ್ನು ಕವಿತೆಯಾಗಿಸುತ್ತಿದ್ದಳು, ಹಾಡಾಗಿ ಹರಿಸುತ್ತಿದ್ದಳು, ಚಿಕ್ಕ ಚಿಕ್ಕ ವಿಷಯಗಳಲ್ಲೂ ಅಪಾರ ಕಾಳಜಿ ತೋರುತ್ತಿದ್ದಳು .ಅವಳ ಈ ಎಲ್ಲ ಧಾರಾಳತೆಗೂ ಒಂದೇ ಉತ್ತರವೆಂಬಂತೆ ನಾನು “ತುಂಬ ಲವ್ಯೂ ..ರಾಸಾತಿ” ಅನ್ನುತ್ತಿದ್ದೆ. ಹೆಚ್ಚೆಂದರೆ ಒಮ್ಮೊಮ್ಮೆ ಅವಳ ಹಾಗೇ ಆಗಸಕೆ ಕೈ ಚಾಚಿ "ತ್ತಂಬ್ಬ" ಅನ್ನುತ್ತಿದ್ದೆ.

ನಂತರದ ದಾರಿಯಲ್ಲಿ ಅಭಿರಾಮಿ ಹೆಚ್ಚು ಮಾತಾಡಿರಲಿಲ್ಲ. ಅವಳ ಮನಸು ಕಾರಿನ ವೇಗದ ಏರಿಳಿತದಂತೆ ಏರಿಳಿಯುತ್ತಿದ್ದಿರಬೇಕು, ಅವಳ ಅರೆ ಮುಚ್ಚಿದ ಕಣ್ಣುಗಳು ವಾಸ್ತವವನ್ನು ಅರಗಿಸಿಕೊಳ್ಳುವ ಯತ್ನದಲ್ಲಿದ್ದಿರಬೇಕು, ನನ್ನ ಭುಜದ ಮೇಲೆ ಒರಗಿದ ಅವಳ ತಲೆ ದಶಕಗಳ ಭಾರವನು ಇಳಿಸಿಟ್ಟಿರಬೇಕು, ನನ್ನ ತೋಳನ್ನು ಹಿಡಿದುಕೊಂಡಿದ್ದ ಅವಳ ಕೈಗಳು, ತನ್ನ ಕನಸನ್ನು ನಿರಂತರವಾಗಿ ತನ್ನೊಂದಿಗೇ ಉಳಿಸಿಕೊಳ್ಳುವ ಧಾವಂತದಲ್ಲಿ ಪರಿತಪಿಸುತ್ತಿದ್ದಿರಬೇಕು. ಅಭಿರಾಮಿ ಮೌನವಾಗಿದ್ದಳು ನಾವು ಹೋಟೆಲ್ ತಲುಪುವವರೆಗೂ.

"ಏ ರಾಸ, ಎಷ್ಟು ಚೆಂದ ಇದೆ,ಕಿಟಕಿ ತೆರೆದರೆ ಸಮುದ್ರ ಕಾಣಿಸುತ್ತೆ, ರಾತ್ರಿಯಲ್ಲಿ ಸಮುದ್ರ ತುಂಬ ಚೆಲುವಾಗಿರುತ್ತೆ. ಏ, ಇವೊತ್ತು ರಾತ್ರಿ ಅಲ್ಲಿಗೆ ಹೋಗೋಣ್ವಾ" ಹೋಟೆಲ್‌ನಲ್ಲಿ ರೂಂ ಸೇರಿದೊಡನೇ ಅಭಿರಾಮಿ ಹತ್ತಿರ ಬಂದು ಅನುನಯಿಸುವಂತೆ ಕೇಳಿದ್ದಳು.ಅವಳ ಉಸಿರಿನ ಕಾವು ಕೆನ್ನೆಗೆ ತಲುಪಿ ಕಿವಿ ಬೆಚ್ಚಗಾಗಿತ್ತು.ನನ್ನ ರಾಸಾತಿ ಹೇಗೆ ಹೇಳಿದರೆ ಹಾಗೆ" ನಾನು ಅವಳ ಕಿವಿಯಲ್ಲಿ ಪಿಸುಗುಟ್ಟಿದಂತೆ ಹೇಳಿದ್ದೆ.ನನ್ನ ಕೈಗಳನ್ನು ಹಿಡಿದಿದ್ದ ಅವಳ ಕೈಗಳು ಒಡನೇ ಬಿಗಿಯಾಗಿದ್ದವು. ಅವಳ ತಲೆ ತಗ್ಗಿ, ಅವಳ ಕಂಗಳು ನೆಲಕ್ಕೆ ಬಾಗಿದ್ದವು.

"ರಾಸಾತಿ, ಲವ್ ಯು.. ತ್ತಂಬ್ಬ" ನಾನು ಮತ್ತೆ ಪಿಸುಗುಟ್ಟಿದ್ದೆ. ಆಕ್ಷಣವೇ ಅಭಿರಾಮಿ ಅಪ್ಸರೆಯಾಗಿದ್ದಳು.

ಭಗವಂತನ ಸೃಷ್ಟಿಯಲಿ ಅತ್ಯಂತ ಅಪೂರ್ವವಾದದ್ದು ಈ ಕಿನ್ನರಿಗಳ ಸೃಷ್ಟಿಯೇ ಇರಬೇಕು. ಕಿನ್ನರಿಯ ದೇಹದಲ್ಲಿ ಗಂಡಿನ ಕಸುವು, ಹೆಣ್ಣಿನ ಲಾಲಿತ್ಯ ಎರಡೂ ಮೇಳೈಸಿ ಅದು ಸೃಷ್ಟಿಯ ಸೌಂದರ್ಯಕೆ ಎಸೆದ ಸವಾಲಾಗಿತ್ತು. ಅದಕ್ಕೇ ಇರಬೇಕು, ಜಗತ್ತು ಅವರ ಪಾಲಿಗೆ ನಿರ್ದಯವಾಗಿ ನಡೆದುಕೊಳ್ಳುತ್ತಿರುವುದು! ನಮ್ಮ ಎದುರಾಳಿಯನ್ನು ದೈಹಿಕವಾಗಿ ಸೋಲಿಸುವುದು ಕಷ್ಟವೆನಿಸಿದರೆ ಮೊದಲು ಆತನ ಮನಸನ್ನು ಒಡೆದುಬಿಡಬೇಕು.ಅವನ ಆತ್ಮವನ್ನು ತಾಕಬೇಕು, ಕಲುಷಿತಗೊಳಿಸಬೇಕು ಹಾಗಾಗಿಬಿಟ್ಟರೆ ಬೇರೇನೂ ಮಾಡದೆಯೇ ಅವನು ಸೋಲುತ್ತಾನೆ. ನನ್ನ ಅಭಿರಾಮಿಯ ಸ್ಪರ್ಶದಲ್ಲಿ ಅದೆಷ್ಟು ಪ್ರೇಮವಿತ್ತು. ಅವಳು ಒಲಿಯುತ್ತ ಒಲಿಸುತ್ತ, ಮಣಿಸುತ್ತ ಮಣಿಯುತ್ತ ನನ್ನನ್ನು ಅಪರೂಪದ ಲೋಕಕ್ಕೆ ಸೆಳೆದೊಯ್ದಳು. ನನ್ನ ತೆಕ್ಕೆಯಲಿ ಶರಣಾಗಿ ಕಣ್ಣೀರಾದಳು. "ಇದು ನಿಜವೇ?, ಹೀಗೆ ಇಷ್ಟು ಪ್ರೇಮದಿಂದ ನನ್ನನ್ನು ಮುಟ್ಟಿದ ಒಂದು ಕೈಯನ್ನೂ ನಾನರಿಯೆ,ನನ್ನನ್ನು ಬಲತ್ಕರಿಸಿದ ಯಾರಿಗೂ ನನ್ನಲ್ಲಿ ಒಂದು ಆತ್ಮ ಇರುವುದು ಕಂಡಂತಿಲ್ಲ. ನಾನು ಕೂಡ ಒಮ್ಮೆಯೂ ಯಾರ ಕೈಯೊಳಗೂ ಹೀಗೆ ಅರಳಿಯೇ ಇಲ್ಲ. ನಾನು ಎಂದಿಗೂ ಅರಳಲಾರದವಳೆಂದೇ ಬಗೆದಿದ್ದೆ. ಹಾಗೆ ನನ್ನ ಮೇಲೆ ಬಲಾತ್ಕಾರಗಳು ನಡೆದಾಗ ನನ್ನ ಆತ್ಮ ಎಲ್ಲೋ ಮರಕೆ ಜೋತುಬಿದ್ದು ಪ್ರಜ್ಞಾಹೀನವಾಗಿರುತ್ತಿತ್ತೇ ಹೊರತು ಒಮ್ಮೆಯೂ ಎಲ್ಲೂ ಸ್ಪಂದಿಸಲೇ ಇಲ್ಲ. ಇದು ನನ್ನ ಮೊದಲರಾತ್ರಿ ಇದು ನನ್ನ ಬದುಕು, ಇದು ನನ್ನ ಜಗತ್ತುನಾ ಎಷ್ಟೊಂದು ಸಂತೋಷವಾಗಿದೀನಿ, ಅದು ನಿಂಗೆ ಗೊತ್ತಾಗ್ತಾ ಇದೆಯಾ..? ನಂಡ್ರಿ ರಾಸ ನಂಡ್ರಿ"ಅವಳು ಹಾಗನ್ನುತ್ತ ಬಿಕ್ಕಿಬಿಕ್ಕಿ ಅತ್ತಿದ್ದಳು. ನಾನು ಅವಳ ಕೂದಲು ನೇವರಿಸುತ್ತ ಅವಳ ನೆತ್ತಿಯನು ಚುಂಬಿಸಿದ್ದೆ. ಅವಳ ಕಣ್ಣೀರನ್ನು ತುಟಿಗಳಲಿ ಹೀರಿ ಕುಡಿದಿದ್ದೆ. ನನ್ನ ಎದೆಯ ಮೇಲೆ ತಲೆಯಿರಿಸಿ ಅನನ್ಯ ತೃಪ್ತಿಯೊಡನೆ ಮಲಗಿದವಳು ಸ್ವಲ್ಪ ಹೊತ್ತಿಗೆ ನಿದ್ದೆಗೆ ಜಾರಿದ್ದಳು. ಅವಳ ತುಟಿಗಳು ನಸುವೇ ಬಿರಿದು, ಯಾವುದೋ ಮಾಯಕದ ರಾಗಕ್ಕೆ ದನಿಗೂಡಿಸುತ್ತಿರುವಂತೆ ಕಾಣುತ್ತಿತ್ತು. ಅವಳ ಆ ನಸುನಗುವ ತುಟಿಗಳನು, ಮತ್ತೆ ಮತ್ತೆ ಉನ್ಮತ್ತನಂತೆ ಚುಂಬಿಸಿದ್ದೆ. ಆದರೆ ಪ್ರೇಮಕ್ಕಾಗಿ ಹಂಬಲಿಸಿ ನವೆದಿದ್ದ ಆ ಜೀವವನ್ನು ನಾನು ಅಷ್ಟೊಂದು ಪ್ರೀತಿಸಬಾರದಾಗಿತ್ತು.

ಮಾರನೆಯ ಬೆಳಿಗ್ಗೆ ನಾವು ಕೂವಗಂಗೆ ಹೋಗುವಾಗ ಅಭಿರಾಮಿ ಎಷ್ಟು ಚೆಂದಗೆ ಸಿಂಗರಿಸಿಕೊಂಡಿದ್ದಳೆಂದರೆ ನಾನು ಅವಳಿಂದ ಕಣ್ತೆಗೆಯದಾದೆ. “ಅಬ್ಬ! ರಾಸಾತೀ, ನಿನ್ನಷ್ಟು ಚೆಲುವೆ ಮತ್ತೊಬ್ಬಳು ಖಂಡಿತ ಇರಲಿಕ್ಕಿಲ್ಲ” ನಾನು ಕಾರು ಓಡಿಸುತ್ತ ಅವಳ ಕಡೆ ತಿರುಗದೆಯೇ ಹೇಳಿದ್ದೆ."ನೀನು ನಿಜವಾಗಲೂ ಸುಳ್ಳಪ್ಪಿ" ಅವಳು ಹುಸಿಮುನಿಸು ತೋರಿಸಿ ನಕ್ಕಿದ್ದಳು. ಅದರಂತೆಯೇ ಕೂವಗಂ ತಲುಪಿದಮೇಲೆ ನನ್ನ ಎಲ್ಲ ಎಣಿಕೆಗಳೂ ತಲೆಕೆಳಗಾಗಿ ಮಕಾಡೆ ಮಲಗಿದವು. ನಿಜಕ್ಕೂ ಅದೊಂದು ಕಿನ್ನರ ಲೋಕವೇ ಆಗಿತ್ತು. ಬಲು ಸೊಗಸಾಗಿ ಸಿಂಗರಿಸಿಕೊಂಡಿದ್ದ, ಮಹಾ ಸುಂದರಿಯರಾದ ಸಾವಿರ ಸಾವಿರ ಕಿನ್ನರಿಗಳನ್ನು ಒಟ್ಟಿಗೇ ಕಂಡು ನಾನು ದಂಗಾಗಿದ್ದೆ. ಅದು ಈ ಪ್ರಪಂಚಕ್ಕೆ ಸಂಬಂಧಿಸದ ವಿಶೇಷ ವಿಶಿಷ್ಟ ಹೊಸತೊಂದು ಜಗತ್ತಾಗಿತ್ತು. ಅಲ್ಲಿಗೆ ಇಡೀ ದೇಶದ ನಾನಾ ಕಡೆಗಳಿಂದ ಕಿನ್ನರಿಗಳು ಬಂದಿದ್ದರು, ಹೊರದೇಶದಿಂದ ಬಂದವರೂ ಇದ್ದರು.ಈ ಜಾತ್ರೆಯ

ವಿಶೇಷಗಳನ್ನು ವರದಿ ಮಾಡಲು ಬಂದವರು, ಬರಿದೇ ನೋಡಲು ಬಂದವರು, ಇಲ್ಲ ಸಲೀಸಾಗಿ ಯಾರಾದರೂ ಕಿನ್ನರಿ ರಾತ್ರಿಗಳ ಮಟ್ಟಿಗೆ ಒಲಿದುಬಿಡಬಹುದೆಂಬ ಆಸೆಯಿಟ್ಟು ಬಂದ ವಿಟರು, ಕಿನ್ನರಿಗಳಿಂದ ಆಶೀರ್ವಾದ ಪಡೆದರೆ ಒಳಿತಾಗುವುದೆಂಬ ನಂಬಿಕೆಯೊಂದಿಗೆ ಅವರಿಗೆ ಬಾಗಿನ ಕೊಡಬಂದವರು..... ನಾನು ಈ ಜಾತ್ರೆ ಇಷ್ಟು ದೊಡ್ಡದಿರಬಹುದೆಂದು ಖಂಡಿತಾ ಅಂದುಕೊಂಡಿರಲಿಲ್ಲ.

"ರಾಸಾತಿ, ಏನಿದೆಲ್ಲ?' ನಾನು ಅಚ್ಚರಿಯಿಂದ ಕೇಳಿದ್ದೆ

"ಇನ್ನೇನು? ಇದೇ ಕೂವಗಂ ಫೆಸ್ಟ್ ಇವತ್ತು ಚಿತ್ರಾ ಪೌರ್ಣಮಿ ಬೇರೆ. ಇದೇ ತುಂಬ ವಿಶೇಷ ದಿನ. ಇವೊತ್ತು ಇಲ್ಲೊಂದು ಬಹುದೊಡ್ಡ ರಿಚ್ಯುಅಲ್ ನಡೆಯುತ್ತೆ, ಮಹಾಭಾರತದ ಒಂದು ಕಥೆಯನ್ನು ಆದರಿಸಿ ನಡೆಸುವ ಸಂಪ್ರದಾಯ ಇದು. ಒಮ್ಮೆ ಕೌರವ ಪಾಂಡವರ ಯುದ್ಧ ಸಮಯದಲ್ಲಿ ಕೃಷ್ಣನಿಗೆ ಯುದ್ಧದ ಕುರಿತಾಗಿ ಭವಿಷ್ಯ ಕೇಳುವ ಮನಸ್ಸಾಯಿತಂತೆ ಅವನು ಪಾಂಡವರ ಪರ, ಅವನು ಧರ್ಮ ಸಂರಕ್ಷಕ. ಹಾಗಾಗಿ ಅವನು ಪಕ್ಕಾ ಭವಿಷ್ಯ ನುಡಿವ ಸಹದೇವನಲ್ಲಿಗೆ ಹೋಗಿ 'ಯಾರು ಈ ಯುದ್ಧಗೆಲ್ಲಲಿದ್ದಾರೆ "ಎಂದು ವಿಚಾರಿಸಿದನಂತೆ, ನೋಡಿದರೆ ಅದೇ ಸಮಯಕ್ಕೆ ಸರಿಯಾಗಿ ಸುಯೋಧನನೂ ಭವಿಷ್ಯ ಕೇಳಲು ಅಲ್ಲಿಗೆ ಬಂದಿದ್ದನಂತೆ. ಕವಡೆ ಉರುಳಿಸಿ ಗಣಿಸಿದ ಸಹದೇವ, ಇಬ್ಬರಿಗೂ ಗೆಲುವಿನ ಹಾದಿಗಳು ಹೆಚ್ಚುಕಮ್ಮಿ ಒಂದೇ ಮಟ್ಟಲ್ಲಿವೆ ಹಾಗಾಗಿ ಯಾರು ಮೊದಲು ನಿಮ್ಮಲ್ಲಿ ಅತ್ಯಂತ ಶಕ್ತಿಯೂ,ತೇಜಕ್ಕೂ ಉಳ್ಳ, ಸಕಲ ವಿದ್ಯಾ ಶ್ರೇಷ್ಠಯುದ್ಧ ವೀರನನ್ನು ಮಹಾಕಾಳಿಗೆ ಬಲಿ ಕೊಡುತ್ತೀರೋ ಅವರಿಗೆ ಮಹಾಕಾಳಿಯ ಒಲವಿನಿಂದಾಗಿ ಗೆಲುವು ಸಿಕ್ಕುವುದು ಅಂದನಂತೆ. ಆ ಕ್ಷಣವೇ ಕೃಷ್ಣ ಚಿಂತೆಗೆ ಬಿದ್ದನಂತೆ. ಅವನ ಮನಪಟಲದಲ್ಲಿ ಆ ಸರ್ವಗುಣ ಸಂಪನ್ನ ಒಂದೋ ಅರ್ಜುನ ಇಲ್ಲ ಸ್ವತಃ ತಾನೇ ಎಂಬ ಸತ್ಯ ಹೊಳೆದು ಏನು ಮಾಡುವುದೆಂಬ ಗೊಂದಲದಲ್ಲಿ ಬಿದ್ದನಂತೆ. ಹಾಗೂ ಕಡೆಗೆ ಪಾಂಡವರನ್ನೆಲ್ಲ ಕರೆದು ಈ ಕುರಿತಾಗಿ ಅಭಿಪ್ರಾಯ ಕೇಳಲಾಗಿ ಯಾರೊಬ್ಬರೂ ಏನೂ ಮಾತಾಡಲಿಲ್ಲವಂತೆ. ಆಗ ಒಬ್ಬ ತೇಜಸ್ಸುಳ್ಳ ಸುಂದರ ಯುವಕ ಮುಂದೆ ಬಂದು ತಾನು ಈ ಶುಭ ಕಾವ್ಯಕೆ ಸಲ್ಲುವೆನೆ? ಎಂದು ಕೇಳಿದನಂತೆ. ಅವನ ಪೂರ್ವಾಪರ ವಿಚಾರಿಸಲಾಗಿ, ಅವನು ಅರ್ಜುನನಿಗೂ, ನಾಗಕನ್ಯ ಉಲೂಪಿಗೂ ಜನಿಸಿದ ಮಗ, ಅರವಾಣನೆಂದು ತಿಳಿಯ ಬಂದಿತಂತೆ. ಅವನು ಒಬ್ಬ ಶಕ್ತಿಶಾಲಿ ವೀರನೆಂಬುದೂ, ಸಹದೇವ ಸೂಚಿಸಿದ ಗುಣಾತಿಶಯಗಳನ್ನು ಹೊಂದಿದವನೆಂದೂ ಕೃಷ್ಣ ಮನಗಂಡು ಅವನನ್ನೇ ಬಲಿ ಕೊಡಲು ನಿರ್ಧರಿಸುತ್ತಾನಂತೆ. ಹಾಗೆ ಅರವಾಣನನ್ನು ಬಲಿಕೊಡಲು ನಿಶ್ಚಯಿಸಿದ ದಿನವೇ ಚಿತ್ರಾ ಪೂರ್ಣಿಮೆ. ಆ ಸಮಯದಲ್ಲಿ ಕೃಷ್ಣ, ಅರಾವಣನ ಕಡೆಯಾಸೆ ಏನೆಂದು ಕೇಳಲು, ಅವನು ಸಾಯುವ ಮುನ್ನ ಮದುವೆಯಾಗಿ ಹೆಣ್ಣಿನೊಡನೆ ಕೆಲ ಘಂಟೆಗಳನು ಆನಂದದಿಂದ ಕಳೆಯಬೇಕೆಂದು ಬಯಸಿದನಂತೆ.ಆಗ ಕೃಷ್ಣ ಮೋಹಿನೀ ಅವತಾರವೆತ್ತಿ ಅರವಾಣನನ್ನು ಮದುವೆಯಾಗಿ ಆತನ ಕೊನೆಯಾಸೆ ನೆರವೇರಿಸಿದನಂತೆ. ಅದರ ನಂತರ ಅರವಾಣನನ್ನು ದೇವಿಗೆ ಬಲಿಕೊಡಲಾಯಿತಂತೆ. ಅದೇ ನೆನಪಿಗೆ, ಮೋಹಿನಿಯಂಥ ಬದುಕನ್ನು ಹೊಂದಿರುವ ಕಿನ್ನರಿಗಳು ಈ ಚಿತ್ರಾಪೌರ್ಣಮಿಯಂದು ಸರ್ವಾಲಂಕಾರ ಭೂಷಿತರಾಗಿ ಅರವಾಣನನ್ನು ಮದುವೆಯಾಗಿ

ಮರುದಿನ ಅವನು ಸತ್ತ ಸೂತಕ ಆಚರಿಸುತ್ತಾರೆ. ಇಲ್ಲಿ ಅದರ ಪ್ರತೀಕವಾಗಿ ದೇಗುಲದ ಅರ್ಚಕನಿಂದ ತಾಳಿ ಕಟ್ಟಿಸಿಕೊಳ್ತಾರೆ ಮರುದಿನ ಅರ್ಚಕರು ಕಿನ್ನರಿಗಳ ತಾಳಿ ಕಳೆದು ಬಳೆ ಒಡೆದು ವಿಧವೆಯಾಗಿಸುತ್ತಾರೆ ಆಮೇಲೆ ಅವರು ಒಪ್ಪಾರಿಯಿಟ್ಟು ಅತ್ತು ದುಃಖ ಹಂಚಿಕೊಳ್ಳುತ್ತಾರೆ ಇದು ಸಂಪ್ರದಾಯ. ಆದರೆ ನಾನಂತೂ ಒಮ್ಮೆಯೂ ಈ ಕೆಲಸ ಮಾಡಿಲ್ಲ ಇಲ್ಲೀತನಕ ಮೂರು ಸಲ ಬಂದಿದೇನೆ, ಒಮ್ಮೆಯೂ ನನಗೆ ಇದನ್ನು ಮಾಡಬೇಕೆಂದು ಅನಿಸಿಲ್ಲ. ಅಭಿರಾಮಿ ನಕ್ಕಿದ್ದಳು. “ನಂಗೇನು ಗೊತ್ತಾ ನಂಗೆ ನಿಜಾ ಮದುವೆ ಆಗೋಕು...ಆಮೇಲೆ ಸಂಸಾರ ನಡೆಸ್ಬೇಕು.ಎಲ್ಲರ ಹಾಗೆ ಅಭಿರಾಮಿ ಕಥೆಹೇಳಿ ಮುಗಿಸಿ ಕೊನೆಯಲ್ಲಿ ಇದನ್ನೂ ಸೇರಿಸಿ ನಕ್ಕಿದ್ದಳು. ಎಷ್ಟು ದುಬಾರಿ ಆಸೆ ಅಲ್ವಾ ನಂದು” ಅನ್ನುತ್ತ ನಕ್ಕುನಕ್ಕು ಅವಳ ಕಂಗಳಲಿ ನೀರಾಡಿದವು.

“ಸುಮ್ನೆ ಏನಾದರೂ ಹೇಳುವುದು ತಮಾಷೆಗೆ "ಹಾಗೆಂದು ಅವಳು ಮಾತು ಮುಗಿಸಿದ್ದಳು.

ಇದೇ ಅಲ್ಲದೆ ಅಲ್ಲಿ ವಿವಿಧ ಕಾರ್ಯಕ್ರಮಗಳು ನಡೆದಿದ್ದವು. ಒಂದೆಡೆ ಕಿನ್ನರಿಯರು ಗುಂಪುಗುಂಪಾಗಿ ಕಲೆತು ನರ್ತಿಸುತ್ತಿದ್ದರೆ, ಮತ್ತೊಂದೆಡೆ ಸ್ವಲ್ಪ ಹೆಚ್ಚು ವಯಸ್ಸಾದವರು ಯಾವುದೇ ಭಿಡೆಯಿಲ್ಲದೆ ಗಟ್ಟಿಯಾಗಿ ನಗುತ್ತತಮ್ಮೊಳಗೇ ಏನೋ ತಮಾಶೆ ಮಾಡಿಕೊಂಡು ರೇಗುತ್ತ, ರೇಗಿಸುತ್ತ ಕುಳಿತಿದ್ದರು. ಇನ್ನೊಂದು ಗುಂಪು ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ ಮಾಡುತ್ತಿದ್ದರೆ, ಮತ್ತೊಂದೆಡೆ ಕಿನ್ನರಿಯರ ಫ್ಯಾಶನ್ ಶೋ ಮತ್ತು ಸೌಂದರ್ಯಸ್ಪರ್ಧೆ ನಡೆದಿತ್ತು. ಅಂತೂ ನಾನು ಎಂದೂ ಕಂಡಿರದ ಕಲ್ಪಿಸಿರದ ಅತಿ ರಮ್ಯ ಲೋಕವನ್ನು ಕ್ಯಾಮೆರಾದಲ್ಲಿ ದಾಖಲಿಸುತ್ತ ಅದರೊಳಗೆ ಕಳೆದು ಹೋಗತೊಡಗಿದ್ದೆ. ಇದನ್ನೆಲ್ಲ ನೋಡುತ್ತಿದ್ದರೆ, ತಮ್ಮ ಜನ್ಮದತ್ತ ಪಕೃತಿಯನ್ನು ಬೇರೇನೂ ಮಾಡಲಾಗದೆ, ಇರುವುದರಲಿ ನಗಲು ಕಲಿತ ಈ ಪ್ರೇಮಮಯ ಜೀವಗಳನ್ನು ನಾವುಗಳೆಲ್ಲ ತುಳಿತುಳಿದು ಶಾಪಗ್ರಸ್ತ ಜೀವಗಳಾಗಿಸಿ ಬಿಟ್ಟಿದ್ದೇವೆನ್ನದೆ ಬೇರೆ ಏನೆನ್ನಬೇಕು? ಇವರಿಗೆ ಒಂದು ಕನಿಷ್ಟ ಬೆಲೆಯನ್ನೂ ಕೊಡದೆ ನಿಕೃಷ್ಟವಾಗಿ ಕಾಣಬೇಕೆಂದು ಕಲಿತದ್ದಾದರೂ ಹೇಗೆ ನಾವು? ಅವರ ಪರಿತ್ಯಕ್ತ ಹೃದಯ ಅದೆಷ್ಟು ನೊಂದಿರಬಾರದು? ಆ ನೋವೇ ಅವರನ್ನು ಹೀಗೆ ಕಲ್ಲಾಗಿಸಿತೇ? ನೋವಿನ ಮೇಲೆ ನೋವನ್ನು ಸುರಿದು ನಾವು ಅವರನ್ನು ಮರಗಟ್ಟಿಸಿ ಹರಳಾಗಿಸಿಬಿಟ್ಟೆವೆ? ಪ್ರೇಮದ ಒಂದು ಸಣ್ಣ ಬಿಸುಪಿಗೆ ಅಭಿರಾಮಿ ಅದೆಷ್ಟು ಕರಗಿಹೋದಳು. ಅವಳ ಹೃದಯದಲಿ ಹಿಮಗಟ್ಟಿ ಇರಿಯುತ್ತಿದ್ದ ನೋವೆಲ್ಲ ಹರಿದು ಉಕ್ಕಿತ್ತು.ಇಲ್ಲಿರುವ ಅಷ್ಟೂ ಕಿನ್ನರಿಗಳ ಎದೆಯಲ್ಲೂ ಅಂಥ ಹಿಮಗಲ್ಲುಗಳ ತಾಣವಾಗಿರಬೇಕು, ಸಣ್ಣದೊಂದು ಒಲವ ಬಿಸುಪಿಗಾಗಿ ತುಡಿಯುತ್ತಿರುವ ಅವರ ಕಲ್ಲೆದೆಯೊಳಗೆ ತುಯ್ಯುವ ಕಡಲಿರಬೇಕು.ದೇವರೇ ನಿನ್ನ ಯಾವ ವಿಲಾಸದ ಘಳಿಗೆಯಲಿ ಹೀಗೊಂದು ಆಟವಾಡುವ ಮನಸು ಮಾಡಿದೆ ನೀನು? ಅಥವಾ ನಿನ್ನ ಅಸೀಮವೆನಿಸುವ ಸೃಷ್ಟಿಯನು ನಾವೇ ತುಳಿದು ನೆಲಕಚ್ಚಿಸಲು ನಿಂತಿದ್ದೇವೆಯೆ? ನಾನು ನನ್ನೊಳಗೇ ಕಂಪಿಸಿದ್ದೆ.

ಅಲ್ಲಿ ನಮಗೆ ಅಭಿರಾಮಿಯ ಹಳೆಯ ಗೆಳತಿ ನೀಲಿಮಾ ಭೇಟಿಯಾಗಿದ್ದಳು. ಅವಳು ಸಣ್ಣ ವಯಸ್ಸಿನಲ್ಲೇ ಅಪ್ಪ ಅಮ್ಮನಿಂದ ಪರಿತ್ಯಜಿಸಲ್ಪಟ್ಟು ಬೀದಿಗೆ ಬಿದ್ದಿದ್ದಳು. ಅವಳ ಬದುಕಿನ ಬಹುಭಾಗ ಮುಂಬೈನ ಕಾಮಾಟಿಪುರದಲ್ಲಿ ಕಳೆದಿತ್ತು.ಅವಳ ಎಳೆಯ ವಯಸ್ಸಿನಿಂದಲೇ ಅವಳು ಲೈಂಗಿಕ ಶೋಷಣೆಯನ್ನು ಅನುಭವಿಸಿದ್ದಳು. ನನ್ನೊಂದಿಗೆ ಮಾತಾಡುತ್ತಾ ಅವಳು "ನಾನು ನನ್ನ ಬದುಕಿನಲ್ಲಿ ಕಳೆದ ಒಂದೊಂದು ದಿನವೂ ನರಕ ಸ್ವರೂಪವಾಗಿತ್ತು ಅಷ್ಟಾದರೂ ನನಗೊಂದು ಆಸೆ,ಈ ಕಷ್ಟದ ದಿನಗಳು ಮುಗಿದು ಏನೋ ಒಂದು ಒಳ್ಳೆಯದು ನನಗೂ ನಡೆಯುವುದೆಂದು! ನನ್ನ ನಂತರ ನನಗೆ ಒಬ್ಬ ತಮ್ಮ ಹುಟ್ಟಿದ್ದ. ಎಷ್ಟು ಕೆಂಪಗೆ ಎಷ್ಟು ಚೆಂದವಿದ್ದ.ಅಮ್ಮನಿಗಂತೂ ಅವನೆಂದರೆ ಉಸಿರು ಆದರೆ ಅಚಾನಕನೆ ಅವನಿಗೊಂದು ಸಣ್ಣ ಜ್ವರ ಬಂದು ತೀರಿಹೋದ. ಅಷ್ಟು ಚಂದದ ಮಗುವನ್ನು, ಅಮ್ಮ ಅಪ್ಪನ ಪ್ರೇಮವನ್ನು ಪಡೆದ ಮಗುವನ್ನು ದೇವರು ವಾಪಸ್ ಕರಕೊಂಡು ನನ್ನನ್ನು ಉಳಿಸಿದ ಅಂದರೆ ಒಂದು ಕಾರಣವಂತೂ ಇದ್ದಿರಬೇಕಲ್ವಾ? ನನಗೆ ಯಾರೂ ದಿಕ್ಕಿಲ್ಲದಂತೆ ಮಾಡಿದಯಾಕೆ? ಬಹುಶಃ ನನ್ನಂಥ ಹಲವಾರು ದಿಕ್ಕಿಲ್ಲದವರನ್ನು ನಾನು ನೋಡಿಕೊಳ್ಳಬೇಕೆಂದು ದೇವರು ಬಯಸಿರಬೇಕಲ್ವಾ? ಹಹ. ಎಲ್ಲ ನಂದೇ ಯೋಚನೆಗಳು, ಅಂತೂ ಇವು ನನ್ನನ್ನು ಸಾಯದಂತೆ ಕಾಯ್ದ ಆಲೋಚನೆಗಳು, ಇವತ್ತು ನಾ ಮುಂಬೈಯಲ್ಲಿ ಹೆಲ್ಪಿಂಗ್ ಹ್ಯಾಂಡ್ಸ್ ಅನ್ನೋ ಸಂಸ್ಥೆ ನಡೆಸ್ತೀನಿ. ಕಾಮಾಟಿಪುರದ ಎಷ್ಟೋ ಮಕ್ಕಳು ನನ್ನಲ್ಲಿ ಆಶ್ರಯ ಪಡೆದಿವೆ. ಅವರ ಓದು ಬರಹ ಎಲ್ಲ ಸಂಸ್ಥೆಯದ್ದೇ ಹೊಣೆ. ಬಹಳ ಜನ ಕೈಗೂಡಿಸಿದ್ದಾರೆ ಅಂತೂ..ಈಗ ಬದುಕು ಬದಲಾಗ್ತಾ ಇದೆ" ಅಂದಿದ್ದಳು.

'ರಾಸ ನಾವು ರಾತ್ರಿಯೇ ಹೊರಟು ಬಿಡೋಣ, ನಾಳೆ ಬೆಳಗೆ ತಾಳಿ ಕೀಳುವುದು, ಬಳೆ ಒಡೆಯುವುದು, ಒಪ್ಪಾರಿಯಿಟ್ಟು ಅಳುವುದು,ನಾನಂತೂ ನೋಡಲಾರೆ, ಇವೊತ್ತೇ ಹೊರಟುಬಿಡುವ ಸರಿಯಾ?" ಮದುಮಗಳಂತೆ ಸಿಂಗರಿಸಿಕೊಂಡ ಅನೇಕಾನೇಕ ಕಿನ್ನರಿಯರು ಅರ್ಚಕನಿಂದ ತಾಳಿಕಟ್ಟಿಸಿಕೊಳ್ಳುವುದನ್ನೂ ಸಂತೋಷದಿಂದ ನರ್ತಿಸುವುದನ್ನೂ ನೋಡುತ್ತಿದ್ದವನ ತೋಳು ಹಿಡಿದು ಕೇಳಿದ್ದಳು ಅಭಿರಾಮಿ, ಅವಳ ಮಾತಿಗೆ ನನ್ನದೂ ಒಪ್ಪಿಗೆಯಿತ್ತು. ನಾವು ಅವೊತ್ತೇ ರಾತ್ರಿ ಕೂವಗಂನಿಂದ ಹೊರಟು ಪಾಂಡಿಚೆರಿಗೆ ಮರಳಿದ್ದೆವು. ರಾತ್ರಿ ಪಾಂಡಿಚೆರಿಗೆ ಮರಳಿದ ಮೇಲೆ ನಾನು ಅಭಿರಾಮಿಯನ್ನು ಅತೀವ ಮೋಹದಿಂದ ಮೋಹಿಸಿದೆ, ಪ್ರೇಮಿಸಿದೆ, ರಮಿಸಿ, ಲಾಲಿಸಿದೆ ಅಂಥ ಪ್ರೇಮದ ಒಂದು ನಿರ್ಜರ ಘಳಿಗೆಯಲ್ಲಿ ಅಭಿರಾಮಿ ಕೇಳಿದಳು. "ನನ್ನನ್ನು ನೀನು ಮದುವೆ ಮಾಡಿಕೊಳ್ತಿಯ ರಾಸ?" ಆ ಘಳಿಗೆ ಹಾಗೇ ಅಲ್ಲೇ ಸ್ತಬ್ದಗೊಂಡಿತು ನನ್ನ ಹೃದಯ ಮಿಡಿತದ ಜೊತೆಗೆ. ಆ ಕ್ಷಣ ಎಲ್ಲ ಸದ್ದುಗಳು ಮೌನದೊಳಗೆ ಮುಳುಗಿ ನಾನು ನಿರ್ವಾತವೊಂದರಲ್ಲಿ ಮುಳುಗಲಾರದೆ ತೇಲಲಾರದೆ ಸಿಲುಕಿರುವಂತೆ ತೋರಿತು. ಅಭಿರಾಮಿ ಹೃದಯವನ್ನು ಓದಬಲ್ಲವಳು ಅವಳು ಹಠಾತ್ತನೆ ನಕ್ಕಳು. ನನ್ನ ಕೂದಲನ್ನು ಕೆದರಿ ನೆತ್ತಿಗೆ ಮುತ್ತಿಟ್ಟು ಕಿವಿಯಲ್ಲಿ ಉಸುರಿದಳು."ಸುಮ್ಮೆ ತಮಾಷೆಗೆ ಕೇಳಿದೆ ಅಷ್ಟೇ."

ಅವಳ ದನಿ ಭಾರದಲಿ ತೊಯ್ದಿತ್ತು. ಅವಳ ಕಂಗಳಿಂದ ಎರಡು ಬೆಚ್ಚನೆಯ ಹನಿಗಳು ನನ್ನ ಕಿವಿಯಂಚಿಗೆ ಇಳಿದು ಕೆನ್ನೆಯ ಮೇಲೆ ಹರಿದವು.ನನ್ನ ಕೆನ್ನೆ ಹೊಡೆಸಿಕೊಂಡಂತೆ ಉರಿಯಿತು. ನಾನು ಮಾತಾಡಲಾರದೆ ಅವಳನ್ನು ಸೆಳೆದು ತಬ್ಬಿದೆ. ಅವಳು 'ಉ' ಅಂದಳು. ನಾನು 'ತ್ತಂಬ್ಬ' ಅಂದೆ. ಅಭಿರಾಮಿ ಕಣ್ಮುಚ್ಚಿ, ತುಟಿ ಬಿಗಿದು ದುಃಖ ನುಂಗಿದಳು. ನಾನು ಕಣ್ಣುಮುಚ್ಚಿ ಏನನ್ನೂ ನೋಡದೇ ಉಳಿದೆ.

ಅಭಿರಾಮಿ ಏನಂದರೂ ಒಪ್ಪಬಹುದಿತ್ತು, ಆದರೆ ಮದುವೆ? ಅಭಿರಾಮಿಯ ಮೇಲೆ ನನಗೆ ಅಪಾರ ಪ್ರೀತಿಯಿತ್ತು ಆದರೆ ಮನೆಯಲ್ಲಿ ಅಮ್ಮ, ಅಪ್ಪ,ತಂಗಿ ನಮ್ಮ ಅತಿ ದೊಡ್ಡ ಕುಟುಂಬ! ಹೇಗಾದರೂ ಒಪ್ಪಿಸುವುದು? ಯಾರಾದರೂ ಒಪ್ಪುತ್ತಾರೇ? ಅಕ್ಕನ ಗಂಡ ಏನಂದಾನು? ತಂಗಿ? ಅವಳ ಮದುವೆಯ ಪಾಡೇನು? ಹೇಗೇ ಯೋಚಿಸಿದರೂ ಇದು ಯಾವ ಕಾರಣಕೂ ಎಂದಿಗೂ ನಡೆಯಲಾರದ ಒಂದು ವಿಷಯವೆಂಬುವುದಷ್ಟೇ ನನ್ನ ಅರಿವಿಗೆ ಬರುತ್ತಿತ್ತು. ಅಭಿರಾಮಿಯ ತೋಳಿನಲ್ಲಿ ತಲೆಯಿಟ್ಟು ಮಲಗಿ ಸೂರು ನೋಡುತ್ತ ಉಳಿದವನಿಗೆ ನಿದ್ರೆಯೇ ಬಂದಿರಲಿಲ್ಲ. ಆ ಹೊಯ್ದಾಟದಲ್ಲಿ ಅದಿನ್ಯಾವಾಗ ನಿದ್ರೆ ಬಂತೋ ಅಂತೂ ನಾ ಎಚ್ಚರಗೊಂಡಾಗ ಅಭಿರಾಮಿ ಅದಾಗಲೇ ಎದ್ದು ಸ್ನಾನ ಮಾಡಿ, ತೊಯ್ದ ಕೂದಲನು ಟವೆಲಿನಲಿ ಬಿಗಿದುಕೊಂಡು, ತಿಳಿಗುಲಾಬಿ ಬಣ್ಣದ ನೂಲಿನ ಸೀರೆಯುಟ್ಟು ನಿಂತಿದ್ದಳು. ತಮಿಳುನಾಡಿನ ಹೆಣ್ಣುಮಕ್ಕಳು ಮದುವೆಯ ಧಾರೆಯ ಸಮಯದಲ್ಲಿ ತೊಡುವ ಅದೇ ನೂಲಿನಸೀರೆ! ಅವಳನ್ನು ಹಾಗೆ ಕಂಡು ನಾನು ಅವಾಕ್ಕಾಗಿದ್ದೆ. ಅವಳು ನನಗಾಗಿ ಬಹುನಿರೀಕ್ಷೆಯಿಂದ ಕಾದವಳಂತೆ ನಾನು ಎದ್ದದ್ದೇ ಎದೆಗೆ ಜೋತು ಕಡಲಾಗಿದ್ದಳು. ಮತ್ತೆ ಅಂತದ್ದೇ ಉನ್ಮತ್ತ ಘಳಿಗೆಯಲ್ಲಿ ನನ್ನ ತಲೆಗೂದಲಿನೊಳಗೆ ಬೆರಳು ನುಗ್ಗಿಸಿ ಬಿಗಿದು ಎದೆಗೆ ಸೆಳೆದುಕೊಂಡು ಕಿವಿಯ ಬಳಿ "ನನ್ನ ಮದುವೆ ಮಾಡಿಕೊಳ್ತೀಯ ಫೀಸ್....." ಎಂದು ಪಿಸುಗುಟ್ಟಿದ್ದಳು. ಅವಳ ದನಿ ಕಣ್ಣೀರಿನಲಿ ತೊಯ್ದಂತೆ ಆರ್ದವಾಗಿತ್ತು.

ಅವಳ ಮಾತಿಗೆ ನಾನು ಸುಮ್ಮನೆ " " ಅಂದಿದ್ದೆ.

"ಯಾವಾಗ?" ಅವಳು ಮುಖವನ್ನು ಕೆಂದಾವರೆಯಾಗಿಸಿಕೊಂಡು ಕಾತುರದಿಂದ ಮುಖ ಅರಳಿಸಿ ನನ್ನ ಮುಖವನ್ನೇ ನೇರ ನೋಡುತ್ತ ಕೇಳಿದ್ದಳು.

"ಬೇಗ" ನಾನು ಮೆಲುವಾಗಿ ಹೇಳಿದ್ದೆ. ನನ್ನ ದನಿಯ ಭಾರ ಅವಳನ್ನು ತಾಕಿರಬೇಕು. ಅವಳು ನನ್ನನ್ನು ಹತ್ತಿರ ಸೆಳೆದು ಮುದ್ದಿಸುತ್ತ ಮುದ್ದಿಸುತ್ತ ಮತ್ತೆ ಕಿವಿಯ ಬಳಿ ಪಿಸುಗುಟ್ಟಿದ್ದಳು "ಸುಮ್ಮನೆ ಕೇಳಿದೆ, ತಮಾಷೆಗೆ ಅಷ್ಟೇ" ಹಾಗನ್ನುವಾಗ ಅವಳ ದನಿಯ ಭಾರ ನನ್ನೆದೆಯ ಮೇಲೆ ಕಲ್ಲುಗಳನ್ನು ಹೇರಿದಂತೆ ಕೂತಿತ್ತು. ಅವಳ ಒದ್ದೆ ಕಂಗಳ ತೇವ ನನ್ನ ಕೆನ್ನೆಗಿಳಿದು ದಾಡಿಯೊಳಗೆ ಇಂಗಿತ್ತು. ಪತರಗುಟ್ಟುವ ಅವಳ ಪುಟ್ಟ ಎದೆಯ ಮಿಡಿತ, ಜೀವಕ್ಕೆ ಹೋರಾಡುವ ಪತಂಗದ ರೆಕ್ಕೆಗಳಂತೆ ಫಡಫಡಿಸಿ ಮಿಡಿಯುತ್ತಿತ್ತು. ನಾನು ಅವಳನ್ನು ಪದಗಳಿಂದ

ಸಮಾಧಾನಿಸಲಾರದೆ ನನ್ನೊಳಗೆ ಸೋಲುತ್ತಿದ್ದೆ. ಕಷ್ಟ ನಷ್ಟ ಅವಮಾನಗಳನ್ನು ಸಹಿಸಿದ್ದ ಹೃದಯ, ಪ್ರೇಮದ ಮೃದು ಸ್ಪರ್ಶಕೆ ಎಷ್ಟೊಂದು ದುರ್ಬಲಗೊಂಡಿತ್ತು ಯಾವತ್ತೂ ನಗುನಗುತ್ತಲೇ ಇರುತ್ತಿದ್ದ



ಅಭಿರಾಮಿ ಈಗ ಎಷ್ಟು ಬೇಗನೆ ಕಣ್ಣೀರಾಗುತ್ತಿದ್ದಳು. "ನೀನಿಲ್ಲದೆ ಬದುಕಿರಲಾರೆ ರಾಸ" ಅನ್ನುವ ಅಭಿರಾಮಿಯ ಬಗೆ ನನಗೆ ಭಯವಿತ್ತು, ನಾನು ಬೇರೆ ಯಾರನ್ನಾದರೂ ಮದುವೆಯಾದರೆ ಅಭಿರಾಮಿ ಉಳಿಯುವಳೇ ಜೀವಂತ ಎಂಬ ಭಯ. ನನ್ನ ಮೇಲಿನ ಪ್ರೀತಿಯಿಂದ ಅಭಿರಾಮಿ ಸಾಯದೇ ಉಳಿಯಬಹುದಿತ್ತು,ನನ್ನ ಮೇಲಿನ ಪ್ರೀತಿಯಿಂದಲೇ, ನನ್ನಿಂದ ದೂರ ಇರುವ ಸಂಕಟ ತಾಳಲಾರದೆ ಅಭಿರಾಮಿ ಸಾಯಲೂ ಬಹುದಿತ್ತು. ಅದೇ ಭಯದಲ್ಲಿ ನಾನು ಅಭಿರಾಮಿಯ ನುಣುಪು ಕತ್ತನ್ನು ನೇವರಿಸುತ್ತ ಮೆಲ್ಲಗೆ ಹೇಳಿದ್ದೆ "ಏನೇ ಆದರೂ ನಾನು ನಿನ್ನನ್ನು ದೂರ ಮಾಡುವುದಿಲ್ಲ ಅಭಿರಾಮಿ

"ಏನೇ ಆದರೂ ಅಂದರೆ? ನಾಳೆ ನಿನ್ನ ಮದುವೆಯಾದರೂ ಅಂತಲಾ?' ಅಭಿರಾಮಿ ನಕ್ಕಿದ್ದಳು,ಅವಳ ಕಂಗಳಲ್ಲಿ ಇಣುಕಿದ ನೀರು ಬೆಳಕಿಗೆ ಹೊಳೆದಿತ್ತು.ನಾನು ಉತ್ತರಿಸಲಾದರೆ ತಡವರಿಸಿದ್ದೆ.

"ಹಾಗೆಲ್ಲ ಏನೂ ಬೇಡಪ್ಪಾ, ಇನ್ನೂ ಏನೂ ಅಲ್ಲದ ನಮ್ಮ ಈ ಸಂಬಂಧದಲ್ಲೇ ನನ್ನಿಂದ ನಿನ್ನನ್ನು ಬೇರೆ ಯಾರೊಂದಿಗೂ ಊಹಿಸಿಕೂಡ ನೋಡಲಾರದಷ್ಟು ಪೊಸೆಸಿವ್‌ನೆ ಕಾಡುತ್ತೆ, ನನಗೇ ಹಾಗಿರುವಾಗ, ನಾಳೆ ನಿನ್ನನ್ನು ಮದುವೆಯಾಗುವ ಹುಡುಗಿಗೆ ನಿನ್ನ ಜೊತೆ ನನ್ನ ಸಂಬಂಧ ತಿಳಿದರೆ ಎಷ್ಟು ನೋವಾಗಲಿಕ್ಕಿಲ್ಲ? ನನ್ನ ರಾಜ ನೀನು, ಯಾರೆದುರೂ ತಲೆ ತಗ್ಗಿಸಿ ನಿಲ್ಲಬಾರದು ನೀನು ನನ್ನದೇನಿದೆ ಹೆಚ್ಚೆಂದರೆ ಈ ಸಣ್ಣಪುಟ್ಟ ಆಸೆಗಳ ಹೊರತಾಗಿ? ನಮ್ಮದೂ ಅಂತ ಒಂದು ಮಗುವನ್ನು ಕೂಡ ಹೆರಲಾರದವಳು ನಾನು. ಆದರೆ ನಂಗೂ ಏನೇನೋ ಕನಸುಗಳು,ಅದು ಪರವಾಗಿಲ್ಲ, ನಿಧಾನಕೆ ಸರಿಯಾಗಬಹುದು ಇಟ್ಸ್ ಒಕೆ "ಅಂದಿದ್ದಳು. ನನ್ನ ಅಭಿರಾಮಿ, ದೇವರೇ,ನಾನೆಷ್ಟು ಅಸಹಾಯಕನಾಗಿದ್ದೆ.

ಅದೇ ಕೊನೆಯ ಮತ್ತೆಂದೂ ಅಭಿರಾಮಿ ಮದುವೆಯ ಮಾತನ್ನೇ ಎತ್ತಿರಲಿಲ್ಲ. ನಾವು ಚೆನ್ನೈಗೆ ಮರಳಿದ ಮೇಲೆ ಮತ್ತೆ ಮತ್ತೆ ಏನಾದರೂ ನೆಪಹೂಡಿ ಪಾಂಡಿಚೆರಿಗೆ ಹೋಗುವುದು ತಂಗುವುದು ನಮಗೆ ವಾಡಿಕೆಯಾಗಿ ಹೋಗಿತ್ತು. ಇತ್ತ ಇಬ್ಬರ ನಡುವಿನ ಪ್ರೇಮ ಬೆಳೆಯುತ್ತ ಸಾಗಿದ್ದರೆ ಅತ್ತ ಮನೆಯಲ್ಲಿ ಮದುವೆಯ ಒತ್ತಡವೂ ಹೆಚ್ಚತೊಡಗಿತ್ತು. ಅಭಿರಾಮಿಯೇನೋ ಮದುವೆಯ ಕುರಿತಾಗಿ ನನ್ನಲ್ಲಿ ಏನನ್ನೂ ಕೇಳದೆ, ಏನೂ ಹೇಳದೆ ಉಳಿದ್ದಿದ್ದಳೇನೋ ನಿಜ ಆದರೆ ಅವಳೊಳಗಿನ ಕನಸುಗಳನ್ನೂ ಆಸೆಗಳನ್ನೂ ತನ್ನೊಳಗೇ ಜೀವಂತ ಹುಗಿತು

ಗೋರಿಕಟ್ಟಲಾರದೆ ಅವಳು ತಲ್ಲಣಿಸುತ್ತಿರುವುದು ನನಗೆ ಅರಿವಾಗುತ್ತಿತ್ತು. ನಾನಾದರೂ ಅವಳನ್ನು ಕುರಿತು ಪರಿತಪಿಸದ ಹಗಲು ರಾತ್ರಿಗಳೇ ಇರಲಿಲ್ಲ.

ಏನು ಮಾಡುವುದು, ಅಭಿರಾಮಿಯನ್ನು ಮದುವೆಯಾಗಲು ಮನೆಯಲ್ಲಿ ಒಪ್ಪುವರೆ? ಏನಾದೀತು ಮುಂದೆ? ಹೇಗೆ ಮುಂದಿನ ನಿರ್ಧಾರವೆಂಬ ಯೋಚನೆಯಲ್ಲಿ ನನ್ನ ರಾತ್ರಿಗಳು ಉರಿದು ಕರಕಲಾಗುತ್ತಿದ್ದವು. ಕೆನ್ನೆ ಒಳಕ್ಕಿಳಿದು ಕಣ್ಣ ಸುತ್ತ ಕಪ್ಪು ಸುತ್ತಿ "ರಾಸ, ಯಾಕಿಷ್ಟು ಡಲ್ ಆಗಿದೀಯ? ಏನಾಯ್ತು? ಚೆನ್ನಾಗಿ ಊಟ ಮಾಡ್ತಾ ಇದೀಯ? ನಿದ್ರೆ? ಏನು ಚಿಂತೆ? ಕೆಲಸದ್ದಾ? ನಾನೇನಾದರೂ ಟೆನ್ಷನ್ ಕೊಡ್ತಾ ಇದೀನ? ನನ್ನ



ಬಗೆಯೇನಾದರೂ ಯೋಚಿಸ್ತ ಇದೀಯ? "ಅಭಿರಾಮಿ ಪ್ರಶ್ನೆಗಳ ಮೇಲೆ ಪ್ರಶ್ನೆ ಹಾಕುತ್ತಿದ್ದಳು. ನಾನು ಹಾರಿಕೆಯ ಉತ್ತರ ಕೊಡುತ್ತಿದ್ದೆ. ಅವಳು ಸೂಕ್ಷ್ಮಮತಿ. ಇಂಥದ್ದೇ ಒಂದು ಇಳಿಸಂಜೆ ಯಾವೊಂದು ಮುನ್ಸೂಚನೆಯೂ ಕೊಡದೆ, ಏನೊಂದನ್ನೂ ಹೇಳದೆ ಮೊಬೈಲ್ ಆಫ್ ಮಾಡಿಕೊಂಡು ಡ್ಯಾನ್ಸ್ ಸ್ಕೂಲ್ ಕ್ಲೋಸ್ಡ್ ಎಂದು ಬೋರ್ಡ್ ತಗುಲಿಸಿ ಮನೆ ಬಾಡಿಗೆಗೆ ಬಿಟ್ಟು ಅಭಿರಾಮಿ ಎದ್ದುಹೋಗಿದ್ದಳು. ಇದೇ ಈಗ ಅಂಗಳದಲ್ಲಿ ಬಾಲ ಕುಣಿಸುತ್ತ, ಕಾಳುಹೆಕ್ಕುತ್ತ, ಕಣ್ಣಹಬ್ಬವಾಗಿದ್ದ ಮುದ್ದುಹಕ್ಕಿ ಸದ್ದು ಮಾಡದೆ ಹಾರಿಹೋದಂತೆ ಹಾರಿಹೋಗಿದ್ದಳು. ಅವಳನ್ನು ಕಾಣದೆ ನಾನು ಪರಿತಪಿಸಿದ್ದೆ. ಆದರೆ ಎಲ್ಲೋ ಅಂತರಾಳದಲ್ಲಿ ಸ್ವಲ್ಪ ಹಗೂರೆನಿಸಿತ್ತೆಂಬುವುದನ್ನು ನಾನು ಎಂದಿಗೂ ತಳ್ಳಿಹಾಕಲಾರೆ. ನನಗಿದ್ದ ದೊಡ್ಡ ಭಯ ಅಭಿರಾಮಿ ಜೀವಕ್ಕೇನಾದರೂ ಅಪಾಯ ಮಾಡಿಕೊಂಡಳೇ ಎಂಬುದಾಗಿತ್ತು ಆದರೆ ಅವಳು ಮನೆ ಬಾಡಿಗೆಗೆ ಬಿಟ್ಟು ಹೋಗಿರುವುದು ಕಂಡರೆ ಆ ಸಾಧ್ಯತೆ ಕಡಿಮೆಯಿತ್ತು. ಆದರೆ ನಾನಿರದೆ ಹೇಗಿರುವಳೋ. ಎಂಬ ತಪನೆ ಎಂದಿಗೂ ಇತ್ತು. ಅಭಿರಾಮಿ ಯಾವತ್ತೂ ಹೇಳುತ್ತಿದ್ದಳು. ಮದುವೆಯಾಗುವ ಹುಡುಗಿಯನ್ನು ಒಮ್ಮೆಯೂ ನೋಯಿಸದಂತೆ ನೋಡಿಕೋ ಎಂದು. ಇದು ಅವಳು ನನ್ನನ್ನು ತೊರೆದು ಹೋದುದರ ಆಶಯವಾಗಿತ್ತು.

“ನೀನು ಮದುವೆಯಾಗುವುದು, ಮತ್ತು ಎಲ್ಲರಂತೆ ಬದುಕುವುದು. ಅದು ನಿನ್ನ ಹಕ್ಕು, ನಿನ್ನ ಮೇಲೆ ನಿನ್ನ ಮನೆಯವರು ಕಟ್ಟಿರುವ ಕನಸುಗಳು ನಿನ್ನ ಜವಾಬ್ದಾರಿ ಅಂದುಕೊ, ನೀನು ಎಲ್ಲರಂತೆ ಮದುವೆಯಾಗಿ ಚೆನ್ನಾಗಿರು, ಒಂದು ವೇಳೆ ದೇವರು ಬಯಸಿದರೆ ನಮಗೂ ಒಂದು ದಾರಿ ಸಿಗುತ್ತದೆ.' ಅಭಿರಾಮಿ ನನ್ನನ್ನು ಎಷ್ಟೋ ಬಾರಿ ಹೀಗೆ ಸಂತೈಸಿದ್ದಳು. ಕಡೆಗೆ ನನಗಾಗಿಯೇ ನನ್ನನ್ನು ಬಿಟ್ಟು ಹೋಗಿದ್ದಳು. ಹಾಗೆ ಹೋಗಿ ಅವಳು ನನ್ನ ಬದುಕಿನ ಏಕತ್ರ ಧ್ಯಾನವಾದಳು. ನಾನು ನನ್ನ ಬದುಕನ್ನು ನನ್ನ ಕರ್ತವ್ಯದಂತೆ, ಜವಾಬ್ದಾರಿಯಂತೆ ನಿಭಾಯಿಸುತ್ತ ನಡೆಯುತ್ತಿದ್ದುದ್ದಕ್ಕೆ ನನ್ನೊಳಗೆ ಶಕ್ತಿಯಂತೆ ಉಳಿದ್ದಿದ್ದಳು ಅಭಿರಾಮಿ, ಅವಳು ತೊರೆದ ಮೇಲೂ ನಾನು ಪ್ರತಿವರ್ಷವೂ ಕೂವಗಂಜಾತ್ರೆಗೆ ಹೋಗಿಯೇ ತೀರಿದ್ದೆ. ಅಲ್ಲಿ ಅವಳನ್ನು ಕಂಡಿರಲಿಲ್ಲ.ಇದೇ ಈ ವರ್ಷ, ಅವಳ ಗೆಳತಿ ನೀಲಿಮಾ ಸಿಕ್ಕಿದ್ದಳು.ಅವಳು

ಕೊಟ್ಟ ಮಾಹಿತಿ ಹಿಡಿದು ಇಂದು ಇಷ್ಟು ದೂರ ಬಂದು ಅಭಿರಾಮಿಯ ಡ್ಯಾನ್ಸ್ ಸ್ಕೂಲಿನ ವೆರಾಂಡದಲ್ಲಿ ಅವಳಿಗಾಗಿ ಕಾಯುತ್ತ ಕುಳಿತಿದ್ದೇನೆಂದರೆ ದೇವರು ನನ್ನನ್ನು ಸೃಷ್ಟಿಸಿದ ಉದ್ದೇಶ ಏನಿರಬೇಕು.?

ಅಭಿರಾಮಿ ನನ್ನ ನೆನಪಿಟ್ಟಿದ್ದಳೋ ಇಲ್ಲ ಹೊಸಬದುಕು ಕಟ್ಟಿಕೊಂಡಿದ್ದಾಳೋ.. ಅವಳು ಈಗ ನನ್ನ ಕಂಡರೆ ಹೇಗೆ ಪ್ರತಿಕ್ರಿಯಿಸಬಹುದು. ಅವಳ ನೆಮ್ಮದಿಯ ಗೂಡಿಗೆ ಮತ್ತೆ ಬೆಂಕಿ ಇಡುತ್ತಿದ್ದೀನೋ, ಅಡ್ರೆಸ್ ಸಿಕ್ಕಿದೊಡನೆ ಹೊರಟು ಬಂದೇ ಬಿಟ್ಟಿದ್ದೆ. ದಾರಿಯಲ್ಲಿ ಕಾಡಿದ್ದು ಅವಳನ್ನು ಕಾಣಬೇಕೆನ್ನುವ ಪರಿತಪನೆ. ಈಗ ಇಲ್ಲಿರುವುದು ಎದೆಹಿಂಡುತ್ತಿರುವ ಯಾತನೆ. ಅವಳು ಏನ್ನೆನ್ನಬಹುದು ಅನ್ನುವುದಕ್ಕಿಂತ ಈ ಭೇಟಿಯಿಂದ ಅವಳಿಗೆ ಏನಾಗಬಹುದು? ಎಂಬ ಚಿಂತೆ ಕಾಡಿ ಎದೆ ಹಿಂಡತೊಡಗಿತ್ತು. ಭಾವ ತೀವ್ರತೆಗೆ ಸಿಲುಕಿ ಅಭಿರಾಮಿಯನ್ನು ಕಾಣಲೇಬೇಕೆಂದು ನಿಂತ ಕಾಲಿನಲಿ ಹೊರಟು ಬಂದವನಿಗೆ ಈಗ ನೇರಾನೇರ ಅವಳದೇ ಸ್ಥಳದಲ್ಲಿ ನಿಂತಮೇಲೆ ಯಾತರ



ಹಿಂಜರಿಕೆಯೋ ತಿಳಿಯದಾಗಿತ್ತು. ನಮ್ಮ ನಡುವೆ ಇದ್ದದ್ದು ಒಂದು ಬಾಗಿಲು ಮಾತ್ರವೇ? ನೂಕಿ ಒಳಹೋಗಲು? ಹಾಗಾದರೆ ಸರಿದ ಮೂರೂವರೆ ವರ್ಷಗಳ ಲೆಕ್ಕವೇನು? ನೋವೆಂಬುದು ಪಡೆದ ಪ್ರೀತಿಗೆ ಕಟ್ಟುವ ಕಂದಾಯವೇ? ಈ ಭೇಟಿ ಅಭಿರಾಮಿಯ ಬದುಕನ್ನು ಮತ್ತೆ ಕಡಲಿಗೆ ಎಳೆತಂದು ಹಾಯಿ ಹರಿದ ದೋಣಿಯಲ್ಲಿ ಕುಳ್ಳಿರಿಸಿ ನೋಡುವ ಸಾಹಸವೇ? ಅವಳದೇ ಗತಿಯಲ್ಲಿ ಹೊಸತೊಂದು ನೆಲೆಯತ್ತ ಹೊರಟಿರುವಂತೆ ಕಾಣುವವಳನ್ನು ಅವಳ ಬದುಕಿನೊಂದಿಗೆ ಹಾಗೆಯೇ ಬಿಟ್ಟು ಹೊರಟು ಬಿಡಲೇ? ಮನಸು ಸಂಘರ್ಷಕ್ಕೆ ಇಳಿಯಿತು. ಕುಳಿತಲ್ಲಿಂದ ಎದ್ದು ಅವಳ ಚಿತ್ರದ ಮೇಲೆ, ಅವಳ ನವುರಾದ ಕೆನ್ನೆಗಳ ಮೇಲೆ ಕೈಯಾಡಿಸಿದೆ.ಅವಳ ಕಾಲುಗಳ ಗೆಜ್ಜೆಗಳನ್ನು ಸವರಿದೆ, ಆಗ ಕಂಡೆ! ಪಟದ ಕೊನೆಯಲ್ಲಿ ಕೆಳಗೆ ಚಿಕ್ಕದಾಗಿ ಬರೆದ ಅವಳ ಹೆಸರು,ಮತ್ತು

ವಿಳಾಸ.

ಅಭಿರಾಮಿ, ವೈಫ್ ಆಫ್.....

ಅಲ್ಲಿತ್ತು ನನ್ನ ಹೆಸರು.

ನಾನು ಬಾಗಿಲಿನ ಮುಂದೆ ಕೂತು ಬಿಕ್ಕಿಬಿಕ್ಕಿ ಅಳತೊಡಗಿದೆ.

**ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು**

**ಕಾರ್ಯಕಾರಿ ಸಮಿತಿ**

ನಾಡೋಜ ಡಾ. ಮನು ಬಳಿಗಾರ್, ಅಧ್ಯಕ್ಷರು

ಡಾ. ರಾಜಶೇಖರ ಹತಗುಂದಿ, ಗೌರವ ಕಾರ್ಯದರ್ಶಿ

ಶ್ರೀ ಕೆ. ರಾಜಕುಮಾರ, ಗೌರವ ಕಾರ್ಯದರ್ಶಿ

ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕೋಶಾಧ್ಯಕ್ಷರು

| | |
|---|---|
| ಶ್ರೀ ಮಾಯಣ್ಣ, ಬೆಂಗಳೂರು ನಗರ | ಶ್ರೀ ಸುರೇಶ ಚನಶೆಟ್ಟಿ, ಬೀದರ್ |
| ಶ್ರೀ ಚಿ.ಮಾ.ಸುಧಾಕರ, ಬೆಂ. ಗ್ರಾಮಾಂತರ | ಡಾ.ಬಸವಪ್ರಭು ಪಾಟೀಲ ಬೆಟ್ಟದೂರು,ರಾಯಚೂರು |
| ಶ್ರೀ ಸಿಂ.ಲಿಂ. ನಾಗರಾಜ್, ರಾಮನಗರ | ಶ್ರೀ ರಾಜಶೇಖರ ಗು. ಅಂಗಡಿ, ಕೊಪ್ಪಳ |
| ಶ್ರೀ ನಾಗಾನಂದ ಕೆಂಪರಾಜ್, ಕೋಲಾರ | ಶ್ರೀ ಸಿದ್ಧರಾಮ ಕಲ್ಮಠ, ಬಳ್ಳಾರಿ |
| ಡಾ. ಕೈವಾರ ಎನ್. ಶ್ರೀನಿವಾಸ, ಚಿಕ್ಕಬಳ್ಳಾಪುರ | ಶ್ರೀ ಬಸವರಾಜ ಸಿದ್ರಾಮಪ್ಪ ಮಸೂತಿ, ಮಹಾರಾಷ್ಟ್ರ |
| ಶ್ರೀಮತಿ ಬಾ.ಹ. ರಮಾಕುಮಾರಿ, ತುಮಕೂರು | ಪ್ರೊ ಎಚ್.ಬಿ. ಶಿವಕುಮಾರ್, ಆಂಧ್ರ ಪ್ರದೇಶ |
| ಡಾ. ದೊಡ್ಡಮಲ್ಲಯ್ಯ, ಚಿತ್ರದುರ್ಗ | ಡಾ. ತಮಿಳ್ ಸೆಲ್ವಿ, ತಮಿಳುನಾಡು |
| ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ದಾವಣಗೆರೆ | ಶ್ರೀ ಸುಬ್ರಹ್ಮಣ್ಯ ವಿ.ಭಟ್, ಕೇರಳ |
| ಶ್ರೀ ಡಿ.ಬಿ. ಶಂಕರಪ್ಪ, ಶಿವಮೊಗ್ಗ | ಶ್ರೀ ಮಲ್ಲಿಕಾರ್ಜುನ ಬದಾಮಿ, ಗೋವಾ |
| ಡಾ. ವೈ.ಡಿ. ರಾಜಣ್ಣ, ಮೈಸೂರು | ಲಜನೆಯ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು : |
| ಶ್ರೀ ಬಿ.ಎಸ್. ವಿನಯ್, ಚಾಮರಾಜನಗರ | ಡಾ. ಎಚ್.ಎಸ್. ವೆಂಕಟೇಶಮೂರ್ತಿ |
| ಶ್ರೀ ಮಲ್ಲಿಕಾರ್ಜುನ ಬದಾಮಿ, ಗೋವಾ | ವಿಶ್ವವಿದ್ಯಾಲಯ ಪ್ರತಿನಿಧಿ, ತುಮಕೂರು ವಿ.ಎ. : |

ಶ್ರೀ ಸಿ.ಕೆ. ರವಿಕುಮಾರ ಚಾಮಲಾಪುರ, ಮಂಡ್ಯ

ಶ್ರೀ ನಾಯಕರಹಳ್ಳಿ ಮಂಜೇಗೌಡ, ಹಾಸನ

ಶ್ರೀ ಬಿ.ಎಸ್. ಲೋಕೇಶ ಸಾಗರ್, ಕೊಡಗು

ಶ್ರೀ ಕುಂದೂರು ಅಶೋಕ, ಚಿಕ್ಕಮಗಳೂರು

ಶ್ರೀ ನೀಲಾವರ ಸುರೇಂದ್ರ ಅಡಿಗ, ಉಡುಪಿ

ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ, ದಕ್ಷಿಣ ಕನ್ನಡ

ಶ್ರೀಮತಿ ಮಂಗಲಾ ಶ್ರೀಶೈಲ್ ಮೆಟಗುಡ್ಡ, ಬೆಳಗಾವಿ

ಶ್ರೀ ಮಲ್ಲಿಕಾರ್ಜುನ ಅಯ್ಯಪ್ಪ ಯಂಡಿಗೇರಿ, ವಿಜಯಪುರ

ಶ್ರೀ ಶ್ರೀಶೈಲ ಈರಪ್ಪ ಕರಿಶಂಕರಿ, ಬಾಗಲಕೋಟೆ

ಡಾ. ಲಿಂಗರಾಜ ರು. ಅಂಗಡಿ, ಧಾರವಾಡ

ಶ್ರೀ ಲಿಂಗಯ್ಯ ಬಿ. ಹಿರೇಮಠ, ಹಾವೇರಿ

ಡಾ. ಶರಣು ಗೋಗೇರಿ, ಗದಗ

ಶ್ರೀ ಅರವಿಂದ ಕರ್ಕಿಕೋಡಿ, ಉತ್ತರ ಕನ್ನಡ

ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ

ಶ್ರೀ ಸಿದ್ಧಪ್ಪ ಎಸ್. ಹೊಟ್ಟಿ, ಯಾದಗಿರಿ

ಡಾ. ಗೀತಾ ವಸಂತ

ವಿಶ್ವವಿದ್ಯಾಲಯ ಪ್ರತಿನಿಧಿ, ಕಲಬುರಗಿ ವಿ.ವಿ. :

ಡಾ. ರಮೇಶ ಲಂಡನಕರ

ಸರ್ಕಾರದ ಪ್ರತಿನಿಧಿ :

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮಹಿಳಾ ಪ್ರತಿನಿಧಿಗಳು :

ಡಾ. ವಸುಂಧರಾ ಭೂಪತಿ ಮತ್ತು

ಡಾ. ಎಸ್.ಪಿ. ಉಮಾದೇವಿ

ಪರಿಶಿಷ್ಟ ಜಾತಿ ಪ್ರತಿನಿಧಿಗಳು :

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ ಮತ್ತು

ಡಾ. ಸುಬ್ರಾವ ಎಂಟೆತ್ತಿನವರ

ಪರಿಶಿಷ್ಟ ಪಂಗಡ ಪ್ರತಿನಿಧಿ :

ಡಾ. ನೀಲಗಿರಿ ತಳವಾರ

ಸಂಘಸಂಸ್ಥೆಗಳ ಪ್ರತಿನಿಧಿ :

ಪ್ರೊ. ಸಿದ್ರಾಮಪ್ಪ ಮಾಸಿಮಾಡೆ



ಕನ್ನಡದ ಲೇಖಕಿಯರ ಅನುಭವ ಲೋಕ, ಆಲೋಚನೆ, ಆಳದ ತಲ್ಲಣ ಮತ್ತು ಪ್ರತಿಭಟನೆಗಳು ಅವರ ಕೃತಿಗಳಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ಈ ಮಹಿಳಾ ಸಂಪುಟಗಳು ಹಿಡಿದು ಇಟ್ಟಿವೆ. ಇದೇ ಮೊದಲ ಬಾರಿ ಅವರ ಬಹು ಮುಖ ಅಭಿವ್ಯಕ್ತಿಯನ್ನು ಒಟ್ಟಂದದಲ್ಲಿ ಗ್ರಹಿಸಲು ಅನುವಾಗುವಂತೆ ಈ ಸಂಪುಟಗಳನ್ನು ರೂಪಿಸಲಾಗಿದೆ. ಹೆಣ್ಣು ಮತ್ತು ಗಂಡಿನ ಸಂವೇದನೆಗಳ ನಡುವಿನ ಭಿನ್ನತೆಗಳನ್ನು ಮತ್ತು ಸಾಮ್ಯತೆಗಳನ್ನು ಗುರುತಿಸಲು ಈ ಸಂಪುಟಗಳು ನೆರವಾಗುತ್ತವೆ ಎಂಬ ನಂಬಿಕೆ ನನ್ನದು. ಮಹಿಳಾ ಸಾಹಿತ್ಯ ಕುರಿತ ಉನ್ನತ ಅಧ್ಯಯನಕ್ಕೆ ಈ ಸಂಪುಟಗಳು ಆಕರಗಳಾಗುತ್ತವೆ ಹಾಗೂ ಆ ಅಧ್ಯಯನವನ್ನು ಇನ್ನಷ್ಟು ಎತ್ತರಕ್ಕೆ ತೆಗೆದುಕೊಂಡು ಹೋಗಲು ಅವು ನೆರವಾಗುತ್ತವೆ ಎಂದೂ ನಾನು ಭಾವಿಸಿದ್ದೇನೆ. ಇಂಥ ಅನನ್ಯ ಕೆಲಸವನ್ನು ನನ್ನ ಅವಧಿಯಲ್ಲಿ ಮಾಡಿ ಪೂರೈಸಿದ ಹೆಮ್ಮೆ ನನ್ನದು.

**ನಾಡೋಜ ಡಾ. ಮನು ಬಳಿಗಾರ್**
ಅಧ್ಯಕ್ಷರು

ರೂ ೩.೨೦/-

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು - ೫೬೦ ೦೧೮.